ವರ್ಷ ೧೩ ಸಂಚಿಕೆ ೧

ಜಯಂತಿ

ಜೂನ್ ೧೯೫೦

ಮೊದಲಗಿತ್ತಿ

ಡಾ. ಡಿ. ಎಸ್. ಕರ್ಕಿ, ಎಂ. ಎ., ಪಿಎಚ್. ಡಿ. ಬೆಳಗಾಂವಿ

★

೧

ಆ ಮನೆಯ ಬೆಳಗಿದವಳೀ ಮನೆಗೆ ಏತಕೋ
ಕಣ್ಣಿಟ್ಟು ಬಂದೆ ನೀನು ;
ಮನವರಿತೊ ಅರಿಯದೆಯೊ ಈ ಮನೆಯ ಬೆಳಗಲಿಕೆ
ಏನೇನು ತಂದೆ ನೀನು ?

೨

ತಾಯ್ತನಕೆ ನೆಲೆಯಾಗಿ ಬಂದ ನೀನಿನ್ನವರ
ತಾಯ್ಗೆ ಮಗುವಾಗಿ ನಲಿದೆ—
ನೀ ನಲಿದು ಬೆಳೆದಂತೆ-ಬೆಳ-ಬೆಳಗಿದಾ ಮನೆಯ
ಬಿಟ್ಟು ಈ ದಾರಿ ತುಳಿದೆ.

೩

ಬಿಟ್ಟ ಮನೆಯಾ ಚೆಲುವು ಬಂದ ಮನೆಯಲಿ ತುಂಬಿ
ನಿಲ್ಲುವುದು ತಾ ಮೆಲ್ಲನೆ
ಸೂಸಿ ಹರಿಯಲಿ ನಿನ್ನ ಅಂತರಂಗದ ಹಾಸ
ಒಲಿಯದದಕೇನು ತಾನೇ ?

೪

ಅನುರಾಗ ರಂಗಿಪುದು ಜೀವನವ ಸ್ವರ್ಣಾಂಗಿ
ಇನ್ನಿಹುದೆ ಇಂಥ ಸ್ವರ್ಗ ?
ಹೊಸಮನೆಯ ಹೊಸತಿಲಲಿ ಕಳೆ ಚಿಮ್ಮಿ ಇಡು ಹೆಜ್ಜೆ
ಮನೆಯಹುದು ಸ್ವರ್ಣ ವರ್ಣ.

೫

ಬರುವ ಜಗದೆದುರಿನಲಿ ನಿಂದವಳೆ, ನಿನಗಿರಲಿ
ಲೋಕ ಕಲ್ಯಾಣ ದೃಷ್ಟಿ !
ಆ ದೃಷ್ಟಿಯಿಂದುಗುವ ಪ್ರಭೆಯ ಸಂದರ್ಶನಕೆ
ಅರಳುವುದು ಹೊಸತು ಸೃಷ್ಟಿ

೬

ಕಣ್ಣೋಟ ಹರಿವನಕ ಹರಿದಿಹುದು ಅದೊ ದಾರಿ
ಹೆಜ್ಜೆ ಇಡುವವಳು ನೀನು—
ನಿನ್ನ ಚೆನ್ನಡಿ ಸೋಂಕೆ ದಾರಿಯುದ್ದಕು ದ್ರಾಕ್ಷೆ
ಬೀಗಿ ಗೊನೆ ತೂಗದೇನು ?

೭

ಹೆಣ್ಣು ಜನುಮವದೇನು ?—ಎಂದು ಮೂದಲಿಪ ಜನ
ಬಲ್ಲುದೇ ನಿನ್ನ ಪರಿಯ ?
ಬಾಳಿನುದ್ದಕು ಸಿರಿಯ ಗೆರೆಯನೆಳೆಯುವ ಬೆಳಕು
ಅಪ್ಪಿಹುದು ನಿನ್ನ ನಿರಿಯ.

೮

ಆ ಮನೆಯ ಬೆಳಗಿದವಳೀ ಮನೆಗೆ ಏತಕೋ
ಕಣ್ಣಿಟ್ಟು ಬಂದೆ ನೀನು ;
ಈ ಮನೆಯ ಕಣಜವನು ತುಂಬಲಿಕೆ ಮನದಲ್ಲಿ
ನೀ ತಂದುದೇನು ಏನು ?

ಕನ್ನಡ ಗಡಿಯೊಳಕ್ಕೆ ಮರಾಠಿಯ ಪ್ರವೇಶ

ಮುಂಬಯಿ ಸರಕಾರವು ಹೊಸತಾಗಿ ಪ್ರಾದೇಶಿಕಭಾಷೆಯ ಬಳಕೆಯ ವಿಚಾರವಾಗಿ ಆಜ್ಞೆಯೊಂದನ್ನು ಹೊರಡಿಸಿದೆ. ಈ ಆಜ್ಞೆಯಿಂದ ಕರ್ನಾಟಕಕ್ಕೆ ಆಗಿರುವ ಅನ್ಯಾಯದಷ್ಟು ಮಿಕ್ಕ ಯಾವ ಭಾಷಾಪ್ರದೇಶಕ್ಕೂ ಆಗಿಲ್ಲವೆಂದು ನೊಂದ ಮನದಿಂದ ಹೇಳಬೇಕಾಗುವುದು.

ಉತ್ತರ ಕರ್ನಾಟಕದಲ್ಲಿ ಜಿಲ್ಲೆಗಳನ್ನು ನಿರ್ಮಿಸುವಾಗ, ಬ್ರಿಟಿಷರಿಂದಲೆ ಕನ್ನಡಿಗರಿಗೆ ಸಾಕಷ್ಟು ಅನ್ಯಾಯವಾಗಿದೆ. ಆದರಲ್ಲಿಯೂ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಮಹಾರಾಷ್ಟ್ರ ಸರದಾರರ ಸಂಸ್ಥಾನ-ವಿಭಾಗಗಳ ಮೂಲಕ ನಡೆದ ಅನ್ಯಾಯ ಅಷ್ಟಿಷ್ಟೆಂದು ಹೇಳಲಿಕ್ಕೇ ಬರುವಂತಿಲ್ಲ. ಈ ಸಂಸ್ಥಾನದ ಆಡಳಿತಗಳ ಮೂಲಕ, ಅಚ್ಚ ಕನ್ನಡ ಪ್ರದೇಶಗಳಾದ ಸಾಂಗಲಿ, ಮಿರಜಿ, ಕೊಲ್ಹಾಪುರ, ಕುರಂದನಾಡ, ಈಚಲಕರಂಜೀ ಈ ವಿಭಾಗಗಳು ಸಂಪೂರ್ಣ ಮಹಾರಾಷ್ಟ್ರವಾಗಿ ಕುಳಿತುವು. ಆದರಂತೆಯೆ ಬ್ರಿಟಿಷರು ಮರಾಠೀ ಭಾಷೆಯನ್ನಾಡುವ ಬಹುಸಂಖ್ಯಾಕರ ಪ್ರದೇಶದೊಂದಿಗೆ ಕೂಡಿಸಿ, ಮರಾಠಿಯನ್ನೆ ಆಡಳಿತದ ಭಾಷೆಯನ್ನಾಗಿ ಮಾಡಿದುದರಿಂದ, ಸಾತಾರಾ-ಸೊಲ್ಲಾಪುರ ಜಿಲ್ಲೆಗಳಲ್ಲಿರುವ ಕನ್ನಡ ಪ್ರದೇಶವೂ ಕನ್ನಡನುಡಿಗೆ ಎರವಾಗಿಬಿಟ್ಟಿತು.

ಇಂದು ಸಂಪೂರ್ಣ ಮಹಾರಾಷ್ಟ್ರವಾಗಿದೆಯೆನ್ನುವ ಸಂಸ್ಥಾನಗಳ ಪ್ರದೇಶವೂ ಸೊಲ್ಲಾಪುರ–ದ. ಸಾತಾರಾ ಜಿಲ್ಲೆಗಳ ಭಾಗಗಳೂ ಭಾಷೆಯ ದೃಷ್ಟಿಯಿಂದ ಸಂಪೂರ್ಣ ಮಹಾರಾಷ್ಟ್ರದುವೇ ಆಗಿವೆಯೆನ್ನಬೇಕೆ ? ವಸ್ತುಸ್ಥಿತಿಯು ಹಾಗೆ ಇಲ್ಲ. ಅಲ್ಲಿಯ ಮೇಲಾಳುಗಳೆನಿಸಿಕೊಳ್ಳುವ ಜನರು ಮಾತ್ರ ಮರಾಠಿಯ ಒತ್ತಾಯಕ್ಕೆ ಒಳಗಾಗಿ, ಕನ್ನಡವನ್ನು ಪೂರ್ಣವಾಗಿ ಕಳೆದುಕೊಂಡುಬಿಟ್ಟಿದ್ದಾರೆ. ಆದರೆ ಬಹುಸಂಖ್ಯಾಕರಾದ ಜನಸಾಮಾನ್ಯರ ಮಾತೃಭಾಷೆ ಇದುವರೆಗೂ ಕನ್ನಡವೇ ಉಳಿದುಕೊಂಡುಬಂದಿದೆ. ಅಲ್ಲಲ್ಲಿಯ ಆಡಳಿತಗಳ ಪ್ರಭಾವ, ಆ ಜನರಲ್ಲಿ ಮಾತೃಭಾಷಾವಿಷಯಕವಾದ ಜಾಗೃತಿಯನ್ನೂ ಪ್ರಾವೀಣ್ಯವನ್ನೂ ಪಡೆಯಲು ಅವಕಾಶವನ್ನು ಉಂಟುಮಾಡಿಕೊಡದುದರಿಂದ, ಆ ಜನರಿಗೆ ಕನ್ನಡದ ಬಗೆಗೆ ಅಭಿಮಾನ-ಆದರಗಳು ಕಡಿಮೆಯಾಗಿರಬಹುದು ಇಷ್ಟೆ! ಆದರೆ ಕನ್ನಡವು ಬಹುಸಂಖ್ಯಾಕರ ವ್ಯವಹಾರಭಾಷೆಯಾಗಿದೆಯೆಂಬುದನ್ನು ಯಾರೂ ಕಂಡುಕೊಳ್ಳಬಹುದಾಗಿದೆ. ಮರಾಠಿಯ ಮೋಹದ ಅಲ್ಲಿಯ ಮುಂದಾಳುಗಳು, ಈ ಸತ್ಯಸಂಗತಿಯನ್ನೂ ಅಸತ್ಯವನ್ನಾಗಿ ತೋರಿಸುವ ಚಳವಳಿಗಳನ್ನು ಹೂಡುತ್ತಾರೆ. ಸರಕಾರ ಆ ಅಲ್ಪಸಂಖ್ಯಾಕರ ಚಳುವಳಿಯನ್ನೇ ಒಪ್ಪಿಕೊಂಡು, ಬಹುಸಂಖ್ಯಾಕರ ನೈಸರ್ಗಿಕ ಹಕ್ಕನ್ನು ತುಳಿದು ಮೆಟ್ಟುವ ಆಜ್ಞೆ ಮಾಡುತ್ತದೆ. ಇದಕ್ಕಾಗಿ ನಾವು ಆಶ್ಚರ್ಯಪಡಬೇಕೋ ವಿಷಾದಪಡಬೇಕೋ ?

ಉತ್ತರ ಸಾತಾರಾ, ದಕ್ಷಿಣ ಸಾತಾರಾ ಜಿಲ್ಲೆಗಳಿಗೆ ಸೇರಿದ ಕನ್ನಡ ಪ್ರದೇಶಗಳ ವಿಚಾರವನ್ನೇ ನಮ್ಮ ಮುಂಬಯಿ ಸರಕಾರ ಮಾಡಿಲ್ಲ. ಅವು ಸಂಪೂರ್ಣ ಮರಾಠೀ ಪ್ರದೇಶಗಳೆಂದು ಒಪ್ಪಿಕೊಂಡು, ಅಲ್ಲಿ ಕನ್ನಡ ಭಾಷೆಗೆ ಅವಕಾಶವನ್ನೇ ಕಲ್ಪಿಸಿಕೊಟ್ಟಿಲ್ಲ. ಅದರಂತೆಯೇ ಅಚ್ಚಕನ್ನಡ ಭಾಗಗಳಾದ ವಿಲೀನ ಸಂಸ್ಥಾನ ಪ್ರದೇಶದಲ್ಲಿ, ಕನ್ನಡಕ್ಕೆ ಸಮಾನವಾಗಿ ಮರಾಠಿಗೂ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇದಕ್ಕೆ ಕಾರಣವೆಂದರೆ ಇದುವರೆಗಿನ ಸಂಸ್ಥಾನಿಕರ ಒತ್ತಾಯದ ಆಡಳಿತದ ಮೂಲಕ, ಅಲ್ಲಿಯ ಜನರು ಮರಾಠಿಯನ್ನು ಆಡಳಿತದ ಭಾಷೆಯೆಂದು ಒಪ್ಪಿಕೊಂಡ ಅಪರಾಧ. ಈ ಅಪರಾಧದ ಪ್ರಾಯಶ್ಚಿತ್ತವೆಂದು ಅಲ್ಲಿಯ ಕನ್ನಡಿಗರು ಮರಾಠಿಗೂ ಸರಿಪಾಲನ್ನು ಕೊಡಬೇಕು.

ಹೋಗಲಿ, ಇದು ಕನ್ನಡಿಗರ ಕೈಬಿಟ್ಟಿದ್ದ ಪ್ರದೇಶದ ವಿಷಯವಾಯಿತು ಇದಕ್ಕಿಂತ ಹೆಚ್ಚಿನ ಆಪತ್ತಿಯನ್ನುಂಟುಮಾಡಿದುದೆಂದರೆ, ಬ್ರಿಟಿಷರ ಆಡಳಿತದಲ್ಲಿಯೂ ಸಂಪೂರ್ಣ ಕರ್ನಾಟಕವೆಂದು ಪರಿಗಣಿಸಲ್ಪಟ್ಟ ಬೆಳಗಾಂವಿ-ಕಾರವಾರಜಿಲ್ಲೆಗಳ ಕೆಲವೊಂದು ಪ್ರದೇಶದಲ್ಲಿಯೂ ಮರಾಠಿಗೆ ಸಮಾನಾವಕಾಶವನ್ನು ಕಲ್ಪಿಸಿಕೊಟ್ಟಿದ್ದು. ಈ ಪ್ರದೇಶದಲ್ಲಿರುವ ಮರಾಟಿಗರ ಸಂಖ್ಯೆಯ ಪ್ರಮಾಣಕ್ಕಿಂತಲೂ ಹೆಚ್ಚು ಸಂಖ್ಯಾಕ ಕನ್ನಡಿಗರ ವಸತಿಯಿರುವ ಉ. ಸಾತಾರಾ, ದ. ಸಾತಾರಾ ಜಿಲ್ಲೆಗಳಲ್ಲಿ ಕನ್ನಡಕ್ಕೆ ಅವಕಾಶವೇ ಇಲ್ಲ. ಆದರೆ ಇದುವರೆಗೂ ಇಲ್ಲದ ಮರಾಠಿಗೆ ಬೆಳಗಾಂವಿ, ಕಾರವಾರಗಳಲ್ಲಿ ಹೊಸತಾಗಿ ಆಸ್ಪದ! ಇದಕ್ಕೆ ಏನೆಂದು ಹೇಳಬೇಕು ? ಸರಕಾರದ ಅಜ್ಞಾನವೆಂದು ಹೇಳೋಣವೇ, ಪಕ್ಷಪಾತವೆಂದು ಹೇಳೋಣವೆ ? ಏಕೀಕೃತ ಪ್ರಾಂತವಿಲ್ಲದಿದ್ದರೆ ಹೋಗಲಿ; ಇದ್ದಷ್ಟು ಕನ್ನಡ ಪ್ರದೇಶವೂ ಕರ್ನಾಟಕವಾಗಿ ಉಳಿಯಬಾರದೆಂದು ಮುಂಬಯಿಯ ಇಂದಿನ ಪ್ರಜಾಪ್ರಾತಿನಿಧಿಕ ಸರಕಾರ ಉದ್ದೇಶವನ್ನು ಇಟ್ಟುಕೊಂಡಿದೆಯೋನೋ ಎಂದು ಕನ್ನಡಿಗರಿಗೆ ಸಂದೇಹವುಂಟಾದರೆ ಅದರಲ್ಲಿ ತಪ್ಪೇನು ?

ಗಡಿಯ ಜಿಲ್ಲೆಯ ಕನ್ನಡಿಗರೂ ವಿಲೀನಸಂಸ್ಥಾನ ಪ್ರದೇಶದ ಕನ್ನಡಿಗರೂ ಇನ್ನು ಮೇಲೆ ಕನ್ನಡ ಓದು–ಬರೆಹ ಕಲಿಯಬೇಕು; ಆಗ ಅಲ್ಲಿ ಕನ್ನಡಕ್ಕೆ ಕೊಟ್ಟ ಅವಕಾಶದ ಉಪಯೋಗವೇನಾದರೂ ಆದೀತು. ಆದರೆ ಅಲ್ಲಿಯ ಜನರು, ಬರುವ ಮರಾಠಿಯನ್ನು ಬಿಟ್ಟು ಬಾರದ ಕನ್ನಡದ ಬೆನ್ನನ್ನು ಏತಕ್ಕೆ ಹಿಡಿಯುವರು ? ಇನ್ನೊಂದು ಮಾತು: ಅಲ್ಲಿಯ ಮುಂದಾಳುಗಳೆಲ್ಲ ಮರಾಠಿಗೆ ಭ್ರಮಿತರಾಗಿರುವಾಗ, ಈ ಹಿಂದಾಳುಗಳು ಕನ್ನಡದ ಕಡೆಗೇಕೆ

ಜಯಂತಿ

ತಿರುಗುವರು ? ' ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ '! ಆದುದರಿಂದ ಅಲ್ಲಿ ಕನ್ನಡಕ್ಕೆ ಕೊಟ್ಟ ಅವಕಾಶದ ಉಪಯೋಗ ನಸುವೂ ಆಗುವುದಿಲ್ಲ. ಅದಕ್ಕೆ ವಿರೋಧವಾಗಿ ಕರ್ನಾಟಕ ಪ್ರದೇಶದಲ್ಲಿ ಹೊಸತಾಗಿ ಮರಾಠಿಗೆ ಅವಕಾಶ ಕಲ್ಪಿಸಿ ಕೊಟ್ಟಿರುವುದರಿಂದ, ಇಲ್ಲಿಯ ಕನ್ನಡದ ಮೇಲೆ ಆಘಾತವುಂಟಾಗುವುದು ಸಹಜ. ಏಕೆಂದರೆ ಬಲಿಷ್ಠರು ದುರ್ಬಲರ ಮೇಲೆ ತಮ್ಮ ಪ್ರಭಾವ ಬೀರುವುದು ಎಲ್ಲರೂ ಕಂಡುಂಡ ಮಾತು. ರಾಜಕೀಯ ಸಾಮಾಜಿಕ ಪರಿಸ್ಥಿತಿಯ ಅನುಕೂಲತೆಯ ಮೂಲಕ ಮರಾಠೀ ಭಾಷೆಯಿಂದು ಬಲಿಷ್ಠವಾಗಿ ನಿಂತಿದೆ. ಅದೇ ಪರಿಸ್ಥಿತಿಯ ಅನನುಕೂಲತೆಗಳ ಮೂಲಕ ಕನ್ನಡವು ದುರ್ಬಲವಾಗಿ ಬಿದ್ದುಕೊಂಡಿದೆ. ಬಲಿಷ್ಠರಿಗೂ ದುರ್ಬಲರಿಗೂ ನಂಟುತನವು ಸಾಧ್ಯವಾಗುವುದೇ ?

ಇದೆಲ್ಲ ವಿಪರೀತ ಪರಿಸ್ಥಿತಿಗೂ ನಮ್ಮ ಕನ್ನಡಿಗರ ಔದಾಸೀನ್ಯ-ಉಪೇಕ್ಷೆಗಳೇ ಮುಖ್ಯ ಕಾರಣವಾಗಿವೆ. ಮುಂದಾಳುಗಳೂ ಅಧಿಕಾರಿಗಳೂ ಆಗಿರುವ ಕನ್ನಡಿಗರು, ತಮ್ಮ ವೈಯಕ್ತಿಕ ಸ್ವಾರ್ಥ-ಸ್ಥಾನ-ಮಾನಗಳ ಕಡೆಗೆ ಮಾತ್ರ ಕಣ್ಣಿಟ್ಟು, ಕರ್ನಾಟಕದತ್ತ ಲಕ್ಷ್ಯವನ್ನೇ ಕೊಡುತ್ತಿಲ್ಲ. ಅದೇ ಮಹಾರಾಷ್ಟ್ರ ಮುಂದಾಳುಗಳೂ ಅಧಿಕಾರಿ ವರ್ಗವೂ ಎಲ್ಲಿ ಇದ್ದರೂ ಕರ್ನಾಟಕ ಭಾಗವನ್ನು ವಶಪಡಿಸಿಕೊಳ್ಳುವ ಹಂಚಿಕೆಯಲ್ಲಿರುವರು. ಇದಕ್ಕೆ ಪ್ರತ್ಯಕ್ಷ ಉದಾಹರಣೆಯೆಂದರೆ ಕಾರವಾರ ಜಿಲ್ಲೆಯಲ್ಲಿ ಮರಾಠಿಯೂ ಸಮಪಾಲನ್ನು ಪಡೆದುಕೊಂಡದ್ದು. ಇನ್ನೂ ಒಂದು ವಿಶೇಷ ಸಂಗತಿ ಕಿವಿಗೆ ಬೀಳುತ್ತಲಿದೆ; ಕೆಲವೊಂದು ಮರಾಠೀ ಅಧಿಕಾರಿಗಳ ಮತ್ತು ಬಂಡವಾಳಗಾರ ವ್ಯಕ್ತಿಗಳ ಪ್ರಯತ್ನದಿಂದ— ಅಥಣೀ ತಾಲ್ಲೂಕಿನ ಕೆಲವೊಂದು ಅಚ್ಚಗನ್ನಡ ಪ್ರದೇಶವು ದಕ್ಷಿಣ ಸಾತಾರಾ ಜಿಲ್ಲೆಗೆ ಸೇರಲಿರುವುದಂತೆ. ಈ ' ಅಂತೆ ' ಯೂ ನಿಜವೇ ಆದರೆ, ಕರ್ನಾಟಕದ ಅಂತ್ಯಸಮಾಪಿಸುವುದರಲ್ಲಿ ಸಂಶಯವೇ ಉಳಿಯಲಿಲ್ಲವೆನ್ನಬೇಕಾಗುವುದು.

ಕನ್ನಡಿಗರೆನಿಸಿಕೊಳ್ಳುವವರಿಗೆ ನಮ್ಮದು ಒಂದೆ ಒಂದು ಪ್ರಶ್ನೆ! ಮಹಾಶಯರೇ ನಿಮಗೆ ಕರ್ನಾಟಕ ಪ್ರಾಂತ, ಕನ್ನಡ ಭಾಷೆ ಬೇಕಾಗಿವೆಯೋ ಇಲ್ಲವೋ ? ಬೇಕಾದುದು ನಿಜವೇ ಇದ್ದರೆ, ಹೀಗೆ ಆಗುತ್ತಿರುವ ಅನ್ಯಾಯ-ಆಕ್ರಮಗಳನ್ನೆಲ್ಲ ಸಹಿಸಿಕೊಂಡು ಎಷ್ಟು ದಿನ ಬಿದ್ದುಕೊಳ್ಳುವವರು ? '

ಜಯಂತಿಯ ಮೊರೆಗೆ ಕನ್ನಡಿಗರ ಉತ್ತರ

ಕಳೆದ ತಿಂಗಳ ಸಂಪಾದಕೀಯದಲ್ಲಿ ಬರೆದ ಜಯಂತಿಯ ಕಷ್ಟ-ನಷ್ಟಗಳ ಕತೆಯನ್ನು ಓದಿ, ಮನಸ್ಸು ಕರಗಿ, ಕೆಲವು ಮಹನೀಯರು ಜಯಂತಿಗೆ ಚಂದಾದಾರರನ್ನು ಒದಗಿಸಿಕೊಡುವ ಉಪಕಾರ ಮಾಡಿದ್ದಾರೆ. ಇಲ್ಲಿ ಆ ಮಹನೀಯರ ಹೆಸರುಗಳನ್ನೂ ಅವರು ಒದಗಿಸಿಕೊಟ್ಟ ಚಂದಾದಾರರ ಸಂಖ್ಯೆಯನ್ನೂ ಕೊಡಲಾಗಿದೆ:

ಶ್ರೀ. ವಿ. ಎಸ್. ಆಳವಂಡಿ ಟೆಕ್ನಿಕಲ್ ಎಕ್ಸಪರ್ಟ ಹೊಳೆ ಆಲೂರ. ೧೧ ಜನ

ಶ್ರೀ. ಕೆ. ವಿ. ದೇವಳೆ ಬಿ. ಎ. ವಿಜಾಪುರ ೭

ಶ್ರೀ. ವಿ. ಬಿ. ನೇಸರಗಿ ಮರಾಠಾ ಲೈಟ್ ಇನ್‌ಫಂಟರಿ ರಾಮಗಡ, ಬಿಹಾರ. ೧

ಶ್ರೀ. ಎಂ. ಬಿ. ಸಿದ್ಧಲಿಂಗನ ಗೌಡರು ವಿಲೇಜ್ ಮುನಸೀಫ್ ಮತ್ತು ಜಮೀನ್‌ದಾರರು. ೧

ಶ್ರೀ. ದೇಶಪಾಂಡೆ ಗುರುರಾಯರು ಸಂಗೀತ ವಿಶಾರದರು, ಧಾರವಾಡ. ೧

ಇವರಿಗೆಲ್ಲ ಕೃತಜ್ಞತೆಯ ವಂದನೆಗಳು.

—ಸಂಪಾದಕರು

ನವೀನ ಕವನಸಂಗ್ರಹ

ಗಂಗಾವತರಣ

(ಅಂಬಿಕಾತನಯ ದತ್ತ)

ಪ್ರೊ. ದ. ರಾ. ಬೇಂದ್ರೆಯವರ ಹೊಸ ಕವನಗಳ ಸಂಗ್ರಹ ಬರುವ ಆಗಸ್ಟದೊಳಗಾಗಿ ಪ್ರಕಟವಾಗುವದು.

ಪುಟ-೧೨೪; ಬೆಲೆ ೨-೦-೦.

೧ ರೂ. ಮುಂಗಡ ಕಳಿಸಿ ಹೆಸರು ಹಚ್ಚಿದವರಿಗೆ ಈ ಪುಸ್ತಕವು ರೂ. ೧-೧೨-೦ ಬೆಲೆಗೆ ದೊರೆಯುವದಲ್ಲದೆ, ಮುಂದೆ ಇವರಿಂದಲೇ ಪ್ರಕಟವಾಗುವ ಎಲ್ಲ ಪುಸ್ತಕಗಳು ರಿಯಾಯಿತಿ ದರದಿಂದ ದೊರೆಯುವವು.

ಬೇಗನೆ ಪ್ರಕಟವಾಗಲಿರುವ ಪುಸ್ತಕಗಳು :
ಹೃದಯ ಸಮುದ್ರ, (ಕವನ ಸಂಗ್ರಹ,) **ಅಷ್ಟಾಂಗ ಸಂಸ್ಕೃತಿ** (ಪ್ರಬಂಧ) **ವಿಶ್ವರೂಪಕ** (ನಾಟ್ಯ ಪ್ರಬಂಧ) ಪ್ರಕಟನೆಯ ತಾರೀಖನ್ನು ಜಯಂತಿಯಲ್ಲಿ ಆಗಾಗ್ಗೆ ತಿಳಿಸಲಾಗುವದು.

ದೊರೆಯುವ ಸ್ಥಳ—: ಪಾಂಡುರಂಗ ಬೇಂದ್ರೆ.
C/o. ಪ್ರೊ. ದ. ರಾ. ಬೇಂದ್ರೆ.
ಬ್ಲಾಕ್ ೧೨, ನೀಲಾನಗರ, ಸೊಲ್ಲಾಪುರ.



(೧)

ಒಬ್ಬ:— "ನಾನು ಸ್ವರ್ಗಕ್ಕೆ ಹೋದಮೇಲೆ ಕಾಳಿದಾಸನ ಸಾಹಿತ್ಯದೊಳಗಿನ ದೋಷಗಳನ್ನು ಅವನಿಗೆ ತೋರಿಸಿಕೊಡುತ್ತೇನೆ."

ಇನ್ನೊಬ್ಬ:—"ಅವನು ಸ್ವರ್ಗದಲ್ಲಿರದೆ ನರಕದಲ್ಲಿದ್ದರೆ?"

ಒಬ್ಬ:— "ಆಗ ನೀನು ಹೋಗಿ ತೋರಿಸಿಕೊಡು."

* * *

(೨)

ಸಿನೆಮಾ ನಟ ದಿ. ದೀಕ್ಷಿತ ತುಂಬ ತಗೆಗಾರ. ಒಮ್ಮೆ ಒಂದು ಚಿತ್ರದ 'ಶೂಟಿಂಗ್' ನಡೆದಿತ್ತು. ವಿರಾಮ ಕಾಲದಲ್ಲಿ ಎಲ್ಲರೂ ಹರಟೆಕೊಚ್ಚುತ್ತ ಕುಳಿತಿದ್ದರು. ಆ ಸ್ವರದಲ್ಲಿ ಮಾಸ್ಟರ್ ವಿನಾಯಕರು ಅಲ್ಲಿಗೆ ಬಂದರು.

"ಛೆ, ಛೆ. ಎಂಥ ಸೆಕೆ? ಗಾಳಿಯೇ ಇಲ್ಲ" ವಿನಾಯಕರು ದೀಕ್ಷಿತನನ್ನುದ್ದೇಶಿಸಿ ನುಡಿದರು.

ಕೂಡಲೆ ದೀಕ್ಷಿತ ಅಲ್ಲಿ ಬಿದ್ದಿದ್ದ ಒಂದು ತೆಳುವಾದ ಜಪಾನಿ ಬೀಸಣಿಕೆಯನ್ನೆತ್ತಿ ವಿನಾಯಕರ ಕೈಯಲ್ಲಿರಿಸಿದ.

"ಇಷ್ಟು ತೆಳುವಾದ ಬೀಸಣಿಕೆಯಿಂದ ಗಾಳಿಯನ್ನು ಬೀಸಿಕೊಳ್ಳುವದಾದರೂ ಹೇಗೆ?" ವಿನಾಯಕರು ನುಡಿದರು.

ದೀಕ್ಷಿತ ಉತ್ತರಿಸಿದ:— "ರಾಯರೆ, ಈ ಬೀಸಣಿಕೆಯನ್ನು ಮುಖದೆದುರಿಗೆ ಅಲ್ಲಾಡಿಸುವಹಾಗಿಲ್ಲ! ಮುಖವನ್ನೇ ಬೀಸಣಿಕೆಯ ಎದುರು ಅಲ್ಲಾಡಿಸಬೇಕು!" ಎಂದು ಅದರಂತೆ ಮಾಡಿಯೇ ತೋರಿಸಿದ. ಅಲ್ಲಿ ಇದ್ದವರೆಲ್ಲ ಹೊಟ್ಟೆ ಹಿಡಿಸಲಾರದೆ ನಕ್ಕರು!

* * *

(೩)

ಇನ್ನೊಮ್ಮೆ ಹೀಗೇ ವಿರಾಮದ ಕಾಲಕ್ಕೆ, 'ಸಿನೆಮಾ ಪ್ರಪಂಚದಲ್ಲಿ ಹೊಟೆಲ್ ಮಾಣಿಯೂ ಡೈರೆಕ್ಟರನಾಗುತ್ತಾನೆ. ಇಂದು ನಿರ್ಧನನಾಗಿದ್ದವನೂ ನಾಳೆ ಕುಬೇರನ ಐಸಿರಿಯನ್ನು ಭೋಗಿಸುತ್ತಾನೆ.' ಎಂಬ ಬಗ್ಗೆ ಮಾತು ಹೊರಟು, ಹರಟೆಗೆ ತುಂಬ ಕಳೆಕಟ್ಟಿತ್ತು.

ಆಗ ಹೋಟೆಲ್ ಮಾಣಿ ತೇರಿಸಂತೆ ಏರಿಸಿದ ಚಹದ ಕಪ್ಪುಗಳನ್ನು ಹಿಡಿದುಕೊಂಡು ಒಳಗೆ ಪ್ರವೇಶಿಸಿದ. ಅವನನ್ನು ನೋಡಿದೊಡನೆ ದೀಕ್ಷಿತ ಚಟ್ಟನೆ ಎದ್ದು, ತಲೆಯ ಮೇಲೆ ಟೊಪ್ಪಿಗೆಯನ್ನೇರಿಸಿ, ಸೊಂಟಲ ಉಗುಳಿ ಬಂದು, ಶಿರಬಾಗಿಸಿ ಮುಜುರೆ ಮಾಡಿದ!

ಮಾಣಿ ನಾಚಿಗೊಂಡು ನುಡಿದ:— 'ಯಾಕ ರಾಯರ, ಬಡವ ಅಂತ ಚಾಷ್ಟಿ ಮಾಡ್ತಿರೇನು?

ದೀಕ್ಷಿತ ಅಷ್ಟೇ ಗಂಭೀರನಾಗಿ ನುಡಿದ— 'ಛೆ, ಇಲ್ಲಪಾ, ನಿಜವಾಗಿ ಚಾಷ್ಟಿ ಅಲ್ಲ! ಯಾರಿಗ್ಗೊತ್ತು, ನಾಳೆ ನೀನೇ ವಿ. ಶಾಂತಾರಾಮ ಅಥವಾ ಬಾಬುರಾವ ಪೈ ಆದರೆ?'

* * *

(೪)

ಹುಗುಳು ಜಡ್ಡು ಆದೊಬ್ಬ ರೋಗಿ ಡಾಕ್ಟರ ಕಡೆಗೆ ಹೋದ. ಆಗ ಡಾಕ್ಟರು ಒಬ್ಬ ರೋಗಿಯನ್ನು ಪರೀಕ್ಷಿಸುವುದರಲ್ಲಿ ತೊಡಗಿದ್ದರು. ನರ್ಸ್ ಬಂದು, ಇವನನ್ನು ಒಂದು ಕೋಣೆಯಲ್ಲಿ ಕಳುಹಿ, ಹೇಳಿದಳು— 'ಮೈಮೇಲಿನ ಬಟ್ಟೆಬರಿಯನ್ನೆಲ್ಲ ತೆಗೆದಿಟ್ಟು ಕೂಡ್ರಿ.'

'ಅದ್ಯಾಕೆ?' ಹುಗುಳುಜಡ್ಡಿನವ ಕೇಳಿದ.

"ಅದನ್ನು ಕೇಳಬೇಡ್ರಿ. ಹೇಳಿದಷ್ಟು ಮಾಡ್ರಿ." ನರ್ಸ್ ಎಂದಳು. ರೋಗಿ ಕೋಣೆಯಲ್ಲಿ ಬಂದು, ತನ್ನ ಬಟ್ಟೆ ಬಿಚ್ಚಹತ್ತಿದ. ಅಲ್ಲಿ ಒಂದು ಪಾರ್ಸಲ್ ತೊಡೆಯ ಮೇಲಿಟ್ಟುಕೊಂಡು ಇನ್ನೊಬ್ಬ ಬತ್ತಲೆ ಮನುಷ್ಯ ಕುಳಿತಿದ್ದ. ಅವನಿಗೆ ಕೇಳಿಸುವ ಹಾಗೆ ಇಂವ ನುಡಿದ—'ನಾನೆಲ್ಲಿಯೂ ಕೇಳಲಿಲ್ಲ. ಬಾಯಿ ಪರೀಕ್ಷಿಸಿಕೊಳ್ಳುವಾಗ ಬತ್ತಲೆಯಾಗಬೇಕು ಅನ್ನುವದನ್ನ!'

ಇನ್ನೊಬ್ಬ ನುಡಿದ— 'ರಾಯರೆ, ನೀವು ರೋಗಿಗಳಾದರೂ ಇದ್ದೀರಿ. ನನ್ನದು— ಯಾರಿಗೆ ಹೇಳಲಿ, ನಾನಂತೂ ಈ ಪಾರ್ಸಲ್ ಕೊಡಲಿಕ್ಕೆ ಬಂದವ!'

* * *

ಜಯಂತಿ

ಕಾಮನ ಬಿಲ್ಲು

(ಮನೋವಿಶ್ಲೇಷಣಾತ್ಮಕ ಕಥೆ)

ಶ್ರೀ. ಪುರೋಹಿತ ವೆಂಕಟೇಶ, ಧಾರವಾಡ

★

ಜೀವನದಲ್ಲಿ ಕಗ್ಗತ್ತಲೆ ಸುಳಿದಾಗ, ಮನುಷ್ಯ ಕಂಗೆಟ್ಟು ಆತ್ಮಹತ್ಯೆಗೆ ಸಿದ್ಧನಾಗುತ್ತಾನೆ. ಆದರೆ ಮನುಷ್ಯಜೀವನವೇ ಕತ್ತಲೆ-ಬೆಳಕುಗಳ ಕಣ್ಣು-ಮುಚ್ಚಾಟವೆಂಬುದರ ಅರಿವು ಮೂಡಿದರೆ, ಮನುಷ್ಯ ಧೈರ್ಯದಿಂದ ಕತ್ತಲೆಯನ್ನು ದಾಟಬಲ್ಲ; ಬೆಳಕನ್ನು ಕಾಣಬಲ್ಲ!

★

ರವಿಯ ಮೃದುವಾದ ಕಿರಣಗಳು ಎಲೆಗಳನ್ನು ದಾಟಿ ಅವನ ಮುಖದ ಮೇಲೆ ಬಿದ್ದಿದ್ದುವು. ಗಾಳಿಯು ಕೂಡ ಆಟವಾಡಿ, ಎಲೆಗಳನ್ನು ಸೋಲಿಸಿ ಅವನ್ನು ನೆಲಕ್ಕೆ ಕಳಿಸುತ್ತಿತ್ತು. ಎಲೆಗಳ ರಾಶಿಯ ಮೇಲೆಯೆ ಅವನು ಕುಳಿತಿದ್ದ. ಎಷ್ಟು ಕಾಲದವರೆಗೆ ಕುಳಿತಿದ್ದನೋ ಅದು ಕೂಡ ಅವನಿಗೆ ಗೊತ್ತಿರಲಿಲ್ಲ.

"ಎಲಾ ಇವನ" ಎಂದವನೇ ಕೊಡಹಿಕೊಂಡು ಎದ್ದ. ಪ್ಯಾಂಟಿಗೆ ಅಲ್ಲಲ್ಲಿ ಹತ್ತಿದ್ದ ಹುಲ್ಲನ್ನು ತೆಗೆದೊಗೆದು, ಕೋಟನ್ನೊಮ್ಮೆ ಕೆಳಕ್ಕೆ ಜಗ್ಗಿದ.

"ನಾ ಇಲ್ಲೆ ಬಂದದ್ದರೆ ಯಾತಕ್ಕs" ಮುಂದೆ ಮತ್ತೆ ಎರಡು ಹೆಜ್ಜೆ ಹಾಕಿ ನಿಂತ. "ಹೌದು ಹೌದು! ನಾ ಇಲ್ಲೆ ಒಂದು ಕಾರಣದಿಂದನs ಬಂದೀನಿ.... ಎಲಾ ಇವನ...." ಹುಚ್ಚನಂತೆ ತಲೆ ಹಿಡಿದುಕೊಂಡು ನಗಲು ತೊಡಗಿದ. "ಬಂದಿನ್ಯಾಕಂತ? ಎಂತಾ ಹುಚ್ಚನಾ ನಾನು? ಮೊದಲಿಗೆ ಧಾರವಾಡ ಬಿಟ್ಟದ್ದ್ಯಾಕ? ನಾಲೆ ಕೋಲ್‌ಗ್ಯಾಸಿನ ಮೋಟರಿನಾಗ ಧೂಳು ತಿಂದಕೋತ ಇಲ್ಲೀ ತನಕಾ ಬಂದದ್ದರೇ ಯಾಕ? ಏನೂ ಕಾರಣ ಇಲ್ಲದsನ ಬಂದ್ನೇನು?....ಛೆ....ಹಂತಾ ಹುಚ್ಚ ಏನೂ ಇನ್ನೂ ಆಗಿಲ್ಲ.... ಬಂಗಾರ ಇನ್ನ ಹೋಗೋದರೆ ಎಲ್ಲೆ?....ಹಂ....ಹೌದಲ್ಲ?...." ಮತ್ತೆ ಮುಖ ಗಂಟಿಕ್ಕಿಸಿಕೊಂಡು, ಪ್ಯಾಂಟಿನ ಎರಡೂ ಕಿಸೆಗಳಲ್ಲಿ ಕೈಗಳನ್ನು ಸೇರಿಸಿ, ಸಣ್ಣ ಹೆಜ್ಜೆ ಇಡುತ್ತ ಮುಂದೆ ಸಾಗಿದ.... ದಾರಿ ಬಂದಿತು....ಕಾಲುಗಳು ರಭಸದಿಂದ ಮುಂದೆ ಹೋದುವು. ಕಾಲಿನ ಬಡಿತಕ್ಕೆ ಧೂಳು ಮೇಲೆ ಏರಿತು.

"ಹಂ....ಜೀವನ ಅಂದ್ರನs ಹೀಂಗದ....ಬರೇ ಧೂಳು! ಮೊದಲಿನಿಂದ ಕಡೀತನಕಾ ಧೂಳು!....ಏನು ಮತ್ತ ನನಗೊಬ್ಬಾತಗs ಧೂಳು ಆಗಿತ್ತೋ ಏನೋ? ಛೀ....ಹಾಂಗ ಹ್ಯಾಂಗ ಆಗತsದ?" ಮತ್ತೆ ಅವನಿಗೆ ತಿಳಿಯದಂತೆ ಕಾಲುಗಳು ಮುಂದೆ ಹೋಗತೊಡಗಿದುವು. ಒಣಗಿದ ಎಲೆಗಳ ಮೇಲೆ ಕಾಲು ಬಿದ್ದಾಗ ಸಪ್ಪಳವಾಗಿ, ಅವನು ಹಿಂದೆ ಮುಂದೆ ನೋಡುವಂತಾಗುತ್ತಿತ್ತು. ಮತ್ತೆ ಮುಂದೆ ಸಾಗುತ್ತಿದ್ದ.

"ಹಾಂ, ಇಲ್ಲ್ಯಾಕ ಬಂತಿದು ಕಾಮನ ಬಿಲ್ಲು?....ಹೌದು.... ಹೌದು....ನನ್ನ ಬಾಳು ಈ ಕಾಮನ ಬಿಲ್ಲಿನ್ಹಾಂಗ ಆಗಬೇಕಿತ್ತಲ್ಲ?.... ಎಂದದು?.... ಓ.... ಆವೊತ್ತು!....ಏನು ಹಾರಾಡಿದ್ದೆ ಆವೊತ್ತು....ಮೊದಲಿಗೆ ಅಣ್ಣಾನs ಸುದ್ದೀ ಹೇಳಿದನಲ್ಲ....ಹೌದು, ಹೇಳಲಿಕ್ಕೆ ಬ್ಯಾರೇ ಯಾರು ಇದ್ದರು ಮನ್ಯಾಗ?... ಮ್ಯಾಟ್ರಿಕ್‌ನ್ಯಾಗ ಫಿಲೋ ಗುಣಾ ತೆಗೆದುಕೊಂಡಿದ್ದೆ....ಮರುದಿವಸ ಒಂದು ಬ್ಯಾರೆ ಸುದ್ದಿ ಬಂದಿತ್ತಲ್ಲ....ಗಣಿತದ ಬಹುಮಾನ ನನಗs ಅಂತ.... ನಾ ಸುಮ್ಮಗಿದ್ದೆನೇನು? ಪರೀಕ್ಷಾ ಆದ ಕೂಡಲೇ ಅಣ್ಣಾಗ ಹೇಳಿದ್ದೆ:

"ಈ ಸರ್ತೆ ನೋಡು...ಗಣೀತದಾಗ ಎರಡುನೂರಕ್ಕ ಎರಡು ನೂರು!'.... ಏನು.... ಅಂವ ಚಾಷ್ಟಿ ಅಂತ ನಕ್ಕಿದ್ದನಲ್ಲ....ತಾನs ಅದs ಸುದ್ದಿ ಹೇಳಿದಾಗ ಅವನ ಮಾರಿ ಹ್ಯಾಂಗ ಆಗಿತ್ತಲ್ಲ.... ಸಂಜೀ ಕಡಿಗೆ ಅವನs ಪೇಡೇ ತಂದಿದ್ದ....ಹೌದು ಅಂವ ಭಾಳ ಚಲೋ ಇದ್ದಾನ...ನನ್ನದs ಮೂರ್ಖತನ....ಮತ್ತ ನೆನಿಸಿಕೊಂಡು ಅಳೋದ್ರಾಗ ಏನು ಪುರುಷಾರ್ಥ ಅದ? ಹೀಂಗs ನಮ್ಮ ತಲ್ಯಾಗ ಏನು ಬಂತೋ....ಏನೋ;.... ಏನೋ ಆಗಿಬಿಟ್ಟಿತು ತೀರ್‍ತ್ಯೆ."

ಬರುಬರುತ್ತ ಸಪ್ಪಳ ಹೆಚ್ಚಾಗುತ್ತ ನಡೆಯಿತು. ನೀರು ಮೇಲಿನಿಂದ ಕೆಳಗೆ ಬಿದ್ದು ಗರ್ಜಿಸುತ್ತಿತ್ತು. ಅದರೊಡನೆ ಅವನ ಹೃದಯದ ಬಡಿತವೂ ಹೆಚ್ಚಾಗಿತ್ತು. ನಿಂತುಕೊಂಡು ತನ್ನ ಆಕೃತಿಯನ್ನೆಲ್ಲ ನೋಡಿಕೊಂಡ.

"ನಾ ಅಂದ್ರ ಇಷ್ಟು ಹೊಲಸ ಆಗೀನೇನು? ಶರಟು ಎಷ್ಟು ಹೊಲಸಾಗೇದ? ಪ್ಯಾಂಟಿನ ಅವತಾರ ಏನು? ನನಗ ಹ್ಯಾಂಗ ತಿಳೀಲಿಲ್ಲ ಇದು....ನಾನು ಇಷ್ಟು ಹೊಲಸು ಅರಿವೀ ಹಾಕ್ಕೊಂಡೀನಿ ಅನ್ನೋದು? ಏನೋ ಎಂತೋ........ಅದಕ್ಕs ಜನಾ ಎಲ್ಲಾ ಜೊಟ್ಟುಮಾಡಿ ಪಿಸಿ ಪಿಸಿ ಮಾತಾಡತಿದ್ದರೋ ಏನೋ ಧಾರವಾಡದಾಗ!" ಅವನಿಗೆ ನಗೆ ತಡೆಯಲಾಗಲಿಲ್ಲ. ತೊಡೆಗಳನ್ನು ಬಡಿದುಕೊಂಡು ನಗತೊಡಗಿದ.

"ಹೌದು, ಅಂದು,.... ಆವೊತ್ತು ಪುಣೇದಾಗ ಅಲ್ಲs....ಆವೊತ್ತೂ ಇಷ್ಟs ಹೊಲಸಾಗಿದ್ದುವು ಅರಿವಿ....ಅದಕ್ಕs ಓಡಿ ಬಂದೆ ನಾನು. ಇಲದಿದ್ದರ ನನಗೇನು ಹುಚ್ಚು ಹಿಡದಿತ್ತs....ಇಂಟರಿ

ನಾಗ ಫಸ್ಟ್ ಕ್ಲಾಸು ಬಂದು, ಎಂಜಿನೀಯರಿಂಗ್ ಕಾಲೇಜಿಗೆ ಹೋಗಿದ್ನೆಲ್ಲ!....ಹೌದು ನಮ್ಮ ಪ್ರಿನ್ಸಿಪಾಲರು ಎಷ್ಟು ಉತ್ತಮ ಪತ್ರ ಬರದು ಕೊಟ್ಟಿದ್ರಲ್ಲs....ಅಂತs ಲಗೂನೇ ಎಡ್ಮಿಶನ್ ಸಿಕ್ಕಿತು.... ನಾಯಾಕ ಓಡಿ ಬಂದೆ?....ಎಷ್ಟು ದುಡೀಬೇಕೋ ನಾರಾಯಾ!....ನಾ ಏನು ಮನಶ್ಯಾನೊ ದನಾನೋ? ದಿನಾಲೂ ವರ್ಕಶಾಪಿನಾಗ ಮೂರು ನಾಲ್ಕು ತಾಸು, ಆ ನೀಲಿ ಬಾಯಿಲರ್-ಸೂಟು ಹಾಕ್ಕೊಂಡು, ಕತ್ತಿ ದುಡದ್ಹಾಂಗ ದುಡೀಬೇಕು....ಅವರೆಲ್ಲಾರೂ ಹೇಳದ ಕತೀ ಕೇಳೀ ನನಗ ರಗಡ ಆಗಿ ಹೋಗಿತ್ತಲ್ಲs....

" ದಿನಾಲು ಕೂಲೀ ಮಾಡೋ ಅವರ ಹಾಂಗ ಮಸಿನ್ನಿನ ಕೆಳಗ ಬೀಳಬೇಕು. ಮತ್ತ ಮೈಯೆಲ್ಲಾ ಹೊಲಸುಮಾಡಿ-ಕೊಂಡು ಖೋಲಿಗೆ ಹೋಗಬೇಕು....ಇದನ್ನೆಲ್ಲಾ ಕೇಳಕೋತ ಹ್ಯಾಂಗ ನಾ ಎಂಟುದಿನಾ ಕಳದೆನೋ ಏನೋ....ಅದಕ್ಕನ ಓಡಿ ಬಂದೆ ಧಾರ್ವಾಡಕ್ಕ! ಅಣ್ಣ ಆವಾಗ ಎಷ್ಟು ಸಿಟ್ಟಿಗೆದ್ದಿದ್ದನಲ್ಲ.... ಹೋದ ಕೂಡಲೇ. 'ಈಗ್ಯಾಕೋ' ಅಂತಷ್ಟs ಕೇಳಿದ;....ನಾ ಎಲ್ಲಾ ಹೇಳಿದ ಕೂಡಲೇ,... ಹೌದು.... ಹೌದು.... ಹ್ಯಾಂಗ ನೋಡಿದನಲ್ಲs ನನ್ನ ಕಡಿಗೆ!....ಬಹಾಳ ಸಿಟ್ಟಿಗೆದ್ದಿದ್ದ ಅಂವ. ಅಂವ ಒಬ್ಬಾಕನs ಯಾಕ? ಎಲ್ಲಾರೂ ಹಾಂಗs....ಕಾಕಾ ಅಂತೂ ಮಾತಾಡಿಸಲೇ ಇಲ್ಲ....ಹ್ಯಾಂಗ ಹುಚ್ಚ ಮಂಗ್ಯಾನ್ಹಾಂಗ ಆಗಿದ್ದೆನಲ್ಲ ನಾನು! ರಾತ್ರಿ ಊಟಾ ಸುದ್ಧಾ ಮಾಡಲಿಲ್ಲ ಚಿಲೋ-ತ್ಯಾಂಗ. ಮರುದಿವಸ....ಏ... ಅಲ್ಲ....ಮರುದಿನ ಎಲ್ಲೆ? ಅಂದs ಬರೇ ಮನ್ಯಾಗsನs ಹಾಂಗ ಹೀಂಗ ಆಗಿ ಹೋಯ್ತು!....

" ಶುಕ್ರವಾರ ಅಲ್ಲs ಪ್ರಿನ್ಸಿಪಾಲರ ಕಡಿಗೆ ಹೋದದ್ದು?...... ಅವರು, ನಾನು ಇದನ್ನೆಲ್ಲ ಹೇಳಿದ ಕೂಡಲೇ....ಎಲ್ಲಾ ಎಲ್ಲಿ ಹೇಳಿದೆ? ಬರೇ 'ನನಗೇನೂ ಬಗೀಹರಿಯೂದಿಲ್ಲರೀ ಸರ್' ಅಂತ ಹೇಳಿದೆ....ಎಷ್ಟು ಮಜಾ ಆತು ಅಲ್ಲs ಆಗ?....ಒಮ್ಮಿಗೀಲೇ ಕುರ್ಚಿ ಬಿಟ್ಟು ಎದ್ದವರs ಅವರು ಅತ್ತಲಾಗ ಇತ್ತಲಾಗ ಅಡ್ಡಾ-ಡಿದರು; ನನ್ನೊಂದೆರಡು ಸಾರೆ ನೋಡಿದರು....ಅವರೂ. ಹೂಂ.... ಅಣ್ಣನ್ಹಾಂಗs ನೋಡಿದರು... ನನಗ ಹ್ಯಾಂಗ ಹ್ಯಾಂಗೋ ಆತು.... ಆಗ ಏನೋ ದೊಡ್ಡ ಅಪರಾಧ ಮಾಡಿದವರ್ಹಾಂಗ ಕಾಲ ಬೆರಳಲೆ ನೆಲ ಕೆರಕೋತ ನಿಂತಿದ್ದೆ ನಾನು!.. ಕಡೀಕ ಮಾತ್ರ ಪ್ರಿನ್ಸಿ-ಪಾಲರs ಹೇಳಿದರಲ್ಲs..."ಹೋಗ್ಲಿ ಬಿಡು, ಇನ್ನೇನು ಮಾಡ್ತಿದಿ? ಆದದ್ದು ಆಗಿ ಹೋತ್ತು; ಮತ್ತ ಹೆಸರು ಹಚ್ಚು. ಮತ್ತ ಇಲ್ಲೇ ಅದ ಅದsಲ್ಲಾ ಜೀವನ!" ಆಗ ನಾನು ಹಾಂಗs ಆಗ್ಲಿ ಅಂತ ಹೇಳಿ ಮನಿಗೆ ಓಡಿಬಂದಿದ್ದೆ.

" ಎಲ್ಲಾರೂ ಕೇಳವರs: 'ಯಾಕ ಬಂದ್ಯೋ ಕಾಲೇಜ ಬಿಟ್ಟು?' ಅಂತ. ನನಗ ಇವರು ಹೀಂಗ್ಯಾಕ ಕೇಳತಾರಪಾ ಅಂತ ಅನಸ್ತಿತ್ತು. ಇನ್ನೇನು ಮಾಡೋದದ? ನನಗs ಮುಂದ ಕೆಟ್ಟ ಅನಸಲಿಲ್ಲೇನು? ....ನಾನು ಗಣೀತದಾಂವ....ಅದನ್ನೆಲ್ಲಾ ಬಿಟ್ಟು ಎಲ್ಲಿ ಹೋದೆ, ಏನು ಗತಿ!.... ಸುಮ್ಮನೆ ಅದs ಎಂಜಿನಿಯರಿಂಗ್ ಕಾಲೇಜಿಗೆ ಮೂರು ವರುಷ ಹೋಗಿದ್ದರ, ಈವೊತ್ತು ಹೀಂಗ ಹುಚ್ಚನ್ಹಾಂಗ ತಿರುಗಾಡತಿದ್ದೆನೇನು?.... ಛೇ...ಮೋಟರಿನ್ಯಾಗ ಕೂತುಕೊಂಡು ಇಲ್ಲಿಗೆ ಬರತಿದ್ದೆ.

" ಈಗ ಹಿಂದಿನದೆಲ್ಲಾ ನೆನಸಿಕೊಂಡು ಏನು ಮಾಡೋದು! ಈಗೋದಂತೂ ಸಾಕಾತು....ಎಲ್ಲಾ ಗಂಟು ಗದಡೀ ಕಟ್ಟಿ ಇಲ್ಲಿಗೆ ಬಂದೀನಿ ನಾನು! ಇನ್ನ ಮತ್ತ ಅದನ್ನ ನೆನಪಿಗೆ ತಂದುಕೊಂಡು ಅಳೋದ್ರಾಗ ಏನದ?"

ಕಣ್ಣೊಳಗೆ ಎರಡು ಹನಿ ನೀರು ಬಂದು ಕೋಟಿನ ಮೇಲೆ ಬಿದ್ದುವು. ಹಿಂದಿನ ನೀರಿನ ಸಪ್ಪುಳವಂತೂ ಹಾಗೆಯೇ ಸಾಗಿತ್ತು. ಮತ್ತೊಮ್ಮೆ ಕಾಮನಬಿಲ್ಲು ಕಂಡಿತು. ಅವನಿಗೆ ಏನೋ ಒಂದು ಬಗೆಯ ದುಃಖ ಒತ್ತರಿಸಿ ಬಂದಿತು. ತಡೆಯುವುದಾಗಲಿಲ್ಲ.... ಹಾಗೆಯೇ ಒಂದು ಗಿಡದ ಕೆಳಗೆ ಕುಳಿತು ಬಿಟ್ಟ.

ಕಿಸೆಯೊಳಗಿನ ವಸ್ತ್ರ ಹೊರಗೆ ತೆಗೆದು ಬೆವರನ್ನು ಒರಸಿಕೊಂಡ. ಎಷ್ಟು ಒರಸಿಕೊಂಡರೂ ಬೆವರಿನ ಕಾಟ ತಪ್ಪಲಿಲ್ಲ. ಕೈಯೊಳಗಿನ ಗಡಿಯಾರ ನೋಡಿಕೊಂಡ. ಹನ್ನೆರಡು ಹೊಡೆದಿತ್ತು. ಮುಖ

ಮೇಲೆ ಎತ್ತಿ ಸಂಶಯದೃಷ್ಟಿಯಿಂದ ಮತ್ತೊಮ್ಮೆ ನೋಡಿದ. ಹರಕು ಬೆಲ್ಟನ್ನು ನೋಡುವುದು ಅವನಿಂದಾಗಲಿಲ್ಲ. ಮತ್ತೆ ಮುಖ ತಿರುಗಿಸಿಬಿಟ್ಟ. ಬಿಸಿಯುಸಿರಿಗಂತೂ ಕೊನೆಯೇ ಇಲ್ಲ.

ಎದ್ದು ನಿಂತ. ನಿಂತಲ್ಲಿಂದಲೇ ಸುತ್ತಲೂ ನೋಡಿದ....ಯಾರೂ ಇರಲಿಲ್ಲ. ಬರೀ ಬಿಸಿಲು....ಜಲಪಾತದ ಸಪ್ಪಳ ಹಾಗೇ ಸಾಗಿತ್ತು. ಮತ್ತೆ ಮೊದಲಿನಂತೆಯೇ ಕುಕ್ಕರಿಸಿದ.

"ಎಲ್ಲಿಗೆ ಬಂತಪಾ ನಮ್ಮ ಜೀವನಾ ? ಎನ ತಿಳಕೊಂಡಿದ್ದೆ ಏನು ಆತು?....ಛೀ....ಹಿಂದಿನ ವಿಚಾರವನ್ನು ಇವತ್ತ ಕಣ್ಣುಮುಂದ ತಂದುಕೊಂಡರ ಮೈಯೊಳಗ ಏನ್ನೇನೋ ಆಗತೈತಿ......ಕಾಲ ಅದು....ಕಾಲ!....ಛೀ ಕಾಲ, ದೈವ ಇವೇನು ಮಾಡಿಯಾವು?.... ನಮ್ಮ ಕಾಲ ಮ್ಯಾಲೆ ಕಲ್ಲು ಹಾಕಿಕೊಳ್ಳುವವರು ನಾನೇ....ಮತ್ತೆ 'ಕಾಲ....ದೈವ' ಅಂದ್ರ ಏನು ಆಗ್ತದ?....

"ಹೌದು ನಾನು ಆವೊತ್ತು ಕಾಲೇಜಿನಾಗ 'Man is an architect of his own fortune' (ಮಾನವ ತನ್ನ ಜೀವನ್ಮಂದಿರದ ಶಿಲ್ಪಿ) ಎಂದು ವಾದಿಸಿದ್ದೆ. ಈಗ ನಾನು ಹ್ಯಾಂಗ ಅಂದರ....ಆವೊತ್ತು ಎಷ್ಟು ಚೆಲೋ ಆಗಿತ್ತಲ್ಲ ಭಾಷಣ!....ಎಲ್ಲಾ ಕಾರ್ಯಕ್ರಮ ಮುಗಿದ ಮ್ಯಾಲೆ ಇಂಗ್ಲೀಷ್ ಪ್ರೊಫೆಸರರು ಹತ್ತಿರ ಬಂದು, ಕೈಕುಲುಕಿಸಿ ನಕ್ಕು, ಆಶೀರ್ವದಿಸಿ ಹೋಗಿದ್ದರಲ್ಲ? ....ಕನ್ನಡ ಪ್ರೊಫೆಸರರಂತೂ ಏನು! ....ಅವರು ಆಗ ಅಂದಿದ್ದರು: "ನೋಡು ನೀನು ನಿಜವಾದ ಮನುಷ್ಯ ಆಗತೀದಿ !" ಅವರಿಗೆ ಮನುಷ್ಯ ಅನ್ನೋದರ ಮ್ಯಾಲೆ ಬಹಾಳ ಪ್ರೀತಿ ಅಲ್ಲs....'ಮನಶ್ಯಾ ಆಗಿ ಹುಟ್ಟಿ ಏನೂ ಸಾಧಿಸದೆ, ಕಟಿಗಿ ಬೂದಿ ಆಗೋ ಹಾಂಗು ಕೊನೆಗೆ ಬೂದಿ ಆಗಿ ಹೋದರ 'ಮನುಷ್ಯ' ಏನು ಅಂವ?'.... ಅಂತ ಅಂತಿದ್ದರು....'ಜೀವನದೊಳಗ ಯಾವುದೇ ಒಂದು ಆದರ್ಶ ಸಾಧಿಸದಿದ್ದರ, ಆದು ಏತಕ್ಕೂ ಬೇಡ!.' ಅಂತ ಅಂತಿದ್ದರಲ್ಲs ಅವರು?....ಹೌದು ಆವೊತ್ತು ಎಷ್ಟು ಛೆಲೋ ಇಂಪ್ರೆಶನ್ ಆಗಿತ್ತಲ್ಲs....

"ಮುಂದರ ಏನು? ಎಲ್ಲಾರೂ ಬಾರಪಾ ಅನ್ನವರು ಆಗ! ಎಷ್ಟು ಚೆಲೋ ಕ್ರಿಕೆಟ್ ಆಡತಿದ್ದೆ ನಾನು!....ನಾನು ಕ್ಯಾಪ್ಟನ್ ಆಗಿದ್ದೆನಲ್ಲ ನಮ್ಮ ಕಾಲೇಜ್ ಟೀಮಿಗೆ?....ಓ ಅವತ್ತ....ಬೆಳಗಾಂವಿಯವರ ಜೋಡಿ ಆಡಿದಾಗ ಏನು ಹೊಡೆದಿದ್ದೆ! ....ನಾಲ್ಕು ಬೌಂಡ್ರೀ ಒಂದೇ ಸವನೆ ಹೊಡೆದಿದ್ದೆ....ಆಟ ನಟದಾಗನ ಪ್ರಿನ್ಸಿಪಾಲರು ಓಡೋಡಿಕೋತ ಬಂದು ಅಪ್ಪಿಕೊಂಡು ಹೋಗಿದ್ದರಲ್ಲs ....ಆವೊತ್ತಿನ ಆಟ ಅಂದ್ರೇನು.... ನನಗ ಕಡೀಕೊಮ್ಮೆ ಬೌಲಿಂಗು ಕೊಟ್ಟಿದ್ದರು. ಅದ್ರಾಗನ ಇಬ್ಬರನ್ನ ಆಹುತಿ ತೆಗೆದುಕೊಂಡಿದ್ದೆ....

"ಆಟ ಮುಗಿದ ಕೂಡಲೆ ಚಹಾ ಕುಡಕೋತ ಕೂತಿದ್ದಿವಿ. ಆಗ ನಮ್ಮ ಪ್ರೊಫೆಸರರು ಎಲ್ಲಾರೂ ಬಂದು ಏನ್ನೋ ಮಾತಾಡಿ, ನಕ್ಕೋತ ಹೋಗಿದ್ರು.....ನಾ ಆ ಮ್ಯಾಚಿಗೆ ಇನ್ನೂ ಕ್ಯಾಪ್ಟನ್ ಆಗಿದ್ದಿಲ್ಲ....ಮುಂದ ನಾನು ಆಗಿದ್ದೆ....ಮುಂಬೈಯೊಳಗ ಎರಡು ಮೂರು ಆಟ ಆಡಿದ್ದಿವಿ. ಎಲ್ಲಾನೂ ನಮಗs....ಜೋಶಿ ಏನು ಬೌಲಿಂಗು ಮಾಡತಿದ್ದ!....ಅವನು ಖರೇ ಆಡಾಂವ......ಎಲ್ಲಿ ಹೋಗ್ಯಾರೋ ಅವರೆಲ್ಲಾ ಈಗ?.... ನಮ್ಮ ವಿಕೆಟ್‌ಕೀಪರ್ ಏನು ನಗತಿದ್ದ....ಆ ಉದ್ದಕಿನ ಹುಡುಗ ಏನು ಮಾತಾಡತಿದ್ದ!.... ಎಲ್ಲಾರೂ ಒಂದೊಂದು ರೀತೀಲೇ ಮಜಾನs ಇದ್ದಿವಿ! ....ಒಂದು ವರ್ಷ ಅವೆಲ್ಲ!....ಆಗ ನಕ್ಕ್ಯಾಂಗ ಮುಂದ ಯಾವಾಗೂ ನಗಲಿಲ್ಲ! ....ಆವಾಗ ನಕ್ಕ್ಯಾಂಗ ಅಂತ;....ಮುಂದ ನಕ್ಕರೆ ನಕ್ಕೀನೇನು? ಬರೇ ಅಳೋದs ಆಗೇದ....

"ಅದರ ಮುಂದಿನ ವರ್ಷ ಗ್ರ್ಯಾಜ್ಯುಯೇಟ್ ಆದ್ನೆಲ್ಲs....ಆಗೂ ಎಲ್ಲಾರೂ ಸಿಟ್ಟಿಗೆದ್ದಿದ್ದರು. ಮನಿಗೆ ಬರೋದ್ರೊಳಗ ಅಣ್ಣ 'ಬರೇ ಆಟಾ ಆಡಿದರ ಬರತದೇನು....ಅಭ್ಯಾಸ ಬೇಕು....ಆ ಎಂಜನಿಯರಿಂಗ್ ಕಾಲೇಜಿನಾಗ ಎಂಟು ದಿನಾ ಇರೋದು ಆಗಲಿಲ್ಲ....ಎಷ್ಟು ಹೇಳಿದರೂ ಹೇಳದ ಕೇಳದ ಓಡಿಬಂದ....ಎಂಥಾ ಫರ್ಸ್ಟಕ್ಲಾಸ್ ಕರಿಯರ:....ಎಲ್ಲಾ ಹಾಳು....ಹಾಳು....ಸಾದಾ ಬಿ. ಎಸ್‌ಸಿ. ಆದ್ರರೆ ಏನಾತು? ....ಮೊದಲಿಗೆ ಇಷ್ಟು ವರಿದಂವ ಬರೇ ಪಾಸಾಗಬೇಕಂದ್ರ!'....ಎಂದು ಸಿಟ್ಟಿಗೆದ್ದು ಒದರಾಡಲಿಕ್ಕೆ ಹತ್ತಿದ್ದ. ಆವೊತ್ತು ರಾತ್ರಿ ಮತ್ತೆ ನಾನು ಎಲ್ಲಾ ನೆನೆಸಿಕೊಂಡು ಅತ್ತಿದ್ದೆ...."

ಸರಕಾರಮಾನ್ಯ ಔದ್ಯೋಗಿಕ ಶಿಕ್ಷಣ ಸಂಸ್ಥೆ

ಕರ್ನಾಟಕ

ಹೊಲಿಗೆಯ ವಿದ್ಯಾಲಯ, ಧಾರವಾಡ

ತುಸು ಅವಧಿಯ ವಿವಿಧ ವರ್ಗಗಳು. ಲಂಡನ್, ನ್ಯೂಯಾರ್ಕ್‌ಗಳ ಹೊಲಿಗೆಯ ಶಿಕ್ಷಣ ಸಂಸ್ಥೆಗಳ ನೇರವಾದ ಸಂಬಂಧವನ್ನಿಟ್ಟುಕೊಂಡ ಈ ವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವದು ಒಂದು ಹೆಮ್ಮೆ. ಮಹಿಳೆಯರಿಗಾಗಿ ಕೈ-ಕಸೂತಿ, ಯಂತ್ರದ ಕಸೂತಿಗಳನ್ನು ಅತ್ಯಾಧುನಿಕ ಸಾಧನಗಳ ಸಹಾಯದಿಂದ ಕಲಿಸುವ ಏರ್ಪಾಡು ಇದೆ. ಶಿಕ್ಷಕರಾಗ ಬಯಸುವವರಿಗೆ ಶಿಕ್ಷಕಕೋರ್ಸು ಇದೇ ವರ್ಷದಿಂದ ಪ್ರಾರಂಭಿಸಿದೆ. ವಿಶೇಷ ವಿವರಗಳಗಳಿಗೆ ಎರಡಾಣೆ ಅಂಚೆ ಟಿಕೀಟು ಇಟ್ಟು ಇಂದೇ ಬರೆಯಿರಿ, ಇಲ್ಲವೆ ಪ್ರತ್ಯಕ್ಷ ಭೆಟ್ಟಿಯಾಗಿರಿ.

ಹೊಲಿಗೆಯ ವಿಷಯದ ಬೇರೆ ಬೇರೆ ಭಾಷೆಗಳ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ. ಇದೇ ವಿದ್ಯಾಲಯದ ಪ್ರಿನ್ಸಿಪಾಲರಿಂದ ಬರೆಯಲ್ಪಟ್ಟ 'ಸೂಚಿಶಿಲ್ಪಕಲೆ' ಎಂಬ ಪುಸ್ತಕ,ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾದದ್ದು ಇಲ್ಲಿಯೇ ದೊರೆಯುತ್ತದೆ.

ಗಜಕರ್ಣ, ಹುರುಕು, ಇಸಬು
ಮುಂತಾದ ಚರ್ಮರೋಗಗಳನ್ನು ತಪ್ಪದೆ
ಗುಣಪಡಿಸುವ ಔಷಧ

ಗೋವಾ ಮಲಮ್

ಸ್ಟಾರ್ ಕಂಪನಿ,
ಬೆಳಗಾಂವಿ.

ಮುಂದೆ ತಲೆ ಎತ್ತಿ ನೋಡಿದ. ಬರೀ ಹಸಿರು ಗಿಡಗಳು; ಅಲ್ಲಲ್ಲಿ ಹೂಗಳು. ಅವೂ ಕೂಡ ಅದೇ ಆಗ ಮುಖ ತೆರೆದಿದ್ದುವು.

"ಹೌದು ಹೌದು.... ನನಗ ಹಸಿರು.... ಹೌದು.... ಹಸಿರು ಅನ್ನೋದs ಗೊತ್ತಾಗಲಿಲ್ಲ.... ಬರೀ ಹಳಸಿದ ಅನ್ನದ್ಹಾಂಗs ನ ಎಲ್ಲಾ ಸಾಗಿಹೋಯ್ತು. .... ಕಡೆಗೆ ಮೊನ್ನೆ ಮೊನ್ನೆ ಹಳಸಿದ, ಅನ್ನಾನs ತುಂಬಿಕೊಳ್ಳೋ ಗತಿ ಬಂದಿತ್ತಲ್ಲs.... ಅಣ್ಣನ ವರ್ಗ ಆಗಿ ಅಂವ ಹೋದ ಮ್ಯಾಲೆ.... ಏನೋ ಎಂತೋ ನಾನು ತಪ್ಪಿದೆ. ಆವೊತ್ತು ನಾನು ಪುಣೆಬಿಟ್ಟು ಬರಬಾರದಾಗಿತ್ತು. ಬಂದ ಮ್ಯಾಲರೇ ಈ ಸುಡುಗಾಡು ವಕೀಲಕೀ ಮಾಡಬಾರದಿತ್ತು....

"ಯಾರಂವ? ವಕೀಲಕೀ ಮಾಡು ಅಂತ ಹೇಳಿದಂವ? ಮಾಮಾ ಅಲ್ಲs.... ತಾನರೆ ನಾಲ್ಕು ಅಕ್ಷರ ಕಲಿತಿದ್ದಿಲ್ಲ.... ನನಗ ಹೇಳ್ಲಿಕ್ಕೆ ಬಂದಾನ. "ಏ ಶೀನು.... ನೀ ವಕೀಲ ಆದ್ರ ಭಾಳ ಡೌಲು ಕಾಣತೀ ನೋಡು....'' ಹೌದಲ್ಲs ಅಂವ ಹಾಂಗ ಮಾತಾಡೋ ಮುಂದ ಅವನ ಜೊಂಡುಮೀಸಿ ಕುಣದ್ಹಾಂಗ ಕಾಣತಿದ್ದುವು.... ಎಷ್ಟು ಸರ್ತೆ ನಕ್ಕಿದ್ದೆ ನಾನು ಅದನ್ನ ನೋಡಿ! ಕಡೀಕ ನನ್ನ— ಆ ಜೊಂಡುಮೀಸೆಯಂವ— ವಕೀಲನ್ನ ಮಾಡಿಬಿಟ್ಟ....

"ಅಂವ ಏನು ಮಾಡ್ಯಾನು? ನಾನs ಬ್ಯಾಡಾ ಅಂತ ಅಂದಿದ್ದರ' ಅಂವ ಏನು ಒಯ್ದು ಕೂಡಿಸ್ತಿದ್ದನೇನು? ಇಲ್ಲ... ನಾನs... ನನ್ನದs ತಪ್ಪಾತು....

"ಫಸ್ಟ್ ಇಯರಿನಾಗ ಏನು ಲೆಖ್ಖಾ ಹಾಕಿದ್ದೆ.... ಏನು! ಎಲ್ಲಿಗೆ ಬಂದೆ ನಾನು?.... ಶ್ರೇಷ್ಠ ಎಂಜಿನಿಯರ್ ಆಗಬೇಕಂತ ಮಾಡಿಕೊಂಡಾಂವ; ಒಡಕು ಪೈ ಹುಟ್ಟದ ವಕೀಲ ಆಗಿ ಕೂತೆ... ಆಗ ಎಷ್ಟು ವಿಚಾರ ಹಾಕಿದ್ದೆ.... 'ಬಿ.ಇ.ಆಗಬೇಕು. ಮುಂದ ಅಮೇರಿಕಾಕ್ಕ ಹೋಗಿ ಹೆಚ್ಚು ಕಲೀಬೇಕು.... ತಿರುಗಿ ಬಂದು ಧಾರವಾಡದ ಹತ್ತಿರ ಒಂದು ದೊಡ್ಡ ಮೋಟರ್ ಕಾರಖಾನೆ ಹಾಕಬೇಕು'....ಇನ್ನೂ ಏನೇನೋ.... ಎಷ್ಟು ಮಜಾ ಅನಿಸಿತ್ತಲ್ಲs ಆವಾಗ.... ಆಗಿನ ವಿಚಾರ ಏನು.... ಈಗಿನ ಪರಿಸ್ಥಿತಿ ಏನು.... ಒಂದಕ್ಕೊಂದು ಸಂಬಂಧನs ಇಲ್ಲ...."

"ಜೀವನದೊಳಗ ಏನರೆ ಸಾಧಿಸಬೇಕೂ ಅಂತ ಆಶಾ ಹಿಡಿದು, ಹಾಂಗs ವಿಚಾರ ಮಾಡಿಕೋತ ಮುಂದ ಹೋದಾಂವ ನಾನು.... ಆ ಹಾದೀನs ಬಿಟ್ಟು ಬ್ಯಾರೇ ದಾರಿ ಹಿಡಿದ ಮ್ಯಾಲೆ, ಮತ್ತೆ ಯಾಕ ಆ ಮನೀಸೇರುವ ಆಶಾ? ಹಾದಿ ಮೊದಲಿಗೇ ತಪ್ಪಿತು.... ಮುಂದೇನು?.... ಹೋಗಪಾ ಅಂತ ಹೇಳಿದ ದಾರಿಬಿಟ್ಟುಕೊಟ್ಟು ಕಂಟ್ಯಾಗ ಓಡೋಡಿಕೋತ ಹೋದದ್ದರ ಪರಿಣಾಮ ಇದು.... ಅಷ್ಟs.... ಹೆಚ್ಚಿನದೇನೂ ಇಲ್ಲ....''

ಮತ್ತೆ ಆ ಸ್ಥಳ ಬಿಟ್ಟು ಎದ್ದ. ಪಾವಟಿಗೆಗಳನ್ನು ಸಾವಕಾಶವಾಗಿ ಇಳಿಯತೊಡಗಿದ.... ಮುಳ್ಳುಕಂಟಿಗಳು ಬಿದ್ದಿದ್ದುವು ಅವನ ಮಾರ್ಗದಲ್ಲಿ.... ಹಾಗೆಯೇ ಹೊರಟ.... ಹರಕು ಚಪ್ಪಲಿಯೊಳಗಿಂದ ದಾಟಿ ಕಾಲಿಗೆ ಒಂದು ಮುಳ್ಳು ನೆಟ್ಟಿತು. ಅದನ್ನು ತೆಗೆಯಲು ಬಗ್ಗಿದ. ಮುಳ್ಳನ್ನು ತೆಗೆದೊಗೆದ. ಅದು ಕೂಡ ಬೇಗನೇ ಬರಲಿಲ್ಲ. ಹೊರಗೆ ತೆಗೆದು ಎರಡು ಮೂರು ಬಾರಿ ದುರು ದುರು ನೋಡಿದ. ಮತ್ತೆ ಇಳಿಯತೊಡಗಿದ.

"ಹೌದು....ವಕೀಲ ಆದವರು ಮುಳ್ಳಿನ್ಹಾಂಗನs ಇರಬೇಕಾಗತದ! .... ಅಷ್ಟ ಜಿಗಟಿರಬೇಕು.... ನನಗs? ಛೀ... ಏನೋ ಎಂತೋ.... ನನಗ ಅದರಾಗ ವಿಶ್ವಾಸ, ಆದರ ಇದ್ದರ ಏನರೇ ಮುಂದೆ ಬಂದೀನು! ಇಲ್ಲದಿದ್ದರ ಹ್ಯಾಂಗಾದೀತು?...."

"ಆವೊತ್ತು ಅಲ್ಲ.... ನಾ ಸನದು ತೆಗೆದುಕೊಂಡ ಮರುದಿನ.... ಅಂದs ನನಗ ಕೆಲಸ ಬರಲಿಕ್ಕೆ ಪ್ರಾರಂಭ ಆಯಿತು.... ಹೌದು.... ಆ ದಿನ ನನಗ ಎಷ್ಟು ಆನಂದ ಆಗಿತ್ತಲ್ಲs.... ಆದರ ಆ ಆನಂದ ಮುಂದ ಆರುತಿಂಗಳಿನೊಳಗs ಎಲ್ಲಿ ಹೋತೋ ಏನೋ...."

"ಅದನ್ನೆಲ್ಲ ನೆನಿಸಿಕೊಂಡರ ಕನ್ನಡದಾಗ ಯಾರೋ ಒಬ್ಬರು ಬರದಾರಲ್ಲ– ಯುಗಾದಿ ಅಂದರ ನೂರಾರು ದೈನಿಕ, ಸಾಪ್ತಾಹಿಕ, ಮಾಸಿಕ, ಸಾಂವತ್ಸರಿಕ ಪತ್ರಿಕೆಗಳ ಜನ್ಮಕಾಲ. ಮಾಸಿಕ ಅಂದರ ಒಂದು ತಿಂಗಳು ಅಸ್ತಿತ್ವ....' ಆವತ್ತಿನ ದಿನ—ಹಿಂದೊಮ್ಮೆ ಅದನ್ನು ಓದಿದಾಗ ನನಗ ಎಷ್ಟು ನಗೀಬಂದಿತ್ತಲ್ಲs ... ಆದರ

ನನ್ನ ವಕೀಲೀನೂ ಹಾಂಗs ಆತಲ್ಲ!.... ಮೊದಲನೇ ಪಕ್ಷಕಾರ ಬಂದು ಎಲ್ಲಾ ಕೆಲಸಾ ಮಾಡಿಸಿಕೊಂಡು, ಏನೂ ಕೊಡದೆ ಓಡಿ ಹೋದ.... ಮುಂದ ಎಷ್ಟು ಮಂದಿ ಬಂದವರು ? ಬಹಾಳಂದರ ಹತ್ತೋ ಹನ್ನೊಂದೋ....''

"ಪ್ರತಿವರ್ಷ ನೂರುಗಟ್ಟಲೆ ವಕೀಲರು ಹೊರಬೀಳತಾರ; ಇವರೆಲ್ಲಾ ಏನು ಮಾಡತಿದ್ದಾರವಾ ಅಂತೀನಿ ! "

ಜಲಪಾತದ ಸಪ್ಪಳಿನೊಡನೆ ಅವನ ಹೃದಯದ ಬಡಿತವೂ ಹೆಚ್ಚಾಗಿತ್ತು. ಹಿಂದಿದ್ದುದಕ್ಕಿಂತ ಹೆಚ್ಚಾಗಿತ್ತು.

ನೀರಿನ ಕೆಳಗೆ ಬಂದು ನಿಂತಿದ್ದ. ಮೋರೆಯನ್ನು ಮೇಲೆತ್ತಿ ಜಲಪಾತವನ್ನು ನೋಡಿದ.

"ಜೋಗದ ಜಲಪಾತ ಅಂದರ ಇದs ಏನು ? .... ಇದು ರಾಜಾನ ?.... ಹೌದು ಇರಬೇಕು. ನಮ್ಮ ಮಾಸ್ತರು ಹೇಳ-ತಿದ್ದರು ಚಿತ್ರ ತೋರಿಸಿ!....ರಾಜಾನs....ಹೆಸರಿಗೇನು ಬಂದದ್ದು ? ಹೌದು ಅದs ಅಂತೀನಿ ನನ್ನ ಹಂಗ ಡಬ್ಬಿರಾಜಾ ಆಗಲಿಕ್ಕೇನು ಬೇಕಾಗತದ ?.... ರಾಜಾ !.... ರಾಜಾ.... ಆತು.... ರಾಣಿ ಇತ್ಲಾಗಿಂದೇನೋ!.... ನನಗಂತೂ ರಾಣಿಯ ಸಂಬಂಧವೇ ಇಲ್ಲ.... ಇಲ್ಲಿಯ ವರೆಗೆ ಇಲ್ಲ,... ನನ್ನ ಮುಂದರೆ?.... ಹುಚ್ಚ ಅಲ್ಲs ನಾನು?....ಇನ್ನೆರಡು ಮಿನೀಟಿನಾಗ ನಾನು ಇಲ್ಲೆ ಇದ್ದರೇ ಇರತೀನೇನು ?.... ಹಾಂ.... ಏನು ?....

"ಅಬ್ಬರ.... ಬಾಣ.... ಹೌದು ಎಲ್ಲಾರದೂ ಅಬ್ಬರ ಕೊಳಿಗೆ ಸಿಗೋತನಕಾನs....ಎಲ್ಲಾರದೂ ಅಬ್ಬರ, ಸಣ್ಣ ಕೂಸಿನ ಹಂಗ ಏನೂ ಹೊಣೆಗಾರಿಕೆ ಇರದಿರೋವರಿಗನs!.... ನಡೀಲಿ....''

"ಹೌದು ನಾನು ಇಲ್ಲಿ ಯಾಕೆ ಬಂದೀನಿ....ಕೊಳಿಗಿಲ್ಲ ಅಂತs ? ಕೊಳಿಗಿಲ್ಲದಿದ್ದರ ಇಲ್ಲ್ಯಾಕ ಬರಬೇಕಾಗಿತ್ತು ?....ಛೀ ಅದನ್ನ ನೀಗಿಸಲಿಕ್ಕೆ ಅಂತ ನಾ ಇಲ್ಲಿ ಬಂದೀನಿ. ಇನ್ನು ಎರಡು ಮಿನಿಟಿನಾಗ ನಾನು ಎಲ್ಲಿ ಇರತೇನಿ ?....

"ಹೌದು....ಆ ನೀರಿನಾಗ, ನೀರ ಕುಡಕೋತ ಮುಳುಗಲಿಕ್ಕೆ ಹತ್ತಿರತೀನಿ ಅಲ್ಲ...ನೀರಾಗ ಅಂತೂ ಹಾರೋದು ಖರೇ.... ದುಡ್ಡಿಲ್ಲದೆ, ಹಿಂದಿನ ಆಶಾ ಪೂರ್ಣ ಮಾಡಿಕೊಳ್ಳಲಾರದೆ, ಆತ್ಮಹತ್ಯ ಮಾಡಿಕೊಳ್ಳಲಿಕ್ಕೆ ನಾನು ಇಲ್ಲಿಗೆ ಬಂದೀನಿ....ಇಲ್ಲಿರೇ ಯಾಕ ಬರಬೇಕಾಗಿತ್ತು ?....ಇಷ್ಟು ದೂರ?....ಅಲ್ಲೇ ಯಾವದಾದರೂ ಹೊಂಡದಾಗ ಹಾರಿದ್ರ....ಛೀ ನನ್ನ ಉದ್ದೇಶನs ಬ್ಯಾರೇ ಇತ್ತು....

"ಜಗತ್ತಿನಾಗ ಈ ಜಲಪಾತ ಅಂದರ ಒಂದು ನೋಡತಕ್ಕ ಸ್ಥಳ ಅಂತ....ಅದ್ದರಿಂದ ಸಾಯೋದಕ್ಕಿಂತ ಮುಂಚೆ ಮತ್ತೇನೂ ಕಾಣದಿದ್ದರೂ ಈ ಗುಡುಗುವ ನೀರನ್ನರೆ ನೋಡಿ ಹೋದರ ಛಲೋ!....ಮನಸ್ಸಿಗೊಂದು ಸಲ ಆನಂದs ಆಗ್ತದ! ಹಾಗಾ-ದರ ನನಗೀಗ ಆನಂದ ಆಗೇದೇನು?....ಆಗಿರಬೇಕು....ನನಗ ಹೊರಗ ಅನಿಸದಿದ್ದರೂ ಮನಸಿನಾಗ ಆಗಿರಲಿಕ್ಕೇ ಬೇಕು.... ನಿಸರ್ಗ ಅಂದರ ನನಗ ಜೀವ ಇದ್ದಾಂಗ. ನನ್ನ ಜೀವಕ್ಕ ಈ ನಿಸರ್ಗ ಆನಂದ ಕೊಡಲಾರದೆ ಹೋದೀತs ? ನಾನು ನಂಬಿದ ನಿಸರ್ಗದೊಳಗ, ನಾನು ಸಂತೋಷಿಸಿದ ನಿಸರ್ಗದೊಳಗsನ ನನ್ನ ದೇಹ....ನನ್ನ ಮೃತದೇಹ ಬೀಳಬೇಕs? ನನ್ನ ಪಾಪ ಜೀವ, ಈ ಉದಾರ ನಿಸರ್ಗದ ರಮ್ಯತೆಗೆ ಕುಂದು ತರಬೇಕs ?....ಹಾಂ.... ಹಾಂಗಾದರ, ನಾನು ಹಾರೋದು ನಿಸರ್ಗಕ್ಕೊಂದು ಅಪಮಾನ ಮಾಡಿದ್ದಾಂಗ....ಅಂದರ ನಾನು ಹಾರಿಕೊಳ್ಳಲೋ ಬೇಡೋ ?.... ಛೀ....ಎಂಥಾ ವಿಚಾರವಿದು ? "

ನೀರಿನಲ್ಲಿ ಹಾರಲು ಮನಸ್ಸು ಮಾಡಿ ಸಿದ್ಧನಾದ. ನೀರು ದಂಡೆಗೆ ಅಪ್ಪಳಿಸುವಂತೆ ಅವನ ಮನಸ್ಸೂ ಅನೇಕಾನೇಕ ಹೊಡೆತಗಳನ್ನು ತಿಂದು ಹಣ್ಣಾಗಿತ್ತು....ನೀರಿನ ದಂಡೆಯಲ್ಲಿ ಕುಳಿತು ಕಾಲು ತೊಳೆದುಕೊಂಡ ;.... ನೀರು ಕುಡಿಯುವಾಗ ಅವನ ಪ್ರತಿಬಿಂಬ ಅವನಿಗೆ ಅಣಕಿಸುವಂತೆ ಕಾಣುತ್ತ....ಎದ್ದು ನಿಂತ ಒಮ್ಮೆಲೇ :—

" ನಾನು ಖರೇ ಅಂದ್ರೂ ಹುಚ್ಚ ಆಗೀನೋ ಏನುಮಣ್ಣು ?... ತಲೀ ಏನು ಹರಿವೇದ....ಇನ್ನೇನು ಮಾಡೋದು ಅದನ್ನು ತೆಗೆದು•

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ
ವಿ. ಎಸ್ ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿ-ಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷ-ಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟ-ವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣ-ಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳು-ವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಜಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರ-ಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: **ವ್ಹಿ. ಎಸ್. ಕಾಪಸೇ ಮು. ಪೋ. ಮಿರಜ**

೫೫ ವರ್ಷಗಳಿಂದ ಅನುಭವಪಟ್ಟ

ಕಕೀರ್ ಮತ್ತು ಕಂಪನಿಯು

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕಕೀರ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಕೊಂಡು?....ಹೋಗ್ಲಿ....ಅಲ್ಲಾ! ನಾನು ಈಗ ಮಾಡಬೇಕು ಅಂತ ಮಾಡಿರೋದು ನನ್ನಂಥಾಂವಗ ಯೋಗ್ಯ ಏನು ?....

"ಹಂ....ಇನ್ನ ಮ್ಯಾಲಿ ನಾನು ಬಾಳಬೇಕು ಅಂತ ಅನ್ನೋ ಆಶಾ ಎಂದೋ ಹಾರಿ ಹೋಗೇದ....ಆದರ ಈಗರ ಏನಾತು?.... ಛೇ....ಮನಸ್ಸು ಎತ್ತೆತ್ತರೆ ಹೊರಟರ, ಈ ಜಗತ್ತಿನಾಗನ ಕೊಳೀ ಬೇಕಾದೀತು...ಬ್ಯಾಡ....ಬ್ಯಾಡ ಮಾರಾಯಾ !....

"ಅಲ್ಲಾ ನಾ ಹಿಂದಕ್ಕ ನನ್ನ ಜೀವನದ ಚಿತ್ರಾ ಚಿತ್ರಿಸಿಕೊಂಡಿದ್ದೆ .... ನನ್ನ ಪ್ರಾಂತದೊಳಗೊಂದು ದೊಡ್ಡದೊಂದು ಉದ್ಯೋಗ ಪ್ರಾರಂಭಿಸಬೇಕು..ಅಂತ ಅಂತಿದ್ದೆ....ಎಲ್ಲಾರಿಗೂ.... ನನ್ನ ನಾಡಿಗೊಂದು ಆಧಾರವಾಗಬೇಕು ಅಂತ ಅಂತಿದ್ದೆ .... ಹಿಂದಿನ ಕಾಲದ ಸಂಸ್ಕೃತಿ ಕಾಪಾಡಲಿಕ್ಕೆ ಹೋರಾಡಬೇಕು ಅಂತ ಮನಸ್ಸುಮಾಡಿದ್ದೆ. ಇದೇ ಮಾತು ಹಂಪೆಗೊಮ್ಮೆ ಹೋದಾಗ ಎಷ್ಟು ಸಿಚ್ಛಳವಾಗಿ ಅನಿಸಿತ್ತಲ್ಲ ?.... ಆ ಎಲ್ಲಾ ಗುಡಿ....ಹಾಳು ಗುಡಿ.... ಕಲ್ಲುದುಂಡಿ ಹೇಳಿದ್ಹಾಂಗ ಆಗಿತ್ತು : "ಏನಪಾ ನೀನೂ ಉಳಿದವರ ಹಾಂಗ ನನ್ನ ಮರೆತುಬಿಡಾಂವನೋ ? ಏನು ಏನಾರೆ ಮ್ಯಾಲೆ ಬಂದು ನನ್ನ ಕೀರ್ತಿಧ್ವಜ ಹಾರಿಸಬೇಕು ಅಂತ ಅಂತಿಯೋ ? ಏನು ?.... ಏನು ಉತ್ತರ ಕೊಡತೀದಿ ? " ಎಷ್ಟು ಕರ್ಕಶ ಇತ್ತಲ್ಲೇ.... ಆ ಮಾತು...

"ನಾನು ಈಗ ಏನು ಮಾಡಬೇಕು ಅಂತ ಮಾಡೀನಿ ? ನೀರಾಗ ಹಾರಿಕೊಂಡು ಪ್ರಾಣಬಿಡಬೇಕು ಅಂತ ಮಾಡೀನಿ! ಹೌದು, ಅದಕ್ಕನೇ ನಾ ಇಲ್ಲಿ ಬಂದಿರೋದು !... ಅದನ್ನೆಲ್ಲಾ ಮರೆತು ಬಿಡಬೇಕೇ ... ನಾನು ಉಳಿದವರ ಹಂಗ್ಯಾಸ ಅಳಬೇಕೇ ? ಛೇ. ಶಕ್ಯ ಇಲ್ಲ ... ಏನು ? ಹಂಗಾರ ಮ್ಯಾಲೆ—ಮತ್ತ ಆ ಜನರಿರೋ ಅಲ್ಲೆ— ಈ ತಗ್ಗಿನ ಮ್ಯಾಲೆ, ಹೋಗಬೇಕೊಂತ.... ಹಂ.... ಹೌದು.... ಹೋಗಬೇಕು..."

"ಎರಡು ಮಿನಿಟಿನ ಕೆಳಗ ಹಾರಿಕೋಬೇಕು....ಅಂತ ನಿಶ್ಚಯ ಮಾಡಿದ್ದೆ; ಈಗ.... ಈಗ...."

ಮೇಲೆ ಹೋಗಲು ಸಾಗಿದ ಹೆಜ್ಜೆಯನ್ನು ಎತ್ತದಾದ. ಅಷ್ಟು ಜಡವಾಯಿತು ಅವನ ಕಾಲು;....ಅಂತೆಯೇ ಅವನ ಮನಸ್ಸು.

"ಛೇ. ಶಕ್ಯ ಇಲ್ಲ....ನಾನು ಹಾರಿಕೊಳ್ಳಲೇ ಬೇಕು.... ಹಾರಿಕೊಳ್ಳಲೇ ಬೇಕು....ಮ್ಯಾಲೆ ಹೋಗೋದು ಶಕ್ಯ ಇಲ್ಲ ! " ಎಂದವನೇ ನೀರಿನೆಡೆಗೆ ಓಡತೊಡಗಿದ....ನೀರು ಬಂದಿತು.... ಒಮ್ಮೆಲೆ ನಿಂತ. ಸ್ವಲ್ಪ ಕಾಲ ಹಾಗೆಯೇ ನಿಂತ. ಕೊನೆಗೊಮ್ಮೆ ನೀರಿನ ತುದಿಗಿದ್ದ ಕಲ್ಲಿನ ಮೇಲೆ ಕುಳಿತ.

ಕುಳಿತುಕೊಂಡ ಕಲ್ಲು ಅಲುಗಾಡಿತು....ಅದರ ಮೇಲೆ ಕುಳಿತ ಅವನೂ ಅಲುಗಾಡಿದ....ಕಲ್ಲು ಉರುಳಿತು. ಏನೂ ತಿಳಿಯದೆ ಕಣ್ಣು ಮುಚ್ಚಿದ. ಕಣ್ಣು ತೆರೆಯುವುದರೊಳಗಾಗಿ ಕಾಲುಗಳು ನೀರಿನಲ್ಲಿ ಬಿದ್ದುದುದನ್ನು ಕಂಡ. ಅವನಿಗೆ ಸಾವಿನ ಅರಿವಾಯಿತು.... ಅವನಿಗೊಂದು ವಿಚಿತ್ರ ಸಂಶಯ—ವಿಶ್ವಾಸವುಂಟಾಯಿತು.

"ಓ....ಓ !....ನನ್ನ ಜೀವನ ಈ ನೀರಿನ ಪಾಲಾಗಬೇಕೇನು?.... ಜಗತ್ತಿಗೆ ಅಂಜಿ ನಾನು ಈ ನೀರಿನೊಳಗ ಬೀಳಬೇಕೇ? ಬ್ಯಾಡಾ.... ಎಲ್ಲಾರೂ ಹೀಂಗ ಹಾರಿಕೊಳ್ಳಲಿಕ್ಕೆ ಹತ್ತಿದರ, ಜಗತ್ತಿನಲ್ಲಿ ಇರುವವರಾರು ? ಹೌದು....ಜಗತ್ತಿಗೆ ಹುಚ್ಚು ಹಿಡದೇದ....ಜಡ್ಡು ಆಗೇದ....ಇದನ್ನೆಲ್ಲ ಇಲ್ಲದ್ಹಾಂಗ ಸರಿ ಮಾಡವರ್‍ಯಾರು ? ಶಕ್ತಿ ಇದ್ದವರೋ ಇಲ್ಲದವರೋ ?....ಹೌದು ನಾನು ಈ ಹುಚ್ಚು ಬಿಡಿಸಬೇಕು.... ನಾನು ಜಗತ್ತಿಗೆ ಔಷಧ ಕೊಡಬೇಕು ! ....ನನ್ನಿಂದ ಇದು ಆದೀತೇನು ? ಆಗದೇ ಏನು....ನನ್ನಿಂದ ಏನು ಆಗುವುದಿಲ್ಲ ? ....ಯಾಕ ಆಗುವದಿಲ್ಲ ? ....ಹೌದು ಸಾರೋದು ಬ್ಯಾಡಾ... ಜಗತ್ತು ಅಳತದೇ ಅಂತ ನಾವೂ ಅಳಬೇಕೇ ?....ಎಲ್ಲಾರೂ ಅತಗೋತ ಕೂತರ, ನಮ್ಮ ನಾಡಿಗೆ ಹಾದೀ ತೋರಿಸಿ ಮುಂದ ಒಯ್ಯುವರಾರು? ಅಳೋದು ಬ್ಯಾಡಾ.. ಕಣ್ಣೀರಿಡೋದು ಬ್ಯಾಡಾ....ಈ ತಗ್ಗಿನಾಗಿಂದ....ಈ ಅಳುಬುರುಕತನದ ತಗ್ಗಿನಾಗಿಂದ.... ಈ ಅಜ್ಞಾನದಿಂದ ಏಳಲಿಕ್ಕೇಬೇಕು. ನಾನು ಏಳಬೇಕು; ಮೇಲೆ ಹೋಗಿ ಬಾಳಬೇಕು !.... ಅಳೋ ಅವರಿಗೆ ಬಾಳಲಿಕ್ಕೆ ಹಚ್ಚಬೇಕು ! ....ಹಂ ಕಾಮನ ಬಿಲ್ಲು ಕಾಣಸ್ತದಲ್ಲೇ... ಹೌದು ಕಾಮನ ಬಿಲ್ಲು....ಕಾಮನ ಬಿಲ್ಲಿನ್ಹಾಂಗ ಆಗಬೇಕು. ನಮ್ಮ ಜೀವನ...ಕಾಮನ ಬಿಲ್ಲಿನ್ಹಾಂಗ....ಎಲ್ಲಾ ಬಣ್ಣ ಕೂಡಿ........"

ಜಯಂತಿ

ಮಸಣದ ಹೂಗಳು

ಶ್ರೀ ಯರ್ಮುಂಜ ರಾಮಚಂದ್ರ, ಪುತ್ತೂರ

★

ಮುಗುಳು ಮುಗುಳು ತುಟಿಯ ತೆರೆದು
ಕಿರುನಗುವನು ಸೂಸಿ ನಲಿದು
ನಸು ಬೆಳಕಿನೊಳಕ್ತ್ ಇತ್ತ
ತಲೆಯನೊಲೆವ ಹೂಗಳೆ!

“ ಬಂತು, ಬಂತು ಅಮೃತಕುಂಭ ”
ಎಂದು ದೂರದಾ ದಿಗಂತ-
ದರುಣ ವರ್ಣ ಕಂಡು ಹಿಗ್ಗಿ
ಕುಣಿಯುತಿರುವ ಎಳೆಯರೇ!

ಏನ ಕೇಳುತಿರುವಿರಿ?
ಚರಣದೆಡೆಗೆ ಬಾಗಿ, ತುಂಬುದಿಟ್ಟಿಯಿಂದ ಮೇಲೆ ನೋಡಿ,
ತನು ಬಗ್ಗಿಸಿ, ಮನ ಹಿಗ್ಗಿಸಿ ಏನ ಕೇಳುತಿರುವಿರೇ?

ಏನ ಬಯಸುತಿರುವಿರಿ?
ನಿಮ್ಮ ಸಣ್ಣ ಜನ್ಮದುದಯಕಣ್ಣನ ನುಡಿ ಹರಕೆಯೇ?
ಎದೆಯ ನುಡಿಗಳಾಗಿ ಬಂದ ಈ ವಚನದೆ ನಡೆವಿರೇ?

ಅಂದರಿದೋ ಕೇಳಿರಿ:
ಎಂದೆಂದೂ ಉರಿಯುತಿರುವ ಹೃದಯದ ಈ ನುಡಿಗಳೆಲ್ಲ
ಕಪ್ಪು, ಕೆಂಪು ಹೊಗೆಯಂತೆಯೆ ನಿಮ್ಮ ದಿಕ್ಕುಗೆಡಿಸಬಹುದು!

ಆದರೂ,
ತುಂಬುಮನವು ನುಡಿದ ಮಾತು ಎಂದೆಂದಿಗು ಒಳಿತಿಗಾಗಿ,
ಎಂಬುದನ್ನು ಎದೆಯಲಿಟ್ಟುಕೊಂಡೆ ನುಡಿಯನಾಲಿಸಿ!

“ ಅಮೃತಕುಂಭವಲ್ಲವದು,
ಅಗ್ನಿಕುಂಡವು!
ನಿಮ್ಮೆದೆಗಳ ಸುಡಲು ಬರುವ
ವಿಷದ ಪಿಂಡವು! ”

೨

ನೀವೆಳಸಿದ ತೆರದಿ ಎಲ್ಲ ಅಲ್ಲ ಹುಲ್ಲ ಹಾಸಿಗೆ,
ನೀನು ಕೂಡ, ನಿಲ್ಲಲಾರೆ, ಓ, ಕೆಂಡ ಸಂಪಿಗೆ!
ಈ ಲೋಕದ ಕರ್ಕಶತೆಯ ಬಿರುಗಾಳಿಯ ಘೋಷಕೆ,
ಕ್ರೂರತನವೆ ರೂಪುಗೊಂಡು ಬರುವ ಕಾಲಪಾಶಕೆ,
ಮಾನವತೆಯು ಕೊಚ್ಚಿಮೊರೆವ ಭೀಕರತೆಯ ಮೊರೆತಕೆ,
ಜೀವ ಜೀವ ಬೆಂದು ಹೋಗುವಂಥ ಅಗ್ನಿಪಾತಕೆ,
ಮೃದು, ಕೋಮಲ, ಸೌಂದರ್ಯದ ಮುಗ್ಧತನವನೆಣಿಸದೆ
ಎಂದೆಂದೂ ತನ್ನ ಕಾಲನೂರುತಿರುವ ಕಾಲಕೆ—

ನರತೆಯಮೃತವನ್ನು ತರಲು
ಹೊರಟ ಮಹಾ ಪವಿತ್ರರು,
ನಿಸ್ಸಹಾಯರೆದೆಯಳಲಿಗೆ
‘ಓ’ ಎನ್ನುತ ಬಂದವರು,
ಶಾಂತಿ, ಸತ್ಯ, ಸಖ್ಯಗಳನು
ಹಾರಯಿಸುತ ನಿಂದವರು,
ರಕ್ತಮಡುವಿಗೆದುರು ನಿಂತು
ಹೋರಾಡುವೆವೆಂದವರು....

ಎಲ್ಲರೆಲ್ಲರೆಲ್ಲರೂ,
ಕೊನೆಗೆ,
ಮಾನವತೆಯ ದೇವರೂ,
ಎಲ್ಲಿರುವರು? ಎಲ್ಲಿರುವರು? ಬಲ್ಲಿರೇನು ಮುಗ್ಧರೇ! ?
ಸಣ್ಣ ಪುಟ್ಟ ಬಂಧುಗಳೆ,
ಯಾವ ನಂದನದಲಿ ನಿಮ್ಮ ಮನವು ವಿಹರಿಸುತ್ತಿದೆ?
ಒಮ್ಮೆ ಎಲ್ಲ ಬೀಳಲಿದೆ, ಪಾತಾಳವ ಕಾಣಲಿದೆ,
ಸ್ವರ್ಗದೆಡೆಗೆ ಹಾರುತಿರುವ ನಿಮ್ಮ ಕಣ್ಣ ಕಾಂತಿಯು!
ಒಮ್ಮೆ ಎಲ್ಲ ಕದಡಲಿದೆ, ಎಲ್ಲೆಲ್ಲೋ ಸಿಡಿಯಲಿದೆ,
ಮಂಜುತೊಟ್ಟಿಲೊಳಗೊರಗಿದ ನಿಷ್ಕಲ್ಮಷ ಶಾಂತಿಯು!
ಗಾಳಿಯೊಡನೆ ಗಾಳಿಯಾಗಿ, ಬಾನು ತುಂಬ ಅಲೆವ ನಿಮ್ಮ
ತುಂಬುಹೃದಯ ಮುದುಡಿ ಮುದುಡಿ
ಬಾಡಿಹೋಗಿರುವುದು.

ಅಮೃತವೆಂದು ಹಿಗ್ಗುತಿರುವ ನಿಮ್ಮ ಮನಸು ವಿಷನದಿಯಲಿ
ಮುಳುಗಿ ಮುಳುಗಿ ನಿಸ್ಸಹಾಯ-
ವಾಗಿ ಕೂಗಲಿರುವುದು.
ಪುಟ್ಟ ಪುಟ್ಟ ಹಸುಳೆಗಳಿರ,
ನೋಡಿ, ನೋಡಿ, ಅದೋ ಆ ದಿಗಂತದಲ್ಲಿ ನೆತ್ತರು!
ಹಾಳಾಗುತ, ಹೋಳಾಗುತ,

ದೆಸೆದೆಸೆಯಲಿ ಸಿಡಿದು ಹೋದ,
ಮಾನವತೆಯ ಹೃದಯದಿಂದ ಚಿಮ್ಮಿ ನೆಗೆದ ನೆತ್ತರು !
ಯಾವ ಸೊಗವ ಹಾರಯಿಸುತ
ಕಾದು ತೂಗಿ ಬಾಗಿರುವಿರಿ ?
ಯಾವ ಅಮೃತಕ್ಕಾಗಿ ಮೂಡು-
ದೆಸೆಗೆ ದಿಟ್ಟಿ ಹರಿಸಿರುವಿರಿ ?
" ಅಮೃತಕುಂಭವಲ್ಲವದು, ಅಗ್ನಿಕುಂಡವು !
ನಿಮ್ಮೆದೆಯನು ಸುಡಲು ಬರುವ ವಿಷದ ಪಿಂಡವು ! "

೩

ಏನೆ ಪುಟ್ಟ ಮಲ್ಲಿಗೆ,
ಏಕೆ ಎಂತು ಈ ಕಂಬನಿ ನಿನ್ನ ಮೃದುಕಪೋಲಕೆ ?
ಯಾರು ಉಣ್ಣಲಿಲ್ಲವೆಂದೆ ನಿಮ್ಮ ಗಂಧದೌತಣವ ?
ಯಾರಿಗೂ ಅರ್ಪಿಸಿಲ್ಲವೆಂದೆ ನಿಮ್ಮ ಹರಣವ ?
ಬೇಡ ಬೇಡ ಬಂಧುಗಳಿರ,
ಮೃದು ಕೋಮಲ ಹೃದಯಗಳಿರ,
ಬಿಟ್ಟು ಬಿಡಿರಿ, ಬಿಡಿರಿ, ಆ—ರಸಕಾಲದ ಕಲ್ಪನೆಯ !
ನಿಮ್ಮೊಂದಿಗೆ ಸರಸವಾಡಿ ನಕ್ಕು ನಲಿವ ಜೀವಗಳು
ಇಂದಿಲ್ಲವು ಸತ್ಯವು !
ಇಂದಿಲ್ಲವು ಎಳೆಯರೆಂದು ಕೈಯ ನೀಡಿ ಅಪ್ಪಿಕೊಳುವ
ಸ್ನೇಹಪೂರ್ಣ ಹೃದಯವು !
ಎಲ್ಲೆಲ್ಲೂ ಒಂದೆ ರೀತಿ, ಒಂದೆ ಕಥೆ, ಒಂದೆ ಘೋಷ,
ಶಕ್ತಿಗೇ ಮಹತ್ತ್ವವು !
ನಿಮ್ಮ ಗಂಧದೌತಣವನು ಉಂಡ ನೆನಪಿಗಾಗಿ ನಿಮ್ಮ
ಕತ್ತು ಮುರಿವ ತತ್ತ್ವವು !
ಇಂಥ ಕಾಲ ಪುರುಷನಿಗೆ,
ರಾಕ್ಷಸತೆಯ ಈ ಬೆಂಕಿಗೆ,
ತುಂಬುಮನದ ತಿಳಿಹೃದಯದ ನಿಮ್ಮೆಲ್ಲರ ಅರ್ಪಣೆಯನೆ,
ಎಂತು ಎಂತು ಸಹಿಸಲಿ ?
ವಿಷಸಮುದ್ರದೊಳು ಕರಗುವ ಈ ಅಮೃತದ
ಬಿಂದುಗಳನು
ಅಗ್ನಿಕುಂಡದೊಳು ಬೀಳುವ ಎಳಹಸುರಿನ
ಚಿಗುರುಗಳನು
ಎಂತು ಎಂತು ನೋಡಲಿ ?

೪

ಬನ್ನಿ, ಬನ್ನಿ, ನೀಲ ಬಾನಿನಾ ವಿಶಾಲ ಹೃದಯರೇ,
ಬನ್ನಿ, ಹರಿವ ತಿಳಿನೀರಿನ ತೊರೆಯೋಲಿಹ ಸ್ವತಂತ್ರರೇ,
ತಿಳಿಬೆಳಕಿನೊಳಾಡುತಿರುವ ಮಂಜಿನಂಥ ಮುಗ್ಧರೇ,
ಬನ್ನಿ, ಬನ್ನಿ, ಮಹಾ ಪವಿತ್ರರೇ, ನಿಷ್ಕಳಂಕರೇ,
ನಿಮ್ಮ ಜೀವಗಳನು ನುಂಗಿ, ಇನ್ನೂ ಪ್ರಜ್ವಲಿಸದಿರಲಿ,
ನರತೆ ಬೆಂದ ಬೆಂಕಿಯು !
ತಾಯ ನೆಲದ ವಿಶಾಲತೆಯೊಳೊಂದು ಮಣ್ಣಕಣವಾದರೆ
ನಿಮ್ಮಾತ್ಮಕೆ ಶಾಂತಿಯು !
ಬಳಲುತಿರುವ ಶಿಶುಹೃದಯನು
ತಾಯಮಡಿಲೊಳೊರಗುವಂತೆ,
ಮಹಾ ಸಾಗರದಲಿ ಒಂದು ದನಿಯು ಲೀನವಾಗುವಂತೆ,
ಮಾನವತೆಯ ಘೋಷಣೆಯಲಿ ನಿಮ್ಮ ಸ್ವರವು ಸೇರಲಿ !
ಕೋಟಿ ಕೋಟಿ ಅಬಲರೊಡನೆ ನಾವೂ ಒಬ್ಬರೆನ್ನಿರಿ !
ಅಹಾ ! ಎಂಥ ರಮ್ಯವಿದು—ತಾಯಿನೆಲದ ಗಂಧವು !
ಯಾವ ದೇವ-ದೇವನೆದೆಗೆ ಕಡಮೆ ಇದರ ಅಂದವು ?
ಎಂಥ ಪುಣ್ಯವಂತೆಯಮ್ಮ ನೀನು ಭೂಮಿತಾಯಿಯೆ !
ಇಂಥ ಪುಟ್ಟ ಮೃದು ಹೃದಯರ ಸೊಗಸೆ ಜನ್ಮದಾಯಿಯೆ
ಬನ್ನಿ, ಬನ್ನಿ ಮುಗ್ಧರೇ,
ಅದೋ, ತಾಯಿ ಕರೆಯುತಿಹಳು ತನ್ನ ಮಡಿಲೊಳಡಗಿಸಿ—
ಕೊಲಲು ಬರುವ ದುಷ್ಟಾತ್ಮರ ಪೀಡೆಯಿಂದ ರಕ್ಷಿಸೆ !
ಏಕೆ ತಡವು ? ತ್ವರೆ ಮಾಡಿರಿ, ಬನ್ನಿರಿ, ಮಣ್ಣಾಗಲಿ !
ಮಣ್ಣಾಗಲಿ, ಮಣ್ಣು ಕೂಡ ಹೊನ್ನಿನಂತೆ ಬೆಳಗಲಿ !
ಬನ್ನಿ, ಬನ್ನಿ, ಆಗೋ ಅಲ್ಲಿ ಅಗ್ನಿಮೇಘ ಏರುತಿದೆ,
ಎಲ್ಲೆಲ್ಲೂ ಒಂದೆ ಕ್ಷಣ—ಅಗ್ನಿಧಾರೆ ಸುರಿಯಲಿದೆ,
ಬನ್ನಿ, ಬನ್ನಿ, ಬನ್ನಿರಿ !
ಅದೋ, ಅಲ್ಲಿ ಮೂಡಲಲ್ಲಿ, ರಕ್ತನದಿಯು
ಹರಿಯುತಿದೆ,
ಮಾನವತೆಯ ಕೊಚ್ಚಿ, ಕೊಚ್ಚಿ ಮುಂದೆ ಮುಂದೆ
ಹರಿಯಲಿದೆ—
ಅಮೃತಕುಂಭವಲ್ಲವದು, ಅಗ್ನಿಕುಂಡವು !
ನಿಮ್ಮೆದೆಯನು ಸುಡಲು ಬರುವ ವಿಷದ ಪಿಂಡವು ! "

ಕನ್ನಡ ಸಣ್ಣಕತೆಯಲ್ಲಿ ವಾಸ್ತವತೆ

(ವಿಮರ್ಶಾತ್ಮಕ ಭಾಷಣ) *

ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ಎಂ. ಎ. ಬೆಂಗಳೂರು

★

ಸಾಹಿತ್ಯದಲ್ಲಿ ವಾಸ್ತವತೆ ಬೇಕೆಂದು ಹೇಳುವ ಸೌಂದರ್ಯದೃಷ್ಟಿಯವರೂ, ವಾಸ್ತವತೆ ಬೇಡವೆಂದು ಹೇಳುವ ಸೌಂದರ್ಯದೃಷ್ಟಿಯವರೂ ಪಡುವ ಅಭಿಪ್ರಾಯ ಹೊರನೋಟಕ್ಕೆ ಎರಡಾಗಿ ಕಂಡರೂ, ರಸದ ಒಳನೋಟಕ್ಕೆ ಒಂದೆ ಬಗೆಯವಾಗಿ ಕಾಣುವುವು.

★

'ವಾಸ್ತವತೆ' ಎಂಬ ಶಬ್ದಭಾವ, ನಮಗೆ ಇಂಗ್ಲೀಷಿನ ಸಾಹಿತ್ಯ ವಿಮರ್ಶೆಯಿಂದ ಬಂದಿರುವ ಹಲವು ಭಾವಗಳಲ್ಲಿ ಒಂದು. ಆಂಗ್ಲ ವಿಮರ್ಶಕರು ಇದನ್ನು Realism ಎಂದು ಕರೆಯುತ್ತಾರೆ. Realism ಎಂದರೆ ನಿಜದಲ್ಲಿ ಏನಿದೆ—ಅದನ್ನು ಹೇಳುವ ಪದ್ಧತಿ.

ನಿಜದಲ್ಲಿ ಇರುವುದು ಏನು? ಇದನ್ನು ಬಲ್ಲರು ಯಾರು? ನಾವು ಯಾರೇ ಆಗಲಿ ಬಲ್ಲಬಹುದಾದದ್ದು ಏನು ಇದೆ....ಅದಲ್ಲ, ಅದ್ದು ನಮ್ಮ ಮನಸ್ಸಿನಲ್ಲಿ ಯಾವ ಚಿತ್ರವನ್ನು ಮೂಡಿಸುತ್ತದೆ, ಅದು. ಈ ಮಾತು ತತ್ತ್ವಶಾಸ್ತ್ರದ್ದು. ಸಾಹಿತ್ಯದಷ್ಟೆ ನಿಜವಾಗಿ ಎಲ್ಲ ಕಲೆಗೂ ಅನ್ವಯಿಸುತ್ತದೆ.

ನೋಡುವವನ ದೃಷ್ಟಿ ಬೇರೆ ಆದಂತೆ, ನೋಡಿದ ಸಂಗತಿ ಬೇರೆ-ಯಾಗಿ ಕಾಣುತ್ತದೆ. ಕವಿಗೆ ಕಾಣುವ ಸಂಗತಿ ಕವಿ ಅಲ್ಲದವನಿಗೆ ಕಾಣುವುದಿಲ್ಲ. ಎಲ್ಲರಿಗೂ ಕಾಣುವಷ್ಟನ್ನು ಮಾತ್ರ ವರ್ಣಿಸ-ಲಾರನು; ಆದ್ದರಿಂದ ಕವಿಯು ತಾನು ಕಂಡೆನೆಂದು ಹೇಳುವ ಸಂಗತಿ ಕವಿ ಅಲ್ಲದವನಿಗೆ ಅವಾಸ್ತವ—ಎಂದು ತೋರುವ ಸಂಭವವಿದೆ.

ನಮ್ಮ ಸಣ್ಣಕತೆಯಲ್ಲಿ ಕಾಣುವ ವಾಸ್ತವತೆಯನ್ನು ಪರಿಶೀಲಿ-ಸುವಲ್ಲಿ, ನಾವು ಈ ಮೂಲತತ್ತ್ವವನ್ನು ಮರೆಯದೆ ಮುಂದಿರಿಸಿ-ಕೊಂಡಿರಬೇಕು. ಜೊತೆಗೆ ವಾಸ್ತವತೆ ಎಂಬ ಶಬ್ದದ ವ್ಯಾಪ್ತಿ-ಯನ್ನು ನಿಷ್ಕರ್ಷಿಸಿಕೊಳ್ಳಬೇಕು. "ಸಣ್ಣಕತೆಗಳಲ್ಲಿ ವಾಸ್ತವಿ-ಕತೆ" ಎಂಬ ವಿಷಯವನ್ನು ಕುರಿತೇ ಮಾತನಾಡುತ್ತ ನಮ್ಮ ವಿಮರ್ಶಕರೊಬ್ಬರು. "ವಾಸ್ತವವಾದದ್ದನ್ನು ವಿವರ-ವಿವರವಾಗಿ ಪಟ್ಟಿಮಾಡಿದರೆ ಸಾಹಿತ್ಯ ಆಗುವುದಿಲ್ಲ; ಕೆಲವು ವಿವರಗಳನ್ನು ಬಿಡಬೇಕು, ಕೆಲವನ್ನು ಒತ್ತಿ ತೋರಬೇಕು. ಕಲೆ ಇರುವುದು ಇದರಲ್ಲಿ. ಇರುವುದನ್ನೆಲ್ಲ ಇರುವಂತೆ ಹೇಳುವುದರಲ್ಲಿಲ್ಲ" ಎಂದರು. ಅದೇ ಸಂದರ್ಭದಲ್ಲಿ ಮತ್ತೊಬ್ಬ ಪ್ರಾಜ್ಞರು "ವಾಸ್ತವವನ್ನು ಬಿಟ್ಟ ಸಾಹಿತ್ಯ ಕಾಗದದ ಹೂವಿನಂತೆ ತೋರಿಕೆಗೆ ಸಾಹಿತ್ಯ, ಗುಣದಿಂದ ಸಾಹಿತ್ಯ ಅಲ್ಲ," ಎಂದರು. ಎರಡೂ ಸರಿಯಾದ ಅಭಿಪ್ರಾಯ. ಅವರ ಇವರ ವಾಸ್ತವಿಕತೆ ಅರ್ಥದಲ್ಲಿ ಬೇರೆ. ಮೊದಲ ವಾಸ್ತವಿಕತೆಯ ಪ್ರತಿನಾಯಕ ಕಲೆ, ಎರಡನೆಯದರ ಪ್ರತಿನಾಯಕ ಅಬದ್ಧ. ಮೊದಲರ್ಥದಲ್ಲಿ ವಾಸ್ತವಿಕತೆ ಒಂದು ದೋಷ; ಎರಡನೇಯದರಲ್ಲಿ ಅದು ಒಂದು ಗುಣ. ಈ ಪ್ರವಚನ-ದಲ್ಲಿ ಈ ಶಬ್ದವನ್ನು 'ಒಂದು ಗುಣ' ಎಂಬ ದೃಷ್ಟಿಯ ಅರ್ಥದಲ್ಲಿ ಬಳಸಿದೆ.

ಗುಣವೆಂದು ಕಲೆ ವರಿಸುವ ವಾಸ್ತವತೆಯನ್ನು ಕುರಿತೂ ಅದು ಒಂದು ಗುಣ ಹೌದೇ ಎಂಬ ಪ್ರಶ್ನೆ ಬರುವುದು ಸಾಧ್ಯ. ನನ್ನ "ಕೆಲವು ಸಣ್ಣ ಕತೆಗಳು" ಪ್ರಕಟವಾದ ಹೊಸತರಲ್ಲಿ, ನನ್ನ ಗೆಳೆಯರೊಬ್ಬರ ಮನೆಯು— ತಕ್ಕಷ್ಟು ಬಲ್ಲ— ಒಬ್ಬ ತಾಯಿ "ರಂಗನ ಮದುವೆ" ಮುಂತಾದ ಕಥೆಗಳನ್ನು ಓದಿ "ಇದು ಎಲ್ಲರೂ ಬಲ್ಲ ವಿಷಯ, ಇದನ್ನು ಓದಿ ಪ್ರಯೋಜನವೇನು?" ಎಂದು ಕೇಳಿದರು.

ಈ ಪ್ರಶ್ನೆಗೆ ಕೊಡುವ ಉತ್ತರ ಎಲ್ಲ ಕಲೆಯನ್ನೂ ಕುರಿತದ್ದು. ಸಾಹಿತ್ಯ ನಮಗೆ ತಿಳಿಯದ ವಿಷಯವನ್ನು ಕುರಿತು ತಿಳಿವನ್ನು ಕೊಡಲು ಹೊರಡುವುದಿಲ್ಲ. ಅದರ ವಿಷಯವನ್ನು ತಿಳಿಯದವರಿಗೆ ಅದು ತಿಳಿವನ್ನು ಕೊಡಬಹುದು; ಆದರೆ ಅದು ಆ ವಿಷಯವನ್ನು ತಿಳಿಯದಿದ್ದವರಿಗೂ ತಿಳಿದಿದ್ದವರಿಗೂ ಕೊಡಬಯಸುವುದು ಸಂತೋಷವನ್ನು.

"ನನಗೆ ತಿಳಿದಿರುವ ಸಂಗತಿಯನ್ನು ನನಗೆ ಹೇಳಿ ನೀವು ಸಂತೋಷವನ್ನು ಕೊಡಬಲ್ಲಿರಾ?" ಎಂದು ಇದರ ಮೇಲೂ ಪ್ರಶ್ನೆ ಬರುವುದು ಸಾಧ್ಯ. ಅದಕ್ಕೆ ಉತ್ತರ ಇದೆ. ಆದರೆ ಅದು ಇಲ್ಲಿ ಅಪ್ರಕೃತ. ಇಲ್ಲಿ ಪ್ರಕೃತವಾದ ಮಾತು ಇಷ್ಟೆ: ಓದಿದವರು

* ಧಾರವಾಡದ ಬಾನುಲಿಕಟ್ಟೆಯಿಂದ ತಾ. ೨೫-೫-೫೦ರಂದು ಸಂಜೆ ಬಿತ್ತರಗೊಂಡ ಭಾಷಣವಿದು.

—ಸಂ. ಜ.

"ಎಲ, ಎಲ, ನೋಡಿದೆಯಾ ಸಂಗತಿಯನ್ನು ಎಷ್ಟು ನಿಜವಾಗಿ ಹೇಳಿದೆ!" ಎಂದು ಹೊಗಳಿದರೂ "ಅಯ್ಯೋ ಇದೇತರ ಕತೆ? ಇರುವುದನ್ನು ಇರುವಂತೆ ಹೇಳಿದ್ದಾರೆ," ಎಂದು ತೆಗಳಿದರೂ ಕತೆ ವಾಸ್ತವಿಕತೆಯನ್ನು ಸಾಧಿಸಿದೆ.

ಇರುವುದನ್ನು ಇರುವಂತೆ ಹೇಳಿದೆ—ಎಂದು ಓದುವವರು ಹೇಳುವಾಗ, ಕತೆ ಪ್ರತಿಪಾದಿಸುವ ವಸ್ತು ಅವರಿಗೆ ತಿಳಿದ ಸಂಗತಿಯೆನ್ನುವುದು ಸ್ಪಷ್ಟ. ಕೆಲವು ವೇಳೆ ಸಂಗತಿ ಓದುವವರಿಗೇಕೆ ಬರೆಯುವವನಿಗೂ ಕಲ್ಪನೆಯ ರಾಜ್ಯದ ಸಂಗತಿಯಾಗಿರಬಹುದು. ಅಂಥ ವೇಳೆ ಕತೆಗಾರನೇ ಸಂಗತಿಯನ್ನು ಊಹೆಯ ಸಹಾಯದಿಂದ ಕಟ್ಟುತ್ತಿರುತ್ತಾನೆ. ಆದರೆ ವಿವರಗಳನ್ನು ಆದಷ್ಟು ಚೆನ್ನಾಗಿ ತಿಳಿದು ಕಥನವನ್ನು ನಡೆಸಿದರೆ, ಸಂಗತಿ ತಮಗೆ ತಿಳಿಯದ್ದಾದರೂ ಸಂಭವನೀಯವಹುದು—ಎನ್ನುವ ಭಾವನೆಯನ್ನು ಮೂಡಿಸುತ್ತದೆ.

ಇನ್ನೊಂದು ಸಂದರ್ಭದಲ್ಲಿ ಸಂಗತಿ ಹೊರಗಣ ಪ್ರಪಂಚದಲ್ಲಿ ಸಂಭವನೀಯ ಅಲ್ಲದಿದ್ದರೂ, ಕಥೆ ಉತ್ಪಾದಿಸುವ ಪ್ರಪಂಚದಲ್ಲಿ ಅದರ ವಾಸ್ತವತೆಯನ್ನು ನಾನು ಒಪ್ಪುತ್ತೇನೆ. ಕಳೆದ ವರ್ಷದ ಮಳೆಯ ದಿನದಲ್ಲಿ ಒಂದು ದಿನ, ಶ್ರೀರಂಗಪಟ್ಟಣದ ಬಳಿ ಒಂದು ವಾನರ, ತುಂಬಿದ ಕಾವೇರಿಯನ್ನು ಈ ಕಡೆಯಿಂದ ಆ ಕಡೆಗೆ ಒಂದು ಕುಪ್ಪಳಿಕೆಯಿಂದ ಹಾರಿ ದಾಟಿತೆಂದರೆ, ಜನ ಹಾಗೆಂದವನನ್ನು ಸುಳ್ಳು ಎನ್ನುತ್ತಾರೆ. ಆದರೆ ಮನುಷ್ಯ ರಾಮಾಯಣದ ಕಥೆಯನ್ನು ವಿವರಿಸಿ, ಹನುಮಂತ ಲಂಕೆಗೆ ಹೋದಂತೆ ಬೇರೊಂದು ದ್ವೀಪಕ್ಕೆ ಹೋಗಬೇಕಾದಾಗ ಮತ್ತೆ ಸಮುದ್ರವನ್ನು ದಾಟಿದನೆಂದರೆ, ಜನರು? 'ಒಳ್ಳೆಯದು ಮುಂದೆ ಏನಾಯಿತು' ಎನ್ನುತ್ತಾರೆ. ಸಂಗತಿಯು ವಾಸ್ತವತೆ ಕಥೆಯ ಭೂಮಿಕೆಯನ್ನು ಅವಲಂಬಿಸಿರುತ್ತದೆ.

ಕನ್ನಡದ ಸಣ್ಣಕತೆ ಮೊದಲಿನಿಂದಲೂ ವಾಸ್ತವತೆಯನ್ನು ಗುರಿಯಾಗಿ ಇಟ್ಟುಕೊಂಡೇ ಬೆಳೆದುಬಂದಿದೆ. ನಾವು ಈಗ ಸಣ್ಣಕತೆ ಎಂದು ಕರೆಯುವ ಹೊಸರೀತಿಯ ಕತೆಗಳನ್ನು ಕನ್ನಡದಲ್ಲಿ ತೀರ ಮೊದಲಲ್ಲಿ ಬರೆದವರು ದಿವಂಗತ ಶ್ರೀ. ಪಂಜೆ ಮಂಗೇಶರಾಯರು. ಅವರ ಕಥೆಗಳ ಸಂಕಲನದ ಒಂದು ಪ್ರತಿ ನನ್ನಲ್ಲಿದ್ದುದು ಕಳೆದುಹೋಗಿದೆ. ಆದ್ದರಿಂದ ಅದರ ವಿಷಯವನ್ನು ನೆನಪಿನ ಬಲದ ಮೇಲೆ ಹೇಳುತ್ತಿದ್ದೇನೆ. ಆ ಕತೆಗಳು ಐತಿಹಾಸಿಕ ಕತೆಗಳೆಂದು ನನ್ನ ತಿಳುವಳಿಕೆ. ಅದನ್ನು ಓದಿದಾಗ, ಅಲ್ಲಿ ಉಕ್ತವಾದ ಸಂಗತಿಗಳು ವಾಸ್ತವವೆಂದು ಕಂಡಂತೆ ನನಗೆ ನೆನಪು.

ಆ ಮೇಲೆ ಒಂದತ್ತ ದಿವಂಗತ ಕೆರೂರ ಶ್ರೀ. ವಾಸುದೇವಾಚಾರ್ಯರವರು, ಒಂದತ್ತ ಎಮ್. ಎನ್ ಕಾಮತರು, ಇನ್ನೊಂದತ್ತ ನಾನು—ವರ್ಷ ಆರೆವರ್ಷ ಹಿಂಚೆ ಮುಂಚಾಗಿ—ಹೆಚ್ಚು ಕಡಿಮೆ ಏಕಕಾಲದಲ್ಲಿ—ಕತೆಗಳನ್ನು ಬರೆದಿರಬೇಕು. ಇಲ್ಲಿಯೂ ವಾಸ್ತವತೆ ಗುರಿಯಾಗಿದ್ದದ್ದು ಕಾಣುತ್ತದೆ. ಶ್ರೀ. ಕೆರೂರವರ ಪದ್ಧತಿಗೆ ಒಳ್ಳೆಯ ನಿದರ್ಶನ ಅವರ 'ಮಲ್ಲೇಶಿಯ ನಲ್ಲೆಯರು!' ತೋಟದ ಕಾವಲದ ಯಜಮಾನನಾಗಿದ್ದ ಮಲ್ಲೇಶಿ, ಅವನ ದನಿಯರ ಹತ್ತಿರ ನಿಲ್ಲುವುದು, ನುಡಿಯುವುದು ಮುಂತಾಗಿ ಎಲ್ಲ ವಿವರದಲ್ಲಿ ಈ ಕಥೆ ಜೀವನದ ತೀರಾ ಸತ್ಯವಾದ ಒಂದು ಚಿತ್ರ ಆಗುತ್ತದೆ. ಕಾಮತರ ಕಥೆಗಳಲ್ಲಿಯೂ ಇದೇ ಉತ್ತರದ ನೈಜಭಾವ ಸಿದ್ಧಿಸುತ್ತದೆ. ಅವರ ಕತೆಗಳ ಬಹುಭಾಗ ಈಗ ಸುಲಭವಾಗಿ ಕೈಗೆ ಸಿಕ್ಕುವಂತಿಲ್ಲ. ಸುಲಭವಾಗಿ ದೊರೆಯುವ ಅವರ ಪುಸ್ತಕ 'ಅಂದಿನ ಆವೂರು'. ಇದರಲ್ಲಿ ಬರುವ ಚಿತ್ರಗಳು ನೇರವಾಗಿ ಜೀವನದಿಂದ ಲೇಖನಕ್ಕೆ ಬಂದಿರುವುವು.

ಇರುವುದನ್ನು ಹೇಳುವ ಕಲೆಯ ಸ್ವರೂಪ ಇವರ ಕತೆಗಳಿಂದ ಚೆನ್ನಾಗಿ ತಿಳಿಯುತ್ತದೆ. ಇರುವುದು ಎಂದರೆ ಇರುವುದನ್ನು ಕುರಿತ ಕಲ್ಪನೆ ಹೇಗೋ ಹಾಗೆ ಈ ಹೇಳುವದು ಎನ್ನುವುದು ಹೇಳುವಷ್ಟೆ ಮುಖ್ಯವಾಗಿ ಬಿಡುವುದೂ ಹೌದು. ಈ ತತ್ತ್ವ ಕೂಡ ಎಲ್ಲ ಕಲೆಗಳಿಗೂ ಅನ್ವಯಿಸತಕ್ಕದ್ದು. ಕಲೆ The truth, whole truth and nothing but the truth, ಎಂದೇ ಶಪಥ ಮಾಡುತ್ತದೆ. ಆದರೆ 'ನಾಮೂಲಂ ಲಿಖ್ಯತೇ ಕಿಂಚಿತ್ ನಾನಪೇಕ್ಷಿತಮುಚ್ಯತೇ' ಎಂದು ಅನೇಕ ವಿವರಗಳನ್ನು ಬಿಟ್ಟು ಅನೇಕವನ್ನು ಸೇರಿಸಿ ವಸ್ತುವಿನ ಸ್ವರೂಪವನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುತ್ತದೆ. ವಿವರಗಳನ್ನು ಬಿಟ್ಟರೂ ಪೂರ್ಣ ಸತ್ತ್ವವನ್ನೂ ಅನೇಕ ವಿವರಗಳನ್ನೂ ಸೇರಿಸಿಯೂ ಸತ್ಯವನ್ನು ಮಾತ್ರ ಹೇಳುವುದು—ಎಂಬ ತನ್ನ ಶಪಥವನ್ನು ಮುರಿಯದೆ ಪಾಲಿಸುತ್ತದೆ.

ಹೀಗೆ ವಾಸ್ತವತೆಯನ್ನು ಗುರಿಯಾಗಿಟ್ಟುಕೊಂಡು ಆರಂಭವಾದ ನಮ್ಮ ಸಣ್ಣಕತೆ, ಆ ದಾರಿಯನ್ನು ಬಿಡದೆ ಅಂದವಾಗಿ ಮುಂದರಿದಿದೆ. ಸಿದ್ಧಿ ಹೊಂದಿದ ಎಲ್ಲ ಲೇಖಕರ ಅಥವಾ ಒಳ್ಳೆಯವೆಂಬ ಕತೆಗಳ ಹೆಸರುಗಳನ್ನು ಈಗ ಹೇಳುವುದು ಸಾಧ್ಯವಲ್ಲ. ಕಥನ ಕಲೆ ನಡೆದಿರುವ ದಾರಿಯನ್ನು ಗುರುತಿಸುವುದಕ್ಕಾಗಿ ಕೆಲವು ಹೆಸರುಗಳನ್ನು ಹೇಳವುದಾಗುತ್ತದೆ. ರಾಜಸೇವಾ ಪ್ರಸಕ್ತ ಶ್ರೀ. ನವರತ್ನ ರಾಮರಾಯರ 'ಲಕ್ಷ್ಮಣರಾಯನ ಭಾಗ್ಯ' ಶ್ರೀ. ಅಂಬಳೆ ಕೃಷ್ಣಶಾಸ್ತ್ರಿಗಳ 'ನಾಗರ ಪಂಚಮಿ' ಶ್ರೀ. ಗೋಪಾಲಕೃಷ್ಣರಾಯರ 'ಬಂಗಾರದ ದಾಬು' ಶ್ರೀ. ಅಜ್ಜಂಪೂರ ಸೀತಾರಾಮರ, 'ನಾನು ಕೊಂದ ಹುಡುಗಿ' ಜೀವನದಿಂದ ನೇರವಾಗಿ ಬೆಳೆದು ಬಂದಿವೆ. ಶ್ರೀ. ಗೊರೂರು ರಾಮಸ್ವಾಮಿಯ್ಯಂಗಾರ್ಯರ ಗ್ರಾಮಜೀವನ ಚಿತ್ರಗಳು ಈ ಪದ್ಧತಿಯಲ್ಲಿ ಚಿನ್ನದ ಗಣಿಗಳು. ಇದೇ ಪದ್ಧತಿಗೆ ಶ್ರೀಯುತರಾದ ಚೆನ್ನಪಟ್ಟಣದ ವೆಂಕಟರಾಮಯ್ಯನವರು, ಕುಪ್ಪಳ್ಳಿ ಪುಟ್ಟಪ್ಪನವರು, ಅ.ನ. ಕೃಷ್ಣರಾಯರು ಒಳ್ಳೆಯ ಕತೆಗಳನ್ನು ಬರೆದಿದ್ದಾರೆ. ಕಾಮತರ ಕೈಯಲ್ಲಿ ರೂಪುಗೊಂಡ ಜೀವನ, ಅದೇ ಜೆಲುವಿನಿಂದ ಈಚೆಗೆ ಶ್ರೀ. ಶಿವರಾಮ ಕಾರಂತರ 'ಹಳ್ಳಿಯ ಹತ್ತು ಸಮಸ್ತರು' ಪುಸ್ತಕದಲ್ಲಿ ರೂಪುಗೊಂಡಿದೆ. ಶ್ರೀ. ಕೆರೂರವರು ವರ್ಣಿಸಿದ ಜೀವನವನ್ನು ಶ್ರೀ. ಗಳಾದ ಬೆಟಗೇರಿ ಕೃಷ್ಣಶರ್ಮ, ರಂಗನಾಥ ಮುಗಳಿ, ಬಸವರಾಜ ಕಟ್ಟೀಮನಿ, ಹಿರೇಮಲ್ಲೂರ ಈಶ್ವರನ್,

ಮತ್ತೂ ಇತರ ಮಿತ್ರರು ಚೆನ್ನಾಗಿ ಚಿತ್ರಿಸಿದ್ದಾರೆ. ಮುಗಳಿಯವರ 'ನೀರಿನ ನಾರಪ್ಪ' ಈ ಜಾತಿಯ ಅತ್ಯುತ್ತಮ ಕಥೆಗಳಲ್ಲಿ ಒಂದು. ಹೀಗೆಯೇ ಉತ್ತರಕನ್ನಡದ ಜೀವನ. ಶ್ರೀ. ವಿ. ಜಿ. ಶ್ಯಾನುಭೋಗರ ಕತೆಗಳಲ್ಲಿ ಬಾಳಿನಿಂದ ನೇರವಾಗಿ ಸಾಹಿತ್ಯಕ್ಕೆ ನಡೆದು ಬಂದಿರುವುದು ಕಾಣುತ್ತದೆ.

ನಮ್ಮ ಕತೆಗಾರರು ವಾಸ್ತವತೆಯನ್ನು ಸಾಧಿಸದೆ ಕೆಲವು ವೇಳೆ ಜಾರಿದ್ದೂ ಉಂಟು,—ಎಂದು ಹೇಳಿದರೆ ಯಾರು ಆಶ್ಚರ್ಯ ಪಡಬೇಕಾದದ್ದಿಲ್ಲ. ಕಥೆಗಳಲ್ಲಿ ವಾಸ್ತವತೆ ಹಲವು ಕಾರಣದಿಂದ ಕೆಡಬಹುದು. ಸಂಗತಿ ಅಸಂಭವನೀಯ ಎಂದು ಕಾಣುವುದು, ಆವರಣ ವಿಸಂಗತವಾಗಿರುವುದು, ಪಾತ್ರಗಳು ಕೃತಕವೆಂದು ತೋರುವುದು, ಸಂಭಾಷಣೆ ಅಸಹಜವೆನ್ನಿಸುವುದು— ಇಂಥ ಯಾವ ಒಂದು ದೋಷವೂ ಕಥೆ ಯಥಾರ್ಥ ಎಂಬ ಭಾವಕ್ಕೆ ಭಂಗ ತರುತ್ತದೆ. ಶ್ರೀರಂಗಪಟ್ಟಣದ ವಾನರದ ಮಾತನ್ನು ಈ ಮೊದಲು ಹೇಳಿದ್ದಾಗಿದೆ; ಇದು ಸಂಗತಿಯ ವಿಚಾರ. ರೋಮನ್ನರ ಹೋರೆಸ್ ಕವಿ ವಾಸ್ತವತೆಯನ್ನು ಕುರಿತು ಪ್ರಸ್ತಾಪಿಸುತ್ತ ಹವಣರಿಯದ ಮನುಷ್ಯ 'Paints the dolphin in the woods and the boar in the sea' ಎಂದನು. ಸಮುದ್ರದ ಮಧ್ಯೆ ಕಾಡಹಂದಿ, ತೋಪಿನಲ್ಲಿ ತಿಮಿಂಗಲು....ಇದು ಆವರಣದ ವಿಚಾರ. ಪಾತ್ರಕೃತಕ ಎನ್ನಿಸುವುದು ದಿನ ಬೆಳಗೂ ಬರುವ ಅನುಭವ. ಇದು ಸಹಜವಲ್ಲ— ಎನ್ನಿಸುವುದೂ ಪ್ರಾಯಶಃ ಹತ್ತರ ಹತ್ತರ ಇಷ್ಟೇ ಸಾಧಾರಣ ಲೇಖಕನು ಚಿಕ್ಕ ಚಿಕ್ಕ ಮರಿಮೀನುಗಳನ್ನು ತಿಮಿಂಗಿಲುಗಳಂತೆ ಮಾತನಾಡಿಸುತ್ತಾನೆ. ಬೊಗಳಬೇಕಾದ ನಾಯನ್ನು ಗರ್ಜಿಸ ಹಚ್ಚುವನು. ನಮ್ಮ ಕತೆಗಳಲ್ಲಿ ಈ ಯಾವುದು ರೀತಿಯಲ್ಲಿ ವಾಸ್ತವತೆ ತಪ್ಪಿರುವ ಸಂದರ್ಭಗಳನ್ನೂ ನಾನು ಉದಾಹರಿಸಹೋಗುವುದಿಲ್ಲ. ಅದಕ್ಕೆ ಬಹು ಮುಖ್ಯವಾದ ಕಾರಣವನ್ನು ಶ್ರೋತೃಗಳು ಊಹಿಸಬಲ್ಲರು. ಜೊತೆಗೆ ಇನ್ನೊಂದು ಕಾರಣ— ಈ ಸ್ವಲ್ಪ ಹೊತ್ತಿನಲ್ಲಿ ಅದಕ್ಕೆ ಅವಕಾಶ ಸಾಲದು ಎನ್ನುವುದು.

ವಾಸ್ತವತೆ ತಪ್ಪುವಂತೆ ವಾಸ್ತವತೆ ಅತಿಯಾಗುವುದೂ ಸಾಧ್ಯ. ಮಂಗಳೂರನ್ನು ಕುರಿತು ಬಹು ಸುಂದರವಾದ ಕತೆಯನ್ನು ಬರೆದಿರುವ ಒಬ್ಬ ಮಿತ್ರರು, ಆ ಕಥೆಗಳೊಂದರಲ್ಲಿ ಬರೆದಿರುವ 'ಮಾರ್ನಾಡು ಸದಾಶಿವಯ್ಯ' ಎಂಬ ಒಬ್ಬ ಜನೋಪಕಾರಿಯ ವಿವರವೆಲ್ಲ, ಮಂಗಳೂರಿನ ನಾಗರಿಕರು—ದಿವಂಗತ ಶ್ರೀ. ಕರ್ನಾಡು ಸದಾಶಿವರಾಯರನ್ನು ನಿರ್ದೇಶಿಸುವಂತಿದೆ. ಈ ಕಾರಣದಿಂದ ಇದನ್ನು ಓದುವಾಗ ನನಗೆ ಮೊದಲು 'ಮಾ' ಎನ್ನುವುದು ಅಚ್ಚಿನ ತಪ್ಪು ಎಂದು ತೋರಿತು. ರಾಯ ಹೋಗಿ ಅಯ್ಯ ಆಗಿದ್ದದ್ದನ್ನು ನೋಡಿ ಮಾರ್ನಾಡು ಉದ್ದೇಶಪೂರ್ವಕ ಮಾಡಿಕೊಂಡದ್ದು ಎನ್ನುವುದು ಕಂಡಿತು. ಈ ಕಥೆಯಲ್ಲಿ ಸೂಚನೆ ಇಷ್ಟೆ! ಸ್ಪಷ್ಟವಾಗಿ ಇರುವುದರಿಂದ ತೊಂದರೆ ಇಲ್ಲದಿರಬಹುದು; ಆದರೆ ಸಾಮಾನ್ಯವಾಗಿ ಈ ಕ್ರಮ ಒಳಿತಲ್ಲ. ಕತೆ ಕತೆಯಾಗಿ ಉಳಿಯಬೇಕಾದರೆ, ಮುಖಮರೆಸಿಕೊಂಡ ಇತಿಹಾಸ ಎನ್ನಿಸಬಾರದು.

ವಾಸ್ತವತೆ ಅತಿಯಾಗುವುದಕ್ಕೆ ಇತ್ತೀಚೆಗೆ ಒಂದು ಹೊಸ ಕಾರಣ ಒದಗಿದೆ. ಇದು ಸಾಹಿತ್ಯವನ್ನು Progressive ಮಾಡಲು ಹಂಬಲು. ಸಾಹಿತ್ಯ ದಲಿತ ದರಿದ್ರ ನಿರ್ಭಾಗ್ಯರ ಜೀವನವನ್ನು ಚಿತ್ರಿಸಿ ಅದನ್ನು ಸರಿಪಡಿಸುವ ಸಾಧನವಾಗಬೇಕು—ಎಂಬುದು ಈ ಹಂಬಲದ ಹಿಂದಿನ ಮನೋಧರ್ಮ. ಇದು ಶ್ಲಾಘನೀಯವೇ. ಆದರೆ ಸಾಹಿತ್ಯವನ್ನು ಈ ಸಾಧನವಾಗಿ ಮಾಡುವುದರಲ್ಲಿ ಲೇಖಕರು ಜೀವನದ ಕೊಳಕು ಕೊಚ್ಚೆ ಅಷ್ಟನ್ನೆ ವಿವರಿಸುತ್ತ, ಕಲೆಯ ಮಿತಿಯನ್ನು ಮರೆತು, ಒಂದು ವರದಿಯ ರೀತಿಯಲ್ಲಿ ವಿವರಗಳನ್ನು ಪೇರಿಸುತ್ತಾರೆ. 'ನಮ್ಮಲ್ಲಿ ಹೀಗಾದೀತೋ' ಎಂಬ ಅಪಾಯ ಕಂಡಿತು. ಆದರೆ ಬಹಳವೇನಾದರೂ ಅನರ್ಥ ಆಡಸುವ ಮೊದಲೇ ಚಳವಳಿ ಸಮಾಧಾನಕ್ಕೆ ಬಂದಿತು. ಇದಕ್ಕೆ ಮುಖ್ಯ ಕಾರಣ ಈ ಸೂತ್ರವನ್ನು ಎತ್ತಿ ಹಿಡಿದ ನಮ್ಮ ಕತೆಗಾರರು ಸ್ವಭಾವತಃ ಕಲೆಯ ಉಪಾಸಕರಾಗಿದ್ದದ್ದು. ಶ್ರೀ. ಬಸವರಾಜ ಕಟ್ಟೀಮನಿಯವರು ಇತ್ತೀಚೆಗೆ ಪ್ರಕಟಿಸಿರುವ ಕತೆಗಳು ಈ ವರೆಗೆ ಒಳ್ಳೆಯ ನಿದರ್ಶನ. ವಿವರಣೆಯ ಅತಿರೇಕ ಬೇಡದೆ ಇರುವುದಕ್ಕೆ ಕಾರಣ ಇದು. ಆಕಾರವನ್ನೆ ಚಿತ್ರಿಸುವುದಕ್ಕೆ them two lips ಎಂದು ಹೊರಡುವುದು ಅನಾವಶ್ಯಕವಾಗುವಂತೆ ಒಳಗಿನ ಬೇನೆ ಬೇಸರವನ್ನು ಚಿತ್ರಿಸುವುದಕೆ

ZANDU

PROTOCASEN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M's. Pranlal and Sons
Chemists, Druggists
Station Road, HUBLI

(H. O. Bangalore City

‘ ಬಗನ ’ ಬಾಲಾಮೃತ

ಮಕ್ಕಳ
ಸಶಕ್ತತೆಗಾಗಿ
‘ಬಗನ’
ಬಾಲಾಮೃತ.
ವನ್ನು ಉಪ-
ಯೋಗಿಸಿರಿ,

ನಿಯಮವಾಗಿ
ಮಕ್ಕಳ
ಯಕೃತು
ಮತ್ತು
ಹೊಟ್ಟೆ

ಎಂದರೆ
ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ‘ ಗ್ರಾಯಿಪ್ ಹೀಲರಿನ ’ ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ ‘ ಟೋನಿಕ್ಕು ’ ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಪೂರ್ಣ ವರ್ಣನೆ ಅನಾವಶ್ಯಕ. ಕಲೆ, ಚಿತ್ರ, ಶಿಲ್ಪವನ್ನು ನಿರ್ಮಿಸಿದವರೊಂದಿಗೆ ನಾವೂ ಸೇರಿ ಅವರ ಕೃತಿಯನ್ನು ಪೂರ್ಣ ಮಾಡುತ್ತೇವೆ. ಅವರು ನಮ್ಮ ಮನಸ್ಸಿನಲ್ಲಿ ಜೀವನವನ್ನು ಉತ್ಪಾದಿಸಲು ಸಾಕಾದಷ್ಟು ವಿವರವನ್ನು ಕೊಡಬೇಕು—ಎಂದರೆ ಕಲೆ ಅವಲಂಬಿಸುವ ಸದ್ಯದ ಸೂಚನೆ. ಇದು ಚೆನ್ನಾಗಿ ನಡೆದಾಗ ವರ್ಣಿತವಸ್ತು ಎದುರಿಗೆ ಇಲ್ಲದೆಯೆ ಪ್ರತ್ಯಕ್ಷವಾಗುತ್ತದೆ.

ವಾಸ್ತವತೆಯನ್ನು ಕಟ್ಟಿಕೊಂಡು ಕೆಡುವ ದಾರಿ ಒಂದು ಇರುವಂತೆ, ಅದನ್ನು ಬಿಟ್ಟಂತೆ ತೋರಿ ಬಾಳುವ ದಾರಿ ಒಂದುಂಟು. ಗಂಡ-ಹೆಂಡಿರ ಪ್ರೇಮಸಲ್ಲಾಪವನ್ನು ಚಿತ್ರಿಸುತ್ತ ಆನಂದರು ಒಮ್ಮೊಮ್ಮೆ ‘ ಸಿಹಿ ಸ್ವಲ್ಪ ಹೆಚ್ಚಾಯಿತು ’ ಎಂದು ಶಂಕೆ ಹುಟ್ಟುವಂತೆ ಕೆಲವು ಮಾತನ್ನು ಬರೆಯುತ್ತಾರೆ. ಇಂಥ ಮಾತನ್ನು ನೋಡಿ ನಿಷ್ಠುರ ವಾಸ್ತವವಾದಿಗಳು, ‘ಇವು ಯಾರದಾದರೂ ಬಾಳಿನಲ್ಲಿ ನಿಜವಾಗಿ ಆಡುವ ಮಾತುಗಳೇ ? ’ ಎಂದು ಪ್ರಶ್ನಿಸಬಹುದು. ಇದಕ್ಕೆ ಉತ್ತರ ಇದು: ವಾಸ್ತವವನ್ನು ಮುಂದರಿಸಿದವರು ದೊರೆಯುವ ಲೋಕ ಎನ್ನುವುದು ಕತೆಗಾರನು ಚಿತ್ರಿಸುವ ಲೋಕ ಎನ್ನುವ ಮೇಲೆ, ಅವನು ಮಾತ್ರ ಕಾಣುವ ಒಂದು ಬೆಳಕು ಆಳುತ್ತಿರುತ್ತದೆ. The light that never was on sea or land·

ಇಂಥದೇ ಒಂದು ಸಂದರ್ಭದಲ್ಲಿ ಒಬ್ಬ ವೃದ್ಧೆ ಚಿತ್ರಗಾರ ಟರ್ನರ್ ಮಹಾಶಯನನ್ನು ಕುರಿತು ‘ನೀವು ಸಂಜೆಯನ್ನು ಇಷ್ಟು ಚೆಂದವಾಗಿ ಚಿತ್ರಿಸಿದ್ದೀರಲ್ಲ! ‘ಅದು ಇಷ್ಟು ಚೆನ್ನಾಗಿರುವುದು ಉಂಟೆ?’ ಎಂದು ಕೇಳಿದಳಂತೆ. ಅವನು ‘ ಅವ್ವಾ, ಉಂಟೋ ಇಲ್ಲವೋ ಅದು ಹಾಗಿರಲಿ; ಉಂಟಾದರೆ ಚೆನ್ನವಾದೀತಲ್ಲ ! ಎನ್ನಿಸುವುದಿಲ್ಲವೇ ? ’ ಎಂದು ಪ್ರತಿಯಾಗಿ ಪ್ರಶ್ನಿಸಿದನು ಈ ರೀತಿಯ ಅಸಂಭವನೀಯತೆ ಒಂದು ಗುಣ ಹೊರತು ದೋಷವಲ್ಲ ನಿಜಕ್ಕಿಂತ ಹೆಚ್ಚು ನಿಜವಾದ ಕನಸು ಒಂದು ಮಾನವನನ್ನು ಕಾಡುತ್ತದೆ ಕೈ ಬಿಡದೆ ಕಾಯುತ್ತದೆ. ಕನಸಿಗೆ ಆಕಾರಕೊಡುವ ಪ್ರತಿಧ್ಯೇಯವಾದಿ ಎನಿಸುತ್ತದೆ, ಭೂಮಿಯನ್ನು ತಳಹದಿ ಮಾಡಿ ಸ್ವರ್ಗವನ್ನೇ ರಚಿಸುತ್ತದೆ.

ಧ್ಯೇಯ ಉದ್ದೇಶ ಆದಾಗ ಹೇಗೋ ಹಾಗೆ ವ್ಯಂಗ್ಯ ಉದ್ದೇಶ ಆದಾಗಲೂ ಕೃತಿ ವಾಸ್ತವವನ್ನು ಬಿಟ್ಟಂತೆ ಕಾಣುತ್ತದೆ. ಒಬ್ಬನಿಗೆ ಮೂಗು ಸ್ವಲ್ಪ ದೊಡ್ಡದು; ವ್ಯಂಗ್ಯ ಚಿತ್ರಕಾರನು • ಇದನ್ನು ನಿರ್ದೇಶಿಸುವುದಕ್ಕೆ ವ್ಯಕ್ತಿಯನ್ನು ಚಿತ್ರಿಸುವಾಗ ದೊಡ್ಡ ಒಂದು ಮೂಗಿಗೆ ಒಂದು ಸಣ್ಣ ವ್ಯಕ್ತಿಯನ್ನೆ ಅಂಟಿಸುತ್ತಾನೆ. ಮೂಗು ದೊಡ್ಡದು. ಆದರೆ ಇಷ್ಟು ದೊಡ್ಡದಲ್ಲ. ಆದರೆ ಚಿತ್ರ, ಒಟ್ಟು ವ್ಯಕ್ತಿಯನ್ನು ರೂಪಿಸಲು ಹೊರಟಿಲ್ಲ. ಅವನ ಮೂಗು ಅಳತೆ ಮರತಿದೆ ಎಂದು ತಿಳಿಸಲು ಹೊರಟಿದೆ. ಇದು ವಾಸ್ತವತೆ. ಸಾಹಿತ್ಯದ ವ್ಯಂಗ್ಯಚಿತ್ರಗಳಿಗೂ ಈ ಸಮರ್ಥನ ಅನ್ವಯಿಸುತ್ತದೆ.

ವಾಸ್ತವತೆ ಸಾಹಿತ್ಯದ ಜೀವನಾಡಿ. ಸ್ಪರ್ಶಮಣಿ. ಅದನ್ನು ಸಾಧಿಸಿದ ಕಲೆ ವಿದೇಶೀ ವಸ್ತುವನ್ನು ಕೂಡ ಸ್ವದೇಶಿ ಮಾಡುತ್ತದೆ. ಇದಕ್ಕೆ ಅತ್ಯುತ್ತಮ ನಿದರ್ಶನವೆಂದು ಒಂದು ಸಂಗತಿಯನ್ನು ಹೇಳಿ ಈ ಪ್ರವಚನವನ್ನು ಮುಗಿಸಬಹುದು.

Malachis Cove ಎನ್ನುವುದು ಒಂದು ಆಂಗ್ಲ ಕತೆ. ಗೆಳೆಯ ಶ್ರೀ. ಟೇಂಗ್ಸೆ ಗೋವಿಂದರಾಯರು ಬಹುವರ್ಷಗಳ ಹಿಂದೆ ಇದನ್ನು ‘ ಗಂಗೆಯ ಗುತ್ತಿಗೆ ’ ಎಂಬ ಹೆಸರಿನಿಂದ ಒಂದು ಕನ್ನಡದ ಕತೆಯಾಗಿ ಮಾಡಿದರು. ಈ ರೂಪಾಂತರದಲ್ಲಿ ಧಾರವಾಡದ ಅಗಸರ ಹುಡುಗ-ಹುಡುಗಿ ಬರುತ್ತಾರೆ. ಧಾರವಾಡದ ಜೀವನವನ್ನು ಅರಿತ ಟೇಂಗ್ಸೆ ಅವರ ಕಲೆಯಲ್ಲಿ ಮುಲಾಚಿಸ್ ಕೋವ್ ಎಲ್ಲೋ ಮರೆಯುತ್ತದೆ.

ವಸ್ತು ತೀರ ಧಾರವಾಡದ್ದಾಗಿದೆ. ಅದನ್ನು ಓದಿದ ದಿನ ನನಗೆ ‘ ಭಾಷಾಂತರ ಇಂಥ ಸ್ವತಂತ್ರ ಸಾಹಿತ್ಯ ಆಗಬಹುದೆ ? ’ ಎಂದು ಸೋಜಿಗ. ಇಂದಾದರೂ ಅದು ಸೋಜಿಗವಾಗಿಯೇ ಉಳಿದಿದೆ. ಟೇಂಗ್ಸೆಯವರಿಗೆ ಈ ಅದ್ಭುತಸಿದ್ಧಿಯನ್ನು ತಂದದ್ದು ಅವರ ಜೀವನವಿಜ್ಞಾನ. ಅದರಿಂದಲೇ ಅವರಿಗೆ ಪ್ರಾಪ್ತವಾದ ವಾಸ್ತವತೆ. ಕನ್ನಡದ ಸಣ್ಣಕತೆ ಈ ಮುನ್ನ ವಾಸ್ತವತೆಯ ಸ್ಪರ್ಶಮಣಿಯನ್ನೂ ಕಂಡಿದೆ ಬೆಳಸಿದೆ. ಇನ್ನು ಮುಂದೆ ಅದನ್ನು ಕಳೆದುಕೊಳ್ಳದೆ ಬಳಸುತ್ತಲಿರಬೇಕು; ಸಿದ್ಧಪಡೆಯಬೇಕು.

ಧಾರವಾಡದಿಂದ ಉತ್ತರಕ್ಕೆ

(ಪ್ರವಾಸದ ದಿನಚರಿ)

(ಏಪ್ರಿಲ್ ಸಂಚಿಕೆಯಿಂದ ಮುಂದುವರಿದುದು)

ಶ್ರೀ. ಬಿ. ಎಸ್. ದೊಡ್ಡಜ್ಜಪ್ಪನವರ, ಬಿ. ಎಸ್‌ಸಿ. (ಅಗ್ರಿ.) ಹಲಗೇರಿ

★

ಮಹಾರಾಷ್ಟ್ರ-ಗುಜರಾತಗಳಲ್ಲಿ ಪ್ರವಾಸಮಾಡುತ್ತಿರುವವರಿಗೆ ಅಲ್ಲಿಯ ಎಲ್ಲ ಜನರಲ್ಲಿಯೂ ಇರುವ ಮಾತೃಭಾಷೆಯ ಪ್ರೀತಿ-ಅಭಿಮಾನಗಳು ಒಡೆದು ಕಂಡುಬರುತ್ತವೆ. ಆದರೆ ನಮ್ಮ ಉತ್ತರ-ದಕ್ಷಿಣ ಕರ್ನಾಟಕದಲ್ಲಿ ಪ್ರವಾಸಮಾಡುವವರಿಗೆ?

★

ಸುರತ

೧೨ ನೆಯ ಅಕ್ಟೋಬರ್ ೧೯೪೯

ಇರುಳು ೧೧ ಘಂ.

ನಿನ್ನೆ ಸಂಜೆ ೧೨-೪೫ಕ್ಕೆ ಜಳಗಾಂವನ್ನು ಬಿಟ್ಟೆವು. ಇರುಳು ಬಂಡಿಗಳಲ್ಲಿಯೇ ನಿದ್ದೆ ಹೋದೆವು ಇಂದು ಮಧ್ಯಾಹ್ನ ೧೨ ಘಂಟೆಗೆ ಗಾಡಿ ಸುರತಕ್ಕೆ ತಲ್ಪಿತು. ಮೂರು ತಾಸುಗಳ ವರೆಗೆ ವಿರಾಮ ತೆಗೆದುಕೊಂಡನಂತರ, ಸುರತದ ಪ್ರಾಯೋಗಿಕ ಕ್ಷೇತ್ರದ ಪರೀಕ್ಷಕರು, ತಾವು ನಡೆಯಿಸಿರುವ ಒಂದೊಂದೇ ಪ್ರಯೋಗಗಳನ್ನು ವಿಸ್ತರಿಸಿದರು. ಹತ್ತಿ ಇಲ್ಲಿಯ ಮುಖ್ಯ ಬೆಳೆ. ಎರಡು ಹತ್ತಿಯ ಸಾಲುಗಳ ನಡುವಿನ ಅಂತರ ಐದು ಫೂಟುಗಳವರೆಗೆ ಇರುತ್ತದೆ. ಜೋಳದ ಎರಡೂ ಸಾಲುಗಳ ನಡುವಿನ ಅಂತರವು ಕೂಡ ಮೂರು-ಮೂರುವರೆ ಫೂಟುಗಳಿಗಿಂತ ಕಡಿಮೆಯಾಗಿರುವುದಿಲ್ಲ. ಕರ್ನಾಟಕದ ಒಕ್ಕಲಿಗರಿಗೆ ಈ ಮಾತು ಸ್ವಲ್ಪ ಸೋಜಿಗದ್ದಾಗಿ ತೋರಬಹುದು. ಇಲ್ಲಿಯ ಭೂಮಿ ಹತ್ತಿಯ ಬೆಳೆಗೆ ಅತಿ ಉತ್ತಮವಾದ ಎರೆಯಭೂಮಿಯು. ಸುರತದ ಸುತ್ತುಮುತ್ತು ಬಾಳೆ, ಅರಿಸಿಣ, ಹೂವುಗಳ ತೋಟಗಳೂ ವಿಪುಲವಾಗಿವೆ. ನೀರು ನಿಲ್ಲುವ ತಗ್ಗಿನ ಗದ್ದೆಗಳಲ್ಲಿ ಭತ್ತವನ್ನು ಬೆಳೆಯುತ್ತಾರೆ.

ಸುರತದಷ್ಟು ದೊಡ್ಡ ಪಟ್ಟಣವು ನಮ್ಮ ಉತ್ತರ ಕರ್ನಾಟಕದಲ್ಲಿ ಯಾವುದೂ ಇಲ್ಲ. ನಗರದ ಪಕ್ಕದೊಂದಿಗೆ ತಾಪೀ ನದಿಯು ಹರಿದಿದೆ. ಇದು ಬುನಾದಿ ಕಾಲದಿಂದಲೂ ವ್ಯಾಪಾರದ ಕೇಂದ್ರವೆಂದು ಹೆಸರಾಂತ ನಗರ. ಇಲ್ಲಿಯ ಜನರ ಉಡುಪುಗಳೂ ಅವುಗಳನ್ನು ಉಡುವ ರೀತಿಯೂ ಮನೋರಂಜಕವಾಗಿವೆ. ಗಂಡಸರು ಅಂಜೆ ಉಡುವ ವಿಧಾನವು, ನಮ್ಮಲ್ಲಿರುವ ಮಾರವಾಡಿಗಳು ಉಡುವ ರೀತಿಯಂತೆಯೆ ಇದೆ. ಹೆಂಗಳೆಯರಲ್ಲಿ ಸ್ಥಿತಿವಂತ ಮನೆತನದವರು ಮಾತ್ರ ದೊಡ್ಡ ಪತ್ತಲಗಳನ್ನು—ಮೋರೆ ಮುಚ್ಚುವ ಹಾಗೆ— ಎಡಬದಿಗೆ ಸೆರಗು ಹೊದೆದು—ಉಟ್ಟುಕೊಳ್ಳುತ್ತಾರೆ. ಬಡ-ಬಗ್ಗರಾದ ಹೆಣ್ಣುಮಕ್ಕಳು ಸೀರೆಯುಟ್ಟುಕೊಳ್ಳುವ ರೀತಿಯು ಕರುಣಾಜನಕವಾಗಿದೆ. ಮೊಣಕಾಲುಗಳ ಕೆಳಗೆ ಸೀರೆ ಇರುವುದೇ ಇಲ್ಲ ಅವರು ನಿರಿಗೆಗಳನ್ನು ಹಾಕದೆ ಹಾಗೆಯೇ ಸುತ್ತಿಕೊಂಡು ಸೆರಗು ಹೊದೆಯುತ್ತಾರೆ. ಇಲ್ಲಿಯ ಸ್ತ್ರೀಯರ ಮೈಮೇಲೆ ಆಭರಣಗಳು ಹೆಚ್ಚು. ಅವುಗಳ ಮಾಟ ನಮ್ಮಲ್ಲಿಯ ಒಡವೆಗಳಿಗಿಂತ ಬೇರೆ ತೆರದ್ದಿದೆ. ಯೋಗ್ಯತೆ ಇದ್ದವರು ಬಂಗಾರದ ಆಭರಣಗಳನ್ನು ಧರಿಸುತ್ತಾರೆ. ಬಡಜನರು ಆನೆಯ ಎಲುವು, ಜರ್ಮನ್ ಸಿಲ್ವರ್, ಹಿತ್ತಾಳೆ ಮೊದಲಾದುವುಗಳಿಂದ ಮಾಡಿದ ಒಡವೆಗಳನ್ನು ಇಟ್ಟುಕೊಳ್ಳುತ್ತಾರೆ. ಇನ್ನೂ ಸುರತ ನಗರದಲ್ಲಿ ಪೂರ್ತಿಯಾಗಿ ತಿರುಗಾಡಲಿಕ್ಕೆ ಆಗಿಲ್ಲ. ಇಲ್ಲಿಗೆ ಸಮುದ್ರತೀರವು ಎಂಟು ಮೈಲುಗಳಷ್ಟು ದೂರವಿರುತ್ತದೆ. ಅಲ್ಲಿಗೆ ಹೋಗುವುದು ನಮಗೆ ಸಾಧ್ಯವಾಗಲಿಕ್ಕಿಲ್ಲ.

× × × ×

ಸುರತ

೧೩ನೆಯ ಅಕ್ಟೋಬರ್ ೧೯೪೯.

ಇಂದು ಮುಂಜಾನೆ ಸುರತದ ಸರಕಾರೀ ಪ್ರಯೋಗಕ್ಷೇತ್ರದಿಂದ ಮೋಟಾರುಗಳ ಮೂಲಕ 'ನೋಗಾಬಿ' ಹಳ್ಳಿಯಲ್ಲಿಯ ಒಕ್ಕಲಿಗನೊಬ್ಬನ ಕಾಯಿಪಲ್ಲೆಯದ ತೋಟವನ್ನು ನೋಡಲಿಕ್ಕೆ ಹೋಗಿದ್ದೆವು. ಕೆಲವರು ಮೊದಲು ಹೊರಟ ಮೋಟಾರಿನಲ್ಲಿ ಕುಳಿತು ಸುಮಾರು ಎಂಟುವರೆ ಘಂಟೆಗೆ ಅಲ್ಲಿಗೆ ತಲುಪಿದೆವು. ಉಳಿದವರು ೧೧ ಘಂಟೆಯಾದರೂ ಅತ್ತ ಹಾಯಲೇ ಇಲ್ಲ. ಮೋಟಾರುಗಳ ಅನಿಯಮಿತತನದಿಂದ ಅವರೆಲ್ಲ ಅಲ್ಲಿಗೆ ೧೧-೧೫ಕ್ಕೆ ಬಂದರು. ಕಾಯಿಪಲ್ಲೆಯ ತೋಟದ ಒಡೆಯ ಗುಜರಾತೀ ಶೇಟಜಿ; ಮನೆತನದಿಂದ ಸ್ಥಿತಿವಂತ. ಅಂದು ಅವನ ಮನೆಗೆ—ಸುರತದ ಒಕ್ಕಲು-

ಕುಟುಂಬ
ದೊಳಗಿನ
ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅಪಚನ, ಕೆಮ್ಮು, ಮೈನೋವು, ಹಲ್ಲುನೋವು, ಮಕ್ಕಳ ರೋಗ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ನಿಸ್ಸಂಶಯವಾಗಿ ಗುಣಪಡಿಸುತ್ತದೆ. [illegible]

ತನದ ಜಿಲ್ಲಾಧಿಕಾರಿಗಳು, ಅವರ 'ಸಹಾಯಕ ಅಧಿಕಾರಿ'ಗಳು ಮತ್ತು ಕಾಯಿಪಲ್ಲೆಗಳ ಹುಟ್ಟುವಳಿಯ ವಿಸ್ತಾರವನ್ನು ಹೆಚ್ಚಿಸುವ ಕಾರ್ಯ ನಿರ್ವಹಿಸಿದ 'ವ್ಹೆಜಿಟೆಬಲ್ ಎಕ್ಸಟೆನ್ಶನ್ ಆಫೀಸರ'ರು ಬಂದಿದ್ದರು. ಆ ತ್ರಿಮೂರ್ತಿಗಳೂ ನಮಗೆ ಬೇರೆ ಬೇರೆ ವಿಷಯಗಳನ್ನು ವಿವರಿಸಿದರು. ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ನಡೆದ ಒಕ್ಕಲುತನದ ಕಾರ್ಯರಂಗದಲ್ಲಿಯ ವಿವಿಧ ಚಟುವಟಿಕೆಗಳನ್ನು— ಸದ್ಯದ ರಾಷ್ಟ್ರದ ಆಹಾರ ಪರಿಸ್ಥಿತಿಯನ್ನನುಲಕ್ಷಿಸಿ—ವಿವೇಚಿಸಿ, ವಿಮರ್ಶಾತ್ಮಕವಾಗಿ ಮಾತನಾಡಿದರು. ಅವರ ಸಹಾಯಕ-ಅಧಿಕಾರಿಗಳು, ಬಾಳೆಯ ತೋಟಗಳನ್ನು ಸಾಗುಮಾಡುವುದರ ಬಗೆ ಸಂಕ್ಷಿಪ್ತದಲ್ಲಿ ತಿಳಿಸಿದರು. ಮೂರನೆಯವರು, ಗುಜರಾತಿನಲ್ಲಿ ಬೆಳೆಯುವ ಯಾವತ್ತು ತರದ ಕಾಯಿಪಲ್ಲೆಗಳ ಬೆಳೆವಣಿಗೆಯನ್ನು ಕುರಿತು ಹೇಳಿ, ಸರಕಾರವು ಕಂದ-ಮೂಲಗಳ ಬೆಳೆವಣಿಗೆಯಲ್ಲಿ ಅಷ್ಟೊಂದು ಆಸ್ಥೆ ವಹಿಸಿರುವುದೇಕೆಂಬುದನ್ನು ಸಶಾಸ್ತ್ರೀಯವಾಗಿ ವಿವರಿಸಿದರು. ಇದಾದನಂತರ ತೋಟದಲ್ಲಿ ತಿರುಗಾಡಿದೆವು. ಅಲ್ಲಿ ಬಾಳೆ, ಕ್ಯಾಬೇಜ್ ಮತ್ತು ನವಿಲುಕೋಲುಗಳ ಹೊರತಾಗಿ ಬೇರೆ ಯಾವ ಕಾಯಿಪಲ್ಲೆಯ ಬೆಳೆಗಳೂ ಕಣ್ಣಿಗೆ ಬೀಳಲಿಲ್ಲ. ಹೀಗಾದುದರಿಂದ, ತೋಟದಲ್ಲಿ ತಿರುಗಾಡಲು ಯಾರಿಗೂ ಉತ್ಸುಕತೆ ಉಳಿಯಲಿಲ್ಲ. ಸೂರಣಗಡ್ಡೆ ಮತ್ತು ಹೆಗ್ಗೆಣಸು ಈ ಬೆಳೆಗಳಿಗೆ ಗುಜರಾತು ತೌರಮನೆ. ಇಲ್ಲಿಯ ಜನರು ಏಕಾದಶಿ, ಶಿವರಾತ್ರಿ ಮುಂತಾದ ಉಪವಾಸದ ದಿನಗಳಲ್ಲಿ ಸೂರಣಗಡ್ಡೆ ಮತ್ತು ಹೆಗ್ಗೆಣಸುಗಳನ್ನು ಬೇಯಿಸಿ, ಅಲ್ಪೋಪಹಾರದಂತೆ ಉಪಯೋಗಿಸುತ್ತಾರೆ. ದಿನಾಲು ಪಲ್ಲೆ-ಪಚಡಿಗಳಿಗೂ ಇವುಗಳ ಉಪಯೋಗ ಹೆಚ್ಚು. ಕರ್ನಾಟಕದಲ್ಲಿ ಸೂರಣಗಡ್ಡೆಯ ಕಾಡು ಜಾತಿಯು ಅಲ್ಲಲ್ಲಿ ತೋಟಗಳಲ್ಲಿ ಮತ್ತು ಹಿತ್ತಿಲುಗಳಲ್ಲಿ ಬೆಳೆದದ್ದು ಕಂಡು ಬರುತ್ತದೆ. ಇದರ ಸೇವನೆಯಿಂದ ನಾಲಗೆ ಕಡಿಯುತ್ತದೆ. ಅದಕ್ಕಾಗಿ ಹಿಂದಿ ಅರಿಯಲಿಕ್ಕೆ ಮಾತ್ರ ನಾವು ಅದನ್ನು ಉಪಯೋಗಿಸುತ್ತೇವೆ. ಗುಜರಾತಿನ ಸೂರಣಗಡ್ಡೆಯು 'ಸೀ' ಜಾತಿಯದು.

ಸಾಯಂಕಾಲ ನಗರದಲ್ಲಿ ತಿರುಗಾಡಿದೆವು. ಒಂದು ತುದಿಯಿಂದ ನಗರದ ಮತ್ತೊಂದು ತುದಿಗೆ ಹೋಗಲು ಮೋಟಾರುಗಳ ಸೌಕರ್ಯವಿದೆ. ನಗರದ ಈ ಬದಿಯಿಂದ ಆ ಬದಿಗೆ ಹೋಗಬೇಕಾದಾಗ ಎರಡು ಮೋಟರುಗಳಲ್ಲಿ ಪ್ರವಾಸ ಮಾಡಬೇಕಾಗುಗುತ್ತದೆ. ಎರಡೂ ಎದುರು-ಬದುರು ತುದಿಗಳಿಂದ ಹೊರಡುವ ಮೋಟಾರುಗಳ ಕೂಟವು, ತಾಪೀ ನದಿಗೆ ಹಾಕಿರುವ ಸೇತುವೆಯ ಸಮೀಪದಲ್ಲಿ ಇದೆ. ಈ ಸೇತುವೆಯೊಂದು ನೋಡತಕ್ಕ ಸ್ಥಳವೇ. ಪಾದಚಾರಿಗಳಿಗೆ ಹೋಗಲಿಕ್ಕೆ ಮತ್ತು ಬರಲಿಕ್ಕೆ ಸೇತುವೆಗುಂಟ ರಹದಾರಿಗಳಿವೆ. ಸೇತುವೆಯ ಭಾಗದಲ್ಲಿಯೇ ಮೀನುಗಾರರ ಡೋಣಿಗಳಿರುತ್ತವೆ. ಸುರತ ನಗರದ ಹೊಲಸು-ಕೊಳಚೆಗಳ "ಪಾಪಿ-ಪ್ರವಾಹ" ಇಲ್ಲಿಯೇ ನದಿಗೆ ಕೂಡುತ್ತದೆ. ನದಿಯ ಅಗಲಳತೆಯು ಸುಮಾರು ನಾಲ್ಕು ಫರ್ಲಾಂಗುಗಳಷ್ಟಾಗಬಹುದು. ವಾಹನಗಳ ವಿಪರೀತ ಓಡಾಟದಿಂದ ಸೇತುವೆಯು ಅದಿರುತ್ತಿರುವುದು ಮೇಲಿದ್ದವರಿಗೆ ಗೊತ್ತಾಗುವುದು. ನದಿಯ ಆಚೆಯ ದಂಡೆಗೂ ಸುರತನಗರದ ಕೆಲವು ಭಾಗವು ಹಬ್ಬಿದೆ. ನದಿಯ ಈಚೆಯ ದಂಡೆಗೆ ಸೇತುವೆಯ ಪಕ್ಕಕ್ಕೆ ಸುರತದ ಕೋಟೆಯುಂಟು. ಸುರತದಲ್ಲಿ ಇನ್ನೊಂದು ನೋಡತಕ್ಕ ಸ್ಥಳವೆಂದರೆ 'ರಾಣೀಬಾಗ' ಎಂಬ ತೋಟವಂತೆ. ಅದರೀಗ ಅದು ಹಾಳು ಬಿದ್ದು ಅಡವಿಯಂತಾಗಿದೆಯೆಂದು ಕೇಳಿ ಕಡುಕೆನಿಸಿ, ಅತ್ತ ಹಾಯುವುದನ್ನೇ ಬಿಟ್ಟೆವು.

ಇಲ್ಲಿಯ ಜನರ ಉಡುಪು-ತೊಡುಪುಗಳ ವಿಷಯವಾಗಿ ನಿಮಗೆ ಈಗಾಗಲೇ ತಿಳಿಸಿದ್ದೇನೆ. ಸುಧಾರಿಸಿದ ಮತ್ತು ಸುಸಂಸ್ಕೃತರೆನಿಸಿದ ಸ್ತ್ರೀ-ಪುರುಷರು ಹೆಚ್ಚಾಗಿ ಬಿಳಿಯ ಬಟ್ಟೆಗಳನ್ನು ಧರಿಸುತ್ತಾರೆ. ತಲೆಯ ಮೇಲೆ ರುಮಾಲುಗಳಿಗಿಂತಲೂ ಟೊಪ್ಪಿಗೆಗಳನ್ನು ಧರಿಸುವುದು ಹೆಚ್ಚು. ಧೋತರಗಳನ್ನುಡುವವರ ಸಂಖ್ಯೆಯ ಮೇಲೇನೂ ಬಾಧೆಯಿಲ್ಲ. ನೆಹರು ಶರ್ಟು ಮತ್ತು ಗಾಂಧೀ ಟೊಪ್ಪಿಗೆಗಳು ನಮ್ಮಲ್ಲಿಗಿಂತ ಇಲ್ಲಿ ಹೆಚ್ಚೆಂಬುದನ್ನು ಹೇಳುವುದೇ ಬೇಡ.

ಇಲ್ಲಿಯ ಜನರು ಸ್ವಭಾವದಿಂದ ಬಹು ಸೌಜನ್ಯವಂತರು. ಅವರ ಭಾಷೆಯನ್ನಾಡದ ನಮ್ಮ ಕೂಡ ಅತಿ ವಿನಯದಿಂದ ನಡೆದುಕೊಂಡರೆಂಬಲ್ಲಿ ಆಶ್ಚರ್ಯವೇನಿಲ್ಲ. ನಾನೊಮ್ಮೆ 'ಸಿಟಿ ಸರ್ವಿಸ್' ಬಸ್ಸಿನಲ್ಲಿ ಹತ್ತಿ ಕುಳಿತೆ. "ನೀವೆಲ್ಲಿಗೆ ಇಳಿಯುವಿರಿ ?"

ಎಂದು ಕ್ಲೀನರ್ ಕೇಳಿದ. ನನಗೆ ಗುಜರಾತಿಯಾಗಲಿ ಇಲ್ಲವೆ ಇಲ್ಲಿ ಕೆಲಮಟ್ಟಿಗೆ ಬಳಕೆಯಲ್ಲಿರುವ ಹಿಂದೀ ಭಾಷೆಯಾಗಲಿ ಸರಿಯಾಗಿ ಬರುತ್ತಿಲ್ಲವಾಗಿ ನಾನು—ಇಂಗ್ಲಿಷ್ ಬಲ್ಲ ಪ್ರವಾಸಿಕರು ತಿಳಿದುಕೊಳ್ಳಲೆಂಬ ಉದ್ದೇಶದಿಂದ— ಇಂಗ್ಲಿಷ್‌ನಲ್ಲಿಯೇ 'ನಾನು ಕೊನೆಯ ನಿಲ್ದಾಣಕ್ಕೆ ಇಳಿಯುವವನಿದ್ದೇನೆ!' ಎಂದು ಉತ್ತರಿಸಿದೆ, 'ಹನಾಲಾ ಮರಾಠೀ ಏತ ನೈ, ಗುಜರಾತೀ ಏತ ನೈ, ಕಾನಡೀ ಏತ, ಇಂಗ್ರೇಜೀ ಏತ' ಎಂದು ಇನ್ನಿಷ್ಟು ಬಿಚ್ಚಿ ಹೇಳಿದೆ. ಎದುರಿಗೆ ಇದ್ದ ಪ್ರವಾಸಿಕರು ಸಾಹಜಿಕವಾದ ನಗೆಯೊಂದನ್ನು ಬೀರಿದರು. ಅವರಲ್ಲಿಯೇ ಇಂಗ್ಲಿಷ್ ಬಲ್ಲ ಗೃಹಸ್ಥನೊಬ್ಬನು ನಾನು ಎಲ್ಲಿಯವನೆಂದು ಕೇಳಿಕೊಂಡು, ನಿಮಗೆ ಹಿಂದುಸ್ತಾನಿ ಬರುತ್ತಿರಲಿಕ್ಕೆಬೇಕೆಂದು ನನ್ನನ್ನು ಕೇಳಿದರು. "ಇತರರು ಮಾತನಾಡಿದ್ದು ನನಗೆ ತಿಳಿಯುತ್ತದೆ; ಆದರೆ ಮಾತನಾಡಲಿಕ್ಕೆ ಮಾತ್ರ ಬರುವುದಿಲ್ಲ"ಎಂದು ನಾನು ಹೇಳಿದೆ. ನನಗಿಂತಲೂ ಮೊದಲಿಗೆ ಇಳಿಯಬೇಕಾಗಿದ್ದ ಆ ಗೃಹಸ್ಥ, ನನ್ನ ಸಲುವಾಗಿಯೇ ನಾನಿಳಿಯುವ ಠಾಣದ ವರೆಗೆ ಬಂದು ನನ್ನನ್ನಿಳಿಸಿ, ಮತ್ತೆ ತನ್ನ ಠಾಣಕ್ಕೆ ತಿರುಗಿದ. ಮನದಲ್ಲಿಯೇ ಆತನ ಔದಾರ್ಯಕ್ಕೆ ಮೆಚ್ಚಿ ನಮ್ಮ ಬೀದಿಗೆ ನಡೆದನು.

× × × ×

ಭಡೋಚ
೧೪ನೆಯ ಅಕ್ಟೋಬರ್ ೪೯.
ಇರುಳು ೧೦ ಘ.

ಇಂದು ಮುಂಜಾನೆ ಸುರತದ ಸರಕಾರೀ ಪ್ರಾಯೋಗಿಕ ಕ್ಷೇತ್ರದಲ್ಲಿಯೇ ತಿರುಗಾಡಿದೆವು. ಹತ್ತಿ ಮತ್ತು ಜೋಳದ ಬೆಳೆಗಳಲ್ಲಿ ಆರ್ಥಿಕದೃಷ್ಟಿಯಿಂದ ಮಹತ್ತ್ವದುವಾದ ಜಾತಿಗಳನ್ನು ಸಂಶೋಧಿಸುವ ಕೆಲಸ ನಡೆಯಿಸಿದ್ದಾರೆ. ಹತ್ತಿ ಮತ್ತು ಜೋಳ ಈ ಬೆಳೆಗಳನ್ನು ಬೆಳೆಯುವ ವಿಧಾನಗಳಲ್ಲಿಯೂ ಪ್ರಯೋಗಗಳನ್ನು ನಡೆಯಿಸಿದ್ದಾರೆ. ಇವೆಲ್ಲ ವಿಷಯುಗಳನ್ನು ನಮಗೆ ವಿಸ್ತರಿಸಲಾಯಿತು.

ಮಧ್ಯಾಹ್ನದಲ್ಲಿ ಮತ್ತೆ ಸುರತ ಊರಿನಲ್ಲಿ ತಿರುಗಾಡುವ 'ಚಾನ್ಸ್' ಸಿಕ್ಕಿತು. ಊರು ಬಹಳ ದಟ್ಟವಾಗಿ ಹಬ್ಬಿದೆಯಲ್ಲದೆ, ಭವ್ಯವೂ ರಮಣೀಯವೂ ಆದ ಕಟ್ಟಡಗಳಿಂದ ಕೂಡಿದೆ. 'ಎಲ್ಲ ಕಟ್ಟಡಗಳ ಎದುರು— ಅವು ಸರಕಾರಿಯವಿರಲಿ, ವೈಯಕ್ತಿಕವಾದುವುಗಳಿರಲಿ— ಕಾಣುವುದು ಗುಜರಾತಿಯಲ್ಲಿ ಬರೆದ ಬೋರ್ಡುಗಳೇ. ಈ ನೋಟವು ನನಗೆ ಜಳಗಾಂವದ 'ಜಿಲ್ಲಾ ಸ್ಥಾನಿಕ ಸ್ವರಾಜ್ಯ ಸಂಸ್ಥೆ'ಯ ಮುಂದೆ ನಿಲ್ಲಿಸಿದ ಬೋರ್ಡಿನ ನೆನಪನ್ನು ತಂದುಕೊಟ್ಟಿತು. ಅಲ್ಲಿಯ ಬೋರ್ಡು ಬರಿಯ ಮರಾಠಿಯೊಂದರಲ್ಲಿಯೇ ಬರೆಯಲ್ಪಟ್ಟಿತ್ತು. ಸಾರ್ವಜನಿಕ ಸಂಸ್ಥೆಗಳು, ವಿವಿಧ ತರದ ಅಂಗಡಿಗಳು, ವಕೀಲರು ಮತ್ತು ವೈದ್ಯರ ಮನೆಗಳು ಇವುಗಳ ಮುಂದೆ ನೇತಾಡುವ ಬೋರ್ಡುಗಳ ಮೇಲಿಂದಲೇ ಗುಜರಾತಿಗಳ ಮಾತೃಭಾಷೆಯ ಮೇಲಿನ ಪ್ರೇಮ-ಅಭಿಮಾನಗಳ ಬೆಲೆ ಕಟ್ಟಬಹುದು. ಇಂತಹ ವಿಷಯಗಳಲ್ಲಿ ಮಹಾರಾಷ್ಟ್ರದವರು ಕನ್ನಡಿಗರಿಗಿಂತ ಎಷ್ಟೋ ಪಾಲು ಉತ್ತಮ. ಗುಜರಾತಿಗಳು ಮರಾಟಿಗರಿಗಿಂತಲೂ ಒಂದು ಗುಂಜಿ ತೂಕ ಹೆಚ್ಚೆಂದು ಹೇಳಿದರೆ ತಪ್ಪೇನಾಗಲಿಕ್ಕಿಲ್ಲ. ಇಲ್ಲಿಯ ಬಹುಸಂಖ್ಯಾಕ ಜನರಿಗೆ ಬರುವುದು ಗುಜರಾತಿಯೊಂದೇ. ಉಳಿದ ಯಾವ ಭಾಷೆಗಳಲ್ಲಿಯೂ ಅವರಿಗೆ ಆಸ್ಥೆ ಕಡಿಮೆ. ನಮ್ಮಲ್ಲಿಯವರ ಸ್ವಭಾವ ಇದಕ್ಕೆ ತಿರುವುಮುರುವು. ದೊಡ್ಡವರೆನ್ನಿಸಿಕೊಳ್ಳುವವರ ಬೋರ್ಡುಗಳೆಲ್ಲ ಇಂಗ್ಲಿಷಿನಲ್ಲಿ ಮತ್ತು ಕನ್ನಡದಲ್ಲಿ ಕೂಡಿಯೇ ಇರುತ್ತವೆ. ಇಂಗ್ಲಿಷಿನ ಅಕ್ಷರಗಳು ದೊಡ್ಡವಿದ್ದು ಅವು ಕನ್ನಡದ ಬರೆವಣಿಗೆಗಿಂತ ಹೆಚ್ಚು ಸ್ಥಳವನ್ನಾಕ್ರಮಿಸಿ, ಎದ್ದು ಕಾಣುವಂತಿರುತ್ತವೆ. ಬೋರ್ಡುಗಳ ಮೇಲಿನ ಬರೆವಣಿಗೆಯಲ್ಲಿ ಕನ್ನಡದ ಲಿಪಿಯನ್ನು ಕಂಸದಲ್ಲಿ ಹಾಕಿಸುವ ಮಹಾಶಯರೂ ಉಂಟೆಂದು ಹೇಳಿದರೆ, ನೀವು ನನ್ನ ಮೇಲೆ ರೇಗಲಿಕ್ಕಿಲ್ಲ. ಉತ್ತರ ಕರ್ನಾಟಕದಲ್ಲಿಯ ಬೋರ್ಡುಗಳ ಮೇಲೆ ಮರಾಟಿ, ದಕ್ಷಿಣ ಕರ್ನಾಟಕದಲ್ಲಿಯ ಬೋರ್ಡುಗಳ ಮೇಲೆ ತಮಿಳು, ತೆಲುಗು ಕಾಣುವುದೇನೂ ನಮಗೆ ಹೊಸ ಮಾತಲ್ಲ. ಕನ್ನಡಿಗರು ತನ್ನತನದ ಅಭಿಮಾನವನ್ನು ಬಿಟ್ಟಿರುವಲ್ಲಿ ಇದಕ್ಕಿಂತಲೂ ಹೆಚ್ಚಿನ ದೃಷ್ಟಾಂತಗಳನ್ನು ನಾನು ನಿಮಗೆ ಹೇಳಬಯಸಲಾ ?

ಇಲ್ಲಿ ಅರಿವೆಗಳ ವ್ಯಾಪಾರ ದೊಡ್ಡ ಪ್ರಮಾಣದ ಮೇಲೆ ನಡೆಯುತ್ತದೆ. ಠೋಕು ಮತ್ತು ಕಿರುಕುಳ ಎರಡೂ ವಿಧದ ಮಾರಾಟ ರೂಥಿಯಲ್ಲುಂಟು ಉಳಿದ ಸ್ಟೇಶನರಿ, ಪಾತ್ರೆ, ವಿಲಾಸವಸ್ತುಗಳಿಗೇನೂ ಕೊರತೆ ಇಲ್ಲ. ಮಿಠಾಯಿ ಅಂಗಡಿಗಳ ಪ್ರದರ್ಶನ ಜಳಗಾಂವ-ಕಲ್ಯಾಣಗಳಲ್ಲಿಗಿಂತಲೂ ಇಲ್ಲಿ ಹೆಚ್ಚು ಮಟ್ಟಿಗೆ ರಮ್ಯವಾಗಿದೆ. ಇಲ್ಲಿಯ ಮಿಠಾಯಿ ಅಂಗಡಿಗಳಲ್ಲಿ ದೊರೆಯುವ '**ಗಾರಿ**' ಮತ್ತು '**ಹಲ್ವಾ**' ತಿನಿಸುಗಳು ಬಹಳ ಪ್ರಸಿದ್ಧವಾಗಿವೆ. ಸುರತದ ಚಹದಂಗಡಿಗಳ ವೈಭವ ನಮ್ಮಲ್ಲಿರುವ ಚಹದಂಗಡಿಗಳ ಬೆಡಗು-ಬಿನ್ನಾಣಗಳ ಮುಂದೆ ಏನೂ ಅಲ್ಲ. ಚಹದಂಗಡಿಗಳಲ್ಲಿ ವಿಶೇಷವಾಗಿ ಬ್ರೆಡ್ ಬಿಸ್ಕೀಟುಗಳ ಹೊರತಾಗಿ ಮತ್ತೆ ಯಾವ ತಿನಿಸುಗಳೂ ಸಿಗುತ್ತಿರಲಿಲ್ಲ. ಇದರ ಕಾರಣ ನನಗೆ ಗೊತ್ತಿದ್ದ ಮಟ್ಟಿಗೆ ಎಂದರೆ—ಚಹದಂಗಡಿಗಳು ತಿನಿಸು-ಉಣಿಸುಗಳ ರುಚಿ-ರುಚಿಗಳಲ್ಲಿ, ಮಿಠಾಯಿ ಅಂಗಡಿಗಳನ್ನು ಸ್ಪರ್ಧಿಸಲು ಅಸಮರ್ಥವಾಗಿರಲಿಕ್ಕೆಬೇಕು.

ಇಲ್ಲಿ ಈಗ ಸೆಕೆ ಹೆಚ್ಚು. ವೈಶಾಖದ ಬಿಸಿಲಿನ ಶಾಖವು ಕೂಡ ನಮ್ಮಲ್ಲಿ ಇಷ್ಟೊಂದು ತೀವ್ರವಾಗಿರಲಾರದು. ನಾವೆಲ್ಲ ಬಿಸಿಲಿನಿಂದ ತೀರ ಬಳಲುತ್ತಿದ್ದೇವೆ. ಇದೇ ದಿನ ಸಂಜೆಯ ೬–೧೫ಕ್ಕೆ ಸುರತವನ್ನು ಬಿಟ್ಟು ಭಡೋಚಕ್ಕೆ ಬಂದೆವು.

ಕೊಲಂಬಿಯಾ ರೆಕಾರ್ಡ್ಸ ≡

ಶ್ರೀ. ಉಮರಜಿ

GE 8554 } ಯಾರಿಗೆ ಯಾರಿಲ್ಲ / ತನಗಿಲ್ಲದಾ ವಸ್ತು

ಉಮರಜಿ ಸೋನೂಬಾಯಿ ಮತ್ತು ಪಾರ್ಟಿ

GE 8491 ರಿಂದ 8493 } ಮಹಾತ್ಮಾ ಬಸವೇಶ್ವರ / ಭಾಗ ೧–೬.

GE 8455 ರಿಂದ 8457 } ಶರಣ ಬಸವ / ೬ ಭಾಗಗಳು

GE 8342 ರಿಂದ 8344 } ಅಕ್ಕಮಹಾದೇವಿ / ೬ ಭಾಗಗಳು

ಶ್ರೀ. ಸೋನುಬಾಯಿ ಹಾವೇರಿ

GE 8359 } ಸಖಿಬಾರೆ ಪೋಗಿ ತಾರೆ / ನಗೀಸವಾರಿ ಬಂದಿತು ಸ್ವಾರಿ

ಶ್ರೀ. ಸುಶೀಲಾ ಟೇಂಬೆ

GE 8564 } ಜಯಕರ್ನಾಟಕ / ಹಿಡಿ ಬಾವುಟವಾ

ಕರ್ನಾಟಕದ ಅಂಗಾಂಗಳು ಇಂದು ನಾಲ್ಕಾರು ದಿಕ್ಕಿನಲ್ಲಿ ಹರಿದು ಹೋಗಿದ್ದರೂ ಕನ್ನಡವೆಂಬುದೆಲ್ಲ ಎಂದಿಗೂ ಒಂದೇ ಎಂಬ ಶ್ರದ್ಧೆಯನ್ನು ಸಾರಿ ಹೇಳುವ ಹಾಡು ಇದು. ತಮ್ಮ ಮೋಹಕ ಸಂಗೀತದಿಂದ ಎಲ್ಲರಿಗೂ ಮೆಚ್ಚಿಕೆಯುವರಾಗಿರುವ ಶ್ರೀಮಂತಿ ಸುಶೀಲಾ ಟೇಂಬೆಯವರು ಸುಶ್ರಾವ್ಯವಾಗಿ ಹಾಡಿದ್ದಾರೆ. ಅವಶ್ಯವಾಗಿ ಈ ಮುದ್ರಿಕೆಯನ್ನು ಸಂಗ್ರಹಿಸಿರಿ.

GE 8394 } ಇದೇ ನಮ್ಮ ದೇವರ ಪೂಜೆ / ಇದು ಸುದರ್ಶನ

GE 8092 } ನೋಡೆ ಮಧು ವಸಂತವಿದು ಹಾ / ನಲಿದು ಬಾರೆ ಮುರಲಿ

ಶ್ರೀ. ಭಾಗವತ

GE 8409 } ಏರಿತು ಗಗನಕೆ ನಮ್ಮ ಧ್ವಜ / ಬಂತು ಬಂತು ಮಾಗಿ ಭಾವೆ

ಕೊಲಂಬಿಯಾ ಗ್ರಾಫೋಫೋನ ಕಂ. ಲಿ.

ಕಲಕತ್ತಾ ▲ ಮುಂಬಯಿ ▲ ಮದ್ರಾಸ ▲ ದಿಲ್ಲಿ ▲ ಲಾಹೋರ

ISSUED BY:-
COLUMBIA GRAPHOPHONE Co. LTD.
CALCUTTA – BOMBAY – MADRAS – DELHI – LAHORE

ಬಡೋದೆ,

೧೫ ನೆಯ ಅಕ್ಟೋಬರ್ ೪೯; ಸಂಜೆ ೧೦-೩೦

ಈದಿನ ಮುಂಜಾನೆ, ಭಡೋಚದಿಂದ ಒಂದು ಮೈಲಿನ ಮೇಲಿರುವ "ಕಾಟನ್ ಬ್ರೀಡರ್" ಕಚೇರಿಗೆ ಹೋಗಿದ್ದೆವು. ಹತ್ತಿಯ ಬೆಳೆಯಲ್ಲಿ ಆರ್ಥಿಕ ದೃಷ್ಟಿಯಿಂದ ಉತ್ತಮವಾದ ದೇಶೀಯ ಜಾತಿಗಳನ್ನು ತೆಗೆಯುವುದೇ ಇಲ್ಲಿಯ ಪ್ರಯೋಗಕ್ಷೇತ್ರದವರ ಮುಖ್ಯ ಗುರಿ. ಕ್ಷೇತ್ರದ ಮೇಲೆ ಬೆಳೆದು ನಿಂತ ಹತ್ತಿಯ ಬೆಳೆಯ ನೋಟವು ನಿಲುವಿನ ಏಕರೂಪತೆಯಿಂದ ಬಹು ಪ್ರೇಕ್ಷಣೀಯವಾಗಿದ್ದಿತು.

ಮಧ್ಯಾಹ್ನ ಭಡೋಚದ ನಮ್ಮ ಬೀಡಿನಲ್ಲಿ ಎಲ್ಲರೂ ಕೂಡಿದ್ದೆವು. ನಮ್ಮ ಟೂರಿಂಗ್ ಕ್ಲಬ್ಬಿನ ಕಾರ್ಯದರ್ಶಿಗಳು, ಕ್ಲಬ್ಬಿನ ಸದಸ್ಯರ ಅಸಹಕಾರ ವರ್ತನೆಯ ಬಗ್ಗೆ ವಿಷಾದ ವ್ಯಕ್ತಮಾಡಿ, ತಾವಿಬ್ಬರೂ ರಾಜೀನಾಮೆ ಕೊಡುವುದಾಗಿ ಮುರುವತ್ತಿಲ್ಲದೆ, ಎಲ್ಲರ ಪ್ರತ್ಯಕ್ಷದಲ್ಲಿಯೂ ಸಾರಿದರು. ಕಾರ್ಯದರ್ಶಿತ್ವವನ್ನು ತಾವು ವಹಿಸುತ್ತೇವೆಂದು ಆಹ್ವಾನ ಕೊಡುವಷ್ಟು ಎದೆಗಾರಿಕೆ ಉಳಿದ ಯಾರಿಗೂ ಬರಲಿಲ್ಲ. ನಿಜವಾಗಿಯೂ ಕಾರ್ಯದರ್ಶಿಗಳ ಕಾರ್ಯ ನಿರ್ವಹಣದ ಕೆಲಸವು ಬಹಳ ಸಮಾಧಾನಕಾರಕವಿದೆ. ಹೀಗಿದ್ದರೂ ಅಲ್ಲಲ್ಲಿ ಲೋಪ ದೋಷಗಳುಂಟಾಗುವುದೇನೂ ಸೋಜಿಗದ ಮಾತಲ್ಲ. ಅತೀವ ಕಠಿಣವಾದ ಪರಿಸ್ಥಿತಿಯನ್ನು ಅವರು ಎದುರಿಸುತ್ತಿದ್ದಾರೆ. ಅವರ ಕಾರ್ಯ ಸ್ತುತ್ಯವಾಗಿದೆ. ಅಂತೆಯೇ ಅವರು ಹಾರಿಸಿದ ಗುಂಡು ಠುಸಿಗುಂಡಾಗಿ ಪರಿಣಮಿಸಿತು. ಅವರ ಕಾರ್ಯದರ್ಶಿತ್ವವು ಎಲ್ಲರ ಆಗ್ರಹದ ಮೇಲೆ ಮತ್ತೆ ಮುಂದುವರಿಯಿತು. ಎಲ್ಲರ ಮನೆಯ ದೋಸೆಗಳಿಗೂ ತೂತು ಉಂಟೇ ಉಂಟು. ಅಡಕಲಿಗೆ ಏರಿದ ಮಡಕೆಗಳು ಒಂದಕ್ಕೊಂದು ತಾಕಲಾಡುವುದೂ ಸಹಜವಾದುದು.

ಗುಜರಾತಿನಲ್ಲಿಯ ನಗರಗಳಲ್ಲಿ ನಾವು ಕಾಣುವುದು ಎರಡೇ ವರ್ಗಗಳಿಗೆ ಸಂಬಂಧಿಸಿದ ಜನರನ್ನು. ಮೊದಲನೆಯವರು ಕುಬೇರನ ಮಕ್ಕಳು; ಎರಡನೆಯವರು ದರಿದ್ರ-ನಾರಾಯಣನ ಬಂಧುಗಳು. ಇವೆರಡಕ್ಕೂ ನಡುವಿನ ವರ್ಗದ ಜನರನ್ನು ಇಲ್ಲಿ ಕಾಣುವುದು ವಿರಳ. ಕೆಳವರ್ಗದ ಗಂಡುಸರು ಮತ್ತು ಹೆಂಗುಸರು ಕಷ್ಟಸಹಿಷ್ಣುಗಳಾಗಿದ್ದಾರೆ. ಹೆಂಗುಸರು "ಹಮಾಲಿ" ಕೆಲಸಮಾಡುವುದನ್ನು ಕೂಡ ಇಲ್ಲಿ ಕಾಣಬಹುದು. ಯಾವುದೇ ದೈಹಿಕ ಶ್ರಮಕ್ಕೂ ಈ ದೃಢಾಂಗನೆಯರು ಹಿಂಜರಿಯಲಾರರು. ತಂಬಾಕು ಸೇದುವುದು ಇಲ್ಲಿಯ ಕೆಳವರ್ಗದ ಹೆಂಗಳೆಯರಿಗೆ ಅಂಟಿಕೊಂಡ ಸರ್ವಸಾಮಾನ್ಯ ಚಟಗಳಲ್ಲಿ ಒಂದು. ಸುರತದಲ್ಲಿಯೂ ಈ ಮಾತು ನಮ್ಮ ನಿದರ್ಶನಕ್ಕೆ ಬಂದಿತ್ತು. ಕೆಲಸಮಾಡುವಾಗ, ಬೀದಿಗಳಲ್ಲಿ ಹಾಯ್ದಾಡುವಾಗ, ಇಲ್ಲಿಯ ಹೆಣ್ಣುಮಕ್ಕಳು ತಂಬಾಕು ಸೇದುತ್ತಿರುತ್ತಾರೆ. ಎಲ್ಲರೂ ಚಿಲಿಮೆಗಳನ್ನೂ ಪುಡಿಮಾಡಿದ ತಂಬಾಕನ್ನೂ ಹತ್ತಿರ ಇಟ್ಟುಕೊಂಡಿರುತ್ತಾರೆ.

ಭಡೋಚ್ ನಗರವು ನರ್ಮದೆಯ ದಂಡೆಗುಂಟ ಹಬ್ಬಿದೆ. ಸುರತದಿಂದ ಭಡೋಚಕ್ಕೆ ಬರುವಾಗ ನರ್ಮದೆಗೆ ಹಾಕಿದ ಸೇತುವೆಯನ್ನು ದಾಟಬೇಕಾಗುತ್ತದೆ. ಸೇತುವೆಯು ಅತೀವ ಭವ್ಯವಾಗಿದೆ. ನಗರದಗುಂಟ ನರ್ಮದೆಯ ದಂಡೆಯಲ್ಲಿ ಕೊಳಚೆ ಇದೆ. ನದಿಯ ಪೂರದ ಪರಿಣಾಮವಾಗಿ, ಜಿನುಗು ಮಣ್ಣು ಮತ್ತು ಸಾವಯವ ವಸ್ತು (organic matter) ಗಳು ತಳಕ್ಕೆ ಕುಳಿತು ಹೀಗೆ ಕೊಳಚೆಗಟ್ಟಿದೆ. ಇಲ್ಲಿ ಬೆಣಚುಗಳನ್ನಾಗಲಿ ಸವೆದ ಕಲ್ಲು ಹರಳುಗಳನ್ನಾಗಲಿ ಕಾಣುವುದು ಸಾಧ್ಯವಿಲ್ಲ.

ಭಡೋಚ ನಗರವು ಬಹಳ ಇಕ್ಕಟ್ಟಾಗಿ ಸಂದುಗೊಂದುಗಳಿಂದ ಕೂಡಿದ ಮುಡಿಕೆಯಂತಿದೆ. ಆದರೂ ನಗರವು ದಟ್ಟವಾಗಿ ಹಬ್ಬಿದೆ. ವಿಸ್ತಾರವಾದ ಬೀದಿಗಳು ಕಡಿಮೆ. ಇದ್ದ ಬೀದಿಗಳಲ್ಲಿಯೇ ಸುಲಕ್ಷಣವಾದ ಭವ್ಯ ಇಮಾರತುಗಳಿವೆ. ನಾಲ್ಕು-ಐದು ಅಂತಸ್ತುಗಳ ಮನೆಗಳನ್ನು ಕಾಣಬಹುದು. ಸುರತದಲ್ಲಿಯಂತೆ ಇಲ್ಲಿಯೂ ಕುಂಕುಮ, ದಶಾಂಗ, ಗುಲಾಲ್ ಮತ್ತು ರಂಗವಲ್ಲಿಗಳ ಉಪಯೋಗ ಹೆಚ್ಚು. ಅನೇಕ ತರದ ಬಣ್ಣಗಳ ರಂಗವಲ್ಲಿಯ ಹಿಟ್ಟುಗಳನ್ನು ಬೇರೆ ಬೇರೆ ಕಬ್ಬಿಣ, ಹಿತ್ತಾಳೆಗಳ ಬುಟ್ಟಿಗಳಲ್ಲಿ ತುಂಬಿ ಬಯಲಂಗಡಿಗಳಲ್ಲಿ ಮಾರಲಿಕ್ಕೆ ಇಟ್ಟಿರುತ್ತಾರೆ.

ಇಲ್ಲಿ ಕೂಡ ಸೆಕೆ ಅತಿಶಯ. ನಮ್ಮ ಮಂಡಳಿಯವರಿಗೆ ಅದನ್ನು ತಾಳಲಿಕ್ಕಾಗದೆ ನೆರಳನ್ನು ಆಶ್ರಯಿಸಿ ಗಾಳಿ ಹಾಕಿಕೊಳ್ಳುತ್ತಾರೆ. ಭಡೋಚದಿಂದ ಸಂಜೆಯ ೭ ಘಂಟೆಗೆ ಹೊರಟ ಈ ಭಾಗದ ಬಿ. ಬಿ. ಸಿ. ಆಯ್. ಗಾಡಿಗಳೂ ನಮ್ಮ ಎಮ್. ಎಸ್. ಎಮ್. ಗಾಡಿಗಳೂ ಒಂದೇ ಕುಲಕ್ಕೆ ಸೇರಿದುವುಗಳು. ವೇಳೆಯ ಅನಿಯಮಿತತನದಲ್ಲಿ ಒಂದನ್ನೊಂದು ಧಾರಾಳವಾಗಿ ಅನುಕರಿಸುತ್ತವೆ. ಬಿ. ಬಿ. ಸಿ. ಆಯ್. ಗಾಡಿಗಳ ವೇಗವು ಮಾತ್ರ ಎಮ್. ಎಸ್. ಎಮ್. ಗಾಡಿಗಳಿಗಿಂತ ಹೆಚ್ಚಿರುತ್ತದೆಂದು ಧೈರ್ಯವಾಗಿ ಹೇಳಬಹುದು. ಸರ್ವಗುಣಸಂಪನ್ನ ಶಿರೋಮಣಿಗಳೆಂದರೆ ಜಿ. ಆಯ್. ಪಿ. ಗಾಡಿಗಳೇ. ಎರಡು ತಾಸುಗಳಲ್ಲಿ ಮುಗಿಯಬೇಕಾಗಿದ್ದ ನಮ್ಮ ಭಡೋಚ-ಬಡೋದೆಯ ಪ್ರವಾಸಕ್ಕಾಗಿ ಸುಮಾರು ಮೂರುವರೆ ತಾಸುಗಳನ್ನು ಬೇಸರದಿಂದ ಕಳೆಯಬೇಕಾಗಿ ಬಂದದ್ದೇ ಇದಕ್ಕೆ ಸಾಕ್ಷಿ. ಇಲ್ಲಿ (ಬಡೋದೆಯಲ್ಲಿ) ನಮ್ಮ ಬೀಡಾರವಿರುವುದು ಬಡೋದೆಯ ಒಕ್ಕಲುತನದ ಶಾಲೆಯಲ್ಲಿ.

ಸಪ್ತರಂಗ

(ವ್ಯಕ್ತಿಪರಿಚಯಗಳ ಸಂಕಲನ)

ಲೇಖಕರು: ಎನ್. ಎಸ್. ಗದಗಕರ ಬಿ. ಎ.

ಅನಿರುದ್ಧರು ಮುನ್ನುಡಿ ಬರೆದಿದ್ದಾರೆ.

ಬೆಲೆ: ೦-೧೨-೦.

ಮುಖ್ಯ ಮಾರಾಟಗಾರರು:

ಮನೋಹರ ಗ್ರಂಥಭಾಂಡಾರ, ಧಾರವಾಡ.

ಬೆಳವಡಿಯ ಮಲ್ಲಮ್ಮ

(ಆಕಾಶ ನಾಟಿಕಾ)

' ಆನಂದಕಂದ '

★

ಚಾರಣಗೀತ

ಧನ್ಯೆ ಧನ್ಯೆ, ಮಲ್ಲಮ್ಮ ರಾಣಿ, ಬೆಳವಡಿಯ ಭಾಗ್ಯದೇವಿ !
ಧನ್ಯೆ, ಕನ್ನಡದ ಶಕ್ತಿಪತಾಕೆಯ ಎತ್ತಿಹಿಡಿದ ತಾಯಿ !

ಪತಿವ್ರತೆಯರೊಳು ಪಾರ್ವತಿಯೌ ನೀ, ಕ್ರೋಧದಲ್ಲಿ ಕಾಲಿ—
ಸಮರದಲ್ಲಿ ದುರ್ಗಾವತಾರಿ, ರತಿದೇವಿ ಚೆಲ್ವಿಕೆಯಲಿ .... ॥ ೧ ॥

ಪ್ರಮೀಲೆಯೇ ಸರಿ ರಾಜ್ಯತಂತ್ರದಲಿ, ಗಾರ್ಗಿ ಜ್ಞಾನದಲ್ಲಿ—
ಕಲ್ಪಲತೆಗೆ ಸಮ ದಾನದಲ್ಲಿ, ಶಾರದೆಯು ಕಲೆಗಳಲ್ಲಿ .... ॥ ೨ ॥

ನಿನ್ನ ವೀರಕಥೆ ಕನ್ನಡಂಗೆ ಚೈತನ್ಯವೂಡುತಿಹುದೆ—
ನಿನ್ನ ಕೀರ್ತಿಪ್ರಭೆ ನಮ್ಮ ಮನಕೆ ಹೊಸ ಕಣ್ಣ ನೀಡುತಿಹುದೇ ! ॥ ೩ ॥

ಧನ್ಯೆ ಧನ್ಯೆ, ಮಲ್ಲಮ್ಮರಾಣಿ ಬೆಳವಡಿಯ ಭಾಗ್ಯದೇವೀ !
ಧನ್ಯೆ, ಕನ್ನಡದ ಶಕ್ತಿಪತಾಕೆಯ ಎತ್ತಿಹಿಡಿದ ತಾಯಿ !

೧

ನಿವೇದಕ:

ಕ್ರಿಸ್ತಶಕದ ಹದಿನೇಳನೆಯ ಶತಮಾನದ ಉತ್ತರಾರ್ಧದ ಪ್ರಾರಂಭ. ಆಗ ಉತ್ತರ ಕರ್ನಾಟಕದಲ್ಲಿ, ೩೬೦ ಹಳ್ಳಿಗಳನ್ನೊಳಗೊಂಡ ಬೆಳವಡಿಯ ನಾಡು, ಚಿಕ್ಕದೊಂದು ಸ್ವತಂತ್ರ ರಾಜ್ಯವಾಗಿ ಹೆಸರು ಪಡೆದಿತ್ತು. ಈ ನಾಡಿನ ದೊರೆ ಈಶ್ವರಪ್ರಭು. ಇತಿಹಾಸದಲ್ಲಿ ವೀರಸತಿಯೆಂದು ಕೀರ್ತಿ ಪಡೆದಿರುವ ಮಲ್ಲಮ್ಮ-ರಾಣಿ, ಆತನ ಪಟ್ಟದರಸಿ. ಕ್ರಿ. ಶ. ೧೬೭೮ ನೆಯ ವರ್ಷದಲ್ಲಿ ಒಂದು ಸಾಯಂಕಾಲ— ಅರಮನೆಯ ಕರುಮಾಡಿನಲ್ಲಿ ಕುಳಿತು-ಕೊಂಡು ಈಶ್ವರಪ್ರಭು, ಮಲ್ಲಮ್ಮ ಮಾತನಾಡುತ್ತಲಿದ್ದಾರೆ :

* * * *

ಈಶಪ್ರಭು :— ಮಲ್ಲಾಜಿ, ನಿನ್ನ ಕಾಲಗುಣವೆನ್ನಬೇಕೋ, ಏನು ದೈವಕೃಪೆಯೆಂದು ಭಾವಿಸಬೇಕೋ ? ನಮ್ಮ ಬೆಳವಡಿಯ ರಾಜ್ಯ ಚಿಕ್ಕದಾದರೂ, ಸಂಪೂರ್ಣ ಸ್ವತಂತ್ರವಾಗಿದೆ. ಯಾವ ಸಾಮ್ರಾಜ್ಯದ ಆಧಿಪತ್ಯವೂ ನಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿ ಪಡಿಸು-ವಂತಿಲ್ಲ.

ಮಲ್ಲಮ್ಮ :— ಪ್ರಭು, ವಿಜಯನಗರದ ಕನ್ನಡ ಸಾಮ್ರಾಜ್ಯ ಹಾಳಾಪದ್ದೇ ತಡ; ನಮ್ಮ ಎಲ್ಲ ಮಾಂಡಲಿಕ-ಮನ್ನೆಯರೂ ಪಾಳೆಯ-ಪಟ್ಟೆಗಾರರೂ ಸ್ವಾಭಿಮಾನ ಶೂನ್ಯರಾಗಿ, ಹೇಡಿಗಳಂತೆ ಅನ್ಯರ ಆಧಿಪತ್ಯವನ್ನು ಒಪ್ಪಿಕೊಂಡುಬಿಟ್ಟರು. ಒಬ್ಬರಿಗೂ ದೇಶದ ಅಭಿಮಾನವಿಲ್ಲ; ಧರ್ಮದ ನಿಷ್ಠೆಯಿಲ್ಲ. ಕುಲಪರಂಪರೆಯ ಹೇವವಿಲ್ಲ; ಕುಟುಂಬದ ಗೌರವವಿಲ್ಲ! ಶುದ್ಧ ರಣಹೇಡಿಗಳು! ಕ್ಷತ್ರಿಯಕುಲದಲ್ಲಿ ಯಾತಕ್ಕೆ ಹುಟ್ಟಿ ಬಂದಿರು ವರೋ ಏನೋ!

ಈಶಪ್ರಭು :— ಹೌದು, ನಿನ್ನ ಮಾತು ನಿಜ ರಾಣೀ! ನಮ್ಮ ನಾಡಿಗೆ ಏನು ಕೆಡುಗಾಲ ಬಂದಿದೆಯೊ !.... ಈಗ ನಮ್ಮ ರಟ್ಟರಾಜ್ಯದ ಹಣೆಬರೆಹವನ್ನು ನೋಡುವುದಿಲ್ಲವೆ ? ಅಂದಿನ ನಮ್ಮ ಪೂರ್ವಜರು ರಟ್ಟ ಸಾಮ್ರಾಜ್ಯವನ್ನು ಕಟ್ಟಿ, ವಿಸ್ತಾರವಾಗಿ ಬೆಳಸಿ, ವೈಭವದಿಂದ ಆಳುತ್ತಿದ್ದರು. ಇಂದಿನ ನಮ್ಮ ಈ ಚಿಕ್ಕ ರಾಜ್ಯವನ್ನು ಲಕ್ಷ್ಯಿಸಿದರೆ, ಹಿಂದಿನ ರಟ್ಟ ಸಾಮ್ರಾಜ್ಯದ ಆನೆಯ ಮುಂದೆ.... ಇದೊಂದು ಇಲಿಯೆಂದು ಹೇಳಬಹುದು.

ಮಲ್ಲಮ್ಮ :— ನಿಜವಾದ ವೀರರೂ ಕ್ಷತ್ರಿಯೋಚಿತ ಮಹತ್ತ್ವಾ-ಕಾಂಕ್ಷಿಗಳೂ ಆದ ಅಂದಿನ ಹಿರಿಯರು, ಹೋರಾಡಿ ನೆತ್ತರು ಸುರಿಸಿ, ಸಾಮ್ರಾಜ್ಯವನ್ನು ಕಟ್ಟಿದರು. ಸ್ವಾರ್ಥಿಗಳೂ ಭೋಗ-ಲಾಲಸರೂ ಆಗಿ, ಆದೇವಂಶದ ಮುಂದಿನ ಸಂತಾನದವರು ಸಾಮ್ರಾಜ್ಯದ ಒಂದೊಂದೇ ಭಾಗವನ್ನು ಕಳೆದುಕೊಂಡರು. ರಟ್ಟ ಸಾಮ್ರಾಜ್ಯದ ಆನೆಯೆಲ್ಲ ಅಳಿದು ಹೋಗಿ, ನಮಗೆ ಈ ಬೆಳವಡಿ ರಾಜ್ಯದ ಬಾಲ ಮಾತ್ರ ಕೈಯಲ್ಲಿ ಉಳಿದಂತಾಗಿದೆ. ಎಲ್ಲಿ ಹೋಗಿದೆಯೋ

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ-ಬಡಬಗ್ಗರ-ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಹೋಂಟಾನಂತರಿ! ಇಲ್ಲೇ ನಮ್ಮ ಮೂಡಗಡೀ ದಾಟಿ, ಯಾದ-ವಾಡದಾಗ ಬಂದು, ದಂಡು-ದಳಾ ಸಹಿತ ಬೀಡ ಬಿಟ್ಟಾನರಿ ಬುದ್ಧಿ!

ಮುಲ್ಲಮ್ಮ :— ಏನು ?....ಶಿವಾಜಿ ಮಹಾರಾಜ ?

ಈಶಪ್ರಭು :— ಏನು ? ಶಿವಾಜೀ ಮಹಾರಾಜ ಯಾದವಾಡದಲ್ಲಿ ಬೀಡು ಬಿಟ್ಟಿದ್ದಾನೆ ?

ದೇವಣ್ಣ :— ಹೌದರಿ ಬುದ್ಧಿ!

ಮುಲ್ಲಮ್ಮ :— ನಿಜವಾದ ಭಾರತವೀರ ಶಿವಾಜಿ! ಶೂನ್ಯದಲ್ಲಿ ಸಾಮ್ರಾಜ್ಯ ಸ್ಥಾಪಿಸಿದ ವಿಭೂತಿಪುರುಷ! ಎಂಟೆದೆಯ ಬಂಟ! ಅಭಿಮಾನದ ಮೂರ್ತಿ! ಮಹಾರಾಷ್ಟ್ರದ ಭಾಗ್ಯವಿಧಾತ!

ಈಶಪ್ರಭು :— ಬಲಿಷ್ಠ ಶತ್ರುವಿನೊಂದಿಗೂ, ವಿರೋಧ ಪರಿಸ್ಥಿತಿಯೊಂದಿಗೂ ಹೋರಾಡಿ, ಯಶಸ್ಸನ್ನು ಪಡೆದ ವಿಜಯವೀರನಾತ! ಇನ್ನೊಂದು ಮಾತು ರಾಣೀ! ಆತನ ಶತ್ರುವೆಂದರೆ ನಮ್ಮ ಶತ್ರು; ನಮ್ಮ ಶತ್ರುವೆಂದರೆ ಆತನ ಶತ್ರು!

ಮುಲ್ಲಮ್ಮ :— ಹಾಗಾದರೆ, ಶಿವಾಜೀರಾಜ ನಮ್ಮ ಮಿತ್ರನೇ ಸರಿ! ಆ ವೀರಶ್ರೇಷ್ಠನನ್ನು ನಮ್ಮ ರಾಜಧಾನಿಗೆ ಕರೆದು ಸ್ವಾಗತಿಸೋಣ! ಆದರದ ಆತಿಥ್ಯ ಸಲ್ಲಿಸೋಣ! ಆ ಸ್ವಾತಂತ್ರ್ಯವೀರನ ಸ್ನೇಹದೃಷ್ಟಿ, ನಮ್ಮ ಭೂಷಣ ಕುಮಾರನಿಗೆ ಪೌಷ್ಟಿಕವಾಗಿ ಪರಿಣಮಿಸಲಿ! ಆ ಸತ್ತ್ವಶಾಲಿಯ ಶುಭಾಶೀರ್ವಾದ, ನಮ್ಮ ಬಾಲರಾಜನಿಗೆ ವೀರರಕ್ಷೆಯಾದೀತು!

ಈಶಪ್ರಭು :— ನಿನ್ನ ಮಾತು ನಿಜ ಮಲ್ಲಾಜೀ! ಪವಾಡದಂತಹ ಆತನ ವೀರಕಾರ್ಯಗಳನ್ನು ಕೇಳಿ-ಕೇಳಿದಾಗಲೆಲ್ಲ ಅವನನ್ನು ಕಂಡು ಸ್ನೇಹ ಬೆಳೆಯಿಸಬೇಕೆಂಬ ಬಯಕೆ ನನ್ನಲ್ಲಿ ತಲೆದೋರುತ್ತಿತ್ತು! ಆ ಬಲುದಿನದ ಬಯಕೆ ಪೂರ್ಣವಾಗುವ ಸುಯೋಗ ಇಂದು ತಾನಾಗಿಯೆ ಒದಗಿಬಂದಿದೆ. ಔತಣದ ರಾಯಸ ಬರೆಯಿಸಿ, ನಾಳೆಯ ದಿನವೇ ಹರಿಕಾರರನ್ನು ಆತನ ಕಡೆಗೆ ಕಳುಹುತ್ತೇನೆ!

ಮುಲ್ಲಮ್ಮ :— ಆನಂದವು ಆನಂದವು! ವೀರವಿಭೂತಿ ಮನೆಗೆ ಬರುವುದೆಂದರೆ—ಅದೇ ಮಾನವಮಿ; ಅದೇ ದೀವಳಿಗೆ! ಸ್ವಾಗತ ಸಮಾರಂಭ, ಆ ಪುರುಷಸಿಂಹನಿಗೆ ತಕ್ಕ ರೀತಿಯಲ್ಲಿ ನಡೆಯಲಿ!

(ದೂರದಲ್ಲಿ ನಾಯಿಗಳ ಬೊಗಳಿಕೆ ಕೇಳುವುದು. ಸಮೀಪದ ಮರದಲ್ಲಿ ಕುಳಿತು ಹಾಲಕ್ಕಿಗಳು ಕಿಲಬಿಲಿಸುತ್ತಿರುವುವು. ನಾಗಭೂಷಣನು ಅಳುವ ಶಬ್ದ ಕೇಳುವುದು!)

ಮುಲ್ಲಮ್ಮ :— ಇದೇನಿದು ? ಎಂದೂ ಇಲ್ಲದೆ ನಾಗಭೂಷಣ ಇಂದೇಕೆ ಅಳಲುತೊಡಗಿದ್ದಾನೆ! ದೊರೆಗಳು ಈಗ ಮುಂದಿನ ರಾಜಕಾರ್ಯಕ್ಕೆ ತೆರಳಬಹುದು. ನಾನು ಕುಮಾರನನ್ನು ಸಮಾಧಾನಪಡಿಸಲು ಹೋಗುತ್ತೇನೆ.

೨

ನಿವೇದಕ :

ಮರುದಿನ ಬೆಳಗಿನ ಎರಡು ಗಳಿಗೆ ಕಳೆದುವು. ರಾಜಾಜ್ಞೆಯ ಹಂಗುರಕ್ಕೆ ಸರಿಯಾಗಿ ಬೆಳವಡಿಯ ನಗರದಲ್ಲಿ, ಶಿವಾಜೀರಾಜನ ಸ್ವಾಗತದ ಸಿದ್ಧತೆ ನಡೆದಿದೆ. ಬೀದಿ-ಬೀದಿಗೆ ಗುಡಿ-ತೋರಣಗಳನ್ನು ಕಟ್ಟುತ್ತಲಿದ್ದಾರೆ. ಕೋಟೆ-ಅರಮನೆಗಳ ಹೆಬ್ಬಾಗಿಲ ಮೇಲಿನ ನಗಾರ್‌ಖಾನೆಯಲ್ಲಿ, ಭೇರಿ-ದುಂದುಭಿಗಳ ಉತ್ಸಾಹವಾದನ ನಡೆದಿದೆ. ಊರ ಜನರೆಲ್ಲ ಶಿವಛತ್ರಪತಿಯನ್ನು ಕಾಣುವ ಕುತೂಹಲದಿಂದ ಕೂಡಿದವರಾಗಿ, ಎಲ್ಲ ಕೆಲಸ-ಕಾರ್ಯಗಳನ್ನು ಬಿಟ್ಟು, ಉಲ್ಲಾಸದಿಂದ ತಿರುಗುತ್ತ, ಅಲ್ಲಲ್ಲಿ ಗುಂಪುಗೂಡಿ ಮಾತನಾಡುತ್ತಲಿದ್ದಾರೆ. ಅರಮನೆಯ ಮೊಗಸಾಲೆಯ ಆಸನದಲ್ಲಿ ಈಶ್ವರಪ್ರಭು ಕುಳಿತಿದ್ದಾನೆ. ಬಳಿಯಲ್ಲಿ ನಿಂತುಕೊಂಡ ಸೇನಾಪತಿ ಶಿವಪ್ಪನಾಯಕ, ಬಿನ್ನಹಧ್ವನಿಯಲ್ಲಿ ಮಾತನಾಡುತ್ತಿದ್ದಾನೆ. ಅದೇನೆಂಬುದನ್ನು ಕೇಳಬೇಕಲ್ಲವೇ ನೀವು ?

* *

ಶಿವಪ್ಪ :— ಮಹಾರಾಜ, ಔತಣದ ರಾಯಸದೊಂದಿಗೆ ಬೆಳಗಿನಲ್ಲಿಯೆ ಹರಿಕಾರನನ್ನು ಕಳುಹಿ ಆಯಿತು. ನಮ್ಮ ಔತಣಕ್ಕೆ ಮನ್ನಣೆ ಕೊಡಬಹುದಲ್ಲವೇ ಶಿವಾಜಿ ಮಹಾರಾಜರು ?

ಈಶಪ್ರಭು :— ನಿಮಗೆ ಸಂಶಯವೇಕೆ ನಾಯಕರೇ! ಶಿವಾಜಿಯು ವಿಜಾಪುರದ ಬಾದಶಹರ ಕಡುವೈರಿ! ನಮ್ಮ ಬೆಳವಡಿಯ

ವೀರಕುಲವೂ ವಿಜಾಪುರದ ಸೈನ್ಯವನ್ನು ಎದುರಿಸಿ ಹುಡಿಗೂಡಿಸಿದ **ವರ್ತಮಾನ, ಶಿವಾಜಿಗೆ ಗೊತ್ತಿರಲೇ ಬೇಕು.** ಚಿಕ್ಕದಾದರೂ ನಮ್ಮದೂ ಸ್ವತಂತ್ರ ಹಿಂದೂ ರಾಜ್ಯ! ಶಿವಾಜಿಯು ಗುರಿಯೂ ಹಿಂದೂ ಸಾಮ್ರಾಜ್ಯವನ್ನು ಕಟ್ಟಿ, ಬೆಳೆಸುವುದಿದೆ. ಹೀಗಿರುವಾಗ, ನಮ್ಮ ಪ್ರೀತಿಯ ಕರೆಯನ್ನು ಆತ ಮನ್ನಿಸದೆ ಇರುತ್ತಾನೆಯೆ?

ಶಿವಪ್ಪ :— ಮನ್ನಿಸಿದರೆ ಇಬ್ಬರಿಗೂ ಒಳ್ಳೆಯದೆ! ಬೆಂಕಿ-ಗಾಳಿಗಳಲ್ಲಿ ಸಹಕಾರ ಬೆಳೆದಂತಾಗುತ್ತದೆ. ಮಹಾರಾಷ್ಟ್ರವನ್ನು ಸಂಘಟಿಸುವ ಕಾರ್ಯದಲ್ಲಿ ಆತನಿಗೆ ನಮ್ಮಿಂದ ನೆರವು ದೊರೆತೀತು! ಕರ್ನಾಟಕವನ್ನು ಸಂಘಟಿಸಬೇಕೆಂಬ ಸನ್ನಿಧಿಯ ಆದರ್ಶದ ಸಿದ್ಧಿಗೆ ಆವನಿಂದ ನಮಗೆ ನೆರವು ಸಿಕ್ಕಬಹುದು!

ಈಶ :— ಇದರ ಕಲ್ಪನೆ ಆ ಮಹಾಕಾರ್ಯ ಸಾಧಕನಿಗೆ ಇದ್ದೇ ಇದೆ; ಎಂದೇ ಆತ, ನಮ್ಮ ಸ್ನೇಹದ ಆಮಂತ್ರಣವನ್ನು ಒಪ್ಪಿಕೊಳ್ಳುವುದರಲ್ಲಿ ಸಂಶಯಪಡುವ ಕಾರಣವೇ ಇಲ್ಲ! ಬೇಗನೆ ಆತನಿಂದ ಒಪ್ಪಿಗೆಯ ಸಂದೇಶ ಬಂದೇ ಬರುವುದು, ನೋಡುವಿರಂತೆ!

ಶಿವಪ್ಪ :— ಸರಿ, ಒಳ್ಳೇಯದೇ ಆಯಿತು. ನಾನಂತೂ ಆ ಛತ್ರಪತಿಯ ಅಂತಸ್ತಿಗೆ ತಕ್ಕಂತೆ ಸ್ವಾಗತದ ಸಿದ್ಧತೆಯನ್ನು **ಮಾಡಲು ಎಲ್ಲರಿಗೂ ತಿಳಿಸಿದ್ದೇನೆ.**

(ಅರಮನೆಯ ಹೊರಬೀದಿಯಲ್ಲಿ ಜನರ ಗದ್ದಲ-ಗಲಾಟೆ ಕೇಳು ವುದು. 'ತುರುಗಳ ಹಿಂಡು' 'ಕಳ್ಳರು' 'ಕಳ್ಳರಲ್ಲ ಶಿವಾಜಿಯ ಸೈನಿಕರು!' 'ಇವೇನು ಬಂತಪ್ಪಾ ಶಿವಪೂಜೆಯೊಳಗ ಕರಡೀ ಓಡಾಟ!' ಎಂಬ ಮಾತುಗಳೂ ಕೇಳುವುವು).

ಈಶ :— ಇದೇನು ನಾಯಕರೇ? ಬೀದಿಯಲ್ಲಿ ಗದ್ದಲ ಏತರದು? **ಜನರ ಕೂಗೇನೋ ಕೇಳುತ್ತ**ದಲ್ಲ!....

(ಸೇವಕನು ಆತುರದಿಂದ ಬರುವನು. ಬಂದವನೇ ಗಾಬರಿಯ ಧ್ವನಿ. ಯಲ್ಲಿ ಹೇಳುವನು.

ಸೇ :— ಸನ್ನಿಧಿಗೆ ಅರಿಕೆಯಿರಬೇಕು. ನಮ್ಮ ತುರುಹಟ್ಟಿಯ **ಹಿರಿಯಗೊಲ್ಲರು ಹೊರಗೆ ಬಂದು ನಿಂತಿದ್ದಾರೆ! ಶಿವಾಜಿಯ ಸೈನಿಕರು ಬಂದು, ನಮ್ಮ** ಆಕಳ ಹಿಂಡನ್ನೆಲ್ಲಾ ಹೊಡೆದುಕೊಂಡು **ಹೋಗಿದ್ದಾರಂತೆ!**

ಈಶ :— ಇದೇನಿದು ವಿಪರೀತ ವರ್ತಮಾನ! ನೀನು ಹೋಗಿ **ಆ ಗೊಲ್ಲರನ್ನು** ಕರೆದುಕೊಂಡು ಬಾ! (ಸೇವಕನು ಹೋಗುವನು.) ಇದೇನಿದು ಶಿವಪ್ಪಾ! ನೀರಿಗಾಗಿ ಬಾವಿಯನ್ನು ತೆಗೆಯಲು ಹೋದರೆ, ಬೇತಾಳವೇ ಬಾಯ್ದೆರೆದು ನಿಂತಂತಾಯಿತಲ್ಲ! ಶಿವಾಜೀರಾಜನ ಸೈನ್ಯ ಈ ತಪ್ಪನ್ನು ಮಾಡಿರಲಾರದು....ಯಾಕೆಂದರೆ ಅವನು ಗೋಬ್ರಾಹ್ಮಣ ಪ್ರತಿಪಾಲಕನೆಂದು ಬಿರುದನ್ನು ಹೊಗಳಿಸಿಕೊಳ್ಳುತ್ತಿರುತ್ತಾನೆ.......

(ಗೊಲ್ಲರು ಬರುವರು.)

ಗೊಲ್ಲರು :— ದೇವರಿಗೆ ಶರಣಾರ್ತಿ!

ಶಿವಪ್ಪ :— ಏನಪ್ಪಾ, ಮತ್ತೇನು ಸುದ್ದೀ ತಂದಿದ್ದೀರಿ?

ಒಬ್ಬ ಗೊಲ್ಲ :— ಬುದ್ದೀ! ಒಳ್ಳೇ ಸುದ್ದೀ ತರೂ ದೈವ ನಮಗಿಲ್ಲ ಇಂದ! ಶಿವಾಜಿಯ ದಂಡು ಬಂದು, ಯಾದವಾಡದಾಗ ಪಾಳೇ ಬಿಟ್ಟೈತಂತರಿ! ದಂಡಿನ ಜನಕ್ಕೆಲ್ಲಾ ಹಾಲಬೇಕಂತ ಹೇಳಿ, ನಿನ್ನೆ ರಾತ್ರೀ ಹತ್ತಿಪ್ಪತ್ತು ಮಂದಿ ಬಂದು ಕೇಳಿದರ‍್ರಿ! ಎಲ್ಲಾ ಹಾಲನ್ನೂ ಇಂದ ಇಲ್ಲಿಗೇ ಕಳಸೂದಕ ನಮಗ ನಿನ್ನೆ ರಾತ್ರೀನೇ ಅಪ್ಪಣೆ ಆದ್ದರಿಂದ, ನಾವು ಅವರಿಗೆ ಹಾಲು ಕೊಡಲಿಲ್ಲರಿ. ಅವರು ನಮ್ಮನ್ನ ಬೆದರಿಸಾಕ ಬಂದರ‍್ರಿ! ನಾವೂ ಎಲ್ಲರೂ ಒಟ್ಟು ಗೂಡಿ ಗಟ್ಟ್ಯಾಗಿ ನಿಂತೀವರಿ! ಆಗ ಅವರು ಸುಮ್ಮಾಕಽ ಹ್ವಾದರು. ಮುಂದ ಬೆಳಗಿನ ಕೋಳಿ ಕೂಗೂ ಯಾಳೇ ನೋಡರಿ! ಆಗ ನೂರಾರು ಜನಾ ಕತ್ತೀ ಕಟಾರೀ ತೊಗೊಂಡು ಗುಂಪು ಗೂಡಿ ಬಂದು, ನಮ್ಮನ್ನ ಹೊಡದು ಬಡದು ಹೆದರಿಸಿ, ಆಕಳ ಹಿಂಡ್ನೆಲ್ಲಾ ಹೊಡಕೊಂಡು ಹೋಗ್ಯಾರ‍್ರಿ ಬುದ್ಧಿ! ಜಗಳಾಟದಾಗ ನಮ್ಮ ಹನಮಂತ ಅರಜೀವಾಗಿ ಬಿದ್ದಾನ್ರಿ! ಮತ್ತ ಗೋವಿಂದ ಮಾನ್ರಿ....ಅವಂದೊಂದು ಕಾಲಽ ಕಡದು ಹೋಗೆಯ್ತರಿ! ಅವರನ್ನ ಅಲ್ಲೇ ಬಿಟ್ಟು, ನಾನು....ಈತ, ಇಬ್ಬರೂ ಓಡ-ತೋಡತಽ ಪಾದಕ್ಕ ಅರಿಕೀ ಮಾಡಿಕೊಳ್ಳಾಕ ಬಂದೀವರಿ!

(ಹೊರಗೆ ಜನರ ಮಾತಿನ ಗದ್ದಲ ಕೇಳುತ್ತಲೇ ಇರುವುದು.)

ಈಶ :— ಶಿವಪ್ಪಾ, ನಾವು ಪಾಂಡವರೆಂದು ತಿಳಿದವರು ನಮಗೇ ಕೌರವರಾಗಿ ಬಿಟ್ಟರಲ್ಲ? ಸರಿ! ಕನಸಿನಲ್ಲಿ ಮನಸಿನಲ್ಲಿ ಇಲ್ಲದ ಕಾಳಗದ ಸಂದರ್ಭ ಒದಗಿಬಂದಿತು. ಆಕಳ ಹಿಂಡನ್ನು ಹೊಡೆದು-ಕೊಂಡು ಹೋಗುವುದೆಂದರೆ, ನಮಗೆ ಯುದ್ಧಕ್ಕೆ ಆಹ್ವಾನ ಕೊಟ್ಟಂತೆಯೇ ಸರಿ! ಆಕಳ ಹಿಂಡನ್ನು ಮರಳಿ ತಾರದೆ ಇಂದು ನಾನು ಬಾಯಲ್ಲಿ ನೀರುಹಾಕುವಂತಿಲ್ಲ. ತುರುಗಾಳಿಗ ಕನ್ನಡ-ಕ್ಷತ್ರಿಯರ ಕರ್ತವ್ಯಗಳಲ್ಲೊಂದು! ನಾನು ಈಗಲೆ ಹೊರಡಬೇಕು.

ಶಾಂತಿಸೇವಾ ಸದನದ ಸುಂದರ ಪ್ರಕಟನೆ!

"ಮಾಯಾ ಮಂದಿರ"

ಶ್ರೀ ಭುಜೇಂದ್ರ ಮಹಿಷವಾಡಿ

ಅವರ

ಸರ್ವೋತ್ಕೃಷ್ಟ ಕವನ ಸಂಗ್ರಹ.

ಪ್ರೊ. ಮುಗಳಿ ಅವರು ಮುನ್ನುಡಿಯಲ್ಲಿ
ಹೀಗೆ ಬರೆಯುತ್ತಾರೆ:

'**ಮಾಯಾ ಮಂದಿರ**' ದಿಂದ ಮೊದಲಾಗಿ '**ಶಾಂತಿ**' ಯಲ್ಲಿ ಕೊನೆಗೊಳ್ಳುವ ಈ ಸಂಗ್ರಹವು ಭುಜೇಂದ್ರರ ತಾತ್ತ್ವಿಕದೃಷ್ಟಿಗೆ ಸಾಕ್ಷಿಯಾಗಿದೆ. ಭುಜೇಂದ್ರರಕವಿತಾಶಕ್ತಿ ಅಜೇಯವಾದುದು, ಸಹಜವಾದುದು.' **ಬೆಲೆ:** ೧-೮-೦

ದೊರೆಯುವ ಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,

ಉಗಾರ (ಜಿಲ್ಲಾ ಬೆಳಗಾವ)

ವ್ಯಾಪಾರಿಗಳಿಗೆ ತುಂಬ ಸವಲತ್ತು ಇವೆ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ನೂತನ ಕಳೆಯಿಂದ ಹೊರಟ ಈ ಮಾಲೆಯ ಎರಡನೆಯ ಪುಸ್ತಕ 'ಹೂ, ಅರಳಿತು' (ಪ್ರಸಿದ್ಧ ತೆಲುಗು ಲೇಖಕರ ಕಥಾ ಸಂಕಲನ) ಇದೀಗ ಮಾರಾಟಕ್ಕೆ ತಯಾರಾಗಿದೆ. ಮಾರಾಟಗಾರರಿಗೆ ವಿಶೇಷ ಸವಲತ್ತು ಇದೆ. ವಿವರಗಳಿಗೆ ಬೇಗ ಬರೆಯಿರಿ.

ಮಾಲೆಯ ಪುಸ್ತಕಗಳು :

ಅರ್ಪಣ (ಸೋಪಾನಾನ ಕಥಾ ಸಂಕಲನ) ರೂ. ೧—೮—೦
ಹೂ ಅರಳಿತು (ತೆಲುಗು ಕಥೆಗಳ ಸಂಗ್ರಹ) ,, ೨—೪—೦
ವರುಷದಲ್ಲಿ ನಾಲ್ಕು ಪುಸ್ತಕಗಳಿಗೆ ಚಂದಾ ಹಣ ,, ೫—೪—೦

ಆನಂದ ಗ್ರಂಥಮಾಲಾ
ಹುಬ್ಬಳ್ಳಿ

ಸಿ. **ವೆಂಕೋಬಾಚಾರ್ಯ**
ಸಂಪಾದಕರು.

ಸೈನ್ಯಸಿದ್ಧತೆಯ ಸಂಕೇತಭೇರಿಯನ್ನು ಹೊಡೆಯಿಸಲು ಅಪ್ಪಣೆ ಮಾಡಿರಿ !

ಶಿವಪ್ಪ :— ಈ ಚಿಕ್ಕ ಕೆಲಸಕ್ಕೆ ತಾವೇಕೆ ಹೋಗಬೇಕು ? ಸನ್ನಿಧಿಯ ಸೇವಕನಿದ್ದಾನೆ. ಬೆಳವಡಿ ನಾಡಿನ ಬಂಟರ ಪಡೆಯಿದೆ. ನಾನು ಈಗಲೇ ಹೋಗಿ ಆಕಳನ್ನು ಬಿಡಿಸಿಕೊಂಡು ಬರುತ್ತೇನೆ. ಆ ಕೊಂಕಣದ ನರಿಗಳಿಗೆ, ನಮ್ಮ ಕನ್ನಡ ಸಿಂಹಗಳ ಪಂಜರದ ಹದನು ಇನ್ನೂ ಗೊತ್ತಾಗಿಲ್ಲವೆಂದು ತೋರುತ್ತದೆ

ಈಶ :— ನಾನೇನು ಮಾಡಬೇಕೆಂದಿದ್ದೆ; ಆದೇನು ಒದಗಿ ಬಂತು ನೋಡಿ ! ದೈವದ ಆಟವೆನ್ನುವುದು ಇಂತಹದಕ್ಕೆ ! **ಆಯಿತಲ್ಲ !** ಬಂದದ್ದಕ್ಕೆ ಎದೆಯನ್ನಂತೂ **ಕೊಡಲೇ ಬೇಕು. ಈ ಬೆಳವಡಿ** ನಾಡಿನ ಬಂಟರು ಉತ್ತರಕುಮಾರರಲ್ಲವೆಂಬುದನ್ನು ಆ ಗೋಗ್ರಹಣದ ಕೌರವಸೈನ್ಯಕ್ಕೆ ತೋರಿಸಬೇಕಾಗಿದೆ. ನಾನೂ ಹೊರಡುವೆ ಯುದ್ಧಕ್ಕೆ. ನನ್ನ ಕರ್ತವ್ಯವನ್ನು ನಾನು ಮಾಡಲೇ ಬೇಕು !

ಶಿವಪ್ಪ :— ನಮ್ಮ ಕರ್ತವ್ಯವನ್ನು ನಾವೂ ಮಾಡಬೇಕು. ತಾವೀಗ ಬರುವ ಕಾರಣವಿಲ್ಲ. ಸಾಯಂಕಾಲದೊಳಗಾಗಿ ನಮ್ಮ ಆಕಳಹಿಂಡು ನಮ್ಮ ತುರುಹಟ್ಟಿಗೆ ಮರಳದೆ ಹೋದರೆ, ನಾವೆಲ್ಲ ಏತಕ್ಕೆ ಬದುಕಿರಬೇಕು ? ತಾವು ನಿಶ್ಚಿಂತೆಯಿಂದ ಇರಬೇಕು. ನಾನೀಗ ಹೊರಟೇಬಿಡುತ್ತೇನೆ.

(ಸೈನ್ಯಸಿದ್ಧತೆಯ ಭೇರಿ-ದುಂದುಭಿ ಮೊಳಗುವುವು. ಕಹಳೆ-ತುತೂರಿಗಳ ಕೂಗು ಕೇಳುವುವು. "ಜಯ ವೀರಭದ್ರ ! " ಎಂಬ ಜಯಜಯಕಾರದ ಧ್ವನಿಯಾಗುವುದು.)

೩

ನಿವೇದಕ

ಅಂದೆಯೆ ಸಾಯಂಕಾಲ ಯಾದವಾಡದಲ್ಲಿ ಬಿಟ್ಟ ಶಿವಾಜಿಯ ಬೀಡಿನಲ್ಲಿ, ಸೋಲಿನ ಔದಾಸೀನ್ಯ ಮುಸುಕಿದೆ. ಬೆಳವಡಿಯ ಭಟರ ಸೇನೆ, ಶಿವಾಜಿಯ ಚಿಕ್ಕ ಸೈನ್ಯದ ಮೇಲೆ ಬಿದ್ದು, ಹೋರಾಡಿಗೆದ್ದು, ತಮ್ಮ ಆಕಳ ಹಿಂಡನ್ನು ಬಿಡಿಸಿಕೊಂಡು ಹೋಗಿದೆ. ನಡೆದ ಮಿಂಚಿನ ಯುದ್ಧದಲ್ಲಿ ಕೆಲವು ಸೈನಿಕರು ಸತ್ತಿದ್ದಾರೆ ; ಹಲವರ ಗಾಯಗೊಂಡು ನರಳುತ್ತ ಬಿದ್ದಿದ್ದಾರೆ. ಈಗ ಶಿವಾಜಿ ಮಹಾರಾಜ ತನ್ನ ಗುಡಾರದಲ್ಲಿ ಕುಳಿತು, ಸೇನಾಪತಿಯಾದ ವೆಂಕೋಜಿಯೊಂದಿಗೆ ಏನೋ ಮಾತನಾಡುತ್ತಲಿದ್ದಾನೆ; ಕೇಳಿ

* * * *

ಶಿವಾಜಿ :— ನಾನು ಬೆಳಗಿನಲ್ಲಿ ಲೋಕೂರ ದೇವಿಯ ದರ್ಶನಕ್ಕೆ ಹೊರಟೆನಲ್ಲವೆ ? ಎಂದೂ ಕಾಣದ ಅಪಶಕುನಗಳನ್ನು ಕಂಡೆ. ಅಲ್ಲಿ ದೇವಿಯ ದರ್ಶನ ಒದಗಿದರೂ ಮನಸ್ಸು ಏಕೋ **ಅಸಮಾಧಾನದಿಂದ** ಕುದಿಯುತ್ತಲಿದ್ದಿತು. ದೇವಿ **ಕೊಟ್ಟ** ದೃಷ್ಟಾಂತ**ವೂ** ಅನುಕೂಲವಾಗಿ ಕಾಣಲಿಲ್ಲ. ಮರಳಿ ಬರುವುದರಲ್ಲಿಯೆ ಇಲ್ಲಿ ಇಂಥ ಅನರ್ಥ ಒದಗಿಬಿಟ್ಟಿದೆ.

ವೆಂಕೋಜಿ :— ನಮ್ಮ ಇಡಿಯ ದಕ್ಷಿಣ ದಿಗ್ವಿಜಯದಲ್ಲಿ, ಇಂತಹ ಅನರ್ಥದ ಸಂದರ್ಭ ಎಲ್ಲಿಯೂ ಒದಗಿರಲಿಲ್ಲ. ಎಲ್ಲ ಕಡೆಗೂ ನಮ್ಮ ಸೈನಿಕರ ಕೈಯೇ ಮೇಲು ! ನಮ್ಮ ಹೆಸರನ್ನು ಕೇಳಿದ ಕೂಡಲೆ ಅಲ್ಲಲ್ಲಿಯ ಜನರೆಲ್ಲ ನಮಗೆ ಅನುಕೂಲರಾಗಿ ವರ್ತಿಸುತ್ತಿದ್ದರು. ಬೇಕಾದ ಅನುಕೂಲತೆಗಳನ್ನು ಒದಗಿಸುತ್ತಿದ್ದರು.

ಶಿವಾಜಿ :— ಇಲ್ಲಿಯೂ ನಮಗೆ **ಯಾವ ತೊಂದರೆಯೂ ಆಗುತ್ತಿರಲಿಲ್ಲ.** ನಮ್ಮ ಸೈನಿಕರು ದುಡುಕಿ **ತಪ್ಪು** ಮಾಡಿದರು. ಒಂದು ರಾಜ್ಯದ ಆಕಳ ಹಿಂಡನ್ನು **ಹೊಡೆದುಕೊಂಡು ಬರುವುದೆಂದರೆ** ಯುದ್ಧಕ್ಕೆ ಆಹ್ವಾನ ಕೊಟ್ಟಂತೆಯೇ **ಅಲ್ಲವೇನು ?**

ವೆಂಕೋಜಿ:— ಅದೇನೊ; ಮಾತು ಮಿಂಚಿ ಹೋಗಿದೆ ! ಆದರೆ ಇಂದಿನ ಸೋಲು ಚಿಕ್ಕದಾದರೂ, ಇದುವರೆಗೆ ನಾವು ಸಂಪಾದಿಸಿದ ದಿಗ್ವಿಜಯದ ಕೀರ್ತಿಗೆ ಕಲಂಕವನ್ನು ತೊಡೆದಂತೆಯೇ ಸರಿ ! ಈ ಕಲಂಕದೊಂದಿಗೆ ನಮ್ಮ ದೇಶಕ್ಕೆ ನಾವು ಮರಳಬೇಕೆ ?

ಶಿವಾಜಿ:— ಹಾಗಾದರೆ ಏನು ಮಾಡಬೇಕೆನ್ನುತ್ತೀರಿ ವೆಂಕೋಜಿ ?

ವೆಂಕೋಜಿ:— ನಾನೇನು **ಹೇಳಲಿ ?** ಸನ್ನಿಧಿಯ **ಚಿತ್ತ !** ಆದರೆ ಒಂದು ಮಾತನ್ನು ಹೇಳಬೇಕೆನಿಸುತ್ತದೆ. ಈ ನಮ್ಮ ಸೋಲಿನ ವರ್ತಮಾನ ನಿಕ್ಕ ಕಡೆಗೆಲ್ಲ ತಿಳಿದರೆ, ನಮ್ಮ ಸೈನ್ಯದ ಅಸಾಮರ್ಥ್ಯತೆಯ ಕಲ್ಪನೆ ದೇಶದಲ್ಲೆಲ್ಲ ಹಬ್ಬಿ ಹರಡಬಹುದು. ಹೀಗೆ ಆಗುವುದು ಹೊಸತಾಗಿಯೇ ಕಟ್ಟಿದ ಮಹಾರಾಷ್ಟ್ರ ಸಾಮ್ರಾಜ್ಯಕ್ಕೆ ಪಥ್ಯಕರವೆನಿಸದು. ದೊಡ್ಡ ದೊಡ್ಡ ಮದ್ದಾನೆಗಳನ್ನು ಸದೆಬಡೆದವರು ನಾವು; ಇಲ್ಲಿ ಬಂದು, ಒಂದು ಬಡಕಲು ಬಸವನಿಗೆ ಹೆದರಿದಂತೆ ಆಗುವುದಿಲ್ಲವೆ ?

ಶಿವಾಜಿ :— ನಿಮ್ಮ ಮಾತು ನಿಜ **ವೆಂಕೋಜಿ !** ನಮ್ಮ ಅಸಮರ್ಥತೆಯ ಕಲ್ಪನೆಗೆ ಆಸ್ಪದವಾಗುವುದು ಒಳ್ಳೇಯದಲ್ಲ. ನಮ್ಮ ಹಿಂಗಾಪಿನ ಸೈನ್ಯ ಇಂದಿನ ಇರುಳೇ ಇಲ್ಲಿಗೆ ಬಂದು ತಲ್ಪುತ್ತದೆ. ನಾಳೆಯ ದಿನವೇ ಬೆಳವಡಿಯ **ಕೋಟೆಗೆ ಮುತ್ತಿಗೆ**

ಬೀಳಲಿ! ಮರಾಠಾವೀರಸಿಂಹಗಳ ಶಕ್ತಿ ಎಂತಹದಿದೆ ಎಂಬುದನ್ನು ಇಲ್ಲಿಯವರಿಗೂ ತೋರಿಸಿಯೇ ಹೋಗೋಣ. ಬೆಳವಡಿಯ ವಿಜಯವನ್ನೂ ಉಡಿಯಲ್ಲಿ ಕಟ್ಟಿಕೊಂಡೇ ನಮ್ಮ ದೇಶಕ್ಕೆ ಮರಳುವುದು ಹಿತಕರವೆಂದು ನನಗೂ ಎನಿಸುತ್ತಲಿದೆ.

ವೆಂಕೋಜಿ :— ದೊರೆಗಳದು ಸಮಂಜಸವಾದ ವಿಚಾರ. ಸೈನ್ಯಕ್ಕೆ ಸೋಲಿನ ಚಟ ಹಚ್ಚುವುದು ತುಂಬ ಹಾನಿಕರವಾದದ್ದು.

ಶಿವಾಜಿ :— ಆಗಲಿ ವೆಂಕೋಜಿ! ಈಗ ಸತ್ತ ಸೈನಿಕರ ಮುಂದಿನ ವ್ಯವಸ್ಥೆಯಾಗಲಿ. ಗಾಯಾಳುಗಳಿಗೆಲ್ಲ ಒಳ್ಳೆಯ ರೀತಿಯಿಂದ ಉಪಚಾರ ನಡೆಯಲಿ. (ಸ್ವಲ್ಪ ತಡೆದು) ಸದ್ಯ ದಿಗ್ವಿಜಯದ ಯುದ್ಧನಿಲ್ಲಿಸಿ, ಸೈನಿಕರಿಗೆ ವಿಶ್ರಾಂತಿಯನ್ನು ಕೊಡಬೇಕೆಂದು ಮಾಡಿದ್ದೇವು. ಈಗ ಇದ್ದುದಿದ್ದ ಹಾಗೆ ನಾವಾಗಿಯೇ ಯುದ್ಧ ಹೂಡಬೇಕಾಗಿ ಬಂತು. ಶ್ರೀಭವಾನಿಯ ಇಚ್ಛೆ! ಅವಳ ಕೈಯಲ್ಲಿಯ ಗೊಂಬೆಗಳು ನಾವು! ನಮ್ಮ ದಿಗ್ವಿಜಯದ ಪರಿಪೂರ್ಣತೆಯೇ ಆ ತಾಯಿಯ ಸಂಕಲ್ಪವಾಗಿರಬಹುದು. ಆಗಲಿ, ನೀವು ಮುಂದಿನ ಸಿದ್ಧತೆಗೆ ತೊಡಗಿರಿ. ಬೆಳಗಿನ ಜಾವದಲ್ಲಿಯೇ ನಮ್ಮ ಸೈನ್ಯ ಬೆಳವಡಿಯತ್ತ ಕೂಚು ಮಾಡಲಿ!

ವೆಂಕೋಜಿ :— ಮಹಾರಾಜರ ಆಜ್ಞೆ! ರಾಮ್ ರಾಮ್!

೪

ನಿವೇದಕ

ಮರುದಿನ ಮುಂಜಾವದಲ್ಲಿಯೇ ಶಿವಾಜಿಯ ಸೈನ್ಯ ಬೆಳವಡಿಯತ್ತ ಹೊರಟಿತು. ಬೇಹುಗಾರರಿಂದ ಬೆಳವಡಿಯವರಿಗೆ ಸೈನ್ಯ-ಚಲನದ ವರ್ತಮಾನ ಬಂದಿತು. ಆದರೆ ಹೊರಬಿದ್ದು ಯುದ್ಧ ಮಾಡುವಷ್ಟು ಸೈನ್ಯಸಂಖ್ಯೆ ರಾಜಧಾನಿಯಲ್ಲಿರಲಿಲ್ಲ. ಹೊರಗಿನ ಸೈನ್ಯವನ್ನು ಕರೆಯಿಸಿಕೊಳ್ಳುವಷ್ಟು ವೇಳೆಯು ಅವಕಾಶವೂ ಇರಲಿಲ್ಲ. ಆದುದರಿಂದ ಈಶ್ವರಪ್ರಭುವು ಕೋಟೆಯೊಳಗಿದ್ದುಕೊಂಡೇ ಯುದ್ಧ ಮಾಡುವುದನ್ನು ನಿಶ್ಚಯಿಸಿ ಡಂಗುರ ಸಾರಿಸಿದ. ಕೋಟೆಯ ಬಾಗಿಲುಗಳು ಭದ್ರವಾಗಿ ಮುಚ್ಚಿದುವು. ಗುಪ್ತದ್ವಾರಗಳಿಗೆ ನಂಬಿಗೆಯ ಕಾಪಿನಾಳುಗಳು ನಿಂತರು. ಕೋಟೆಯ ಮೇಲೆ ಯುದ್ಧ ಸಲಕರಣೆಗಳನ್ನು ಸಜ್ಜುಗೊಳಿಸಿಕೊಂಡು, ಕನ್ನಡ ಬಂಟರು ಯುದ್ಧ ಸನ್ನದ್ಧರಾಗಿ ನಿಂತರು. ಶಿವಾಜಿಯ ಸೈನ್ಯ ಬಂದು ಕೋಟೆಯನ್ನು ಮುತ್ತಿ ಬಳಸಿನಿಂತಿತು.

(ಸೈನಿಕರ ಕೋಲಾಹಲ, ರಣವಾದ್ಯಗಳ ಮೊರೆತ, ಕೋಟೆಯನ್ನು ಕೆಡಹಲು ಪ್ರಯತ್ನಿಸುವ ಹಾರೆ-ಗುದ್ದಲಿಗಳ ಸಪ್ಪಳ)

ಬೆಳವಡಿಯ ದುರ್ಗ ದುರ್ಭೇದ್ಯವಾದುದು. ಕೋಟೆಯನ್ನು ಕೆಡಹುವ—ಬಾಗಿಲನ್ನು ಮುರಿಯುವ—ವೈರಿಸೈನ್ಯದ ಪ್ರಯತ್ನಗಳೆಲ್ಲ ನಿಷ್ಫಲವಾದುವು. ಬೆಳವಡಿಯ ವೀರಯೋಧರು ಕೋಟೆಯ ಮೇಲೆ ನಿಂತುಕೊಂಡು, ವೈರಿಸೈನ್ಯದ ಮೇಲೆ ಬಂಡೆಗಲ್ಲುಗಳನ್ನು ಎತ್ತಿ ಎತ್ತಿ ಉರುಳಿಸುತ್ತಿದ್ದಾರೆ. ತೊಲೆ-ಮುಂಡಿಗೆಗಳಿಗೆ ಬೆಂಕಿ ಹಚ್ಚಿ ಹಚ್ಚಿ ಕೆಳಗೆ ಚೆಲ್ಲುತ್ತಿದ್ದಾರೆ. ಕುದಿಯುವ ಸುಣ್ಣವನ್ನೂ ಕಾಸಿದ ಅಂಬಲಿಯನ್ನೂ ಸುರಿಯುತ್ತಿದ್ದಾರೆ. ಕಾದ ಉಸುಕನ್ನು ಸಲಿಕೆಗಳಿಂದ ಉಗ್ಗುತ್ತಿದ್ದಾರೆ. ಭೀಕರವಾದ ಕೋಟೆಗಾಳಗ!

(‘ಅಯ್ಯೋ ಉರಿ!’ ‘ಅಯ್ಯೋ ಸಾವು’ ‘ಜಯ್ ತುಳಜಾ ಭವಾನೀ’ ‘ಶಿವಾಜಿ ಮಹಾರಾಜಕೀ ಜಯ್’ ಇವೆಲ್ಲ ಕೂಗುಗಳು ಸೈನಿಕರ ಕೋಲಾಹಲದೊಂದಿಗೆ ಕೇಳುತ್ತಿರುವುವು.)

ಘೋರವಾದ ಯುದ್ಧ! ಮರಾಠಾ ಸೈನಿಕರಿಗೆ ಎಂದೂ ಮರೆಯದಂತಹ ಏಟು! ಒಂದು ದಿನವಾಯಿತು....! ಎರಡು ದಿನಗಳಾದುವು....ಎಂಟು ದಿನ ಕಳೆದುವು! ಹತ್ತು-ಹದಿನೈದು-ಇಪ್ಪತ್ತು ದಿನಗಳಾದುವು. ಇಪ್ಪತ್ತಾರು ದಿನಗಳ ವರೆಗೂ ಯುದ್ಧ ನಡೆದೇ ಇದ್ದಿತು. ಶಿವಾಜಿ ಬೆರಗಾಗಿ ಬೆರಳು ಕಚ್ಚಿದ. ಮರಾಠಾ ವೀರರ ಗುಂಡಿಗೆ ಬೆದರಿ ದಡದಡಿಸಿತು.

ಇಪ್ಪತ್ತೇಳನೆಯ ದಿನ ಬೆಳಗಾಯಿತು. ಬೆಳವಡಿಯ ಅರಮನೆಯ ರಾಣೀವಾಸದಲ್ಲಿ, ಈಶಪ್ರಭುವು ಮಲ್ಲಮ್ಮರಾಣಿಯೊಂದಿಗೆ ಮಾತನಾಡುತ್ತ ನಿಂತುಕೊಂಡಿದ್ದಾನೆ:

*   *   *

ಈಶ್ವರ :— ದೇವಿ! ಇದುವರೆಗಂತೂ ಗಟ್ಟಿಮುಟ್ಟಾಗಿ ನಿಂತು ವೈರಿಗಳನ್ನು ಎದುರಿಸಿ ಆಯಿತು. ನಮ್ಮ ಕನ್ನಡ ವೀರರ ಧೈರ್ಯ-ಶೌರ್ಯಗಳು ಎಳ್ಳಷ್ಟೂ ಕಡಿಮೆಯಾಗಿಲ್ಲ. ದಿನದಿನಕ್ಕೂ ಅವರ ಉತ್ಸಾಹ ಹೆಚ್ಚುತ್ತಲಿದೆ. ಆದರೆ ನಮ್ಮ ದುರ್ದೈವ ಮಲ್ಲಾಜಿ!

ಚ್ಯವನ ಪ್ರಾಶ

(ಅಷ್ಟವರ್ಗಯುಕ್ತ)

ಇದರ ಸೇವನೆಯಿಂದ :—

೧. ಬೇನೆಗಳಿಂದ ಬಂದ ದುರ್ಬಲತೆ ದೂರಾಗುವದು.

೨. ಪೋಷಕ ಆಹಾರದ ಅಭಾವದಿಂದ ಕ್ಷೀಣವಾದ ರಸ-ರಕ್ತಾದಿ ಧಾತುಗಳು ಬಲಗೊಳ್ಳುವವು.

೩. ಅತ್ಯಂತ ಮಾನಸಿಕ ಶಾರೀರಿಕ ಶ್ರಮದಿಂದುಂಟಾದ ವಿಸ್ಮರಣೆ ಮನೋದೌರ್ಬಲ್ಯ, ನಿರುತ್ಸಾಹಗಳು ಇದರ ಸೇವನೆಯಿಂದ ಕಡಿಮೆಯಾಗಿ, ಮೇಧಾ-ಶಕ್ತಿ ಉತ್ಸಾಹಗಳು ಹೆಚ್ಚಾಗುತ್ತವೆ.

೪. ದುರ್ಬಲವಾದ ರತಿಶಕ್ತಿಯನ್ನು ಸಬಲಗೊಳಿಸುತ್ತದೆ.

ದಿ ನೂತನ
ಆಯುರ್ವೇದ ಕಾರ್ಯಾಲಯ,
ಲಿ. ವಿಜಾಪೂರ.

ಕೋಟೆಯೊಳಗಿನ ಅನ್ನದ ಸಂಗ್ರಹವೆಲ್ಲ ತೀರಿ ಹೋಗಿದೆ. ಮದ್ದು-ಗುಂಡುಗಳೂ ಸವೆದಂತಾಗಿವೆ. ಕುಡಿಯುವ ನೀರು ಕೂಡ ಸಾಕಷ್ಟು ಸಿಕ್ಕದಂತಾಗಿದೆ. ಮುಂದೆ ಗತಿಯೇನು ?

ಮಲ್ಲಮ್ಮ :— ಸೋಲಿಯ ಗವಿಯಪ್ಪ ನಾಯಕರೂ ಸೀಗೆ-ಹಳ್ಳಿಯ ವೀರಪ್ಪಗೌಡರೂ ಇದುವರೆಗೆ ಬರಲಿಲ್ಲವಲ್ಲ ! ಅವರು ತಂತಮ್ಮ ಸೈನ್ಯಗಳೊಂದಿಗೆ ಬಂದು ಹೊರಗಿನಿಂದ ಮೇಲೆ ಎರಗಿದ್ದರೆ, ಶಿವಾಜಿಯ ಸೈನ್ಯದ ಸಮಾಧಿ ಬೆಳವಡಿಯ ಸ್ಮಶಾನದಲ್ಲಿಯೇ ಆಗುತ್ತಿತ್ತು !

ಈಶಪ್ರಭು :— ಇದುವರೆಗೆ ದಾರಿ ನೋಡಿದರೂ ಅವರಿಬ್ಬರೂ ನೆರವಿಗೆ ಬರಲಿಲ್ಲ. ಏಕೆ ಬರಲಿಲ್ಲವೆಂಬುದೂ ತಿಳಿಯುವಂತಿಲ್ಲ. ಹಸಿವೆ-ನೀರಡಿಕೆಗಳನ್ನು ತಾಳಿಕೊಂಡು ನಮ್ಮ ಸೈನಿಕರು ಇನ್ನೆಷ್ಟು ದಿನ ಯುದ್ಧ ಸಾಗಿಸಬಲ್ಲರು ?

ಮಲ್ಲಮ್ಮ :— ಪ್ರಭು, ನಾವು ಕನ್ನಡ ಕ್ಷತ್ರಿಯರು ! ದೊರೆತರೆ ಗೆಲುವು, ಇಲ್ಲದಿದ್ದರೆ ಸಾವು ! ಗೆದ್ದರೆ ಜಯದ ಸುಖ; ಸತ್ತರೆ ಸ್ವರ್ಗಸುಖ ! ಈಗ ಮುಂದೆ ಗತಿಯೇನೆಂದು ಬೆದರಿ ಕುಳಿತು ಉಪಯೋಗವಿಲ್ಲ. ನಮ್ಮ ನಾಡಿಗರ ಪೌರುಷದ ಕೊನೆಯ ಪರೀಕ್ಷೆ-ಯಾಗಿ ಬಿಡಲಿ ! ಕೋಟೆಯ ಬಾಗಿಲನ್ನು ತೆರೆಯಿಸಿರಿ. ಇದ್ದಷ್ಟು ಸೈನ್ಯದೊಂದಿಗೆ ಹೊರಬಿದ್ದು ವೈರಿಸೈನ್ಯದ ಮೇಲೆ ಬಿದ್ದು, ಕೈ ಕೈ ಕಾಳಗವನ್ನು ಆರಂಭಿಸಿರಿ !

ಈಶಪ್ರಭು :— ಇದರ ಹೊರತು ಬೇರೆ ಗತಿಯೇ ಇಲ್ಲವೆಂದು ಕಾಣುತ್ತದೆ.

ಮಲ್ಲಮ್ಮ :— ಈಗ ಇನ್ನೊಂದು ಯೋಚನೆಯೇ ಬೇಡ ! ನಾನೂ ನನ್ನ ಚಾಮುಂಡೀ ತಂಡವನ್ನು ಕೂಡಿಸಿ ಯುದ್ಧಕ್ಕೆ ಹೊರಡುತ್ತೇನೆ.

(ದಾಸಿಯು ಬಂದು ಹೇಳುವಳು)

ದಾಸಿ :— ಅಮ್ಮಾಜೀ ! ಭೂಷಣ ಕುಮಾರನಿಗೆ ಜ್ವರ ತುಂಬ ಹೆಚ್ಚಾಗಿದೆ, ಮೈಮೇಲೆ ಎಚ್ಚರವೇ ಇಲ್ಲ. ರಾಜವೈದ್ಯರು ಬಂದು ನೋಡಿದರು. ತಾಯಿಯ ಹಾಲಲ್ಲದೆ ಮತ್ತೇನನ್ನೂ ಹಾಕಬೇಡ-ವೆಂದು ಹೇಳಿದ್ದಾರೆ !

ಮಲ್ಲಮ್ಮ :— ಹೊನ್ನವ್ವಾ, ಜ್ವರ ಭೂಷಣಕುಮಾರ-ನೊಬ್ಬನಿಗೇ ಹೆಚ್ಚಾಗಿಲ್ಲ. ಬೆಳವಡಿಯ ರಾಜ್ಯದ ಭಾಗ್ಯದೇವತೆಯೆ ಜ್ವರದಿಂದ ಬೇಯುತ್ತಲಿದೆ ! ಈ ಬೇಗೆಯಲ್ಲಿ ಸಿಕ್ಕಿರುವ ತಾಯಿ-ಯಿಂದ ಭೂಷಣ ಕುಮಾರನಿಗೆ ಎಲ್ಲಿಯ ಹಾಲು ಸಿಕ್ಕೀತು ! ಈಗ ನಾನು ಕುಮಾರನೊಬ್ಬನಿಗೇ ತಾಯಿಯಲ್ಲ ! ಬೆಳವಡಿಯ ನಾಡಿ-ಗೆಲ್ಲ ತಾಯಿ ! ಬೆಳವಡಿಯ ಮಕ್ಕಳನ್ನೆಲ್ಲ ಬದುಕಿಸಬೇಕಾಗಿದೆ !

ಈಶಪ್ರಭು :— ದೇವೀ, ನೀನೀಗ ಕುಮಾರನ ಬಳಿಗೆ ಹೋಗು! ನಾನೀಗ ಕೋಟೆಗಾಳಗ ಮುಗಿಸಿ ಕೈ ಕೈ ಕಾಳಗವನ್ನಾರಂಭಿಸುವ ಏರ್ಪಾಡು ಮಾಡುತ್ತೇನೆ !

ಮಲ್ಲಮ್ಮ :— ನಾನೂ ಬರುತ್ತೇನೆ; ನನ್ನ ಅರ್ಧಾಂಗಿತ್ವದ ಕರ್ತವ್ಯವನ್ನು ಮಾಡುತ್ತೇನೆ.

ಈಶಪ್ರಭು :— ನೀನೀಗ ಎಲ್ಲಿ ಹೋಗುವುದೂ ಬೇಡ ! ತಾಯ್ತನದ ಕರ್ತವ್ಯವೂ ನಿನಗೆ ಇರುತ್ತದೆ. ಹೋಗು, ಭೂಷಣ-

ನನ್ನ ನೀನು ಜಾಗೃತೆಯಿಂದ ನೋಡಿಕೊಳ್ಳುತ್ತಿರು! ನಾನು ಮಿಕ್ಕುದನ್ನೆಲ್ಲ ಮಾಡುತ್ತೇನೆ.

ಮಲ್ಲಮ್ಮ :— ತಾಯ್ತನದ ಕರ್ತವ್ಯ!....ಅಹುದು.... ನಾನು ಕುಮಾರನ ತಾಯಿಯೂ ಅಹುದು. ಬಂದೆ ನಡೆ ಹೊನ್ನವ್ವಾ! ನಾನು ಕುಮಾರನ ತಾಯಿಯೂ ಆಗಿದ್ದೇನೆ; ಬೆಳವಡಿ ರಾಜ್ಯದ ರಾಣಿಯೂ ಆಗಿದ್ದೇನೆ. ಹೆಣ್ಣಿಗೆ ಇಬ್ಬಗೆಯ ಕರ್ತವ್ಯ; ಎರಡರಲ್ಲಿಯೂ ಕೃತಕೃತ್ಯಳಾಗಬೇಕು!

(ದೂರದಿಂದ ಕೂಸಿನ 'ಅವ್ವಾ' ಎಂಬ ಕೂಗು ಕೇಳುವುದು.)

ಬಂದೆ, ಬಂದೆ ಭೂಷಣಾ! ನಾನು ನಿನ್ನ ಅಮ್ಮನೂ ಅಹುದು!

೫

ನಿವೇದಕ :

ಸೈನಿಕರೆಲ್ಲರ ಬೆಳಗಿನ ತಂಗೂಳು ಮುಗಿಯಿತು. ನಾಲ್ಕು ತಾಸು ಹೊತ್ತಿಗೆ ಬೆಳವಡಿಯ ಕೋಟೆಯ ಬಾಗಿಲುಗಳು ತೆರೆದುವು. ಈಶ್ವರಪ್ರಭುವಿನ ನೇತೃತ್ವದಲ್ಲಿ ಸೈನಿಕರೆಲ್ಲ ಒಟ್ಟುಗೂಡಿ ವೀರಾವೇಶದಿಂದ ಹೊರಬಿದ್ದರು. ಅದೋ ಅವರ ರಣಕೋಲಾಹಲವನ್ನು ಕೇಳಿರಿ!

(ರಣವಾದ್ಯಗಳು ಮೊರೆಯುತ್ತಿರುವುವು. ಸೈನಿಕರು ರಣೋತ್ಸಾಹದಿಂದ ಬೊಬ್ಬಿಡುತ್ತಿರುವರು. ಈಶ್ವರಪ್ರಭು ಕೂಗಿ ಹೇಳುತ್ತಿರುವನು.)

ಈಶಪ್ರಭು :— ನನ್ನ ವೀರಸೈನಿಕರೇ! ಇಂದಿನದು ನಮ್ಮ ನಾಡಿನ ಸತ್ತ್ವಪರೀಕ್ಷೆಯ ಪ್ರಸಂಗ! ಗೆದ್ದರೆ ನಮಗೆ ಹರಿಹಿಂಗದ ಕೀರ್ತಿ; ಯುದ್ಧದಲ್ಲಿ ಸತ್ತರೆ ಶಾಶ್ವತವಾದ ಸ್ವರ್ಗಸೌಖ್ಯ! ನುಗ್ಗಿರಿ! ಧೈರ್ಯದಿಂದ ಮುಂದುವರಿಯಿರಿ! ಶೌರ್ಯದಿಂದ ಕಾದಿರಿ! ಹಗೆಗಳನ್ನು ಮಣ್ಣು ಮುಕ್ಕಿಸಿರಿ!

ಸೈನಿಕರು :— ಹುಯ್! ಹೋ! ಜಯ ವೀರಭದ್ರ! ಬೆಳವಡಿಯ ಒಡೆಯನಿಗೆ ಗೆಲುವಾಗಲಿ! ಹೋ....ಹೋ....!

(ರಣವಾದ್ಯದ ಗರ್ಜನೆ.)

ಶಿವಾಜಿಯ ಸೈನಿಕರು :— ಓ! ಓ! ವೈರಿಗಳು ಹೊರಬಿದ್ದು ಬಂದರು! ಹುಂ! ಎಲ್ಲರೂ ಸಿದ್ಧರಾಗಿರಿ! ಒಮ್ಮೆಲೆ ನುಗ್ಗಿ ಮರಾಟರ ಕೈಚಳಕ ತೋರಿಸಿರಿ! ಹುಯ್....ಹೋ! (ರಣವಾದ್ಯದ ಘೋಷ)

ನಿವೇದಕ :

ಅದೋ ನೋಡಿರಿ! ಪ್ರಾರಂಭವಾಯಿತು ಕೈ ಕೈ ಕಾಳಗ! ಬೆಳವಡಿಯ ಬಂಟರು ಜೀವದ ಹಂಗು ಇಲ್ಲದೆ, ಹಸಿದ ಹುಲಿಗಳಂತೆ ವೈರಿಯ ಮೇಲೆ ಎರಗಿ ಹೋಗುತ್ತಿದ್ದಾರೆ. (ಶಸ್ತ್ರಾಸ್ತ್ರಗಳ ಸಪ್ಪಳು.... ರಣಾವೇಶದ ಕೂಗಾಟ) ಅಲ್ಲಿ ನೋಡಿ! ಈಶ್ವರಪ್ರಭುವು ಶಿವಾಜಿಯ ಎದುರಿಗೇ ನಿಂತು ದ್ವಂದ್ವಯುದ್ಧ ನಡೆಯಿಸಿದ್ದಾನೆ. (ಕತ್ತಿಗಳ ಹೊಡೆದಾಟದ ಶಬ್ದ) ಓ, ಅವನಾವ? ಮೈಮರೆತು ಯುದ್ಧಮಾಡುತ್ತಿರುವ ಈಶ್ವರಪ್ರಭುವಿನ ಹಿಂದೆ ಬಂದ! ಅಯ್ಯೋ, ಪ್ರಭುವಿನ ಕುತ್ತಿಗೆಯ ಮೇಲೆ ಕತ್ತಿಯೇಟು! ಅಯ್ಯೋ, ಬಿದ್ದ ಬಿದ್ದ! ಈಶ್ವರಪ್ರಭುವು ಕುದುರೆಯಿಂದ ಕೆಳಗೆ ಬಿದ್ದ! ಬೆಳವಡಿಯ ವೀರಸಿಂಹ, ಶಿವಾಜಿಯ ಸೇನಾಪತಿಯ ಕಳ್ಳಕದನದ ಬಲೆಗೆ ಬಿದ್ದಿತು! ಪ್ರಾಣಾಂತಿಕ ಗಾಯವಡೆಯಿತು!

ಬೆಳವಡಿಯ ಸೈನಿಕರಲ್ಲಿ ಗದ್ದಲ :— ಅಯ್ಯೋ ದಣಿಗಳು ಬಿದ್ದರು! ಕೆಳಗೆ ಬಿದ್ದರು! ಅಯ್ಯೋ ನಮ್ಮ ದೊರೆ! ನಮ್ಮ ಪ್ರಭು! .... (ಪಿಯಾನೋ ಇಫೆಕ್ಟ್). (ಮತ್ತೆ ಆವೇಶದ ಯುದ್ಧದ ಸಪ್ಪಳು. ವಿವಿಧ ಕೂಗುಗಳು)

ನಿವೇದಕ :

ಓ! ಆಶ್ಚರ್ಯ! ಕೋಟೆಯ ಬಾಗಿಲಿಂದ ಮಲ್ಲಮ್ಮರಾಣಿಯ ಚಾಮುಂಡೀ ತಂಡ ಹೊರಬೀಳುತ್ತಲಿದೆ ನೋಡಿ! (ಕೂಗು ಜಯವೀರಭದ್ರ! ಜೈ ಭೈರವ ಮಾತೇ!) ಕುದುರೆಯೋಡಿಸುತ್ತ ಮಲ್ಲಮ್ಮ ರಾಣಿ ಬಂದಳು! ಕಾಳಗದ ಕಣದಲ್ಲಿ ಧುಮುಕಿದಳು! ಅಬ್ಬಾ! ಮಲ್ಲಮ್ಮ ಮಾನವಿಯಲ್ಲ, ರಣಚಂಡಿ! ಹೆಣ್ಣು ಹೆಂಗುಸಲ್ಲ; ಗಂಡೆದೆಯ ವೀರ ಭೈರವಿ! ಓ, ನುಗ್ಗಿದಳು, ಮುಮ್ಮೊಂದೆ ನುಗ್ಗಿದಳು. ಈಶಪ್ರಭು ಬಿದ್ದಲ್ಲಿಗೆ ಧಾವಿಸಿದಳು.

ಸೈನಿಕರು:— ಅವ್ವಾಜಿ, ಈಶಪ್ರಭುಗಳ ಕೊಲೆ! ವೈರಿಯ ಕಳ್ಳಗತ್ತಿಗೆ ಒಡೆಯರು ಆಹುತಿಯಾದರು!

ಮಲ್ಲಮ್ಮ :— ಈಶಪ್ರಭುಗಳ ಕೊಲೆಯೆ? ಬೆಳವಡಿಯ ರಾಜ್ಯ ಈಶಪ್ರಭುಗಳದೊಬ್ಬರದೇ ಅಲ್ಲ. ನಿಮ್ಮೆಲ್ಲರದೂ ಇದೆ! ನೀವೀಗ ಒಬ್ಬೊಬ್ಬರೂ ಈಶಪ್ರಭುಗಳಾಗಿ ಹೋರಾಡಬೇಕು; ಬೆಳವಡಿಯ ಮರ್ಯಾದೆಯನ್ನು ಉಳಿಸಬೇಕು.

(ಸೈನಿಕರೆಲ್ಲರ ಕೂಗು 'ಜಯ್ ಮಲ್ಲಮ್ಮ ಮಹಾರಾಣಿ! ಜಯ್ ವೀರಭದ್ರ!' ಮತ್ತೆ ರಭಸದ ಕಾಳಗಕ್ಕೆ ಮೊದಲಾಗುವುದು!)

ಅಲ್ಲಿ ನೋಡಿ! ಶಿವಾಜಿ ಸೇನಾಪತಿಯನ್ನು ಕರೆದ; ಪಶ್ಚಾತ್ತಾಪದ ಧ್ವನಿಯಲ್ಲಿ ಏನನ್ನೋ ಮಾತನಾಡುತ್ತಿದ್ದಾನೆ. ಆಲಿಸಿರಿ!

* * * *

ಶಿವಾಜಿ :— ವೆಂಕೋಜಿ! ಈಗ ಯುದ್ಧವನ್ನು ನಿಲ್ಲಿಸಿಬಿಡಿರಿ! ಈ ಜೀಜಾಮಾತೆಯ ಮಮತೆಯ ಪುತ್ರ, ಹೆಂಗುಸರನ್ನೆದುರಿಸಿ

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ

ಔಷಧಿ!

ಡಾ. ವಾಮನ ಗೋಪಾಳ ಇವರ

ಸಾರ್ಸಾ ಪರಿಲ್ಲಾ

ಎಂದೂ ಯುದ್ಧ ಮಾಡಲಾರೆನು. ನನ್ನ ತಾಯಿಗೆ ನಾನು ಕೊಟ್ಟ ವಚನವನ್ನು ಪಾಲಿಸಲೇಬೇಕು. ಯುದ್ಧ ಒಮ್ಮೆಲೆ ನಿಂತು ಬಿಡಲಿ! ಸಂಧಿಯ ಧ್ವಜವನ್ನು ಕೂಡಲೆ ಏರಿಸಿ ನಿಲ್ಲಿಸಿರಿ! ಕ್ಷಣದ ವಿಲಂಬವೂ ಬೇಡ!

ವೆಂಕೋಜಿ :— ಮಹಾರಾಜರ ಅನುಜ್ಞೆಯಂತೆ ಏರ್ಪಾಟು ಮಾಡುವೆನು! (ಸೈನಿಕರಲ್ಲಿ ಗಜಬಿಜಿ :— ಓ, ಇದೇನು ? ಸಂಧಿ-ಧ್ವಜ ಎದ್ದು ನಿಂತಿತು! ಓ! ಆಶ್ಚರ್ಯ! ಅಚ್ಚರಿ!)

ಮಲ್ಲಮ್ಮ :— ಎಲಾ, ಇದೇನು ? ಶಿವಾಜಿಗೆ ಯುದ್ಧ ಸಾಕಾಯಿತೇ! ಬೆಳವಡಿಯ ವೀರರೆ! ಕ್ಷಾತ್ರಧರ್ಮವನ್ನು ಪಾಲಿಸಿರಿ! ನೀವೂ ನಿಮ್ಮ ಕುಣಿಯುತ್ತಿರುವ ಶಸ್ತ್ರಗಳನ್ನು ತಡೆದು ಹಿಡಿಯಿರಿ!

(ಕುದುರೆಯೋಡಿಸುತ್ತ ಶಿವಾಜಿ ಮಲ್ಲಮ್ಮನ ಹತ್ತಿರ ಬರುವನು.)

ಶಿವಾಜಿ :— ರಾಣೀಜಿ! ನಾನು ಯುದ್ಧವನ್ನು ನಿಲ್ಲಿಸಿಬಿಟ್ಟಿದ್ದೇನೆ. ನನ್ನಿಂದ ನಡೆದಿರುವ ತಪ್ಪಿಗಾಗಿ ನನಗೆ ನೀವು ಯಾವ ಶಿಕ್ಷೆ ವಿಧಿಸುವಿರೋ ಅದಕ್ಕೆ ಸಿದ್ಧನಾಗಿ ಬಂದಿದ್ದೇನೆ. ನಮ್ಮ ನಾಡಿನ ತಾಯಿಯರ ಕೋಪಕ್ಕೂ ಶಾಪಕ್ಕೂ ಹೆದರುವಷ್ಟು ನಾನು ಮರಣಕ್ಕೂ ಹೆದರುವುದಿಲ್ಲ!

ಮಲ್ಲಮ್ಮ :— ಇದೆಲ್ಲಿಯ ಯುದ್ಧನೀತಿ ನಿನ್ನದು! ಕ್ಷತ್ರಿಯನು ಎಂದೂ ಯುದ್ಧಕ್ಕೆ ಹೆದರಲಾಗದು ಶಿವಾಜಿ!

ಶಿವಾಜಿ :— ತಾಯೀ, ನಾನು ಯುದ್ಧಕ್ಕೆ ಹೆದರುವ ಹೇಡಿಯಲ್ಲ; ಅಲ್ಲದೆ ಈಗ ನನಗೆ ಹೆದರುವಂತಹ ಸಂದರ್ಭವಾದರೂ ಏನು ಒದಗಿದೆ? ನನ್ನ ಈ ಸೇನಾಸಮುದ್ರದ ಎದುರು ನಿಮ್ಮ ತಲೆಯೆಣಿಕೆಯ ಸೈನ್ಯ ಏನುಮಾಡಬಲ್ಲದು? ನಾನು ಹೆದರುವುದು ತಾಯಿಭವಾನಿಯ ಸಂದೇಶಕ್ಕೆ! ಹೆಣ್ಣುಮಕ್ಕಳನ್ನೆದುರಿಸಿ ನಾನೆಂದೂ ಯುದ್ಧ ಮಾಡಲಾರೆ!

ಮಲ್ಲಮ್ಮ :— (ಕೋಪ-ಶೋಕಗಳಿಂದ) ಶಿವಾಜೀ, ನೀನು ನನ್ನ ಪ್ರಭುವನ್ನು ಕೊಲೆಮಾಡಿದ ಪಾಪಿ! ನನ್ನ ಜನ್ಮ-ಜನ್ಮಾಂತರದ ಶತ್ರು

ಶಿವಾಜಿ :— ತಾಯೀ, ನಾನು ಮಾಡಿದ ಪಾಪಕ್ಕೆ ನಿಮ್ಮ ಮನಸ್ಸಿಗೆ ಬಂ[illegible]ಪ್ರಾಯಶ್ಚಿತ್ತವನ್ನು ಕೊಡಿರಿ! ನಿಮಗೆ ಸಮಾಧಾನವಾಗು. [illegible]ತೆ, ನಿಮ್ಮ ಪತಿಯ ಖಡ್ಗವನ್ನೇ ತೆಗೆದುಕೊಂಡು ನನ್ನನ್ನು ತುಂಡರಿಸಿ ಬಿಡಿರಿ!

ಮಲ್ಲಮ್ಮ :— (ರೋಷದಿಂದ) ಶಿವಾಜಿ!

ಶಿವಾಜಿ :— ಶಾಪಕೊಡಬೇಡಿರಿ ತಾಯೀ! ಹೆಣ್ಣಿನ ಶಾಪ ಜನ್ಮ-ಜನ್ಮಾಂತರದಲ್ಲಿಯೂ ಬಾಧಿಸುವುದೆಂದು ನನ್ನ ತಾಯಿ ನನಗೆ ಹೇಳಿದ್ದಾಳೆ.

ಮಲ್ಲಮ್ಮ :— (ಅಳುತ್ತ) ತಾಯಿ... ತಾಯಿ....! ನನ್ನ ನಾಗಭೂಷನಿಗೆ ನಾನೂ ತಾಯಿ! ಆದುದರಿಂದಲೇ ಶಿವಾಜಿ, ನಿನ್ನಿಂದ ಹರಕೆ ಕೊಡಿಸಿ, ಅವನನ್ನೂ ನಿನ್ನಂತಾಗಿಸಬೇಕೆಂದಿದ್ದೆವು! ರಾಜಧಾನಿಗೆ ಕರೆದು ವೈಭವದಿಂದ ಸ್ವಾಗತಿಸಬೇಕೆಂದಿದ್ದೆವು! ....

ಶಿವಾಜಿ :— ಏನು ? ನಾನು ಇದೇನು ಕೇಳುತ್ತಿದ್ದೇನೆ ?

ವೆಂಕೋಜಿ :— ನಿಜ ಮಹಾರಾಜ, ನಮ್ಮ ಸೈನಿಕರು ಬಂಧಿಸಿದ್ದ ಬೆಳವಡಿಯ ರಾಯಸದಾಳು ಈ ಮಾತನ್ನು ಹೇಳಿದನಂತೆ! ದ್ವೇಷದಿಂದ ಅಂಧರಾದ ನಮ್ಮ ಸೈನಿಕರು, ಅವನ ಮಾತನ್ನೇ ಲಕ್ಷ್ಯಕ್ಕೆ ತರಲಿಲ್ಲವಂತೆ. ಇಂದು ಬೆಳಗಿನಲ್ಲಿ ನನಗೆ ಈ ಸಂಗತಿ ತಿಳಿಯಿತು!

ಶಿವಾಜಿ :— ಅಪರಾಧ! ಕ್ಷಮಿಸದಂಥ ಮಹಾ ಅಪರಾಧ! ಈ ತಪ್ಪು ಮಾಡಿದವರಿಗೆ ಉಗ್ರವಾದ ಶಿಕ್ಷೆಯಾಗಬೇಕು! ತಾಯೀ, ಯಾರಿಗೆ ಎಷ್ಟು ಶಿಕ್ಷೆಯನ್ನು ಕೊಟ್ಟರೂ ತೀರದಂತಹ ಅಪರಾಧ ಇದು! ಇದಕ್ಕೆ ದೈವಸಂಕೇತವೆಂದಲ್ಲದೆ ಇನ್ನೇನೂ ಅನ್ನಲಿಕ್ಕೆ ಬರುವಂತಿಲ್ಲ!

ಮಲ್ಲಮ್ಮ :— ದೈವಸಂಕೇತ! (ಅಳುದನಿಯಲ್ಲಿ) ಎರಡೇ ಎರಡು ದಿನಗಳಲ್ಲಿ ಬೆಳವಡಿಯ ಸುಖಧಾಮವನ್ನು ಸ್ಮಶಾನವನ್ನಾಗಿ ಮಾಡಿಬಿಟ್ಟ ದೈವಸಂಕೇತ!

ಶಿವಾಜಿ :— ಹಾಗೆ ಹೇಳಬೇಡಿ ತಾಯೀ! ನಿಮ್ಮ ಬೆಳವಡಿ ಮತ್ತೆ ಸುಖಧಾಮವಾಗುವಂತೆ ನಾನು ನೋಡಿಕೊಳ್ಳುತ್ತೇನೆ. ನಿಮ್ಮ ಬಾಲರಾಜನ ಹೆಸರಿನಿಂದ ನೀವು ರಾಜ್ಯವನ್ನು ನಡೆಯಿಸಿರಿ! ನಿಮ್ಮ ಬೆಳವಡಿಯ ರಾಜ್ಯಕ್ಕೆ ಯಾವ ತೊಂದರೆಯೂ ಒದಗದಂತೆ ನೋಡಿಕೊಳ್ಳುವ ಹೊಣೆ ನನ್ನ ಮೇಲೆ ಇರಲಿ! ನನ್ನ ಸೈನ್ಯದಿಂದ ನಡೆದ ಅಪರಾಧವನ್ನು, ನಿಮ್ಮ ರಾಜ್ಯಕ್ಕೆ ಕಲ್ಯಾಣವನ್ನುಂಟುಮಾಡಿ ಕಡಿಮೆಮಾಡಿಕೊಳ್ಳುತ್ತೇನೆ!

ಮಲ್ಲಮ್ಮ :— ಧನ್ಯ ಶಿವಾಜೀರಾಜ! ನೀನು ಶೌರ್ಯದಿಂದಲ್ಲದಿದ್ದರೂ, ಔದಾರ್ಯದಿಂದ ನನ್ನ ಮನಸ್ಸನ್ನು ಗೆದ್ದೆ! ನನಗೀಗ ಏನು ಮಾಡಬೇಕೆಂಬುದೇ ತಿಳಿಯದಾಗಿದೆ. ನನ್ನ ಗಂಡನನ್ನು ಕೊಂದವನೆಂದು ದ್ವೇಷಿಸಲೋ, ನಿನ್ನ ಧೀರೋದಾತ್ತ ಗುಣಕ್ಕಾಗಿ ಮೆಚ್ಚಿ ತಲೆಬಾಗಿಸಲೋ!

ಶಿವಾಜಿ :— ಅಮ್ಮಾಜಿ, ನೀವು ಭವಾನೀಮಾತೆ! ನನ್ನನ್ನು ದ್ವೇಷಿಸುವುದೂ ಬೇಡ; ನನಗೆ ತಲೆಬಾಗುವುದೂ ಬೇಡ! ನನ್ನ ಶಿಷ್ಟರಕ್ಷಣೆಯ ದುಷ್ಟದಂಡನೆಯ ಕಾರ್ಯಗಳು ಸಂಪೂರ್ಣವಾಗಿ ನೆರವೇರುವಂತೆ ಆಶೀರ್ವಾದ ಕೊಡಿರಿ ತಾಯೀ!

ಮಲ್ಲಮ್ಮ :— ತಥಾಸ್ತು! ಶಿವಾಜಿಯಿನ್ನು ಬೆಳವಡಿಯ ಶತ್ರುವಲ್ಲ; ಹಿತಚಿಂತಕನಾದ ಮಿತ್ರ! ಮಹಾರಾಜ! ಈಶಪ್ರಭುವಿನ ಮಹಾಪ್ರಯಾಣದ ಕಾರ್ಯವೂ ಬಾಲರಾಜನ ರಾಜ್ಯಾಭಿಷೇಕದ ಸಮಾರಂಭವೂ ನಿಮ್ಮ ನೇತೃತ್ವದಲ್ಲಿಯೆ ನಡೆಯಬೇಕು!

ಶಿವಾಜಿ :— ತಮ್ಮ ಇಚ್ಛೆಯಂತಾಗಲಿ ತಾಯೀ!

(ಸೈನಿಕರ ಕೂಗು)

'ಜಯ ಶಿವಾಜೀ ಮಹಾರಾಜ!' 'ಜಯ ಮಲ್ಲಮ್ಮ ರಾಣಿ!'

ಚಾರಣಗೀತ

ಧನ್ಯೆ ಧನ್ಯೆ ಮಲ್ಲಮ್ಮರಾಣಿ, ಬೆಳವಡಿಯ ಭಾಗ್ಯದೇವೀ!
ಧನ್ಯೆ ಕನ್ನಡದ ವೀರಪತಾಕೆಯ ಎತ್ತಿ ಹಿಡಿದ ತಾಯೀ!

ಜಯಂತ

ಅಭಿಮಾನ

(ಲಘುಪ್ರಬಂಧ)

ಶ್ರೀ. ಎನ್. ಎಸ್. ಗದಗಕರ ಬಿ. ಎ., ಧಾರವಾಡ

★

ಅಭಿಮಾನವೆಂಬುದು ಔಚಿತ್ಯಕ್ಕೆ ಸರಿಯಾಗಿ ಇದ್ದರೆ ಅದು ಮಾನವನಿಗೊಂದು ಭೂಷಣಗುಣವಾಗಿ ಪರಿಣಮಿಸುವುದು. ಅಂತಹದಲ್ಲದ ಅನುಚಿತ-ಅಭಿಮಾನ ದುರ್ಗುಣವಾಗಿ ಪರಿಣಮಿಸುವುದು.

★

ಗುಣಪ್ರಧಾನವಾದ ಈ ವಿಶಾಲವಿಶ್ವದಲ್ಲಿ ಅಭಿಮಾನದ ಸ್ಥಾನ-ಮಾನ ನಿರ್ಣಯಿಸುವುದು ಅಸಾಧ್ಯವಲ್ಲ. ಮುಖ್ಯವಾಗಿ ಮಿಕ್ಕ ಸಲ್ಲಕ್ಷಣಗಳಂತೆ ಮಾನವನ ಯೋಗ್ಯತೆಯನ್ನು ಕ್ಷಣಕ್ಷಣಕ್ಕೆ ಕಟ್ಟುವ ಸತ್ತ್ವ ಇದರದೇ. ಜಗತ್ತಿನ ಸಾರವನ್ನು ಸವಿಯಲು ಹಾತೊರೆಯುವ ಮಗುವು ಕೂಡ ತನ್ನ ಆಟನೋಟಗಳಿಂದ ಅಭಿಮಾನ ವ್ಯಕ್ತಪಡಿಸುವುದೆಂದಮೇಲೆ, ಸುಸಂಸ್ಕೃತ ಸಮಾಜಕ್ಕೆ ಇದರ ಆವಶ್ಯಕತೆ ಇದೆ— ಎಂದು ಬೇರೆ ಹೇಳುವ ಆವಶ್ಯಕತೆಯೆ ಇಲ್ಲ. ಹಾಗೆ ಅಭಿಮಾನದ ಹಿರಿಮೆ, ವ್ಯಾಪಕತೆ, ಅಸ್ತಿತ್ವವನು ಕಡೆಗಣಿಸುವಂತಿಲ್ಲ. ಒಂದು ವೇಳೆ ಅಂತಹ ಬುದ್ಧಿ ತಲೆದೋರಿದರೆ, ಪ್ರಗತಿಯ ದೃಷ್ಟಿಯಿಂದ ಮಾನವಜನಾಂಗಕ್ಕೆ ಕಾಲ್ತೊಡಕಾದೀತು !

ಕೂಲಂಕಷವಾಗಿ ವಿಚಾರಿಸುವುದಾದರೆ, ಅಭಿಮಾನದ ಝುಳುಕಿಲ್ಲದ ಕಾರ್ಯರಂಗವು ಬಹುಶಃ ನಮ್ಮ ಸಮಾಜದಲ್ಲಿ ಯಾವುದೂ ಇರಲಿಕ್ಕಿಲ್ಲ. ಪ್ರತಿಯೊಬ್ಬ ವ್ಯವಸಾಯಿಯು ಎಷ್ಟೇ ಸೌಜನ್ಯದ ಮೂರ್ತಿಮಂತ ಸ್ವರೂಪವೆನಿಸಿದರೂ , ಮೈಮರೆವಿನಿಂದ ಒಂದು ಸಲವಾದರೂ ತನ್ನ ಅಭಿಮಾನದ ಗಂಟು ಬಿಚ್ಚಿಯೇ ತೀರುವನು. ಮಾದರಿಗೆಂದು ಒಬ್ಬ ಅಮಲ್‌ದಾರನನ್ನು ತೆಗೆದುಕೊಂಡರೆ, ಅವನು ಇಂದಿನ ಅಮಲ್‌ದಾರರ ಅಸಹಾಯ್ಯ ಸ್ಥಿತಿಯನ್ನು ಬಣ್ಣಿಸಿ ಮೋರೆಯ ಮೇಲೆ ಅಭಿಮಾನದ ಮಿಂಚು ತಂದುಕೊಳ್ಳುವನು. 'ಈಗಿನವರು ಕೇವಲ ಯಂತ್ರಗಳು, ಮೊದಲಿನವರಿಗೆ ಹಣಕ್ಕೆ ಹಣ ಮೇಲೆ ಅಖಂಡ ಮರ್ಯಾದೆ ! ' ಎಂದು ಅವನ ಕಲ್ಪನೆ. ಶಿಕ್ಷಕನು ತನ್ನ ಪಾಲಿಗೆ ಬಂದ ವಿದ್ಯಾರ್ಥಿಗಳಿಗೆ ಸದ್ಗುಣ ಕಲಿಸುವ ಹೊಣೆಹೊತ್ತಿದ್ದರೂ ತನ್ನ ವಿದ್ಯೆಯ ಮೇಲೆ ಅವನಿಗೆ ಅಪಾರ ವಿಶ್ವಾಸ, ಅಭಿಮಾನ. ತಾನು ಸಂಸ್ಕೃತ ವಾಙ್ಮಯದಲ್ಲಿ ಪ್ರತಿ ಪಾಣಿನಿ, ಇಂಗ್ಲೀಷ್ ವಿದ್ಯಾಭ್ಯಾಸದಲ್ಲಿ ಚಾಸರ್, ಕನ್ನಡದಲ್ಲಿ ಕುಮಾರವ್ಯಾಸ, ಇತಿಹಾಸ ಪ್ರಪಂಚದಲ್ಲಿ ಹಲವು ಉದ್ಗ್ರಂಥಗಳ ಮೂಲಕ, ಗಣಿತ ವಿಷಯದ ಪ್ರಸ್ತಾಪ ಬಂದಾಗ ಪ್ರತಿ ಭಾಸ್ಕರಾಚಾರ್ಯನೇನೊ—ಎಂಬಂತೆ ಅಭಿಮಾನದ ಹುಚ್ಚುಕಡಿವಾಣ ಬಿಚ್ಚಿ ಇಡುವನು. ಬುದ್ಧಿಯ ಕವಾಯತು ಮಾಡದ ಸೈನಿಕನಿಗೆ ಕೂಡ ಅಪೂರ್ವ ಅಭಿಮಾನ. ' ಇಂಥ ಕಟ್ಟಡವಿಯಲ್ಲಿ ಇಷ್ಟು ವೀರಾವೇಶದಿಂದ ಕಾದಿ ಇಷ್ಟು ಶತ್ರುಗಳನ್ನು ಹಿಮ್ಮೆಟ್ಟಿಸಿದೆ'ನೆಂದು— ತನ್ನ ಅವಯವಗಳು ಈಗ ಕಡಿಮೆಯಾಗಿದ್ದರೂ ಕೂಡ—ಬಢಾಯಿ ಕೊಚ್ಚಿಕೊಳ್ಳುವನು. ಲೇಖಕನ ಮಾತೆತ್ತಿದರಂತೂ ಅಭಿಮಾನ ವ್ಯಕ್ತಪಡಿಸುವಲ್ಲಿ ಅವನನ್ನು ಸರಿಗಟ್ಟುವವರು ಬಹುಶಃ ಯಾರೂ ಉಳಿದಿರಲಿಕ್ಕಿಲ್ಲ ! ತನ್ನ ಅಮೌಲ್ಯ ಲೇಖನಗಳು (?) ಸಾಮಾನ್ಯತಃ ಎಲ್ಲ ಪತ್ರಿಕೆಯ ಸಂಪಾದಕರಿಂದ ವ್ಯವಸ್ಥಿತ ಹಿನ್ನಡೆಯ ಉಡುಗೊರೆ ಪಡೆದಿದ್ದರೂ, ಅಕಸ್ಮಾತ್ ಒಮ್ಮೆ ದುರ್ದೈವದಿಂದ (ಯಾರ?) ಸ್ವೀಕೃತವಾಗಿ ಪ್ರಕಟವಾದಲ್ಲಿ, ಅವನ ಅಭಿಮಾನ ಹಿಡಿದವರಿಲ್ಲ ! ಮತ್ತೊಂದು ಲೇಖನ ಅಸ್ವೀಕೃತವಾಗುವವರೆಗೆ ಅವನ ಸಹವಾಸ ಕಠಿಣವಾಗಿ ಪರಿಣಮಿಸುವುದುಂಟು. ಹಾವಭಾವ ವಿಲಾಸದೊಡನೆ, ಜನರ ಮೆಚ್ಚುಗೆ ದೊರೆತುದನ್ನು ಉಪ್ಪು ಖಾರ ಹಚ್ಚಿ ವಿಸ್ತರಿಸಿ ನಿರೂಪಿಸದಿದ್ದರೆ, ಪಾಪ ನಟ-ನಟಿಯರಿಗೆ ಎಲ್ಲಿಯ ನಿದ್ರೆ? ಪ್ರೇಕ್ಷಕ ಗೃಹದಲ್ಲಿ ಜನದಟ್ಟಣೆ ಹೆಚ್ಚಿ ಕೋಲಾಹಲಕ್ಕೆ ಕೊನೆ ಇಲ್ಲದಂತಾದಷ್ಟು ತಮ್ಮ ನಟನಾ ಕೌಶಲಕ್ಕೆ ಕಳೆಕಟ್ಟುವುದೆಂದು ಹೇಳಿಕೊಳ್ಳುವ ವಿಲಾಸಿ ನಟ-ನಟಿಯರಿಗೆ ಕೊರತೆ ಇಲ್ಲ. ಸಂಗೀತಗಾರರ ಬಳಿಯಲ್ಲಿ, ಸಂಗೀತ ಕಚೇರಿಗಳು ನೆರೆದ ಸ್ಥಳಗಳ ಹೆಸರು, ಕೂಡಿದ ರಸಿಕರಲ್ಲಿಯ ವೈವಿಧ್ಯ, ವೈಶಿಷ್ಟ್ಯ, ಅವರು ಸಲ್ಲಿಸಿದ ಮರ್ಯಾದೆ, ಕಲಾಪ್ರೌಢಿಮೆಯ ರಸವತ್ತಾದ ಬಣ್ಣನೆ—ಸದಾಸಿದ್ಧವಿರುತ್ತದೆ. ಅದಕ್ಕೆ ಪ್ರಶಸ್ತಿ ದೊರೆತು ತುಟಿಪಿಟಿ ಕೇಳುವವರದಷ್ಟೇ ಕೊರತೆ !

ಕರ್ತೃತ್ವಶಕ್ತಿ, ಸಿರಿವಂತಿಕೆ, ಅನುಪಮವಿದ್ಯೆ ಇದ್ದಲ್ಲಿ ಅಭಿಮಾನದ ಸಾಮಾನ್ಯ ಅಸ್ತಿತ್ವವಿದೆ ಎನಿಸಿದರೂ ವಾಚಾಳಿಗಳಾದ ಹೆಂಗಳೆಯರಲ್ಲಿ ಅದರ ಜೀವಾಳ ಕಾಣಬಹುದು. ಅಡಿಗೆಗೆ

ಆಗಸ್ಟ್ ಕ್ರಾಂತಿಯ ಸೇನಾಪತಿ

ಚೆನ್ನಪ್ಪ ವಾಲಿ

ಅವರ ಜೀವನದ ರೋಮಾಂಚಕಾರಕ ಕಥೆ.

ಬರೆದವರು :

ಬಸವರಾಜ ಕಟ್ಟೀಮನಿ

ನಿಮ್ಮ ಪ್ರತಿಗಾಗಿ —

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ.

ಇದೀಗ ಪ್ರಕಟವಾಗಿದೆ!

ಹಾವಾಡಿಗನ ಮಗಳು

(ಶಿಗ್ಗಾಂವಿ ವೀರೇಶ್ವರರ ಕಥಾ ಸಂಗ್ರಹ)

೧೦೦ ಪುಟಗಳು ಬೆಲೆ: ೧—೦—೦

○ ಇದು ವಿಕಾಸ ಸಾಹಿತ್ಯಮಾಲೆಯ ಎರಡನೆಯ ಪುಸ್ತಕವಾದುದರಿಂದ ಚಂದಾದಾರರಾಗುವವರಿಗೆ ವಿಶೇಷ ಸವಲತ್ತು, ಕಾಣಿಕೆಗಳಿವೆ.

ಪತ್ರಿಕಾ ಏಜಂಟರಿಗೆ ಮಾರಾಟಗಾರರಿಗೆ ಕೈತುಂಬ ಕಮೀಶನ್ ವಿವರಗಳಿಗಾಗಿ ಇಂದೇ ಬರೆಯಿರಿ.

ವಿಕಾಸ ಸಾಹಿತ್ಯಮಾಲಾ, ಶಿಗ್ಗಾಂವಿ. (ಜಿ. ಧಾರವಾಡ.)

ಉಪ್ಪು-ಖಾರ ಹೆಚ್ಚು ಹಾಕಿ, ತಿನಿಸುಗಳನ್ನು ನಾಲಗೆಯಮೇಲಿಡಲು ಅಸಾಧ್ಯವಿದ್ದರೂ, ರೇಶನ್ ಅಂಗಡಿಗಳಲ್ಲಿ ಬೆಲ್ಲ ದೊರೆತರೂ ಹಾಕುವುದನ್ನೇ ಮರೆತಿದ್ದರೂ, ಮಸಾಲಿ ಎಂಬುದೊಂದು ಇದೆ ಎಂಬುದು ಅಡಿಗೆಯ ಕಾಲಕ್ಕೆ ನೆನಪಾಗದಿದ್ದರೂ— 'ತಮ್ಮದು ನಳಪಾಕ' ಎಂದು ಅಭಿಮಾನದ ಆವೇಶದಿಂದ ಹೇಳಿಕೊಳ್ಳುವ ಮಹಿಳೆಯರಿಲ್ಲವೆ? ಹಾಗೆಯೇ ತಮ್ಮ ಮಕ್ಕಳ ಬಣ್ಣ ಡಾಂಬರಿನ ಪ್ರತೀಕದಂತಿದ್ದರೂ, ಗೋಣುಮುರಿಸಿಕೊಂಡ ಸರಸ್ವತಿಯನ್ನೇ ಅವು ಧ್ವನಿಯ ದೃಷ್ಟಿಯಿಂದ ಹೋಲುತ್ತಿದ್ದರೂ, ಸೌಂದರ್ಯೋಪಾಸನೆಯ ಪ್ರಶ್ನೆ ತಲೆದೋರಿದಾಗ ಶೂರ್ಪಣಖಿ-ರಾವಣರಂತಹರಿಗೆ ಆಹ್ವಾನಕೊಡುತ್ತಿದ್ದರೂ, ನ್ಯಾಯಗಂಟುತನದಲ್ಲಿ ದೇವರ್ಷಿ ನಾರದನನ್ನು ನಾಚಿಸುತ್ತಿದ್ದರೂ, ಹಟಮಾರಿತನದಲ್ಲಿ ಚಂಡಿಯ ಅಪರಾವತಾರದಂತೆನಿಸಿದರೂ— ಮಹಿಳೆಯರು ಅವರಿಗಾಗಿ ತಳೆಯುವ ಅಭಿಮಾನಕ್ಕೆ ಸೀಮೆಯಿಲ್ಲ. ಆ ಸಾರವತ್ತಾದ ಬಣ್ಣನೆಯನ್ನು ಕದ್ದು ಕೇಳಿಯೇ ಸುಖಿಸಬೇಕು.

ವರ್ಗ-ಉದ್ದಾಮತನಗಳು ಅಭಿಮಾನದ ದುಷ್ಟಸಂಗತಿಯಗಳೆಂದು ಬಲ್ಲವರು ತಿಳಿಹೇಳಿದರೂ ಅಭಿಮಾನದ ಬೆಲೆ ನೆಯಾಗುವಂತಿಲ್ಲ. ಅದೇಕೆ? ಒಂದು ವೇಳೆ ಅದು ನಿಶ್ಚಿತಪ್ರಮಾಣದಲ್ಲಿ ಇಲ್ಲದೆಹೋದಲ್ಲಿ ವ್ಯಕ್ತಿಯು ಎಳ್ಳಿಗೇ ಮಣ್ಣುಗೂಡಿಗುವುದು. ಅಂತಹ ಅಭಿಮಾನ— ದೇಶದ ವಿಷಯಕವಾಗಿ ಕ್ತಿಯಲ್ಲಿ ಉದ್ಭವಿಸದೇ ಹೋದಲ್ಲಿ, ರಾಷ್ಟ್ರದ ಹಿತ ಸಾಧಿಸುತಿಲ್ಲ. ಅಷ್ಟೇ ಏಕೆ? ತನ್ನ ರಾಷ್ಟ್ರದ ಬಗ್ಗೆ ಒಂದುಸಲವೂ ಮಾನ ತಳೆಯದಿದ್ದವನು ಮನುಷ್ಯನೇ ಅಲ್ಲ— ಎಂದು ಹ್ವಾನಕೊಡುವ ಆಂಗ್ಲ ಕವಿ ಸ್ಕಾಟನ ನುಡಿಯಲ್ಲಿ ಎಂತಹ ಪ್ವಲತೆ, ತತ್ತ್ವದ ತಿರುಳು ಹುದುಗಿದೆ!

ಇರಲಿ. ಅಭಿಮಾನ ಒಳ್ಳೆಯದೆಂದು ಹಲವರು ಸ್ಪಷ್ಟ ಮಾತಾಡುವ ಪುಣ್ಯಕಟ್ಟಿಕೊಂಡು, ಪರಿಚಿತರು ಅಪರಿಚಿತರು ಎಂಬ ಕಾರಣವನ್ನು ತಿಳಿಯದೇ ಹಿರಿಯರ ಮನ ನೋಯಿಸುವರು. ಸಮಾಜಕ್ಕೆ ಸಹಜವಾದ ಸೌಜನ್ಯಕ್ಕೆ ಆಗ ತಿಲಾಂಜಲಿ. ಇಂತಹ ಶುಂಭರ ಮಾತಿನಲ್ಲಿ ಕೃತ್ರಿಮತೆ ತಲೆಯೆತ್ತಿ ನಗೆಗೆ ಎಡೆಯಾಗುವದು. ಅಭಿಮಾನದ ಅಪಪ್ರಚಾರ ಕೈಕೊಂಡ ಇಂತಹರಿಗೆ ಗೆಳೆತನ, ಮಾನವತೆಯ ಅರಿವು ಉಂಟಾಗುವ ಬಗೆ ಹೇಗೆ?

ಅಭಿಮಾನವು ವ್ಯಕ್ತಿಗತವೆನಿಸಿ ವ್ಯಾಮೋಹವಾಗಿ ಪರಿಣಮಿಸಿ, ಇಳಿವಯಸ್ಸಿನವರಿಗೂ ಒಮ್ಮೊಮ್ಮೆ ಬಿಟ್ಟಿರುವುದಿಲ್ಲ. ಇದು ಸಹಜಸಿದ್ಧವಿದ್ದರೂ ಮಹಾತ್ಮರೆನಿಸುವವರು ಇದನ್ನು ತಡೆಹಿಡಿಯಲು ಯತ್ನಿಸುವರು. ಪರಮಾರ್ಥದ ಏಕನಿಷ್ಠರಿಗೆ, ಸಂಸಾರದ ಮೋಹ ತೊರೆದವರಿಗೆ, ಅಭಿಮಾನದ ಸೋಂಕಿಲ್ಲ. ಪುರಂದರದಾಸರಾಗಲಿ ಶಿವಶರಣರಾಗಲಿ ಲೋಕಕಲ್ಯಾಣಕ್ಕಾಗಿ ಅಭಿಮಾನಕ್ಕೆ ತಿಲಾಂಜಲಿ ಇತ್ತವರು. ಹೀಗಿದ್ದರೂ ಸಾಮಾನ್ಯರಿಗೆ ಆದರ್ಶದ ಮೇಲ್ಪಂಕ್ತಿ ಹಾಕಿಕೊಡುವ ಯೋಗ್ಯತೆ ಕರ್ಣ-ದುರ್ಯೋಧನ-ಸೀಟನ್ನರಂತಹರಿಗೆ ಇದ್ದೇ ಇದೆ. ಅವರ ಸ್ವಾಭಿಮಾನವೃತ್ತಿ ಕಡಿಮೆತರಗತಿಯದೆ? 'ದೃಷ್ಟಿಸ್ತೃಣೀಕೃತ ಜಗತ್ರಯ ಸತ್ತ್ವಸಾರಾ' ಎಂಬ ಉತ್ತರರಾಮಚರಿತೆಯ ಕುಶಲವರ ದರ್ಪದ ಸನ್ನಿವೇಶವು ನೆನಪಾಗುವುದು. ಇನ್ನೂ ಮೇಲ್ಪಟ್ಟದಿಂದ ವಿಚಾರಿಸಿದರೆ, ಮಾತು ಹೋದದ್ದಕ್ಕಾಗಿ ಇಹಲೋಕದ ಅಭಿಮಾನವನ್ನೇ ತೊರೆದ ಮಹನೀಯರ ಉದಾಹರಣೆ ಅನೇಕ ದೊರೆಯುವುವು. ಶಿಬಿಚಕ್ರವರ್ತಿಯು ತೊಡೆಯ ಮಾಂಸ ಕೊಟ್ಟುದು, ಹರಿಶ್ಚಂದ್ರನು ಸುಡುಗಾಡುಸೇರಿದುದು, ದಧೀಚಿಯು ಬೆನ್ನ ಮೂಳೆಯನ್ನು ಕೊಟ್ಟುದು— ಇವನ್ನು ಐತಿಹಾಸಿಕ ಘಟನೆಗಳೆಂಬ ದೃಷ್ಟಿಯಿಂದ ನಾವು ಮರೆಯುವುದೆ?

ಕ್ಷಣಕಾಲ ಆದರ್ಶ ಬದಿಗಿರಿಸಿ ವಾಸ್ತವಪ್ರಪಂಚದ ಬಗೆಗೆ ಮಾತಾಡುವುದಾದರೆ, 'ತಾಯಿ ತನ್ನ ಮಕ್ಕಳ ವಿಷಯದಲ್ಲಿ ತಳೆದಿರುವ ಅಭಿಮಾನ ಶ್ರೇಷ್ಠ ರೀತಿಯದು ಎನಿಸುವುದು,' ಎಂದು ಆಂಗ್ಲ ಲೇಖಕ ಗೋಲ್ಡಸ್ಮಿಥ್‌ನ ಸುಪ್ರಸಿದ್ಧ 'ವಿಕಾರ ಆಫ್ ವೇಕಫೀಲ್ಡ್' ಕಾದಂಬರಿಯನ್ನೇ ಈ ಪ್ರಸಂಗದಲ್ಲಿ ಉದಾಹರಿಸಬಹುದು. ಮೋಜಿಸ್ ಎಂಬ ಹುಡುಗನ ಮೇಲೆ ತಾಯಿಗೆ ಅತೀವ ಅಭಿಮಾನ. ಇನ್ನೇನು? ತಂದೆಗೂ ಪ್ರೀತಿ ಇದ್ದರೂ ತಾಯಿಗೆ ಇದ್ದಂತೆ ಅದು ಒಣ ಅಭಿಮಾನವಾಗಿರಲಿಲ್ಲ. ಅಂತೇ ತಂದೆಯು ಕುದುರೆ ಮಾರಲು ಮೋಜಿಸ್‌ನನ್ನು ಕಳಿಸಲು ಇಚ್ಛಿಸಲಿಲ್ಲ. ಆದರೆ ತಾಯಿ, ಮಗನ ಬುದ್ಧಿವಂತಿಕೆ ಜಾಣಾಕ್ಷತನ ಎಂದೋ ಕಂಡುಕೊಂಡಿದ್ದಳು. ಮುಂಜಾನೆ ಮಗನು ಜಾತ್ರೆಗೆ ಹೊರಡುವ ಕಾಲದಲ್ಲಿ ತಾಯಿಯ ಏರ್ಪಾಡು ಎಂತಹದು! ಅವನಿಗೆ ತಿಂಡಿ-ತೀರ್ಥಗಳಿಗೆ ಏನೂ ಕೊರತೆ ಎನಿಸಲಿಲ್ಲ. ಉಡುಪಿನ ಸಿದ್ಧತೆಗೆ ದೃಷ್ಟಿ ತೆಗೆಯುವುದಷ್ಟೇ ಉಳಿದಿದ್ದಿತು! ಮುಂದೆ ಜಾತ್ರೆಯಲ್ಲಿ ಕುದುರೆ ಯೋಗ್ಯ ಬೆಲೆಗೆ ಮಾರಾಟವಾದರೂ, ಮೋಜಿಸ್‌ನು ತನ್ನ ಅನಾವಶ್ಯಕ ಜ್ಞಾನ (?) ಉಪಯೋಗಿಸಿ ಮೋಸಹೋಗಿ, ಬೆಲೆಬಾಳದ ತಗಡಿನ ಚಾಳೀಸನ್ನು ಬೆಳ್ಳಿಯದೆಂದು ಕೊಂಡು ತಂದನು!

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ
ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣ-
ದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನ-
ಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ
ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು
ಆಯುರ್ವೇದೀಯ ಔಷಧಗಳು ತಯಾರಾಗುವ
ಕಾರ್ಖಾನೆ.

ಇದೆಲ್ಲ ನೋಡಿದಾಗ ತಾಯಿಯ ಮೋರೆ ಇಷ್ಟಾಯಿತು. ಆಕೆಗೆ ತನ್ನ ಅಭಿಮಾನ ಕಾಸಿಗೆ ಸಂಘೇರಾಗಿ ಮಾರಾಟವಾದಂತೆನಿಸಿತು. ತಂದೆಗಂತೂ ಅಪೂರ್ವ ಗೆಲವು— ನಿಷ್ಠುರವಾದರೂ ಸತ್ಯವಾಡಿದೆನಲ್ಲ—ಎಂದು! ಇದೇ ಬಗೆಯಾಗಿ ಜೇನ್ ಆಸ್ಟಿನ್ನಳ ಕಾದಂಬರಿಯಾದ Pride and Prejudice ಎಂಬಲ್ಲಿ ತಾಯಿ-ಮಕ್ಕಳ ಅಭಿಮಾನದ ಸ್ಥಿತಿ ಇರುವುದುಂಟು.

ಮುಖ್ಯವಾಗಿ ನೈಜ ಅಭಿಮಾನ ಕಾಯ್ದುಕೊಂಡು ಏಳ್ಗೆ ಸಾಧಿಸಿಕೊಳ್ಳಬೇಕಾದರೆ, ವ್ಯಕ್ತಿಯು ಅಂಧಾನುಕರಣ ಮಾಯವಾಗಬೇಕು. ಮಹಾತ್ಮಾಜಿಯಂತಹ ಮಹಾಪುರುಷರ ಪ್ರಮುಖ ಸದ್ಗುಣಗಳನ್ನು ನಾವು ಸಾಧಿಸಬೇಕೇ ಹೊರತು, ಕೇವಲ ಉಡುಪಿನ ಸರಳತನವಷ್ಟೇ ಸಾಲದು. ರವೀಂದ್ರರು ಗಡ್ಡ ಬೆಳಸಿದ್ದರೆಂದು ನಾವು ಅದನ್ನಷ್ಟೇ ಅನುಸರಿಸಿದರೆ ನಗೆಗೀಡು. ಅವರ ಹೆಚ್ಚಳ ಹೇಗೆ ಸಾಧಿಸೀತು ? ವಿವೇಕಾನಂದ, ರಾಮಕೃಷ್ಣ ಪರಮಹಂಸ, ಬುದ್ಧರು ಜನತೆಯಿಂದ ದೂರ ಇದ್ದರೆಂದು, ನಾವು ೨೦ ನೆಯ ಶತಮಾನದಲ್ಲಿ ಇಂದು, ಗಿರಿಸಿರ್ದರಿ ವಾಸಿಗಳಾದರೆ ಬಂದದ್ದೇನು?

ಇನ್ನು ಅಭಿಮಾನವು ದುರಾಗ್ರಹಕ್ಕೆ ವಿರುದ್ಧವಾದುದೆಂಬುದು 'Pride goeth before fall' ಎಂಬ ಆಂಗ್ಲ ನಾಣ್ಣುಡಿಯಿಂದ ಮನವರಿಕೆಯಾಗುವುದು. ಶಂಕರಾಚಾರ್ಯರು 'ನಲಿನೀದಲಗತ ಜಲಮತಿತರಲಂ' ಎಂದು ಜೀವನದ ಕ್ಷಣಭಂಗುರತೆ ಬಣ್ಣಿಸಿದರೆ, ದುರಾಗ್ರಹದ ಗತಿಯೂ ಹಾಗೆಯೇ. ಅಂತೇ ಸ್ವಾಭಿಮಾನವನ್ನು ಎದೆಗವಚಿಕೊಂಡ ಸೀತಾ, ದ್ರೌಪದಿ, ಝಾಂಸಿ ಲಕ್ಷ್ಮೀಬಾಯಿ ಮೊದಲಾದ ಇತಿಹಾಸಪ್ರಸಿದ್ಧ ಮಹಿಳೆಯರು ಎಲ್ಲರಿಗೂ ಎಂದೂ ಪೂಜ್ಯರೇ! ಇಂತಹ ದಿವ್ಯ ವ್ಯಕ್ತಿಗಳ ಚರಿತ್ರಗ್ರಂಥಗಳು ಸಮಾಜಕ್ಕೆ ಊರುಗೋಲು, ಕೈದೀವಿಗೆ— ಎಂದು ಹೇಳಬಹುದು.

ಈ ಮೊದಲೇ ನಮಗೆ ವಿದಿತವಾದಂತೆ ಅಭಿಮಾನಕ್ಕೆ ದುಷ್ಟ ಸಹವಾಸ ಅತಿಶಯವಾಗಿರುವುದರಿಂದ, ಅದಕ್ಕೆ ವಿಶೇಷ ಮನ್ನಣೆಯುಂಟಾಗಿದೆ ಒಳಿತು ಕೆಡಕು ಬೇರ್ಪಡಿಸಲು ಅನುವು ದೊರೆತಿದೆ. ಈ ವಿವೇಕಬುದ್ಧಿಯಿಂದ ವ್ಯಕ್ತಿಯ ಸ್ವಾಭಿಮಾನ ಪ್ರಜ್ವಲಿತವಾಗದಿದ್ದರೆ ಅವನು ತಲೆ ಎತ್ತಿ ಬಾಳುವುದೆಂತು? ತನ್ನನ್ನೂ ತನ್ನನ್ನವಲಂಬಿಸಿದ ಕುಟುಂಬ ರಾಷ್ಟ್ರವನ್ನು ಉದ್ಧರಿಸುವುದೆಂತು ? ಕೊನೆಗೆ ಸಾಧುಸಂತರು ದೈಹಿಕ ನಿರಭಿಮಾನ, ಸಂಸಾರತ್ಯಾಗ ಬೋಧಿಸಿದರೂ, ಇಂದಿನ ಪ್ರಗತಿಪರ ಮನ್ವಂತರದಲ್ಲಿ ವ್ಯಕ್ತಿ ಹಾಗೂ ಸಮಾಜದ ನೈಜ ಉನ್ನತಿ ಸಾಧಿಸಬೇಕಾದರೆ, ಅಭಿಮಾನ ಅತ್ಯವಶ್ಯ. ಅದೇ ಕ್ರಮೇಣ ಮಾಯವಾಗಹತ್ತಿದರೆ—'ಆಕಳ ಯೋಗ್ಯತೆ ಕಟ್ಟುವದು ಅದರ ಕೊರಳಲ್ಲಿಯ ಘಂಟೆಗಳ ಸಂಖ್ಯೆಯಿಂದ' ಎಂಬಂತಹ ಹೆಡ್ಡತನ ಹೆಚ್ಚಿಕೊಳ್ಳೀತು ! ಇದೀಗ ಅಭಿಮಾನದ ನೆಲೆ, ಬೆಲೆ, ವ್ಯಾಪಕತೆ, ಅವಶ್ಯಕತೆ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ
ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ
ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ವತ್ಸಲೆಯ ರಹಸ್ಯ

(ಸಣ್ಣ ಕತೆ)*

-“ ಸೀರಾ ” ಹಾಸನ.

★

ಭೌತಿಕ ಭೋಗ-ವಿಲಾಸಗಳು ಬೇಕಾದಷ್ಟಿದ್ದು ಸುಖಜೀವನದಲ್ಲಿಯೆ ಕಾಲಕಳೆಯಬಹುದಾಗಿದ್ದರೂ, ವಿವೇಕವಿಲ್ಲದ ಭಾವನಾಜೀವಿ ಏತಕ್ಕಾಗಿಯೋ ದುಡುಕುವುದು; ಆಮೇಲೆ ಆದ ತಪ್ಪು ತಿಳಿದು ಮಿಡುಕುವುದು !

★

ಮನೆಗಳಿಗೇ ಹೋಗಿ ನೋಡಿಕೊಂಡು ಬರಬೇಕಾಗಿದ್ದ ರೋಗಿಗಳನ್ನೆಲ್ಲಾ ನೋಡಿಕೊಂಡು ಡಿಸ್ಪೆನ್ಸರಿಗೆ ಬಂದೆ. ಬಹಳ ಜನ ರೋಗಿಗಳು ಆಗಲೇ ಬಂದು ಕಾದು ಕುಳಿತಿದ್ದರು. ಒಬ್ಬೊಬ್ಬರನ್ನಾಗಿ ವಿಚಾರಿಸಿ ಬೇಗ ಬೇಗ ಔಷಧಿ ಕೊಡಲು ಪ್ರಾರಂಭಿಸಿದೆ. ಮಿಲಿಟರಿಯ ಕ್ಯಾಪ್ಟನ್ನನೊಬ್ಬನು ತನ್ನ ಸರತಿ ಬಂದಾಗ ‘ ಬೇರೆ ಕೋಣೆಗೆ ಹೋಗೋಣ; ಅಲ್ಲಿ ನನ್ನ ಖಾಯಿಲೆಯನ್ನು ತಿಳಿಸುತ್ತೇನೆ ’ ಎಂದನು. ಗುಟ್ಟಾಗಿ ಹೇಳುವುದೇನು ? ಎಂತಹ ರೋಗವೇ ಆಗಲಿ ಮನುಷ್ಯನಿಗಲ್ಲದೆ ಮರಕ್ಕೆ ಬಂದೀತೇನು ? “ ಖಾಯಿಲೆಯೇನೆಂದು ತಿಳಿದಲ್ಲಿ ಬೇಕಾದ ಔಷಧಿಗಳಿರುವ ಕೋಣೆಗೆ ಹೋಗಬಹುದಲ್ಲಾ ! ” ಎಂದೆ— ನನ್ನ ವೃತ್ತಿಗನುಗುಣವಾಗಿ. ಆದರೂ ಅವನ ಆ ಸಪ್ಪೆ ಮುಖವನ್ನು ನೋಡಿ ಕನಿಕರ ಬಂದು, ಡ್ರೆಸಿಂಗ್ ರೂಮಿಗೆ ಕರೆದುಕೊಂಡು ಹೋದೆ.

ಅಲ್ಲಿ ಆತನು ತನ್ನ ಅಂಗಿಯ ಬಲತೋಳನ್ನು ಮೇಲಕ್ಕೆ ಮಡಿಸುತ್ತಾ, ಹೆಬ್ಬೆಟ್ಟನ್ನು ಚಾಚಿ ತೋರಿಸುತ್ತಾ ‘ ಈ ಬೆರಳು ನನಗೆ ಇಲ್ಲದ ತೊಂದರೆಗೆ ಕಾರಣವಾಗಿದೆ; ಇಂದಿಗೆ ಆರು ತಿಂಗಳಿಂದಲೂ. ಡಾಕ್ಟರ್ ! ಇದರ ಬಾಧೆಯಿಂದ ತಪ್ಪಿಸಿ ನನಗೆ ಉಪಕಾರ ಮಾಡಿ. ನಿಮ್ಮುಪಕಾರಕ್ಕೆ ನಾನು ಚಿರಋಣಿ. ಇದಕ್ಕಾಗಿ ಎಷ್ಟು ಹಣವಾದರೂ ಖರ್ಚಾಗಲಿ; ಬಾಧೆಯಿಂದ ಪಾರಾದರೆ ಸಾಕು ’ ಎಂದನು. ಮುಖಲಕ್ಷಣಗಳಿಂದಲೇ ತಿಳಿಯುತ್ತಿತ್ತು ಅತೀವ ಯಾತನೆಯನ್ನನುಭವಿಸುತ್ತಿರುವನೆಂದು. ಆದರೆ ಆ ಬೆರಳಿನಲ್ಲಿ ಯಾವ ತರದ ಆಕ್ರಮವೂ ಕಂಡುಬರಲಿಲ್ಲ. ಎಷ್ಟೆಷ್ಟು ಪರೀಕ್ಷಿಸಿದರೂ ಯಾವ ವಿಧವಾದ ಕುರುಹೂ ಸಿಕ್ಕಲಿಲ್ಲ. ಅಂತೇ

* “ The Bundle of Letters ” ಎಂಬ ಆಂಗ್ಲ ಕತೆಯೊಂದರ ಆಧಾರದ ಮೇಲೆ.

“ ತೊಂದರೆ ಕೊಡುವಂತಹುದೇನೂ ಕಾಣೆನಲ್ಲಾ ! ” ಎಂದೆ. ಆತನ ಮನಸ್ಸಿಗೆ ಹೇಗಾಯಿತೋ ಏನೋ ! ಸಿಟ್ಟಿನ ಭರದಲ್ಲೇ ಮೇಲಂಗಿಯ ಜೋಬಿನಿಂದ ಪೆನ್ಸಿಲನ್ನು ತೆಗೆದು ‘ ಇಲ್ಲಿ ನೋಡಿ ಡಾಕ್ಟರ್, ಈ ಜಾಗದಲ್ಲಿ ಏನೋ ಇದೆ ! ’ ಎಂದು ಬೆರಳಿನ ಮೇಲೆ ಗುರ್ತಿಸುತ್ತಾ ತೋರಿಸಿದ. ಮುಂದುವರಿದು “ ಡಾಕ್ಟರ್, ಈ ಬೆರಳನ್ನೇ ಕತ್ತರಿಸಿ ಬಿಡಿರಿ ! ಇದಿದ್ದರಲ್ಲವೇ ನೋವಾಗುವುದು ? ” ಎಂದ. ಆತನ ಧ್ವನಿಯಿಂದಲೇ ವ್ಯಕ್ತವಾಗುತ್ತಿತ್ತು ಅವನ ಆ ನೋವಿನ ಅನುಭವ. ಅದರ ಪರಿಹಾರಕ್ಕಾಗಿ ಏನನ್ನು ಮಾಡಲೂ ಹಿಂಜರಿಯದ ಮನೋನಿರ್ಧಾರ.

“ ಹಾಗೆಲ್ಲಾದರೂ ಉಂಟೇ ? ರೋಗನಿವಾರಣೆಗಾಗಿ ದೇಹದ ಭಾಗಗಳನ್ನು ಕತ್ತರಿಸಬಹುದೇ ವಿನಾ, ಸುಮ್ಮನೆ ಬೆರಳು ಕತ್ತರಿಸಿದರೆ ನಾಳೆ ನನ್ನನ್ನು ಹುಚ್ಚುವೈದ್ಯನೆಂದಾರು ಜನ ” ಎಂದೆ.

“ ಜನರನ್ನು ನೆಚ್ಚಿ ಕೆಟ್ಟಿರಿ ನೀವು ! ಡಾಕ್ಟರ್. ಜನರನ್ನೊಪ್ಪಿಸಲು ಯಾರಿಂದ ಸಾಧ್ಯ ? ಈ ಬೆರಳನ್ನು ಕತ್ತರಿಸಿದರೆ ನಾನು ತೃಪ್ತಿಹೊಂದುತ್ತೇನೆ, ಸಾಕು ! ನಿಮ್ಮಲ್ಲಿಗೆ ಬಂದ ರೋಗಿಗಳನ್ನು ಅವರವರ ವ್ಯಾಧಿಯಿಂದ ದೂರಮಾಡಿ ಮೆಚ್ಚಿಸಿ; ನಾಲ್ಕು ಜನರ ಮಾತಿನಿಂದೇನಾಗಬೇಕು ನಿಮಗೆ ? ಈ ಬೆರಳಿನಿಂದ ದೂರವಾಗಲು ಎಷ್ಟು ಹಣ ವೆಚ್ಚವಾಗುವುದಾದರೂ ಚಿಂತೆಯಿಲ್ಲ. ಇಗೋ ಮೂರು ಸಾವಿರ ರೂಪಾಯಿಗಳ ಮುಂಗಡ. ಇನ್ನೆಷ್ಟು ಬೇಕಾದರೂ ನಾಳೆಯೇ ನಿಮಗೆ ತಲುಪಿಸುತ್ತೇನೆ. ಈ ಬೆರಳನ್ನು ಮಾತ್ರ ಕತ್ತರಿಸಿ ಬಿಡಿ ” ಎನ್ನುತ್ತಾ ಮೇಜಿನ ಮೇಲೆ ನೋಟುಗಳ ಕಂತೆಯೊಂದನ್ನೆಸೆದ. ನಾನು ಕಕ್ಕಾಬಿಕ್ಕಿಯಾದೆ. ‘ ನನ್ನ ವೃತ್ತಿಗೆ ಇಷ್ಟು ಬೆಲೆಯುಂಟೆ ? ಏಕಿರಬಾರದು ? ’ ಎನ್ನಿಸಿತು; ಮರುಕ್ಷಣದಲ್ಲಿಯೇ ‘ ಒಂದು ಬೆರಳನ್ನು ಕತ್ತರಿಸಲು ಇಷ್ಟು, ಮೇಲೆ ಇನ್ನೂ ಕೇಳಿದಷ್ಟು ಹಣವೇ ? ಹಣದ ಬೆಲೆ ತಿಳಿಯದವನೇ ಇವನು ? ಅಥವಾ ಬುದ್ಧಿವಿಕಾರದ ಪರಿಣಾಮವಿರಬಹುದು ! ’ ಎಂದೂ ಯೋಚನೆ ಬಂದಿತು....... ಆದರೆ ಆತನನ್ನು ಹುಚ್ಚನೆನ್ನಲಾಗದು.

ನಾನು ಸುಮ್ಮನಿದ್ದುದನ್ನು ನೋಡಿ “ ಡಾಕ್ಟರ್, ನಾನೇ ಕತ್ತರಿಸಿಕೊಂಡು ಬಿಡುತ್ತೇನೆ. ಸರಿಯಾಗಿ ಬ್ಯಾಂಡೇಜನ್ನಾದರೂ ಕಟ್ಟಿ ! ನಿಮ್ಮ ಬಹುಮಾನ ನಿಮಗೆ ಖಂಡಿತ ” ಎನ್ನುತ್ತಾ ಅಲ್ಲಿದ್ದ ಚಾಕುವೊಂದನ್ನು ಕೈಗೆ ತೆಗೆದುಕೊಳ್ಳ ಹೋದ.

“ ಹಾಗೆ ಮಾಡಬೇಡಿ ; ಇಲ್ಲಿ ಕೇಳಿ, ನಾನು ನಿಮ್ಮ ನೋವನ್ನು ಕಳೆಯುತ್ತೇನೆ ” ಎಂದು ಒದಗಿದ ಸಂದರ್ಭಗಳಿಂದ ಹೇಗೆ ಪಾರಾಗಲೆಂದು ಯೋಚಿಸುತ್ತಾ, ಆತನನ್ನು ಕೈಹಿಡಿದು ಹೊರಕೋಣೆಗೆ ಕರೆದು ತಂದೆ. ಹಣದ ಕಟ್ಟನ್ನು ಅವನ ಜೇಬಿನಲ್ಲಿ ಸೇರಿಸಿ, ಸುಮಾರು ಹತ್ತು ನಿಮಿಷಕಾಲ ಅವನನ್ನೇ ದಿಟ್ಟಿಸಿ ನೋಡಿದೆ. ಬೆರಳಿನ ಬಾಧೆಯಿಂದ ವಿಪರೀತ್ಯನೊಂದಂತೆ ಭಾಸವಾಗುತ್ತಿತ್ತು. ಅನೇಕ ತರಹೆಯ ಖಾಯಿಲೆಯವರನ್ನು ನೋಡಿದ್ದೇನೆ ; ಸಾವನ್ನಾಲಿಂಗಿಸುವಂತಹ ರೋಗಿಗೂ ಧೈರ್ಯ ಹೇಳಿ.

ದ್ದೇನೆ ಕೆಲ ಸಂದರ್ಭಗಳಲ್ಲಿ. ಆದರೆ ಈತನನ್ನು ಮಾತ್ರ ಸಮಾಧಾನ ಪಡಿಸಲು ಆಗಲೇ ಇಲ್ಲ !

ಅವನಿಚ್ಛೆಯನ್ನು ಪೂರ್ತಿಮಾಡಿ, ಕೈಗೆ ಬ್ಯಾಂಡೇಜ್ ಕಟ್ಟುತ್ತಿದ್ದಾಗ ಬಹಳ ಗೆಲುವಾಗಿದ್ದ. ಎಂದೂ ಅನುಭವಿಸದ ಆನಂದಾನುಭವ ವ್ಯಕ್ತವಾಗುತ್ತಿತ್ತು ಅವನ ಮುಖದಲ್ಲಿ. ಬೆರಳು ಕತ್ತರಿಸುವಾಗ, ಕತ್ತರಿಸಿದ ಮೇಲೆ ಇರುವ ನೋವಿನ ಅರಿವೇ ಇರಲಿಲ್ಲ ಅವನಿಗೆ ! 'ಹಣಕೊಡುವುದೇ ಆದರೆ ನನ್ನಿಂದ ಸಾಧ್ಯವೇ ಇಲ್ಲ'ವೆಂದು ಮೊದಲೇ ಹೇಳಿದ್ದುದರ ಮೇಲೆ, ಪುನಃ ಹಣದ ವಿಷಯವನ್ನೆತ್ತಲಿಲ್ಲ ಅವನು.

'ದೊಡ್ಡದೊಂದು ಕುತ್ತದಿಂದ ಪಾರಾದೆನಲ್ಲಾ' ಎಂದು ನಿಟ್ಟುಸಿರುಬಿಟ್ಟು, ಅಂದಿನ ಪೇಪರನ್ನು ಓದುತ್ತಾ ನನ್ನ ಕುರ್ಚಿಯಲ್ಲಿ ಕುಳಿತುಬಿಟ್ಟೆ. "ಡಾಕ್ಟರ್" ಆತನೇ ಕೂಗಿದುದು.... ಹರ್ಷಪೂರಿತ ಧ್ವನಿಯಲ್ಲಿ. ಮೊದಲಿನ ಯಾತನೆಯಿಂದ ಪಾರಾದನೆಂದು ಚೆನ್ನಾಗಿ ತಿಳಿಯುತ್ತಿತ್ತು. ಅವನ ಮುಖವನ್ನು ನೋಡುವ ಯತ್ನದಲ್ಲಿ ಇದ್ದಾಗಲೇ "ನನಗೂ ಈ ಹಣದ ಆವಶ್ಯಕತೆಯಿಲ್ಲ. ಇದನ್ನು ಯಾವುದಾದರೂ ಮಕ್ಕಳ ಆಸ್ಪತ್ರೆಗೆ ಕೊಟ್ಟು ಬಿಡಿ" ಎಂದು ಹೇಳಿ, ಹಣದ ಕಟ್ಟನ್ನು ಮೇಜಿನ ಮೇಲೆ ಬಿಸುಟು ಹೊರಕ್ಕೆ ಓಡುತ್ತಾ ಹೋಗಿಬಿಟ್ಟ. ಬುದ್ಧಿಭ್ರಮಣೆಯಿರಬಹುದೇನೋ ನೋಡೋಣವೆಂದು, ಜವಾನ್ ನಂಜನನ್ನು ಆತನರಿವಿಲ್ಲದಂತೆ ಹಿಂಬಾಲಿಸೆಂದು ಹೇಳಿ ಕಳುಹಿಸಿದೆ. "ಸ್ಟೇಷನ್‌ಗೆ ನೇರವಾಗಿ ಹೋಗಿ, ಪೂನಾಕ್ಕೆ ಹೋಗುವ ಮೇಲ್ ಗಾಡಿಯಲ್ಲಿ, ಸೆಕೆಂಡ್ ಕ್ಲಾಸಿನಲ್ಲಿ ಕೂತರು. ಒಬ್ಬರೇ ಅಲ್ಲದೆ ಸಾಮಾನು ಏನೂ ಇರಲಿಲ್ಲ" ಎಂದು ಹೇಳಿದ—ರಾತ್ರಿ ಮಲಗಿಕೊಳ್ಳಲು ಬಂದಾಗ.

ಇದಾದ ಆರು ತಿಂಗಳುಗಳನಂತರ, ಅವನಿಂದ ಒಂದು ಪತ್ರ ಬಂದಿತು. ಅದರೊಡನೆ ೪೨೦೦೦ ರೂಪಾಯಿಗಳ ಚೆಕ್ಕೊಂದು ಇತ್ತು. ಪತ್ರದ ಮೇಲ್ಭಾಗದಲ್ಲಿ ತಾರೀಖು ಮಾತ್ರ ಇತ್ತು; ಊರಿನ ಹೆಸರನ್ನು ಇಲಾಖೆಯವರ ಮುದ್ರೆಯಿಂದ 'ಮಿರಜ್' ಎಂದು ಗುರುತಿಸಿದೆ. ಹಣವನ್ನು ಮಕ್ಕಳ ಆಸ್ಪತ್ರೆ ಯಾವುದಕ್ಕಾದರೂ ಕೊಡಿರೆಂದು ಬರೆದಿದ್ದ. ಆ ಪತ್ರದಲ್ಲಿ ತನ್ನ ಆರು ತಿಂಗಳ ಹಿಂದಿನ ವರ್ತನೆಗೆ ಕಾರಣವನ್ನು ವಿಶದಪಡಿಸಿದ್ದನು:

೧೪–೩–೧೯೪೨.

"ಮಾನ್ಯ ವೈದ್ಯರೇ,

ಇದುವರೆಗೂ ನನ್ನ ಅಂದಿನ ವರ್ತನೆ ನಿಮಗೆ ವಿಚಿತ್ರವೆನ್ನಿಸುತ್ತಿರಬೇಕು. ನನಗಿದ್ದ ಯಾತನೆ ನೀವು ಬೆರಳು ಕತ್ತರಿಸಿ ಬಿಟ್ಟ ಮೇಲೆ ಇಲ್ಲವಾಗಿತ್ತು. ಕೆಲವು ದಿನಗಳಿಂದ ಅದೇ ನೋವು ಅಂಗೈಯಲ್ಲೇ ಕಂಡುಬರುತ್ತಿದೆ. ವೈದ್ಯವೃತ್ತಿಯವರಿಗೂ ಅರ್ಥವಾಗದ ಆ ವ್ಯಾಧಿಯಿಂದು ನನ್ನನ್ನು ಇಹಲೋಕವನ್ನು ತ್ಯಾಗ ಮಾಡಲು ಸಹಾಯಮಾಡಿದೆ. ಈ ಪತ್ರ ತಮ್ಮ ಕೈಸೇರುವ ಹೊತ್ತಿಗೆ ನಾನು ನನ್ನ ಪತ್ನಿಯನ್ನು ಸೇರಿ, ಎಸಗಿದ ಪಾಪಕೃತ್ಯಕ್ಕೆ ಕ್ಷಮೆ ಬೇಡುತ್ತಿರುತ್ತೇನೆ: ದಯಾರಹಿತಳಲ್ಲ ನನ್ನ ವತ್ಸಲೆ— ಎಂದು ನನಗೆ ಚೆನ್ನಾಗಿ ಗೊತ್ತು.... ಆದರೆ ವಿಧಿಯ ಬರೆಹವೆಂತಿದೆಯೋ ಏನೋ ?

ಈ ಪತ್ರದಲ್ಲಿ ತಮಗೆ ನನ್ನ ವ್ಯಾಧಿಯ ಮೂಲವನ್ನು ತಿಳಿಸ ಬಯಸುತ್ತೇನಲ್ಲದೆ ಮತ್ತೇನೂ ಅಲ್ಲ: ನನಗೆ ಈ ವ್ಯಾಧಿ ಬರುವ ಮುನ್ನ ವತ್ಸಲೆಯೊಡನೆ ಸುಖವಾಗಿದ್ದೆ.

ನಾನು ಸೈನ್ಯಕ್ಕೆ ಕ್ಯಾಪ್ಟನ್ ಆಗಿ ಸೇರಿದ ಕೆಲವು ದಿನಗಳಲ್ಲಿ, ವತ್ಸಲೆಯನ್ನು ಪ್ರೀತಿಸಿ ವರಿಸಿದೆ ; ಅವಳೂ ನನ್ನನ್ನು ಪ್ರೀತಿಸುತ್ತಿದ್ದಳು. ಬಹಳ ದಿನ ಸುಖವಾಗಿ ಕಾಲ ಹಾಕಿದೆವು.

ದುರ್ವಿಧಿಗೆ ಸಹಿಸದಾಯಿತೋ ಏನೋ? ಒಂದು ದಿನ "ವತ್ಸಲೆಯು ನಿನ್ನನ್ನು ನಿಜವಾಗಿಯೂ ಪ್ರೀತಿಸುತ್ತಾಳೆಯೇ ?" ಎಂಬ ಪ್ರಶ್ನೆ ಉಂಟಾಯಿತು. ಅಲ್ಲಿಂದ ಆರಂಭವಾಯಿತು ನನ್ನ ಸಂಶಯ ಪಿಶಾಚಿಯ ಕಾರ್ಯ. ಸುಖಜೀವನದಲ್ಲಿಯೂ ಕಷ್ಟದ ನೆರಳನ್ನು ಹುಡುಕುವರೇನೋ ಹುಚ್ಚುಮಾನವರು ! ನಿರಾಧಾರವಾದ ಸಂಶಯವನ್ನೇ ನಂಬಿ ದಾರಿ ತಪ್ಪಿದೆ.

ವತ್ಸಲೆಯು ತನ್ನ ಕೊಠಡಿಯಲ್ಲಿದ್ದ ಮೇಜಿನ ಡ್ರಾಯರಿಗೆ ಯಾವಾಗಲೂ ಬೀಗ ಹಾಕಿಯೇ ಇರುತ್ತಿದ್ದಳು. ಅನೇಕ ಬಾರಿ ಇದು ನನ್ನ ಗಮನಕ್ಕೆ ಬಂದಿತ್ತಾದರೂ ಆ ಬಗ್ಗೆ ಎಂದೂ ದುರ್ಭಾವನೆ ಒಡಮೂಡಿರಲಿಲ್ಲ. ಅಂದು ನನ್ನ ಸಂಶಯಪಿಶಾಚಿಗೆ ಸಿಕ್ಕ ಪ್ರಥಮ ಕುರುಹು ಅದೇ ! 'ನನ್ನಿಂದಲೂ ಮರೆಮಾಚಬೇಕಾದುದೇನನ್ನು ವತ್ಸಲೆಯು ಅದರಲ್ಲಿ ಇಟ್ಟಿರಬಹುದು ? ಅವಳ ಇದುವರೆಗಿನ ನನ್ನೊಡನೆಯ ವರ್ತನೆ ಬಹಿರಾಡಂಬರವಿರಬಹುದೇ ?....' ಎಂದೇನೇನೋ ಯೋಚನೆಗಳು ತಲೆದೋರಿ, ಅವಳ ಪ್ರತಿಚರ್ಯೆಯೂ ಅನುಮಾನಾಸ್ಪದವಾದುವು; ಸಂಶಯ ಪಿಶಾಚಿಗೆ ಪೂರ್ಣ ಆಸರೆಯಾದುವು.

ಒಂದು ದಿನ ಅವಳ ಗೆಳತಿ ಮಾಲತಿಯು, ತನ್ನ ಮಗನ ಹುಟ್ಟಿದ ಹಬ್ಬದ ಔತಣಕ್ಕೆ ಕರೆಯಬಂದಳು. ಔತಣದ ಕೆಲಸ ಕಾರ್ಯಗಳೆಂದರೆ ಬಹಳ ಆಶೆಯಿತ್ತಾದುದರಿಂದ, ಕೂಡಲೇ ವತ್ಸಲೆಯು ಮಾಲತಿಯೊಡನೆ ಹೊರಟಳು. ನಾನು ಮಾತ್ರ ನಿಧಾನವಾಗಿ ಬರುತ್ತೇನೆಂದು ಹೇಳಿ ಕಳುಹಿಸಿದೆ.

ಮಾಲತಿಯ ಮದುವೆ ಇಲ್ಲಿಯೇ ಆದುದು. ನಾವೂ ಅವಳ ಮದುವೆಗೆ ಹೋಗಿದ್ದೆವು. ಅಂದಿನಿಂದಲೇ ಅವಳ ಪತಿಯ ಪರಿಚವಾದುದು ನನಗೆ; ಯಾವುದೋ ಒಂದು ಕಚೇರಿಯಲ್ಲಿ ಅಕೌಂಟೆಂಟ್ ಆಗಿದ್ದಾನೆ ಆತ. ಕಳೆದ ಆರೆಂಟು ವರ್ಷಗಳಿಂದಲೂ ಇಲ್ಲೇ ಇರುವುದರಿಂದ ಅನೇಕರ ಪರಿಚಯವಾಗಿದೆ. ಹಾಗೂ ಗೆಳೆಯರ ಮಮತೆಯ ಕರೆಗೆ ಕಿವಿಗೊಡದವನಲ್ಲ ನಾನು. ಗೆಳೆಯರಿಗಾಗಿ ಯಾವ ಕೆಲಸವನ್ನಾದರೂ ಮಾಡುವ ಸ್ವಭಾವ ನನ್ನದು.

ವತ್ಸಲೆಯು ಮನೆಯಿಂದ ಹೋದ ಸ್ವಲ್ಪ ಹೊತ್ತಿನಲ್ಲೇ ಸಿಗಬಹುದಾದ ಎಲ್ಲ ಬೀಗದ ಕೈಗಳನ್ನೂ ಕೂಡಿಸಿ, ಡ್ರಾಯರಿನ ಬೀಗವನ್ನು ತೆಗೆಯಲು ಪ್ರಾರಂಭಿಸಿದೆ. ಸುಮಾರು ಒಂದು ಗಂಟೆಯ ಕಾಲ ಸಾಹಸಪಟ್ಟ ಮೇಲೆ ಒಂದು ಬೀಗದ ಕೈಯಿಂದ

ಬೀಗವನ್ನು ತೆಗೆದುದಾಯಿತು. ಮೊಟ್ಟ ಮೊದಲ ಕೊಲೆಗೆ ಸಾಹಸಮಾಡುತ್ತಿದ್ದ ಕೊಲೆಪಾತಕನಂತೆ ಭಾಸವಾಯ್ತು ನನಗೆ. ಮಾಡಬಾರದ ಕೆಲಸ ಮಾಡುತ್ತಿರುವೆನೆಂದು ಚೆನ್ನಾಗಿ ತಿಳಿದಿತ್ತು: ನನ್ನ ಪತ್ನಿಯ— ನನ್ನನ್ನೇ ನಂಬಿರುವ ಒಬ್ಬ ಅಬಲೆಯ— ರಹಸ್ಯವನ್ನು ಕೇಳಿ ತಿಳಿದುಕೊಳ್ಳಬಾರದೆ, ಕದ್ದು ತಿಳಿಯಲು ಯತ್ನಿಸುತ್ತಿದ್ದುದು ತಪ್ಪೇ!

ಡ್ರಾಯರಿನಲ್ಲಿದ್ದ ಪ್ರತಿ ಪದಾರ್ಥವನ್ನು ತೆಗೆದು ನೋಡಿ, ಅವುಗಳನ್ನು ಮೊದಲಿದ್ದ ಸ್ಥಾನದಲ್ಲಿಯೇ ಹಾಗೇ ಇಡತೊಡಗಿದೆ: ಡ್ರಾಯರಿನ ಬಾಗಿಲನ್ನು ತೆರೆದಿದ್ದುದು ವತ್ಸಲೆಗೆ ತಿಳಿಯದಿರಲೆಂದು. ಒಂದು ಮೂಲೆಯಲ್ಲಿ ಹಸುರು ಟೇಪಿನಲ್ಲಿ ಕಟ್ಟಿದ್ದ ಕಾಗದದ ಕಟ್ಟೊಂದಿತ್ತು: ಪ್ರೇಮಪತ್ರಗಳದೊಂದು ಗುಚ್ಛ; ಇನ್ನೂ ಎರಡು ಅದೇ ತರಹೆಯ ಕಟ್ಟುಗಳೂ ಇದ್ದುವು.

ಕಾಗದಗಳನ್ನೊಂದೊಂದಾಗಿ ನೋಡುವ ಕಾತರತೆಯಾದಾಗ 'ಇದು ಸರಿಯೆ? ಶೀಲವಂತನೆಸಗುವ ಕಾರ್ಯವೇ ಇದು.... ತನ್ನ ಪತ್ನಿಯ ವಿವಾಹಪೂರ್ವದ ಜೀವನರಹಸ್ಯಗಳನ್ನು ಕದ್ದು ತಿಳಿಯುವುದು? ಎಂದಾದರೂ ವತ್ಸಲೆ ನನ್ನ ಪೂರ್ವಜೀವನದ ಬಗ್ಗೆ ಪ್ರಶ್ನಿಸಿದ್ದಾಳೆಯೇ? ನಾನೇಕೆ ಆವಳ ವಿಷಯಗಳನ್ನು ತಿಳಿಯಲು ಯತ್ನಿಸಬೇಕು? ಅವಳು ದುರ್ಮಾರ್ಗದಲ್ಲಿರುವಳೆಂದು ಹೇಳಿದ್ದಾದರೂ ಯಾರು?.... ಯಾರು?.... ಯಾರು? ಆ ರೀತಿ ಊಹಿಸಿ ನಾನೇ ತಪ್ಪು ಮಾಡಿದೆ; ಅಷ್ಟೆ!' ಎಂದು ಎನ್ನಿಸಹತ್ತಿತು.

ಪತ್ರಗಳನ್ನೊಂದೊಂದಾಗಿ ಓದಿದಂತೆಲ್ಲಾ ಮೈ ಉರಿಯಲಾರಂಭಿಸಿತು. ಆ ಪತ್ರಗಳೆಲ್ಲಾ 'ಕ್ಷಣಿಕ ಸುಖಜೀವನ— ('ಸುಖ'ವೆಂಬ ಮಾತು ಸರಿಯೇ?)— ವನ್ನು ಶಾಶ್ವತವೆಂದು ಗಣಿಸಿ, ಪ್ರೇಯಸಿಯನ್ನು ಪ್ರೇಮಭಿಕ್ಷೆ ಬೇಡುವವನೊಬ್ಬ ತನ್ನ ಭಾವನೆಯನ್ನೇ ಪ್ರತಿಪಾದಿಸುವವಳೊಬ್ಬಳಿಗೆ ಬರೆದುವು. ಒಬ್ಬನು ತನ್ನ ಪ್ರೇಮವನ್ನು ಲಿಖಿತಮೂಲಕ ಎಷ್ಟರ ಮಟ್ಟಿಗೆ ವ್ಯಕ್ತಪಡಿಸಬಹುದೆಂಬುದು ತಿಳಿದುದು ಆಗಲೇ.... ಆ ಪತ್ರಗಳನ್ನು ಓದಿದ ಮೇಲೆಯೇ! ಯಾರು ಯಾರಿಗೆ ಬರೆದುವೆಂಬುದಕ್ಕೆ ರುಜುವಾವುದೂ ಇರಲಿಲ್ಲವಾಗಲೀ ನನ್ನ ವಿವಾಹಾನಂತರದ ತಾರೀಖುಗಳಲ್ಲಿಯೇ ಬರೆಯಲ್ಪಟ್ಟಿದ್ದುವಾದ್ದರಿಂದ, ವೃಥಾ ಸಂಶಯಕ್ಕೊಳಗಾಗಿದ್ದ ನನ್ನ ಮನಸ್ಸಿಗೆ ಒಳ್ಳೆಯ ರುಜುವಾತೇ ದೊರೆತಂತಾಯ್ತು: ಖಂಡಿತವಾಗಿ ವತ್ಸಲೆಯು ದುರ್ಮಾರ್ಗಪ್ರವರ್ತಿನಿಯೆಂದು ಸಿದ್ಧರಿಸಿಬಿಟ್ಟೆ.

ಈ ಭಾವನೆಯೇ ನನಗೆ ಸಾಕಷ್ಟು ಹುಚ್ಚುಹಿಡಿಸಿತು. ಸಂಜೆ ಬಂದ ಕೂಡಲೇ ವತ್ಸಲೆಯನ್ನೇ ಕೇಳಿಬಿಟ್ಟರೆ? ಕೇಳುವುದಾದರೂ ಹೇಗೆ? ಸತ್ಯಾಂಶ ಹೊರಬೀಳದಿದ್ದರೆ? .... ಅಂತೂ ನನ್ನ ಮನಸ್ಸಿಗೆ ಶಾಂತಿಯಿಲ್ಲವಾಯಿತು. ಮಾಲತಿಯ ಮನೆಯ ಔತಣದ ಬದಲು ಮನಸ್ಸಿನ ಹಗರಣ ವಿಪರೀತವಾಗಿಬಿಟ್ಟಿತು.

ಸಂಜೆಯಲ್ಲಿ ಎಲ್ಲೆಲ್ಲೋ ಸುತ್ತಿಕೊಂಡು, ರಾತ್ರಿ ಬಹಳ ತಡವಾಗಿ ಮನೆಸೇರಿದೆ. ಇನ್ನೂ ಮೈ ಆ ರಾತ್ರಿಯನ್ನು ನೆನೆಸಿಕೊಂಡರೆ ಮೈಯೆಲ್ಲಾ ನಡುಗುತ್ತದೆ. ಮಾಲತಿಯ ಮನೆಯಿಂದ ಬಂದು— ಮನೆಗೆಲಸಗಳು ತೀರದ ಮೇಲೆ ಬಹಳ ಆಯಾಸವಾಗಿದ್ದುದರಿಂದ— ವತ್ಸಲೆಯು ಮಲಗಿಬಿಟ್ಟಿದ್ದಳು. ಹಾಸಿಗೆಯ ಮೇಲೆ ಮಲಗಿಕೊಂಡೆನಾದರೂ ನಿದ್ದೆ ಬರಲೇ ಇಲ್ಲ. ಸುಮಾರು ಎರಡು ಗಂಟೆಯ ಹೊತ್ತಿನಲ್ಲಿ ಹಾಸಿಗೆಬಿಟ್ಟೆದ್ದು, ವತ್ಸಲೆಯು ಮಲಗಿದ್ದ ಕೋಣೆಗೆ ಹೋದೆ. ಮನಸ್ಸೆಷ್ಟು ಕಲ್ಮಷರಹಿತವಾಗಿದ್ದಿತೋ

ಬಾಯೋಟೋನಾ
ಇದರ ಸೇವನೆಯಿಂದ
ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ನರಗಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨ ಟ. ಖರ್ಚ ಬೇರೆ. ಸೂಚಿಪತ್ರಪಡೆಯಬಹುದು.
ROY & CO. BOMBAY 2.

ಚಿತ್ರಕಲಾ ಪ್ರವೇಶ
೨ನೆಯ ಆವೃತ್ತಿ
ಅಚ್ಚಾಗುತ್ತಲಿದೆ.
ಬೇಗನೆ
ಪ್ರಕಟವಾಗುವುದು.
ಬರೆದವರು:
ಶ್ರೀ. ಜಿ. ಎಸ್. ಹುದ್ದಾರ

ಮುಖವೂ ಅಷ್ಟೇ ನಿರ್ಮಲವಾಗಿ ಸೌಮ್ಯಮೂರ್ತಿಯಂತಿದ್ದಳು ವತ್ಸಲೆ. ಆದರೂ ದುರ್ಭಾವನೆಗಳಿಂದ ಕೂಡಿದ್ದ ನನ್ನ ಮನಸ್ಸಿಗೆ ಅವಳ ಬಗ್ಗೆ ಸಹಾನುಭೂತಿ ಹುಟ್ಟಲಿಲ್ಲ. ಕೊನೆಯದಾಗಿ ಒಂದು ಮಾತನ್ನೂ ಉಸುರಗೊಡದಂತೆ, ಪರಲೋಕಪ್ರವಾಸಮಾಡಿಸಿಬಿಟ್ಟೆ ವತ್ಸಲೆಗೆ!

ಸಂಶಯಪಿಶಾಚಿಗೆ ಪೂರ್ಣ ಮನಶ್ಶಾಂತಿ ದೊರೆತಂತೆ ಆಯಿತು ನನ್ನ ಈ ದುಷ್ಕಾರ್ಯದಲ್ಲಿ ಎಷ್ಟೋ ಜಾಗರೂಕನಾಗಿದ್ದೆನಾದರೂ, ಅಂದು ನೀವು ಕತ್ತರಿಸಿದ ಬೆಟ್ಟೆರಳಿನ ಮೇಲೆ ಒಂದೆರಡು ತೊಟ್ಟು ರಕ್ತ ಸಿಡಿಯಿತು. ಅದೇ ನನ್ನನ್ನು ಇಷ್ಟು ದಿನಗಳೂ ಕಾಡಿಸಿದ್ದು. ಅದೇ ಆ ಯಾತನೆಯೇ ಇಂದು ನನ್ನನ್ನು ವತ್ಸಲೆಯ ಬಳಿಗೆ ಹೊರಡಲು ಸಿದ್ಧಪಡಿಸುತ್ತಿರುವುದೂ! ವೈದ್ಯವೃತ್ತಿಯವರೇ ಏಕೆ, ಯಾರಾದರೂ ಸಹ ನನ್ನ ಈ ಮಾತನ್ನು ಕೇಳಿ ನಗಬಹುದು; ಒಂದೇ ಮಾತಿನಲ್ಲಿ ನನ್ನನ್ನು 'ಹುಚ್ಚ'ನೆನ್ನಲೂ ಬಹುದು. ಆದರೆ ಇದು ನನ್ನ ಅನುಭವಕ್ಕೆ ಬಂದಿರುವುದರಿಂದ ನೆಚ್ಚದಿರಲಾರೆ!

ಯಾರೂ ಸಂಶಯಪಡಲವಕಾಶವಿಲ್ಲದಂತೆಯೇ ವತ್ಸಲೆಯ ಅಂತ್ಯಕ್ರಿಯೆಗಳನ್ನು ಮುಗಿಸಿದೆ. ಅವಳ ಸಾವಿಗಾಗಿ ಮರುಗುವ ಜೀವವೊಂದೂ ಇಲ್ಲ—ಈ ಪತ್ರ ಬರೆಯುತ್ತಿರುವ ನನ್ನ ಹೊರತು! ಅಂತೂ ಚಿನ್ನದಂಥ ವತ್ಸಲೆಯನ್ನು ವೃಥಾ ದೂರಮಾಡಿಕೊಂಡೆ. ದುರ್ವಿಧಿಯ ಕುಹಕ ವರ್ತನೆಯೇ ಅಥವಾ ಸಂಶಯ ಮನೋವೃತ್ತಿಯ ಪೈಶಾಚವೃತ್ತಿಯೇ? ಏನೆಂದು ಕರೆದರೇನು? **ನನ್ನ ವತ್ಸಲೆಯನ್ನು ನಾನೇ ಕೊಲೆಮಾಡಿ ಕೊಲೆಪಾತಕನಾದೆ.**

ಇದಾದ ಆರನೆಯ ದಿನವೋ ಏಳನೆಯ ದಿನವೋ, ಮಾಲತಿಯು ಮಗುವನ್ನೆತ್ತಿಕೊಂಡು ಮನೆಗೆ ಬಂದಳು. ಪತ್ನಿಯ ಮರಣಕ್ಕಾಗಿ ದುಃಖಿಸಬೇಡವೆಂದು ಎಷ್ಟೆಷ್ಟೋ ಹೇಳಿದಳು. ಆದರೆ ನನಗೆಲ್ಲಿಯ ದುಃಖ? ಒಂದೇ ಮಾತಿನಲ್ಲಿ ಅವಳೆಲ್ಲ ಪುರಾಣಕ್ಕೂ ಕೊನೆ ಮುಟ್ಟಿಸಿದೆ. ಅನಂತರ ಮಾಲತಿಯೇ "ತಮ್ಮಲ್ಲಿ ಒಂದು ಗುಟ್ಟಿನ ಕೆಲಸವಾಗುವುದಿತ್ತು!" ಎಂದಳು. "ಏನದು? ಅಂತಹ ರಹಸ್ಯ?"

"ವತ್ಸಲೆಯ ಬಳಿ ಮೂರು ಕಾಗದದ ಕಟ್ಟುಗಳನ್ನು ಜೋಪಾನವಾಗಿ ಇಟ್ಟಿರೆಂದು ಹೇಳಿ ಕೊಟ್ಟಿದ್ದೆ. ತನ್ನ ಮೇಜಿನ ಡ್ರಾಯರಿನಲ್ಲಿಟ್ಟಿರುವೆನೆಂದು ಹೇಳಿದ್ದಳು. ದಯೆಮಾಡಿ ಅವುಗಳನ್ನು ವಾಪ್ಸು ಕೊಡುತ್ತೀರಾ?" ಎಂದಳು.

ಮೈಯೆಲ್ಲಾ ಥರಥರ ನಡುಗಹತ್ತಿತ್ತು ಆ ಮಾತುಗಳನ್ನು ಕೇಳಿ. ಯಾರ ಕೃತ್ಯಕ್ಕೆ ಯಾರು ಹೊಣೆ? ಯಾರಿಗೆ ಶಿಕ್ಷೆ? ಶಿಕ್ಷಿಸುವ ಅಧಿಕಾರ ಯಾರಿಗೆ? ಅದೂ ಮರಣದಂಡನೆಯೆ? ಅಯ್ಯೋ ವತ್ಸಲಾ.... ವೃಥಾ ನಿನ್ನನ್ನು ಕಳೆದುಕೊಂಡೆನಲ್ಲಾ!... ನಮ್ಮ ದಾಂಪತ್ಯದ ಸುಖಜೀವನವನ್ನು ಕಂಡು ಸಹಿಸದಾಯಿತೇನೋ ದುರ್ವಿಧಿಗೆ?.... ಸತ್ತವರಿಗತ್ತೇನು ಬಂತು? ವಿಧಿ ಬರೆಹವೇ ಅಂತಿದ್ದರೆ ಯಾರೇನು ಮಾಡಬಲ್ಲರು? ಮನಸಾರೆ ಮೆಚ್ಚಿ ಮದುವೆಯಾದ ವತ್ಸಲೆಯನ್ನು ನಾನೇ ಕೊಂದು ಕೊಲೆಪಾತಕನಾಗುವ ಹಣೆಯ ಬರೆಹ ನನ್ನದಾಯಿತೇ?' ಎನ್ನಿಸಿತು.

"ಯಾರ ಕಾಗದಗಳವು? ಏನು ಸಮಾಚಾರ?" ಎಂದು ತೊದಲುವ ಧ್ವನಿಯಲ್ಲಿಯೇ ಪ್ರಶ್ನಿಸಿದೆ. ನನ್ನ ಪ್ರಶ್ನೆ ಸಹಜವಾದುದೇ; ಆದರೂ ಮಾಲತಿಗೆ ಸಿಟ್ಟುಬಂದಿತು.

"ಎಂದೂ ವತ್ಸಲೆಯೂ ಸಹ ಕೇಳಲಿಲ್ಲ; ಓದಲಿಲ್ಲ. ನನಗಾಗಿ ಸಹಾಯ ಮಾಡಿದ್ದಳು. ನೀವು ಈ ರೀತಿ ಪ್ರಶ್ನಿಸುವಷ್ಟು...." ಎಂದೇನೋ ಹೇಳಲಿದ್ದಳು ಮಾಲತಿ. ಮಿಂಚಿಹೋದ ಕಾರ್ಯಕ್ಕೆ ಎಷ್ಟು ಚಿಂತಿಸಿದರೆ ತಾನೇ ಏನು ಪ್ರಯೋಜನ?.... ಕಾಗದಗಳ ಕಟ್ಟನ್ನು ತೆಗೆದುಕೊಂಡು ಬಂದು ಮಾಲತಿಯ ಕೈಗೆ ಕೊಟ್ಟೆ. ಅವಳ ಮಗು ಕಟ್ಟೊಂದರ ಟೇಪನ್ನು ಎಳೆಯಹತ್ತಿತು. ಅದಕ್ಕೇನು ತಿಳಿದೀತು? ನನ್ನ ವತ್ಸಲೆಯ ಮರಣಕ್ಕೆ ಕಾರಣವಾದ ಪತ್ರಗಳನೆಂದು? ಹೋಗಿಬರುತ್ತೇನೆಂದು ಕೂಡ ಹೇಳದೆ, ಬಂದ ದಾರಿಯಲ್ಲಿ ಹೊರಟಳು ಮಾಲತಿ. ನನಗೆ ಮಾತ್ರ ಮಾಲತಿಯು ಮೃತ್ಯುದೇವತೆಯ ಪರರೂಪವೆಂದೇ ಅನ್ನಿಸಿತು.

ಸಿಡಿದಿದ್ದ ರಕ್ತದ ಕಲೆ ಅಂದೇ ಮಾಯವಾಗಿತ್ತು; ಆದರೂ ವಿಷಪ್ರಾಣಿ ಯಾವುದಾದರೂ ಕುಟುಕಿದ್ದರೆ ಆಗುತ್ತಿದ್ದಂತಹ ಯಾತನೆ ಮಾತ್ರ ಅಂದಿನಿಂದಲೂ ನನ್ನ ಪಾಲಿಗೆ ಬಂದಿತ್ತು; ಒಂದೆರಡು ಸಲ ಹೆಚ್ಚುತ್ತಲೂ ಇತ್ತು. ಕೆಲವು ವೇಳೆ ನಿದ್ದೆ ಮಾಡುತ್ತಿದ್ದಾಗಲೂ– ನನಗೆ ಯಾತನೆಯರಿವಿನಿಂದ– ಪೂರ್ಣ ನಿದ್ರಾಪರವಶನಾಗುವುದು ಈ ಜನ್ಮದಲ್ಲಿ ಸಾಧ್ಯವೇ ಇಲ್ಲವೆನ್ನಿಸಿತ್ತು. ಯಾರಿಗೂ ಈ ವ್ಯಾಧಿಯನ್ನು ಹೇಳಲಾರದಾಗಿದ್ದೆ; ಹೇಳಿದರೆ ತಾನೇ ಯಾರು ನಂಬುತ್ತಾರೆ? ನೀವೇ ಹೇಳಿ.

ಒಂದೇ ಒಂದು ಧೈರ್ಯ ನನಗಿರುವುದೆಂದು: ವೃಥಾ ಸಂಶಯ ಪರಂಪರೆಗೆ ಸಿಲುಕಿ ಕೊಲೆಪಾತಕನಾದ ನನ್ನನ್ನು, ಖಂಡಿತವಾಗಿಯೂ ವತ್ಸಲೆಯು ಕ್ಷಮಿಸುತ್ತಾಳೆ. ಇದೇ ನನ್ನನ್ನು ಮರಣವನ್ನಾಲಿಂಗಿಸೆಂದು ಒತ್ತಾಯಪಡಿಸುತ್ತಿರುವುದೂ.

ಇನ್ನೂ ಹೇಳಬೇಕೆನ್ನಿಸುತ್ತದೆ. ಆದರೆ ನೋವೂ ಹೆಚ್ಚಾಗುತ್ತಿದೆ. ವತ್ಸಲೆಯ ಮರಣಾನಂತರದ ಪತ್ರ ಬರೆಯುವುದಿದೇ ಮೊದಲು ಹಾಗೂ ಕೊನೆ? ಅಸಹಜ ಮರಣವೇ ನನಗಿಂದಿರುವ ಏಕಮಾತ್ರ ಪಥ! ಕ್ಷಮೆಯಿರಲಿ.

ಜನ ಈಗ ನಿಮ್ಮ ಬಗ್ಗೆ ಏನೆನ್ನುತ್ತಾರೋ ಏನೋ! ನನಗೆ ಹೇಳುವವರಾದರೂ ಯಾರು? ನನಗೆ ಮಾತ್ರ ಈ ಆರು ತಿಂಗಳು ಕಾಲ ಜೀವದಾನ ಮಾಡಿದ್ದೀರಿ; ಅದಕ್ಕಾಗಿ ನಾನು ನಿಮಗೆ ಚಿರಋಣಿ.

ಇತಿ.

⊙ ನವಯುಗದ ಮಹಿಳೆಯರು ⊙

ಶ್ರೀಮತಿ ಇಂದಿರಾ ಗಲಗಲಿ, ಕಿರ್ಲೋಸ್ಕರವಾಡಿ

★

ಗೃಹಕೃತ್ಯದಲ್ಲಿ ಯಂತ್ರದ ನೆರವು

ಗೃಹಿಣಿಯರು ಹೆಚ್ಚಾದ ವೇಳೆಯನ್ನು ಮನೆಗೆಲಸದಲ್ಲಿಯೇ ಕಳೆಯಬೇಕಾಗುತ್ತದೆ. ದಿನದಿನವೂ ಅವರು ಅವೇ ಕೆಲಸಗಳನ್ನು

ತಪ್ಪದೇ ಮಾಡಬೇಕಾಗುವುದರಿಂದ ವೇಳೆಯ ಜೊತೆಗೆ ದೈಹಿಕ ಶ್ರಮವನ್ನೂ ಸಹಿಸಬೇಕಾಗುತ್ತದೆ. ಇದರಿಂದಾಗಿ ತಮ್ಮ ಬೌದ್ಧಿಕ ಹಾಗು ಸಾಂಸ್ಕೃತಿಕ ಬೆಳವಣಿಗೆಗೆ ಅವರಿಗೆ ಬಿಡುವೇ ದೊರೆಯುವುದಿಲ್ಲ. ಇದನ್ನು ತಪ್ಪಿಸಲು ಯಂತ್ರದ ನೆರವು ದೊರೆತರೆ, ಅವರ ಶ್ರಮದ ಹಾಗು ಹೊತ್ತಿನ ಅಪವ್ಯಯ ಉಳಿಯಬಹುದೆಂದು ಇತ್ತೀಚೆಗೆ ಅಮೇರಿಕಾ ಹಾಗು ಇಂಗ್ಲಂಡ್ ದೇಶಗಳಲ್ಲಿ ಜರುಗುವ ಪ್ರದರ್ಶನಗಳಲ್ಲಿ, ಇಂತಹ ಯಂತ್ರಗಳನ್ನೂ ಸಾಧನಗಳನ್ನೂ ಇರಿಸಿ, ಗೃಹಿಣಿಯರಿಗೆ ಅವುಗಳ ಉಪಯುಕ್ತತೆಯನ್ನು ತೋರಿಸಿಕೊಡಲಾಗುತ್ತದೆ. ನಮ್ಮಲ್ಲಿ ಜರುಗುವ ಪ್ರದರ್ಶನಗಳೂ ಮಹಿಳೆಯರ ಸಮ್ಮೇಲನಗಳೂ ಈ ಉಪಕ್ರಮವನ್ನು ಕೈಕೊಂಡರೆ ಒಳಿತಾಗಲಿಕ್ಕಿಲ್ಲವೆ?

ಸೆರೆತ್ಸಿ ಖಾಮಾ

ಪ್ರೇಮದ ದಾರಿ ಎಂದಿಗೂ ತೊಡಕಿನದೇ. ಅದರಲ್ಲಿ ಇಂತಹ ಪ್ರೇಮಕ್ಕೆ ರಾಜಕಾರಣದ ಹಿನ್ನೆಲೆಯಿದ್ದರಂತೂ ಮುಗಿದೇ ಹೋಯಿತು. ಇಂಗ್ಲಂಡದ ಅರಸರಾದ ಎಂಟನೆಯ ಎಡ್ವರ್ಡರು ಮಿಸೆಸ್ ಸಿಂಪ್ಸನ್ನಳೊಡನೆ ಮಾಡಿಕೊಂಡ ಪ್ರೇಮವಿವಾಹಕ್ಕಾಗಿ ಸಿಂಹಾಸನಕ್ಕೆ ಎರವಾಗಬೇಕಾಯಿತು. ಇಂತಹದೆ ಒಂದು ಸನ್ನಿವೇಶ ಆಫ್ರಿಕೆಯ ಬಮುರಂಗ್-ವಾಟೊ ಜಾತಿಯ ಅರಸನ ಜೀವನದಲ್ಲಿ ಸಂಭವಿಸಲಿದೆ. ಸೆರೆತ್ಸಿ ಖಾಮಾ ಇವರು ಚಿಕ್ಕವರಾಗಿರುವುದರಿಂದ ಅವರ ಚಿಕ್ಕಪ್ಪನೇ ರಾಜ್ಯವನ್ನು ಆಳುತ್ತಾನೆ. ಉಚ್ಚ ಶಿಕ್ಷಣಕ್ಕಾಗಿ ಖಾಮಾ ಇವರು ಸಧ್ಯಕ್ಕೆ ಇಂಗ್ಲಂಡದಲ್ಲಿ ಇರುತ್ತಿದ್ದು ರುಥ್ ಎಂಬ ಆಂಗ್ಲ ಕನ್ಯೆಯೊಡನೆ ಪ್ರೀತಿ ವಿವಾಹದಲ್ಲಿ ಸಿಕ್ಕಿಕೊಂಡಿದ್ದಾರೆ. ರಾಜಕಾರಣದ ಆಟವನ್ನು ಆಡುವವರು ಕರಿ-ಕೆಂಪು ಎಂಬ ವರ್ಣಭೇದದ ಗುಲ್ಲೆಬ್ಬಿಸಿದ್ದಾರೆ. ಅದಕ್ಕೆ ಸರಿಯಾಗಿ ಆಂಗ್ಲ ಸರಕಾರವು ಖಾಮಾರವರಿಗೆ ಸ್ವದೇಶಕ್ಕೆ ಹೋಗಲು ಕೂಡ ನಿರ್ಬಂಧವನ್ನು ಹಾಕಿದೆಯಂತೆ! ಇಷ್ಟೇ ಅಲ್ಲ, ಗಂಡ ಹೆಂಡರ ಭೆಟ್ಟಿಗೂ ಅವಕಾಶವನ್ನು ಕೊಡಲಾಗಿಲ್ಲವಂತೆ! ಇನ್ನು ಈ ಪ್ರೇಮವಿವಾಹವು ಹೇಗೆ ಕೊನೆಗಾಣುವುದೋ ನೋಡಬೇಕು!

ಸ್ತ್ರೀಯರು ವಹಿಸುವ ಗಂಡು ಪಾತ್ರಗಳು

ಕುಲೀನ ಸ್ತ್ರೀಯರು ನಾಟಕಗಳಲ್ಲಿ ಪಾತ್ರ ವಹಿಸುವುದು ಯೋಗ್ಯವೊ ಅಯೋಗ್ಯವೊ ಎಂಬ ವಾದ ಸನಾತನವಾದುದು! ಈ ವಾದವನ್ನು ಲಕ್ಷಿಸದೆ ಅನೇಕ ಕುಲೀನ ಹೆಣ್ಣು ಮಕ್ಕಳು ಹಾಗು ಕಲಾಪ್ರೇಮಿಗಳಾದ ಯುವತಿಯರು ರಂಗಭೂಮಿಯ ಮೇಲೆ ಕಾಣಿಸಿಕೊಂಡರು. ಆದರೂ ಗಂಡಸಿನೊಡನೆ ನಾಟಕಗಳಲ್ಲಿ ಪಾತ್ರವಹಿಸುವುದು ಕೆಲವರಿಗೆ ತೊಂದರೆಯಿದೆನಿಸಿದ್ದರಿಂದ, ಪುರುಷ ಪಾತ್ರಗಳಿಲ್ಲದ ನಾಟಕಗಳು ಪ್ರಚಾರದಲ್ಲಿ ಬಂದುವು ಆದರೆ ಬರಿ ಸ್ತ್ರೀಯರಿಂದಲೇ ಕೂಡಿದ ನಾಟಕವು ರಂಜಿಸುವದಿಲ್ಲವೆಂಬುದು ಅನುಭವಕ್ಕೆ ಬಂದ ಮೇಲೆ—ಈಗ ಮಹಾರಾಷ್ಟ್ರದಲ್ಲಿ ಪುರುಷ ಪಾತ್ರಗಳನ್ನೂ ಸ್ತ್ರೀಯರೇ ಅಭಿನಯಿಸಿ ತೋರಿಸುವ ಕಲ್ಪನೆ ಮುಂದೆ ಬಂದಿದೆ. ಗಂಡಸು ಹೆಂಗುಸಾಗಿ ನಟಿಸುವುದು ಎಷ್ಟು ಅಸ್ವಾಭಾವಿಕವೊ ಅಷ್ಟೇ ಹೆಂಗುಸು ಗಂಡುಸಿನ ಪಾತ್ರದಲ್ಲಿ ನಟನೆ ಮಾಡುವುದು ಕೂಡ ಅಸಹ್ಯವೇ! ಆದರೆ ಉತ್ಸಾಹಕ್ಕೆ ಬೆಲೆ ಎಲ್ಲಿದೆ?

ಸೌಭಾಗ್ಯಾಲಂಕಾರದ ಮೇಲೆ ಮಾರಾಟಕರ

ಕುಂಕುಮ ದಂಥ ಸೌಭಾಗ್ಯಾಲಂಕಾರದ ಮೇಲೆ ನಮ್ಮ ಮುಂಬಯಿ ಸರಕಾರವು ಮಾರಾಟಕರವನ್ನು ಹೇರಿದೆಯೆಂದು ಹೇಳಲಾಗುತ್ತಿದೆ. ಇದು ನಿಜವಿರಬಹುದೆ? ಸ್ವತಂತ್ರಭಾರತದಲ್ಲಿ ಇಂಥ ವಸ್ತುವಿಗೂ ಕರವನ್ನು ಕೊಡಬೇಕಾದುದು ನಮ್ಮ ದೌರ್ಭಾಗ್ಯವಲ್ಲವೇ?

ಕಾಶಿ ಗಂಗಾ

'ಅಶ್ವತ್ಥ'

★

ಕಾಶಿ ಗಂಗಾ! ತಾಯಿ ಗಂಗಾ!
ಏನಮ್ಮ ನಿನ್ನ ತುಂಬು!
ಸೌಂದರ್ಯ ಗಾಂಭೀರ್ಯ!
ಸಹೃದಯ ಶಾಂತಿ, ಕಾಂತಿ!

ಅಗಲದೀಯೆದೆ ಹಾಲು
ಹರಿದು ಸಾಸಿರ ಮೈಲು
ಬೆಳೆಸಿಹುದು ಎಷ್ಟು ವನ!
ಪೊರೆದಿಹುದು ಎಷ್ಟು ಜನ!

ಕೈಲಾಸವನೆ ಬಿಟ್ಟೆ
ಹಿಮಗಿರಿಯಸಿಳಿದೆ,
ನಮ್ಮೆಡೆಗೆ ನಡೆಯಿಟ್ಟೆ
ತೊಳೆದೆಮ್ಮ ಪೋಷಿಸಿದೆ

ನಿನ್ನ ಪ್ರೇಮವ ಪಡೆದು
ಹೊತ್ತು ಮಕ್ಕಲ ಬೆಣ್ಣೆ
ಇತ್ತೆ ಈ ನೆಲವುಣ್ಣೆ
ತುಷ್ಟಿ-ಪುಷ್ಟಿಯ ಕಾಣೆ.

ಕಾಶಿಯಲಿ ನೀನೆಮ್ಮ
ಬಾಗಿ ತಬ್ಬಿಹೆಯಮ್ಮ
ತಾಯ ತೋಳಿನ ಸುಖವು
ಮಕ್ಕಳೆಮಗೆಷ್ಟು!

ಬಲದಿ ನಿನ್ನ ಕ್ಷರೆಯ
ಮೂರ್ತಿವೆತ್ತಂತಿದ್ದು
ಕಣ್ಣು ತಣಿಸುವ ವನದ
ಪಚ್ಚೆತರು ಸಾಲೆದ್ದು —

ಎಡದ ಬಗಲನು ಹತ್ತಿ
ಮಗುವಿನಂತಿರುತಿದ್ದು
ಮೆಟ್ಟಿಲಲಿ ಮನೆ ಘಟ್ಟ
ಕಾಶಿ ಪಟ್ಟಣ ನೋಟ.

ಮೆಲ್ಲಗಲೆಯುವ ದೋಣಿ
ದೋಣಿಗನ ಎದೆಗಾನ
ಹುಟ್ಟುಹಾಕುವ ತಾಳ
ಮೆಲ್ಲುಡಿಯ ರಸಿಕಜನ.

ಮುಳುಗಲಿಹ ಹೊಂಬೆಳಕು,
ಮಂಗಳಾರತಿ ಮಿಣುಕು.
ಪೂಜೆ ಭಜನೆಯ ಮಧ್ಯೆ
ಶಂಖ, ಗಂಟೆಯ ವಾದ್ಯ.

ಇಲ್ಲಿಯಾಗಲು ಪೂಜೆ
ಅಲ್ಲಿ ಸೇರುವುದು ರುಜೆ,
ಒಂದು ಕಡೆ ಕಾಣ್ಕೆ ಹಣ
ಬೇರೆ ಕಡೆ ಎಸೆದ ಹೆಣ.

ಇವನೆಲ್ಲ ಒಂದಾಗಿ
ಪರಿಗಣಿಸಿ ತವಸಿ ನೀ
ಮಂದಹಾಸದಿ ನಡೆವೆ
ತಾಯಿ ಮಂದಾಕಿನೀ!

ಜನ ತೊಳೆದುಕೊಳಲೆಂದು
ಅವರ ಕೊಳೆ ನೀ ಹೊರುವೆ,
ಜನ ಬಾಳಬೇಕೆಂದು
ನಿನ್ನ ಸಿರಿ ನೀ ನೆರೆವೆ.

ಮೇಲು ಕೀಳೆಂದೆಂಬ
ಭೇದವೇ ನಿನಗಿಲ್ಲ,
ಯುಗಯುಗದಿ ಜಗವರಿದ
ಸೃಷ್ಟಿಸಮ ನಿನಗೆಲ್ಲ.

ನೀನೊಂದನೂ ಕೇಳೆ
ನಿನ್ನನೇ ಅರ್ಪಿಸಿಹೆ,
ಇದೆ ನಿನ್ನ ಪಾವನತೆ
ಗುಟ್ಟಲ್ಲವೇ ತಾಯಿ?

ಪಾವನತೆ ಇದನರಿದ
ನಿನ್ನಿನಿಯ ವಿಶ್ವಪತಿ
ಸಿರಿ ಶಿರದ ಮೇಲೆಯೇ
ಸ್ಥಳಗೊಟ್ಟನಲೆ ತಾಯಿ?

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಉಪೇಕ್ಷಿಸಿದಂತೆ '**ಹಾಳು ತೋಟ**' ಎಂಬ ನಗೆಯಾಟವನ್ನು ಕುರಿತು ಬೇರೆ ಬೇರೆ ಎಂಟು ಜನರಿಂದ ವಿಮರ್ಶೆಗಳು ಬಂದಿವೆ. ವಿಮರ್ಶಕರ ಅನುಕ್ರಮ ಹೀಗಿದೆ:

೧. ಶ್ರೀ. ವಿ. ಎಂ. ಶೆಟ್ಟರ, ಮಹಾಲಿಂಗಪುರ. ೨. ಶ್ರೀ. ಸೀತಾರಾಘವ, ಹಾಸನ. ೩. ಶ್ರೀ. ಎ. ಎಚ್. ನಾಗರಾಳ, ಗುಳೇದಗುಡ್ಡ. ೪ ಶ್ರೀ. ಮಲ್ಲಿಕಾರ್ಜುನ ಎಫ್. ಬಸರಕೋಡ, ಗುಳೇದಗುಡ್ಡ. ೫. ಶ್ರೀ. ವಿ. ಜಿ. ಗುಮಾಸ್ತೆ, ಸೊಲ್ಲಾಪುರ. ೬. ಶ್ರೀ. ಜಿ ಎಸ್. ಕಾಸಸೇ, ಲಚ್ಯಾಣ. ೭. ಶ್ರೀಮತಿ ಪದ್ಮಾ, 'ಶಾರದಾ ಸ್ತ್ರೀಸಮಾಜ' ಬೆಂಗಳೂರು, ೮ ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ.

ಬಂದ ವಿಮರ್ಶೆಗಳನ್ನೆಲ್ಲ ಜಯಂತಿಯ **ಸಂಪಾದಕ ಸಮಿತಿಯೇ ನೋಡಿ ನಿರ್ಣಯವನ್ನು ಕೊಟ್ಟಿದೆ : ಶ್ರೀ ಎಸ್. ಶ್ರೀಕೃಷ್ಣ ಪೆರಡಾಲ** ಅವರದು ಅತ್ಯುತ್ತಮವಾಗಿದೆ. **ಶ್ರೀಮತಿ** ಪದ್ಮಾ, **ಬೆಂಗಳೂರು** ಅವರ ವಿಮರ್ಶೆಯೂ ಉತ್ತಮ-ವಾಗಿದೆ. ಮಿಕ್ಕವುಗಳಲ್ಲಿ ಯಾವುದೂ ಹೇಳಿಕೊಳ್ಳುವಂತಹದಿಲ್ಲ.

ನಗೆಯಾಟ (ಫಾರ್ಸ್)ಗಳಲ್ಲಿ ಅತಿವಾಸ್ತವವನ್ನು ಹುಡುಕುವುದು ತಪ್ಪು. ಏಕೆಂದರೆ ಅವುಗಳಲ್ಲಿ ಬರುವ ಪಾತ್ರಗಳು ವಾಸ್ತವದ ಅಣಕಗಳಾಗಿರುತ್ತವೆ. ಮಾನವೀಯ ಅಶಕ್ತತೆಗಳನ್ನು ಹಿಗ್ಗಿಸಿ ದೊಡ್ಡವನ್ನಾಗಿ ಮಾಡಿ, ವಿಕ-ವಿಕಾರವಾದ ಬಣ್ಣ ಕೊಟ್ಟು ರೂಪಿಸಿರುವುದೇ ನಗೆಯಾಟದ ಪಾತ್ರಪೋಷಣೆಯ ವೈಶಿಷ್ಟ್ಯ. ವಾಸ್ತವತೆಯ ಅಳತೆಗೋಲನ್ನು ಇಟ್ಟುಕೊಂಡು ಕುಳಿತರೆ, ಇಂದಿನ ಸುಪ್ರಸಿದ್ಧ ನಗೆಯಾಟಗಾರರಾದ **ಲಾರೆಲ್ ಮತ್ತು ಹಾರ್ಡಿ**ಯವರ ಕಲೆಗೆ ಬೆಲೆಯೇ ದೊರೆಯಲಿಕ್ಕಿಲ್ಲ. 'ಮಲ್ಲಿಗೆ' ಎಂದು ಹೇಳುವ ವಸ್ತುವಿನಲ್ಲಿ ಮಲ್ಲಿಗೆಯ ಗುಣಗಳಿವೆಯೋ ಇಲ್ಲವೋ ಎಂಬುದನ್ನು ವಿಮರ್ಶಿಸಿ ಹೇಳಬೇಕಲ್ಲದೆ, ಮದ್ದುಗುಣಿಕೆಯ ಹೂವಿನಲ್ಲಿ ಮಲ್ಲಿಗೆಯ ಗುಣವಿಲ್ಲವೆಂದು ಹಳಿದುಬಿಡುವುದು ವಿಮರ್ಶೆಯೆನಿಸದು.

ಮುಂದಿನ ತಿಂಗಳ ವಿಮರ್ಶೆಗಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ '**ಬೆಳವಡಿಯ ಮಲ್ಲಮ್ಮ**' **ಎಂಬ** ಐತಿಹಾಸಿಕ ರೂಪಕವನ್ನು ತೆಗೆದುಕೊಳ್ಳಬೇಕು.

--ಸಂಪಾದಕರು.

'ಹಾಳು ತೋಟ'

(ನಗೆಯಾಟದ ವಿಮರ್ಶೆ)

ಶ್ರೀ ಯಸ್. ಶ್ರೀಕೃಷ್ಣ, ಪೆರಡಾಲ.

ಕಿವುಡರಿಬ್ಬರು ಸೇರಿದಾಗ ಒದಗಬಹುದಾದ ಸನ್ನಿವೇಶದ ಕಾಲ್ಪನಿಕ ಚಿತ್ರ 'ಹಾಳು ತೋಟ'ವೆಂಬ ನಗೆಯಾಟವಾಗಿ ರೂಪುಗೊಂಡಿದೆ. ಅವರಲ್ಲೊಬ್ಬನನ್ನು ನಟನೆಯ ಕಿವುಡನನ್ನಾಗಿ ಮಾಡಿದುದು ನಗೆಯಾಟದ ಕಳೆಯನ್ನು ಇನ್ನಷ್ಟು ಹೆಚ್ಚಿಸಿದೆ. ನಗೆಯಾಟವೆಂಬ ಹೆಸರಿಗೆ ಸಾರ್ಥಕತೆ ಒದಗಿಸಿದೆ. ಇಲ್ಲವಾದರೆ, ಇಬ್ಬರೂ ಕಿವುಡರೆಂಬುದರಿಂದ, ಅವರ ದುರ್ವಿಧಿಗಾಗಿ ಮರುಕ ಓದುಗನಲ್ಲಿ ಉದ್ರೇಕವಾಗುತಿತ್ತು.

ಕಾರಣಾಂತರದಿಂದ ಕಿವುಡನಾದ ರಾವಸಾಹೇಬ ತನಗೆ ಅಳಿಯ-ನಾಗುವವನೂ ಕಿವುಡನೇ ಆಗಿರಬೇಕೆಂಬ ವಿಲಕ್ಷಣ ಹಟದಲ್ಲಿದ್ದಾಗ, ಶ್ಯಾಮರಾಯ ಕಿವುಡನ ಸೋಗನ್ನು ನಟಿಸಿದುದರಿಂದ ಅವನೇ ತನ್ನ ಮಗಳಿಗೆ ತಕ್ಕ ವರನೆಂದು ನಿರ್ಧರಿಸುವನು. ಆದರೆ, ತನ್ನ ಬಧಿರತ್ವ ಮಾಯವಾದಾಗ 'ಕೆಪ್ಪ'ನನ್ನು ಅಳಿಯನಾಗಿ ಸ್ವೀಕರಿಸಲು ಹಿಂಜರಿಯುವನು. ಇಲ್ಲಿ ಅಳಿಯನಾಗುವವನು ನಟನೆಯ ಕಿವುಡ. ನೈಜ ಕಿವುಡೇ ಮಾಯವಾಗುವಾಗ, ನಟನೆ ತಾನಾಗಿ ಮಾಯ-ವಾಗುವುದು. ರಾವಸಾಹೇಬನು ಶಚಿಯನ್ನು ಶ್ಯಾಮರಾಯನಿಗೆ ಕೊಡಲು ಸಮ್ಮತಿಸುವನು. ಇದಿಷ್ಟು 'ಹಾಳು ತೋಟ'ದ ಹಂದರ. ಇದರ ಮೇಲೆ ಕಲ್ಪನೆಯ ಬಳ್ಳಿ ಸೊಂಪಾಗಿ ಹರಡಿದೆ; ನಗೆಹೂ ಅರಳಿದೆ.

ಸಾಮಾನ್ಯ ನಾಟಕಗಳಲ್ಲಿ, ಏಕಾಂಕಗಳಲ್ಲಿ ಕಂಡುಬರುವ ಪಾತ್ರ-ಪರಿಪೋಷಣೆ, ಕಥಾನಿರೂಪಣೆಗಳಿಗೆ ಇಲ್ಲಿ ಪ್ರಾಧಾನ್ಯವಿಲ್ಲ. ಹಾಗೆಯೇ ಐಕ್ಯತೆಯಾಗಲೀ ಭಾವಾವೇಶವಾಗಲೀ ಇಲ್ಲಿ ಮುಖ್ಯ-ವಲ್ಲ. ಇದೊಂದು ನಗೆಯಾಟ (Farce). ಹಾಗೆಂದು, ಇಲ್ಲಿ ನಗೆಗೇ ಪ್ರಾಶಸ್ತ್ಯ; ಯೋಗ್ಯ ಸನ್ನಿವೇಶ ನಿರ್ಮಾಣದಲ್ಲಿ, ಸಂಭಾಷಣಾ ಕೌಶಲದಲ್ಲಿ ನಗೆಯಾಟದ ಸಾರ್ಥಕ್ಯ. ಆದುದರಿಂದ, ಲೇಖಕರಾದರೂ, ನಗೆಯಾಟದ ಯಶಸ್ಸಿಗೆ ಕಾರಣವಾದ ಗುಣಗಳನ್ನು 'ಹಾಳು ತೋಟ'ದಲ್ಲಿ ಶುಂಬುವುದರಲ್ಲಿ ತಮ್ಮ ಜಾಣ್ಮೆ ಪ್ರದರ್ಶಿ-ಸಿದ್ದಾರೆ.

ಕಿವುಡನಾದ ಯಜಮಾನನೊಂದಿಗೆ ಆಳಿನ ವರ್ತನೆ, ಕಿವುಡು-ತನವೇನೂ ಇಲ್ಲದ ವ್ಯಕ್ತಿ ಕಿವುಡನಾಗಿ ನಟಿಸಿ ಅನಾಯಾಸವಾಗಿ ಅಳಿಯತನವನ್ನನುಭವಿಸುವುದು— ಇವೆರಡು ಇಲ್ಲಿ ನಿರ್ಮಾಣ-ವಾದ ಸನ್ನಿವೇಶಗಳು. ಕಿವುಡರ ಆಟದಲ್ಲಿ ಎಂತಹ ಸಂಭಾಷಣೆ-ಯಾದರೂ ಕೇಳುವವರಿಗೆ ನಗುವಿನ ಹಬ್ಬದೂಟ.

ಮರಳುಗಾಡಿನ ಹಕ್ಕಿ ತನ್ನ ತಲೆಯನ್ನು ಉಸುಕಿನಲ್ಲಿ ಹುದು-ಗಿಸಿ— ತನಗೆ ವೈರಿ ಕಾಣದಾಗಲು— ತಾನು ವೈರಿಯಿಂದ ಮರೆ-ಯಾಗಿರುವೆನೆಂದು ಭಾವಿಸುವುದಂತೆ. ಹಾಗೆಯೇ ಇಲ್ಲಿಯ ರಾವಸಾಹೇಬನ ವರ್ತನೆ. ತಾನು ಕಿವುಡನಾಗಿದ್ದರೆ, ತನಗೆ ಕೇಳಿಸದ ಎಲ್ಲ ಮಾತುಗಳೂ ಇತರರಿಗೂ ಕೇಳಿಸಲಾರವೆಂದೋ ಏನೋ, ತನಗೆ ಬಂದ ಪತ್ರವನ್ನು,— 'ಇದನ್ನು ಬರೆದವರು ತಮ್ಮ ಗುಟ್ಟನ್ನು ಏನಾದರೂ ಬರೆದು ತಿಳಿಸಿರಬೇಕು! ಯಾರಿಗೂ ಕೇಳ-ಧಾಂಗ ಮೆಲ್ಲಗ ಓದಿಕೊಂಬೋಣ!'— ಎನ್ನುತ್ತಾ ಗಟ್ಟ-ಯಾಗಿಯೇ ಓದುವನು. ಆಳಿ ಕೇಳಬಾರದೆಂದು, ಕುರ್ಚಿಯಿಂದೆದ್ದು ದೂರ ಹೋಗಿ ನಿಂತು ಯಾರಿಗೂ ಕೇಳದಂತೆ ಓದಿಕೊಂಡ ಕ್ರಮ-ವಿದು! ಧನಿಯ ಈ ಒಂದು ದೌರ್ಬಲ್ಯವೇ ಹನ್ಯಾನನ್ನು 'ಪ್ರಾಮಾಣಿಕ'ನನ್ನಾಗಿಸಿತು. ಧನಿಯ ಮನಸಿನೊಳಗಿದ್ದುದನ್ನು ಊಹೆಯಿಂದಲೇ ತಿಳಿಯುವಷ್ಟು ಚತುರನನ್ನಾಗಿಸಿತು!

ಶ್ಯಾಮರಾಯನಿಗೆ ಕಿವುಡನಂತೆ ನಟಿಸಿ ಪಾರಾಗಬಹುದೆಂಬ ಕಲ್ಪನೆ ಅಪ್ರತ್ಯಕ್ಷವಾಗಿ ಹನ್ಯಾನಿಂದಲೇ ಬಂದುದು. ನಟನೆ ಮಾತ್ರ ಸಮರ್ಪಕವಾಗಿಯೇ ನೆರವೇರುತ್ತದೆ. ಬಧಿರ ಅಳಿಯನಿ-ಗಾಗಿ ಹಂಬಲಿಸುತ್ತಿದ್ದ ರಾವಸಾಹೇಬ, 'ಮನಸಿನ ತಕ್ಕ ಅಳಿಯ! ಮನಿಕನಕಾ ಬಂದಾನ!' ಎನ್ನುತ್ತಾನೆ. ನಮಗೆ ಈಗ ಗೊತ್ತಾಗುವುದು ರಾವಸಾಹೇಬನ ಮನಸ್ಸಿನ ಒಟ್ಟು; 'ನನ್ನ ಅಳಿಯ ಆಗಬೇಕಾದರ ಯಾವ ಗುಣ ಅವಶ್ಯ ಆ ಗುಣ' ಯಾವುದು ಎಂದು. 'ಪತ್ರವನ್ನು ಬರೆದವರು ತಮ್ಮ ಗುಟ್ಟನ್ನು ಏನಾದರೂ ಬರೆದು ತಿಳಿಸಿರಬೇಕು'— ಅಂಥ ಗುಟ್ಟು ಯಾವುದು ಎಂದು. 'ಅಳಿಯ'ನೊಂದಿಗೆ ಮಾತು ಮುಂದರಿದಂತೆ ನಮ್ಮ ನಗೆಯ ಕಟ್ಟೆಯೊಡೆಯುವುದು. ಊಟಕ್ಕೆ ಆಮಂತ್ರಿಸಿದುದಕ್ಕಾಗಿ ಶ್ಯಾಮರಾಯ ಉಪಕಾರ ಸ್ಮರಣೆ ಮಾಡಿದುದನ್ನು ರಾವ್‌ಸಾಹೇಬ ಗ್ರಹಿಸಿಕೊಂಡುದನ್ನು ಓದುವಾಗಲಂತೂ ನಗೆ ಮೇರೆವರಿ ಹರಿಯುವುದು.

ಈ ನಗೆಯಾಟ ವ್ಯಕ್ತಿಚಿತ್ರಣ, ಸಾಮಾಜಿಕ ಸಮಸ್ಯೆಯ ದಿಗ್ದರ್ಶನ ಅಥವಾ ಒಂದು ಆದರ್ಶ ಜೀವನದ ಚಿತ್ರವನ್ನು ಎತ್ತಿ-ಹಿಡಿಯಲೆಂದು ಬರೆಯಲಾಗಿಲ್ಲವೆಂದು ಮೊದಲೇ ಹೇಳಿದೆ. ಆದರೂ ಮಾನವನಲ್ಲಿ ಅಡಗಿರುವ ಸೂಕ್ಷ್ಮ ಪ್ರವೃತ್ತಿಯೊಂದು ಹಾಸಾಗಿ ಹೊಕ್ಕಾಗಿ ಇಲ್ಲಿ ಹೆಣೆಯಲ್ಪಟ್ಟಿದೆ. ಕಿವುಡ ರಾವಸಾಹೇಬ, ಇತರರು ತನಗಿಂತ ಅದೃಷ್ಟಶಾಲಿಗಳಾಗಿರುವುದನ್ನು ಸಹಿಸುವುದಿಲ್ಲ. ತೋಟಕ್ಕೆ ಹೋದ ಅಳಿಗೆ ಕರೆದುದು ಕೇಳಿಸದಾಗ— 'ಏನ್ ಕಿವುಡು-ಗಿವುಡಾದ್ಯೋ ಏನು?' ಎನ್ನುತ್ತಾನೆ. ಶ್ಯಾಮರಾಯ ತಾನು ಕಿವುಡನೆಂದು ತಿಳಿಸುವಾಗ, ರಾವಸಾಹೇಬನ ಹರ್ಷಾತಿರೇಕ, 'ಏನು, ನೀವೂ ಕಿವುಡರ? ಖರೇವಾಗಿ ಕಿವುಡರ? ಪಕ್ಕಾ, ಕಿವುಡರ?' ಎಂಬ ಉದ್ಗಾರ ಹೊರಡುವುದು. ಆದರೆ, 'ಪ್ರತ್ಯಕ್ಷ ಪರಮೇಶ್ವರನ ಅವತಾರ', ಹತ್ತು ನಿಮಿಷದೊಳಗೆ ಹತ್ತು ವರುಷದ



ಕ್ರೈಸೋಲಿನ್

ಎಂಥ ಕೆಮ್ಮಿದ್ದರೂ ಕೂಡಲೆ ಗುಣ ಪಡಿಸುವುದು.

ಏಜೆಂಟರು, ಸ್ಟಾಕಿಸ್ಟರು ಬೇಕು.

ಯದುಪತಿ

ಸ್ವತಂತ್ರ ಸಾಮಾಜಿಕ ಕಾದಂಬರಿ.

ಬರೆದವರು:

ಶ್ರೀಮಾನ್ ಸಾಲಿ ರಾಮಚಂದ್ರರಾಯರು

ಭಾರತದ ಸ್ವಾತಂತ್ರ್ಯ ಸಂವರ್ಧನೆಗೂ ಸಂರಕ್ಷಣೆಗೂ ಇಂದು ಆದರ್ಶಜೀವಿಗಳ ಅವಶ್ಯಕತೆ ತುಂಬ ಇದೆ. ಅಂತಹ ಸುಂದರ ಆದರ್ಶಗಳನ್ನು ಜನತೆಯ ಕಣ್ಣೆದುರು ಇರಿಸಬಲ್ಲ ನೂತನ ಕಾದಂಬರಿ. ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ಶ್ರೀಮಾನ್ ಆರ್. ಎ. ಜಾಗಿರ-ದಾರರು ಮುನ್ನುಡಿ ಬರೆದಿದ್ದಾರೆ.

ವಿಳಾಸ: ಶ್ರೀ. ಸಾಲಿ ರಾಮಚಂದ್ರರಾಯರು

'ಶ್ರೀನಿಕೇತನ' ಧಾರವಾಡ.

ಕಿವುಡನನ್ನು ನೀಗಿಸಿದಾಗ ಮಾತ್ರ ಅದೇ ರೀತಿ ಶ್ಯಾಮರಾಯನ ಬಧಿರತ್ವಗುಣವಾಗಬಾರದೆಂದು ಭಾವಿಸುತ್ತಾನೆ. ಶಚಿ, 'ನಿನ್ನ ಗುಣಪಡಿಸಿದ ವೈದ್ಯನೇ ಇವರನ್ನೂ....' ಎಂದು ಸೂಚಿಸುವಾಗಲೇ 'ಅವನ ಕಿವುಡೇನು ನೆಟ್ಟಗಾಗತೈತ?.... ಇನ್ನವ್ಯಾಲ ಆ ಕೆಪ್ಪನ ಹೆಸರು ಕೂಡ ಎತ್ತಬ್ಯಾಡ!' ಎಂದು ನಿರಾಕರಿಸುತ್ತಾನೆ.

ನಗೆಯಾಟಕ್ಕೆ ಕಳೆಯೇರಲು ಇನ್ನೊಂದು ಕಾರಣ ರಾವಸಾಹೇಬನ ಬುದ್ಧಿಗೇಡಿತನ. ಇದು ತಾನಾಗಿ ಪ್ರತ್ಯೇಕ ಒಂದು ಸನ್ನಿವೇಶವಾಗಿಲ್ಲವಾದರೂ, ಉದ್ದಕ್ಕೂ ಸುಪ್ತವಾಗಿದ್ದುಕೊಂಡು ಆಗಾಗ ಹಣಿಕಿ ನೋಡಿ ನಗೆಯ ತರಂಗಗಳನ್ನೆಬ್ಬಿಸುವುದು.

ಈ ನಗೆಯಾಟಕ್ಕೆ ಕೊಟ್ಟ ಹೆಸರು ಇಡೀ ಜರತಾರಿಗೆ ಜರಿಯಂತಿದೆ. ಶಚಿಯು ಶ್ಯಾಮರಾಯನೊಂದಿಗೆ ಮಾತಾಡುವಾಗ ಅವನು ತನ್ನ ನಿರ್ಧಾರದಂತೆ ಕಿವುಡನಾಗಿ ವರ್ತಿಸುವನು. ಆಗ ಹರ್‍ಯಾ ಹೇಳಿದ ಒಂದು ಮಾತು—'ಅಕ್ಯಾವರ, ಅವರಿಗೆ ಕಿವೀ ಬಾದರಿ! ತ್ವಾಟ ಹಾಳು!'—ಇದೇ 'ಹಾಳು ತೋಟ' ಎಂಬ ಹೆಸರಿಗೆ ಮೂಲ. ಈ ಮಾತು ಸಾಮಾನ್ಯವಾಗಿ ಯಾವ ಕಿವುಡನನ್ನಾದರೂ ನಿರ್ದೇಶಿಸಿ ಹೇಳುವ ಮಾತೇ. ಆದುದರಿಂದ 'ಹಾಳು ತೋಟ' ಎಂದು ನೋಡಿದಾಗಲೇ, ಇದೇನೋ ಕಿವುಡನ ಕತೆ; ಸ್ವಾರಸ್ಯವಿರಬೇಕು—ಎಂದು ಮೊದಲಿಗೇ ಎನಿಸುತ್ತದೆ. ಸಂದರ್ಭಾನುಸಾರ ಇಲ್ಲಿ ಒಂದು ತೋಟವೂ ಬಂದುದು ಚಮತ್ಕಾರಿಕವಾಗಿದೆ. ನಗೆಯಾಟ ಓದಿ ಮುಗಿಸಿ ಅನುಭವಿಸಿದ ನಗೆಗಿಂತ ಹೆಚ್ಚಿನ ಆನಂದ 'ಹಾಳು ತೋಟ' ಎಂಬ ಹೆಸರಿನ ಆಯ್ಕೆಯಲ್ಲಿ ಎಂದು ನನ್ನ ಅನುಭವ.

'ಹಾಳು ತೋಟ' ನಗೆಯಾಟದ ದೃಷ್ಟಿಯಿಂದ ಯಶಸ್ವಿಯಾಗಿದೆ; ಆದರೂ ಇದನ್ನು ಓದಿದಾಗ, ಎಲ್ಲೋ ಅಲ್ಲೊಂದು ಇಲ್ಲೊಂದು ತೇಪೆ ಈ ಜರತಾರಿಗೆ ಬಿದ್ದಿವೆ ಎಂದು ಎನಿಸದಿರುವುದಿಲ್ಲ. ಬಹುಶಃ ಇದಕ್ಕೆ 'ಒಂದು ಫ್ರೆಂಚ್ ನಗೆಯಾಟದ ನೆರಳಲ್ಲಿ' ರೂಪುಗೊಳ್ಳಬೇಕಾದ ಪ್ರಸಂಗ ಇದಕ್ಕೆ ಒದಗಿದುದರಿಂದಲೇ ಆಗಿರಬೇಕು. 'ಮನುಷ್ಯದೇಹಕ್ಕೆ ಅಂಟಿಕೊಳ್ಳುವ ಅನೇಕ ವ್ಯಾಧಿಗಳಲ್ಲಿ ಬಧಿರತ್ವ, ಬಧಿರತೆ ಅಥವಾ ಕಿವುಡುತನ ಎಲ್ಲಕ್ಕೂ ಅತೀವ ದುಃಖದಾಯಕವಾದುದು!' ಎಂದು ತಿಳಿದ— ಕಿವುಡನಾದ ಶ್ರೀಮಂತ ರಾವಸಾಹೇಬನಲ್ಲ—ಸಾಮಾನ್ಯ ಮನುಷ್ಯನೂ ತನ್ನ ಒಬ್ಬಳೇ ಮಗಳನ್ನು ರೂಪವಂತ, ಸುಶಿಕ್ಷಿತ ಮತ್ತು ಶ್ರೀಮಂತ-ಯುವಕರನ್ನೆಲ್ಲ ತಳ್ಳಿ ಕಿವುಡನಿಗೇ ಧಾರೆಯೆರೆಯಬೇಕೆಂದು ಬಯಸಬಹುದೇ? ಆದರೆ,....ರಾವಸಾಹೇಬನ ಈ ಒಂದು ಹಟ ಇಲ್ಲವಾದರೆ...., ಈಗ ಇದ್ದಂತೆ ಹಾಳುತೋಟ ರೂಪುಗೊಳ್ಳಲು ಸಾಧ್ಯವಿದೆಯೆ? ಇನ್ನೊಂದು ಕಡೆ: ಪಂಜರವನ್ನು ತೊಳೆಯುವಾಗ ಹೊರಬಿದ್ದ ಮೊಲವನ್ನು ಹಿಡಿಯಲೆಂದು ಹೊರಟ ಶ್ಯಾಮರಾಯ, ರಾವಸಾಹೇಬನ ಮನೆಗೇ ಬಂದ ವಿವರಣೆ ಸುಸಂಬದ್ಧವಾಗಿ ತೋರಬಹುದೇ? ಒಂದು ಮುದಿಕೋಣ ಹಗ್ಗ ಹರಿದು ಹೊಸಹಗ್ಗ ಒದಗುವ ತನಕ ಬೇಕಾದರೂ ಅದು ದೂರೆಲ್ಲಿಯೂ ಹೋಗಲಾರದು; ಕಣ್ಣು ತಪ್ಪಿಸಿಕೊಳ್ಳುವುದು ಅದರ ಮೊಂಡುಬುದ್ಧಿಗೆ ಕಷ್ಟಸಾಧ್ಯ. ಆದರೆ ಮೊಲವನ್ನು ಹಿಡಿಯುವುದಕ್ಕೆ ನಡೆದ ಸಾಹಸವೆಷ್ಟು! ಮೊಲದ ಮೇಲೇರಿ ಬಂದ ನಾಯಿಯನ್ನು ಹೊಡೆಯಲು ಬಂದೂಕು, ಅದರ ಕುದುರೆ ಏರದಾಗ ಜಂಗುತಿಂದ ಹತ್ಯಾರ, ಕೊನೆಗೆ ನೆರೆಮನೆಯವರ ಬರ್ಚಿ—ಇಷ್ಟೆಲ್ಲಾ ನಡೆದಾಗ ಮೊಲ ಮೂಗುಮುಚ್ಚಿ ಧ್ಯಾನಿಸುತ್ತಿರುವುದೇ? ಆದರೂ ಮೊಲದ ಹಿಂದಿನಿಂದಲೇ ತಾನು ತೋಟವನ್ನು ಪ್ರವೇಶಿಸಿ ಮನೆಯನ್ನು ಸೇರಬೇಕಾಯಿತು—ಎನ್ನುತ್ತಾನೆ ಶ್ಯಾಮರಾಯ. ಇದನ್ನು ಸುಸಂಬದ್ಧವೆಂದು ಸುಲಭದಲ್ಲಿ ಒಪ್ಪಿಕೊಳ್ಳಲು ಅಸಾಧ್ಯ. ಆದರೆ, ಶಚಿಗೂ ಶ್ಯಾಮರಾಯನಿಗೂ 'ಮುಂಚಾಗೇ ಕೂನ ಇದ್ದಾಂಗೈತಲ್ಲಾ!' ಎಂಬ ಹರ್‍ಯಾನ ಮಾತನ್ನು ಹಿನ್ನೆಲೆಯಾಗಿಟ್ಟು, 'ಮೊಲದ ಬೆನ್ನುಹತ್ತಿ ನಾ ಇವರ ಮನಿಯೊಳಗೆ ಬಂದೆ' ಎಂಬ ಶ್ಯಾಮರಾಯನ ಮಾತನ್ನು ಆಲೋಚಿಸಿದಾಗ ಮಾತ್ರ 'ಮೊಲದ ಬೇಟೆ'ಯ ಪ್ರಸಂಗ ನಿಚ್ಚಳವಾಗುವುದು. ಮಂಜಿನ ಹಿಂದೆ ಜೇಡನ ಜಾಲ ಸ್ಪಷ್ಟವಾಗಿ ಗೋಚರಿಸುವುದು. ಆದರೂ ಶ್ಯಾಮರಾಯನ ಮೊತ್ತಮೊದಲ 'ಎಲ್ಲ ಕಡೆಗೂ ನೋಡುತ್ತ ತನ್ನಷ್ಟಕ್ಕೆ' ಮಾತು ಪ್ರಾರಂಭಿಸಿದುದು ಮಾತ್ರ ಸ್ವಗತವಾಗಬಾರದಿತ್ತೆಂದು ನನ್ನ ಭಾವನೆ. ಅಥವಾ, ಸ್ವಗತವಾಗಿದ್ದರೂ, ಮೊಲದ ಬೇಟೆ ಹಿರಿದೊಂದರ ಸಾಧನೆಗೆ ಬರೀ ನೆವ-ಎಂಬಂತೆ ಸೂಚ್ಯವಾಗಿ ಆ ಸ್ವಗತದಲ್ಲಿ ಬಂದಿದ್ದರೆ ನಗೆಯಾಟ ಇನ್ನೂ ಮನೋಹರವಾಗುತ್ತಿತ್ತು.

ನಗೆಯಾಟವೆಂದು ತೊಡಗಿ ಹೊಗೆಗೆ ಆಸ್ಪದವಾಗಬಾರದು: ಯಾವುದೊಂದು ನಿರ್ದಿಷ್ಟ ವ್ಯಕ್ತಿಯ—ಸಮಾಜದ ದೌರ್ಬಲ್ಯಗಳನ್ನು ಸಂಬಂಧಿಸಿದ ಮನನೋಯುವಂತೆ ಚಿತ್ರಿಸಬಾರದು. 'ಹಾಳುತೋಟ"ದಲ್ಲಿ ಅಂತಹ ಸಂದರ್ಭ ಒದಗಿಲ್ಲ. ಬರೀ ನಗೆಗೆ ಮಾತ್ರ ಧಾರಾಳ ಆಸ್ಪದವಿದೆ. ನಗೆಯಾಟ ಯಶಸ್ವಿಯಾಗಿದೆಯೆಂದು ನಾನೆಂದಾಗ ಇದೇ ನಾನು ಬಳಸಿದ ಮಾನದಂಡ.

ಸ್ವತಂತ್ರ ಏಕಾಂಕಗಳಲ್ಲಿ, ಸಣ್ಣಕತೆಗಳಲ್ಲಿ ಪಳಗಿದ ಕೈ ಈ ನಾಟಕವನ್ನೂ ಬರೆದಿದೆ. ಆದರೆ ಇದು ಪರಸಾಹಿತ್ಯದ ನೆರಳೆಂಬ ಚೌಕಟ್ಟಿನೊಳಗೆ ರೂಪಿತವಾದ ಚಿತ್ರ. ಚೌಕಟ್ಟು ಚಿತ್ರಕ್ಕಿಂತ ಮೊದಲೇ ರಚಿತವಾಗಿತ್ತೆಂಬ ತೊಡಕೊಂದು ಚಿತ್ರರಚನೆಯಲ್ಲಿ ಸ್ವಲ್ಪ ಪ್ರಭಾವ ಬೀರಿದೆಯೆನ್ನದೆ ವಿಧಿಯಿಲ್ಲ. ಆದರೂ ನಗೆಯಾಟ ಮನೋಹರವಾಗಿದೆ, ಸಾರ್ಥಕವಾಗಿದೆ.

ರಾಷ್ಟ್ರೀಯ ಮಹಾಪುರುಷರು

ಲೇಖಕರು ಶ್ರೀ. ಆರ್. ಜಿ. ಕಾರಜೋಳ, ಬಿ. ಎ. ಬಿ. ಟಿ.

ಕ್ರಾ. ಅ. ೧೭೬ ಪುಟ. ಬೆಲೆ ೧ ರೂಪಾಯಿ

ಕನ್ನಡ ಸಾಹಿತ್ಯಪ್ರಪಂಚದಲ್ಲಿ 'ವ್ಯಕ್ತಿಪರಿಚಯ' ಎಂಬ ಸಾಹಿತ್ಯಜಾತಿಯ ಪರಿಚಯವಾದುದು ತೀರ ಇತ್ತೀಚೆಗೆ. ಎಂತಲೆ ಅಂತಹ ಸಂಕಲನಗಳು ಆಗೀಗ ಕಣ್ಣಿಗೆ ಬೀಳುತ್ತವೆ. ಹಲವು ಮೇಲ್ತರಗತಿಯ ವ್ಯಕ್ತಿಪರಿಚಯಗಳ ಸಂಕಲನಗಳನ್ನು ಕೂಡ ನಾವು ಉದಾಹರಿಸಬಹುದು.

ಕನ್ನಡ ಸಾಹಿತ್ಯಲೋಕದಲ್ಲಿ ವ್ಯಕ್ತಿಪರಿಚಯಕ್ಕೆ ಕಳೆಯ ರೂಪಿಟ್ಟು ಅದು ಲೋಕಪ್ರಿಯವಾಗುವಂತೆ ಹೆಣಗಿದವರಲ್ಲಿ ಸಿದ್ದವ್ವನಹಳ್ಳಿ ಕೃಷ್ಣಶರ್ಮರೇ ಮೊದಲಿಗರೆಂದು ನಿರ್ವಿವಾದವಾಗಿ ಹೇಳಬಹುದು. ಶ್ರೀಯುತ ಕಾರಂತರ 'ಚಿಕ್ಕದೊಡ್ಡವ'ರಾಗಲಿ ಶ್ರೀರಂಗರ 'ನಮ್ಮ ಪಿಡುಗು ಪುಢಾರಿಗಳ ಮಾಲಿಕೆ'ಯಾಗಲಿ— ಕಲಾಕಲ್ಪಕತೆಯ ಹಾಗೂ ವಿಡಂಬನೆಯ ಮೂಲಕ ಜೀವನಚಿತ್ರಗಳ ಮಾಲಿಕೆಯಲ್ಲಿ ಸೇರವು. ಅ. ನ. ಕೃಷ್ಣರಾಯರ 'ಕರ್ನಾಟಕದ ಕಲಾವಿದರು,' ತ. ರಾ. ಸು. ಅವರ 'ರೇಖಾಚಿತ್ರಗಳು'— ತಮ್ಮ ನಿಶ್ಚಿತಗುರಿ, ಶೈಲಿಯ ಸೊಗಸು, ವಿಷಯದ ವಿಸ್ತಾರದ ದೃಷ್ಟಿಯಿಂದ ಓದುಗರ ಮನಸ್ಸನ್ನು ಸೆಳೆದಿವೆ. ಭಾರತೀಯ ಉಜ್ವಲ ಇತಿಹಾಸವನ್ನು ರಸವತ್ತಾಗಿ ರೂಪಿಸುವಲ್ಲಿ ದೇಸಾಯಿ ಪಾಂಡುರಂಗರಾಯರ 'ಮಿಂಚಿದ ಮಹಿಳೆಯರು,' ಈಶ್ವರನ್‌ರ ಕನ್ನಡ 'ತಾಯಿನೋಟಗಳು' ಅತ್ಯಂತ ಸಾಹಾಯ್ಯಕಾರಿಯಾಗಿವೆ. ವ್ಯಕ್ತಿಚಿತ್ರ ಸಾಹಿತ್ಯನಿರ್ಮಿತಿಯ ಉಲ್ಲೇಖದ ಪ್ರಸಂಗದಲ್ಲಿ ದತ್ತಾತ್ರಯ ಕುಲಕರ್ಣಿಯವರ ಮಾರ್ಮಿಕ ಹೊತ್ತಿಗೆಯಾದ 'ಹಕ್ಕಿ ನೋಟ' ಹಾಗೂ ಮನೋಹರ ಗ್ರಂಥಭಾಂಡಾರದಿಂದ ಪ್ರಕಟನೆಗೊಂಡ 'ಸಪ್ತರಂಗ' ಮೊದಲಾದವುಗಳನ್ನು ಉದಾಹರಿಸಬಹುದು. ಇವಲ್ಲದೆ ಇನ್ನೂ ಸಂಕಲಿಸಲಾಗದಿದ್ದರೂ ಉತ್ತಮವೆನಿಸಿದ ಎಚ್. ಎಸ್. ಪಾಟೀಲರ, ನೆರಂಗರ, ಎನ್ಕೆಯವರ ಜೀವನಪರಿಚಯಗಳು ಅನೇಕ ದೊರೆಯುವವು. ಜಯಂತಿಯ ಪ್ರಾರಂಭದ ಕೆಲವು ಸಂಚಿಕೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಅಭ್ಯಸಿಸಿದವರಿಗೆ ಈ ಮಾತಿನ ಮನವರಿಕೆಯಾಗುವಂತಿದೆ.

ಇಂತು ವ್ಯಕ್ತಿಪರಿಚಯದ ಐತಿಹಾಸಿಕ ಹಿನ್ನೆಲೆಯ ಪರಿಜ್ಞಾನದೊಡನೆ ಶ್ರೀ. ಕಾರಜೋಳರವರ ಪ್ರಸ್ತುತ ಗ್ರಂಥವನ್ನು ಪರಿಕಿಸುವಾಗ, ಇದರಲ್ಲಿ ೧೫ ಜೀವನಚಿತ್ರಗಳಿವೆ ಎಂದು ಕಂಡುಬರುವುದು. ಅವುಗಳಲ್ಲಿ— ಟಾಗೋರ, ರಾಜಾ ರಾಮಮೋಹನರಾಯ, ಈಶ್ವರಚಂದ್ರ ವಿದ್ಯಾಸಾಗರ, ರಾಮಕೃಷ್ಣ ಪರಮಹಂಸ, ಮೌಲಾನಾ ಆಜಾದ್, ಮಹರ್ಷಿ ಕರ್ವೆ, ಗಾಂಧೀಜಿ, ರಾಜಾಜಿ, ಸರೋಜಿನಿ ನಾಯಡು, ಸಿ. ವ್ಹಿ. ರಾಮನ್, ರಾಜೇಂದ್ರಪ್ರಸಾದ, ಜವಾಹರಲಾಲ—ಮೊದಲಾದ ಹನ್ನೆರಡು ಮಹನೀಯರ ಚಿತ್ರಗಳು ತುಂಬಾ ಮನಹಿಡಿಯುವವು. ಓದುಗರ ತಿಳಿವಿನ ಬಿತ್ತರ ಹೆಚ್ಚಿಸುವವು. ಅಲ್ಲದೆ ಆ ಆ ವ್ಯಕ್ತಿಗಳ ಜೀವನದ ಮಹತಿ, ಅವರ ಆದರ್ಶಗಳ ಸ್ಫುಟಕಲ್ಪನೆಮಾಡಿಕೊಡುವವು. ಉಳಿದುವು ಚುಟುಕಾದುದಕ್ಕಾಗಿಯೊ, ಐತಿಹಾಸಿಕ ಸಂಕ್ಷಿಪ್ತ ಟಿಪ್ಪಣಿಗಳ ಸ್ವರೂಪ ತಳೆದದ್ದಕ್ಕೊ, ಇಲ್ಲಿ ಸಂಕಲಿಸಬೇಕಾದದ್ದಕ್ಕೊ ಅಥವಾ ಹೇಳಿಕೊಳ್ಳಬೇಕಾದ ಸಾಹಿತ್ಯದ ಮೆರುಗು (Literary refinement) ಇಲ್ಲದ್ದಕ್ಕೊ ಅಷ್ಟು ಪರಿಣಾಮಕಾರಿಯಾಗಿಲ್ಲ.

ಲೇಖಕರ ಶೈಲಿಯ ಮಾತು. ಮುನ್ನುಡಿಕಾರರಾದ ಕವಿಭೂಷಣ ಬೆಟಗೇರಿ ಕೃಷ್ಣಶರ್ಮರು ಅಭಿಪ್ರಾಯಪಡುವಂತೆ ಪ್ರಸ್ತುತ ಗ್ರಂಥದ ಬರೆವಣಿಗೆ ಒಟ್ಟುರಭಸ (Gusto) ದಿಂದೊಡಗೂಡಿದೆ. ವಿದ್ಯಾರ್ಥಿಗಳ ಜ್ಞಾನದ ಮಟ್ಟ ಹೆಚ್ಚಿಸಲು ಅನುಗುಣವಾಗುವಂತಹ ವಿಷಯ ವಿಸ್ತಾರವಿದೆ. ಹಲವೆಡೆಯಂತೂ ಓದುಗರ ಕಣ್ಣೆದುರು ವ್ಯಕ್ತಿಗಳ ಪರಿಸ್ಫುಟ ಚಿತ್ರಗಳೇ ಮೂಡುವವು. ವಿಷಯ ಪ್ರವೇಶಿಕೆಯಲ್ಲಾಗಲಿ (Introduction) ಉಪಸಂಹಾರದ ರೀತಿಯಲ್ಲಾಗಲಿ ನಾಟಕೀಯತೆ ತಲೆ ಎತ್ತಿದೆ. ಕುತೂಹಲ ಕ್ರಮೇಣ ಕೆರಳುತ್ತ ಹೋಗುತ್ತದೆ. ಆದರೆ ಶಬ್ದಗಳ ಪುನರುಚ್ಚಾರ, ಅವತರಣಿಕೆ ಮತ್ತು ಮುದ್ರಣಗಳ ದೋಷ, ವಿವೇಚನೆಯ (Exposition) ಕೊರತೆ— ಮೊದಲಾದವುಗಳು ಹಲವು ಸಲ ಸಹೃದಯ ಓದುಗನನ್ನು ಅನಿವಾರ್ಯವಾಗಿ ನಿರಾಶೆಗೀಡುಮಾಡುವವು.

ಇಲ್ಲಿ ಬರೆದ ಜೀವನಚಿತ್ರಗಳನ್ನು ಒಂದು ಕಾಲಾನುಕ್ರಮದಿಂದ (Chronologically) ಜೋಡಿಸಲಾಗಿದೆ ಎಂದು ಲೇಖಕರು ಅರಿಕೆಯಲ್ಲಿ ಹೇಳುವರು. ಆದರೆ ಸ್ವಾಭಾವಿಕತೆಯ ದೃಷ್ಟಿಯಿಂದ ಬೇರೆ ಬಗೆಯ ವರ್ಗೀಕರಣ ಅವಶ್ಯವೆನಿಸುವುದು. ವಿಖ್ಯಾತ ರಾಜಕಾರಣಿಗಳು, ಸಮಾಜ ಸುಧಾರಕರು, ಶಿಕ್ಷಣ ತಜ್ಞರು, ತತ್ತ್ವವೇತ್ತಾರರು, ವಿಜ್ಞಾನಿಗಳು—ಹೀಗೆ ವಿಭಾಗಿಸಿದ್ದರೆ ವಿಷಯ ಹರಿದು ಹಂಚಿ ಹೋದಂತೆ ಎನಿಸದು. ಏನೇ ಇರಲಿ, ಅದು ಲೇಖಕರ ಧೋರಣೆ.

ಮೇಲೆ ಸೂಚಿಸಿದಂತೆ ಕೆಲವು ದೋಷಗಳು ಕಂಡರೂ ಅವು ಗ್ರಂಥದ ನೈಜ ಬೆಲೆಯನ್ನೇನೂ ಕಡಿಮೆಮಾಡಲಾರವು. ಪ್ರಮಾಣ

ಗ್ರಂಥಗಳ ಆಧಾರ, ಆಂಗ್ಲ ಹಾಗೂ ಕನ್ನಡಭಾಷೆಗಳ ಸುಪ್ರಸಿದ್ಧ ಲೇಖಕರನ್ನು ಮಾರ್ಗದರ್ಶಿಯಾಗಿಟ್ಟುಕೊಂಡ ರೀತಿಯನ್ನು ಮನಸ್ಸಿನಲ್ಲಿ ತಂದುಕೊಂಡರೆ, ಕಾರಜೋಳರವರ ಪ್ರಸ್ತುತ ಗ್ರಂಥವು ವ್ಯಕ್ತಿ ಚಿತ್ರಗಳ ಹಿರಿಯಮಾಲಿಕೆಯಲ್ಲಿ ಸೇರಲರ್ಹವಾದುದು. ಒಟ್ಟಿನಮೇಲೆ ಮಹತ್ವಾಕಾಂಕ್ಷಿ ವಿದ್ಯಾರ್ಥಿಗಳಷ್ಟೇ ಅಲ್ಲದೇ ನುರಿತ ಸಾಹಿತ್ಯಿಕರ ಕೈಗೂ ಇದು ಸೇರಿ ಅವರಿಂದ ಮೆಚ್ಚಿಕೆ ಪಡೆಯುವುದರಲ್ಲಿ ಸಂದೇಹವಿಲ್ಲ. ಕೊನೆಗೆ ಸೇರಿಸಿದ 'ಭಾರತ ದೇಶದ ರಾಜಕೀಯ ಸಂಕ್ಷಿಪ್ತ ಚರಿತ್ರೆ, 'ಸತ್ಯಾಗ್ರಹದ ಸಂಮೋಹನಾಸ್ತ್ರ,' 'ಚಲೇಜಾವ್ ಚಳವಳ' ಎಂಬ ಪ್ರಕರಣಗಳಂತೂ ನಿಜವಾಗಿ ಬೋಧಪ್ರದವಾಗಿವೆ. ಗ್ರಂಥದ ಮೇಲುಹೊದಿಕೆಯ ಮೇಲಿನ ಚಿತ್ರವನ್ನು ಇನ್ನೂ ಕಲಾತ್ಮಕವಾಗುವಂತೆ ತೆಗೆಯಿಸಿ ಒಂದು ರೂಪಾಯಿಗಿಂತಲೂ ಹೆಚ್ಚು ಬೆಲೆ ಏರಿಸಿದ್ದರೂ ಆಕ್ಷೇಪಾರ್ಹವೆನಿಸುತ್ತಿದ್ದಿಲ್ಲ.

ಅರ್ಪಣ

ಲೇಖಕರು : ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ. ಕ್ರಾ. ಅ. ಪುಟ ೧೧೬ ಆನಂದ ಗ್ರಂಥಮಾಲಾ ಹುಬ್ಬಳ್ಳಿ ಕುಸುಮ ೧ ಬೆಲೆ ೧—೮—೦.

ಮೋಪಾಸರ ಹದಿನಾರು ಸಣ್ಣ ಕತೆಗಳ ಅನುವಾದದ ಸಂಕಲನ ಈ 'ಅರ್ಪಣ' ಕನ್ನಡನಾಡಿನ ಸುಪ್ರಸಿದ್ಧ ಸಾಹಿತ್ಯಿಕರಾದ ಅ. ನ. ಕೃಷ್ಣರಾಯರ ಮುನ್ನುಡಿಯಿಂದೊಡಗೂಡಿದೆ.

ಮೊಟ್ಟಮೊದಲು ಗಾಯ್‌ಡಿ ಮೋಪಾಸರ ಜೀವನದ ಬಗ್ಗೆ ತಿಳಿಯದೆ ಅವರ ಕೃತಿಗಳ ಸೌಂದರ್ಯ ಸವಿಯುವಂತಿಲ್ಲ. ನಾಲ್ವತ್ತು-ಮೂರೇ ವರುಷ ಬಾಳಿದರೂ ಇವರ ಸಾಹಿತ್ಯ ನಿರ್ಮಿತಿ ಅಖಂಡವಾಗಿದೆ. ಕವಿಯಾಗಿ ಸಾಹಿತ್ಯರಂಗದಲ್ಲಿ ಪಾದಾರ್ಪಣೆ ಮಾಡಿದ ಇವರು ತಮ್ಮ ಸುತ್ತುಮುತ್ತಲಿನ ಜೀವನವನ್ನು ಪರಿಣಾಮಕಾರಿಯಾಗಿ ಚಿತ್ರಿಸಲು ಉದ್ಯುಕ್ತರಾಗಿ ಕತೆಗಾರರಾದರು. ಇವರ ಆರ್ಥಿಕ ಸ್ಥಿತಿ ಸುಧಾರಿಸಿತು. ಆದರೆ ಮುಂದೆ ಅತಿಶಯ ತಲೆನೋವಿನಿಂದಾಗುವ ಸಂಕಟ ಪರಿಹಾರಕ್ಕಾಗಿ 'ಈಥರ್' ಎಂಬ ದ್ರವ್ಯವನ್ನು ಸೇವಿಸುವ ಪರಿಪಾಠವನ್ನಿಟ್ಟುಕೊಂಡರು. ಇದರ ಪರಿಣಾಮವಾಗಿಯೇ ಹುಚ್ಚರ ಮನಸ್ಸನ್ನು ಚಿತ್ರಿಸುವ ಅಸಂಖ್ಯ ಮಾರ್ಮಿಕ ಕತೆಗಳನ್ನು ಬರೆದರೆಂದು ಚರಿತ್ರದಿಂದ ವಿದಿತವಾಗುವುದು. ಮೋಪಾಸರಿಗೆ ಜೀವನದಲ್ಲಿ ಸಂತುಷ್ಟಿ ಇರಲಿಲ್ಲ. ಅಂತೇ ಒಂದು ಬಗೆಯ ಉಪೇಕ್ಷಾವೃತ್ತಿ ತಲೆದೋರಿತು. ಕೊನೆಗೆ ೧೮೯೧ರಲ್ಲಿ ಹುಚ್ಚು ಹಿಡಿದು ಚಿಕಿತ್ಸಾಲಯದಲ್ಲಿಯೇ ಆತ್ಮಹತ್ಯೆ ಮಾಡಿಕೊಂಡರಂತೆ !

ಇಂತಹ ವಿಲಕ್ಷಣ ಜೀವನವೃತ್ತವಿದ್ದ ಮೋಪಾಸರ ಕತೆಗಳು ರಭಸದಿಂದೊಡಗೂಡಿವೆ. ಅ. ನ. ಕೃ. ರವರು ಅಭಿಪ್ರಾಯಪಡುವಂತೆ 'ಹಲವು ಸಲ ಮೋಪಾಸರು ರುದ್ರಗಂಭೀರ ಜೀವನವನ್ನು ಚಿತ್ರಿಸಿದ್ದರೆ, ಒಮ್ಮೊಮ್ಮೆ ಸ್ನಿಗ್ಧಮಧುರ ಜೀವನವನ್ನೂ ತೋರಿಸುವರು.' ಆದರೆ ಎಲ್ಲಕ್ಕೂ ಹೆಚ್ಚೆಂದರೆ ಮಾನವ ದೌರ್ಬಲ್ಯ ವಿವೇಚಿಸುವಲ್ಲಿಯೇ ಅವರ ಕೈವಾಡವಿದೆ. ಇಂತ ಜೀವನ ವೃತ್ತಾಂತದಂತೆ ಅವರ ಕತೆಗಳೂ ಅನುಪಮವಾಗಿವೆ ಮನಮುಟ್ಟುವಂತಿವೆ. ತಂತ್ರನೈಪುಣ್ಯವಂತೂ ಮಾದರಿಯದು.

ಪ್ರಸ್ತುತ ಸಂಕಲನದಲ್ಲಿಯ ಹದಿನಾರು ಅನುವಾದಿತ ಕತೆಗಳನ್ನೋದುವಾಗ, ಹಲವು ಸಲ ಸಹೃದಯ ಓದುಗನು ಸುತ್ತುಮುತ್ತಲಿನ ಪ್ರಪಂಚವನ್ನು ಮರೆಯುವಷ್ಟು ತನ್ಮಯನಾಗುವನು ಇಲ್ಲಿಯ ಪಾತ್ರನಿರೂಪಣೆ ಹಾಗೂ ವಾತಾವರಣ ನಿರ್ಮಿತಿಯ ಕಲೆಯಲ್ಲಿ ಸೊಗಸಿದೆ. ಮೂಲ ಕತೆಗಳನ್ನೋದುವ ಹಂಬಲವೂ ಆಗಾಗ ಹುಟ್ಟುವುದುಂಟು. ಆದರೆ ಅರ್ಪಣದಲ್ಲಿಯ ಕತೆಗಳ ಆಯ್ಕೆಯ ದೃಷ್ಟಿ ಹಲವೆಡೆ ಅರ್ಥವಾಗುವುದಿಲ್ಲ. ಅಲ್ಲದೆ ಅನುವಾದನ ಶೈಲಿ ಇನ್ನಷ್ಟು ಸರಳ ಹಾಗೂ ಮೋಹಕವಾಗಿರಬೇಕಿತ್ತೆಂದು ಎನಿಸುತ್ತದೆ. ಮೋಪಾಸರಂತಹ ಪ್ರತಿಭಾವಂತ ಕತೆಗಾರರ ಕೆಲವು ಒಳ್ಳೇ ಕತೆಗಳಾದರೂ ಕನ್ನಡಿಗರಿಗೆ ಈ ಪುಸ್ತಕರೂಪದಲ್ಲಿ ಪ್ರಕಟವಾಗಿ ದೊರೆತುದು ಉಪಯುಕ್ತವಾಯಿತೆಂಬಲ್ಲಿ ಸಂಶಯವಿಲ್ಲ.

ಎನ್. ಎಸ್. ಗದಗಕರ್ ಬಿ. ಎ

ಈ ಸಂಚಿಕೆಯಿಂದ ಜಯಂತಿಯ ಹೊಸ ವರ್ಷ ಪ್ರಾರಂಭವಾಯಿತು. ಹೊಸ ವರ್ಷದ ಚಂದಾಹಣವನ್ನು ಎಲ್ಲರೂ M. O. ಮೂಲಕ ಕಳುಹುವುದು ಅನುಕೂಲ. ಅಂಚೆಯ ಆಫೀಸುಗಳಲ್ಲಿ V. P. ಗಳನ್ನು ಇರಿಸುವ ಅವಧಿಯನ್ನು ೫ ದಿನಕ್ಕೆ ಇಳಿಸಿದಾಗಿನಿಂದ, ಅಸ್ವೀಕೃತವಾಗಿ ಬರುವ V. P. ಗಳ ಸಂಖ್ಯೆ ಹೆಚ್ಚಾಗಿದೆ. ಆದುದರಿಂದ ಎಲ್ಲರೂ ಹಣವನ್ನು M. O. ಮೂಲಕ ಕಳುಹಬೇಕು.

—ವ್ಯ. ಜ.

ಸಾದರ ಸ್ವೀಕಾರ

★

೧. **ಕೈಲಾಸಂ ದರ್ಶನ** (ಕವಿ ಮತ್ತು ಅವನ ಕೃತಿಯ ಪರಿಚಯ). ಬೇರೆ ಬೇರೆ ಲೇಖಕರು ಬರೆದ ಪ್ರಬಂಧಗಳನ್ನು ಶ್ರೀಮಾನ್ ಕೆ. ವಿ. ಸುಬ್ಬಣ್ಣ ಅವರು ಸಂಪಾದಿಸಿದ್ದಾರೆ. ಪ್ರಕಾಶಕರು ಶ್ರೀ. ನೀಲಕಂಠೇಶ್ವರ ನಾಟ್ಯಸೇವಾಸಂಘ ಹೆಗ್ಗೋಡು, ತಾಲ್ಲೂಕು ಸಾಗರ. ಕ್ರೌ. ಅ. ೧೨೫ ಪುಟಗಳು. ಬೆಲೆ ೨-೦-೦.

೨. **ಶ್ರೀ. ಸದ್ಗುರು ಗುರುಲಿಂಗ ಜಂಗಮ ಮಹಾರಾಜರ ವಚನಗಳು** (ಸಂಕಲನ). ಸಂಪಾದಕರು ಶ್ರೀಮಾನ್ ಗಣಪತರಾವ್ ಕನ್ನೂರ ಬಿ. ಎಸ್‌ಸಿ. ಅವರು. ಪ್ರಕಾಶಕರು ಅಧ್ಯಾತ್ಮ ಭಾಂಡಾರ ಮಠ, ಇಂಚಗೇರಿ, ಪೋಸ್ಟ ಹೊರ್ತಿ, ಜಿಲ್ಲಾ ವಿಜಾಪುರ. ಕ್ರೌ. ಅ. ೧೨೬ ಪುಟಗಳು. ಬೆಲೆ ೧-೬-೦.

೩. **ಸಮದರ್ಶಿ** (ಪ್ರಗತಿಶೀಲ ಮಾಸಪತ್ರಿಕೆ). ಸಂಪಾದಕರು ಶ್ರೀಮಾನ್ ವಿ. ಎಸ್. ಹೆಗಡೆ. ಪ್ರಕಾಶಕರು ದಿ. ಮಾಡರ್ನ್ ಪ್ರಿಂಟರ್ಸ್, ೨೫೬ ಕಾಲಾ-ಚಾಕೀ ರೋಡ್, ಲಾಲಬಾಗ್, ಮುಂಬೈ ೧೨. ಕ್ರೌ ೧/೮ ದ ೩೨ ಪುಟಗಳು ವಾ. ಚಂದಾ ೩-೦-೦; ಬಿ. ಸಂ. ೦-೪-೦.

೪. **ಹಳ್ಳಿಯ ಬಾವಿ** (ಅನುವಾದಿತ ಕತೆಗಳ ಸಂಕಲನ). ಅನುವಾದಕರು ಶ್ರೀ. ಧನ್ವಂತರು. ಪ್ರಕಾಶಕರು ಮೆ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು. ಕ್ರೌ. ಅ. ೧೨೫ ಪುಟಗಳು. ಬೆಲೆ ೧-೪-೦.

೫. **ಇಸ್ಪೀಟು ರಾಣಿ** (ಅನುವಾದಿತ ಕಥಾಸಂಕಲನ) ಮೂಲ ರಷ್ಯನ್ ಕತೆಗಾರ ಅಲೆಗ್ಝಾಂಡರ್ ಪುಷ್ಕಿನ್. ಅನುವಾದಕರು ಶ್ರೀ. ಎಸ್. ಸುಬ್ಬರಾಮಯ್ಯ. ಮೈಸೂರಿನ ಕಾವ್ಯಸಾಹಿತ್ಯಮಾಲೆಯ ೧೧ನೆಯ ಗ್ರಂಥ. ಕ್ರೌ. ಅ. ೮೭ ಪುಟಗಳು. ಬೆಲೆ ೧-೦-೦.

೬. **ವೀಣಾ** (ಸಂಗೀತ ಮತ್ತು ಲಲಿತಕಲಾ ವಿಷಯಕ ಮಾಸಪತ್ರಿಕೆ). ಸಂಪಾದಕರು ವಿದ್ವಾನ್ ಶಂಕರನಾರಾಯಣ ಹರಿದಾಸ, ವೀಣಾ ಪ್ರಕಟನಾಲಯ ಶರ್ವ (ದ. ಕ. ಜಿಲ್ಲಾ). ಡೆ. ಅ. ೨೦ ಪುಟಗಳು. ವಾರ್ಷಿಕ ಚಂದಾ ೩-೦-೦. ಬಿಡಿ ಸಂಚಿಕೆಗೆ ೦-೪-೦.

೭. **ಷಟ್‌ಸ್ಥಲ ರಹಸ್ಯ** (ಮತತತ್ತ್ವ ನಿರೂಪಣಾತ್ಮಕ ಪ್ರಬಂಧ). ಬೆಳಗಾಂವಿಯ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ ಪ್ರಕಾಶಕ ಸಮಿತಿಯ ಪ್ರಕಾಶನ. ಫು. ಕ್ರೌ. ಅ. ೮ ಪುಟಗಳು. ಬೆಲೆ ?



೮. **ಕುಮಟೆಯ ಕ್ಯಾನರಾ ಕಾಲೇಜಿನ ಪ್ರಗತಿಯ** ವರದಿ (ಇಂಗ್ಲೀಷಿನಲ್ಲಿ)

ಒಂದೇ ಒಂದು ವರ್ಷದ ಈ ಸಂಸ್ಥೆಯು ಉತ್ಸಾಹದಿಂದ ಮುಂದುವರಿಯುತ್ತಿರುವುದು ಅಭಿನಂದನೀಯ ಸಂಗತಿ.

೯. **ಅಧ್ಯಕ್ಷ ಭಾಷಣ** ಹಂದಟ್ಟು ಸಹಕಾರಿ ಸಂಘದ ಸಾರ್ವಜನಿಕ ವಾಚನಾಲಯದ ವಾರ್ಷಿಕ ಸಮಾರಂಭದಲ್ಲಿ ಶ್ರೀ. ಎಚ್. ರಾಮಕೃಷ್ಣರಾವ್ 'ಭಗವಾನ್ ಆಶ್ರಮ' ಶಿವಮೊಗ್ಗಾ ಅವರು ಮಾಡಿದ ಭಾಷಣ. ಡೆ ಅ ೧೨ ಪುಟಗಳು

೧೦ **ಪೂಜಾ** (ಗದ್ಯಗೀತಗಳು.) ಲೇಖಕರು ಶ್ರೀಮಾನ್ ಸಿಂಪಿ ಲಿಂಗಣ್ಣನವರು; ಸಂಪಾದಕರು ಶ್ರೀ. ಬಿಂದುಮಾಧವ ಕುಲಕರ್ಣಿ, ಬಾದಾಮಿ ಅವರು. ಬಾದಾಮಿ ಶಾಂತಿಸಾಹಿತ್ಯಮಾಲೆಯ ೧ನೆಯ ಗ್ರಂಥ. ಕ್ರೌ. ಅ. ೩೬ ಪುಟಗಳು. ಬೆಲೆ ೦-೧೨-೦

೧೧. **ಡಾ. ಹರಡೀಕರರೊಂದಿಗೆ** (ವಜ್ರಮಹೋತ್ಸವ ಕಾಣಿಕೆ) ಭಾರತದಲ್ಲಿಯ ಬೇರೆ ಬೇರೆ ಮಹನೀಯರು ಡಾ. ಹರಡೀಕರರ ವಿಷಯದಲ್ಲಿ ಬರೆದ ಅಭಿನಂದನಾತ್ಮಕ, ಪರಿಚಯಾತ್ಮಕ ಬರಹಗಳ ಸಂಕಲನ. ಪ್ರಕಾಶಕರು: ಡಾ. ಹರಡೀಕರರ ವಜ್ರಮಹೋತ್ಸವ ಸಮಿತಿ, ಹುಬ್ಬಳ್ಳಿ. ಕ್ರೌ. ಅ. ೧೨೮ ಪುಟಗಳು, ಬೆಲೆ ೧-೦-೦

೧೨. **ಕರ್ಮಭೂಮಿ** (ಅನುವಾದಿತ ಕಾದಂಬರಿ) ಮೂಲ ಹಿಂದೀ ಲೇಖಕರು ಸ್ವರ್ಗೀಯ ಪ್ರೇಮಚಂದರು. ಅನುವಾದಕರು ಶ್ರೀಮಾನ್ ಗುರುನಾಥ ಜೋಶಿ. ಪ್ರಕಾಶಕರು: ಭಾರತೀಯ ಸಾಹಿತ್ಯ ಮಂದಿರ, ಧಾರವಾಡ. ಕ್ರೌ. ಅ. ೨೦೪ ಪುಟಗಳು. ಬೆಲೆ ೨-೦-೦



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar– 2527 50.

ಜಯಂತಿ

JAYANTI

೨ ಆಣೆ
ಜುಲೈ
೧೯೫೦

ಸಂಪುಟ ೧೩ | ೧ನೆಯ ಜುಲೈ ೧೯೫೦ | ಸಂಚಿಕೆ

ಈ ಸಂಚಿಕೆಯಲ್ಲಿ:

★

ಅನಾಗರಿಕತೆ – ನಾಗರಿಕತೆ (ಸಂಪಾದಕೀಯ) ಸಂಪಾದಕರು ೪೫
ನಗೀಗೆ ನೇವೀದ್ಯ 'ನಕಲೀ ನಾರಾಯಣಾಚಾರ್‍ರು' ೪೮
ಸಂಕಟ ವಿಮೋಚನೆ (ಒಂದು ಕಥೆ) ಶ್ರೀ. ಕೆ. ಎ ಎನ್. ರಾವ್, ಬನಾರಸ ೪೯
ಕಾವ್ಯವ್ಯಾಖ್ಯೆಯ ಬೆಳೆವಣಿಗೆ (ಸಾಹಿತ್ಯ ವಿಚಾರ)
ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ ೫೯
ನರಜನ್ಮ ಪರತಂತ್ರ (ಕವನ)
ಶ್ರೀ. ಎಚ್. ಜಿ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೬೧
ಮನದ ಕಣ್ಣೀರ ತೊರೆ (ಕವನ) ಶ್ರೀ. ಮುದೆನೂರ ಸಂಗಣ್ಣ, ಚಿಗಟೇರಿ ೬೨
ಕರ್ನಾಟಕದ ಕಾಲ್ಬಲವೊಂದು ಇತ್ತು (ಸೈನ್ಯವಿಚಾರ)
ಶ್ರೀ. ಮೋದಿ ಹುಚ್ಚೇಶ್ವರ, ಹುಬ್ಬಳ್ಳಿ ೬೩
ಸಣ್ಣ ಮನಿ (ಒಂದು ನಗೆಯಾಟ) ಶ್ರೀ. ದೇವಳಿ ಕೃಷ್ಣರಾಯರು ಬಿ. ಎ. ೬೯
ದಿವಂಗತ ಲಕ್ಮೆಯವರು (ವ್ಯಕ್ತಿ ಪರಿಚಯ)
ಶ್ರೀ. ಮಿರ್ಜೀ ಅಣ್ಣಾರಾಯರು, ಉಗಾರ ೭೪
ಕಸೂತಿಯ ಕಲೆ (ಹೊಲಿಗೆಯ ವಿಚಾರ)
ಕು. ಸರೋಜಿನಿ ಮಹಿಷಿ, ಎಂ. ಎ. ಧಾರವಾಡ ....

ಅಲ್ಲದೆ 'ಸಾಹಿತ್ಯವಿಮರ್ಶೆಯ ಶಿಕ್ಷಣರಂಗ' 'ಪುಸ್ತಕ ವಿಮರ್ಶೆ' 'ಸಾದರ ಸ್ವೀಕಾರ' ಮೊದಲಾದುವು.

JAYANTI

ಜುಲೈ ೧೯೫೦

ವಾರ್ಷಿಕ ವರ್ಗಣಿ . . ೫—೦—೦
ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ
ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್. ಜೆ. ಬೇಂದ್ರೆ
ಪ್ರಕಾಶಕರು— ಶ್ರೀ ಎಮ್. ವಿ. ಮೊಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
½	,,	,,	೨೫	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

Rates for Advertising in Iyanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.
For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಹೊಸ ಪುಸ್ತಕಗಳ ಪ್ರಕಟನೆ!

ಹೆಣಿಕೆಯ ಕಲೆ

(ಸಚಿತ್ರ)

ಲೇ: ಶ್ರೀಮತಿ ಶಾಂತಾದೇವಿ ಮಾಳವಾಡ

ಕಸೂತಿಯ ಕಲೆ

(ಸಚಿತ್ರ)

೧ ನೆಯ ಭಾಗ

ಕುಸುರಿನ ಯಂತ್ರದ ಕಸೂತಿ

ಲೇ: ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ.

೨ ನೆಯ ಭಾಗ

ಕುಶಲ ಕೈಕಸೂತಿ

ಲೇ: ಶ್ರೀಮತಿ ಸುಶೀಲಾದೇವಿ ಹಳಪೇಟೆ

ರಸದೂಟ

(ಸಚಿತ್ರ)

ಕನ್ನಡದ ಕಲೆಯ ಪುನರುಜ್ಜೀವನದ ಪರ್ವಕಾಲಕ್ಕೆ ಕನ್ನಡ ಕುವರಿಯರಿತ್ತ ಅಮೌಲ್ಯ ಕಾಣಿಕೆಗಳು.
ವರ್ಣಚಿತ್ರಗಳಿಂದೊಡಗೂಡಿ ಪ್ರಕಟವಾಗಲಿವೆ.

ಕರ್ನಾಟಕ ಹೊಲಿಗೆಯ ವಿದ್ಯಾಲಯ, ಧಾರವಾಡ.

ಶಾಂತಿ ಸಾಹಿತ್ಯಮಾಲೆ

ಬಾದಾಮಿ

(ವಿಜಾಪೂರ ಜಿಲ್ಲೆ)

ಈಗ ತಾನೆ ಅರಳಿವೆ:

ಪೂಜಾ (ಗದ್ಯಗೀತಗಳು)
ಶ್ರೀ. ಸಿಂಪಿ ಲಿಂಗಣ್ಣನವರು.

ಶೋಚನೀಯ ನಿಧನ (ಕಥಾಸಂಗ್ರಹ)
ಶ್ರೀ. ರಾ. ಪಾ. ಶಿರೋಳ.

ಅರೆಯಾಳು (ನೀಳ್ಗತೆಗಳೆರಡು)
ಶ್ರೀ. ಕುಲಕರ್ಣಿ ಬಿಂದುಮಾಧವ.

ಕೇವಲ ನಾಲ್ಕು ರೂಪಾಯಿ ಚಂದಾ ಹಣಕ್ಕೆ

ಈ ಮೇಲಿನ ಪುಸ್ತಕಗಳಲ್ಲದೆ ಇನ್ನೊಂದು ಕಾದಂಬರಿ ಚಂದಾದಾರರಾಗುವವರಿಗೆ ದೊರೆಯುತ್ತದೆ.

ವರ್ಷ ೧೩ ಸಂಚಿಕೆ ೧

ಜಯಂತಿ

ಜುಲೈ ೧೯೫೦

ಸಂಪಾದಕೀಯ

ಅನಾಗರಿಕತೆ–ನಾಗರಿಕತೆ

ಮಾನವಕುಲದಲ್ಲಿ ನಾಗರಿಕತೆ ಹೆಚ್ಚಿದಂತೆಲ್ಲ ಅಸತ್ಯ, ಕಪಟ, ವಂಚನೆಗಳೇ ಹೆಚ್ಚಾಗಿ ತಲೆಯೆತ್ತುತ್ತ ನಡೆದಿವೆ. ಮಾನವನು ಅನಾಗರಿಕನಾಗಿರುವಾಗ ಇನ್ನೊಬ್ಬರೊಂದಿಗೆ ಹೂಡುತ್ತಿದ್ದ ಮಾಡುತ್ತಿದ್ದ ಜಗಳ-ಕದನಗಳು, ಅವನ ಸ್ವಾರ್ಥ-ಮಹತ್ವಾಕಾಂಕ್ಷೆಗಳ ಸಾಧನೆಗೇ ಇವೆಯೆಂಬುದನ್ನು ಯಾರೂ ಒಡೆದು ಹೇಳಬೇಕಾದ ಕಾರಣವೇ ಇರಲಿಲ್ಲ. ಬಲಶಾಲಿಯಾದವನು ಬಲಹೀನರನ್ನು ಸೋಲಿಸಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಲಿದ್ದ. ಇದಕ್ಕಾಗಿ ಯಾವ ಸತ್ಯತತ್ತ್ವದ ಸಂರಕ್ಷಣೆಯ ತೆರೆಯನ್ನೂ ಆತ ಬಯಸುತ್ತಿರಲಿಲ್ಲ. ಸ್ವಾರ್ಥಸಾಧನೆ ಮನುಷ್ಯವ್ಯಕ್ತಿಯ ಮೂಲಗುಣವೆಂಬುದನ್ನೂ ಅದಕ್ಕಾಗಿ ಹೋರಾಡುವುದು ಮಾನವನ ಮೂಲ ಸ್ವಭಾವವೆಂಬುದನ್ನೂ ಅವನು ತನ್ನ ಆಚರಣೆಯಿಂದ ಸಿದ್ಧಗೊಳಿಸಿ ತೋರಿಸುತ್ತಿದ್ದ. ತನ್ನ ಸ್ವಾರ್ಥ-ಮಹತ್ವಾಕಾಂಕ್ಷೆಗಳನ್ನು ಸತ್ಯವಾಗಿಯೆ ಜನರೆದುರು ಸಾರಿ ಹೇಳುತ್ತಿದ್ದ.

ಆ ಕಾಲಹೋಗಿ ಎಷ್ಟೋ ಸಾವಿರ ವರ್ಷಗಳು ಗತಿಸಿ ಹೋಗಿದ್ದರೂ, ಮಾನವನ ಮೂಲಸ್ವಭಾವದಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂಬುದನ್ನು ಗತಕಾಲದ ಇತಿಹಾಸದಿಂದಲೂ ಕಾಣಬಹುದು, ವರ್ತಮಾನಕಾಲದ ಪ್ರತ್ಯಕ್ಷ ಜೀವನದಲ್ಲಿಯೂ ಕಾಣಬಹುದು.

ಅನಾಗರಿಕ ಮಾನವ, ಭವಿಷ್ಯದ ಯೋಚನೆಯಿಲ್ಲದೆ ತನ್ನ ದೇಹಬಲವನ್ನೇ ನಂಬಿ ಕಾಳಗಕ್ಕೆ ನುಗ್ಗುತ್ತಲಿದ್ದ. ಭವಿಷ್ಯದ ಭಾವನೆಯೇ ಇಲ್ಲದಿದ್ದ ಆತನಿಗೆ ಮರಣದ ಭೀತಿಯೂ ಇರಲಿಲ್ಲ. ಆದರೆ ಮಾನವಕುಲ ನಾಗರಿಕತೆ ಹೊಂದುತ್ತ ನಡೆದಂತೆ ಇನ್ನೊಂದು ಬಲವು ಹೆಚ್ಚುತ್ತ ನಡೆಯಿತು. ಅದಾವುದೆಂದರೆ ಬುದ್ಧಿಬಲ. ಇದು ವರ್ತಮಾನದೊಂದಿಗೆ ಭೂತ-ಭವಿಷ್ಯಗಳ ವಿಚಾರವನ್ನೂ ಮಾಡಲು ತೊಡಗಿತು. ಈ ವಿಚಾರ ಮಾನವನ ಮೂಲಸ್ವಭಾವವಾದ ಸ್ವಾರ್ಥವೃತ್ತಿ ಮಹತ್ವಾಕಾಂಕ್ಷೆಯನ್ನು ಕಳೆಯದೆ ಹೋದರೂ, ಬಲದಿಂದ ದೊರಕಿಸಿದ ಸುಖಸಾಧನೆಗಳನ್ನು ಅನುಭವಿಸುತ್ತ ಬಹುಕಾಲ ಬದುಕಬೇಕೆಂಬ ಬಯಕೆಯನ್ನು ಹುಟ್ಟಿಸಿತು. ಈ ಬಯಕೆಯೆ ನಾಗರಿಕ ಸಮಾಜಕ್ಕೆ ಮರಣಭೀತಿಯನ್ನು ಉಂಟುಮಾಡಿಕೊಟ್ಟಿತು. ಜೀವನವೆಂದರೆ ಕಲಹವೇ ಎಂದು ತಿಳಿದುಕೊಂಡಿದ್ದ ಅನಾಗರಿಕ ಭಾವನೆ ಇದರಿಂದ ಹಿಮ್ಮೆಟ್ಟುತ್ತ ನಡೆದು, ಜೀವನವೆಂದರೆ ದೊರೆತ ಸುಖಸಾಧನೆಗಳನ್ನು ಅನುಭವಿಸುತ್ತ ಬಹುಕಾಲ ಬದುಕುವುದು—ಎಂಬ ಬುದ್ಧಿವಾದ ತಲೆಯೆತ್ತಲು ತೊಡಗಿತು. ಈ ಬುದ್ಧಿವಾದವೇ ದೇಹಬಲದ ಕಲಹಪ್ರಿಯತೆಗೆ ತಡೆಯನ್ನೊಡ್ಡುವ ಸಾಮ, ದಾನ, ಭೇದಗಳೆಂಬ ಉಪಾಯತ್ರಯಗಳನ್ನು ನಿರ್ಮಿಸಿತು. ಬುದ್ಧಿವಾದಿಯ ಈ ಉಪಾಯತ್ರಯ ನಿರ್ಮಾಣದ ಹಿಂದಿನ ಮನಸ್ಸನ್ನು ನೋಡಿದರೂ ಸ್ವಾರ್ಥವೃತ್ತಿ,-ಮಹತ್ವಾಕಾಂಕ್ಷೆಗಳು ಅಲ್ಲಿ ನೆಲೆಗೊಂಡು ನಿಂತುದೆ ಕಾಣುತ್ತದೆ. ಮಾನವನಲ್ಲಿ ಜಾಗೃತವಾದ ಮರಣಭೀತಿ ಈ ಉಪಾಯಗಳನ್ನು ಒಪ್ಪಿಕೊಂಡಿತಾದರೂ, ತಮ್ಮ-ತಮ್ಮೊಳಗೆ ನಡೆಯುವ ಕಲಹಗಳನ್ನು ತಪ್ಪಿಸಲಿಕ್ಕೇನೂ ಸಮರ್ಥವಾಗಲಿಲ್ಲ.

ದೇಹಬಲ ವ್ಯಕ್ತಿನಿಷ್ಠವಾಗಿದ್ದರೆ, ಬುದ್ಧಿಬಲ ಬಲದ ಕೇಂದ್ರೀಕರಣಕ್ಕಾಗಿ ಸಮೂಹನಿಷ್ಠೆಯನ್ನು ಬೋಧಿಸತೊಡಗಿತು. ಇದರಿಂದ ಮಾನವಕುಲದಲ್ಲಿ ಪ್ರಾದೇಶಿಕ ಅನುಕೂಲತೆಯಂತೆ ಬೇರೆ ಬೇರೆ ಪಂಗಡಗಳು ತಲೆದೋರಿದುವು. ಅನಾಗರಿಕ ಮಾನವ, ವೈಯಕ್ತಿಕವಾಗಿ ವ್ಯಕ್ತಿಗಳೊಂದಿಗೇ ಕಾದುತ್ತಲಿದ್ದರೆ, ಬುದ್ಧಿವಾದಿ-

ಗಳು ನಿರ್ಮಿಸಿದ 'ನಾಗರಿಕ ಮಾನವಕುಲ' ಸಂಗಡ-ಸಂಗಡ-ಗಳಾಗಿ ಹೊಡೆದಾಟ ನಡೆಯಿಸಿತು. ಕಲಹ ಹೋಗಿ ಯುದ್ಧವೆಂಬ ದೊಡ್ಡ ಹೆಸರನ್ನು ಪಡೆದುದು ಈ ಕಾಲದಲ್ಲಿಯೆ ಇರಬಹುದು.

ಮಾನವನ ವ್ಯಕ್ತಿನಿಷ್ಠಸ್ವಾರ್ಥ, ಅವನ ಕಾಮದ ಮೂಲಕ ಉಂಟಾಗುವ ಪ್ರತಿಲಿಂಗಿಯ ಆಕರ್ಷಣೆಯಲ್ಲಿಯೂ ಸ್ವನಿರ್ಮಿತ ಸಂತಾನದ ಆಕರ್ಷಣೆಯಲ್ಲಿಯೂ ವಿಶಾಲವಾಗುತ್ತ ಹೋಗಿ, ಹೃದಯಗುಣದೊಂದಿಗೆ ಸೇರಿ, ಪ್ರೀತಿಯಾಗಿ ಪರಿಣಮಿಸಿತು. ಈ ಪ್ರೀತಿಯ ಭಾವನೆಯೇ ದೇವರು, ಧರ್ಮ, ಪಾಪ, ಪುಣ್ಯ, ಅನೀತಿ, ನೀತಿ ಮೊದಲಾದುವುಗಳನ್ನು ಹುಟ್ಟಿಸಿತು. ಆಗಿನ ಪ್ರಾದೇಶಿಕ ಸಂಗಡಗಳು ಈ ಪ್ರೀತಿಯ ಸಂತಾನಗಳನ್ನು ಕ್ರಮವಾಗಿ ಒಪ್ಪಿಕೊಂಡುವಾದರೂ, ಒಂದೊಂದು ಸಂಗಡ ಒಂದೊಂದು ವಿಧದ ದೇವರನ್ನು ಒಪ್ಪಿಕೊಂಡಿತು, ಒಂದೊಂದು ಧರ್ಮವನ್ನು ಒಪ್ಪಿಕೊಂಡಿತು; ಒಂದೊಂದು ಬಗೆಯ ಪಾಪ-ಪುಣ್ಯ ನೀತಿ-ಅನೀತಿಗಳನ್ನು ನಂಬಿ ನಿಂತಿತು. ಈ ಪ್ರೀತಿಯ ಕಾರ್ಯ, ಆ ಆ ಸಂಗಡಗಳನ್ನು ಗಟ್ಟಿಗೊಳಿಸಲಿಕ್ಕೆ ಮಾತ್ರ ಸಮರ್ಥವಾಯಿತೇ ಹೊರತು ಮಾನವಕುಲದ ಯುದ್ಧಸ್ವಭಾವವನ್ನು ಕಡಿಮೆಮಾಡಲಿಕ್ಕೆ ಸಮರ್ಥವಾಗಲಿಲ್ಲ. ಆದುದರಿಂದ ದೇವರು-ಧರ್ಮಗಳ ಹೆಸರಿನಿಂದಲೇ ಕಾದಾಟ-ಹೋರಾಟಗಳು ಪ್ರಾರಂಭವಾದುವು. ಎಲ್ಲ ದೇವ-ಧರ್ಮವಾದಿ ಸಂಗಡಗಳೂ ಲೋಕಶಾಂತಿ, ಸರ್ವರ ಸುಖ, ಜನ್ಮಬಂಧನ ಮುಕ್ತಿ ಮೊದಲಾದ ಮಹಾತತ್ತ್ವದ ಮಾತನ್ನೆ ಹೇಳುತ್ತಲಿದ್ದರೂ, ಆ ಮಹಾತತ್ತ್ವವನ್ನು ಹರಡುವುದರ ಹೆಸರಿನಿಂದಲೇ ಯುದ್ಧವನ್ನು ನಡೆಯಿಸಿದುವು. ತಮ್ಮದಲ್ಲದ ಧರ್ಮ ಮ್ಲೇಚ್ಛ, ಕಾಫಿರ್, ನಾಸ್ತಿಕ, ಪೈಶಾಚ್ಯ ಎಂದು ಹಳಿಯುತ್ತ, ಧರ್ಮದ ತಿಳಿವಳಿಕೆಯೇನೂ ಇಲ್ಲದಿದ್ದರೂ ತಮ್ಮ ಧರ್ಮದ ಧ್ವಜವನ್ನೆತ್ತಿ ಹಿಡಿದುಕೊಂಡು, 'ಧರ್ಮಯುದ್ಧ'ಗಳನ್ನು ನಡೆಯಿಸಲು ತೊಡಗಿದುವು. ಈ 'ಧರ್ಮಯುದ್ಧ'ಗಳ ಹಿಂದಿನ 'ನಾಗರಿಕ' ಮನೋವೃತ್ತಿಯನ್ನು ವಿಶ್ಲೇಷಿಸಿ ನೋಡಿದರೂ ಅಲ್ಲಿಯೂ ನಮಗೆ ಅನಾಗರಿಕ ಮಾನವನ ಸ್ವಾರ್ಥಸಾಧನೆ—ಮಹತ್ತ್ವಾಕಾಂಕ್ಷೆಗಳೇ ಒಡೆದುಕಾಣುವುವು.

ಈ ದೇವಧರ್ಮದ ವಿಶೇಷಗುಣಗಳಿಗೆ ಲುಬ್ಧರಾದ ಕೆಲವೊಂದು ವ್ಯಕ್ತಿಗಳ ಪ್ರಭಾವದಿಂದ ಸಂಗೀತಕಲೆ ಬೆಳೆದಿರಬಹುದು; ಸಾಹಿತ್ಯದ ರಾಶಿ ನಿರ್ಮಿತವಾಗಿರಬಹುದು; ಚಿತ್ರ-ಶಿಲ್ಪಗಳು ಹುಟ್ಟಿ ಹೆಚ್ಚಿರಬಹುದು. ತತ್ತ್ವಶಾಸ್ತ್ರದ ನಿರ್ಮಾಣವಾಗಿರಬಹುದು. ಏನೇ ಸಂಸ್ಕೃತಿಯ ಕಾರ್ಯ ನಡೆದಿದ್ದರೂ ಅವು ವಿಶಿಷ್ಟವ್ಯಕ್ತಿಗಳ ಪ್ರಭಾವದಿಂದ ಆಗಿರಬಹುದಲ್ಲದೆ, ಬಹುಸಂಖ್ಯಾಕವ್ಯಕ್ತಿಗಳಿಂದ ಕೂಡಿರುವ ಸಮಾಜದಿಂದ ಅದು ಸಾಧ್ಯವಾಗಿಲ್ಲವೆಂಬುದು ಅನುಭವಸಿದ್ಧ ಸಂಗತಿ. ಒಂದೊಂದು ವ್ಯಕ್ತಿಯ ಪ್ರಭಾವ ಒಂದು ವಿಶಿಷ್ಟ ಸಂಸ್ಕೃತಿಗೆ ಕಾರಣವಾಗಿ, ತನ್ನ ಕಾಲವನ್ನೂ ಆ ಕಾಲದ ಜನತೆಯನ್ನೂ ಸುಸಂಸ್ಕೃತವೆಂದು ಕರೆಯಲು ಕಾರಣವಾಗಿದೆಯೇ ಹೊರತು, ಸಾಮಾಜಿಕರ ಮೂಲಸ್ವಭಾವ ಮಾತ್ರ ಇದ್ದಂತೆಯೇ ಉಳಿದುಬಿಟ್ಟಿತು.

ದೇವ-ಧರ್ಮಗಳ ಕಾಲ ಮುಗಿಯಿತು; ಆಧುನಿಕ ವಿಜ್ಞಾನ-ಯುಗವು ಪ್ರಾರಂಭವಾಯಿತು. ದೇವಧಾರ್ಮಿಕರ ಪರಲೋಕ-ವಿಚಾರವು ಗಾಳಿಮಾತೆನಿಸಿ, ಇಹಲೋಕದ ಜೀವನವೇ ಮುಖ್ಯ ತತ್ತ್ವವಾಗಿ ಪರಿಣಮಿಸಿತು. ಧರ್ಮದ ಸ್ಥಳವನ್ನು ಅರ್ಥವು ಆಕ್ರಮಿಸಿಕೊಂಡಿತು. ಇಹಲೋಕದ ಸುಖ-ಶಾಂತಿಗಳಿಗೆ ಅರ್ಥವೇ ಮಹಾಸಾಧನವೆಂಬುದನ್ನು ಇಂದಿನ ವಿಜ್ಞಾನವಾದವು ಒಪ್ಪಿತು. ದೇವಧರ್ಮವಾದದಲ್ಲ ಸಂಗಡ-ಸಂಗಡಗಳಾದಂತೆ ಇಂದಿನ ಅರ್ಥವಿಜ್ಞಾನವಾದವೂ ಬೇರೆ ಬೇರೆ ತತ್ತ್ವಗಳನ್ನು ಹೇಳುತ್ತ ಸಂಗಡಗಳನ್ನು ನಿರ್ಮಿಸಿದೆ. ಹಿಂದಿನ ಧರ್ಮಗಳ ಹೆಸರಿನಿಂದ ನಡೆದ ಯುದ್ಧಗಳಂತೆಯೇ ಇಂದು ಆರ್ಥಿಕವಾದಗಳ ಹೆಸರಿನಿಂದ ಯುದ್ಧಗಳು ನಡೆದಿವೆ; ನಡೆಯಲಿವೆ. ಜರ್ಮನಿಯ ಸಾಮ್ರಾಜ್ಯವಾದವೂ ಸರ್ವಾಧಿಕಾರಿವಾದವೂ ಬ್ರಿಟಿಷರ ರಾಜಕೀಯವಾದವನ್ನು ಹಳಿಯುತ್ತ, ಎರಡು ಮಹಾಯುದ್ಧಗಳಲ್ಲಿ ಲೋಕವನ್ನೇ ತೊಡಗಿಸಿ, ಲೋಕವನ್ನು ನುಗ್ಗು-ನುರಿಮಾಡಿತಲ್ಲದೆ ತಾನೂ ಹಾಳಾಯಿತು. ಇಂದು ಅಮೇರಿಕನರ ಬಂಡವಾಳವಾದಕ್ಕೂ ರಷ್ಯದ ಆರ್ಥಿಕ ಸಮತಾವಾದಕ್ಕೂ ಹೋರಾಟ ನಡೆದಿದ್ದು, ಮೂರನೆಯ ಮಹಾಯುದ್ಧವನ್ನು ರಂಗದ ಮೇಲೆ ಎಳೆದು ತಂದಿವೆ. ಇಂದು ಉತ್ತರ ಕೋರಿಯಾ-ದಕ್ಷಿಣ ಕೋರಿಯಾಗಳಲ್ಲಿ ಪ್ರಾರಂಭವಾದ ಯುದ್ಧವು ಕೇವಲ ಕೋರಿಯಾ ದೇಶದ ಒಳಜಗಳವಲ್ಲ. ರಶಿಯಾ-ಅಮೇರಿಕೆಗಳ ರಾಜಕೀಯ ತತ್ತ್ವಜ್ಞಾನಗಳು ಅವುಗಳ ಬೆಂಬಲಕ್ಕೆ ಸಕ್ರಿಯವಾಗಿ ನಿಂತಿರುವುವು. ಈ ಮೊದಲಿನೆರಡು ಮಹಾಯುದ್ಧಗಳಿಗೆ ಪಶ್ಚಿಮ ಗೋಲಾರ್ಧವು ರಂಗಭೂಮಿಯಾಗಿದ್ದರೆ, ಈ ಮೂರನೆಯ ಮಹಾಯುದ್ಧಕ್ಕೆ ಪೂರ್ವ ಗೋಲಾರ್ಧವು ರಂಗಭೂಮಿಯಾಗಲಿದೆ.

ಅಮೇರಿಕೆ-ರಶಿಯಗಳೆರಡರ ರಾಜಕೀಯ ತತ್ತ್ವಗಳೂ ಲೋಕಶಾಂತಿ, ಮಾನವಬಂಧುತ್ವ, ಸರ್ವಸೌಖ್ಯ ಮುಂತಾದ ಕಲ್ಯಾಣಗುಣಗಳ ಗುಣಗಳನ್ನೇ ಗಳಹುತ್ತಲಿವೆ; ಆದರೆ ಈ ತತ್ತ್ವದ ತೆರೆಯನ್ನು ಹೊತ್ತುಕೊಂಡು ಮಾತನಾಡುತ್ತಿರುವ ಆ ಆ ರಾಷ್ಟ್ರಗಳ ಮಹಾವ್ಯಕ್ತಿಗಳ ಮನಸ್ಸನ್ನು ವಿಶ್ಲೇಷಿಸಿ ನೋಡಿದರೆ, ಅಲ್ಲಿಯೂ ಅನಾಗರಿಕ ಮಾನವನ ಸ್ವಾರ್ಥಸಾಧನೆ, ಮಹತ್ತ್ವಾಕಾಂಕ್ಷೆಗಳೇ ತಲೆಯೆತ್ತಿ ನಿಂತುದು ಕಾಣುತ್ತದೆ.

ಹಾಗಿದ್ದರೆ ಅನಾಗರಿಕತೆಗೂ ನಾಗರಿಕತೆಗೂ ಯಾವ ವ್ಯತ್ಯಾಸವಿದೆ? ಸಾಧನ-ಸಲಕರಣೆಗಳು ಬದಲಾಗಿರುವುದೇ ನಾಗರಿಕತೆಗೆ ಗುರುತೆಂದು ಹೇಳಬಹುದೆ? ದೊಡ್ಡ ತತ್ತ್ವಗಳ ಹೆಸರಿನಿಂದ ತಮ್ಮ ಅಸತ್ಯ, ವಂಚನೆ, ಕಪಟಗಳನ್ನು ಮರೆಮಾಡುತ್ತಿರುವುದಕ್ಕೆ ನಾಗರಿಕತೆಯೆನ್ನಬೇಕೊ?

ನಿಜವಾದ ನಾಗರಿಕತೆ ಯಾವುದೆಂಬುದನ್ನು ನಮ್ಮ ಭಾರತೀಯ

ಋಷಿಕುಲವು—ವೇದಕಾಲದಿಂದಲೂ ಮಹಾತ್ಮಾ ಗಾಂಧೀಜಿಯವರ ವರೆಗೆ—ಸಾರಿ ಸಾರಿ ಹೇಳಿದ್ದಾರೆ.

ಸಹನಾವವತು ಸಹನೌಭುನಕ್ತು !
ಸಹವೀರ್ಯಂ ಕರವಾವಹೈ !
ತೇಜಸ್ವಿನಾವಧೀತಮಸ್ತು
ಮಾವಿದ್ವಿಷಾವಹೈ ! '

ಇಂದು ದೇಹಬಲ, ಬುದ್ಧಿಬಲ, ಅರ್ಥಬಲಗಳೇ ನಾಗರಿಕತೆಯ ಲಕ್ಷಣವೆಂದು ತಿಳಿಯುವವರೇ ಎಲ್ಲರೂ ಇರುವಾಗ, ಈ ಋಷಿಗಳ ದಿವ್ಯಧ್ವನಿಯತ್ತ ಲಕ್ಷ್ಯ ಕೊಡುವವರು ಯಾರು ?

—ಸಂಪಾದಕರು

ಜಯಂತಿಯ ಮೊರೆಗೆ ಜನತೆಯ ಉತ್ತರ

(ಜೂನ್ ತಿಂಗಳಲ್ಲಿ)

ಒಂದು ಪತ್ರ

ಪುಣೆಯಿಂದ ಶ್ರೀ. ಜಿ. ಎಸ್. ಮುತಕರ್ ಎಂ. ಎ., ಬಿ ಟಿ. ಅವರು ಹೀಗೆ ಬರೆದಿದ್ದಾರೆ:

' ಜಯಂತಿಯ ಮೇ ತಿಂಗಳ ಸಂಪಾದಕೀಯದಲ್ಲಿ ನೀವು ಜಯಂತಿಯ ಕಷ್ಟ-ನಷ್ಟಗಳ ಕತೆಯನ್ನು ಬರೆದಿರುವಿರಿ. ಅದನ್ನೋದಿ ಜಯಂತಿಗೆ ಕೈಲಾದಷ್ಟು ಸಹಾಯ ಮಾಡಬೇಕೆಂದು ನಿಶ್ಚಯಿಸಿರುವೆನು. ಜಯಂತಿಯಂತಹ ಉತ್ತಮ ಮಾಸಪತ್ರಿಕೆಯ ಅವಶ್ಯಕತೆಯು ಕನ್ನಡಿಗರಿಗೆ ಬಹಳೇ ಇದೆ. ಆದುದರಿಂದ ಪುಣೆಯಲ್ಲಿ ಜಯಂತಿಯ ಪ್ರಸಾರ ಮಾಡುವುದಕ್ಕಾಗಿ ಮೊದಲು ಜಯಂತಿಯ ೧೬ ಸಂಚಿಕೆಗಳನ್ನು ತರಿಸಬೇಕೆಂದಿರುವೆನು. ಆದುದರಿಂದ ತಾವು ಜುಲೈ ತಿಂಗಳ ೧೬ ಸಂಚಿಕೆ ಕಳಿಸಿಕೊಡಬೇಕಾಗಿ ಬಿನ್ನಹ.''

ಚಂದಾದಾರರನ್ನು ಒದಗಿಸಿ ಕೊಟ್ಟವರು :

ಶ್ರೀ. ಗುರುರಾವ್ ದೇಶಪಾಂಡೆ ಸಂಗೀತ ವಿಶಾರದರು ಧಾರವಾಡ ೧
ಶ್ರೀ. ಮಿರ್ಜಿ ಅಣ್ಣಾರಾಯರು ಉಗಾರ ೧
ಶ್ರೀ. ಪಿ. ನಾಗರಾಜರಾವ್ ತುಮಕೂರು ೧

ನಮ್ಮ ಚಂದಾದಾರರಲ್ಲಿ ಬಿನ್ನಹ

★

ಜಯಂತಿಯ ಬದುಕನ್ನೂ ಅಭಿವೃದ್ಧಿಯನ್ನೂ ಬಯಸುವ ನಮ್ಮ ಚಂದಾದಾರರು ಪ್ರಯತ್ನಪಟ್ಟು ಒಬ್ಬೊಬ್ಬರು ಕನಿಷ್ಠಪಕ್ಷ ಒಬ್ಬೊಬ್ಬ ಹೊಸ ಚಂದಾದಾರನನ್ನಾದರೂ ಒದಗಿಸಿಕೊಡಬೇಕು. ಚಂದಾದಾರರ ಸಂಖ್ಯೆ ಬೆಳೆದು, ಜಯಂತಿಯ ರೂಪ-ಗುಣಗಳೂ ಬೆಳೆಯಬಲ್ಲವು.

ಅಂಚೆಯ ಶಾಖೆಯು ಇತ್ತೀಚಿಗಿನ ನಿಯಮದ ಮೇರೆಗೆ V.P ಗಳನ್ನು ಹೆಚ್ಚುಕಾಲ ಸ್ಥಾನಿಕ ಪೋಸ್ಟ್ ಆಫೀಸುಗಳಲ್ಲಿ ಇರಿಸಿಕೊಳ್ಳುವುದಿಲ್ಲ. ಆದುದರಿಂದ V.P. ಬಂದಿದೆಯೆಂಬುದು ಗೊತ್ತಾದೊಡನೆಯೇ ಹಣತುಂಬಿ ತೆಗೆದುಕೊಳ್ಳಬೇಕು. ಇನ್ನೊಂದು ಅನುಕೂಲ ಸಂಗತಿಯೆಂದರೆ: V.P. ಬರುವ ದಾರಿಯನ್ನು ಕಾಯದೆ ಹಣವನ್ನು M O. ಮೂಲಕ ಕಳುಹುವುದು. ಇದರಿಂದ ವಿ. ಪಿ. ರಜಿಸ್ಟರಿಗಾಗಿ ವೆಚ್ಚವಾಗುವ ನಾಲ್ಕಾಣೆಗಳ ವ್ಯರ್ಥ ವ್ಯಯವು ಕಡಿಮೆಯಾಗುವುದು.

ಚಂದಾ ಅವಧಿ ಮುಗಿದ ಸಂಗತಿಯನ್ನು ಆ ಆ ಚಂದಾವರ್ಷದ ಕೊನೆಯ ಸಂಚಿಕೆಗೆ ಅಂಟಿಸಿ ಕಳುಹುವ ನೋಟೀಸಿನ ಮೂಲಕ ತಿಳುಹಲಾಗುವುದು. ಅದನ್ನು ಕಂಡೊಡನೆಯೇ ಮುಂದೆ ಚಂದಾದಾರರಾಗಿ ಉಳಿಯಲು ಇಷ್ಟವಿದ್ದವರು ಮನಿಯಾರ್ಡರಿನ ಮೂಲಕ ಹಣ ಕಳುಹಬೇಕು. ಇಷ್ಟವಿಲ್ಲದವರು ದಯೆಯಿಟ್ಟು ಕೂಡಲೆ ಕಾಗದ ಬರೆದು ತಿಳುಹಬೇಕು. ಈ ವಿಚಾರದಲ್ಲಿ ಚಂದಾದಾರರು ನಮ್ಮೊಂದಿಗೆ ಸಹಕರಿಸಿದರೆ, ಜಯಂತಿಗೆ ಆಗುತ್ತಿರುವ ನಷ್ಟವನ್ನು ಕಡಿಮೆಮಾಡಿದ ಶ್ರೇಯಸ್ಸು ಅವರಿಗೆ ಸಿಕ್ಕುವುದು. ಜಯಂತಿಯ ಹಿತಚಿಂತಕರಾದ ಚಂದಾದಾರರೆಲ್ಲರೂ ನಮ್ಮ ಬಿನ್ನಹವನ್ನು ಮನ್ನಿಸುವರೆಂದು ನಮ್ಮ ನಂಬುಗೆ.

ನವೀನ ಕವನಸಂಗ್ರಹ

ಗಂಗಾವತರಣ

(ಅಂಬಿಕಾತನಯ ದತ್ತ)

ಪ್ರೊ. ದ. ರಾ ಬೇಂದ್ರೆಯವರ ಹೊಸ ಕವನಗಳ ಸಂಗ್ರಹ ಬರುವ ಆಗಸ್ಟದೊಳಗಾಗಿ ಪ್ರಕಟವಾಗುವದು.

ಪುಟ-೧೨೮; ಬೆಲೆ ೨-೦-೦.

೧ ರೂ. ಮುಂಗಡ ಕಳಿಸಿ ಹೆಸರು ಹಚ್ಚಿದವರಿಗೆ ಈ ಪುಸ್ತಕವು ರೂ. ೧-೧೨-೦ ಬೆಲೆಗೆ ದೊರೆಯುವದಲ್ಲದೆ, ಮುಂದೆ ಇವರಿಂದಲೇ ಪ್ರಕಟವಾಗುವ ಎಲ್ಲ ಪುಸ್ತಕಗಳು ರಿಯಾಯಿತಿ ದರದಿಂದ ದೊರೆಯುವವು.

ಬೇಗನೆ ಪ್ರಕಟವಾಗಲಿರುವ ಪುಸ್ತಕಗಳು :

ಹೃದಯ ಸಮುದ್ರ, (ಕವನ ಸಂಗ್ರಹ,) **ಅಷ್ಟಾಂಗ ಸಂಸ್ಕೃತಿ** (ಪ್ರಬಂಧ) **ವಿಶ್ವರೂಪಕ** (ನಾಟ್ಯ ಪ್ರಬಂಧ)

ಪ್ರಕಟನೆಯ ತಾರೀಖನ್ನು ಜಯಂತಿಯಲ್ಲಿ ಆಗ್ಗಾಗ್ಗೆ ತಿಳಿಸಲಾಗುವದು.

ದೊರೆಯುವ ಸ್ಥಳ—: **ಪಾಂಡುರಂಗ ಬೇಂದ್ರೆ.**
C/o. **ಪ್ರೊ. ದ. ರಾ. ಬೇಂದ್ರೆ.**
ಬ್ಲಾಕ್ ೧೨, ನೀಲಾನಗರ, **ಸೊಲ್ಲಾಪುರ.**



(೧)

ರೋಗಿ :— ಡಾಕ್ಟರ್, ಹದಿನೈದು ವರ್ಷದ ಹಿಂದೆ ನಾನೊಂದು ಸವರಿನ್ (೧೫ ರೂ. ಬೆಲೆ ಬಾಳುವ ನಾಣ್ಯ) ನುಂಗಿದ್ದೆ. ಈಗ ಅದನ್ನು ನನ್ನ ಹೊಟ್ಟೆಯೊಳಗಿಂದ ತೆಗೆದು ನನ್ನನ್ನು ಉಳಿಸಿರಿ!

ಡಾ :— ಅಲ್ಲೋ ಗೃಹಸ್ಥಾ, ಇಷ್ಟು ವರ್ಷ ಯಾಕೆ ಸುಮ್ಮನೆ ಕುಳಿತೆ? ನುಂಗಿದ ದಿನವೇ ನನ್ನ ಕಡೆಗೇಕೆ ಬರಲಿಲ್ಲ?

ರೋ :— ನಿಜವಾಗಿ ಹೇಳಬೇಕಂದರೆ ಡಾಕ್ಟರ್, ಆಗ ನನಗೆ ಅದರ ಅಗತ್ಯ ಇರಲಿಲ್ಲ! ಈಗ ಖರ್ಚಿಗೆ ಹಣ ಬೇಕಾಗಿದೆ!

* * *

(೨)

ತಂದೆ :— (ಮಗನಿಗೆ) ನಾನು ನಿನ್ನ ವಯಸ್ಸಿನವನಿರುವಾಗ ೧೨ ತಾಸು ಕೆಲಸ ಮಾಡುತ್ತಿದ್ದೆ.

ಮಗ :— ಆಯಿತು. ಮುಪ್ಪಿನ ಕಾಲಕ್ಕಾದರೂ ಅದನ್ನ ಬಿಟ್ಟದ್ದು ನೋಡಿ ಸಂತೋಷಾತ್ತು!

* * *

(೩)

ಮಿ. ವಿನ್ಸ್ಟನ್ ಚರ್ಚಿಲ್ಲರು ತಮ್ಮದೊಂದು ಮಹತ್ತ್ವದ ಭಾಷಣವನ್ನು ಮಾಡುವುದರ ಸಲುವಾಗಿ ರೇಡಿಯೊ ಸ್ಟೇಶನ್ನಿಗೆ ಹೊರಟಿದ್ದರು. ಮನೆಯಿಂದ ಹೊರಬಿದ್ದು ಒಂದು ಬಾಡಿಗೆಯ ಮೋಟರನ್ನು ಗೊತ್ತುಮಾಡಿದರು. ಬಾನುಲಿಯ ಕಟ್ಟೆಯ ಹತ್ತಿರ ಇಳಿದ ಮೇಲೆ ಡ್ರೈವರನಿಗೆ ಹೇಳಿದರು:— 'ಅರ್ಧಗಂಟೆ ನಂತರ ನಾನು ತಿರುಗಿ ಬಂದು ಬಿಡುತ್ತೇನೆ.' ಡ್ರೈವರನೆಂದ — ನಿಲ್ಲಬಹುದಾಗಿತ್ತು. ಆದರೆ ಈಗ ಬಾನುಲಿಯಲ್ಲಿ ಚರ್ಚಿಲ್ಲರ ಭಾಷಣ ಇದೆ. ಅದನ್ನು ನಾನು ಕೇಳಲು ಹೋಗಬೇಕು.... ಕ್ಷಮಿಸಿರಿ!'

ಚರ್ಚಿಲ್ಲರು ಸಂತುಷ್ಟರಾಗಿ ಜೇಬಿನೊಳಗಿಂದ ಒಂದು ಪೌಂಡಿನ ನೋಟನ್ನು ತೆಗೆದು ಡ್ರೈವರನ ಕೈಯಲ್ಲಿಟ್ಟರು. ಡ್ರೈವರ್ ಕಣ್ಣರಳಿಸಿ, ಪ್ರಸನ್ನಚಿತ್ತನಾಗಿ ನುಡಿದ:— 'ಸಾಹೇಬ್, ಇನ್ನು ನೀವು ಬೇಕಾದಹಾಗೆ ಹೋಗಿ ಬರ್ರಿ, ಒಂದು ಗಂಟೆ ಬೇಕಾದರೂ ನಿಲ್ಲುತ್ತೇನೆ. ಆ ಮುಂಡೇಮಗ ಚರ್ಚಿಲ್ಲ, ಅವನ ಆ ಹಾಳ ಭಾಷಣ, ಯಾವ ಮಗನಿಗೆ ಬೇಕಾಗಿದೆ!'

* * *

(೪)

ಅದೇ ಗ್ರಾಜ್ಯುಯೇಟ್ ಆದ ಒಬ್ಬ ತರುಣ, ಕೆಲಸವನ್ನು ದೊರಕಿಸಲು ಒಂದು ಆಫೀಸಿಗೆ ಹೋದ. ಮ್ಯಾನೇಜರನು ಕೆಲಸದಲ್ಲಿ ತೊಡಗಿದ್ದರಿಂದ ಸಿಪಾಯಿ ಇವನನ್ನು ಕೋಣೆಯಲ್ಲಿ ಕುಳ್ಳಿರಿಸಿ ಕಾಯಲು ಹೇಳಿದ.

ತರುಣ ಸಿಪಾಯಿಯನ್ನು ಕೇಳಿದ:— 'ಒಬ್ಬ ಕಾಲೇಜ್ ಗ್ರ್ಯಾಜುಯೇಟನಿಗೆ ಇಲ್ಲೇನಾದರೂ ಜಾಗ ಖಾಲಿ ಇದೆಯೆ?' ಸಿಪಾಯಿ ಉತ್ತರಿಸಿದ:— 'ಒಂದು ದಿನ ತಡೆಯಿರಿ. ನಾಳೆ ಮ್ಯಾನೇಜರು ನನ್ನ ಸಂಬಳ ಹಂಚೂ. ಇದ್ದದ್ದನ್ನ, ಅಂ ಮಾಡದಿದ್ದರೆ ಖಾಲಿ ಆಗಬಹುದು!'

* * *

(೫)

ಗ್ಲ್ಯಾಡ್‌ಸ್ಟನ್ನನಿಗೆ ಒಮ್ಮೆ ಒಬ್ಬರು ಪ್ರಶ್ನೆ ಕೇಳಿದರು:— 'ನೀವು ಸಭೆಯಲ್ಲಿ ಮಾತಾಡಬೇಕಾದರೆ ಎಷ್ಟುದಿನ ಮೊದಲು ಸಿದ್ಧತೆ ಮಾಡಿಕೊಳ್ಳುತ್ತೀರಿ?' ಗ್ಲ್ಯಾಡ್‌ಸ್ಟನ್ ಉತ್ತರಿಸಿದರು:— 'ಕಾಲುಗಂಟೆ ಮಾತನಾಡುವದಿದ್ದರೆ ಒಂದು ವಾರ. ಅರ್ಧಗಂಟೆಯ ಮಾತಿಗೆ ಮೂರುದಿನ. ಗಂಟೆಗಟ್ಟಲೆ ಭಾಷಣ ಬಿಗಿಯಬೇಕಾಗಿದ್ದರೆ ಯಾವಾಗಲೂ ಸಿದ್ಧ!'

ಈ ಮೂರರಲ್ಲಿ ನಮ್ಮ ಮುಂದಾಳುಗಳು ಮಾಡುತ್ತಿರುವುದು ಯಾವುದು?

* * *

(೬)

ಹೊಸವಾಗಿ ಪತ್ರಿಕೆಯನ್ನು ಹೊರಡಿಸಬೇಕೆನ್ನುವವರು ದೊಡ್ಡ ಮನುಷ್ಯರೊಬ್ಬರ ಕಡೆಗೆ ಹೋಗಿ 'ಪತ್ರಿಕೆಯ ಧೋರಣೆಯೇನಿರಬೇಕು?' ಎಂದು ಸಲಹೆ ಕೇಳಿದರು. ದೊಡ್ಡಮನುಷ್ಯರು ಸಲಹೆ ಕೊಟ್ಟರು:— '(೧) ಬ್ರಾಹ್ಮಣ ಬ್ರಾಹ್ಮಣರಲ್ಲಿ ಜಗಳ ಹಚ್ಚುವದು, (೨) ಲಿಂಗಾಯತ

(ಕವರಿನ ೩ನೆಯ ಪುಟ ನೋಡಿರಿ)

ಸಂಕಟವಿಮೋಚನ

(ಒಂದು ಕತೆ)

ಶ್ರೀ. ಕೆ. ಎ. ಎನ್. ರಾವ್, ಬನಾರಸ

★

ಆಭಾಸಾತ್ಮಕ ಶಾಸ್ತ್ರವಾಗಿರುವ ಫಲಜ್ಯೋತಿಷವನ್ನು ನಂಬಿ, ತಮ್ಮ ಸವಿಬಾಳನ್ನು ಹದಗೆಡಿಸಿಕೊಳ್ಳುವ ಭಾವಿಕರು ನಮ್ಮಲ್ಲಿ ಹಲವು ಜನರು. ಪ್ರೊ. ವಿಶ್ವನಾಥನಂತಹ ಸುಶಿಕ್ಷಿತ ಮನುಷ್ಯನೂ ಇದರ ಬಲೆಯಲ್ಲಿ ಬಿದ್ದು ಜೀವನದುದ್ದಕ್ಕೂ ಕಳವಳಗೊಳ್ಳುತ್ತಲಿದ್ದ.

★

ಆ ದಿನ ಸಂಜೆ, ಲಲಿತಾ ನಾನು ಇಬ್ಬರೂ ವಿಶ್ವವಿದ್ಯಾಲಯದಿಂದ 'ಸಂಕಟವಿಮೋಚನ'ಕ್ಕಾಗಿ ಹೊರಟೆವು. ಇದು ನೋಡತಕ್ಕ ಸ್ಥಳವೆಂದು, ಕಾಶಿಯಲ್ಲಿ ನಮಗೆ ಗುರುತಾದವರೆಲ್ಲ ಹೇಳಿದ್ದರು. ಅವರಿಂದಲೇ ದಾರಿಯನ್ನೂ ಸುಮಾರಾಗಿ ತಿಳಿದುಕೊಂಡಿದ್ದೆವು. ವಿಶ್ವವಿದ್ಯಾಲಯದ ಪ್ರಾಸಾದವನ್ನು ದಾಟಿ, ಕೊಳಕು 'ನರಿಯಾ' ಹಳ್ಳಿಯಲ್ಲಿ ಹಾಯುತ್ತ, ಅಲ್ಲಿ ಯಾರನ್ನೋ "ಸಂಕಟವಿಮೋಚನ'ಕ್ಕೆ ದಾರಿ ಯಾವುದು?" ಎಂದು ಕೇಳಿದಾಗ, ಅವನು ಒಂದು ಮನೆಗೂ ಹೊಲಕ್ಕೂ ಮಧ್ಯದ ಓಣಿಯನ್ನು ತೋರಿಸಿದ. ಅದರಲ್ಲಿ ನಡೆದು, ಮುಂದೆಯೂ ಅವರಿವರನ್ನು ಕೇಳುತ್ತ ಬೆಳೆದು ನಿಂತಿದ್ದ ಪೈರಿನ ಮಧ್ಯೆ ಹಾಯ್ದು, ಇನ್ನೂ ಒಂದೆರಡು ಹಳ್ಳಿಗಳನ್ನು ದಾಟಿದ ಮೇಲೆ, ದೂರದಲ್ಲಿ ಕಂದುಬಣ್ಣದ ಜೈಲುಗೋಡೆಯೊಂದು ಕಾಣಿಸಿತು. ನಾವು ಕೇಳಿದ್ದ ವರ್ಣನೆಯಿಂದ ಇದೇ ಸಂಕಟವಿಮೋಚನವೆಂದು ತಿಳಿದುಕೊಂಡೆವು. ಪಾದ ಮುಚ್ಚುವ ಧೂಳಿನಲ್ಲಿ ಅತ್ತಿತ್ತ ಕಾಲಿಡುತ್ತ, ಪ್ರಾಕಾರದ ಬಿರುಕೊಂದಕ್ಕೆ—ಅದೇ ಬಾಗಿಲು—ಬರುವ ಹೊತ್ತಿಗೆ, ಪಡುವಲ ಕೆನ್ನೀರ ಕಡಲಿನಲ್ಲಿ ದಿನರಾಯನು ಮರೆಯಾಗುತ್ತಿದ್ದನು.

ಪ್ರಾಕಾರದೊಳಗೆ ಪ್ರವೇಶಿಸಿದಾಗ ನಮಗೆ ಅರಣ್ಯವೊಂದನ್ನು ಹೊಕ್ಕಂತೆ ಆಯಿತು. 'ಜನರು ಹೇಳಿದ ತಪೋವನವು ಇದೇ?' ಎಂಬ ಶಂಕೆಯೂ ಉಂಟಾಯಿತು. ಸುತ್ತಲೂ ಒತ್ತಿ ಬೆಳೆದ ಪೊದೆಗಳು, ದಟ್ಟವಾದ ಮುಳ್ಳುಮರಗಳು, ಅಲ್ಲೊಂದು ಇಲ್ಲೊಂದು ಕಾಲ್ದಾರಿ—ಇವು ಕಾಣಿಸಿಕೊಂಡುವು. ಒಂದು ಕಾಲ್ದಾರಿಯಲ್ಲಿ ನಾಲ್ಕಾರು ಮಾರು ನಡೆದ ಮೇಲೆ, ಎಡಗಡೆಯಲ್ಲಿ ಒಂದು ಬಾವಿಯು ಕಾಣಿಸಿತು. ಇದಕ್ಕೆ ನುಣುಪಾದ ಕೆಂಪು ಮರಳುಗಲ್ಲಿನ ಎತ್ತರವಾದ ಕಟ್ಟಡವಿತ್ತು. ಚಿತ್ರಕೆಲಸವೂ ಮಾಡಲ್ಪಟ್ಟಿತ್ತು. ರಾಟೆಗಾಗಿಯೇ ಎರಡು ಕಲ್ಲುಕಂಬಗಳು ನಿಂತಿದ್ದುವು. ಆದರೆ ರಾಟೆ ಇರಲಿಲ್ಲ. ಇದರ ಕಡೆಗೇನೇ ನಾವು ನೋಡುತ್ತ ನಡೆಯುತ್ತಿದ್ದಾಗ ಲಲಿತ 'ನೋಡಿ, ಎಷ್ಟು ಚೆನ್ನಾದ ಭಾವಿ!' ಅಂದಳು. ನಾನು 'ನಿಜ, ಸೊಗಸಾಗಿದೆ. ಆದರೆ ರಾಟೆ ಇಲ್ಲವಲ್ಲ!' ಎಂದು ದೃಷ್ಟಿಯನ್ನು ತಿರುಗಿಸಿ ಮುಂದೆ ನಡೆದೆ. ಇನ್ನೂ ಕೊಂಚ ದೂರ ಹೋದ ಮೇಲೆ, ಬಲಗಡೆಯಲ್ಲಿ ಒಂದು ಕಲ್ಲುಮಂಟಪ, ಅದರೊಳಗೆ ಒಂದು ಕಲ್ಲುಬೆಂಚು ಇವು ಕಂಡುವು. ಅದರ ಪಕ್ಕದಲ್ಲಿ ಒಂದು ಸುಮಾರಾದ ಕಟ್ಟಡ. ಸುತ್ತಣ ಮರಗಳಿಗೆಲ್ಲ ತಾತನಂತಿದ್ದ ಆಲದ ಹೆಮ್ಮರವೊಂದು ಈ ಕಟ್ಟಡಕ್ಕೆ ಮುಸುಕು ಹಾಕಿದ್ದಿತು. ಈ ಮರದ ಬುಡದ ಬಳಿಗೆ ಬಂದಾಗ, ಮುಂದಿನ ಸಂಕಟವಿಮೋಚನದ ಆಂಜನೇಯನ ಗುಡಿಯೂ, ಅದರ ಇದಿರು ಭಾಗದಲ್ಲಿ ಒಂದು ಕಡೆ ಮಿಠಾಯಿ-ಹೂಗಳ ಅಂಗಡಿಗಳೂ ಕಂಡುವು. ಅಂಗಡಿಗಳ ಮುಂದೆ ಇಟ್ಟಿಗೆಯ ರಸ್ತೆ ಇದ್ದಿತು.. ಇದೇ ಈ ದೇಗುಲಕ್ಕೆ ಮುಖ್ಯ ರಸ್ತೆ. ನಾವು ಹಿಂಭಾಗದಿಂದ ಬಂದಿದ್ದೆವು.

ನಾವು ಗುಡಿಯನ್ನು ಸಮೀಪಿಸಿದಾಗ ಇಬ್ಬರು ಮೂರು ಜನ ಭಕ್ತರು, ಅಲ್ಲೇ ಗೋಡೆಯ ಬಳಿ ತಮ್ಮ ಜೋಡುಗಳನ್ನು ಬಿಟ್ಟು, ಹತ್ತಿರದ ನಲ್ಲಿಯಲ್ಲಿ ಕೈಕಾಲು ತೊಳೆದುಕೊಂಡು ಹೂ-ಮಿಠಾಯಿಗಳನ್ನು ಕೊಂಡು, ಗುಡಿಯನ್ನು ಆಗ ತಾನೆ ಪ್ರವೇಶಿಸುತ್ತಿದ್ದರು. ಇನ್ನು ಇಬ್ಬರು ಪೂಜೆಯನ್ನು ಮುಗಿಸಿ ಹೊರಗೆ ಬಂದು, ಅಲ್ಲಲ್ಲಿ ಕುಳಿತು ಪ್ರಸಾದವನ್ನು ತಿಂದು, ಬರಿಯ ದೊನ್ನೆಗಳನ್ನು ಅಲ್ಲೇ ಬಿಸುಡಿ, ಜೋಡನ್ನು ಮೆಟ್ಟಿಕೊಂಡು ಹಿಂದಿರುಗುತ್ತಿದ್ದರು. ಆ ದಿನ ಶನಿವಾರವಾಗಿರದೆ ಜನರ ಗದ್ದಲವೇ ಇರಲಿಲ್ಲವೆನ್ನಬೇಕು. ಇದ್ದ ಸ್ವಲ್ಪ ಜನರೂ, ದೊಡ್ಡ ಮರದಲ್ಲಿ ಮನೆಮಾಡಿಕೊಂಡಿದ್ದ ಹಕ್ಕಿಗಳೂ, ತಮ್ಮ ಚಿಲಿಪಿಲಿಯನ್ನಾಗಲೇ ಮುಗಿಸಿ ಮಲಗಲು ಹವಣಿಸಿದ್ದುವು. ಹೀಗಿದ್ದು ಗುಡಿಯೊಳಗಿನ ಗಂಟೆಯ ಶಬ್ದವನ್ನು ಬಿಟ್ಟರೆ ಒಟ್ಟಿನಲ್ಲಿ ವಾತಾವರಣವು ನಿಶ್ಶಬ್ದವಾಗಿದ್ದಿತೆಂದೇ ಹೇಳಬಹುದು.

ನಾವೂ ಇತರರನ್ನು ಅನುಸರಿಸಿ, ಹೂ ಮಿಠಾಯಿಗಳೊಂದಿಗೆ ಗುಡಿಯನ್ನು ಹೊಕ್ಕೆವು. ಸ್ಥಳವೇನು ದೊಡ್ಡದಾಗಿರಲಿಲ್ಲ. ಉತ್ತರ ಹಿಂದೂಸ್ಥಾನದ ಗುಡಿಗಳಂತೆ ಕಿರಿದಾಗಿಯೂ ಶಿಲ್ಪ-ಸೌಂದರ್ಯವಿಲ್ಲದೆಯೂ ಬೋಳಾಗಿದ್ದಿತು. ಮುಂದಿನ ವರಾಂಡದಲ್ಲಿ ಗಾಜಿನ ತೂಗುದೀಪಗಳ ಅಲಂಕಾರ. ಗೋಡೆಗಳ ಮೇಲೆ ಪ್ರಸಿದ್ಧ ತುಳಸೀ ರಾಮಾಯಣದಿಂದ ಉದ್ಧರಿಸಿದ ಪದ್ಯಗಳು. ಆಂಜನೇಯನ ಗರ್ಭಗುಡಿ ಕಿಷ್ಕಿಂಧವೆ! ಬಾಗಿಲಿಗೆ ಮಾರು ದೂರದಲ್ಲೇ ಬಂಡೆಯಲ್ಲಿ ಕಾಣಿಸಿದ ವಿಗ್ರಹ. ಇದಾದರೂ ಸ್ಪಷ್ಟವಾಗಿರಲಿಲ್ಲ. ಆಕಾಶದ ಮೀನ-ಮೇಷಗಳಂತೆ ಊಹೆಗೆ ಸಿಕ್ಕುವಂತಹದು. ಕಲ್ಲಿನ ಉಬ್ಬುಭಾಗಗಳಿಗೆ ಚಂದ್ರವನ್ನು ಬಳಿದು ಆಕಾರವನ್ನು ಸೂಚಿಸುವ ಯತ್ನವೂ ಕಾಣುತ್ತಿದ್ದಿತು. ಕಣ್ಣೆಂದು ತೋರಿಸಲ್ಪಟ್ಟ ಎರಡು ತೂತುಗಳು ಈ ಮೂರ್ತಿಯ ಮುಖ್ಯಭಾಗ. ಇದನ್ನು ಕಂಡು, ನಮ್ಮ ಕಡೆಯ ಸುಂದರ ವಿಗ್ರಹ-

ಶಿಲ್ಪವೈಭವ ಹೋಲಿಸಿ ನಮ್ಮ ಮನಸ್ಸು ತಣ್ಣಗಾದರೂ, ಇದು ತುಳಸೀದಾಸರ ಆರಾಧ್ಯಮೂರ್ತಿಯೆಂದೂ ಅವರ ಮಹಾಕಾವ್ಯಕ್ಕೆ ಪ್ರೇರಣೆಯೆಂದೂ ನೆನೆಸಿಕೊಂಡು ಸಮಾಧಾನ ತಂದುಕೊಂಡೆವು. ಪೂಜೆ, ನೈವೇದ್ಯ, ಮಂಗಳಾರತಿಗಳನ್ನು ಮುಗಿಸಿ, ನಮಸ್ಕರಿಸಿ ದಕ್ಷಿಣೆ ಕೊಟ್ಟು ಪ್ರಸಾದವನ್ನು ಪಡೆದುಕೊಂಡದ್ದಾಯಿತು.

ಗುಡಿಯಿಂದ ಹೊರಬಿದ್ದಾಗ ಪಡುವಲ ಮುಗಿಲು ಆಗಲೇ ತನ್ನ ಹೊಳಪನ್ನು ಕಳೆದುಕೊಂಡು, ಕುಲುಮೆಯಿಂದ ತೆಗೆದ ಕಬ್ಬಿಣವು ಆರುವಂತೆ ಮಾಸುತ್ತಿದ್ದಿತು. ಕಾಫಿಯ ಕಷಾಯದಂತೆ ಕತ್ತಲೆಯೂ, ಹಾಲಿನಂತೆ ತಿಂಗಳ ಬೆಳಕೂ ಬೆರೆದುಕೊಂಡೇ ಕೆಳಗಿಳಿಯುತ್ತ, ಸುತ್ತಲೂ ಮಸಕು-ಮಸಕಾಗಿಸುತ್ತಿದ್ದುವು. ಪೂಜಾರಿಯು ಹೂ-ಪ್ರಸಾದವನ್ನು ಧಾರಾಳವಾಗಿಯೇ ಹಿಂತಿರುಗಿಸಿದ್ದರೂ ಮಿಠಾಯಿ ಪ್ರಸಾದವನ್ನು ಕೊಂಚವೇ ದಯಪಾಲಿಸಿದ್ದುದರಿಂದ, ಈ ಕೊರತೆಯನ್ನು ಅಂಗಡಿಯಿಂದ ಮತ್ತೆ ಸರಿಪಡಿಸಿಕೊಂಡೆವು. ಇನ್ನು ಕುಳಿತು ತಿನ್ನುವ ಮಾತು ಬಂದಿತು. ಇತರರ ಹಾಗೆ ಅಲ್ಲೇ ಜಗುಲಿಯ ಮೇಲೆ ಕುಳಿತು ತಿನ್ನಲು ಮನಸ್ಸು ಒಪ್ಪೀತೆ? ನಾನು ಅತ್ತಿತ್ತ ನೋಡಿ, ಈ ಕಾಡಿನೊಳಕ್ಕೆ ಹೋಗುತ್ತಿದ್ದ ಕಾಲ್ದಾರಿಯನ್ನು ಕಂಡು ಅಲ್ಲಿ ನಡೆದು, ಯಾವುದಾದರೂ ಮರದಡಿಯ ಏಕಾಂತಪ್ರದೇಶಕ್ಕೆ ಹೋಗಬೇಕೆಂದು ಸೂಚಿಸಿದೆ. ಆದರೆ ಲಲಿತ—ಪುಕ್ಕಲಿ-ಈ ಹೊತ್ತಿನಲ್ಲಿ ಈ ವನವನ್ನು ಹೊಕ್ಕಾಳೇ! "ನಂಗೆ ಭಯವಾಗುತ್ತಪ್ಪ!" ಎಂದು ಸಲಹೆಯನ್ನು ನಿರಾಕರಿಸಿಬಿಟ್ಟಳು. ಹಾಗೇ ಯೋಚಿಸಿ ಚರ್ಚಿಸಿದನಂತರ, ಹಿಂದೆ ಕಂಡಿದ್ದ ಕಲ್ಲುಬೆಂಚಿಗೆ ಹೋಗುವುದೆಂದು ತೀರ್ಮಾನವಾಯಿತು. ಆದರೆ ಅಲ್ಲಿಗೆ ಹೋಗಿ ಕುಳಿತುಕೊಳ್ಳಲು ಹವಣಿಸುವುದರಲ್ಲೇ ಅವಳು ಬಾವಿಯ ಕಡೆಗೆ ಕೈತೋರಿಸುತ್ತ "ಈ ಒರಟು ಬೆಂಚಿಗಿಂತ ಬಾವಿಯ ಜಗುಲಿ, ಅದರ ಗೋಡೆ ಎಷ್ಟು ಚೆನ್ನಾಗಿವೆ! ಅಲ್ಲಿಗೆ ಹೋಗೋಣ" ಅಂದಳು. ನಾನೂ ಒಪ್ಪಿದೆ.

ಅಲ್ಲಿಗೆ ಹೋಗಿ ಒಬ್ಬರನ್ನೊಬ್ಬರು ಒತ್ತಿ ಕುಳಿತ ಮೇಲೆ, ನಾನು ಹಿಂತಿರುಗಿ ಬಾವಿಯೊಳಕ್ಕೆ ಬಗ್ಗಿ ನೋಡಿದೆ. ಲಲಿತೆಯೂ ಸ್ವಲ್ಪ ತಿರುಗಿ "ಜೋಪಾನ, ಜಾಸ್ತಿ ಬಗ್ಗ ಬೇಡಿ" ಅಂದಳು. ಮಬ್ಬಿನಲ್ಲಿ ನೀರು ಕಾಣದಿದ್ದರೂ ಬಾವಿ ಬಹಳ ಆಳವಾಗಿದ್ದಂತೆ ತೋರಿತು. ನಾನು ಅದರೊಳಕ್ಕೆ 'ಓ' ಎಂದು ಕೂಗಿದೆ. ಅದು "ಓ! ಓ!" ಎಂದು ಹೊಳಲು ಕೊಟ್ಟಿತು. ಅವಳೂ ತನ್ನ ಸಣ್ಣ ಧ್ವನಿಯಲ್ಲಿ ಕೂಗಿ ಮಧುರವಾದ ಉತ್ತರವನ್ನು ಹೊಂದಿದಳು. 'ಇನ್ನೊಂದು ದಿನ ಬೆಳಕಿನಲ್ಲಿ ಬಂದು, ಇಬ್ಬರೂ ಬಗ್ಗಿ ಇದರ ನೀರಿನಲ್ಲಿ ನಮ್ಮನ್ನು ನೋಡಿಕೊಳ್ಳಬೇಕು' ಎಂದೆ. ಅವಳು 'ಹುಂ, ಸುಂದರವಾದ ಸ್ಥಳ; ಆದರೆ ಇಷ್ಟು ನಿರ್ಜನವಾಗಿರದಿದ್ದರೆ ಚೆನ್ನಾಗಿರುತ್ತಿತ್ತು' ಎಂದಳು. ನಾನು 'ಹೀಗಿದ್ದರೇ ಚಂದ—ಪ್ರಣಯಿಗಳಿಗೆ. ನೋಡು, ನಿನಗೆ ಈ ಪ್ರಸಾದವನ್ನು ನಾನೇ ಮುಡಿಸಲು ಈಗ ಆಗುತ್ತದೆ. ಅವರಿವರು ಇದ್ದರೆ?' ಎನ್ನುತ್ತ ಹೂವನ್ನೆಲ್ಲ ಅವಳಿಗೆ ಮುಡಿಸಿ 'ನಿನಗೆ ಪ್ರಿಯವಾದ ಪ್ರಸಾದ ನಿನಗಾಯಿತು; ಇನ್ನು ನನಗೆ ಬೇಕಾದುದು ನನಗೆ ಅಲ್ಲವೆ?' ಎಂದು ದೊನ್ನೆಯನ್ನು ಬಿಚ್ಚಿದೆ. ಅವಳು 'ಹುಂ, ಹುಂ ಈ ಹಂಚಿಕೆಯನ್ನು ನಾನು ಬಲ್ಲೆ. ನಿಮ್ಮ ಸುಲಭ ಪ್ರೇಮ ಎಂದೋ ತಿಳಿದು ಹೋಗಿದೆ. ನಿಮ್ಮ ಉಪಾಯ ನನ್ನಲ್ಲಿ ಬೇಯೋದಿಲ್ಲ' ಎಂದು ದೊನ್ನೆಯನ್ನು ಕಿತ್ತುಕೊಂಡು, ನನಗೆ ಮೂರರಲ್ಲೊಂದು ಭಾಗವನ್ನು ಮಾತ್ರ ಸಲ್ಲಿಸಿ ಬಾಕಿಯದನ್ನು ದಕ್ಕಿಸಿಕೊಂಡಳು.

ತಿಂದು ಮುಗಿಸುವ ಹೊತ್ತಿಗೆ ಆಗಸದಲ್ಲಿ ದಶಮಿಯ ಚಂದ್ರ ಮೋಡದ ಹಿಂದಿನಿಂದ ನಮ್ಮ ಕಡೆಗೆ ಇಣಿಕಿ ನೋಡಿ ನಸುನಕ್ಕನು. ತಂಗಾಳಿಯೂ ಸದ್ದಿಲ್ಲದೆ ಮೆಲ್ಲಗೆ ಹೆಜ್ಜೆಹಾಕುತ್ತ, ಏನೋ ನಿರೀಕ್ಷಣೆಯಿದ್ದ ಕಳ್ಳನಂತೆ ಅಲ್ಲಲ್ಲೇ ಸುಳಿದಾಡುತ್ತಿದ್ದಿತು. ನಾನು ನಿರ್ಲಜ್ಜೆಯಿಂದ ಮಡದಿಯ ಸೊಂಟಕ್ಕೆ ಕೈಹಾಕಿ ಅವಳನ್ನು ಇನ್ನೂ ಹತ್ತಿರ ಸೆಳೆದುಕೊಂಡು 'ಲಲ್ಲೂ, ಈ ಸಂದರ್ಭದ ತುಂಬಿ ಇಂಪಾದ ಹಾಡೊಂದು ಬೇಕಲ್ಲ' ಎಂದು ಮುಂಗಡವಾಗಿಯೆ ಅವಳ ಕೆನ್ನೆಗೆ ಕಾಣಿಕೆ ಕೊಟ್ಟೆ. "ಹೂಂ, ಇಲ್ಲಿ? ಯಾರಾದರೂ ಬಂದರೆ?" ಎಂದು ಅವಳು ನನ್ನ ಕಡೆಗೆ ಉಲ್ಲಾಸದಿಂದ ನೋಡಿ ಅನುಮಾನಿಸಿದಳು. ನಾನು "ಏ, ಈಗ ಇಲ್ಲಿಗೆ ಯಾರು ಬಂದಾರು ಹೇಳು. ಈ ಜಾಗಕ್ಕೆ ಇರುವವರು ನಾವಿಬ್ಬರೇ!" ಎಂದ

ಪ್ರೋತ್ಸಾಹಿಸಿದೆ. ಅವಳ ಮನಸ್ಸೂ ಗಾನದಲ್ಲಿ ಲೀನವಾಗ- ಬೇಕೆಂದು ಆತುರಪಡುತ್ತಿದ್ದಿರಬೇಕು. ಅದರಲ್ಲಿ ಆಶ್ಚರ್ಯವೇನು? ಹೆಚ್ಚು ಹೇಳಿಸಿಕೊಳ್ಳದೆ ಅವಳು 'ಸರ್ವಮಂಗಳೇ ಭವಾನೀ ಪರಿಪಾಲಿಸೌ' ಎಂದು ಮೃದುವಾಗಿ ಮಧುರವಾಗಿ ಮೆಲುಧ್ವನಿ- ಯಲ್ಲಿ ಹಾಡಲು ಪ್ರಾರಂಭಿಸಿದಳು. ಈ ಸ್ವರದ ಅಲೆಗಳಲ್ಲಿ ತೇಲುತ್ತ ತೇಲುತ್ತ ನನಗೆ ಸುತ್ತುಮುತ್ತೆಲ್ಲ ಮರೆತುಹೋಯಿತು.

ಗಾನವು ತಟ್ಟನೆ ನಿಂತುಬಿಟ್ಟಿತು. ನನಗೆ ಎಚ್ಚರವಾಯಿತು. ಯಾಕೆ ಏನಾಯ್ತು?' ಎಂದು ಕೇಳಿದೆ. ಲಲಿತ ಕೊಂಚ ದೂರ- ದಲ್ಲಿದ್ದ ಪೊದೆಯ ಕಡೆಗೆ ಕೈ ತೋರಿಸುತ್ತ "ಅಲ್ಲೇನೋ 'ಸರ ಸರ' ಅಂದ ಹಾಗೆ ಆಯ್ತು" ಎಂದಳು. ನಾನು ಜಗ್ಗನೆ ಎದ್ದು ನಿಂತೆ. ಅವಳೂ ಎದ್ದು ನನ್ನ ಬಳಿಗೆ ಸರಿದುಕೊಂಡಳು. ಹುಂ, ಶಬ್ದವು ನನಗೂ ಈಗ ಕೇಳಿಸಿತು. ಅಷ್ಟೇ ಅಲ್ಲ; ಮಸಕು ಬೆಳಕಿ- ನಲ್ಲಿ ಗಿಡಗಳು ಅಲ್ಲಾಡುತ್ತಿದ್ದುದು ಕಂಡಂತಾಯಿತು. ನಾವು ಹೆಚ್ಚು ಹೊತ್ತು ಕಾಯಬೇಕಾಗಲಿಲ್ಲ. ಅಲ್ಲೇ ಕಂದುಬಣ್ಣದ ಪ್ರಾಣಿಯೊಂದು ನಮ್ಮ ಕಡೆಗೆ ಬರುತ್ತಿದ್ದಿತು. ಇನ್ನೊಂದು ಗಳಿಗೆ- ಯಲ್ಲಿ ಅದು ಪೊದೆಗಳನ್ನು ಕಳೆದು, ನೆಟ್ಟಗೆ ನಿಂತು ಮನುಷ್ಯನಾಗಿ ಹಡೆಯಿತು. ನಾನು ಎವೆಯಿಕ್ಕದೆ ಅತ್ತಕಡೆಗೇ ನೋಡುತ್ತಿದ್ದೆ. ಹಾಗೇ ಸ್ವಲ್ಪ ಲಲಿತನ ಪಕ್ಕದಿಂದ ಮುಂದಕ್ಕೆ ಸರಿದುಕೊಂಡೆ. ವ್ಯಕ್ತಿಯು–ಹುಂ ವ್ಯಕ್ತಿಯೇ—ಹತ್ತಿರಕ್ಕೆ ಬಂದನು. ಆತ ಒಬ್ಬ ಸಂನ್ಯಾಸಿ. ಹಣ್ಣು ಮುದುಕನಂತೆ ಕಂಡ. ನರೆತ ತಲೆಗೂದಲು, ಗಡ್ಡ ಅಸ್ತವ್ಯಸ್ತವಾಗಿದ್ದುವು. ಕಾವಿಯ ತುಂಡೊಂದನ್ನು ಉಟ್ಟಿದ್ದ. ಹುಚ್ಚನಂತೆ ಕಾಣುತ್ತಿದ್ದ. ಅವನು ನಮಗೆ ಎರಡು ಮಾರಿನಷ್ಟು ಸಮೀಪವಾದಾಗ ನಿಂತು ಹುಬ್ಬುಗಂಟಿಕ್ಕಿ, ತೀಕ್ಷ್ಣವಾಗಿ ನೋಡಿ ಕೈಯಾಡಿಸುತ್ತ,

'ಹೋಗಿ, ಇಲ್ಲಿ ಇರಬೇಡಿ!" ಎಂದನು.

'ಯಾಕೆ" ನಾನು ಸರಿಯದೆ ಕೇಳಿದೆ.

'ಹೋಗಿ ಎಂದು ಹೇಳಿದೆನಲ್ಲ. ದೂರ ಸರಿಯಿರಿ— ಈ ಬಾವಿ- ಯಿಂದ!" ಅವನ ಧ್ವನಿಯಲ್ಲಿ ಆವೇಶವಿತ್ತು. ನಾವು ಜರುಗಲಿಲ್ಲ.

"ಕಾರಣ ಹೇಳಿ. ಇದು ನಿಮ್ಮ ಸ್ವಂತ ಸ್ಥಳವೋ?" ನಾನು ಕೋಪದಿಂದಲೇ ಕೇಳಿದೆ.

"ಅಯ್ಯ, ಹಾಗೆನ್ನಲಿಲ್ಲ. ಇದು ದುರದೃಷ್ಟರ ಬಾವಿ. ನೀವು ಪ್ರಣಯಿಗಳಲ್ಲವೆ? ಅಯ್ಯೊ, ಬೇಗ ಇಲ್ಲಿಂದ ಸರಿದು ಬಿಡಿ" ಅವನ ಮಾತಿನಲ್ಲಿ ನೋವಿನ ಒತ್ತಾಯವಿತ್ತು. ಕಣ್ಣಿನಲ್ಲಿ ಬೇಡಿಕೆ ಇತ್ತು. ನಾವು ಈಗ ಅರ್ಧ ಗಾಬರಿಯಿಂದ ಅರ್ಧ ಆಶ್ಚರ್ಯದಿಂದ ಬಾವಿಯ ಜಗುಲಿಯಿಂದ ಇಳಿದೆವು.

"ಇಲ್ಲಿ ಏನಾಗಿದೆ?" ನಾನು ಕುತೂಹಲದಿಂದ ಕೇಳಿದೆ.

"ಏನೋ ಒಂದು ದೊಡ್ಡ ದುರಂತ. ಹೋಗಲಿ ಬಿಡಿ" ಮುದು- ಕನು ಹಿಂದಿರುಗಿದನು.

"ಇಲ್ಲ. ನಮಗೆ ಹೇಳಬೇಕು" ನಾನು ಆತನನ್ನು ಹಿಂಬಾಲಿ- ಸಿದೆ. ಆತನು ಮಾತನಾಡದೆ ಹೋಗಿ ಕಲ್ಲುಬೆಂಚಿನ ಮೇಲೆ ಕುಳಿತ. ನಾವೂ ಅಲ್ಲಿಗೇ ಹೋದೆವು. ನಾನು ಅವನ ಎಡದ ಕಡೆಗೆ ಕುಳಿತೆ. ಲಲಿತ ನನ್ನ ಬಲದಲ್ಲಿ ಕುಳಿತಳು. ಕೊಂಚ ಹೊತ್ತು ಯಾರೂ ಮಾತನಾಡಲಿಲ್ಲ. ನಾನು ಅತ್ಯುತ್ಕಟವಾದ ನಿರೀಕ್ಷೆಯಿಂದ ಕಾಯುತ್ತಿದ್ದೆ. ಲಲಿತನಿಗೆ ಮಾತನಾಡುವುದಕ್ಕಾಗಲೀ, ಸನ್ನೆ- ಗಾಗಲೀ ಶಕ್ತಿಯಿಲ್ಲದೆ ಅವಳು ಸುಮ್ಮನಿದ್ದಿರಬೇಕು. ಮುದುಕ- ನಾದರೋ ಧ್ಯಾನಾಸಕ್ತನಾದಂತೆ ದೂರದೃಷ್ಟಿಯಿಂದ ಯೋಚಿ- ಸುತ್ತಿದ್ದು, ಒತ್ತಿಬರುತ್ತಿದ್ದ ಭಾವನೆಗಳನ್ನೋ ನುಂಗಿಕೊಳ್ಳು- ತ್ತಿದ್ದಂತಿದ್ದು, ತಾನಾಗಿಯೇ ಮಾತಿಗೆ ಮೊದಲುಮಾಡಿದನು.

"ಎಷ್ಟೋ ವರ್ಷಗಳ ಹಿಂದಿನ ಮಾತು. ಎಷ್ಟು ವರ್ಷ? ನನಗೇ ಮರೆತು ಹೋಗಿದೆ. ಆಗ ವಿಶ್ವವಿದ್ಯಾಲಯದಲ್ಲಿ ಒಬ್ಬ ಯುವಕ ಪ್ರೊಫೆಸರ್ ಆಗಿದ್ದ.... ವಿಶ್ವನಾಥ. ಅವನ ಹೆಂಡತಿ ಮಂಗಳಾ. ಎಂತಹ ಹುಡುಗಿ! ಅವರಿಬ್ಬರೂ 'ನಿಮ್ಮ ಹಾಗೇ ಇದ್ದರು." ಅವನು ನಮ್ಮಿಬ್ಬರ ಕಡೆಗೆ ನೋಡಿ ಮತ್ತೆ ತಲೆಯನ್ನು ತಿರುಗಿಸಿ ಮುಂದುವರಿಸಿದನು. "ಚಿಕ್ಕದಾದರೂ ಅಚ್ಚುಕಟ್ಟಾದ ಮನೆ, ಕೈತುಂಬ ಸಂಬಳ. ಸಣ್ಣ ಹೊಸ ಸಂಸಾರ. 'ಪ್ರಣಯಿ- ಗಳೆಂದರೆ ಇವರೇ' ಎಂದು ನೆರೆಹೊರೆಯವರು ಇವರನ್ನು ಹೇಳಿ- ಕೊಳ್ಳುತ್ತಿದ್ದರು; ಕೆಲವರಂತೂ ಅಸೂಯೆ ಪಡುತ್ತಲೇ ಇದ್ದರು. ಹುಂ! ಅವರ ಮೋಹವೆಂದರೆ ಅವನ ಸ್ನೇಹಿತರಲ್ಲಿ ಗಾದೆಯ ಮಾತಾಗಿದ್ದಿತು, ಬಹಳ ವಿನೋದಕ್ಕೂ ಕಾರಣವಾಗಿದ್ದಿತು. ಇತರ

ZANDU

PROTOCASEN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City

ಪ್ರೊಫೆಸರುಗಳು ಸಂಜೆಯಲ್ಲಿ ಕ್ಲಬ್ಬಿಗೆ ಹೋಗಿ, ಆಟವಾಡಿ, ಹೊತ್ತುಗೊತ್ತಿಲ್ಲದೆ ಚಕ್ಕಂದ ಹೊಡೆಯುತ್ತಿದ್ದು, ಹೊಟ್ಟೆ ಹಸಿದಾಗ ಮನೆಗಳಿಗೆ ಹಿಂದಿರುಗುತ್ತಿದ್ದರು. ಆದರೆ ಅವನು ಮಾತ್ರ ಕ್ಲಬ್ಬನ್ನೇ ಕಂಡವನಲ್ಲ. ಕಾಲೇಜಿನಲ್ಲಿ ಪಾಠ ಮುಗಿದ ಮೇಲೆ ನಿಲ್ಲುತ್ತಿರಲಿಲ್ಲ ಕಾಲೇಜು ತಪ್ಪಿದರೆ ಮನೆಯೇ ಅವನ ಹವ್ಯಾಸ. ಅವಳೂ ಹಾಗೆಯೇ. ಅವನ ಗಂಟೆಗಳನ್ನು ಗೊತ್ತುಮಾಡಿಕೊಂಡು ಅವನ ಬರುವಿಕೆಯನ್ನು ಕಾಯುತ್ತ, ಅನೇಕ ವೇಳೆ ಬಾಗಿಲಲ್ಲೇ ನಿಂತಿರುತ್ತಿದ್ದಳು. ವಿಹಾರಕ್ಕಾಗಲೀ ವ್ಯಾಪಾರ-ಸಾಪಾರಕ್ಕಾಗಲೀ ಇಬ್ಬರೂ ಒಟ್ಟಿಗೆಯೇ ಹೊರಡುತ್ತಿದ್ದರು. ನಡೆಯುವಾಗಲೆಲ್ಲ ಒಬ್ಬರನ್ನೊಬ್ಬರು ಸೋಕಿಕೊಂಡೇ ಹೆಜ್ಜೆ ಹಾಕುತ್ತಿದ್ದರು. ಸಂಜೆಯಲ್ಲಿ, ರಾತ್ರಿಯ ಬೆಳುದಿಂಗಳಲ್ಲಿ ಮನೆಯ ಮುಂದಿನ ಅಂಗಳದಲ್ಲಿ ಎದುರುಬದುರಾಗಿಯೇ ಕುರ್ಚಿಗಳ ಮೇಲೆ ಕುಳಿತು ಸಲ್ಲಾಪ ನಡೆಸುತ್ತಿದ್ದರು. ಎಷ್ಟೋ ಸಂಜೆ ಇದೇ ಬಾವಿಯ ಜಗುಲಿಯ ಮೇಲೆ ಇಬ್ಬರೂ ಕುಳಿತಿರುತ್ತಿದ್ದರು

ಇಲ್ಲಿ ಆತನು ಬಾವಿಯ ಕಡೆಗೆ ತಿರುಗಿ ನೋಡಿದನು. ಸುಮ್ಮನಾದನು. "ಆಮೇಲೆ?" ನಾನು ಅವನನ್ನು ಎಚ್ಚರಿಸಿದೆ.

"ಆಮೇಲೇನು? ಅಂತಹ ಸಂಸಾರವು ಹಾಗೇ ಇರುವುದು ವಿಧಿಗೆ ಸೈರಿಸುತ್ತದೆಯೆ? ಹುಂ!"

"ಏನಾಯಿತು— ಮತ್ತೆ?"

"ಮುತ್ತಿನಂತಹ ಸಂಸಾರ ಮೂರು ವರ್ಷ ಆನಂದದಿಂದ ನಡೆಯಿತು. ಅನಂತರ ಅಲ್ಲಿ ಶನಿ ಕಾಲಿಟ್ಟಿತು."

"ಅಂದರೆ?"

"ಆ ವರೇನು? ಶನಿ ಗೊತ್ತಿಲ್ಲವೆ? ಅನಿಷ್ಟ ಗ್ರಹ?" ನನಗೆ ಅನುಮಾನವಾಗಿ ಸುಮ್ಮನಿದ್ದೆ. ಆತನೇ ಮುಂದೆ ಹೇಳಿದ.

"ವಿಶ್ವನಾಥನಿಗೆ ಮೊದಲನೆಯ ಬಾರಿ ಏಳರಾಟ ಶನಿಕಾಟ ಮೊದಲಾಯ್ತು."

ಅವನು ನಿಲ್ಲಿಸದಿರಲಿ ಎಂದು ನಾನು 'ಹೂಂ' ಗುಟ್ಟಿದೆ.

"ವಿಶ್ವನಾಥ ಜೋತಿಷ್ಯಕ್ಕೆ ಅಷ್ಟು ಮಣ್ಣು ಹಾಕಿದ್ದ. ಅವನಲ್ಲಿ ದೃಢವಾದ ನಂಬಿಕೆ. ಅನೆಷ್ಟು ಜನ ಜೋತಿಷ್ಯರಿಂದ ಭವಿಷ್ಯ ಬರೆಯಿಸಿದ್ದನೋ ಏನೋ ಲೆಕ್ಕವೇ ಇಲ್ಲ. ಆಗಾಗ್ಗೆ ಇನ್ನೂ ದೇಶದ ಮೂಲೆಮೂಲೆಯ ಪ್ರಸಿದ್ಧ ಜ್ಯೋತಿಷ್ಯರಿಗೆಲ್ಲ ತನ್ನ ಉದ್ಯೋಗ, ಸಂಸಾರ ಮೊದಲಾದುವುಗಳ ವಿಷಯವಾಗಿ ಪ್ರಶ್ನೆಗಳನ್ನು ಬರೆಯುವುದೂ ದಂಡ ತೆರುವುದೂ ಅವನಿಗೊಂದು ಅಭ್ಯಾಸವಾಗಿ ಹೋಗಿತ್ತು. ಅವನ ಮೇಜಿನ ಮೇಲೆ ಪಂಚಾಂಗ ಇದ್ದೇ ಇರುತ್ತಿತ್ತು. ಅದನ್ನು ನೋಡದೆಯೇ, ಏನಾದರೂ ಲೆಕ್ಕ ಹಾಕದೆಯೇ ಇದ್ದ ದಿನಗಳು ಅಪೂರ್ವ. ಗ್ರಹಗತಿಗಳನ್ನು ನೋಡಿಕೊಂಡೇ ಅವನು ಮುಖ್ಯ ಕೆಲಸಗಳಿಗೆಲ್ಲ ಕೈಹಾಕುತ್ತಿದ್ದ. ಇವನ ಈ ಸ್ವಭಾವವನ್ನು ತಿಳಿದುಕೊಂಡಿದ್ದ ಮಂಗಳಾ ಅನೇಕ ವೇಳೆ 'ಈಗ ತಾರಾಬಲ ಹೇಗಿದೆ? ಶುಕ್ರ ವಕ್ರವಾಗಿದ್ದಾನೋ ಹೇಗೆ? ಶನಿ ಮಹಾರಾಯ ಏನೆನ್ನುತ್ತಾನೆ? ಲಾಟರಿ ಹಣ ಬರುವುದು ಯಾವಾಗ? ಅಥವಾ ನಮಗೆ ಒಂದು ಸಿಂಹಾಸನವೇ ಕಾದ ಕೊಂಡಿದೆಯೋ?' ಎಂದು ವಿನೋದ ಮಾಡುತ್ತಿದ್ದಳು. ಅವ 'ಹುಂ, ನಿಂಗೆ ಇದೆಲ್ಲ ಹಾಸ್ಯ. ಆದರೆ ನಂಗೆ ಜೀವನದ ದಿನದಿನಗಳಿಗೆಗಳಿಗೂ ಎಲ್ಲ ಲೆಕ್ಕಾಚಾರವೂ ಸರಿಯಾಗಿ ನಡೆದು ಬರ ತ್ತಿದೆ ಗೊತ್ತೆ?' ಎಂದು ಕೇಳುತ್ತಿದ್ದನು. ಅವಳು 'ಅದೇನೊ ನಂಗಂತೂ ಇಲ್ಲಿಯವರೆಗೆ ಒಂದೂ ಪತ್ತೆಯಾಗಿಲ್ಲ. ನಿಮ್ಮ ನಂಬಿ ಮಾತ್ರ ದಿನೇ ದಿನೇ ಹೆಚ್ಚುತ್ತಿದೆ. ಏನು ಹುಚ್ಚೋ' ಎನ್ನು ನಗುತ್ತಿದ್ದಳು.

"ಒಂದು ಬಾರಿ ಊರಿಗೆ ಪ್ರಸಿದ್ಧ ಜೋತಿಷ್ಯರೊಬ್ಬ ಬಂದರು. ಸಾವಿರಾರು ಜನ ಅವರಿಂದ ಭವಿಷ್ಯವನ್ನು ತಿಳಿದ ಕೊಂಡರು. ವಿಶ್ವನಾಥನು ಈ ಸಮಯವನ್ನು ಕಳೆದ ಕೊಂಡಾನೇ? ತಾನೂ ಹೋಗಿದ್ದ. ಆದಿನ ಮಂಗಳೆಗೆ ಬೆಳ ವಾಂತಿಯಾಗಿ ಮೈಯಲ್ಲಿ ಹುಷಾರಿರಲಿಲ್ಲ. ಅಲ್ಲದೆ ಅವಳಿಗೆ ಭವಿಷ ಕೇಳುವುದರಲ್ಲಿ ನಂಬಿಕೆಯೂ ಇರಲಿಲ್ಲ. ಅದಕ್ಕಾಗಿ ಅವನೊಬ್ಬ ಹೋಗಿದ್ದ. ಒಟ್ಟು ಜೀವನದ ಭವಿಷ್ಯವನ್ನೇ ಕೇಳಬೇಕೆಂದ ಅವನಿಗೆ ಉತ್ಕಟವಾದ ಇಚ್ಛೆ. ಆದರೆ ಅದರ ಚಾರ್ಜು ನೂರ ರೂಪಾಯಿ. ಇಷ್ಟೊಂದನ್ನು ತೆರಲು ಅವನಲ್ಲಿ ಆಗ ಹಣವಿರಲಿಲ್ಲ ಆದುದರಿಂದ ಹತ್ತು ರೂಪಾಯಿಗಳನ್ನು ಕೊಟ್ಟು ನಾಲ್ಕು ಪ್ರಶ್ನೆಗಳನ್ನು ಮಾತ್ರ ಕೇಳಿ ತೃಪ್ತಿಪಡೆಯಬೇಕಾಯಿತು. ಮೂರ ಪ್ರಶ್ನೆಗಳಿಗೆ ಉತ್ತರವು ಸಮರ್ಪಕವಾಗಿದ್ದರೂ ಒಂದು ಮಾತ್ರ ಅವನ ಎದೆಯಲ್ಲಿ ಬಾಣದಂತೆ ನಾಟಿ ಯಾತನೆಯನ್ನು ಕೊಡಲಾ ರಂಭಿಸಿತು. ಅದು ಮಕ್ಕಳ ವಿಷಯ. ಜೋತಿಷ್ಯರು ಸ್ಪಷ್ಟವಾ 'ನಿಮ್ಮ ಮೊದಲನೆಯ ಸಂಬಂಧದಲ್ಲಿ ನಿಮಗೆ ಸಂತಾನಲಾಭವಿಲ್ಲ ಎಂದು ಹೇಳಿಬಿಟ್ಟಿದ್ದರು. ಅವನು ಈವರೆಗಾಗಲೆ ತಾನೇ ಬಹ ಲೆಕ್ಕಾಚಾರ ಮಾಡಿ ತನಗೆ ಮಕ್ಕಳಾಗುವುವೆಂದು ನಂಬಿದ್ದನು ಇನ್ನು ಕೆಲವರು ಹಾಗೆ ಬರೆದೂ ಕೊಟ್ಟಿದ್ದರು. ಆದರೆ ಪ್ರಸಿದ್ಧರ ಉತ್ತರದ ಮುಂದೆ ಅವೆಲ್ಲ ಮಾಸಿ ಹೋದುವು. ಅವನ ಹಿಂದಿರುಗುತ್ತ ದಾರಿಯಲ್ಲಿ ಅದೇ ಉತ್ತರವನ್ನು ಮತ್ತೆ ಮ ಮೆಲಕು ಹಾಕಿದನು. ಹೆಚ್ಚು ಹೆಚ್ಚು ಖಿನ್ನನಾದನು. ಬರುಬರು ವಾಕ್ಯವನ್ನು ಪದಶಃ ಬೇರೆ ಬೇರೆ ಮಾಡಿ ಹೆಚ್ಚು ಅರ್ಥವನ ಗ್ರಹಿಸಲು ಯತ್ನಿಸಿದನು. 'ಮೊದಲನೆಯ ಸಂಬಂಧದಲ್ಲಿ—ಹು ಮಂಗಳೆಯಲ್ಲಿ—ಅಯ್ಯೋ!' ಎಂದು ನೊಂದುಕೊಂಡನು ಹಾಗೇ ಯೋಚಿಸುತ್ತ 'ಹಾಗಾದರೆ ನಂಗೆ ಸಂತಾನಲಾಭವೇನೊ ಇದೆ. ಆದರೆ ಮೊಲನೆಯ ಸಂಬಂಧದಲ್ಲಿಲ್ಲ. ಅಂದರೆ...... ಛೀ! ಛೀ!' ಎಂದು ಹರಿಯುವ ಯೋಚನೆಗೆ ತಡೆಹಾಕಿದನು ಆದರೆ ಅದು ಮತ್ತೆ ಮತ್ತೆ ಬಡಿದು ಅವನ ಮನಸ್ಸನ್ನು ಕೊಚ್ಚಿತು ಅವನು ಮನೆಯನ್ನು ಸೇರಿದಾಗ ಅವನ ಮನಸ್ಸು ಆಕಾಶಬುಟ್ಟಿಯಂತೆ ನೆಲೆಯಿಲ್ಲದೆ ತೂರಾಡುತ್ತಿತ್ತು.

ಲಘುವಾಗಿ ನಗುತ್ತ ಮಂಗಳಾ ಅವನನ್ನು ಪ್ರಶ್ನಿಸಿದಳು, ಪಾಟಿ ಸವಾಲು ಮಾಡಿದಳು. ಅವನು ಸಂತೋಷದಿಂದಲೇ ಮುಂ

ಉತ್ತರಗಳನ್ನು ಹೇಳಿದನು.

' ಮತ್ತೇನನ್ನು ಕೇಳಿದಿರಿ ? ' ಎಂದು ತಿವಿದು ಕೇಳಿದಳು.

' ಏನೂ ಇಲ್ಲ ' ಎಂದು ಅವನು ಸುಮ್ಮನಾದ.

' ಅಯ್ಯೋ; ಇಷ್ಟೇಯೆ ? ಚೆನ್ನಾಗಿ ನೆನೆಸಿಕೊಳ್ಳಿ. ಆ ಪದವಿ, ಹಣ ಯಾರಿಗೆ ಬೇಕಾಗಿದೆ ! ಪ್ರಾಣದಿಂದ ಬಾಳುವಷ್ಟು ಇದ್ದರೆ ಸಾಕು. ನಮಗೆ ನಿಜವಾಗಿ ಸುಖ ಕೊಡುವ ವಿಷಯವನ್ನೇ ಕೇಳಲಿಲ್ಲವಲ್ಲ !' ಎಂದು ಅವಳು ಹೀಯಾಳಿಸಿದಳು.

' ಇನ್ನೇನು ? ' ಎಂದು ಅವನು ಹೆದರುತ್ತ ಕೇಳಿದ.

' ನೀವೇ ಯೋಚಿಸಿ ' ಎಂದು ಅವಳು ಅವನ ಮೇಲೇ ಭಾರವನ್ನು ಹಾಕಿದಳು.

' ನಂಗೆ ಗೊತ್ತಾಗೋದಿಲ್ಲ ' ಎನ್ನುತ್ತ ಅವನು ಪ್ರಶ್ನೆಯನ್ನು ಮುರಿಯಲು ಯತ್ನಿಸಿದ.

' ಸರಿ, ಅದೆಲ್ಲ ನಿಮಗೆ ಹೇಗೆ ಗೊತ್ತಾಗಬೇಕು—ಸ್ವಾರ್ಥಪರರಿಗೆ ? ' ಎಂದು ಅವಳು ಆಕ್ಷೇಪಿಸಿದಳು.

' ಹಾಗೇ ಆಗಲಿ ಬಿಡು. ನನ್ನ ವಿಷಯ ಹಾಗೇ ' ಎಂದು ಅವನು ಮೌನವಾದ.

' ನೀವೊಂದು ಶುದ್ಧ ಪೆದ್ದು. ಇಲ್ಲ, ನನ್ನ ಬಾಯಲ್ಲೇ ಹೇಳಿಸಬೇಕೆಂಬ ಹಟವಿರಬೇಕು ' ಎಂದು ಅವಳು ಸುಮ್ಮನಿರದೆ ಮತ್ತೆ ಕೆಣಕಿದಳು.

' ಅದೇನು ಬೇಕೋ ನಾಳೆ ಮತ್ತೆ ಮೂರು ರೂಪಾಯಿ ಕೊಟ್ಟು ಕೇಳಿಕೊಂಡು ಬಂದರಾಯಿತು. ಆಗಲಿ!' ಎಂದು ಅವನು ವಿಷಯವನ್ನು ಮುಂದೆ ತಳ್ಳಿದ.

' ಇನ್ನೇನೊಂದ್ರೆ, ಗೊತ್ತಿಲ್ಲವೆ ? ಸಂಸಾರಕ್ಕೆ ಭೂಷಣವಾಗಿ ಮಕ್ಕಳು ಮರಿ!' ಎಂದು ಅವಳು ನಗುತ್ತ ಸ್ಪಷ್ಟವಾಗಿಯೇ ತಿಳಿಸಿಬಿಟ್ಟಳು.

' ಓ ! ' ಎನ್ನುತ್ತ ಅವನು ಬೆಚ್ಚಿದ. ಹಾಗೇ ಉದಾಸೀನತೆಯನ್ನು ನಟಿಸುತ್ತ ' ಅದಕ್ಕೇನು, ಆಗುತ್ತವೆ ಮೂರೋ ನಾಲ್ಕೋ' ಎಂದು ವಕ್ರವಾಗಿ ನಕ್ಕು ಮುಗಿಸಿದ.

' ಅದನ್ನೂ ಕೇಳಿದಿರಾ ಮತ್ತೆ ? ' ಅವಳು ಆತುರದಿಂದ ಕೇಳಿದಳು.

' ಹುಂ ' ಅಂದ ಅವನು,

' ನನ್ನ ಕಾಡಿಸಬೇಕು ಅಂತ ಹೇಳಲಿಲ್ಲವೋ ? ಇದೆಯಲ್ಲ ನಿಮ್ಮ ಚೇಷ್ಟೆ ' ಎಂದು ಅವಳು ಸಂತೋಷದ ಹುಸಿಮುನಿಸನ್ನು ತೋರಿಸಿದಳು.

ಅವನು ಚಿಂತೆಯಲ್ಲಿ ಮುಳುಗಿದ್ದ. ಮಾತನಾಡಲಿಲ್ಲ. ಅವಳಿಗೆ ಇದು ವಿಚಿತ್ರವಾಗಿ ತೋರಿತು. ಅವಳ ಉತ್ಸಾಹವೂ ಭಂಗವಾಯಿತು. ಅವಳು ಕೊಂಚ ಗಂಭೀರವಾಗಿ ' ಯಾಕೆ, ನಿಮಗೆ ಮಕ್ಕಳು ಬೇಡವೆ—ಈಗಲೇ ? ' ಎಂದು ಕೇಳಿದಳು. ಅವನು ನಸುನಗುವನ್ನು ತಂದುಕೊಂಡು ' ಛೀ ಹುಚ್ಚಿ, ಹಾಗೆಂದರೇನು ? ಚೆನ್ನಾಯಿತು !' ಎನ್ನುತ್ತ ಅವಳನ್ನು ಸಮಾಧಾನಪಡಿಸಿ ಮಾತನ್ನು ತಿರುಗಿಸಿದ.

ಅಂದಿನಿಂದ ವಿಶ್ವನಾಥನ ಗೆಲುವು ಕೆಟ್ಟಿತು. ಅವನು ಬಹುವೇಳೆ ಚಿಂತಾಸಕ್ತನಾಗಿರುತ್ತಿದ್ದ. ಮಂಗಳೆಯು ಹಿಂದಿನಂತೆಯೇ ಮಾತನಾಡುತ್ತಿದ್ದರೂ ಅವಳ ಒಂದೊಂದು ಪ್ರಶ್ನೆಗೆ ಅವನಿಂದ ಉತ್ತರವೇ ಬರುತ್ತಿರಲಿಲ್ಲ. ಅವನ ಗಮನವು ಬೇರೆಯ ಕಡೆ ಇರುತ್ತಿತ್ತು. ಅವಳು ಎರಡನೆಯ ಸಾರಿ ಕೇಳಿದಾಗ ತಟ್ಟನೆ ಎಚ್ಚೆತ್ತು, ಅಪರಾಧಿಯಂತೆ ಏನೋ ಒಂದು ಅಸಮರ್ಪಕವಾದ ಉತ್ತರವನ್ನು ಕೊಡುತ್ತಿದ್ದನು. ಇದು ಅವಳಿಗೆ ತಿಳಿಯದೆ ಹೋಗಲಿಲ್ಲ. ಅವಳು ಆಗಾಗ ಅವನನ್ನು 'ಇದೇಕೆ, ಈಚೆಗೆ ಹಿಂದಿನಂತೆ ಇಲ್ಲ. ಮೈಯಲ್ಲಿ ಚೆನ್ನಾಗಿದೆಯೆ ?' ಎಂದು ಆತಂಕದಿಂದ ಕೇಳುತ್ತಿದ್ದಳು. ಅವನು ತನ್ನ ಕಾರಣವನ್ನು ಮರೆಸಿ, ಏನಾದರೊಂದು ದೇಹಾಲಸ್ಯವನ್ನೋ, ಕೆಲಸದ ಶ್ರಮವನ್ನೋ ತಂದೊಡ್ಡಿ, ಸಮಯದಿಂದ ಪಾರಾಗುತ್ತಿದ್ದನು. ಹೀಗೆ ಎರಡುವಾರಗಳ ತಳಮಳವನ್ನು ಸಹಿಸಿದನು. ಮಧ್ಯೆ ಮಧ್ಯೆ ಯಾವುದೋ ನಿರ್ಧಾರಕ್ಕೆ ಬಂದು ಸಮಾಧಾನಹೊಂದಿದಂತಿರುತ್ತಿದ್ದನು. ಆದರೆ ಮಂಗಳೆಯ ಮುಖವನ್ನು ನೋಡಿದಾಗ, ಆ ನಿರ್ಧಾರವು ಅನಿರ್ಧಾರವಾಗುತ್ತಿತ್ತು. ಮತ್ತೆ ಕೊರಗು ಕವಿಯುತ್ತಿದ್ದಿತು.



ಕಡೆಗೆ ಈ ಯೋಚನೆಯು ಫಲಕೊಟ್ಟ ಮೇಲೆ, ವಿಶ್ವನಾಥನು ಗಟ್ಟಿಮನಸ್ಸುಮಾಡಿ ಮೂರನೆಯ ವಾರದಲ್ಲಿ ಒಂದು ದಿನ, ತಾನು ಕಾಲೇಜಿನ ಕೆಲಸಕ್ಕಾಗಿ ಹದಿನೈದು ಇಪ್ಪತ್ತು ದಿನ ಅಗತ್ಯವಾಗಿ ಬೇರೆಯ ಊರಿಗೆ ಹೋಗಬೇಕಾಗಿ ಬಂದಿರುವುದಾಗಿ ಮಂಗಳೆಗೆ ತಿಳಿಸಿದನು. ಇದನ್ನು ಕೇಳಿ ಅವಳಿಗೆ ಆಶ್ಚರ್ಯ, ವ್ಯಸನ, ಭಯ ಏಕಕಾಲದಲ್ಲಿ ಉಂಟಾದುವು. ಏಕೆಂದರೆ, ಇಲ್ಲಿ ಇಬ್ಬರೂ ಇದ್ದ ಮೂರುವರ್ಷಗಳಲ್ಲಿ, ಇಂತಹ ಸಂದರ್ಭ ಒದಗಿ ಅವರು ಒಂದು ದಿನವೂ ಒಬ್ಬರನ್ನೊಬ್ಬರು ಬಿಟ್ಟಿರಬೇಕಾಗಿ ಬಂದಿರಲಿಲ್ಲ. ಈಗ ಅಂತಹ ಕಾರ್ಯವೇನೆಂದು ಆಶ್ಚರ್ಯ, ಅಗಲಬೇಕೆಂದು ವ್ಯಸನ, ಪುಕ್ಕಲಾದ ತಾನು ಒಬ್ಬಳೇ ಇರಬೇಕೆಂದು ಭಯ. ಗಂಡ-ಹೆಂಡಿರಿಗೆ ಬಹಳ ಚರ್ಚೆಯಾಯಿತು ಬಹಳ ಕಣ್ಣೀರೂ ಹರಿಯಿತು ಅವನು ಅವಳನ್ನು ಅನೇಕ ವಿಧದಲ್ಲಿ ಸಮಾಧಾನಪಡಿಸಿ, ಕೆಲಸವನ್ನು ಆದಷ್ಟು ಬೇಗ ಮುಗಿಸಿಕೊಂಡು ಕೂಡಲೇ ಬರುವುದಾಗಿ ಹೇಳಿ, ಮನೆಯ ಕಡೆಯ ಎಚ್ಚರಿಕೆ-ಸೌಖ್ಯಕ್ಕಾಗಿ ತಕ್ಕ ಏರ್ಪಾಡುಗಳನ್ನು ಮಾಡಿ ಮಂಗಳೆಯನ್ನು ಬೀಳ್ಕೊಂಡನು.

ಅವನಿಲ್ಲದ ಕಾಲದಲ್ಲಿ ಮಂಗಳೆಗೆ ಜಗವೇ ಬರಿದಾಗಿದ್ದಂತಿರಬೇಕು. ದಿನಗಳನ್ನೂ ಗಂಟೆಗಳನ್ನೂ ಎಣಿಸುತ್ತಿದ್ದಿರಬಹುದು. ಅವನ ಇತ್ತೀಚಿನ ಸ್ಥಿತಿಯು ಅವಳ ಎದೆಯನ್ನು ಭಾರವಾಗಿಸಿದ್ದಲ್ಲದೆ ಹೇಳಲಾರದ ಕಳವಳವನ್ನೂ ಹೊಗಿಸಿರಬಹುದು. ವಿಶ್ವನಾಥನು ತಪ್ಪದೆ ಆಗಾಗ ಕಾಗದವನ್ನು ಬರೆಯುವುದಾಗಿ ಹೇಳಿದ್ದರೂ ಒಂದನ್ನೂ ಬರೆಯಲಿಲ್ಲ. ಅವನು ಕೊಟ್ಟಿದ್ದ ವಿಳಾಸಕ್ಕೆ ಅವಳು ಬರೆದ ಕಾಗದಗಳೂ ಉತ್ತರವನ್ನು ತರಲಿಲ್ಲ. ಇದು ಅವಳ ದುಃಖ, ತಳಮಳಗಳನ್ನು ಎಷ್ಟು ಹೆಚ್ಚಿಸಿತೋ ಏನೋ...."

ಮುದುಕನು ಹಾಗೇ ಸುಮ್ಮನಾಗಿ ಚಿಂತಾಸಕ್ತನಾದನು. ನಾನೂ ಅವನ ಮೌನವನ್ನು ಕೂಡಲೇ ಒಡೆಯಲಿಲ್ಲ ಈ ವರೆಗೆ ಚಂದ್ರನು ನೆತ್ತಿಯ ಮೇಲೆ ಬಂದಿದ್ದನು. ಹೊತ್ತು ಎಷ್ಟಾಗಿದ್ದಿತೆಂದು ನನ್ನ ಗಮನಕ್ಕೇ ಬರಲಿಲ್ಲ. ದೇಗುಲದ ಗಂಟೆಯ ಸದ್ದು ನಿಂತುಹೋಗಿ ಬಹಳ ಹೊತ್ತಾಗಿತ್ತು. ಕೀಟಗಳ ಚೀರಾಟವನ್ನು ಬಿಟ್ಟರೆ ಎಲ್ಲವೂ ಶಾಂತ, ಎಲ್ಲವೂ ಮೌನ, ಎಲ್ಲವೂ ಗಂಭೀರ. ಅಷ್ಟು ಇಷ್ಟು ಹೊತ್ತಾದ ಮೇಲೂ ಮುದುಕನು ಮಾತನಾಡದಿರಲು, ನಾನೇ ಮುಂದುವರಿದು "ವಿಶ್ವನಾಥನು ಹಿಂದಿರುಗಿದನೆ?" ಎಂದು ಕೇಳಿದೆ. ಈ ಪ್ರಶ್ನೆಯು ಅವನ ಬಾಯನ್ನು ಮತ್ತೆ ಬಿಚ್ಚಿತು:

"ಹೂಂ. ಅವನು ಹಿಂದಿರುಗುವ ಹೊತ್ತಿಗೆ ಒಂದು ತಿಂಗಳೇ ಆಯಿತು. ದಿನಗಳು ಕಳೆದಂತೆಲ್ಲ ಪ್ರಿಯತಮನ ಸಮಾಗಮದ ಸೌಖ್ಯವನ್ನು ನೆನೆ-ನೆನೆದು ಮಂಗಳೆಯು, ಈ ತಡದ ವೇದನೆಯನ್ನು ಹೇಗೋ ನುಂಗಿಕೊಳ್ಳುತ್ತಿದ್ದಿರಬೇಕು. ಆ ಸಮಯದ ಸನ್ನಿವೇಶಗಳ ಮಾತು-ಕತೆಗಳ ಕೋಟೆಯನ್ನು ತನ್ನ ಸುತ್ತಲೂ ಕಟ್ಟಿಕೊಂಡು, ಅಗಲುವಿಕೆಯ ಧಾಳಿಯನ್ನು ತಡೆಗಟ್ಟುತ್ತಿದ್ದಿರಬೇಕು. ಆದರೆ ನಡೆದ ಪುನರ್ಮಿಳನ ಅವಳನ್ನು ಹಿಂಡಿದುದರಲ್ಲಿ ಸಂಶಯವಿಲ್ಲ. ಅವನು ಬಂದಾಗ ಬಾಗಿಲಿನಲ್ಲಿರುವುದಿರಲಿ, ಬೀದಿಗೇ ಹೋಗಿ ಗಾಡಿಯ ಬಳಿಯಲ್ಲೇ ಇದಿರುಗೊಂಡಳು. ಅವನು ಗಾಡಿಯಿಂದ ಇಳಿಯುತ್ತ ಅವಳ ಕಡೆಗೆ ಅರ್ಧ ನೋಡಿ ನಸುನಗೆಯನ್ನೇನೋ ತೋರಿಸಿದ. ಆದರೆ ಅದರಲ್ಲಿ ಅವಳು ಎಣಿಸಿದ್ದ ಉತ್ಸಾಹವು ಕಂಡಿರಲಾರದು. ಏನೇನನ್ನೋ ಆಡಬೇಕೆಂದು ಹವಣಿಸಿಕೊಂಡಿದ್ದ ಮಾತುಗಳು ಅವಳ ಕೊರಳೊಳಗೇ ಉಳಿದುವು. 'ಕೆಲಸ ಎಲ್ಲ ಮುಗಿಯಿತೆ?' ಎಂದು ಸಾಧಾರಣವಾಗಿ ಕೇಳಿ ಸುಮ್ಮನಾಗಿಬಿಟ್ಟಳು. ಮನೆಯೊಳಗೂ ಅವನು ಎತ್ತಲೋ ನೋಡುತ್ತ 'ಏನು ಸಮಾಚಾರ?' ಎಂದು ಮಾತ್ರ ಕೇಳಿದ. ಅವಳ ಸಹಜವಾದ ನಿರೀಕ್ಷಣೆಗೆ ವಿರುದ್ಧವಾಗಿ ಅವನು ಅವಳನ್ನು ಮುಟ್ಟಲಿಲ್ಲ, ಮುದ್ದಿಸಲಿಲ್ಲ ಅವಳಿಗೆ ಮುಖವನ್ನು ಕೊಟ್ಟು ಮಾತನಾಡಲಿಲ್ಲ. ಅವಳು ನೊಂದು ಮಿಲಿಮಿಲಿಗುಟ್ಟಿದಳು. ಆದರೆ ಇನ್ನೊಂದು ಕ್ಷಣದಲ್ಲಿ ಅವನು ಆಯಾಸಗೊಂಡಿರಬಹುದೋ ಏನೋ—ಎಂದು ಸಮಾಧಾನತಂದುಕೊಂಡು, ಮಾತಿಗೆ ತಕ್ಕ ಸಮಯವನ್ನು ಕಾಯುತ್ತಿದ್ದಳು. ಅವನು ಪೆಟ್ಟಿಗೆಯಿಂದ ಹೊಸ ಸೀರೆಯೊಂದನ್ನು ತೆಗೆದು ಅವಳ ಕಡೆಗೆ ನೋಡದೆಯೆ 'ಇಗೋ ನಿಂಗೋಸ್ಕರ ತಂದಿದೀನಿ' ಎಂದು ಕೊಟ್ಟ. ಅವಳು 'ಎಷ್ಟು ಚೆನ್ನಾಗಿದೆ!' ಎಂದು ಸಂತೋಷವನ್ನು ಪ್ರಕಟಿಸಿದರೂ ಅವಳಿಗೆ ಅವನ ನೋಟ, ನಗೆಮಾತು ಇವೇ ಬೇಕಾಗಿದ್ದುವೆಂಬುದು ಸ್ಪಷ್ಟವಾಗಿತ್ತು.

ಊಟಕ್ಕೆ ಕುಳಿತಾಗ ಮಂಗಳೆಯು ಅವನನ್ನು ಮಾತಿಗೆ ಎಳೆಯಲು ಯತ್ನಿಸುತ್ತ 'ಅಲ್ಲೇನು, ಇಷ್ಟು ದಿನವೂ ಹೋಟೇಲಿನ ಊಟವೇನೋ!' ಎಂದು ಕೇಳಿದಳು. ಅವನು 'ಹೂಂ ಅಷ್ಟೇ' ಅಂದ. ಹಿಂದೆಲ್ಲ ಅವನು ಅವಳ ಅಡಿಗೆಗೆ ಮೆಚ್ಚಿಗೆಯನ್ನು ಬಹಳವಾಗಿ ತೋರಿಸಿದ್ದನು. ಇಷ್ಟು ದಿನಗಳು, ಆ ಕೆಟ್ಟ ಊಟದ ಮೇಲೆ ಈ ಊಟದ ಪ್ರಶಂಸೆಯಾದೀತೆಂದು ಅವಳು ನೆನೆಸಿದ್ದರೆ ತಪ್ಪೇನು? ಆದರೆ ಅವನ ಉತ್ತರದಿಂದ ಅವಳ ಉತ್ಸಾಹಸ ಭಂಗವಾಯಿತು ಮತ್ತೆ ಕಾಗದದ ಮಾತನ್ನೆತ್ತಿ 'ಇಲ್ಲಿ ಎಷ್ಟು ಭರವಸೆ ಕೊಟ್ಟಿದ್ದಿರಿ.. ಒಂದಾದರೂ ಬರೆಯಲಿಲ್ಲವಲ್ಲ? ನನ್ನ ಭಾವನೆ ಹೇಗಿತ್ತು ಅಂತ ಯೋಚಿಸಲಿಲ್ಲವೆ? ನನಗೆ ಒಂದು ದಿನ ಒಂದು ಯುಗವಾಗಿತ್ತು. ಇಂಥಾ ಮರಳುಗಾಡಿನಲ್ಲೂ ನಿಮ್ಮ ಕಾಗದದ ಓಯಸಿಸ್ ಇರಲಿಲ್ಲ. ನನ್ನ ಮೇಲೆ ಅಷ್ಟೊಂದು ಉದಾಸೀನತೆ ನಾನು ಏನಾದರೂ ಕಾರಣ ಕೊಟ್ಟಿದ್ದೆನೆ?' ಎಂದು ಕಣ್ಣನಲ್ಲಿ ನೀರನ್ನು ತುಂಬಿಕೊಂಡು ಕೇಳಿದಳು. ಅವನು 'ಛೀ ಹಾಗೆಂದರೇನು? ಹಾಳು ಕೆಲಸ. ಏನೋ ಪುರುಸೊತ್ತು ಆಗಲಿಲ್ಲ ಅಷ್ಟೆ. ಇದಕ್ಕೆ ನೀನು ಏನೇನನ್ನೋ ಕಲ್ಪಿಸಿಕೊಳ್ಳುತ್ತೀಯಲ್ಲ ಏನು ಹೇಳಲಿ?' ಎಂದನು. ಅವಳು ಅವನ ರೀತಿಯನ್ನು ಊಹಿಸಿ 'ಹೋಗಲಿ ಬಿಡಿ. ನಿಮಗೆ ಪ್ರಯಾಣದ ಬೇಸರು ಇನ್ನೂ ಕಳೆದಿಲ್ಲ ಅಂತ ಕಾಣುತ್ತೆ. ನಾನು ಹಾಗೆಲ್ಲ ಕೇಳಬಾರದಾಗಿತ್ತು' ಎಂದು ಸುಮ್ಮನಾದಳು. ಅವನು ಏನನ್ನೋ ಮರೆಸಿಕೊಳ್ಳುವಂತೆ 'ಅದಕ್ಕೇನು, ಕೇಳಿದರೆ? ನನ್ನಲ್ಲೇ ನಂಗೆ ಬೇಸರವಾಗಿದೆ— ಅ

ಕೆಲಸಮಾಡಿದ ತರಹದಿಂದ' ಎಂದು ಅಸ್ಪಷ್ಟವಾಗಿ ಹೇಳಿದ.

ಮಧ್ಯಾಹ್ನವೆಲ್ಲ ಹೆಚ್ಚು ಮಾತಿಲ್ಲದೆಯೇ ಕಳೆಯಿತು. ನಾಲ್ಕು ಗಂಟೆಯ ಹೊತ್ತಿನಲ್ಲಿ ವಿಶ್ವನಾಥ ಕುರ್ಚಿಯ ಮೇಲೆ ಕುಳಿತು ಚಹ ಕುಡಿಯುತ್ತಿದ್ದ. ಮಂಗಳಾ ಅವನ ಹಿಂದೆಯೇ ಕುರ್ಚಿಯನ್ನು ಒರಗಿಕೊಂಡು ನಿಂತಿದ್ದಳು.

'ನೀವು ಹೋಗಿದ್ದಾಗ ಒಂದು ಮುಖ್ಯವಾದ ಸಂಗತಿ ಇಲ್ಲಿ ನಡೆದಿದೆ' ಎಂದು ಅವಳು ಮೊದಲುಮಾಡಿದಳು.

'ಏನದು?' ಅವನು ಅವಳ ಕಡೆಗೆ ತಿರುಗದೆಯೇ ಕೇಳಿದನು.

'ನೀವೇ ಊಹಿಸಿ!' ಎಂದು ಅವನ ಮುಖದ ಕಡೆಗೆ ಅವಳು ಬಗ್ಗಿ ನೋಡಿದಳು.

'ನಂಗೆ ಹೇಗೆ ಗೊತ್ತಾಗಬೇಕು?' ಎಂದು ಅವನು ಯೋಚಿಸಿದ.

'ಅದನ್ನು ನಿಮಗೆ ಹೇಳಬೇಕು ಅಂತ ಇಷ್ಟು ದಿನ ಎಷ್ಟು ಆತುರವಾಗಿದ್ದೆ ಗೊತ್ತೆ? ಆ ಹರ್ಷವೂ ಕೂಡ ಆ ತವಕದಿಂದ ಹಿಂಸೆಯೇ ಆಗಿ ಹೋಗಿತ್ತು. ನೀವಿಲ್ಲದ ನನ್ನ ಜೀವನದ ಕಪ್ಪು ಮೋಡಕ್ಕೆ ಅದೇ ಬೆಳ್ಳಿಯಂಚು. ಏನಿರಬಹುದು ಹೇಳಿ ನೋಡೋಣ' ಎಂದು ತನ್ನ ಕೆಂಪುಮುಖವನ್ನು ಅವನ ಬಳಿಗೆ ನೀಡಿದಳು.

'ನಂಗೆ ಗೊತ್ತಿಲ್ಲ' ಎಂದು ಅವನು ಅವಳ ಅರ್ಪಣೆಯನ್ನು ಸ್ವೀಕರಿಸಲಿಲ್ಲ.

'ನೀವು ಯಾವಾಗಲೂ ಹೀಗೇ ಯೋಚಿಸೋದಕ್ಕೊ ನಿಮಗೆ ಆಯಾಸವಾಗಿದೆಯೋ?' ಎಂದು ಅವಳು ಕುಚೋದ್ಯಮಾಡಿ 'ಆ ದಿನ ನೀವು ಭವಿಷ್ಯ ಕೇಳೋದಕ್ಕೆ ಹೋಗಿದ್ದಿರಲ್ಲ, ನೆನಪಿದೆಯೆ?' ಎಂದು ಪ್ರಶ್ನಿಸಿದಳು.

'ಹುಂ' ಎನ್ನುತ್ತ ಅವನು ಹಾಗೇ ಕೊಂಚ ನಡುಗಿದನು.

'ಆ ದಿನ ನಂಗೆ ಮೈಯಲ್ಲಿ ಚೆನ್ನಾಗಿರಲಿಲ್ಲ. ವಾಂತಿ ಆದು ಆಗಿತ್ತು, ಅಲ್ಲವೇ?' ಎಂದು ಅವಳು ನೆನಪು ಕೊಟ್ಟಳು.

'ಹುಂ, ಹುಂ' ಎಂದು ಅವನು ಆತುರದಿಂದ ಹೇಳಿದ. ಅವನಿಗೆ ಆ ನೆನಪು ಬೇಕಾಗಿರಲಿಲ್ಲ. ಇದು ಅಂದಿನಿಂದಲೂ ಅವನನ್ನು ಎಡೆಬಿಡದೆ ಬಾಧಿಸುತ್ತಿತ್ತು.

'ಆಗಲೇ ನಂಗೆ ಕೊಂಚ ಅನುಮಾನವಾಗಿತ್ತು. ಹೇಳಬೇಕೆಂದಿದ್ದವಳು ನಿರ್ಧಾರವಿಲ್ಲದೆ ತಡೆದುಕೊಂಡೆ. ಈಗ ನಿಶ್ಚಯವಾಯಿತು' ಎಂದು ವಿವರಿಸಿದಳು.

'ಯಾವುದು ನಿಶ್ಚಯ....' ಎನ್ನುತ್ತ ಅವನು ಅನುಮಾನದಿಂದ ಅರ್ಧಕ್ಕೇ ನಿಲ್ಲಿಸಿದ.

'ಅದೇ ನಾನು ಕೇಳಲಿಲ್ಲವೆ – ಆ ದಿನ' ಎಂದು ಅವಳು ನಿಲ್ಲಿಸಿದಳು.

ವಿಶ್ವನಾಥನಿಗೆ ಛಳುಕು ಹೊಡೆದಂತಾಯಿತು. 'ಏನು! ಏನು!' ಎನ್ನುತ್ತ ಕಾಫಿಯನ್ನು ಬಿಟ್ಟು ತಟ್ಟನೆದ್ದು ಅವಳ ಕಡೆಗೆ ತಿರುಗಿದ. ಅವನ ತಲೆಯು ಗಿರ್ರೆಂದು ಸುತ್ತಿದಂತಾಯಿತು. ಮೈ ಬೆವರಿತು.

'ಹುಂ, ಹುಂ' ಎಂದು ಅವಳು ಲಜ್ಜೆಯಿಂದ ಮುಖವನ್ನು ತಿರುಗಿಸಿಕೊಂಡು, ಅವನ ಎದೆಯ ಮೇಲೆ ತನ್ನ ತಲೆಯನ್ನೊರಗಿಸಿದಳು.

ಕೊಂಚ ಕಾಲ ಯಾರೂ ಮಾತನಾಡಲಿಲ್ಲ.

'ಈವರೆಗುಟ್ಟನ್ನು ನಿಮ್ಮೊಡನೆ ಹಂಚಿಕೊಳ್ಳಬೇಕು ಅಂತ ಹೇಗೆ ಹಾತೊರೆದಿರಬೇಕು, ನೀವೇ ತಿಳಿದುಕೊಳ್ಳಿ!' ಎಂದು ಅವಳೇ ಮತ್ತೆ ಮಾತನ್ನು ಮುಂದುವರಿಸಿದಳು.

ಅವನಿಗೆ ದಿಗ್ಭ್ರಮೆಯಾಗಿತ್ತು. ಮಾತಾಡಲಾರದೆ ಹೋಗಿದ್ದ.

'ನಾನೊಬ್ಬಳು ಹೆಮ್ಮೆಯ ತಾಯಾಗುತ್ತೀನಿ. ಅವರು ಹೇಳಿದ ಭವಿಷ್ಯ ಫಲಿಸುತ್ತದೆ' ಎಂದು ಅವಳು ಹೇಳಿದಾಗ, ಅವನು ತತ್ತರಿಸಿ ಹಿಂದಕ್ಕೆ ಹೆಜ್ಜೆಯಿಟ್ಟ. ಅವಳು ಗಾಬರಿಯಿಂದ ಬೇರೆಯಾಗಿ 'ಯಾಕೆ? ಏನಾಯ್ತು?' ಎಂದು ಕೇಳಿದಳು.

'ಏನೂ ಇಲ್ಲ' ಎಂದು ಅವನು ತನ್ನ ಭಾವನೆಯನ್ನು ಮುಚ್ಚಿ-ಕೊಳ್ಳಲು ಯತ್ನಿಸಿದ. ಆದರೆ ಅವನ ಮುಖವು ಅವನನ್ನು ಬಿಟ್ಟು-ಕೊಟ್ಟಿತು. ಅಲ್ಲಿ ಕಂಡ ಭಯವು ಅವಳನ್ನು ಆಶ್ಚರ್ಯಗೊಳಿಸಿತು.

'ಯಾಕೆ, ನಿಮಗೆ ಇದು ಸಂತೋಷವನ್ನು ತರುತ್ತೆ ಅಂತ ಇದ್ದೆ. ಆತಂಕವಾಯಿತೇ?' ಎಂದು ಅವಳು ನೊಂದು ಕಣ್ಣೀರು ತಂದು-ಕೊಂಡು ಕೇಳಿದಳು.

'ಛೇ! ಛೇ! ಇದೇನು ಮಾತು! ಆಶ್ಚರ್ಯವಾಯಿತು. ಅಷ್ಟೇ ಇನ್ನೇನೂ ಇಲ್ಲ. ಇಷ್ಟಕ್ಕೇ ಗುಳುಗುಳು ಅಳುತ್ತೀಯ? ಹುಚ್ಚು ಹುಡುಗಿ. ಇದಕ್ಕಿಂತ ಪ್ರಿಯವಾದ ಸಮಾಚಾರ ಯಾವುದು? ದೇವರು ಎಲ್ಲವನ್ನೂ ಸರಿಯಾಗಿ ನಡೆಸಲಿ' ಎಂದು ಹೇಳಿ ಅವಳ

ಗರ್ಭನಿರೋಧದ ಸಾಧನಗಳು

ಗಂಡಸರ ಮರ್ಮಚೀಲ ಬಹಳ ತಾಳಿಕೆಯುಳ್ಳದ್ದು		೧ಕ್ಕೆ	೧-೪-೦
,, ,, ಸಾಧಾರಣ	,,	೧ಕ್ಕೆ	೧-೦-೦
,, ,, ಸಾದಾ	,,	೧ಕ್ಕೆ	೦-೮-೦
,, ,, ಮಣಿ ಕಂಚುಕ	,,	೧ಕ್ಕೆ	೦-೮-೦
ಪುರುಷೇಂದ್ರಿಯ ಬೆಳೆಯಿಸುವ, ಉದ್ರೇಕಿಸುವ ವ್ಯಾಕ್ಯೂಮ್ ಸಂಪು ಸುಂದರವಾದ ಪೆಟ್ಟಿಗೆಯಲ್ಲಿ		೧ಕ್ಕೆ	೨೫-೦-೦
ಬೀಜಾಂತಕ ತೈಲ	ಬಾ.	೧ಕ್ಕೆ	೧-೦-೦
ಹೆಂಗಸರಿಗೆ ಚಿಕ್ಕಪೆಸರಿ	ನಂ. ೧		೧-೮-೦
,, ,,	ನಂ. ೨		೧-೪-೦
,, ,,	ನಂ. ೩		೧-೦-೦
ಜನನೇಂದ್ರಿಯ ತೊಳೆಯುವ ಪಿಚಕಾರಿ			೧-೦-೦-

ಬೆಲೆಯನ್ನೂ ಅಂಚೆ ವೆಚ್ಚವನ್ನೂ ೧೨ ಆಣೆ ಮುಂಗಡ ಕಳಿಸಬೇಕು. ವ್ಹಿ. ಪಿ. ಕಳಿಸಲಾರೆವು.

ಶ್ರೀಕಾಂತ ಮತ್ತು ಕಂಪನಿ

ಸುಭಾಸ ಬೀದಿ, ಧಾರವಾಡ

ತಲೆ ಸವರಿ, ಮುದ್ದು ಮಾಡಿ ಸಮಾಧಾನಪಡಿಸಿದನು. ಅವಳು ಕೊಂಚ ಗೆಲುವಾದಳು.

ಕಾಲ ಕಳೆದಂತೆ ಈ ಸಂಸಾರಕ್ಕೆ ಹಿಂದಿನ ಒಲವು-ನಿಲವು ಎಲ್ಲವೂ ಹಿಂದಿರುಗಿದುವು. ವಿಶ್ವನಾಥನೂ ಎಚ್ಚೆತ್ತುಕೊಂಡನು. ಎಂದಿನಂತಾದನು. ಆದರೂ ಮಧ್ಯೆ ಮಧ್ಯೆ ಒಮ್ಮೊಮ್ಮೆ ಹುಚ್ಚು ಹಿಡಿದಂತಾಗುತ್ತಿತ್ತು. ಹಾಗೆಯೇ ಮತ್ತೆ ಅಳಿಸಿಹೋಗುತ್ತಿತ್ತು. ಮಂಗಳೆಯ ಸಂಭ್ರಮವೆಂದರೆ ಹೇಳತೀರದು. ಅವಳು ತನ್ನ ಹೆರಿಗೆಯ ದಿನಕ್ಕಾಗಿಯೇ ತಾನು ಹುಟ್ಟಿ ಬದುಕಿ ಬಾಳುತ್ತಿದ್ದಂತೆ, ಅದಕ್ಕಾಗಿ ಎಲ್ಲವನ್ನೂ ಸಿದ್ಧಪಡಿಸುವುದರಲ್ಲೇ ತನ್ನ ಅಲ್ಪವಿರಾಮವನ್ನೆಲ್ಲ ಕಳೆಯುತ್ತಿದ್ದಳು. ಹಲವು ಜೊತೆ ಕಾಲುಚೀಲ, ಮೂರ್ನಾಲ್ಕು ಕುಲಾವಿಗಳು ತಯಾರಾದುವು. ಸಣ್ಣ ಸಣ್ಣ ಅಂಗಿ, ಕಾಚ, ವಸ್ತ್ರಗಳು ಎಷ್ಟೋ ಲೆಕ್ಕವಿಲ್ಲದಷ್ಟು. ದಿನವು ಹತ್ತಿರವಾದಾಗ ಬೆತ್ತದ ತೊಟ್ಟಿಲು; ಮಣಿಯ ತೋರಣ, ತೂಗುರಸಬುರುಡೆ ಇವೂ ಸಿದ್ಧವಾದುವು. ಅವಳು ಕೇಳಿದುದನ್ನೆಲ್ಲ ಒದಗಿಸುವುದು, ಅವಳು ಇಷ್ಟಪಟ್ಟಂತೆ ಅವಳ ಕೆಲಸದಲ್ಲಿ ನೆರವಾಗುವುದು, ಅವಳು ಕಸೂತಿಯನ್ನು ಹಾಕುವಾಗ, ಮಣಿಯನ್ನು ಪೋಣಿಸುವಾಗ ಅವಳ ಬಳಿಯಲ್ಲಿ ಕುಳಿತು ಮುಂದಿನ ಸುದಿನದ ವಿಷಯವಾಗಿ, ಮಗುವಿನ ಭವಿಷ್ಯದ ಸಂಬಂಧವಾಗಿ ಅವಳೊಡನೆ ಮಾತನಾಡುವುದು, ವಿನೋದ ಮಾಡುವುದು—ಇವೆಲ್ಲ ವಿಶ್ವನಾಥನ ಪಾಲು. ಮಂಗಳೆ ತನ್ನ ಆರೋಗ್ಯ ಆರೈಕೆ ಪಥ್ಯಗಳ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿದ್ದಳು. ತನಗೆ ಇಷ್ಟವಾದುವು ಎಷ್ಟೋ ವರ್ಜವಾದುವು. ಬೇಡದುವು ಎಷ್ಟನ್ನೋ ಸೈರಿಸಿಕೊಳ್ಳುತ್ತಿದ್ದಳು. ಎಲ್ಲವೂ ಮಗುವಿನ ದೃಷ್ಟಿಯಿಂದಲೆ. ಅವಳ ಕಣ್ಣೇ ಬದಲಾಯಿಸಿದಂತಾಗಿತ್ತು. ವಿಶ್ವನಾಥನು ಅವಳ ಹೇಳಿಕೆಯಷ್ಟನ್ನೇ ನಡೆಸದೆ ತನಗೆ ತೋರಿದ, ಇತರರು ಸೂಚಿಸಿದ ಉಪಚಾರಗಳನ್ನು ನಡೆಸಿ, ಅವಳ ಬಯಕೆಗಳನ್ನು ಸೂಚನೆಯಿಂದಲೇ ಗ್ರಹಿಸಿ ಸಲ್ಲಿಸುತ್ತಿದ್ದನು. ತನ್ನ ಬೇಸರು, ಕಷ್ಟ, ಹಿಂಸೆಗಳು ಎಷ್ಟಿದ್ದರೂ ಮರೆಸಿಕೊಂಡು ಅವಳ ಮನಸ್ಸು ಹಗುರವಾಗಿರುವುದಕ್ಕೆ, ನಲಿಯುವುದಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿದ್ದನು. ಮಂಗಳೆಗಾದರೂ ಹಿಂದಿನ ದಿನಗಳು ಹಿಂದಿರುಗಿದ ಮೇಲೆ ಬೇಕಾದದ್ದೇನು? ಸಂತೋಷದಿಂದ ಈ ಎರಡು ಹಕ್ಕಿಗಳು ಗೂಡಿನಲ್ಲಿ ಆಡುತ್ತಿದ್ದುವು.

ಮಂಗಳೆಗೆ ಎಂಟು ತಿಂಗಳಾಯಿತು. ಒಂದು ದಿನ ಇಬ್ಬರೂ ಊಟಮಾಡುತ್ತ ಮುಂದಿನ ಏರ್ಪಾಡನ್ನು ಎಷ್ಟನೆಯ ಬಾರಿಗೋ ಮತ್ತೊಮ್ಮೆ ಚರ್ಚಿಸುತ್ತ ತಮ್ಮನ್ನೇ ತಾವು ಮರೆತಿದ್ದರು. ಆಗ ಯಾರೋ ಹೊರಬಾಗಿಲನ್ನು ತಟ್ಟಿದ ಶಬ್ದವಾಯಿತು. ಮಂಗಳೆಯೇ ಮುಂದಾಗಿ ಎಚ್ಚೆತ್ತು ಎದ್ದು ಹೋಗಿ ಬಾಗಿಲನ್ನು ತೆರೆದಳು. ಹೊರಗಿನಿಂದಲೇ 'ಇದು ಪ್ರೊಫೆಸರ್ ವಿಶ್ವನಾಥರ ಮನೆಯೆ?' ಎಂದು ಕೇಳಿದ ಧ್ವನಿಯು ವಿಶ್ವನಾಥನ ಕಿವಿಗೆ ಬಿದ್ದಾಗ, ಅವನ ಎದೆ ಡವಡವನೆ ಹೊಡೆದುಕೊಳ್ಳಲಾರಂಭಿಸಿತು. ಮೈ ಬಿಸಿಯಾಯಿತು. ಅವನಿಗೆ ಎಲ್ಲಿಗಾದರೂ ಓಡಿಹೋಗಬೇಕೆಂದೆನಿಸಿತು. ಅವನು ಹಿತ್ತಲಿಗೆ ಹೋಗಿ ಕೈತೊಳೆದುಕೊಂಡನು. ಮಂಗಳೆಯು 'ಹೌದು ಇದೇ! ಒಳಗೆ ಬನ್ನಿ' ಎಂದ ಉತ್ತರ ಅವನ ಕಿವಿಗೆ ಬೀಳಲೇ ಇಲ್ಲ. ಅಷ್ಟರಲ್ಲೇ ಅದೇ ಧ್ವನಿಯು 'ಅವರು ಮನೆಯಲ್ಲಿ ಇದ್ದಾರೆಯೆ?' ಎಂದುದು ಕೇಳಿಸಿತು. ಇನ್ನು ತಡೆಯಲಾರದೆ ಹೋದ. ತನಗೇ ತಿಳಿಯದ ಸೆಳೆತವೊಂದು ಅವನನ್ನು ಅವರಿದ್ದ ಹಜಾರಕ್ಕೆ ತಂದು ಬಿಟ್ಟಿತು. ಆಗಂತುಕರು ಇಬ್ಬರನ್ನೂ ಕಂಡಾಗ, ಅವನ ಜೀವವೇ ಹಾರಿಹೋದಂತಾಯಿತು. ಇವನ ಗಾಬರಿಯನ್ನು ಕಂಡು ಮಂಗಳೆಯು ಬೆರಗಾಗಿ ಅವನ ಪಕ್ಕಕ್ಕೆ ಸರಿದುಕೊಂಡಳು. ಬಂದವರಲ್ಲಿ ಗಂಡುಸು, ಅವಳಿಂದ ಅವನ ಕಡೆಗೆ ಅನುಮಾನದಿಂದ ನೋಡಿದರೂ ರೂಢಿಯ ನಸುನಗೆಯನ್ನು ಸೂಚಿಸಿದನು. ಆತನ ಜೊತೆಯಲ್ಲಿ ಬಂದಿದ್ದ ಹುಡುಗಿಯು, ತಲೆಯನ್ನು ತಗ್ಗಿಸಿ ಕಾಲುಬೆರಳಿನಿಂದ ನೆಲವನ್ನು ಕೆರೆಯುತ್ತಿದ್ದಳು.

'ಇದೇನು, ಹೇಳದೆ ಕೇಳದೆ....ಕಾಗದವನ್ನೂ.......' ಎಂದು ವಿಶ್ವನಾಥನು ತೊದಲಿದನು.

'ಎಷ್ಟು ಕಾಗದವನ್ನು ಬರೆಯೋದು? ಒಂದಕ್ಕಾದರೂ ಉತ್ತರವಿಲ್ಲ. ಎಷ್ಟು ದಿನ ಕಾಯೋದು? ನೀವು ಕೊಟ್ಟಿದ್ದ ಗಡುವು ತೀರಿ ಆಗಲೇ ಮೂರು ತಿಂಗಳಿಗೂ ಮೇಲಾಯಿತು. ಅದಕ್ಕೇ ನೇರವಾಗಿ ಹೊರಟು ನಿಮ್ಮ ವಸ್ತುವನ್ನು ನಿಮಗೆ ಒಪ್ಪಿಸಿಬಿಡೋಣ ಅಂತ ಇವಳನ್ನೂ ಕರೆದುಕೊಂಡೇ.... ....' ಎಂದು ಹೊಸಬನು ಮಾತನ್ನು ಮುಗಿಸುವುದರಲ್ಲಿದ್ದ.

ಅಷ್ಟರಲ್ಲೇ ಮಂಗಳೆಯು ಅತ್ತಿತ್ತ ತೂರಾಡಿ ಗೋಡೆಯನ್ನು ಒರಗಿಕೊಳ್ಳಲು ಹೋಗಿ, ಹಾಗೆಯೇ ನೆಲಕ್ಕೆ ಕುಸಿದುಬಿಟ್ಟು ಮೂರ್ಛೆಹೋದಳು. ವಿಶ್ವನಾಥನು 'ಮಂಗಳಾ! ಮಂಗಳಾ! ಎನ್ನುತ್ತ ತಟ್ಟನೆ ಆದಷ್ಟು ಅವಳನ್ನು ಹಿಡಿದುಕೊಂಡು, ಅವಳ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಗಾಳಿಬೀಸಿದನು. ಹುಡುಗಿಯು ಆಗಲೇ ಒಳಕ್ಕೆ ಹೋಗಿ ಕೊಂಚ ನೀರನ್ನು ತಂದು, ಮಲಗಿದ್ದ ಮಂಗಳೆಯ ಮುಖ-ತಲೆಗಳ ಮೇಲೆ ಹಾಕಿ ಶೈತ್ಯೋಪಚಾರಮಾಡುತ್ತಿದ್ದಳು. ಗಂಡುಸು ಸುಮ್ಮನೆ ಈ ದೃಶ್ಯವನ್ನು ನೋಡುತ್ತಿದ್ದನು; ತೀಕ್ಷ್ಣವಾಗಿ ಯೋಚಿಸುತ್ತಿದ್ದಂತಿದ್ದನು.

ಮಂಗಳೆಯು ಮೂರ್ಛೆತಿಳಿದು ಕಣ್ಣನ್ನು ತೆರೆದಾಗ, ಹೊಸಬನು ವಿಶ್ವನಾಥನ ಕಡೆಗೆ ನೋಡುತ್ತ ಕಠಿಣವಾಗಿ 'ಈಕೆ ಯಾರು?' ಎಂದು ಪ್ರಶ್ನಿಸುತ್ತಿದ್ದನು. ಕನಸಿನಲ್ಲಿ ದೆವ್ವವನ್ನು ಕಂಡಂತಿದ್ದ ವಿಶ್ವನಾಥನು ಹೇಗೋ ಮಾತನ್ನು ತಂದುಕೊಂಡು 'ನನ್ನ ಮೊದಲನೆಯ ಸಂಬಂಧ' ಎಂದು ಉತ್ತರಕೊಟ್ಟನು.

'ಏನು ಮೊದಲನೆಯ ಸಂಬಂಧವೆ? ಆ! ಅಬ್ಬಬ್ಬ, ಎಂಥ ಮೋಸ! ಮದುವೆಯಾಗಿಲ್ಲ ಅಂತ ಮೋಸಮಾಡಿದಿರಲ್ಲ? ಹೀಗೆ ಅಂತ ಗೊತ್ತಿದ್ದರೆ....ಅಯ್ಯೋ! ಬೆಳೆದ ಮಗಳೆಂದು ಆತುರದಲ್ಲಿ ಸರಿಯಾಗಿ ವಿಚಾರಿಸದೆ ಇವಳ ಕೊರಳನ್ನು ಕೊಯ್ದೆನಲ್ಲ. ಛೀ ಛೀ!....' ಎಂದು ಆತನು ಒದರುತ್ತಿದ್ದನು. 'ಅಪ್ಪ! ಅಪ್ಪಾ!

ಜಯಂ

ವೆನ್ನುತ್ತ ಹೊಸ ಹುಡುಗಿಯು ತಂದೆಯ ಮಾತನ್ನು ತಡೆಯಲು ವ್ಯರ್ಥ ಯತ್ನ ಮಾಡುತ್ತಿದ್ದಳು.

ವಿಶ್ವನಾಥನು ಚಿತ್ರದಂತಾಗಿ ತಲೆತಗ್ಗಿಸಿದ್ದನು. ಮಂಗಳೆಯು ಅವನ ಕಡೆಗೆ ತನ್ನ ಮುಖವನ್ನು ಕೊಟ್ಟು, ಮಗುವಿನಂತೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಕೆಲವು ನಿಮಿಷಗಳು ಹೀಗೆ ಕಳೆದುವು. ಕಡೆಗೆ ತಂದೆಯು 'ಸರಸೂ ನಡಿ, ನಮಗೆ ಇಲ್ಲಿ ಕೆಲಸವಿಲ್ಲ ಇನ್ನು' ಎಂದು ಹೊರಡಲು ಹೆಜ್ಜೆಯಿಟ್ಟು, ತಮ್ಮ ಸಾಮಾನಿಗೆ ಕೈಹಾಕಿದನು.

'ಬೇಡ, ಅಪ್ಪ. ಕೊಂಚ ಸ್ಥೈರಿಸಿಕೊ. ನನ್ನ ಸ್ಥಳ ಇಲ್ಲಲ್ಲವೇ? ' ಎಂದು ಸರಸು ಸಮಾಧಾನ ಹೇಳಿದಳು.

'ಏನೆಂದೆ? ನಿನ್ನ ಸ್ಥಳ— ಇಲ್ಲಿ! ಚೆನ್ನಾಯಿತು. ಈತನ ಎರಡನೆಯ ಸಂಬಂಧದ ಸೂಳೆಗಾರಿಕೆಗೆ ನಿನ್ನನ್ನು ಕೊಟ್ಟು ಹೋಗುವ ಬದಲು, ನನ್ನ ಮಗಳು ವಿಧವೆಯಾಗಿದ್ದಾಳೆ ಅಂದುಕೊಳ್ತೀನಿ.... ಹುಂ' ಎಂದು ತಂದೆಯು ಗುಡುಗಿದನು.

"ರಾಮ! ರಾಮ!" ಎಂದು ಹುಡುಗಿಯು ಕಿವಿಮುಚ್ಚಿಕೊಂಡಳು.

ತಂದೆಯು ಮಾತಿಗೆ ಸರಿಯಾಗಿ, ಒಳಗೆ ತಂದಿದ್ದ ಸಾಮಾನುಗಳನ್ನು ಹೊರಗಡೆಗೆ ಮತ್ತೆ ಸಾಗಿಸಿದನು. ಇದನ್ನು ನೋಡುತ್ತ ವಿಶ್ವನಾಥನು ಬಹಳ ಪ್ರಯತ್ನ ಮಾಡಿ 'ನನ್ನಿಂದ ಮಹಾಪರಾಧವಾಗಿದೆ. ಕ್ಷಮಿಸಿ, ಇದನ್ನೆಲ್ಲ ಚೆನ್ನಾಗಿ ಯೋಚಿಸೋಣ. ಕೊಂಚ ಸ್ಥೈರಿಸಿಕೊಳ್ಳಿ. ಇರಿ!' ಎಂದು ಅಂಗಲಾಚಿದನು.

'ಏನು ಇರೋದೆ—ಇನ್ನು! ಎಂದಿಗೂ ಇಲ್ಲ. ಕಾಲುಗಳಿಗೆ ಇಲ್ಲೂ ಈ ಹಾಳೂರಿನಲ್ಲೂ ನಿಲ್ಲೋದಿಲ್ಲ. ಏಳೇ ಸರಸ' ಎಂದು ತಂದೆಯು ಹುಡುಗಿಯನ್ನು ಕೈ ಹಿಡಿದು ಎಬ್ಬಿಸಿದನು.

'ಅಪ್ಪ, ಒಂದು ಬಾರಿ ಆತುರಪಟ್ಟು, ಹೀಗಾಯಿತು. ಇನ್ನೊಂದು ಬಾರಿ ಆತುರಪಟ್ಟು ನನ್ನ ಬಾಳನ್ನೇ ಬರಿದು ಮಾಡಬೇಡ' ಎಂದು ಹುಡುಗಿಯು ದೈನ್ಯದಿಂದ ಬೇಡಿಕೊಂಡಳು.

'ಉಹುಂ, ಬಾಳು ಬರಿದಾದರೇನು, ಹೊಲಸಾಗಗೊಡೋದಿಲ್ಲ. ಇಲ್ಲಿ ನಿನ್ನನ್ನು ಬಿಡೋದು ಸಾಧ್ಯವಿಲ್ಲ. ಸರಿಯಲ್ಲ. ನನ್ನ ನಿರ್ಧಾರವೇ ಕಡೆಯದು. ಎಂದಿಗೂ ಬದಲಾಯಿಸೋದಿಲ್ಲ. ಇವನು ಬೇಕಾದ್ದು ಮಾಡಲಿ ನೋಡೋಣ!' ಎಂದು ಹುಡುಗಿಯನ್ನು ಎಳೆದುಕೊಂಡೇ ಹೋಗಿ, ಇನ್ನೂ ಬಾಡಿಗೆಗಾಗಿ ನಿಂತಿದ್ದ ಗಾಡಿಯಲ್ಲಿ ಕುಳಿತುಬಿಟ್ಟು, ಗಾಡಿಯವನಿಂದ ಸಾಮಾನನ್ನು ಸಾಗಿಸಿಕೊಂಡು ಹೊರಟೇ ಹೋದನು.

ವಿಶ್ವನಾಥನಿಗೆ ದಿಕ್ಕೇ ತೋರದಂತಾಯಿತು. ಅವನು ಮಂಗಳೆಯನ್ನು ಕೂಡ ಸಮಾಧಾನಪಡಿಸಲು ಸಮರ್ಥನಾಗಲಿಲ್ಲ. ಮಾಡಿದ ಅಷ್ಟಿಷ್ಟು ಯತ್ನಗಳೂ ವಿಫಲವಾದುವು. ಅವಳು ಅಳುವಿನ ಮಧ್ಯೆ 'ಅಯ್ಯೋ, ಹೀಗೇಕೆ ಮಾಡಿದಿರಿ! ದೇವರೇ' ಎಂದು ಕೇಳಿದಳು. ಅವನು ಉತ್ತರಕೊಡುತ್ತ 'ಆ ಹಾಳು ಭವಿಷ್ಯ, ಮಂಗಳಾ! ಅದು ನಿನ್ನಲ್ಲಿ ಮಕ್ಕಳಾಗೋದಿಲ್ಲ ಅಂತ ಹೇಳಿದ್ದೇ ಇಷ್ಟು ಅನರ್ಥಕ್ಕೆ ಕಾರಣವಾಯ್ತು' ಎಂದು ಹೇಳಿದ. ಅವಳು 'ನಂಗಿಲ್ಲದ ಮಕ್ಕಳ ಮೋಹ ನಿಮಗಾಯ್ತೆ? ತನ್ನ ಸರ್ವಸ್ವವನ್ನೂ ನಿಮಗೆ ಧಾರೆಯೆರೆದಿದ್ದ ಜೀವಕ್ಕಿಂತ ಸಂತಾನವೇ ಹೆಚ್ಚಾಯ್ತೆ?' ಎಂದು ಗೋಳಿಟ್ಟಳು. ಅವನು 'ನನ್ನಿಂದ ತಪ್ಪಾಯ್ತು. ನಿನ್ನಲ್ಲಿ ಚರ್ಚಿಸದೆ ನಾನೇಕೆ ದುಡುಕಿದೆನೋ....ನಂಗೇನು ಬಂದಿತ್ತೋ ಏನೋ. ಛೇ! ಛೇ! ಈಗೇನು ಮಾಡಲಿ?' ಎಂದು ಕೈ ಒದರಿದನು.

'ಪಾಪ, ಆ ಹುಡುಗಿಯ ಪಾಡೇನು ಇನ್ನು?' ಎಂದು ಮಂಗಳಾ ಮರುಗಿದಳು.

ವಿಶ್ವನಾಥನು ನಿರುತ್ತರನಾಗಿದ್ದ.

ಸಂಜೆಯಾಗುತ್ತ ಬಂದರೂ ಮಂಗಳೆಯು ಮಾತ್ರ ಸಾಧಾರಣವಾಗಲಿಲ್ಲ. ಒಂದೇ ಸಮನೆ ಅಳುತ್ತಲೂ ಮಧ್ಯೆ ಮಧ್ಯೆ ಇದೇ ಮಾತನಾಡುತ್ತಲೂ ಇದ್ದಳು. ಬಹಳ ಆಯಾಸವಾದಾಗ ಮಾತ್ರ ಮೂರ್ಛೆಹೋದವಳಂತೆ ಕೊಂಚಕಾಲ ಸುಮ್ಮನಿರುತ್ತಿದ್ದಳು. ಮತ್ತೆ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ

ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚೆಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೪೮ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ ಮು. ಪೋ. ಮಿರಜ

ಎಷ್ಟೋತ್ತಾಗ ಅದೇ ಮಾತು ರೀತಿ. ವಿಶ್ವನಾಥನಿಗೆ ಗಾಬರಿಯಾಯಿತು. ಇದು ಅವಳಿಗೆ ಜಾಡ್ಯವಾಗಿ ಪರಿಣಮಿಸೀತೆಂದು ಅವನು ಭಯಪಟ್ಟನು. ಇದರ ಮುಂದಿನ ಪರಿಣಾಮವನ್ನು ಯೋಚಿಸಿಕೊಂಡು ತಲ್ಲಣಿಸಿದನು. ಮೂರು ದಿನಗಳ ಮೇಲೆ ಮೇಲೆ ಅವಳ ಸ್ಥಿತಿಯು ಕೊಂಚ ಉತ್ತಮಗೊಂಡಂತೆ ಕಂಡಿತು. ಅಲ್ಲಿಯ ವರೆಗೂ ರಜ ತೆಗೆದುಕೊಂಡು ವಿಶ್ವನಾಥನು ಮಂಗಳೆಯ ಬಳಿಯಲ್ಲೇ ಇರುತ್ತ, ತನಗೆ ಸಾಧ್ಯವಾದ ಸಮಾಧಾನವನ್ನೆಲ್ಲ ಮಾಡುತ್ತ, ಅವಳ ಮನಸ್ಸನ್ನೂ ಆ ಮೂಲಕ ದೇಹವನ್ನೂ ಆರೋಗ್ಯದ ಕಡೆಗೆ ತಿರುಗಿಸಲು ಮಹಾ ಪ್ರಯತ್ನವನ್ನು ಮಾಡುತ್ತಿದ್ದನು.

ನಾಲ್ಕನೆಯ ದಿನ ವಿಶ್ವನಾಥನು ಕಾಲೇಜಿಗೆ ಹೋಗಿದ್ದ. ಸಂಜೆ ಹಿಂದಿರುಗಿ ಬರುತ್ತ ದೂರದಿಂದಲೇ ಮನೆಯ ಕಡೆಗೆ ನೋಡಿದಾಗ, ರೂಢಿಯಂತೆ ಮಂಗಳೆಯು ಹೊರಗಡೆಯಲ್ಲಿ ಇವನನ್ನು ಇದಿರು-ನೋಡುತ್ತಿರಲಿಲ್ಲ. ಹತ್ತಿರ ಬಂದು ನೋಡಿದಾಗ ಬಾಗಿಲು ಮುಚ್ಚಿದ್ದಿತಲ್ಲದೆ ಬೀಗವೂ ಹಾಕಲ್ಪಟ್ಟಿದ್ದಿತು. ವಿಶ್ವನಾಥನು 'ಹುಂ, ಬೇಜಾರಾಗಿ ಎಲ್ಲೋ ನೆರೆಹೊರೆಯ ಮನೆಗೆ ಹೋಗಿರಬೇಕು. ಪರವಾಗಿಲ್ಲ. ಇಷ್ಟು ಅವಳ ಮನಸ್ಸು ಬದಲಾಯಿಸಿತಲ್ಲ. ನಾನು ಪಾಪಿಯಾಗುವುದೇ ಇಲ್ಲ ಎಂದು ಭಯಪಟ್ಟಿದ್ದೆ' ಎಂದು-ಕೊಂಡನು. ಸಾಮಾನ್ಯದ ದಿನದಲ್ಲಿ ಹೀಗಾಗಿದ್ದರೆ, ಅಕ್ಕಪಕ್ಕದಲ್ಲಿ ಅವಳು ಹೋಗುತ್ತಿದ್ದ ಮನೆಗಳಿಗೆ ಹೋಗಿ ಬೀಗದ ಕೈ ತರುತ್ತಿ-ದ್ದನು. ಅವಳೂ ಅವನೊಡನೆ ಬಂದೇಬಿಡುತ್ತಿದ್ದಳು. ಆದರೆ ಈ ದಿನ ಅವಳ ಹವ್ಯಾಸವನ್ನು ಮುರಿಯುವುದು ಸರಿಯಲ್ಲವೆಂದು-ಕೊಂಡು, ಅವನು ಎಲ್ಲೋ ಅಷ್ಟು ಸುತ್ತುಹಾಕಿಕೊಂಡು ಬರಲು ಹೊರಟು, ಮಬ್ಬುಗತ್ತಲೆಯ ಹೊತ್ತಿಗೆ ಮತ್ತೆ ಹಿಂದಿರುಗಿದನು. ಆಗಲೂ ಬಾಗಿಲು ಹಾಕಿಯೇ ಇದ್ದಿತು. 'ಈಗ ಕರೆದರೆ ಪರವಾ-ಗಿಲ್ಲ'ಎಂದುಕೊಂಡು, ಅವನು ನೆರೆಹೊರೆಯಲ್ಲಿ ಹೊಕ್ಕು ಅವಳನ್ನು ಹುಡುಕಿದನು. ಅವಳು ಅಲ್ಲೆಲ್ಲೂ ಇರಲಿಲ್ಲ. ಅವನಿಗೆ ಈಗ ದಿಗಿಲಾಯಿತು. 'ಮತ್ತೆಲ್ಲಿ ಹೋಗಿ, ಆಯಾಸದಿಂದ ಬರಲಾರದೆ ಕುಳಿತುಬಿಟ್ಟಿದ್ದಾಳೋ ಏನೋ' ಎಂದುಕೊಂಡು, ಅವಳು ಹೋಗಬಹುದಾದ ಕಡೆಗಳಲ್ಲೆಲ್ಲ ಆತುರದಿಂದ ಓಡಾಡಿ ದಣಿದನು. ಫಲವಾಗಲಿಲ್ಲ……"

ಇಲ್ಲಿ ಮುದುಕನು ಮಾತನ್ನು ಕೊಂಚಕಾಲ ನಿಲ್ಲಿಸಿ ಮತ್ತೆ "ಹುಂ. ಇನ್ನು ಹೇಳಬೇಕಾದದ್ದೇನು? ಗೊತ್ತೇ ಇದೆ ಮಂಗಳಾ ಇಲ್ಲೇ ಸಂಕಟಪಡಿಸೋ ಹಾಗೆ ಹೊಂಚಿದ್ದಳು!" ಎಂದು ಬಾವಿಯ ಕಡೆಗೆ ಕೈತೋರಿಸಿ "ಅಯ್ಯೋ, ಮಂಗಳಾ!" ಎನ್ನುತ್ತ ಬಾವಿಯ ಬಳಿಗೆ ಓಡಿಹೋದನು. ನನಗೆ ಬಹಳ ಗಾಬರಿಯಾಯಿತು. ಅವನೆಲ್ಲಿ ಅದರಲ್ಲಿ ಬಿದ್ದುಬಿಡುವನೋ ಎಂದು ಅವನ ಹಿಂದೇ ಓಡಿಹೋಗಿ ಹಿಡಿದುಕೊಂಡೆ. ಅವನು ಸ್ವಲ್ಪಹೊತ್ತು ಅದರಲ್ಲಿ ಬಗ್ಗಿ ಸುಮ್ಮನೆ ನೋಡುತ್ತಿದ್ದನು. ಅವನ ಕಣ್ಣಿನಿಂದ ನೀರು ತೊಟ್ಟಿಕ್ಕುತ್ತಿದ್ದಂತೆ ನಾನು ಊಹಿಸಿದೆ. ಅನಂತರ ಹಿಂದೆ ಸರಿದು "ಬಿಡಿ, ಬಿಡಿ. ಛೀ! ನಂಗೋಸ್ಕರ ಭಯವೆ? ಅಯ್ಯೋ, ನಿಮಗೆ ಹುಚ್ಚು! ನಾನೀಗಲೇ ಸಾಯುವುದಿಲ್ಲ— ನನ್ನ ಪ್ರಾಯಶ್ಚಿತ್ತ ಪೂರ್ತಿಯಾಗುವುದಕ್ಕೆ ಮುಂಚೆ. ನಂಗೆ ಅರುವತ್ತಾರು ವರ್ಷ ಆಯುಸ್ಸು" ಎಂದು ನನ್ನಿಂದ ಬಿಡಿಸಿಕೊಂಡು, ತಾನು ಬಂದಿದ್ದ ದಾರಿಯಿಂದಲೇ ಮತ್ತೆ ಪೊದೆಯೊಳಗೆ ಹೊರಟು ಹೋದನು.

ನಾನು ಅವನನ್ನು ಹಿಂಬಾಲಿಸಲೇ ಎಂದು ಯೋಚಿಸಿದೆ. ಆದರೆ 'ಬನ್ನಿ ಸದ್ಯ, ಇಲ್ಲಿಂದ ಬೇಗ ಹೋಗೋಣ' ಎಂದು ಲಲಿತ ಹೇಳಿದುದು ಕೇಳಿಸಿ, ನನ್ನ ಮನಸ್ಸನ್ನು ಬದಲಾಯಿಸಿತು. ನಾವಿಬ್ಬರೂ ಕೊಂಚ ಗಾಬರಿಯಿಂದಲೇ ಆ ಗಭೀರ ರಾತ್ರಿಯಲ್ಲಿ ಮನೆಯ ಕಡೆಗೆ ನಡೆದೆವು.

ಸ್ವಲ್ಪದೂರ ಹೋದಮೇಲೆ ನಾನು ಕತೆಯನ್ನೇ ನೆನಸಿಕೊಂಡು ನಿಟ್ಟುಸಿರು ಬಿಡುತ್ತ,

"ಅಂತೂ ಭವಿಷ್ಯ ಪೂರ್ತಿಯಾಯ್ತು" ಅಂದೆ.

"ವಿಚಿತ್ರ ರೀತಿಯಲ್ಲಿ" ಅಂದಳು ಲಲಿತ.

"ಎಂಥ ಜೀವ! ಎಷ್ಟು ಆಸೆಗಳು ಮಣ್ಣಾದುವೋ ಮಂಗಳೆ-ಯಲ್ಲಿ. ಏನಾದರೂ ಅವಳು ಸಾಯದಿದ್ದರೆ ಎಷ್ಟು ಚೆನ್ನಾ-ಗಿರುತ್ತಿತ್ತು!"

"ಪ್ರೇಮಕ್ಕೆ ಬೆಲೆ ಸಿಕ್ಕದ ಮೇಲೆ, ಪ್ರಪಂಚ ಹೇಗೆ ಬೇಕಾ-ದೀತು?" ಅವಳು ತೀರ್ಮಾನ ಹೇಳಿದಳು.

"ಅಥವಾ ಆ ಹುಡುಗಿಯ ಮೇಲಿನ ಕನಿಕರಕ್ಕಾಗಿ ದಾರಿ-ಮಾಡಿಕೊಡಲು ತನ್ನನ್ನೇ ಬಲಿಕೊಟ್ಟಳೋ?" ನಾನು ಹಾಗೇ ಯೋಚಿಸಿದೆ.

"ಹುಂ, ಯಾರಿಗೆ ಗೊತ್ತು? ಅಂತೂ ಆ ಹುಡುಗಿಯೂ ಬಲಿ-ಯಾದಳು" ಲಲಿತ ಮರುಗಿದಳು.

"ಇನ್ನೇನು—ಇವನ ಗತಿ ಹೀಗಾದ ಮೇಲೆ. ಅಷ್ಟೇ"

"ಈತನಾದರೂ ಎಷ್ಟು ಯಾತನೆ ಅನುಭವಿಸಿರಬಹುದು. ಇನ್ನೆಷ್ಟನ್ನು ಅನುಭವಿಸಬೇಕೋ! ಕೈಯಾರ ಕೊರಳು ಕುಯ್ದು-ಕೊಂಡಂತೆ ಆಯ್ತು."

"ಛೀ, ಎಂಥ ಕನಿಕರದ ದುರಂತ!" ನಾನು ಪೂರ್ತಿಮಾಡಿದೆ.

* * *

ಈ ದಿನ ನಾವು ಎಲ್ಲಿಗೆ ವಿಹಾರಕ್ಕಾಗಿ ಹೋಗಬೇಕೆಂದು ಚರ್ಚೆಯಾಯಿತು.

"ಸಂಪಟ ವಿನೋದನಕ್ಕೇ ಹೋದರೆ?" ನಾನು ಕೇಳಿದೆ.

"ಸಾಕು ಸಾಕು. ಅತ್ತಕಡೆಗೆ ತಿರುಗೋದೇ ಬೇಡ" ಎಂದುಬಿಟ್ಟಳು ಲಲಿತ.

ಕಾವ್ಯವ್ಯಾಖ್ಯೆಯು ಬೆಳೆವಣಿಗೆ

ಶ್ರೀ. ಎಸ್. ಎಸ್. ಬಸುಪಟ್ಟದ, ಎಂ. ಎ., ಗುಳೇದಗುಡ್ಡ.

★

ಇದುವರೆಗೆ ಹಲವು ಜನ ಲಾಕ್ಷಣಿಕರು, ಕಾವ್ಯದ ವ್ಯಾಖ್ಯೆಯನ್ನು ಹಲವು ಬಗೆಯಿಂದ ಕಟ್ಟಿ ಹೇಳಿರುವರು. ಒಬ್ಬೊಬ್ಬರೂ ಹೇಳಿರುವ ಮಾತು ಅಸತ್ಯವೂ ಅಲ್ಲ; ಸಂಪೂರ್ಣ ಸತ್ಯವೂ ಅಲ್ಲ. ಇನ್ನೂ ಮುಂದೆ ಕಾವ್ಯದ ವ್ಯಾಖ್ಯೆಗಳು ಎಷ್ಟೆಷ್ಟು ಹೊರಡಲಿರುವವೋ!

★

ಕಾವ್ಯವನ್ನು ಕುರಿತು ಭರತನು **"ಯೋಽರ್ಥೋ ಹೃದಯ ಸಂವಾದೀ ತಸ್ಯ ಭಾವೋ ರಸೋದ್ಭವಃ"** ಎಂದು ಹೇಳಿದನು. ಕಾವ್ಯವೆಂದರೆ ಭರತನ ಮಾತಿನಲ್ಲಿ 'ದೃಶ್ಯಕಾವ್ಯ' ಎಂದು ಮಾತ್ರ ಅರ್ಥ. ಶಾಸ್ತ್ರಜ್ಞರು ಕಾವ್ಯದಲ್ಲಿ ಎರಡು ಭೇದಗಳನ್ನು ಮಾಡಿದರು: ಒಂದು ದೃಶ್ಯ, ಮಗುದೊಂದು ಶ್ರಾವ್ಯ. 'ದೃಶ್ಯಕಾವ್ಯ'ವೇ ನಾಟ್ಯಕಲೆಯಾಗಿ ಪರಿಣಮಿಸಿ 'ಕಾವ್ಯೇಷು ನಾಟಕಂ ರಮ್ಯಂ' ಎಂದೂ, 'ಕಾವ್ಯಜಗತ್ತಿನ ಚರಮಸೀಮೆ' ಎಂದೂ ಹೆಸರು ಪಡೆಯಿತು. ಭಾಮಹನು '**ಶಬ್ದಾರ್ಥೌ ಸಹಿತೌ ಕಾವ್ಯಂ**' ಎಂದು ಹೇಳಿದರೆ, '**ರೀತಿರಾತ್ಮಾ ಕಾವ್ಯಸ್ಯ**'ಎಂಬುದು ವಾಮನನ ಅಭಿಮತವಾಯಿತು. ಮಮ್ಮಟನಾದರೋ "**ತದ-ದೋಷೌ ಶಬ್ದಾರ್ಥೌ ಸಗುಣಾವನಲಂಕೃತೀ ಪುನಃ ಕ್ವಾಪಿ**" ಎಂದು ಹೇಳಿದನು. ಆನಂದವರ್ಧನಾಚಾರ್ಯರು "**ಕಾವ್ಯಸ್ಯಾತ್ಮಾ ಧ್ವನಿಃ.......**" ಎಂದು ಕಾವ್ಯಕ್ಕೆ ಧ್ವನಿಯೇ ಆತ್ಮ, ರಸವೇ ಪ್ರಾಣವೆಂಬುದಾಗಿ ಸಾರಿದರು. ವಿಶ್ವನಾಥನಂತೂ '**ವಾಕ್ಯಂ ರಸಾತ್ಮಕಂ ಕಾವ್ಯಂ**' ಎಂದು ಹೇಳಿದನು. ಅಂತೂ ಸಂಸ್ಕೃತಾಲಂಕಾರಿಕರಲ್ಲಿ ಕಾವ್ಯದ ನಿರೂಪಣೆ ಈ ತೆರನಾಗಿ ನಿಂತಿತು. ಕನ್ನಡದಲ್ಲಿಯೂ ಲಾಕ್ಷಣಿಕರೂ ಅಲಂಕಾರಿಕರೂ ಕಾವ್ಯಕ್ಕೆ ವಿವಿಧ ಲಕ್ಷಣ ಹೇಳಿದರು. ನೃಪತುಂಗನು '**ಕಾವ್ಯಂ ಸವಿಶೇಷ ಶಬ್ದ-ರಚನಂ ವಿವಿಧಾರ್ಥವ್ಯಕ್ತಿ ವರ್ತಿತಾಲಂಕಾರಂ**' ಎಂದನು. ನಾಗವರ್ಮನು:

> "**ಇರೆ ಶಬ್ದಾರ್ಥಂಗಳ್ ತ |**
> **ತ್ಪರತೆಯಿನದು ಕಾವ್ಯಮದಱೊಳುಚಿತ್ಯಕಾರ್ಥಾಂ-||**
> **ತರವಾಚಿ ಶಬ್ದಮವಘಾ |**
> **ಸರೂಪಮಾಹ್ಲಾದಕಾರಿಯಪ್ಪುದದರ್ಥಂ**"

ಎಂದು ವಿವರಿಸಿದನು. "**ಪದೆದರ್ಥಮನಳವಡಿಸಿದ ಪದಾಳಿ ಕಾವ್ಯದ ಶರೀರಮೆನಿಕುಂ**" ಎಂಬುದು ಉದಯಾದಿತ್ಯನ ಅಭಿಪ್ರಾಯ. ತಿರುಮಲಾರ್ಯನಾದರೋ "**ತದದೋಷೌ ಶಬ್ದಾರ್ಥೌ ಸಗುಣಾವನಲಂಕೃತೀ ಪುನಃಕ್ವಾಪಿ**" ಎಂದು ಹೇಳಿ, ಮಮ್ಮಟನ ಅಭಿಪ್ರಾಯವನ್ನೇ ಸಮರ್ಥಿಸಿದ್ದಾನೆ. ಅಂತೂ ಹೀಗೆ ವಿಧವಿಧವಾಗಿ ಕಾವ್ಯದ ಪರಿಯನ್ನು—ವ್ಯಾಖ್ಯೆಯನ್ನು ಬಿಚ್ಚಿ ಬಿಚ್ಚಿ ಹೇಳಿದ್ದಾರೆ ಲಾಕ್ಷಣಿಕರು.

ಲಾಕ್ಷಣಿಕರು ಹೇಳಿದ ಮಾತೆಲ್ಲ ಸತ್ಯವೇ ಇವೆ; ತಪ್ಪಿಲ್ಲ. ಕೆಲವು ಅಂಗಗಳಿಗೆ ಮಹತ್ತ್ವ ಕೊಡುತ್ತವೆ; ಮತ್ತೆ ಕೆಲವು ಕಾವ್ಯದ ಮುಖ್ಯ ಮುಖ್ಯ ಘಟಕಗಳನ್ನು ಎತ್ತಿ ಹೇಳುತ್ತವೆ. 'ರೀತಿರಾತ್ಮಾ ಕಾವ್ಯಸ್ಯ'ಎಂಬ ಮಾತು ರೀತಿಯ ಕಡೆಗೆ—ಶೈಲಿಯ ಕಡೆಗೆ—ಒಲೆಯುತ್ತದೆ. ಈ ಆತ್ಮವಾದವೇ ದೇಹವಾದವನ್ನು ತರುತ್ತದೆ. ದೇಹವಾದ ಅಂಗಾಂಗವಾದವನ್ನು ತರುತ್ತದೆ ಅಂತೂ ವ್ಯಾಖ್ಯೆಹೇಳಲು ಹೋಗಿಯೇ ವ್ಯಾಖ್ಯೆ ಬೆಳೆಯುತ್ತದೆ. ಒಂದಿದ್ದದ್ದು ಹತ್ತಾಗುತ್ತದೆ; ಹತ್ತು ನೂರರ ವರೆಗೂ ಏರಬಹುದು.

೫೫ ವರ್ಷಗಳಿಂದ ಅನುಭವಪಟ್ಟ
ಕರ್ಶೀ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರ್ಶೀ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪.

ಸರಕಾರಮಾನ್ಯ ಔದ್ಯೋಗಿಕ ಶಿಕ್ಷಣ ಸಂಸ್ಥೆ

ಕರ್ನಾಟಕ

ಹೊಲಿಗೆಯ ವಿದ್ಯಾಲಯ, ಧಾರವಾಡ

ಕುಸು ಅವಧಿಯ ವಿವಿಧ ವರ್ಗಗಳು. ಲಂಡನ್, ನ್ಯೂ-ಯಾರ್ಕ್‌ಗಳ ಹೊಲಿಗೆಯ ಶಿಕ್ಷಣ ಸಂಸ್ಥೆಗಳ ನೇರವಾದ ಸಂಬಂಧವನ್ನಿಟ್ಟುಕೊಂಡ ಈ ವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವದು ಒಂದು ಹೆಮ್ಮೆ. ಮಹಿಳೆಯರಿಗಾಗಿ ಕೈ-ಕಸೂತಿ, ಯಂತ್ರದ ಕಸೂತಿಗಳನ್ನು ಅತ್ಯಾಧುನಿಕ ಸಾಧನಗಳ ಸಹಾಯದಿಂದ ಕಲಿಸುವ ಏರ್ಪಾಡು ಇದೆ. ಶಿಕ್ಷಕರಾಗ ಬಯಸುವವರಿಗೆ ಶಿಕ್ಷಕಕೋರ್ಸು ಇದೇ ವರ್ಷದಿಂದ ಪ್ರಾರಂಭಿಸಿದೆ. ವಿಶೇಷ ವಿವರಗಳಗಳಿಗೆ ಎರಡಾಣೆ ಅಂಚೆ ಟಿಕೀಟು ಇಟ್ಟು ಇಂದೇ ಬರೆಯಿರಿ, ಇಲ್ಲವೆ ಪ್ರತ್ಯಕ್ಷ ಭೆಟ್ಟಿಯಾಗಿರಿ.

ಹೊಲಿಗೆಯ ವಿಷಯದ ಬೇರೆ ಬೇರೆ ಭಾಷೆಗಳ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ. ಇದೇ ವಿದ್ಯಾಲಯದ ಪ್ರಿನ್ಸಿಪಾಲರಿಂದ ಬರೆಯಲ್ಪಟ್ಟ 'ಸೂಚಿಶಿಲ್ಪಕಲೆ' ಎಂಬ ಪುಸ್ತಕ, ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾದದ್ದು ಇಲ್ಲಿಯೇ ದೊರೆಯುತ್ತದೆ.

ಹೀಗೆ ವ್ಯಾಖ್ಯೆಯನ್ನು ಹೇಳುವುದರಲ್ಲಿ ಅಲಂಕಾರವಿರುವುದರಿಂದ, ವ್ಯಾಖ್ಯೆ ಬರುಬರುತ್ತ ಬೆಳೆಯುತ್ತ ಹೋಗಿದ್ದುದು ಕಂಡುಬರುತ್ತದೆ.

ಕಾವ್ಯದ ವ್ಯಾಖ್ಯೆಯನ್ನು ನಾವು ನೋಡುತ್ತ ಹೋದರೆ, ನಮಗೆ ಅಲ್ಲಿ ಒಂದು ಬಗೆಯ ಐತಿಹಾಸಿಕ ಬೆಳವಣಿಗೆ ರೂಪುಗೊಂಡು ನಿಂತಿದೆ ಎನ್ನುವುದು ಕಂಡುಬರುತ್ತದೆ. ಎಲ್ಲಕ್ಕೂ ಮೊದಲಿನ—ಮೂಲ ವ್ಯಾಖ್ಯೆಯಲ್ಲಿ, ಸಾಹಿತ್ಯದಲ್ಲಿ ಶಬ್ದಾರ್ಥಕ್ಕಿರುವ ಸ್ಥಾನವೇ ಬಹು ಮುಖ್ಯವಾಗಿ ತೋರಿಬಂತು. ಇದಕ್ಕೆ ನಿದರ್ಶನವೆಂದರೆ ವೇದ. ಬರೆವಣಿಗೆಯ ಪ್ರಪಂಚದಲ್ಲಿ ಮೂಲಕೃತಿಯೆಂದರೆ ವೇದವೇ. ವೇದದ ನಂತರ ಹುಟ್ಟಿಬಂದುದು ಶಾಸ್ತ್ರ. ವೇದವು ಶಬ್ದಪ್ರಧಾನ; ಶಾಸ್ತ್ರವು ಅರ್ಥಪ್ರಧಾನ. ಒಂದಕ್ಕಿಂತ ಒಂದು ಹೆಚ್ಚಲ್ಲ. ಸಾಹಿತ್ಯದಲ್ಲಿ ಅವೆರಡಕ್ಕೂ ಸಮಸಮನಾದ ಪ್ರಾಧಾನ್ಯತೆ. ಶಾಸ್ತ್ರ ಹಾಗು ವೇದವನ್ನು ವಿಂಗಡಿಸಿ ಹೇಳಲು ಮಾಡಿದ ವ್ಯಾಖ್ಯೆ ಕಾವ್ಯದ ವೈಶಿಷ್ಟ್ಯವನ್ನು ಹೇಳಲು ಸಾಕೇ? ಇಲ್ಲ; ಅದೆಂದಿಗೂ ಇಲ್ಲ. ಅಂತೆಯೇ ಕಾವ್ಯದ ಆತ್ಮ ಒಂದಿದ್ದದ್ದು ನಾಲ್ಕು ಬಗೆಯಾಯಿತು. ಹೀಗೆ ನಾಲ್ಕ್ಮಗವನಾಂತಃ ನಾಲ್ಕು ನಿಟ್ಟಿಗೂ ದೃಷ್ಟಿತೂರಿ ನಿಂತಿತು ಕಾವ್ಯ. ಕಾವ್ಯವು ರೀತಿ, ಗುಣ, ಅಲಂಕಾರ, ರಸ ಹೀಗೆ ನಾಲ್ಕು ಮಾರ್ಗಗಳ ಮೂಲಕ ಬೆಳೆದು ಬಂದಿತು. ಒಂದೇ ವಿಚಾರವನ್ನು ಇಬ್ಬರು ಹೇಳಿದರೆ, ವಿಚಾರದಲ್ಲಿ ಇಬ್ಬಗೆ ಕಂಡುಬರದಿದ್ದರೂ ಅವರು ಹೇಳುವ ರೀತಿಯಲ್ಲಿ ವೈವಿಧ್ಯ ಕಂಡುಬರುತ್ತದೆ. ಅವರಲ್ಲಿ ಯಾರದು ಸರಸ, ಯಾರದು ವಿರಸ—ಎಂದು ಹೇಳಬೇಕಾದರೆ, ಅವರವರು ಹೇಳಿದ ರೀತಿಯೇ ಅದನ್ನು ವಿಂಗಡಿಸಿ ತೋರಿಸುತ್ತದೆ. ಇದರಿಂದ 'ರೀತಿರಾತ್ಮಾ ಕಾವ್ಯಸ್ಯ' ಎಂಬ ವ್ಯಾಖ್ಯೆಯು ಹುಟ್ಟಿಕೊಂಡಿತು. ದೃಷ್ಟಾಂತಕ್ಕೆ ಬಾಣದ ಘನವಂತಿಕೆಯನ್ನು ಎತ್ತಿಹೇಳುವಲ್ಲಿ ಬೇರೆ ಬೇರೆ ಕವಿಗಳು ಬೇರೆ ಬೇರೆ ರೀತಿಯಿಂದ ಹೇಳಿ, ತಮತಮಗೆ ಒಂದು ಪ್ರತ್ಯೇಕವಾದ ಶೈಲಿಯೇ ಇದೆ ಎಂಬುದನ್ನು ಸಿದ್ಧಮಾಡಿ ಕೊಟ್ಟಿದ್ದಾರೆ ನಮ್ಮ ಕನ್ನಡ ಕವಿಪುಂಗವರು. "ಕರ್ಣಾಟಕ ಭಾರತ"ದಲ್ಲಿ ಕಂಡು-ಬರುವ ಕುಮಾರವ್ಯಾಸನ ಶೈಲಿ ಒಂದು ಬಗೆಯಾಗಿದ್ದರೆ 'ಗದಾಯುದ್ಧ'ದಲ್ಲಿ ಗುಡುಗಿಟ್ಟ ರನ್ನನ ಶೈಲಿ ಮಗುದೊಂದು ಬಗೆ-ಯಾಗಿದೆ. ಅದೇ ವಿಚಾರವನ್ನು ನಿರೂಪಿಸುವ 'ಶಬರಶಂಕರ ವಿಲಾಸ'ದಲ್ಲಿಯ ಷಡಕ್ಷರಿಯ 'ವಿದ್ವದಾಟೋಪ'ದ ಶೈಲಿಯು ಮತ್ತೊಂದು ವಿಧವಾಗಿದೆ. ಅಸ್ತ್ರದ ಮಹತ್ತರತೆಯನ್ನು ಕುಮಾರ ವ್ಯಾಸನು :

> " ಒಂದು ದಶ ಶತ ಸಾವಿರದ ಹೆಸ-
> ರಿಂದ ಲಕ್ಷವು ಕೋಟಿಯಗಣಿತ—
> ದಿಂದ ನಿನಗಾಂತಧಟ ರಿಪುಗಳ ತಿಂದು ತೇಗುವುದು "

ಎಂಬುದಾಗಿ ಹೇಳಿದರೆ, ರನ್ನನು :

> " ದೊಣೆಯಿಂದಂ ತೆಗೆವಾಗಳೊಂದು ತುಡುವಾಗಳ್
> ಪತ್ತು ಬಾಣಂ ಧನುರ್-
> ಗುಣದಿಂದಂ ಬಿಡುವಲ್ಲಿ ನೂಱು ಪರಿವಾಗಳ್ ಸಾಸಿರಂ
> ವೈರಿಮಾ—
> ರ್ಗಣಮಂ ಭೇದಿಸುವಲ್ಲಿ ಲಕ್ಷ ನೆಡುವಾಗಳ್ ಕೋಟಿ
> ಸೇನಾಂಗದೊಳ್
> ಗಣನಾತೀತಮಿದೆಂದೊಡೇವೊಗಟ್ವುದೋ ಬಿಲ್.
> ಬಲ್ಮೆಯಂ ಪಾರ್ಥನಾ "

ಎಂದು ಅಸ್ತ್ರದ ಪ್ರಭಾವವನ್ನು ಹೇಳಿದ್ದಾನೆ. ಇದೇ ಅಸ್ತ್ರದ ಪ್ರಭಾವವನ್ನು ಷಡಕ್ಷರಿಯೂ ತನ್ನ ಕಾವ್ಯದಲ್ಲಿ :

> " ಮೊದಲೊಳೆದೊಂದು ಪತ್ತು ತುಡುವಲ್ಲಿ ಶತಂ
> ಬಿಡುವಲ್ಲಿ ಸಾಸಿರಂ
> ಪದವಿಡುವಲ್ಲಿ ವೈರಿಶರಸಂಹತಿಯಂ ತಱವಲ್ಲಿ
> ಲಕ್ಷಮು—
> ಗ್ಗದ ಗತಿಯಲ್ಲಿ ಕೋಟಿ ಸಮರಾಂಕಣದೊಳ್
> ಗಣನಾವಿಹೀನಮ—
> ಪ್ಪುದು ರಿಪುವೃಂದಮಂ ತವಿಸಿ ನಿನ್ನೆಡೆಗೆಯ್ದುಗುಮಿ-
> ಮಹಾಶರಂ "

ಎಂದು ಚಿತ್ರಿಸಿದ್ದಾನೆ. ಹೀಗೆ ಉತ್ತರೋತ್ತರವಾಗಿ ಪ್ರಗತಿಯನ್ನು ಪಡೆಯುತ್ತ ಹೋಗುವ ಶರವನ್ನು ವರ್ಣಿಸುವಲ್ಲಿ ಶೈಲಿಯ ವಿವಿಧ

ರೀತಿಯನ್ನು ಕಾಣಬಹುದು. ಕಾವ್ಯದಲ್ಲಿ ಸರಸ-ವಿರಸ-ನೀರಸ-ಗಳನ್ನು ನೋಡಬೇಕಾದರೆ ರೀತಿಬೇಕು, ಶೈಲಿಬೇಕು. ಮಾತು-ಭಾವಗಳು ಹದಗೂಡಿ ಬಂದಾಗಲೇ ಕಾವ್ಯ. ಎಂದರೆ ಭಾವಕ್ಕೂ, ಅರ್ಥಕ್ಕೂ ಸರಿಯಾಗಿ ಶಬ್ದಬಂದಿದೆಯೇ, ಗುಣಬಂದಿದೆಯೇ ಎಂಬುದನ್ನು ನೋಡಬೇಕು. ಇದನ್ನೇ ಕೆಲವರು 'ರೀತಿ' ಎಂದು ತಿಳಿದರು. 'ರೀತಿ' ಗೌಣವಾಗಿದ್ದಾಗ ಸಮಾಸದ ಬಾಹುಳ್ಯ ಕಂಡುಬರುತ್ತದೆ. ರೀತಿಯೇ ಕಾವ್ಯದಲ್ಲಿರಬೇಕಾದ ಅತಿಮಹತ್ತ್ವದ ಲಕ್ಷಣವೇನೂ ಅಲ್ಲ. ಹೀಗಾಗಿ ಕಾವ್ಯದಲ್ಲಿ ವೈದರ್ಭಿ, ಗೌಡೀ ರೀತಿಗಳು ತಲೆಯೆತ್ತಿದುವು. ಆಗ 'ರೀತಿ'ಯು ಗೌಣಸ್ವರೂಪ-ವಾಯಿತು. "ರೀತಿರಾತ್ಮಾ ಕಾವ್ಯಸ್ಯ" ಎಂಬ ಮಾತಿಗೆ ಅಷ್ಟು ಪ್ರಾಮುಖ್ಯತೆ ಬರಲಿಲ್ಲ.

ವಿಧವಿಧವಾದ ಶೈಲಿ-ರೀತಿಗಳು ಮನಹಿಡಿಯುತ್ತಿರುವಾಗ, ಯಾವುದರ ಪ್ರಭಾವ ಎದ್ದು ತೋರುತ್ತದೆ—ಎಂಬುದನ್ನು, ಆ ಮೇಲಿ ಲಾಕ್ಷಣಿಕರು ಅಲಂಕಾರದ ಮೇಲಿಂದ ವಿಚಾರಿಸತೊಡಗಿದರು. ಯಾವುದರಲ್ಲಿ ಅಲಂಕಾರ ಹೆಚ್ಚು ತೋರಿಬರುತ್ತದೆ ಎಂಬುವನ್ನು ನೋಡಿ, ಅದರ ಮೇಲೆ ಕಾವ್ಯದ ವ್ಯಾಖ್ಯೆಯನ್ನು ನಿರೂಪಿಸತೊಡ-ಗಿದರು. ಆಗ ಕಾವ್ಯದಲ್ಲಿ ಅಲಂಕಾರದ ಬಾಹುಳ್ಯವಾಯಿತು. ಅಲಂಕಾರದ ಅರ್ಥ ಇಲ್ಲಿ ಕಾವ್ಯದ ಸೌಂದರ್ಯ ಪ್ರಕಟಪಡಿಸು-ವುದೇ ಹೊರತು ಸುಮ್ಮನೇ ಅಲ್ಲಿ ಕಾವ್ಯದುದ್ದಕ್ಕೂ ತುಂಬಿ-ಕೊಂಡುಬರುವುದೆಂದಲ್ಲ. ಈ ಅರ್ಥದಲ್ಲಿಯೇ ಮೊದಲು ಭರತನು ನಾಲ್ಕೇ ಅಲಂಕಾರಗಳೆಂದು ಹೇಳಿದನು. ಅವನ ದೃಷ್ಟಿಯಲ್ಲಿ ಅಂತೆಯೇ "ಉಪಮಾ ದೀಪಕಂ ಚೈವ ರೂಪಕಂ ಯಮಕಂ ತಥಾ" ಎಂದು ನಾಲ್ಕೇ ಬಗೆಯಾಗಿ ಅಲಂಕಾರಗಳು ತೋರಿ-ಬಂದುವು. ಆದರೆ ಅವೇ ನೃಪತುಂಗನ ಕಾಲಕ್ಕೆ ನಾಲ್ಕಿದ್ದದ್ದು ಮೂವತ್ತಾರಾದುವು. ಮುಂದೆ ತಿರುಮಲಾರ್ಯನ ಕಾಲಕ್ಕೋ ಅಲಂಕಾರದ ಸಂಖ್ಯೆಯು ೧೨೦ ಕ್ಕೆ ಬಂದಿತು. ಹೀಗಾದಾಗ ಕಾವ್ಯದಲ್ಲಿ ಅಲಂಕಾರದ ಗೌಣತೆ ಹಾಗು ಪ್ರಾಧಾನ್ಯತೆಗೆ ಮಹತ್ತ್ವಬಂತು.

ಕಾವ್ಯದಲ್ಲಿ ಅಲಂಕಾರದ ಗೌಣತೆ ಹಾಗೂ ಪ್ರಾಧಾನ್ಯತೆಗೆ ಪ್ರಾಮುಖ್ಯ ಬಂದಾಗ, ಉಚಿತ ಅಲಂಕಾರಗಳು ಉಚಿತ ಗುಣ-ಗಳಿಂದ ಕೂಡಿದ ರೀತಿ— ಔಚಿತ್ಯದಲ್ಲಿ ಒಂದು ಬಗೆಯ ಧ್ವನಿ ಹೊರಡತೊಡಗಿತು. ಹೀಗೆ ಕಾವ್ಯದಲ್ಲಿ ಧ್ವನಿಯೊಂದು ಧ್ವನಿಗುಡು-ತ್ತಿರುವಾಗ, ಜನರ ಚಿತ್ತವು ಧ್ವನಿಯ ಮೂಲಕವಾಗಿ ಭಾವ ಹಾಗೂ ರಸಗಳ ಕಡೆಗೆ ಹರಿಯಹತ್ತಿತು. ಈ ಮೊದಲೇ ನಾಟಕಪ್ರಪಂಚದಲ್ಲಿಯಂತೂ ಇದು ಇದ್ದೇ ಇತ್ತು. ಆದರೆ ಅಲ್ಲಿ ರಸವು ಇಡೀ ಕೃತಿಯ ಗುಣವಾಗಿ ನಿಂತಿತ್ತು; ಆದರೆ ಲಾಕ್ಷಣಿಕವಾಗಿ ಆ ಗುಣವನ್ನು ಒಂದೊಂದು ಪದ್ಯಕ್ಕೂ ಹಚ್ಚುವ ರೀತಿ ಕಾವ್ಯಸೃಷ್ಟಿಯಲ್ಲಿ ಮಾತ್ರ ಹುಟ್ಟಿತು. ಅಂತೆಯೇ ರಸದಿಂದ ಭಾವಧ್ವನಿಗೆ ಪ್ರಾಧಾನ್ಯತೆ ಬಂದು "ಕಾವ್ಯ-ಸ್ಯಾತ್ಮಾಧ್ವನಿಃ" ಎಂಬ ಮಾತು ವ್ಯಾಖ್ಯೆಯಾಗಿ ನಿಂತಿತು. ಒಂದು ವಾಕ್ಯವೇಕೆ— ಒಂದು ಶಬ್ದವೇಕೆ, ಅದು ಉಚಿತ ಧ್ವನಿಯುಕ್ತ ವಾಗಿದ್ದರೆ ಅದೂ ಕಾವ್ಯವಾಗುತ್ತದೆ ಎನ್ನುವ ರಸಿಕ ವಿಮರ್ಶಕರೂ ಹುಟ್ಟಿದರು. ಆದರೆ ಇದನ್ನೆಲ್ಲ ಒಟ್ಟುಗೂಡಿಸಿ ನೋಡಿದ್ದಾದರೆ, ರಸವತ್ತಾದ ಕಾವ್ಯವಿಭಾಗದ ಅಂಗವಾಗಿ ಸರಿಯಾದ ರೀತಿಯು, ಸಮೀಚೀನವಾದ ಗುಣಗಳ, ಉಚಿತವಾದ ಅಲಂಕಾರಗಳ, ದೋಷಗಳಿಲ್ಲದ ಸಗುಣವಾದ ಪದ್ಧತಿಗೆ ತಕ್ಕ ಸ್ಥಾನಮಾನ ದೊರೆಯಿತು. ಹೀಗಾಗಿ 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬ ಮಾತೇ ಕಾವ್ಯದ ವ್ಯಾಖ್ಯೆಯಾಗಿ ನಿಂತಿತು. ಅಲ್ಲದೆ ಜಗನ್ನಾಥನೂ ಕಾವ್ಯವೆಂದರೆ "ರಮಣೀಯಾರ್ಥ ಪ್ರತಿಪಾದಕಃ ಶಬ್ದಃ" ಎಂದು ಹೇಳಿ, ಶಬ್ದ ಪ್ರತಿಪಾದಿಸುವ ರಮಣೀಯಾರ್ಥದ ಕಡೆಗೆ ಜನರ ಚಿತ್ತವನ್ನು ಸೆಳೆದನು.

ಕುಟುಂಬ
ದೊಳಗಿನ
ಚಿಲ್ಲರೆ ಬೇನೆ


ನರಜನ್ಮ ಪರತಂತ್ರ

★

ಶ್ರೀ. ಎಚ್. ಜೆ. ಉಪಾಧ್ಯಾಯ ಎಂ.ಎ. ಹೈದರಾಬಾದ್

ತಾಯ ಬಸಿರನು ತೊರೆದು ಮಾನವನು ಮೈದಳೆದು
ಅಳಿಯುವನು ಮೈಮನದ ಸ್ವಾತಂತ್ರ್ಯವನ್ನು ;
ಜೀವಿಯಾದಂದಿನಿಂ ಆಯು ತೀರುವವರೆಗು
ಆಶ್ರಯಿಸಿ ಬಾಳ್ವನು ಪರತಂತ್ರವನ್ನು ! ೧

ಶಿಶುವಿರಲು ತಾಯಾಗಿ ಮನವೊಸೆದು ಮೊಲೆಯೀಯೆ
ಹಸುಗೂಸು ಹಾಲುಂಡು ನಲಿಯಬಹುದು ;
ಬಸವಳಿದ ಬೇನೆಯಲಿ ಮಾತೆ ಮನಗೊಡದಿರಲು
ಹಸುಳೆ ಕಸಿವಿಸಿಗೊಂಡು ನರಳಲಿಹುದು. ೨

ಬಾಲ್ಯದಲಿ ಬಂಧುಜನರೊಲಿದು ವಿದ್ಯೆಯ ಕಲಿಸೆ
ದುಡಿದು ಧನವನು ಪಡೆದು ಸುಖಿಸಬಹುದು ;
ಇಲ್ಲದಿರೆ ಹತಮನುಜ ಹೊಟ್ಟೆಹೊರೆವುದಕಾಗಿ
ಅನ್ಯರಧೀನದಲಿ ತೊಳಲಬಹುದು. ೩

ವಿಶ್ವವಿದ್ಯಾಲಯದಿ ಸ್ವಚ್ಛಮನದೋಜರಿರೆ
ಉಚ್ಚಶಿಕ್ಷಣ ಪಡೆದು ನಲಿಯಬಹುದು ;
ಹೆಚ್ಚು ಓದಿದರೇನು ಮೆಚ್ಚದಿಹ ಓಜನಲಿ
ಇಚ್ಛಿಸಿದ ಪ್ರತಿಫಲವು ಸಿಕ್ಕದಿಹುದು. ೪

ಪದವಿ ಪಡೆದವನೆಂದು ಅಧಿಕಾರ ನಡೆಸುವರು
ನ್ಯಾಯಗೈದರೆ ಯೋಗ್ಯ ಪದವು ಬಹುದು ;
ಹಿರಿಯ ಅಧಿಕಾರಿಗಳ ಒಲುಮೆಯಿಲ್ಲದೆಯಿರಲು
ಕರೆದು ಗೀಜುವ ಹುದ್ದೆ ತಪ್ಪದಿಹುದು. ೫

ಪ್ರಾಯದಲಿ ಕೈಹಿಡಿದ ಜೀವನದ ಜೊತೆಗಾತಿ
ನೇಹ-ಒಲುಮೆಯ ಬೀರೆ ಸುಖಿಸಬಹುದು.
ಅನುರಾಗವರಿಯದಿಹ ಸತಿ-ಸುತರ ಸಂಗದಲಿ
ಜೀವನವೆ ರಣರಂಗವಾಗಲಿಹುದು. ೬

ಇಂತು ಮನುಜನ ಬಾಳು ಪರತಂತ್ರಪಾಶದಲಿ
ಸಿಲುಕಿ ಪಡುತಿದೆ ಬನ್ನ ಬವಣೆಯನ್ನು ;
ಸ್ವಶ್ರಮದಿ ಸಾಧಿಸದ ನರನ ಗೈಮೆಗಳಿಲ್ಲ
ಆಶ್ರಯಿಸಿ ಬಾಳ್ವವು ಪರತಂತ್ರವನ್ನು. ೭

ನರಜನ್ಮ ಪರತಂತ್ರವಹುದೆಂದು ಕೊರಗುವುದೆ ?
ಮನದಿ ನಿಜ ಸ್ವಾತಂತ್ರ್ಯದರಿವು ಮೂಡಿರಲು,
ಪರರಿಚ್ಛೆಯಲಿ ನಡೆಸ ಬರದು ಬಾಳುವೆಯೆಂತು
ಸ್ವಾವಲಂಬನ ಸಿರಿಯು ನೆರವು ನೀಡಿರಲು. ೮

ಪರತಂತ್ರ ಪಾಶವನು ಹರಿದು ಹೋರಾಡುವುದೆ
ಪುರುಷಸಿಂಹನ ಮನದ ನಿಜದ ಗುರಿಯು.
ತೊರೆದು ಫಲದಾಶೆಯನು ಸತ್ಕರ್ಮಗಳನೆಸಗೆ
ಬೆಳಗುವುದು ಮೈಮನದ ಸ್ವಾತಂತ್ರ್ಯಸಿರಿಯು! ೯

ಮನದ ಕಣ್ಣೀರ ತೊರೆ !

★

ಶ್ರೀ. ಮುದೇನೂರ ಸಂಗಣ್ಣ ಚಿಟಗೇರಿ

ಮನದ ಕಣ್ಣೀರ ತೊರೆ ಹೃದಯದೊಡಲಿಂದುಕ್ಕಿ
ಹೊರಗೊಸರಿ ಹರಿದು ಹಿರಿದೊರೆಯಾಗಿ, ನೆರೆಯಾಗಿ,
ಕಟ್ಟಿರ್ದ ಸುಖದ ಮಹಲಂ ಮುಕ್ಕಿ, ತಾಂ ತೇಗಿ
ಅಮಿತ ಗತಿಯಿಂ ಸಾಗಿಹುದು ನಾಲ್ದೆಸೆಯ ತಿಕ್ಕಿ !

ಮುಚ್ಚಿದ್ದ ಮಿಗೆ ಹಿಗ್ಗಿ ಮುಂದಾಗಿ ಪಥಬಿಟ್ಟು,
ಆಳ-ಅಗಲದ ಮೀರಿ—ನೆಲ-ಮುಗಿಲ ಅಳೆವಂತೆ,
ಸಿಡಿಲ ಸುಡುಗಡಲಾಗಿ—ಕಡುಮುಳಿದ ಮೃಡನಂತೆ,
ಕುಣಿಯುತಿದೆ ಬಳ್ದೆರೆಯ ನಿಟ್ಟುಸಿರಿಗಸುಗೊಟ್ಟು !

ಬೆಂದು ನೊಂದೀ ಮನದ ಕರುಳ ಕಣ್ಣಿನ ನೀರು
ಗೂರ್ಮಿಸುತ ವಿಷನೊರೆಯನುಗುಳಿ ಬರುತಿಹುದನುವು
ಬಾಳ್ದವನಪ್ಪಳಿಸಿ ನುಗ್ಗುವೀ ಪ್ರಳಯ—ಯಮು !
ಹೊಲಬುಗೆಟ್ಟೊಳರುತಿದೆ—ಜೀವ ನೊರೆ ; ಕೃಪೆದೋರು
ಓ ದೇವ ! ಬೇಡುತಿದೆ—ದೀನತೆಯೆ ತಾನಾಗಿ :
“ ತಾಳ್ಮೆ ‘ತೊಟ್ಟಿಲ ಬಿಟ್ಟು ಕಾಪಾಡು ತೂಗಿ ! ”

ಕರ್ನಾಟಕದ ಕಾಲ್ಬಲವೊಂದು ಇತ್ತು!

ಲೇ. ಮೋದಿ ಹುಚ್ಚೀಶ್ವರ, ಹುಬ್ಬಳ್ಳಿ

★

ಕರ್ನಾಟಕ ಬಲದ ಪರಾಕ್ರಮದ ಇತಿಹಾಸ ಸಾವಿರಾರು ವರ್ಷದ ಚರಿತ್ರೆಯಲ್ಲಿ ನಡೆದುಕೊಂಡು ಬಂದಿದ್ದರೂ, ಆಧುನಿಕ ಭಾರತದ ಸೈನ್ಯಕ್ಷೇತ್ರದಲ್ಲಿ ಕರ್ನಾಟಕದ ಹೆಸರೇ ಕೇಳಬರುತ್ತಿಲ್ಲ. ಇದಕ್ಕಾಗಿ ಕನ್ನಡಿಗರ ಕರ್ತವ್ಯವೇನಾದರೂ ಇದೆಯೆ ?

★

ಮುಂಬೈ ಕರ್ನಾಟಕಕ್ಕೆ ಮುಂಬೈ ಸರಕಾರವು ಮಲತಾಯ ೀಮ ತೋರುವಂತೆ, ಹಿಂದುಸ್ತಾನದ ಕೇಂದ್ರ ಸರಕಾರವು ಖಂಡ ಕರ್ನಾಟಕದ ವಿಷಯದಲ್ಲಿ ಮಲತಾಯಿ ಮಮತೆಯನ್ನು ೀರುತ್ತಲಿದೆಯೆಂದು ಅನೇಕ ಸಲ, ಹಲವಾರು ಸಂದರ್ಭಗಳಲ್ಲಿ ಿತವಾಗಿದೆ. ಹೀಗೆಂದ ಮಾತ್ರಕ್ಕೆ ಜೀವನ-ಮರಣ ಹೋರಾಟ ೂಡಿದ ಕನ್ನಡಿಗರು ಸುಮ್ಮನೆ ಕೂಡಲಿಕ್ಕಾದೀತೇ ? ಪ್ರಸಂಗಾ-ಸಾರ, ಮಹತ್ತ್ವದ ಸಮಸ್ಯೆಗಳನ್ನು ಕೈಯಲ್ಲಿ ತೆಗೆದುಕೊಂಡು, ಾಯಕ ರೀತಿಯಿಂದ ಬಿಡಿಸಲು ಯತ್ನಿಸಬೇಕು.

ಪ್ರಕೃತದಲ್ಲಿ ೧೮ನೆಯ ಶತಮಾನದೊಳಗೆ, ಬ್ರಿಟಿಶರ ರಾಜ್ಯಾ-ಿತದಲ್ಲಿಯೇ '**ಕರ್ನಾಟಕ**'ದಲ್ಲಿ '**ಕಾಲ್ದಳ**'ವೊಂದಿತ್ತೆಂಬ ತಿಹಾಸಿಕ ಆಧಾರ ದೊರೆತಿದೆ. ಅದು ೨೦ನೆಯ ಶತಮಾನದ ್ರಾರಂಭದ ವರೆಗೆ ಅಸ್ತಿತ್ವದಲ್ಲಿತ್ತೆಂಬುದು ಗಮನಾರ್ಹವಾದ ಷಯ.

ತ್ರಿಚನಾಪಳ್ಳಿಯಲ್ಲಿ ಕ್ಯಾಪ್ಟನ್ ಡಿ. ಮೂರ್‌ಹೆಡ್ ಎಂಬವರ ೇನಾಧಿಪತ್ಯದ ಕೆಳಗೆ, ೨೦ನೆಯ ಕರ್ನಾಟಕ ಬ್ಯಾಟಾಲಿಯನ್ 20th Carnatic Battalion) ಎಂಬ ಹೆಸರಿನಿಂದ ೧೭೭೯ರಲ್ಲಿ ್ಥಾಪಿತವಾಗಿ **ಸಿಲೋನದ ಗಲಭೆ, ಬರ್ಮಾಯುದ್ಧ**, ಮರಾಠಾ ುದ್ಧಗಳಲ್ಲಿ ಪ್ರತ್ಯಕ್ಷ ಭಾಗವಹಿಸಿ, ಶೌರ್ಯದಿಂದ ಕಾದಾಡಿ-ಲ್ಲದೆ, ಅನೇಕ ಸಂದರ್ಭಗಳಲ್ಲಿ ತೋರಿದ ಶೌರ್ಯೋತ್ಸಾಹಕ್ಕೆ ್ರತಿಫಲವೆಂದು, ಅನೇಕ ಪಾರಿತೋಷಕಗಳನ್ನೂ ಪಡೆದಿದೆ. ಆದರೆ ೧೯೦೯ ರಲ್ಲಿ, ಆದಾವ ಕಾರಣದಿಂದಲೋ ಆ ದಳವನ್ನು ವಿಸರ್ಜಿಸಿ ಟ್ಟರು ! ಆಗ ಅದರ ಕೊನೆಯ ಸೇನಾಧಿಪತಿಯು ಇಡೀ ಕಾಲ್ದಳ'ದ ಚಿಕ್ಕ ಇತಿಹಾಸವನ್ನು ಬರೆದಿಟ್ಟದ್ದು, ಅದರ ೂಲ ಪ್ರತಿಯನ್ನು ನನ್ನ ಮಿತ್ರರಾದ, ಲೆಫ್ಟನಂಟ್ ಕರ್ನಲ್ ಸ್. ಎಸ್. ಕಣಬರ್ಗಿಮಠರು ಸಂಪಾದಿಸಿಕೊಂಡುಬಂದು, ನ್ನ ದೃಷ್ಟಿಗೆ ಹಾಕಿದರು. ಅದರ ಭಾಷಾಂತರವನ್ನು ಇಲ್ಲಿ ುದ್ಧರಿಸಲಾಗಿದೆ.

೭೯ನೆಯ ಕರ್ನಾಟಕದ ಕಾಲ್ದಳದ ಚಿಕ್ಕ ಇತಿಹಾಸ
(Short History of 79 th Karnatak Infantry)

೧೭೭೯ : ೧, ೩, ೮ ಮತ್ತು ೧೬ ನೆಯ ಕಾಲ್ಬಲ (Battalio n ದಿಂದ ತ್ರಿಚನಾಪಳ್ಳಿಯಲ್ಲಿ ಸ್ಥಾಪಿಸಿದ ಈ ದಳವನ್ನು (Regimen t ಕ್ಯಾ. ಡಿ. ಮೂರಹೆಡ್ ಅವರ ಸೇನಾಧಿಪತ್ಯದಲ್ಲಿ ಇರಿಸಲಾಯಿತು. ಅದಕ್ಕೆ ಮೂರಹೆಡ್ ಕಾಲ್ಬಲವೆಂದೂ ಇನ್ನೊಂದು ಹೆಸರಿತ್ತು.

೧೭೮೪ : ೨೦ನೆಯ ಮದ್ರಾಸ ಕಾಲ್ಬಲವೆಂದು ಹೆಸರಾಯಿತು.

೧೭೯೬ : ೨ನೆಯ ಬ್ಯಾಟಾಲಿಯನಿನ ೭ನೆಯ ರೆಜಿಮೆಂಟ್ ಎಂದು ಮದ್ರಾಸ ದೇಶಸ್ಥರ (Native) ಕಾಲ್ಬಲವಾಯಿತು.

೧೮೨೪ : ೧೯ನೆಯ ರೆಜಿಮೆಂಟ್ ಎಂದು ಮದ್ರಾಸ ದೇಶಸ್ಥರ ಕಾಲ್ಬಲವಾಯಿತು.

೧೮೮೫ : ಮದ್ರಾಸ ಕಾಲ್ಬಲದ ೧೯ನೆಯ ಬ್ಯಾಟಾಲಿಯನ್ ಆಯಿತು.

೧೯೦೩ : ೭೯ನೆಯ ಕರ್ನಾಟಕದ ಕಾಲ್ಬಲವೆಂದಾಯಿತು.

ಹೀಗೆ ಕಾಲಾನುಕ್ರಮದಲ್ಲಿ ಬೇರೆ ಬೇರೆ ಹೆಸರುಗಳನ್ನು ತಳೆದ ಈ ಕಾಲ್ಬಲದ ಸೈನಿಕರ ವೇಷ-ಭೂಷಣಗಳು ಮತ್ತು ಉತ್ಸಾಹದ ವಿಷಯಗಳನ್ನು ಸ್ವಲ್ಪ ಪರಿಶೀಲಿಸೋಣ:

೧೮೪೬ : ಈ ರೆಜಿಮೆಂಟಿನ ಪೀತು (Facing) ತಿಳಿಬೂದು (French grey) ಬಣ್ಣದಿಂದ ಮುಗಿಲಬಣ್ಣ (ನೀಲಿ)ಕ್ಕೆ ಮಾರ್ಪಡಿಸಲಾಯಿತು.

೧೮೫೨ : 'Percursion' ಶಸ್ತ್ರ ಹಾಗೂ ಹೊಸ ಕಾಡ ತೂಸಿನ ಬೆಲ್ಟುಗಳನ್ನು ಕೊಡಲಾಯಿತು.

೧೮೫೬ : ೧೮೫೨-೫೩ ರಲ್ಲಾದ ಬರ್ಮಾಯುದ್ಧದ (ತೋರಿಸಿದ ಶೌರ್ಯಕ್ಕಾಗಿ) ಮೆಡಲುಗಳನ್ನು ಇತ್ತರು.

೧೮೬೧ : ಕಾಲ್ಬಲದ ಸೈನಿಕರಿಗೆಲ್ಲ ಎನ್‌ಫೀಲ್ಡ್ (Enfield) ರೈಫಲುಗಳೆಂಬ ಉದ್ದವಾದ ತುಬಾಕಿಗಳನ್ನು ಕೊಟ್ಟರು.

೧೮೭೪ : ಬಂದೂಕಿನ ಬಾಯಿಗೆ ತುಂಬುವ ಕೆಲ ವಸ್ತುವನ್ನು ಕೊಟ್ಟರು. (Muzzle loaders.)

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ನೂತನ ಕಳೆಯಿಂದ ಹೊರಟ ಈ ಮಾಲೆಯ ಎರಡನೆಯ ಪುಸ್ತಕ 'ಹೂ ಅರಳಿತು' (ಪ್ರಸಿದ್ಧ ತೆಲುಗು ಲೇಖಕರ ಕಥಾ ಸಂಕಲನ) ಈಗ ಮಾರಾಟಕ್ಕೆ ತಯಾರಾಗಿದೆ. ಮಾರಾಟಗಾರರಿಗೆ ವಿಶೇಷ ಸವಲತ್ತು ಇವೆ. ವಿವರಗಳಿಗೆ ಬೇಗ ಬರೆಯಿರಿ.

ಮಾಲೆಯ ಪುಸ್ತಕಗಳು :

ಅರ್ಪಣ (ಮೋಪಾಸಾನ ಕಥಾ ಸಂಕಲನ) ರೂ. ೧—೮—೦
ಹೂ ಅರಳಿತು (ತೆಲುಗು ಕಥೆಗಳ ಸಂಗ್ರಹ) ,, ೨—೪—೦
ವರುಷದಲ್ಲಿ ನಾಲ್ಕು ಪುಸ್ತಕಗಳಿಗೆ ಚಂದಾ ಹಣ ,, ೫—೪—೦

ಆನಂದ ಗ್ರಂಥಮಾಲಾ ಹುಬ್ಬಳ್ಳಿ } ಪಿ. ವೆಂಕೋಬಾಚಾರ್ಯ ಸಂಪಾದಕರು.

೧೮೭೭ : ರೆಜಿಮೆಂಟಿಗೆ ಮೊದಲ ಸಲ ಉಣ್ಣೆಯ ಅಂಗಿಗಳನ್ನು ಕೊಟ್ಟರು. ಸಿಂಡರ್ ರೈಫಲುಗಳನ್ನು ಕೊಟ್ಟರು. (ಜೂನ್ ೬.)

೧೮೭೮ : ಉಣ್ಣೆಯ ಫ್ರಾಕುಗಳನ್ನು ಕೊಟ್ಟರು (ಎಪ್ರಿಲ್ ೨).

೧೮೮೨ : ೭೨೦ ಸೈನಿಕರನ್ನು ಹೆಚ್ಚಿಗೆ ತೆಗೆದುಕೊಂಡರು.

೧೮೮೩ : ಸಹಾನುಭೂತಿಯ ಪೀತುಗಳನ್ನು ಕೊಡಲಾಯಿತು. (೧ನೇ ಎಪ್ರಿಲ್ ಝೋನೇನ ಜಾಕೀಟು ಮತ್ತು ಒಳಅಂಗಿ ಕೊಟ್ಟರು (Knickers) ಹೊಸ ಖಾಕಿ ಉಡುಪು ಕೇವಲ ಚಣ್ಣಕ್ಕಷ್ಟೇ ನಿಂತಿತು.

೧೮೮೪ ಖಾಕಿ ಕುಲ್ಲಕ (Kullak) ಮತ್ತು ರುಮಾಲು-ಗಳನ್ನು ಕೊಡಲಾಯಿತು.

೧೮೮೬ : ಮೆಕಂಜಿ (Mackanzi) ಎಂಬ ಕೆಲ ಯುದ್ಧ-ವಸನಗಳನ್ನು ಕೊಟ್ಟರು.

೧೮೯೧ : ರೆಜಿಮೆಂಟಿಗೆ ಬರ್ಮಾದ ಮೆಡಲುಗಳನ್ನು ಕೊಟ್ಟರು.

೧೮೯೨ : ಅಲ್ಪಾವಧಿ ಹೇನ್ರಿ ರೈಫಲುಗಳನ್ನು ಕೊಟ್ಟರು,

೧೮೯೪ : ಹಿತ್ತಾಳಿ ಗುಂಡಿಗಳುಳ್ಳ, ಖಾಕಿ ಅಂಗಿಗಳನ್ನು ಸೈನಿಕರಿಗಿತ್ತರು. ಕಿಟ್ಟಿನ (Kitt) ಒಂದು ಉಪಕರಣವಾದ ನೀರು ಸೇರದ ವಸ್ತ್ರವೀಯುವುದನ್ನು ನಿಲ್ಲಿಸಿಬಿಟ್ಟರು.

೧೮೯೬ : ಜಾತೀಯ (Caste) ಕಂಪನಿಗಳನ್ನು ಪ್ರಾರಂಭಿ-ಸಿದರು. ಬಿಳಿಯ, ಕಾಲಿಗೆ ಕಟ್ಟುವ ವಸ್ತ್ರ (Gaiters) ಮತ್ತು ಉಡುಪನ್ನು ತೆಗೆದೊಗೆದರು.

೧೯೦೦ : ಎರಡು ಕಂಪನಿಗಳನ್ನು ರಚಿಸಿದರು.

೧೯೦೨ : ರೆಜಿಮೆಂಟಿಗೆ ಲೀ ಮೆಟ್‌ಫೋರ್ಡ್ ರೈಫಲುಗಳನ್ನು ಕೊಟ್ಟರು. ರೆಜಿಮೆಂಟಿನಲ್ಲಿ ವರ್ಗೀಕರಣ ಮಾಡಿದರು.

೧೯೦೩ : ೪ ಮದ್ರಾಸ ಮುಸಲ್ಮಾನರವೂ, ೨ ತಮಿಳರವೂ; ೨ ಪರೈಯ್ಯರು ಮತ್ತು ಕ್ರಿಶ್ಚಿಯನ್‌ರವ ಚಿಕ್ಕದಳ (Cog) ರಚಿಸಿದರು.

೧೯೦೫ : ಎಲ್ಲ ಅಧಿಕಾರಿಗಳನ್ನು ಸೇರಿ, ಸಿಬ್ಬಂದಿಯನ್ನು ೬೦೦ ಕ್ಕೆ ಇಳಿಸಿದರು. ಲೇಜರು (Lasers) ಕಡಿಮೆ ಮಾಡಿದರು. ಫಿಂಡಲುಗಳನ್ನು (Findals) ೪೦ ರಿಂದ ೪೬ ಕ್ಕೆ ಏರಿಸಿದರು.

೧೯೦೬ : ೧೯೦೩ ರಲ್ಲಿ ಕೊಟ್ಟಿದ್ದ **ಡಂಡೋಲಿಯರ್‌** (Dandoliers) ಕೊಟ್ಟರು.

೧೯೦೯ : ರಿಕ್ರೂಟ್ ಮತ್ತು (Prusion) **ಹುಡುಗರ** ಸಿಬ್ಬಂದಿಯನ್ನೆಲ್ಲ ತೆಗೆದು ಹಾಕಲಾಯಿತು.

ವಿವಿಧ ವಿಷಯಗಳು

೧೮೩೬, ೧೮೫೨, ೧೮೮೭ ಮತ್ತು ೧೯೦೫ **ರಲ್ಲಿ ಹೊಸ ಬಣ್ಣದ** ಪೀತಾಂಗ'ನ್ನು ಕೊಟ್ಟರು.

೧೮೬೪ ರಲ್ಲಿ ಮಚ್ಚಲೀಪಟ್ಟಣದ ಸುಂಟರಗಾಳಿಯಲ್ಲಿ ರೆಜಿ-ಮೆಂಟಿನ ೫೦ ಜನರು ನಿಧನ ಹೊಂದಿದರು. **ಆಗ ಆ ಪಟ್ಟಣ** ಮತ್ತು ಕ್ಯಾಂಟೋನ್‌ಮೆಂಟಿನಲ್ಲಿ ಸೇರಿ, ಒಟ್ಟು ೧೫ ಸಾವಿರ ಜನರು ಸತ್ತರು. ಇದರಲ್ಲಿ ಇತರ ಹಳ್ಳಿಯ ಜನರು ಸತ್ತ **ಸಂಖ್ಯೆ** ಸೇರಿಲ್ಲ. ಕೆಲವರಂತೂ ಗಾಳಿಗುಂಟ ಹೋದರು.

ರೆಜಿಮೆಂಟು, ಮೊದಲು ಮದ್ರಾಸದ ಸೈನ್ಯದಲ್ಲಿತ್ತು. ೧೮೯೮-೯೯ ರಲ್ಲಿ ಮಿನೊಡ್ ಫ್ರೈಕ್ಲಾರ್ಕರ ಚಾಲೇಂಜ್ ಶೀಲ್ಡನ್ನು ಗೆದ್ದಿತು.

೭೯ ನೆಯ ಕರ್ನಾಟಕದ ಕಾಲ್ಬಲವು ಸಲ್ಲಿಸಿದ ಸೇವೆಯ ಅಲ್ಪ ಪರಿಚಯ (Precis of corps Services 79th Karnatak Infantry.)

೧೭೭೮ : ಸರ್ ಹೆಕ್ಟರ್ **ಮನ್ರೋರ ನೇತೃತ್ವದಲ್ಲಿ ರೆಜಿಮೆಂಟು** ಪಾಂಡೀಚೇರಿಯನ್ನು **ಕೈವಶಪಡಿಸಿಕೊಳ್ಳುವಲ್ಲಿ** ಭಾಗ ವಹಿಸಿತು.

೧೭೭೯ : ಮೋಹಿಯನ್ನು ಮುತ್ತಿ ಅದನ್ನು **ಕೈವಶಪಡಿಸಿ**-ಕೊಂಡಿತು. ಸರಕಾರವು ಕಾಲ್ಬಲಕ್ಕೆ **ಕೃತಜ್ಞತೆ ಸಲ್ಲಿಸಿತು.**

೧೭೮೦ : ಹೈದರ್ ಮತ್ತು ನಾಯರರ ವಿರುದ್ಧ **ತಲ್ಲಿಚೇರಿಯ** ಸಂರಕ್ಷಣೆ ಮಾಡಿತು.

೧೭೮೧ : ಸರ್ ಎಸ್ ಕ್ವಾಯಂ **ಕೂಟರ** ನೇತೃತ್ವದಲ್ಲಿ ಜುಲೈ ೧ನೆಯ ದಿನಾಂಕ ಪೋರ್ಟೋನೋವೋ ಯುದ್ಧದಲ್ಲಿ ಭಾಗವಹಿಸಿತು. ೨೭ನೆಯ ಆಗಸ್ಟ್ ಪೊಲ್ಲಿಲೂರ ಯುದ್ಧದಲ್ಲಿ **ಭಾಗವಹಿಸಿತು.** ಸಪ್ಟಂಬರಿನಲ್ಲಿ ಶೋಲಿಂಗರ ಯುದ್ಧದಲ್ಲಿ ಭಾಗವಹಿಸಿದ್ದು ವಿಶೇಷ-ವಾಗಿ ತಿಳಿಸಲರ್ಹವಾಗಿದೆ.

೧೭೮೨ : ಆರ್ಣಿಯ ಯುದ್ಧ (ಜೂನ್ ೨.)

೧೭೮೩ : ಮೇಜರ್ ಜ. **ಜೇಮ್ಸ ಸ್ಟುಅರ್ಟರ ನೇತೃತ್ವದಲ್ಲಿ ಕಡ್ಡಲೂರ** ಯುದ್ಧದಲ್ಲಿ ಭಾಗವಹಿಸಿದ್ದು ವರದಿಯಲ್ಲಿ **ವಿಶೇಷ**-ವಾಗಿ ನಮೂದಿಸಲಾಗಿದೆ.

೧೭೯೦ : ಲೆ. ಕ. ಸ್ಟುಅರ್ಟರ ನೇತೃತ್ವದಲ್ಲಿ ೨೨ನೆಯ ಆಗಸ್ಟ-ರಂದು ದಂಡಿನಾಳವನ್ನು ಮುತ್ತಿತು.

೧೭೯೯ : ಜ. ಹ್ಯಾರಿಸ್‌ರ ನೇತೃತ್ವದಲ್ಲಿ **ಮೇ ತಿಂಗಳೊಳಗೆ ಶ್ರೀರಂಗಪಟ್ಟಣವನ್ನು ಮುತ್ತಿ ಕೈವಶಪಡಿಸಿಕೊಂಡುದು.**

೧೮೦೩ : ಬ್ರಿಗೇಡಿಯರ್ ಗ್ರೆಟ್ ವೆಲ್ಲಸ್ಲಿಯವರ ನೇತೃತ್ವದಲ್ಲಿ, **ಮರಾಠಾ ಕಾಳಗ**ದಲ್ಲಿ ಭಾಗವಹಿಸಿತು. ಜಾಲ್ನಾ (Joulna) ಕೈವಶಪಡಿಸಿಕೊಂಡಾಗ ಹಾಜರಿತ್ತು. ಸಿರಗೂರು ಮತ್ತು ಸರನೊಲ್ಲಾ ಯುದ್ಧದಲ್ಲಿ ಭಾಗವಹಿಸಿತು. **ಬುದ್ನಾಪೂರದ** ಹತ್ತಿರ ಐದುಸಾವಿರ **ಪೆಂಢಾರಿ**ಗಳನ್ನು ಹೊಡೆದೋಡಿಸಲು ನೆರವಾಯಿತು.

೧೮೦೩-೦೪ : ಗವಾಲಘರ **ಕೋಟೆ**ಯನ್ನು ಮುತ್ತುವುದರಲ್ಲಿ ವಿಶೇಷ ಶೌರ್ಯ ತೋರಿತು. ಬಹಳ ಜನ ನಾಶವಾದರೂ ಅದ್ಭುತ ತಾಳ್ಮೆಯಿಂದ ಎಚ್. ಎಚ್. **ನವಾಬಸಾಬ ಕರೀಮ** ಧನಮಸೇನ **ಗೌಸ** ರ ಸೈನಿಕರ ವಿರುದ್ಧ ಹೋರಾಡಿ, ಕಡೆಗೆ ಚೆದುರಿಸಿತು.

೧೮೦೫ : ಲಸಂಘುಸಾ ಕೋಟೆಯನ್ನು ಮುತ್ತುವುದರಲ್ಲಿ ಭಾಗವಹಿಸಿತು. ಮತ್ತು ಗುಡ್ಡಗಾಡಿನ ಕೋಟೆಯಾದ ಚಂದೂರನ್ನು ಮುತ್ತುವಾಗ ಭಾಗವಸಿಸಿತಲ್ಲದೆ, ಗೊಲ್ನಾಲಿಯನ್ನು ಕೈವಶಪಡಿಸಿಕೊಳ್ಳುವಾಗ ಹೋರಾಡಿತು.

೧೮೦೯ : ಹೋಳಕರನ ಸೈನ್ಯದ ಸೇನಾಪತಿ **ಮೀರಖಾನ**ರನ್ನು ಬೆನ್ನಟ್ಟಿದ ಕ. **ಕ್ಲೋಜರ**ರ ಅಧೀನದಲ್ಲಿದ್ದು ಕೆಲಸಮಾಡಿತು.

೧೮೧೮ : ದಳದ (Regiment) ಒಂದು ಭಾಗವು (Wing) **ಸಿಲೋನದ ಬಂಡಾಯ**ದಲ್ಲಿ ತನ್ನ ಅನುಪಮ ಸೇವೆ ಸಲ್ಲಿಸಿತು. ಅದರಲ್ಲಿಯೂ ವಿಶೇಷವಾಗಿ ಕ್ಯಾಂಡಿ (Kandy)ಯ ಹತ್ತಿರ ಕೈಗೆ ಕೈ ಹತ್ತಿದಾಗ, ಕಲಿತನದಿಂದ ಕಾದಿತು.

೧೮೨೪ : ಚಿತ್ತೂರಿನ ಮೇಲೆ ದಂಡೆತ್ತಿ ಹೋದಾಗ ಪಕ್ಕದ (Flank) ಸೈನ್ಯಬಲವೆಂದು ಕಳಿಸಲಾಯಿತು. ಆದರೆ ಕಾಳಗದಲ್ಲಿ ಭಾಗವಹಿಸಲು ಬಹಳ ತಡವಾಯಿತು.

೧೮೨೯ : ಟವಾಯದ ಬಳಿಯಲ್ಲಿ **ಬರ್ಮಾ ಬಂಡಾಯ**, ಟೆನ್ನಾಸ, ಸಿರಿಜಂ ಪ್ರಾಂತಗಳಲ್ಲಿ ಬಂಡಾಯವನ್ನು ಸದೆಬಡಿಯಲು ಶಕ್ತವಾಯಿತು. **ನಾಶಿಕ** ಮೂಸೆಯನ್ನು ಜಮಾದಾರನನ್ನಾಗಿಯೂ, **ಮದಾರಸಾಹೇಬ, ಚಿಮ್ಮರಂಗಯ್ಯ, ಅಳ್ಳಂಡಿ,** ಮತ್ತು **ಶೇಖ ಟೀಪು** ಅವರನ್ನು ಹವಾಲದಾರರೆಂದೂ ನಿಯಮಿಸಿತು. ೧೮೩೦ ಫೆಬ್ರುವರಿ ೨೬ನೆಯ ದಿನಾಂಕ, ಗವ್ಹರ್ನರರ ದರ್ಬಾರದಲ್ಲಿ ಈ ಶ್ರೇಯದ ಬಗ್ಗೆ ಸರಕಾರವು ತನ್ನ ಕೃತಜ್ಞತೆಯನ್ನು ತೋರಿಸುವ ಹುಕುಂ ಹೊರಡಿಸಿತು.

೧೮೩೪ : ಕೊಡಗಿಗೆ ರೆಜಿಮೆಂಟು ಶೀಘ್ರ ಹೋಗಲು ಹುಕುಮು ವಿಧಿಸಲಾಯಿತು. ಆದರೆ ಕಾಳಗದಲ್ಲಿ ಭಾಗವಹಿಸಲು ಬಹಳ ತಡವಾಗಿ ಹೋಯಿತು.

೧೮೩೭ : ಕೊಡಗು ಮತ್ತು ಮಂಗಳೂರು ಜಿಲ್ಹೆಯಲ್ಲಿ ನಡೆದ ಬಂಡಾಯವನ್ನು ಹತ್ತಿಕ್ಕಲು ಸಹಾಯಾರ್ಥವಾಗಿ ಮರ್ಕಸಾ (Mercassa) ಕ್ಕೆ ರೆಜಿಮೆಂಟು ಹೋಯಿತು.

೧೮೪೩ : ಕಾಲೀಕತ್ತದ ಹತ್ತಿರ ಓಗಾದಿ ಜೆನುಲಾನ ಎಂಬಲ್ಲಿ ಬಂಡೆದ್ದ **ಮಾಪಿಳ್ಳೆ**ಯವರನ್ನು ಹಿಡಿದು ತರಲು, ೨ ಪ ಕ್ಷ ಸೈನ್ಯದ ಚಿಕ್ಕದಳ ಕಳಿಸಿತು.

'ಬಗನ' ಬಾಲಾಮೃತ

ಮಕ್ಕಳ ಸಧೃಡತೆಗಾಗಿ 'ಬಗನ' ಬಾಲಾಮೃತ ವನ್ನು ಉಪ-ಯೋಗಿಸಿರಿ.

ಮುಖವಾಗಿ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೋನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

೧೮೪೬ : ರೆಜಿಮೆಂಟಿನ ೧೬ನೆಯ **ಡಿಟ್ಯಾಚ್‌ಮೆಂಟನ್ನು** ಕಡಪಾ ಜಿಲ್ಲೆಯ ಕಂಬಮ್‌ದಲ್ಲಿ ೧೦ ಸಾವಿರ ಬಲಾಢ್ಯ ಬಂಡಾಯಗಾರರನ್ನು ಹತ್ತಿಕ್ಕಲು ಕಳುಹಿಸಿಕೊಡಲಾಯಿತು. **ನರಸಿಂಹರೆಡ್ಡಿ** ಎಂಬವರ **ನೇತೃತ್ವದಲ್ಲಿ ಹೊರಟು,** ೯೩ ಜನ ತನ್ನ ವಿಶ್ವಾಸಿಕ ಸೇನಾನಿಗಳೊಂದಿಗೆ ೨ನೆಯ ನವ್ಹಂಬರ್ ದಿನಾಂಕ ಅವರನ್ನು **ಸೋಲಿಸಿದರು.** ೧೮೪೬ ನೆಯ ಡಿಸೆಂಬರ್ ೧ ನೆಯ ದಿನಾಂಕ **ಫೋರ್ಟಸೆಂಟ್ ಜಾರ್ಜದಲ್ಲಿ, ಗವ್ಹರ್ನರರ ದರ್ಬಾರದಲ್ಲಿ** ಈ **ಕಾಲ್ಬಲದ ಶ್ಲಾಘನೆ ಮಾಡಿದರು. ಅದು ಅಂದಿನ ಗ್ಯಾಝೆಟನಲ್ಲಿ ಪ್ರಸಿದ್ಧಿಸಲ್ಪಟ್ಟಿತು.** ೧೮೪೭ **ಅಕ್ಟೋಬರ** ೨೧ಕ್ಕೆ, **ಘನತೆವೆತ್ತ ಡಿಸ್ಕ್ರಿಶನ್ ಕೋರ್ಟಿನಲ್ಲಿಯೂ ಪ್ರಶಂಸಿಸಲಾಯಿತು.**

೧೮೫೨-೫೩ : **ಬರ್ಮಾ ಕಾಳಗ.** ಈ ಕಾಲ್ಬಲವು ಪೇಗುವಲ್ಲಿನ್ನು ಕೊಂಡು, ಜಾನೇವಾರಿ ೪ ರಿಂದ ೮ ರವರೆಗೆ **ಬೆಲುಂಗನ್ನು ಕೈವಶ**ಪಡಿಸಿಕೊಳ್ಳುವಾಗ ಸಹಾಯಸಲ್ಲಿಸಿತು.

೧೮೫೭ನೆಯ ಎಪ್ರಿಲ್ ೯ ರಂದು, **ಬೇಸಿನ** (**ಜಿಲ್ಲೆಯ**)ದ **ಹತ್ತಿರ ಬರ್ಮಾದ** ಬಂಡುಗಾರರ **ಜಗಳದ ಕಾಲಕ್ಕೆ ಪುನಃ ಕೆಲಸದ ಮೇಲೆ ತೆಗೆದುಕೊಳ್ಳಲ್ಪಟ್ಟು,** ೧೮೫೮ **ಜಾನೇವಾರಿಯ ವರೆಗೆ ಕೆಲಸ ಮಾಡಿತು. ರೆಜಿಮೆಂಟಿನ ಸೈನಿಕರಿಗೆ ಪೀಠಿನ ಮೇಲೆ "ಪೇಗು"** ಎಂಬ ಬ್ಯಾಜು ಹಚ್ಚಿಕೊಳ್ಳಲು ಹಿಂದುಸ್ತಾನದ **ಗವ್ಹರ್ನರ** ಜನರಲ್‌ರು ವಿಧಿಸಿದರು. (೧೮೫೫-ಜಾನೇವಾರಿ ೫.) **ಸುಬೇದಾರ ಶೇಖಸಿಲರ್, ನರಸಿಂಹಸ್ವಾಮಿ ಮತ್ತು ಅಬ್ದುಲ್‌ಹುಶೇನರಿಗೆ,** ಅವರು **ತೋರಿಸಿದ** ಶೌರ್ಯೋತ್ಸಾಹಗಳಿಗೆ **ಮೆಚ್ಚಿ ೩ನೆಯ ವರ್ಗದ ಆರ್ಡರ್ ಆಫ್ ಮೆರಿಟ್** ದಯಪಾಲಿಸಲಾಯಿತು.

೧೮೫೬ನೆಯ ಜಾನೇವಾರಿಯಲ್ಲಿ ಹವೀಲದಾರ್ **ಸಯ್ಯದಶಹಾ ಮಿಯಾ ಅವರಿಗೆ ಪೇಗುದಲ್ಲಿಯೇ ಉನ್ನತದರ್ಜೆ ಕೊಡಲಾಯಿತು.**

೧೮೫೮ : ಮೇ ೨೭ನೆಯ ದಿನಾಂಕ **ಮೇಜರ್** ಗ್ರುರಲ್ ವ್ಹಿಟ್‌ಲಾಕ್‌ರ ನೇತೃತ್ವದಲ್ಲಿ, ಡಿವ್ಹಿಜನ್‌ದ ಮುಖ್ಯ **ಕೇಂದ್ರ**ವನ್ನಿರಿಸಿಕೊಂಡು ಕೆಟಂಗಿ (Kettingee)ಯಲ್ಲಿ **ಮೇ** ೧೪ ರಂದು ಬಂಡಾಯವೆಬ್ಬಿಸಿದ ಬಂಡುಖೋರರೊಡನೆ **ಹೋರಾಡಿದರು. ನಾರಾಯಣರಾವ** ಎಂಬ ಬಂಡುಖೋರನ ಆಯಕಟ್ಟಿನ ಸ್ಥಳವಾದ **ಕರ್ವಿಯ** ಕಡೆಗೆ, **ಜೂನ್** ೩ ರಂದು ಸಾಗಿದರು. **ಜೂನ್** ೬ನೆಯ ದಿನಾಂಕ ಸ್ವತಃ ನಾರಾಯಣರಾಯನೇ **ಬಿಟ್ಟುಕೊಟ್ಟನು. ಜೂನ್** ೨೧ ರಲ್ಲಿ ಸಂಗ್ರಾಮಪೂರದ ಹತ್ತಿರ, **ಬಂಡುಹೂಡಿದವರೊಡನೆ ಹೋರಾಡಿದರು.** ಬ್ರಿಟಿಶ್ ಅಧಿಕಾರಿಗೆ **ಉರಿಬಿಸಿಲಿನಿಂದ** ಬವಳಿಕೆ ಬಂದಂತಾಗಲು, **ಸುಬೆದಾರ ಶೇಖ ಇಬ್ರಾಹಿಮನ ಆಧಿಪತ್ಯದಲ್ಲಿ** ರೂರರನ್ನೆಲ್ಲ **ಹೊಡೆದೋಡಿಸಿದರು. ಅವರಿಗೆ** ಶೌರ್ಯ **ತೋರಿಸಿದ್ದಕ್ಕೆ ೩ ನೆಯ ವರ್ಗದ ಆರ್ಡರ್ ಆಫ್ ಮೆರಿಟ್ ದೊರೆಯಿತು.**

ಕಾಲ್ಬಲವು ಆಗಸ್ಟ ೯ ರಂದು, ಜಿಗ್ನಿದ **ಹತ್ತಿರ** ಬಹುಸಂಖ್ಯ **ಬಂಡುಖೋರರೊಡನೆ** ಹೋರಾಟ ನಡೆಯಿಸಿತು. **ಬ್ರಿ.** ಜ. **ಮ್ಯಾಕ್‌ಡಫ್‌ರ** ನೇತೃತ್ವದಲ್ಲಿ, ಮರಬಿಟ್ಟು ಬಂಡಾಯಗಾರರ **ಮೇಲೆ ದಂಡೆತ್ತಿ ಹೋಗಿ,** ಸಿಂಧು ನದಿಯ ದಡದಲ್ಲಿ ಗಿರಿಮಸ (Girmassoh) ದ ಹತ್ತಿರ **ಬಜೋರಸಿಂಗನ ನೇತೃತ್ವದಲ್ಲಿದ್ದ** ಬಂಡುಖೋರರನ್ನು ಸೋಲಿಸಿತು.

೧೮೫೯ : ರೆಜಿಮೆಂಟು ಬಜೋರ್‌ಸಿಂಗನ ನೇತೃತ್ವದಲ್ಲಿ **ಬಂಡೆಬ್ಬಿಸಿದವರ** ಮೇಲೆ ದಾಳಿ ಮಾಡುವುದರಲ್ಲಿ ಭಾಗವಹಿಸಿ, **ಜಾನೇವಾರಿ** ೧೪ ರಂದು ಒಮ್ಮಿಂದೊಮ್ಮೆಲೇ **ಹೋಗಿ, ೫೦** ಜನರನ್ನು **ಕೊಂದದ್ದಲ್ಲದೆ,** ಬಹು ಜನರನ್ನು ಗಾಸಿಗೊಳಿಸಿತು. **ಆಗಸ್ಟ** ೨೬ನೆಯ ದಿನಾಂಕ, **ಫೆರೋಜಶಹಾ ಪುಟ್ಟೆರಾಯ** ಕ್ಯಾಂಪನ್ನು ಕೈವಶಪಡಿಸಿಕೊಳ್ಳುವ ಕಾರ್ಯದಲ್ಲಿ ನೆರವಾಯಿತು. ಬಂಡಾಯಗಾರರು ತಮ್ಮ ಕುದುರೆ, ಗುಡಿಸಿಲು, ಸಾಮಾನುಗಳನ್ನು ಕೂಡಾ **ಬಿಟ್ಟುಕೊಟ್ಟು** ಓಡಿದರು.

೧೮೬೧ : ಜುಲೈ ೪ನೆಯ ದಿನಾಂಕ **ಮಲಯದ** ಸಾಲಂಗೋರ್ **ಕೋಟೆಯನ್ನು** ಕಾಲ್ಬಲವು ಕೈವಶಪಡಿಸಿಕೊಂಡಿತು. ಸ್ಟೇಟ್ ಸೆಟ್ಲಮೆಂಟ್ **ಆಡಳಿತಾಧಿಕಾರಿಯಿಂದ,** ತೋರಿದ ಶೌರ್ಯಕ್ಕೆ ಕೃತಜ್ಞ**ತೆಯನ್ನು** ಪಡೆಯಿತು.

ಚೀನೀಯರಲ್ಲಿ ಗಲಭೆಯೇಳಲು, ಇತರ ಸೈನಿಕರೊಂದಿಗೆ ರೆಜಿ-

ಮೆಂಟು ಸಿಂಗಾಪುರಕ್ಕೆ ಬಂದು ಹೋರಾಡಿತು. ಅಕ್ಟೋಬರ್ ೨೩ನೆಯ ದಿನಾಂಕ H. S. ಸ್ಟೇಟ್ ಸೆಟ್ಲ್‌ಮೆಂಟ್ ಆಡಳಿತಾಧಿಕಾರಿಯಿಂದ ಕೃತಜ್ಞತೆಯನ್ನು ಪಡೆಯಿತು.

೧೮೭೯ : ರೆಜಿಮೆಂಟಿನ ೪೦೦ ಸೈನಿಕರು ಬರ್ಮಾದಲ್ಲಿ ಥಾಗ್ರಟುಂಗೋ (Thagratungo) ಎಂಬಲ್ಲಿಗೆ ಯುದ್ಧಮಾಡಲು ಹೋದರು.

೧೮೮೫ : ಕಾಲೀಕತ್ತದ ಹತ್ತಿರ ಮಾಪಿಳ್ಳೆ ಜನರನ್ನು ಹಿಮ್ಮೆಟ್ಟಿಸುವುದರಲ್ಲಿ ಒಂದು ಕಂಪನಿ ತನ್ನ ಸಹಾಯ ಸಲ್ಲಿಸಿತು.

ಕರ್ನಾಟಕದ ಕಾಲ್ಬಲವು ಹೀಗೆ ತನ್ನ ಶೌರ್ಯೋತ್ಸಾಹಗಳನ್ನು ಪ್ರದರ್ಶಿಸಿತು. ೧೯೦೯ರಲ್ಲಿ ಔರಂಗಾಬಾದದಲ್ಲಿ ರಿಕ್ರೂಟಸ್ಸೂ ಕೈಕೆಳಗೆ ಕೆಲಸ ಮಾಡುವವರನ್ನೂ ತೆಗೆದು ಬಿಟ್ಟು, ಕಾಯಮ್ ಇದ್ದ ಸೈನಿಕರನ್ನು ಬೇರೆ ದಳಕ್ಕೆ ವರ್ಗಾಯಿಸಿ, ಅದನ್ನು ತೆಗೆದು ಹಾಕಿದರು. ಈ ವಿಷಯದಲ್ಲಿ ವಿಶೇಷ ಪರಿಶ್ರಮಪಟ್ಟು ಇನ್ನೂ ಹೆಚ್ಚು ಆಳವಾಗಿ ಸಂಶೋಧಿಸುವ ಕೆಲಸ ಇತಿಹಾಸಕಾರರದು. ಅದನ್ನವರಿಗೆ ಬಿಟ್ಟುಕೊಟ್ಟು, ನಾವೀಗ ಏನು ಮಾಡಬೇಕೆಂಬ ಮಹತ್ತ್ವದ ವಿಷಯಕ್ಕೆ ಬರೋಣ.

ಪ್ರಕೃತಪ್ರಸಂಗದಲ್ಲಿ :

ಕನ್ನಡನಾಡಿನ ಜನರಲ್ಲಿ ಶಕ್ತಿಸಾಮರ್ಥ್ಯಕ್ಕೆ ಕೊರತೆಯೇನಿಲ್ಲ; ಆದರೂ ಇಲ್ಲಿಂದ ಸಾಕಷ್ಟು ಜನ ಸೈನ್ಯಖಾತೆಯಲ್ಲಿ ಸೇರಿಲ್ಲವೆಂಬ ಧ್ವನಿ ಎತ್ತರವಾಗಿ ಕೇಳಬರುತ್ತಿದೆ. ಅದಕ್ಕೆ ಕಾರಣವೇನು ? ಕನ್ನಡ ಮಾತೃಭಾಷೆಯುಳ್ಳ—ಕೇವಲ ಕನ್ನಡ ಬಲ್ಲವರಿಗೆ, ಸೈನ್ಯದಲ್ಲಿ ಸೇರಿದರೆ, ಕರ್ನಾಟಕದ ಬ್ಯಾಟಾಲಿಯನ್ ಇಲ್ಲದ ಮೂಲಕ, ಮರಾಠಾ ಇನ್‌ಫಂಟ್ರಿಯಲ್ಲಿಯೋ ಹೈದರಾಬಾದಿನ ದಳದಲ್ಲಿಯೋ ಹೋಗಿ ಅನ್ಯ ಭಾಷೆ ಕಲಿತು ಕೆಲಸ ಮಾಡಬೇಕಾಗಿ ಬರುವುದರಿಂದ, ಭಾಷೆಯ ತೊಡಕೊಂದಲ್ಲದೆ, ಕೆಲ ವಿಲಕ್ಷಣ ಪರಿಸ್ಥಿತಿಯಲ್ಲಿ ಕೂಡ ಇರಬೇಕಾಗಿ ಬರುವುದು. ಆದ್ದರಿಂದ ಕನ್ನಡಿಗರು ಹೆಚ್ಚು ಆಸಕ್ತಿಯಿಂದ ಸೈನ್ಯಖಾತೆಯಲ್ಲಿ ಸೇರದಾಗಿದ್ದಾರೆ.

ಇದೀಗ "ಕರ್ನಾಟಕ ಬ್ಯಾಟಾಲಿಯನ್" ನಿರ್ಮಿಸಿ, ಕನ್ನಡಿಗರಲ್ಲಿಯೂ ಭಾರತದ ಸೈನ್ಯಬಲದಲ್ಲಿ ನಮ್ಮದೊಂದು ಭಾಗವಿದೆಯೆಂಬ ಎನಿಸಿಕೆ ಬರುವಂತೆ ಮಾಡಿದರೆ, ಈ ತೊಂದರೆ, ಅದೆಷ್ಟೋ ದೂರವಾಗುವುದರಲ್ಲಿ ಸಂಶಯವಿಲ್ಲ. ಕರ್ನಾಟಕದ ಬ್ಯಾಟಾಲಿಯನ್ ಇದೆಯೆಂದರೆ, ಕನ್ನಡ ಬಲ್ಲವರೆಲ್ಲ ಒಂದುಗೂಡಿ, ಉತ್ಸಾಹದಿಂದ ಕೆಲಸ ಮಾಡುವರಲ್ಲದೆ, ಸ್ವಾಭಿಮಾನಿಗಳಾದ ಕನ್ನಡಿಗರು ಅದರ ಕೀರ್ತಿಪರಂಪರೆಯನ್ನು ಉಳಿಸಿಕೊಂಡು, ಬೆಳವಣಿಗೆ ಹೊಂದಲು ತುಂಬ ಹೆಣಗಾಡುವುದರಲ್ಲಿ ಸಂದೇಹವೇ ಇಲ್ಲ. ಪರಸ್ಪರ ಕನ್ನಡ ಬಲ್ಲ ಬಾಂಧವರು ಸೇರುವುದರಿಂದ, ಅನಾವಶ್ಯಕವಾಗಿ ಬೆಳೆದು ಬರುವ ಭಿನ್ನಮನೋಭಾವನೆ ತಲೆ ಎತ್ತದೆ, ಅದೊಂದು ಸ್ವತಃದ ಕೆಲಸವೆಂದು ತಿಳಿದುಕೊಳ್ಳಲು ಅವಕಾಶವಿದೆ.

ಕೇಂದ್ರ ಸರಕಾರದವರು ಈ ಮಾತಿಗೆ— ಹಿಂದೊಮ್ಮೆ 'ಲಿಂಗಾಯತ ಬ್ಯಾಟಾಲಿಯನ್' ಕೊಟ್ಟು ಅದನ್ನು ತೆಗೆದುಹಾಕಿದ ಪ್ರಸಂಗವನ್ನು ತೋರಿಸಿ ಸುಮ್ಮನಿರಿಸಲು ಪ್ರಯತ್ನಿಸಬಹುದು. ಆದರೆ ಅದು ಕೇವಲ ಜಾತೀಯ ತಳಹದಿಯ ಮೇಲೆ ಕಟ್ಟಿದ್ದಿತಾದ್ದರಿಂದ, ಅದಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕಲಿಲ್ಲವೆಂಬುದನ್ನು ಅರಿಯಬೇಕು. ಕರ್ನಾಟಕದ "ಬ್ಯಾಟಾಲಿಯನ್" ಎಂದರೆ ಎಲ್ಲ ಜಾತಿ ಮತ ಪಂಥದ ಕನ್ನಡಿಗರಿಗೆ ಸಮಾನಾವಕಾಶ ದೊರೆಯುವುದಲ್ಲದೆ, ಇಂದಿಲ್ಲ ನಾಳೆ, ಕರ್ನಾಟಕದ ಏಕೀಕರಣವಾಗಿ, "ಸಂಯುಕ್ತ ಕರ್ನಾಟಕ" ಪ್ರಾಂತವಾದಾಗ ರಚಿಸಬೇಕಾದ ಸೈನ್ಯಬಲವನ್ನು ಇಂದಿನಿಂದಲೇ ಕಟ್ಟುವ ಏರ್ಪಾಡು ಮಾಡಿದಂತಾಗುವುದು.

ಇನ್ನೊಂದು ಅತಿ ಮಹತ್ತ್ವದ ಹಾಗೂ ಈ ಕೆಲಸವನ್ನು ಅತಿ ಸುಲಭಗೊಳಿಸುವ ವಿಷಯವಿದೆ. ಅದೆಂದರೆ ಮೊನ್ನೆ ತಾನೆ (ಎಪ್ರಿಲ್ ೧ ?) ಮೈಸೂರಿನ ಸೈನ್ಯ ಶಾಖೆಯು ಕೇಂದ್ರ ಸರಕಾರದ ವಶಕ್ಕೆ ಬಂದಿದೆ. ಮೈಸೂರಿನ ಬ್ಯಾಟಾಲಿಯನ್ ಒಡೆದುಹಾಕುವುದಕ್ಕಿಂತ ಅದನ್ನೇ "ಕರ್ನಾಟಕದ ಬ್ಯಾಟಾಲಿಯನ್" ಎಂದು ಮಾರ್ಪಡಿಸುವುದು ಯಥಾಯೋಗ್ಯವಾಗಿದೆ. ಅದರಿಂದ ಅನಾವಶ್ಯಕವಾದ ರಚನಾಖರ್ಚಿನ ಉಳಿತಾಯ-

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಶಾಂತಿಸೇವಾ ಸದನದ ಸುಂದರ ಪ್ರಕಟನೆ!

" ಮಾಯಾ ಮಂದಿರ "

ಶ್ರೀ ಭುಜೇಂದ್ರ ಮಹಿಷವಾಡಿ

ರವರ

ಸರ್ವೋತ್ಕೃಷ್ಟ ಕವನ ಸಂಗ್ರಹ.

ಪ್ರೊ. ಮುಗಳಿ ಅವರು ಮುನ್ನುಡಿಯಲ್ಲಿ

ಹೀಗೆ ಬರೆಯುತ್ತಾರೆ:

'**ಮಾಯಾ ಮಂದಿರ**' ದಿಂದ ಮೊದಲಾಗಿ '**ಶಾಂತಿ**' ಯಲ್ಲಿ ಕೊನೆಗೊಳ್ಳುವ ಈ ಸಂಗ್ರಹವು ಭುಜೇಂದ್ರರ ತಾತ್ತ್ವಿಕದೃಷ್ಟಿಗೆ ಸಾಕ್ಷಿಯಾಗಿದೆ. ಭುಜೇಂದ್ರರಕವಿತಾಶಕ್ತಿ ಅಜೇಯವಾದುದು, ಸಹಜವಾದುದು.' **ಬೆಲೆ: ೧-೮-೦**

ದೊರೆಯುವ ಸ್ಥಳ :

ಶ್ರೀ. ಮಿರ್ಜಿ ಅಣ್ಣಾರಾಯರು,

ಉಗಾರ (ಜಿಲ್ಲಾ ಬೆಳಗಾವ)

ವ್ಯಾಪಾರಿಗಳಿಗೆ ತುಂಬ ಸವಲತ್ತು ಇದೆ.

ನೊಂದಿಗೆ ಕಾರ್ಯಸಿದ್ಧಿಯಾಗುವುದು. ಈ ಬಗ್ಗೆ ಮೈಸೂರಿನ ದಳದ ಸೇನಾಧಿಕಾರಿಗಳಾದ **ಮೊ. ತಿಮ್ಮಯ್ಯನವರು** ಸಹ ಈ ಅಭಿಪ್ರಾಯಕ್ಕೆ ಅನುಕೂಲವುಳ್ಳವರಿದ್ದಾರೆಂದು ನಂಬಲಾಗಿದೆ ಆದರೆ ಈ ಬಗ್ಗೆ ಸಾಕಷ್ಟು ಸಾರ್ವಜನಿಕ ಅಭಿಪ್ರಾಯ ಒಲಿದು, **ಬೇಡಿಕೆ** ಸಬಲವಾಗದ ಹೊರತು, ಕಾರ್ಯ ಇಷ್ಟರಿಂದಲೇ ಸಿದ್ಧಿಸದು.

ಹಾಗೆ ನೋಡಿದರೆ ಭಾರತದ ಮುಖ್ಯ ಸೇನಾಪತಿವರ್ಯರಾದ **ಜ. ಕೆ. ಎಂ. ಕರಿಯಪ್ಪನವರು** ಅಚ್ಚಕನ್ನಡಿಗರು. ಅವರು ಈ ಕಾರ್ಯ ಸಾಧಿಸಲು ಮುಂದಾದರೆ, ಹಾಂ ಹಾಂ ಅನ್ನುವುದರೊಳಗೆ ಸಿದ್ಧಿಸಬಹುದು. ಅಲ್ಲದೆ ಕೊಡಗಿನವರೇ ಆದ ಶ್ರೀ ಪೂಣಚ್ಚ ಅವರು, ಸೈನ್ಯಶಾಖೆಯ ಸಲಹೆಗಾರಮಂಡಲದಲ್ಲಿದ್ದಾರೆ (Military Advisory Board) ಅವರು ಈ ಕಾರ್ಯಸಿದ್ಧಿಗಾಗಿ ಪ್ರಯತ್ನಿಸಲು ಅನುಕೂಲವಿದೆ. ಇದನ್ನರಿತ ಶ್ರೀ. ಕಂಬಳಿ ಸಿದ್ದಪ್ಪನವರು, ಕರ್ನಾಟಕದ ಏಕೀಕರಣ ಕಾರ್ಯಕ್ಕೆ "**ದಿಲ್ಲಿಯಯಾತ್ರೆ**" ಕೈಕೊಂಡಾಗ, ಜ. ಕರಿಯಪ್ಪನವರನ್ನು ಕಂಡು ಮಾತುಕತೆಯಾಡಿದರೆಂದೂ ತಿಳಿಯುತ್ತದೆ. ಅದರ ವಿವರ ತಿಳಿದಿಲ್ಲವಾಗಿ ಹೆಚ್ಚು ಹೇಳಲವಕಾಶವಿಲ್ಲ.

ಮೇಲಾಗಿ, ಮರಾಠಾ ಲೈಟ್ ಇನ್‌ಫಂಟ್ರಿ, ಓಡಿಸಾ, ಆಸಾಮು, ಬಿಹಾರ ಬ್ಯಾಟಾಲಿಯನ್‌ಗಳೆಂದು ಪ್ರಾಂತಿಕದಳಗಳು ಈಗಾಗಲೇ ಅಸ್ತಿತ್ವದಲ್ಲಿರುವುದರಿಂದ, ಸರಕಾರಕ್ಕೆ **ಕರ್ನಾಟಕದ ಬೇಡಿಕೆಯನ್ನು ಅಲ್ಲಗಳೆಯಬರುವಂತಿಲ್ಲ.** ಮೈಸೂರಿಗರಾದರೂ, ತಮ್ಮದೇ ಆದ ದಳವು ಹೀಗೆ ಮಾರ್ಪಟ್ಟರೆ ಸಂತೋಷದಿಂದ ಒಪ್ಪಿಕೊಳ್ಳುವಲ್ಲಿ ಸಂಶಯವಿಲ್ಲ. ಜ. ಕೆ. ಎಂ. ಕರಿಯಪ್ಪನವರು **ಲಂಡನಿಗೆ ಪ್ರಯಾಣಬೆಳೆಯಿಸುವ ಪೂರ್ವದಲ್ಲಿ, ಪಶ್ಚಿಮ ಬಂಗಾಲದ ಕಲಕತ್ತಾನಗರಿಯಲ್ಲಿ ಅವರ ಸನ್ಮಾನಾರ್ಥ ಏರ್ಪಡಿಸಿದ ಸಮಾರಂಭದಲ್ಲಿ ಬಂಗಾಲಕ್ಕೊಂದು ಬ್ಯಾಟಾಲಿಯನ್ ಕೊಡುತ್ತೇವೆಂದು ಆಶ್ವಾಸನವಿತ್ತಿದ್ದಾರೆಂದು** ವಿಶ್ವಸನೀಯವಾಗಿ ತಿಳಿದಿದೆ ಹಾಗಿದ್ದರೆ 'ಕರ್ನಾಟಕದಲ್ಲಿ ಹಿಂದಿದ್ದ ಬ್ಯಾಟಾಲಿಯನ್, ಇಂದು ಪುನರುಜ್ಜೀವನಗೊಳಿಸಿಕೊಡಿರಿ' ಎಂದು ಐತಿಹಾಸಿಕ ಆಧಾರದಿಂದ ಕೇಳಲು, **ಕನ್ನಡಿಗರಿಗೆ ಹಕ್ಕಿದೆ.**

ವಿಧಾಯಕ ಮಾರ್ಗ

ಇಷ್ಟೆಲ್ಲ ಅನುಕೂಲ ವಾತಾವರಣವಿದ್ದರೂ, ಅದನ್ನು ಸಾಧಿಸುವಾಗ, ವಿಧಾಯಕ ಮಾರ್ಗದಿಂದ ನಡೆಯಬೇಕಾಗುವುದೆಂಬುದರಲ್ಲಿ ಸಂದೇಹವಿಲ್ಲ. ಅದಕ್ಕಾಗಿ ಈ ಮಾರ್ಗಗಳನ್ನು ಅನುಸರಿಸುವುದು ಸೂಕ್ತವೆಂದು ತೋರುತ್ತದೆ ಬಲ್ಲವರು ಹೆಚ್ಚಿನದನ್ನು ಪರಿಶೋಧಿಸಿ ಮಾರ್ಗದರ್ಶಕರಾಗಬಹುದು :

೧ ಕೇಂದ್ರ ಸರಕಾರದ ಪಾರ್ಲಿಮೆಂಟಿನಲ್ಲಿರುವ ಸದಸ್ಯರು ಈ ಬೇಡಿಕೆಯನ್ನು ಮಂಡಿಸಬೇಕು; ಮತ್ತು ಈ ಬಗ್ಗೆ ಸರಕಾರದ ಇಂಗಿತವನ್ನು ಪ್ರಶ್ನೋತ್ತರಗಳ ಮೂಲಕ ತಿಳಿದುಕೊಳ್ಳಬೇಕು. ೨. ಕನ್ನಡನಾಡಿನಲ್ಲಿರುವ **ಕೆ.ಪಿ.ಸಿ.ಸಿ.**ಯನ್ನು ಮೊದಲುಗೊಂಡು **ಸಾಹಿತ್ಯಪರಿಷತ್ತು, ವಿದ್ಯಾವರ್ಧಕಸಂಘ** ಮೊದಲಾದ ಪ್ರತಿಯೊಂದು ಸಾರ್ವಜನಿಕ ಸಂಘ-ಸಂಸ್ಥೆಗಳು ಈ ಬಗ್ಗೆ ಗೊತ್ತುವಳಿ ಪಾಸುಮಾಡಬೇಕಲ್ಲದೆ, ಸರಕಾರಕ್ಕೆ ಸಾಕಷ್ಟು ಒತ್ತಾಯ ತರಬೇಕು. ೩. ಪ್ರಾಂತಿಕ ಶಾಸನ ಸಭಾಸದರು ಆಯಾ ಪ್ರಾಂತಿಕ ಸರಕಾರಗಳ ಲಕ್ಷ್ಯಕ್ಕೆ ತರುವುದರ ಜೊತೆಗೆ ಜನಾಭಿಪ್ರಾಯ ಪ್ರಬಲವಾಗುವಂತೆ ಪ್ರಚಾರಮಾಡಬೇಕು. ೪. ಸಾರ್ವಜನಿಕರು ಈ ಬಗ್ಗೆ ತೀವ್ರವೇ ಎಚ್ಚೆತ್ತು **ಸಮರ್ಥನಪರರಾಗುವಂತೆ** ಸಂಘ-ಸಂಸ್ಥೆಗಳ ಮೂಲಕವಾಗಿಯೂ ವೈಯಕ್ತಿಕವಾಗಿಯೂ ಬೇಡಿಕೆಯನ್ನಿಟ್ಟು ಒತ್ತಾಯಪಡಿಸಬೇಕು

ಕೆ. ಪಿ. ಸಿ. ಸಿ ಅಧ್ಯಕ್ಷಶ್ರೀ. ಎಸ್. ನಿಜಲಿಂಗಪ್ಪ, ಆಕಾಶವಾಣಿ ಮಂತ್ರಿ ಶ್ರೀ. ಆರ್. ಆರ್. ದಿವಾಕರರನ್ನೊಳಗೊಂಡು ಕೇಂದ್ರದ ಶಾಸನ ಸಭಾಸದರಿಗೆ, ಈ ವಿಷಯ ಅಲ್ಪ ಸ್ವಲ್ಪವಾದರೂ ತಿಳಿದಿದೆಯೆಂದು ಗೊತ್ತಾಗಿದೆ. ಅದು ನಿಜವಿದ್ದರೆ, ತೀವ್ರವೇ ಹೆಚ್ಚು ಲಕ್ಷ್ಯ ಹಾಕಿ, ಈ ಕಾರ್ಯಕ್ಕೆ ಅಣಿಯಾಗಬೇಕು.

ಜನತಾ ಪ್ರತಿನಿಧಿಗಳಾದ ಸರ್ವ ಮಹೋನ್ನತ ಅಧಿಕಾರಿಗಳೂ, ಈ ಬಗ್ಗೆ ಮನಃಪೂರ್ವಕ ಪ್ರಯತ್ನಮಾಡಿ, ತೀವ್ರವೇ ಕರ್ನಾಟಕದ ಬ್ಯಾಟಾಲಿಯನ್ ರಚನೆಯಾಗುವಂತೆ ನೋಡಿಕೊಳ್ಳುವುದು ಆವಶ್ಯವಾಗಿದೆಯೆಂದು ಹೇಳಿದರೆ ಅಪ್ರಸ್ತುತವಾಗದು. ಕನ್ನಡ ನಾಡಿನ ಏಕೀಕರಣ ದೃಷ್ಟಿಯಿಂದ ಇದೂ ಒಂದು ಮಹತ್ತ್ವದ ಹೆಜ್ಜೆಯಾಗಿದ್ದರಿಂದ, ಸರ್ವ ಶಕ್ತಿಯುತವಾಗಿ ಈ ಕಾರ್ಯವನ್ನೀಡೇರಿಸಲು ಪ್ರಯತ್ನಿಸುವುದು ಅತಿ ಮಹತ್ತ್ವದ್ದಾಗಿದೆ.

"ಸಣ್ಣ ಮನಿ"

(ನಗೆಯಾಟ)

ಶ್ರೀ. ದೇವಳಿ ಕೃಷ್ಣರಾಯರು ಬಿ. ಎ., ವಿಜಾಪುರ

★

ಪಾತ್ರಗಳು :— (೧) ಗೋಪಾಲ
(೨) ಸಾವಿತ್ರಿ
ಪಾತ್ರಪೋಷಕರು :— (೩) ಶಾಂತಿ, (೪) ಶ್ಯಾಮಣ್ಣ,
(೫) ಸಾವಿತ್ರಿಯ ತಾಯಿ.

★

[**ಹಿನ್ನೆಲೆ :**— ಗೋಪಾಲ ೨೫ ವರುಷದ ತರುಣ. ಲಗ್ನವಾಗಿ ೩-೪ ತಿಂಗಳಾಗಿವೆ. ಬಿ. ಎ. ಪಾಸಾದವ. ಶಿಸ್ತಿನ ಶಿಕಾರಿ. ಸಾವಿತ್ರಿ ಅವನ ಹೆಂಡತಿ. ವಯಸ್ಸು ೧೮. ಮುಲ್ಕೀ ಪರೀಕ್ಷೆಯಾಗಿದೆ. ಗೋಪಾಲನಿಗೆ ನೌಕರಿಯಿದೆ. ಲಗ್ನವಾದ ಕೂಡಲೇ ಅವನಿಗೆ ವಿಜಾಪುರಕ್ಕೆ ವರ್ಗವಾಗಿದೆ. ವಿಜಾಪುರದಲ್ಲಿ ಮನೆಯ ತೊಂದರೆ ಹೇಳತೀರದಂತಹದಾಗಿದೆ. ವರ್ಗವಾಗಿ ಬಂದಂದಿನಿಂದ ಗೋಪಾಲನ ವಾಸ್ತವ್ಯ ಸಾವಿತ್ರಿಯ ತವರುಮನೆಯಲ್ಲಿಯೇ ನಡೆದಿದೆ. ಅದು ಸಣ್ಣ ಮನೆ. ಆ ಮನೆಗೆ ಒಂದು ಸಣ್ಣ ಪಡಸಾಲೆ. ಕಪಾಟುಗಳಿಲ್ಲ. ಎತ್ತರದ ಮೇಲೊಂದು ಕಿಟಕಿ. ಮೂರು ನಾಲ್ಕು ಮಾಡಗಳು ಮಾತ್ರ ಇವೆ. ಎದುರಿಗೆ ಅಡಿಗೆಯ ಮನೆಗೆ ಹೋಗುವ ಬಾಗಿಲಿದೆ. (ಅಡಿಗೆಯ ಮನೆಯೂ ಸಣ್ಣದೇ. ಅದರಲ್ಲಿಯೇ ಬಚ್ಚಲು. ಅದರೆ ಇವೆರಡೂ ಒಳಗಾಗುವುದರಿಂದ ನಮಗೆ ಕಾಣುವುದಿಲ್ಲ.) ಮೂರು ನಾಲ್ಕು ದಿನಗಳಿಂದ ಮಳೆ ಬೀಳುತ್ತಿದೆ. ಪಡಸಾಲೆಯಲ್ಲಿ ಗೋಡೆಗಳ ಮೇಲೆ ನೀರು ಹರಿದ ಗುರುತು ಕಾಣುವುವು. ಆಟಂ ಬಾಂಬಿನ ಪ್ರಯೋಗದ ಪರಿಣಾಮವಾಗಿ ಋತುಮಾನಗಳೆಲ್ಲ ಹಾಳಾಗಿ ಹೋಗಿ, ವೇಳೆ ತಪ್ಪಿ ಮಳೆಗಾಲ ಪ್ರಾರಂಭವಾಗಿದೆಯೆಂದೂ ವಿಜಾಪೂರದಲ್ಲಿ ಮಳೆ ಕಡಿಮೆಯಿದ್ದರೂ ಹೋದಸಾರೆಯಂತೆ ಈ ಸಾರೆಯೂ ಅಷ್ಟು ಮಳೆ ದೊಡ್ಡದಾಗಿ ಬೀಳುತ್ತಿದೆಯೆಂದೂ ಜನರಾಡುವುದು ಒಪ್ಪತಕ್ಕ ವಿಷಯ.]

[ಪ್ರಸ್ತುತ :— ಸಂಜೆಯ ೬॥ ಗಂಟೆ. ಸಣ್ಣ ಧಾರೆಯಾಗಿ ಹೊರಗೆ ಮಳೆ ಬೀಳುತ್ತಿದೆ. ಪಡಸಾಲೆಯಲ್ಲಿ ಕತ್ತಲೆಯಿದೆ. ಹೊರಗೆ (ಅದು ಅಂಗಳವಿದೆ) ಜಾರಿಬಿದ್ದ ಸಪ್ಪಳವಾಗುವುದು. ಅಡಿಗೆಯ ಮನೆಯ ಬಾಗಿಲಿನಿಂದ ಸಾವಿತ್ರಿಯ ಪ್ರವೇಶ.]

ಸಾವಿತ್ರಿ :— ಯಾರವರು ? (ಹೊರಗಿನಿಂದ ಗೋಪಾಲನ ಪ್ರವೇಶ. ಎರಡೂ ಕೈಗಳು ಮತ್ತು ಅರಿವೆ ಹೊಲಸಾಗಿವೆ.)

ಗೋಪಾಲ :— ಯಾರಿಲ್ಲರ ಮಹಾರಾಯಳ ! ಸಾಕ್ಷಾತ್ ನಾನss. ಬಿಳತೇನು. ದಿನಾ ಹೇಳತೇನಿ ಕತ್ತಲಾಗೋದರೊಳಗs ದೀಪಾ ಹಚ್ಚಿಟ್ಟಿರೂ ಅಂತ. ಇಷ್ಟೊತ್ತನಕಾ ಅಡಿಗೀಮನ್ಯಾಗ ಏನು ಮಾಡತಿರತೀರಿ ? ನಿಮ್ಮನೀ ಅಂದಾಕ್ಷಣಕ್ಕ ಮನಸ್ಸಿಗೆ ಬಂದ್ಹಾಂಗs ಮಾಡಬೇಕೇನು ? (ಅರಿವೆಯ ಮೇಲಿನ ರಾಡಿ ಝಾಡಿಸಿಕೊಳ್ಳುತ್ತವನು. ಸಾವಿತ್ರಿ ದೀಪ ಹಚ್ಚುವಳು.)

ಸಾವಿತ್ರಿ :— ಅಯ್ಯ, ಇವತ್ತೂ ಹೊರಗ ಬಿದ್ರೇನು? ಅದಕ್ಕs ಹೊರಗ ಧಡಲ್ ಅಂತ ಸಪ್ಪಳಾತೂ ಅಂತ ಓಡಿ ಬಂದೆ. ಬ್ಯಾರೇ ಅರಿವೀ ಹಾಕ್ಕೊಳ್ರಿ. ಅಷ್ಟರಾಗs ಚಹಾ ಮಾಡತೇನಿ.

ಗೋಪಾಲ :— ಎಲ್ಲೀ ಬ್ಯಾರೇ ಅರಿವೀ ಹಾಕ್ಕೊಂಬೋದು? ಒಳಗ ಒಂದರ ಮ್ಯಾಲೊಂದು ೫-೬ ಪೆಟಿಗೀ ಏರಿಸಿಟ್ಟೀದಿ. ನನಗ ಅಗದೀ ಖಾತ್ರೀ ಅದ; ನನ್ನ ಅರಿವಿ ಎಲ್ಲಾಕ್ಕೂ ಕೆಳಗಿನ ಪೆಟಿಗ್ಯಾಗ ಇರಬೇಕೂ ಅಂತ. ನನಗೇನೂ ನಾಚಿಗಿ ಇಲ್ಲೇಳು. ಬಿದ್ದ ಪೆಟ್ಟಿನಕಿಂತಾ ನಿಮ್ಮಲ್ಲಿ ಇದ್ದ ಪೆಟ್ಟs ಸಾಕಾಗೇದ. ಯಾಕs,.... ನಿಮ್ಮ ತಾಯಿ, ನಿನ್ನ ತಂಗಿ ಕಾಣಿಸೋದಿಲ್ಲ ? ಹೊರಗ ಹೋಗ್ಯಾರೇನು ?

(ಸಾವಿತ್ರಿ ಮಾತಾಡುವುದಿಲ್ಲ. ಒಳಗಿನಿಂದ ಒಂದು ತಂಬಿಗೆ ನೀರು ತಂದು ಕೊಡುವಳು. ಗೋಪಾಲ ಹೊರಗೆ ಹೋಗಿ ಕೈ ತೊಳೆದುಕೊಂಡು ಬರುವನು. ಸಾವಿತ್ರಿ ಒಳಗೆ ಹೋಗುವಳು. ಗೋಪಾಲ ಪಂಚೆ ಹುಡುಕುವನು. ಕಣ್ಣಿಗೆ ಕಾಣಿಸುವುದಿಲ್ಲ. ಚಣ್ಣಕ್ಕೆ ಒರಿಸಿಕೊಳ್ಳುವನು... ನೆಲದ ಮೇಲಿನ ಧೂಳು, ಕಾಗದದ ಚೂರುಗಳನ್ನು ದಿಟ್ಟಿಸಿ ನೋಡುತ್ತ :)

ಗೋಪಾಲ :— ಕಸಬರಿಗಿ ಎಲ್ಲ್ಯದ ? ಎರಡು-ಮೂರು ದಿನಗಳ ಹಿಡಿದು ಜಮಖಾನೀ ಮ್ಯಾಲೇ ಬಿದ್ದಿರತಿತ್ತು ; ಎಲ್ಲಾರೂ ಅದನ್ನ ಎಡವಿದರೂ ಅದನ್ನ ತಕ್ಕೊಂಡು ಕಸಾ ಉಡುಗಲಿಕ್ಕೆ ಸವಡು ಸಿಗತಿದ್ದಿಲ್ಲಾ. ಇವತ್ತ್ಯಾಕ ಕಾಣಸವೊಲ್ಲದು ? ಈ ಮನ್ಯಾಗ ಕಸಬರಿಗೀ ಇಡಲಿಕ್ಕೂ ಜಾಗಾ ಇಲ್ಲ! (ಸಾವಿತ್ರಿ ಕಸಬರಿಗಿಯೊಡನೆ ಪ್ರವೇಶಿಸಿ, ಅಲ್ಲಿಯ ಹೊಲಸು ತೆಗೆದು, ಮಾತಾಡದೆ ಹೋಗುವಳು. ಅವಳು ಹೋದ ಕಡೆಗೇ ಗೋಪಾಲ ನೋಡುವನು) ಯಾಕs ಮಾತಾಡವೊಲ್ಲಿ ? ಅನಾಯಾಸಾ ಎಲ್ಲಾರೂ ಹೊಂಟು ಹೋಗ್ಯಾರ. ನಾಕು ಮಾತರೆ ಆಡೋಣು ಬಾ! ಕತ್ತಲ್ಯಾಗ ಮಾತಾಡಿಸಿದರ ಹ್ಯಾಂಗ ಕೇಳಸಬೇಕೂ ಅಂತ ಸುಮ್ಮನಿದ್ದೀಯೇನು ?

(ಸಾವಿತ್ರಿ ಚಹದ ಕಪ್ಪು-ಬಸಿಯೊಡನೆ ಪ್ರವೇಶಿಸಿ ' ಹೂ ! ಹಾದು ' ಎನ್ನುತ್ತ ಗೋಪಾಲನಿಗೆ ಕೊಟ್ಟು ಹೊರಡುವಳು. ಗೋಪಾಲ ಅವಳ ಕೈಹಿಡಿಯುವನು.)

ಗೋಪಾಲ :— ಯಾಕ ಮಾತಾಡವೊಲ್ಲಿ ? ಹೇಳತೀ ಇಲ್ಲೊ ?

ಸಾವಿತ್ರಿ :— (ಕೆಳಮುಖಮಾಡಿ) ಏನು ಮಾತಾಡಬೇಕು ತಿಳೀದ್ಹಾಂಗಾಗೇದ. ನಿಮಗ ಬಹಳ ಅಡಚಣೀ ಆಗಲಿಕ್ಕೆ ಹತ್ತೇದ; ನನಗೂ ಗೊತ್ತಾಗತೇದ. ನಿಮ್ಮೂರೊಳಗೆಲ್ಲಾ ನೀವು ಶಿಸ್ತಿನೊಳಗ ಇದ್ದವ್ರು. ಇಲ್ಲಿ ನಿಮಗ ಜಗೀ ಹರ್‍ಯೋದಿಲ್ಲಾ ಅಂತ ಅನಸೀ ಅನಸೇದ ! ಈ ಸಣ್ಣ ಮನ್ಯಾಗ ಮುಂದೀನೂ ಬಹಳಾಗತದ. ಅದಕs ನಾಚಿಕೊಂಡು ಸುಮ್ಮನs ಕೂತು ಬಿಟ್ಟೇನಿ.... ಇಷ್ಟು ದಿನ ಕೂತ್ಹಾಂಗ ! ಯಾರಾರೇ ಬರತಾರ ; ಒಳಗ ಹೋಗ್ತೇನಿ. (ಹೊರಡುವಳು.)

ಗಜಕರ್ಣ, ಹುರುಕು, ಇಸಬು
ಮುಂತಾದ ಚರ್ಮರೋಗಗಳನ್ನು ತಪ್ಪದೆ
ಗುಣಪಡಿಸುವ ಔಷಧ

ಗೋಪಾ ಮಲಮ್

ಸ್ಟಾರ್ ಕಂಪನಿ
ಬೆಳಗಾಂವಿ.

ಗೋಪಾಲ :— ಸ್ವಲ್ಪ ನಿಂದ್ರು ಅಂದ್ರ ಎಷ್ಟ ಮಾಡ್ತೀಯs? ಜನಾ ಬಂ ದsಬರತಾರ. ಈ ಮನೀ ಅಂದ್ರ ಧರ್ಮಸಾಲಿ ಇದ್ದಾಂಗದ. ಮೊದಲs ಊಟಾ ಮನೀ ಇದು. ಅದರೊಳಗ ನಿಮ್ಮ ಬಳಗೆಲ್ಲಾ ಹಳ್ಳೀಜನಾ. ಬರೀ ಉಂಡು ಬೆಳೆದು, ಬಾಗಿಲದಾಗ ಹಿಡಿಸದ್ಹಾಂಗಾಗ್ಯಾರ. ಅದರಾಗ ನಿಮ್ಮ ಅವ್ವನ ಧನಿಯಿಂದ ಈ ಮನೀ ಅದರತsದ. ಅದನ್ನ ಕೇಳಿದರ ಥೆಲೋ ಕೇಳಸವರೂ ಕಿವಡಾಗತಾರ. ಮ್ಯಾಲಿಂದ ಮ್ಯಾಲೆ ಸಿಟ್ಟಿಗೆ ಬ್ಯಾರೀ ಬರತಾಳ.

ಸಾವಿತ್ರಿ :— ಸಾಕು. ಏನಾsರೇ ಒಂದು ಮಾತಾಡೋದು! ನಿಮಗೆಲ್ಲೆ ಒದರಿ ಮಾತಾಡತಾಳ? ತಂಗಿ ಶಾಂತೀ ಕಿವಿ ಕಿವಡವs ಅಂತ ಸ್ವಲ್ಪ ಒದರಬೇಕಾಗತsದ. ಯಾತರದsರೆ ಸಿಟ್ಟು ಯಾತರ ಮ್ಯಾಲsರೆ ಹಾಕತೀರೀ ಆತು. (ಸ್ವಲ್ಪ ಮಂದಹಾಸದಿಂದ) ಅದೆಲ್ಲಾ ಇರಲಿ; ಮನೀ ಎಲ್ಲ್ಯಾರೇ ನೋಡಿದಿರೇನು?

ಗೋಪಾಲ :— ತೀssರ್ಹೋತು! ಮನೀ ಅಂಶ ಮನೀ! ಈ ಊರಾಗಿನ ಎಲ್ಲಾ ಸಂದೀಗೊಂದೀ ಹುಡುಕಲಿಕ್ಹತ್ತೀನಿ ಒಂದೇ ಸವನೇ. ಏನೂ ಪತ್ತೇಹಚ್ಚಗೊಡೋದಿಲ್ಲ ಇಲ್ಲೀ ಜನಾ! ಇಲ್ಲ ಅಂದರೂ ಎರಡು ಮೈಲು ಧೂರದ ಮ್ಯಾಲೆ ಒಂದೆರಡು ಮನೀ ಅವs. ಬಹಾಳೀ ದೊಡ್ಡೂ ಅವ. ಅವಕ್ಕ ಬಾಡಿಗಿ ಎಷ್ಟಂತ ತಿಳದೀದಿ! ಒಂದು ಮನೀಗೆ ೭೦ ರೂಪಾಯಂತ! ಮತ್ತ ಮೊದಲs ಒಂದು ವರ್ಷದ ಬಾಡಿಗೀ ಕೊಡಬೇಕಂತ! ಇಂಥಾ ಮಾತು ಕೇಳೋದಕ್ಕಿಂತಾ ಭಾವ್ಯಾಗ ಬೀಳೂದು ಛಲೋ ಅನಸತsದ! ಈ—ಈ ಮನೀ ಮಾಲಕರೆಲ್ಲಾ....ಸಂಸ್ಥಾನಗಳೆಲ್ಲಾ ಹಾಳಾಗಿ ಹೋದಮ್ಯಾಲೆ ಅವುಗಳ ಮಹಾರಾಜಕೀ ಕಸಕೊಂಡ್ಹಾಂಗ ಮೆರದಾಡಲಿಕ್ಹತ್ತ್ಯಾರ. ಇಷ್ಟು ಇದ್ದರೂ, ನೂರಾರು ಜನಾ ಆ ಮನಿಗಳಿಗೆ ನಾ ಮುಂದ ನೀ ಮುಂದ ಅಂತ ತೆಕ್ಕಿ ಬಿದ್ದಿರತಾರ! ಆ ಮಾಲಕನದಂತೂ ಸೊಕ್ಕು ಅಷ್ಟಿಷ್ಟು ಅಂತ ಹೇಳೋ ಹಾಂಗಿಲ್ಲ. ಹೊರಗ ಬ ದು ಎಲ್ಲಾರಿಗೂ 'ಕ್ಯೂ'ದಾಗ ನಿಂದರ್ರಿ ಅಂತ ಝುಬರಿಸಿ ಬಿಡತಾನ. ಯಾರಾರೇ ಗದ್ದಲಾ ಮಾಡಿದರ 'ಕ್ಯಾಬೇ' ಅಂತ ಕೇಳತಾನ. ಹೇಳೀ ಕೇಳೀ ಕೋಳೀ ಜಾತಿ ಅವಂದು.......

ಸಾವಿತ್ರಿ :—ಅದೆಲ್ಲಾs ಖರೆ; ಆದರೂ ಹಾಂಗs ಹುಡುಕ್ಕೋತ ಇರೋದು ಆತು; ಇದ್ದ ಮನೀ ಒಳಗ ಇದೇ ಮನ್ಯಾಗ, ನಿಮಗ ಬ್ಯಾರೀ ಮನಿ—ದೊಡ್ಡ ಮನಿ— ಸಿಗೂತನಕ, ಹ್ಯಾಂಗಾರೆ ಇದ್ದರ ಆsತು! ಈಗ ಜೋಗಾನ್ರsರೀ ಎಲ್ಲೆ ?

ಗೋಪಾಲ :— ನಿಂದೂ ಬರೋಬರಿ, ನಂದೂ ಬರೋಬರಿ. ನೋಡತೀ ಇಲ್ಲೋ!....ಸೀನs? ಈಗ ೩—೪ ತಿಂಗಳು ಹ್ಯಾಂಗ ನಡsದ ಈ ಮನ್ಯಾಗ? ಇಷ್ಟ ಜನಾ ಶಿಸ್ತಿನ್ಯಾಗ ಹ್ಯಾಂಗ ಇರಲಿಕ್ಕೆ ಸಾಧ್ಯ ಅದ? ಎಲ್ಲಾರೂ ಒಮ್ಮೆಗಿಲೆ ಬಂದು ನಿಂತ್ರ ನಿಂದರಲಿಕ್ಕೆ ನೆಟ್ಟಗ ಜಾಗಾ ಇಲ್ಲ. ನಾಳಿಗೆ ಬ್ಯಾರೀ ಸತ್ಯನಾರಾಯಣಾ ಅಂತೀರಿ. ಬ್ರಾಂಬರನ್ನೆಲ್ಲಾ ಊಟಕ್ಕ ಛಪ್ಪರದ ಮ್ಯಾಲೆ ಕೂಡಸತೀರೇನು? ಊಟ ಮನ್ಯಾಗ ಮಡೀಲೆ ಬ್ಯಾರೇ ಅಡಿಗಿ ಆಗಬೇಕು. ಈ ಸಣ್ಣ-ಮನ್ಯಾಗ ಸರದಾಡಲಿಕ್ಕೆ ಬರದ್ಹಾಂಗ ಕೂತು ಸತ್ಯನಾರಾಯಣದ ಊಟಾ ಮಾಡೋದಕ್ಕಿಂತಾ, ನಾಳೆ ಖಾನಾವಳಿಗೆ ಹೋಗಿ ಊಟಾ ಜಡೀತೇನಿ; ಎಲ್ಲೆರೇ ಬಿದ್ದುಕೊಂಡು, ಸತ್ತವರ್ಹಾಂಗ ನಿದ್ದೀ ಮಾಡತೀನಿ.

ಸಾವಿತ್ರಿ :— ಇದೇನು ಧಂದಿದು? ಮನಿಯೊಳಗ ದೇವರ ಕೆಲಸ....ಮ್ಯಾಲೆ ಸತ್ಯನಾರಾಯಣಪೂಜಾ ಇರತsದ. ಮನಿಯೊಳಗಿನ ಪ್ರಸಾದಾ ಬಿಟ್ಟು ಖಾನಾವಳಿಗೆ ಹೋಗತೀನೀ ಅಂದರ ಏನು ಮಾತಾಡೋದು! .... (ಮೆಲ್ಲನೆ) ಕಲತವರಿಗೆ ಹೆಚ್ಚಿಗೇನು ಹೇಳೋದsದ.

ಗೋಪಾಲ :— ಸಾಕು. ಮುಲಿಕೀ ಪರೀಕ್ಷಾ ಪಾಸಾಗ್ಯಿಲ್ಲೋ; ಮುದಿಕೇರ ಗತೆ ಮಾತಾಡತಾಳ! ಏನಾsರ ಮಾಡಿಕೊಳ್ರಿ. ನನ್ನ ಉಸಾಬರಿ ಮಾಡಬ್ಯಾಡ್ರಿ ನಾಳೆ!

ಸಾವಿತ್ರಿ :— ಅವ್ವಾ ಈಗ ಬರತಾsಳ. ಆಕೀಗೆ ಹೇಳ್ರಿ.

ಗೋಪಾಲ :— (ಸಿಟ್ಟಿನಿಂದ) ನಿಮ್ಮನ್ಯಾಗ ಇದ್ದೀನಂತ ಪ್ರತಿಯೊಂದು ಮಾತಿಗೆ ನಿಮ್ಮ ಅವ್ವನ್ನ ಕೇಳಕೊಳ್ಳಿಕ್ಕೆ ನಾ ಅಂದರ ಏನಂತ ತಿಳದೀರಿ ನೀವೆಲ್ಲಾ ?

ಸಾವಿತ್ರಿ :— ನಾ ಹಾಂಗೆಲ್ಲೆ ಅಂದೆ! ಸುಳ್ಳs ಪ್ರತಿಯೊಂದು ಮಾತಿಗೆ ಸಿಟ್ಟಿಗೇಳತೀರಿ! ಅವ್ವ ನಿಮಗ ಪೂರ್ಣ ಮರ್ಯಾದೀ

ಕೊಟ್ಟೇ ಕೊಡತಾಳ. ಪ್ರತಿಯೊಂದು ಮಾತೂ ನಿಮ್ಮನ್ನ ಕೇಳದೇ ಮಾಡೋದಿಲ್ಲ!

ಗೋಪಾಲ :— ಹುಂ! ಅದೊಂದು ಕಡಿಮೆಯಾಗಿತ್ತೆನೋ ನನ್ನ ಪಾಲಿಗೆ ಅನ್ನೊಹಾಂಗ, ಪ್ರತಿಯೊಂದು ವಿಷಯಕ್ಕ ಸಣ್ಣಾಗಿ ಆರ್ತೀರಿ ನನ್ನ. ಈಗ ಎರಡು ತಿಂಗಳಾಯಿತು.... ಎಲ್ಲಾ್ಯರೇ ಮೂಲ್ಯಾಗ ಮಲಕೊಂಡು ನಿದ್ದೀ ಮಾಡತಿರತೇನಿ; ಮಧ್ಯರಾತ್ರಿ ಆದಾಗೂ ಎಬ್ಬಿಸಿ ಬಿಡತೀರಲಾ! ನಿಮ್ಮ ಮುಂದಿಗೆ ಏನ ಅನಬೇಕು? ಅಲ್ಲಾ—ಮೊನ್ನೆ ಸುಳ್ಳೇ ಶಾಂತಿ ರಾತ್ರೀ ಹೊಸಾ ಪೋಲಕಾ ಬೇಕು ಅಂತ ಹಟಾಮಾಡಿದರ, ನಿಮ್ಮ ಅವ್ವ ಅಷ್ಟು ರಾತ್ರ್ಯಾಗ ನನ್ನ ಎಬ್ಬಿಸಿ, 'ನಾಳೆ ಪೋಲಕಾ ಹೊಲಸ್ರ್ಯಾಕ' ಅಂತ ಹೇಳೂದೇನು ಜರೂರಿತ್ತು? ಈಗ ನಾಕು ದಿನಾ ಆತು. ಒಗದದ್ದು ಚಾದರು ಸಿಗವಲ್ಲು. ಪ್ರತಿಯೊಂದಕ್ಕೂ 'ನಾ ಆರೆ ಏನ ಮಾಡಲಿ, ಮನೀ ಸಣ್ಣದದ, ಸಾಮಾನು ಇಟ್ಟಲ್ಲೆ ಉಳ್ಯೋದಿಲ್ಲ' ಅಂತ ನಿಂತುಬಿಡ್ತೀದಿ. ಮೊದಲೇ ನಿಮ್ಮ ರಾತ್ರೀ ಊಟ ೧೧ಕ್ಕ. ಅಮ್ಯಾಲೆ ಹಾಸಿಗೀ ಹುಡುಕಲಿಕ್ಕೆ ಸುರು. ನಡುವ ನಿಂದೂ ಶಾಂತೀದೂ ಝಗಳ. ಈ ಜಮಖಾನೀ ಒಗದು ಒಂದು 'ಕನ್ಯಾಗತ' ಆಗೇದೇನು? ಗೊಮ್ ಅಂತ ನಾರತದ. ನೀವೆಲ್ಲಾ ಹಳ್ಳೀಜನ. ನೆಲದ ಮ್ಯಾಲೆ ಬಿದ್ರೂ, ನಿಂತರೂ, ನೀರಾಗ ಕೂತರೂ, ಗುರ್ ಗುರ್ ಅಂತ ನಿದ್ದೀ ಮಾಡತೀರಿ. ಈ ಮನೀ ನಿಮಗ ಸಣ್ಣದ್ಹ್ಯಾಂಗ ಆದೀತು! (ಸಾವಿತ್ರಿ ಹೊರಡುವಳು)....ಏ ಏ. ಹೊಂಟ್ಯಾಕ!

ಸಾವಿತ್ರಿ:— (ನಿಲ್ಲುವಳು) ಏನೋ ಮನೀಯೊಳಗ ಯಾರೂ ಇಲ್ಲ, ನಾಕುಮಾತು ಆಡೋಣ ಅಂದ್ರೀ ಅಂತ ನಿಂತೆ... ಆದರ.... ಹೋಗ್ತೇನಿ ಇನ್ನ. ಮನೀ ಕೆಲಸಾ ಆರೆ ಮಾಡತೇನಿ.

ಗೋಪಾಲ :— ನಾ ಹೇಳಲಿಲ್ಲೇ? ನಾ ಅಂದರ ಅಷ್ಟು ಬ್ಯಾಸರಿಕಿ ನಿಮಗ! ನಿಮ್ಮಂಥವರ ಮನ್ಯಾಗ ನಮ್ಮಂಥವರು ಮನೀ ಅಳ್ಯಾ ಆಗಿ ಇರಬಾರದು. ನನಗ ಗೊತ್ತಿತ್ತು ನೀ ಸಿಟ್ಟಿಗೆದ್ದೀದಿ ಅಂತ........ಹೋಗಲಿ ಬಿಡು! ಈ ಮನೀ ವಿಷಯಾನ ಬ್ಯಾಡಾ. (ಮೆಲ್ಲನೆ) ಈವೊತ್ತರೆ ಸಿನೇಮಾಕ್ಕ ಹೋಗೋಣೇನು? ಒಂದೇ ಮನ್ಯಾಗ ಇಷ್ಟು ದಿನ ಇದ್ರೂ, ನೀ ಒಂದು ಊರಾಗ, ನಾ ಒಂದು ಊರಾಗ—ಇದ್ಹಾಂಗಾಗೇದ.

ಸಾವಿತ್ರಿ :— ನಾ ಎಲ್ಲಾ ತಯಾರೀ ಇದ್ದೇನಿ. ಆದರ....

ಗೋಪಾಲ:— ಆದರಿಲ್ಲ. ಗೀದರಿಲ್ಲ. ಈ ವೊತ್ತು ಹೋಗೋದೇ. ನಾ ಹೇಳೋ ಮಾತು ಒಂದರೆ ಕೇಳು....ಆ ಜರದ ಸೀರೀ ಎಂದು ಉಟುಕೊಂಬಾಕೀ?

ಸಾವಿತ್ರಿ:— ಮನ್ಯಾಗ ಇಷ್ಟು ಮಂದಿ ಇದ್ದಾರ....ಊಟ ಆಗಲಿಕ್ಕೆ ತಡಾ ಆಗತದ ಅಂತ ನಿಮಗ ಗೊತ್ತೇ ಅದ, ಅದರಾಗ ನಾಳೆ ಬ್ಯಾರೇ ಸತ್ಯನಾರಾಯಣ. ಎಲ್ಲಾ ತಯಾರೀ ಮಾಡಬೇಕಾಗೇದ. ಆದಕ....

ಗೋಪಾಲ:— (ಸಿಟ್ಟಿನಿಂದ) ನಾ ಊಟಾ ಮಾಡೋದಿಲ್ಲ ಇವೊತ್ತ. ಈವೊತ್ತು ಗುರುವಾರ. ಇವೊತ್ತಿನ ತೊಟ್ಟು ಗುರುವಾರ ಮಾಡ್ತೇನಿ. ನೀನೂ ಮಾಡು. ಈವೊತ್ತಿನ ಕೆಲಸಾ ಎಲ್ಲಾ ನಿಮ್ಮ ರೆವಡಿ ಶಾಂತಿ ಮಾಡಲಿ. ಬರೇ ಉಂಡು ಬೆಳದು ಹರಬೀ ಹೊಡೀತಾಳ. ರಾತ್ರೀ ತನಕಾ ಸಿರಿಸಿರಿ ತಿರಗ್ಯಾಡೋದೇ? ರಾತ್ರಿ ಆಗದ್ದೇ ಏನ ಮಾಡತದ ಕೆಲಸ ಮುಗೀಲಿಕ್ಕೆ?

ಸಾವಿತ್ರಿ :— ಇವರೆಲ್ಲಾ ಹೊಂಟು ಹೋಗ್ಯಾರಂತ ನಾಕು ಮಾತರೆ ಆಡಲಿಕ್ಕೆ ಸಿಕ್ಕಿತಲ್ಲಾ ನಿಮಗ (ನಾಲಗೆ ಕಚ್ಚುವಳು.)

ಬಾಯೋಟೋನಾ

ಇದರ ಸೇವನೆಯಿಂದ

ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ಸ್ನಾಯುಗಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ '**ಬಾಯೋಟೋನಾ**' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ **ಬೆಲೆ** ರೂ. ೨ ಟ. ಖರ್ಚು ಬೇರೆ. ಸೂಚಿಪತ್ರ ಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ ನೆಯ ಆವೃತ್ತಿ

ಅಚ್ಚುಗುತ್ತಲಿದೆ.

ಬೇಗನೆ

ಪ್ರಕಟವಾಗುವುದು.

ಬರೆದವರು :

ಶ್ರೀ. ಜಿ. ಎಸ್. ಹುದ್ದಾರ

ಆಗಸ್ಟ್ ಕ್ರಾಂತಿಯ ಸೇನಾಪತಿ

ಚೆನ್ನಪ್ಪ ವಾಲಿ

ಅವರ ಜೀವನದ ರೋಮಾಂಚಕಾರಕ ಕಥೆ.

ಬರೆದವರು :

ಬಸವರಾಜ ಕಟ್ಟೀಮನಿ

ನಿಮ್ಮ ಪ್ರತಿಗಾಗಿ —

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ.

ಗೋಪಾಲ :— ಹೌದು. ನಾನೂ ಈವೊತ್ತು ಲಗೂ ಬಂದೇನಿ. ಆದರ....ಆದರ, ಹೋಗೋದು ಅಂದರ ಎಷ್ಟೊತ್ತು ಹೋಗೋದು?

ಸಾವಿತ್ರಿ :— ನನಗೇನು ತಿಳ್ಯೂದಿಲ್ಲ. ಹಾಂಗೊಮ್ಮೆ ಹೀಂಗೊಮ್ಮೆ ಮಾತಾಡತೀರಿ, ಹ್ಯಾಂಗ ಉತ್ತರಾ ಕೊಡೋದು ಅಂತೇನಿ. ಅನುಕೂಲ ಆದರ ಸಿನೇಮಾಕ್ಕ ಹೋಗಲಿಕ್ಕೆ ನನಗೇನು ಬ್ಯಾಡಾಗೇದ? (ನೆನಪುಮಾಡಿಕೊಂಡು) ಅರೇ, ಗುರುವಾರಾ ಅಂದ್ರೀ ಅಂತ ನೆನಪಾತು ಈವೊತ್ತು ನಿಮ್ಮ ಅಣ್ಣ ಶ್ಯಾಮಣ್ಣ ಮತ್ತ ವೈನೀ ಊರಿಂದ ಬರಾವರಿದ್ದಾರಲ್ಲಾ ? ಈಗ ಬರೋ ಹೊತ್ತಾಗೇದ.. ....

ಗೋಪಾಲ :— (ಉತ್ಸಾಹಿತವಾಗಿ) ಹೌದಲ್ಲ ಮರೆತೇ ಬಿಟ್ಟಿದ್ದೆ. ಈ ಸಣ್ಣ ಮನ್ಯಾಗ ಇದ್ದು ಇದ್ದು ನನ್ನ ತಲ್ಯಾಗ ಸಣ್ಣ ಸಣ್ಣ ಹುಳಾ ಹೊಕ್ಕಾಂಗ ಆಗೇದ. (ಮತ್ತೆ ವಿಷಾದದಿಂದ)....ಈ ಸಣ್ಣ ಮನಿ....ಈ-ಈ-ಸಣ್ಣ ಮನ್ಯಾಗ, ಅವರು ಇಲ್ಲೆ ಒಂದು ಮಿನೀಟು ನಿಂದ್ರೋದಿಲ್ಲ. ಊರು ನೋಡಲಿಕ್ಕೆ ಬ್ಯಾರೇ ಬರಾವರಿದ್ದಾರ. ಕನಿಷ್ಠ ಒಂದು ವಾರಾದರೂ ನಿಂದ್ರಾರು. ಏನು ಪಂಚೇತಿ ಬಂತಿದು ಅಂತೇನಿ !

ಸಾವಿತ್ರಿ :— ಅವರೇನು ಅಷ್ಟು ತ್ರಾಸ ಮಾಡಿಕೊಳ್ಳೂ ಜನಾ ಅಲ್ಲೇಳ್ರಿ. ನಾ ಹ್ಯಾಂಗಾದರೆ ಅವರ ವ್ಯವಸ್ಥಾ ಮಾಡತೇನಿ. ನಿಮಗ ಅವರಕಿಂತಾ ಹೆಚ್ಚಿನ ಶಿಸ್ತು ಬೇಕಾಗತದ. ಸಣ್ಣ ಮನೀ ಇದ್ದಾ ಕ್ಷಣಕ್ಕ ಅಷ್ಟ್ಯಾಕ ಆದರ ವ್ಯಾಲೇ, ಮತ್ತ ಮನೀ ಮಂದೀ ಮ್ಯಾಲೂ ಹರೀ ಹಾಯೂದೂ ಅಂತೇನಿ ನೀವಿರೂ ತನಕಾ ನಿಮ್ಮದ ಮನೀ ಅಂತ ತಿಳಕೊಂಡು, ಸ್ವಲ್ಪ ಸಮಾಧಾನ ಮಾಡಿಕೊಂಡರ, ಮನಸಿಗೆ ಅಷ್ಟು ತ್ರಾಸಾಗೋದಿಲ್ಲ.

ಗೋಪಾಲ :— (ಅವಳ ಮಾತಿನ ಕಡೆಗೆ ಲಕ್ಷ್ಯಕೊಡದೆ, ಒಂದು ಮಾಡಿನಲ್ಲಿ ಕೈಹಾಕಿ ಬ್ಯಾಟರೀ ಹುಡುಕ ಹತ್ತುವನು. ಅಲ್ಲಿದ್ದ ಸಾಮಾನು ಗುಡುಗುಡು ಉರುಳಿ ನೆಲಕ್ಕೆ ಬೀಳುವುವು. ಸಿಟ್ಟಿಗೇಳುವನು.) ಎಂಥಾ ಮಾಡಿವು ? ಘಳಿಗ್ಗೊಮ್ಮೆ ಭೂಕಂಪ ಆದಾವರ ಹಾಂಗ ಸಾಮಾನೆಲ್ಲಾ ಗುಡುಗುಡು ಉರುಳ್ಯಾಡತಾವ ! ಈ ಮನೀ ಮಾಲಕರಿಗೆ ಇಷ್ಟೂ ಅಕ್ಕಲು ಇ ಬಾರದ ! ಮೊದಲ ಸಣ್ಣ ಮನಿ; ಮಣ್ಣಿನ ಗೋಡಿ; ತಗ್ಗು-ದಿ ನೆಲಾ, ದೊಡ್ಡು ಕಪಾಟಿಲ್ಲ. ಇಟ್ಟ ಸಾಮಾನೆಲ್ಲಾ ಗುಡುಗು ಉರುಳಿ ಹೋಗೋಹಾಂಗ ಮಾಡ ಬ್ಯಾರೆ. (ಏನೋ ವಿಚಾರಿ ಈ ಮನಿಗೆ ಬಾಡಿಗೀ ಎಷ್ಟು ಕೊಡತೀರಿ ?

ಸಾವಿತ್ರಿ :— ಮೂವತ್ತೆರಡು ರೂಪಾಯಿ. ಎಷ್ಟ ಸ ಕೇಳೋದದು !

ಗೋಪಾಲ :— (ಹೌಹಾರಿ....ತಲೆ ಹಿಡಿದುಕೊಂಡು) ಆ ಮೂವತ್ತೆರಡು ರೂಪಾಯಿ!! ಈ ಈ ಮನೀ ಮಾಲಕರನ್ನ ಒಮ್ಮೆ ಸಾಯೋ ಹಾಂಗ ಫಾಶೀ ಕೊಡಬೇಕು. ಇವರೆಲ್ಲಾ ಸೊ ಗೆದ್ದಾರ, ಛಿಲ್ರೋ ಇದ್ದ ದೊಡ್ಡ ದೊಡ್ಡ ಮನಿಗಳನೆಲ್ಲಾ, ರೊಕ್ಕ ಆಶಾಕ್ಕ ಕೆಡವಿ, ಅಷ್ಟರಾಗ ಎಂಟು ಹತ್ತು ಮನೀ ಕಟ್ಟಿಸತಾ ಬಾಡಿಗೀ ಇರಲಿಕ್ಕೆ ಬರಾವರೂ ಅಂದರ ಏನ ಅಂತ ತಿಳಿದಾರ ಜನರು ? ನಾಕು ಜನಾ ಹೆಚ್ಚಿಗೆ ಬಂದರ ಕುದರೀ ಗತೆ ನಿಂ ನಿದ್ದೀ ಮಾಡಬೇಕ ? ಹೋದ ವರ್ಷ ಅತೀವೃಷ್ಟಿ ಆಗಿ ಎಷ್ಟೋ ಮನೀ ಬಿದ್ದೂ ಅಂತ........ಇಂಥಾ ಕೊಳಕು ಮನೀ ಹ್ಯಾಂ ಬೀಳಲಿಲ್ಲಾ ಅಂತ ಆಶ್ಚರ್ಯ ಆಗೇದ ! ಛೀ ! (ತಲೆಯ ಮ್ಯಾ ಹ್ಯಾಟ್ ಹಾಕಿಕೊಂಡು, ಒಂದು ಕೈಯಲ್ಲಿ ಕೋಟು ಹಿಡಿದ ಮತ್ತೊಂದು ಕೈಯಲ್ಲಿ ಕಂಬಳಿ ತಕ್ಕೊಂಡು ಹೊರಡುವನು.)

ಸಾವಿತ್ರಿ :— ಎಲ್ಲಿಗೆ ಹೊಂಟಿರಿ ? ನಿಮ್ಮ ಜನಾ ಊರಿಂ ಬರೋವರಿದ್ದಾರಲ್ಲ ? ಸಣ್ಣ ಮನೀ ಅಂದಾಕ್ಷಣಕ್ಕ ಸಿಟ್ಟಿಗೆದ್ದ ಹೊರಟರ ನಾ ಏನು ಮಾಡಲಿ ? ಹೊಸಾ ಸಂಸಾರ ಹೆಸರಿಗಾತ ಅಂತ ನನಗೂ ಕಟೇತದ. ಆದರ ಏನ ಮಾಡೋದು? ಹುರ್ತಿಗೆ–

ಗೋಪಾಲ :— (ಧನಿ ಎತ್ತರಿಸಿ) ಹೊಸ ಸಂಸಾರ—ಹೊ ಸಂಸಾರ ! ಈ ಹಳೇ ಸಣ್ಣ ಮನ್ಯಾಗ ಹೊಸ ಸಂಸಾರನ ? ಈ ಹಳಸಿದ ಸಣ್ಣ ಮನ್ಯಾಗ, ಈ ಹಳಬರ ಸಣ್ಣ ಮನ್ಯಾಗ ಹೊ ಸಂಸಾರ ಹ್ಯಾಂಗ ಸಾಧ್ಯ ಅದ ! ನಿಮ್ಮ ಜನಾ ಅಂದರ ಹುಳಗ ಸಂತಿ ಇದ್ದಾಂಗ ಇದ್ದಾರ. ಇಲ್ಲಿ ನನಗ ಒಂದು ಮಿನೀಟ ಇರಲಿಕ್ಕೆ ಸಾಧ್ಯ ಇಲ್ಲ. (ಕಂಬಳಿ, ಕೋಟು ಮತ್ತೆ ಸರಿಸಿ ಕೊಳ್ಳುವನು.)

ಸಾವಿತ್ರಿ :— ನಿಮ್ಮ ಜನಾ—ನಿಮ್ಮ ಜನಾ ಅಂತ ಎಷ್ಟಂ ಬೈತೀರಿ ಬೈರಿ. ನೀವು ಬಂದಾಗಿನಿಂದ ಬಾಡಿಗೀ ಖರ್ಚು ನಿಮ್ಮಾ ಲೇನು ಬಿದ್ದಿಲ್ಲ. (ನಾಲಗೆ ಕಚ್ಚುವಳು. ಗೋಪಾಲ ಗಕ್ಕಂಗ ಅವಳ ಕಡೆಗೆ ನೋಡುವನು) ಒಮ್ಮಿಗಿಲೇ ಅರಮನೀ ಹ್ಯಾಂಗ ಸಾಧಿಸಬೇಕು? ಅಲ್ಲಾ, ಹ್ಯಾಂಗಾದರೂ ಹುಡುಕಲಿಕ್ಹತ್ತೀರಿ. ಸಣ್ಣ ಮನೀ ಇದ್ದರ ಏನಾತು ? ದೊಡ್ಡ ಮನಸ್ಸಿದ್ದಾವ್ರಿಗೆ ಸಣ್ಣ ಮನೀ ಏನು, ದೊಡ್ಡ ಮನೀಯೇನು? ದೊಡ್ಡ ಮನಿಯೊಳಗ ಇದ್ದು ಸಣ್ಣ ಮನಸ್ಸಿರೋದರಕಿಂತಾ, ಸಣ್ಣ ಮನಿಯೊಳಗ ಇದ್ದು ದೊಡ ಮನಸ್ಸಿಲೇ ಇರೋದು ಒಳ್ಳೇದಲ್ಲ ? ೭

ಗೋಪಾಲ :— (ಗೊಂದಲಗೊಂಡು) ಆಃ ಆಃ ಏನಂದಿ ? ಏನಃ, ಯಾವ ಲಫಂಗ ಮಂಗನ ಮಗ ನಿನಗ ಹೇಳಿ ಕೊಟ್ಟಾನ ಈ ಸಣ್ಣ—ದೊಡ್ಡ ಮನಸ್ಸಿನ ಮಾತು ? ಅಲ್ಲಾಃ, ಸಣ್ಣ ಮನ್ಯಾಗ ದೊಡ್ಡ ಮನಸ್ಸು... ....ಅಧ್ಯಾಂಗ, ದೊಡ್ಡದಾಗತೈದ ಆ ಮನಸ್ಸು ! ....ಇರಲಿ. ದೊಡ್ಡ ಮನಸ್ಸು ಮಾಡಿ ಇದ್ದರ, ಈ ಜಾಗಾ ಹ್ಯಾಂಗದು ದೊಡ್ಡದಾಗತೈದ.........ಮತ್ತ ನಮಗ ಸುಖಾ ಕೊಡತೈದ ? ಎಟ್ಟಂಕನ್ನಾಂಗ ಏನಾರಃ ಮಾತಾಡತೀ ಆತೀ. ಉರುಲು ಹಾಕಿಕೋಬೇಕಂದರೂ ಹಗ್ಗಾ ಕಟಗೊಳ್ಳಕ್ಕ ಕೂಡಾ ಜಾಗಾ ಇಲ್ಲ ಇಲ್ಲೆ...........ನಾ ಹೊಂಟೆ....

ಸಾವಿತ್ರಿ :— (ಗಾಬರಿಯಾಗಿ) ಎಲ್ಲಿ ಹೊಂಟ್ರಿ ? ಖರೇನಃ ಹೋಗ್ತೀರೇನು ?

ಗೋಪಾಲ :—ಹೌದು. ಯಾಕ? ಯಾರ ಅಪ್ಪನ ಅಂಜಿಕೇನು! ಇಬ್ರಾಹಿಮ್ ರೋಜಾ, ಜುಮ್ಮಾ ಮಸೀದಿ, ಕೋಟೀ ಗೋಡಿ— ಎಲ್ಲಾ ಇನ್ನೂ ಖಾಲೀ ಬಿದ್ದಾವ. ಮಹಾರಾಯಾ ಆ ಮಾಲಕಾ, ಬೇಕಾದಷ್ಟು ದೊಡ್ಡ ಇಮಾರತಿಗಳನ್ನ ಕಟ್ಟಿಸಿ ಒಗೆದಾನ. (ನೆಲ ತೋರಿಸಿ) ಈ - ಈ - ಇದನೋಡು ಇಂಥ ಸಣ್ಣ ಮನ್ಯಾಗ ಇದ್ದು ಇಷ್ಟುಬಾಡಿಗೀ ಕೊಡೋದಕಿಂತಾ, ಅಂಥಾ ದೊಡ್ಡ ಇಮಾರತಿನ್ಯಾಗ ನಮಾಜು ಮಾಡಿಕೋತಾಃದರೂ ಇರಬೇಕೂ ಅನಿಸ-ತೈವ. ಈ ಮನೀಗೆ ಇನ್ನಮ್ಯಾಲೆ ಜಯ ಹಿಂದ್ ! (ಗಡಿಬಿಡಿಯಿಂದ ಹೋಗುವನು. ಸಾವಿತ್ರಿ ಕಕ್ಕಾವಿಕ್ಕಿಯಾಗುವಳು. ಹೊರಗೆ ಜಾರಿ ಬಿದ್ದ ಸಪ್ಪಳವಾಗುವದು. ಯಾರೋ ಬರುತ್ತಿರುವವರ ಸಪ್ಪಳವೂ ಕೇಳಿಸುವದು, ಒಂದೆರಡು ನಿಮಿಷಗಳ ಮೇಲೆ ಸಾವಿತ್ರಿಯ ತಾಯಿ ಮತ್ತು ಶಾಂತಿ ಪ್ರವೇ-ಶಿಸುವರು. ಮತ್ತೆ ಕೆಲಹೊತ್ತಿನಮೇಲೆ ಶ್ಯಾಮಣ್ಣ ಗೋಪಾಲನೊಡನೆ ಪ್ರವೇಶಿಸುವನು. ಗೋಪಾಲನ ಅರಿವೆ ರಾಡಿಯಾಗಿವೆ. ಗೋಪಾಲ ಸಿಟ್ಟಿ-ನಿಂದ ಶಾಂತಿಯ ಕಡೆಗೆ ನೋಡುವಾಗ :)

ಶಾಂತಿ :— ಗೋಪಣ್ಣಾ ! ದೊಡ್ಡ ಮನೀ ನೋಡಿ ಬಂದೀವಿ· ನಾಡದು ನೀವು ಆ ಮನೀಗೆ ಹೋಗೋದು. ಅವ್ವಾ ಠರಾಯಿಸಿ-ಗೊಂಡು ಬಂದಾಳ.

ಗೋಪಾಲ :— (ಬಾಯಿತೆರೆದು ಸ್ವಲ್ಪ ಎತ್ತರದ ಧನಿಯಿಂದ) ಆಂ ! ಏನಂದಿ ! ದೊಡ್ಡಮನೀ ಸಿಕ್ಕಿತಃ? ಅರೇ ಪಿಂಕೀ ಹುಡಿಗೀ ! ಕಿವುಡಿ ಇದ್ರೂ ಪಕ್ಕಾ ಇದ್ದೀಯಲ್ಲಃ ?

ಶಾಂತಿ :— ಹೋಗ್ರೀ ಅತಲಾಃಗ (ಓ ಡು ತ್ತ ಒ ಳ ಗೆ ಹೋಗುವಳು.)

ಸಾವಿತ್ರಿಯ ತಾಯಿ :— (ಶ್ಯಾಮಣ್ಣನಿಗೆ) ನಿಮ್ಮ ಹೇಣ್ತೀನ್ನ ಯಾಕ ಕರಕೊಂಡು ಬರಲಿಲ್ಲ ?

ಶ್ಯಾಮಣ್ಣ :— (ನಗುತ್ತ) ದೊಡ್ಡಮನೀ ಸಿಕ್ಕಮ್ಯಾಲೆ ಬರತೇನಿ ಅಂತ ಹೇಳಿದಳು.

ಸಾವಿತ್ರಿ :— (ನಗುಮುಖದಿಂದ) ಕಡೀಕ ಹೆಂಗಸರಃ.... ಅಷ್ಟೇ ಅಲ್ಲ, ಹಳ್ಳೀ ಹಳಬರಃ....ನಿಮಗ ಮನೀ ಹುಡುಕಿಕೊಟ್ರು.

(ಗೋಪಾಲ ನಾಚಿಕೊಂಡಂತೆ ಮುಖಮಾಡಿ ಅವಳ ಕಡೆಗೆ ನೋಡುವನು. ಸಾವಿತ್ರಿ ನಾಲಗೆ ಕಚ್ಚಿ ಅಡಿಗೆಯ ಮನೆಗೆ ಹೋಗುವಳು.)

ಸಾವಿತ್ರಿಯ ತಾಯಿ:— ನಾಳಿಗೆ ಸತ್ಯನಾರಾಯಣಾ ಮುಗಿಸಿ-ಕೊಂಡು, ನಾಡದಿನ ದಿನಾ ಆ ದೊಡ್ಡ ಮನೀಗೆ ಹೋಗೀರಂತ.

ಗೋಪಾಲ :— ನಾಡದ್ಯಾಕ ! ಈವೊತ್ತಃ ಹೋ ಗೋ ಣು. ಯಾಕೋ ಶ್ಯಾಮಣ್ಣ ?

ಶ್ಯಾಮಣ್ಣ :— ಈಗ ಹ್ಯಾಂಗ ಹೋ ಗೋ ದು ? ನಾಳೆ ಸತ್ಯನಾರಾಯಣಾ ಮುಗಿಸಿಕೊಂಡು, ನಾಡದು ಹೋದರ ಠೀಕ ಅಲ್ಲಃ ? ಅದೆಲ್ಲಾ ಇರಲಿ. ಮೈಮ್ಯಾಲಿನ ಅರಿವೀ ಬದಲಿಸು. ಆ ಮ್ಯಾಲೆ ಮಾತಾಡೋಣು. (ಸಾವಿತ್ರಿಯ ತಾಯಿ ಮುಗುಳುನಗೆ ನಗುತ್ತ ಒಳಗೆ ಹೋಗುವಳು.)

ಗೋಪಾಲ :— (ಸ್ವಲ್ಪ ವಿಚಾರಿಸಿ— ಆ ಮೇಲೆ ಉಪನ್ಯಾ-ಸಕ್ಕೆ ನಿಂತವರಂತೆ ಎದೆ ಎದೆ ತಟ್ಟುತ್ತ ದೊಡ್ಡ ಧ್ವನಿಯಿಂದ) ಶ್ಯಾಮಣ್ಣಾ, ದೊಡ್ಡ ಮನೀ ಸಿಕ್ಕಿತೂ ಅಂತ ಸುಮ್ಮನೆ ಕೂತೆ. ಇಲ್ಲ-ದಿದ್ದರ ಮನೀ ಸಲುವಾಗಿ ಸರಕಾರದವರು ಒಬ್ಬ ಮಂತ್ರಿನ್ನೇ ನೇಮಿಸಬೇಕೂ ಅಂತ ಇದೇ ಈಗ ಇಬ್ರಾಹಿಮ್ ರೋಜಾದಾಗ ಠಾಣೇ ಹೊಡದು ಸತ್ಯಾಗ್ರಹ ಹೂಡಾಂವಿದ್ದೆ .... ನಾಳೆಗೆ ಸತ್ಯನಾರಾಯಣಾ ಮಾಡಲಿಕ್ಕೆ ನಂದು ಪೂರ್ಣ ಅನುಮೋದನ ಅದ. ನಾಡದಿನಿಂದ ಈ ಸಣ್ಣ ಮನೀ ಕಾಟ, ಈ ಚಿಕ್ಕಾಡಿನ ಕಾಟ, ಈ ಸಣ್ಣ ತಗಣೀಕಾಟ, ಈ ಸಣ್ಣ ಸಂದೀ ಕಾಟ—ಎಲ್ಲಾ ತಪ್ಪ-ತಾವ. (ಉಸ್ಸೆಂದು ಕುಳಿತುಕೊಂಡು ಒಳಗೆ ನೋಡುವನು. ನಿಮಿಷದ ಮೇಲೆ ಮತ್ತೆ ಹಸನ್ಮುಖಿಯಾಗುವನು.) ಹೂಃ ! ಸ್ವಲ್ಪ ಚಹಾ ಮಾಡು, ನಾ ಅರಿವೀ ಬದಲಾಸೂದರೊಳಗ. ಇದು ದೊಡ್ಡ ಮನಿ ಸಿಕ್ಕಿದ್ದರ ಚಹಾ ತಿಳಿತಿಲ್ಲೋ ಮತ್ತ !

ಶ್ಯಾಮಣ್ಣ :— (ಅಡಿಗೆಮನೆಯ ಕಡೆಗೆ ನೋಡಿ) ಕಪ್ಪುಬಸಿ ಸಣ್ಣೂ ಅವನೋ ದೊಡ್ಡೂ ಅವನೋ ? (ಎಲ್ಲರೂ ಘೊಳ್ಳೆಂದು ನಗುವರು. ಒಳಗೂ ನಗೆ ಕೇಳಿಸುವುದು.)

ಸಪ್ತರಂಗ

(ವ್ಯಕ್ತಿಪರಿಚಯಗಳ ಸಂಕಲನ)

ಲೇಖಕರು: ಎನ್. ಎಸ್. ಗದಗಕರ ಬಿ. ಎ.

ಅನಿರುದ್ಧರು ಮುನ್ನುಡಿ ಬರೆದಿದ್ದಾರೆ.

ಬೆಲೆ: ೦—೧೨—೦.

ಮುಖ್ಯ ಮಾರಾಟಗಾರರು :

ಮನೋಹರ ಗ್ರಂಥಭಾಂಡಾರ, ಧಾರವಾಡ.

ದಿವಂಗತ ಅಣ್ಣಾಸಾಹೇಬ ಲಠ್ಠೆಯವರು

(ನಾನು ಕಂಡದ್ದು)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ.

★

ದಿ. ಲಠ್ಠೆಯವರ ಬುದ್ಧಿಶಕ್ತಿ ಅವರ ಬಾಳಿಗೆ ಗೆಲವನ್ನು ತಂದುಕೊಟ್ಟಿದ್ದರೂ, ಅವರ ಅಭಿಪ್ರಾಯ-ನಿಷ್ಠುರತೆ ಬಹುಜನರ ಅಪ್ರೀತಿಯನ್ನು ಒದಗಿಸಿತು. ಹೊತ್ತು ಬಂದಂತೆ ಕೊಡೆ ಹಿಡಿಯುವ ಸ್ವಾರ್ಥಸಾಧಕನಿಗಿಂತ, ನಿಷ್ಠುರ ಹಟವಾದಿಯಾದ ನಿಸ್ಪೃಹಿ ಸಮಾಜಕ್ಕೆ ಹಿತಕಾರಿಯಲ್ಲವೆ?

★

ಶ್ರೀ. ಅಣ್ಣಾಸಾಹೇಬ ಲಠ್ಠೆಯವರನ್ನು ಸಭೆ-ಸಮಾರಂಭಗಳಲ್ಲಿ ನಾನು ಹಲವು ಸಲ ಕಂಡಿದ್ದೆ. ಅವರು ಒಳ್ಳೆಯ ರಾಜಕಾರಣಿಗಳೆಂದೂ ಸ್ಪಷ್ಟವಾದಿಗಳೆಂದೂ ಕೇಳಿದ್ದೆ. ಹಾಸ್ಯಪೂರ್ಣವಾದ ಅರ್ಥಪೂರ್ಣವಾದ ಅವರ ಕೆಲವು ಭಾಷಣಗಳನ್ನೂ ಕೇಳಿದ್ದೆ. ಆದರೆ ಅವರ ವೈಯಕ್ತಿಕ ಸಂಬಂಧ ನನಗೆ ಬಹುದಿನಗಳ ವರೆಗೆ ಬಂದಿರಲಿಲ್ಲ. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಅವರು ದೊಡ್ಡವರು, ಮುಂಬಯಿ ಪ್ರಾಂತದ ಅರ್ಥಸಚಿವರು, ಮೇಲಾಗಿ ಗಂಭೀರ-ಪ್ರವೃತ್ತಿಯುವರು. ನನಗೆ ದೊಡ್ಡವರ ಹತ್ತಿರ ಹೋಗುವುದೆಂದರೆ ಬೇಸರ ಅಲ್ಲದೆ ಇಬ್ಬರ ದಾರಿಗಳೂ ಭಿನ್ನ ಭಿನ್ನ. ಇಷ್ಟೇ ಅಲ್ಲ, ಅವರು ಹಿರಿಯರು, ನಾನು ಹುಡುಗ; ಅವರು ಮರಾಠೀ ಪ್ರಿಯರು, ಕನ್ನಡವೆಂದರೆ ನನಗೆ ಪ್ರಾಣ. ಅದರಿಂದ ಅವರು ಮೊದಲುಸಲ ಮುಂಬಯಿ ಪ್ರಾಂತದ ಅಸೆಂಬ್ಲಿಗೆ ಹುರಿಯಾಳುಗಳಾಗಿ ನಿಂತಾಗ, ನಾನು ಶ್ರೀ. ಅಂಗಡಿಯವರ ಜೊತೆಯಲ್ಲಿ ನಮ್ಮ ಸುತ್ತಲಿನ ಹಳ್ಳಿಗಳಿಗೆಲ್ಲ ಹೋದೆ; ಅವರಿಗೇ ಮತ ಕೊಡಲಿಕ್ಕೆ ಹೇಳಿದೆ. ನಮ್ಮೂರಲ್ಲಿ ಅಂಗಡಿಯವರಿಗಾಗಿ ನಿಂತು ದುಡಿದೆ. ಇದಕ್ಕೊಂದೇ ಕಾರಣ: ಅಂಗಡಿಯವರು ಅಚ್ಚ ಕನ್ನಡಿಗರು, ಲಠ್ಠೆಯವರು ಮರಾಠಿಗರು ಎಂಬುದಾಗಿತ್ತು. ಮುಂದೆ ಲಠ್ಠೆಯವರು ಕರ್ನಾಟಕ ಪ್ರಾಂತೀಕರಣಕ್ಕೆ ವಿರೋಧಿಸಿದರೂ ನನಗೆ ಸುಮ್ಮನಿರಲಿಕ್ಕಾಗಲಿಲ್ಲ ಕೆಲವು ಗೆಳೆಯರನ್ನು ಕೂಡಿಕೊಂಡು, ಠಳಕವಾಡಿ (ಬೆಳಗಾಂವಿ)ಯಲ್ಲಿರುವ ಅವರ ಬಂಗ್ಲೆಗೆ ನೇರವಾಗಿ ಕೇಳಲಿಕ್ಕೇ ಹೋಗಿಬಿಟ್ಟೆ.

ಅಣ್ಣಾಸಾಹೇಬರು ನಗುಮೊಗದಿಂದ ನಮ್ಮನ್ನು ಸ್ವಾಗತಿಸಿದರು, ಕ್ಷೇಮಸಮಾಚಾರ ಕೇಳಿಕೊಂಡರು, ಪರಿಚಯ ಮಾಡಿಕೊಂಡರು. ಆಮೇಲೆ ಮುಖ್ಯ ವಿಷಯದ ಕಡೆಗೆ ಮಾತನ್ನು ಹೊರಳಿಸುತ್ತ ನಾನು ಕೇಳಿದೆ;

“ ಕರ್ನಾಟಕ ಏಕೀಕರಣದ ಬಗ್ಗೆ ನಿಮ್ಮ ಅಭಿಪ್ರಾಯವೇನು ?”

ಅಣ್ಣಾಸಾಹೇಬರು ಒಂದು ಕ್ಷಣ ಗಂಭೀರವಾಗಿ ಕುಳಿತರು. ಅದು ಸಿಂಹಗಾಂಭೀರ್ಯ! ಬೇಟೆಗಾಗಿ ಹೊಂಚು ಹಾಕಿ ಕುಳಿತ ಸಿಂಹದಂತೆ ನನಗೆ ಕಂಡಿತದು ಮೌನ. ಸರಿಕರಾರಾದರೂ ಈ ಪ್ರಶ್ನೆಯನ್ನು ಕೇಳಿದ್ದರೆ ಲಠ್ಠೆಯವರು ಚಟ್ಟನೆ ಉತ್ತರ ಹೇಳಿಬಿಡುತ್ತಿದ್ದರೇನೋ! ಈ ಹುಡುಗರಿಗೆ ಹೇಗೆ ಹೇಳಿ ಸುಮ್ಮನೆ ಕೂಡಿಸಬೇಕೆಂದು ಯೋಚಿಸುತ್ತಿದ್ದರೇನೋ ಅವರು. ಅಗಲವಾದ ಹಣೆ, ನುಣುಪಾದ ತಲೆಗಳ ಮೇಲೊಮ್ಮೆ ಕೈಯಾಡಿಸಿ, ನಮ್ಮ ಕಡೆಗೆ ಹೊರಳಿದರು. ತೀಕ್ಷ್ಣವಾದ ದೃಷ್ಟಿಯೊಂದನ್ನು ಬೀರಿದರು. ಹೊಸ ಕುದುರೆಗಳನ್ನು ಪಳಗಿಸಲು ಕಡಿವಾಣವೊಂದನ್ನು ಮುಂದೆ ತರುವಂತೆ ಮುಗುಳುನಗೆ ನಕ್ಕರು. ಆಮೇಲೆ ಮೆಲ್ಲಗೆ ಮಾತಿಗೆ ಆರಂಭಿಸಿದರು :

“ ಈಗ ಏಕೀಕರಣ ನನಗೆ ಒಪ್ಪಿಗೆಯಿಲ್ಲ. ”

“ ಯಾಕೆ ? ಅದರಲ್ಲಿ ಜೈನಸಮಾಜದ ಅಹಿತವಿದೆಯೆ ?” ನನ್ನ ಗೆಳೆಯರೊಬ್ಬರು ಮಾತು ಸೇರಿಸಿದರು. ಅವರ ಧ್ವನಿಯಲ್ಲಿ ಸ್ವಲ್ಪ ಕೊಂಕೂ ಇತ್ತು. ಇದನ್ನು ಲಠ್ಠೆಯವರು ಬಹುಬೇಗ ಗುರುತಿಸಿ ನಕ್ಕರು. ಗೆಳೆಯರು ಕೇಳಿದ ಮಾತಿನ ಸರಣಿಯಲ್ಲಿಯೇ ಉತ್ತರಿಸಿದರು :

“ ಅಹುದು; ಜೈನರ ಮೇಲೆ ಆಗುವ ಆಘಾತವನ್ನಂತೂ ನೋಡಲೇ ಬೇಕಲ್ಲ ನಾನು ! ಅವರ ಮತಗಳಿಂದಲೇ ನಾನು ಮಂತ್ರಿಪದವಿಗೇರಿದುದು. ಆದರೆ ಏಕೀಕರಣದಿಂದ ಜೈನರಿಗೆ ಆಗುವ ಅನ್ಯಾಯವೇನೆಂಬುದು ನನಗೆ ಹೊಳೆಯುತ್ತಿಲ್ಲ ! ” ಎಂದು ಮಾತನಾಡಿ, ನನ್ನ ಗೆಳೆಯನ ಮುಖದ ಕಡೆಗೆ ನೋಡಿದರು. ಬಗೆಹರಿಯದ ಪ್ರಶ್ನೆಯಂತೆ ತಾವೇ ತಲೆತುರಿಸಿಕೊಂಡು ತೋರಿಸಿದರು ಲಠ್ಠೆಯವರು. “ ಅಲ್ಪಸಂಖ್ಯಾಕರ ಪ್ರಶ್ನೆಯೊಂದಿದೆಯಲ್ಲ ! ” ಗೆಳೆಯರ ಮುಖದಿಂದ ಉದ್ಗಾರವೊಂದು ಹೊರಟಿತು.

" ಈಗಲ್ಲಿ ನೀವು ಬಹುಸಂಖ್ಯಾಕರಾಗಿದ್ದೀರಿ?" ಸ್ವಲ್ಪ ತಡೆದು ಲಕ್ಷ್ಮಯವರು ಮಾತನ್ನು ಮುಂದುವರಿಸಿದರು: "ಯಾವ ಪ್ರಾಂತದಲ್ಲಿಯೂ ಜೈನರು ಬಹುಸಂಖ್ಯಾಕರಿಲ್ಲ; ಇರುವುದೂ ಬೇಕಾಗಿಲ್ಲ. ತಮ್ಮ ತಮ್ಮ ಗುಣಗಳಿಂದ ಅಲ್ಲಲ್ಲಿ ಜೈನರು ಬೆಳಕಿಗೆ ಬಂದೇ ಇದ್ದಾರೆ. ಗುಣಕ್ಕೆ ಎಲ್ಲಿಯೂ ಮತ್ಸರವಿಲ್ಲ. ಇದ್ದರೂ ಬಹುದಿನ ಬಾಳದು. ನಾಳೆ ಏಕೀಕರಣವಾದರೂ ನಮಗೆ ಬಹುಸಂಖ್ಯಾಕರಿಂದ ಹೆದರಿಕೆಯೇ ಇಲ್ಲ ಬುದ್ಧಿವಂತ ಜನ ಎಲ್ಲಿಯೂ ಮೇಲೆ ಬಂದೇ ಬರುತ್ತಾರೆ."

"ಆಮೇಲೆ ನಿಮ್ಮದೇಕೆ ಅಡ್ಡಿ ಏಕೀಕರಣಕ್ಕೆ?"

ಅರಿಸಿ ಹರಳು ಒಗೆದಂತೆ ಗೆಳೆಯರ ಹೃದಯದಿಂದ ಮಾತು ಹೊರಬಿದ್ದಿತು.

"ನಾನು ಪ್ರಾಂತೀಕರಣಕ್ಕೆ ವಿರೋಧಿಯಲ್ಲ; ವಿರೋಧವನ್ನೂ ಮಾಡಿಲ್ಲ. ನೀವು ತಪ್ಪು ತಿಳಿದುಕೊಂಡಿದ್ದೀರಿ. 'ಈಗ ಪ್ರಾಂತ ಸಾಧ್ಯವಿಲ್ಲ!' ಎಂದಿಷ್ಟೇ ನಾನು ಹೇಳುತ್ತಿರುವುದು."

"ಏಕೆ ಸಾಧ್ಯವಿಲ್ಲ?"

"ಹೇಗೆ ಸಾಧ್ಯವಿದೆ ಹೇಳಿರಿ?"

ಪರತಂತ್ರ ಭಾರತೀಯರಾದ ನಮಗೆ ಆಗ ಉತ್ತರ ಹೇಳುವುದು ಸಾಧ್ಯವಿರಲಿಲ್ಲ. ಆ ದಿಸೆಯಲ್ಲಿ ನಾವು ವಿಚಾರಿಸಿಯೂ ಇರಲಿಲ್ಲ. ಏಕೀಕರಣದ ಹುಮ್ಮಸಿನ ಹೊರತಾಗಿ ನಮ್ಮ ಹತ್ತಿರ ಏನೂ ಇರಲಿಲ್ಲ. ಆದರಿಂದ ಅವರ ಪ್ರಶ್ನೆಗೆ ಉತ್ತರವೆಂದು ಉಳಿದ ಮುಖಂಡರನ್ನು ತೋರಿಸಬೇಕಾಯಿತು.

"ಉಳಿದ ಮಂತ್ರಿಗಳೂ, ಮುಖಂಡರೂ, ಏಕೀಕರಣದ ಕಹಳೆ ಊದುತ್ತಿರುವರಲ್ಲ....ಹೇಗೆ?"

"ನಿಮ್ಮಂತೇನೇ ಅವರಷ್ಟು!" ಗೆಲುವಿನ ಮುದ್ರೆಯಿಂದ ಲಕ್ಷ್ಮಯವರು ಮುಂದೆ ಮಾತನಾಡಿದರು: "ಕೇವಲ ಕೂಗಾಡಿದರೆ ಏಕೀಕರಣವಾಗದು. ಆಗದ ಸಂಗತಿಗೆ ಕೂಗೆಬ್ಬಿಸಿದರೆ ಅದಕ್ಕೆ ಬೆಲೆಯೂ ಬರುವುದಿಲ್ಲ. ಕೂಗುವವರ ಅಜ್ಞಾನ ವ್ಯಕ್ತವಾಗುತ್ತದಷ್ಟೇ...."

"ಏನೇ ಇರಲಿ, ಮಾತಾಡಿ ಜನರಿಗೆ ಅಪ್ರಿಯವೇಕೆ ಆನಬೇಕು ನೀವು?"

"ಜನರ ಪ್ರೀತಿಸಂಪಾದನೆಗಾಗಿ ಇದ್ದುದನ್ನೇ ಹೇಳಬಾರದೆ? ಜನರ ಮತಗಳನ್ನು ಪಡೆದು ಅವರನ್ನೇ ಭ್ರಮೆಯಲ್ಲಿ ಮುಳುಗಿಸುವುದೆ? ಇದೆಂದೂ ಆಗದು ನನ್ನಿಂದ. ಮಾನ-ಮರ್ಯಾದೆ ಬೇಕೆಂಬವರು ಹಾಗೆ ಮಾಡಬಹುದು; ನಿಜವಾದ ರಾಜಕೀಯ ವಿಚಾರಿ ಹಾಗೆಂದೂ ಹೇಳಲಾರ. ..."

ಮುಂದೆ ಆ ಮಾತು ಈ ಮಾತುಗಳನ್ನಾಡಿ, ನಾವು ಲಕ್ಷ್ಮಯವರನ್ನು ಬೀಳ್ಕೊಂಡು ಬಂದೆವು. ಅಲ್ಲಿ ನಾವು ಸೋಲನ್ನೇನೋ ಒಪ್ಪಿಕೊಂಡೆವು. ಆದರೂ ಅದು ನಮ್ಮ ವಿಚಾರದಲ್ಲಿ ಗೆಲುವನ್ನು ತಂದಿತು. ಅಖಂಡ ಕರ್ನಾಟಕವನ್ನು ಪಡೆಯುವ ರೀತಿಯ ಬಗ್ಗೆ ಹೆಚ್ಚಿಗೆ ವಿಚಾರಮಾಡಲಿಕ್ಕೆ ಹಚ್ಚಿತು.

ದಿನಗಳುರುಳಿದುವು. ಲಕ್ಷ್ಮಯವರ ವಿಚಾರ-ಆಚಾರಗಳ ಕಡೆಗೆ ನನ್ನ ಲಕ್ಷ್ಯ ಹೆಚ್ಚು ಹರಿಯತೊಡಗಿತು ಕರ್ನಾಟಕದಲ್ಲಿದ್ದ ಏಕೀಕರಣದ ಪ್ರಚಾರದ ಗಾಳಿಗೆ ನಾನೂ ಸಿಕ್ಕಿದ್ದೆ. ಮೊದಲು ಏಕೀಕರಣ ಆ ಮೇಲೆ ಭಾರತಕ್ಕೆ ಸ್ವಾತಂತ್ರ್ಯ—ಎಂದು ನಾನೂ ಕೂಗಾಡುತ್ತಿದ್ದೆ. ಅಂಥ ಸಮಯದಲ್ಲೆಲ್ಲ ಲಕ್ಷ್ಮಯವರ ವಿಚಾರ ನನ್ನ ಎದುರಿಗೆ ನಿಂತು, ಏಕೀಕರಣದ ಹುಮ್ಮಸ್ಸನ್ನು ಅಳಿಸಲು ಯತ್ನಿಸುವುದು. ಆದರೆ ಅದಕ್ಕೂ ನನ್ನ ಮನಸ್ಸು ಉತ್ತರ ಕೊಟ್ಟು ಮುಂದೆ ಸಾಗುವುದು: 'ಏನಾದರೂ ಲಕ್ಷ್ಮಯವರು ವಕೀಲರು. ಮಾತಿನಲ್ಲಿ ನಮ್ಮ ಬಾಯಿ ಮುಚ್ಚಿ ಕಳಿಸಿದರಾಯಿತು!' ಎಂದುಕೊಂಡು, ಒಂದು ಕ್ಷಣ ಏಕೀಕರಣದ ಸೊಗಸಾದ ಕನಸಿನಲ್ಲಿ ತೇಲಿಹೋಗಿ ಬಿಡುತ್ತಿದ್ದೆ.

ಈ ಸಮಯದಲ್ಲಿ ನಾಡಿನಲ್ಲೆಲ್ಲ ನಲವತ್ತೆರಡರ ಕ್ರಾಂತಿಯು ವ್ಯಾಪಿಸಿತು. ದೇಶಕ್ಕಾಗಿ ತರುಣರು ತಮ್ಮ ಜೀವನವನ್ನು ತೃಣಕ್ಕೆ ಬಗೆದು ಹೋರಾಟ ಹೂಡಿದರು. ಸ್ವಾತಂತ್ರ್ಯದ ಪಣಕ್ಕೆ ತರುಣರು ಆತ್ಮವನ್ನು ಹಚ್ಚಿ ನಿಂತಾಗ, ನಮ್ಮ ಹಿರಿಯರಾದ ಲಕ್ಷ್ಮಯವರು ಜೇಲಿನಿಂದ ಕ್ಷಮೆ ಕೇಳಿಕೊಂಡು ಹೊರಗೆ ಬಂದರೆಂಬ ಸುದ್ದಿಯೊಂದು ಸಿಡಿಲಿನಂತೆ ಬಂದು ನಮಗೆ ಅಪ್ಪಳಿಸಿತು. ಈ ಮೊದಲೇ ಕಾಂಗ್ರೆಸ್ಸು ಮಂತ್ರಿಪದದಿಂದ ಹೊರಗೆ ಬರಲಿಕ್ಕೆ ಇವರು ಮನಸ್ಸಿನಿಂದ ಒಪ್ಪಿರಲಿಲ್ಲವೆಂಬ ಸುದ್ದಿಯೂ ಹಳ್ಳಿಗಳಲ್ಲೆಲ್ಲ ಪಸರಿಸಿತ್ತು. ಆದರಿಂದ ಲಕ್ಷ್ಮಯವರ ವಿಷಯಕ್ಕೆ ಕನ್ನಡ ತರುಣರ ಮನಸ್ಸು ಇನ್ನಿಷ್ಟು ಕಲ್ಲಾಯಿತು, ಕೆರಳಿತು ಕ್ರಾಂತಿಯ ಕಡಲಿನಲ್ಲಿ ತೇಲಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಟಿ. ವಿ. ಪಂಡಿತ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಹೋಗಿ, ತರಿಯ ಮರೆಯಲ್ಲಿ ನಿಂತು; ಮರೆಯಲ್ಲಿ ಚಕ್ರವರ್ತಿ ರಾಜಗೋಪಾಲಾಚಾರ್ಯರ ಭಾಷಣವನ್ನು ಕೇಳಲಿಕ್ಕೆ ಹೋದಾಗ, ಅವರ ಜೊತೆಯಲ್ಲಿ ಲಕ್ಷ್ಮಿಯವರೂ ಕಂಡರು ! 'ನ್ಯಾಯ್ಯರ ಜೊತೆ; ಚೆನ್ನಾಗಿದೆಯಲ್ಲ ! ' ಎಂದುಕೊಂಡೆವು ! ಆದರೂ ಲಕ್ಷ್ಮಿಯವರನ್ನು ಕೇಳದೆ ಬಿಡಲಿಕ್ಕೆ ನಮ್ಮ ಮನಸ್ಸು ಒಪ್ಪುತ್ತಿರಲಿಲ್ಲ ಅವರಿಂದ ಸಂದರ್ಭ ಸಿಕ್ಕಾಗ ಕೇಳಿಯೇ ಬಿಟ್ಟೆ. ಅವರು ಒಂದು ಸಣ್ಣ ಮಾತಿನಲ್ಲಿ ಉತ್ತರವಿತ್ತರು:—

"ಸರಕಾರಕ್ಕೆ ನನ್ನನ್ನು ಕಾಯಿದೆಯಿಂದ ಜೇಲಿನಲ್ಲಿ ಇಡಲಿಕ್ಕೆ ಬರಲಿಲ್ಲ. ಅದಕ್ಕಾಗಿ ಬಿಟ್ಟರು. ಅಗಸ್ಟ ಒಂಭತ್ತರ ಠರಾವು ಆಗುವಾಗ ನಾನು ಹಾಜರಿರಲಿಲ್ಲ...."

ಇದರಿಂದ ಲಕ್ಷ್ಮಿಯವರ ವಿಷಯಕ್ಕೆ ಇದ್ದ ನನ್ನ ಕಲ್ಪನೆಯು ತಲೆ ಕೆಳಗಾಗಿ ಬಿಟ್ಟಿತು. ಅಂದಿನಿಂದ ಅವಶ್ಯವೆನಿಸಿದಾಗ ಅವರ ಹತ್ತಿರ ಸಲಹೆ ಕೇಳಲಿಕ್ಕೆ ಹೋಗತೊಡಗಿದೆ. ಅವರ ಸ್ಪಷ್ಟವಾದ ಅಭಿಪ್ರಾಯ ನನಗೆ ರುಚಿಸತೊಡಗಿತು. ನೇಡಬಾಳದ ಹಳಗನ್ನಡ ಕಾವ್ಯಮಾಲೆಯ ಆರಂಭೋತ್ಸವದ ಔತಣದೋಲೆಯನ್ನು ಕಳಿಸಿದೆ. ಒಂದೆರಡು ದಿನಗಳಲ್ಲಿಯೇ ಅವರಿಂದ ಉತ್ತರ ಸಿಕ್ಕಿತು. ನಮ್ಮ 'ಶಾಂತಿಸೇವಾಸದನ'ವನ್ನು ಹರಸಿ ಕಾಗದವನ್ನು ಬರೆದಿದ್ದರು. ಅದೂ ರಾಷ್ಟ್ರಭಾಷೆಯಾದ ಹಿಂದಿಯಲ್ಲಿ. ಅವರ ಹರಕೆಯೋಲೆಯಿತ್ತು. ಉತ್ಸವ ಮುಗಿಸಿಕೊಂಡು ಧಾರವಾಡಕ್ಕೆ ಬರುವಾಗ, ಅವರಿಗೊಂದು 'ಚಿನ್ಮಯ ಚಿಂತಾಮಣಿ'ಯ ಪ್ರತಿಯನ್ನು ಕೊಟ್ಟು ಬರಬೇಕೆಂದು ಅವರ ಮನೆಗೆ ಹೋದೆ. ಆ ಮಾತು ಈ ಮಾತು ಆಡಿ, ಪುಸ್ತಕದ ಪ್ರತಿಯೊಂದನ್ನು ಕೊಟ್ಟು ಹೊರಡಲಿಕ್ಕೆ ಸಿದ್ಧನಾದಾಗ, ಪುಸ್ತಕದ ಕ್ರಯವನ್ನು ತೆಗೆದು ನನ್ನ ಕೈಗಿತ್ತರು. ನಾನು 'ಬೇಡ' ಎಂದೆ. ಆಗ ಅವರು :

"ನಾನೂ ಗ್ರಂಥ ಬರೆದು ಪ್ರಕಟಿಸಿದ್ದೇನೆ. ಅದರ ಸ್ಥಿತಿ ನನಗೆಲ್ಲ ಗೊತ್ತು. ಹಾಗೇ ಕೊಟ್ಟರೆ ಎಲ್ಲರೂ ತಕ್ಕೊಳ್ಳುವವರೇ. ಕೊಂಡು ಓದುವವರಿಲ್ಲ. ಅದರಿಂದ ಈಗ ನಾನು ಪ್ರಕಟಿಸುವುದನ್ನೇ ಬಿಟ್ಟಿರುವೆ. ಯಾರಾದರೂ ಬಂದರೆ ಕೊಡುವೆ. ಅವರೇ ಪ್ರಕಟಿಸಿಕೊಳ್ಳುತ್ತಾರೆ. ಮೊನ್ನೆ ಮೊನ್ನೆ ನನ್ನ ಲಂಡನಿನ ಪ್ರವಾಸದ ಪುಸ್ತಕ ಪ್ರಕಟವಾಗಿದೆ ಕಂಡಿದ್ದೀರಾ ? " ಎಂದು ಕೇಳಿದರು.

"ಸಂಸ್ಥಾನಗಳ ಶಿಷ್ಟಮಂಡಲದ ಸಲ್ಲಾಗಾರರಾಗಿ ದುಂಡುಮೇಜಿನ ಪರಿಷತ್ತಿಗೆ ಹೋದಾಗಿನ ಪ್ರವಾಸದ ವರ್ಣನೆ ಈಗ ಪ್ರಕಟವಾಯಿತೆ ? "

"ಇಲ್ಲ; ಆಗಲೇ ಪತ್ರಿಕೆಯಲ್ಲಿ ಬಂದಿದ್ದಿತು. ಈಗ ಪುಸ್ತಕರೂಪದಲ್ಲಿ ಪ್ರಕಟವಾಗಿದೆ."

ಅಂದಿನಿಂದ ಲಕ್ಷ್ಮಿಯವರ ಸಾಹಿತ್ಯದ ಕಡೆಗೂ ನಾನು ಸ್ವಲ್ಪ ಲಕ್ಷ್ಯಹಾಕಿದೆ. ಅವರು ಕಾಯಿದೆಪಂಡಿತರಿದ್ದಂತೆ ಒಳ್ಳೆಯ ಇತಿಹಾಸಕಾರರೂ ಆಗಿದ್ದಾರೆ. ಅವರು ಬರೆದ ಛತ್ರಪತಿ ಶಾಹುವಿನ ಚರಿತ್ರೆ ಅಮರ ಕೃತಿಯಾಗಿದೆ. ಅವರ ವಾಚನವೂ ಬಹು ವಿಸ್ತಾರವಾಗಿದ್ದಿತು. ಕೊಲ್ಲಾಪುರದ ಜೈನ ಬೋರ್ಡಿಂಗಿನಲ್ಲಿ, ಅವರು ತರಿಸಿ ಇಟ್ಟ ಇಂಗ್ಲೀಷ ವಿಶ್ವಕೋಶದ ಪುಟಗಳನ್ನು ತಿರುವಿಹಾಕುವ ತರುಣರು ಈಗಲೂ ಸಿಗುವುದು ಅಪರೂಪ. ಬಹುದಿನಗಳ ಹಿಂದೆಯೇ ಲಕ್ಷ್ಮಿಯವರು ಅದನ್ನು ಓದಿ, ಸಂಸ್ಥೆಗೆ ಇರಲೆಂದು ಕೊಟ್ಟರು. ಈಗ ಅದು ವಸತಿಗೃಹದ ಜನರಲ್ ಹಾಲಿನ

ಕ್ರೈಸೋಲಿನ್

ಎಂಥ ಕೆಮ್ಮಿದ್ದರೂ ಕೂಡಲೆ ಗುಣ ಪಡಿಸುವುದು.

ಏಜೆಂಟರು, ಸ್ಟಾಕಿಸ್ಟರು ಬೇಕು.

ಯದುಪತಿ

ಸ್ವತಂತ್ರ ಸಾಮಾಜಿಕ ಕಾದಂಬರಿ.

ಬರೆದವರು :

ಶ್ರೀಮಾನ್ ಸಾಲಿ ರಾಮಚಂದ್ರರಾಯರು

ಭಾರತದ ಸ್ವಾತಂತ್ರ್ಯ ಸಂವರ್ಧನೆಗೂ ಸಂರ
ಕ್ಷಣೆಗೂ ಇಂದು ಆದರ್ಶಜೀವಿಗಳ ಅವಶ್ಯಕ
ತುಂಬ ಇದೆ. ಅಂತಹ ಸುಂದರ ಆದರ್ಶಗಳನ್ನು
ಜನತೆಯ ಕಣ್ಣೆದುರು ಇರಿಸಬಲ್ಲ ನೂತ
ಕಾದಂಬರಿ. ಕರ್ನಾಟಕ ವಿ. ವಿ. ನಿಲಯ
ಕುಲಪತಿಗಳಾದ ಶ್ರೀಮಾನ್ ಆರ್. ಎ. ಜಾಗಿ
ದಾರರು ಮುನ್ನುಡಿ ಬರೆದಿದ್ದಾರೆ.

ವಿಳಾಸ: ಶ್ರೀ. ಸಾಲಿ ರಾಮಚಂದ್ರರಾಯರ
'ಶ್ರೀನಿಕೇತನ' ಧಾರವಾಡ.

ೌಂದರ್ಯವನ್ನು ಹೆಚ್ಚಿಸಲಿಕ್ಕೆ, ಮಾತ್ರ ಒಂದು ಕವಾಟವನ್ನು ಡಿದುಕೊಂಡು ಕುಳಿತಿದೆ.

ಆ ಮೇಲೆಯೂ ಅಣ್ಣಾ ಸಾಹೇಬರನ್ನು ಹಲವು ಸಂದರ್ಭಗಳಲ್ಲಿ ನು ಕಾಣುತ್ತ ಬಂದೆ. ಅನೇಕ ವಿಷಯಗಳಲ್ಲಿ ಅವರ ಮತ- ನ್ನು ಕೇಳಿದೆ. ಎಲ್ಲದಕ್ಕೂ ಅವರದು ಸ್ಪಷ್ಟವಾದ ಮಾತು, ನುಭವಪೂರ್ಣವಾದ ವಿಚಾರ. ಅವರು ಯಾವುದಕ್ಕೂ ಭಾವನಾ- ಶರಾಗಿ ದುಡುಕರು. ಬಹುದಿನಗಳ ಅನುಭವದಿಂದ ಅವರ ದ್ಧಿ-ಭಾವನೆಗಳು ಹದಗೊಂಡಿದ್ದುವು, ಹುರಿಗೊಂಡಿದ್ದುವು. . ಶ. ಗಲ೭೩ರಲ್ಲಿ ಜನಿಸಿದ ಲಠ್ಠೆಯವರು, ಈ ಶತಮಾನದ ರಂಭದಲ್ಲಿಯೇ ಸಾರ್ವಜನಿಕ ಜೀವನದಲ್ಲಿ ಕಾಲಿಟ್ಟರೆನ್ನ ಬಹುದು. ೊದಲು ಬಹುದಿನಗಳ ವರೆಗೆ ಕೊಲ್ಹಾಪುರದ ರಾಜಾರಾಮ ಾಲೇಜಿನಲ್ಲಿ ಇಂಗ್ಲಿಷಿನ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ುಂದೆ ಅಲ್ಲಿಯೇ ಶಿಕ್ಷಣಾಧಿಕಾರಿಗಳಾದರು. ಆ ಸಮಯದಲ್ಲೆಲ್ಲ ೇಶದ ಜನಜೀವನವನ್ನು ಇವರು ತುಂಬ ಅಭ್ಯಸಿಸಿದರು. ಅದ- ಂದ ಸ್ಫೂರ್ತಿಗೊಂಡು, ಕ್ರಿ. ಶ. ಗ೯ಂ೬ರಲ್ಲಿ ಇವರು 'ಡೆಕ್ಕನ್ ್ಯತ' ಎಂಬ ಪತ್ರಿಕೆಯನ್ನು ಆರಂಭಿಸಿ, ಸಾರ್ವಜನಿಕ ಕಾರ್ಯ- ಂಗಕ್ಕೆ ಪ್ರತ್ಯಕ್ಷವಾಗಿಯೇ ಇಳಿದರು. ಆ ಪತ್ರಿಕೆಯನ್ನು ುಮಾರು ಹತ್ತು ವರ್ಷಗಳ ವರೆಗೆ ಬಹು ಯಶಸ್ವಿಯಾಗಿ ಡೆಯಿಸಿಕೊಂಡು ಹೋದರು. ಆ ಮೇಲೆ ಇವರು, ಮಧ್ಯವರ್ತಿ ಸೆಂಬ್ಲಿಯ ಸದಸ್ಯರಾಗಿಯೂ ಕೊಲ್ಹಾಪುರ ಸಂಸ್ಥಾನದ ಿವಾನರಾಗಿಯೂ ಕೆಲಸಮಾಡಿದರು. ಕ್ರಿ. ಶ. ಗ೯೩೭ ರಲ್ಲಿ ಠ್ಠೆಯವರು ಕಾಂಗ್ರೆಸ್ ಸೇರಿದರು. ಅಂದಿನಿಂದ ಏಕನಿಷ್ಠೆಯಿಂದ ಸಂಸ್ಥೆಯಲ್ಲಿ ದುಡಿದರು. ನಾಡಿನ ಮುಖಂಡರೊಡನೆ ಇರುವ ಮತಭೇದ, ಇವರ ಸ್ಪಷ್ಟವಾದಿತ್ವಗಳಿಂದ ಇತ್ತೀಚೆಗೆ ಹಲವು ದಿನಗಳಲ್ಲಿ ನಾಡು ಇವರ ಬುದ್ಧಿಮತ್ತೆಯ ಉಪಯೋಗವನ್ನು ಪಡೆಯಲಿಲ್ಲ. ಆದರೂ ಮುಂಬಯಿ ಪ್ರಾಂತದ ಅರ್ಥಮಂತ್ರಿ- ಗಳಾಗಿದ್ದು ಅವರು ಮಾಡಿದ ಆರ್ಥಿಕವ್ಯವಸ್ಥೆಯಿಂದ, ಇನ್ನೂ ಮುಂಬಯಿ ಮಂತ್ರಿಮಂಡಲವು ಅವರಿಗೆ ಋಣಿಯಾಗಿದೆ. ತನಗೆ ಒಪ್ಪಿಗೆಯಾಗದ ರಾಜಕೀಯ ವಿಚಾರದಲ್ಲಿ ಇವರೆಂದೂ ಕೈಹಾಕರು. ಮನೆಯಲ್ಲಿ ಸುಮ್ಮನೇ ಅನೇಕ ಗ್ರಂಥಗಳನ್ನು ಓದುತ್ತ ಕಾಲಕಳೆಯುವವರೇ ಹೊರತಾಗಿ, ಇಲ್ಲದ–ಸಲ್ಲದ ಕಾರ- ಭಾರಗಳಲ್ಲಿ ಮನಸ್ಸುಹಾಕುವ ಸ್ವಭಾವ ಇವರದಲ್ಲ. ಅಂತಲೇ ಮೊನ್ನೆ ಮೊನ್ನೆ ಬೆಳಗಾಂವಿಗೆ ಬಂದಿದ್ದ ದಿ. ಶರತ್ ಬೋಸರು, ಸಾಮ್ಯವಾದವನ್ನು ಸ್ವೀಕರಿಸಿ ತಮ್ಮ ಪಾರ್ಟಿಯಲ್ಲಿ ಸೇರಲು ಕರೆದರೂ ಇವರು ಕಾಂಗ್ರೆಸ್ಸನ್ನು ಬಿಟ್ಟುಹೋಗಲಿಕ್ಕೆ ಒಪ್ಪಲಿಲ್ಲ. ಅಷ್ಟು ಶ್ರದ್ಧೆ ಇವರಿಗೆ ಕಾಂಗ್ರೆಸ್ಸಿನಲ್ಲಿ. ಆದರೆ ಕಾಂಗ್ರೆಸಿನ ಹೆಸರನ್ನು ಕೆಡಿಸುತ್ತಿರುವ ಕೆಲವು ಮುಖಂಡರ ನಡತೆಗಾಗಿ ಇವರು ತುಂಬ ಹೇಸಿಕೊಂಡಿದ್ದರು.

ಇತ್ತೀಚೆಗೆ ನಾನು ಅವರನ್ನು ಕಂಡುದು ಶ್ರೀ ಬಾಹುಬಲಿ ಬ್ರಹ್ಮ- ಚರ್ಯಾಶ್ರಮದ ವಾರ್ಷಿಕೋತ್ಸವದಲ್ಲಿ. ಆಗ ಅವರು ಆಡಿದ ಮುತ್ತಿನಂತಹ ಮಾತುಗಳು ಇನ್ನೂ ನನ್ನ ಕಿವಿಯಲ್ಲಿ ಗುಣುಗುಣಿ- ಸುತ್ತಿವೆ: 'ನಾಲ್ಕೆಂಟು ಹೊಸ ಹೊಸ ಇಮಾರತಿಗಳನ್ನು ಕಟ್ಟಿದ ಮಾತ್ರಕ್ಕೆ ಒಂದು ಶಿಕ್ಷಣಸಂಸ್ಥೆಗೆ ಭದ್ರತೆ ಬಂದಂತಾಗಲಿಲ್ಲ; ಹೇರಳವಾಗಿ ದುಡ್ಡು ಕೂಡಿಸುವುದರಿಂದಲೂ ಅದು ಸಿದ್ಧಿಸದು. ಆದರೆ ಶಿಕ್ಷಣಸಂಸ್ಥೆಯು ವಿದ್ಯಾರ್ಥಿಗಳ ಚಾರಿತ್ರ್ಯವನ್ನು ಕಟ್ಟಬೇಕು. ನಿಃಸ್ವಾರ್ಥಿಗಳಾದ ಸಮಾಜಸೇವೆಯನ್ನು ಮಾಡುವ ಸೇವಾಬುದ್ಧಿ- ಯನ್ನು ಇಂಥ ಆಶ್ರಮಜೀವನವು ತಂದು ಕೊಡಬೇಕು. ಈ ದಿಸೆಯಲ್ಲಿ ನಾಡಿನಲ್ಲಿ ಈಗ ಹಬ್ಬಿರುವ ಶಿಕ್ಷಣಸಂಸ್ಥೆಗಳ ಕಾರ್ಯ ಆಯಶಸ್ವಿಯಾಗಿವೆಯೆಂದು ಇಂದಿನ ನಮ್ಮ ನಾಡಿನ ಜನತೆಯ ಚಾರಿತ್ರ್ಯದ ಮೇಲಿಂದ ನಿರ್ಣಯವಾಗುತ್ತಿದೆ. ಅಂಥ ಸಂಸ್ಥೆಗಳಲ್ಲಿ ಈ ಬ್ರಹ್ಮಚರ್ಯಾಶ್ರಮವೂ ಒಂದಾಗಬಾರದು.' ಎಂದು ಅವರ ಮಾತಿನ ಭಾವವಾಗಿದ್ದಿತು ಇದೇ ಅರ್ಥದ ಮಾತುಗಳನ್ನು ನಾನು ಸೇಡಬಾಳದ ಶ್ರೀಶಾಂತಿಸಾಗರ ಆಶ್ರಮದ ಸಂಚಾಲಕತ್ವವನ್ನು ಸ್ವೀಕರಿಸುವ ಕುರಿತು ಅವರ ಸಲಹೆ ಕೇಳಲಿಕ್ಕೆ ಹೋದಾಗ ಸೂಚಿ- ಸಿದ್ದರು. ವರ್ಷಕ್ಕೆ ಹತ್ತು ಸಾವಿರ ರೂಪಾಯಿ ವೆಚ್ಚಮಾಡಿ, ಹತ್ತೆ- ಪ್ಪತ್ತು ಹುಡುಗರಿಗೆ ಮಾತ್ರ–ಕನ್ನಡ ನಾಡಿನಲ್ಲಿ–ಮರಾಠಿ ಪ್ರಾಥ- ಮಿಕ ಶಿಕ್ಷಣ ಕೊಡುವ ಯೋಜನೆಯನ್ನೇ ಅವರು ನಿರಾಕರಿ- ಸಿದ್ದರು. ನಾಡಿನ ದುಡ್ಡು ವ್ಯರ್ಥ ಹಾಳಾಗುತ್ತಿದೆಯೆಂದು ಮರುಗಿ- ದ್ದರು. ಅವರ ನಡತೆಯಲ್ಲಿ ಕನ್ನಡ-ಮರಾಠಿಯೆಂಬ ಭೇದಭಾವವಿರ ಲಿಲ್ಲ. ಯಾವ ಸಂಸ್ಥೆಯಲ್ಲಿ ಕೆಲಸಮಾಡುವರೋ ಆ ಸಂಸ್ಥೆಯ ಊರ್ಜಿತಾವಸ್ಥೆಗಾಗಿ ಪ್ರಾಮಾಣಿಕವಾಗಿ ದುಡಿಯುವ ಬುದ್ಧಿ ಅವರದು. ಇದೇ ಉದ್ದೇಶದಿಂದ ರಾಣೀ ಪಾರ್ವತೀದೇವಿ ಕಾಲೇಜನ್ನು ಅವರು ಬೆಳಗಾಂವಿಗೆ ತಂದುದು.

ಹೀಗೆ ಶ್ರೀ ಅಣ್ಣಾಸಾಹೇಬ ಲಠ್ಠೆಯವರು ನಾಡಿನ ಅನೇಕ ಕಾರ್ಯಕ್ಷೇತ್ರಗಳಲ್ಲಿ ತಮ್ಮ ತನು-ಮನ-ಧನಗಳಿಂದ ದುಡಿದರು. ಅನೇಕ ತರುಣರಿಗೆ ಮಾರ್ಗದರ್ಶಿಗಳಾಗಿದ್ದರು. ನೂರಾರು ಪ್ರಾಥ- ಮಿಕ ಸಾಲೆಗಳನ್ನೂ ಹಲವು ಮಾಧ್ಯಮಿಕ ಸಾಲೆಗಳನ್ನೂ ಕಾಲೇಜು- ಗಳನ್ನೂ ನಡೆಯಿಸಿ, ರೈತಶಿಕ್ಷಣ ಸಂಸ್ಥೆಯನ್ನು ಕಟ್ಟಿದ ಸಾತಾರೆಯ ಮಹರ್ಷಿ ಭಾವುರಾವ ಪಾಟೀಲರ ಕಾರ್ಯಶಕ್ತಿಗೆ ಲಠ್ಠೆಯವರು ಸಂಜೀವಿನಿಯಂತಿದ್ದರು. ಹೀಗೆ ಲಠ್ಠೆಯವರು ಭಾರತದ ಒಂದು ವ್ಯಕ್ತಿಯಾಗಿರಲಿಲ್ಲ, ಸಂಸ್ಥೆಯಾಗಿದ್ದರು. ಅವರ ಕಾರ್ಯಶಕ್ತಿ ಅಜೇಯವಾದುದು, ಆತ್ಮತೇಜ ಅದಕ್ಕೂ ಪ್ರಖರವಾದುದು. ನಮ್ಮ ನಾಡಿನಲ್ಲಿ ಇನ್ನೊಬ್ಬ ಅಂಥ ವ್ಯಕ್ತಿಯು ಜನಿಸುವ ವರೆಗೆ, ಆ ಆತ್ಮಕ್ಕೆ ಮಾತ್ರ ಚಿರಶಾಂತಿಯೆಂಬುದಿಲ್ಲ. ಇಂದಿನ ತರುಣರು ಈ ಕೊರತೆಯನ್ನು ತುಂಬಿ ತರುವರೆ? ಅಣ್ಣಾಸಾಹೇಬರ ಆತ್ಮಕ್ಕೆ ನಿಜವಾದ ಶಾಂತಿಯನ್ನೀಯುವರೆ?

ಕಸೂತಿಯ ಕಲಾಭಿರುಚಿ

ಕು. ಸರೋಜಿನಿ ಮಹಿಷಿ ಎಂ. ಎ., ಧಾರವಾಡ

★

ಪ್ರಯೋಜನದೊಂದಿಗೆ ಆನಂದಸಾಧನಗಳನ್ನೂ ನಿರ್ಮಿಸುವುದು ನಾಗರಿಕ ಜನಾಂಗಗಳದೊಂದು ರೀತಿ. ಮನೆಯ ಸಾರಣೆಯೊಂದಿಗೆ ಬಂದ ಕಾರಣೆ-ರಂಗವಲ್ಲಿ, ಹೊಲಿಗೆಯೊಂದಿಗೆ ಹೊರಟ ಸುಳುವಿನ ಕಸೂತಿ—ಇವೆಲ್ಲ ಅಂತಹವು !

★

ಭಾರತೀಯರ ಮನೋಭೂಮಿಕೆ ಸೌಂದರ್ಯದೆಡೆಗೊಲಿದದ್ದು. ನಿಸರ್ಗ ಸೌಂದರ್ಯ—ಅದರ ಪಡಿನೆಳಲು—ಅವರ ಆರಾಧನೆಯ ಪಾತ್ರ. ಭಾರತೀಯರು ಇಷ್ಟುಮಟ್ಟಿಗೆ ಆಧ್ಯಾತ್ಮವಾದಿಗಳೂ ಸೌಂದರ್ಯೋಪಾಸಕರೂ ಆಗಲಿಕ್ಕೆ ಭೌಗೋಲಿಕ ಕಾರಣಗಳೂ ತುಂಬುನೆರವನ್ನು ನೀಡಿವೆ. ನಿಸರ್ಗಸೌಂದರ್ಯದ ಗಂಧವನ್ನೇ ಅರಿಯದ ಅರಬಸ್ತಾನದ ಜನರು ಮೂರ್ತಿಭೇದಕರಾದರೆ, ಕ್ಷಣ-ಕ್ಷಣಕ್ಕೂ ದೇವನ ಪ್ರತಿಬಿಂಬವನ್ನು ನಿಸರ್ಗಸೌಂದರ್ಯದಲ್ಲಿ ಕಾಣುವ ಕಾಶ್ಮೀರಿಗಳು ಮೂರ್ತಿಪೂಜಕರಾದರು. ದಿನಕ್ಕೊಂದು ಸಲವೂ ಸೂರ್ಯನ ದರ್ಶನ ಕಷ್ಟಸಾಧ್ಯವಾದ ದೇಶದಲ್ಲಿ ಸೌಂದರ್ಯಾರಾಧನೆ ಬೇರೂರಿರುವುದು ಸಾಧ್ಯವೇ ?

ಉಪನಿಷತ್ತಿನ ಋಷಿಗಳು ಸೌಂದರ್ಯಾರಾಧಕರು. ಅಪಾರವಾದ ಸಮುದ್ರವನ್ನೂ, ಅನಂತವಾದ ನೀಲಾಕಾಶವನ್ನೂ ಕಂಡ ಋಷಿಗಳು, ಅವುಗಳನ್ನು ನಿರ್ಮಿಸಿದ ಶಕ್ತಿ ಅವಕ್ಕಿಂತ ದೊಡ್ಡದಾಗಿರಬೇಕೆಂದು ಊಹಿಸಿದರು ; ಅದನ್ನೇ 'ಅತ್ಯತಿಷ್ಟತ್ ದಶಾಂ-ಗುಲಮ್' ಎಂದು ವರ್ಣಿಸಿದರು. ಇನ್ನೂ ಮುಂದೆ ಹೋಗಿ ಸರ್ವವ್ಯಾಪಿಯಾದ ಆ ಶಕ್ತಿಯನ್ನು 'ಅಣೋರಣೀಯಾನ್ ಮಹತೋ ಮಹೀಯಾನ್' ಎಂದು ಹೇಳಿದರು. ಎಲ್ಲಿ ಚೆಲುವೋ ಅಲ್ಲಿ ದೇವರು. 'ಚೆಲುವೇ ದೇವರು, ಒಲುಮೆಯೇ ಪೂಜೆ' ಎಂಬ ಭಾವನೆ ಅಂದಿನಿಂದಲೆ ಬೆಳೆದು ಬಂದಿದೆ.

ಚೆಲುವಿನ ದರ್ಶನವನ್ನು ಸರ್ವರಿಗೂ ಸಾಧ್ಯವಾಗುವಂತೆ ಮಾಡಲು. ಪೂಜೆಯಲ್ಲಿ ಆಸ್ಥೆಯನ್ನು ಹುಟ್ಟಿಸಲು, ಕಲಾವಿದನು ಭೂಮಿಗಿಳಿದ ದೇವದೂತ. ಶಿಲಾಶಿಲ್ಪಿಯಿರಲಿ, ಸೂಚಿಶಿಲ್ಪಿ-ಯಿರಲಿ, ಕವಿಯಿರಲಿ ಚಿತ್ರಕಾರನಿರಲಿ, ಗಾಯಕನಿರಲಿ, ಭೂಮಿ-ಗಿಳಿದ--ಇಳಿಯಬಹುದಾದ ದೇವಶಕ್ತಿಯ—ಸೌಂದರ್ಯದ—ದರ್ಶನವನ್ನು ತಾವು ಪಡೆದು, ಅನುಭವಿಸಿ, ತಮ್ಮದನ್ನಾಗಿ ಮಾಡಿಕೊಂಡು, ತಮ್ಮ ಮನೋಬುದ್ಧಿಯ ಐಸಿರಿಯಿಂದ ಕೂಡಿದ ಅದರ ಯಥಾರ್ಥ ದರ್ಶನವನ್ನು, ಅರಿಯದವರಿಗೆ ಮಾಡಿಕೊಡುವು-ದನ್ನೇ ಮುಖ್ಯವಾದ ಗುರಿಯಾಗಿಟ್ಟುಕೊಂಡಿರುತ್ತಾರೆ. ಶಿಲಾ-ಶಿಲ್ಪಿಯು ಬಿರುಸಾದ ಕಲ್ಲಿನಲ್ಲಿ ಮೂರ್ತಿಯನ್ನು ಕೊರೆದು, ಜಿ ವನ್ನೇ ತುಂಬಿ ನಿಲ್ಲಿಸಬಹುದು. ಸೂಚಿಶಿಲ್ಪಿಯು ಕುಸು ಕೆಲಸದ ಕೌಶಲ್ಯದಿಂದ, ಒರಟು ಬಟ್ಟೆಯಲ್ಲಿಯೂ, ನ ನಾಜೂಕುಗಳಿಂದ ತುಂಬಿದ, ಬಣ್ಣಬಣ್ಣದ ಮೆರುಗಿನ ಗುಲಾಬಿ ಹೂವನ್ನೂ ಮಕರಂದವನ್ನು ಹೀರುವ ತುಂಬಿಯನ್ನೂ ಮೂ ಬಹುದು. ಕವಿಯು ಅರುಣೋದಯದ ಸಮಯದಲ್ಲಿ ತ ಮೇಲೆ ಹರಡಿರುವ ಮಂಜಿನ ಹನಿಗಳನ್ನೇ ತೆಗೆದು, ಭೂದೇ ಕೊರಲಸರದ ಮುತ್ತುಗಳೆಂದು ಪವಣಿಸಬಹುದು. ಚಿತ್ರಕಾ ತನ್ನ ಕುಂಚದ ಒಂದು ರೇಷೆಯಿಂದ ವಿಶ್ವವನ್ನೇ ಮೂಡಿಸ ಬಹುದು ಗಾಯಕನು ತನ್ನ ಸ್ವರಸಮ್ಮೇಲನದಿಂದ ನಾದಮಂ ವನ್ನೇ ನಿರ್ಮಿಸಿ, ರಸಿಕರನ್ನು ಸೆರೆಹಿಡಿಯಬಹುದು. ಸಾಧನ ಭಿ ವಾದರೂ, ಕ್ಷೇತ್ರ ಭಿನ್ನವಿದ್ದರೂ, ಕಲಾವಿದರೆಲ್ಲರ ಗುರಿ ಒಂ

ಉದ್ದೇಶಸಾಧನೆಗೆ ಕಲಾವಿದನಲ್ಲಿ, ಕಲೆಯ ಸಾಧನೆಯ ಒಂದಾಗಿ ಬೆರೆಯುವ ಕಲೆ ಬೇಕು. ಅವನ ತನ್ಮಯತೆ ಎಷ್ಟೋ ಗಾಢವೋ ಅಷ್ಟಷ್ಟು ಕೃತಿ ಸುಂದರ. ತನ್ಮಯತೆ ಶಿಥಿಲವಾದ ಆಚೆಯ ಗೆರೆ ಈಚೆಗೆ ಸರಿದರೆ, ಬೇರೊಂದೇ ಚಿತ್ರ ಮೂಡಿಬ ಬಹುದು. ಸೂಚಿಶಿಲ್ಪಿಯೊರ್ವನು, ಹೆಣೆದ ಗುಲಾಬಿ ಹೂವೊಂದನ್ನು ಮಗುವು ಕಿತ್ತುಕೊಳ್ಳಲು ಆಶಿಪಟ್ಟರೆ, ಯಾ ಕಲಾವಿದ ತಾನೆ ತನ್ನ ಕಲಾಶಕ್ತಿಯನ್ನು ಮೆಚ್ಚಲಾರ ?

ಮನುಷ್ಯನು ಕಾಡುಸ್ಥಿತಿಯಲ್ಲಿ ಅಲೆದಾಡುವುದನ್ನು ಬಿಟ್ಟು ಜನಾಂಗವನ್ನು ರಚಿಸಿ ನಾಗರಿಕನಾಗಿ ನೆಲೆಸತೊಡಗಿದಂದಿನಿಂ ಅವನ ಆಹಾರ, ವೇಷ, ಭೂಷಣ, ಅಭಿರುಚಿಗಳೆಲ್ಲದರಲ್ಲಿ ವ್ಯತ್ಯಾಸವಾಗುತ್ತಲೇ ಇದೆ. ಅನ್ವೇಷಣೆ ನಡೆದೇ ಇದೆ ಅರ್ಥಾ ಮಾನವಜೀವನವೇ ಅನ್ವೇಷಣ ಪರಂಪರೆ. ಬರೀ ಕರಿಯ ಮಣ್ಣಿ ಪಾತ್ರೆಗಳನ್ನು ನೋಡಿ ಬೇಸತ್ತ ದ್ರಾವಿಡರು, ಅವುಗಳ ಮೇ ಚಿತ್ರದಲ್ಲಿ ಎಲೆ-ಹೂಗಳನ್ನು ಕೊರೆದರಂತೆ !

ವೇಷದ ವಿಚಾರದಲ್ಲಂತೂ ಆಧುನಿಕ ಜನಾಂಗವು, ಅಸಹ ನೀಯವಾದ ಸ್ಥಿತಿಯನ್ನೇ ಮುಟ್ಟಿದೆ ಯಾವನೊಬ್ಬ ಮನುಷ್ಯ

ಷದಿಂದ **ಅವನ ಕುಲ, ಜಾತಿ, ಉದ್ಯೋಗಗಳನ್ನೆಲ್ಲ** ಗುರು-ವುದು **ಪ್ರಚಾರದಲ್ಲಿ** ಬಂದಿದೆ. ಕಲಾನೈಪುಣ್ಯದಿಂದ ಬಟ್ಟೆ-ನ್ನು ಸಿದ್ಧಗೊಳಿಸಿ, ಆಯಾ ವ್ಯಕ್ತಿಗಳ ಸೌಂದರ್ಯವನ್ನು ಟ್ಟಿಸುವುದರಲ್ಲಿ, ಸೂಚಿಶಿಲ್ಪಿಯು **ತೋರುವ** ಜಾಣ್ಮೆಗಂತೂ ತ್ತೆಯೇ ಇಲ್ಲ. ಮನುಷ್ಯ ತಾನು ತಾನಾಗಿರದೆ ಸೂಚಿಶಿಲ್ಪಿ-ಂದ **ನಿರ್ಮಿತನಾಗುತ್ತಿದ್ದಾನೆ. ಸೂಚಿಶಿಲ್ಪಿಯ** ಕೌಶಲ್ಯ ಟ್ಟಷ್ಟು **ಯಾವ ಬಟ್ಟೆಯಲ್ಲಿ** ಹೆಚ್ಚೋ, ಅಷ್ಟು ಆ ಬಟ್ಟೆ ವೀರನಿ-ಗಿ—ಸಿರಿವಂತನಿಗಾಗಿ—ಸಿದ್ಧವಾದದ್ದು. ಬಟ್ಟೆಯ ತುಂಡು-ನ್ನು ಹೊಂದಿಸಿ, ಮೈಯಳತೆಗೆ ಸರಿಯಾಗುವಂತೆ ಹೊಲಿ-ವುದಂತೂ **ಸರಿಯೆ.** ಆ ಹೊಲಿದ ಬಟ್ಟೆಗಳಲ್ಲಿಯೂ ಬಗೆ-ಯ **ಬಣ್ಣಗಳಲ್ಲಿ** ನಿಸರ್ಗಸೌಂದರ್ಯವನ್ನು, ಕಲಾಕೌಶಲ್ಯ-ನ್ನ ಅರಳಿಸಿ, **ಸೂಕ್ಷ್ಮ** ನಿರೀಕ್ಷಣೆಯ ಶಕ್ತಿಯನ್ನೂ, ಕಲಾ ಪುಣ್ಯವನ್ನೂ, ಕಲೆಗಾಗಿ ಇರುವ ಪ್ರೋತ್ಸಾಹವನ್ನೂ, ಆದರ-ನ್ನೂ ಒಟ್ಟಿಗೇ ವ್ಯಕ್ತಮಾಡಬಹುದು. ಇದನ್ನೇ '**ಕಸೂತಿಯ** ೬' ಎಂದು ಹೇಳುವರು.

ಈ ಕಸೂತಿಯ ಕಲೆ ಮಾನವ ಜನಾಂಗದಲ್ಲೇ ಹಬ್ಬಿಕೊಂಡಿದೆ. ವರೆ ಜಗತ್ತಿನ ವಿವಿಧ ಭಾಗಗಳ ಜನರ ಅಭಿರುಚಿ, ಅಲ್ಲಿಯ ಸರ್ಗಿಕ **ವಾತಾವರಣಕ್ಕೂ** ಧಾರ್ಮಿಕ ವಿಚಾರಗಳಿಗೂ ಹೊಂದಿ ಂಡು **ಬೆಳೆಯುವುದರಿಂದ,** ಸ್ಥಳಸ್ಥಳಕ್ಕೂ ಭಿನ್ನವಾಗಿದೆ. ಶಕ್ಯ-ದ್ದಷ್ಟು **ಕಡಿಮೆ ವೇಳೆಯಲ್ಲಿ**— ಯಂತ್ರದ ಸಹಾಯದಿಂದಾದರೂ —ವಿಶೇಷ ಆಡಂಬರವಿಲ್ಲದೆ ಇಂಗ್ಲಿಷ್ ಕಸೂತಿ ವ್ಯಕ್ತವಾಗು-ದೆ. ಆದರೆ ಅದೇ ಭಾರತದ **ಕಸೂತಿ,** ವಿವಿಧ ಬಣ್ಣಗಳ ಾಗಿನಿಂದ, **ಬೆಳ್ಳಿ** ಬಂಗಾರದ **ಕಡ್ಡಿಗಳಿಂದ** ಕೂಡಿದ ಕುಸುರಿನ ಸದಿಂದ **ವೈಭವಪೂರ್ಣವಾಗಿ** ಹೊರಹೊಮ್ಮುತ್ತದೆ. ಭಾರತ-ಯೂ, **ಕಸೂತಿಯ** ಕಲೆ ಸ್ಥಳದಿಂದ ಸ್ಥಳಕ್ಕೆ ಮೊದಲು ಭಿನ್ನ-ವಾಗಿಯೇ **ಇತ್ತು. ಉತ್ತರಭಾಗವು** ದಕ್ಷಿಣಕ್ಕಿಂತ ಕಲೆಗೆ ಟ್ಟಿನ ಆಸ್ಪದವನ್ನು ಕೊಟ್ಟಿದೆ. ಇದಕ್ಕೆ ಭೌಗೋಲಿಕ ಕಾರಣ-ೂ ಒಂದು **ರೀತಿಯಲ್ಲಿ** ಸಹಾಯಕಾರಿಯಾಗಿವೆಯೆನ್ನಬಹುದು. ೂತಿಯ ಕಲಾಸಾಧನೆಯನ್ನು ಮನೆಯಲ್ಲೇ ಕುಳಿತು ಮಾಡ-ುದಾದ್ದರಿಂದ, ವೇಳೆ ಹೆಚ್ಚಾಗಿ ದೊರೆಯುವ ಅನೇಕ ಮಹಿಳೆ-ರು ಇದನ್ನು ವೃತ್ತಿಯನ್ನಾಗಿಯೇ ಅವಲಂಬಿಸಿದ್ದಾರೆ. ಕಸೂ-ತಿ ಕಲೆ **ಕೇವಲ** ಮಹಿಳೆಯರ ಸೊತ್ತಲ್ಲ; ಕಲೆ ನಯವಾದು-ದ್ದರಿಂದ ಮತ್ತು **ಮನೆಯಲ್ಲೇ** ಕುಳಿತು ಮಾಡಬಹುದಾದ್ದ-ನ್ಮ ಮಹಿಳೆಯರಲ್ಲಿಯೆ ಹೆಚ್ಚಾಗಿ ಕಸೂತಿಯ ಕಲೆ ಆಶ್ರಯನನ್ನು ದಿದೆ. ಇದರ ಕಡೆಗೆ ಲಕ್ಷ್ಯವನ್ನು ಪೂರಯಿಸಿದ ಪುರುಷರ ಖ್ಯೆಯೂ ಕಡಿಮೆಯಿಲ್ಲ. ದಿಲ್ಲೀ-ಸುಲ್ತಾನಗಳ ಕಡೆಗೆ ಪ್ರಚಾರ-ರುವ, **ಲೋಹ-ಧಾತುಗಳ** ಎಳೆಗಳಿಂದ ನಿರ್ಮಿತವಾಗುವ, ಯುದೋಶಿ'' ಮತ್ತು ''**ಶಿಲ್ಪಾಶಿತಾರಾ**'' ಎಂಬ ಕಸೂತಿ-ನ್ನು, ಹೆಚ್ಚಾಗಿ ಪುರುಷರೇ ಇದುವರೆಗೆ ಮಾಡುತ್ತ ಬಂದಿ ರೆ.

ಉತ್ತರದಲ್ಲಿ ಮಣಿಪುರದ ಸ್ತ್ರೀಯರು **ಮಾಡುವ** ರೇಶ್ಮೆ **ಹೊಲಿ-ಗೆಯ ಕಸೂತಿ ನೋಡತಕ್ಕಂತಹದು.** ಸದ್ಯ **ಪ್ರಚಾರದಲ್ಲಿರುವ ಕಲಾಬತ್ತಿನ ಕಸೂತಿ ಇತ್ತೀಚಿನದು.** ಬನಾರಸ, ಪುಣೆ, ಸುರತ, ಅಹಮ್ಮದಾಬಾದ, ಬೆಂಗಳೂರುಗಳಲ್ಲಿ ಇದರ ಪ್ರಚಾರ ಹೆಚ್ಚಾಗಿದೆ. ಬನಾರಸದ **ಕಲಾಬತ್ತಿನ** ಕಸೂತಿಯ ಸೀರೆಗಳಂತೂ ಭಾರತೀಯ ಮಹಿಳೆಯರ ಮನವನ್ನೇ **ಸೂರೆಗೊಂಡಿವೆ.**

ಕಚ್ಛ-ಕಾಠೇವಾಡಗಳು ಸರಪಳಿ ಹೊಲಿಗೆಯ ಕಸೂತಿಗೆ ಪ್ರಸಿದ್ಧ-ವಾಗಿವೆ. ನಾನಾ ಬಗೆಯ ಹೂ, ಬಳ್ಳಿ, ಪಕ್ಷಿಗಳನ್ನು ಮೂಡಿಸಲು ಅವರಿಗೆ ಇದೇ ಸಾಧನ. ನಯವಾಗಿ ಮಾಡಿದ ಯಾವ ಕೆಲಸಕ್ಕಾ-ದರೂ ಅದರದೇ ಆದ ವಿಶಿಷ್ಟ ಸೌಂದರ್ಯವೊಂದು ಅದಕ್ಕಿರುವುದು. ಹಾಗೆಯೇ ಇದಕ್ಕೂ ಕೂಡ.

ಇನ್ನು ಕನ್ನಡ ಜನಾಂಗದಲ್ಲಿ, ನಾಗರಿಕರಲ್ಲಿ ಕಸೂತಿಯ ಕಲೆ ಒಂದು ಮಟ್ಟಕ್ಕಿದ್ದರೆ, ಕೆಳವರ್ಗದ ಸ್ತ್ರೀಯರಲ್ಲಿ ಅದು ಹೆಚ್ಚು ಆಕರ್ಷಕವಾಗಿದೆ. ಸಣ್ಣ ಸಣ್ಣ ಕನ್ನಡಿಯ ತುಂಡುಗಳನ್ನು ಬಟ್ಟೆ-ಗಳಲ್ಲಿ ಸೇರಿಸಿ, ಸರಪಳಿ ಹೊಲಿಗೆಯಿಂದ ಹೊಲಿಯುವುದು, ಎಂದಿ-ನಿಂದಲೂ ಕನ್ನಡ ನಾಡಿನ ಲಂಬಾಣೀ ಸ್ತ್ರೀಯರಲ್ಲಿ ಕಂಡುಬರು-ತ್ತಿದೆ. ಎಷ್ಟೊಂದು ನಯವಾದ ನೂಲಿನ ಕರಿಯ ಚಂದ್ರಕಾಳಿಯ ಸೀರೆಯಲ್ಲೂ, ಎಳೆಗಳನ್ನು ಎಣಿಸಿ ಹೆಣೆಯುವ ಕಸೂತಿಯು ಬಹಳ ಹಿಂದಿನಿಂದಲೇ ಕನ್ನಡನಾಡಿನಲ್ಲಿ ಪ್ರಚಾರದಲ್ಲಿದೆ. ಯಂತ್ರದ ಸಹಾಯದಿಂದ ಅಥವಾ ಅಲ್ಪವೇಳೆಯಲ್ಲಿ— ಕೊಂಚ ಒರಟಾಗಿ ಕಂಡರೂ ಸರಿ— ಸಿದ್ಧವಾಗುವ **ಕಸೂತಿಯ** ಮುಂದೆ, ಎಳೆಗಳನ್ನು ಎಣಿಸಿ ಹಾಕುವ **ಕನ್ನಡ** ಕಸೂತಿ ಒಂದು ಕಾಲದಲ್ಲಿ ಹಿಂದೆ ಬಿದ್ದಿತ್ತು ; ಆದರೆ ಅದಕ್ಕೆ ಪ್ರೋತ್ಸಾಹ ಮತ್ತೆ ದೊರೆತಿದೆ. ಅದರ ನಿಜವಾದ ಬೆಲೆಯು ಅರಿವಾಗಿದೆ. ಕನ್ನಡ ನಾಡಿನಲ್ಲಿ ಕೇವಲ ಈ ಕಸೂತಿಯ ಕಲಾಸಾಧನೆಗಾಗಿ ತಮ್ಮ ದೃಷ್ಟಿಯನ್ನೂ ಜೀವನ-ವನ್ನೂ ವಿಾಸಲಾಗಿರಿಸಿದ ಮಹಿಳೆಯರಿದ್ದರೆಂದ ಬಳಿಕ, ಕನ್ನಡ ನಾಡಿನ ಕಲಾಭಿರುಚಿಯನ್ನು ಕುರಿತು ಬೇರೇನು ಹೇಳುವುದು?

ಸದ್ಯದ ಯಾಂತ್ರಿಕಯುಗದಲ್ಲಿ ಮಾನವ ಜೀವನದಲ್ಲಿಯೇ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

● ಧ್ವನಿವಾಹಕ ಯಂತ್ರದ ಮೂಲಕ
★ ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಕುಟಜಾರಿಷ್ಟ :— ಆಮಾಂಶ, ಅಜೀರ್ಣ, ಹೊಟ್ಟೆ ಮುರಿಯುವದು ಮೊದಲಾದ ವಿಕಾರಗಳಿಗೆ ಶ್ರೇಷ್ಠವಾದ ಔಷಧ.

ಕಾಸಶ್ವಾಸಾರಿ :— ದಮ್ಮು, ಕೆಮ್ಮುಗಳಿಗೆ ಅನುಭವಸಿದ್ಧ ಔಷಧ.

ನೂತನ ಆಯುರ್ವೇದ ಕಾರ್ಯಾಲಯ ಲಿ. ವಿಜಾಪುರ.

ಯಂತ್ರವು ಪ್ರಮುಖ ಭಾಗವನ್ನು ಆಕ್ರಮಿಸಿದೆ; ಹಾಗೇ ಕಸೂತಿಯ ಕಲೆಯ ಕ್ಷೇತ್ರದಲ್ಲೂ ಯಂತ್ರವು ಪ್ರವೇಶಿಸಿ, ಕೈಯ ಕಲೆಯನ್ನು ಹಿಂದೂಡಲು ಯತ್ನಿಸಿದೆ. ಯಂತ್ರದಲ್ಲಿ ವೇಳೆ ಏನೋ ಕಡಿಮೆ ಹತ್ತುತ್ತದೆ; ಆದರೆ ಕೈಯ ಕಸೂತಿಯ ಅಂದವೇ ಅದಕ್ಕೇ ? ಒಟ್ಟಾಗಿ, ದೂರದಿಂದ ನಯವಾಗಿರುವಂತೆ ತೋರುವ ಯಂತ್ರಸಿದ್ಧ ಕಸೂತಿಗೂ, ಕೈಲಿ ಹೆಣೆದ ಕಲೆಗೂ ತುಂಬಾ ಅಂತರವಿದೆ. ಈ ಕೈಕಸೂತಿಯ ನಯವನ್ನೂ ಸೌಂದರ್ಯವನ್ನೂ ಅರಿತ ಎಷ್ಟೋ ಜನ ಸಿರಿವಂತರು, ಕರ್ನಾಟಕದ ಈ ಕಲೆಗೆ ಇನ್ನೂ ಪ್ರೋತ್ಸಾಹವನ್ನು ಕೊಡುತ್ತಿದ್ದುದನ್ನು ಕಾಣಬಹುದು. ಆದರೆ ಬರೀ ಪ್ರೋತ್ಸಾಹನೆ ದೊರೆತರೆ ಸಾಲದು ನಾಡಿನ ಜನರು ಕಲೆಯನ್ನು ಮೈಗೂಡಿಸಿಕೊಂಡು ಸ್ವತಃ ಕಲಾವಿದರಾಗಲು ಯತ್ನಿಸಬೇಕು.

ಇರಲಿ, ಕೈ ಕಸೂತಿಯ ಕಲೆಯ ಸೊಬಗನ್ನು ಹೆಣೆದು ಸವಿಯಲು ಅವಕಾಶವಿಲ್ಲದಾಗ, ಯಂತ್ರಸಿದ್ಧ ಕಸೂತಿಯನ್ನೂ ಸ್ವಾಗತಿಸೋಣ; ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಸಿದ್ಧಗೊಳಿಸಿ, ಬಲ್ಲಿದರೂ ಬಡವರೂ ಒಟ್ಟಿಗೇ ಅದರ ಸೌಂದರ್ಯವನ್ನು ಸವಿಯಲೆಂದು ಆಶಿಸೋಣ.

ಯಂತ್ರದ ಸಹಾಯದಿಂದ ಕಸೂತಿ ಸಿದ್ಧವಾಗುತ್ತಿರುವಲ್ಲಿ, ಕೈ ಕಸೂತಿಯಲ್ಲಿ ಹೇಗೆ ಬಗೆಬಗೆಯ ಹೆಣಿಕೆಗಳಿಂದ, ನಯವಾಗಿ ಸೌಂದರ್ಯವನ್ನರಳಿಸಲು ಸಾಧ್ಯವೋ, ಹಾಗೆಯೇ ತರತರದ ಹೆಣಿಕೆಗಳಿಂದ, ಅದೇ ತುಂಬಿಕೊಂಡ ಗುಲಾಬಿಯ ಮೊಗ್ಗನ್ನೋ ಅರಳಿದ ಹೂವನ್ನೋ, ಬಣ್ಣಬಣ್ಣದ ಮೆರುಗಿನಿಂದ ಮೂಡಿಸಿ, ಸಜೀವತೆಯನ್ನೇ ತುಂಬಿಬಿಡಬಹುದು. ಯಂತ್ರದಲ್ಲಿ ಕಸೂತಿಯ ಹೆಣೆಯಲು, ಅಭ್ಯಾಸ ಬಲ ಹೆಚ್ಚಾಗಿರಬೇಕು. ಯಂತ್ರದ ಚ[illegible] ತೋಲವನ್ನು ಸರಿಯಾಗಿರಿಸುವ ಶಕ್ತಿಬೇಕು. ಇದೆಲ್ಲ ಕ್ರಮೆ ಸಾಧಿಸುತ್ತದೆ. ಇದರ ವಿಚಾರ ವಿಸ್ತಾರವಾಗಿ ಮುಂದೆ ಮಾಡೋ[illegible]

ಸದ್ಯ ಯಂತ್ರದ ಸಹಾಯದಿಂದಾದರೂ ಸರಿ— ವೇಳೆಯು ದೊ[illegible] ಯದಿಷ್ಟ ಪಕ್ಷಕ್ಕೆ— ಮನೆಯನ್ನು ಅಂದವಾಗಿರುವಂತೆ ಕಸೂತಿ [illegible] ಯಿಂದ ಸುಶೋಭಿತಗೊಳಿಸಬಹುದಲ್ಲ ! ಸೋದರಿ ಹೆಣೆದ ಗಿಳಿ ಬಳಗ ಬಾಗಿಲ ಮೇಲೇರಿ ಕುಳಿತು, ಕಸೂತಿಯ ಮೇಲ್ಮೆಯನ[illegible] ಸೋದರಿಯ ಸೌಂದರ್ಯಸಮೀಕ್ಷಕ ಶಕ್ತಿಯನ್ನು ಒಟ್ಟಿಗೆ ಮ[illegible] ಬಹುದಲ್ಲ ! ಕಲಾವಿದನು ಎಲ್ಲೆಲ್ಲಿಯೂ ಇಚ್ಛಿಸಿದುದನ್ನು ಸೃ[illegible] ಸುವ ಶಕ್ತಿಯುಳ್ಳವನು. ಕಮಲಗಳು ಸರೋವರದಲ್ಲಷ್ಟೇ ಸಿ[illegible] ವುವೇ ? ಇಲ್ಲ, ನೀರಿಲ್ಲದಲ್ಲಿಯೂ ಕಮಲಗಳು ಹರಡಿಕೊಂ[illegible] ಬಿಟ್ಟಿವೆ. ನೆಲದ ಮೇಲೆ ! ಸೋದರಿ ಅರಳಿಸಿದ ಆ ಕಮಲಗಳ ನೋಡುತ್ತಲೇ ಆವ ರಸಿಕನ ಹೃದಯ ತಾನೇ ಅರಳದು? ಬೇ[illegible] ಗೊಂಡಾಗ ಒಂದುಕ್ಷಣ ವಿರಾಮಕುರ್ಚಿಯಲ್ಲಿ ಒರಗಿ ಕುಳಿತುಕೊ[illegible] ಬೇಕೆಂದರೆ ಆವೇನು ರಮ್ಯ ದರ್ಶನ ಎದುರು ! ಉಜ್ವಲ ರತ್ನದ[illegible] ಪ್ರಕಾಶಮಾನನಾದ ರವಿ ಅಸ್ತಂಗತನಾಗುತ್ತಿದ್ದಾನೆ. ವೃಕ್ಷಗ[illegible] ಭೋರ್ಗರೆಯುವ ಸಮುದ್ರದ ತೀರದಲ್ಲಿ, ನಿರಾಶೆಯಿಂದ [illegible] ಮುಖಮಾಡಿ ನಿಂತಿವೆ ! ಹಕ್ಕಿಗಳೆಲ್ಲ ಗೂಡು ಸೇರುತ್ತಿವೆ ! ಏ[illegible] ಸಮುದ್ರದ ತೀರವೆಲ್ಲಿಂದ ಬಂತು ? ಆ....ಕಸೂತಿಯೇ ಇದ[illegible] ಎಲ್ಲೆಡೆಯಲ್ಲಿಯೂ ಅರಳಿನಿಂತ ನಿಸರ್ಗಸೌಂದರ್ಯದ ಪಡಿನೆಳ[illegible] ಪರಿಪೂರ್ಣವಾದ ಕಸೂತಿಯ ಕಲಾಕೃತಿಯ ದರ್ಶನ ಎಷ್ಟು ರ[illegible] ಬಣ್ಣಬಣ್ಣದ ಮೆರುಗಿನ ರೇಶಿಮೆಗಳ ಸಮ್ಮಿಲನದಿಂದ ಆವ ಭಾ[illegible] ವನ್ನು ಬೇಕಾದರೂ ಮೂಡಿಸಬಹುದೇ ! ಇಚ್ಛಿಸಿದ ವಸ್ತು [illegible] ನಿಲುಕದ್ದಕ್ಕೆ ದುಃಖದಿಂದ ಅಳುಮೋರೆ ಮಾಡಿರುವ ಮಗು ಯ[illegible] ಸಹಾನುಭೂತಿಯನ್ನು ಸೆಳೆಯದು ? ನೋಡನೋಡುತ್ತಲೇ [illegible] ಕಸೂತಿಯೆಂಬ ನೆನಪೂ ಮಾಯವಾಗುವುದಲ್ಲ ! ಭಾರತಮಾತೆ[illegible] ಪುತ್ರರನ್ನು ನಗುಮುಖದಿಂದಲೇ ಹರಸುತ್ತಿರುವ ಬಾಪೂಜಿ[illegible] ಚಿತ್ರ ಎಷ್ಟು ರಮ್ಯ ! ಈ ಭಾವಗಳನ್ನೂ ರೇಶಿಮೆಯಲ್ಲಿ ಯಂ[illegible] ಸಹಾಯದಿಂದ ಅರಳಿಸಬಹುದೇ ! ಮನುಷ್ಯ ವ್ಯಕ್ತಿಗಳ ಸೂ[illegible] ಭಾವನೆಗಳನ್ನೂ ರೇಶಿಮೆಯಲ್ಲಿ ಮೂಡಿಸಬಹುದೆಂದ ಬ[illegible] ಕಸೂತಿಯ ಕಲೆ ಸಾಧಿಸಿದ ಮೇಲ್ಮೆಯು ಅರಿವಾಗದೇ ? ಕಸೂ[illegible] ಕಲೆಯಲ್ಲಿ ಇದೇ ಕೊನೆಯ ಮೆಟ್ಟಲೇ ? ಅಥವಾ ಇ[illegible] ಮುನ್ನಡಿಯಿಡುತ್ತಿದೆಯೆ ?

ಇದೀಗ ನಾಗರಿಕರಾಗಿ ನೆಲೆಗೊಂಡವರ ಸ್ವಾಸ್ಥ್ಯ ಸೂ[illegible] ತನ್ನ ಸೌಂದರ್ಯಾಭಿರುಚಿ, ಕಲಾಪ್ರಾವೀಣ್ಯ, ವಾತ್ಸಲ್ಯ, ಪ್ರೀ[illegible] ಇವುಗಳನ್ನೆಲ್ಲ ಒಟ್ಟಿಗೇ ಸೇರಿಸಿ, ಸೋದರಿ ಕಸೂತಿಯ[illegible] ಹೆಣೆಯುತ್ತಿದ್ದಾಳೆ. ಅದರಿಂದಲೇ ಅದಕ್ಕೆ ಸಜೀವತೆ. [illegible] ಅಣ್ಣನಿಗಾಗಿ, ಕಸೂತಿಯಿಂದ ಸುಶೋಭಿತವಾದ ವಸ್ತ್ರವೊಂದ[illegible]

ಸಿದ್ಧಗೊಳಿಸಿದರೆ, ನೂಲಿನ ವಸ್ತ್ರವೆಂದಾಗಲಿ, ಬಣ್ಣಬಣ್ಣದ ರೇಶ್ಮೆಯ ಮೆರುಗಿನಿಂದ ಕೂಡಿದ್ದೆಂದಾಗಲಿ ಅದಕ್ಕೆ ಹೆಚ್ಚಿನ ಬೆಲೆಯಿದೆಯೇ? ಇಲ್ಲಿ, ತಂಗಿ ಅಣ್ಣನಿಗಾಗಿ ಪ್ರೇಮಾದರಪೂರ್ವಕ ಹೆಣೆದ ಕಸೂತಿ ಅದರಲ್ಲಿದೆಯಲ್ಲವೆ? ಇದೇ ಅದರ ಹೆಚ್ಚಿನ ಬೆಲೆ.

೨

ಕಸೂತಿಯ ರಚನೆಯಲ್ಲಿ ಇಬ್ಬಗೆಯ ಆನಂದವಿದೆ. ಹೆಣೆಯುವವರಲ್ಲಿ ತೋರುವ ಸಮಾಧಾನ; ನೋಡುವ ರಸಿಕರಲ್ಲಿ ತೋರುವ ಸಂತೃಪ್ತಿ. ಈ ಆಂತರಿಕ ಆನಂದದ ಮೂಲಕ ಕಸೂತಿ ಹೊರಬರಲು ನಿರ್ಬಂಧ ಬೇಕಾಗಿಲ್ಲ. ಆದರೆ ಕಸೂತಿಯ ಪ್ರಚಾರ, ಅಭಿರುಚಿ ತೀರ ಹೆಚ್ಚಾದಾಗ, ಅದೊಂದು ನಿರ್ಬಂಧವಾಗಿಯೇ ಪರಿಣಮಿಸಿಬಿಡುತ್ತದೆ. ಕನ್ನಡನಾಡಿನಲ್ಲಿ ಅಚ್ಚ ಕರಿಯ ಅಥವಾ ಬಿಳಿಯ ಬಣ್ಣದ ಸೀರೆ-ಕುಪ್ಪಸಗಳ ಮೇಲೆ ಕಸೂತಿ ತೆಗೆಯುವುದಾಗಲಿ, ಗುಜರಾಥದಲ್ಲಿ ಮದುಮಗಳ ಬಟ್ಟೆಯ ಮೇಲೆ ಕಸೂತಿ ಇರಲೇ ಬೇಕೆಂಬುದಾಗಲಿ ಕೆಲಮಟ್ಟಿಗೆ ನಿರ್ಬಂಧವಾಗಿಯೇ ಪರಿಣಮಿಸಿರುವುದು. ಇದೇ ಕಾರಣದಿಂದಲೇ ಕಲೆಯ ಕ್ಷೇತ್ರದಲ್ಲಿಯ ಈ ಆಸ್ಥೆ ಧಾರ್ಮಿಕ ಕ್ಷೇತ್ರದಲ್ಲಿ ಸೇರಿ ನಿರ್ಬಂಧವಾಗಿ ಬಿಟ್ಟಿದೆ. ನಿರ್ಬಂಧವಿರಲಿ, ಇಲ್ಲದಿರಲಿ! ನಿಸರ್ಗದಿಂದ ಹೊರಬಂದು, ನಿಸರ್ಗಮಧ್ಯದಲ್ಲಿ ಬೆಳೆದ ಮಾನವನ ಒಲವು ನಿಸರ್ಗದೆಡೆಗೇ. ಎಂತಹ ಪ್ರಕ್ಷುಬ್ಧ ವಾತಾವರಣದಲ್ಲಿದ್ದ ಮನುಷ್ಯನೂ, ನಿಸರ್ಗ-ಸೌಂದರ್ಯದಲ್ಲಿ ಮೈಮರೆತು, ಕ್ಷಣಕಾಲವಾದರೂ ಕಷ್ಟಗಳನ್ನು ಬದಿಗಿಡಬಲ್ಲ. ಕಲಾಕೌಶಲ್ಯದಿಂದ ಕೂಡಿದ ಕೃತಿಯ ನೋಟದಿಂದಲೇ ಬೆರಗಾಗಿ ಲೀನನಾಗಬಲ್ಲ. ರೋಗಿಯು ತನ್ನ ತಲೆಗೆ ಆಸರೆಯಾಗಿರುವ ಬಟ್ಟೆಯಲ್ಲಿಯ ಕಸೂತಿಯನ್ನು ಗಂಟೆ ಗಂಟೆಗಳ ಕಾಲ ನೋಡುತ್ತ ಕುಳಿತುಕೊಳ್ಳುವುದರ ಅರ್ಥವಾದರೂ ಏನು? ಕಸೂತಿಯ ಕಲೆ ಮನಃಶಾಂತಿಯ ಸಾಧನ, ಸ್ವಾಸ್ಥ್ಯದ ಸೂಚಕ, ನೆಮ್ಮದಿಯ ಕುರುಹು. ಕಾರಹುಣ್ಣಿಮೆಯ ದಿನ ಬಣ್ಣಬಣ್ಣದ ಕಸೂತಿಯ ಬಟ್ಟೆಯನ್ನು ಹೊದ್ದು, ವೃಷಭೇಂದ್ರ ನೆರೆಯುತ್ತ ಬಂದರೆ ಯಾರಿಗೆ ತಾನೆ ನೆಮ್ಮದಿಯಿಲ್ಲ?

೩

ಮಾನವಜೀವನ ಸಂಶೋಧನೆಗೆ ತುಂಬ ಅವಕಾಶವನ್ನು ಕಲ್ಪಿಸಿಕೊಂಡಿದೆ. ದಿನದಿನಕ್ಕೆ ಅವನ ಆವಶ್ಯಕತೆ ಹೆಚ್ಚುತ್ತ ಹೋದಂತೆ, ಸಂಶೋಧನೆ ಹೆಚ್ಚುತ್ತ ಹೋಗುತ್ತದೆ. ಶಿಲಾಯುಗದ ಮನುಷ್ಯ ಮಾಂಸವನ್ನು ತಿಂದು, ಪಶುಚರ್ಮವನ್ನು ಹೊದ್ದು, ಕಲ್ಲಗುಹೆಗಳಲ್ಲಿ ವಾಸವಾಗಿದ್ದರೆ, ಮುಂದಿನ ಯುಗದ ಮನುಷ್ಯ ಕ್ರಮೇಣ ಇವೆಲ್ಲವುಗಳಲ್ಲಿ ಸುಧಾರಣೆಯನ್ನುಂಟು ಮಾಡಿದ. ಮಾನವಜೀವನದಲ್ಲಿ ವೇಷ ಮಹತ್ತ್ವದ ಸ್ಥಾನವನ್ನು ಆಕ್ರಮಿಸುತ್ತ ಬಂದಿತು. ಸೂಜಿಯ ಸ್ಥಾನ ಅಂದಿನಿಂದ ಇಂದಿನ ವರೆಗೆ ಹೆಚ್ಚುತ್ತಲೇ ಬಂದಿದೆ. ಉಡುಪು ಕೈಹೊಲಿಗೆಯಿಂದಲೇ ಸಿದ್ಧವಾಗುತ್ತಿರುವಾಗ, ಬಟ್ಟೆಯ ಉಪಯೋಗ ಮಿತವಾಗಿರಬಹುದು. ಆದರೆ ಮುದ್ರಣಾಲಯಗಳು ಬಳಕೆಯಲ್ಲಿ ಬಂದಮೇಲೆ, ಪುಸ್ತಕಗಳು ಅಸಂಖ್ಯವಾಗಿ ಹೊರಬರುತ್ತಿರುವಂತೆ— ನೂರು ವರುಷಗಳು ಗತಿಸಿರಬಹುದು—ಹೊಲಿಗೆಯ ಯಂತ್ರ ಬಳಕೆಯಲ್ಲಿ ಬಂದಂದಿನಿಂದ ಬಟ್ಟೆಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇತ್ತೀಚಿಗೆ ಹೊಲಿಗೆಯ ಯಂತ್ರ ವಿದ್ಯುತ್ತಿನ ಸಹಾಯದಿಂದ ನಡೆಯುವುದನ್ನೂ ನಾವು ಕಾಣಬಹುದು. ಹೊಲಿಗೆಯ ಯಂತ್ರ ಕೇವಲ ಬಟ್ಟೆಯ ತುಂಡುಗಳನ್ನು ಜೋಡಿಸುವ ಕಾರ್ಯವೊಂದನ್ನೇ ಅಲ್ಲ; ಉಡುಪಿನ ಮೂಲಕ ಮಾನವನ ಸೌಂದರ್ಯವರ್ಧನೆಗೆ ಆವಶ್ಯಕವಿದ್ದ ಎಲ್ಲ ಕಾರ್ಯಗಳನ್ನೂ ಮಾಡುತ್ತಿದೆ. ಎಷ್ಟೋ ಹೊತ್ತಿನ ವರೆಗೆ ಕುಳಿತು, ಕೈಯಿಂದ ಹೆಣೆದು ಮುಗಿಸುವ ಹೂವೊಂದನ್ನು ಯಂತ್ರವು ಅರೆನಿಮಿಷದಲ್ಲಿ ನಿರ್ಮಿಸಿಕೊಡುತ್ತಲಿದೆ. ಅನೇಕ ವಿಧವಾದ ಹೊಲಿಗೆಗಳಿಂದ, ಎಲೆ, ಹೂ, ಬಳ್ಳಿ, ಪಕ್ಷಿಗಳನ್ನು ತೀರ ಸಹಜವಾಗಿ ತೋರುವಂತೆ ಬಣ್ಣಬಣ್ಣಗಳಿಂದ ಯಂತ್ರದಲ್ಲಿ ಮೂಡಿಸಿಬಿಡಬಹುದು! ಕಸೂತಿಯ ಕಲೆ ಮೂರು ಬಗೆಯ ಜ್ಞಾನಕ್ಕೆ ಅವಕಾಶವನ್ನು ಕೊಟ್ಟಿದೆ: ಡ್ರಾಯಿಂಗ್, ಪೇಂಟಿಂಗ್, ಮತ್ತು ಕಸೂತಿ; ಇವೆಲ್ಲವುಗಳ ಜ್ಞಾನ ಅದರಲ್ಲಿ ಸಮಾವೇಶವಾಗುತ್ತದೆ. ಇವುಗಳ ಜ್ಞಾನ ತಕ್ಕಮಟ್ಟಿಗಿದ್ದ ಮನುಷ್ಯನೂ, ಯಂತ್ರದಲ್ಲಿ ವಿಧವಿಧದ ಹೊಲಿಗೆಯಲ್ಲಿ ಹೂಬಳ್ಳಿಗಳನ್ನು ತುಂಬಿದರೆ, ವಿಧವಿಧದ ಸೌಂದರ್ಯವೇ ಅರಳುವುದನ್ನು ರಸಿಕರು ಕಾಣಬಹುದು. ಮುಂದೆ ವ್ಯಕ್ತಿಗಳು ಕೂಡ ಸಜೀವವಾಗಿರುವಂತೆ ಬಣ್ಣಬಣ್ಣಗಳಿಂದ ಯಂತ್ರದ ಸಹಾಯದಿಂದ ಮೂಡಿಸಬಹುದು. ವೇಳೆ ಕೊಂಚವಿದ್ದರೂ ಸೌಂದರ್ಯ ಸನಿರೀಕ್ಷಣ ಶಕ್ತಿಯನ್ನು ಮೂಡಿಸುವುದಕ್ಕೆ ಯಂತ್ರವು ಅವಕಾಶವನ್ನಿತ್ತು ಉಪಕಾರವನ್ನೇ ಮಾಡಿದೆ. ಯಂತ್ರದ ಸಹಾಯವಿಲ್ಲದೆ ಮಾನವಜೀವನ ಈ ಯುಗದಲ್ಲಿಯಂತೂ ಸಾಗದು. ಕೈಲಿ ಕಸೂತಿಯನ್ನು ಅರಳಿಸಬಹುದಾದರೂ, ಯಂತ್ರಸಹಾಯದಿಂದ ಅಲ್ಪ ವೇಳೆಯಲ್ಲಿಯೇ ಈ ಕೆಲಸವನ್ನು ಸಾಧಿಸಬಹುದು. ಸುಶೋಭಿತವಾಗಿ ಮಾಡಬಹುದು. ಅದಕ್ಕಾಗಿ ಮಾಡಬೇಕಾದ ಅಭ್ಯಾಸವನ್ನು ಶಕ್ಯವಿದ್ದಷ್ಟು ತಿಳಿಯಾಗಿ ತಿಳಿಸುವ ಸಾಹಸ ಇಲ್ಲಿ ಮಾಡಿದೆ. ಯಂತ್ರದಲ್ಲಿ ಕಸೂತಿಯನ್ನು ತಯಾರಿಸುವಾಗ, ಅಭ್ಯಾಸವಿಲ್ಲದ್ದರಿಂದ, ಮೊದಮೊದಲು ಬೇಸರು ನಿರಾಶೆಗಳುಂಟಾಗುವ ಸಂಭವವೂ ಇದೆ. ಆದರೆ ಧೈರ್ಯದಿಂದ ಮುಂದೆ ಸಾಗಿದಲ್ಲಿ, ಅರೆನಿಮಿಷದಲ್ಲಿಯೇ ಪೂರ್ಣ ಅರಳಿದ ಕಸೂತಿಯನ್ನು ನೋಡುವ ಭಾಗ್ಯ ನಮ್ಮದಾಗಿರುತ್ತದೆ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಜೂನ್ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ '**ಬೆಳವಡಿಯ ಮಲ್ಲಮ್ಮ**' ಎಂಬ ಆಕಾಶನಾಟಿಕೆಯನ್ನು ವಿಮರ್ಶಿಸಿ ಬೇರೆ ಬೇರೆ ಏಳು ಜನರಿಂದ ಬರೆಹಗಳು ಬಂದಿವೆ. ವಿಮರ್ಶಕರ ಅನುಕ್ರಮ ಹೀಗಿದೆ:

೧. ಶ್ರೀ. ಎಸ್. ವಿ. ಬಡಿಗಣ್ಣವರ, ಶಹಪೂರಪೇಟೆ, ಗದಗ ೨. ಶ್ರೀ. ಎ ಎಚ್. ನಾಗರಾಳ, ಗುಳೇದಗುಡ್ಡ. ೩. ಶ್ರೀ. ದಿ. ಜೀ. ಗುಮಾಸ್ತೆ, ಸೊಲ್ಲಾಪುರ. ೪. ಶ್ರೀ. ಎಫ್.ಡಿ. ಮಹಾರ, ಹಿರೇಬೆಂಡೀಗೇರಿ. ೫. ಶ್ರೀಮತಿ ಪದ್ಮಾ, ಶಾರದಾ ಸ್ತ್ರೀ ಸಮಾಜ, ಬೆಂಗಳೂರುನಗರ. ೬. ಶ್ರೀ. ಸ. ಮುಂ. ಕಟ್ಟಿ, ಅಗ್ರಿಕಲ್ಚರ್ ಸ್ಕೂಲ್, ದೇವೀಹೊಸೂರು. ೭. 'ಗೋಪಾಲಕೃಷ್ಣ.' ವೀರರಾಜಪೇಟೆ–ಕೊಡಗು.

ಎಲ್ಲ ವಿಮರ್ಶಾಲೇಖನಗಳನ್ನೂ ಜಯಂತಿಯ ಸಂಪಾದಕ ಸಮಿತಿಯೇ ನಿರೀಕ್ಷಿಸಿ ನಿರ್ಣಯವನ್ನು ಕೊಟ್ಟಿದೆ. **ಶ್ರೀಮತಿ ಪದ್ಮಾ, ಶಾರದಾ ಸ್ತ್ರೀ ಸಮಾಜ, ಬೆಂಗಳೂರು** ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ದಿ. ಜೀ. ಗುಮಾಸ್ತೆ, ಶ್ರೀ. ಎಫ್. ಡಿ. ಮಹಾರ, ಶ್ರೀ. 'ಗೋಪಾಲಕೃಷ್ಣ' ಅವರ ವಿಮರ್ಶೆಗಳು ಚೆನ್ನಾಗಿವೆ. ಶ್ರೀ. ಸಂ. ಮು. ಕಟ್ಟಿಯವರದೂ ತಕ್ಕಮಟ್ಟಿಗೆ ಒಳ್ಳೆಯದಾಗಿದೆ.

ಇಂದು ಕನ್ನಡಿಗರಿಗಾಗಿ ಧಾರವಾಡ, ಮೈಸೂರು–ಹೀಗೆ ಎರಡು ಆಕಾಶವಾಣಿಕೇಂದ್ರಗಳಿವೆ. ಅವುಗಳಲ್ಲಿ ವಾರ-ವಾರಕ್ಕಲ್ಲದೆ ವಿಶೇಷ ಸಂದರ್ಭಗಳಲ್ಲೂ ಆಕಾಶನಾಟಿಕೆಗಳನ್ನು ಬಿತ್ತರಿಸಲಾಗುತ್ತಿದೆ. ರಂಗಭೂಮಿಯ ಮೇಲೆ ಆಡಲು ಬರೆವ ನಾಟಕಲೇಖನತಂತ್ರಕ್ಕೂ ಬಾನುಲಿಗಳಲ್ಲಿ ಬಿತ್ತರಿಸುವ ನಾಟಕಲೇಖನತಂತ್ರಕ್ಕೂ ತುಂಬ ವ್ಯತ್ಯಾಸವಿರುವುದು. ಆಕಾಶ-ನಾಟಿಕೆಗಳು ಕೇವಲ ಧ್ವನಿಯೊಂದರಿಂದಲೇ ಪರಿಪೋಷಣೆ ಪಡೆಯಬೇಕು. ವ್ಯಕ್ತಿ ವ್ಯಕ್ತಿಗಳ ರೂಪದರ್ಶನವಿಲ್ಲ; ಹಾವ-ಭಾವಗಳ ಪ್ರದರ್ಶನವಿರುವುದಿಲ್ಲ. ಇನ್ನೊಂದು ವಿಶೇಷ ಸಂಗತಿಯೆಂದರೆ: ಈ ನಾಟಕಗಳಿಗಿರುವ ಸಮಯನಿರ್ಬಂಧ. ಆಕಾಶ-ನಾಟಿಕೆಗಳನ್ನು ಬರೆಯಬೇಕೆನ್ನುವ ಲೇಖಕರು ಇವೆಲ್ಲ ನಿಯಮ-ನಿರ್ಬಂಧಗಳನ್ನು ಲಕ್ಷ್ಯದಲ್ಲಿರಿಸಿಕೊಂಡು, ಮಾತುಗಳಿಂದಲೇ ಕಥೆ ಬೆಳೆಯಿಸಿ ತೋರಿಸಬೇಕು. ಬೇರೆ ಬೇರೆ ಶಬ್ದ-ಧ್ವನಿಗಳಿಂದಲೇ ಹಿನ್ನೆಲೆಯನ್ನು ರೂಪಿಸಿಕೊಡಬೇಕು. ಕನ್ನಡ ಬಾನುಲಿಯ ಎರಡು ಕೇಂದ್ರಗಳಿಗೂ ಇಂದು ನಮ್ಮ ಲೇಖಕರು ಒಳ್ಳೊಳ್ಳೆಯ ಆಕಾಶನಾಟಿಕೆಗಳನ್ನು ಬರೆದು ಒದಗಿಸಬೇಕಾಗಿದೆ. ಅವುಗಳಿಗೆ ಮಾದರಿಗಳೆಂದೇ ಜಯಂತಿಯಲ್ಲಿ 'ಹಾಳುತೋಟ' 'ಬೆಳವಡಿಯ ಮಲ್ಲಮ್ಮ' ಇವುಗಳನ್ನು ಪ್ರಕಟಿಸಲಾಗಿದೆ. ಮುಂದೆ ಕೂಡ ಒಳ್ಳೆಯ ನಾಟಕಗಳೆಂದು ಕಂಡುಬಂದುವುಗಳನ್ನು ಪ್ರಕಟಿಸಲಾಗುವುದು.

ಮುಂದಿನ ತಿಂಗಳಿಗಾಗಿ ಇದರಲ್ಲಿ ಪ್ರಕಟವಾದ '**ಸಂಕಟ ವಿಮೋಚನೆ**' ಎಂಬ ಕಥೆಯನ್ನು ವಿಮರ್ಶೆಯ ಮೇಲಾಟಕ್ಕೆ ಇರಿಸಲಾಗಿದೆ. ಹೆಚ್ಚುಜನ ತರುಣ ವಿಮರ್ಶಕರು ಇದರಲ್ಲಿ ಭಾಗವಹಿಸುತ್ತಿರಬೇಕಾಗಿ ಬಿನ್ನಹ

—ಸಂಪಾದಕರು

ಬೆಳವಡಿಯ ಮಲ್ಲಮ್ಮ

(ಆಕಾಶನಾಟಿಕೆಯ ವಿಮರ್ಶೆ)

ಶ್ರೀಮತಿ ಪದ್ಮಾ, ಶಾರದಾ ಸ್ತ್ರೀಸಮಾಜ, ಬೆಂಗಳೂರು,

ಮಲ್ಲಮ್ಮಾಜಿಯು ಸ್ವಾದಿಯ ಮಧುಲಿಂಗನಾಯಕನ ಮಗಳು. ಬೆಳವಡಿಯ ಈಶಪ್ರಭುರಾಯನ ಹೆಂಡತಿ. ನೆರೆಯ ರಾಜ್ಯಗಳೆಲ್ಲವೂ ಶತ್ರುಗಳ ದಾಳಿಗೆ ಸೋತು, ಅಭಿಮಾನ್ಯಶೂನ್ಯವಾಗಿ ಪರಾಧೀನ-ವಾಗಿ ಬಾಳುತ್ತಿರಲು, ಅಂತಹ ಸಮಯದಲ್ಲೂ ಬೆಳವಡಿಯು ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಂಡು, ಯಾರಿಗೂ ತಲೆಬಾಗಿಸದೆ ತನ್ನ ಜೀವಜ್ಯೋತಿಯನ್ನು ಸಂರಕ್ಷಿಸಿಕೊಂಡು ಬಂದಿತ್ತು. ಹೀಗಿರಲು, ವೀರ ಮರಾಠಾ ಶಿವಾಜಿಯು ಯಾದವಾಡದಲ್ಲಿ ಬೀಡ ಬಿಟ್ಟಿದ್ದ ವಾರ್ತೆಯನ್ನು ಆ ದೊರೆ ರಾಣಿಯರು ಕೇಳಿ ಆತನನ್ನು ರಾಜಧಾನಿಗೆ ಕರೆತಂದು ಅಭೂತಪೂರ್ವ ಸ್ವಾಗತ ನೀಡಬೇಕೆಂದಿದ್ದರು. ಆದರೆ ವಿಧಿಸಂಕಲ್ಪ ಬೇರೆ ಇತ್ತು. ಬೆಳವಡಿಯ ಭಾಗ್ಯರವಿ ಅಸ್ತಮಿಸುವ ಕಾಲ! ಶಿವಾಜಿಗೆ ಅರಿಕೆಯಿಲ್ಲದಂತೆ ಆತನ ಸೈನಿಕರು ಬೆಳವಡಿಯ ಗೋವೃಂದವನ್ನು ಎಳೆದೊಯ್ದರು. ಆದರಿಂದ ಬೆಳವಡಿಯ ಸೇನೆ, ಗೋವುಗಳನ್ನು ಕಾಳಗದ ಮೂಲಕ ಬಿಡಿಸಿಕೊಂಡು ಬಂದಿತು. ಸೋ

ಶಿವಾಜಿಯು, ಹಿಮ್ಮೆಟ್ಟುವುದು ಹೇಡಿತನದ ಲಕ್ಷಣವೆಂದು ಬಗೆದು, ಪುನಃ ಬೆಳವಡಿಯ ಕೋಟೆಗೆ ಬಲವಾದ ಮುತ್ತಿಗೆ ಹಾಕಿದನು. ಇಪ್ಪತ್ತಾರು ದಿನ ಕದನವಾದ ಮೇಲೆ, ಆಹಾರ ಸಾಮುಗ್ರಿಗಳು ಮುಗಿದು ಹೋಗಲು, ಬೆಳವಡಿಯ ಸೇನೆ ವೀರಾವೇಶದಿಂದ ಹೊರ ಬಿದ್ದು ಹೋರಾಡಿತು. ಆ ಕದನದಲ್ಲಿ ಈಶಪ್ರಭು ಮೋಸದಿಂದ ಕೊಲ್ಲಲ್ಪಟ್ಟನು. ಮಲ್ಲಮ್ಮಾಜಿ ಹೆದರಲಿಲ್ಲ. ತೊಟ್ಟಿಲು ತೂಗುತ್ತಿದ್ದ ಕೈ ಖಡ್ಗವನ್ನು ತೊಟ್ಟಿತು. ಸೇನೆಯನ್ನು ಹುರಿದುಂಬಿಸಿ ಯುದ್ಧರಂಗವನ್ನು ಪ್ರವೇಶಿಸಿದಳು. ಆದರೆ ಶಿವಾಜಿಯು, ಆದಿಶಕ್ತಿಯ ಅವತಾರವೆಂದು ಭಾವಿಸಿದ್ದ ಹೆಣ್ಣಿನೊಡನೆ ಯುದ್ಧ ಮಾಡಲು ಒಪ್ಪಲಿಲ್ಲ. ಆದುದರಿಂದ ಉಭಯತರಿಗೂ ಸನ್ಮಾನಕರವಾದ ಒಪ್ಪಂದವಾಗಿ, ಬೆಳವಡಿಯ ಸ್ವಾತಂತ್ರ್ಯಸೂರ್ಯನ ಪ್ರಭೆಯು ಮಾಸದೆ ಉಳಿಯಿತು.

ಮಲ್ಲಮ್ಮಾಜಿಯು ಅಂತಃಪುರದಲ್ಲಿ ಬೆಳೆದ ಹೆಣ್ಣಾದರೂ ವೀರಪತ್ನಿ. ತನ್ನ ನಾಡಿನ ಭವಿತವ್ಯದ ಬಗ್ಗೆ ತೀವ್ರ ಅಭಿಮಾನವುಳ್ಳವಳು. ಮಲ್ಲಮ್ಮನ ವೀರವಾಣಿ, ವ್ಯಕ್ತಿತ್ವ—ಈ ಕೆಲವು ಮಾತುಗಳಿಂದ ತಿಳಿದುಬರುತ್ತವೆ: "ಆದರೂ ಇದ್ದುದರಲ್ಲಿಯೇ ನಾವು ಭಾಗ್ಯಶಾಲಿಗಳೆಂದು ಹೇಳಬೇಕು. ಇನ್ನೊಬ್ಬರ ಕೈಗೊಂಬೆಯಾಗಿ ಬಾಳದೆ ಸ್ವಾತಂತ್ರ್ಯಸುಖ ಅನುಭವಿಸುತ್ತಲಿದ್ದೇವೆ" ಎನ್ನುವ ಈಶಪ್ರಭುವಿಗೆ "ಕಾವೇರಿಯಿಂದ ಗೋದಾವರಿಯ ವರೆಗೆ ಅಖಂಡವಾಗಿದ್ದ ಕನ್ನಡ ನಾಡೆಲ್ಲವೂ ಪರಕೀಯರ ಪಾಲಾಗಿರುವಾಗಿರುವಾಗ, ಅಂಗೈ ಅಗಲದ ಬೆಳವಡಿಯ ಸ್ವಾತಂತ್ರ್ಯಕ್ಕಾಗಿ ಸಂತೋಷಿಸಬೇಕೇ! ಗಂಡುಸರಾದ ನೀವೂ ಇಷ್ಟೊಂದು ಅಲ್ಪಸಂತುಷ್ಟಿಗಳಾಗಬೇಕೇ!" ಎನ್ನುತ್ತಾಳೆ. ಇಡೀ ಕನ್ನಡ ನಾಡು ಪರಕೀಯರಿಗೆ ಸೇರಿಹೋಗಿರುವಾಗ, ಬೆಳವಡಿಯೊಂದು ಸ್ವತಂತ್ರವಾಗಿದೆಯೆಂದು ಸಂತುಷ್ಟಿಯಿಂದಿರುವುದು ಸ್ವಾಭಿಮಾನಶೂನ್ಯತೆಯ ಲಕ್ಷಣ. ಕಳೆದುಹೋದ ನಾಡೆಲ್ಲವನ್ನೂ ಜಯಿಸಿ, ಏಕಚ್ಛತ್ರಾಧಿಪತ್ಯವನ್ನಾಗಿಸಬೇಕೆಂದೂ, ಕನ್ನಡನಾಡಿನ ಸ್ವಾತಂತ್ರ್ಯ ಜಯಘೋಷವೂ ದಶದಿಕ್ಕುಗಳನ್ನು ವ್ಯಾಪಿಸಬೇಕೆಂಬುದೂ ಆಕೆಯ ಹಿರಿಯಾಸೆ. ಇದರಿಂದ ಹೆಣ್ಣಾಗಿ ಹುಟ್ಟಿದ್ದರೂ ಆಕೆಯ ಧಮನಿಗಳಲ್ಲಿ ಸ್ವಾತಂತ್ರ್ಯಸಾಧನೆಯ ಉತ್ಕಟೇಚ್ಛೆಯಿಂದ ರಕ್ತವು ಕುದಿಯುತ್ತಿದೆ ಎಂದು ತಿಳಿಯುತ್ತದೆ. ಇನ್ನೊಂದು ಸಂದರ್ಭದಲ್ಲಿ 'ಗಂಡುಸಿರಲಿ-ಹೆಂಗುಸಿರಲಿ, ಸಮಯ ಸಂದರ್ಭದ ಔಚಿತ್ಯವರಿತು ಹೂವಿನಂತೆ ಮೆಲ್ಲಿತ್ತಾಗಿಯೂ ಇರಬೇಕು, ವಜ್ರದಂತೆ ಬಲ್ಲಿತ್ತಾಗಲೂ ಬರಬೇಕು. ಸರಿದರೆ ಒತ್ತಣ್ಣ ಒತ್ತಿದರೆ ಸರಿಯಣ್ಣ—ಎನ್ನುವವರು ನಿಜವಾಗಿಯೂ ಮನುಷ್ಯರಲ್ಲ!" ಎಂದುದು ಆಕೆಯ ವ್ಯಕ್ತಿತ್ವದ ಹಿರಿಮೆಯನ್ನು ತೋರಿಸುತ್ತದೆ. ಮಲ್ಲಮ್ಮಾಜಿ ಕೇವಲ ವೀರಪತ್ನಿಯೇ ಅಲ್ಲ, ವೀರಮಾತೆಯೂ ಅಹುದು. "ನನ್ನ ಮಗು ನಾಗಭೂಷಣ ನಿಜವಾದ ಮನುಷ್ಯನಾಗಬೇಕೆಂದು ನನ್ನ ಆಸೆ. ಇವನು ಕನ್ನಡನಾಡನ್ನೆಲ್ಲಾ ರಟ್ಟ ಸಾಮ್ರಾಜ್ಯಧ್ವಜದಡಿಯಲ್ಲಿ ಒಂದುಗೂಡಿಸಿ ಮತ್ತೆ ಮೆರೆಯಿಸಬೇಕೆಂದು ನನ್ನ ಬಯಕೆ!" ತಾಯಿಯ ದೂರದ ಆಸೆಯು ಎಲ್ಲಿಯ ವರೆಗೂ ಸಾಗಿದೆ. ಆ ಆಸೆಯ ಬಸದಲ್ಲಿ ಕನ್ನಡನಾಡಿನ ಸ್ವಾತಂತ್ರ್ಯಸಾಧನೆಯ, ಏಕೀಕರಣದ ಕುಸುಮವು ಎಷ್ಟು ಚೆನ್ನಾಗಿ ಅರಳಿದೆ! ಆಕೆ ಕೇವಲ ತನ್ನ ಮಗನು ಸುಖಿಯಾಗಿರಬೇಕೆಂದು ಬಯಸದೆ, ಮನುಷ್ಯನಾಗಿ ಬಾಳಬೇಕೆನ್ನುತ್ತಾಳೆ. ಮಲ್ಲಮ್ಮಾಜಿಯು, ಈಶಪ್ರಭುವು ಹೇಳಿದಂತೆ "ಕಣ್ಣಿಗೆ ಹೂವಿನಂತೆ ಕಾಣುವ ವಜ್ರಹೃದಯಿನಿ" ಕಠೋರತೆ, ಕೋಮಲತೆಗಳೆರಡೂ ಸಮನ್ವಯವಾಗಿದ್ದ ಹೃದಯ. ಆಕೆ ಎಷ್ಟೇ ಸ್ವಾತಂತ್ರ್ಯಪ್ರಿಯಳಾದರೂ ದೇಶಾಭಿಮಾನಿಯಾದರೂ, ಅವಳ ತಾಯ್ತರುಳಿನ ಮಮತೆ ಮಾಸಿಲ್ಲ. ಪತಿಯೊಡನೆ ಯುದ್ಧಕ್ಕೆ ತೆರಳುವ ಉತ್ಸಾಹವಿದ್ದರೂ ಕುಮಾರನ ಅಸ್ವಸ್ಥತೆ ಅವಳ ಮನವನ್ನು ಕಲಕುತ್ತಿದೆ. ಆತನ 'ಅಮ್ಮಾ,' ಎಂಬ ಕೂಗು ಆಕೆಯ ತಾಯ್ತರುಳನ್ನು ಬಡಿದೆಬ್ಬಿಸಿದೆ. "ಬಂದೆ, ಬಂದೆ ಭೂಷಣಾ, ನಾನು ನಿನ್ನ ತಾಯಿಯೂ ಹೌದು" ಎನ್ನಿಸಿದೆ. ಮರಾಠಾಸಿಂಹ, ಶತ್ರುರಾಜ— ಶಿವಾಜಿಯು 'ಶಾಪ ಕೊಡಬೇಡಿ ತಾಯಿ! ಹೆಣ್ಣಿನ ಶಾಪ ಜನ್ಮಜನ್ಮಾಂತರದಲ್ಲೂ ಬಾಧೆ ಕೊಡುವುದೆಂದು ನನ್ನ ತಾಯಿ ನನಗೆ ಹೇಳಿದ್ದಾಳೆ' ಎಂದ ಕೂಡಲೆ,—ಅವಳ ತಾಯ್ತರುಳಿನ ಸ್ನೇಹ, ವಾತ್ಸಲ್ಯಗಳು ಉಕ್ಕಿ ಬರುತ್ತವೆ. ರೋಷ, ವೈರವೆಲ್ಲವೂ ಕರಗಿ, ಎದರೆದೆಯಲ್ಲಿ ಕರುಣೆಸ್ನೇಹಗಳ ಬುಗ್ಗೆಯೇ ಎದ್ದಿದೆ. 'ತಾಯಿ' ಎಂಬ ಶಬ್ದವೇ ಅವಳಲ್ಲಿ ಈ ಮಾರ್ಪಾಡನ್ನು ತಂದಿದೆ. ಎರಡೇ ದಿನಗಳಲ್ಲಿ ಬೆಳವಡಿಯ ಸೌಭಾಗ್ಯವನ್ನು ಮಣ್ಣುಗೂಡಿಸಿದ ಶಿವಾಜಿಯ ಬಗೆಗೂ ಔದಾರ್ಯಬುದ್ಧಿ ಬರುತ್ತದೆ. ಇದು ಅವಳ ಮನಸ್ಸಿನ ಮೃದುತ್ವವನ್ನು ತೋರಿಸುತ್ತದೆ. ಶಿವಾಜೀ ಮಹಾರಾಜನು ಯಾದವಾಡದಲ್ಲಿ ಬೀಡುಬಿಟ್ಟಿದ್ದ ವಾರ್ತೆಯನ್ನು ಕೇಳಿ, ರಾಜದಂಪತಿಗಳು ಆಡುವ ಮಾತುಗಳು ಗಮನಾರ್ಹವಾಗಿವೆ: "ಆ ಸ್ವಾತಂತ್ರ್ಯವೀರನ ಸ್ನೇಹದೃಷ್ಟಿ ನಮ್ಮ ಭೂಷಣಕುಮಾರನಿಗೆ

ಇದೀಗ ಪ್ರಕಟವಾಗಿದೆ!

ಹಾವಾಡಿಗನ ಮಗಳು

(ಶಿಗ್ಗಾಂವಿ ನೀರೇಶ್ವರರ ಕಥಾಸಂಗ್ರಹ)

೧೦೦ ಪುಟಗಳು ಬೆಲೆ: ೧—೦—೦

○ ಇದು ವಿಕಾಸ ಸಾಹಿತ್ಯಮಾಲೆಯ ಎರಡನೆಯ ಪುಸ್ತಕವಾದುದರಿಂದ ಚಂದಾದಾರರಾಗುವವರಿಗೆ ವಿಶೇಷ ಸವಲತ್ತು, ಕಾಣಿಕೆಗಳಿವೆ.

ಪತ್ರಿಕಾ ಏಜಂಟರಿಗೆ ಮಾರಾಟಗಾರರಿಗೆ ಕೈತುಂಬ ಕಮೀಶನ್ ವಿವರಗಳಿಗಾಗಿ ಇಂದೇ ಬರೆಯಿರಿ.

ವಿಕಾಸ ಸಾಹಿತ್ಯಮಾಲಾ,
ಪೆಂಡಾರಿ ಓಣಿ, ಚಿತೂರಿ ಬಿಲ್ಡಿಂಗ್, ಹುಬ್ಬಳ್ಳಿ.

ಚೌಸ್ಥಿಕವಾದೀತು. ಆ ಸತ್ತ್ವಶಾಲಿಯ ಶುಭಾಶೀರ್ವಾದ ನನ್ನ ಬಾಲರಾಜನಿಗೆ ವೀರರಕ್ಷೆಯಾದೀತು!" "ವೀರ ವಿಭೂತಿ ಮನೆಗೆ ಬರುವುದೆಂದರೆ ಅದೇ ಮಾನನವು; ಅದೇ ದೀವಳಿಗೆ!" ಈ ಮಾತುಗಳು ಪರರಾಜನ ಪರಾಕ್ರಮಕ್ಕೆ ಮೆಚ್ಚುವ ವಿಶಾಲ-ಹೃದಯವನ್ನು ತೋರಿಸುತ್ತವೆ. ಅತಿಥಿ ಸತ್ಕಾರಕ್ಕೆ ಅಗ್ರಸ್ಥಾನವನ್ನಿತ್ತಿರುವ ಭಾರತೀಯ ಪ್ರಾಚೀನ ಸಂಸ್ಕೃತಿಯ ಮೇಲ್ಮೆಯನ್ನು ತೋರಿಸುತ್ತವೆ.

ಶಿವಾಜೀ ಮಹಾರಾಜನನ್ನು ರಾಜಧಾನಿಗೆ ಕರೆತರಬೇಕೆಂದಿದ್ದಾಗ ಕಂಡುಬಂದ ಕುಮಾರನ ರೋದನ, ಹಾಲಕ್ಕಿಗಳ ಕೂಗು, ನಾಯಿಗಳ ಕೂಗು, ಮುಂಬರುವ ವಿಪತ್ತಿನ— ಬೆಳವಡಿಯ ಸುಖಧಾಮವನ್ನು ಮಣ್ಣುಗೂಡಿಸಿದ ವಿಧಿಯ ವಿಕಟಲೀಲೆಯ— ಪ್ರತೀಕವಾಗಿದೆ.

ಲೇಖಕರು ಈ ಐತಿಹಾಸಿಕ ಕಥೆಯನ್ನು ನಾಟಕರೂಪದಲ್ಲಿ ಹೆಣೆದಿದ್ದಾರೆ. ಸಂಭಾಷಣೆಯ ಮೊದಲು ನಿವೇದಕನಿಂದ ಪರಿಸ್ಥಿತಿಯ ವರ್ಣನೆಯನ್ನು ಮಾಡಿಸಿದ್ದಾರೆ. ಇದರಿಂದ ವಾಚಕರಿಗೆ ಓದುತ್ತಿದ್ದೇವೆಂಬ ಭಾವನೆಗಿಂತ ಪ್ರತ್ಯಕ್ಷವಾಗಿ ಕಾಣುತ್ತಿರುವಂತೆ ಭಾಸವಾಗುತ್ತದೆ. ಇದರ ಪೂರ್ಣತೆಯನ್ನು ಮರಾಟರಿಗೂ ಬೆಳವಡಿಯವರಿಗೂ ನಡೆದ ಕದನದ ಸಂದರ್ಭದಲ್ಲಿ ಕಾಣಬಹುದು. ಮತ್ತು ಈಶಪ್ರಭುವು ಮರಣ ಹೊಂದಿದ ಮೇಲೆ ರಾಣಿಯು ವೀರಾವೇಶದಿಂದ ಯುದ್ಧಮಾಡಿದ ವರ್ಣನೆಯಲ್ಲಿ ಕಾಣಬಹುದು. ಹೀಗೆ ನೂರಾರು ವರ್ಷಗಳ ಹಿಂದೆ ನಡೆದ ಸಂಗತಿಯನ್ನು ಈಗ ಕಣ್ಣುಮುಂದೆ ಕಟ್ಟುವಂತೆ, ಪ್ರತಿಯೊಂದು ಪಾತ್ರವೂ ಜೀವಂತವಾಗಿರುವಂತೆ ಚಿತ್ರಿಸಿದ್ದಾರೆ. ಪಾತ್ರಪೋಷಣೆ, ಸಂಭಾಷಣಾಚಾತುರ್ಯಗಳೊಂದಿಗೆ ಸನ್ನಿವೇಶದ ವರ್ಣನೆಯೂ ಕೂಡಿ ಓದುಗರನ್ನು ಪ್ರೇಕ್ಷಕರನ್ನಾಗಿಸುವ ಕಲೆಗಾರಿಕೆ ಇವರಲ್ಲಿ ತುಂಬಿ ನಿಂತಿದೆ.

ಕನ್ನಡದ ಕವಿಚಕ್ರವರ್ತಿ ರನ್ನ ತನ್ನ 'ಗದಾಯುದ್ಧ'ದಲ್ಲಿ, ತನ್ನ ಪ್ರಭುವನ್ನು ಭೀಮನ ಪಾತ್ರದಲ್ಲಿ ತೊಡಗಿಸಿ, ಆತನ ಶೌರ್ಯ ಪ್ರತಾಪಗಳ ಮೇಲ್ಮೆಯನ್ನು ಬೆಳಗಿಸಬೇಕೆಂದಿದ್ದರೂ, ಭೀಮನ ಪಾತ್ರಕ್ಕಿಂತಲೂ ದುರ್ಯೋಧನನ ಪಾತ್ರವು ಎದ್ದು ಕಾಣುವಂತಾಗಿದೆ. ಆತನ ಅಭಿಮಾನ, ಶತ್ರುವಿನಲ್ಲೂ ತೋರುವ ಔದಾರ್ಯ, ರಣೋತ್ಸಾಹ, ದುರ್ವಿಧಿ—ಇವೆಲ್ಲ ಆವನ ಪಾತ್ರವನ್ನು ಬೆಳಗಿಸಿವೆ. ಅಂತೆಯೇ ಈ ರೂಪಕದಲ್ಲೂ ಲೇಖಕರು ಮಲ್ಲಮ್ಮಾಜಿಯ ಪಾತ್ರವನ್ನು ಹೆಚ್ಚು ಪೋಷಿಸಿದ್ದರೂ, ಶಿವಾಜಿಯ ಪಾತ್ರವೂ ಒಂದೆರಡು ದೃಶ್ಯಗಳಿಂದ ಅಷ್ಟೇ ಮನೋಹರವಾಗಿ ಚಿತ್ರಿತವಾಗಿದೆ. ಮೊಗಲರನ್ನು ಬಗ್ಗುಬಡಿದ ವೀರ ಮರಾಠಾ ಶಿವಾಜಿ, ಹೆಣ್ಣಿನೊಂದಿಗೆ ಯುದ್ಧಮಾಡಲು ಹಿಂದೆಗೆದ ಕಾರಣವು ಆತನ ಯುದ್ಧ ಭೀರುತ್ವವಲ್ಲ. ಹೆಣ್ಣಿನಲ್ಲಿ ಅವನಿಟ್ಟಿದ್ದ ಪೂಜ್ಯಭಾವನೆ.

ಜೀಜಾಬಾಯಿಯ ಮಮತೆಯ ಪುತ್ರ, ತಾಯಿ ಭವಾನಿಯ ಶ್ರೇಷ್ಠ ಭಕ್ತ ಶಿವಾಜಿ, ಹೆಣ್ಣಿನ ಶಾಪ ಜನ್ಮಜನ್ಮಾಂತರದಲ್ಲೂ ಬಾಧಿಸುವುದೆಂದು ನಂಬಿದ್ದ ಮರಾಠಾ ಚಕ್ರವರ್ತಿ, ಬೆಳವಡಿಯ ರಾಣಿಯೊಂದಿಗೆ ಆಡುವ ಮಾತುಗಳು, ಓದುಗರ ಮನಮಿಡಿಯುವಂತಿವೆ. ವೀರ ಶಿವಾಜಿಯ ಬಗ್ಗೆ ಸದ್ಭಾವನೆಯುಂಟಾಗುತ್ತದೆ.

ಆನಂದಕಂದರು ಇದುವರೆಗೆ ಅನೇಕ ಐತಿಹಾಸಿಕ ಕಥೆಗಳನ್ನು ಬರೆದು ಯಶಸ್ವಿಗಳಾಗಿದ್ದಾರೆ. ಈ ಚಿತ್ರಣವೂ ಅದೇ ಕಲೆಗಾರಿಕೆಯಿಂದ ತಂತ್ರವೈಶಿಷ್ಟ್ಯದಿಂದ ವಾಚಕರ ಮನವನ್ನು ಸೂರೆಗೊಳ್ಳುತ್ತದೆ. ಲೇಖಕರಿಂದ ಇದೇ ಬಗೆಯ ಐತಿಹಾಸಿಕ ಚಿತ್ರಗಳು ಹೆಚ್ಚಾಗಿ ಬಂದು, ಕಣ್ಮರೆಯಾದ ಕನ್ನಡ ನಾಡಿನ ಕೀರ್ತಿವೈಭವಗಳನ್ನು ಬೆಳಗಿಸಲಿ.

ಬದುಕು ತಲೆಗೆದರಿತ್ತು

ಪ್ರೊ. ಶಿಗ್ಗಾವಿ ವೀರೇಶ್ವರ

ಜಗದಂತರಾಳದೊಳಗೀಳಿದೀಸುತಿರುವಾಗ
ಮನದುಂಬಿ 'ಗುಂಯಿ'ಂದು ಹಾಡತೊಡಗಿತ್ತು;
ಕಮನೀಯ ಕಲ್ಪನಾ-ವೈಭವ ವಿಲಾಸದಲಿ
ತಂತಾನೆ ಮೈಮರೆತು ವಿಹರಿಸುತ್ತಿತ್ತು.

ಬಣ್ಣ-ಬಣ್ಣದ ತೆರೆಗಳೊಂದೊಂದೆ ಮುಂಬಂದು
ಮಣ್ಣನಪ್ಪುವ ಆಟ ನಡೆದ ಹಾಗಿತ್ತು;
ಕಣ್ಣು ಮಣ್ಣಿಗೆ ಜಗಳ ನಡೆದ ತೆರನಾಗಿತ್ತು
ಆ ವೃಕ್ಷದೊಟ್ಟಿಲಲಿ ಭಾವವಂತಿತ್ತು

ಬಲವಿದ್ದು ಗೆಲವಿಲ್ಲದಂತಾದ ಜೀವಗಳು
ಬದುಕಿದ್ದರೂ (ಆ) 'ಬದುಕು' ಬೆಲೆಯು ನಗಲಿತ್ತು;
ಗೆಲವಿದ್ದು ಬಲವಿಲ್ಲದಂತಾದ ಜೀವಗಳು
ಬದುಕದೆಯೆ (ಈ) 'ಬದುಕು' ಬೆಲೆಯು ಪಡೆದಿತ್ತು

ಕಂಡಿವನು ಮನದುಂಬಿ ತಿಂದು ಕ್ಷಣ ಸುಂದಾಗಿ
ಈಕ್ಷಿಸಿತು,—ಸತ್ಯ ತಾ ಅರಿವುಗೊಳುತಿತ್ತು;
ಆ ಬದುಕು, ಈ ಬದುಕು ಒಂದಾಗಿ ನಿಂದಿರಲು
ತಲೆಗೆದರಿದಾ ವ್ಯಕ್ತಿಯಂತೆ ಕಂಡಿತ್ತು!



ಬಂಧುಗಳಾಗಿ ನಿಂತು ಇವರು ಯದುಪತಿಯ ಜೀವನವಿಕಾಸಕ್ಕೆ ಕಾರಣರಾಗುತ್ತಾರೆ. ಇಲ್ಲಿಯ ಯದುಪತಿಯ ಎಳೆಯತನದ ಕತೆಯನ್ನು ಓದುತ್ತಿರುವಾಗ, ಜೈಮಿನಿಭಾರತದಲ್ಲಿಯ ಚಂದ್ರಹಾಸನ ಚಿತ್ರ ಅನೇಕರ ಕಣ್ಮುದುರು ಬಂದು ನಿಲ್ಲಬಹುದು.

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀಮಾನ್ ಆರ್. ಎ ಜಾಗಿರದಾರರು ಇದಕ್ಕೆ ಮುನ್ನುಡಿ ಬರೆದಿದ್ದು "'ಯದುಪತಿ' ಸಾಲಿಯವರ ಆತ್ಮಚರಿತ್ರವೆಂದು ಹೇಳಲು ಬಾರದಿದ್ದರೂ, ಅವರು ತಮಗೆ ಬಂದ ಅನುಭವಗಳನ್ನು 'ಯದುಪತಿ'ಯ ಮುಖಾಂತರವಾಗಿ ಪ್ರಕಟಿಸಿರುವರೆಂದು ಹೇಳಲು ಅಡ್ಡಿಯಿಲ್ಲ! ...." ಎಂದು ಹೇಳಿರುವರು.

ಯದುಪತಿ

(ಸ್ವತಂತ್ರ ಆದರ್ಶಬೋಧಕ ಕಾದಂಬರಿ)

ಬರೆದವರು ಶ್ರೀಮಾನ್ ಸಾಲಿ ರಾಮಚಂದ್ರರಾಯರು ; ಪ್ರಕಾಶಕರು ಕರ್ನಾಟಕ ಪ್ರಾಗತಿಕ ಶಿಕ್ಷಣ ಸಂಘ, ಮುಂಬೈ. ಬೆಲೆ ೩-೦-೦.

ಇದೊಂದು ಸಂಪೂರ್ಣ ಕಾದಂಬರಿಯಲ್ಲ. 'ಆತ್ಮವಿಕಾಸ' ಎಂದು ಹೆಸರಿಟ್ಟುಕೊಂಡ ಮೊದಲನೆಯ ಭಾಗ; ಇನ್ನೂ ಈ ಕಾದಂಬರಿ ಭಾಗ-ಭಾಗಗಳಲ್ಲಿ ಮುಂದುವರಿಯಲಿದೆ.

ತಂದೆ-ತಾಯಿಗಳನ್ನು ಕಳೆದುಕೊಂಡ ಹತ್ತು ವರ್ಷದ ಹುಡುಗ ಯದುಪತಿ, ಕಲಿಯುವ ಹಂಬಲದಿಂದ—ತನ್ನ ಹುಟ್ಟೂರು ದೇವನಹಳ್ಳಿಯನ್ನು ಬಿಟ್ಟು ರಾಮಪುರಕ್ಕೆ ಹೊರಟ ಮಾತಿನಿಂದ ಆರಂಭವಾಗಿ, ಅವನು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವವರೆಗಿನ ಕತೆ ಈ ಭಾಗದಲ್ಲಿ ಅಡಕವಾಗಿದೆ.

ಸುಸಂಸ್ಕೃತರಾದ ತಂದೆ-ತಾಯಿಗಳಿಂದ ಹುಟ್ಟಿದ ಯದುಪತಿ ಚೆಲುವ; ಬುದ್ಧಿವಂತ; ಕಲಾವಿದ ; ಆದರ್ಶವಾದಿ. ಎಂತಲೇ ಅವನು ಸಂಬಂಧ ಬರುವ ಎಲ್ಲರ ಮನವನ್ನೂ ಆಕರ್ಷಿಸುತ್ತ ಹೃದಯವನ್ನು ಪರಿವರ್ತನಗೊಳಿಸುತ್ತ ಹೋಗುವುದರಿಂದ, ಅನೇಕರಿಗೆ ಅವನು ಪವಾಡಪುರುಷನಂತೆ ಕಂಡರೆ ಅದು ಆಶ್ಚರ್ಯವಲ್ಲ.

'ಅಶಕ್ತನಾದರೆ ಆಪ್ತಜನರೆ ವೈರಿಗಳು' ಎನಿಸುವ ಈ ವ್ಯವಹಾರ ಯುಗದಲ್ಲಿ, ಹತಭಾಗಿಯಾಗಿದ್ದರೂ ಭಾಗ್ಯಶಾಲಿಯಾಗಿರುವ ಯದುಪತಿಗೆ, ಕಂಡ-ಕಂಡವರೆಲ್ಲ ಸಹಾನುಭೂತಿ-ಸಹಕಾರಗಳನ್ನು ಕೊಡುತ್ತ ಹೋಗುವುದು,—ಇಂದಿನ ವ್ಯವಹಾರದ ಅನುಭವವಿರುವವರಿಗೆ—ಅಸ್ವಾಭಾವಿಕವಾಗಿಯೂ ತೋರಬಹುದು.

ದಾರಿಯ ಗಿಡದಡಿಯಲ್ಲಿ ಮೊದಲನೆಯ ಸಲವೆ ಕಂಡ ಬೀರಣ್ಣ, ಅವನ ಹೆಂಡತಿ ಸಾವಕ್ಕ 'ಅಂತರಃ ಕೋಪಿ ಹೇತು'ವಿನಿಂದ ಯದುಪತಿಗೆ ಪ್ರತಿ ತಂದೆ-ತಾಯಿಗಳೇ ಆಗುವರು. ಮೊದಲನೆಯ ರಾತ್ರಿ ಬೇಸರುಗೊಂಡು ಬೈದು ಕಳುಹಿದ ಸೊನ್ನೆಗುಂದದ ಭಟ್ಟರು, ಮರುದಿನವೆ ಅದೇಕೋ ಯದುಪತಿಯ ತಾತಯ್ಯನ ಸ್ಥಾನದಲ್ಲಿಯೆ ನಿಲ್ಲುವರು. ಇವರಂತೆಯೆ ರಾಮಪುರದ ಸಂಗೀತಾಚಾರ್ಯರು ಮತ್ತು ಅಧ್ಯಾಪಕ ಪುರುಷೋತ್ತಮರಾಯರು, ಅನಿಮಿತ್ತ

ಶ್ರೀಮಾನ್ ಸಾಲಿಯವರು ಭಾವನಾಜೀವಿಗಳು; ಆದರ್ಶವಾದಿಗಳು. ತಮ್ಮ ಕೃತಿಗಳಲ್ಲಿ ಬುದ್ಧಿಗಮ್ಯವಾದ ವ್ಯವಹಾರಜೀವನಕ್ಕಿಂತ ಭಾವನಾರಮ್ಯವಾದ ಆದರ್ಶಜೀವನವನ್ನು ಚಿತ್ರಿಸುವ ಹಾರಯ್ಕೆಯುವರು. ಎಂತಲೇ ಅವರು ಕಾದಂಬರಿಯ ತಂತ್ರ-ಚಮತ್ಕೃತಿಗಾಗಿ ಹೆಚ್ಚು ಲಕ್ಷ್ಯಕೊಟ್ಟಂತಿಲ್ಲ. ಇಂದಿನ ವಾಚಕರು ಅಪೇಕ್ಷಿಸುತ್ತಿರುವ ವಾಸ್ತವಜೀವನ, ಮನಸ್ಸು- ಮನಸ್ಸುಗಳ ವೈಷಮ್ಯದ ಘರ್ಷಣೆ—ಇವುಗಳನ್ನು ತಲೆಯಲ್ಲಿ ಹಾಕಿಕೊಂಡೇ ಇಲ್ಲ. ರಾಮ, ಕೃಷ್ಣ, ಬುದ್ಧ, ಕ್ರಿಸ್ತ, ಗಾಂಧಿ ಮೊದಲಾದವರ ಆದರ್ಶಚರಿತ್ರ— ಗಂಭೀರ ವಿಚಾರಗಳನ್ನೇ ಮನದ ಮುಂದೆ ಇರಿಸಿಕೊಂಡು, ಅವರ ಕನಸುಗಳಂತೆಯೆ ಲೋಕವು ಆಗಬೇಕೆಂಬ ಉತ್ಕಟಹೃದಯದವರು; ಆದುದರಿಂದಲೆ ಇವರು ನಿರ್ಮಿಸಿದ ಪಾತ್ರಗಳೆಲ್ಲ ಪ್ರೀತಿ-ಕರುಣೆಗಳ ಮುದ್ದೆಗಳಾಗಿರುವುವು. ಕಾರಣಾಂತರದಿಂದ ತಮ್ಮಿಂದ ಒಂದು ತಪ್ಪು ಘಟಿಸಿದರೂ ಕೂಡಲೆ ಪಶ್ಚಾತ್ತಾಪದಿಂದ ಪರಿಶುದ್ಧವಾಗಿ ವರ್ತಿಸುವುವು. ಆದುದರಿಂದಲೆ ಈ ಕಾದಂಬರಿಯಲ್ಲಿಯ ಕಥಾಪ್ರಪಂಚ ಇನ್ನಾವುದೋ ಬೇರೆ ಲೋಕದಲ್ಲಿ ನಡೆದಂತೆ ಕಾಣುವುದು. ಆ ಲೋಕವನ್ನು ಶ್ರೀ. ಸಾಲಿಯವರ ಸದ್ಭಾವನೆಯ ಕನಸೇ ನಿರ್ಮಿಸಿರುವುದು.

ವಾಚಕರು ಈ ಕಾದಂಬರಿಯ ವಾಚನದಿಂದ ಪಡೆವ ಪ್ರಯೋಜನವೆಂದರೆ ರಸಾನಂದವಲ್ಲ; ಜೀವನಶಾಂತಿಯ ಪಾಠ. ಲೇಖಕರ ಪವಿತ್ರ ಉದ್ದೇಶದ ಕಡೆಗೆ ದೃಷ್ಟಿಯಿರಿಸಿ, ಸಹಾನುಭೂತಿಯಿಂದ ಇದನ್ನು ಓದಿದರೆ, ಹೃದಯ ಒಂದು ಬಗೆಯ ಒಳ್ಳೆಯ ಸಂಸ್ಕಾರವನ್ನು ಪಡೆಯದಿರದೆಂದು ನಮಗೆನಿಸುವುದು.

ಶ್ರೀ. ಸಾಲಿಯವರ ಭಾಷೆ ಶುದ್ಧವಾದುದು, ಇದರಲ್ಲಿಯ ಕಥಾನಕದಂತೆಯೆ ಸಿಕ್ಕು-ತೊಡಕುಗಳಿಲ್ಲದೆ ಸರಳವಾಗಿ ಹರಿದಿರುವುದು. ಆದರೆ ಪಾತ್ರೋಚಿತ ತಾರತಮ್ಯದ ಕಲ್ಪನೆಯಾಗುವುದಿಲ್ಲ. ಉತ್ತರ ಕರ್ನಾಟಕದಲ್ಲಿಯ ಇದುವರೆಗಿನ ರೂಢಿಯಂತೆ ಮುದ್ರಣದೋಷಗಳು ಈ ಪುಸ್ತಕದಲ್ಲಿಯೂ ಹೇರಳವಾಗಿ ಉಳಿದುಕೊಂಡಿವೆ. ಶ್ರೀ. ಸಾಲಿಯವರು 'ಯದುಪತಿ'ಯ ಕಥೆಯ ಮೂಲಕ ತಮ್ಮ

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ ಔಷಧಿ!

ಡಾ. ವಾಮನ ಗೋಪಾಳ ಇವರ

ಸಾರ್ಸಾ ಪರಿಲ್ಲಾ

ಆದರ್ಶಮಯ ಭಾವನೆಗಳನ್ನು ಹೊರಕ್ಕೆ ಹಾಕತೊಡಗಿದುದು ಸಂತೋಷದ ಸಂಗತಿ.

—ಬಿ. ಪಿ. ಎಸ್. ರಾವ್.

ಹಳ್ಳಿಯ ಆರೋಗ್ಯ

ಬರೆದವರು ಶ್ರೀಮಾನ್ ನಾರಾಯಣ ಭೀಮರಾವ್ ನಾಡಗೀರ, ನಿವೃತ್ತ ಶಿಕ್ಷಣಾಧಿಕಾರಿಗಳು, ಧಾರವಾಡ. ಬೆಲೆ ೦-೮-೦.

ನಮ್ಮ ಭಾರತವು ಹಳ್ಳಿಗರ ರಾಷ್ಟ್ರ. ಹಳ್ಳಿಗಳ ಆರೋಗ್ಯವೆಂದರೆ ರಾಷ್ಟ್ರದ ಆರೋಗ್ಯವೆಂದೇ ಹೇಳಬಹುದು ಹಿಂದಿನ ಕಾಲದ ಗ್ರಾಮರಾಜ್ಯ ಪದ್ಧತಿಯಲ್ಲಿ, ಹಳ್ಳಿಗರಿಗೆ ಸಮಾಜದ ಕಲ್ಪನೆಯಿದ್ದಿತು. ಸಮಾಜದ ಸುಖ-ಶಾಂತಿಗಳೇ ವ್ಯಕ್ತಿಯ ಸುಖ-ಶಾಂತಿಗೆ ಕಾರಣವೆಂದೂ ಸಂರಕ್ಷಕವೆಂದೂ ಸ್ಪಷ್ಟವಾದ ತಿಳುವಳಿಕೆಯಿದ್ದಿತು. ಅಂದು ಆರ್ಥಿಕ-ರಾಜಕೀಯ ದೃಷ್ಟಿಯಿಂದ ಹಳ್ಳಿಗಳು ಸ್ವತಂತ್ರವಾಗಿದ್ದುದರಿಂದ, ಪ್ರತಿಯೊಂದು ಹಳ್ಳಿಯೂ ತನ್ನ ಆರೋಗ್ಯ ವಿಚಾರವನ್ನು ತಾನೇ ಮಾಡಿಕೊಳ್ಳಬೇಕಾಗಿದ್ದಿತು. ಆ ಕಾಲದಲ್ಲಿಯ ಹಳ್ಳಿಗಳೆಂದರೆ ಆರೋಗ್ಯಕ್ಕೆ ಹೆಚ್ಚು ಅನುಕೂಲ ಸ್ಥಾನಗಳೆಂಬ ಕಲ್ಪನೆ ಸಪ್ರಮಾಣವಾಗಿ ದೃಢಮೂಲವಾಗಿ ನಿಂತಿತು.

ಇತ್ತೀಚಿನ ಭಾರತದ ರಾಜಕೀಯ ಚರಿತ್ರೆಯನ್ನು ನೋಡಿದರೆ, ಹಳ್ಳಿಯ ಜನರ ಎಲ್ಲ ಬಗೆಯ ಹಿತಸಂಬಂಧಗಳೂ ಸರಕಾರದ ಕೈಯಲ್ಲಿ ಸೇರಿದುದು ಒಡೆದು ಕಾಣುತ್ತಲಿದೆ. ಅವರ ಶಿಕ್ಷಣ, ಆರೋಗ್ಯ, ಔಷಧೋಪಚಾರ ಮೊದಲಾದ ಎಲ್ಲ ಹೊಣೆಯನ್ನೂ ಸರಕಾರ ತಾನೇ ಹೊತ್ತುಕೊಂಡಿದೆ. ಆದರೆ ಹೊತ್ತುಕೊಂಡ ಹೊಣೆಯನ್ನು ನಿರ್ವಹಿಸಲಿಕ್ಕೆ ಸರಕಾರದಿಂದ ಸಾಧ್ಯವಾಗದೆ ಇದೆ. ಸರಕಾರದ ಮೇಲೆ ಹೊರೆ ಹಾಕಿದ ಹಳ್ಳಿಗರು, ಇದರ ವಿಚಾರವನ್ನು ಯಾವ ಬಗೆಯಿಂದಲೂ ಮಾಡದೆ ಕಣ್ಣುಮುಚ್ಚಿ ಕುಳಿತುದರಿಂದ, ಇಂದು ಹಳ್ಳಿಗಳೆಂದರೆ ಅನಾರೋಗ್ಯದ ಕೇಂದ್ರಗಳಾಗಿ ಪರಿಣಮಿಸುತ್ತಲಿವೆ.

ಹಳ್ಳಿಗರ ಹಿತಸಾಧನೆಗೆಂದು ಸರಕಾರದವರು ಮುಂದೆ ಮಾ[ಡಿ]ರುವ ಸ್ಯಾನಿಟರಿ ಬೋರ್ಡು, ಗ್ರಾಮಪಂಚಾಯತಿ ಮೊದಲಾ[ದ] ಸ್ಥಾನಿಕ ಸಂಸ್ಥೆಗಳು. ಅಧಿಕಾರಲಾಲಸೆಯನ್ನೊಡ್ಡಿ—ಹಳ್ಳಿಗ[ಳ] ಹೊರಗಿನ ಸ್ವಚ್ಛತೆ ಆರೋಗ್ಯಗಳನ್ನು ಕಾಪಾಡುವುದು ಒತ್ತಟ್ಟಿ[ಗಿ]ರಲಿ— ಹಳ್ಳಿಗರ ಮನಸ್ಸಿನ ಸ್ವಚ್ಛತೆ-ಆರೋಗ್ಯಗಳನ್ನೂ ಹಾಳ[ು] ಮಾಡಿಬಿಟ್ಟಿವೆ. ಅಕ್ಷರಿಗಳೆನಿಸಿಕೊಳ್ಳುವವರ ಸ್ವಾರ್ಥ-ವಂಚಕತ[ೆ]ಗಳು, ನಿರಕ್ಷರಿಗಳ ಅಜ್ಞಾನ-ಉಪೇಕ್ಷೆಗಳು ಸೇರಿ, ಇಂದು ಹಳ್ಳಿಗಳನ್ನು ಅನಾರೋಗ್ಯ-ಅಶಾಂತಿಗಳ ಆಗರವನ್ನೇ ಮಾಡಿ[ವೆ]. ಹಳ್ಳಿಯ ಸುಧಾರಣೆಗಾಗಿ ಸರಕಾರದವರು ಏರ್ಪಡಿಸಿದ ಯಾ[ವ] ಫಲದಾಯಕ 'ಕಾರ್ಯಕ್ರಮವೂ ಅಲ್ಲಿ ಯಶಸ್ವಿಯಾಗಿ ನಡೆಯುತ್ತಿ[ಲ್ಲ]. ಆದುದರಿಂದಲೆ, ಅಣುಶಕ್ತಿಯನ್ನು ಕಂಡು ಹಿಡಿದ ಈ ವಿಜ್ಞಾ[ನ] ಯುಗದಲ್ಲಿಯೂ ಭಾರತದ ಹಳ್ಳಿಗಳ ಸ್ಥಿತಿಯು 'ಇದ್ದಂತಿರು ಸಿದ್ಧೇಶ್ವರಾ' ಎಂಬಂತಿದೆ.

ಶಾಲೆಯ ಮೇಲಧಿಕಾರಿಗಳಾಗಿ ಹಳ್ಳಿ-ಹಳ್ಳಿಗಳಲ್ಲಿ ಸುತ್ತಾ[ಡ]ಬೇಕಾಗಿ ಬಂದ, ಈ ತೆರೆದ ಕಣ್ಣಿನ ಲೇಖಕರು, ಹಳ್ಳಿಗಳಲ್ಲಿಂ[ದ] ಅನಾರೋಗ್ಯದ ಕಾರಣಗಳನ್ನು ಚೆನ್ನಾಗಿ ಕಂಡುಹಿಡಿದ[ು] ಎಲ್ಲರಿಗೂ ತಿಳಿಯುವಂತಹ ಸುಲಭ ಭಾಷೆಯಲ್ಲಿ ಈ ಪುಸ್ತಕವನ[್ನು] ಬರೆದಿದ್ದಾರೆ ಹಳ್ಳಿಗಳಲ್ಲಿ ಕೆಲಸಮಾಡಬೇಕೆನ್ನುವ ಸ್ವಯಂ[] ಸೇವಕರಿಗೂ ಪ್ರಾಮಾಣಿಕರಾದ ಸರಕಾರೀ ಕಾರ್ಯಕರ್ತರಿಗ[ೂ] ಈ ಪುಟ್ಟಪುಸ್ತಕವು ಒಂದು ಕೈಪಿಡಿಯಂತೆ ಪ್ರಯೋಜನಕಾ[ರಿ]ಯಾಗಬಲ್ಲದು

ಹಳ್ಳಿಗರಿಗೆ ಮಲ-ಮೂತ್ರ-ಸಗಣಿ-ಕಡ್ಡಿ ಮೊದಲಾದ ಕಸವನ[್ನು] ರಸವನ್ನಾಗಿ ಮಾರ್ಪಡಿಸಿಕೊಂಡು ತಮ್ಮ ಆರೋಗ್ಯ—ಸಂಪತ್ತ[ು]ಗಳನ್ನು ಹೆಚ್ಚಿಸಿಕೊಳ್ಳಲು ಹೇಗೆ ಸಾಧ್ಯವಿದೆಯೆಂಬುದನ್ನೂ, ಅದನ[್ನು] ಉಪೇಕ್ಷಿಸಿದುದರಿಂದ ಆ ರಸವಾಗಬಲ್ಲ ಕಸವೇ ವಿಷವಾ[ಗಿ] ಮಾರ್ಪಟ್ಟು ಹಳ್ಳಿಗರ ಆರೋಗ್ಯವನ್ನು ಹೇಗೆ ಕೆಡಿಸುವುದೆಂಬ[ು]ದನ್ನೂ, ಇಲ್ಲಿ ಲೇಖಕರು ತುಂಬ ಮನದಟ್ಟಾಗುವಂತೆ ಹೇಳಿದ್ದಾ[ರೆ]. ಅಲ್ಲದೆ ಕೊನೆಯಲ್ಲಿ ಮುಖ್ಯ ಮುಖ್ಯ ಸೋಂಕು ರೋಗಗಳ ಲಕ್ಷಣ[-]ಉಪಚಾರಗಳ ಬಗೆಗೂ, ಆಹಾರಘಟಕ ಮತ್ತು ಸಮತೋ[ಲ] ಆಹಾರಗಳ ಬಗೆಗೂ ತಿಳಿಯಾಗಿ ತಿಳಿಸಿದ್ದಾರೆ. ಓದು-ಬರೆಹಬ[ಲ್ಲ] ಪ್ರತಿಯೊಬ್ಬ ಹಳ್ಳಿಗನೂ ಈ ಪುಸ್ತಕವನ್ನೋದಿಕೊಂಡು, ಮನನ ಮಾಡಿ, ನೆರೆಹೊರೆಯವರಿಗೆ ಇದರಲ್ಲಿಯ ವಿಚಾರಗಳನ್ನು ತಿಳಿಸಿಹೇ[ಳಿ] ಅದರಂತೆ ಆಚರಿಸುತ್ತ ಹೋದರೆ, ಹಳ್ಳಿಗಳ ಆರೋಗ್ಯ ನಿಜವಾಗಿಯೂ ಸುಧಾರಿಸುವುದು. ಆರೋಗ್ಯವೇ ಎಲ್ಲ ಭಾಗ್ಯಗಳಿಗಿಂ[ತ] ಹೆಚ್ಚಿನದೆಂಬುದನ್ನು ನಮ್ಮ ಜನ ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು.

ಹಳ್ಳಿಗರ ವಿಷಯಕವಾಗಿ ನಿಜವಾದ ಕಳವಳವನ್ನು ಇರಿಸಿಕೊಂಡ[ು] ಬರೆದಿರುವ ಲೇಖಕರ ಈ ಕೃತಿ, ಹಳ್ಳಿಗರಿಗೆ ಪ್ರಯೋಜನಕಾರಿಯಾಗಲಿ—ಎಂದು ನಮ್ಮ ಹಾರಯಿಕೆ.

ಸಂಪಾದಕರು

ಸಾದರ ಸ್ವೀಕಾರ

★

೧೩. **ವಾಸನಾಭೂತಗಳು** (ಕಥಾ ಸಂಕಲನ) ಬರೆದವರು ಶ್ರೀಮಾನ್ ಶ್ರೀಕೃಷ್ಣ ಪಾಟೀಲ, ಬೆಳಗಾಂವಿ. ಸುವರ್ಣ ಭಾರತೀ ಗ್ರಂಥಮಾಲೆಯ [illegible]ನೆಯ ಕುಸುಮ. ಕ್ರೌ. ಅ. ೧೨೮ ಪುಟಗಳು. ಬೆಲೆ ೧-೮-೦.

೧೪. **ಭಾವಜೀವಿ** (ಒಂದು ನೀಳ್ಗತೆ) ಬರೆದವರು ಶ್ರೀ. ಯು. ನಾರಾಯಣ ಭಟ್ಟರು, 'ಪ್ರೇಮನಿವಾಸ' ಸಾಗರ. ಲೇಖಕರಿಗಾಗಿ ಪುತ್ತೂರಿನ ಹರ್ಷಮುದ್ರಣ ಪ್ರಕಟನಾಲಯದವರು ಪ್ರಕಟಿಸಿದ್ದಾರೆ. ಕ್ರೌ. ಅ. ೫೮ ಪುಟಗಳು. ಬೆಲೆ ೧-೦-೦.

೧೫. **ರೂಪದರ್ಶಿ** (ಕಾದಂಬರಿ) ಬರೆದವರು ಶ್ರೀಮಾನ್ ಕೆ. ವಿ. ಅಯ್ಯರ್, ಬೆಂಗಳೂರು. ಮೈಸೂರಿನ ಉಷಾ ಸಾಹಿತ್ಯಮಾಲೆಯ ೨೧-೨೨ನೆಯ ಗ್ರಂಥ. ಕ್ರೌ. ಅ. ೩೪೪ ಪುಟಗಳು. ಬೆಲೆ ೪-೦-೦.

೧೬. **ಸಂಗಾತಿ** (ಕಥಾಸಂಕಲನ). ಬರೆದವರು ಕುಮಾರಿ ಚಂದ್ರಿಕಾ ಅನಂತ ರಾವ್ ಕೊಪ್ಪರ, ಹೊನ್ನಾವರ ಹುಬ್ಬಳ್ಳಿಯ ಸಂಜೀವಿನಿ ಗ್ರಂಥಮಾಲೆಯ [illegible]ನೆಯ ವರ್ಷದ ೩ನೆಯ ಗ್ರಂಥ. ಕ್ರೌ. ಅ. ೧೧೬ ಪುಟಗಳು. ಬೆಲೆ ೧-೮-೦.

೧೭. **ಬೀಳದ ತೆರೆ** (ಸಾಮಾಜಿಕ ಕಾದಂಬರಿ) ಬರೆದವರು ಕುಂ. ಸೌ. ಶ್ರೀಮತಿ ಸುಶೀಲಾ ಜೋಶಿ, ಧಾರವಾಡ. ಮೇಲಿನ ಸಂಜೀವಿನಿ ಗ್ರಂಥಮಾಲೆಯ [illegible]ನೆಯ ವರ್ಷದ ೪ನೆಯ ಗ್ರಂಥ. ಕ್ರೌ. ಅ. ೧೭೬ ಪುಟಗಳು. ಬೆಲೆ ೩-೮-೦.

೧೮. **ಪುರಂದರದಾಸರ ಕೀರ್ತನೆ** ಸಂಕಲನ). ಪ್ರಕಾಶಕರು ಉಪಾಧ್ಯಾಯ ಪ್ರಕಟನಾಲಯ, ಚಿಕ್ಕಪೇಟೆ, ಬೆಂಗಳೂರು ನಗರ ಕ್ರೌ. ಅ. ೭೨ ಪುಟಗಳು. ಬೆಲೆ ೦-೧೦-೦.

೧೯. **ಚಿರವಿರಹಿ** (ಸಾಮಾಜಿಕ ಕಾದಂಬರಿ). ಬರೆದವರು ಬೆಳ್ಳೆ ರಾಮಚಂದ್ರರಾಯರು, ಪುತ್ತೂರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೨೬ನೆಯ ಕುಡಿ. ಕ್ರೌ. ಅ. ೩೪೬ ಪುಟಗಳು. ಬೆಲೆ ೪-೦-೦. ಉತ್ತಮ ಪ್ರತಿಗೆ ೫-೦-೦.



೨೦. **ಸರ್ವೋದಯ** (ಹೊಸ ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಸಿದ್ದವ್ವನಹಳ್ಳಿ ಕೃಷ್ಣಶರ್ಮರು. ಗಾಂಧೀ ಸಾಹಿತ್ಯ ಸಂಘ, ಬೆಂಗಳೂರು. ಕ್ರೌ. ಅ. ೬೪ ಪುಟಗಳು. ವಾರ್ಷಿಕ ಚಂದಾ ೫-೦-೦; ಬಿಡಿಸಂಚಿಕೆಗೆ ೦-೮-೦.

೨೧. **ಗೀತಾ** (ನಮ್ಮ ಪುಸ್ತಕ) ಮಾಸಪತ್ರಿಕೆಯ ೧೪ನೆಯ ವರ್ಷದ ೧-೨ ಸಂಚಿಕೆಗಳು. ಸಂಪಾದಕರು ಶ್ರೀಮಾನ್ ದೇವುಡು, ಗೀತಾವಿಜ್ಞಾನ ಮಂಡಲಿ, ಶಂಕರಪುರ, ಬೆಂಗಳೂರು. ಡೆ. ಅ. ೩೬ ಪುಟಗಳು. ವಾ. ಚಂ. ೫-೦-೦. ಬಿಡಿ ಸಂಚಿಕೆಗೆ ೦-೮-೦.

೨೨. **ಮಹಾಕವಿ ರಾಘವಾಂಕ** (ಕವಿ-ಕಾವ್ಯ ವಿಮರ್ಶೆ). ಬರೆದವರು ಶ್ರೀ. ಆರ್. ಸಿ. ಹಿರೇಮಠ ಎಂ. ಎ. ಕನ್ನಡ ಪ್ರಾಧ್ಯಾಪಕರು, ಬಸವೇಶ್ವರ ಕಾಲೇಜ್, ಬಾಗಲಕೋಟೆ. ಅದೇ ಕಾಲೇಜಿನ ಸಾಹಿತ್ಯಮಾಲೆಯ ೨ನೆಯ ಗ್ರಂಥ. ಕ್ರೌ. ಅ. ೭೮೪ ಪುಟಗಳು. ಬೆಲೆ ೨-೮-೦.

೨೩. **ಮಾಯಾಮಂದಿರ** (ಕವನ ಸಂಕಲನ) ಬರೆದವರು ಶ್ರೀಮಾನ್ ಭುಜೇಂದ್ರ ಮಹಿಷವಾಡಿಗಿ. ಪ್ರಕಾಶಕರು 'ಶ್ರೀ ಶಾಂತಿ ಸೇವಾ ಸದನ,' ಸೇಡಬಾಳ, ಜಿಲ್ಲಾ ಬೆಳಗಾಂವಿ. ಕ್ರೌ. ಅ. ೭೬ ಪುಟಗಳು. ಬೆಲೆ ಸಾದಾ ಪ್ರತಿಗೆ ೧-೮-೦. ಉತ್ತಮ ಪ್ರತಿಗೆ ೩-೦-೦.

೨೪ **ಬಾಳಗೀತ** (ಒಂದು ನೀಳ್ಗತೆ) ಬರೆದವರು ಶ್ರೀ. ಪ್ರಹ್ಲಾದ ಅವರು. ಪ್ರಕಾಶಕರು ಮೆ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ; ಬೆಂಗಳೂರು ನಗರ. ಕ್ರೌ. ಅ. ೪೪ ಪುಟಗಳು. ಬೆಲೆ ೦-೮-೦.

೨೫. **ವೀರವಿಲಸಿತ** (ಖಂಡ ಕಾವ್ಯ). ಬರೆದವರು ಶ್ರೀ. ತೆಕ್ಕುಂಜೆ ಗೋಪಾಲಕೃಷ್ಣಭಟ್ಟರು. ಪ್ರಕಾಶಕರು ಉದಯ ಪ್ರಿಂಟರಿ ಎಂಡ್ ಪಬ್ಲಿಕೇಶನ್ಸ್

ಲಿಮಿಟೆಡ್, ಮಂಗಳೂರು. ಕ್ರೌ. ಅ. ೧೨ ಪುಟಗಳು. ಬೆಲೆ ೦-೬-೦.

೨೬. **ಹುಚ್ಚು ಬೆಳದಿಂಗಳಿನ ಹೂಬಾಣಗಳು** (ಸಾಮಾಜಿಕ ವ್ಯಂಗ್ಯ ಚಿತ್ರಗಳ ಸಚಿತ್ರ ಸಂಗ್ರಹ). ಬರೆದವರು ಶ್ರೀ. ಪ. ರಮಾನಂದರಾಯರು. ಪ್ರಕಾಶಕರು ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲಾ, ಧಾರವಾಡ. ಕ್ರೌ. ಅ. ೧೭೮ ಪುಟಗಳು. ಬೆಲೆ ೨-೮-೦.

೨೭. **ಚುರಿಹಿಂಡು** (ಅನುವಾದಿತ ವಿಡಂಬನಾತ್ಮಕ ಸಮಾಜಚಿತ್ರಸಂಕಲನದ ೨ನೆಯ ಆವೃತ್ತಿ). ಮೂಲ ಬಂಗಾಲಿ ಲೇಖಕರು 'ಪರಶುರಾಮ'. ಅನುವಾದಕರು 'ಜಲಧರ'. ಪ್ರಕಾಶಕರು ಶ್ರೀ. ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲಾ, ಧಾರವಾಡ. ಕ್ರೌ. ಅ. ೧೭೮ ಪುಟಗಳು. ಬೆಲೆ ೨-೮-೦.

೨೮. **ಆಹಾರ ವಿಜ್ಞಾನಸಾರ** (ವೈಜ್ಞಾನಿಕ ಪುಸ್ತಕ). ಬರೆದವರು ಶ್ರೀಯುತ ಎನ್. ಬಿ. ನಾಡಗೀರ ಬಿ. ಎ. (ಆನರ್ಸ್). ಧಾರವಾಡದ ಮಿಂಚಿನಬಳ್ಳಿಯ ೧ನೆಯ ವರ್ಷದ ೩ನೆಯ ಕುಡಿ. ಕ್ರೌ. ಅ ೧೧೦ ಪುಟಗಳು. ಬೆಲೆ ೧-೪-೦.

೨೯. **ಹೂ ಅರಳಿತು** (ಅನುವಾದಿತ ಲಘುಕಥಾ ಸಂಕಲನ). ಬೇರೆ ಬೇರೆ ತೆಲುಗು ಕತೆಗಾರರ ಒಂದೊಂದು ಕತೆಗಳನ್ನು, ಶ್ರೀ. ಪಿ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ. ಯವರು ಅನುವಾದಿಸಿದ್ದಾರೆ. ಹುಬ್ಬಳ್ಳಿಯ ಆನಂದ ಗ್ರಂಥಮಾಲೆಯ ೧ನೆಯ ವರ್ಷದ ೨ನೆಯ ಕುಸುಮ. ಕ್ರೌ. ಅ. ೧೫೪ ಪುಟಗಳು. ಬೆಲೆ ೨-೪-೦.

೩೦. **ಹಾವಾಡಿಗನ ಮಗಳು** (ಕಥಾಸಂಕಲನ). ಬರೆದವರು ಶ್ರೀಯುತ ಶಿಗ್ಗಾಂವಿ ವೀರೇಶ್ವರರು. ಶಿಗ್ಗಾಂವಿಯ ವಿಕಾಸ ಸಾಹಿತ್ಯಮಾಲೆಯ ಪುಷ್ಪ ೨. ಕ್ರೌ. ಅ. ೯೦ ಪುಟಗಳು. ಬೆಲೆ ೧-೪-೦.

೩೧. **ಕಣ್ಮಿಳಕು** (ಕವನಸಂಕಲನ) ಬರೆದವರು ಶ್ರೀ. ಉಡುಪಿ ಭೀಮರಾವ್ ಬೀಡಿ, ಧಾರವಾಡ. ಲೇಖಕರೇ ಪ್ರಕಾಶಕರು. ಕ್ರೌ. ಅ. ೩೬ ಪುಟಗಳು. ಬೆಲೆ ೦-೮-೦.

೩೨. **ತಾವರೆ** (ಉಸ್ಮಾನಿಯಾ ವಿ. ವಿ. ನಿಲಯದ ಕನ್ನಡ ಪತ್ರಿಕೆ). ಸಂಪಾದಕರು ಶ್ರೀಯುತ ದತ್ತಾತ್ರಯ ದೇಸಾಯಿ ಬಿ. ಎ. (ದ್ವಿತೀಯ). ಸಹಸಂಪಾದಕರು ರಾಜಾ ಕಿಲಚಿನಾಯಕ ಬಿ. ಎ., ಎಲ್ ಎಲ್. ಬಿ. (ಪ್ರಥಮ) ರೊಯಲ್ ಅ. ೭೨ ಪುಟಗಳು. ಸಂಚಿಕೆಯ ಬೆಲೆ ವಿದ್ಯಾರ್ಥಿಗಳಿಗೆ ೦-೮-೦. ಇತರರಿಗೆ ೧-೦-೦.

೩೩. **ಪ್ರೇಮತರಂಗ** (ಕಥಾಸಂಕಲನ) ಬರೆದವರು ಶ್ರೀ. 'ವರಗಿರಿ'. ಅಗಡಿಯ ಶ್ರೀ ಶೇಷಾಚಲ ಸಾಹಿತ್ಯಸೇವಾ ಮಾಲೆಯ ೨ನೆಯ ಕುಸುಮ. ಕ್ರೌ. ಅ. ೯೬ ಪುಟಗಳು. ಬೆಲೆ ೧-೪-೦.

೩೪. **ಶೋಚನೀಯ ನಿಧನ** (ಕಥಾಸಂಕಲನ). ಬರೆದವರು ಶ್ರೀ. ರಾ. ವಾ. ಶಿರೋಳ, ಗವಳೀಗಲ್ಲಿ ಹುಬ್ಬಳ್ಳಿ. ಬಾದಾಮಿಯ ಶಾಂತಿ ಸಾಹಿತ್ಯಮಾಲೆಯ ೨ನೆಯ ಪುಷ್ಪ. ಕ್ರೌ. ಅ. ೭೪ ಪುಟಗಳು. ಬೆಲೆ ೧-೦-೦.

೩೫. **ಕರುಣಕಥ** (ಕಥಾಸಂ ಲನ). ಬರೆದವರು ಶ್ರೀ. ಅನಂತ ಮ ಪತಿ. ಹೈದರಾಬಾದಿನ ಪದ್ಮಾ ಪ್ರಕಟ ಲಯದ ೩ನೆಯ ಗ್ರಂಥ. ಕ್ರೌ. ೭೨ ಪುಟಗಳು. ಬೆಲೆ ೧-೦-೦.

೩೬. **ಚಂದ್ರ-ತಾರೆ** (ಕಥಾಸಂ ಲನ). ಬರೆದವರು ಶ್ರೀ. ವರದ ಹುಯಿಲಿಗೋಳ ಎಂ. ಎ., ಎಸ್. ಟಿ. ಬಿ. ಟಿ. ಅವರು. ಧಾರವಾಡದ ಪ್ರತಿ ಗ್ರಂಥಮಾಲೆಯ ೭ನೆಯ ವರ್ಷದ ೩ನೆ ಕಿರಣ. ಕ್ರೌ. ಅ. ೧೧೨ ಪುಟಗ ಬೆಲೆ ೧-೪-೦.

೩೭. **ದೇವರ ಸ್ವಾಮ್ರಾ** (ಸ್ವತಂತ್ರ ಸಾಮಾಜಿಕ ಕಾದಂಬರಿ ಬರೆದವರು ಶ್ರೀಯುತ ಕೆ. ಶ್ರೀಕ ಪುತ್ತೂರು. ಮೇಲಿನ ಪ್ರತಿಭಾ ಗ್ರಂ ಮಾಲೆಯ ೭ನೆಯ ವರ್ಷದ ೪ನೆ ಕಿರಣ. ಕ್ರೌ. ಅ. ೧೫೩ ಪುಟ. ೨-೦-೦.

೩೮. **ಯಮದೂತ** (ಸ್ವತಂ ಸಾಮಾಜಿಕ ಕಾದಂಬರಿ). ಬರೆದ ಶ್ರೀ. ರಾ. ಮೋ. ವಿಶ್ವಾಮಿತ್ರ. ಪ್ರತಿ ಗ್ರಂಥಮಾಲೆಯ ೭ನೆಯ ವರ್ಷ ೫ನೆಯ ಕಿರಣವಿದು. ಕ್ರೌ. ಅ. ೧ ಪುಟಗಳು ಬೆಲೆ ೧-೪-೦.

೩೯. **ತರಲಾ** (ಅನುವಾ ಸಾಮಾಜಿಕ ಕಾದಂಬರಿ). ಮ ಹಿಂದೀ ಲೇಖಕರು ಶ್ರೀ ಸ್ವಾಮಿ ಭಕ್ತರು; ಸತ್ಯಧರ್ಮಸ್ಥಾಪಕರು, ಪ್ರತಿಭಾ ಗ್ರಂಥಮಾಲೆಯ ೭ನೆಯ ವ ೬ನೆಯ ಕಿರಣವಿದು. ಕ್ರೌ. ಅ. ಪುಟಗಳು. ಬೆಲೆ ೧-೦-೦.

೪೦. **ತಾಯಿಯ ಕರು** (ಸ್ವತಂತ್ರ ಸಾಮಾಜಿಕ ಕಾದಂಬ ಬರೆದವರು ಶ್ರೀಮಾನ್ ಅ. ನ. ಕೃ ರಾಯರು. ಪ್ರಕಾಶಕರು ಅ ಬ್ರದರ್ಸ್, ಬೆಂಗಳೂರು. ಕ್ರೌ. ೩೬೦ ಪುಟಗಳು. ಬೆಲೆ ೪-೧೨-೦.

(೪೮ನೆಯ ಪುಟದಿಂದ ಮುಂದುವರಿದುದು)

ಗಾಯತರಲ್ಲಿ ಜಗಳಹಚ್ಚುವದು. (೩) ಲಿಂಗಾಯತ ಹ್ಮಣರಲ್ಲಿ ಜಗಳ ಹಚ್ಚುವದು (೪) ಭಾಷೆಭಾಷೆಗಳಲ್ಲಿ ಜಗಳ ಚ್ಚುವದು (೫) ಪ್ರಾಂತ ಪ್ರಾಂತಗಳಲ್ಲಿ; ಜಗಳಹಚ್ಚುವದು. ಇದನ್ನೂ ಮಾಡುವಹಾಗಿಲ್ಲ—ಎಂದು ಸಾರಿರಿ.'

ಅದಕ್ಕೆ ನೂತನ ಸಂಪಾದಕರೆಂದರು:—'ಛೆ, ಹಾಗಿದ್ದರೆ ಪತ್ರಿಕೆ ನ್ನೇಕೆ ಹೊರಡಿಸಬೇಕು?'

* * *

ಜಗತ್ಪ್ರಸಿದ್ಧ ವೈಜ್ಞಾನಿಕರಾದ ಡಾ. ಐನ್‌ಸ್ಟನ್ನನ ಹೆಂಡತಿಗೆ ಕೇಳಲಾಯಿತು—'ನಿಮಗೆ ಐನ್‌ಸ್ಟನ್ನರ Theory of Relativity—ಅಂದರೆ ಏನು ಎಂಬುದು ಗೊತ್ತಿದೆಯೆ?'

ಕೆ ಉತ್ತರಿಸಿದಳು:—'ಅದು ಗೊತ್ತಿರದಿದ್ದರೇನಾಯಿತು! ನಸ್ಟನ್ನರದು ಗೊತ್ತಿದೆಯಲ್ಲ!'

* * *

ಜೀವನಪಥದ ಜ್ಯೋತಿಗಳು

ಎಂತಹ ಆಧ್ಯಾತ್ಮಿಕ ತತ್ತ್ವಜ್ಞಾನವೇ ಇರಲಿ; ಅದು ಭೌತಿಕ ಬಲದ ಸಂರಕ್ಷಣೆಯನ್ನು ಪಡೆಯತೊಡಗಿತೆಂದರೆ, ಅದರ ಅವನತಿಯು ಕಟ್ಟಿಟ್ಟ ಮಾತು.

* * *

ಒಂದು ದಿವ್ಯವ್ಯಕ್ತಿ ಮೂಡಿ, ತನ್ನ ತಾತ್ತ್ವಿಕ ಜೀವನ ಪ್ರಭಾವ-ದಿಂದ ಸಮಕಾಲೀನ ಸಮಾಜವನ್ನು ಬೆಳಗಿಸಬಲ್ಲುದೇ ಹೊರತು, ಸಮಾಜ ತನ್ನ ಕೃತಿಯಿಂದ ತಾನೇ ಬೆಳಗಲಾರದು.

* * *

ತಾನು ಸುಖ-ಶಾಂತಿಗಳಿಂದ ಬದುಕಬೇಕೆಂದು ಬಯಸುವವನು, ಬೇರೆಯವರೂ ಸುಖ-ಶಾಂತಿಗಳಿಂದ ಬದುಕಿ ಬಾಳುವಂತೆ ಕಾರ್ಯ ಮಾಡುತ್ತಿರಬೇಕು.

* * *

ಇನ್ನೊಬ್ಬರ ಐಶ್ವರ್ಯವನ್ನು ತಾನು ಬಯಸಬಾರದು; ತನ್ನ-ದನ್ನು ಸಾಧ್ಯವಿರುವಾಗಲೆಲ್ಲ ಇನ್ನೊಬ್ಬರಿಗೆ ಕೊಡದಿರಬಾರದು.

* * *

ಹೊಸ ಕನ್ನಡ ಧ್ವನಿಮುದ್ರಿಕೆಗಳು



ಕುಮಾರಿ ಕೃಷ್ಣಾ ಹಾನಗಲ್

N 25943 — ತಾಯಿ ಹಿಂದುಭೂಮಿ — ಶ್ರೀ. ಎಸ್. ಕೆ. ಕುಲಕರ್ಣಿ, ಎಮ್.ಎ. ಕೃತ
ತಾಯಿ ಮಂಗಲದಾಯಿ — ,,

ಶ್ರೀ. ಬಸವರಾಜ ರಾಜಗುರು

N 25944 — ಜಗವ ಸುತ್ತಿಪುದು........ ಕಾಫಿ, ಶ್ರೀ ಬಸವೇಶ್ವರ ವಚನ.
ಎನ್ನ ಕಾಮದ ಕತ್ತಲೆಯು.... ಭೈರವಿ ... ಅಕ್ಕಮಹಾದೇವಿ.

ಕಮಲಾಬಾಯಿ ವಿಜಾಪುರಕರ.

N 25945 — ವೇಣುಲೀಲಾ ಗೋಪಿವೃಂದಾ........ ಎಚ್. ಬಿ. ಕೊಣ್ಣೂರ ಕೃತ.
ಪಾವನಾ ನೃಕಾಯ ಕಾಣೊ........ ,,

ಬೇರೆ ಕನ್ನಡ ಮುದ್ರಿಕೆಗಳಿಗೆ ನಮ್ಮ ಪ್ರಕಟನೆಯನ್ನು ನೋಡಿರಿ.

"ಹಿಜ ಮಾಸ್ಟರ್ಸ ವ್ಹಾಯ್ಸ"

ಕಲಕತ್ತಾ ಮುಂಬಯಿ ಮದ್ರಾಸ ದಿಲ್ಲಿ

HIS MASTERS VOICE



ಸೆಂಟ್ರಿಫ್ಯೂಗಲ್ ಪಂಪುಗಳು

ಯು. ಪಿ. ಟೈಪ್ ಪಂಪ್

ಒಕ್ಕಲತನ ಮತ್ತು ಕಾರಖಾನೆಯ ಉದ್ಯೋಗಗಳಿಗೆ ಅತ್ಯಂತ ಉಪಯುಕ್ತವಾದುವು. ತಾಳಿಕೆ, ಭದ್ರವಾದ ರಚನೆ ಮತ್ತು ಆಕೃತಿ ಇವುಗಳ ಮೂಲಕ ದಿನದಿನಕ್ಕೂ ಬೆಳೆಯುತ್ತಿರುವ ಲೋಕಪ್ರಿಯತೆಯನ್ನು ಪಡೆಯುತ್ತಲಿದೆ ಈ ಪಂಪು.

ಬಿ. ಎಸ್. ಎ. ಪಂಪು

ಅತ್ಯಂತ ಆಧುನಿಕ ಹಾಗು ಯಾಂತ್ರಿಕ ರಚನೆಯ ಮೇರೆಗೆ ತಯಾರಿಸಲ್ಪಟ್ಟಿರುವದು. ಗಿರಾಕಿಗೆ ಕಳಿಸುವ ಮುನ್ನ ಪ್ರತಿಯೊಂದು ಪಂಪನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದೆ. ಈ ಪಂಪುಗಳು ಔದ್ಯೋಗಿಕ ಹಾಗು ಒಕ್ಕಲತನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತವೆ.



ಕಿರ್ಲೋಸ್ಕರ ಬಂಧುಗಳು ಲಿ. ಕಿರ್ಲೋಸ್ಕರವಾಡಿ

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar—2577-50.

ಜಯಂತಿ

JAYANTI

೮ ಆಣೆ
ಆಗಸ್ಟ
೧೯೫೦

ಸಂಪುಟ ೧೩ | ೧ನೆಯ ಆಗಸ್ಟ ೧೯೫೦ | ಸಂಚಿಕೆ

ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕಪ್ರಮುಖರಾದ

ದಿವಂಗತ ರಾಮಚಂದ್ರ ಹಣಮಂತ ದೇಶಪಾಂಡೆ ಎಂ. ಎ. ಅವರು

ಕೆಲವು ಲೇಖಕರು :

ಶ್ರೀ. ದ. ರಾ. ಬೇಂದ್ರೆ ಎಂ. ಎ. ಶ್ರೀ. ವಿ. ಜಿ. ಉಪಾಧ್ಯಾಯ ಎಂ. ಎಸ್ಸಿ.
ಶ್ರೀ. ಮೋಹನ ಜಾಲೀಹಾಳ ಬಿ. ಕಾಮ್. ಶ್ರೀ. ಮಿರ್ಜಿ ಅಣ್ಣಾರಾಯರು
ಶ್ರೀ. ಡಿ. ಎಸ್. ಕರ್ಕಿ ಎಂ. ಎ., ಪಿಎಚ್. ಡಿ.

ಜಯಂತಿ

JAYANTI

ಆಗಸ್ಟ್ ೧೯೫೦

ವಾರ್ಷಿಕ ವರ್ಗಣಿ . . ೫—೦—೦
ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ
ವ್ಯವಸ್ಥಾಪಕ ಸಂಪಾದಕರು— ಶ್ರೀ. ಎಲ್.ಜೆ. ಬೇಂದ್ರೆ
ಪ್ರಕಾಶಕರು— ಶ್ರೀ ಎಮ್. ವಿ. ಮುಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೫೦	ಒಂದು ಸಲ
½	,,	,,	೨೭	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—o—

Rates for Advertising in Jayanti

Full Page	Rs.	50	Single	Ins.
Half ,,	,,	27	,,	
Quarter ,,	,,	15	,,	
1/8 ,,	,,	8	,,	

Concession rates for long term Contracts. For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಈ ಸಂಚಿಕೆಯಲ್ಲಿ:

★

ಶ್ರಾವಣ ಸವಿಾರ (ಕವನ)
'ಆನಂದಕಂದ' ....
ಕರ್ನಾಟಕ ವಿದ್ಯಾವರ್ಧಕ ಸಂಘ (ಸಂಪಾದಕೀಯ),
ಸಂಪಾದಕರು ....
ಸಾದರ ಸ್ವೀಕಾರ ....
ವಿರೋಧ (ಅನುವಾದಿತ ಕಥೆ)
ಶ್ರೀ. ಬಿಂದುಮಾಧವ ಕುಲಕರ್ಣಿ, ಬಾದಾಮಿ ....
ಶಬ್ದಸ್ಮೃತಿಗಳು (ಸಾಹಿತ್ಯಕ್ರೀಡೆ)
ಶ್ರೀರಾಮ ಪಾಟೀಲ ಬಿ. ಎ., ಬಿ. ಟಿ. ಧಾರವಾಡ ....
ಅವನಾವ ಗಾರುಡಿಗ? (ಕವನ)
ಶ್ರೀ. ಡಿ. ಎಸ್. ಕರ್ಕಿ ಎಂ. ಎ., ಪಿಎಚ್. ಡಿ. ಬೆಳಗಾಂವಿ
ಭಕ್ತಿ (ಕವನ)
ಶ್ರೀ. ಭುಜೇಂದ್ರ ಮಹಿಷವಾಡಿಗಿ, ಸಾಂಗಲಿ ....
ನಾನು ಕಂಡ ನಾಡು (ಪ್ರವಾಸಪ್ರಬಂಧ)
ಮಿರ್ಜಿ ಅಣ್ಣಾರಾಯರು, ಉಗಾರ ....
ಮೆದುವುಗಳು (ವೈಜ್ಞಾನಿಕ)
ಶ್ರೀ ಉಪಾಧ್ಯಾಯ ವೆಂಕೋಬಾಚಾರ್ಯರು ಎಂ. ಎಸ್.
ಪ್ರೊ. ರಾವ್ (ಸಣ್ಣಕತೆ)
ಶ್ರೀ. ಕೃಷ್ಣಮೂರ್ತಿ ಕಿತ್ತೂರ, ಬೆಳಗಾಂವಿ ....
ಉಧ್ವಸ್ತಮಧ್ಯಮವರ್ಗ (ಆರ್ಥಿಕ ವಿಚಾರ)
ಶ್ರೀ. ಜಾಲೀಹಾಳ ಮೋಹನರಾಯರು ಬಿ. ಕಾಮ್.
ಸೋಮಾರಿತನವೆಂಬ ಸದ್ಗುಣ (ಚಾಟುಭಾಷಣ)
ಶ್ರೀ. ದ ರಾ. ಬೇಂದ್ರೆ ಎಂ. ಎ. ಸೊಲ್ಲಾಪುರ ....
ಕುಮಾರಿ ಪದ್ಮಿನಿ ಅಯ್ಯಂಗಾರ್ ಎಂ. ಎ. (ಪರಿಚಯ)
'ವಿಹಂಗಮ' ....
ಕಸೂತಿ ಕಲಿಯಬೇಕೇ? (ಕಲಾವಿಚಾರ)
ಕು. ಸರೋಜಿನಿ ಮಹಿಷಿ ಎಂ. ಎ. ಧಾರವಾಡ ....
ಕನ್ನಡ ಮಹಿಳೆಯರ ಮುನ್ನಡೆ
ಸಂಪಾದಕರು ... .
ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಅನಂತ ಬುಲಿF ಸೀ. ಬಿ. ಎ. ಬಾಗಲಕೋಟೆ

ವಿ. ಸೂ: ಸ್ಥಳಸಂಕೋಚದ ಮೂಲಕ 'ಪುಸ್ತಕವಿಮರ್ಶೆ', 'ನೈವೇದ್ಯ' ಗಳನ್ನು ನಿಲ್ಲಿಸಬೇಕಾಯಿತು. —ಸಂ.

ವರ್ಷ ೧೩ ಸಂಚಿಕೆ ೩

ಜಯಂತಿ

ಆಗಸ್ಟ್ ೧೯೫೦

ಶ್ರಾವಣ ಸಮೀರ

‘ ಆನಂದಕಂದ ’

★

ಬಾ ಶ್ರಾವಣ ಶುಭಸಮೀರ....ಬಾರಾ !

೧

ಬಾರೈ ಶ್ರಾವಣ ಸಮೀರ,
ಕಾಲನೊಲುಮೆಯೋಲೆಕಾರ,
ಸುಖನಾಟಕ ಸೂತ್ರಧಾರ,
ಋಷಿಯು ಬೇಟಗಾರಾ !
ಬಾ, ಶ್ರಾವಣ ಶುಭಸಮೀರ ಬಾರಾ !

೨

ಪಡುಗಡಲಿಗೆ ತೆರೆಯು ಹೇರಿ,
ಜಡಿಯು ಮುಗಿಲ ಕೆಳೆಯು ಸೇರಿ,
ನಿಡುಮಲೆಗಳ ತಲೆಯನೇರಿ,
ಕಣಿವೆಯಿಳಿದು ಬಾರಾ !
ಬಾ ಶ್ರಾವಣ ಶುಭಸಮೀರ ಬಾರಾ !

೩

ತೆಂಗು-ಕಂಗು ಬಾಳೆ-ಹಲಸು
ಹೊಂಗೇದಗೆ ಬನದ ಬೆಳಸು—
ನಿನ್ನಿಂದಲೆ ಎಲ್ಲ ಹುಲುಸು
ಸಿರಿಯ ಸಂಚುಗಾರಾ !
ಬಾ, ಶ್ರಾವಣ ಶುಭಸಮೀರ ಬಾರಾ !

೪

ಬನದ ತರುವನೊಲೆದಾಡಿಸಿ,
ಕೊನೆವ ಲತೆಯ ನಲಿದಾಡಿಸಿ,
ಬೆಳೆಸಿಗು ಹಸಿರನು ಕೂಡಿಸಿ—
ಚತುರ ಶಿಲ್ಪ ಧೀರಾ !
ಬಾ, ಶ್ರಾವಣ ಶುಭಸಮೀರ ಬಾರಾ !

೫

ಬಾಯ್ದೆರೆದಿದೆ ಬಯಲುನೆಲ —
ಕಾಯ್ದಿದೆ ಇದೊ ಬೀಜಕುಲ —
ಬಂದು ಸುರಿಸು ಜೀವಜಲ
ಮಳೆಯ ಮೋಡಿಕಾರಾ !
ಬಾ, ಶ್ರಾವಣ ಶುಭಸಮೀರ ಬಾರಾ !

೬

ಬೆಳುವಲಿಗರ ಬರಿಯ ಮನೆ
ನೀನೊಲಿದರೆ ಸಿರಿಯ ತನೆ
ಉಲಿದು ನಲಿದು ‘ ಘುಮುಘುಮು ’ ಎನೆ
ಸುಳಿ ಸುಳಿ ಸುಖಸಾರಾ !
ಬಾ, ಶ್ರಾವಣ ಶುಭಸಮೀರ ಬಾರಾ !

೭

ನಿನ್ನ ಗತಿಯು ಗೆಜ್ಜೆನಾದ
ನಲ್ಲ-ನಲ್ಲರೆದೆಗೆ ಮೋದ
ಶೃಂಗಾರದ ಸುಖೋನ್ಮಾದ
ಸೃಷ್ಟಿಯ ಸಹಕಾರಾ !
ಬಾ, ಶ್ರಾವಣ ಶುಭಸಮೀರ ಬಾರಾ !

೮

ಬಾ ಶ್ರಾವಣ ಶುಭಸಮೀರ
ಕಾಲನೊಲುಮೆಯೋಲೆಕಾರ
ಸುಖನಾಟಕ ಸೂತ್ರಧಾರ
ಋಷಿಯು ಬೇಟಗಾರಾ !
ಬಾ, ಶ್ರಾವಣ ಶುಭಸಮೀರ ಬಾರಾ !

ಕರ್ನಾಟಕದ ಹಿರಿಯ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘ

ಕಳೆದ ಜುಲೈ ೨೦ನೆಯ ತಾರೀಖಿಗೆ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ತನ್ನ ೬೦ನೆಯ ವರ್ಷವನ್ನು ಮುಗಿಸಿ ೬೧ನೆಯ ವರ್ಷದಲ್ಲಿ ಕಾಲಿರಿಸಿತು. ಕ. ವಿ. ವ. ಸಂಘಕ್ಕೆ ಐವತ್ತು ವರ್ಷಗಳು ಮುಗಿದಾಗ, ಅಖಿಲ ಕರ್ನಾಟಕದ ಜನತೆಯೂ ಸೇರಿ, ಅದರ ಸುವರ್ಣಮಹೋತ್ಸವವನ್ನು ವಿಜೃಂಭಣೆಯಿಂದ ಜರುಗಿಸಿದ್ದಿತು. ಇಂದೂ ಹಿಂದಿನಂತೆಯೆ ಈ ಹಿರಿಯ ಸಂಸ್ಥೆಯ ರತ್ನಮಹೋತ್ಸವ, ಅಖಿಲಕರ್ನಾಟಕದ ಜನತೆಯಿಂದ ನಡೆಯಬೇಕಾಗಿದ್ದಿತು. ಆದರೆ ಸದ್ಯದ ಆರ್ಥಿಕ ಮುಗ್ಗಟ್ಟಿನಿಂದುಂಟಾದ ನಿರಾಶೆ-ಔದಾಸೀನ್ಯಗಳ ಕಾರಣದಿಂದೇನೋ, ನಮ್ಮ ಜನರ ಮನಸ್ಸು ಸಂಘದ ರತ್ನಮಹೋತ್ಸವದತ್ತ ಹತ್ತಿದಂತೆ ಕಾಣಲಿಲ್ಲ. ಅದರ ೬೧ನೆಯ ಹುಟ್ಟಿದ ಹಬ್ಬ ನಡೆಯಿತಾದರೂ ಅದು ರತ್ನ-ಮಹೋತ್ಸವದ ವೈಶಿಷ್ಟ್ಯದಿಂದ ಕೂಡಿರದೆ, ಪ್ರತಿ ವರ್ಷವೂ ನಡೆಯುತ್ತಿರುವ ಜನ್ಮದಿನೋತ್ಸವದಂತೆ ಸಾಮಾನ್ಯ ರೀತಿಯಲ್ಲಿ ನಡೆಯಿತು.

ಸಂಘ ಜನ್ಮವೆತ್ತಿದುದು ಎಂತಹ ವಿಷಮ ಸಂದರ್ಭದಲ್ಲಿ ಗೊತ್ತೇ? ಅಂದು (೧೮೯೦ ಜೂಲೈ) ಕರ್ನಾಟಕದಲ್ಲಿಯೆ ಕನ್ನಡ ಭಾಷೆಗೆ ಸ್ಥಾನವಿಲ್ಲದೆ ಹೋಗಿತ್ತು. ಸುಶಿಕ್ಷಿತ ಕನ್ನಡಿಗರು ಕನ್ನಡವನ್ನು ತಮ್ಮ ತಾಯ್ನುಡಿಯೆಂದು ಒಪ್ಪಿಕೊಳ್ಳಲಿಕ್ಕೂ ನಾಚಿ ಹಿಂಜರಿಯುತ್ತಿದ್ದರು. ಆಡಳಿತದ ಮೇಲಧಿಕಾರಿಗಳಾಗಿಯೂ, ವಕೀಲರಾಗಿಯೂ, ಡಾಕ್ಟರಾಗಿಯೂ ಬಂದ ಪರಭಾಷೆಯ ಸುಶಿಕ್ಷಿತರು ನಮ್ಮ ಸಾಮಾಜಿಕ ರಾಜಕೀಯ ಚಳವಳಿಗಳ ಮುಂದಾಳುಗಳಾಗಿದ್ದುಕೊಂಡು, ಸಾರ್ವಜನಿಕ ಕಾರ್ಯಗಳಲ್ಲಿ ಕನ್ನಡಕ್ಕೆ ಆಸ್ಪದವನ್ನೇ ಕೊಡುತ್ತಿರಲಿಲ್ಲವಷ್ಟೇ ಅಲ್ಲ; ಕನ್ನಡವು 'ಅನಾಗರಿಕರ ಭಾಷೆ' ಎಂಬ ಭಾವನೆಯನ್ನು ನಮ್ಮ ಜನರಲ್ಲಿ ಉಂಟುಮಾಡುತ್ತಿದ್ದರು. ಇಂದು ಕರ್ನಾಟಕದ ಗಂಡುಮೆಟ್ಟೆಂದು ಕರೆಯಿಸಿಕೊಳ್ಳುತ್ತಿರುವ ಧಾರವಾಡದಲ್ಲಿಯೂ ಎಲ್ಲ ಸಾರ್ವಜನಿಕ ಉಪನ್ಯಾಸಗಳು ಮರಾಠಿಯಲ್ಲಾಗುತ್ತಿದ್ದುವು—ಇದ್ದ ಒಂದೆರಡು ಪತ್ರಿಕೆಗಳು ಮರಾಠಿಯಲ್ಲಿ ಹೊರಡುತ್ತಿದ್ದುವು—ಎಂದು ಹೇಳಿದರೆ, ಇಂದು ಅನೇಕರಿಗೆ ಹಾಗೆ ಇರಬಹುದೆಂದು ಎನಿಸಲಾರದು. ಆದರೆ ಹಾಗಿದ್ದುದು ಸಂಪೂರ್ಣ ಸತ್ಯ.

ಆದರೆ ಕನ್ನಡವಾಣಿಯ ತೇಜಸ್ಸು ಓಜಸ್ಸುಗಳು ಹೀಗೆ ಮಸುಳುವುದು ಕರ್ನಾಟಕ ಭಾಗ್ಯವಿಧಾತನಿಗೆ ಒಪ್ಪಿಗೆಯಾಗಲಿಲ್ಲವೇನೋ! ಈಗ ದಿವಂಗತರಾಗಿರುವ ಶ್ರೀಮಾನ್ ರಾಮಚಂದ್ರ ಹಣಮಂತ ದೇಶಪಾಂಡೆ ಎಂ.ಎ. ಅವರ ಅಂದಿನ ತರುಣಹೃದಯದಲ್ಲಿ ಕರ್ನಾಟಕದ ಅಭಿಮಾನ ಜಾಗೃತವಾಯಿತು. ಅಂದು ಪದವೀಧರರಾಗಿ ಬರುವ ಸುಶಿಕ್ಷಿತ ಕನ್ನಡಿಗರೆಲ್ಲ ಪುಣೆಯಲ್ಲಿದ್ದು ಶಿಕ್ಷಣ ಪಡೆದು ಬರುತ್ತಿದ್ದರಾದುದರಿಂದ, ಅವರಲ್ಲಿಯ ಮುಕ್ಕಾಲು ಮೂರುವೀಸ ಪಾಲು ಜನರಿಗೆಲ್ಲ ಪುಣೆಯ ಜನರ ನಡೆ-ನುಡಿಗಳೇ ಆದರ್ಶವಾಗಿರುತ್ತಿದ್ದುವು. ಕರ್ನಾಟಕ ಭಾಷೆ-ಸಂಸ್ಕೃತಿಯ ಭಾವನೆ ಕನಸಿನಲ್ಲಿ ಕೂಡ ಬರುವುದು ಸಾಧ್ಯವಿರಲಿಲ್ಲ. ಅಂತಹ ವಿರೋಧ ವಾತಾವರಣದಲ್ಲಿಯೇ ಕರ್ನಾಟಕತ್ವದ ಕನಸನ್ನು ಕಂಡು ಎಚ್ಚತ್ತ ದೇಶಪಾಂಡೇ ರಾಮಚಂದ್ರರಾಯರ ವ್ಯಕ್ತಿತ್ವ ಆಶ್ಚರ್ಯಕರವಾದುದು; ಇಂದಿನವರ ಆದರ-ಭಕ್ತಿಗಳಿಗೆ ಪಾತ್ರವಾಗುವಂತಹುದು

ದಿ. ದೇಶಪಾಂಡೆಯವರು ವಿಚಾರ ಮಾಡಿದರು: ಕರ್ನಾಟಕದ ಪ್ರಾಚೀನ ವಾಙ್ಮಯ ರಾಶಿರಾಶಿಯಾಗಿ ಇದ್ದರೂ, ಅದು ಇಂದಿನವರ ಕಣ್ಣಿಗೆ ಕಾಣದಂತೆ ಎಲ್ಲಿಯೊ ಹುದುಗಿ ಬಿದ್ದುಕೊಂಡಿದೆ. ನೆರೆಯ ನಾಡುಗಳಲ್ಲಿ ಆಧುನಿಕ ಗ್ರಂಥಗಳು ನಿತ್ಯನಿತ್ಯವೂ ಪ್ರಕಟವಾಗಿ ಜನಪ್ರಯೋಜನಕಾರಿಯಾಗುತ್ತಿದ್ದರೂ, ಕರ್ನಾಟಕದಲ್ಲಿ ಗ್ರಂಥರಚನಾವ್ಯವಸಾಯ ನಡೆಯುತ್ತಿಲ್ಲ. ಕನ್ನಡ ಸಾಹಿತ್ಯದ ಅಭ್ಯಾಸ ಮಾಡುವವರು ಎಲ್ಲಿಯೂ ಕಾಣುತ್ತಿಲ್ಲವಷ್ಟೇ ಅಲ್ಲ: ಕನ್ನಡವನ್ನು ಪ್ರೀತಿಯಿಂದ ಕಲಿಯುವ ಅಭಿಲಾಷೆಯವರೂ ಕಾಣುತ್ತಿಲ್ಲ. ಇದರ ನಿವಾರಣೆಗಾಗಿ ಏನಾದರೂ ಮಾಡಬೇಕು.....

ದೇಶಪಾಂಡೆಯವರ ವಿಚಾರ ಕೆಲವು ಜನರಿಗೆ ಸಮಂಜಸವಾಗಿ ಕಂಡುಬಂದಿರಬಹುದು. ಎಂತಲೇ ತಮ್ಮ ವಿಚಾರವನ್ನೊಪ್ಪುವ ಸ್ವಲ್ಪೇ ಜನರ ಸಹಕಾರದಿಂದ 'ಕರ್ನಾಟಕ ವಿದ್ಯಾವರ್ಧಕ ಸಂಘ' ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿದರು. ಸರಕಾರದ ನೆರವನ್ನು ಕೋರಿದರು. ಮೈಸೂರಿನ ಕನ್ನಡಿಗರಿಗೆ, ಮೈಸೂರಲ್ಲದೆ ಬೇರೆ ಪ್ರದೇಶದಲ್ಲಿಯೂ ಸಾಕಷ್ಟು ಜನ ಕನ್ನಡಿಗರಿರುವರೆಂಬುದನ್ನು ಸಂಘದ ಚಟುವಟಿಕೆಗಳಿಂದ ತಿಳಿಸಿಕೊಟ್ಟರು.

ಈ ಅರುವತ್ತು ವರ್ಷಗಳಲ್ಲಿ ಕ. ವಿ.ವ. ಸಂಘವು ಕರ್ನಾಟಕಕ್ಕೆ ಪರಿಪೋಷಕವೆನಿಸುವಂತೆ ವಿಧವಿಧದ ಚಟುವಟಿಕೆಯನ್ನು ನಡೆಯಿಸಿದೆ. ಅಖಂಡ ಕರ್ನಾಟಕ ಚಳವಳಿಗೆ ಹೆಚ್ಚಿನ ಬಲ ಬರಬೇಕೆಂಬ ಉದ್ದೇಶದಿಂದಲೇ ಸಂಘವು ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ಮಾಣವನ್ನು ಬಯಸಿ, ಅದಕ್ಕಾಗಿ ತನ್ನ ಸಂಚಾಲಕ ವರ್ಗದಿಂದ ಕೆಲಸ ಮಾಡಿಸಿತು. ಹೊಸ ಹೊಸ ಲೇಖಕರಿಂದ ಅನೇಕ ಗ್ರಂಥಗಳನ್ನು ಬರೆಯಿಸಿ ಬಹುಮಾನ ಧನವನ್ನು ಕೊಟ್ಟು ಪ್ರೋತ್ಸಾಹಿಸಿತು. ಕರ್ನಾಟಕದ ವಿವಿಧ ಭಾಗಗಳಿಂದ ವಿದ್ವಾಂಸರನ್ನು ಕರೆಯಿಸಿ, ಧಾರವಾಡದ ಜನಸಾಮಾನ್ಯರಿಗೆ ಸಂಸ್ಕೃತಿ-ಇತಿಹಾಸ ಸಾಹಿತ್ಯಗಳ ಪರಿಚಯ ಮಾಡಿಸಿ ಕೊಟ್ಟು, ಅವರನ್ನು ಬಹುಶ್ರುತರನ್ನಾಗಿ ಮಾಡಿತು. ಕರ್ನಾಟಕದ

…ತಿಹಾಸಿಕ ವಿಭೂತಿಗಳ ಜಯಂತಿ ಪುಣ್ಯತಿಥಿಗಳನ್ನು ನಡೆಯಿಸಿ, …ಲ್ಲಿಯವರಿಗೆ ಕನ್ನಡಿಗರ ಪ್ರಾಚೀನ ಜ್ಞಾನ-ಬಲ-ವೈಭವ-…ಾಹಸಗಳ ಕಲ್ಪನೆ ಮಾಡಿಕೊಟ್ಟಿತು.

ಇಷ್ಟೆಲ್ಲ ಮಾಡಿದ್ದರೂ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ …ರ್ನಾಟಕಕ್ಕೆ ಇನ್ನೂ ಎಷ್ಟೋ ವಿಧದ ಸಂರಕ್ಷಕ-ಸಂವರ್ಧಕ …ಾರ್ಯಗಳು ನಡೆಯಬೇಕಾಗಿದೆ. ಉತ್ತರ ಕರ್ನಾಟಕದಲ್ಲಿ ಇಂತಹ …ಾರ್ಯಕ್ಕಾಗಿ ಇರುವ ಹಿರಿಯ ಸಂಸ್ಥೆ ಇದೊಂದೇ ಇದೆ. ಆದುದ …ಂದ ಕನ್ನಡಿಗರು ಸಂಘವನ್ನು ಪ್ರೇಮಾದರಗಳಿಂದ ನೋಡಬೇಕು. …ದ ಪೋಷಣೆಗೆ ಬೇಕಾಗುವ ಸಲಕರಣೆ-ಸಹಾಯಗಳನ್ನು ಒದ-…ಿಸಿಕೊಟ್ಟು, ಅದರ ಬಲವನ್ನು ಬೆಳೆಯಿಸಿ, ಆ ಬಲದ ಪ್ರಯೋ-…ನ ಕನ್ನಡಿಗರಿಗೆ ಸಂಪೂರ್ಣವಾಗಿ ಸಿಕ್ಕುವಂತೆ ನೋಡಿಕೊಳ್ಳ-…ೇಕು. ಇದು ಕನ್ನಡಿಗರೆಲ್ಲರ ಕರ್ತವ್ಯ; ಉಪೇಕ್ಷಿಸಲಾರದಂತಹ …ರ್ತವ್ಯ!

…ಹೇಗೂ ಕ. ವಿ. ವ. ಸಂಘದ ರತ್ನಮಹೋತ್ಸವವನ್ನು ಕನ್ನಡಿ…ರು ಒಟ್ಟುಗೂಡಿ ಜರುಗಿಸಬೇಕಾಗಿದೆ. ಇದೇ ನಿಮಿತ್ತವಾಗಿ …ರ್ನಾಟಕ ಸಾಂಸ್ಕೃತಿಕ ಉನ್ನತಿಯ ದೂರದೃಷ್ಟಿಯನ್ನಿರಿಸಿಕೊಂಡು …ಂಘಕ್ಕೆ ಒಂದು ದೊಡ್ಡ ನಿಧಿಯನ್ನು ಕೂಡಿಸಿಕೊಡಲು ಪ್ರಯತ್ನ …ಮಾಡಿದರೆ, ಸಂಘವು ನಡೆಯಿಸುತ್ತಲಿರುವ ಕನ್ನಡ ಗ್ರಂಥಾ-…ಲಯಕ್ಕೆ ಇಂದು ಅತ್ಯಾವಶ್ಯಕವಾಗಿ ಕುಳಿತಿರುವ ಕಟ್ಟಡ ಕಟ್ಟಿಸ-…ಬಹುದಾಗಿತ್ತು. ಅದು ಬೇಡವಾದರೆ, ಆ ನಿಧಿಯ ಮೂಲಕ ಬೇರೆ …ಯಾವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ನಿರ್ವಹಿಸಿಕೊಂಡು …ಹೋಗುವಂತೆ ನಿರ್ಧರಿಸಿ, ಸಂಘದ ಕಡೆಗೆ ಆ ಹೊಣೆಯನ್ನು …ಒಪ್ಪಿಸಬೇಕು.

ಇನ್ನೂ ಜೀವಹಿಡಿದುಕೊಂಡು ಬಂದಿರುವ ಕರ್ನಾಟಕ ಜಾನಪದ …ಸಂಸ್ಕೃತಿ ಪರಂಪರೆಯನ್ನು ಸಂಶೋಧಿಸಿ, ಸಂಗ್ರಹಿಸಿ, ಅಭ್ಯಸಿಸಿ, …ಇದನ್ನೆಲ್ಲ ಗ್ರಂಥದಲ್ಲಿ ತರುವ ಅಗತ್ಯ ಇಂದು ತುಂಬ ಇದೆ. ಈಗ …ಇದನ್ನು ಉಪೇಕ್ಷೆಮಾಡಿಬಿಟ್ಟರೆ, ಸದ್ಯದ ಸಾಮಾಜಿಕ ರಾಜಕೀಯ …ಕ್ರಾಂತಿಯಲ್ಲಿ ಅದೆಲ್ಲ ಕಣ್ಮರೆಯಾಗಿ ಹೋಗುವ ಸಂಭವವಿದೆ. ತನ್ನ …ರತ್ನಮಹೋತ್ಸವದ ನೆನಪಿಗಾಗಿ ಸಂಘವು ಈ ಕಾರ್ಯಕ್ಕಾಗಿ …ಶಿಕ್ಷಾ ಸಿಗ ಳಾ ದ ಸಂಶೋಧಕರನ್ನೂ ಅನುಭವಶಾಲಿಗಳಾದ …ವಿದ್ವಾಂಸರನ್ನೂ ನಿಯಮಿಸಿ ಈ ಕಾರ್ಯಮಾಡಿಸಿದರೆ, ಒಂದು …ಸಂಸ್ಕೃತಿಯ ನಿಧಿಯನ್ನು ಸಂಗ್ರಹಿಸಿದಂತಾಗುವುದು.

ಇದೆಲ್ಲದರ ವಿಚಾರವನ್ನೂ ಭವಿಷ್ಯದ ಕಲ್ಪನೆಯಿರುವ ಕನ್ನಡಿ…ಗರು ಮಾಡಿ, ಕ. ವಿ. ವ. ಸಂಘಕ್ಕೆ ಆ ರ್ಥಿ ಕ ಸಹಾಯವನ್ನು …ಒದಗಿಸಬೇಕು.

ಜಯಂತಿಯ ಮೊರೆಗೆ ಜನತೆಯ ಉತ್ತರ

(ಜೂಲೈ ತಿಂಗಳಲ್ಲಿ ಚಂದಾದಾರರನ್ನು ಒದಗಿಸಿಕೊಟ್ಟವರು.)

ಶ್ರೀ. ದೇವಳೆ ಕೃಷ್ಣರಾಯರು ಬಿ. ಎ., ವಿಜಾಪುರ	೧೧
ಪ್ರೊ. ಜಿ. ಎಸ್. ದೀಕ್ಷಿತ ಎಂ. ಎ., ಪುಣೆ	೫
ಶ್ರೀ. ಗುರುಲಿಂಗ ಕಾಪಸೆ, ಲಚ್ಯಾಣ	೩
ಶ್ರೀ. ಶಾಮರಾವ ಜೋಶಿ, ಸಾಹ್ಬಾಪುರ	೨
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ	೧
ಶ್ರೀ. ಜಿ. ಎಸ್. ಮಠಕರ ಎಂ. ಎ., ಪುಣೆ	೧
ಶ್ರೀ. ಆರ್. ಟಿ. ಕುಲಕರ್ಣಿ, ಮಹೋಳ	೧
ಗುಳೇದಗುಡ್ಡದ ಹಿತಚಿಂತಕರೊಬ್ಬರು	೧

ಎಲ್ಲ ಸಹಕಾರಿಗಳಿಗೂ ಕೃತಜ್ಞತೆಯ ವಂದನೆಗಳು.

ಜಯಂತಿಯ ವಿಲಂಬ

ನಮ್ಮ ಜೂನ್, ಜೂಲೈ ಸಂಚಿಕೆಗಳು ೪-೫ ದಿನ ವಿಲಂಬವಾಗಿ ಹೊರಟುದರಿಂದ, ಅನೇಕರು ಕಾಗದ ಬರೆದು ಕಾರಣ ಕೇಳಿದ್ದಾರೆ. ಧಾರವಾಡದ ಎಲ್ಲ ಮುದ್ರಣಾಲಯಗಳಲ್ಲಿಯೂ ನಡೆದಿರುವ ಮತದಾರರ ಪಟ್ಟಿಯ ಮುದ್ರಣದ ರಭಸವೇ ಜಯಂತಿಯ ವಿಲಂಬಕ್ಕೆ ಕಾರಣ. ಇನ್ನು ಮೇಲೆ ಜಯಂತಿ ತಪ್ಪದೆ ತನ್ನ ದಿನಕ್ಕೆ ಸರಿಯಾಗಿ ಪ್ರಕಟವಾಗುವುದು. —ಸಂಪಾದಕರು



ಸಾದರ ಸ್ವೀಕಾರ

★

೪೧. **ಬಾ** (ಬೇರೆ ಬೇರೆ ಕವಿಗಳ ಕೃತಿಸಂಕಲನ). ಸಂಕಲನಕಾರರು ಪಂಡಿತ ಕೇಶವಶರ್ಮ, ಗಲಗಲಿ. ಪ್ರಕಾಶಕರು ಶ್ರೀ. ಭಾಲಚಂದ್ರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ. ಅ. ೧೬ ಪುಟಗಳು. ಬೆಲೆ ೦-೪-೦.

೪೨. **ಸವಣೂರಿನ ನಿಸರ್ಗಚಿಕಿತ್ಸಾ ವಿದ್ಯಾಲಯದ** ಪರಿಚಯ ಪತ್ರಿಕೆ. ಪ್ರಧಾನಾಧ್ಯಾಪಕರು ಡಾ. ಶಾಮರಾವ ಚಿತ್ರಗಾರ. ಕ್ರಾ. ಅ. ೬ ಪುಟಗಳು.

೪೩. **ನಿಸರ್ಗಜೀವನ** (ಪರಿಚಯಾತ್ಮಕ ಪ್ರಬಂಧ) ಕ್ರಾ. ಅ. ೮ ಪುಟ. ಬೆಲೆ ೦-೨-೦.

೪೪. **ಲಂಘನಚಿಕಿತ್ಸೆ** (ಭಾಗ ೧). ಕ್ರಾ. ಅ. ೧೦ ಪುಟ. ಬೆಲೆ ೦-೨-೦.

೪೫. **ಲಂಘನಚಿಕಿತ್ಸೆ** (ಭಾಗ ೨). ಕ್ರಾ. ಅ. ೮ ಪುಟ. ಬೆಲೆ ೦-೨-೦.

೪೬. **ಜಲಚಿಕಿತ್ಸೆ** ಕ್ರಾ. ಅ. ೮ ಪುಟ. ಬೆಲೆ ೦-೨-೦.

೪೭. **ಬಸ್ತಿ (ಎನಿಮಾ) ಚಿಕಿತ್ಸೆ.** ಕ್ರಾ. ಅ. ೧೦ ಪುಟಗಳು. ಬೆಲೆ ೦-೨-೦.

೪೮. **ಮೌನವ್ರತದ ಮಹತ್ತ್ವ** ಕ್ರಾ. ಅ. ೧೪ ಪುಟಗಳು. ಬೆಲೆ ೦-೨-೦.

ಮೇಲಿನ ೪೩ ರಿಂದ ೪೮ ರ ವರೆಗಿನ ಪುಸ್ತಕಗಳು ಸವಣೂರಿನ ನಿಸರ್ಗ ಚಿಕಿತ್ಸಾಲಯದ ಕಾಣಿಕೆಗಳು. ಎಲ್ಲವನ್ನೂ ಬರೆದವರು ಡಾ. ಶಾಮರಾವ್ ಚಿತ್ರಗಾರ ಅವರು. ನಮ್ಮಲ್ಲಿ ಇಂದಿನ ಅನೈಸರ್ಗಿಕ ಆಹಾರ-ವಿಹಾರಗಳಿಂದಲೇ ಅನಾರೋಗ್ಯ, ಅಶಕ್ತತೆಗಳು ತಾಂಡವವಾಡುತ್ತಲಿವೆ. ಪ್ರಕೃತಿ ಕೆಡಿಸಿಕೊಂಡು ಕಂಡ ಕಂಡ ಮದ್ದುಗಳನ್ನು ಸೇವಿಸುವುದಕ್ಕಿಂತ, ಪ್ರಕೃತಿ ಕೆಡದಂತೆ ನೈಸರ್ಗಿಕರೀತಿಯಲ್ಲಿ ಬಾಳುವುದು ಅತ್ಯಾವಶ್ಯಕವಾದ ಮಾತು. ಅನೈಸರ್ಗಿಕ-ಆಹಾರ-ವಿಹಾರಗಳ ಮೂಲಕವೇ ರೋಗ-ರುಜಿನಗಳು ತಲೆದೋರುವುದರಿಂದ, ಕೇವಲ ನೈಸರ್ಗಿಕ ಉಪಚಾರಗಳಿಂದಲೇ ಅವುಗಳನ್ನು ನಿವಾರಿಸಲಿಕ್ಕೆ ಸಾಧ್ಯವಿದೆಯೆಂಬುದರಲ್ಲಿ ಡಾ. ಚಿತ್ರಗಾರರವರಿಗೆ ತುಂಬ ಶ್ರದ್ಧೆಯಿದೆ. ಅಂತಹ ನೈಸರ್ಗಿಕ ಉಪಚಾರಕ್ರಮಗಳನ್ನೇ ಈ ಚಿಕ್ಕ ಚಿಕ್ಕ ಪುಸ್ತಿಕೆಗಳಲ್ಲಿ ತಿಳಿಸಿದ್ದಾರೆ. ಕನ್ನಡಿಗರು ಇವುಗಳ ಪ್ರಯೋಜನ ಪಡೆಯಬೇಕು.

೪೯. **ವಿಶ್ವಕಲಾ** (ಹೊಸ ಮಾಸಪತ್ರಿಕೆಯು). ಸಂಪಾದಕರು ಮತ್ತು ಪ್ರಕಾಶಕರು ಶ್ರೀಯುತ ವಿ. ಲಕ್ಷ್ಮೀಪತಿ. ‘ಪಂಚಾಂಗ ಮಂದಿರಂ’ ಪ್ರಿಂಟಿಂಗ್ ಪ್ರೆಸ್, ವಾಣೀವಿಲಾಸ ಮೊಹಲ್ಲಾ, ಮೈಸೂರು. ಡೆ. ಅ. ೩೨ ಪುಟಗಳು.

ವಾರ್ಷಿಕ ಚಂದಾ ೧-೮-೦. ಬಿಡಿಸಂಚಿಕೆಗೆ ೦-೨-೦.

೫೦. **ಬೀದಿಯ ದೀಪ** (ಕಾದಂಬರಿ) ಬರೆದವರು ಶ್ರೀ. ಕುಮಾರ ವೆಂಕಣ್ಣ. ಪ್ರಕಾಶಕರು: ‘ಕನ್ನಡ ಪ್ರಪಂಚ’ ಪ್ರಕಾಶನ, ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು. ಕ್ರಾ. ಅ. ೧-೮ ಪುಟಗಳು. ಬೆಲೆ ೧-೪-೦.

೫೧. **ದೇವರ ಹೊಲ** (ಸಾಮಾಜಿಕ ನಾಟಕ) ಬರೆದವರು ಶ್ರೀ. ಲಿಂಗಸುಗೂರು ವಿಟ್ಠಲರಾಯರು, ಹೈದರಾಬಾದ್. ಪ್ರಕಾಶಕರು: ಪ್ರಭಾತ ಸಾಹಿತ್ಯ, ಮಲ್ಲೇಶ್ವರಂ, ಬೆಂಗಳೂರು. ಕ್ರಾ. ಅ. ೬೮ ಪುಟಗಳು. ಬೆಲೆ ೦-೧೦-೦.

೫೨. **ಕಾಣ್ವಸಂಧ್ಯಾರ್ಥ** (ಧಾರ್ಮಿಕ ಗ್ರಂಥ). ಪ್ರಕಾಶಕರು ವಿದ್ವಾನ್ ಜಿ. ಎಸ್. ಆಚಾರ್ಯ, ಕೋಲದೇವಿ ‘ಶ್ರೀಯಾನಂದಾಶ್ರಮ.’ ನಗರ್ತರ ಪೇಟೆ, ಬೆಂಗಳೂರು ನಗರ. ಕ್ರಾ. ಅ. ೩೦ ಪುಟಗಳು. ಬೆಲೆ ೦-೮-೦.

ವಿರೋಧ

(ಸಣ್ಣಕತೆ)

ಮೂಲಲೇಖಕರು :
ಸುಪ್ರಸಿದ್ಧ ವಿಶ್ವ ಕತೆಗಾರ್ತಿ
ಶ್ರೀಮತಿ ಪರ್ಲ್. ಎಸ್. ಬಕ್.

ಅನುವಾದಕರು :
ಶ್ರೀ. ಕುಲಕರ್ಣಿ ಬಿಂದು-
ಮಾಧವ, ಬಾದಾಮಿ

★

ಆಕ್ರಮಣಶೀಲರಾದ ರಾಜಕಾರಣಿಗಳ ಯುದ್ಧ-ಪ್ರವೃತ್ತಿ, ಸುಖ-ಶಾಂತಿಗಳಿಂದ ಬದುಕಿ ಬಾಳುತ್ತಿರುವ ನಿಷ್ಪಾಪಿ ಸಾಮಾಜಿಕರನ್ನು ಹೇಗೆ ಆಹುತಿ ತೆಗೆದು-ಕೊಳ್ಳುವುದೆಂಬುದನ್ನು, ಶ್ರೀಮತಿ ವಾಂಗಳ ವಿಷಾದಾಂತ ಜೀವನದಿಂದ ನೋಡಿಕೊಳಬೇಕು!

★

ಚೀನಾ ಹಾಗು ಜಪಾನುಗಳ ನಡುವೆ ಭೀಷಣ ಸಮರ ನಡೆ-ಯಿದೆ— ಎಂದು ಮಿಸೆಸ್ ವಾಂಗಳಿಗೆ ಗೊತ್ತಿತ್ತು. ಜಪಾನಿಗಳು ತುಂಬ ಕ್ರೂರರಿದ್ದು ಚೀನೀಯರಿಗೆ ದೇಹಯಾತನೆಯನ್ನಿತ್ತು ಕೊಲ್ಲುತ್ತಾರೆ—ಎಂಬುದನ್ನು ಆಕೆ ಕೇಳಿದ್ದಳು. ಊರಿನ ಸಾಮಾ-ಜಿಕರೆಲ್ಲ ಸುರಕ್ಷಿತರಾಗಿರುವವರೆಗೂ ಅವಳಿಗೆ ಆ ಮಾತಿನಲ್ಲಿ ವಿಶ್ವಾಸವಿರಲಿಲ್ಲ. ವಿಸ್ತೀರ್ಣವಾದ ಹಳದಿ ನದಿಯು ತೀರದ ಮೇಲೆ, ಅವಳಆ ಪುಟ್ಟಹಳ್ಳಿ ಚಕಮಕಿಸುತ್ತಿತ್ತು. ಅಲ್ಲಿಯ ಯಾವ ಹಳ್ಳಿಗನೂ ಜಪಾನಿಗಳನ್ನು ನೋಡಿರಲಿಲ್ಲ.

ಪದ್ಧತಿಯಂತೆ ಸಂಜೆಯ ಊಟ ಮುಗಿಸಿಕೊಂಡು, ನದಿಯ ನೀರು ಎಲ್ಲಿಯವರೆಗೆ ಬಂದಿದೆ—ಎಂಬುದನ್ನು ನೋಡುವುದಕ್ಕಾಗಿ, ಅವಳು ಮನೆಯ ಮೆಟ್ಟಲುಗಳನ್ನೇರಿ ಮೇಲ್ಮಾಳಿಗೆಯ ಮೇಲೆ ಬಂದಿದ್ದಳು. ಕ್ರೂರ ಜಪಾನಿಯರಿಗಿಂತ ನದಿಯ ಭೀತಿಯೆ ಅವಳನ್ನು ತುಂಬ ಕಾಡುತ್ತಿತ್ತು. ನದಿಯ ನೀರು ಎಂತಹ ಅನಾ-ಹುತ ಮಾಡಬಲ್ಲುದೆಂಬುದರ ಸ್ಪಷ್ಟ ಕಲ್ಪನೆ ಅವಳಿಗಿತ್ತು. ಆದುದ-ರಿಂದಲೇ ಇರಬೇಕು: ಅವಳ ಸಲಹೆಗಾಗಿ ಊರಿನ ಜನಗಳು ಅವರು ಮೆಟ್ಟಲೇರಿ ಮೇಲ್ಮಾಳಿಗೆಯ ಮೇಲೆ ಬಂದರು. ಅವಳಂ-ತೆಯೆ ಅವರ ದೃಷ್ಟಿಗಳೂ ಏರಿ ಬರುತ್ತಿರುವ ನೀರಿನ ಪ್ರವಾಹಗಳ ಮೇಲೆ ನೆಲೆನಿಂತುವು. ಆ ಪ್ರವಾಹದಲ್ಲಿ ಉತ್ಪನ್ನವಾಗುವ ತೆರೆಗಳು ಲಕ್ಷಾನುಲಕ್ಷ ಹಾವಿನ ಚಲನವಲನಗಳಂತೆ ಕಾಣುತ್ತಿದ್ದುವು. ಹಾಗೆಯೆ ಆ ಅಣೆಕಟ್ಟಿನ ವಿಸ್ತೀರ್ಣವಾದ ಗೋಡೆಗಳಿಗೆ ಬಂದು ಅಪ್ಪಳಿಸುತ್ತಿದ್ದುವು.

'ಇವತ್ತಿನಷ್ಟು ನದೀ ನೀರು ಇಷ್ಟು ಲಗೂನೆ ಏರಿ ಬಂದದ್ದನ್ನ ನಾ ನನ್ನಾಯುಷ್ಯದಾಗs ನೋಡಿದ್ದಿಲ್ಲ!'

ಮಿಸೆಸ್ ವಾಂಗ್ ಗಂಭೀರಳಾಗಿ ಹೇಳಿ, ಅವಳ ಮೊಮ್ಮಗ ವೆಗ್ ತಂದಿತ್ತ ಬಿದಿರಿನ ಸ್ಟೂಲಿನ ಮೇಲೆ ಕುಳಿತಳು. ವೆಗ್ ಏನೋ ಜ್ಞಾಪಕವಾಗಿ ಅವಳ ಮಾತಿಗೆ ಉತ್ತರವಿತ್ತ:

'ಅಜ್ಜೀ, ಜಪಾನರಿಗಿಂತಾ ಈ ನದಿ ಭಾಳ ಹಾನಿಕಾರಕ ಅದs!'

ಅವನ ಈ ಮಾತಿನಿಂದ ಆ ಅಜ್ಜಿ ತುಂಬ ಕೋಪಗೊಂಡಳು. 'ನದಿ' ಎಂದರೆ ಪವಿತ್ರವಾದ ದೇವತೆ—ಎಂದು ನಂಬಿದವಳು, ಅದಕ್ಕಾಗಿಯೆ ಅವಳು ಮೊಮ್ಮಗನ ಮೇಲೆ ಹರಿಹಾಯ್ದಳು :

'ಮೂರ್ಖ ಇದ್ದೀ ಅತು. ನದ್ಯಾಗಿನ ದೇವತಿ ನಿನ್ನ ಮಾತು ಕೇಳಿ ನಮ್ಮಮ್ಯಾಲೆ ಸಿಟ್ಟಗೆದ್ದರ ಏನು ಗತಿ ಆಗಬ್ಯಾಡ ನಮ್ಮದು? ಹಿಂತಾ ಹುಚ್ಚುಚ್ಚಾರ ಮಾತಾಡೂದಕಿಂತಾ ಮತ್ತೇನಾರೇ ಮಾತಾಡೋಣ.'

ಅನಂತರ ಅವರಲ್ಲಿ ಒಬ್ಬ ಜಪಾನಿಗಳ ವಿಚಾರವನ್ನೆತ್ತಿದ :

'ಅಜ್ಜೀ, ಜಪಾನೀ ಮಂದಿ ಹ್ಯಾಂಗಿರತಾರ?'

'ನನಗೂ ನೆಟ್ಟಗ ಗೊತ್ತಿಲ್ಲ ಬಾಳಾ! ಅವರು ಭಾಳ ಎತ್ತರ ಇರತಾರ, ನಾಸೀಪುಡಿ ಬಣ್ಣದ ಕೂದ್ಲಿರತಾವ, ಮೀನದ್ಹಂಗ ಕಣ್ಣಿರತಾವ—ಅಂತ ಕೇಳೀನಿ. ನಮ್ಹಂಗೇನೂ ಅವರಿರ್ಹಾಂಗಿಲ್ಲ; ಅತು....'

ಅಲ್ಲಿ ನೆರೆದ ಗುಂಪಿನಲ್ಲಿಯ ಪ್ರತಿಯೊಬ್ಬರೂ ಅವಳ ಮಾತು-ಗಳನ್ನು ಉತ್ಸುಕತೆಯಿಂದ ಕೇಳುತ್ತಿದ್ದರು; ಜತೆಗೆ ನಂಬುತ್ತಲೂ ಇದ್ದರು.

'ಆದರ ಅಜ್ಜೀ, ನಮಗವ್ರು ಕಾಣಸೂದs ಇಲ್ಲಲ್ಲ ಮತ್ತs? ವಿಮಾನದಾಗ ಅಡಗಿಕೊಂಡು ಆಕಾಶದಾಗs ಹಾರಾಡತಿರತಾರ?'

ವೆಗ್ ಮಧ್ಯೆ ಬಾಯಿ ಹಾಕಿ ಕೇಳಿದ. ಆವನ ಈ ಪ್ರಶ್ನೆಗೆ ಅವಳು ಉತ್ತರವನ್ನೀಯಲಿಲ್ಲ. ಅವಳಲ್ಲಿ ನಿಶ್ಚಿತವಾದ ಉತ್ತರ-ವೇನೋ ಇತ್ತು. ವಿಮಾನ-ಗಿಮಾನಗಳ ಮೇಲೆ ಅವಳ ವಿಶ್ವಾಸವೇ ಇರಲಿಲ್ಲ. ಅವುಗಳನ್ನವಳು ನೋಡಿಯೂ ಇರಲಿಲ್ಲ. ಈ ಪ್ರಪಂಚದಲ್ಲಿ ಅವಳಿಗೆ ವಿಶ್ವಾಸವಿಲ್ಲದ ಹಲವು ವಸ್ತುಗಳು ಅಸ್ತಿತ್ವದಲ್ಲಿದ್ದುವು. ಉದಾಹರಣೆಗೆ ರಾಜಕನ್ಯೆ. ಅವಳ ತಿಳಿ-ವಳಿಕೆಯ ಪ್ರಕಾರ ಹೇಳುವುದಾದರೆ: ರಾಜಕನ್ಯೆ ಮರಣಹೊಂದಿಲ್ಲ. ರಾಜವಂಶದಲ್ಲಿ ಜನಿಸಿದವರಿಗೆ ಸಾವೆನ್ನುವುದೇ ಇಲ್ಲ!.... ಆದರೆ ನಿಜವಾಗಿಯೂ ರಾಜಕನ್ಯೆ ಕಾಲವಾಗಿ ಬಹಳ ವರುಷಗಳಾಗಿದ್ದುವು. ಎರಡನೆಯ ವಿಷಯ ರಿಪಬ್ಲಿಕ್! ....ಆದರರ್ಥವೇ ಅವಳಿಗಾಗು-ತ್ತಿರಲಿಲ್ಲವಾದ ಮೂಲಕ ಅವಳಿಗೆ ನಂಬಿಕೆ ಹುಟ್ಟುವುದೆಂತು?—ಅದಕ್ಕಾಗಿಯೇ ಅವಳು ತನ್ನ ಮೊಮ್ಮಗನ ಪ್ರಶ್ನೆಗೆ ಉತ್ತರವನ್ನೀ-ಯದೆ, ಅಣೆಕಟ್ಟಿನೆಡೆಗೆ ತನ್ನ ದೃಷ್ಟಿಚೆಲ್ಲಿ ಮೌನವಾಗಿ ಕುಳಿತಳು.

ಸುತ್ತಲಿನ ಹವೆಯಲ್ಲಿ ಚಳಿ ಕೊಂಚ ಹೆಚ್ಚಿತ್ತು. ಅದು ಉತ್ತೇಜ-ಕವೂ ಆಗಿತ್ತು. ಏನಾದರೂ ಇರಲಿ, ಅವಳಿಗೆ ಮಾತ್ರ ಎಲ್ಲಿಯ

ವರೆಗೆ ಮಹಾಪೂರದ ನೀರು ಹೆಚ್ಚಾಗುವುದಿಲ್ಲವೋ ಅಲ್ಲಿಯವರೆಗೆ ಯಾವ ಭಯವೂ ಇರಲಿಲ್ಲ. ಕೊಂಚ ತಡೆದು ಆಕೆ ಹೇಳಿದಳು: ' ಜಪಾನ್ರ ನ್ಯಾಯ ನನಗೆ ಯಾವ ವಿಶ್ವಾಸವೂ ಇಲ್ಲ! ' ಅವಳ ಉತ್ತರದಿಂದ ವೆಗ್‌ನಿಗೆ ಸಮಾಧಾನವಾಗಲಿಲ್ಲ. ಆದರೂ ಆತ ಮೌನವಾಗಿಯೇ ಇದ್ದ. ಆದರೆ ನೆರೆದವರಲ್ಲಿಯ ಒಬ್ಬ ಹೇಳಿದ:

' ವೆಗ್ ಒಂದು ಹಾಡು ಹಾಡಪ್ಪಾ ! '

ತನ್ನ ಗೊಗ್ಗರು ಧ್ವನಿಯಲ್ಲಿ ಹಳೆಯ ಹಾಡೊಂದನ್ನು ಅವನು ಹಾಡಲಾರಂಭಿಸಿದ. ಅದನ್ನು ಕೇಳುತ್ತ ಕೇಳುತ್ತ ಮಿಸೆಸ್ ವಾಂಗ್ ಜಪಾನಿಗಳನ್ನು ಮರೆತುಬಿಟ್ಟಳು.

ಆಕಾಶ ನಿರಭ್ರ—ನಿಚ್ಚಳವಾಗಿತ್ತು. ಅಣೆಕಟ್ಟಿನ ಆ ಹಿರಿಯ ಗೋಡೆಗಳ ಪ್ರತಿಬಿಂಬ, ಆಳವಾದ ಆ ನೀರಿನಲ್ಲಿ ಸ್ಪಷ್ಟವಾಗಿ ಕಾಣಿ ಸುತ್ತಿತ್ತು. ಎಲ್ಲೆಲ್ಲಿಯೂ ಶಾಂತ ವಾತಾವರಣ ನೆಲೆಸಿಂತಿತ್ತು. ಮೂವತ್ತು ಮೂವತ್ತೈದು ಮನೆಗಳ ಆ ಪುಟ್ಟ ಹಳ್ಳಿಯ ಶಾಂತತೆ ಯನ್ನು ಭೇದಿಸಲು ಯಾರಿಗೂ ಸಾಧ್ಯವಿರಲಿಲ್ಲ.

' ಹೋ ! ಆ—ಜಪಾನಿಗಳೂ ಮನುಷ್ಯರಲ್ಲವೋ.... ! '
ಅವಳ ಹೃದಯ ಉದ್ಗಾರವೆತ್ತಿತು.

ಅವಳು ಅದನ್ನೇ ಮಥಿಸುತ್ತಲಿದ್ದಳು.

ತನ್ನೆಲ್ಲ ಆಯುಷ್ಯವನ್ನೂ ಅವಳು ಆ ಹಳ್ಳಿಯಲ್ಲಿಯೆ ಸವೆಯ್ದ ದ್ದಳು. ಪ್ರತಿ ಬೇಸಗೆಯ ಸಂಜೆಯಲ್ಲಿ, ಆ ಅಣೆಕಟ್ಟಿನ ಮೇ ಕುಳಿತುಕೊಳ್ಳುವುದು ಅವಳ ಪದ್ಧತಿಯಾಗಿತ್ತು. ಹದಿನೇಳನೆ ವರುಷದಲ್ಲಿಯೆ ಅವಳ ಮದುವೆಯಾಗಿತ್ತು. ಹೊಸ ಮೊದಲು ಯಾಗಿ ಪತಿಯ ಮನೆ ಸೇರಿದಾಗ, ಅವಳು ಮನೆಬಿಟ್ಟು ಹೊ ಬರುತ್ತಿರಲಿಲ್ಲ. ಅದಕ್ಕಾಗಿ ಎಲ್ಲರೂ ಅವಳನ್ನು ಗೇಲಿ ಮಾಡುತ್ತಿ ದ್ದರು. ಒಂದುಸಲ ಅವಳು—ಹಳ್ಳಿಯ ಜನಗಳೆಲ್ಲ ಸೇರಿ ಅ ಕಟ್ಟಿನ ಮೇಲೆ ಕುಳಿತಾಗ—ತನಗೆ ತಿಳಿದನುಟ್ಟಿಗೆ ಶೃಂಗಾ ಮಾಡಿಕೊಂಡು ಅಲ್ಲಿಗೆ ಬಂದಳು. ತನ್ನನ್ನು ಹಾಸ್ಯಮಾಡುತ್ತಿ ವವರಿಗೆ ಚೆನ್ನಾಗಿ ಕೈತೋರಿಸಬೇಕೆಂದೇ ಇರಬೇಕು. ನೆರೆದ ಜ ಅವಳನ್ನೂ ಅವಳ ಸ್ವಾಮಿಯನ್ನೂ ಹಾಸ್ಯಮಾಡಿದರು ಈ ಸಲವ ಆದರೆ ಅವಳ ಪತಿ ಕೊಂಚವೂ ಕೋಪಗೊಳ್ಳದೆ, ಅವರಿಗೆಲ್ಲ ತ ಉತ್ತರವನ್ನಿತ್ತು ಸುಮ್ಮನಾಗಿಸಿದ. ಓ, ಆಗ ಅವಳ ಹೃದಯ ಪತಿ ವಿಚಾರವಾಗಿ ಅಭಿಮಾನದಿಂದ ಉಬ್ಬಿಹೋಯಿತು !

....ಬಡಪ್ರಾಣಿ ! ನದಿಗೆ ಮಹಾಪೂರ ಬಂದಾಗ, ಆ ನೀರಿನ ಅವಳ ಗಂಡ ತೇಲಿ ಹೋದ. ಅವನು ಹಾಗೆ ಇಹಲೋಕ ತ್ಯಜಿಸಿ ನಂತರ, ಅವಳು ಅವನಾತ್ಮಕ್ಕೆ ಶಾಂತಿ ಸಿಕ್ಕಲೆಂದು ಬುದ್ಧದೇವ ಸ್ವಾರ್ಥಿ ಪೂಜಾರಿಗಳಿಗೆ ತುಂಬ ಹಣ ವೆಚ್ಚಮಾಡಬೇಕಾಗಿ ಬಂ ಅವಳ ಅಕಳಂತಹ ಒಳ್ಳೆಯ ಸ್ವಭಾವವನ್ನು ಪೂಜಾರಿಗಳು ದುರ ಯೋಗ ಮಾಡಿಕೊಂಡರು. ಎಷ್ಟು ಹಣ ತೆತ್ತರೂ ಅವರ ಬೇ ಕಡಿಮೆಯಾಗಲಿಲ್ಲ. ಕೊನೆಗೆ ಬೇಜಾರದಿಂದ ಅವಳು ಕೇಳಿದಳು

' ಅವರಿಗೆ ಸ್ವರ್ಗ ಸಿಗಲಿಕ್ಕೆ ಇನ್ನೆಷ್ಟು ದಿವಸ ಬೇಕು ? '

ಅವಳ ಈ ಪ್ರಶ್ನೆಗೆ, ನಿಯಮದಂತೆ ದೇಶಾವರಿ ನಗೆಯ ಮೊಗದಲ್ಲಿ ತಂದುಕೊಂಡು ಅರ್ಚಕರು ಹೇಳಿದರು:

' ನೀ ಎಷ್ಟೆಷ್ಟುದುಡ್ಡು ಕೊಡತೀಯ್ಯೋ—ಅಷ್ಟಷ್ಟೇ ನಿನ್ನ ಗಂ ಒಂದೊಂದೇ ಅವಯವ ಪಾಪದ ರಾಜ್ಯಾಗಿಂದ ಸ್ವರ್ಗಕ್ಕ ಹೋ ತಾವ. ಕಟ್ಟಕಡೀಕ ಈಗ ಬರೇ ಎಡಗೈ ಒಂದು ಉಳದ ಹತ್ತೇಹತ್ತು ಡಾಲರು ಕೊಟ್ಟರ, ಅದೂ ಒಂದು ಕೈ ಸ್ವರ್ಗ ಹೋಗತದ ! '

' ಹತ್ತು ಡಾಲರು ! '

ಅವಳ ಹೃದಯ ಅಚ್ಚರಿಯ ಉದ್ಗಾರವೆತ್ತಿತು. ಅ ಮನದಲ್ಲಿಯೆ ಯೋಚಿಸುತ್ತಲಿದ್ದಳು. ಆ ಹತ್ತು ಡಾಲರು ಅವಳಿಗೆ ಮುಂದಿನ ಚಳಿಗಾಲಕ್ಕೆ ಬೇಕಾಗಿದ್ದುವು. ಅದೂ ಅ ಸ್ವಂತಕ್ಕಲ್ಲ ; ಅಣೆಕಟ್ಟಿನ ಗೋಡೆಗಳನ್ನು ಸರಿಯಾಗಿ ಮಾಡ ದಕ್ಕೆ. ಯಾಕೆಂದರೆ ಊರಲ್ಲಿಯ ಜನಗಳಿಗೆ ಆ ನದಿಯ ಮಹ ಪೂರದಿಂದ ಆಗಾಗ ಹಾನಿಯಾಗಬಾರದೆಂದು, ಆ ಹಳ್ಳಿಗರು ಸ ಯಂತೆ ಆ ಕಾರ್ಯವನ್ನು ಮಾಡುತ್ತಿದ್ದರು. ಈ ಸಲ ಅವಳ ಸ

ಸ್ತು. ಈ ಎಲ್ಲ ವಿಚಾರಗಳಿಂದಲೇ ಅಂದು ಅವಳು ಆ ಅರ್ಚಕ
ಹೇಳಿದ್ದಳು:

'ಒಂದಸ ಕೈಯೇ ಉಳಿದಿದ್ದರ, ಅದು ತನ್ನಷ್ಟಕ್ಕ ತಾನಽ ಗಕ್ಕ ಹೋಗಪ್ರೊಲ್ಲದ್ಯಾಕ!'

ನಿಧಾನವಾಗಿ ಮಂಜು ಪಸರಿಸಲಾರಂಭಿಸಿತ್ತು. ಹವೆಯಲ್ಲಿ ಳಿ ತುಂಬ ಹೆಚ್ಚುತ್ತಿತ್ತು. 'ಮನೀಗೆ ಹೋಗೋಣ ನಡೀರಿ' ನು ಅವಳು ಹೇಳಬೇಕೆಂದುಕೊಂಡಳು. ಆದರೆ ಅವಳ ದೃಷ್ಟಿ ತ್ತಿ ತುಂಬಿ ಹರಿವ ನದಿಯೆಡೆಗೆ ತಿರುಗಿತು.

ನದಿ!....ಎಷ್ಟು ಜೀವನೋಪಯೋಗಿಯೋ ಅಷ್ಟೇ ಜೀವನ-ಾತಕಿ. ಆ ಪ್ರವಾಹಕ್ಕೆ ಕಟ್ಟನ್ನು ಕಟ್ಟಿ ಹೊಲ-ತೋಟಗಳಿಗೆ ನೀರನ್ನು ಪಯೋಗಿಸಿಕೊಂಡರೆ, ಕೋಟ್ಯನುಕೋಟಿ ಜನ ದುಕಬಲ್ಲದು. ಆದರೆ ಅದು ನೈಸರ್ಗಿಕವಾಗಿ ಹರಿಯ ತೊಡ ದರೆ, ಕೋಟಿ ಕೋಟಿ ಜನರನ್ನು ಬಲಿ ತೆಗೆದುಕೊಳ್ಳಬಲ್ಲುದು....

ಈ ವಿಚಾರಧಾರೆಯಿಂದ ಹಠಾತ್ತನೆ ಅವಳ ಪತಿಯ ದುರ್ಮ-ಣದ ಎದೆಕೊರೆವ ಚಿತ್ರ ಮತ್ತೆ ಅವಳ ಹೃದಯಪಟಲದ ಮೇಲೆ ಮೂಡಿತು.

ಇಂತಹ ಒಂದು ಮಹಾಪೂರದಲ್ಲಿಯೆ ಅವಳ ಸ್ವಾಮಿ ತೇಲಿ ಹೋಗಿದ್ದ. ನಿಜವಾಗಿಯೂ ಎಂತಹ ಧೈರ್ಯಶಾಲಿ ಅವನು! ನ್ನಾಯುಷ್ಯದಲ್ಲಿಯೆ ಅವನೆಂದೂ, ಯಾವುದಕ್ಕೂ ಭಯಪಡ ಲ್ಲ. ಈ ವಿಶಿಷ್ಟ ಸ್ವಭಾವವೇ ಅವನಿಗೆ ಮುಳುವಾಯಿತು: ವನ ಬಲಿ ತೆಗೆದುಕೊಂಡಿತು. ಬೇಡಬೇಡವೆಂದು ಮನೆಯವರು, ನೆಯವಳು ಅಂಗಲಾಚಿ ಬೇಡಿಕೊಂಡರೂ, ಕೇಳದೆ ನೆರೆಹೊರೆಯ ನಗಳ ಮನೆ ಉಳಿಸಲು ಮನೆಬಿಟ್ಟು ಹೊರಬಿದ್ದ. ಅವರನ್ನೆಲ್ಲ ಳಿಸಲು ಯತ್ನಿಸಿ ತಾನೇ ಬಲಿಯಾದ.

ಅನಂತರವೇ ತುಂಬ ಪ್ರಯತ್ನಪಟ್ಟು ಹಳ್ಳಿಗರು ಅಣೆಕಟ್ಟನ್ನು ಟ್ಟಿದರು. ಈಗಲೂ ಅದು ಹಾಗೆಯೆ ಇದೆ. ಪ್ರತಿದಿನ ಸೆಸ್ ವಾಂಗಳಿಗೆ ಆ ಗೋಡೆಗಳ ಮೇಲೆ ಒಂದು ಸಲವಾದರೂ ಡಾಡಿಸಿದರೆ ಸಮಾಧಾನ. ಅವಳ ಆ ರೀತಿಯನ್ನು ಕಂಡು ಳ್ಳಿಗರು ಯಾವಾಗಲೂ ನಗುತ್ತಾರೆ. ಆದರೂ ಅವರಿಗೆಲ್ಲ ಅವಳ ಮೇಲೆ ತುಂಬ ವಿಶ್ವಾಸ. ಅವರೆಲ್ಲ ತಮ್ಮತಮ್ಮಲ್ಲಿ ಆಗಾಗ— ಗೋಡೆಗಳಿಗೆ ಒಂದು ಸಣ್ಣ ತೂತು ಬಿದ್ರೂ ಈ ಮುದಿಕಿ ಹೇಳೇ ಕತಾಳ!' ಎಂದು ಮಾತನಾಡಿಕೊಳ್ಳುತ್ತಾರೆ.

ಪಠಾತ್ತನೆ ವೆಗ್ ಹಾಡು ನಿಲ್ಲಿಸಿದ. ಆಗಸದ ಕಡೆಗೆ ನೋಡುತ್ತ ವನು ಹೇಳಿದ:

'ಚಂದ್ರ ಭಾಳ ಮ್ಯಾಲೆ ಬಂದಾನ. ಇಂಥಾ ವ್ಯಾಳ್ಯಾದಾಗಽ ಪಾನಿಗಳ ವಿಮಾನ ಹದ್ದಿನ್ಹಾಂಗ ಹಾರಿ ಬರತಾವ!'

ಜಪಾನಿಗಳ ಮತ್ತು ಅವರ ವಿಮಾನಗಳ ವಿಚಾರದ ಮಾತು ತ್ತೆ ಆರಂಭವಾದೊಡನೆ, ಅವಳಿಗೆ ತುಂಬ ಬೇಸರು ಬಂತು. ಗ್ಗನ ಹೆಂಡತಿಯ ಭುಜದ ಆಧಾರದ ಮೇಲೆ ಆ ವೃದ್ಧೆ—ನಿಧಾನವಾಗಿ—ಕೆಳಗಿಳಿದು ನಡೆದಳು ಅವಳನ್ನು ಹಿಂಬಾಲಿಸಿ ಹಳ್ಳಿಗರೂ ತಮ್ಮ ಮನೆ ಸೇರಿದರು.

ರಾತ್ರಿ ಮಲಗಿದಾಗ ಮಿಸೆಸ್ ವಾಂಗಳಿಗೆ—ಜಪಾನಿಗಳ ವಿಚಾರ ವಾಗಿ, ಅವರ ಯುದ್ಧದ ರಾಕ್ಷಸೀ ವೃತ್ತಿಯ ವಿಚಾರವಾಗಿ, ಒಂದೇ ಪ್ರಶ್ನೆ ತಲೆದೋರಿ ತುಂಬ ಆಶ್ಚರ್ಯವನ್ನುಂಟುಮಾಡಿತ್ತು: 'ಅವರೆಲ್ಲ ಕಾಡು ಜನರಿರಬಹುದೆ?' – ಎಂದು ಆ ಮುದುಕಿ ಎಣಿಕೆ ಹಾಕುತ್ತಿದ್ದಳು: ಕಾಡು ಜನ ಯಾವಾಗಲೂ ಕೊಲೆ, ಸುಲಿಗೆ, ಲೂಟಿ ಮಾಡುವುದೇ ತಮ್ಮ ಧರ್ಮ ಎಂದು ತಿಳಿದುಕೊಳ್ಳುತ್ತಾರೆ. ಆದರೆ ಇಂತಹ ಜನ ಈ ಪುಟ್ಟ ಹಳ್ಳಿಯ ಶಾಂತಿಸಾಗರವನ್ನು ಅಲ್ಲೋಲ-ಕಲ್ಲೋಲ ಮಾಡುವರೇಕೆ?– ಎಂಬುದು, ಅವಳೆಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ.

ಮಾರನೆಯ ದಿನ ಬೆಳಗುಜಾವ, ವೆಗ್ಗನ ಪತ್ನಿ ಹಣ್ಣುಹಣ್ಣಾದ ಮುದುಕಿಯ ತೋಳುಗಳನ್ನಲುಗಾಡಿಸಿ ಎಚ್ಚರಿಸಿದಾಗ, ಅವಳಿಗೆ ಎಲ್ಲಿಲ್ಲದ ರೋಷ ಬಂದಿತ್ತು. ನಿಜವಾಗಿಯೂ ಅವಳು ಏಳುವ ವೇಳೆ ಆದಾಗಿರಲಿಲ್ಲ. ಆದರೆ ವೆಗ್ಗನ ಮಡದಿ ಕಂಪಿಸುವ ಸ್ವರದಲ್ಲಿ 'ಜಪಾನಿಗಳ ತಂಡ ದಾಳಿ ಮಾಡುವುದಕ್ಕೆ ಬಂದಿದೆ' ಎಂದು ಹೇಳಿದಾಗ, ಮಿಸೆಸ್ ವಾಂಗ್ ತಕ್ಷಣ ಹಾಸಿಗೆಯಿಂದ ಪುಟಿದೆದ್ದು ನಿಂತಳು. ಭೀತಿಯಿಂದ ಅತ್ತಿತ್ತ ನೋಡುತ್ತ 'ಏನು?.... ಎಲ್ಲಿ??....'

ZANDU
PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory
The Zandu Pharmaceutical Works, Ltd.
BOMBAY 14.

Sole Agents:—
M/s. Pranlal and Sons
Chemists, Druggists
Station Road. HUBLI
(H. O. Bangalore City

ಎಂದು ಕೇಳಿದಳು. ಅಂತಹ ವಿಷಮ ಪರಿಸ್ಥಿತಿಯಲ್ಲೂ ವೆಗ್ಗನ ಹೆಂಡತಿಗೆ ನಗು ಬಾರದೆ ಇರಲಿಲ್ಲ. ಅವಳು ಗಟ್ಟಿಯಾಗಿ ಹೇಳಿದಳು :

'ಅಜ್ಜೀ, ಅವರು ಜಾಂಗs ಕಣ್ಣಿಗೆ ಕಾಣಕೊಳ್ಳಿಲ್ಲ. ಆಕಾಶದಾಗ ವಿಮಾನದಾಗಿರಬಹುದ!'

ಮಿಸೆಸ್ ವಾಂಗ್ ಮನೆಯಿಂದ ಹೊರಬಿದ್ದು ಅತ್ತಿತ್ತ ನೋಡಿದಾಗ, ಅವಳಿಗೆ ಹೇಳತೀರದಷ್ಟು ಆಶ್ಚರ್ಯವಾಯಿತು. ಹಳ್ಳಿಗರು ಜಪಾನರಿಗಂಜಿ ಊರುಬಿಟ್ಟು ಓಟ ಕಿತ್ತಿದ್ದರು. ಉಳಿದ ಕೆಲವರು ಪ್ರಾಣದ ಆಶೆಯನ್ನೆ ಬಿಟ್ಟಿದ್ದರು.

ಆ ನಸುಕಿನಲ್ಲಿ ಬಾಂದಳದಿಂದ ಭಯಂಕರವಾಗಿ 'ಗರಗರ' ಎಂಬ ಶಬ್ದ ಕೇಳಿ ಬರುತ್ತಿತ್ತು. ಒಂದರ ಹಿಂದೊಂದು ಜಪಾನಿಗಳ ವಿಮಾನಗಳು ಆಗಸದಲ್ಲಿ ಕಲೆಯುತ್ತಿದ್ದುವು. ಅವುಗಳ ಭೀಷಣ ಸದ್ದಿಗೆ. ಉಳಿದ ಬೆರಳೆಣಿಸುವಷ್ಟು ಜನ ಮನೆಯಿಂದ ಹೊರಕ್ಕೋಡಿ ಬಂದರು. ಒಮ್ಮೆಲೆ ದೂರದ ಒಂದು ಹೊಲದಲ್ಲಿ, ಹಿರಿಯ ಪಕ್ಷಿಯ ತತ್ತಿಯಂತಿರುವ ವಸ್ತುಗಳು ಆ ವಿಮಾನಗಳಿಂದ ಕೆಳಕ್ಕೆ ಬೀಳಲಾರಂಭಿಸಿದುವು. ಅದನ್ನು ನೋಡುವುದಕ್ಕೆ ಆ ಹಳ್ಳಿಗರು ಅತ್ತ ಓಡಿದರು. ಆ ವಿಚಿತ್ರ ವಸ್ತುಗಳು ಬಿದ್ದ ನೆಲದಿಂದ ಬುಗ್ಗೆಯಂತೆ, ನೀರು ಮೇಲಕ್ಕೆ ನೆಗೆಯುತ್ತಿತ್ತು. ಭೀತಿಯಿಂದ ಅವರು ಆ ವಿಚಿತ್ರ ದೃಶ್ಯವನ್ನು ಕಂಡರು. ನೆಲದಲ್ಲಿ ಸುಮಾರು ಮೂವತ್ತು ಅಡಿ ಆಳವಾದ ತಗ್ಗು ಬಿದ್ದಿತ್ತು. ನೆರೆದ ಆ ಹಳ್ಳಿಗರು ಇನ್ನಷ್ಟು ಎದೆಗೆಟ್ಟರು. ಯಾರಿಗೂ ಮಾತನಾಡಲು ಕಂಠದಿಂದ ನುಡಿ ಹೊರಹೊಮ್ಮಲಿಲ್ಲ. ಮತ್ತೆ ಒಂದರಹಿಂದೊಂದು ಆ ವಸ್ತುಗಳು ಕೆಳಗೆ ಬೀಳಲಾರಂಭಿಸಿದುವು. ಪ್ರತಿಯೊಬ್ಬರೂ ಕೈಯಲ್ಲಿ ಜೀವಹಿಡಿದುಕೊಂಡು ಅಲ್ಲಿಂದ ಓಟಕಿತ್ತರು.

ವೆಗ್ಗನ ಹೆಂಡತಿ ಹೀಗೆಲ್ಲ ವಿವರಿಸಿದ ಮೇಲೆ, ಮಿಸೆಸ್ ವಾಂಗಳಿಗೂ ಕೊಂಚ ಹೆದರಿಕೆಯಾಯಿತು. ಆದರೆ ಜೀವಗಳ್ಳಿಯಾಗಿ ಓಡಿ ಹೋಗುವುದಕ್ಕೆ ಅವಳ ಮನಸ್ಸು ಸುತರಾಂ ಸಮ್ಮತಿಸಲಿಲ್ಲ. ಆದರೆ ವೆಗ್ಗನ ಪತ್ನಿ ಯಾವುದಕ್ಕೂ ಆಸ್ಪದವನ್ನೀಯದೆ, ಅವಳನ್ನು ಎಳೆದು ಕೊಂಡು ಅಣೆಕಟ್ಟಿನ ಬಳಿಗೆ ಬಂದಳು. ಅದಕ್ಕೂ ಮುಂದೆ ಹೋಗಲು ಆ ಮುದುಕಿ ಸಿದ್ಧಳಾಗಲಿಲ್ಲ. ಅವಳು ಅಭಿಮಾನದಿಂದ ಹೇಳಿದಳು: 'ನನ್ನಾಯುಷ್ಯದಾಗs ಹೀಂಗ ಹೆದರಿ ನಾ ಒಮ್ಮೆಯೂ ಓಡಿಲ್ಲ....' ಹೇಳುತ್ತಲಿರುವಂತೆಯೆ ಅವಳಿಗೆ ವೆಗ್ಗನ ಜ್ಞಾಪಕವಾಯಿತು:

'ವೆಗ್ ಎಲ್ಲಿದ್ದಾನs?'

ಅವಳ ಈ ಪ್ರಶ್ನೆಗೆ ವೆಗ್ಗನ ಹೆಂಡತಿ ಯಾವ ಉತ್ತರವನ್ನೂ ಕೊಡಲಿಲ್ಲ. ಅವಳ ಕಣ್ಣುಗಳು ನೆಲವನ್ನು ನೋಡಲಾರಂಭಿಸಿದುವು. ಆಗ ಮಿಸೆಸ್ ವಾಂಗಳಿಗೆ ಅವನು ಓಡಿಹೋಗಿರಬೇಕೆಂದು ಖಚಿತವಾಯಿತು. ಆದರೆ ಆಶ್ಚರ್ಯವೇನೂ ಆಗಲಿಲ್ಲ. ತುಂಬ ಹೊತ್ತು ಜಾರಿಹೋದರೂ ತನ್ನನ್ನಗಲಿ ಹೋಗಲಾರದೆ ತಲೆತಗ್ಗಿಸಿ ಮೌನವಾಗಿ ನಿಂತ ವೆಗ್ಗನ ಪತ್ನಿಯನ್ನು ಕಂಡು, ಆ ಮುದುಕಿ[illegible] ತುಂಬ ಕನಿಕರವಾಯಿತು. ಕಣ್ಣಲ್ಲಿ ನೀರು ಜಿನುಗಿತು. ಹಾಗೆಯೆ[illegible] ಅವಳನ್ನು ಒಂದು ಹಿರಿಯ ಕರ್ತವ್ಯಕ್ಕಾಗಿ ಎಚ್ಚರಿಸಿದಳು :

'ಒಂದುವ್ಯಾಳ್ಯಾಕ ಈ ಗೊಂದಲದಾಗ ವೆಗ್ಗಗ ಏನಾರ ಅಪಘಾ[illegible] ಆದರೂ, ನಿನ್ನ ಹೊಟ್ಟ್ಯಾಗಿನ ಕೂಸಾರೇ ಉಳೀಲಿ. ಮನೆತನ[illegible] ನಿಲ್ಲಲಿ. ಮೊದಲ ನೀ ಆ ಕೂಸಿನ ಕ್ಷೇಮ-ಸಮಾಚಾರ ತಗೋ!

ಆ ಹಿರಿಯಳ ಆಶೆ-ಇಚ್ಛೆಗಳನ್ನು ಮುರಿಯಲು ವೆಗ್ಗನ ಪತ್ನಿ[illegible] ಸಾಧ್ಯವಾಗಲಿಲ್ಲ. ಆ ಮುದುಕಿಯ ಮಾತಿಗೆ ಪ್ರತಿಯಾ[illegible] ಏನನ್ನೂ ಹೇಳದೆ, ಆ ಭಾರವಾದ ಹೃದಯದಿಂದ ಅವಳು ಉಳಿ[illegible]ದವರ ಸಂಗಡ ಹೊರಟುಹೋಗಬೇಕಾಯಿತು. ಮುಂದೆ ಕೆ[illegible] ಚಣಗಳಲ್ಲಿಯೆ ಆ ಹಳ್ಳಿ ನಾಮಶೇಷವಾಯಿತು. ಹಳ್ಳಿಯ ಜನ[illegible]ಗಳೆಲ್ಲ ಪ್ರಾಣಭಯದಿಂದ ಓಡಿಹೋಗಿದ್ದರು. ಅವರು ಹಾ[illegible] ಹೋಗುವಾಗ, ಅವಳನ್ನೂ ತಮ್ಮ ಜತೆಗೆ ಬರಬೇಕೆಂದು ಆಗ್ರಹ[illegible] ಮಾಡಿದ್ದರು. ಆದರೆ ಅಭಿಮಾನಿಯಾದ ಆ ವೃದ್ಧೆ ಹೋಗಲೊಪ್ಪ[illegible]ಲಿಲ್ಲ. ಹಿಂದೆಂದೂ ಕಾಣದ ಅಪೂರ್ವ ದೃಶ್ಯಗಳನ್ನು ಅವಳೀ[illegible] ಕಾಣುತ್ತಲಿದ್ದಳು. ವಿಮಾನಗಳು ಸಾಲುಗೊಂಡು ಬಂದು ದಾ[illegible]ಳಿ ಮಾಡುತ್ತಲಿದ್ದುವು. ಮಧ್ಯೆ ಒಂದು ವಿಮಾನ ಎತ್ತರದ ಮೇಲಿಂ[illegible] ತಿರುಗುತ್ತ ಬಂದು ಎಲ್ಲೋ ಬಿದ್ದ ಸದ್ದಾಯಿತು. ಅನಂತ[illegible] ವಿಮಾನದಾಳಿ ನಿಂತಿತು. ಎಲ್ಲೆಲ್ಲೂ ಸ್ಮಶಾನಶಾಂತಿ ತಾಂಡವನೃತ್ಯ[illegible]ಗೈಯಲಾರಂಭಿಸಿತು. ಅವಳಿಗಾಗ ಮರಳಿ ಊರಿಗೆ ಹೋಗ[illegible]ಬೇಕೆಂದೆನ್ನಿಸಿತು. ಅವಳು ಅತ್ತ ತಿರುಗಿ, ಒಂದು ಸಲ ತನ್ನ [illegible] ಪುಟ್ಟ ಹಳ್ಳಿಯ ಮೇಲೆ ಕಣ್ಣಾಡಿಸಿದಳು. ಎಲ್ಲೋ ಒಂದೆರಡು ಗೋಡೆಗಳು ನಿಂತಿದ್ದುವು. ಇನ್ನೊಂದೆಡೆಗೆ ನಾಲ್ಕು ಕಂಬಗ[illegible] ಮೇಲೆ ಚಪ್ಪರ ತೂಗಾಡುತ್ತಿತ್ತು. ಈ ಹಿಂದೆ ಎಷ್ಟೋ ಸ[illegible] ದರೋಡೆಖೋರರು ಬಂದಿದ್ದರು. ಊರನ್ನು ಸುಟ್ಟು ತುಂಬ ಹಾನಿಯನ್ನುಂಟುಮಾಡಿದ್ದರು. ಆವೆಲ್ಲ ದೃಶ್ಯಗಳೂ ಆ ಮುದು[illegible]ಕಿಯ ಸ್ಮೃತಿಪಟಲದ ಮೇಲೆ ಇನ್ನೂ ಜೀವಂತವಾಗಿ ಉಳಿದಿ[illegible]ದ್ದುವು. ಆದರೆ ಈ ಆಕಾಶಸಮರ ಅವಳರಿಯದ್ದು. ಇಂದಿನವರೆಗೂ ಅಂತಹದೇನನ್ನೂ ಅವಳು ಕಂಡಿರಲಿಲ್ಲ ಮೇಲೆ ಬಾನಿನಲ್ಲಿ ಸಂಚರಿಸುವ ವಸ್ತುಗಳಾವುವು?— ಎಂದು ಎಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ. ಅವು ಆಗಸದಲ್ಲಿ ಹೇಗೆ ಸಂಚರಿಸುತ್ತವೆ! ಎಂದು ಅವಳಿಗೆ ಹೇಳತೀರದಷ್ಟು ದಿಗಿಲು; ಆಶ್ಚರ್ಯ! ಅಂತರ್ಯದಲ್ಲಿ ನಡೆದ ಈ ತುಮುಲವಿಪ್ಲವದಿಂದ ಜಡವಾದ ಮನಸ್ಸನ್ನು ಹೊತ್ತುಕೊಂಡು, ಅವಳು ಬಾಹ್ಯದೃಷ್ಟಿಯಿಂದ ಅತ್ತಿತ್ತ ನೋಡುತ್ತ ನಡೆದಿದ್ದಳು. ಅವಳ ಹೊಟ್ಟೆಯಲ್ಲಿ ಹಸಿವೆಯ ಭೂತ 'ಥಕಥೈ' ಮಹಾಪಾಠ ಹೇಳುತ್ತಿತ್ತು.

'ಅವರಲ್ಲಿ ಒಬ್ಬರಾದರೂ ನನಗೆ ಭೆಟ್ಟಿಯಾದರೆ! ....' ಅವಳು ತನ್ನಲ್ಲಿಯೆ ತಾನು ಗುಣುಗುಣಿಸಿದಳು. ಆಶ್ಚರ್ಯ! ಅವಳ ಆ ಸವಾಲಿಗೆ ಉತ್ತರವೇನೋ ಎನ್ನುವಂತೆ, ಎದುರಿನ ಹೊಲದಲ್ಲಿ ಒಂದು ಮಾನವಾಕೃತಿ ಕಾಣಿಸಿತು. ಕೊಂಚ ಹೊತ್ತಿನ ಹಿಂದೆ

ತುಂಬ ಗೊಂದಲವನ್ನೆಬ್ಬಿಸಿದ ವಿಮಾನಗಳ ಗುಂಪಿನಲ್ಲಿಯ ಒಂದು ವಿಮಾನ, ಮುರಿದ ಸ್ಥಿತಿಯಲ್ಲಿ ಬಿದ್ದಿತ್ತು. ಮೊದಮೊದಲು ಆ ಮನುಷ್ಯ ಸತ್ತಿರಬೇಕೆನ್ನಿಸಿತು. ಅವಳು ಇನ್ನೂ ಕೊಂಚ ಮುಂದೆ ಬಂದು ನೋಡಿದಾಗ, ಅವನ ತಲೆಗೆ ಬರಿಯ ಗಾಯವಾಗಿದ್ದು ರಕ್ತ ಸೋರುತ್ತಲಿತ್ತು. ಅವನು ಧರಿಸಿದ ಬುಶ್ ಕೋಟು ಆ ರಕ್ತದಲ್ಲಿ ಸ್ನಾನ ಮಾಡಿದ ಹಾಗಿತ್ತು. ಇನ್ನೊಂದೆರಡು ಚಣಗಳು ಜಾರುವಲ್ಲಿ 'ಅವನು ಸತ್ತಿಲ್ಲ; ಗಾಯಗೊಂಡಿರಬೇಕು' ಎಂದು ಅವಳಿಗೆ ಹೊಳೆಯಿತು.

ಮಿಸೆಸ್ ವಾಂಗ್ ನಿಧಾನವಾಗಿ ಅವನ ಶರೀರಕ್ಕೆ ತನ್ನ ಕೈ ಹಚ್ಚಿದಳು. ಮೈ ಬೆಚ್ಚಗಿತ್ತು. ಅವಳು ಅವನನ್ನು ಎವೆಯಿಕ್ಕದೆ ನಾಲ್ಕೈದು ನಿಮಿಷ ನೋಡಿದಳು; ಅವನ ಕೂದಲುಗಳು ತುಂಬ ಕಪ್ಪಾಗಿದ್ದುವು. ಅವನ ಚರ್ಮದ ಬಣ್ಣ ಚೀನೀಯರ ಹಾಗೆಯೇ ಹಳದಿಯಾಗಿತ್ತು. ಆದರೂ ಅವನು ಚೀನೀಯನ ಹಾಗೆ ಕಾಣುತ್ತಿರಲಿಲ್ಲ. ಯಾವನಿದ್ದರೆ ಅವಳಿಗೇನು? ಮುಖ್ಯ ಅವನು ಜೀವಂತನಾಗಿದ್ದುದೇ ಮುಖ್ಯ ವಿಷಯವಾಗಿತ್ತು.

'ಈಗ ಆರಾಮ ಅನಿಸ್ತದ?'

ಅವಳು ಅವನ ಕಿವಿಯಲ್ಲಿ ಮೆಲ್ಲಗೆ ಪಿಸುಗುಟ್ಟಿದಳು. ಅವನು ಮಾತನಾಡಬೇಕೆಂದು ತುಟಿ ಅಲುಗಾಡಿಸಿದ. ಏನಾದರೂ ಅವನು ಹೇಳಿರಲೂ ಬಹುದು. ಏನು ಹೇಳಿದನೆಂಬುದು ಮಾತ್ರ ಅವಳಿಗೆ ಹೊಳೆಯಲಿಲ್ಲ.

ಮಿಸೆಸ್ ವಾಂಗ್ ಕೆಲವು ಚಣ ಯೋಚಿಸಿದಳು: ಗಾಯಗೊಂಡು ಅಸಹಾಯನಾಗಿ ಬಿದ್ದಿರುವ ಆ ತರುಣನನ್ನು ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ಹಾಗೆಯೆ ಬಿಟ್ಟು ಹೋಗುವಷ್ಟು ನಿಷ್ಠುರವಾಗಿರಲಿಲ್ಲ ಅವಳ ಹೃದಯ. ಅಂತಹ ಪರಿಸ್ಥಿತಿಯಲ್ಲಿ ಹೇಗೆ ಒಯ್ಯುವುದು ಅವನನ್ನು? ಎಲ್ಲಿಗೆ ಒಯ್ಯುವುದು ಅವನನ್ನು?—ಎಂದು ಎಣಿಕೆ ಹಾಕಿದಳು. ಆದರೂ ಅವನನ್ನು ಸುರಕ್ಷಿತ ಸ್ಥಳಕ್ಕೊಯ್ಯುವುದು ಅವಳ ಕರ್ತವ್ಯವಾಗಿತ್ತು. — ಅವಳರಿತುಕೊಂಡ ಧರ್ಮವಾಗಿತ್ತು. ಯಾವುದೋ ಒಂದು ನಿರ್ಧಾರಕ್ಕೆ ಬಂದ ಹಾಗೆ ಅವಳು ಅವನನ್ನು ಹೆಗಲ ಮೇಲೆ ಹೊತ್ತುಕೊಂಡು, ತನ್ನ ಹಳ್ಳಿಯ ದಾರಿ ಹಿಡಿದಳು. ಸುದೈವದಿಂದ ಅವನು ತುಂಬ ಭಾರವಾಗಿರಲಿಲ್ಲ. ಅವನಂತಹ ಇನ್ನೂ ಇಬ್ಬರನ್ನೂ ಹೊರುವ ಶಕ್ತಿ—ಆ ವಯಸ್ಸಿನಲ್ಲೂ ಅವಳಿಗಿತ್ತು. ಅವನನ್ನು ಅಣೆಕಟ್ಟಿನ ಬಳಿ ಕುಳ್ಳಿರಿಸಿ ಅವಳು ತನ್ನ ಮನೆಯ ಕಡೆಗೆ ನಡೆದಳು.

ಅವಳ ಮನೆ ಸಂಪೂರ್ಣ ನೆಲಸಮವಾಗಿತ್ತು. ಅಲ್ಲಿ ಒಂದು ಮನೆ ಇತ್ತೆಂದು ಯಾರೂ ನಂಬುವಹಾಗಿರಲಿಲ್ಲ. ಆ ಹಾಳಾದ ನೆಲ, ಮಣ್ಣಿನ ರಾಶಿಯಲ್ಲಿ ಅದರ ಗುರುತೂ ಹತ್ತುತ್ತಿರಲಿಲ್ಲ. 'ಮನೆಯನ್ನು ಮರಳಿ ಕಟ್ಟಬಹುದು; ಆದರೆ ಅಣೆಕಟ್ಟಿನ ಗೋಡೆಗಳು ಕುಸಿದರೆ ಕಷ್ಟ' ಎಂಬ ವಿಚಾರ ಹಟಾತ್ತಾಗಿ ಅವಳ ತಲೆಯಲ್ಲಿ ಮಿಂಚಿತು. ಗಾಬರಿಬಿದ್ದು ಅವಳು ಮತ್ತೆ ಅಣೆಕಟ್ಟಿನ ಬಳಿಗೆ ಓಡಿದಳು. ನೀರು ಬಿಡುವ ಕಮಾನನ್ನು ಕಣ್ತುಂಬ ನೋಡಿದಳು. ಪುಣ್ಯಕ್ಕೆ ಅಂತಹ ಗೊಂದಲದಲ್ಲೂ ಅದು ಗಟ್ಟಿಯಾಗಿಯೆ ತಲೆಯೆತ್ತಿ ನಿಂತಿತ್ತು. ಅದನ್ನು ನೋಡಿ ಅವಳಿಗೆ ತುಂಬ ಸಮಾಧಾನವಾಯಿತು. ಯಾಕೆಂದರೆ ಅದು ಒಡೆದಿದ್ದರೆ ಊರೆಲ್ಲ ತೇಲಿ ಹೋಗುತ್ತಿತ್ತು.

ಆ ಕ್ಷಣ ಅವಳಿಗೆ ಗಾಯಗೊಂಡ ತರುಣನ ಜ್ಞಾಪಕವಾಯಿತು. ಅಭಿಮಾನವೂ ಎನ್ನಿಸಿತು ಅವನನ್ನು ಉಳಿಸಿದ್ದಕ್ಕೆ. ಆದರೆ ಹೊಟ್ಟೆಗೇನು ಗತಿ? ಅವನಿಗೂ ತನಗೂ ಏನಾದರೂ ತಿನ್ನಲು ಸಿಕ್ಕರೆ?—ಎಂದು ಯೋಚಿಸಿದಳು ಅವಳು. ಅವಳ ಮನೆ ಯಾವಾಗಲೋ ಮಣ್ಣಲ್ಲಿ ಬೆರೆತು ಹೋಗಿತ್ತು. ಆಗ ಅವಳ ಕಣ್ಣುಗಳೆದುರು ಆ ಹಳ್ಳಿಯ ಅಂಗಡಿಯೊಂದು ಬಂದು ನಿಂತಿತು. ಆ ಅಂಗಡಿಯಲ್ಲಿ ಬ್ರೆಡ್ಡಿನ ತುಣುಕುಗಳಾದರೂ ಒಂದೆರಡು ಸಿಕ್ಕುವ ಸಂಭವವಿತ್ತು.

ಅದಕ್ಕಾಗಿ ಅವಳು ಮತ್ತೆ ಹಳ್ಳಿಗೆ ಓಡಿದಳು. ಮಣ್ಣಿನ ಗುಂಪಿನಲ್ಲಿ ಅಂಗಡಿಯ ಬಾಗಿಲಿನ ಚೌಕಟ್ಟು ಅರ್ಧ ಮುರಿದ ಸ್ಥಿತಿಯಲ್ಲಿ ನಿಂತಿತ್ತು. ಅವಳಿಗೇನೋ ಸೆನವಾಗಿ ಒಳಗೆ ಸೇರಿದಳು. ಬ್ರೆಡ್ಡು ಸುಡುವ ಭಟ್ಟಿ ಆ ಬಾಗಿಲ ಹತ್ತಿರವೇ ಇತ್ತು.

ಮೊದಲೇನೋ ಅವಳಿಗೆ ಏನೂ ಕಾಣಿಸಲಿಲ್ಲ. ಆಮೇಲೆ ಅವಳಿಗೆ ಚಹಾ ಕಾಸುವ ಕೆಟ್ಟಲಿಯ ಮುರಿದ ಭಾಗ ಕಾಣಿಸಿತು. ಅದರ ಬುಡದಲ್ಲಿ ಏನಾದರೂ ಸಿಕ್ಕಬಹುದೆಂಬ ಆಶೆಯಿಂದ ಸಾಹಸಮಾಡಿ,



ಕುಟುಂಬ ದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ.

ಜವೇರಿಯನ್ ಜೀವನ ಮಿಕ್ಸ್ಚರ್

ತನ್ನ ಕೈಗಳನ್ನು ಇನ್ನೂ ಕೆಳಗೆ ಸರಿಸಿದಳು. ಅವಳ ಕೈಗೆ ಏನೋ ಹತ್ತಿದ ಹಾಗಾಯಿತು. ಆಗ ಅವಳಿಗೆಂತಹ ಆನಂದ! ಅವು ತಂಗುಳು ಬ್ರೆಡ್ಡಿನ ನಾಲ್ಕೈದು ತುಣುಕುಗಳಾಗಿದ್ದುವು. ಅವಳು ಮತ್ತೆ ಅವುಗಳನ್ನೆತ್ತಿಕೊಂಡು ತರುಣನ ಬಳಿಗೆ ಧಾವಿಸಿದಳು. ಊರಿನ ಕೆಲಜನರೂ ಅವಳಿದ್ದೆಡೆ ಬರುವುದು ಕಾಣಿಸಿತು. ಅವಳಿಗೆ ಯುದ್ಧದ ಈ ಹೊಸ ತಂತ್ರ ಗೊತ್ತಿರಲಿಲ್ಲ. ಆದರೆ ಶತ್ರುಗಳಿಗಂಜಿ ಹೇಡಿಗಳಂತೆ ಜೀವ ಉಳಿಸಿಕೊಳ್ಳಲು ಓಡುವವರಿಗಾಗಿ ಅವಳಿಗೆ ತುಂಬ ಜುಗುಪ್ಸೆಯಿತ್ತು. ತುಸು ಸಮಯದಲ್ಲಿಯೆ ಹತ್ತು-ಹನ್ನೆರಡು ಜನರ ಗುಂಪೊಂದು ಅವಳಿದ್ದಲ್ಲಿಗೇ ಬಂತು. ಅವರೆಲ್ಲರ ದೃಷ್ಟಿಗಳೂ ಏಕಕಾಲಕ್ಕೆ ಆ ತರುಣನನ್ನು ಮುತ್ತಿದುವು. ಆವನೆಡೆಗೆ ಎಲ್ಲರೂ ತಿರಸ್ಕಾರದಿಂದ ನೋಡುತ್ತಿರುವಾಗ, ಅವರಲ್ಲಿಯ ಒರ್ವ ಹೇಳಿದ:

'ಅಜ್ಜೀ, ಇವ ಜಪಾನಿನವ! ಇವೆಲ್ಲೆ ಸಿಕ್ಕ ನಿಮಗs?'

'ನಿಜವಾಗಿಯೂ ಇವನು ಜಪಾನಿನವನೆ?' ಮಿಸೆಸ್ ವಾಂಗ್ ಯೋಚಿಸಿದಳು. ಆದರೆ ಅವಳಿಗೆ ವಿಶ್ವಾಸ ಉಂಟಾಗಲಿಲ್ಲ. ಆವನು ನೋಡುವುದಕ್ಕೆ ಶುದ್ಧ ಚೀನೀಯರ ಹಾಗೆಯೇ ಇದ್ದ. ಅದಕ್ಕಾಗಿಯೆ ಅವಳು ಶಾಂತ ಸ್ವರದಲ್ಲಿ ಹೇಳಿದಳು:

'ಹೀಗೇನ ಹೇಂಗಾರs? ಜಪಾನಿನವನs ಇರಬಹುದು!'

'ನಿನಗ ಗೊತ್ತಿಲ್ಲಜ್ಜೀ— ಇವರೆಲ್ಲ ನಮ್ಮ ದೇಶಕ್ಕ ಬಂದು ಹ್ಯಾಂಗ ಗೊಂದಲ ಹಾಕತಾರ ಅನ್ನೂದು! ನಮ್ಮನ್ನ ಹಾಳು ಮಾಡಿದ ಆ ಕೆಟ್ಟ ವಂಶದವನs ಇವನೂ! ನಮಗ ಕಲ್ಪನಾ ಕೂಡಾ ಇಲ್ಲದಾಗ ಈ ನಮ್ಮ ಬಾಜೂದ ಹಳ್ಳೀ ಸುಟ್ಟುಹಾಕ್ಯಾರ. ಒಂದು ಮನೀ ಸುದ್ಧಾ ಉಳಿದಿಲ್ಲ.'

'ಒಂದು ಮನೀ ಸುದ್ಧಾ ಉಳದಿಲ್ಲs?'

ಈ ಪ್ರಶ್ನೆ ಕೇಳುವಾಗ ಅವಳ ತಲೆಯಲ್ಲಿ ವಿಚಾರಪ್ರಳಯ ನಡೆದಿತ್ತು. ಆ ಪಕ್ಕದ ಹಳ್ಳಿಯಲ್ಲಿ ಅವಳ ಒಬ್ಬನೇ ಒಬ್ಬ ತಮ್ಮ ವಾಸವಾಗಿರುತ್ತಿದ್ದ. ಅವನ ಒಂದು ಅಂಗಡಿಯೂ ಅಲ್ಲಿತ್ತು. ಅವಳ ತವರುಮನೆಯ ದೀಪವಾಗಿ ಅವನೊಬ್ಬನೇ ಒಬ್ಬ ಜೀವಿಸಿದ್ದ. ಅವನನ್ನೂ ಈ ನಾಯಿಗಳು ಹೊಡೆದಿರಬಹುದೆ?—: ಅವಳು ಗಟ್ಟಿಯಾಗಿ ಅಲ್ಲಿ ನೆರೆದ ತನ್ನ ಜನತೆಯನ್ನು ಪ್ರಶ್ನಿಸಿದಳು

'ನಮ್ಮ ಮಂದಿ ಅವರ ವಿರುದ್ಧ ಏನೂ ಮಾಡೂದಿಲ್ಲೇನು?'

ಯಾರೂ ಉತ್ತರಿಸಲಿಲ್ಲ. ಮೌನವಾಗಿದ್ದರು ಮಾತ್ರ. ಅವಳು ಮತ್ತೊಂದು ಸಲ ಪ್ರಶ್ನಿಸಿದಳು ಅವರನ್ನು.

'ನಮ್ಮವು ಯಾತರಿಂದ ಅವರ ವಿರುದ್ಧ ಕಾದಾಡಬೇಕು? ಅವರ ಹತ್ತರ ತೋಫು, ತುಬಾಕಿ, ಮದ್ದು, ಗುಂಡು, ವಿಮಾನ...."

ಅವಳು ಇನ್ನೇನನ್ನೊ ಹೇಳುತ್ತಲಿದ್ದಳು. ಆದರೆ ಅವರೆಲ್ಲರ ದೃಷ್ಟಿ ಪಶ್ಚಿಮದ ಬಾನಿನೆಡೆಗೆ ತಿರುಗಿದುವು. ಅವರಲ್ಲಿಯ ಒರ್ವ ಅರಚಿದ:

'ಅಕಾ, ಅಲ್ಲಿ ನೋಡ್ರಲ್ಲೆ:—ವೈರೀ ವಿಮಾನ..........ಓಡ್ರಿ..........ಓಡ್ರಿ.........'

ಹಸಿದ ಹದ್ದುಗಳ ಹಾಗೆ ಅಗಣಿತ ವಿಮಾನಗಳು ಆ ಅಪರಿಚಿತ ಹಳ್ಳಿಯ ಮೇಲೆ ಏರಿ ಬರುತ್ತಿದ್ದುವು. ಅಲ್ಲಿದ್ದ ಆ ಹತ್ತು ಹನ್ನೆರಡು ಜನಗಳೂ ಪೂರ್ವದಿಕ್ಕಿಗೆ ಓಟ ಕಿತ್ತರು. ಆ ವೃದ್ಧೆ ಹಾಗು ಜಪಾನೀ ತರುಣನನ್ನು ಬಿಟ್ಟರೆ ಅಲ್ಲಿ ಯಾರೂ ಉಳಿಯಲಿಲ್ಲ. ಎಲ್ಲೆಲ್ಲೂ ಕುಸ್ತಾದ ಗೋಡೆಗಳು, ಬೆಂಕಿಯಲ್ಲಿ ಬೆಂದ ಮನೆಗಳು, ಬಿದ್ದ ಗೋಡೆಗಳು, ಮಣ್ಣು ಇಟ್ಟಂಗಿಯ ರಾಶಿ, ಮತ್ತಿತರ ಭಗ್ನಾವಸ್ಥೆಯಲ್ಲಿರುವ ಸಾಮಾನುಗಳು. ಎಲ್ಲವೂ ಸ್ಮಶಾನದಂತೆ ನಿರ್ಜೀವ ಹಾಗು ಉದಾಸೀನವಾಗಿತ್ತು.

ಮಿಸೆಸ್ ವಾಂಗಳಿಗೆ ಹಸಿವೆಯ ಜ್ಞಾಪಕವಾಯಿತು. ಅವಳಿಗೀಗ ಹೇಳತೀರದಷ್ಟು ಹಸಿವೆಯಾಗಿತ್ತು. ಅವಳು ಆ ತಂಗುಳು ಬ್ರೆಡ್ಡನ್ನು ಬಾಯಲ್ಲಿಟ್ಟುಕೊಂಡು ಅಗಿಯಲಾರಂಭಿಸಿದಳು. ಆದರೆ ಅವಳ ದೃಷ್ಟಿ ಒಮ್ಮೆಲೆ ಆ ಗಾಯಗೊಂಡ ತರುಣನ ಮೇಲೆ ಬಿದ್ದಿತು. "ಪಾಪ!' ಎಂದು ಮರುಕಗೊಂಡಳು ಅವಳು. ನಿಜವಾಗಿಯೂ ಆತ ತರುಣನಂತೆಯೆ ಕಾಣಿಸುತ್ತಿದ್ದ. ತುಟಿಯ ಮೇಲಿನ ಸೂಕ್ಷ್ಮ ಮೀಸೆಗಳು, ಹಾಗು ಗದ್ದದ ಕೆಳಗಿರುವ ಗಡ್ಡಗಳು. ಏನೋ ಅನ್ನಿಸಿ ಅವಳು ಕೆಳಗೆ ಬಾಗಿದಳು. ಹಾಗು ಕೈಯಲ್ಲಿಯ ಒಂದು ತುಣುಕನ್ನು ಅವನ ಬಾಯಿಗೊಯ್ದಳು. ನಿಧಾನ-

ಹಾಗೆ ' ತನ್ನು ' ಎಂದಳು. ಆದರೆ ಅವನು ಬಾಯಿ ತೆರೆಯಲಿಲ್ಲ. ತೆರೆಯುವ ಸ್ಥಿತಿಯಲ್ಲೂ ಇರಲಿಲ್ಲ. ಗಾಬರಿಯಾಗಿ ಅವನ ಶರೀರ ಸ್ಪರ್ಶಿಸಿದಳು ತನ್ನ ಕೈಯಿಂದ. ಅದು ಹಿಮದ ಹಾಗೆ ಆಗಲೇ ತಣ್ಣಗಾಗಿತ್ತು !.... '

ಆಣೆಕಟ್ಟಿನ ಆ ಮೆಟ್ಟಿಲುಗಳ ಮೇಲೆ ಕುಳಿತು ಅವಳಿನ್ನೂ ಯೋಚಿಸುತ್ತಿದ್ದಳು. ಎಷ್ಟೋ ವಿಚಾರಗಳು ಅವಳ ಮುಂದೆ ಕುಣಿಯುತ್ತಿದ್ದುವು. ಈಗ ಅವಳ ಮನದ ಕಣ್ಣುಗಳೆದುರು ಬಂದು ನಿಂತುದು ಅಸಹಾಯ, ದೀನ, ದಲಿತ ಚೀನೀ ಜನತೆ. ಚಿಕ್ಕ ಬಾಲಕರು, ಸ್ತ್ರೀಯರು. ಅದರಲ್ಲಿಯೂ ವೆಗ್ಗನ ಹೆಂಡತಿಯಂತಹ ಗರ್ಭಿಣಿಯರು ಶರೀರದ ಮಾನವನ್ನು ಕಾಯ್ದುಕೊಂಡು ಹೇಗಾದರೂ ಓಡುತ್ತಿದ್ದರು. ಅವರ ಜತೆಗೇ ವಯಸ್ಸಿನಿಂದ ನಿರ್ಬಲರಾದ ವೃದ್ಧರು, ಪರಿಸ್ಥಿತಿಯಿಂದ ದುರ್ಬಲರಾದ್ಯಹತಭಾಗಿ ತರುಣರಿದ್ದರು. ಅವರನ್ನು ಬೆಂಬತ್ತಿದವರು ಕ್ರೂರ ಮುದ್ರೆಯ ಜಪಾನಿಗಳು.... ಪ್ರಚಂಡ ವಿಮಾನಗಳು, ಬಾಂಬುಗಳು, ಮಶಿನ್‌ಗನ್ನುಗಳು, ಬಂದೂಕುಗಳು ಅವರ ಜತೆಗೆ. ಒಂದೆಡೆಗೆ ಪ್ರಚಂಡ ಶಕ್ತಿವಂತ—ಬಲವಂತ ಸಶಸ್ತ್ರ ಸೈನ್ಯ. ಮತ್ತೊಂದೆಡೆಗೆ ಹೀನ, ದೀನ, ದುರ್ಬಲ ಜನತೆ.

ಹೀಗೆ ಪ್ರತೀಕಾರದ ವಿಚಾರದಲ್ಲಿ ಅವಳು ಸಮರಸಳಾದಾಗ, ಅವಳ ದೃಷ್ಟಿಗೆ ಆಕಸ್ಮಾತ್ತಾಗಿ ಎದುರಿನ ಆ ಆಣೆಕಟ್ಟಿನ ಬಾಗಿಲು ಕಾಣಿಸಿತು. ಯಾವುದೋ ವಿಚಾರ ಆಗ ಅವಳ ತಲೆಯಲ್ಲಿ ಮಿಂಚಿತು. ಎದೆ ಒಂದು ಸಲ ಬಲವಾಗಿ ' ಢವ-ಢವ ' ಸದ್ದು ಮಾಡಿತು. ಆದರೂ ಅವಳಾತ್ಮ ಸಾರಿ ಹೇಳಿತು:

' ಪ್ರತೀಕಾರ. ಹೌದು. ಪ್ರತೀಕಾರ ಮಾಡಲೇ ಬೇಕು. '

ಅವಳ ಮನಸ್ಸು ಇನ್ನೂ ಅತ್ತ-ಇತ್ತ ಹೊಯ್ದಾಡುತ್ತಿತ್ತು.

' ಆ ಪ್ರಚಂಡವಾದ ಆಣೆಕಟ್ಟಿನ ಬಾಗಿಲು ತೆರೆದರೆ ?— ರಾಕ್ಷಸನಂತೆ ಆ ನೀರನ್ನೆಲ್ಲ ವೈರಿಗಳ ಮೇಲೆ ಎರಗಲು ಬಿಟ್ಟರೆ ? '

' ಬಿಟ್ಟರೆ ಸುತ್ತಲಿನ ಪ್ರದೇಶವೆಲ್ಲ ಜಲಮಯವಾಗುತ್ತದೆ. ಶತ್ರುಗಳು ಮುಂದೆ ನುಗ್ಗಲಾರದ ಹಾಗೆ ತಡೆ ಮಾಡುತ್ತದೆ .... ನಮ್ಮ ಜಮೀನು ನಮ್ಮವಾಗಿಯೇ ಉಳಿಯುತ್ತವೆ. ಸಾವಿರಾರು ಮೈಲುಗಳ ಮುಂದೆ ಓಡುತ್ತಿರುವ ನನ್ನ ಚೀನೀಯ ಹಳ್ಳಿಗರು ಬದುಕಿ ಉಳಿಯಬಲ್ಲರು. ಗರ್ಭಿಣಿಯಾದ ವೆಗ್ಗನ ಪತ್ನಿ, ಅವಳ ಹೊಟ್ಟೆಯಲ್ಲಿಯ ಸುಕುಮಾರ ಜೀವ, ನಮ್ಮ ವಂಶದ ಒಂದೇ ಒಂದು ದೀಪ—ಬದುಕಿಕೊಳ್ಳಬಲ್ಲದು. ಶತ್ರುಗಳು ಅದೆಷ್ಟೇ ಸಂಶೋಧಿಸಿದರೂ ನಿಸರ್ಗವನ್ನು ಗೆಲ್ಲಲಾದೀತೆ ? '

ಆಧುನಿಕ ಜಗತ್ತಿನಲ್ಲಿ ಕೆಲವರು ವಿಮಾನದಿಂದ ಯುದ್ಧ ಮಾಡುತ್ತಾರೆ. ಹಲವರು ಬಾಂಬು, ಮಶಿನ್‌ಗನ್ ಮೊದಲಾದ ಸಾಧನಗಳನ್ನುಪಯೋಗಿಸುತ್ತಾರೆ. ಮತ್ತೆ ಕೆಲವರು ವಿಷಜಂತುಗಳ ಸಹಾಯ ಪಡೆಯುತ್ತಾರೆ; ಆದರೆ ಆ ಎಪ್ಪತ್ತು ವರುಷದ ಮುದುಕಿ, ನಿಶ್ಶಸ್ತ್ರ ಚೀನೀ ಮಹಿಳೆ, ಶತ್ರುಗಳ ಸಂಗಡ ಆಣೆಕಟ್ಟಿನ ಉಪಕರಣದಿಂದ ಯುದ್ಧಕ್ಕೆ ಸನ್ನದ್ಧಳಾದಳು.

ಅವಳ ಮನಸ್ಸು ಒಂದು ನಿರ್ಧಾರಕ್ಕೆ ಬಂದ ತಕ್ಷಣ ಅವಳು ಅಲ್ಲಿಂದ ಗಂಭೀರಳಾಗಿ ಎದ್ದು, ಆ ಗೇಟಿನ ಬಳಿ ಸಾರಿದಳು. ಆ ' ವಾಟರ್-ಗೇಟ'ನ್ನು ಹೇಗೆ ತೆರೆಯಬೇಕು ಎಂದು ಅವಳಿಗೆ ಚೆನ್ನಾಗಿ ಗೊತ್ತಿತ್ತು. ರೈತರಿಗೆ ನೀರು ಬೇಕೆನ್ನಿಸಿದಾಗಲೆಲ್ಲ ಅದನ್ನು ಕೊಂಚ ತೆರೆಯುತ್ತಿದ್ದರು. ಆದರೆ ಈಗ ಹಾಗಿರಲಿಲ್ಲ. ಅದನ್ನು ಸಂಪೂರ್ಣವಾಗಿ ತೆರೆದುಬಿಡಬೇಕಾಗಿತ್ತು. ಅದಕ್ಕಾಗಿ ಅವಳು ಮೇಲಿನಿಂದ ದಪ್ಪಗಿನ ಗಳು ಒಂದನ್ನು ಹುಡುಕಿ ತರಬೇಕಾಯಿತು. ಹಾಗೆಯೇ ಕೆಳಗಿಳಿದಳು. ಅವಳ ಲಕ್ಷ್ಯ ಒಮ್ಮೆ ಪಶ್ಚಿಮಕ್ಕೆ ಹೋಯಿತು. ಒಂದರಹಿಂದೊಂದು ಸಾಲ್ಗೊಂಡು ವೈರಿ ವಿಮಾನಗಳು ಅಬ್ಬರಿಸುತ್ತ ಬರುತ್ತಿದ್ದುವು. ದೂರದಲ್ಲೆಲ್ಲೋ ಬಾಂಬುದಾಳಿ ಆರಂಭವಾಗಿತ್ತು. ಅವಳು ಸಮಾಧಾನದಿಂದ ಒಮ್ಮೆ ಗಟ್ಟಿಯಾಗಿ ನಕ್ಕಳು. ಅವುಗಳಿಗೆ ಸ್ವಾಗತ ಬಯಸುವ ಹಾಗಿತ್ತು ಆ ನಗೆ! ಮರುಕ್ಷಣದಲ್ಲಿ ತನ್ನೆಲ್ಲ ಶಕ್ತಿಯನ್ನೂ ಕೇಂದ್ರೀಕರಿಸಿ ಗಳುವನ್ನು ಜಗ್ಗಿದಳು.

ನುಗ್ಗಿಬಂದ ಆ ಪ್ರಚಂಡ ಪ್ರವಾಹ, ರೆಪ್ಪೆ ಮಿಟುಕಿಸುವುದರಲ್ಲಿ ಅವಳ ದೇಹವನ್ನು ಒಂದು ಸಲ ತೂರಿ ಒಗೆಯಿತು. ಇನ್ನೊಂದು ನಿಮಿಷದಲ್ಲಿಯೆ ಅವಳ ದೇಹ ನೀರಿನಲ್ಲಿ ಮುಳುಗಿತ್ತು. ಎಡಗೈ ಮಾತ್ರ ಬಹುಸಂಖ್ಯೆಯಿಂದ ಬರುತ್ತಿರುವ ಶತ್ರು ವಿಮಾನಗಳಿಗೆ ಆಹ್ವಾನವೀಯುತ್ತಿತ್ತು !

ಕುಟಜಾರಿಷ್ಟ :— ಆಮಾಂಶ, ಅಜೀರ್ಣ,
ಹೊಟ್ಟೆ ಮುರಿಯುವದು ಮೊದಲಾದ
ವಿಕಾರಗಳಿಗೆ ಶ್ರೇಷ್ಠವಾದ
ಔಷಧ.

ಕಾಸಶ್ವಾಸಾರಿ :— ದಮ್ಮು, ಕೆಮ್ಮುಗಳಿಗೆ
ಅನುಭವಸಿದ್ಧ ಔಷಧ.

ನೂತನ ಆಯುರ್ವೇದ
ಕಾರ್ಯಾಲಯ ಲಿ.
ವಿಜಾಪುರ.

ಶಬ್ದಸ್ತ್ರಿಗಳು

ಪ್ರೊ. ಶ್ರೀರಾಮ ಪಾಟೀಲ ಬಿ. ಎ., ಬಿ. ಟಿ. ಧಾರವಾಡ

☆

ಇದೊಂದು ಭಾಷಾಶಾಸ್ತ್ರಕ್ಕೆ ಸಂಬಂಧಿಸಬಹುದಾದ ಬರೆಹ. ಭಾಷೆಯು ಇದುವರೆಗಿನ ಇತಿಹಾಸವನ್ನು ಪರಿಶೀಲಿಸಿದರೆ, ಮಾನವನು ಅದನ್ನು ಯಾವಾಗಲೂ ಸುಲಭಗೊಳಿಸುತ್ತ ನಡೆದಿರುವುದು ಕಂಡುಬರುತ್ತದೆ.

☆

ಶಬ್ದ ಜಗತ್ತು

ಜಗತ್ತಿನಲ್ಲಿಯ ಸುಮಾರು ೨ ಅಬ್ಜ ಜನರು, ಹೆಚ್ಚು ಕಡಿಮೆ ೧೫೦೦ **ಬೇರೆ ಬೇರೆ** ಭಾಷೆಗಳನ್ನು ಆಡುತ್ತಾರೆ. ಇವುಗಳಲ್ಲಿಯ ಸುಮಾರು ೩೦ ಭಾಷೆಗಳನ್ನು, ೧ **ಕೋಟಿಗಿಂತ ಹೆಚ್ಚು** ಜನರು ಆಡುತ್ತಾರೆ. ಇಂಡೋ ಯುರೋಪಿಯನ್ ಭಾಷೆಗಳನ್ನಾಡುವವರ ಸಂಖ್ಯೆ ಜಗತ್ತಿನ ಜನಸಂಖ್ಯೆಯ ಅರ್ಧದಷ್ಟು ಆಗುವುದು.

ಇಂಗ್ಲೀಷಿನ ಉದಾಹರಣೆ

ಇಂಗ್ಲೀಷ್ ಭಾಷೆಯು ಒಂದು ಮಿಶ್ರಣ. ಅದು ಜರ್ಮನ್, ಫ್ರೆಂಚ್, **ಡಚ್**, ಮತ್ತು ಸ್ಕ್ಯಾಂಡಿನೇವ್ಹಿಯಾದ ಶಬ್ದಗಳನ್ನು ಅಳವಡಿಸಿಕೊಂಡು ಬಹಳ ಸಂಪತ್ತು ಗಳಿಸಿದೆ. ಕನ್ಸಾಯಿಜ್ ಆಕ್ಸ್‌ಫರ್ಡ್ ಶಬ್ದಕೋಶದ ಸಾವಿರ ಪುಟಗಳನ್ನು ತಿರುವಿ ಹಾಕಿದರೆ, ಇಂಗ್ಲೀಷ್ ಭಾಷೆಯಲ್ಲಿಯ ಶಬ್ದಗಳು ಎಲ್ಲಿಂದ ಬಂದಿವೆ, ಎಷ್ಟು ಬಂದಿವೆ—ಎಂಬುದರ ಸಾಧಾರಣ ಕಲ್ಪನೆ ಬರುವುದು. ಇಂಗ್ಲೀಷ್ ಭಾಷೆಯ ನಿರುಕ್ತಿಯ ಅಂಕಿಸಂಖ್ಯೆಗಳು ಇಂತಿವೆ.

(i) **ರೋಮನ್ಸ್** ಶಬ್ದಗಳು. (ಲ್ಯಾಟಿನ್, ಫ್ರೆಂಚ್, ಇಟ್ಯಾಲಿಯನ್, ಸ್ಪೇನ್ ಮತ್ತು ಪೋರ್ತುಗೀಜ್ ಭಾಷೆಯಿಂದ ಬಂದ ಶಬ್ದಗಳು.) ನೂರರಲ್ಲಿ ಪ್ರಮಾಣ ೫೩·೬.

(ii) ಟ್ಯೂಟ್ಯಾನಿಕ್ (ಹಳೆಯ ಇಂಗ್ಲೀಷ್, ಸ್ಕ್ಯಾಂಡಿನೇವ್ಹಿಯಾ, ಮತ್ತು ಜರ್ಮನ್ ಭಾಷೆಯಿಂದ ಬಂದ ಶಬ್ದಗಳು) **ನೂರರಲ್ಲಿ ಪ್ರಮಾಣ** ೩೧·೧.

(iii) ಗ್ರೀಕ್ ಭಾಷೆಯಿಂದ ಬಂದ ಶಬ್ದಗಳು. ನೂರರಲ್ಲಿ **ಪ್ರಮಾಣ** ೧೦·೮.

ಶಬ್ದ ಸಾಹಿತ್ಯ

ಭಾಷೆಯ ಇತಿಹಾಸವನ್ನು ನಾವು ಅವಲೋಕಿಸಿದರೆ, ನಮ್ಮ **ಪೂರ್ವಜರು ಮಾಡುವ ತಪ್ಪುಗಳ** ಪುನರಾವೃತ್ತಿಯ ಕಥೆಯನ್ನೇ **ನಾವು ಓದಬಲ್ಲೆವು.**

ಯಾರೂ ೧೮ ವರುಷಕ್ಕೆ **ಮೊದಲು,** ತನ್ನ **ತಾಯಿನುಡಿ**ಯನ್ನು ಸ್ಪಷ್ಟವಾಗಿ ಮಾತನಾಡಲಿಕ್ಕೆ **ಮತ್ತು** ಸರಾಗವಾಗಿ ವ್ಯಾಕರಣಕ್ಕೆ ಸರಿಯಾಗಿ ಬರೆಯಲಿಕ್ಕೆ ಶಕ್ತರಾಗುವುದಿಲ್ಲವೆಂದು ತಿಳಿದು ಬಂದಿದೆ. ಎರಡು ಭಾಷೆಗಳನ್ನು ಸ್ವರೋಚ್ಚಾರಗಳ ಆಘಾತಗಳನ್ನು ಅನುಲಕ್ಷಿಸಿ ಅವುಗಳ ಮೇಲೆ ಪ್ರಭುತ್ವವನ್ನು ಪಡೆಯಬೇಕಾದರೆ, ಮನುಷ್ಯನ ಜೀವಮಾನವೇ **ಬೇಕೆಂದು ಹೇಳಬಹುದು.**

ಪಾರಿಭಾಷಿಕ ಶಬ್ದಗಳನ್ನುಳಿದರೆ ಸಾಮಾನ್ಯವಾಗಿ ಮಾತನಾಡಲಿಕ್ಕೆ ಮನುಷ್ಯನಿಗೆ ೧೭೦೦ ಶಬ್ದಗಳು **ಸಾಕಾಗಬಹುದು.**

ಒಂದು ಭಾಷೆಯನ್ನು ಕಲಿಯಬೇಕಾದರೆ **ಮೂರು ಸಂಗತಿಗಳು ಅವಶ್ಯವಾದುವುಗಳು ;**

೧. ಸರಲವಾಗಿ ಓದುವುದು.

೨. ಸರಲವಾಗಿ ಮಾತನಾಡುವುದು **ಮತ್ತು ಬರೆಯುವುದು.**

೩. ಇನ್ನಿತರರು ಮಾತನಾಡಿದುದನ್ನು **ಗ್ರಹಿಸಿ ಸಂಭಾಷಣೆ** ಮಾಡುವುದು.

ಕೇವಲ ತಪ್ಪುತಡೆಗಳಿಲ್ಲದೆ ಮಾತನಾಡಲಿಕ್ಕೆ ೧೫೦೦ ರಿಂದ ೨೦೦೦ ಶಬ್ದಗಳ ಸಾಹಿತ್ಯ ಆವಶ್ಯಕವಾದುದು. **ಆದರೆ ಓ** ಅರ್ಥಮಾಡಿಕೊಳ್ಳಬೇಕಾದರೆ ಅನೇಕ **ಸರೂಪ—ಸಾರ್ಥ ಶಬ್ದ**ಗಳನ್ನು ಅರಿತಿರಬೇಕಾಗುವುದು. ಅಲ್ಲದೆ **ವ್ಯಾಕರಣದ ಹಲವು** ನೀತಿನಿಯಮಗಳನ್ನು **ತಿಳಿದುಕೊಳ್ಳಬೇಕಾಗಿರುವುದು.** ೧೫೦೦ ಶಬ್ದಗಳ ಸ್ವಾದ ತಿಳಿದುಕೊಂಡಿರುವುದು **ಸರಲವಾಗಿ ಅರ್ಥ**ವಾಗಲಿಕ್ಕೆ ಸಹಕಾರಿಯಾಗುವುದು.

ಕನ್ನಡದ ಮೋಲ್ಡ್

ಕಾರಂತರ ಕನ್ನಡ-ಕನ್ನಡ ಅರ್ಥಕೋಶವನ್ನು **ತಿರುವಿ**ಹಾಕಿದ ನಮಗೆ ಅನೇಕ ಸ್ವಾರಸ್ಯದ ಸಂಗತಿಗಳು **ತಿಳಿದುಬರುವುವು.** ಮಾದರಿಗಾಗಿ ಇಲ್ಲಿ ಮೊದಲಿನ ಹತ್ತು ಪುಟಗಳ **ಅಂಕಿಸಂಖ್ಯೆಗಳನ್ನು** ಕೊಡಲಾಗಿದೆ.

ಪುಟ	ಕನ್ನಡ (ಶಬ್ದಗಳು)	ಸಂಸ್ಕೃತ (ಶಬ್ದಗಳು)	**ಇತರ** (ಶಬ್ದಗಳು)
೧	೧	೨೪	—
೨	೨೩	೯	—
೩	—	೨೮	—
೪	೧೨	೧೯	—
೫	೨೭	೪	—
೬	೫	೨೪	—
೭	೧೩	೩೩	—
೮	೧೫	೧೬	೨
೯	೩೨	೧೬	—
೧೦	೯	೧	—
ಒಟ್ಟು	೧೬೬	೧೬೪	೨

ಕನ್ನಡಶಬ್ದಗಳು	ಸಂಸ್ಕೃತಶಬ್ದಗಳು	ಇತರಶಬ್ದಗಳು
೫೦೩	೭೧೬	೪

ಅಕಾರದೊಳಗೆ ಒಟ್ಟು ೧೨೨೩ ಶಬ್ದಗಳಿವೆ. ಅವುಗಳಲ್ಲಿ ಕನ್ನಡ ಶಬ್ದಗಳು ೫೦೩, ಸಂಸ್ಕೃತಶಬ್ದಗಳು ೭೧೬ ಮತ್ತು ಇತರ ಶಬ್ದಗಳು ನಾಲ್ಕು ಇವೆ. ಇದನ್ನು ಆಧಾರವಾಗಿ ಹಿಡಿದರೆ ನೂರಕ್ಕೆ ೪೧.೧ ಕನ್ನಡ ಶಬ್ದಗಳೂ, ೫೮.೫ ಸಂಸ್ಕೃತಶಬ್ದಗಳೂ, .೪ ಇತರ ಶಬ್ದಗಳೂ ಇವೆ. ಪ್ರತಿ ಪುಟಕ್ಕೆ ಸರಾಸರಿ ೩೭ ಶಬ್ದಗಳನ್ನು ಹಿಡಿದರೆ, ಅವುಗಳಲ್ಲಿ ೧೫ ಕನ್ನಡ ಶಬ್ದಗಳೂ ೨೨ ಸಂಸ್ಕೃತಶಬ್ದಗಳೂ ಸರಾಸರಿಕೆಯಾಗಿ ಇದ್ದಂತಾಯಿತು. ೫ ಕನ್ನಡ ಶಬ್ದಗಳಿಗೆ ೭ ಸಂಸ್ಕೃತ ಶಬ್ದಗಳು ಬೀಳುವುವು. ಕನ್ನಡ ಸಂಸ್ಕೃತದ ಪ್ರಮಾಣ ೫: ೭ ಎಂದಂತಾಗುವುದು.

ಪಶುಸಂಪತ್ತು

ಪ್ರಾಣಿವರ್ಗವನ್ನೆಲ್ಲ ನಾವು ನಿರೀಕ್ಷಿಸಿದರೆ, ಒಂದೊಂದರಲ್ಲಿ ಒಂದೊಂದು ಭಾಷೆಯ ಮುಂಗುರುಹು ನಮಗೆ ಕಾಣಬರುತ್ತದೆ. ಆಕಳು ಕರೆಯುವ "ಹಂಬಾ" ಎಂಬ ಧ್ವನಿಯಲ್ಲಿ ಹಕಾರ ಬಕಾರಗಳ ಸ್ಪಷ್ಟ ಉಚ್ಚಾರವು ನಮಗೆ ಕಾಣಬರುತ್ತದೆ. ಕಾಗೆಯ ಕಕಾರವೂ, ಕೋಳಿಯ ಕಕಾರವೂ ಸ್ಪಷ್ಟವಾಗಿವೆ. ನರಿಗಳ ಧ್ವನಿಯು ಬಾಲಕರು ಒದರುವ ಧ್ವನಿಗೆ ಎಷ್ಟುಮಾತ್ರದಿಂದಲೂ ಭಿನ್ನವಾಗಿಲ್ಲ. ಈಗಲೇ ಈದ ನಾಯಿಯು ತನ್ನ ಚಿಕ್ಕ ಮರಿಗಳಿಗಾಗಿ ಸ್ಥಳವನ್ನು ಹುಡುಕಲು ಯತ್ನಿಸುತ್ತಿರುವಾಗ, ಅವಕ್ಕೆ ಆಹಾರ ದೊರಕಿಸಲು ಪ್ರಯತ್ನಪಡುತ್ತಿರುವಾಗ — ಬೊಗಳಿದ ಸ್ವರಕ್ಕೂ ಹೆಂಗುಸಿನ ಅಸಹಾಯ ಸ್ಥಿತಿಯ ದುಃಖಕೂ ಜನಕ್ಕೂ ಬಹಳ ರೀತಿಯಿಂದ ಹೋಲಿಕೆ ಕಂಡುಬರುವುದು. ಗಿಳಿ, ಸಾರಿಕೆ ಮುಂತಾದುವುಗಳು ಮನುಷ್ಯರಾಡುವ ಮಾತುಗಳಲ್ಲಿ ಕೆಲವನ್ನಾದರೂ ಸುಸ್ಪಷ್ಟವಾಗಿ ಉಚ್ಚರಿಸಬಲ್ಲುವು.

ಎಲ್ಲ ಪ್ರಾಣಿ-ಪಶುವರ್ಗವು ಸ್ವರ ಹೊರಡಿಸಬಲ್ಲವೆಂಬ ಮಾತು ಅಷ್ಟು ಮಹತ್ತ್ವದ್ದಲ್ಲ. ಆದರೆ ಅವು ಒಂದೇ ರೀತಿಯ ವಿಶಿಷ್ಟ ಸ್ವರಗಳನ್ನು ಹೊರಡಿಸುವುವು ಎಂಬ ಮಾತು ಮಹತ್ತ್ವದ್ದಾಗಿದೆ. ಅದೂ ಅಲ್ಲದೆ, ಆಯಾ ಪಕ್ಷಿಗಳ, ಪ್ರಾಣಿಗಳ ಕಂಠಗಳಂತೆ ಸ್ವರಗಳೂ ಕೋಮಲವಾಗಿರಬಹುದು, ಒರಟಾಗಿರಬಹುದು. ಆದರೆ ಸ್ವರ-ಕಂಪನಕ್ಕೆ ನಾವು ಗಮನವೀಯದೆ, ಸ್ವರಸ್ಪಷ್ಟತೆಗೆ ಪ್ರಾಧಾನ್ಯ-ಕೊಡಬೇಕಾಗಿದೆ. ಇನ್ನೊಂದು ವಿಶೇಷವೆಂದರೆ ಎಲ್ಲ ಪಕ್ಷಿವರ್ಗ-ದಲ್ಲಿಯೂ ಕ, ಚ ವರ್ಗಗಳ ಪ್ರಾಧಾನ್ಯ ಪ್ರಬಲವಾಗಿದೆ. ಗುಬ್ಬಿ-ಗಳ 'ಚಿಂವ್ ಚಿಂವ್' ಸ್ವರಗಳು, ಕೋಗಿಲೆಯ, ಕೋಳಿಯ, ಕಾಗೆಯ 'ಕುಹೂ' 'ಕುಕೂಕೂ' 'ಕಾಕಾ' ಶಬ್ದಗಳೂ ಇದಕ್ಕೆ ಸಾಕ್ಷಿಯನ್ನೇ ಕೊಡುತ್ತಿವೆ. ಸಿಟ್ಟುಬಂದಾಗ, ಆನಂದದಲ್ಲಿದ್ದಾಗ, ಆಟವಾಡುತ್ತಿರುವಾಗ ಸ್ವರವೂ ಬದಲಾವಣೆಯಾಗುತ್ತಿದೆ-ಯೆಂಬುದೂ ತಿಳಿಯಬೇಕಾಗಿದೆ.

ಬಾಲಭಾಷೆ

ಬಾಲಕರಿಗೆ ಅತಿಸರಳವಾಗಿ ಉಚ್ಚರಿಸಬರುವ ವರ್ಣಗಳೆಂದರೆ ಪವರ್ಗವು. ಯಾಕೆಂದರೆ ಇವುಗಳ ಉಚ್ಚಾರಕ್ಕೆ ಉಪಯೋಗಿಸ-ಲಾಗುವ ಸ್ನಾಯುಗಳೂ ಮತ್ತು ಮೊಲೆಕುಡಿಯಲು ಉಪಯೋಗ-ವಾದ ಸ್ನಾಯುಗಳೂ ಒಂದೇ ಎಂದು ಕೆಲವರು ಅಭಿಪ್ರಾಯ-ಪಡುವರು. ಪವರ್ಗದ ತರುವಾಯ ಹಗುರಾದ ವರ್ಣಗಳೆಂದರೆ ತವರ್ಗವು. ವರ್ಣಮಾಲೆಯಲ್ಲಿಯೇ ಅತಿಕಠಿಣವಾದ, ಉಚ್ಚರಿ-ಸಲು ಬಿಗಿಯಾದ ಅಕ್ಷರಗಳೆಂದರೆ ಶ, ಷ, ಸ ಗಳು. ಷದ ಉಚ್ಚಾರವು ಕನ್ನಡದಲ್ಲಿ ಕಡಮೆಯಿದ್ದರೂ ಶ ಮತ್ತು ಸ ಕಲಿಸು-ವಾಗ ಶಿಕ್ಷಕರು ಬಹಳ ಜಾಗರೂಕತೆ ವಹಿಸಬೇಕಾಗುವುದು. ಸಂಸ್ಕೃತದ ನಾರಿಕೇಲ, ನಾಲಿಕೇರಗಳೂ, ಕನ್ನಡದ ಎಲರು, ಎರಲು; ಅರಲು ಅಲರು; ಮರಲ್, ಮಲರ್‌ಗಳೂ ಲ, ರ ಗಳ ಅಭೇದವನ್ನೇ ಹೇಳುತ್ತಿವೆ. ಬಾಲಕರು ರಕಾರದ ಬದಲು ಲ, ಡ, ಲಕಾರಗಳನ್ನು ಉಪಯೋಗಿಸುವರು. (ರಾಮ=ಲಾಮ; ಎರಡು=ಎಡಡು; ರೊಕ್ಕ=ತೊಕ್ಕ) ಶ, ಷ, ಸ, ಗಳ ಬದಲು ತಕಾರವು ಬರುವುದು (ಶಶಿ=ತತಿ; ಸಾಕು=ತಾಕು; ಕಿಶಿ=ಕಿತೆ;) ಒಬ್ಬ ಬಾಲಿಕೆಯು ಪ್ರಭಾವತಿಯ ಹೆಸರನ್ನು "ಫಪ್ಪಪ್ಪಾ" ಎಂದು ನುಡಿಯುತ್ತಿದ್ದಳು.

ಬಾಲಕರ ಶಬ್ದಸಂಪತ್ತಿಯ ಬೆಳವಣಿಗೆಯು ಬಹಳ ವಿಚಿತ್ರ-ವಾಗಿ ಆಗುವುದು. ಆರಂಭಕ್ಕೆ ಕೂಸಿಗೆ ಸ್ವರಜ್ಞಾನವೇ ಹೊರತು ಬೇರೊಂದನ್ನು ಗುರುತಿಸಲು ಬರುವಂತಿಲ್ಲ. ಒಂದೆರಡು ತಿಂಗಳ ಕೂಸು, ಉಶ್ ಎಂದರೆ ತನ್ನ ಮೋರೆಯನ್ನು ನಮ್ಮ ಕಡೆಗೆ ಹೊರಳಿಸುವುದು. ಜೋರಿನಿಂದ "ಏ" ಎಂದು ಒದರಿದರೆ ಮೋರೆ-ಕಿವುಚಿ ಅಳುವುದು. ತರುವಾಯ ಅದಕ್ಕೆ ಪರಿಚಯವಾಗುವುದು ಅವರ ಹೆಸರು. ಓಗೊಡುವ ಸ್ಥಿತಿಯಲ್ಲಿಲ್ಲದಿದ್ದರೂ ಅದು ಒದರಿದರೆ ಓಡಿಬರುವುದು. ಅನ್ನಪ್ರಾಶನವಾದ ಮೇಲೆ ಅವಕ್ಕೆ ಬೇರೆ ಕೆಲವು ಸಂಗತಿಗಳು ತಿಳಿದು ಬರುವುವು.

೫೦ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಆನಕ್ಕೆ ಅದರದೇ ಆದ ಒಂದು ಶಬ್ದಭಂಡಾರ ನಿರ್ಮಿತವಾಗುವುದು. ಒಂದೇ ಶಬ್ದ ಅನೇಕ ಅರ್ಥಗಳನ್ನು ಕೊಡುವುದು. 'ಪಾಪಾ' ಎಂದರೆ ಒಂದು ಗೊಂಬೆಯಾಗಬಹುದು; ಚಿತ್ರವಾಗಬಹುದು; ತನ್ನಂತೆಯೇ ಇರುವ ಇನ್ನೊಂದು ಕೂಸೂ ಆಗಬಹುದು. 'ಅವ್ವೂ' ಎಂದರೆ ಹಾಲು ಆಗಬಹುದು; ನೀರು ಆಗಬಹುದು; ಬೇರೊಂದು ಪ್ರವಾಹೀ ಪದಾರ್ಥವೂ ಆಗಬಹುದು. 'ಇಸ್ಸಿ' ಎಂದರೆ ಹೊಲಸಾಗಬಹುದು; ಕೈಕಾಲಿಗೆ ಆಗಬಹುದು.

ಸರಲವಾಗಿ ಅನ್ನಬಹುದಾದ ಸ್ವರಕ್ರಮದಲ್ಲಿಯೇ ಅವನ ವಸ್ತುವಾಚಕಗಳೂ ರೂಢನಾಮಗಳೂ ಸಿದ್ಧವಾಗುವುವು. ಅವನ ಪಾಲಿಗೆ ಬೆಕ್ಕು=ಮಾವ್ವೂ, ಆಕಳು ಅಥವಾ ಅದರಾಕಾರದ ಬೇರೆ ಪ್ರಾಣಿ=ಅಂಬಾ; ಅನ್ನ=ಮಮ್ಮಾವ್; ಕುದುರೆ=ಜಾಜಾ; ನಾಯಿ=ವವ್ವವ್; ಮೋಟಾರು=ಪಪ್ಪೊಂ; ಘಾಯು=ಬಾವ್ವೂ ಆಗುವುವು.

ಮೊದಲಿನ ಐದು ವರುಷದ ಕಾಲಾವಧಿಯನ್ನು ಮೂರು ಭಾಗಗಳಾಗಿ ಮಾಡಬಹುದು:

೧. ಮೌನವಾಗಿ ಅರ್ಥಮಾಡುವುದು.
೨. ಸ್ವತಂತ್ರ ಶಬ್ದಸಾಹಿತ್ಯ.
೩. ತೊದಲು.

ಮೊದಲನೆಯ ಕಾಲವು ಕೆಲವು ತಿಂಗಳುಗಳ ಮಟ್ಟಿಗೆ ಇರುವುದು. ಹೇಳಿದ ಮಾತು ಅರ್ಥವಾಗಬಹುದು. ಆದರೆ ಸ್ವಯಂ ವಾಚಾಶಕ್ತಿ ಅದಕ್ಕಿರುವುದಿಲ್ಲ. ಎರಡನೆಯ ಕಾಲದಲ್ಲಿ ಮೂಲ-ಶಬ್ದಗಳಿಗೆ ಸಂಬಂಧವಿಲ್ಲದ ಬೇರೆ ಶಬ್ದಗಳ ಉದ್ಭವವೇ ಆಗುವುದು. ಮೂರನೆಯ ಕಾಲದಲ್ಲಿ—ಮೂಲ ಶಬ್ದಗಳನ್ನು ಸಂಪೂರ್ಣವಾಗಿ ಉಚ್ಚರಿಸಲಾಗುವುದಿಲ್ಲ. ಅವಕ್ಕೆ ಆನಿಕಟವಾದ ಉಚ್ಚಾರವಾಗುವುದು. ಮೂಲ ಶಬ್ದಗಳಿಗೆ ಕಠಿಣವಾದ ಕೆಲ ಅಕ್ಷರಗಳನ್ನು ಬದಲಿಸಲಾಗುವುದು.

ಈ ಮೂರು ಅವಸ್ಥೆಗಳನ್ನು ದಾಟಿದರೂ ಬಾಲಕನಿಗೆ ಇನ್ನೂ ಅಂಕೆಗಳ, ವೇಳೆಯ-ತಾರತಮ್ಯವಿರುವುದಿಲ್ಲ. ಐದು ಬಿಸ್ಕೀಟು ಇಟ್ಟು 'ಎಷ್ಟು ಅವೆ?' ಎಂದು ಕೇಳಿದರೆ 'ಮೂರು' ಎನ್ನಬಹುದು. 'ಎಂದು ತಂದಿತ್ತು?' ಎಂದು ಕೇಳಿದರೆ 'ನಾಳೆ ತಂದಿತ್ತು' ಎಂದು ಉತ್ತರಿಸುವುದು. ೬ನೆಯ ವರುಷದಿಂದ ಅವನ ದೇಹಶಕ್ತಿ ಬೆಳೆವುದು. ಪ್ರತಿಯೊಂದು ಅವಯವ, ಇಂದ್ರಿಯದ ಮೇಲಿನ ಹಿಡಿತ ಪ್ರಬಲವಾಗುತ್ತ ಹೋಗುವುದು. ಅವನ ನೆನಪಿನ ಶಕ್ತಿ ಬೆಳೆಯುವುದು. ನಾಲಗೆಯು ಅವನು ಹೇಳಿದಂತೆ ಕೇಳಹತ್ತುವುದು.

ಹಳೆಗನ್ನಡದ ವೈಭವ

ಕೇಶಿರಾಜನು ಶಬ್ದಮಣಿದರ್ಪಣದಲ್ಲಿ ಕೊಟ್ಟ ೯೬೮ ಧಾತುಗಳಲ್ಲಿ ೩೦೭ ಧಾತುಗಳ ರೂಪವೂ ಬದಲಾಗಿಲ್ಲ; ಅರ್ಥವೂ ಬದಲಾಗಿಲ್ಲ. ೧೧೧ ಧಾತುಗಳ ರೂಪ ಮಾತ್ರ ಬದಲಾಗಿದೆ; ಬದಲಾಗಿಲ್ಲ. ೫೪ ಧಾತುಗಳ ಕೇವಲ ನಾಮವಾಚಕಗಳು ಅಸ್ತಿತ್ವದಲ್ಲಿವೆ. ೪೫ ಧಾತುಗಳು ಬಳಕೆಯಲ್ಲಿದ್ದರೂ ಅರ್ಥ ಬದಲಾಗಿದೆ. ಅಂತೂ ಒಟ್ಟು ೫೧೭ ಧಾತುಗಳು ಯಲ್ಲಿವೆ. ಕನ್ನಡದಲ್ಲಿ ಏನೂ ಬದಲಾಗದ ೨೬೮ ಶಬ್ದಗಳ ಇಂಗ್ಲೀಷ್ ಶಬ್ದಗಳನ್ನು ತೆಗೆಯಲಾಗಿ, ಕೆಲವು ಅಂಶಗಳು ಕಂ ಬಂದುವು. ಈ ಎರಡುನೂರಾ ಅರುವತ್ತೆಂಟು ಶಬ್ದಗಳಲ್ಲಿ ಆಂಗ ಸ್ಯಾಕ್ಸನ್‌ನಿಂದ ಹುಟ್ಟಿದುವು ೧೬೪, ಲ್ಯಾಟಿನ್‌ನಿಂದ ೪೯ ಬಂದ ಫ್ರೆಂಚ್ ಭಾಷೆಯಿಂದ ೧೩, ಇತರ ಭಾಷೆಗಳಿಂದ ಹತ್ತು ಬಂದ ಮೂರು ಶಬ್ದಗಳ ವ್ಯುತ್ಪತ್ತಿ ತಿಳಿಯಲಿಲ್ಲ. ಹತ್ತೊಂಬತ್ತು ಶ ಗಳಿಗೆ ಪ್ರತಿಯಾದ ಒಂದೇ ಶಬ್ದವಿರಲಿಲ್ಲ.

ಶಬ್ದಮಣಿದರ್ಪಣದಲ್ಲಿಯ ೪೫೧ ಧಾತುಗಳು ಬಳಕೆಯಿ ನಾಶವಾಗಿವೆ. ನೂರಕ್ಕೆ ೪೬ ಧಾತುಗಳು ನಾಶವಾಗಿವೆ ಹಾಗಾಯಿತು. ಕೇಶಿರಾಜನ ಕಾಲ ೧೩೦೦ ಎಂದು ಹೇಳು ಎಂದರೆ ಈ ೬೦೦ ವರುಷದ ಕಾಲಾವಧಿಯಲ್ಲಿ ೪೫೧ ಧಾತು ನಾಶಹೊಂದಿವೆ ಎನ್ನಬಹುದು. ಎಂದರೆ ಸರಾಸರಿ ೧೦೦ ವರು ೭೫ ಧಾತುಗಳು ಬಿಲವಾಗಿವೆ. ಇದು ಕೇವಲ ಧಾತುಗಳ ಯಕ್ಕೆ ಆಯಿತು. ಇನ್ನು ಉಳಿದ ಶಬ್ದಗಳ ಭವಿತವ್ಯವ ಇತಿಹಾಸವನ್ನೂ ಮನನ ಮಾಡಿದರೆ, ಇದಕ್ಕಿಂತಲೂ ವಿಚಿತ್ರ ಸಂಗತಿಗಳು ಹೊರಬರಬಹುದು.

ಕನ್ನಡದ ಈ ಸವಕಳಿಯನ್ನು ನೋಡಿ, ಹದಿಮೂರನೆಯ ಮಾನದ ಭವ್ಯಸಂಪತ್ತಿಯನ್ನು ಕಂಡು, ಯಾವ ಕನ್ನಡಿಗನಿಗೆ ಕೆನಿಸಲಿಕ್ಕಿಲ್ಲ? ಆದರೆ ಈಗಿನ ಬಡತನಕ್ಕೆ ಹಳಹಳಿಸಿ ಲಾಭ ಸಜೀವ ಭಾಷೆ ದಿನದಿನಕ್ಕೂ ಬದಲಾಗುತ್ತಿರುವುದು. ಕನ್ನಡ ವನ್ನು ಉಳಿಸಿಕೊಳ್ಳಲು ಹಿಂದೆ ಪ್ರಯತ್ನಗಳು ಆಗಿವೆ. ಆದ ಪ್ರಯತ್ನಗಳು ಸಾರ್ವಜನಿಕ ಓಘದಲ್ಲಿ ಕೊಚ್ಚಿಹೋಗಿವೆ. ಭ ಬೆಳೆಯುತ್ತಲೇ ಇವೆ. ಹಳೆಯ ಶಬ್ದಗಳು, ಪ್ರತ್ಯಯಗಳು, ಧಾತು ಪ್ರಕೃತಿಗಳು ಷಿಲವಾಗುತ್ತಿವೆ. ಹೊಸ ಶಬ್ದಗಳು, ಪ್ರತ್ಯಯ ಧಾತುಗಳು, ಪ್ರಕೃತಿಗಳು ತಲೆಯೆತ್ತಿವೆ. ಭಾಷೆಯ ಬಣ್ಣ ಲಾಗುತ್ತಲಿದೆ, ಸಂಪತ್ತಿ ವೃದ್ಧಿಯಾಗುತ್ತಲಿದೆ. ಹೀಗೆ ಆಗಬೇ ಅದು ಮಾನವ ಸ್ವಭಾವಕ್ಕೆ ಅನುಗುಣವಾಗಿದೆ. ಅವನ ಪ್ರಗ ಶಬ್ದಸಂಪತ್ತಿ ಹೆಚ್ಚಾಗಿರಿವರೆ, ಅದರಲ್ಲಿ ತಲೆತಗ್ಗಿಸುವಂತಹದೇ ಇಲ್ಲ. ಭಾಷೆಯ ಇತಿಹಾಸವನ್ನು ನಾವು ಅವಲೋಕಿಸಿ ಮನುಷ್ಯನು ಅದನ್ನು ಯಾವಾಗಲೂ ಸುಲಭವಾಗಿಸುತ್ತ ಹೋ ರುವನು. ಒಂದು ಕಾಲಕ್ಕೆ ಅಪವಾದವಿದ್ದುವುಗಳೇ ಮು ನಿಯಮಗಳಾಗಿವೆ. ಕಠೋರ ನಿಯಮಗಳು ಶಿಥಿಲವಾಗಿವೆ. ಶಿ ನಿಯಮಗಳು ಉರುಳಿ ಹೋಗಿವೆ. ಹೊಸ ನಿಯಮಗಳು ಪದಾರ್ಪ ಮಾಡಹತ್ತಿವೆ. ಇದು ಭಾಷಾ ಇತಿಹಾಸದ ತಿರುಳು; ಶ ಸಂಪತ್ತಿಯ ಸಾಹುಕಾರಿಕೆ.

ಅವನಾವ ಗಾರುಡಿಗ?

ಶ್ರೀ. ಡಿ. ಎಸ್. ಕರ್ಕಿ ಎಂ. ಎ., ಪಿ ಎಚ್. ಡಿ. ಬೆಳಗಾಂವಿ

★

ಅವನಾವ ಗಾರುಡಿಗ ಒಡಲಿನಲ್ಲಿ....
ಒಲುಮೆಯನು ತುಂಬಿದಾನೆ ?
ಎಂತೆಂತು ಅದರ ತಂತುಗಳ ಎಳೆದು....
ಈ ಜಗವ ಹಮ್ಮಿದಾನೆ ? ೧

ಕಣ್ಮುಂದೆ ಕನಸ ಹೆಣೆಹೆಣೆದು ಜಗಕೆ....
ಜಗವನ್ನೆ ಕುಣಿಸುತಾನೆ !
ಜಿನು-ಜಿನುಗು ಜೇನಿನೆಳೆಗಳನು ಬಿಗಿದು....
ಉಕ್ಕನ್ನೆ ಮಣಿಸುತಾನೆ ! ೨

ಎಲ್ಲಿಹುದು ಒಲವು ? ಎಲ್ಲಿಹುದು ಒಡಲು ?....
ಇದರಂತವೇನೆ ಏನೆ !
ಎಂತೇನೊ ಮಿಡಿಯುತಿದೆ ಜೀವ ತಂತಿ....
ತಂತಾನೆ ತಾನೆ ತಾನೆ. ೩

ಸಂತತವು ಪ್ರಕಟವುದೀ ಒಲವಿನೂಟ...
ಜಗಜಗದ ಜೀವವಾಗಿ —
ಎಲ್ಲವನು ಸೇರಿ ಎಲ್ಲವನು ಮೀರಿ....
ನಿಲ್ಲುವುದನಂತವಾಗಿ. ೪

ಆ ಮಾಟಗಾರ ಕಿರುಮನೆಯೊಳೆಂಥ...
ಹಿರಿಯಾಟ ಹೂಡಿದಾನೆ !
ಭಾವನೆಯ ತೀಡಿ ನವರಸವ ಕೋಡಿ
ರಸ ರಂಗ ಮಾಡಿದಾನೆ. ೫

ಅವನಾವ ಗಾರುಡಿಗ ಒಡಲಿನಲ್ಲಿ....
ಒಲುಮೆಯನು ತುಂಬಿದಾನೆ ?
ಎಂತೆಂತು ಅದರ ತಂತುಗಳ ಎಳೆದು....
ಈ ಜಗನ ಹಮ್ಮಿದಾನೆ ? ೬

.... ಭಕ್ತಿ ....

ಶ್ರೀ. ಭುಜೇಂದ್ರ ಮಹಿಷವಾಡಿ, ಸಾಂಗಲಿ

★

೧

ಕುಣಿಸಿದೊಲು ಕುಣಿಯುವೆನು
ಮಣಿಸಿದೊಲು ಮಣಿಯುವೆನು
ನಾ ನಿನ್ನ ಸೂತ್ರದಾ ಗೊಂಬೆಯಾಗಿ !
ಎಳೆದತ್ತ ನೂಗುವೆನು
ಸೆಳೆದತ್ತ ಸಾಗುವೆನು
ತೂಗುವೆನು ಬಾಗುವೆನು ಭಕ್ತನಾಗಿ !

೨

ಕುಂಬಾರ ನೀನಿರುವೆ,
ಹಸಿಕೆಸರು ನಾನಿರುವೆ;
ನೀ ಮಾಡಿದಾ ಗಡಿಗೆ ನಾನಾಗುವೆ !
ಹಿರಿಶಿಲ್ಪಿ ನೀನಿರುವೆ
ಕಿರುಶಿಲೆಯು ನಾನಿರುವೆ
ನೀ ಕಡೆದ ತೆರ ನಾನು ಮೂರ್ತಿಗೊಳುವೆ !

೩

ನಾ, ಬೇಡವೆನಲಾರೆ
ನಿನಗಡ್ಡ ಬರಲಾರೆ,
ಮನಬಂದ ತೆರನೆನ್ನ ನಾಡಿಸಯ್ಯ !
ಆಳಾಗಿಸೆನ್ನನ್ನು—
ಅರಸಾಗಿಸೆನ್ನನು—
ಅಭಿಮಾನವನೆ ಮಾತ್ರ ಅಡಗಿಸಯ್ಯ !

೪

ನೂಕಿದರೆ ಬೀಳುವೆನು
ಎತ್ತಿದರೆ ಏಳುವೆನು ;
ಮಾಡಿದ್ದು ಆಗುವೆನು ಮನಸಿನಂತೆ !
ನಿನ್ನಾಜ್ಞೆಯಾದಂತೆ
ಬಾಳುವೆನು ನಾನಂತೆ
ಹುಟ್ಟುವೆನು ಸಾಯುವೆನು ಬಯಸಿದಂತೆ !

೫

ನಿಂತಲ್ಲಿ ನಿಲುವೆನ್ನೈ
ಹೋದಲ್ಲಿ ಬರುವೆನ್ನೈ
ಬೆಂಬಿಡಿದು ಇರುವೆನ್ನೈ ನೆರಳಿನಂತೆ !
ಕೂಸಾಗಿ ಅಡುವೆನು
ಕೊಳಲಾಗಿ ಹಾಡುವೆನು
ಸತಿಯಾಗಿ ಸಾಗುವೆನು ಒಲವಿನಂತೆ !

೬

ಕುಣಿಸಿದೊಲು ಕುಣಿಯುವೆನು
ಮಣಿಸಿದೊಲು ಮಣಿಯುವೆನು
ನಾನಿನ್ನ ಸೂತ್ರದಾ ಗೊಂಬೆಯಾಗಿ !
ಎಳೆದತ್ತ ನೂಗುವೆನು
ಸೆಳೆದತ್ತ ಸಾಗುವೆನು
ತೂಗುವೆನು ಬಾಗುವೆನು ಭಕ್ತನಾಗಿ !!

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

(೫) ಬಿಹಾರದ ವಿಹಾರದಲ್ಲಿ :

★

ದೇಶಪರ್ಯಟನದ ಪ್ರತ್ಯಕ್ಷಾನುಭವದಿಂದ ಸಿಕ್ಕುವ ಸಂಸ್ಕಾರ-ಶಿಕ್ಷಣಗಳು, ವಿಶ್ವವಿದ್ಯಾನಿಲಯದ ವಿದ್ವಾಂಸ ವರ್ಗದ ಭಾಷಣಗಳಿಂದ ಎಂದೂ ಸಿಕ್ಕವು. ಶಾಲೆ-ಕಾಲೇಜುಗಳಲ್ಲಿ ಕುಳಿತುಕೊಂಡವರಿಗೆ 'ಕೂಂಡಿಯಾ' ಜನರಂತಹರ ಜೀವನದ ಪ್ರತ್ಯಕ್ಷ ಪರಿಚಯ ಹೇಗಾದೀತು?

★

ರವೀಂದ್ರರ ಶಾಂತಿನಿಕೇತನವನ್ನು ಕಂಡಾಯಿತು. ಇನ್ನೂ ಅಲ್ಲಿ ನಾನು ನೋಡಬೇಕಾದ ವಿಭಾಗಗಳು ಕೆಲವು ಇದ್ದರೂ, ನಿಕೇತನಕ್ಕೆ ಆಗ ಬಿಡುವಿನ ದಿನಗಳಾದುದರಿಂದ ನೋಡಲು ಸಾಧ್ಯವಿರಲಿಲ್ಲ. ಎಂದ ಮೇಲೆ ಹೆಚ್ಚಿಗೆ ಹೊತ್ತು ಅಲ್ಲೇಕೆ ನಿಲ್ಲಬೇಕು ? —ಎಂಬ ಪ್ರಶ್ನೆ ಹಿರಿಯರಿಗುಂಟಾದುದು ಸಹಜವಾಗಿದೆ. ಪ್ರವಾಸದಲ್ಲಿ ಬಹಳ ದಿನಗಳೆನ್ನು ಕಳೆಯಲಾಗದೆಂದು ನಾವು ಮೊದಲೇ ನಿರ್ಧರಿಸಿದ್ದೆವು. ಆದರಿಂದ ನಾವು ಬೇಗನೆ ಬೋಲ-ಪುರದ ಕಡೆಗೆ ನಡೆದೆವು. ಅಂದು ಅಲ್ಲೆಲ್ಲ ತುಂತುರುಮಳೆ-ಯಾಗಿದ್ದಿತು. ಬೇಸಗೆಯ ಮೊದಲ ಮಳೆಯದು ; ಬಿಸಿಲಿನ ಪ್ರಖರತೆಯನ್ನು ತಗ್ಗಿಸಿದ್ದಿತು. ಹವೆಯು ಆಲ್ಹಾದಕರವಾಗಿತ್ತು. ಶಾಂತಿನಿಕೇತನವನ್ನು ಕಂಡ ಮನಸ್ಸು ಅರಳಿತ್ತು. ಮಹಾಕವಿಯ ಮಹಾಕೃತಿಯೊಂದನ್ನು ನೋಡಿ ಮನಸ್ಸು ಮುಗ್ಧವಾಗಿದ್ದಿತು. ಒಂದು ರೀತಿಯಲ್ಲಿ ಬುದ್ಧಿ ಬಧಿರವಾಗಿದ್ದಿತು. ಭಾವಾವೇಶದಲ್ಲಿ ಬಂದು, ಬೋಲಪುರದಲ್ಲಿ ಭಾಗಲಪುರದ ಟಿಕೀಟು ಕೇಳಿದರೆ 'ಮೂರು ದಿನ ಅತ್ತ ರೈಲು ಇಲ್ಲ ! ' ಎಂದು ಸ್ಟೇಶನ್‌ಮಾಸ್ತರರು ಹೇಳಿದರು. ಮಹಾಸಾಗರದ ದಂಡೆಯಲ್ಲಿ ಒಯ್ದು ಬಿಟ್ಟಂತಾ-ಯಿತು ನನಗೆ. ಹಸುಳೆ ಅದನ್ನು ಉಲ್ಲಂಘಿಸುವುದೆಂತು ?

ಹಿರಿಯರು ಈ ಸಂಗತಿಯನ್ನು ಕೇಳಿ ಬಹಳ ಕಳವಳಗೊಂಡರು. ಮುಂದೇನೂ ಮಾಡುವುದಕ್ಕೆ ತಿಳಿಯದೆ ಸುಮ್ಮನಾದರು.

" ಶಾಂತಿನಿಕೇತನದಲ್ಲಿ ಸುಮ್ಮನೆ ಅವಸರ ಮಾಡಿದಿರಿ ; ಇಲ್ಲಿ ಬಂದು ಅಲ್ಲದ ಸ್ಥಳದಲ್ಲಿ ಹೊತ್ತು ಕಳೆಯಬೇಕಾಯಿತಲ್ಲ ! " ಎಂದು, ಅವರ ನೊಂದ ಮನಸ್ಸಿನ ಮೇಲೆ ನಾನೊಂದು ಬ ಎಳೆದೆ. ಬಹಳ ಹೊತ್ತಿನಿಂದ ತಡೆದು ಹಿಡಿದ ಭಾವವು ಭಾಷೆಯ ಮೂಡಿನಿಂತಿತು.

"ಹೀಗಾಗುವುದೆಂದು ನನಗೇನು ಗೊತ್ತು ? ಬೆಳತನಕ ರೈಲಿನ ಕಳೆದರೆ ನಾಳಿನ ಹಗಲು ಅನ್ನೊಂದು ಕ್ಷೇತ್ರದ ದರ್ಶನವಾಗುವ ದೆಂದು ಲೆಕ್ಕಹಾಕಿದೆನು " ಸ್ವಲ್ಪ ತಡೆದು " ಮೂರು ದಿನವೇ ಗಾಡಿಯಿಲ್ಲ ? " ಎಂದು ನನಗೇ ತಿರುಗಿ ಪ್ರಶ್ನೆಮಾಡಿದರವರ ಹಿರಿಯರು.

ಹಿರಿಯರಿಗೆ ಉತ್ತರ ಕೊಡುವಷ್ಟು ನಾನೂ ನಿಧಾನವಾ ವಿಚಾರಿಸಿರಲಿಲ್ಲ. ಭಾವಾವೇಶದಲ್ಲಿ ಸ್ಟೇಸನ್‌ಮಾಸ್ತರರ ಆದೊಂದೆ ಮಾತನ್ನು ಕೇಳಿಬಂದಿದ್ದೆ. ತಿರುಗಿ ಶಾಂತಿನಿಕೇತನಕ್ಕೆ ಹೋಗು ವಿಚಾರ ನನ್ನ ತಲೆಯಲ್ಲಿ. ಅಲ್ಲಿ ನೋಡುವುದೇನಿರದಿದ್ದರ ಒಂದೆರಡು ದಿನ ಅಲ್ಲಿದ್ದು ಬಿಡಬೇಕೆಂದು ನನ್ನ ಹಂಬಲ. ಅದ ಹದವಾದ ಮಾತು ಬಂದೊಡನೆಯೇ ಹಿರಿಯರೆಡೆಗೆ ಮರಳಿದೆ. ಆಯಿತು.

ನಾನು ಸುಮ್ಮನಿದ್ದುದನ್ನು ನೋಡಿ ಹಿರಿಯರು ಹೇಳಿದರು "ಊರು ಬಿಟ್ಟಮೇಲೆ ಒಬ್ಬರಿಲ್ಲ ಹತ್ತುಮಂದಿಯ ಹತ್ತ ಬಾಯಿಬಿಡಬೇಕಾಗ್ತದೆ. ಗಾಡಿ ಯಾಕಿಲ್ಲ, ಏನಾಗೇದ ? ನಾಲ ಜನರ ಹತ್ತರ ಕೇಳಲ್ಲಿ. ಇಷ್ಟು ಜನಾ ಜಾತ್ರೆಲ್ಲ ಮೂರು ದಿ ಇಲ್ಲೇ ನಿಂತರ,ಜಗ ನಡೆಯಲಿಕ್ಕಿಲ್ಲ. ಸಾಲೀ ಕಲಿತವನಿಗೆ ನಾವೇ ಹೇಳೋದ ಅದ. "

ಹಿರಿಯರ ಸೂಚನೆಯನ್ನು ಮನ್ನಿಸಿ ಮತ್ತೆ ನಿಲ್ದಾಣೆಯ ಹೋದೆ. ಎಲ್ಲಿಡೆಗೂ ಜನರ ಗೊಂದಲವೇ ಗೊಂದಲ. ನಿಲ್ದಾಣ ತಂಗುಮನೆಗಳೆಲ್ಲ ಜನರಿಂದ ತುಂಬಿ ತುಳುಕುತ್ತಿದ್ದುವು. ಎಲ್ಲಿಯೋ ಮೇಲ್ಗಡೆಗೆ ದೊಡ್ಡ ಮಳೆಯಾಗಿ, ನದಿಗೆ ಒಮ್ಮೆಲೇ ಮಹಾಪೂ ಬಂದು, ಪೂಲು ಕತ್ತರಿಸಿ ಬಿದ್ದಿತಂತೆ ; ದಾರಿ ಕಟ್ಟಾಯಿತಂತೆ ಆದರೆ ಅದು ಬರದ್ವಾನ–ಬೋಲಪೂರಗಳ ನಡುವೆ. ಅದರಿಂ ಕಲಕತ್ತೆಯಿಂದ ಬರುವ ಗಾಡಿಗಳು ತಡೆದುನಿಂತಿದ್ದುವು. ಆದರಂ ಕಲಕತ್ತೆಗೆ ಹೋಗುವ ಉಗೆಬಂಡಿಗಳೆಲ್ಲ ಬೋಲಪುರದ ವರೆ ಬಂದು ನಿಂತಿದ್ದುವು. ನಾವು ಹೊರಡಬೇಕಾಗಿದ್ದ ಬಿಹಾರ ಕಡೆಗಿನ ದಾರಿಗೇನೂ ಅಡ್ಡಿ-ಆತಂಕಗಳಿರುವಂತೆ ತೋರಲಿ ಆದರೂ ಬೋಲಪುರದಿಂದ ಮರಳಿ ಬಿಹಾರದತ್ತ ಉಗೆಬಂಡಿಗ ಹೊರಟರೆ ನಾವು ಬೇಗನೆ ಹೊರಡುವುದಕ್ಕೆ ಸಾಧ್ಯವಿತ್ತು. ಕ ಕತ್ತೆಯ ಗಾಡಿಗಳು ಬಂದು, ನಮ್ಮ ಪ್ರಯಾಣ ಮುಂದುವ ಯುವುದಾದರೆ ಅವಕಾಶ ಬೇಳುವಂತಿತ್ತು.

ಅದೊಂದು ಇರುಳನ್ನು ಬೋಲಪುರ ನಿಲ್ದಾಣೆಯಲ್ಲಿಯೇ ಕ ದೆವು. ಮರುದಿನ ಮುಂಜಾನೆ ಅಲ್ಲಿಂದಲೇ ಒಂದು ಉ ಬಂಡಿಯು ಬಿಹಾರದ ಕಡೆಗೆ ಹೊರಟಿತು. ಅದು ನಮ್ಮನ ಮಧ್ಯಾಹ್ನದ ಹನ್ನೆರಡು ಗಂಟೆಯ ಸುಮಾರಿಗೆ ಸಾಹವಗಂ ನಿಲ್ದಾಣಕ್ಕೆ ತಂದಿಳಿಸಿತು. ಅದು ಬಿಹಾರ ಪ್ರಾಂತದೊಳಗಿನ ಒಂದ

ದೊಡ್ಡ ನಿಲ್ದಾಣೆಯಾಗಿದೆ. ಅಲ್ಲಿ ನಾವು ನಾಲ್ಕು ತಾಸು ಕಳೆಯ ಬೇಕಾಯಿತು. ಹಿಂದಿನಿಂದ ಮನಿಯಾರಿ ಘಾಟದಿಂದ ಒಂದುಗಾಡಿ ಬಂದು, ನಮ್ಮನ್ನು ಭಾಗಲಪುರದ ಕಡೆಗೆ ಒಯ್ಯಬೇಕಾಗಿದ್ದಿತು.

ಇದೀಗ ಊಟದ ಹೊತ್ತಾಗಿತ್ತು. ಅದಕ್ಕೆ ತಕ್ಕ ಅವಕಾಶವೂ ಸಿಕ್ಕುದರಿಂದ, ತಾಯಿಯು ಅಡಿಗೆಯ ವ್ಯವಸ್ಥೆಗೆ ಸ್ಥಳವನ್ನು ನಿರೀಕ್ಷಿಸಹತ್ತಿದಳು. ಮುನ್ನಾದಿನ ದೊಡ್ಡ ಮಳೆಯಾದುದರಿಂದ ಎಲ್ಲೆಡೆಗೂ ನೀರೇ ನೀರಾಗಿದ್ದಿತು. ಬಯಲಿನಲ್ಲಿ ಅಡಿಗೆ ಮಾಡಿಕೊಳ್ಳಲಿಕ್ಕೆ ಅಷ್ಟು ಒಳ್ಳೆಯದಿರಲಿಲ್ಲ. ಉತ್ತರದಲ್ಲಿ ಉಗಿಬಂಡಿಗಳು ಹೋಗು-ಬರುವುದಕ್ಕೆ ಬೇರೆ ಬೇರೆಯಾಗಿಯೇ ಕಬ್ಬಿಣ ಹಳಿಗಳಿರುವುದರಿಂದ, ಪ್ರತಿಯೊಂದು ನಿಲ್ದಾಣದಲ್ಲಿಯೂ ಎರಡೂ ಕಡೆಗಳಲ್ಲಿ ನಿಲ್ಮನೆಗಳಿರುತ್ತವೆ. ಅವುಗಳಲ್ಲಿ ಒಂದು ಮುಖ್ಯ ನಿಲ್ಮನೆಯು. ಅಲ್ಲಿ ನಮ್ಮಲ್ಲಿಯ ಸ್ಟೇಶನ್ನುಗಳಲ್ಲಿರುವಂತೆ ಎಲ್ಲ ವರ್ಗದ ಪ್ರವಾಸಿಕರ ತಂಗುಮನೆಗಳೂ ಸ್ಟೇಶನ್ ಮಾಸ್ತರರ ಆಫೀಸುಗಳೂ ಇರುತ್ತವೆ. ಇನ್ನೊಂದು ಮಗ್ಗುಲಿನದು ಕೇವಲ ಚಿಕ್ಕ ಚಪ್ಪರ ಮಾತ್ರ, ಅಲ್ಲಿ ಹಲವು ಜನರು ಈ ಮೊದಲೇ ಅಡಿಗೆ ಮಾಡಿಕೊಂಡ ಕುರುಹುಗಳು ಇದ್ದುವು. ಅದನ್ನು ಕಂಡು, ಅಲ್ಲಿಯೇ ನಾವು ಅಡಿಗೆಯ ವ್ಯವಸ್ಥೆಗೆ ಅಣಿಗೊಳಿಸಿದೆವು. ನೀರು, ಇದ್ದಲಿ ಮೊದಲಾದ ಪ್ರಾಥಮಿಕ ಸಾಮಾನುಗಳನ್ನಷ್ಟು ಒದಗಿಸಿ, ಊರಲ್ಲಿಯ ಕೆಲವು ಸಾಮಾನು ತರಲಿಕ್ಕೆ ಹೋಗಬೇಕಾಗಿತ್ತು. ತಾಯಿ ಸ್ನಾನ ತೀರಿಸಿಕೊಂಡು ಬಂದೊಡನೆಯೇ ತಂದೆಯವ-ರೊಡನೆ ನಾನು ಸಾಹಬಗಂಜವನ್ನು ಪ್ರವೇಶಿಸಿದೆ.

ಪೇಟೆಯಲ್ಲಿ ಹೋಗಿ ಇನ್ನಿಷ್ಟು ಅಕ್ಕಿ, ತುಪ್ಪ, ಬೇಳೆಗಳನ್ನು ಕೊಂಡುಕೊಂಡೆವು. ಬಿಹಾರ ಪ್ರಾಂತದಲ್ಲಿ ನಮ್ಮಲ್ಲಿಯಂತೆ ರೇಶನ್ ಅಂಗಡಿಗಳ ವ್ಯವಸ್ಥೆಯಿಲ್ಲ, ಪೇಟೆಯಲ್ಲಿ ಎಲ್ಲ ಧಾನ್ಯಗಳು ಗೋದಿ-ಕಡಲೆಯ ಹಿಟ್ಟುಗಳೂ ಬೇಕಾದಷ್ಟು ಸಿಗುತ್ತವೆ. ಸಕ್ಕರೆಗಂತೂ ಕೊರತೆಯೇ ಇರಲಿಲ್ಲ. ಆದರೆ ಅವುಗಳನ್ನು ಊರ ಹೊರಗೆ ಮಾತ್ರ ಒಯ್ಯಲಿಕ್ಕೆ ಅವಕಾಶವಿರುವುದಿಲ್ಲ ಅದೇ ಊರಲ್ಲಿ ಬೇಕಷ್ಟು ಉಪಯೋಗಿಸಬಹುದು. ಇದನ್ನು ಕಂಡು ಮುಂಬಯಿ ರಾಜ್ಯದ ನಮಗೆ ಮೊದಲು ಆಶ್ಚರ್ಯವೇ ಆಯಿತು ಬಿಹಾರದಲ್ಲಿ ಇನ್ನೊಂದು ಆಶ್ಚರ್ಯಕರ ಸಂಗತಿಯನ್ನು ನಾವು ಕಾಣುತ್ತೇವೆ ಅಲ್ಲಿ ಪಟ್ಟಣಗಳಲ್ಲೆಲ್ಲ ಓಣಿಯೋಣಿಗೆ ಊಟದ ಮನೆಗಳನ್ನು ಕಾಣುತ್ತೇವೆ, ಇಲ್ಲಿಯ ಹಾಟೇಲುಗಳಂತೆ. ಆದರೆ ಅವುಗಳಲ್ಲಿ ಚಹ, ಕಾಫಿ, ಹಾಲು ಮೊದಲಾದುವುಗಳು ಮಾತ್ರ ಸಿಗುವುದಿಲ್ಲ. ಕೇವಲ ಊಟ ಸಿಕ್ಕುತ್ತದೆ. ಅದೂ ಒಂದು ಊಟಕ್ಕೆ ಇಂತಿಷ್ಟು ದುಡ್ಡು ಎಂದು ನಿಶ್ಚಯವೂ ಇಲ್ಲ ಅಂಗಡಿಗಳ ಮೊಗಸಾಲೆಯಲ್ಲಿ ಅನೇಕ ಪಕ್ವಾನ್ನಗಳನ್ನು ಮಾಡಿಟ್ಟಿರುತ್ತಾರೆ, ಮಾಡುತ್ತಿರುತ್ತಾರೆ. ಒಂದು ಮಗ್ಗುಲಿಗೆ ಹತ್ತೆಂಟು ಜನರು ಕೂಡುವಷ್ಟು ಕುರ್ಚಿ ಮೇಜು ಮೊದಲಾದ ಆಸನಗಳಿರುತ್ತವೆ ಮೂಲೆಯೊಂದರಲ್ಲಿ ನೀರಿನ ನಲ್ಲಿ ಇರುತ್ತದೆ. ಅಲ್ಲಿ ಕೈ ತೊಳೆದುಕೊಂಡು, ತನಗೆ ಇಷ್ಟವೆನಿಸಿದ ಪಕ್ವಾನ್ನಗಳನ್ನು ಕೊಂಡು ಬೇಕಷ್ಟು ತಿಂದು, ನೀರು ಕುಡಿದು ಗಿರಾಕಿಗಳು ಹೋಗಬಹುದು. ಗಿರಾಕಿಗಳು ಬೇಡಿದಷ್ಟು ಜಿನಸನ್ನು ಎಲೆಯಲ್ಲಿ ಹಾಕಿ ಹಾಕಿ ತಂದು ಕೊಡುತ್ತಾರೆ. ಅವು ಹಚ್ಚಿದ ಎಲೆಗಳಲ್ಲ, ಬಿಡಿ ಎಲೆಗಳು. ಉಂಡ ಮೇಲೆ ನಮ್ಮ ಎಲೆಗಳನ್ನು ಹೊರಗೆ ಇಟ್ಟ ಒಂದು ಬುಟ್ಟಿಯಲ್ಲಿ ನಾವೇ ಒಯ್ದು ಹಾಕಬೇಕಾಗುವುದು. ನಾವು ತಿಂದಷ್ಟು ಜಿನಸುಗಳ ಬೆಲೆ ಕೊಟ್ಟರಾಯಿತು. ಒಬ್ಬ

ಬಾಯೋಟೋನಾ
ಇದರ ಸೇವನೆಯಿಂದ

ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸ ಬಹುದು. ಮಿದುಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋ-ಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨ ಟ. ಖರ್ಚು ಬೇರೆ. ಸೂಚಿಪತ್ರ ಪಡೆಯಬಹುದು

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ ನೆಯ ಆವೃತ್ತಿ

ಅಚ್ಚಾಗುತ್ತಲಿದೆ.
ಬೇಗನೆ
ಪ್ರಕಟವಾಗುವುದು

ಬರೆದವರು :
ಶ್ರೀ. ಜಿ. ಎಸ್. ಹುದ್ದಾರ

ಮಲೇರಿಯಾ ಇನ್ ಫ್ಲುಯೆಂಜಾ ಮತ್ತು ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ-ಬಡಬಗ್ಗರ-ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.

ಮಾಧವನ್ ಸನ್ಸ್ ಮತ್ತು **ಕಂ. ಕೆಮಿಸ್ಟ್ಸ್,**
ಮುಂಬಯಿ—೨.

ಎಂಟಾಣೆಗಳಿಂದ ಐದು ರೂಪಾಯಿಗಳವರೆಗೂ ವೆಚ್ಚಮಾಡಿ ಊಟ ಮಾಡಬಹುದು. ಆ ನಾಡಿನಲ್ಲಿ ಬಹು ಜನರು ಇಂಥ ಮನೆಗಳಲ್ಲಿಯೇ ಊಟ ಮಾಡುವುದುಂಟು. ಅಲ್ಲಿ ಬಡವ ಬಲ್ಲಿದರೆಂಬ ಎರಡೇ ವರ್ಗಗಳ ಜನರಿರುವುದರಿಂದ ಬಡವರಿಗೆ ಇಂಥ ಊಟದ ಮನೆಗಳು ಹೊಟ್ಟೆಗೆ ಹಾಕುತ್ತವೆ. ಸಿರಿವಂತರೂ ಕೂಡ ಒಮ್ಮೊಮ್ಮೆ ಅಂಗಡಿಗಳಿಂದ ಕೊಂಡು ತರಿಸಿ, ಮನೆಯಲ್ಲಿ ಊಟ ಮಾಡುತ್ತಾರೆ. ಸ್ವಚ್ಛತೆಯ ದೃಷ್ಟಿಯಿಂದ ಇಲ್ಲಿಯ ಹೋಟಲುಗಳಲ್ಲಿ ಚಹ ಕುಡಿಯಲಿಕ್ಕೆ ಮಣ್ಣಿನ ಪಾತ್ರೆಗಳನ್ನು ಕೊಡುವುದೂ ಅವುಗಳನ್ನು ಹೊರಗೆ ಕುಡಿದವರೇ ಒಯ್ದು ಒಗೆಯುವುದೂ ರೂಢಿಯಲ್ಲಿದೆ. ಇದೂ ಒಂದು ದಕ್ಷಿಣದಿಂದ ಹೋದವರಿಗೆ ಹೊಸದೆನಿಸುವುದು. ನಮ್ಮಂಥ ಪ್ರವಾಸಿಕರಿಗೆ ಇಲ್ಲಿಯ ಊಟದ ಮನೆಗಳಲ್ಲಿ ಊಟ ಮಾಡಲಿಕ್ಕೆ ಸ್ವಲ್ಪ ತೊಂದರೆಯಾಗುವುದು. ಕೆಲವು ಜಿನಸುಗಳ ಹೆಸರು ನಮಗೆ ಗೊತ್ತಿರುವುದಿಲ್ಲ. ಅಲ್ಲದೆ ಅವುಗಳನ್ನು ಬೇಡುವ ಅಳತೆಯ ಹೆಸರುಗಳೂ ಹೊಸವು. ಅದರಿಂದ ಬೇಕಾದ ಜಿನಸುಗಳನ್ನು ಕೈಯಿಂದ ತೋರಿಸಿ, ಎರಡಾಣೆ ನಾಲ್ಕಾಣೆಗಳೆಂದು ಹೇಳಿ, ಹಣದ ಪ್ರಮಾಣಗಳನ್ನು ಸೂಚಿಸಬೇಕಾಗುತ್ತದೆ. ಆಗ ಅವರು ಬಿಹಾರೀ ಭಾಷೆಯಲ್ಲಿ ಒಂದು 'ಕಚೌಡಿ' ತಕೊಳ್ಳಿ ಲಿಜ್ಜ— ಎಂದು ಕೊಟ್ಟುಬಿಡುವರು. ಆ ಮಾಪಿಗೆ ಇರುವಷ್ಟು ದುಡ್ಡು ತಕ್ಕೊಳ್ಳುವರು. ಈ ವ್ಯವಹಾರವೇನೋ ಪ್ರಾಮಾಣಿಕತೆಯಿಂದ ನಡೆವುದು. ಆದರೆ ನಮ್ಮ ಮನಸ್ಸಿನಂತೆ ಊಟ ಆಗದು. ಒಮ್ಮೊಮ್ಮೆ ಬೇಕಾದ ಜಿನಸು ಕಡಿಮೆ ಸಿಕ್ಕುತ್ತದೆ; ಬೇಡವಾ ತಿನಿಸು ಹೆಚ್ಚಿಗೆ ಬರುತ್ತದೆ.

ಹೀಗೂ ಗೋದಿಯ ಹಿಟ್ಟು ಬೇಕಾದಷ್ಟು ಸಿಗುವುದು. ಮಾವಿನ ಹಣ್ಣುಗಳೂ ವಿಪುಲವಾಗಿವೆ. ಬೇಸಗೆಯ ಉಷ್ಣತೆಯೂ ಬಹಳವಿದೆ. ಇಂದು ಮಧ್ಯಾಹ್ನದ ಊಟಕ್ಕೆ ಗೋದಿಯ ರೊಟ್ಟಿ-ಸೀಕರಣೆಗಳನ್ನು ಮಾಡಿಕೊಳ್ಳೋಣ—ವೆಂದು ಯೋಚಿಸಿ, ಮಾವಿನ ಹಣ್ಣುಗಳನ್ನು ಕೊಂಡೆವು. ಅಲ್ಲಿ ಮಾವುಗಳನ್ನೂ ತೂಕದಿಂದಲೇ ಕೊಡುವರು. ಹನ್ನೆರಡಾಣೆ — ರೂಪಾಯಿಗೆ ಸೇರು ಎಂದು ದರ ಹೇಳುವರು. ಹಣ್ಣುಗಳ ಗುಣಕ್ಕನುಸರಿಸಿ ಈ ದರವಿರುತ್ತದೆ. ತೂಕದಿಂ ಕೊಳ್ಳುವುದಿರುವುದರಿಂದ 'ಸಣ್ಣದು ದೊಡ್ಡದು' ಎಂಬ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಹೀಗೆ ನಮಗೆ ಹತ್ತುವ ವಸ್ತುಗಳನ್ನೇ ಕೊಂಡು ನಿಲ್ದಾಣೆಯ ದಾರಿ ಹಿಡಿದೆವು. ಸ್ವಲ್ಪ ತಡವಾಯಿತು. ಬೀದಿಯ ಜನರು ತಮ್ಮ ನಡಿಗೆಗಳಲ್ಲಿ-ಚಟುವಟಿಕೆಗಳಲ್ಲಿ-ಸ್ವ ಅವಸರ ತೋರಿಸುತ್ತಿದ್ದರು, ಗಡಬಡಿ ಮಾಡುತ್ತಿದ್ದರು. ಆದ ಆವು ಕ್ಷಣ-ಕ್ಷಣಕ್ಕೆ ನಮಗೆ ಆಗುತ್ತಿದ್ದರೂ, ಕಾರಣ ಮಾ ತಿಳಿದಿರಲಿಲ್ಲ. ನಮ್ಮ ರೀತಿಯಲ್ಲಿ ನಾವು ಸಾಗಿದ್ದೆವು. ಮರುಕ್ಷಣದಲ್ಲಿ ಅದೆಂತೋ ದೊಡ್ಡ ಮಳೆ ಬಂದು, ತುಂಬ ತೋಯಿಸಿಕೊಂಡು ಬಿಟ್ಟೆವು. ಎಲ್ಲೆಡೆಗೂ ನೀರೇ ನೀರಾಯಿತು. ಒಂದರ್ಧ ತಾಸಿ ಹಿಂದೆ ಬಿಸಲಿನಿಂದ ಬಳಲುವ ಜನ, ಈಗ ಚಳಿಯಿಂದ ನಡುಗ ಬೇಕಾಯಿತು ಅಲ್ಲಿಯ ಪ್ರಕೃತಿಯು ಧರ್ಮವಿದು.

ಹೀಗೆ ಹಸಿದು, ತೋಯಿಸಿಕೊಂಡು ನಡುಗುತ್ತ ನಿಲ್ದಾಣೆಯತ್ತ ಬಂದರೆ, ತಾಯಿಯು ಗಾಬರಿಯಾಗಿ ನಮ್ಮ ದಾರಿಯನ್ನೇ ನೋಡುತ ನಿಂತಿದ್ದಳು. ನಾವು ಹಿಡಿದ ಅಡಿಗೆಯ ಸ್ಥಳವನ್ನು ಕೆಲವು ಜ ಮಿಲಿಟರಿಯ ತರುಣರು ಬಂದು ಆಕ್ರಮಿಸಿದ್ದರು. ಅಲ್ಲಿ ತಮ್ಮ ಅಡಿಗೆಯನ್ನು ಹೂಡಿದ್ದರು. ಹೊಗೆ ಹಾಕಿದ್ದರು. ಅದರಿಂ ತಾಯಿ ಆ ಸ್ಥಳವನ್ನು ತೆರವು ಮಾಡಿ, ಅವರಿಗೆ ಬಿಟ್ಟುಕೊಡ ಬೇಕಾಯಿತಂತೆ. ಇನ್ನೂ ಹಸಿಬಿಸಿಯಾಗುಳಿದ ಅನ್ನದ ಪಾತ್ರೆಯನ್ನು ಎತ್ತಿಕೊಂಡು ಬಂದು, ಇನ್ನೊಂದು ಮಗ್ಗುಲಿನ ನಿಲ್ದಾಣೆಯನ್ನು ಸೇರಿದ್ದಳು. ನಮ್ಮ ಸಾಮಾನುಗಳನ್ನು ಎತ್ತಿ ತರಲಿಕ್ಕೆ ಹಮಾಲನಿಗೆ ಒಂದು ರೂಪಾಯಿ ತೆತ್ತಿದ್ದಳು. ಹೇಗೋ ಮಾಡಿ ಆ ಬಿರುಮಳೆಯಲ್ಲಿ ಒಣದಾಗಿ ಉಳಿದಿದ್ದಳು. ನಮ್ಮನ್ನು ನೋಡಿದ ಕೂಡಲೆ ಕೆರಳಿ ನುಡಿದಳು :

"ಇಂಥ ಪರದೇಶದಲ್ಲಿ ಇಬ್ಬರೂ ಗಂಡಸರೂ ಅತ್ತ ಕಡೆಗೇ ಹೋಗಬೇಕೆ ?"

ಮೊದಲು 'ಅಡಿಗೆಯಾಗುವ ವರೆಗೆ ಇಬ್ಬರೂ ಹೋಗಿ ಬನ್ನಿರಿ' ಎಂದು ನಮ್ಮನ್ನು ಕಳಿಸಿದ್ದು ತಾಯಿಯೇ. ಮುಪ್ಪಿನ ತಂದೆಯವರು ಒಬ್ಬರೇ ಎಲ್ಲಿಯೂ ಹೋಗುವಂತಿಲ್ಲ. ನನ್ನೊಬ್ಬನನ್ನೇ ಕಳಿಸಲಿಕ್ಕೆ ತಾಯ್ಗರುಳು ಒಪ್ಪದು. ಅದರಿಂದ ತಾನೊಬ್ಬಳೇ ಇರುವುದನ್ನೂ ಲೆಕ್ಕಿಸದೆ ಕಳಿಸಿದ್ದಳು ಆಗ. ಭಾಷೆ ತಿಳಿಯದ ಆ

ಕೋಕದಲ್ಲಿ ಕಷ್ಟಪಟ್ಟು, ಸಾಮಾನುಗಳನ್ನು ಒತ್ತಟ್ಟಿಗೆ ಇಟ್ಟು-ಕೊಂಡು ನಿಂತಿದ್ದಳು, ಮಳೆ ಇನ್ನೂ ಸುರಿಯುತ್ತಲಿತ್ತು.

ಆ ಮಳೆಯ ದಾಳಿಯಿಂದ ಉಳಿದುಕೊಳ್ಳುವುದಕ್ಕಾಗಿ ಸಾವಿ-ರಾರು ಜನ ಗುಳೇಕಾರರ ತಂಡವೊಂದು ನಿಲ್ದಾಣೆಯಲ್ಲಿ ಹೊಕ್ಕಿ-ತ್ತು. ಅವರ ಕೋಳಿ-ನಾಯಿಗಳು; ಗುಡಿಸಲು-ಗುಡಾರಗಳು; ಅರಿವೆ ಗಂಚಡಿಗಳು ಎಲ್ಲೆಡೆಗೂ ಅಸ್ತವ್ಯಸ್ತವಾಗಿ ಬಿದ್ದಿದ್ದುವು. ಅಳುವ ಹುಡುಗರು, ನರಳುವ ಮುದುಕರು, ಒದರಾಡುವ ತರುಣರು! ಇದ-ರಿಂದ ನಿಲ್ದಾಣೆಯಲ್ಲೆಲ್ಲ ಕೋಲಾಹಲವೇ ಕೋಲಾಹಲ. ಅಂಥ ಜನರ ಗುಂಪಿನಲ್ಲಿ ಒಂದೆಡೆಗೆ ತಾಯಿ ನಿಂತಿದ್ದಳು. ಅವಳನ್ನು ಮೊದಲು ನಾವು ಹುಡುಕಿ ತೆಗೆಯಬೇಕಾಯಿತು. ಕರ್ನಾಟಕದ ಉಡಿಗೆ-ತೊಡಿಗೆಗಳ ಪರಿಚಯವಿಲ್ಲದ ಆ ಜನರು, ಆಚ್ಚರಿಯಿಂದ ಅವಳನ್ನು ನೋಡಲು ಸುತ್ತುಗಟ್ಟಿದ್ದರು. ಮಳೆ ಬಂದುದರಿಂದ ಆ ಜನಕ್ಕೆಲ್ಲ ಆನಂದವಾಗಿದ್ದಿತು. ಎಲೆತಿನ್ನುವುದು, ಹೊಗೆಸೊಪ್ಪು ಸೇದುವುದು, ರೊಟ್ಟಿಕಲಿಸಿ ಮಕ್ಕಳಿಗೆ ತಿನಿಸುವುದು, ತಿನ್ನುವುದು, ನಡೆದಿದ್ದಿತು. ಆ ಸ್ಥಳವೆಲ್ಲ ಹೊಲಸಾಗಿದ್ದಿತು. ಅಲ್ಲದೆ ನಿತ್ಯ ಸ್ನಾನಮಾಡದ ಆ ಜನರ ವಾಸನೆಯೂ ಅಸಹ್ಯವಾಗಿದ್ದಿತು. ಅದರಿಂದ ಅಲ್ಲಿ ನಾವು ಏನೂ ತಿನ್ನಲಣ್ಣುವಂತಿರಲಿಲ್ಲ. ಹೇಗಾ-ದರೂ ಹೊತ್ತು ನೂಕಬೇಕಾಗಿದ್ದಿತು.

ಮೊದಲು ಅರಿವೆಗಳನ್ನು ಬದಲಿಸಿದೆವು; ಒಣ ಅರಿವೆಗಳನ್ನು ತೊಟ್ಟುಕೊಂಡೆವು. ಆ ಮೇಲೆ ತುಸು ಚಳಿಯು ಕಡಿಮೆಯಾ-ಯಿತು. ಆಗ ಆ ಜನರೊಡನೆ ಮಾತಿಗೆ ಆರಂಭಿಸಿದೆ. ಅದು 'ದುಮುಕಾ' ಜಿಲ್ಲೆಯ ಜನರ ಗುಂಪು. ಈ ಸಂಗಡದ ಬಹು ಜನರು ಬಂಗಾಲ-ಬಿಹಾರಗಳಲ್ಲಿ ಹಲವು ಕಡೆಗೆ ವ್ಯಾಪಿಸಿದ್ದಾರೆ. ಬಂಗಾಲ-ದಲ್ಲಿ ಇವರಿಗೆ '**ಲುಲುವಾ**' ಜನರು ಎನ್ನುವರು. ಬಿಹಾರದ '**ಕೊಂಡಿಯಾ**' ಜನವಿದು. ಗುಂಪಿನ ಹಿರಿಯನಿಗೆ ಎಲ್ಲರೂ '**ಚಚ್ಚಾ**' ಎಂದು ಅನ್ನುವರು. ಅವನನ್ನು ಬಹಳ ಮರ್ಯಾದೆ-ಯಿಂದ ಕಾಣುವರು. ಅವನು ಅವರಲ್ಲಿ ಗೌಡನಂತೆ. ಅವನನ್ನು ಕರೆದುತಂದು ನನಗೆ ಭೆಟ್ಟಿಮಾಡಿಸಿದರು. ಗೌಡತಿಯೂ ಸಂಗಡ ಇದ್ದಳು. ಆ ಗುಂಪಿನಲ್ಲಿ ವಯಸ್ಸಿನಿಂದಲೂ, ಅವರು ಹಿರಿಯರು. ಗುಂಪಿನ ಹಿರಿಮಣಿಗಳೆಂದು ಅವರ ಉಡಿಗೆ-ತೊಡಿಗೆಗಳಲ್ಲಿ ವಿಶೇಷ-ವೇನೂ ಇಲ್ಲ. ಮೈಮುಚ್ಚಲಾರದ ಹರಕು ಅರಿವೆ. ಕೆಳಗೊಂದು ಲಂಗೋಟಿ. ಕೈಯಲ್ಲೊಂದು ಬಡಿಗೆ. ಇದು ಗೌಡನ ಡ್ರೆಸ್ಸು. ಗೌಡತಿಯು ಬಿಳಿಯ ಧೋತರ ಉಟ್ಟಿರುವಳು. ಅದೂ ಮಾಸಿ-ದುದು. ಹನ್ನೆರಡು ಸ್ಥಳದಲ್ಲಿ ಹರಿದುದು. ಕೈಯಲ್ಲಿ ಕೊರಳಲ್ಲಿ ಅಲ್ಯೂಮಿನಂ ಆಭರಣಗಳು. ಹಂಜಿಯಂತೆ ಹಿಂಜಿದ ಬಿಳಿಯ ಕೂದಲಿನ ತಲೆ. ಅದು ನೀರು-ಎಣ್ಣೆಗಳನ್ನು ಕಂಡಂತಿಲ್ಲ, ಗೌಡನೂ ತಲೆಯ ಮೇಲೆ ಏನೂ ಹಾಕುವುದಿಲ್ಲ. ಬೆಳೆದ ತಲೆ-ಗೂದಲು. ಆರೇಳು ತಿಂಗಳಿಗೊಮ್ಮೆ ಕತ್ತರಿಸುತ್ತಿರಬೇಕು ಬೆಳೆದ ಗಡ್ಡ; ಬೆಳೆಯುವ ಕೂದಲಿಗೆ ಬೇಸತ್ತು ಹಾಗೇ ಬಿಟ್ಟು ಗಡ್ಡ ಬೆಳೆಯಿಸಿದ ಜನರೂ ಅವರಲ್ಲಿದ್ದರು.

ಆ ಹಿರಿಯ ದಂಪತಿಗಳೊಡನೆ ತುಸುಹೊತ್ತು ಮಾತನಾಡಿದೆ. ಒಳ್ಳೆಯ ಸರಳ ಹೃದಯದ ಜನವದು. ಗಂಡನು ಹೇಳದೆ ಬಿಟ್ಟ ಸಂಗತಿಯನ್ನು ಹೆಂಡತಿಯು ನಡುವೆ ಮಾತುಸೇರಿಸಿ ಹೇಳಿ ಪೂರೈಸುತ್ತಿದ್ದಳು. ನಾನು ಹೀಗೆ ಮಾತಿಗೆ ಮೊದಲುಮಾಡಿದೆ:—

"ನೀವು ಒತ್ತಟ್ಟಿಗೆ ಏಕೆ ಇರುವುದಿಲ್ಲ?"

ಹೊಟ್ಟೆಯನ್ನು ತೋರಿಸಿದ ಆತ. ಅವನ ದನಿಯಲ್ಲಿ, ಇಷ್ಟೂ ಇವರಿಗೆ ತಿಳಿಯುವುದಿಲ್ಲವೇ — ಎನ್ನುವ ಭಾವವಿದ್ದಿತು.

"ಹೊಟ್ಟೆಗಾಗಿ!" ಎಂದಿಷ್ಟೇ ಆತ ಹೇಳಿದ.

"ಹನ್ನೆರಡು ತಿಂಗಳೂ ಸುತ್ತಾಡುವುದೆ?" ಎಂಬುದು ನನ್ನ ಪ್ರಶ್ನೆ.

"ಇಲ್ಲ; ಮಳೆಗಾಲ ನಾಲ್ಕು ತಿಂಗಳು ಊರಲ್ಲಿ ಇರುತ್ತೇವೆ."

"ಉದ್ಯೋಗ?"

"ಭೂಮಿ-ಸೀಮೆಗಳಲ್ಲಿ ದುಡಿಯುತ್ತೇವೆ."

"ಉಳಿದ ಹೊತ್ತಿನಲ್ಲಿ?"

"ಕೆಲಸವಿರುವುದಿಲ್ಲ! ಆಗ ಹೊಟ್ಟೆಗೆ ಹಾಕುವವರಾರು? ನಾವೇನು ಜಮೀನುದಾರರೇ ಬೇಸಗೆಯಲ್ಲಿ ಕುಳಿತು ತಿನ್ನಲಿಕ್ಕೆ?"

"ಕೆಲಸವಿಲ್ಲದಾಗ ಬೇಕೆಂದು ಸಂಗ್ರಹಿಸಿಟ್ಟುಕೊಳ್ಳಬೇಕು; ಇರುವೆಗಳು ಮಾಡುವುದಿಲ್ಲವೆ ಹಾಗೆ?"

'ಬಗನ' ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತ-ವನ್ನು ಉಪ-ಯೋಗಿಸಿ.

ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಗಜಕರ್ಣ, ಹುರುಕು, ಇಸಬು
ಮುಂತಾದ ಚರ್ಮರೋಗಗಳನ್ನು ತಪ್ಪದೆ
ಗುಣಪಡಿಸುವ ಔಷಧ

ಗೋವಾ ಮಲಮ್
ಸ್ಟಾರ್ ಕಂಪನಿ,
ಬೆಳಗಾಂವಿ.

"ದುಡಿಯುವಾಗಲೇ ತಿನ್ನಲು ಸಾಲದು; ಕೆಲಸವಿಲ್ಲದಾಗ ಅದು ಹೇಗೆ ಉಳಿದೀತು?" ನಡುವೆ ಗೌಡತಿ ಮಾತು ಸೇರಿಸಿದಳು. ಹೀಗೆ ಅವರೊಡನೆ ಇನ್ನೂ ಕೆಲಹೊತ್ತು ಮಾತನಾಡುವುದರಿಂದ, ಅವರು ಮದ್ಯ, ಮಾಂಸ, ಅಫು ಮೊದಲಾದ ಮಾದಕ ಪದಾರ್ಥಗಳನ್ನು ಸೇವಿಸುವರೆಂದೂ ತಿಳಿಯಿತು. ಆದರೂ ಚಾತುರ್ಮಾಸಗಳಲ್ಲಿ ಮಾತ್ರ ಮಾಂಸ ತಿನ್ನರು. ಅಲ್ಲದೆ ಆ ಜನರು ಹೆಚ್ಚಾಗಿ ಪ್ರಾಮಾಣಿಕರಿರುವಂತೆಯೇ ತೋರುವುದು; ನಮ್ಮ ಕಡೆಗೆ ತಿರುಗಾಡುವ ಪೇಂಡಾರಿಗಳಂತಲ್ಲ ಅವರು.

ಇದರಲ್ಲಿ ಎಷ್ಟೋ ಹೊತ್ತು ಕಳೆಯಿತು. ಮನಸ್ಸಿನ ಕುತೂಹಲ ಸ್ವಲ್ಪ ತಗ್ಗಿತು. ಆದರೆ ಹಸಿವು ತಗ್ಗುವ ಬಗೆ ಹೇಗೆ? ಹೊರಗೆ ಮಳೆಯೇನೋ ನಿಂತಿದ್ದಿತು. ಆದರೂ ಯಾರಾಗ ಮತ್ತೆ ಬಂದೀತೆಂಬುದರ ನಿಯಮವಿರಲಿಲ್ಲ. ಆ ಜನರ ಗುಂಪಿನಲ್ಲಿ ಕುಳಿತು ನಾವು ಹಣ್ಣನ್ನು ತಿನ್ನುವಂತಿರಲಿಲ್ಲ. ಅದರಿಂದ ಏನು ಮಾಡಲಿಕ್ಕೂ ಆಗದೆ, ಸುಮ್ಮನೆ ಕುಳ್ಳಿರಬೇಕಾಯಿತು.

ಅಷ್ಟರಲ್ಲಿ ಸ್ಟೇಶನ್ ಆಫೀಸಿನ ಒಂದು ಕೋಣೆಯಿಂದ ಒಬ್ಬರು ಹೊರಗೆ ಬಂದು, ನನ್ನನ್ನು ಕೈಮಾಡಿ ಕರೆದರು. ನಾನು ಬೆರಗುಗಣ್ಣಿನಿಂದ ಅವರ ಮುಖವನ್ನು ನೋಡುತ್ತ ಎದ್ದು ಹತ್ತಿರ ಹೋದೆ. ಅವರು ಮರಾಠೀ ಭಾಷೆಯಲ್ಲಿ ಮಾತಿಗೆ ಆರಂಭಿಸಿದರು:

"ನಿಮ್ಮನ್ನು ನೋಡಿ ಬಹಳ ವೇಳೆಯಾಯಿತು. ನೀವು ಆ ಜನರ ಕೂಡ ಏನನೋ ಮಾತು ಹಚ್ಚಿದ್ದಿರೆಂದು ಕರೆಯದೆ ಸುಮ್ಮನಿದ್ದೆ" ಎಂದು ಪ್ರೀತಿಯಿಂದ ಮಾತನಾಡಿಸುತ್ತ ತಮ್ಮ ಆಫೀಸಿನಲ್ಲಿ ಕರೆದುಕೊಂಡು ಹೋದರು.

ದೂರದಲ್ಲಿ ಇದ್ದ ಹಿರಿಯರಿಗೆ ಅವರ ಮರಾಠೀ ಮಾತು ತಿಳಿಯಿತು. ಆ ಗುಳೆ ಹೊರಟ ಜನರೊಡನೆ ಮಾತನಾಡಿದುದಕ್ಕೆ ನನಗೆ ಅವರು ಏನಾದರೂ ಅನ್ನುತ್ತಿರುವರೇನೋ ಎಂದು — ಭಾವಿಸಿ ಹೆದರಿ, ಅವರೂ ನನ್ನ ಹಿಂದಿನಿಂದಲೇ ಬಂದರು. ಅಷ್ಟರಲ್ಲಿ ನಾನು ಆ ಅಪರಿಚಿತ ಗೆಳೆಯರೊಡನೆ ಚಹ ಕುಡಿಯುತ್ತ ಕುಳಿತಿದ್ದೆ. ನಮ್ಮ ಹಿರಿಯರನ್ನು ಒಳಗೆ ಕರೆದು ಅವರು ಆದರದಿಂದ ಚಹ ಕೊಟ್ಟರು. ಅವರು ನಮ್ಮನ್ನು ಇಷ್ಟು ಆದರದಿಂದ ಕಾಣಲಿಕ್ಕೆ, ಅವರೂ ದಕ್ಷಿಣ ಹಿಂದುಸ್ತಾನದವರೆಂಬುದೊಂದೇ ಆಗ ಕಾರಣವಾಗಿತ್ತು.

ಮುಂದೆ ಮಾತಿಗೆ ಮಾತು ಬೆಳೆದು, ಅವರ ಮೂಲ ಸ್ಥಳವು ಕೊಲ್ಹಾಪುರವೆಂದು ಗೊತ್ತಾಯಿತು. ಅವರ ಹೆಸರು ಪಿ. ಜಿ. ಬೋಲವಣಕರ ಎಂದು. ಅವರ ತಂದೆಯವರು ಮೊದಲು ಜಿ. ಐ. ಪಿ. ರೈಲಿನಲ್ಲಿ ಕೆಲಸಕ್ಕೆ ಸೇರಿದರಂತೆ. ಅವರು ಇವರನ್ನೂ ಇಸ್ಟ ಇಂಡಿಯನ್ ರೈಲ್ವೆ ಕಂಪನಿಯಲ್ಲಿ ನೌಕರರನ್ನಾಗಿ ಮಾಡಿದರು. ಈಗ ಇವರು ಸಾಹೇಬಗಂಜದಲ್ಲಿ ಆಸಿಸ್ಟಂಟ್ ಸ್ಟೇಶನ್ ಮಾಸ್ತರರಾಗಿದ್ದಾರೆ. ಶರೀರ ಸಂಬಂಧವೆಲ್ಲ ಆ ಭಾಗದ ಜನರೊಡನೆಯೇ ಬೆಳೆದಿದೆ. ಆದರೂ ಆ ಅಷ್ಟರೆಲ್ಲ ಮಹಾರಾಷ್ಟ್ರದಿಂದ ಉತ್ತರದಲ್ಲಿ ಹೋಗಿ ನೆಲಸಿದವರೇ ಎಂಬುದನ್ನು ಮಾತ್ರ ಮರೆಯತಕ್ಕದ್ದಲ್ಲ. ಅವರೆಲ್ಲರಲ್ಲಿ ತಮ್ಮ ಮಾತೃಭಾಷೆಯ ಬಗ್ಗೆ ಅಭಿಮಾನ ತುಂಬ ಇದ್ದಂತೆ ತೋರುತ್ತದೆ. ಶ್ರೀ ಬೋಲವಣಕರರ ಮನೆಯಲ್ಲಂತೂ ಕಿರ್ಲೋಸ್ಕರವಾಡಿಯಿಂದ ಹೊರಡುವ ಮೂರೂ ಮಾಸಿಕಗಳು ಬರುತ್ತವೆ. ಅವರೊಡನೆ ಕರ್ನಾಟಕ-ಮಹಾರಾಷ್ಟ್ರಗಳ ಬಗ್ಗೆ ಹಲವು ವಿಚಾರಗಳನ್ನು ಚರ್ಚಿಸಿದೆ. ಅವರಲ್ಲಿ ತಮ್ಮ ಪ್ರಾಂತಕ್ಕೆ ತಿರುಗಿ ಬರುವ ಹಂಬಲು ಇದ್ದದ್ದು ಮಾತುಮಾತಿನಲ್ಲಿಯೂ, ಕಂಡು ಬರುತ್ತಿದ್ದಿತು. ಆ ಭಾಗದ ಮೇಲಧಿಕಾರಿಗಳಲ್ಲಿ 'ಉತ್ತರದ ಜನ....ದಕ್ಷಿಣದ ಜನ' ಎಂಬ ಪಕ್ಷಪಾತದ ದೃಷ್ಟಿ ತುಂಬ ಇದೆ ಎಂದೂ ಅವರು ಹೇಳಿದರು. ಅದರಿಂದ ನೌಕರಿಯಲ್ಲಿ ಸಿಗುವ ಸವಲತ್ತುಗಳೆಲ್ಲ ಉತ್ತರದ ಜನರಿಗೇನೇ ಹೆಚ್ಚಾಗಿ ಸಿಗುವವು.

ಬೋಲವಣಕರರ ಸಹಾಯದಿಂದ ಅಂದು ನಮಗೆ ಅಡಿಗೆ ಮಾಡಿಕೊಂಡು ಊಟ ಮಾಡಲಿಕ್ಕೆ ಒಳ್ಳೆಯ ಸ್ಥಳವೂ ಸಿಕ್ಕಿತು. ನಾವು ಹೋಗುವ ಗಾಡಿಯು ಆ ದಿನ ನಾಲ್ಕು ತಾಸು ತಡಮಾಡಿ ಬಂದುದರಿಂದ, ಎಲ್ಲವೂ ಸಿಸ್ತಾಗಿ-ಸುಸ್ತಾಗಿ ಸಾಗಿತು. ಕೊನೆಗೆ ರೈಲಿನಲ್ಲಿಯೂ ಒಳ್ಳೆಯ ಸ್ಥಳವೊಂದನ್ನು ದೊರಕಿಸಿಕೊಟ್ಟು, ನಮ್ಮನ್ನು ಬೋಲವಣಕರರು ಕಳಿಸಿದರು. ಭಾಗಲಪುರದ ಕಡೆಗೆ ನಾವು ಸಾಗಿದೆವು. ಅಲ್ಲಿಂದಲೇ ನಮ್ಮ ಬಿಹಾರದ ವಿಹಾರಗಳ ದರ್ಶನಕ್ಕೆ ಮತ್ತೆ ಆರಂಭವಾಯಿತು.

ಮೆದುವೃಗಳು

*(PLASTICS)

ಶ್ರೀ. ಉಪಾಧ್ಯಾಯ ವೆಂಕೋಬಾಚಾರ್ಯರು ಎಂ.ಎಸ್‌ಸಿ.
ಹೈ ದ ರಾ ಬಾ ದ್

★

ಂದು, ಹೆಸರನ್ನರಿಯದಿದ್ದರೂ ಮೂರುಮನೆಯ
ಳ್ಳಿಯಲ್ಲಿ ಕೂಡ ಪ್ಲಾಸ್ಟಿಕ್ಕಿನ ಬಳಕೆಯಿಲ್ಲದೆ ಇಲ್ಲ.
ಜ್ಞಾನ ಘಟೋತ್ಕಚನು ನಿರ್ಮಿಸಿದ ಈ ಮಾಯಾ-
ವಸ್ತುವಿನ ಮೂಲವನ್ನು ಅರಿಯಬೇಕೇನು?
ಇದನ್ನು ಓದಿರಿ ಹಾಗಾದರೆ!

★

ಯಾ ಕಾಲದ ವೈಶಿಷ್ಟ್ಯಗಳಿಗನುಗುಣವಾಗಿ ಯಾವುದೊಂದು ೇಶ, ರಾಷ್ಟ್ರ ಅಥವಾ ಸಮಾಜವು, ಒಂದು ಕಾಲಪರಿಮಿತಿಗೆ ಯುಗ' ಎಂದು ಕರೆದುಕೊಳ್ಳುವುದು ವಾಡಿಕೆ. ಭಾರತದಲ್ಲಿ ಯುಗಗಳನ್ನು ಗುರುತಿಸುವುದು ಇಲ್ಲಿಯ ಧರ್ಮವೈಶಿಷ್ಟ್ಯಗಳ ಕೆ: ವೇದಯುಗ, ಪುರಾಣಯುಗ, ಗೀತಾಯುಗ, ಆ ಮುಂದೆ ರ್ಯಯುಗ— ಎಂಬ ಅನೇಕ ಹೆಸರುಗಳಿಂದ ಯುಗಗಳನ್ನು ರುತಿಸಿಕೊಳ್ಳಲಾಗಿದೆ. ವೈಜ್ಞಾನಿಕ ವೈಶಿಷ್ಟ್ಯಗಳನ್ನನುಲಕ್ಷಿಸಿ-, ಇತ್ತೀಚಿನ ಅರ್ಧಶತಮಾನವನ್ನು 'ಪ್ಲಾಸ್ಟಿಕ್ ಯುಗ' ದು ಹೇಳಬಹುದು. ಮೇಲೆ ಹೇಳಿದ ಮೊದಲನೆಯ ಬಗೆಯ ಗಗಳು ಕೇವಲ ಆಯಾ ದೇಶ, ರಾಷ್ಟ್ರ ಅಥವಾ ಸಮಾಜಕ್ಕಷ್ಟೇ ್ವಯಿಸುತ್ತಿದ್ದರೆ, 'ಪ್ಲಾಸ್ಟಿಕ್ ಯುಗ' ಎಂದು ಹೇಳಬಹುದಾದ ಯುಗ, ಭೂಮಭವ್ಯವಾಗಿದೆ; ವಿಶ್ವವ್ಯಾಪಕವಾಗಿದೆ; ಅಲ್ಲದೆ ಯುಗ'ವೆಂದು ಹೇಳಿಕೊಳ್ಳುವಷ್ಟು ಕ್ರಾಂತಿಕಾರಕವಾಗಿದೆ ಜ್ಞಾನ ಕ್ಷೇತ್ರದಲ್ಲಿ. ಆಂಗ್ಲ ಶಬ್ದಗಳು ಈ ವರೆಗೆ ನಮ್ಮ ಹಳ್ಳಿಗರ ಲಗೆ-ಕಿವಿಗಳೊಳಗೆ ಹೊಕ್ಕಿರಲಿಲ್ಲ. 'ಪ್ಲಾಸ್ಟಿಕ್' ಎಂಬ ಶಬ್ದ ಮ್ಮ ಹಳ್ಳಿಗರ ನಾಲಗೆ-ಕಿವಿಗಳ ವರೆಗೆ ಹೋದುದನ್ನು ನಿದರ್ಶಿಸಿ- ಇದರ ಇತ್ಯರ್ಥವಾಗದೆ ಇರದು. ಜಗತ್ತಿನ ಯಾವುದೇ ೂಲೆಯಲ್ಲಿ ವಾಸಿಸುವ ಚಿಕ್ಕ ಪುಟ್ಟ ಬಡ ಸಂಸಾರಗಳಲ್ಲಿಯೂ ಪ್ಲಾಸ್ಟಿಕ್ಕಿನ ಒಂದರ್ಧ ವಸ್ತು ಇದ್ದೇ ಇದೆ. ಇಂದಿನ ಸಂಸಾರಿಕರ ್ಯದ ಬಳಕೆಯ ವಸ್ತುಗಳು ಪ್ಲಾಸ್ಟಿಕ್, ಅಲಂಕಾರಿಕ ವಸ್ತುಗಳು ಪ್ಲಾಸ್ಟಿಕ್, ವಿನೋದವಿಹಾರದ ವಸ್ತುಗಳು ಪ್ಲಾಸ್ಟಿಕ್. ವಿದ್ಯುತ್ ಗುಂಡಿಗಳು, ಮೋಟರ್ ಹಾಗೂ ವಿಮಾನದ ಭಾಗಗಳು, ಹಾಡಿನ ಹಲಗೆಗಳು, ಆಕಾಶವಾಣಿಯ ಯಂತ್ರಗಳ ಹೊದಿಕೆಗಳು, ಬಾಚಣಿಗೆ, ಚಹದ ಬಟ್ಟಲುಗಳು, ಸಿಗರೇಟಿನ ಪೆಟ್ಟಿಗೆಗಳು, ಗುಂಡಿ, ನೀರಿನ ಹರಿವಾಣಿಗೆ, ಮೇಜು-ಕುರ್ಚಿ, ಪಾದರಕ್ಷೆ—ಮುಂತಾಗಿ, ಚಿಕ್ಕದರಿಂದ ದೊಡ್ಡದರ ವರೆಗಿನ ಎಲ್ಲವಸ್ತುಗಳೂ ಪ್ಲಾಸ್ಟಿಕ್ಕಿನವೆ. ದೊಡ್ಡ ದೊಡ್ಡ ಉದ್ಯಮಗಳಿಗೂ ಇದನ್ನು ಬಿಟ್ಟರೆ ಗತ್ಯಂತರವೇ ಇಲ್ಲವಾಗಿದೆ. ವಿದ್ಯುದುದ್ಯಮ, ಇಂಜನಿಯರಿಂಗ್ ಉದ್ಯಮ, ಆಟೊಮೊಬಾಯಿಲ್ ಉದ್ಯಮಗಳಿಗೆ ಪ್ಲಾಸ್ಟಿಕ್ಕೇ ಜೀವಾಳ. ಅಂತೆಯೇ ನಾವು ಈ ಯುಗವನ್ನು 'ಪ್ಲಾಸ್ಟಿಕ್ ಯುಗ' ಎಂದು ಕರೆದುದು. ಹೀಗೆ ಕರೆಯುವುದು ಅತಿಶಯೋಕ್ತಿ ಅಥವಾ ಪಕ್ಷ-ಪಾತವಾಗಿರದೆ, ಕೇವಲ ವಾಸ್ತವವಾದುದಾಗಿದೆ.

ಪ್ಲಾಸ್ಟಿಕ್ಕಿನ ಲೋಕಪ್ರಿಯತೆಗೆ ಅದರ ನಿಸರ್ಗಧರ್ಮಗಳೇ ಕಾರಣವಾಗಿವೆ. ಮೊದಮೊದಲು ಇದು ಬಿರುಸಾಗಿದ್ದು, ಒಡೆದು ಅಥವಾ ಮುರಿದು ಹೋಗುವ ಬಗೆಯದಿದ್ದರೂ, ಇತ್ತೀಚಿನ ಪ್ರಯೋಗ-ಪ್ರಯತ್ನಗಳಿಂದಾಗಿ ಸಾಕಷ್ಟು ನಯಗೊಂಡು ಅನು-ಪಾಯಕರವಾಗಿದ್ದುದು ಒಂದುಕಾರಣ. ಇದು ಸಾಕಷ್ಟು ನಯ-ಗೊಂಡುದರಿಂದ, ವಿವಿಧಾಕಾರದಲ್ಲಿ ರೂಪುಗೊಳ್ಳುತ್ತಿದ್ದುದು ಮತ್ತೊಂದು ಕಾರಣ. ಬೇರೆ ಬೇರೆ ಬಣ್ಣಗಳು ಇದರೊಡನೆ ಸಾಮರಸ್ಯಗೊಂಡು ಬೆರೆತು, ಅಲಂಕಾರ—ಶೋಭೆಗಳನ್ನುಂಟು ಮಾಡುತ್ತಿದ್ದುದೂ ಇನ್ನೊಂದು ಮುಖ್ಯ ಕಾರಣ. ಮಣ್ಣಿನ ವಸ್ತುಗಳನ್ನು ಕೊಳ್ಳುವಷ್ಟೇ ಅಗ್ಗದ ಬೆಲೆಯಲ್ಲಿದು ಸಿಕ್ಕುತ್ತಿ-ದ್ದುದು ಅತಿ ಹೆಚ್ಚಿನ ಕಾರಣ. ಹೀಗಾಗಿ ಬೆಳ್ಳಿ-ಬಂಗಾರದಂತಹ ಸಡಗರದ ವಸ್ತುಗಳೂ ಮೆಲ್ಲಮೆಲ್ಲನೆ ಪ್ಲಾಸ್ಟಿಕ್ಕಿನ ಹಿನ್ನೆಲೆಗೆ ಬೀಳ ತೊಡಗಿವೆ. ಇಷ್ಟೊಂದು ಲೋಕಪ್ರಿಯತೆಯನ್ನೂ, ವ್ಯಾಪಕತೆ ಯನ್ನೂ ಪಡೆದುಕೊಂಡಿರುವ ಈ ಪ್ಲಾಸ್ಟಿಕ್ಕಿನ ಪರಿಚಯವನ್ನೂ, ಅದರ ಅಂಗಾಂಗಗಳ ವಿವರವನ್ನೂ ಇಲ್ಲಿ ಕೊಡಲು ಪ್ರಯತ್ನಿಸ-ಲಾಗಿದೆ.

ಪ್ಲಾಸ್ಟರ್ ಆಫ್ ಪ್ಯಾರಿಸ್ (Plaster of Paris) ಜೇಡಿ ಮಣ್ಣು ಅಥವಾ ಗಾಜು ಅಲ್ಲದೆ ಪ್ಲಾಸ್ಟಿಕ್ ವಸ್ತುಗಳು ಬೇರೆ ಇವೆ. ಇವು ಮೆತ್ತಗಿರುವಾಗ ಇವುಗಳಿಂದ ಬೇಕಾದ ಆಕಾರದ ವಸ್ತು-ಗಳನ್ನು ತಯಾರಿಸಬಹುದು. ಕಳೆದ ಯುದ್ಧ ಮುಗಿಯುವತನಕ ಲ್ಯಾಕ್ (Lac), ಪಿಚ್ (Pitch), ಕೇಸಿನ್ (Casein) ಸೆಲ್ಯುಲಾಯಿಡ್ (Celluloid) ಮತ್ತು ರಬ್ಬರ್‌ಗಳನ್ನು ಬಿಟ್ಟರೆ, ಮತ್ತಾವ ಪ್ಲಾಸ್ಟಿಕ್ ವಸ್ತುಗಳು ಗೊತ್ತಾಗಿದ್ದಿಲ್ಲ. ಮೊದ-ಮೊದಲು ಮೇಲೆ ತಿಳಿಸಿದ ವಸ್ತುಗಳಲ್ಲಿ, ಲ್ಯಾಕ್ ಹಾಡಿನ ಹಲಗೆ ಗಳ ತಯಾರಿಯಲ್ಲಿಯೂ, ಪಿಚ್ ಬ್ಯಾಟ್ರೀಕೇಸಿನ ತಯಾರಿ ಯಲ್ಲಿಯೂ, ಕೇಸೀನ್ ಗುಂಡಿ ಮತ್ತು ಬಕಲ್ಸ್‌ಗಳ ತಯಾರಿ ಯಲ್ಲಿಯೂ ಮತ್ತು ಸೆಲ್ಯುಲಾಯಿಡ್ ಬಾಚಣಿಗೆ, ಆಟಿಗೆ ಸಾಮಾನುಗಳ ತಯಾರಿಯಲ್ಲಿಯೂ ಉಪಯೋಗವಾಗುತ್ತಿದ್ದುವು. ಆದರೆ ಇವುಗಳಲ್ಲಿ ಕೆಲವೊಂದು ಸ್ವಾಭಾವಿಕ ಕುಂದುಗಳು

* ಹೈದರಾಬಾದಿನ ಆಕಾಶವಾಣಿಯಲ್ಲಿ ಬಿತ್ತರಗೊಂಡ ಪ್ರಬಂಧವಿದು.
—ಲೇ.

ಉದಾಹರಣೆಗಾಗಿ, ಸೆಲ್ಯುಲಾಯಿಡ್ ಉರಿಯುವ ಪದಾರ್ಥ ಎದ್ದ ಕಾರಣ) ಇದ್ದುದರಿಂದ, ಇತ್ತೀಚೆಗೆ ಬೇರೆ ಪ್ಲಾಸ್ಟಿಕ್ ವಸ್ತುಗಳು ಉಪಯೋಗದಲ್ಲಿ ಬಂದಿವೆ.

ಸಂಯೋಜಿತ ಪ್ಲಾಸ್ಟಿಕ ವಸ್ತುಗಳು (Synthetic plastic materials) ಉಕ್ಕಿಗಿಂತ ಹೆಚ್ಚು ಗಟ್ಟಿ ಇರುವುದಲ್ಲದೆ ಧಾತುವಿಗಿಂತ ಹಗುರವಾಗಿರುತ್ತವೆ. ಇವು ಉರಿದು ಅಥವಾ ಮುರಿದು ಹೋಗುವುದಿಲ್ಲ. ಇವುಗಳ ಮೇಲೆ ಗಾಳಿ, ಆಮ್ಲ ಮತ್ತು ಕ್ಷಾರಗಳ ಯಾವುದೂ ಪರಿಣಾಮವಾಗುವುದಿಲ್ಲ. ಬೇಕಾದ ಬಣ್ಣಗಳಲ್ಲಿ ಇವುಗಳನ್ನು ತಯಾರಿಸಬಹುದಾಗಿದೆ.

ಪ್ಲಾಸ್ಟಿಕ್ಕಿನಲ್ಲಿ ಎರಡು ತರ. ಒಂದನೆಯದು **ಥರ್ಮೊಪ್ಲಾಸ್ಟಿಕ್** (Thermo-plastic). ಇದು ಬಿಸಿ ಮಾಡುವುದರಿಂದ ಸಾಕಷ್ಟು ಮೆತ್ತಗಾಗುತ್ತದೆ. ಮೆತ್ತಗಾದ ಮೇಲೆ ಬೇಕಾದ ಆಕಾರದಲ್ಲಿ ರೂಪಿಸಿ, ತಣ್ಣಗೆ ಮಾಡಿದಲ್ಲಿ ಗಟ್ಟಿಯಾಗಿಬಿಡುತ್ತದೆ. ಪುನಃ ಇದನ್ನು ಬಿಸಿ ಮಾಡಿದಲ್ಲಿ ಮೆತ್ತಗಾಗುತ್ತದೆ. ವಲ್ಕನಾಯಿಟ (Vulcanite) ಮತ್ತು ಸೆಲ್ಯುಲಾಯಿಡ್ (Celluloid) ಗಳು ಈ ವರ್ಗಕ್ಕೆ ಸಂಬಂಧಪಟ್ಟುವುಗಳು

ಎರಡನೆಯದು **ಥರ್ಮೊ-ಸೆಟಿಂಗ್ ಪ್ಲಾಸ್ಟಿಕ್** (Thermo-setting plastic). ಇದರ ರೀತಿಯೇ ಬೇರೆ. ಬಿಸಿ ಮಾಡುವುದರಿಂದ ಇದು ಕೂಡ ಮೆತ್ತಗಾಗುತ್ತದೆ. ಹೀಗೆ ಬಿಸಿ ಇರುವಾಗ ಇದರಲ್ಲಿ ರಾಸಾಯನಿಕ ಕ್ರಿಯೆಯಾಗಿ, ಒಂದು ಗಟ್ಟಿಯಾದ ಪದಾರ್ಥ ತಯಾರಾಗುತ್ತದೆ. ಪುನಃ ಇದನ್ನು ಬಿಸಿ ಮಾಡುವುದರಿಂದ ಇದು ಮೆತ್ತಗಾಗುವುದಿಲ್ಲ. ಬೆಕ್‌ಲಾಯಿಟ್ (Bakelite) ಎರಕದಪುಡಿ ಈ ವರ್ಗಕ್ಕೆ ಸೇರಿದ್ದು.

ಈ ತರದ ವಸ್ತುಗಳಲ್ಲಿ ಎಲ್ಲಕ್ಕೂ ಮೊದಲು ತಯಾರಾದದ್ದು ಬೆಕ್‌ಲಾಯಿಟು. ಇದೊಂದು ಪ್ರಕಾರದ ಪ್ಲಾಸ್ಟಿಕ್. ಇದನ್ನು ಎಲ್ಲಕ್ಕೂ ಮೊದಲು ೧೯೦೬ ರಲ್ಲಿ ಅಮೇರಿಕೆಯ ಸಂಯುಕ್ತ ರಾಷ್ಟ್ರದಲ್ಲಿ ಕೆಲಸಮಾಡುತ್ತಿದ್ದ ಬೆಲ್ಜಿಯಮಿನ ಸುಪ್ರಸಿದ್ಧ ರಸಾಯನ ಶಾಸ್ತ್ರಜ್ಞನಾದ ಬೆಕ್‌ಲ್ಯಾಂಡ್ (Backeland) ಎಂಬಾತನು ಫೀನೋಲ್ ಮತ್ತು ಫಾರ್ಮ್ ಆಲ್ಡಿಹಾಯಿಡ್ (Phenol and Formaldehyde) ಎಂಬ ಎರಡು ವರ್ಣರಹಿತ ದ್ರವಗಳ ಸಂಯೋಗದಿಂದ ತಯಾರಿಸಿದನು. ಅಂತೆಯೇ ಇದಕ್ಕೆ ಅವನ ಹೆಸರಿನಿಂದ 'ಬೆಕ್‌ಲಾಯಿಟ್' ಎಂದು ಕರೆಯುತ್ತಾರೆ

ಮೇಲೆ ತಿಳಿಸಿದ ಎರಡು ದ್ರವಗಳನ್ನು ಸರಿಯಾಗಿ ಮಿಶ್ರಮಾಡಿ ಬಿಸಿ ಮಾಡಿದರೆ, ಯಾವ ಕ್ರಿಯೆಯೂ ಆಗುವುದಿಲ್ಲ. ಒಂದು ವೇಳೆ ಬಿಸಿ ಮಾಡುವುದಕ್ಕಿಂತ ಮೊದಲು ಈ ಮಿಶ್ರಣದಲ್ಲಿ ಅಮೋನಿಯಾ ಸೇರಿಸಿ, ಆಮೇಲೆ ಸ್ವಲ್ಪ ವೇಳೆಯ ವರೆಗೆ ಬಿಸಿ ಮಾಡಿದಲ್ಲಿ ಒಂದು ವಿಚಿತ್ರ ಬದಲಾವಣೆ ಆಗುತ್ತದೆ. ಎರಡೂ ದ್ರವಗಳು ಒಂದಕ್ಕೊಂದು ಕೂಡಿಕೊಂಡು, ಎರಡು ಭಾಗಗಳಲ್ಲಿ (ಒಂದು ಹಳದಿ ಇನ್ನೊಂದು ವರ್ಣರಹಿತ) ಬೇರೆ ಬೇರೆ ಆಗಿ ಬಿಡುತ್ತವೆ. ವರ್ಣರಹಿತ ಭಾಗವು ನೀರಿನಿಂದ ಕೂಡಿದ ಮೂಲಕ, ಅದನ್ನು ಯೋಗ್ಯ ರೀತಿಯಿಂದ ಬೇರ್ಪಡಿಸಿ, ಹಳದಿ ಬಣ್ಣದ ದ್ರವವನ್ನು ತಣ್ಣ ಮಾಡಿದಲ್ಲಿ, ಒಂದು ತರದ ರಾಳದಂತಹ ಪದಾರ್ಥ ತಯಾರಾ ತ್ತದೆ. ಇದೇ ಬೆಕ್‌ಲಾಯಿಟು. ಇದರಲ್ಲಿ ರಾಳದ ಎಲ್ಲ ಗುಣಗ ಇರುತ್ತದೆ. ಬೆಕ್‌ಲಾಯಿಟಿನ ತಯಾರಿಯಲ್ಲಿ ಉಪಯೋಗವಾಗ ಫಾರ್ಮ್‌ಆಲ್ಡಿಹಾಯಿಡು ಮೆಥಿಲ್‌ಆಲ್ಕೋಹಲ್ (Meth Alcohol) ನ ಆಕ್ಸಿಡೇಷನ್ (Oxidation) ನಿಂದ ಫಿನೋ ಅಥವಾ ಕಾರ್ಬಾಲಿಕ್ ಆಮ್ಲವು ಕಲ್ಲಿದ್ದಲಿಯ ಮದ್ಯ-ಸಂಧಾ (Distillation) ದಿಂದ ಅಥವಾ ಬೆಂಜೀನ್ (Benzene ದಿಂದ ತಯಾರಿಸಲ್ಪಡುತ್ತದೆ.

ಬೆಕ್‌ಲಾಯಿಟಿನ ಸಂಶೋಧನೆ ಆದ ನಂತರ, ೧೯೧೦ (ಸೆಲ್ಯುಲೋಜ ಎಸಿಟೇಟ್ (Cellulose Acetate) ನಿ ಪ್ಲಾಸ್ಟಿಕ್‌ಗಳನ್ನು ತಯಾರಿಸುವುದು ಪ್ರಾರಂಭವಾಯಿತು. ೧೯ ರಲ್ಲಿ ಸುಪ್ರಸಿದ್ಧ ರಸಾಯನ ಶಾಸ್ತ್ರಜ್ಞನಾದ ಪೋಲಕ್ (Polla ಎಂಬಾತನು, ಯೂರಿಯಾ ಮತ್ತು ಫಾರ್ಮ್‌ಆಲ್ಡಿಹಾಯಿ (Urea and Formaldehyde) ಗಳಿಂದ ಪ್ಲಾಸ್ಟಿಕನ್ನು ತಯಾ ರಿಸಿದನು. ೧೯೩೧ ರಲ್ಲಿ ಎಕ್ರಿಲಿಕ್ (Acrylic) ರಾಳ ಸಂಶೋಧನೆ ಆಯಿತು. ಇವು ಕಾಜಿನ ಬದಲಾಗಿ ವಿಮಾ ಗಳಲ್ಲಿ ಉಪಯೋಗ ಮಾಡಲ್ಪಟ್ಟುವು. ೧೯೨೭ರಲ್ಲಿ ಪೆಟ್ರೋಲಿಯ ಅನಿಲಗಳಿಂದ ಪಾಲಿವ್ಹಿನಿಲ್ (Polyvinyl) ರಾಳಗಳು, ೧೯ ರಲ್ಲಿ ನಿಲಾನ್ (Nylon) ರಾಳಗಳು ತಯಾರ ಮಾಡಲ್ಪಟ್ಟು

ಇತ್ತೀಚೆಗೆ ಗ್ಲಿಸರೀನ್ ಮತ್ತು ಥ್ಯಾಲಿಕ್ ಎನ್ ಹೈಡ್ರಾಯಿ (Glycerine and Phthalic anhydride) ಗಳಿಂದ, ಹಾ ನಲ್ಲಿದ್ದ ಕೇಸೀನ್‌ನಿಂದ ಪ್ಲಾಸ್ಟಿಕ್ಕನ್ನು ತಯಾರಿಸುವುದು ಪ್ರಾರ ಭವಾಗಿ ಬಿಟ್ಟಿದೆ. ಇದಲ್ಲದೆ ಕಾಜಿನಂತೆ ಶುಭ್ರ ಹಾಗೂ ಸ್ವ ಪ್ಲಾಸ್ಟಿಕ್ಕನ್ನು ತಯಾರಿಸುವುದೂ ಸಾಧ್ಯವಾಗಿದೆ.

ಪ್ಲಾಸ್ಟಿಕ್ಕಿನ ಉದ್ಯಮವನ್ನು ಮೂರು ಭಾಗಗಳಲ್ಲಿ ವಿಂಗಡಿ ಬಹುದು : (೧) ಸಂಯೋಜಿತ ರಾಳ ಅಥವಾ ಅಂಟುಗಳನ (Synthatic resins) ತಯಾರಿಸುವುದು. (೨) ಎರಕದ ಪ (Moulding Powder) ತಯಾರಿಸುವುದು. (೩) ಪಡಿಯಚ್ಚು ಗಳ ಮೂಲಕ ವಸ್ತುಗಳನ್ನು ತಯಾರಿಸುವುದು.

ಸಂಯೋಜಿತ ಅಂಟುಗಳ ತಯಾರಿಯಲ್ಲಿ ಉಪಯೋಗಿಸಲ್ಪಡು ಕಚ್ಚಾವಸ್ತುಗಳಲ್ಲಿ ಮುಖ್ಯವಾದುವುಗಳು:— ಕಲ್ಲಿದ್ದಲಿ, ಸುಣ್ಣ ಪೆಟ್ರೋಲಿಯಂ, ಸೆಲ್ಯುಲೋಜಿಕ್ ವಸ್ತುಗಳು ಮತ್ತು ಕೇಸೀ ಮುಂತಾದುವುಗಳು.

ಕಲ್ಲಿದ್ದಲಿಯ ಮದ್ಯ-ಸಂಧಾನದಿಂದ ಕೋಕ್ (Coke ಬೆಂಜಾಲ್ (Benzol), ಫೀನೋಲ್ ಮುಂತಾದುವುಗಳು ತಯಾ ರಾಗುತ್ತವೆ. ಇಂಗಾಲವನ್ನು ಸುಣ್ಣದ ಸಂಗಡ ಸುಡುವುದರಿಂ ಕ್ಯಾಲ್ಸಿಯಂ ಕಾರ್ಬೈಯಿಡು (Calcium carbide) ಹುಟ್ಟುತ್ತ ಇದರ ಮೇಲೆ ನೀರಿನ ಕ್ರಿಯೆಯಿಂದ ಎಸಿಟಲೀನ್ (Acetylene ತಯಾರಾಗುತ್ತದೆ. ಈ ತೆರನಾಗಿ ತಯಾರಾದ ಎಸಿಟಲೀನ್‌ನಿಂ

ಪ್ರಾರಂಭ ಮಾಡಿಕೊಂಡು, ಅನೇಕ ಪ್ಲಾಸ್ಟಿಕ್ ವಸ್ತುಗಳನ್ನು ತಯಾರಿಸಬಹುದಾಗಿದೆ.

ಎರಡನೆಯ ವಿಧಾನದಲ್ಲಿ ಕ್ಯಾಲ್ಸಿಯಂ ಕಾರ್ಬ್ಯಾಯಿಡ್‌ನಿಂದ ಸೈನಾಮಾಯಿಡ್ (Cyanamide) ತಯಾರಿಸಿ, ಇದರಿಂದ ಯೂರಿಯಂ ತಯಾರಿಸುತ್ತಾರೆ. ಅನಂತರ ಮೇಲೆ ತಿಳಿಸಿದಂತೆ ಯೂರಿಯಂ ಮತ್ತು ಫಾರ್ಮ್‌ಆಲ್ಡಹಾಯಿಡುಗಳಿಂದ ಪ್ಲಾಸ್ಟಿಕ್ಕನ್ನು ತಯಾರಿಸಬಹುದಾಗಿದೆ.

ಪೆಟ್ರೋಲಿಯಂ ಅನಿಲಗಳನ್ನು (Petrolium gases) ಯೋಗ್ಯ ವಿಧಾನದಿಂದ ಅಲಿಫಾಯಿನ್ಸ್ (Olefines) ನಲ್ಲಿ ರೂಪಾಂತರಿಸಿ, ಇದೇ ವರ್ಗಕ್ಕೆ ಸಂಬಂಧಪಟ್ಟ ಬುಟಾಡೀನ್ (Butadiene) ನಿಂದ ಪ್ರಾರಂಭ ಮಾಡಿಕೊಂಡು ಸಂಯೋಜಿತ ಅಂಟು ಅಥವಾ ರಾಳಗಳನ್ನು ತಯಾರಿಸಬಹುದು.

ಸಂಯೋಜಿತ ಅಂಟುಗಳ ತಯಾರಿಯಲ್ಲಿ ಉಪಯೋಗವಾಗುವ ಮುಖ್ಯ ವಸ್ತು ಫಾರ್ಮ್‌ಆಲ್ಡಹಾಯಿಡು. ಇದು ಮೆಥಿಲ್ ಅಲ್ಕೋಹಲಿನ ಆಕ್ಸಿಡೇಷನ್‌ನಿಂದ ತಯಾರಾಗುತ್ತದೆ. ಮೆಥಿಲ್ ಅಲ್ಕೋಹಲು ಕಟ್ಟಿಗೆಯ ಮದ್ಯ-ಸಂಧಾನದಿಂದಾಗಲಿ ಅಥವಾ ಜಲ-ಅನಿಲ (Water-gas) ವನ್ನು ವೇಗವರ್ಧಕದ (Catalys) ಸಂಗಡ ೩೦೦–೪೦೦ ಉಷ್ಣತೆಯ ವರೆಗೆ ೨೦೦ ಒತ್ತಡದ ಮೇಲೆ ಕಾಯಿಸಿದಲ್ಲಿ ತಯಾರಾಗುತ್ತದೆ. ಒಟ್ಟಿನ ಮೇಲೆ ಪ್ಲಾಸ್ಟಿಕ್ಕಿನ ಉದ್ಯಮದ ಉನ್ನತಿ ಆಗಬೇಕಾದರೆ, ರಾಸಾಯನಿಕ ಉದ್ಯಮಗಳ ಬೆಳವಣಿಗೆ ಸಾಕಷ್ಟು ಆಗಬೇಕು.

ಬೆಕ್‌ಲಾಯಿಟು ತಯಾರಿಸಿದ ನಂತರ ಎರಡನೆಯ ಕೆಲಸ ಅದನ್ನು filler ಸಂಗಡ ಬೆರೆಯಿಸುವುದು. ಕಟ್ಟಿಗೆಯ ಹಿಟ್ಟು ಅಥವಾ ಉತ್ತಮ ಗರಗಸ ಹಿಟ್ಟು filler ನಂತೆ ಉಪಯೋಗವಾಗುತ್ತದೆ. ಒಂದು ವೇಳೆ ಬಣ್ಣದ ಪ್ಲಾಸ್ಟಿಕ್ಕನ್ನು ತಯಾರಿಸಬೇಕಾಗಿದ್ದಲ್ಲಿ, filler ಸಂಗಡ ತರತರದ ಬಣ್ಣದ ವಸ್ತುಗಳನ್ನು ಕೂಡಿಸುತ್ತಾರೆ. ಉದಾಹರಣೆಗಾಗಿ— ನೀಲಿಬಣ್ಣ ಬೇಕಾಗಿದ್ದಲ್ಲಿ ಕೋಬಾಲ್ಟ್ ಆಕ್ಸಾಯಿಡು (Cobalt oxide), ಹಸಿರು ಬಣ್ಣ ಬೇಕಾಗಿದ್ದಲ್ಲಿ ಕ್ರೋಮಿಯಂ ಆಕ್ಸಾಯಿಡು (Chromium Oxide), ಕೆಂಪು ಬೇಕಾಗಿದ್ದಲ್ಲಿ ಎಂಟಿಮನಿ ಸಲ್ಫಾಯಿಡು (Antimony Sulphide), ನೀರಲಬಣ್ಣ ಬೇಕಾಗಿದ್ದಲ್ಲಿ ಮೆಂಗನೀಜ್ ಮತ್ತು ನಿಕ್ಕಲ್ ಆಕ್ಸಾಯಿಡು (Manganese and Nickel oxides) ಗಳು ಉಪಯೋಗವಾಗುತ್ತವೆ.

ಗಚ್ಚಿನ ತಯಾರಿಯಲ್ಲಿ ಸಿಮೆಂಟಿನ ಜೊತೆಗೆ ಉಸುಕು ಯಾವ ರೀತಿ ಕೆಲಸ ಮಾಡುತ್ತದೆಯೋ ಅದೇ ರೀತಿ, ಪ್ಲಾಸ್ಟಿಕಿನ ತಯಾರಿಯಲ್ಲಿ filler ಕೆಲಸ ಮಾಡುತ್ತದೆ.

ಬೆಕ್‌ಲಾಯಿಟ್ ವಸ್ತುವಿನಲ್ಲಿ filler ಕೂಡಿಸಿ, ಸ್ವಲ್ಪ ವೇಳೆಯ ವರೆಗೆ ಸಾವಕಾಶವಾಗಿ ಬಿಸಿ ಮಾಡಿ, ಒಂದು ದೊಡ್ಡ ಯಂತ್ರದಲ್ಲಿ ಚೆನ್ನಾಗಿ ಅರೆಯುವಂತೆ ಏರ್ಪಾಡು ಮಾಡಿದಲ್ಲಿ, ರಾಸಾಯನಿಕ ಕ್ರಿಯೆಯಾಗಿ, ಒಂದು ಗಟ್ಟಿಯಾದ ಪದಾರ್ಥ ತಯಾರಾಗುತ್ತದೆ. ಈ ರೀತಿ ತಯಾರಾದ ಪದಾರ್ಥವನ್ನು ಚೆನ್ನಾಗಿ ಪುಡಿ ಮಾಡಿದಲ್ಲಿ, ಅದು ಯಾವ ಆಕಾರದಲ್ಲಿ ಬೇಕೋ ಆ ಆಕಾರದಲ್ಲಿ ರೂಪುಗೊಳ್ಳುತ್ತದೆ. ಇದಕ್ಕೆ ಎರಕದ ಪುಡಿ (Moulding Powder) ಎಂದು ಹೆಸರು.

ಪಡಿಯಚ್ಚುಗಳು ಉಕ್ಕಿನಿಂದ ಮಾಡಲ್ಪಡುತ್ತವೆ. ಇವುಗಳ ಒಳಭಾಗದಲ್ಲಿ ಕ್ರೋಮಿಯುಮಿನ ಲೇಪ ಕೊಡುತ್ತಾರೆ. ಉಪಯೋಗ ಮಾಡುವುದಕ್ಕಿಂತ ಮೊದಲು ಇವುಗಳನ್ನು ಬಿಸಿ ಮಾಡಿ, ಇವುಗಳಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಎರಕದ ಪುಡಿ ತುಂಬಿ, ಕಾಯಿಸಿದ ಹೈಡ್ರಾಲಿಕ್ ಪ್ರೆಸ್ಸಿನಲ್ಲಿ (Hydraulic Press) ಒತ್ತಿ, ಸ್ವಲ್ಪ ವೇಳೆಯಾದ ನಂತರ ಅಚ್ಚಿನಿಂದ ಹೊರಕ್ಕೆ ತೆಗೆದರೆ, ಪಡಿಯಚ್ಚಿನ ಆಕಾರದ ವಸ್ತುಗಳು ಸಿದ್ಧವಾಗಿರುತ್ತವೆ. ಹೀಗೆ ತಯಾರಾದ ವಸ್ತುಗಳಿಗೆ ಮತ್ತೆ ಕೈಹಚ್ಚಿ ಅಣಿಗೊಳಿಸುವ ಕಾರಣವೇ ಇರುವುದಿಲ್ಲ. ಇದ್ದಹಾಗೆಯೇ ಅವುಗಳನ್ನು ಪೇಟೆಗೆ ಸಾಗಿಸಬಹುದು.

ಪ್ಲಾಸ್ಟಿಕ್ಕಿನ ಉದ್ಯಮ ಇನ್ನೂ ಶೈಶವಾವಸ್ಥೆಯಲ್ಲಿದೆಯೆಂದು ಹೇಳಬಹುದು. ಮುಂಬರುವ ದಿನಗಳಲ್ಲಿ ಇದು ಹೊಸ ಹೊಸ ಪ್ರಯೋಗಗಳಿಗಾಸ್ಪದವಾಗಿ, ತುಂಬಾ ಅಭಿವೃದ್ಧಿಗೊಳ್ಳುವುದೆಂಬುದು ನಿರ್ವಿವಾದವಾದುದು. ಇದು ಮುಂದೆ ಎಲ್ಲಿಗೆ ಮುಟ್ಟಿಕೊಳ್ಳುತ್ತದೆ ಎಂಬುದನ್ನು ಈಗ ಹೇಳುವುದು ಅಸಾಧ್ಯ. "ಒಂದು ದಿನ ಬರಬಹುದು: ನಾವು ನಮ್ಮ ಮನೆಗಳ ಗೋಡೆ, ನೆಲ-ಮಾಳಿಗೆ, ಕಿಟಕಿಗಳನ್ನು ಪ್ಲಾಸ್ಟಿಕ್‌ನಿಂದಲೇ ಕಟ್ಟಿ, ಅದರಲ್ಲಿ ಅದೇ ಬಗೆಯ ಕುರ್ಚಿ, ಮೇಜು, ಕಪಾಟುಗಳನ್ನು ಇರಿಸುತ್ತೇವೆ" ಎಂದು ಸಾರಿದ ಭವಿಷ್ಯವಾದಿಯ ಕಾಲಜ್ಞಾನವನ್ನು ಕಾಲಚಕ್ರವೇ ಪರೀಕ್ಷಿಸಬೇಕಾಗಿದೆ.

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ ಔಷಧಿ!

ಡಾ. ವಾಮನ ಗೋಪಾಳ ಇವರ

ಸಾರ್ಸಾ ಪರಿಲ್ಲಾ

ಪ್ರೊಫೆಸರ್ ರಾವ್

(ಸಣ್ಣಕಥೆ)

ಶ್ರೀ. ಕೃಷ್ಣಮೂರ್ತಿ ಕಿತ್ತೂರ, ಬೆಳಗಾಂವಿ

★

ದಾಂಪತ್ಯಜೀವನದಲ್ಲಿ ಪರಸ್ಪರರ ಅಭಿಲಾಷೆ-ಆ ಗುಟ್ಟುಗಳನ್ನು ಅರಿತುಕೊಳ್ಳದೆ ನಡೆಯುವುದರಿಂದ ಇಂದು ಮನೆ-ಮನೆಗಳಲ್ಲೂ ವಿರಸತೆ ಕಂಡುಬರುತ್ತಿದೆ. ಶಾರದಮ್ಮನಿಗೆ ಅಂದು ಪತಿಯ ದಿನ ದೊರೆಯದೆ ಹೋಗಿದ್ದರೆ ?....

★

ಪ್ರೊಫೆಸರ್ ರಾವ್ ಅವರ ಮನೆಯ ಬಾಗಿಲ ಮುಂದೆ ನಿಂತು ಸುಮಾರು ಹದಿನಾಲ್ಕು ಹದಿನೈದು ವರ್ಷದ ಹುಡುಗನೊಬ್ಬ "ಕಾಲಬೆಲ್"ನ್ನು ಒತ್ತುತ್ತಲಿದ್ದ. ಒಳಗಿನಿಂದ ಅವರ ಹೆಂಡತಿ ಮುಖ ಗಂಟಿಕ್ಕಿಕೊಂಡು ಬಂದು ಬಾಗಿಲನ್ನು ತೆರೆದು:

"ಯಾರು ಬೇಕು? ಏನು ಕೆಲಸ? ಅವರೀಗ ಮಲಗಿಕೊಂಡಿದ್ದಾರೆ!" ಎಲ್ಲವನ್ನೂ ಒಂದೇ ಉಸುರಿನಲ್ಲಿ ನುಡಿದರು.

"ಪ್ರೊ ರಾವ್ ಅವರನ್ನು ಕಾಣಬೇಕಿತ್ತಮ್ಮಾ. ನಾನೊಬ್ಬ ಬಡ ವಿದ್ಯಾರ್ಥಿ......" ಆತ ಇನ್ನೂ ಹೇಳಲಿದ್ದ. ಆದರೆ ಅವರು ನಡುವೆಯೇ ಆತನನ್ನು ತಡೆದು:

"ಅವರು ಮಲಗಿಕೊಂಡಿದ್ದಾರೆ— ಅಂದರೆ ತಿಳಿಯೋದಿಲ್ಲವೇ? ಮುಂಜಾನೆಯಿಂದ ಮರುದಿನ ಮುಂಜಾನೆಯ ವರೆಗೂ ಈ ಜನರ ಕಾಟವೇ ತಪ್ಪುವುದಿಲ್ಲ. ರವಿವಾರವಾದರೂ ಬಿಡುವು ಬೇಡವೇ?.... ಅವರೀಗ ಮಲಗಿಕೊಂಡಿದ್ದಾರೇ ಅಂದೆ. ನಿದ್ರೆ ಹತ್ತಿದೆ ಅವರಿಗೆ, ತಿಳಿಯಿತೇ?" ಮುಖ ತುಸು ಉಗ್ರವಾಗಿದ್ದಿತು.

"ಯಾವಾಗ ಏಳಬಹುದು ತಾಯಿ?"

"ನಾನೇನು ಭವಿಷ್ಯ ಹೇಳುವವಳೇ?.... ಅವರು ಯಾವಾಗ ಎದ್ದರೂ ಈಗ ಅವರಿಗೆ ವೇಳೆ ದೊರೆಯದು. ಸಾಯಂಕಾಲ ಆರುಗಂಟೆಯ ಶೋಕ್ಕೆ ಹೋಗಲಿದ್ದಾರೆ ಅವರು!"

"ಐದೇ ನಿಮಿಷ ಭೆಟ್ಟಿಯಾಗಬೇಕಿತ್ತು; ಹಾಗಾದರೆ ನಾನು ಯಾವಾಗ ಬಂದರೆ ಒಳಿತಾದೀತು?"

"ಒಳಿತೆಲ್ಲಿಂದ ಬಂತು!" ಈ ಶನಿ ತೊಲಗವೊಲ್ಲದಲ್ಲ— ಎಂದುಕೊಂಡರು ಮನದಲ್ಲಿಯೇ. "ನಾಳೆ ನಾಡಿದ್ದು ಯಾವಾಗ-ಲಾದರೂ ಕಾಲೇಜಿನಲ್ಲಿಯೇ ಭೆಟ್ಟಿಯಾಗು." ಎಂದು ಬೇಸರದ ಧ್ವನಿಯಲ್ಲಿ ನುಡಿದರು. ಬಾಗಿಲು 'ಧಡಲ್' ಎಂದು ಸಪ್ಪಳ-ಮಾಡಿತು. ಅವರು ತಮ್ಮಷ್ಟಕ್ಕೆ ತಾವೇ ಏನೋ ವಟಗುಟ್ಟುತ್ತ ಒಳಗೆ ನಡೆದರು.

ಬಾಗಿಲಿಕ್ಕಿದ ಸದ್ದಿಗೆ ಪ್ರೊಫೆಸರರಿಗೆ ಎಚ್ಚರಾಯಿತು-

"ಏನು ಅದು? ಯಾರು ಬಂದಿದ್ದರು? ಹೋದರೋ ಕುಳಿತಿರುವರೋ?" ಕಣ್ಣುಜ್ಜಿಕೊಳ್ಳುತ್ತ ಕೇಳಿದರವರು.

"ಯಾರೇನು? ಈ ಜನರಿಗೆ ಕಿಂಚಿತ್ತಾದರೂ 'ಸಿವ್ಹಿಲ್' ಸೆನ್ಸೇ' ಇಲ್ಲ. ಮಲಗಿಕೊಂಡವರಿಗೆ ಬಂದು ತೊಂದರೆಕೊಡುವುದೆಂದರೆ ಇವರಿಗೆ ಯಾವ ದೋಷವೂ ಇಲ್ಲ! ಯಾವನೋ ವಿದ್ಯಾರ್ಥಿಯಂತೆ! ನೀವು ಮಲಗಿಕೊಂಡಿದ್ದಿರಿ, ಸುಮ್ಮನೆ ಎಬ್ಬಿಸುವುದೇಕೆ ಹಾಗೆಯೆ ಕಳಿಸಿದೆ."

ಪ್ರೊಫೆಸರರು ಗಡಿಯಾರದ ಕಡೆಗೆ ನೋಡಿದರು. ಆ ನಾಲ್ಕೂವರೆಯಾಗಿ ಹೋಗಿದ್ದಿತು.

"ಎಬ್ಬಿಸಿದ್ದರೇನೇ ಚೆನ್ನಾಗಿತ್ತು. ಬಹುದೂರ ಹೋದನೆ ಆತ?" ಎನ್ನುತ್ತ ಹಾಗೇ ಹೊರಗೆ ಬಂದರು.

ಬೀದಿಯಲ್ಲಿ ಸುಮಾರು ಮೂವತ್ತು ಹೆಜ್ಜೆಯ ಅಂತರ ಬೆನ್ನಮೇಲೆ ಹರಿದ ಶರ್ಟು ತೊಟ್ಟ, ಲಂಡ ಚಣ್ಣದ ಹುಡ ನೊಬ್ಬ ಕಾಲೆಳೆಯುತ್ತ ಹೊರಟಿದ್ದ. ನಡಿಗೆ ನೊಂದ ಮ ಸೂಚಕವಾಗಿದ್ದಿತು. ತಮ್ಮ ಕಡೆಗೆ ಬಂದವ ಆತನೇ ಇರಬೇಕೆ ಅವರಿಗೆ ಹೊಳೆಯಿತು. ಆದರೆ ಆತನನ್ನು ಹೇಗೆ ಕರೆಯ ಕೆಂಬುದೇ ಅವರಿಗೆ ತಿಳಿಯಲಿಲ್ಲ. ಹೆಸರಂತೂ ಗೊತ್ತೇ ಇಲ್ಲ

ಕೊನೆಗೆ ಎರಡು ಸಲ ಚಪ್ಪಾಳೆ ಬಾರಿಸಿದರು. ಆದರೆ ರಿಂದೇನೂ ಉಪಯೋಗವಾಗಲಿಲ್ಲ. ಅದು ಆತನಿಗೆ ಕೇಳ ಲಿಕ್ಕಿಲ್ಲ. ಓಡಿಹೋಗಿ ಕರೆಯಬೇಕು— ಎಂದಿತು ಅನುಭವಗಳನ್ನುಂಡ—ಅವರ ವಿಚಾರಶೀಲ ಮನಸ್ಸು. ಅ ಅವರು ಪ್ರೊಫೆಸರರು! ಅವರಲ್ಲಿಯೂ ಅದೇ ಮಲಗಿಕೊ ಎದ್ದ ಸ್ಥಿತಿಯಲ್ಲಿದ್ದವರು. ಮುಖ ಕೂಡ ತೊಳೆದಿರಲಿಲ್ಲ; ಅ ಗಳನ್ನೂ ಬದಲುಮಾಡಿರಲಿಲ್ಲ ಒಂದು ಕ್ಷಣದಲ್ಲಿ ಅನೇಕ ವಿಚ ಗಳು ಸುಳಿದುಹೋದುವು ಅವರ ತಲೆಯಲ್ಲಿ. ಅಷ್ಟರಲ್ಲಿ ಇನ್ನೂ ನಾಲ್ಕು ಹೆಜ್ಜೆ ಮುಂದೆ ಹೋಗಿದ್ದ. ಕೊನೆಗೆ ವಿವ ದಿಂದ ಸುಸಂಸ್ಕೃತವಾದ ಅವರ ಮನಸ್ಸು, ಅವರನ್ನು ಹತ್ತು ಓಡುವಂತೆಯೇ ಮಾಡಿತು. ಆಗ ಅವರ ಕೈಚಪ್ಪಾಳೆಯ ಸ ಕೇಳಿ ಆತ ತಿರುಗಿ ನೋಡಿದ. ತಿರುಗಿಬರುವಂತೆ ಅವರು ಕೈ ಮಾಡಿದರು. ಆತ ಮರಳಿದ. ಇಬ್ಬರೂ ಮನೆ ಸೇರಿದರು.

"ಯಾರಪ್ಪಾ, ನಿನ್ನ ಹೆಸರೇನು?" ಪ್ರೊಫೆಸರರು ಕೇಳಿ ಆತನ ಕಣ್ಣುಗಳಲ್ಲಿ ಎರಡು ತೊಟ್ಟು ನೀರೂರಿದ್ದಿತು. ಆ ಮನಸ್ಸು ಇಷ್ಟರಲ್ಲಿಯೇ ಪ್ರೊಫೆಸರರ ಮತ್ತು ಅವರ ಹೆಂಡ ಸ್ವಭಾವಗಳನ್ನು ಹೋಲಿಸಿ ನೋಡಿ, ಅವರ ಕರುಣಾಹೃದಯ ತಲೆಬಾಗಿದ್ದಿತು. ಉಗುಳು ನುಂಗುತ್ತ ಆತ ಹೇಳಿದ:

"ನಾನೊಬ್ಬ ಬಡ ವಿದ್ಯಾರ್ಥಿ ಸರ್......" ಮುಂದೆ ಮ

ಟರಲಿಲ್ಲ. ಕಣ್ಣೀರು ಹನಿಹನಿಯಾಗಿ ಕಪೋಲದಿಂದಿಳಿಯುತ್ತಿದ್ದುವು:

"ಪರವಾ ಇಲ್ಲ." ಪ್ರೊಫೆಸರರ ಮನಸ್ಸು ಕಲಕಿತು. "ಕುಳಿತುಕೋ ಎರಡು ನಿಮಿಷ" ಎಂದು ಹೇಳಿ ಒಳಕ್ಕೆ ಹೋದರು.

ಅಡಿಗೆಯ ಮನೆಗೆ ಹೋಗಿ, "ನೋಡು, ನೀನೇನೋ ಬಿರುಸು ಮಾತನಾಡಿ ಕಳಿಸಿದ್ದೆ ಕಾಣ್ತದೆ. ಪಾಪ, ಆ ಹುಡುಗನಿಗೆ ತುಂಬ ದುಃಖವಾದಂತಿದೆ!" ಎಂದರು.

"ಸಾಕು, ಸಾಕು ಸುಮ್ಮನಿರಿ. ಇಂಥವರನೇಕರನ್ನು ಕಂಡಿದ್ದೇನೆ.... ....ಯಾಕೆ? ಮೂರು ಕಪ್ಪುಗಳನ್ನೇಕೆ ತೆಗೆದುಕೊಂಡಿರಿ? ನಾನು ಎರಡೇ ಕಪ್ಪು ಚಹ ಮಾಡಿದ್ದೇನೆ!"

"ಆಗಲಿ, ನನಗಾದರೂ ಒಂದು ಕಪ್ಪು ಕೊಡುತ್ತೀಯಲ್ಲವೇ? ಅದರಲ್ಲಿಯೇ ಇಬ್ಬರಿಗೂ ತುಸು ತುಸು ಕೊಟ್ಟುಬಿಡು. ಮತ್ತೆ ಮಾಡುವ ತೊಂದರೆ ನಿನಗೂ ಬೇಡ."ಎಂದು ಮಾತು ಮುಗಿಸಿದರು.

ಶಾರದಮ್ಮ ತಮ್ಮ ಗಂಡನನ್ನೊಮ್ಮೆ ತೀಕ್ಷ್ಣವಾಗಿ ನೋಡಿದರು.

ಅದೆಷ್ಟು ಬೇಡ ಎಂದರೂ, ಪ್ರೊಫೆಸರರ ಒತ್ತಾಯಕ್ಕಾಗಿ ನಾರಾಯಣ (ಬಂದ ಹುಡುಗನ ಹೆಸರು) ಚಹ ಕುಡಿಯಲೇಬೇಕಾಯಿತು.

"ಹೂಂ, ಇನ್ನು ಹೇಳು! ನೀನು ಏತಕ್ಕಾಗಿ ಬಂದಿದ್ದೆ ಎಂದು."

"ನಿಮಗೆ ಬಹಳ ತೊಂದರೆ ಕೊಟ್ಟೆ ಸರ್, ಕ್ಷಮಿಸಿ!"

"ತೊಂದರೆಯೆಂತಹದಪ್ಪಾ! ನಿಮ್ಮಂಥ ವಿದ್ಯಾರ್ಥಿಗಳಿಗೆ ನನ್ನಿಂದ ಶಕ್ಯವಿದ್ದ ಎಲ್ಲ ಸಹಾಯವನ್ನೂ ನೀಡುವುದು ನನ್ನ ಆದ್ಯ ಕರ್ತವ್ಯವೆಂದು ನಾನು ತಿಳಿದಿದ್ದೇನೆ. ಒಂದಾನೊಂದು ಕಾಲಕ್ಕೆ ನಾನೂ ಹೀಗೆಯೇ........"

ನಾರಾಯಣ ಬೆರಗುಗಣ್ಣಿನಿಂದ ಪ್ರೊಫೆಸರರನ್ನೊಮ್ಮೆ ನೋಡಿದ. ಶಾರದಮ್ಮನಿಗೆ ಈ ಮಾತು ಕೇಳುತ್ತಲೇ, ಅವರ ಕಿವಿ ನಿಮಿರಿದುವು! ತಮ್ಮ ಗಂಡನನ್ನೂ ನಾರಾಯಣನನ್ನೂ ಅವರ ಕಣ್ಣುಗಳು, ಅವಿರಿಗರಿವಿಲ್ಲದೆ ನಿರೀಕ್ಷಿಸಿದ್ದುವು ಒಂದು ಕ್ಷಣ.

"....ಹೋಗಲಿ.- ಈಗ ನಿನಗೇನಾಗಬೇಕು?" ಪ್ರೊಫೆಸರರ ಮುಖದಿಂದ ನಿಡಿದಾದ ಉಸಿರೊಂದು ಹೊರಕ್ಕೆ ಬಂತು.

"ನಾನು ಇಲ್ಲಿಯ....ಹಾಯ್‌ಸ್ಕೂಲಿನಲ್ಲಿ ಆರನೆಯ ತರಗತಿಯಲ್ಲಿ ಓದುತ್ತಿದ್ದೇನೆ. ತೀರ ಬಡವ ಸರ್. ತಂದೆ-ತಾಯಿ ಯಾರೂ ಇಲ್ಲ. 'ವಾರ' ಹಚ್ಚಿಕೊಂಡು ಅವರಿವರಲ್ಲಿ ಉಣ್ಣುತ್ತೇನೆ. ಈಗ ಫ್ರೀಶಿಪ್‌ಗಾಗಿ ಅರ್ಜಿ ಮಾಡಬೇಕಾಗಿದೆ. ಅದಕ್ಕೆ ತಮ್ಮದೊಂದು ಸರ್ಟಿಫಿಕೇಟು ಇದ್ದರೆ ಒಳಿತೆಂದು ತಮ್ಮ ಕಡೆಗೆ ಬಂದೆ ಸರ್. ಅಷ್ಟು ಬರೆದುಕೊಟ್ಟರೆ....ಬಹಳ ಉಪಕಾರವಾಗುವುದು!"

"ಆಗಾಗ 'ಉಪಕಾರ' 'ಉಪಕಾರ' ಎಂದೇಕೆ ಅನ್ನುತ್ತಿದ್ದೀ? ಅದೇನು ಮಹಾ? ಬರೆದುಕೊಡುತ್ತೇನೆ, ತೆಗೆದುಕೊಂಡು ಹೋಗುವೆಯಂತೆ." ಎಂದು ಹೇಳಿ, ಆತನ ಪೂರ್ಣ ಹೆಸರು ಮುಂತಾದ್ದು ಕೇಳಿ, ಆತನ ಒಳ್ಳೆಯ ನಡತೆಯ ಬಗ್ಗೆ ಮತ್ತು ಆತನು ನಿಜವಾಗಿಯೂ ಬಡವನಿರುವನೆನ್ನುವ ಕುರಿತು ಮನವರಿಕೆ ಮಾಡಿಕೊಂಡು, ಆದರಂತೆ ಒಂದು ಶಿಫಾರಸು ಪತ್ರ ಬರೆದುಕೊಟ್ಟರು.

"ಆಗಲಿ ಸರ್. ತಮ್ಮ ಉಪ...." ನಾರಾಯಣನ ನಾಲಗೆ ತಡೆಯಿತು. "ಬರುತ್ತೇನೆ ಸರ್." ಎಂದ.

"ಆಗಲಿ. ಹೋಗಿ ಬಾಪ್ಪಾ! ಎಂದಾದರೂ 'ವಾರ' ದೊರೆಯದಿದ್ದರೆ ಇತ್ತ ಕಡೆಗೇ ಬಂದುಬಿಡು. ಏನೂ ಸಂಕೋಚಪಟ್ಟುಕೊಳ್ಳಬೇಡ." ಎಂದರು ಪ್ರೊಫೆಸರರು.

"ಒಳ್ಳೇದು...." ನಾರಾಯಣನ ಕಣ್ಣುಗಳು ಕೃತಜ್ಞತೆಯಿಂದ ಭಾರವಾದಂತಿದ್ದುವು.

ಆತ ಸಂಪೂರ್ಣ ಕಾಣದಂತಾಗುವವರೆಗೂ ಬಾಗಿಲಲ್ಲಿ ನಿಂತು ಪ್ರೊಫೆಸರರು ಆತನನ್ನೇ ನೋಡುತ್ತಿದ್ದರು. ತರುವಾಯ ನಿಟ್ಟುಸಿರಿನೊಂದಿಗೆ ಒಳಗೆ ಬಂದರು. ಎದುರಿಗೆ ಶಾರದಮ್ಮ ನಿಂತಿದ್ದರು. ದಿನದ ಇಪ್ಪತ್ತುನಾಲ್ಕು ತಾಸೂ ನಗುಮುಖವಾಗಿರುವ ಆ ಚೆನ್ನೆಯ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜೆಯ ವೈದ್ಯ
ವಿ. ಎಸ್. ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ನಚಿಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರ-ಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯ ವೆಚ್ಚ ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ ಮು. ಪೋ. ಮಿರಜ

ಮೊಗವೀಗ, ಅದೇಕೋ ಕಳೆಗುಂದಿದ್ದಿತು. ರಾವ್ ಅವರು ಒಮ್ಮೆಲೇ ಕೇಳಿದರು :

" ಏನಾಯಿತು ಶಾರದಾ ? "

" ಏನೂ ಇಲ್ಲ ! "

" ಹಾಗಾದರೆ ಹೀಗೇಕೆ ಸಪ್ಪೆಯಾಗಿದ್ದೀ ? "

" ನಾನೊಂದು ಮಾತನ್ನು ಕೇಳಬೇಕೆಂದಿದ್ದೇನೆ. ಉತ್ತರ ಹೇಳುತ್ತೀರಾ ? "

" ಹೀಗೇಕೆ ಕೇಳುತ್ತಿದ್ದೀ ಶಾರೂ ? "

" ನೀವು ಹೇಳುವುದಿಲ್ಲ ಎಂದು ತಿಳಿದು ನಾನೀಗ ಹಾಗೆ ಕೇಳುತ್ತಿರುವುದಿಲ್ಲ. ಆದರೆ ಅದರಿಂದ ತಮ್ಮ ಮನಸ್ಸಿಗೆ ತೊಂದರೆಯಾದೀತೆಂದು .... "

" ಶಾರದಾ, ನನ್ನೆದುರಿಗೆ ನೀನಿರುವಾಗ ನನಗೆಂಥ ತೊಂದರೆಯೂ ಕಂಡುಬರಲಾರದು !" ಅವರನುಡಿಯಲ್ಲಿ ಕೃತಕತೆ ಇದ್ದಂತೆ ತೋರಲಿಲ್ಲ. " ನೀನೇನು ಕೇಳಬೇಕೆಂದಿದ್ದೆ ? "

"ಇದೀಗ ಆ ಹುಡುಗನ ಸಂಗಡ ನೀವು ಮಾತನಾಡುತ್ತಿರುವಾಗ ನನ್ನ ಕಿವಿಗಳೊಂದು ಮಾತನ್ನು ಕೇಳಿದುವು. ನಾನೇನು ಮರೆಗೆ ನಿಂತು ಕೇಳಲಿಲ್ಲ; ಆದರೆ ಮಾತು ತಾನೇ ಕೇಳಿಸಿತು."

" ಏನದು ಆ ಮಾತು ? "

" ಒಂದಾನೊಂದು ಕಾಲಕ್ಕೆ ನಾನೂ ಹೀಗೆಯೇ....ಎಂದು ಏನೋ ಹೇಳಲಿದ್ದ ನೀವು ಒಮ್ಮೆಲೇ ತಡೆದಿರಿ... "

ಪ್ರೊಫೆಸರರ ಮುಖಭಾವ ಒಮ್ಮೆಲೇ ಬದಲಾಯಿತು. ಒಂ ನಿಮಿಷ ತಡೆದು ಹೇಳಿದರು : "ನಮ್ಮ ಮದುವೆಯ ಪೂರ್ವದಲ್ಲಿಯೆ ನಿನಗೊಮ್ಮೆ ನಾನು ಒಂದು ವಿಚಾರ ಹೇಳಿದ್ದೆ; ನೆನಪಿದೆಯೇ ?

" ಏನೆಂದು ? "

" ನಾನು ಬಡವ ಎಂದು ! "

" ಅಂದರೆ........? "

" ಹೌದು: ಇದೀಗ ಬಂದ ನಾರಾಯಣನಂತೆಯೇ, ಅದೇ ಆತನಿಗಿಂತಲೂ ಕಠಿಣ ಪರಿಸ್ಥಿತಿಗಳನ್ನು ಎದುರಿಸಿದ್ದೇನೆಂದು ಹೇ ದರೆ, ನಿನಗೆ ಅಪಮಾನವೆನಿಸಲಿಕ್ಕಿಲ್ಲವಷ್ಟೇ ? "

" ಅದೇಕೆ, ನನಗೇಕೆ ಅಪಮಾನವಾಗಬೇಕು ? "

" ಬಡವನೊಬ್ಬನ ಹೆಂಡತಿಯಾಗಿರುವುದು ಅವಮಾನವೆಂ ತಿಳಿಯುವವರೂ ಅನೇಕರಿದ್ದಾರೆ ಶಾರದಾ ! "

" ಅಲ್ಲ, ನಿಮಗೆ ಬಡವರೆಂದಾದರೂ ಯಾರು ಅನ್ನಬೇಕು ?

" ಆದರೂ, ನಾನು ನಿನಗೆ ಸಿರಿವಂತರ ಸುಖವನ್ನು ಮಾ ಕೊಡಲಾರೆ- ನನ್ನಲ್ಲಿ ಆ ಹೆಮ್ಮೆ ಇಲ್ಲ! "

ಶಾರದಮ್ಮನ ಕಣ್ಣಿನಿಂದ ಎರಡು ತೊಟ್ಟು ನೀರುದುರಿಬಿದ್ದುವ

ಪ್ರೊಫೆಸರರು ಒಂದು ನಿಮಿಷ ತಡೆದು, " ನೀನು ಇದೀ ನಾರಾಯಣನನ್ನು ಹಾಗೇಕೆ ಕಳುಹಿಸಿದೆ ? ಇಂಥ ಅನೇಕ ಪ್ರಸಂ ಗಳನ್ನು ನಾನು ನೋಡಿದ್ದೇನೆ. ನನಗೆ ಈ ನಿನ್ನ ರೀತಿ ಸಹ ವಾಗುವುದಿಲ್ಲ- ಹಾಗೆ, ಬಂದವರನ್ನು ತಿರುಗಿ ಕಳಿಸುವದೆಂದರೆ ನ



ನಸ್ಸು ಒಪ್ಪದು. ನನ್ನನ್ನು ಆಗ ಎಬ್ಬಿಸಿದ್ದರೆ ನನಗೇನಾಗು-ತ್ತಿತ್ತು ?"

"ನಿಮಗೆ ತೊಂದರೆಯಾಗಬಾರದೆಂದು ಹಾಗೆ ನಾನು ಆತನನ್ನು ಕಳಿಸಿದ್ದೆ. ಆದೇ ಮಲಗಿದ್ದಿರಿ. ತುಸು ವಿಶ್ರಾಂತಿಯಾದರೂ ಬೇಡವೇ ?"

"ಶಾರದಾ ಇಂಥ ಮಾತು ಬೇಡ ! ನೀನಿನ್ನೂ ನನ್ನನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಜನ್ಮದಿಂದಲೂ ಸಿರಿವಂತಿಕೆಯಲ್ಲಿ ಬೆಳೆದವರಿಗೆ ಬಡತನದ ಬೇಗೆಯ ಅರಿವಾಗಲಾರದು. ...."

ಪ್ರೊಫೆಸರರ ಮುಖದಿಂದ ನಿಟ್ಟುಸಿರೊಂದು ಹೊರಬಿದ್ದಿತು. ಶಾರದಮ್ಮ ಮೌನವಾಗಿದ್ದರು.

ಎರಡು ನಿಮಿಷ ತಡೆದು, "ಹೋಗಲಿ, ಆದೆಲ್ಲಾ ತೊಂದರೆ ನಿನಗೇಕೆ ? ಈಗೇನು ಶೋಕ್ಕೆ ಹೋಗುವುದೋ ?"

"............"

"ಯಾಕೆ, ಇಚ್ಛೆಯಿಲ್ಲವೇನು ? ಹಾಗಾದರೆ ಬಿಟ್ಟುಬಿಡು ! ನಾನು ಹಾಗೆಯೆ ಸ್ವಲ್ಪ ಅಡ್ಡಾಡಿ ಬರುತ್ತೇನೆ !" ಎಂದು ಬಟ್ಟೆ ಬದಲಾಯಿಸಿ, ಏನೂ ಮಾತನಾಡದೆ ಹೊರಟುಹೋದರು. ಪ್ರೊಫೆಸರರ ಧ್ವನಿಯಲ್ಲಿ ನಡಿಗೆಯಲ್ಲಿ ಸಿಡುಕು ತುಂಬಿತ್ತು.

ಹೀಗೆ ಸಿಡುಕಿನಿಂದ ಅವರು ವರ್ತಿಸಿದುದು ಅವರ ಜೀವನದಲ್ಲಿಯೇ ಇದು ಮೊದಲ ಸಲ. ಶಾರದಮ್ಮನ ಉದ್ವೇಗ ಉಕ್ಕಿ ಬಂತು ! ಕಣ್ಣೀರ ಹೊಳೆಯೇ ಹರಿದಂತಾಯ್ತು !—

*   *   *   *

ಅಂದು ಹುಣ್ಣಿಮೆಯ ರಾತ್ರಿಯಾಗಿದ್ದರೂ ಶುಭ್ರವಾದ ಬೆಳುದಿಂಗಳು ಬಿದ್ದಿರಲಿಲ್ಲ. ಆಕಾಶದಲ್ಲಿ ಚಂದಿರನು ಮೋಡಗಳಲ್ಲಿ ಸೆರೆಯಾಗಿ ಸಪ್ಪೆಯಾಗಿದ್ದ. ಶಾರದೆಯ ಹೃದಯಚಂದ್ರ ಕೂಡ ಸಂಗುಡದ ಮೋಡಗಳಲ್ಲಿ ಸಿಲುಕಿ ಕಳೆಗುಂದಿದ್ದ. ರಾತ್ರಿ ಹನ್ನೆರಡು ಹೊಡೆದು ಹೋಗಿದ್ದರೂ ಅವಳಿಗಿನ್ನೂ ನಿದ್ರೆ ಹತ್ತಲೊಲ್ಲದು.

ತನ್ನ ಮದುವೆಯಾಗಿ ಎರಡು ವರ್ಷಗಳ ಅವಧಿಯಲ್ಲಿ ಶಾರದೆ ಈ ದಿನದಂತಹ ಕಟು ಅನುಭವವನ್ನು ಎಂದೂ ಎದುರಿಸಿರಲಿಲ್ಲ. ಅವಳು ಕಾಲೇಜಿನಲ್ಲಿದ್ದಾಗ 'ಅವರು' ತನ್ನೊಡನೆ ವರ್ತಿಸುತ್ತಿದ್ದ ರೀತಿ ಅವಳ ಕಣ್ಣೆದುರು ಹಾಯ್ದು ಹೋಯಿತು.

ಆಗ ಶಾರದೆಯೆಂದರೆ ಅವರಿಗೆ ಪ್ರಾಣ. ಅವರೆಂದರೆ ಶಾರದೆಯ ಉಸಿರು ! ಅದು ಕಾರಣವೇ—ತನ್ನ ಪ್ರೇಮದ ಸಲುವಾಗಿ ಹಾತರಗೊಂಡು ಕುಳಿತ ಜಹಗೀರದಾರನನ್ನೂ ತ್ಯಜಿಸಿ—ಇವರನ್ನು ವರಿಸಲು ಒಪ್ಪಿದ್ದಳು ಶಾರದೆ.

ಆದರೆ ಅವರ ಇಂದಿನ ನಡತೆ ?

ಇದುವೇ ಏನು ಅವರ ಪ್ರೇಮದ ಕುರುಹು ?

ಏನೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ತನ್ನ ಮೇಲೆ ಇಷ್ಟು ಕೋಪವೇ ? ಸಾಯಂಕಾಲದಿಂದ ಮಾತನ್ನೇ ಆಡದೆ ಇರುವುದೆಂದರೆ....! ಇಂಥ ಕಠಿಣ ಶಿಕ್ಷೆಯನ್ನು ಕೊಡಲಿಕ್ಕೆ ತನ್ನ ಅಪರಾಧವಾದರೂ ಏನು ? ಯಾವುದೋ ಒಬ್ಬ ಪೋರ ಬಂದಾಗ, ಅವರಿಗೇ ತೊಂದರೆಯಾಗಬಾರದೆಂದು ಎಬ್ಬಿಸದೆ ಆತನನ್ನು ಹಾಗೇ ಕಳಿಸಿದರೆ, ಅದರಲ್ಲಿ ತನ್ನ ತಪ್ಪೇ ? ಅದಕ್ಕೆ ಇಂಥ ಶಿಕ್ಷೆಯೇ ! ಅವರಿಗೆ ತನಗಿಂತ ಆ ಬಡಹುಡುಗನೇ ಹೆಚ್ಚೇ ?

ನಾನಿನ್ನೂ ಅವರ ಸ್ವಭಾವವನ್ನರಿತಿಲ್ಲವಂತೆ ! ಅರಿಯದೆ ಅವರನ್ನು ಪ್ರೇಮಿಸಿದೆನೇ ?.......

ಅವಳ ವಿಚಾರ ಮುಂದೆ ಹರಿಯಲಿಲ್ಲ. ದುಃಖ ಉಕ್ಕಿ ಬಂದು ಕಣ್ಣೀರಾಗಿ ಹರಿಯಿತು. ಅರ್ಧ ತಾಸು ಹಾಗೇ ಬಿಸುಸುಯ್ಯುತ್ತ ಹಾಸಿಗೆಯಲ್ಲಿ ಹೊರಳಾಡಿದಳು.

ಗಡಿಯಾರ 'ಢಣ್' ಎಂದು ಒಂದು ಗಂಟೆ ಬಾರಿಸಿತು. ಶಾರದೆ ಮೆಲ್ಲಗೆ ಎದ್ದು ದೀಪ ಹಚ್ಚಿದಳು.

ತನ್ನಲ್ಲಿ ಸವತಿಮತ್ಸರ ಸಾಧಿಸುವುದಕ್ಕೋಸುಗ ಅವರನ್ನು ನಿದ್ರೆಯ ಹೆಣ್ಣು ವಶಮಾಡಿಕೊಂಡಂತೆ ತೋರಿತು ಶಾರದೆಗೆ ಒಂದು ಕ್ಷಣ. ಅವರು ಗಾಢನಿದ್ರೆಯಲ್ಲಿ ಒಂದಾಗಿದ್ದರು.

ಆದರೆ ತನಗೆಲ್ಲಿಯ ನಿದ್ರೆ ?

ಅವಳ ದೃಷ್ಟಿ ಟೇಬಲ್ಲಿನ ಕಡೆಗೆ ಹರಿಯಿತು. ಅಲ್ಲೊಂದು ಹಸಿರು ಬಣ್ಣದ ನೋಟುಬುಕ್ಕು. ಆಗಾಗ ಅವರು ಅದರಲ್ಲಿ ಏನೋ ಬರೆಯುತ್ತಿರುವುದನ್ನವಳು ಕಂಡಿದ್ದಳು. ಅದೇನೆಂದು ಕೇಳಿದ್ದಳು ಕೂಡ. ಆದರೂ ಅವರು ಅದನ್ನು, ಏನೋ ಕಾರಣ ಹೇಳದೆ ಹಾಗೆಯೇ ಮುಚ್ಚಿಡುತ್ತಿದ್ದರು.

ಏಕೆ ? ಆದರಲ್ಲೇನಿರಬಹು ? ತನ್ನ ಸರ್ವಸ್ವವನ್ನೆ ಇವರಿಗರ್ಪಿಸಿದ ತನಗೆ ಕೂಡ ತೋರಿಸದಂತಹದೇನಿರಬಹುದು ಅದರಲ್ಲಿ ?

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾಹುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಅವಳ ಕಾಲುಗಳು ಮೆಲ್ಲಗೆ ಟೇಬಲ್ಲಿನ ಕಡೆಗೆ ನಡೆದುವು. ಒಮ್ಮೆ ಮನಸ್ಸು "ಬೇಡ, ಅವರನ್ನು ಕೇಳದೆ ಅದನ್ನು ಮುಟ್ಟಬೇಡ" ಎಂದಿತು.

ಕಣ್ಣು ಅವರೆಡೆಗೆ ತಿರುಗಿದುವು. ಸುಖವಾಗಿ ನಿದ್ರಿಸುತ್ತಿದ್ದರು ಅವರು. ಅವಳ ಕೈಗಳು ಆ ಪುಸ್ತಕವನ್ನೆತ್ತಿಕೊಂಡುವು. ಅದು ಅವರ ದಿನಚರಿಯಾಗಿದ್ದಿತು. ಅದೇ ಬರೆದು ಹಾಗೇ ಮರೆತು ಇಟ್ಟು ಮಲಗಿದ್ದರೇನೋ! ಕೊನೆಯ ಪುಟದಲ್ಲಿ ಪೆನ್ನು ಕೂಡ ಹಾಗೇ ಇತ್ತು ಅದರಲ್ಲಿ.

ಪುಸ್ತಕ ತೆರೆದ ಕೂಡಲೇ ಅಂದಿನ ದಿನಾಂಕವನ್ನೇ ಕಾಣಿಸಿ ಬರೆದುದು ಕಂಡಿತು. ಓದಬೇಕೆಂದು ಕಣ್ಣು ತವಕಗೊಂಡುವು, ವಿವೇಕ 'ಬೇಡ' ಎಂದಿತು. ಆದರೆ ಕುತೂಹಲ ಕೆರಳಿತು. "ಏನು ಬರೆದಿರಬಹುದು! ನೋಡಿದರೆ ತಪ್ಪೇನು?......." ಶಾರದೆ ಓದ-ತೊಡಗಿದಳು!

" ದಿನಾಂಕ ೮-೪-೧೯೫೦.

ರಾತ್ರಿ ೯-೪೫.

ತಾರುಣ್ಯದಲ್ಲಿ ಮನುಷ್ಯನ ಬುದ್ಧಿ ಮಂಕಾಗುತ್ತದೆಂದು ಹೇಳು-ವುದು ಸುಳ್ಳಲ್ಲ!

ಹಾಗಾದರೆ ನಾನು ಶಾರದೆಯನ್ನು ಮದುವೆಯಾದುದು ತಪ್ಪೇ? ಅವಳಲ್ಲಿ ಯಾವ ಕೊರತೆಯಿದೆ? ರೂಪವಿದೆ; ಅದಕ್ಕೆ ಪೂರಕವಾಗಿ ವಿದ್ಯೆಗೂ ಕೊರತೆಯಿಲ್ಲ; ಆಗರ್ಭ ಸಿರಿವಂತಳು! ಹೌದು. ಅದೇ ಬೇಡವಾಗಿತ್ತು. ಆ ಸಿರಿವಂತಿಕೆಯೇ ಅವಳಲ್ಲಿಯ ಕುಂದು.

ಇದರ ವಿಚಾರ ನನಗೆ ಮೊದಲು ಬರಲಿಲ್ಲ. ಅವಳ ಆ ಸಿರಿ-ವಂತಿಕೆಯ ಸಿಡುಕು ಸ್ವಭಾವವನ್ನು ತಿದ್ದಬಹುದೆಂದು ಬಗೆದಿದ್ದೆ. ಆದರೆ ಅದೇ ಈಗ ನಮ್ಮಿಬ್ಬರಲ್ಲಿ ವೈಮನಸ್ಯವನ್ನುಂಟುಮಾಡುತ್ತಿದ ಶಾರದೆಗೆ ಬಡವರೆಂದರೆ ಕಿಂಚಿತ್ತಾದರೂ ಕರುಣೆಯಿಲ್ಲ. ಕರುಣೆ ಯಿಲ್ಲದಿದ್ದರೆ ಹೋಗಲಿ; ತಿರಸ್ಕಾರವೇಕೆ? ಇಂದು ಪಾಪ 'ನಾರಾ ಯಣ' ಬಂದರೆ, ಅವನನ್ನು ತಿರಸ್ಕಾರದಿಂದ ಅಟ್ಟಿ ಬಾಗಿಲು ಹಾಕ ಬೇಕೇ? ನನ್ನನ್ನು ಎಬ್ಬಿಸಿದ್ದರೆ ನನಗೇನಾಗುತ್ತಿತ್ತು?...."

ಶಾರದೆಯ ಎದೆಯಲ್ಲಿ ಕೂರಂಬಿನಿಂದಿರಿದಂತಾಯಿತು! ಅವ ಇಷ್ಟು ಕಠೋರವಾಗಿ ಆಡಬಹುದೆಂದು ಅವಳೆಂದಿಗೂ ಎಣಿಸಿರಲಿ ಕಣ್ಣಂಚಿನಲ್ಲಿ ನೀರು ಮುಃಡಿತು; ಒಂದು ಕ್ಷಣ ಅಕ್ಷರಗ ಮಸುಕು-ಮಸುಕಾದವು!.... ಎರಡು ನಿಮಿಷ ಕಳೆದು ಮ ಓದಿದಳು:

"........ಮತ್ತೆ, ನನ್ನ ಹಿತಕ್ಕಾಗಿ ಆತನನ್ನು ಕಳಿಸಿದಳೆಂ ಸುಳ್ಳು ಹೇಳಬೇಕೇ! ಕಹಿ ಕ್ವಿನೈನಿನ ಮೇಲೆ ಈ ಸಕ್ಕರೆಂ ಹೊದಿಕೆಯೇಕೆ? ಮನುಷ್ಯನ ಮನುಷ್ಯತ್ವ ಏತರಲ್ಲಿದೆ? ಕೇವ ತಾನು ಮತ್ತು ತನ್ನವರಷ್ಟು ಸುಖವಾಗಿದ್ದರೆ ಸಾಕೇ? ಶಾರದ ಯಲ್ಲಿ ಇಷ್ಟು ಚಿಕ್ಕ ವಿಚಾರಗಳೇಕೆ? ನಾನೆಂದಿಗೂ ಹಾಗೆ ಬಗ ದಿರಲಿಲ್ಲ. ಎಲ್ಲರೂ ಇಂಥ ವಿಚಾರಗಳನ್ನು ಮಾಡುತ್ತಿದ್ದರೆ, ನಾ ಇಂದು ಈ ಮಟ್ಟದಲ್ಲಿರಲು ಎಂದಾದರೂ ಸಾಧ್ಯವಾಗುತ್ತಿತ್ತೇ?

ಶಾರದೆ ನನ್ನ ಬಾಲ್ಯವನ್ನು ಕಂಡಿದ್ದರೆ, ನನ್ನನ್ನು ಅವ ಮದುವೆಯಾಗಬಹುದಿತ್ತೇ? ಹುಟ್ಟಿ ನಾಲ್ಕು ವರ್ಷಗಳಲ್ಲಿ ತಂದೆ ತಾಯಂದಿರನ್ನು ಕಳೆದುಕೊಂಡು, ಯಾರದೋ ಮನೆಯಲ್ಲಿ ಬೆಳೆದ ಯಾರದೋ ದಯೆಯಿಂದ ವಿದ್ಯಾಭ್ಯಾಸ ಕೊನೆಗಾಣಿಸಿದ ನನಗ ದಾತಾರರು ದೊರೆಯದೆ ಹೋಗಿದ್ದರೆ........?



ಕ್ರೈಸೋಲೀನ್

ಎಂಥ ಕೆಮ್ಮಿದ್ದರೂ ಕೂಡಲೆ ಗುಣ ಪಡಿಸುವುದು.

ಏಜೆಂಟರು, ಸ್ಟಾಕಿಸ್ಟರು ಬೇಕು.

ಯದುಪತಿ

ಸ್ವತಂತ್ರ ಸಾಮಾಜಿಕ ಕಾದಂಬರಿ.

ಬರೆದವರು:

ಶ್ರೀಮಾನ್ ಸಾಲಿ ರಾಮಚಂದ್ರರಾಯರು

ಭಾರತದ ಸ್ವಾತಂತ್ರ್ಯ ಸಂವರ್ಧನೆಗೂ ಸಂರ ಕ್ಷಣೆಗೂ ಇಂದು ಆದರ್ಶಜೀವಿಗಳ ಆವಶ್ಯಕತೆ ತುಂಬ ಇದೆ. ಅಂತಹ ಸುಂದರ ಆದರ್ಶಗಳನ್ನು ಜನತೆಯ ಕಣ್ಣೆದುರು ಇರಿಸಬಲ್ಲ ನೂತನ ಕಾದಂಬರಿ. ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ಶ್ರೀಮಾನ್ ಆರ್. ಎ. ಜಾಗಿ ದಾರರು ಮುನ್ನುಡಿ ಬರೆದಿದ್ದಾರೆ.

ವಿಳಾಸ: ಶ್ರೀ. ಸಾಲಿ ರಾಮಚಂದ್ರರಾಯರು
'ಶ್ರೀನಿಕೇತನ' ಧಾರವಾಡ.

ಅದೆಷ್ಟು ದಿನಗಳನ್ನು ಒಂದೇ ಹೊತ್ತು ಉಂಡು ಕಳೆದಿಲ್ಲ! ಕಾಲೇಜಿನ ಕಟ್ಟೆ ಏರಿದರೂ ಕೂಡ ಎರಡನೆಯವರ ಪುಸ್ತಕಗಳನ್ನೇ ಉಪಯೋಗಿಸುತ್ತಿದ್ದೆನೇ ವಿನಾ, ಒಂದು ವರ್ಷ ಕೂಡ ಹತ್ತು ರೂಪಾಯಿ ಖರ್ಚುಮಾಡಿ ಪುಸ್ತಕ ಕೊಳ್ಳಲಾಗಲಿಲ್ಲ. ಆಮೇಲೆ ಸ್ಕಾಲರಶಿಪ್ಪು ದೊರೆತು, ಇದ್ದುದರಲ್ಲಿಯೇ ತುಸು ಹಾಯಾಗಿ ಇರಲಿಕ್ಕೆ ಸಾಧ್ಯವಾಯಿತು; ಅದೂ ಕೂಡ ಸಲಹಿದವನೊಬ್ಬನ ಸಹಾಯದಿಂದಲೇ!

ನನ್ನ ಹೆಸರು ಕೂಡ ನನಗೆ ಸಂಕಟಜನಕವಾಗಬೇಕೇ? ಒಮ್ಮೆ ಒಬ್ಬ ಸಿರಿವಂತರಲ್ಲಿ ಊಟಕ್ಕಾಗಿ ಒಂದು 'ವಾರ' ಕೇಳಬೇಕೆಂದು ಹೋಗಿದ್ದೆ. ಆತ ನನ್ನ ಹೆಸರು ಕೇಳಿ,

"ಓಹೋ!" ಎಂದು ಉದ್ಗಾರ ತೆಗೆದು "ನೋಡ್ರಿ ರಾವ್ ನಾವೆಲ್ಲರೂ ಈ ತಿಂಗಳು ಊರಿಗೆ ಹೋಗಬೇಕೆಂದು ಮಾಡಿದ್ದೇವೆ. ಬಂದಮೇಲೆ ವಿಚಾರಿಸೋಣವಂತೆ" ಎಂದುಬಿಟ್ಟು ನನ್ನನ್ನು ಹಾಗೇ ಕಳುಹಿದ್ದ. ಆತ ಹಾಗೇಕೆ ಹೇಳಿದನೆಂಬುದು ಹಿಂದಿನಿಂದ ಗೊತ್ತಾಯಿತು. ನನ್ನ ಹೆಸರು ಕೇಳಿ, ನಾನು ಸಿರಿವಂತರವನಿದ್ದು ಈ ಸೋಗು ಹಾಕಿರಬೇಕೆಂದುಕೊಂಡಿದ್ದನಂತೆ.

ನನ್ನ ಸುದೈವ! ಬಿ. ಎ. ದಲ್ಲಿ ಒಂದನೆಯ ತರಗತಿಯಲ್ಲಿ ಪಾಸಾಗಿ ಕಾಲೇಜಿನ ಫೆಲೋಶಿಪ್ಪು ದೊರೆಯಿತು. ಆಗ ಜನ ನನ್ನ ಕಡೆಗೆ 'ಈತನೂ ಒಬ್ಬ ಮನುಷ್ಯ' ಎಂದು ನೋಡತೊಡಗಿತು. ಶಾರದೆಯ ಪರಿಚಯವಾದುದೂ ಆ ತರುವಾಯವೇ. ಅವಳ ಸಖ್ಯ ಈ ರೀತಿ ವಿವಾಹದಲ್ಲಿ ಕೊನೆಗೊಳ್ಳಬಹುದೆಂದು ನಾನೆಂದಿಗೂ ಬಗೆದಿರಲಿಲ್ಲ. ನಾನಾದರೋ ಇಂಥ ದರಿದ್ರ; ಅವಳ ತಂದೆ ನನ್ನಂಥ ನೂರು ಜನರನ್ನು ಸಾಕಲು ಶಕ್ತಿಯುಳ್ಳವರು! ಆದರೂ ವಿಧಿಯೇ ನಮ್ಮಿಬ್ಬರನ್ನು ಒಂದುಗೂಡಿಸಿತು. ಅವಳ ತಂದೆ ನನ್ನ ವಿದ್ಯೆಗೆ ಮೆಚ್ಚಿ ತಮ್ಮ ಮಗಳನ್ನು ಕೊಟ್ಟರೇನೋ ನಿಜ; ಆದರೆ ಶಾರದೆ ಏತಕ್ಕಾಗಿ ನನಗೆ ಒಲಿದಳೋ ನನಗಿನ್ನೂ ತಿಳಿಯಗೊಲ್ಲದು!....—"

ತಾನು ಏತಕ್ಕಾಗಿ ಅವರನ್ನು ಮೆಚ್ಚಿದೆನೆಂದು ಶಾರದೆ ತನ್ನನ್ನು ತಾನೇ ಕೇಳಿಕೊಂಡಳು. ಆ ಪ್ರಶ್ನೆಗೆ ಉತ್ತರ ದೊರೆಯಲಿಲ್ಲವಳಿಗೆ. ಆದರೆ ಅವರ ಶಾಂತಿಯುತವಾದ ನಗುಮೊಗ ಮಾತ್ರ ಅವಳ ಕಣ್ಮುಂದೆ ನುಸುಳಿಹೋಯಿತು.—ಅದೇ ಮೊಗ. ಅದೇ ಗಾಂಭೀರ್ಯ. ಅದೇ ತೇಜಸ್ಸು! 'ಇಂಥವರನ್ನು ಮೆಚ್ಚದೆ ಇನ್ನಾರನ್ನು ಮೆಚ್ಚಲಿ?' ಎಂದುಕೊಂಡಿರಬೇಕು ಒಳಗೊಳಗೆ. ಮುಂದೆ ಬರೆದಿದ್ದುದು ಹೀಗಿದ್ದಿತು:

"ಶಾರದೆಯ ರೂಪಕ್ಕೆ ನಾನು ಮಾರುಹೋದೆ. ಅವಳು ನನ್ನ ಜೀವದ ಬಾಳದೋಣಿಯನ್ನು ಈ ಸಂಸಾರಸಾಗರದಲ್ಲಿ ಜಾಣ್ಮೆಯಿಂದ ನಡೆಯಿಸಿ, ನನ್ನನ್ನು ನಲುಮೆಯಿಂದ ದಂಡೆಗೆ ಕಾಣಿಸಬಲ್ಲಳೇ ಎಂಬ ವಿಚಾರವನ್ನು ನಾನು ಮೊದಲು ಮಾಡಲಿಲ್ಲ. ಹಾಗೆ ವಿಚಾರಿಸಿದ್ದರೆ ಏನಾಗುತ್ತಿತ್ತೋ....!

ಆದರೆ ಈಗ ಕ್ಷಣಕ್ಷಣಕ್ಕೆ ಎದ್ದು ಕಾಣತೊಡಗಿದೆ........ಅವಳ ನನ್ನ ಸ್ವಭಾವದಲ್ಲಿ ವ್ಯತ್ಯಾಸ. ಏನಾದರೂ ಅವಳು ಆಗರ್ಭ ಸಿರಿವಂತನ ಮಗಳು. ಅವಳಿಗೆ ಬಡವರ ಬವಣೆ ಹೇಗೆ ತಿಳಿದೀತು? ತಿಳಿಯಲಾರದು. ಆದರೂ ಅವಳು ತಿಳಿಯಲು ಯತ್ನಿಸಬೇಡವೇ?

ಆ ಬಡ ನಾರಾಯಣನ ಸಂಗಡ ಅದೆಷ್ಟು ತಿರಸ್ಕಾರದಿಂದ ವರ್ತಿಸಿದಳು ಶಾರದೆ! ಆ ಕ್ಷಣದಿಂದ ಅದೇಕೋ ಬಹಳೇ ವೇದನೆಯಾಗುತ್ತಲಿದೆ ಹೃದಯದಲ್ಲಿ. ನನ್ನ ಹಿಂದಿನ ಜೀವನವೆಲ್ಲ ನೆನಪಾಗಿ ಇನ್ನೂ ಹೆಚ್ಚು ದುಃಖವಾಗುತ್ತಲಿದೆ! ಯಾರ ಮುಂದೆ ಹೇಳಲಿ? ಶಾರದೆಗೆ ಹೇಳಿದರೆ ಅವಳಿಗೆ ಅದರ ಅರಿವಾಗಬಹುದೆ? ಎಂದಿಗೂ ಅಸಾಧ್ಯ! ಬಡವರಾಗಿ ಬಂದವರಿಗೆ ಒಂದು ಕಪ್ಪು ಚಹ ಕೊಡಬೇಕಾದರೆ ಅವಳ ಮುಖ ಗಂಟಿಕ್ಕುತ್ತದೆ! ಇಂಥವಳ ಸಂಗಡ ಈ ರೀತಿ ಜೀವನ ನೂಕುವುದು ಕಠಿಣವೆನ್ನಿಸುತ್ತಿದೆ........ಆದರೆ.... ಆದರೇನು???"

"ಅವರೇನೂ ಇಲ್ಲ!" ಶಾರದೆ ಅರಿವಿಲ್ಲದೆ ಗಟ್ಟಿಯಾಗಿ ನುಡಿದಳು.

ಪ್ರೊಫೆಸರರು ಒಮ್ಮೆಲೇ ಎಚ್ಚತ್ತರು. ಕಣ್ಣು ತೆರೆದು ನೋಡುತ್ತಾರೆ,—ಹೆಂಡತಿ ಬದಿಗೆ ಕುಳಿತಿದ್ದಾಳೆ. ಕಣ್ಣಿಂದ ನೀರಿಳಿಯುತ್ತಿದೆ ಕೈಯಲ್ಲಿ ತಮ್ಮ ಡೈರಿ! ಅವಳು ಎಲ್ಲವನ್ನೂ ಓದಿದಳೆಂದು ತಿಳಿಯಲಿಕ್ಕೆ ತಡವಾಗಲಿಲ್ಲ.

ಎದ್ದು ಕುಳಿತು, "ಶಾರದಾ...." ಎಂದರು.

ಶಾರದೆಯ ದುಃಖ ಮಿತಿಮೀರಿತು. ಅವರೆದೆಯಲ್ಲಿ ತನ್ನ ಮೊಗವನ್ನಿರಿಸಿ ಆಕೆ ಗಟ್ಟಿಯಾಗಿ ಅತ್ತಳು.

"ಕ್ಷಮಿಸಿ, ನಿಮ್ಮ ಡೈರಿ ಓದಿದೆ. ಓದಿದೆ. ಓದಿದ್ದು ತಪ್ಪಾಯಿತು. ನಿಜ; ಆದರೆ ಅದು ಒಪ್ಪಿಗೆ ದಾರಿಯಾಯಿತು!" ಎಂದಳು ದುಃಖದ ಆವೇಗ ಕಡಿಮೆಯಾಗುತ್ತಿರುವಾಗ.

ಇಷ್ಟು ಕಾಲ ಗಂಭೀರವಾಗಿ ಕುಳಿತ ಪ್ರೊಫೆಸರರಿಗೆ ಅದೇನೋ ಉದ್ವೇಗ ಹೊರಹೊಮ್ಮಿತು: "ಶಾರದಾ, ನಿಜವಾಗಿಯೂ ಹೇಳುತ್ತಿದ್ದೀಯಾ?" ಎಂದರು.

"ನನ್ನಲ್ಲಿ ವಿಶ್ವಾಸವಿರಲಿ. ನೀವು ಈ ದಿನ ಬರೆದುದನ್ನಷ್ಟೇ ಓದಿದೆ. ಈಗ ನಾನು ಮೊದಲಿನ ಲಕ್ಷಾಧೀಶರ ಮಗಳಾದ ಶಾರದೆಯಲ್ಲ; ಆದರೆ ದೀನಮಿತ್ರರಾದ ಪ್ರೊ. ರಾವರ ಮಮತೆಯ ಮಡದಿ ಶಾರೂ!" ಇಷ್ಟು ಹೇಳಬೇಕಾದರೆ ಅವಳ ಗಂಟಲ ಶಿರ ಉಬ್ಬಿ ಬಂದಿದ್ದುವು.

"ಶಾರೂ, ಶಾರೂ, ನನ್ನ ಶಾರೂ, ನಾನೀಗ ಎಲ್ಲ ದೃಷ್ಟಿಯಿಂದಲೂ ಧನ್ಯ!" ಎಂದು ಹೆಂಡತಿಯನ್ನು ಬಿಗಿದಪ್ಪಿದರು.

ಎರಡು ಮನಗಳೊಂದಿಗೆ ಆತ್ಮಗಳೂ ಒಂದಾದುವು!

ಕಿಟಕಿಯಲ್ಲಿಂದ ತಂಗಾಳಿ ತೇಲಿ ಬರುತ್ತಲಿತ್ತು. ಆಕಾಶ ನಿರಭ್ರವಾಗಿದ್ದಿತು. ತಿಂಗಳು ಮೆಲ್ಲಗೆ ಮಲ್ಲಿಗೆನಗೆ ಬೀರುತ್ತಲಿದ್ದ!

ಉಧ್ವಸ್ತ ಮಧ್ಯಮವರ್ಗ

ಶ್ರೀ. ಮೋಹನ ಜಾಲೀಹಾಳ ಬಿ. ಕಾಮ್., ಕಿ. ಸಾಧಿ

★

ಇಂದು ಧರ್ಮನಿವಿಷ್ಟ ವರ್ಗಗಳು ನಷ್ಟವಾಗಿ ಅರ್ಥನಿವಿಷ್ಟ ವರ್ಗಗಳು ಹುಟ್ಟಿನಿಂತಿವೆ. ಈ ವರ್ಗದಲ್ಲಿಯ ನಿಜವಾದ ರಾಷ್ಟ್ರಹಿತಕಾರಿಯಾದ ಮಧ್ಯಮವರ್ಗ ಹುಡಿಗೂಡುವುದರಲ್ಲಿದೆ. ರಾಷ್ಟ್ರದ ಹಿತ ಬಯಸಬೇಕೆನ್ನುವವರು ಇಂದು ಮಧ್ಯಮವರ್ಗವನ್ನು ಉದ್ಧರಿಸಬೇಕಲ್ಲವೇ?

★

ಹೊಟ್ಟೆಗಾಗಿ ದುಡಿಯುವುದೇ ಬಡವರ ಪಾಡು. ಅವರಿಗೆ ಜೀವನದ ಸೊಗಸನ್ನು ಸವಿಯಲು ಸಮಯವೇ ಸಿಗುವುದಿಲ್ಲ. ವಿರಾಮಕ್ಕೆ ಪೂರ್ಣವಿರಾಮ. ಧನಿಕವರ್ಗದವರಿಗೆ ಪೂರ್ಣ ವಿರಾಮವಿದ್ದರೂ, ವಿಲಾಸಲೋಲರಾದ ಅವರಿಗೂ ವೇಳೆಯೇ ಉಳಿಯುವುದಿಲ್ಲ. ಬಾಳ್ವೆಯ ಏಳ್ಗೆಗೆ ಜೀವನವನ್ನು ಸುಖಮಯವನ್ನಾಗಿ ಮಾಡುವುದಕ್ಕೆ ಸ್ವಲ್ಪ ವಿರಾಮದ ಮಧ್ಯಮವರ್ಗದವರೇ ಕಾರಣರಾಗಿದ್ದಾರೆ ಜಗತ್ತಿನ ಎಲ್ಲ ಆಂದೋಲನಗಳಲ್ಲಿ. ಫ್ರಾನ್ಸ್, ರಶಿಯಾ ಮತ್ತು ಭಾರತಗಳ ರಾಜ್ಯಕ್ರಾಂತಿಗಳಲ್ಲಿ ಮಧ್ಯಮವರ್ಗದವರ ಕೈವಾಡವಿದೆ. ಭಾರತದ ಸ್ವಾತಂತ್ರ್ಯದ ಆಂದೋಲನದಲ್ಲಿ ಮಧ್ಯಮವರ್ಗದ ವಕೀಲರು, ಡಾಕ್ಟರರು, ಶಿಕ್ಷಕರು ಇವರೇ ಮುಂದಾಳುಗಳಾಗಿದ್ದರು. ಈಗ ಬಂಗಾಲ, ಮದ್ರಾಸ, ಹೈದರಾಬಾದುಗಳಲ್ಲಿ ಕಂಡುಬರುತ್ತಿರುವ ಕಮ್ಯೂನಿಸ್ಟರ ನಿದರ್ಶನಗಳಿಗೆ ಮಧ್ಯಮವರ್ಗದ ಆರ್ಥಿಕ ದುರವಸ್ಥೆಯೇ ಮುಖ್ಯ ಕಾರಣವೆಂದು ಹೇಳಲಾಗುತ್ತಿದೆ.

ಅಖಿಲ ಭಾರತೀಯ ವಣಿಕ್ಸಂಘಗಳ ಮಹಾಮಂಡಲದ ದಿಲ್ಲಿಯ ಅಧಿವೇಶನವು ಮಧ್ಯಮವರ್ಗದ ವಿಷಯವಾಗಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿ, ಮಧ್ಯಮವರ್ಗದ ಆರ್ಥಿಕ ದುರವಸ್ಥೆಗಾಗಿ ತನ್ನ ಕಳವಳವನ್ನು ವ್ಯಕ್ತಪಡಿಸಿದೆ. ಕೇಂದ್ರಸರಕಾರದ ಹಣಕಾಸಿನ ಮಂತ್ರಿಗಳೂ ಮುಂಗಡಪತ್ರಿಕೆಯಲ್ಲಿ ಮಧ್ಯಮವರ್ಗದವರಿಗೆ ಪರಿಹಾರವೆಂದು, ವ್ಯಕ್ತಿಯ ಉತ್ಪನ್ನಕರದ ಮರ್ಯಾದೆಯನ್ನು ರೂ ೩೦೦೦/- ಗಳಿಂದ ರೂ ೩೬೦೦ ಗಳಿಗೆ ಏರಿಸಿ, ಹಿಂದೂ ಅವಿಭಕ್ತ ಕುಟುಂಬದ ರೂ ೬೦೦೦/- ಗಳ ವರೆಗಿನ ಉತ್ಪನ್ನವು ಉತ್ಪನ್ನಕರದಿಂದ ಮುಕ್ತವೆಂದು ಸಾರಿದ್ದಾರೆ.

ಕೇಂದ್ರಸರಕಾರದ ನೌಕರರ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿದ ಕೇಂದ್ರಸರಕಾರದ ಆರ್ಥಿಕ ಸಲಹೆಗಾರರ ವರದಿಯ ಮುಖ್ಯಾಂಶಗಳು ಕೆಳಗೆ ಕಾಣಿಸಿದಂತೆ ಇವೆ :

೧. ಸರಕಾರದ ನೌಕರರಲ್ಲಿ ಹೆಚ್ಚು ಜನರು ಸಾಲಗಾರರಾಗಿದ್ದಾರೆ. ಪಂಜಾಬದಲ್ಲಿ ನೂರಕ್ಕೆ ೩೩, ಕಲಕತ್ತೆಯಲ್ಲಿ ನೂರಕ್ಕೆ ೬೫ ರಷ್ಟು ಸಾಲಗಾರರ ಪ್ರಮಾಣವಿದೆ. ೨. ಅವಿಭಕ್ತ ಕುಟುಂಬ ಪದ್ಧತಿ ಮಾಯವಾಗುತ್ತಲಿದೆ. ೩. ಮಧ್ಯಮವರ್ಗದ ಸಂಸಾರ ಚಿಕ್ಕದಿಲ್ಲ. ಅದರಲ್ಲಿ ತೀರ ಚಿಕ್ಕದಾದ ಮುಂಬಯಿ ಪ್ರಾಂತದ ಸಂಸಾರದಲ್ಲಿ ಗಂಡ, ಹೆಂಡತಿ ಮತ್ತು ಗಳಿಸುವವನನ್ನು ನಂಬಿದ ೪ ಜನರು—ತಮ್ಮನೋ ತಂಗಿಯೋ ಮಕ್ಕಳೋ ಇರಬಹುದು—ಹೀಗೆ ೬ ಜನರಿದ್ದಾರೆ. ಬಿಹಾರದಲ್ಲಿಯ ಸಂಸಾರವು ದೊಡ್ಡದು. ಅಲ್ಲಿಯ ಸಂಸಾರದಲ್ಲಿ ಗಂಡ, ಹೆಂಡತಿ, ತಂದೆ, ತಾಯಿ ಮತ್ತು ೬ ಜನ ಚಿಕ್ಕವರು ಹೀಗೆ ೧೦ ಜನರಿದ್ದಾರೆ.

ಗಂಡ, ಹೆಂಡತಿ ಹಾಗು ಒಂದೇ ಮಗು ಹೀಗೆ ಮೂರು ಜನ (೨½ ಜನ) ಇರಬಹುದಾದ ತೀರ ಸಣ್ಣ ಸಂಸಾರದಲ್ಲಿ ಕೂಡ ತಿಂಗಳ ವರಮಾನ ರೂ ೨೫೦ ಗಳಿಗಿಂತ ಕಡಿಮೆಯಿದ್ದರೆ, ಇಡೀ ದಿನದ (೨ ಹೊತ್ತಿನ) ಊಟಕ್ಕಾಗಿ ಕೇವಲ ೮ ಆಣೆಯನ್ನು ವೆಚ್ಚ ಮಾಡುವುದು ಸಾಧ್ಯವಿದೆ. ರೂ ೨೫೦ ಗಳಿಂದ ರೂ ೩೦೦ ಗಳ ವರೆಗೆ ತಿಂಗಳ ವರಮಾನವಿದ್ದವರು, ದಿನದ ಊಟಕ್ಕಾಗಿ ೧೦ ಆಣೆಯನ್ನು ವೆಚ್ಚಮಾಡಬಲ್ಲರು.

ಹೊಟ್ಟೆ-ಬಟ್ಟೆ-ಮನೆ ಬಾಡಿಗೆಗಾಗಿಯೇ ಗಳಿಕೆಯ ಹೆಚ್ಚು ಭಾಗ ವೆಚ್ಚವಾಗುವುದರಿಂದ, ಶಿಕ್ಷಣಕ್ಕೆ ಮನೋರಂಜನೆಗೆ ಹಣ ಉಳಿಯುವುದೇ ಇಲ್ಲ. ಮದ್ರಾಸ ಪ್ರಾಂತದ ಸಂಸಾರವು ತಿಂಗಳಿಗೆ ೧೦ ಆಣೆಗಳನ್ನು ಮನೋರಂಜನೆಗಾಗಿ ವೆಚ್ಚಮಾಡಬಲ್ಲದು. ಮುಂಬಯಿಯಲ್ಲಿ ಸಂಸಾರದ ಮನೋರಂಜನೆಯ ವೆಚ್ಚ ತಿಂಗಳಿಗೆ ರೂ ೨-೩ ಇದೆ.

ಕಲಕತ್ತೆಯ ವಾರಪತ್ರಿಕೆ "Capital" ೧೯೩೭ ಮಾರ್ಚ್‌ನಿಂದ ೧೯೫೦ ಫೆಬ್ರುವರಿವರೆಗೆ ಮಧ್ಯಮವರ್ಗದ ಜೀವನದ ವೆಚ್ಚವನ್ನು ಸೂಚಿಸುವ ದರ್ಶಕ ಅಂಕೆಗಳನ್ನು ಪ್ರಸಿದ್ಧಿಸಿದ್ದು, ಅವು ಕೆಳಗೆ ಕಾಣಿಸಿದಂತೆ ಇವೆ :

೧೯೪೨	ಮಾರ್ಚ್	೧೨೭
೧೯೪೩	,,	೨೩೦
೧೯೪೪	,,	೨೩೨
೧೯೪೫	,,	೨೪೨
೧೯೪೬	,,	೨೫೦
೧೯೪೭	,,	೨೭೮
೧೯೪೮	,,	೩೦೫
೧೯೪೯	,,	೩೪೧
೧೯೫೦	ಫೆಬ್ರುವರಿ	೪೫೨

ಈ ಅಂಕೆಗಳಿಗೆ ೧೯೩೯ನೆಯ ಆಗಸ್ಟದಲ್ಲಿಯ ಬೆಲೆಗಳನ್ನೇ ತಳಹದಿಯ ಅಂಕೆಗಳೆಂದು (೧೦೦) ಹಿಡಿಯಲಾಗಿದೆ. ಮಧ್ಯಮ ವರ್ಗದ ಜೀವನ ವೆಚ್ಚ ೧೯೩೯ಕ್ಕಿಂತ ಈಗ ಸುಮಾರು ೩|| ಮಡಿಯಷ್ಟು ಹೆಚ್ಚಾಗಿದೆ. ಈ ಸೂಚಿ ಅಂಕೆಗಳು ಸೀದಾದಲ್ಲಿ ಸಿಕ್ಕುವ ಆಹಾರ ಮತ್ತು ಅವುಗಳ ನಿಯಂತ್ರಿತ ಬೆಲೆ ಇವುಗಳನ್ನೇ ಗಣಿಸಿವೆ ಮತ್ತು ಮಧ್ಯಮ ವರ್ಗಕ್ಕೆ ಸೀದಾದಲ್ಲಿ ದೊರೆಯುವ ಆಹಾರದ ಪ್ರಮಾಣ ಸಾಲದೆ, ಇಮ್ಮಡಿ ಮುಮ್ಮಡಿ ಬೆಲೆಗೆ ಕಳ್ಳಪೇಟೆಯಿಂದ ಕೊಳ್ಳಬೇಕಾಗುತ್ತದೆ—ಎಂಬುದನ್ನು ನೆನೆದರೆ, ನಿಜವಾದ ಜೀವನದ ವೆಚ್ಚ ಈ ಸೂಚಿಅಂಕೆಗಳು ಸೂಚಿಸುವುದಕ್ಕಿಂತ (೩|| ಪಟ್ಟಿಗಿಂತ) ಹೆಚ್ಚಿದೆಯೆಂಬುದು ಸ್ಪಷ್ಟವಾಗುತ್ತದೆ.

ಮಧ್ಯಮವರ್ಗದ ಆರ್ಥಿಕ ದುರವಸ್ಥೆಯ ವಿಷಯವಾಗಿ ಈಗ ಭಿನ್ನಾಭಿಪ್ರಾಯಗಳೇ ಇಲ್ಲ. ಈ ಮಧ್ಯಮವರ್ಗ ಔದ್ಯೋಗೀಕರಣದಿಂದ ಇಂಗ್ಲಂಡಿನಲ್ಲಿ ಹುಟ್ಟಿ, ಆಂಗ್ಲರ ಆಳಿಕೆಯಲ್ಲಿ ಭಾರತದಲ್ಲಿಯೂ ತಲೆಯೆತ್ತಿದೆ. ಮೊದಲು ಭಾರತದಲ್ಲಿ ಜಾತಿ, ಗುಣ, ಕರ್ಮ ವಿಭಾಗಗಳಿಂದ ನಾಲ್ಕು ವರ್ಣಗಳು, ಅಸಂಖ್ಯಾತ ಉಪ ವರ್ಣಗಳು—ಇವುಗಳಿಂದ ಸಾವಿರಾರು ವರ್ಗಗಳಾಗಿದ್ದುವು. ಆಂಗ್ಲರ ಆಳಿಕೆಯಲ್ಲಿ ಕಲಿತವರೆಲ್ಲರೂ ತಮ್ಮ ಮೊದಲಿನ ಉದ್ಯೋಗಗಳನ್ನು ಬಿಟ್ಟು ನೌಕರಿಯ ಕಡೆಗೇ ತಿರುಗಿದ್ದರಿಂದ, ಮಧ್ಯಮ ವರ್ಗ ಬೆಳೆಯುತ್ತ ಬಂದಿದೆ. ಈಗ ಈ ವರ್ಗದಲ್ಲಿ ಕಾಯಕಷ್ಟದಿಂದ ದುಡಿಯುವ ದುಡಿಮೆಗಾರರನ್ನು ಬಿಟ್ಟು ಉಳಿದ ಎಲ್ಲ ನೌಕರರು, ಡಾಕ್ಟರರು, ಶಿಕ್ಷಕರು, ವಕೀಲರು ಮೊದಲಾದ ಕೆಲವು ಸ್ವತಂತ್ರ ಉದ್ಯೋಗಗಳಲ್ಲಿದ್ದ ಜನರು ಬರುತ್ತಾರೆ. ಈ ವರ್ಗದಲ್ಲಿ ಗಳಿಕೆ ಹಾಗು ಸಮಾಜದಲ್ಲಿಯ ಅಂತಸ್ತಿನ ಮೇಲಿಂದ ವರಿಷ್ಠ ಮಧ್ಯಮ ವರ್ಗ; ವಕೀಲರು, ಡಾಕ್ಟರರು, ಪ್ರಾಧ್ಯಾಪಕರು, ಸರಕಾರೀ ನೌಕರಿ ಹಾಗು ಖಾಸಗೀ ಉದ್ಯಮಗಳಲ್ಲಿ ಮೇಲಿನ ಹುದ್ದೆಯಲ್ಲಿದ್ದ ಜನರು ಹಾಗು ಕಾರಕೂನರು, ಶಿಕ್ಷಕರು ಮೊದಲಾದವರಿಂದ ಕೂಡಿದ ಕನಿಷ್ಠ ಮಧ್ಯಮ ವರ್ಗ ಹೀಗೆ ಎರಡು ಭಾಗಗಳಾಗಿವೆ.

ಕೂಲಿಕಾರರಂತೆ ಚರಿತಾರ್ಥಕ್ಕಾಗಿಯೇ ನೌಕರಿ ಮಾಡಬೇಕಾಗಿರಲಿಲ್ಲ. ನೌಕರಿ ಹೋದರೂ ಹೊಲಮನೆಗಳ ಉತ್ಪನ್ನ ತುಸುವಾದರೂ ಇತ್ತು. ಆದರೆ ಹೊಲ, ಮನೆ, ಕಾರಖಾನೆಗಳ ಒಡೆಯರಂತೆ ಉಂಡುಟ್ಟು ಸುಖವಾಗಿ ಇರಲಿಕ್ಕೆ ಸಾಧ್ಯವಿರಲಿಲ್ಲ. ಹೀಗೆ ಧನಿಕರ ಹಾಗು ಬಡವರ ನಟ್ಟನಡುವೆ ಈ ಮಧ್ಯಮವರ್ಗ ತಲೆಯೆತ್ತಿತು.

ಕಳೆದ ಒಂದುನೂರು ವರ್ಷದಲ್ಲಿ ಮಧ್ಯಮವರ್ಗದ ನಾಲ್ಕು ತಲೆಮಾರುಗಳು ಆಗಿವೆ. ಮೊದಲನೆಯ ತಲೆಮಾರಿನವರು (ಪೀಳಿಗೆ) ಬಡತನದಲ್ಲಿ ಬಾಲ್ಯವನ್ನು ಕಳೆದು, ಕಷ್ಟದಿಂದ ವಿದ್ಯಾರ್ಜನೆ ಮಾಡಿ, ಕಲಿತವರ ಸಂಖ್ಯೆ ತೀರ ಅತ್ಯಲ್ಪವಾಗಿದ್ದ ಆ ಕಾಲದಲ್ಲಿ ನೌಕರಿಯನ್ನು ಮಾಡಿದರು. ಒಂದೆರಡು ಇಂಗ್ಲೀಷು ಪುಸ್ತಕ ಓದಿದವರೂ ಮಾಮಲೇದಾರರಾದ ಕಾಲವದು. ಅವರ ಗಳಿಕೆ ಈಗಿನ ಲೆಕ್ಕದಿಂದ ನೋಡಿದರೆ ತೀರ ಸ್ವಲ್ಪವಿದ್ದರೂ, ಆಗ ಅಗ್ಗಳಿಕೆಯ ದಿನಗಳಿದ್ದುದರಿಂದ ಆ ಅಲ್ಪ ಗಳಿಕೆಯಲ್ಲಿಯೇ ಉಳಿತಾಯವಾಗುತ್ತಿತ್ತು. ೧೯೧೦ ೧೨ ರ ಸುಮಾರಿಗೆ ಕಲಿಯುವುದನ್ನು ಮುಗಿಸಿದ ಎರಡನೆಯ ತಲೆಮಾರಿನವರು, ತಮ್ಮ ಹಿರಿಯರಷ್ಟು ಕಷ್ಟಪಡಬೇಕಾಗಲಿಲ್ಲ ಆಗ ಪದವೀಧರರು ಸ್ವಲ್ಪ ಜನರಿದ್ದುದರಿಂದ ಅವರು ಉದ್ಯೋಗವನ್ನು ಹುಡುಕಬೇಕಾಗಿರಲಿಲ್ಲ. ಉದ್ಯೋಗವೇ ಅವರನ್ನು ಹುಡುಕಿಕೊಂಡು ಬರುತ್ತಿತ್ತು. ೧೯೧೦ ರಿಂದ ೧೯೩೮ ರ ವರೆಗೆ ಮಧ್ಯಮವರ್ಗದ ಸುವರ್ಣಯುಗವೆಂದು ಹೇಳಬಹುದು. ಆ ಕಾಲದಲ್ಲಿ ವಕೀಲರು, ಡಾಕ್ಟರರು, ಸರಕಾರಿ ನೌಕರರು ಗಳಿಕೆಯಲ್ಲಿ ಉಳಿಸಿ, ಹೊಲಮನೆಗಳನ್ನು ಮಾಡಿದರು. ಮಧ್ಯಮವರ್ಗದ ತರುಣರು ಆಯ್. ಸಿ. ಎಸ್. ಇಲ್ಲವೆ ಬೇರೆ ಪದವಿಗಳನ್ನು ಪಡೆಯುವುದಕ್ಕೆ ಸಮುದ್ರಯಾನವನ್ನು ಕೈಕೊಂಡದ್ದು ಆ ಕಾಲದಲ್ಲಿಯೇ. ಶ್ರೀ. ಕಾರಂತ (ಮುಗಿದ ಯುದ್ಧ, ಮರಳಿ ಮಣ್ಣಿಗೆ) ಶ್ರೀ. ಮುಗಳಿ (ಬಾಳುರಿ) ಶ್ರೀ. ಗೋಕಾಕರ (ಇಜ್ಜೋಡು-ಎಲ್ಲ ಭಾಗಗಳು) ಇವರ ಕಾದಂಬರಿಗಳಲ್ಲಿ, ಮಧ್ಯಮ ವರ್ಗದ ಬಡತನದ ಬವಣೆ, ಆರ್ಥಿಕ ಸ್ಥೈರ್ಯ, ಆರ್ಥಿಕ ದುರವಸ್ಥೆ ಚಿತ್ರಿತವಾಗಿವೆ

೧೯೩೮ ರಿಂದ ೧೯೪೭ ರ ವರೆಗೆ ಮೂರನೆಯ ತಲೆಮಾರಿನ ತರುಣ ಮಧ್ಯಮವರ್ಗ ಆರ್ಥಿಕ ಮುಗ್ಗಟ್ಟನ್ನೂ ನಿರುದ್ಯೋಗದ ಸಮಸ್ಯೆಯನ್ನೂ ಎದುರಿಸಬೇಕಾಯಿತು. ಹೊಲಮನೆಗಳ ಉತ್ಪನ್ನದ ಆಧಾರವಿದ್ದುದರಿಂದ ಉಪವಾಸದ ಪ್ರಸಂಗ ಬರಲಿಲ್ಲ. ಆದರೆ ಹಿಂದಿನವರು ಕೂಡಿಟ್ಟ ಗಂಟು ಕರಗಹತ್ತಿತು. ಕಲಿತವರೆಲ್ಲರೂ ನೌಕರಿಯ ಬೆನ್ನು ಹತ್ತಿದ್ದರಿಂದ ಮತ್ತು ಎಲ್ಲರಿಗೂ ನೌಕರಿಯನ್ನು ಒದಗಿಸುವಷ್ಟು ನಾಡಿನ ಔದ್ಯೋಗೀಕರಣವಾಗದ್ದರಿಂದ, ಸುಶಿಕ್ಷಿತರಲ್ಲಿ ನಿರುದ್ಯೋಗ ಬೆಳೆಯಹತ್ತಿತು.

೧೯೩೯ ರಲ್ಲಿ ಸುರುವಾದ ಎರಡನೆಯ ಮಹಾಯುದ್ಧವು ಈ ಸಮಸ್ಯೆಯನ್ನು (ನಿರುದ್ಯೋಗ) ತಾತ್ಪೂರ್ತಿಕವಾಗಿ ಬಿಡಿಸಿತು. ಯುದ್ಧಕಾಲದಲ್ಲಿ ತಾಂತ್ರಿಕ ಶಿಕ್ಷಣದ ಮಹತ್ತ್ವವೂ, ಅವಶ್ಯಕತೆಯೂ ಸರಕಾರಕ್ಕೂ ಜನರಿಗೂ ಮನವರಿಕೆಯಾದುವು. ನೌಕರಿಯಿಂದ ಜೀವನ ಸಾಗಿದರೂ ಜೀವನದ ವೆಚ್ಚ ಹೆಚ್ಚುತ್ತ ನಡೆಯಿತು. ತುಟ್ಟಿಭತ್ತೆ ಹಿಡಿದು ಬರುವ ಗಳಿಕೆ ಎರಡಷ್ಟು ಆಗಿದೆಯೆಂದರೂ ವೆಚ್ಚ ೪-೫ ಮಡಿ ಹೆಚ್ಚು. ಮೊದಲಿನಂತೆ ಮನೆಗೆ ಒಬ್ಬನೇ ದುಡಿಯುವವ. ಆಗ ಮಧ್ಯಮವರ್ಗದ ಸುಶಿಕ್ಷಿತ ಹುಡುಗಿಯರು ಮುಂದಾಗಿ ನೌಕರಿ ಹಿಡಿದು, ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಯತ್ನಿಸಿದರು.

ಯುದ್ಧೋತ್ತರದ ಈಗಿನ ಕಾಲದಲ್ಲಿ ಬೆಲೆಗಳು ಇನ್ನೂ ಏರುವುದರಲ್ಲಿಯೇ ಇವೆ ಮಧ್ಯಮವರ್ಗ ಸುಖಜೀವನ ಸಾಗಿಸಿದ್ದು ಹಳೆಯ ಕತೆಯಾಗಿದೆ. ಹೊಲಮನೆಗಳ ಆಧಾರ ಆದಿದ್ದೆ. ಉಳುವವರೇ ಹೊಲವೊಡೆಯರೆಂಬ ತತ್ತ್ವ ಬಳಕೆಯಲ್ಲಿ ಬಂದು, ಹೊಲಸಾಗುವಳಿಯ ಕಾಯ್ದೆಯಾಗಿ ಹೊಲಗಳೆಲ್ಲ ಕೈಬಿಡುತ್ತೀವೆ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ● ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ● ಮ್ಯಾಜಿಕ್‌ಲ್ಯಾಂಟರ್ನ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ನಾಡಿನ ಔದ್ಯೋಗೀಕರಣಕ್ಕೆ ಆರ್ಥಿಕಪರಿಸ್ಥಿತಿ ಅನುಕೂಲವಿಲ್ಲ. ಪ್ರಗತಿಯ ಪಥಕೆ ಕೊಂಡೊಯ್ಯುವ ಯೋಜನೆಗಳು ಮೂಲೆಗುಂಪಾಗಿವೆ. ನಿರುದ್ಯೋಗದ ಪೆಡಂಭೂತ ಬಾಯ್ದೆರೆದು ಯುದ್ಧದಿಂದ ಉಧ್ವಸ್ತವಾದ ಮಧ್ಯಮವರ್ಗವನ್ನು ಅಣಗಿಸುತ್ತಲಿದೆ.

ನಾಡಿನಲ್ಲಿಯ ಬಂಡವಲದ ಬರಕ್ಕೆ ಮಧ್ಯಮವರ್ಗದ ದುಃಸ್ಥಿತಿಯೂ ಕಾರಣವಾಗಿ ಬ್ಯಾಂಕುಗಳ ಠೇವುಗಳು ಕರಗಿವೆ. ಉದ್ಯಮಗಳಿಗೆ ಬಂಡವಲವನ್ನು ಕೂಡಿಸುವುದು ಜಡವಾಗಹತ್ತಿದೆ. ವಿಮೆಯ ಪಾಲಿಸಿಗಳು, ಕಂತಿನ ಹಣ ಕಟ್ಟದುದರಿಂದ ರದ್ದಾಗಹತ್ತಿವೆ. (Lapse), ಪಾಲಿಸಿಯ ಮೇಲಿನ— ಮುದ್ದತುಠೇವುಗಳ ಮೇಲಿನ ಸಾಲ ಬೆಳೆಯಹತ್ತಿದೆ.

ಮಧ್ಯಮವರ್ಗಕ್ಕೆ ಧನಿಕವರ್ಗದಂತೆ ಧನದ ಬಲವಿಲ್ಲ. ದುಡಿಮೆಗಾರರಂತೆ (ಕೂಲಿಕಾರರಂತೆ) ಸಂಘಟನೆಯ ಬಲವೂ ಇಲ್ಲ. ಉಧ್ವಸ್ತ ಮಧ್ಯಮವರ್ಗ ಚೇತರಿಸಿಕೊಂಡು ಏಳಬಲ್ಲದೇ? ಈಗಿದ್ದ ತ್ರಿಶಂಕುಸ್ವರ್ಗದಿಂದ ಹೊರಬಿದ್ದು ದುಡಿಮೆಗಾರರನ್ನು ಕೂಡಿಕೊಂಡು ಸಾಮ್ಯವಾದದ ಸ್ವರ್ಗಕ್ಕಾಗಿ ಪ್ರಯತ್ನಿಸುವುದರಲ್ಲಿಯೇ ಮಧ್ಯಮವರ್ಗದ ಉದ್ಧಾರವಿದೆಯೆಂದು ಪ್ರಾ. ಧನಂಜಯರಾವ ಗಾಡಗೀಳರಂತಹ ವಿದ್ವಾಂಸರೂ ಹೇಳುತ್ತಿದ್ದಾರೆ.

ಎಲ್ಲ ಆಂದೋಲನಗಳಲ್ಲಿಯಂತೆ ಕೂಲಿಕಾರರ ಆಂದೋಲನದಲ್ಲಿಯೂ ಮಧ್ಯಮವರ್ಗದ ಜನರೇ ಮುಂದಾಳುಗಳಾಗಿದ್ದರೂ ಬಹುಸಂಖ್ಯಾಕ ಮಧ್ಯಮವರ್ಗದವರು ದೂರ ಸಿಡಿದೇ ನಿಂತಿದ್ದಾರೆ. ಮಾಲಕವರ್ಗದವರೂ 'ಒಡೆಯ' 'ಆಳು' ಎಂಬ ನೀತಿಯನ್ನು ಅನುಸರಿಸಿ, ವರಿಷ್ಠ ಮಧ್ಯಮವರ್ಗವನ್ನು ಒಡೆದುಕೊಂಡಿದ್ದಾರೆ. ಮಧ್ಯಮವರ್ಗ ಇಬ್ಭಾಗವಾಗಿ ವರಿಷ್ಠ ಮಧ್ಯಮವರ್ಗವು ಧನಿಕರ ಬೆನ್ನು ಹತ್ತಬಹುದು. ಕನಿಷ್ಠ ಮಧ್ಯಮವರ್ಗವು ದುಡಿಮೆಗಾರರೊಡನೆ ಒಂದಾಗಿ, ಅವರಂತೆ ಸುಸಂಘಟಿತವಾಗಿ ಈಗಿದ್ದ ದುರವಸ್ಥೆಯಿಂದ ಚೇತರಿಸಿಕೊಳ್ಳಬಹುದು.

ಇನ್ನು ಮುಂದೆ ಬರಲಿರುವ ಆಯ್ಕೆಗಳಲ್ಲಿ ಸುಶಿಕ್ಷಿತ ಮಧ್ಯಮವರ್ಗವು ಮಹತ್ತ್ವದ ಪಾತ್ರವನ್ನು ವಹಿಸಲಿದೆ. ಯಾವ ರಾಜಕೀಯ ಪಕ್ಷಕ್ಕೂ ನಿಚ್ಚಳವಾದ ಬಹುಮತ ದೊರೆಯಬೇಕಾದರೆ ಮಧ್ಯಮವರ್ಗದ ಬೆಂಬಲ ಅವಶ್ಯವಿದೆ. ೧೯೪೫ ರಲ್ಲಿ ಮಧ್ಯಮವರ್ಗದ ಬೆಂಬಲದಿಂದ ನಿಚ್ಚಳ ಬಹುಮತ ಪಡೆದ ಇಂಗ್ಲಂಡಿನ ಆ್ಯಟ್ಲೀ ಸರಕಾರವೀಗ ಆ ಬೆಂಬಲ ತಪ್ಪಿದ್ದರಿಂದ ತತ್ತರಿಸಹತ್ತಿದೆ. ಮಧ್ಯಮವರ್ಗದ ಬೆಂಬಲ ತಪ್ಪಿದರೆ ಕಾಂಗ್ರೆಸ್ ಸರಕಾರದ ಅವಸ್ಥೆಯೂ ಹಾಗೆಯೇ ಆಗುವುದು.

ಆಡಳಿತದ ಸೂತ್ರಗಳು ಯಾವುದೇ ಪಕ್ಷದ ಕೈಯಲ್ಲಿದ್ದರೂ ಆಡಳಿತವನ್ನು ನಿರ್ವಹಿಸುವ ಹೊಣೆ ನೌಕರ ವರ್ಗದ್ದು. ಯೋಗ್ಯ ಆಡಳಿತಕ್ಕೆ ಸಮರ್ಥ, ಸಂತುಷ್ಟ ನೌಕರರು ಬೇಕು. ಆದುದರಿಂದ ಮಧ್ಯಮವರ್ಗವೆಲ್ಲ ಬಹುಸಂಖ್ಯಾಕರಾದ ತನ್ನ ನೌಕರರ ಹಿತಗಳನ್ನು ಕಡೆಗಣಿಸುವುದು, ಅವರ ಆರ್ಥಿಕ ದುಃಸ್ಥಿತಿಯನ್ನು ಅಲಕ್ಷಿಸುವುದು ಯಾವ ಸರಕಾರಕ್ಕೂ ಸಾಧ್ಯವಿಲ್ಲ.

ಎಂದಿನಂತೆ ಇಂದೂ ಮಧ್ಯಮವರ್ಗದವರು ಕಾರಕೂನರಾಗಿಯೇ ಬಾಳಬೇಕಾಗಿಲ್ಲ. ಇಂದಿಲ್ಲ ನಾಳೆ ನಾಡಿನ ಔದ್ಯೋಗೀಕರಣವಾಗಲೇಬೇಕು. ಹಕ್ಕು, ಹೊಣೆಗಳೆರಡರ ಅರಿವೂ ಇದ್ದ ಮಧ್ಯಮವರ್ಗದವರ ಮಾರ್ಗದರ್ಶನ ಈಗ ಅಗತ್ಯವಿದೆ. ತಾಂತ್ರಿಕ ಶಿಕ್ಷಣ ಪಡೆದು ಮಧ್ಯಮವರ್ಗ ಇಂತಹ ಮುಂದಾಳುಗಳ ಪಡೆಯನ್ನೇ ನಿರ್ಮಿಸಬಲ್ಲದು. ಮತ್ತು ಉದ್ದಿಮೆಗಳ ಹುಟ್ಟುವಳಿಯನ್ನು ಹೆಚ್ಚಿಸಲಿಕ್ಕೆ ನೆರವಾಗಬಲ್ಲದು. ಒಕ್ಕಲತನವನ್ನು ದೊಡ್ಡ ಪ್ರಮಾಣದಿಂದ ಸಾಮೂಹಿಕ ಇಲ್ಲವೆ ಸರಕಾರೀ ಪದ್ಧತಿಯಿಂದ ಕೈಕೊಂಡು ಆಧುನಿಕ ಸಲಕರಣೆ, ಯಂತ್ರಸಾಮಗ್ರಿ ಇವುಗಳನ್ನು ಬಳಸಿದರೆಯೇ ಹುಟ್ಟುವಳಿಯನ್ನು ಬೆಳೆಸಬಹುದು. ಈ ಕೆಲಸದಲ್ಲಿ ಸುಶಿಕ್ಷಿತ ಮಧ್ಯಮವರ್ಗ ಬಹಳ ಮಹತ್ತ್ವದ ಭಾಗವನ್ನು ವಹಿಸಬಲ್ಲದು. ನಾಡಿನ ಮೂಲೆ-ಮೂಲೆಗಳಲ್ಲಿಯೂ ಶಾಲೆಗಳನ್ನು ಸ್ಥಾಪಿಸುವುದಾದರೆ, ಹಳ್ಳಿ-ಹಳ್ಳಿಗಳಿಗೂ ವೈದ್ಯಕೀಯ ಸಹಾಯವನ್ನು ಒದಗಿಸುವುದಾದರೆ, ನೆನೆಗುದಿಗೆ ಬಿದ್ದ ನೀರಾವರಿಯ ಯೋಜನೆಗಳನ್ನು ಕೈಕೊಂಡರೆ ನಿರುದ್ಯೋಗ ನಿರ್ನಾಮವಾಗಬಹುದು. ರಾಷ್ಟ್ರೀಯ ಸಂಯೋಜಿತ ಸಮಿತಿಯು (Nationl Planing Commission) ನಾಡಿನ ಧನಸಂಪತ್ತಿನಂತೆ ಜನಸಂಪತ್ತೂ ವ್ಯರ್ಥವಾಗದಂತೆ ಮಾಡಿಕೊಳ್ಳುವುದೆಂದು ನಂಬಬಹುದು.

ಮಧ್ಯಮವರ್ಗದ ದುರವಸ್ಥೆಗೆ ಸಂತತಿಯ ಸಂಖ್ಯೆ ಹೆಚ್ಚಾಗಿ ಬೆಳೆದ ದೊಡ್ಡ ಸಂಸಾರವೂ ಒಂದು ಕಾರಣವಾಗಿದೆ. ಸಂತಾನಸಂಯಮ, ಸಂತಾನ ನಿರೋಧ, ಎರಡು ಮಕ್ಕಳ ನಡುವೆ ಸಾಕಷ್ಟು ಅಂತರ ಅವಶ್ಯವಾಗಿವೆ. ಪ್ರತಿ ವರುಷದ ಹೆಂಗೆಯನ್ನು ಸಂತಾನ ನಿರೋಧದ ಸಾಧನಗಳೇ (Contrascptives) ತಡೆಯಬಲ್ಲವು. ಈ ಸಾಧನೆಗಳು ಎಲ್ಲರಿಗೂ ಸುಲಭವಾಗಿ, ಅಗ್ಗವಾಗಿ ಸಿಗಬೇಕು. ಅವುಗಳನ್ನು ಉಪಯೋಗಿಸುವ ವಿಧಾನ ಗೊತ್ತಾಗಬೇಕು.

ಈಗ ಮಧ್ಯಮವರ್ಗ ಉಧ್ವಸ್ತವಾದಂತೆ ಕಂಡರೂ ನಾಡು ಮುನ್ನಡೆದಂತೆ, ಮಧ್ಯಮವರ್ಗದ ಭವಿತವ್ಯ ಉಜ್ವಲವಾಗುವುದರಲ್ಲಿ ಸಂಶಯವಿಲ್ಲ.

ಸೋಮಾರಿತನವೆಂಬ ಸದ್ಗುಣ

*(ಒಂದು ಚಾಟುಭಾಷಣ)

ಶ್ರೀ. ದ. ರಾ ಬೇಂದ್ರೆ, ಎಂ ಎ. ಸೊಲ್ಲಾಪುರ

★

ನಿಜವಾದ ಸೋಮಾರಿಗಳಿಗಿಂತ ಸೋಮಾರಿಗಳಂತೆ ಕಾಣುವ ಸದ್ಗುಣಿಗಳೇ ಇಂದು ಕೆಲಸಿಗರ ಕಡೆಯಿಂದ ಬೈಗುಳನ್ನು ತಿನ್ನುತ್ತಿದ್ದಾರೆ. ಕೆಲಸಿಗರ ಕರ್ಮವಾದದ ಸದ್ಗುಣದಂತಹ ದುರ್ಗುಣವೇ ಇಂದು ಜಗತ್ತಿನ ಪ್ರಕ್ಷೋಭೆಗೆ ಕಾರಣವಾಗಿದೆ.

★

'ಸೋಮಾರಿತನ' ಎಂಬ ಸದ್ಗುಣವನ್ನು ಕುರಿತು, ನನಗೆ ಾತನಾಡಲು ಹೇಳಿದ್ದಾರೆ. ನಾನೂ ಒಪ್ಪಿಕೊಂಡಿದ್ದೇನೆ. ಢಿಯಲ್ಲಿ 'ಸೋಮಾರಿತನ ಒಳ್ಳೆಯ ಗುಣವಲ್ಲ' ಎಂದು ಳುತ್ತಾರೆ. ನಾನೀಗ ಅದನ್ನು ಒಳ್ಳೆಯ ಗುಣವೆಂದು ಹೇಳ- ಕು. ಸರಿ, ಜನರು ರೂಢಿಯ ಸೋಮಾರಿಗಳಂತೆ, ನನ್ನ ಈ ಷಣವನ್ನೇ ಕೇಳದಿದ್ದರೆ ಹೇಗೆ? ಸಿದ್ಧಸೋಮಾರಿಗಳು, ನನ್ನ ಷಣ ಕೇಳಿ ಹೊಸದಾಗಿ ಏನು ಗಳಿಸಿಯಾರು? ಇನ್ನೊಂದು: ಮಾರಿತನವೆಂಬುದು ಗಳಿಸಬೇಕಾದ ಗುಣ ಅಲ್ಲ. ಅದೊಂದು ಟ್ಟುಗುಣ. ಅದು ಬೀಜದಲ್ಲಿಯೆ ಇರಬೇಕು. ಎಂದರೆ ಅದ್ರ ೆ ಸಸಿ ಆಗಿ, ಕೊನರು ಬಿಟ್ಟೀತು. ಹುಟ್ಟುಸೋಮಾರಿಗಳ- ವರು ನನ್ನ ಈ ಭಾಷಣ ಕೇಳಿ, ಇದೊಂದು ಸದ್ಗುಣ ಎಂದು ಗಂಡು, ಹೊಸ ಹೊಸ ಸೋಮಾರಿಗಳಾಗಿಬಿಟ್ಟರೆ ಹೇಗೆ?.... ಗೆಲ್ಲಾ ನನ್ನ ಮನಸ್ಸು ಸೋಮಾರಿತನದಲ್ಲೇ ಹೊಯ್ದಾಡು- ಶುವಾಗ, ಮಾತಿಗಾಗಿ ನಾನು ಇಷ್ಟೊಂದು ವಿಚಾರ ಾಡಬೇಕೆ? — ಎಂಬ ವಿಚಾರ ಹೊಳೆಯಿತು. ಮಾತಿನ ೋಮಾರಿತನ ಕೃತಿಯ ಸೋಮಾರಿತನವಲ್ಲ. ನನ್ನ ಮಾತಿ- ತಿಯೆ ನನ್ನ ಕೃತಿಯಾಗಿದ್ದರೆ, ಸೋಮಾರಿತನವೆಂಬ ಸದ್ಗುಣಕ್ಕೆ ಯ ಗುರುಗಳಂತೆ— ನಾನು ಹದಿನೈದು ನಿಮಿಷ ಮೌನ ್ಯಾನ ಮಾಡಬೇಕು; ತಾವೆಲ್ಲರೂ ಮೌನಗುರುವಿನ ಮೌನಿ- ಂತೆ—ಹದಿನೈದು ನಿಮಿಷಗಳ ವರೆಗೆ—ಸುಮ್ಮಗೆ ಕುಳಿತಿದ್ದು, ನೆಗೆ 'ಹುಂ ಹುಂ' ಎಂದಾಗಲಿ, ನಿದ್ದೆಯಲ್ಲಿ ತೂಗಡಿಸಿಯಾಗಲಿ, ್ಮತಿ ಕೊಡಬೇಕು. ನನಗೆ ಏನೂ ಕೆಲಸವಿಲ್ಲ. ನಾನು ಮಾರಿ. ಮಾತೆಂಬುದು ಗಾಳಿಯ ಕೂಡ ಚೆಲ್ಲಾಟ. ಗೂ ಬೇರೆಯೇನೂ ಕೆಲಸವಿಲ್ಲ. ಸುಖಾಸನದಲ್ಲಿ ಕುಳಿತ ್ರ ಬಾನುಲಿಗೆ ಕಿವಿಗೊಡುತ್ತಿದ್ದೀರಿ. ಈ ಸೋಮಾರಿತನದ ಡೆ—. ನಿಷ್ಕಾಮಕರ್ಮ. ನಿಷ್ಕರ್ಮ ಎಂದರೂ ಸಲ್ಲುವುದು ಕೆಲಸವೂ ಅಲ್ಲ; ಇದಕ್ಕೆ ಫಲವೂ ಇಲ್ಲ. ಆಟದ ಆನಂದ ಇದೆ. ನಾನು ಹೇಳುತ್ತಿದ್ದೇನೆ... ನೀವು ಕೇಳುತ್ತಿದ್ದೀರಿ, ನಿಜ! ಆದರೆ ನಾವು ಒಬ್ಬರನ್ನೊಬ್ಬರು ನೋಡುತ್ತಿಲ್ಲ. ಗೋಳಗುಮ್ಮ- ಟದ ಆ ತುದಿಗೆ ನೀವು.... ಈ ತುದಿಗೆ ನಾನು— ಸೋಮಾರಿ- ತನದಲ್ಲಿ ಏನೋ ಪಿಸುಗುಡುತ್ತಿದ್ದೇನೆ; ತಾವೂ ಮುಸುಗುಡದೆ ಕೇಳಬೇಕು. 'ಪರಿಹಾಸ ವಿಜಲ್ಪಿತಂ ಸಖೇ! ಪರಮಾರ್ಥೇನ ನ ಗೃಹ್ಯತಾಂ ವಚಃ' ಎಂದರೆ 'ನಗೆಯಲ್ಲಿ ಆಡಿದ್ದನ್ನು ನಿಜವೆಂದು ನಂಬಬೇಡ!' ಎಂದು ಕಾಲಿದಾಸನದೊಂದು ಸುಭಾಷಿತವಿದೆ. ನಿಜವೆಂದು ಹೇಳಿದ್ದನ್ನೇ ನಗೆಮಾತು ಎಂದು ತಿಳಿದುಕೊಳ್ಳುವ ಈ ಕಾಲದಲ್ಲಿ, "ನಗೆಮಾತನ್ನು ನಿಜವೆಂದು ನಂಬಿಯಾರು— ಎಂದು ತಿಳಿದುಕೊಳ್ಳುವ ಕಾರಣವೇನೂ ಇಲ್ಲವಾದರೂ, ಎಂಥೆಂಥ ನಗೆ- ಗೇಡಿನ ಮಾತುಗಳನ್ನೇ ನಿಜವೆಂದು ನಂಬಿ ನಡೆಯುವ ಈ ಕಾಲ- ದಲ್ಲಿ— ನನ್ನ ನಗೆಮಾತನ್ನೆ ನಿಜ ಎಂದು ನಂಬಲಾರರೆಂದು ಹೇಗೆ ಹೇಳಬೇಕು? ನೀವೇ ಹೇಳಿ! ಫಲವು ಏನೇ ಬರಲಿ, ಈ ಕೆಲಸ- ವಲ್ಲದ ಕೆಲಸವನ್ನು ನಿಷ್ಕಾಮವಾಗಿ ಸ್ವೈಷ್ಕರ್ಮ್ಯ— ಎಂದು ಮಾಡುತ್ತೇನೆ. ಇಷ್ಟು ಹೊತ್ತಿಗೆ ತಮಗೆ ನಿದ್ದೆ ಬಂದಿರದಿದ್ದರೆ ಇನ್ನು ಮುಂದೆ ಕೇಳಿರಿ!

ಸೋಮಾರಿತ ಸದ್ಗುಣವಾಗಲಾರದು, ಸದ್ಗುಣಕ್ಕೆ ಸೋಮಾರಿ- ತನವೆಂಬುದು ತಪ್ಪು— ಎಂದು ಬಲ್ಲವರಾದ ತಮ್ಮಿದಿರು ಮಾತಿನ ಲೀಲಾವಿಲಾಸದಲ್ಲಿ ನಾನು 'ಸೋಮಾರಿತನ ಸದ್ಗುಣ' ಎಂದು ಸಾಧಿಸಬೇಕಾಗಿದೆ. ಈ ಕಸರತ್ತಿನ ಹಾದಿಯನ್ನು ಸಲ್ಪ ಲಕ್ಷ್ಯ- ಗೊಟ್ಟು ನೋಡಿ ನಾವು ಸದ್ಯಕ್ಕೆ ಒಪ್ಪಿಕೊಳ್ಳೋಣ; ಸೋಮಾರಿ- ತನ ಸದ್ಗುಣ— ಎಂದು. ಅದು ನಿಜವಾದರೆ, ಕೆಲಸಿಗತನ— ಕಷ್ಟಮಾಡುವುದು— ಅದು ಅಷ್ಟು ಒಳ್ಳೆಯ ಗುಣವೇನೂ ಅಲ್ಲ.... ಎಂಬುದು, ಯಾರಿಗೂ ಒಮ್ಮೆಲೇ ತಿಳಿಯುವಂತಿದೆ.

* ಧಾರವಾಡ ಆಕಾಶವಾಣಿಯಿಂದ ಬಿತ್ತರಗೊಂಡುದಿದು..

ಸಂ. ಜ.

ಆಗಸ್ಟ್ ಕ್ರಾಂತಿಯ ಸೇನಾಪತಿ

ಚೆನ್ನಪ್ಪ ವಾಲಿ

ಅವರ ಜೀವನದ ರೋಮಾಂಚಕಾರಕ ಕಥೆ.

ಬರೆದವರು :

ಬಸವರಾಜ ಕಟ್ಟೀಮನಿ

ನಿಮ್ಮ ಪ್ರತಿಗಾಗಿ —

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ.

ಅಷ್ಟೇ ಅಲ್ಲ; ಅದು ಶುದ್ಧ ದುರ್ಗುಣ. ಕೆಲಸ! ಕೆಲಸ! ಕೆಲಸ! ಮೂರೂ ಹೊತ್ತೂ ಕೆಲಸ! ಒಬ್ಬರಿಗೆ ಕೆಲಸ, ಇನ್ನೊಬ್ಬರಿಗೆ ಕಷ್ಟ!.... ಅಥವಾ ಇವರು ಮಾಡಿದ ಕಷ್ಟ ಇನ್ನೊಬ್ಬರಿಗೆ ಕೆಲಸಾ ಕೊಡುತ್ತದೆ— ಎನ್ನುವ ಇದು ಒಳ್ಳೆಯದೇ? ಒಬ್ಬರ ಕೆಲಸದಿಂದ ಇನ್ನೊಬ್ಬರ ತಲೆ ಕೆಟ್ಟುಹೋದರೆ, ಅಭಸ್ತ್ರವಾಗಿ-ಬಿಟ್ಟರೆ, ಅದರಿಂದ ಏನು ಸುಖ? ಇದಕ್ಕಿಂತ ಗಡ್ಡ, ತಲೆ ಬೆಳಸಿ-ಕೊಂಡು, ತನ್ನ ತಲೆಯೊಳಗಿದ್ದುದನ್ನು ಇನ್ನೊಬ್ಬರ ತಲೆಯೊಳಗೆ ತುರುಕುವ ಪ್ರಯತ್ನ ಮಾಡದೆ, ಋಷಿ-ಮುನಿಗಳಂತೆ ಮೌನ-ದಿಂದಿರುವುದು ಸದ್ಗುಣವಲ್ಲದೆ ಮತ್ತೇನು?

ಅಗೋ! ಅಲ್ಲಿ ಭಾರತದ ಭೂಪಟದಲ್ಲಿ—ಉತ್ತರದ ನೆತ್ತಿ-ಯಲ್ಲಿ—ಹಿಮಾಲಯ ತಲೆಯೆತ್ತಿ ನಿಂತಿದೆ. ಮುಗಿಲಿಗೆ ಮುದ್ದಿ-ಡುವ ಅದರ ಅನೇಕ ಶಿಖರಗಳಲ್ಲಿ 'ಕೈಲಾಸ ಶಿಖರ' ಒಂದು. ಕಣ್ಣು ಮುಚ್ಚಿಕೊಂಡೇ ನೋಡಿರಿ: ಕೈಲಾಸ ಕಾಣುತ್ತದೆ. 'ಕಾಯಕವೆ ಕೈಲಾಸ' ಎಂದು ಹಿರಿಯರು ಹೇಳಿಲ್ಲವೆ? ನಾನು ಕಣ್ಣುಮುಚ್ಚಿ ಹೇಳುವ ಕಾಯಕ ನಡೆಯಿಸಿದ್ದೇನೆ; ನೀವು ಕಣ್ಣು ಮುಚ್ಚಿ ಕೇಳುವ ಕಾಯಕ ನಡೆಯಿಸಿದ್ದೀರಿ. ಈ ಕಾಯಕಕ್ಕೆ ಕೈಲಾಸ ಫಲ ಏಕೆ ಇಲ್ಲ? ಕಣ್ಣು ಮುಚ್ಚಿದವರನ್ನೆಲ್ಲಾ 'ಕೈಲಾಸ ವಾಸಿಗಳಾದರು' ಎಂದು ಹೇಳುತ್ತಾರೆ. ಎಂದಮೇಲೆ ನಿಂತಲ್ಲೇ ಕುಳಿತಲ್ಲೇ ಕಣ್ಣು ಮುಚ್ಚಿದರೆ, ಕೈಲಾಸ ಕಾಣುವುದು ಅಪರೂಪವಾಯಿತೇ? ಆ ಕೈಲಾಸಶಿಖರದಲ್ಲಿ ಸೋಮಾರಿಗಳ ಒಡೆಯನೊಬ್ಬ ಕಾಮಾರಿ ಇದ್ದಾನೆ. ಮೊದಲೇ ತಣ್ಣನೆಯ ಮಂಜಿನ ದಿಬ್ಬನಂಥ ಬೆಟ್ಟ. ನಿರ್ಜನ ಪ್ರದೇಶ. ಅಲ್ಲಿ ಏನಾದರೂ ಸುಳಿದಾಡುತ್ತಿದ್ದರೆ, ದೇಹವಿಲ್ಲದ ಭೂತಗಳ ಸಂಚಾರವಿರಬೇಕು. ಅಂಥ ಆ ಸ್ಮಶಾನಶಾಂತಿಯಲ್ಲಿ, ಎಲ್ಲ ಕಾಮ-ಸಂಕಲ್ಪಗಳನ್ನು ಸುಟ್ಟು ಬೂದಿಮಾಡಿ, ಮೈಗೆ ಅದನ್ನು ಬಡಿದು-ಕೊಂಡ ಒಬ್ಬ ಮಹಾಪುರುಷ ಕುಳಿತಿದ್ದಾನೆ. ಮೈಮೇಲೆ ಚಿಂದಿ-ಬಟ್ಟೆಯಿಲ್ಲ. ಹಾವು ಹರಿದಾಡುತ್ತಿವೆ. ಅವನ ತಲೆಯ ಮೇಲೆ ಬೆಳುದಿಂಗಳಾಗಿ ಬೆಳೆಯಲಿರುವ ಬಾಲಚಂದ್ರ! ಇದು ಸಾಲದ್ದಕ್ಕೆ ಬೇಸಗೆಗಾಲದಲ್ಲಿಯೂ ನೆರೆನೆರೆಯಾಗಿ ಹರಿಯುವ ಗಂಗೆಯ ಅ... ಜಲಪಾತ! ಹಿಮದಲ್ಲಿ ಹುಟ್ಟಿ, ನಿರ್ಜನದಲ್ಲಿ ನೆಟ್ಟು, ಬೆಳುದಿಂಗ... ಬೆಳೆದು, ಗಂಗೆಯಲ್ಲ ಮುಳು-ಮುಳುಗಿ, ಇನ್ನೂ ಇದ್ದೇನೆ—ಬ... ದ್ದೇನೆ—ಬದುಕಿದ್ದೇನೆ—ಎನ್ನುವ ಈ ಸತ್-ಗುಣಕ್ಕೆ 'ಸತ್‌ಗ... ಎಂದು ಹೇಳಬಿಡಬಹುದೇ? ಸತ್ತಂತೆ ಇರುವ ಎಲ್ಲದರಲ್ಲಿಂ... ಜೀವಕಳೆ ತುಂಬಬಲ್ಲ ಈ ಶಿವಶಕ್ತಿ, ಸದ್ಗುಣದ ತವರು ಮ... ಸೋಮಾರಿತನದ ಸಾಮ್ರಾಜ್ಯಪದವಿ! ಆ ಕೈಲಾಸಪೀಠ... ಕುಳಿತು, 'ನೈವಕುರ್ವನ್, ನಕಾರಯನ್' ಎಂದರೆ 'ಮಾ... ವುದೂ ಇಲ್ಲ, ಮಾಡಿಸುವುದೂ ಇಲ್ಲ! ಆಗುವುದನ್ನು ನೋಡುತ್ತಿ... ಎನ್ನುತ್ತದೆ—ಸೋಮಾರಿಗಳ ದೈವ. 'ಪ್ರಕೃತಿಯ ಆಗು-ಹೋ... ಗಳಿಗೆಲ್ಲ ನಾನು ಅಧ್ಯಕ್ಷ' ಎಂಬುದೇ ಅವರ ಸೂಕ್ತಿ-ಸುಭಾ... ಸಭೆಯಲ್ಲಿ ಸೋಮಾರಿಯಂತೆ ಕುಳಿತಿರುವ ಅಧ್ಯಕ್ಷ, ... ಸದ್ಗುಣಿ—ಎಂದು ಎಲ್ಲರೂ ಬಲ್ಲರು. ತಾವೂ ಕೂಡ ನನ್ನ ಮಾತಿನ ಆಗು-ಹೋಗುಗಳ ಕಡೆಗೆ ಜೋಮಾರಿ ಅಧ್ಯಕ್ಷ... ಕಿವಿಗೊಟ್ಟು ಕೇಳುವಿರಷ್ಟೆ?

'ಸೋಮಾರಿತನ ಸುದ್ಗುಣ' ಎಂದು ಹೇಳಿದರೆ ಸಾಲ... ಕೆಲಸಮಾಡುವುದು ದುರ್ಗಣ—ಎಂಬುದನ್ನು ಸ್ಪಷ್ಟಪಡಿಸ... ಬೇಕು. ಈ ಜಗತ್ತಿನಲ್ಲಿ ಸುಮ್ಮನೆ ಕುಳಿತುಕೊಳ್ಳುವುದು ಸುಲಭ... ಸಾಧ್ಯವಲ್ಲ. ಸ್ವಾಭಾವಿಕವಲ್ಲ. ಶರೀರಯಾತ್ರೆ ನಡೆಯಬೇಕಾದ... ಕೆಲಸ ಮಾಡಲೇಬೇಕಾಗುತ್ತದೆ. ನಿದ್ದೆಯಲ್ಲಿ ಉಸಿರಾಟ ನಡೆ... ಬೇಕು. ಕಲ್ಲಿನಂಥ ಕಣಕಣದಲ್ಲಿಯೂ ಕ್ಷಣಕ್ಷಣಕ್ಕೂ ಅಣುಗಳ ... ಚಾಟ ನಡೆದಿದೆ—ಎಂದು ಕಂಡಿರುವ ಇಂದಿನ ದೃಷ್ಟಿಗೆ ಸುಮ... ಇರುವುದು ಸಾಧ್ಯವೆ? 'ಇದ್ದೇವೆ' ಎಂದು ತಿಳಿಯುವುದು ಸಾಧ್ಯ... 'ನೈವ ಕಿಂಚಿತ್ ಕರೋಮೀತಿ ಯುಕ್ತೋಮನ್ಯೇತ ತತ್ತ್ವವಿ... ಎಂದರೆ 'ಯೋಗಿಯಾದ ತತ್ತ್ವವೇತ್ತನು ತಾನೇನೂ ಮಾಡ... ದಿಲ್ಲ—ಎಂದು ಅನುಭವಿಸಬೇಕು.' ಇದು ಚೊಕ್ಕ ಸೋಮ... ರಿಯ ಲಕ್ಷಣ ಆದರೆ ಇಂದಿನ ಜಗತ್ತು ಕಾರ್ಮಿಕರ ಕ... ಕೋಲಾಹಲಗಳಿಂದ ತುಂಬಿದೆ. 'ಏನೂ ಮಾಡುವುದಿಲ್ಲ ಎನ್ನುವವನಿಗೆ ಇಂದು ಇರುವ ಅಧಿಕಾರವೇ ಇಲ್ಲ. ಕು...

Messrs HOUSE OF COMMER(

PUBLICITY EXPERTS & COMMERCIAL ARTISTS

257/c BUDHWAR PETH;

Opposite Faraskhana Howd, POONA 2.

WE DEAL IN

Designs, Blocks, Slides, Painting, Printin

Rubber-Stamps and Advartising of any kin

ಶ್ರದ ಮೇಲಿನ ಸೈನಿಕನಂತೆ 'ಕೊಲ್ಲುತ್ತೇನೆ—ಸಾಯುತ್ತೇನೆ, ಲ್ಲುತ್ತೇನೆ—ಸಾಯುತ್ತೇನೆ!' ಎಂದು ಉಸಿರುಸಿರಿಗೆ ಜಪ ಡಿಯಿಸಬೇಕು ನಾವು. ಹೀಗೆ ಸಾವಿನ ಗಣಿಯ ತುದಿಯ ಲೆ ಕುಣಿಯುವವರಿಗೆ ಇರುವ ಅಧಿಕಾರವಿದೆ. ಉಳಿದವರು ತ್ತವರು ಇಲ್ಲವೆ ಸಾಯುವವರು—ಎಂದು ತಿಳಿಯಬೇಕು. ಳಿದವರು ಇದ್ದರೂ ಜೀವಂತ ಹೆಣವಿದ್ದಂತೆ. ಸಾವಿನ ಜಪ ನ್ನೇ ಜೀವನಸೂತ್ರ ಮಾಡಿಕೊಂಡ ಈ ಜಗತ್ತಿನಲ್ಲಿ, ಮೂರನೆಯ ಶ್ವಯುದ್ಧ— ಮಹಾಯುದ್ಧ ಹೊತ್ತಿಕೊಳ್ಳುವುದು ಏನು ಶ್ಚರ್ಯ?

'ನಾನೇ ಎಲ್ಲವನ್ನೂ ಮಾಡುತ್ತೇನೆ, ಮಾಡಿಸುತ್ತೇನೆ—ಎಂದು ಂತಿ ವಿಶ್ರಾಂತಿ ಇಲ್ಲದೆ, ಕೊಂಡು ಕೊನೆದಿದಾಡುವ ಕರ್ಮವಾದ-ಲ್ಲಿ ಸಂಹಾರಕ ಯುದ್ಧಗಳು ಹುಟ್ಟುತ್ತವೆ. ಅದೇ ಇಂದಿನ ಗತ್ತಿನ ದುರ್ಗುಣ. ತಾನು ಕರ್ತೃತ್ವಶಾಲಿ, ತನ್ನಿಂದಲೇ ಳ್ಳಿಯ—ಊರಿನ—ನಾಡಿನ—ರಾಷ್ಟ್ರದ—ಎಲ್ಲ ಕರ್ಮ ಸಂಚ ಸಾಗಿದೆ....ಎಂಬ ಅಹಂವಾದಿಗಳಿಂದ ಪ್ರಪಂಚ ಗಜ ಜಿಸಿ ಹೋದದ್ದರಿಂದ, ಕಲಹಕ್ಕೆ ಕರ್ಮಯೋಗದ ಸ್ವರೂಪ ಬಂದಿದೆ. ಇಂತಹ ಈ ಜಗತ್ತಿನಲ್ಲಿ ಸೋಮಾರಿಯೆನಿಸಿಕೊಂಡರೂ ಡ್ಡಿಯಿಲ್ಲ; ಸುಮ್ಮನೆ ಇರುವುದು ಸದ್ಗುಣವೇ ಸರಿ! ಅದಕ್ಕೆ ಮಾರಿಯ ಕೃಪೆಬೇಕು.

'ಜಗತ್ತಿಗೆ ಒಳ್ಳೆಯದನ್ನು ಮಾಡಲು ಬರದಿದ್ದರೆ, ಕೆಟ್ಟುದ-ನ್ನಾದರೂ ಮಾಡುತ್ತೇನೆ!' ಎಂಬ ದುರ್ಗುಣ ಇಂದು ಪ್ರಚಾರ ಲ್ಲಿದೆ. ಪ್ರತಿಯೊಬ್ಬನೂ ತಾನು ಏನಾದರೂ ಕೆಲಸ ಮಾಡುತ್ತೀ-ನೆ, ಯಾರಿಗಾದರೂ ಕೆಲಸ ಮಾಡುತ್ತಿದ್ದೇನೆ—ಎಂದು ಸಿದ್ಧ ಡಿಸಲು, ಪ್ರಸಿದ್ಧನಾಗಲು ಧಡಪಡಿಸುತ್ತಿರುತ್ತಾನೆ. ಕೆಲವರು ಷಣ ಮಾಡುತ್ತಾರೆ; ಕೆಲವರು ಲೇಖನ ಬರೆಯುತ್ತಾರೆ; ಕೆಲರು ಛಾಪಿಸುತ್ತಾರೆ. ಕೆಲವರು ಅದನ್ನು ಮಾರುತ್ತಾರೆ. ಕೆಲರು ಕೊಂಡು ಓದುತ್ತಾರೆ. ಕೆಲವರು ಓದಿ ಚರ್ಚೆ ಮಾಡುತ್ತಾರೆ. ಚರ್ಚೆ ಹೋಗಿ ವಾದವಾಗುತ್ತದೆ. ವಾದದಿಂದ ಚಳ-ಳಿಗೆ ಹೋಗುತ್ತದೆ. ಚಳವಳಿಗೆ ಪ್ರತಿಚಳವಳಿ ಹುಟ್ಟಿಕೊಳ್ಳುದೆ. ಸಣ್ಣ ದೊಡ್ಡ ಕುರುಕ್ಷೇತ್ರಗಳಾಗುತ್ತವೆ. ಮಹಾಸಂಹಾರ ಗುತ್ತವೆ. ಶಾಂತಿ-ಸಂಧಾನಗಳ ಗರ್ಜನೆ ಆಗುತ್ತವೆ. ಆ ನಿತಿನ ಹಿಂದೆ ಮುಂದಿನ ಯುದ್ಧದ ಸಂಧಾನ ನಡೆಯುತ್ತದೆ. ಕರ್ಮವಾದ ಯಾವ ಸದ್ಗುಣ ಎಂದು ಹೇಳಲಿ?

ನನ್ನ ಈ ಸೋಮಾರಿ ಪುರಾಣ ಕೇಳಿ ನಿಮ್ಮ ಮಿದುಳು ತಣ್ಣ-ಗುತ್ತ ನಡೆದಿರಬೇಕು. ಆದರೆ ಇದು ಒಳ್ಳೇ ಸೋಮಾರಿತನ-ಲ್ಲ. ನಿಜವಾದ ಸೋಮಾರಿಯ ತಲೆಯಲ್ಲಿ ಶಿವಶಕ್ತಿಯು ಕುಣಿ-ಯುತ್ತದೆ, ಕರ್ಮಕಲಹವಾದಿಗಳ ತಲೆಯಲ್ಲಿ ಶಿವನಿಲ್ಲದ ಶಕ್ತಿ, ಕ್ತಿವ ಶಕ್ತಿ ಇಲ್ಲದ ಶಿವ—ಎಂದರೆ ಮಹಾರುದ್ರ ಕುಣಿಯುತ್ತಾನೆ. ಲೆಯಲ್ಲಿ ಹೊಕ್ಕ ಈ ಮಹಾರೌದ್ರವೆ ಭಸ್ಮಾಸುರನಂತೆ ತನ್ನನ್ನೂ ಕರರನ್ನೂ ಭಸ್ಮಮಾಡುತ್ತದೆ—ಇಂದಿನ ಆಟಂ ಬಾಂಬಿನಂತೆ. ಏನು ಮಾಡಬೇಕೆಂಬುದು ತಿಳಿಯದೆ ವಿನಾಶವಮಾಡುವ ಕರ್ಮ-ವಾದವೇ ದುರ್ಗುಣ. ಜ್ಞಾನಿಯ ಶಾಂತಿಗೆ ದುರ್ಗುಣ—ಎನ್ನುವ ಜಾಣರೂ ಇಂದು ಇದ್ದಾರೆ. ಅಜ್ಞಾನಿಗಳ ಕರ್ಮಕಾಂಡವನ್ನು 'ಭಪ್ಪರೆ' ಎಂದು ಬೆನ್ನು ತಟ್ಟುವವರೂ ಇದ್ದಾರೆ. ಹೀಗಾಗಿ, ಒಂದು ಬಗೆಯಲ್ಲಿ ಜ್ಞಾನದ ಹೆಸರು ಕೆಟ್ಟಿದೆ; ಇನ್ನೊಂದು ಬಗೆಯಲ್ಲಿ ಕರ್ಮದ ಫಲ ಕೆಟ್ಟಿದೆ

ಅಂತೆಯೇ ನಾನು ಹೇಳುತ್ತೇನೆ ಅಣ್ಣಗಳಿರಾ, ಸದ್ಗುಣಿಗಳಂತೆ ಸೋಮಾರಿಗಳಾಗಿರಿ. ಒಳಹೊಕ್ಕು ವಿಚಾರ ಮಾಡಿರಿ. ವಿಚಾರ-ಮಾಡಿ ಆಚಾರಕ್ಕೆ ಪ್ರವೃತ್ತರಾಗಿರಿ. 'ಅಯ್ಯೋ, ನಮಗೆ ವಿಚಾರ ಮಾಡಲು ಬರುವುದಿಲ್ಲ, ವಿಚಾರವೆಂದರೇ ನಮಗೆ ಬೇಜಾರು, ವಿಚಾರವೇ ಆಲಸ್ಯದ ಲಕ್ಷಣ' ಎಂದು ಒಂದಿಲ್ಲೊಂದು ರೀತಿಯಿಂದ ಪ್ರತಿಪಾದಿಸುವ ಅವಿಚಾರಿಗಳಿಂದಲೇ ಇಂದಿನ ಕರ್ಮವಾದ ದುಷ್ಕರ್ಮವಾದಕ್ಕೆ ಇಳಿದಿದೆ. ಸದ್‌ವಿಚಾರಗಳಿಲ್ಲದ ತಲೆಗಳಿಂದಲೇ ಅವಿಚಾರದ ಕೃತ್ಯಗಳು ನಿರಾಯಾಸವಾಗಿ ಆಗುತ್ತವೆ. ಕೆಲ-ವೊಂದು ಜಯಘೋಷಗಳು, ಹಸ್ತಪತ್ರಿಕೆ, ಚಳವಳಿ, ಕಾರ್ಯದ ವರದಿ, ಈ ಬಗೆಯ ಚಕ್ರದಲ್ಲಿ ಸಿಕ್ಕ— ಆಲಸಿಗರಲ್ಲದಂತೆ ಕಾಣುವ—ಕರ್ಮಾಸಕ್ತರ ಮಿದುಳಿನ ಜಾಡ್ಯದಲ್ಲಿಯೇ ಕಲಿಪುರು-ಷನು ತನ್ನ ಕಮ್ಮಟ ಹಾಕುತ್ತಾನೆ. ಅವಿಚಾರಿಗಳಾದ ಕಾರ್ಮಿ-ಕರ ತಲೆಯೇ ಕಲಿಪುರುಷನ ಕಮ್ಮಟವಾಗುತ್ತದೆ. ಯಾವ ಕಲಿ-ಪುರುಷನೂ, ಕೆಲವು ಜಯಘೋಷ-ಕಾರ್ಯಕ್ರಮಗಳಿಂದ ಜನ-ಜಂಗುಳಿಯನ್ನು ಸೂತ್ರಗೊಂಬೆ ಆಡಿಸಿದಂತೆ ಆಡಿಸುತ್ತಾನೆ.

ಶಾಂತಿ ಸಾಹಿತ್ಯಮಾಲೆ

ಬಾದಾಮಿ

(ವಿಜಾಪೂರ ಜಿಲ್ಹೆ)

ಈಗ ತಾನೆ ಅರಳಿವೆ:

ಪೂಜಾ (ಗದ್ಯಗೀತಗಳು)
ಶ್ರೀ. ಸಿಂಪಿ ಲಿಂಗಣ್ಣನವರು.

ಶೋಚನೀಯ ನಿಧನ (ಕಥಾಸಂಗ್ರಹ)
ಶ್ರೀ. ರಾ. ಪಾ. ಶಿರೋಳ.

ಅರೆಯಾಳು (ನೀಳ್ಗತೆಗಳೆರಡು)
ಶ್ರೀ. ಕುಲಕರ್ಣಿ ಬಿಂದುಮಾಧವ.

ಕೇವಲ ನಾಲ್ಕು ರೂಪಾಯಿ ಚಂದಾ ಹಣಕ್ಕೆ
ಈ ನೇಲಿನ ಪುಸ್ತಕಗಳಲ್ಲದೆ ಇನ್ನೊಂದು ಕಾದಂಬರಿ
ಚಂದಾದಾರರಾಗುವವರಿಗೆ ದೊರೆಯುತ್ತದೆ.

ಇದಕ್ಕಿಂತಲೂ ವಿಚಾರಪೂರ್ವಕವಾದ ಸೋಮಾರಿತನವು ಸಾವಿರ ಪಾಲು ಮೇಲು!

ಇಂದಿನ ಮಾತುಗಳನ್ನು ಇನ್ನು ಸ್ವಲ್ಪದರಲ್ಲಿಯೆ ಸಂಗ್ರಹಿಸಿ ಹೇಳುತ್ತೇನೆ. ಸುವಿಚಾರಸಾಮರ್ಥ್ಯವೇ ಸದ್ಗುಣ! ಅಂಥ ಸುವಿಚಾರಕ್ಕೆ ತುಂಬಿದ ಶಾಂತಿಬೇಕು. ಅದು ಸೋಮಾರಿತನದಂತೆ ಕಂಡರೂ ಅದು ಆಲಸ್ಯವಲ್ಲ, ಜಾಡ್ಯವಲ್ಲ ಆದರಂತೆಯೇ ಸುವಿಚಾರದ ಶಾಂತಿ ಇಲ್ಲದೆ, ಕ್ಷೋಭೆಗೊಂಡು, ದಿಕ್ಕುಗೆಟ್ಟು, ಯಾವಾಗಲೂ ಏನಾದರೂ ಮಾಡುತ್ತಿರುವುದು ಭಾರೀ ಕರ್ಮಯೋಗದಂತೆ ಕಂಡರೂ, ಅದು ದುರ್ಗುಣವೇ ಸರಿ. ಸದ್ಗುಣ, ಸೋಮಾರಿತನದಂತೆ ಕಂಡರೂ ಸದ್ಗುಣವೇ! ಯಾಕೆಂದರೆ ಅದರಲ್ಲಿ ಬಾಳಿನ ಬೀಜವಿದೆ, ಕೆಚ್ಚು ಇದೆ. ಅವಿಚಾರದ ಅಥವಾ ಕುವಿಚಾರದ ಕರ್ಮಠತನವು, ವಿನಾಶದ ನಾಂದಿಯಾಗಿರುವುದರಿಂದ, ಅದು ಮಹಾ ದುರ್ಗುಣ. ಸದ್ಗುಣ ಸಾಕ್ಷಾತ್ಕರಿಸಿಕೊಳ್ಳುವ ಸೋಮಾರಿಗಳಾಗಿರಿ. ದುರ್ಗುಣ ಪ್ರಕಟಿಸುವ ಕರ್ಮಕಾರರಾಗಬೇಡಿರಿ. ಕರ್ಮ ಸದ್ಗುಣ ಎನಿಸಿಕೊಳ್ಳಬೇಕಾದರೆ ಜ್ಞಾನದಲ್ಲಿ ಮೊಳೆತಿರಬೇಕು. ಏನೋ ಕರ್ಮಮಾಡಿ ಧೀಮಾರಿಗಳಾಗುವುದಕ್ಕಿಂತ, ಸೋಮಾರಿಗಳಂತೆ ಕಂಡರೂ ಸದ್ಗುಣ ಸಿದ್ಧಿಪಡಿಸಿಕೊಳ್ಳೋಣ. ಸದ್ಗುಣದ ಸೋಮಾರಿತನ, ಅಥವಾ ಸೋಮಾರಿಗಳ ಸದ್ಗುಣ, ದೈವಗುಣ. ಬೇಕಾದ್ದು ಆಗಲಿ, ಎಂಬ ಕರ್ಮದ ಹೋರಾಟ, ಅದು ದೈತ್ಯಗುಣ. ಆದ್ದರಿಂದ ಶಿವಗುಣದ ಶಕ್ತಿಸಂಪಾದನೆ ಆಗಬೇಕಾದರೆ ಸದ್ಗುಣಿಗಳಾದ ಸೋಮಾರಿಗಳಾಗಬೇಕು. ಈ ಕಾಯಕದಲ್ಲಿ ಕಲ್ಯಾಣವೂ ಇದೆ. ಕೈಲಾಸವೂ ಇದೆ

ಮೈಯಸೋಮಾರಿತನ ನಿಸರ್ಗಗುಣ. ಮನದ ಸೋಮಾರಿತನ ರೋಗ, Idleness is the stupidity of the body. stupidity is idleness of the mind. ಯಾವುದು ಹಿತ ಯಾವುದು ಅಹಿತ ಕಂಡುಹಿಡಿಯಿರಿ. ಕರ್ಮ ಎಂಬ ಕಾರ್ಮಿಕ ಚರ್ಮರೋಗ ಹಬ್ಬುತ್ತಿರುವ ಈ ಕಾಲದಲ್ಲಿ, ಸೋಮಾರಿತನ ಎಂದೆನಿಸಿಕೊಳ್ಳುವ ಸದ್ಗುಣ ಒಂದಿದೆ ಎಂದು ಹೇಳಬೇಕಾಗಿದೆ. ಏನು ಮಾಡಬೇಕು ಎಂದು ತಿಳಿಯದೆ ಇದ್ದವರು, ಏನೇನೋ ಮಾಡಹತ್ತುತ್ತಾರೆ. ರಾಜಕೀಯ ಸಾಮಾಜಿಕ ವಿಪ್ಲವಗಳಲ್ಲಿ ಇಂಥವರ ಸಂಖ್ಯೆ ಬಹಳ. 'ಎಲ್ಲಿಯೂ ಸ್ವಯಂಸೇವಕರು ಬೇಕಾಗಿದ್ದಾರೆ' ಎಂದು ಬೇಡುವ ಮುಂಚೆಯೆ, ನಾ ಮುಂದೆ ನೀ ಮುಂದೆ ಎಂದು ಓಡಿ ಒಬ್ಬರ ಮೇಲೊಬ್ಬರು ಬೀಳುತ್ತಾರೆ ಇವರು— ಮತ್ತೆ ಏಳುತ್ತಾರೆ—ಎದ್ದು ಓಡುತ್ತಾರೆ. ಓಡಿಯೂ ಹೋಗುತ್ತಾರೆ. ಸೂರ್ಯ-ಚಂದ್ರ ಗ್ರಹಣಗಳ ಕಾಲದಲ್ಲಿ ದಾನಬೇಡಲು ಓಡಾಡುವ ಡೋಂಗಿಗರಂತೆ—ಇವರ ಒದರಾಟದಿಂದಲೇ ರಾಹುಕೇತುಗಳು ಓಡಿ ಹೋದರೇನೋ ಎಂಬಂತೆ—ಚಳವಳಿ, ಚುನಾವಣೆ, ಮುಷ್ಕರ, ದೇಶಸೇವೆಯೆಂಬ ದರೋಡೆ—ಯಾವುದಕ್ಕೂ ಈ ಕರ್ಮಶಾಲಿಗಳು ಸೈ. ಇಂಥ ಗೊಂದಲಿಗರನ್ನು ಹತೋಟಿಗೆ ತಂದು, ಪೆಂಡಾರಿಗಳಂತ ಆ ಸೇತು ಹಿಮಾಚಲ ರೌದ್ರನಾಟಕವನ್ನು ಹೂಡವು
ಯಾವ ಸದ್ಗುಣರೂಪವಾದ ಕರ್ಮವೂ ಇಲ್ಲ—ಎಂದು ತಿಳಿ
'ನಿಮ್ಮ ಚಾಳೀಸಿನ ಚಾಳೀ ಬದಲು ಮಾಡಿ ನೋಡಿರಿ' ಎಂ
ಮನ ಒಲಿಸುವುದು ಯಾವ ಬ್ರಹ್ಮದೇವರಿಗೂ ಅಸಾಧ್ಯ. ಬ್ರ
ದೇವರಾದರೂ ವೇದಾಭ್ಯಾಸ ಜಡನಾದ ಸೋಮಾರಿಯಲ್ಲವೆ
ಸೋಮಪಾನವನ್ನು ನಾಕಷ್ಟು ಮಾಡಿರಬೇಕು ಅವ.

ಸೋಮಾರಿತನದಂತೆ ಕಾಣುವ ಸದ್ಗುಣ ಬೇರೆ; ಸದ್ಗುಣ
ಕಾಣುವ ಸೋಮಾರಿತನ ಬೇರೆ. ಸೋಮಾರಿತನವೆಂಬ ದು
ಗುಣ ಬೇರೆ. ಮೊದಲನೆಯದು ಸವಕಳಿ ರೂಪಾಯಿ; ಎರ
ಯದು ಜಂಗು ತಿಂದ ದುಡ್ಡು. ಮೂರನೆಯದು ಕಂಡು ಬೆ
ಒಂದು ಸ್ವಪ್ರಕಾಶಸೂರ್ಯ; ಎರಡನೆಯದು ಪರಪ್ರಕಾಶಿತಚಂ
ಮೂರನೆಯದು ಕತ್ತಲೆಯಲ್ಲಿಯ ನಕ್ಷತ್ರ. ಒಬ್ಬರ ಕೆ
ಕಾಣುವುದಿಲ್ಲ—ಅಷ್ಟು ವ್ಯಾಪಕ. ಇನ್ನೊಬ್ಬರದು ಬರಿ ಕೆಲ
ಕಾಣುತ್ತದೆ, ಫಲಕಾಣುವುದಿಲ್ಲ. ಅದು ನಿಷ್ಫಲ ಎನ್ನಬಹು
ಅದು ಅಸರಂತ ಬರಿ ಖಟಪಿಟಿ. ಮೂರನೆಯದು ತ
ಹೊಟ್ಟೆಯೊಳಗಿನ ಶಮದ ಸಸುತೆ. ಅದು ಬಿತ್ತದ ಬಿ
ದುಡಿಯದೆ ದುಡ್ಡು ಹುಟ್ಟಿಸುವ ಅನೇಕ ಕಂತ್ರಾಟದ ದುವ
ಹಾರಗಳು ಕೆಟ್ಟ ಸೋಮಾರಿತನದ ಸಂತತಿಯಲ್ಲಿ ಬರುತ್ತ
ಜೂಜು, ಕಾಳಸಂತೆ, ಶುಕ್ರಸಂಜೀವಿನೀವಿದ್ಯೆ, ಲೂಟಿ, ಲ
ಎಲ್ಲ ಅಣ್ಣತಮ್ಮಂದಿರು. ದುಡಿದವರ ದುಡಿಮೆ, ದುಡ್ಡು ಮ
ಕೊಂಡು ದೊಡ್ಡಪ್ಪಗಳಾಗುವ ದುರ್ಗುಣ ಯಾವ ಕ
ಕೌಶಲ್ಯ? ಗೆದ್ದಿಲು ನಿದ್ದೆಯಿಲ್ಲದೆ ದುಡಿದು ಹುತ್ತ ಕಟ್ಟುತ್ತ
ಹಾವು 'ಒಳ್ಳೆ ಗುದ್ದಾಯಿತು ಬಾ' ಎಂದು ಅಲ್ಲೇ ನಿದ್ದೆ ಮಾಡುತ್ತ
ಜೇನುನೊಣ, ದುಡಿದೇದುಡಿದು, ಹನಿ ಹನಿ ತಂದು ಜೇನುತ
ಮಾಡಿ ಹೆಣವಾಗುತ್ತದೆ. ವ್ಯಾಪಾರಿ ಆ ತುಪ್ಪ ಮಾರಿ ಹಣ ಮಾ
ತ್ತಾನೆ. ದಾಸ ಮೈಬೆವರು ಸುರಿಸಿ, ಗುಡ್ಡ ಕೊರೆದು
ಮಾಡುತ್ತಾನೆ. ಏನೇನೋ ಸ್ವಾಹಾ ಎಂದು ಮಂತ್ರ ಹೇಳುವ
ಅಲ್ಲಿ ನೈವೇದ್ಯ ತಿಂದುಬಿಡುತ್ತಾನೆ. ಸಾಯಲಾರದ ಮಂದಿ ಬದ
ಬಾಳಲಿ ಎಂದು ಹಳ್ಳಿಯ ಗೆಣೆಯ ಸೈನ್ಯ ಭರತಿಯಾಗಿ, ಎಲೆ
ರಕ್ತ ಸುರಿಸಿ, ಕಾರಿ ಮಣ್ಣುಕೂಡುತ್ತಾನೆ. ಶಾಂತಿಯ ಒಪ್ಪ
ಬರೆಸುವವರ ನಿದ್ದೆ ಪ್ರಯಾಣದಲ್ಲಿ ಕೆಡಬಾರದು—ಎಂದು
ಮಾಡುವ ಸಂಭ್ರಮದಲ್ಲಿ, ಇದ್ದವರ ನಿದ್ದೆ ಹಾಳಾಗುತ್ತದೆ. ಇವ
ಯಾರು ಸೋಮಾರಿ? ಯಾವುದು ಸದ್ಗುಣ? ಜಗತ್ತಿ
ಸೋಮಾರಿಗಳನ್ನು ಬೆಳೆಸುವ ಅನ್ನದಾನ, ವಸ್ತ್ರದಾನ, ಗೃಹದಾ
ಪ್ರಾಣದಾನ ಎಲ್ಲ ನಡೆದಿವೆ—ಜ್ಞಾನದಾನ ಒಂದು ಬೇ
ಸದ್ಯ ಜ್ಞಾನ ಸೋಮಾರಿಗಳ ಖಾತೆಯಲ್ಲಿ ಸೇರಿದೆ. ಅಲ್ಲವೇ?
ಎಚ್ಚತ್ತಿದ್ದರೆ ಆ ಗುಣಕ್ಕೆ ನಮಸ್ಕಾರ. ಅದೇ ಸೋಮಾ
ಸದ್ಗುಣ.

ಅಮೇರಿಕೆಗೆ ಹೊರಟಿರುವ ಕನ್ನಡ ವಿದ್ಯಾರ್ಥಿನಿ

ಕುಮಾರೀ ಪದ್ಮಿನೀ ಅಯ್ಯಂಗಾರ್, ಎಂ. ಎ.

‘ ವಿಹಂಗಮ ’

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಕೇವಲ ಹೆಂಗುಸರಿಗಾಗಿಯೇ ಮೀಸಲಿದ್ದ ಒಂದು ಸುಪ್ರಸಿದ್ಧವಾದ ಕಾಲೇಜು ಇದೆ. ಅದರ ಹೆಸರು ‘ಬ್ರಿನ್ ಮಾರ್ ಕಾಲೇಜು’. ಈ ಕಾಲೇಜಿನವರು ಕೀರ್ತಿವೆತ್ತ ಐವರು ವಿದೇಶೀಯರಿಗೆ ಪ್ರತಿವರ್ಷ ಶಿಷ್ಯವೃತ್ತಿಗಳನ್ನು ಕೊಟ್ಟು ಸನ್ಮಾನಿಸುತ್ತಾರೆ. ಇಲ್ಲಿಯ ವರೆಗೆ ಈ ಕಾಲೇಜಿನ ದೃಷ್ಟಿ ಭಾರತದ ಕಡೆಗೆ ಬಿದ್ದಿರಲೇ ಇಲ್ಲ. ಈ ವರ್ಷ ಮಾತ್ರ ಒಬ್ಬ ಭಾರತೀಯ ಕುವರಿ ತನ್ನ ವಿದ್ವತ್ ಪ್ರತಿಭೆಯಿಂದ ಈ ಕಾಲೇಜಿನ ಚಿತ್ತವನ್ನು ಆಕರ್ಷಿಸಿಕೊಂಡಿದ್ದಾರೆ; ಆ ಐದು ಶಿಷ್ಯವೃತ್ತಿಗಳಲ್ಲಿ ಒಂದನ್ನು ಸೆಳೆದುಕೊಂಡಿದ್ದಾರೆ. ಇದೊಂದು ಭಾರತಕ್ಕೆ ಹೆಮ್ಮೆಯ ವಿಷಯ. ಈ ಪ್ರತಿಭಾಸಂಪನ್ನರೇ ಕುಮಾರೀ ಪದ್ಮಿನೀ ಅಯ್ಯಂಗಾರ್. ಇಲ್ಲಿ ಕರ್ನಾಟಕದ ಪ್ರತಿಯೊಂದು ಮನೆಯ ಜೀವಿ-ಜೀವಿಯ ಅಂತಃಕರಣವನ್ನೂ ಉಕ್ಕಿಸಿ ಕರ್ಣಾಟಕದ ಹೆಮ್ಮೆಗೆ ಕಳಸನ್ನಿಡುವ ಒಂದು ಗೌಪ್ಯವಿದೆ. ಅದೇನು ಗೊತ್ತೇ? ಕುಮಾರೀ ಪದ್ಮಿನೀ ಅಯ್ಯಂಗಾರರು ಅಚ್ಚ ಕನ್ನಡ ಕುವರಿ! ಕನ್ನಡ ಕಾವದಲ್ಲಿ ಶೋಭಿಸುವ ತೇಜೋಮಯ ರೆ!

ಚಿತ್ರವಿಚಿತ್ರವಾಗಿ ನಿಮಿಷ-ನಿಮಿಷವೂ ನೃತ್ಯಮಾಡುತ್ತಿರುವ ಗೇರುಸೊಪ್ಪೆಯ ಜಲಪಾತ ವಿದೇಶೀಯರ ಕಣ್ಮನಗಳನ್ನೂ ಸೆಳೆದಿದ್ದರೂ, ಅದರ ಪರಿಚಯವೇ ಇಲ್ಲದ ಕನ್ನಡಿಗರು ಎಷ್ಟು ಜನರಿಲ್ಲ? ಶಿಲ್ಪಕಲೆಯ ಸರ್ವಸ್ವವೂ ಕುಸುರು-ಕುಸುರಾಗಿ ಮೈವೆತ್ತುನಿಂತ ಹಳೇಬೀಡನ್ನು ಎಷ್ಟುಜನ ಕನ್ನಡಿಗರು ನೋಡಿದ್ದಾರೆ? ತನ್ನ ಕೀರ್ತಿ, ತನ್ನ ಸತ್ತ್ವ, ತನ್ನ ವೈಭವ, ತನ್ನ ಪ್ರತಿಭಾಸಂಪನ್ನರ ಬಗೆಗೆ ಇರುವ ಔದಾಸೀನ್ಯ, ಕರ್ನಾಟಕದ ಲಕ್ಷಣವೈಶಿಷ್ಟ್ಯವೇನೊ! ಅಂತೆಯೇ ಕುಮಾರೀ ಪದ್ಮಿನೀ ಅಯ್ಯಂಗಾರರ ಪರಿಚಯ ಕರ್ನಾಟಕದ ಬಹುಭಾಗಕ್ಕೆ ಇಲ್ಲವೇ ಇಲ್ಲ.

೨

೧೯೩೦-೩೪ ರ ನಡುವಿನ ಅವಧಿಯಲ್ಲಿ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಅಭ್ಯಾಸಮಾಡಿದ ವಿದ್ಯಾರ್ಥಿಗಳಿಗೆ, ಕುಮಾರೀ ಪದ್ಮಿನಿಯವರ ತಂದೆ ಶ್ರೀಯುತ ಅಯ್ಯಂಗಾರರ ಪರಿಚಯ ಸಾಕಷ್ಟು ಉಂಟು. ಅಂತಹ ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬ. ಆಗ ಶ್ರೀಯುತ ಅಯ್ಯಂಗಾರ್ರು, ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಖಾಸಗೀ ರೀತಿಯಿಂದ ಗಣಿತ ವಿಷಯವನ್ನು ಕಲಿಸುವ ವರ್ಗಗಳನ್ನು ತೆರೆದಿದ್ದರು. ಈಗಲೂ ಅವರು ಅದೇ ವೃತ್ತಿಯಲ್ಲಿಯೇ ಇರುವರೆಂದು ಕೇಳಿದ್ದೇನೆ. ತಮ್ಮ ಸರಳತೆ, ಸೌಮ್ಯತೆ, ವಿಷಯ-ವಿವೇಚನೆಯ ಚಾತುರ್ಯಗಳಿಂದ ಅಯ್ಯಂಗಾರರು ಜನಪ್ರಿಯರಾಗಿದ್ದಾರೆ. ಅವರು ಆಗ ಗಡ್ಡಬಿಡುತ್ತಿದ್ದಂತೆ ಜ್ಞಾಪಕವಿದೆ. ಅಂತೆಯೇ ಅವರಿಗೆ ‘ಮಹರ್ಷಿ’ ಎಂದು ನಾವು ಸಮ್ಮನಮ್ಮೊಳಗೇ ಆದರಪೂರ್ವಕವಾಗಿ ಚೇಷ್ಟೆ ಮಾಡುತ್ತಿದ್ದುದೂ ಉಂಟು. ಆ ಮಹರ್ಷಿಯ ಮಗಳೇ ಈ ಪದ್ಮಿನಿ ಎಂದು ಅರಿತಾಗ, ನನಗೆ ಆನಂದವಾಯಿತು ಕಣ್ವಮಹರ್ಷಿ-ಶಕುಂತಲೆಯರ ನೆನಪಾಯಿತು!

‘ಪದ್ಮಿನಿ’ ‘ಅಯ್ಯಂಗಾರ್’ ಎಂಬ ಎರಡು ಶಬ್ದಗಳು ಯಥಾರ್ಥವಾಗಿವೆ ಎನಿಸುತ್ತದೆ ನನ್ನ ಕಲ್ಪನೆಗೆ. ‘ಪದ್ಮಿನಿ’ ಯೆಂಬುದು ಇತಿಹಾಸ ಪ್ರಸಿದ್ಧವಾದ ಒಬ್ಬ ಸುಂದರಿಯ ನೆನಪು ತಂದುಕೊಟ್ಟು ಪದ್ಮಿನೀ ಅಯ್ಯಂಗಾರರ ಬಾಹ್ಯ ಸೌಂದರ್ಯದ ಸಂಕೇತವಾಗಿದ್ದಂತಿದ್ದರೆ, ‘ಅಯ್ಯಂಗಾರ್’ ಎಂಬುದು ಗಣಿತ ಶಾಸ್ತ್ರದ ಇತಿಹಾಸವನ್ನೇ ಬೆರಗುಗೊಳಿಸಿದ ರಾಮಾನುಜಂ ಅಯ್ಯಂಗಾರರ ನೆನಪು ತಂದುಕೊಟ್ಟು, ಕು. ಪದ್ಮಿನಿ ಅಯ್ಯಂಗಾರರ ಗಣಿತಶಾಸ್ತ್ರ ಪ್ರತಿಭೆಯ ದ್ಯೋತಕವಾಗಿ ನಿಲ್ಲುತ್ತದೆ. ಹೆಸರು ಅವರ ದೈಹಿಕ ಸೌಂದರ್ಯವನ್ನು ತೋರಿದರೆ, ಅಡ್ಡಹೆಸರು ಅವರ ಬೌದ್ಧಿಕ ಸೌಂದರ್ಯವನ್ನು ತೋರುತ್ತದೆ.

ಕುಮಾರಿ ಪದ್ಮಿನಿ ಅಯ್ಯಂಗಾರರು, ಕನ್ನಡದ ಹೃದಯದಂತಿದ್ದ ಮೈಸೂರು ಸಂಸ್ಥಾನದಲ್ಲಿ, ತುಮಕೂರು ಎಂಬ ಊರಲ್ಲಿ ೧೯೨೭ನೆಯ ಇಸವಿಯ ಅಕ್ಟೋಬರ್ ೧೭ನೆಯ ತಾರೀಖಿನ ದಿನ ಹುಟ್ಟಿದರು. ತಮ್ಮ ಬಾಲ್ಯವನ್ನೆಲ್ಲ ಅಲ್ಲಿಯೇ ಕಳೆದು, ತಮ್ಮ ಎಂಟನೆಯ ವಯಸ್ಸಿನಲ್ಲಿ ಪುಣೆಗೆ ಬಂದರು. ಅವರಿಗೆ ಮರಾಠೀ ಬಾರದ್ದರಿಂದ, ಇಂಗ್ಲಿಷು ಆರನೆಯ ಇಯತ್ತೆಯವರೆಗೆ ಅವರ ವಿದ್ಯಾಭ್ಯಾಸ ಮನೆಯಲ್ಲಿಯೇ ಸಾಗಿತು. ಮುಂದೆ ಪುಣೆಯ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಮ್ಯಾಟ್ರಿಕ್ ಅಭ್ಯಾಸ ಮಾಡಿ, ೧೯೪೩ರಲ್ಲಿ

ಮ್ಯಾಟ್ರಿಕ್ ಪಾಸಾದರು. ಎಂ. ಎ. ಪದವಿಯ ವರೆಗಿನ ಅವರ ಕಾಲೇಜಿನ ಅಭ್ಯಾಸವೆಲ್ಲ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿಯೇ ಸಾಗಿ, ೧೯೪೯ನೆಯ ಇಸವಿಯಲ್ಲಿ ಅವರು ಎಂ. ಎ. ಪದವಿಯನ್ನು ಸಂಪಾದಿಸಿದರು.

ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಿಂದ ಎಂ. ಎ. ಪರೀಕ್ಷೆಯ ವರೆಗಿನ ಏಳು ವರುಷಗಳಲ್ಲಿಯ ಕುಮಾರಿ ಪದ್ಮಿನಿಯವರ ಬೌದ್ಧಿಕ ಬೆಳವಣಿಗೆಯನ್ನೂ ಪ್ರತಿಭಾವಿಕಾಸವನ್ನೂ ಸೂಕ್ಷ್ಮವಾಗಿ ಪರೀಕ್ಷಿಸಿದಲ್ಲಿ, ಆ ವಿಕಾಸ ಮಿಂಚುಹುಳುವಿನಂತೆ ಅಲ್ಲಿಷ್ಟು ಇಲ್ಲಿಷ್ಟು, ಆಗಿಷ್ಟು ಈಗಿಷ್ಟು ಮೂಡಿ, ಬೆಳಗಿ, ಮಾಯವಾದುದಲ್ಲವೆಂಬುದು ಎದ್ದು ಕಾಣುವುದು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಅವರು ೧೨೦ ಗುಣಗಳಲ್ಲಿ [illegible] ಗುಣಗಳನ್ನು ಸಂಪಾದಿಸಿದಾಗ, ಅವರ ಪ್ರತಿಭೆ ಆದೇ ತಾನೇ ಹೊಳಪುಗೊಳ್ಳುತ್ತಿದ್ದುದು ಕಂಡುಬರುತ್ತದೆ. ಮುಂದೆ ಮೊದಲನೆಯ ವರ್ಷ (ಆರ್ಟ್ಸ್) ಪರೀಕ್ಷೆಯಲ್ಲಿ, ವರ್ಗದಲ್ಲಿಯೇ ಪ್ರಥಮಸ್ಥಾನ ಪಡೆದರು. ಇಂಟರ್ ಆರ್ಟ್ಸ್ ಪರೀಕ್ಷೆಯಲ್ಲಿ ಪ್ರಥಮವರ್ಗವನ್ನು ಗಳಿಸಿದರಲ್ಲದೆ, ವಿಶ್ವವಿದ್ಯಾಲಯದಲ್ಲಿ ಮೂರನೆಯ ಸ್ಥಾನವನ್ನೂ ಫರ್ಗ್ಯುಸನ್ ಕಾಲೇಜಿನಲ್ಲಿ ಪ್ರಥಮಸ್ಥಾನವನ್ನೂ ಸಂಪಾದಿಸಿದರು. ಭಾಷಾಶಾಸ್ತ್ರ, ಗಣಿತಶಾಸ್ತ್ರಗಳಲ್ಲಿ ಹೆಚ್ಚು ಗುಣಗಳನ್ನು ಸಂಪಾದಿಸಿ '**ಗಂಗಾಬಾಯಿ ಭಟ್ಟ**' ಮೊದಲಾದ ವಿದ್ಯಾರ್ಥಿವೇತನಗಳನ್ನೂ ಬಹುಮಾನಗಳನ್ನೂ ಸಂಪಾದಿಸಿದರು. ಬಿ. ಎ. ಪರೀಕ್ಷೆಯಲ್ಲಿ ಗಣಿತಶಾಸ್ತ್ರವನ್ನು ಅಭ್ಯಸಿಸಿ ಮುಂಬೈ ವಿಶ್ವವಿದ್ಯಾಲಯದಲ್ಲಿಯೇ ಪ್ರಥಮಸ್ಥಾನವನ್ನು ಗಳಿಸಿ, ಎಲ್ಲರನ್ನೂ ಬೆರಗುಗೊಳಿಸಿದರು. ಈಗಂತೂ ಕಲ್ಪವೃಕ್ಷವನ್ನೇ ಅಲುಗಾಡಿಸಿ ಅದರಲ್ಲಿ ಇದ್ದ ಹಣ್ಣುಗಳನ್ನೆಲ್ಲ ಉದುರಿಸಿಕೊಂಡರೋ ಏನೋ ಎನ್ನುವಂತೆ, ವಿಶ್ವವಿದ್ಯಾಲಯಕ್ಕೆ ಪ್ರಥಮಸ್ಥಾನ ಪಡೆದುದಕ್ಕೆ '**ಮೋದಿ**' ಬಹುಮಾನವನ್ನೂ, ಹಿಂದೂ ವಿದ್ಯಾರ್ಥಿಗಳಲ್ಲಿ ಪ್ರಥಮಸ್ಥಾನ ಪಡೆದುದಕ್ಕೆ '**ರಂಗಿಲದಾಸ್**' ಶಿಷ್ಯವೇತನವನ್ನೂ, ಗಣಿತಶಾಸ್ತ್ರದಲ್ಲಿ ಹೆಚ್ಚುಗುಣ ಸಂಪಾದಿಸಿದುದಕ್ಕೆ '**ದಸ್ತೂರ್**' ಬಹುಮಾನವನ್ನೂ, ಕಂಪಲ್ಸರಿ ಇಂಗ್ಲೀಷಿನಲ್ಲಿ ಹೆಚ್ಚು ಗುಣ ಸಂಪಾದಿಸಿದುದಕ್ಕೆ '**ಎಲಿಜ್**' ವಿದ್ಯಾರ್ಥಿವೇತನವನ್ನೂ ಸಂಪಾದಿಸಿದರು.

ಇವರು ಬಿ. ಎ. ಪರೀಕ್ಷೆ ಪಾಸಾದೊಡನೆ, ಫರ್ಗ್ಯುಸನ್ ಕಾಲೇಜಿನಲ್ಲಿಯೇ ಪ್ರಥಮ '**ದಕ್ಷಿಣಾ ಫೆಲೋ**' ಆಗಿ ದುಡಿಯಹತ್ತಿದರು. ತಮ್ಮ ವಯಸ್ಸಿನ ೨೦ನೆಯ ವರ್ಷದಲ್ಲಿಯೇ, ಜ್ಯೂನಿಯರ್ ಬಿ. ಎಸ್‌ಸಿ. ವರ್ಗಕ್ಕೆ ಗಣಿತಶಾಸ್ತ್ರವನ್ನು ಕಲಿಸಲು ಪ್ರಾರಂಭ ಮಾಡಿದರು. ಮುಂದಿನ ವರುಷವೇ ಪುಣೆಯ ಮಹಿಳಾ ವಿಶ್ವವಿದ್ಯಾಲಯದಲ್ಲಿ, ಗಣಿತಶಾಸ್ತ್ರದ ಲೆಕ್ಚರರ್ ಎಂದು ದುಡಿದು, ಎಂ. ಎ. ಪರೀಕ್ಷೆಯಲ್ಲಿ ಮತ್ತೆ, ಗಣಿತ ವಿಷಯದಲ್ಲಿ ವಿಶ್ವವಿದ್ಯಾ- ಲಯದಲ್ಲಿಯೇ ಹೆಚ್ಚು ಗುಣಗಳನ್ನು ಸಂಪಾದಿಸಿದರು. ಎಂ. ವಿದ್ಯಾರ್ಥಿನಿಯರಲ್ಲೆಲ್ಲ ಉಚ್ಚತಮಸ್ಥಾನ ದೊರಕಿಸಿದು ಪರಿಣಾಮವಾಗಿ ಇವರಿಗೆ '**ಎಸ್. ಎಸ್. ಮಾಣಕರ**' ವಿದ್ಯಾರ್ಥಿವೇತನ ಸಿಕ್ಕಿತು!

ಎಂ. ಎ. ಆದೊಡನೆ ಕುಮಾರಿ ಪದ್ಮಿನಿಯವರು, ತಮ್ಮ ೨೨ನೇ ವಯಸ್ಸಿನಲ್ಲಿಯೇ ಫರ್ಗ್ಯುಸನ್ ಕಾಲೇಜಿನಲ್ಲಿ ಗಣಿತಶಾಸ್ತ್ರ ಪ್ರೊಫೆಸರರಾಗಿ ದುಡಿಯಹತ್ತಿದರು; ಈಗಲೂ ಅಲ್ಲಿಯೆ ಇದ್ದಾರೆ.

ಇನ್ನೊಂದು ವಿಚಿತ್ರ ಸಂಗತಿ: ಕಲೆ ಮತ್ತು ಶಾಸ್ತ್ರ ಇ ಉತ್ತರ-ದಕ್ಷಿಣ ಧ್ರುವಗಳಂತಿವೆ; ಒಂದಕ್ಕೊಂದು ಸಂಬಂಧವಿ ತಾಳಮೇಳವಿಲ್ಲ— ಎಂದು ಜನ ಹೇಳುವುದುಂಟು. ಈ ಮಾತಿನ ಸತ್ಯಾಂಶ ಇದ್ದರೂ ಇರಬಹುದು; ಆದರೆ ಕುಮಾರಿ ಪದ್ಮಿ ಯವರು ಕಲೆಯನ್ನೂ ಸಾಧಿಸಿಕೊಂಡಿದ್ದಾರೆ. ಅವರಿಗೆ ಸಂಗೀ ದಲ್ಲಿ, ಕಸೂತಿಯ ಕೆಲಸದಲ್ಲಿ, ಸೂಜಿಯ ಕಲೆಯಲ್ಲಿ, ಪಾಕಶಾಸ್ತ್ರ ದಲ್ಲಿ ತುಂಬಾ ಅಭಿರುಚಿ. ಕಾದಂಬರಿಗಳನ್ನೂ ಬೇಕಾದಷ್ಟು ಓದುತ್ತಿದ್ದಾರೆ. ಚಿತ್ರಸಂಗ್ರಹಮಾಡುವ ಹುಚ್ಚೂ ಅವ ಸಾಕಷ್ಟು ಇದೆ.

ಮೊದಲೇ ವಿವರಿಸಿದಂತೆ ಕುಮಾರಿ ಪದ್ಮಿನೀ ಅಯ್ಯಂಗಾರ ಉಚ್ಚ ಶಿಕ್ಷಣಕ್ಕಾಗಿ ಅಮೇರಿಕೆಗೆ ತೆರಳುವವರಿದ್ದಾರೆ. ಮುಂದಿ ತಿಂಗಳು ಎಂದರೆ ಸಪ್ಟೆಂಬರ್ ಮೊದಲನೆಯ ವಾರದಲ್ಲಿಯೇ ಅವ ಭಾರತದ ಕಡಲತಡಿಯನ್ನು ಬಿಡಬಹುದು. ಪರದೇಶಕ್ಕೆ ಹೋ ಗಣಿತಶಾಸ್ತ್ರ ಪಾರಂಗತರಾದ ಕನ್ನಡಿಗರು ಇಬ್ಬರೋ ಮೂವರೊ ಅವರಲ್ಲಿ ಹೆಸರಾಂತವರೆಂದರೆ ಬೆಳಗಾಂವಿಯ ಎಸ್. ಟಿ. ಕಾಲೇಜಿ ಹಿಂದಿನ ಪ್ರಿನ್ಸಿಪಾಲರಾದ ಶ್ರೀ. ಕಟ್ಟಿಯವರೊಬ್ಬರು; ಇಂ ಮುಂಬೈ ಪ್ರಾಂತದ ವಿದ್ಯಾಖಾತೆಯ ಮುಖ್ಯಾಧಿಕಾರಿಗಳಾ ಶ್ರೀ. ಪಾವಟೆಯವರು ಇನ್ನೊಬ್ಬರು; ಕರ್ನಾಟಕ ವಿಶ್ವವಿದ ನಿಲಯದ ರಜಿಸ್ಟ್ರಾರರಾದ ಶ್ರೀ. ಸತ್ರಾವಳಿಯವರು ಮೂರನೆಂ ವರು ಆದರೆ ಕನ್ನಡತಿಯರಲ್ಲಿ ಈ ಬಗೆಯ ಸಾಹಸದ ಕಾರ್ಯ ಮಾಡಿದವರು, ಈ ಘನತೆಗೇರಿದವರು ಎಂದರೆ, ನನಗೆ ಗೊತ್ತಿ ಮಟ್ಟಿಗೆ, ಕುಮಾರೀ ಪದ್ಮಿನೀ ಅಯ್ಯಂಗಾರರೇ. ಆದುದರಿ ಕನ್ನಡಿಗರೆಲ್ಲರೂ ಒಂದಾಗಿ ಅವರಿಗೆ '**ಸುಖಾಃ ಸಂತು ಪಂಥಾ**' ಎನ್ನುವಾ. ಅವರ ಮಹತ್ವಾಕಾಂಕ್ಷೆ ಇನ್ನಿಷ್ಟು ಕೊನ ಎಂದು ಆಶಿಸುವಾ!

ಕಸೂತಿ ಕಲಿಯಬೇಕೇ?

ಕು. ಸರೋಜಿನಿ ಮಹಿಷಿ ಎಂ. ಎ. ಧಾರವಾಡ

★

ಕಸೂತಿಯ ಕಲೆಯ ನೆಲೆಯನ್ನರಿತ ಕನ್ಯೆ, ತನ್ನ ಜೀವನದ
ನೆಲೆಯನ್ನೂ ತಿಳಿದುಕೊಳ್ಳಲು
ಸಮರ್ಥಳಾಗುವಳು!

★

ರ್ಗಸಿದ್ಧತೆ

ಯಂತ್ರದ ಸಹಾಯದಿಂದ ಕಸೂತಿಯನ್ನೂ ಹೆಣೆಯಬಹು- ು ಹಿಂದೆ ಹೇಳಿದೆಯಲ್ಲವೆ? ಬರೀ ಕಸೂತಿಯನ್ನಷ್ಟೇ ಏಕೆ, ಬಣ್ಣಗಳ ರೇಶಿಮೆಯಿಂದ ಪ್ರತಿ ಸೃಷ್ಟಿಸೌಂದರ್ಯವನ್ನೇ ಸಲು ಸಾಧ್ಯವಿದೆ— ಅದೂ ತೀರ ಅಲ್ಪ ವೇಳೆಯಲ್ಲಿ. ಂದ ಮಾತ್ರಕ್ಕೆ "ನನಗೂ ಆ ಕಲೆ ಬಂದಿದ್ದರೆ?" ಎಂಬ ಯನ್ನೇಕೆ ತೋರುವಿ ತಂಗೀ? ಅದು ಪ್ರಯತ್ನಕ್ಕೆ ದ್ದೇ? ಪ್ರಯತ್ನಪಟ್ಟರೆ ನೀನೂ ಆ ಕಲೆಯನ್ನು ಕೆಲವೇ ಲ್ಲಿ ಕಲಿತುಕೊಳ್ಳಬಹುದು. ಅಭ್ಯಾಸವಿಲ್ಲದ್ದಕ್ಕೆ ಮೊದ- ೀ ಕಠಿಣವಾಗಿ ತೋರಬಹುದು. ಆದರೆ ಧೈರ್ಯದಿಂದ ದೆ ಸಾಗುವೆಯಾದರೆ, ಅಪೂರ್ವ ಆನಂದ ನಿನಗಾಗಿ ಕಾದಿದೆ ು. ಬಟ್ಟೆಯ ಮೇಲೆ ಗುಲಾಬಿಯ ಹೂವೊಂದು ಅರಳುತ್ತಿ- ಅದನ್ನು ನೋಡಿ ನಿನ್ನ ಮುಖವೂ ಅರಳುವುದು— ತಂಗೀ, ಲೆಯನ್ನು ನೀನೂ ತಿಳಿದುಕೊ, ನಿನ್ನ ಸೋದರಿಯರಿಗೂ . ಕಸೂತಿಯ ಕಲೆ ಸೋದರಿಯರ ಜೀವನದಲ್ಲಿಯೇ ಖ ಸ್ಥಾನವನ್ನು ವಹಿಸಿದಂತಹ ಕಲೆ! ಅದರ ವಿಷಯಕ್ಕೆ ವಾಗಿ ನಿನಗೆ ಒಂದೊಂದನ್ನೇ ತಿಳಿಸುವೆ.

ಲಿಗೆಯ ಯಂತ್ರ, ಕಸೂತಿಯ ಸಾಮಾನುಗಳು (ಅವು- ಒಂದೊಂದಾಗಿ ಹೇಳುವೆ) ಇವೇ ಮೊದಲಾದುವುಗಳನ್ನು ವಾಗಿಡಲು, ಮನೆಯಲ್ಲಿ ಪ್ರತ್ಯೇಕವಾದ—ಸಾಕಷ್ಟು ಗಾಳಿ- ಗಳುಳ್ಳ—ಸ್ಥಳವೊಂದಿದ್ದರೆ ಒಳಿತಾಗುವುದು. ಎಂದರೆ ಯಾವ; ವನ್ನು ಆ ಸ್ಥಳದಲ್ಲಿಟ್ಟು ಹೋದರೂ ಅತ್ತಿತ್ತ ಕದಲುವುದಿಲ್ಲ. ದ್ದರೆ, ಕಸೂತಿಯನ್ನು ಅರ್ಧಕ್ಕೇ ನಿಲ್ಲಿಸಿಬಿಟ್ಟು ಬಂದಾಗ, ವೊಂದು ಸೂಜಿಯನ್ನೋ ರೇಶಿಮೆಯ ಎಳೆಯನ್ನೋ ಎತ್ತಿ- ು ಹೋದರೆ, ತುಂಬ ಬೇಸರವಾಗಿ ಬಿಡಬಹುದು. ಅದ- ಕ್ಕಾಗಿ, ಬೇರೊಂದು ಸ್ಥಳವೇ ಇದ್ದರೆ ಒಳ್ಳೆಯದಲ್ಲವೆ?

ಯಂತ್ರದ ಪರಿಚಯ

ಕಸೂತಿಯನ್ನು ಹೆಣೆಯಲಿಚ್ಛಿಸುವವರಿಗೆ ಮೊದಲನೆಯದಾಗಿ ಹೊಲಿಗೆಯ ಯಂತ್ರವನ್ನು ಬೇಕಾದ ಹಾಗೆ— ವೇಗವಾಗಿ ಅಥವಾ ಮೆಲ್ಲಗೆ— ತಿರುಗಿಸಿ, ಅದನ್ನು ಸಮತೋಲದಲ್ಲಿಡಲು ಬರಬೇಕು ಯಂತ್ರದ ಕೋಲವನ್ನು ಹಿಡಿಯಲು ಸರಿಯಾದ ರೂಢಿ ಬೇಕು ಈ ರೂಢಿಯಿರದಿದ್ದರೆ ಸೂಜಿ ಮುರಿಯುವುದಂತೂ ಸರಿಯೇ ಸರಿ ಅದರೊಡನೆ ಕಸೂತಿಯ ಹೆಣಿಕೆಯೂ ಮೀರಿದಷ್ಟು, ಅಲ್ಲೊಂದ ಇಲ್ಲೊಂದು ಬಿದ್ದು ಬಿಡಬಹುದು. ಅದಕ್ಕಾಗಿ ಮೊದಲು ಯಂತ್ರ ವನ್ನು ತಿರುಗಿಸುವ ಅಭ್ಯಾಸ ಮಾಡಬೇಕಾಗುವುದು ಎರಡು ಕೈಗಳೂ ಬೇರೆ ಬೇರೆ ಕೆಲಸವನ್ನು ಮಾಡುವಾಗ ತೂಕ ತಪ್ಪುವುದು ಸಹಜವೇ. ದಿನದ ವ್ಯವಹಾರದಲ್ಲೂ ಕೂಡ, ರೊಟ್ಟಿಯನ್ನು ಎತ್ತಿ ಹಂಚಿನ ಮೇಲೆ ಹಾಕುವಾಗ, ಒಂದು ಕೈ ತೂಕ ತಪ್ಪಿದರೆ, ಹಂಚಿನ ಮೇಲೆ ರೊಟ್ಟಿ ಸರಿಯಾಗಿ ಹರಹಿಕೊಳ್ಳುವುದೇ? ಇಲ್ಲ. ಒಂದೊಂದು ಹರಿದು ಹೋಗುವುದೂ ಅನುಭವಕ್ಕೆ ಬರಬಹುದು. ಆಗ ಪ್ರಾರಂಭ ಮಾಡುವವರಿಗೆ ಈ ಅನುಭವವೇನೂ ಹೊಸದಲ್ಲ; ಆದರೆ ಅದೇ—ಕೈತೂಕ ಹಿಡಿಯಲು ಬಂದರೆ ಹೀಗಾಗದು. ಯಂತ್ರದಲ್ಲಿ ಕಸೂತಿಯನ್ನು ಹೆಣೆಯುವಾಗಲೂ, ಅಭ್ಯಾಸವಿಲ್ಲ- ದಿದ್ದರೆ ಹೀಗೇ ಆಗುವ ಸಂಭವವಿದೆ. ಅದಕ್ಕಾಗಿ ಕೆಲದಿನ ಬರೀ ಯಂತ್ರವನ್ನು ಸಾವಕಾಶವಾಗಿ, ಸಮತೋಲವಾಗಿಡಲು ಪ್ರಯತ್ನಿಸ ಬೇಕು. ಬಳಿಕ ಬಟ್ಟೆಯನ್ನಿಟ್ಟು ಪ್ರಯತ್ನ ಮಾಡಿದರೆ, ಅಡ್ಡಿ- ಯಿಲ್ಲ. ಮೊದಮೊದಲು ತೂಕತಪ್ಪಿ, ಯಂತ್ರದ ಚಕ್ರ ವಿರುದ್ಧ ದಿಕ್ಕಿನಿಂದ ತಿರುಗಿ, ಸೂಜಿಗಳು ಒಂದರಮೇಲೊಂದು ಮುರಿದು ಬೇಸರವಾಗುವ ಸಂಭವವೂ ಇದೆ. ಆದರೆ ರೂಢಿಯಾದ ಬಳಿಕ ಮಾತ್ರ ಹೀಗಾಗದು.

ಯಂತ್ರದಲ್ಲಿ ಕಸೂತಿಯನ್ನು ಹೆಣೆಯುವಾಗ, ಹೊಲಿಗೆಯ ಯಂತ್ರವನ್ನೇ (ಸಿಂಗರ, ಪಾಫ್, ಉಷಾ—ಯಾವ ಕಂಪನಿಯದಿದ್ದರೂ ಸರಿ) ಉಪಯೋಗಿಸಬಹುದಾದರೂ, ಅದು ಇದ್ದಕ್ಕಿದ್ದಂತೆ (ಎಂದರೆ ಅರಿವೆಗಳನ್ನು ಹೊಲಿಯುವಾಗ ಇದ್ದ ಸ್ಥಿತಿಯಲ್ಲಿಯೇ) ಉಪಯೋಗಿಸಲು ಬಾರದು. ಸೂಜಿಯ ಕೆಳಕ್ಕೆ ನೇರವಾಗಿ, ಯಂತ್ರದ ಹಲ್ಲುಗಳಿರುವುವಲ್ಲವೇ? ಹೊಲಿಯುವಾಗ ಬಟ್ಟೆಯನ್ನು ಮುಂದೆ ಸರಿಸಲು ಅವರ ಉಪಯೋಗವಾಗುತ್ತದೆ. ಆದರೆ ಕಸೂತಿಯನ್ನು ಹೆಣೆಯುವಾಗ, ಬಟ್ಟೆಯನ್ನು ಒಂದೇ ಗೆರೆಯಲ್ಲಿ ಮುಂದೆ ಸರಿಸುವುದಿರುವುದಿಲ್ಲ; ಹೆಣೆಯುವ ಕಸೂತಿಯನ್ನು ಅನುಸರಿಸಿ ಹಿಂದು ಮುಂದೆ ಸರಿಸಾಡುವುದಿರುತ್ತದೆ. ಅದಕ್ಕಾಗಿ ಆ ಹಲ್ಲುಗಳನ್ನು ಮುಚ್ಚಿ, ಆ ಸ್ಥಳವನ್ನು ಸಮಪಾತಳಿಯುಳ್ಳದ್ದುವುದು ಅವಶ್ಯ. ಇದಕ್ಕಾಗಿ ಬೇರೊಂದು ಬಿಲ್ಲೆಯಂತಹ ತಗಡಿನ ಜೋಡಣೆ (ಪ್ಲೇಟ್)ಯೇ ಇವೆ. ಇದು ಪ್ರತಿಯೊಂದು ಕಂಪನಿಯ ಯಂತ್ರಕ್ಕೂ ಒಂದೇ ಆಗಿರದೇ, ಬೇರೆ ಬೇರೆ ಆಗಿರುತ್ತದೆ. "ಸಿಂಗರ್," ಯಂತ್ರದ ಪ್ಲೇಟು ಆ ಕಂಪನಿಯ ಯಂತ್ರಗಳಿಗೆ ಮಾತ್ರ ಸರಿಯಾಗುವುದು. ಈ ಪ್ಲೇಟನ್ನು ಕೂಡಿಸುವಾಗ,—ಬಟ್ಟೆಯನ್ನು ಹೊಲಿಯುವಾಗ, ಅದನ್ನು ಒತ್ತಿಹಿಡಿಯುವ, ಒತ್ತಡ (Presser bar) (ಕಸೂತಿಯನ್ನು ಹೆಣೆಯುವಾಗ, ಬಟ್ಟೆ ಸಲಭವಾಗಿ ಸರಿದಾಡಬೇಕಾದ್ದರಿಂದ ಇದರ ಉಪಯೋಗವಿಲ್ಲ) ವನ್ನೂ, ಅದರೊಡನಿದ್ದ ಸ್ಕ್ರೂಮೊಳೆಯನ್ನೂ ತೆಗೆದುಬಿಡಬೇಕು. ಒತ್ತಡವನ್ನು ಮೇಲಕ್ಕೆ ಕೆಳಗೆ ಸರಿಸುವ ಕುದುರೆ ಮಾತ್ರ ಹಾಗೆ ಇರತಕ್ಕದ್ದು. ಕಸೂತಿಯನ್ನು ಹೆಣೆಯುವಾಗಲೂ, ಆ ಕುದುರೆ ಕೆಳಗೇ ಇರಬೇಕಾಗುವುದು. ಅಂದರೇನೇ ಒತ್ತಡ ಸರಿಯಾಗಿ, ಹೆಣಿಕೆ ಸರಿಯಾಗಿ ಬೀಳುವುದು. ಬಳಿಕ ಪ್ಲೇಟನ್ನು, ಎಡದ ಬದಿಯ ಅಂಚಿನ ಗುಂಟ ಸಮವಾಗಿ ಸರಿಸಿ, ಸೂಜಿಯು ಪ್ಲೇಟಿನಲ್ಲಿಯ ತೂತಿನಲ್ಲಿ ನೇರವಾಗಿ ಹೋಗುವಂತೆ ಗಟ್ಟಿಯಾಗಿ ಕೂಡಿಸಬೇಕು. ಪ್ಲೇಟು ಸರಿದಾಡಿದರೆ, ಸೂಜಿ ತಪ್ಪಿ ಮುರಿಯುವ ಸಂಭವವಿರುತ್ತದೆ.



ಕೂಸ್ಯವಲ್ಲಿ ಸೌಂದರ್ಯ ನಿರ್ಮಿಸುವ ಮಾದರಿಯೊಂದು.

ಯಂತ್ರದ ಬಗೆಗೆ ಎಚ್ಚರಿಕೆ

ಇಷ್ಟಾದ ಮೇಲೆಯೂ ಯಂತ್ರವಿನ್ನೂ ಕಸೂತಿಯ ಹೆಣಿಕೆಗೆ ಸಿದ್ಧವಾಗಲಿಲ್ಲ. ದಿನಂಪ್ರತಿ ಬಟ್ಟೆಗಳನ್ನು ಹೊಲಿಯುವಾಗಲೂ ಮೇಲಿನ ಮತ್ತು ಕೆಳಗಿನ ಟಬ್ಬಿಗಳೆರಡೂ ಸರಿಯಾಗಿ ಬಿದ್ದರೆ ಮಾತ್ರ ಹೊಲಿಗೆ ಅಂದವಾಗಿ ಗಟ್ಟಿಯಾಗುವುದಲ್ಲವೇ? ಎಂದರೆ ಎರಡೂ ಎಳೆಗಳ ಬಿಗಿತ ಸರಿಯಾಗಿರಬೇಕು. ಆದರೆ ಕಸೂತಿಯನ್ನು ಹಾಕುವಾಗ, ಈ ಬಿಗಿತವನ್ನು ಹೆಚ್ಚು-ಕಡಿಮೆ ಮಾಡಲು ಎಡಭಾಗಕ್ಕಿರುವ ಸ್ಕ್ರೂಮೊಳೆಯನ್ನು ತುದಿಗೆ ಸರಿಸಿ, ಮೇಲಿನ ಎಳೆಯನ್ನು ಕೊಂಚ ಸಡಿಲುಮಾಡಬೇಕಾಗುತ್ತದೆ. ಕೆಳಗಿನ ಎಳೆಯ ಬಣ್ಣ ಎಂಥದಿದ್ದರೂ ಮೇಲೆ ಬರುವಂತಿಲ್ಲ. ಒಂದೊಂದು ಸಲ ಮೇಲಿನ ಮತ್ತು ಕೆಳಗಿನ ಎಳೆಗಳು ನಯದಲ್ಲಿ (ನಂಬರಿನಲ್ಲಿ) ಬೇರೆಬೇರೆಯಾಗಿರುವುದರಿಂದಲೂ ಹೀಗೆ ಮಾಡುವುದು ಅವಶ್ಯವಿರುತ್ತದೆ.

ಇಷ್ಟು ಮಾಡಿಯೂ, ಯಂತ್ರಕ್ಕೆ ಸರಿಯಾಗಿ ಎಣ್ಣೆ ಉಣಿಸದಿದ್ದರೆ, ಧೂಳು ಕೂತು ಹೊಲಸಾಗಿದ್ದರೆ, ಕೆಳಗಿನ ಡಬ್ಬಿ (ಬೊಬಿನ್)ಯಲ್ಲಿ ದಾರ ಸಿಕ್ಕಿದ್ದರೆ, ಯಂತ್ರ ನಡೆಯದು. ಈ ಎಲ್ಲ ವಿಷಯವನ್ನೂ ಒಂದೊಂದಾಗಿ ವಿಸ್ತರಿಸಿ ಮುಂದೆ ಹೇಳುವೆ. ಸದ್ಯ ಯಂತ್ರದ ಹೊಲಿಗೆ ಸರಿಯಾಗಿದೆಯೆಂದು ತಿಳಿದೇ ಮುಂದೆ ಸಾಗೋಣ. ಇನ್ನು ಯಂತ್ರದಲ್ಲಿ ಈ ಬದಲಾವಣೆಗಳನ್ನು ಮಾಡಿದ ಮೇಲೆ, ಕಸೂತಿಯನ್ನು ಹೆಣೆಯಲು ಬೇಕಾಗುವ ಬಣ್ಣಬಣ್ಣದ ದಾರ, ಬಟ್ಟೆಯನ್ನು ಬಿಗಿಹಿಡಿಯುವ ರಿಂಗು, ಚಿತ್ರದ ಕಾಗದ, ಚಿತ್ರವನ್ನು ಬಟ್ಟೆಯ ಮೇಲೆ ಮೂಡಿಸಲು ಬೇಕಾಗುವ ಕಾರ್ಬನ್ ಕಾಗದ ಪೆನ್ಸಿಲ್, ಯಂತ್ರದ ಸಣ್ಣ ಸೂಜಿ, ತುದಿಯಲ್ಲಿ ಬಗ್ಗಿಸಿದ ಸಣ್ಣ ಕತ್ತರಿ, ಒಂದು ವಾರ—ಅಷ್ಟು ತೆಳುವಾಗಿಲ್ಲದ— ಬಿಳಿಯ ಬಟ್ಟೆ, ಇವುಗಳನ್ನು ಸುಸಜ್ಜಿತವಾಗಿ ಹತ್ತಿರ ಇಟ್ಟುಕೊಂಡು, ಕಸೂತಿಯನ್ನು ಪ್ರಾರಂಭಿಸಬೇಕು. ಕಸೂತಿಯನ್ನು ಪ್ರಾರಂಭಿಸುವಾಗ, ಯಂತ್ರದ ಮೇಲ್ಮೈಯೂ, ಕೈಗಳು ಸ್ವಚ್ಛವಾಗಿರುವುದರ ಕಡೆಗೆ ವಿಶೇಷ ಲಕ್ಷ್ಯವನ್ನು ಪೂರಯಿಸಬೇಕು.

(೧೪೨ ನೆಯ ಪುಟ ನೋಡಿರಿ.)

ಕನ್ನಡ ಮಹಿಳೆಯರ ಮುನ್ನಡೆ

ಕುಮಾರಿ ವಿಮಲಾ ನಾಡಿಗೇರ ಬಿ. ಎ (ಆನರ್ಸ)

ಧಾರವಾಡ ಜಿಲ್ಲೆಯ ತಿಳವಳ್ಳಿಯ ನಾಡಿಗರ ಮನೆತನ ಅಚ್ಚಕೆಚ್ಚಿನ ಕನ್ನಡಿಗರದು. **ಈ ಮನೆತನಕ್ಕೆ ಸೇರಿದ ಶ್ರೀಮಾನ್ ಕೃಷ್ಣರಾಯರು** ಧಾರವಾಡದಲ್ಲಿಯೇ ಖಾಯಮ ವಸತಿಗರಾಗಿ ಮನೆಮಾಡಿಕೊಂಡಿದ್ದಾರೆ. ಅವರ ಹಿರಿಯ ಮಗಳು ಕುಮಾರಿ ವಿಮಲಾ ನಾಡಿಗೇರರು. ಕಾರಣಾಂತರದಿಂದ ಇವರ ಪ್ರಾಥಮಿಕ ಶಿಕ್ಷಣ ಮರಾಠಿಯಲ್ಲಿ ನಡೆದರೂ ಕನ್ನಡವನ್ನು ಚೆನ್ನಾಗಿ ಬಲ್ಲರು. ಮೊದಲಿಂದ ಕಲಿತ ಮರಾಠಿಯ ಮೂಲಕವೇ ಇವರು ಮಾಧ್ಯಮಿಕ ಶಿಕ್ಷಣ ಪಡೆದು, ಧಾರವಾಡದ ಕರ್ನಾಟಕ ಹೈಸ್ಕೂಲಿನಿಂದ ೧೯೪೬ ರಲ್ಲಿ, ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಸಾಕಷ್ಟು ಗುಣಗಳನ್ನು ಪಡೆದುಕೊಂಡು ಪಾಸಾದರು. ಮುಂದೆ ಕರ್ನಾಟಕ ಕಾಲೇಜಿನಲ್ಲಿ ಸೇರಿ, ವರುಷ ವರುಷವೂ ಯಶಸ್ಸನ್ನು ಪಡೆಯುತ್ತ, ಇದೇ ೧೯೫೦ ರಲ್ಲಿ, ಕರ್ನಾಟಕ ವಿಶ್ವವಿದ್ಯಾಲಯವು ನಡೆಯಿಸಿದ ಬಿ. ಎ. ಪರೀಕ್ಷೆಯಲ್ಲಿ, ಮರಾಠೀ ವಿಷಯ ತೆಗೆದುಕೊಂಡು ಉತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿರುವರು. ತಾಯ್ನುಡಿ ಕನ್ನಡ. ಮನೆಯಲ್ಲೆಲ್ಲ ಕನ್ನಡ ವಾತಾವರಣ. ಹೀಗಿದ್ದರೂ ತನ್ನದಲ್ಲದ ಇನ್ನೊಂದು ಭಾಷೆಯಲ್ಲಿಯೂ ಕನ್ನಡಿಗರು ಹೇಗೆ ಪ್ರಾವೀಣ್ಯವನ್ನು ಸಂಪಾದಿಸಬಲ್ಲರೆಂಬುದಕ್ಕೆ ಕುಮಾರಿ ವಿಮಲಾ ನಾಡಿಗೇರರು ಉತ್ತಮ ಉದಾಹರಣೆಯಾಗಿದ್ದಾರೆ. ಸಂಗೀತದ ಪ್ರೀತಿಯೂ ಇವರಿಗೆ ಸಾಕಷ್ಟಿದೆ. ಅನೇಕ ಸಂಗೀತ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ-ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರ ಸಂಗೀತ-ಸಾಹಿತ್ಯಗಳಲ್ಲಿಯ **ನೈಪುಣ್ಯ, ಕರ್ನಾಟಕದ ಹೆಮ್ಮೆಗೆ ಕಾರಣವಾಗುವಂತಾಗಲಿ.**

ಶ್ರೀಮತಿ ಸೌ. ಸುಶೀಲಾಬಾಯಿ ಹಳಪೇಟೆಯವರು

ಜಯಂತಿಯ ವಾಚಕರಿಗೆ ಶ್ರೀ. ಹಳಪೇಟೆ ಚಿಂತಾಮಣಿರಾಯರು ಅಪರಿಚಿತರೇನೂ ಅಲ್ಲ. ಸೌ. ಸುಶೀಲಾಬಾಯಿಯವರು ಅವರ ಧರ್ಮಪತ್ನಿಯವರು. ಧಾರವಾಡ ಮಹಿಳಾ ಮಂಡಳದ ಕಾರ್ಯದರ್ಶಿನಿಯಾಗಿ ಮಹಿಳೆಯರಲ್ಲಿ ಸಾಮಾಜಿಕ ಚಟುವಟಿಕೆಯನ್ನು ನಡೆಯಿಸುವರಲ್ಲದೆ, ಇಲ್ಲಿಯ ಕರ್ನಾಟಕ ಎಜ್ಯುಕೇಶನ್ ಬೋರ್ಡಿನವರ ನೇತೃತ್ವದಲ್ಲಿ ನಡೆದಿರುವ ಕರ್ನಾಟಕ ಹೊಲಿಗೆಯ ವಿದ್ಯಾನಿಲಯದಲ್ಲಿ ಉಪಾಧ್ಯಾಯಿನಿಯಾಗಿ ಮಹಿಳಾವರ್ಗವನ್ನಿವರು ಯಶಸ್ವೀರೀತಿಯಿಂದ ಸಾಗಿಸುತ್ತಿದ್ದಾರೆ. ಯಂತ್ರದ ಮೇಲಿನ ಕಸೂತಿ, ಕೈಕಸೂತಿಗಳಲ್ಲಿ ಇವರಿಗೆ ತುಂಬ ನೈಪುಣ್ಯವಿದೆಯೆಂಬುದನ್ನು, ಇವರು ಸಿದ್ಧಗೊಳಿಸಿದ ಕಲಾಕೃತಿಯನ್ನು ನೋಡಿದವರು ಒಪ್ಪಿಕೊಳ್ಳದೆ ಇರರು. ಇಷ್ಟೆಲ್ಲ ಬೇರೆ ಬೇರೆ ಕಾರ್ಯಗಳನ್ನು ಕೈಕೊಂಡು ನಡೆಯಿಸಿಕೊಂಡು ಹೋಗುತ್ತಿದ್ದರೂ, ಉತ್ತಮ ಗೃಹಿಣಿಯಾಗಿ ಮನೆಗೆಲಸವನ್ನೂ ಕುಂದಿಲ್ಲದಂತೆ ಜರುಗಿಸಿಕೊಂಡು ಹೋಗುತ್ತಿರುವುದು ಇವರ ಕರ್ತವ್ಯದಕ್ಷತೆಗೆ ಸಾಕ್ಷಿಯಾಗಿದೆ. ಪಾಕಶಾಸ್ತ್ರದಲ್ಲಿಯೂ ಇವರು ಪ್ರವೀಣರು. ಸದ್ಯ '**ಕೈಕಸೂತಿ**' ಎಂಬ ಹೆಸರಿನಿಂದ ಕನ್ನಡಿಗರಿಗೆ ಕಸೂತಿ ಕಲೆಯ ಪುಸ್ತಕವೊಂದನ್ನು ಒದಗಿಸಲಿರುವರು. ಇವರು, ಮುಂಬಯಿ ಸರಕಾರದವರು ಏರ್ಪಡಿಸಿದ ಹೊಲಿಗೆಯ ಶಿಕ್ಷಣದ ಕೊನೆಯ ಪರೀಕ್ಷೆಗೆ ಕುಳಿತು ಮೊದಲನೆಯ ತರಗತಿಯಲ್ಲಿ ಉತ್ತೀರ್ಣರಾಗಿರುವುದು ಅಭಿನಂದನೀಯ ಸಂಗತಿ. ಸೌ. ಸುಶೀಲಾಬಾಯಿಯವರ ಕಾರ್ಯಕ್ಷಮತೆ ನಮ್ಮಲ್ಲಿಯ ಮನೆತನಸ್ಥ ಮಹಿಳೆಯರಿಗೆಲ್ಲ ಆದರ್ಶವಾಗಿದೆ. ಹೆಣ್ಣುಮಕ್ಕಳಲ್ಲಿ ಉದ್ಯಮಪ್ರೀತಿ, ಕಲಾಪ್ರೀತಿಗಳು ಬೆಳೆಯುತ್ತ ಹೋದರೆ, ಅವರಿರುವ ಮನೆಗೂ ಒಳ್ಳೆಯದು; ದೇಶಕ್ಕೂ ಒಳ್ಳೆಯದು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಜುಲೈ ಸಂಚಿಕೆಯಲ್ಲಿ ಕೇಳಿಕೊಂಡಂತೆ, '**ಸಂಕಟ ವಿಮೋಚನೆ**' ಎಂಬ ಕಥೆಯನ್ನು ಕುರಿತು, **ಬೇರೆ ಬೇರೆ** ೧೮ ಜನರಿಂದ ವಿಮರ್ಶೆಗಳು ಬಂದಿವೆ. ವಿಮರ್ಶಕರ ಅನುಕ್ರಮ ಹೀಗಿದೆ :

೧. ಕು. ಸರೋಜಿನಿ ಮಹಿಷಿ ಎಂ. ಎ. ಧಾರವಾಡ. ೨. ಶ್ರೀ. ಸದಾಶಿವ ವಿ. ಬಡಿಗಣ್ಣವರ, ಗದಗು. ೩. ಶ್ರೀ.
೩. ಶ್ರೀ. ಸೀತಾರಾಘವ, ಚಿತ್ರದುರ್ಗ. ೪. ಶ್ರೀ. ಬಿ. ಎನ್. ಮೂರ್ತಿ, ಕೃ. ಮೂ. ಪುರಂ, ಮೈಸೂರು. ೬. ಶ್ರೀ. ಹ. ನ.
ಎನ್. ಆರ್. ಗ್ಯಾಬ್ರಿ, ಕರ್ಕಿ (ಉ. ಕ.). ೬. ಶ್ರೀ ಯು. ಎಸ್. ಶ್ರೀನಿವಾಸರಾವ್, ಸವಣೂರು. ೭. ಶ್ರೀ. ಹ. ನ.
ದೇಶಪಾಂಡೆ, ಜ್ಯೂ. ಬಿ. ಎ. ವಿಜಾಪುರ. ೮. ಶ್ರೀ. ಅನಂತ ಬುರ್ಲಿ ಸೀ. ಬಿ. ಎ. ಬಸವೇಶ್ವರ ಕಾಲೇಜು,
ಬಾಗಲಕೋಟೆ. ೯. ಶ್ರೀ. ತಿರುಮಲೇಶ ದೇಶಪಾಂಡೆ ಜ್ಯೂ. ಬಿ. ಎ, ಪುಣೆ. ೧೦ ಶ್ರೀ. ಜಿ. ಎನ್. ಗುಂಡ್ಮಿ,
ಬಾಗಲಕೋಟೆ. ೧೧. ಶ್ರೀ. ಜೋಶಿ ಶ್ರೀಕಾಂತ, ಶನುನೇವಾಡಿ. ೧೨ ಶ್ರೀ. ಎಚ್. ಎಸ್. ರಾಮಚಂದ್ರನ್,
ಉಗರಗೋಳ. ೧೩ ಪಿ ಅನಂತರಾಜನ್, ಲಕ್ಷ್ಮೇಶ್ವರ. ೧೪. ಶ್ರೀ. ಮಾ. ನ. ಮೂರ್ತಿ, ದಂಡಿನಶಿವರ (ಮೈಸೂರು).
೧೫. ಕು. ಮಾಧವ ನಾಯಕ, ಅಗ್ರಗೋಣ (ಉ ಕ). ೧೬. ಶ್ರೀಮತಿ ಪದ್ಮಾ, ಬೆಂಗಳೂರು ಸಿಟಿ. ೧೭. ಶ್ರೀ.
ಜಿ. ಎಸ್. ಮಠಕರ್ ಎಂ. ಎ., ಬಿ ಟಿ. ಪುಣೆ. ೧೮. ಶ್ರೀ. ಡಿ ಜೆ ಗುಮಾಸ್ತೆ, ನೀಲಾನಗರ—ಸೊಲ್ಲಾಪುರ.

ಎಲ್ಲ ವಿಮರ್ಶೆಗಳನ್ನೂ ಶ್ರೀ. ಮಾರ್ತಾಂಡರಾವ್ ವರಗಿರಿ ಎಂ. ಎ, ಬಿ. ಟಿ ಅವರು ನಿರೀಕ್ಷಿಸಿ ಹೊಸದೊಂದು ರೀತಿಯಲ್ಲಿ ತಮ್ಮ ನಿರ್ಣಯ ಕೊಟ್ಟಿದ್ದಾರೆ. **ಶ್ರೀ. ಅನಂತ ಬುರ್ಲಿ, ಬಾಗಲಕೋಟೆ** ಅವರ ವಿಮರ್ಶೆ ಅತ್ಯುತ್ತಮ.

A ತರಗತಿ : ಶ್ರೀ. ಜಿ. ಎಸ್ ಮಠಕರ್ ಎಂ. ಎ., ಬಿ. ಟಿ., ಕು. ಸರೋಜಿನಿ ಮಹಿಷಿ **ಎಂ. ಎ ; ಶ್ರೀಮತಿ ಪದ್ಮಾ, ಬೆಂಗಳೂರುನಗರ.**

B ತರಗತಿ : ಶ್ರೀ. ಸೀತಾರಾಘವ, ಚಿತ್ರದುರ್ಗ ; ಶ್ರೀ. ಹ. ನ. ದೇಶಪಾಂಡೆ ಜ್ಯೂ. ಬಿ. ಎ.; **ಶ್ರೀ. ಬಿ. ಎನ್. ಮೂರ್ತಿ, ಮೈಸೂರು ;** ಶ್ರೀ. ಪಿ. ಅನಂತರಾಜನ್, ಪುಲಿಗೆರೆ; ಶ್ರೀ. ಮಾ ನ. ಮೂರ್ತಿ ದಂ. **ಶಿವರ ; ಶ್ರೀ. ಎಸ್. ಆರ್. ಗ್ಯಾಬ್ರಿ ;** ಶ್ರೀ. **ಡಿ.** ಜೆ. ಗುಮಾಸ್ತೆ, **ಸೊಲ್ಲಾಪುರ.**

C ತರಗತಿ : ಮಿಕ್ಕೆಲ್ಲರವು.

ನಿರ್ಣಾಯಕರಾಗಿ ನೆರವಿತ್ತ ಶ್ರೀ. ವರಗಿರಿಯವರಿಗೂ, ಮೇಲಾಟದಲ್ಲಿ ಭಾಗವಹಿಸಿದ ಉತ್ಸಾಹಿ ವಿಮರ್ಶಕರಿಗೂ ವಂದನೆಗಳೊಂದಿಗೆ ಧನ್ಯವಾದಗಳು.

ಮುಂದಿನ ತಿಂಗಳಿಗಾಗಿ **ಈ** ಸಂಚಿಕೆಯಲ್ಲಿ ಪ್ರಕಟವಾದ '**ವಿರೋಧ**' ಎಂಬ ಕತೆಯ ವೈಶಿಷ್ಟ್ಯವನ್ನು **ಕುರಿತು** ವಿಮರ್ಶಾತ್ಮಕ ಲೇಖನ ಬರೆಯಬೇಕು.

—ಸಂಪಾದಕರು.

ಸಂಕಟ ವಿಮೋಚನೆ

(ಕಥಾವಿಮರ್ಶೆ)

ಶ್ರೀ. ಅನಂತ ಬುರ್ಲಿ ಸೀ. ಬಿ. ಎ.
ಬಸವೇಶ್ವರ ಕಾಲೇಜು, ಬಾಗಿಲಕೋಟೆ

ಸುಖವಾಗಿ ಸಂಸಾರ ಮಾಡಿಕೊಂಡಿದ್ದ ಪ್ರೊಫೆಸರ್ ಒಬ್ಬನು ಭವಿಷ್ಯದ ಬಲೆಯಲ್ಲಿ ಸಿಲುಕಿ, ತನ್ನ ಜೀವನದ ಭವಿಷ್ಯವನ್ನೇ ಹಾಳು-ಮಾಡಿಕೊಂಡನೆಂಬುದೇ ಈ ಕಥೆಯ ವಿಷಯವೆಂದು ಮೊದಲು ಪರಿಚಯದಲ್ಲಿಯೆ ಹೇಳಲಾಗಿದೆ. ಕಥಾವಸ್ತುವನ್ನು ವಾಸ್ತವಿಕತೆಯ ಅಳತೆಗೋಲಲ್ಲಿ ಅಳೆದು, ರೀತಿ-ನೀತಿಗಳ **ರೂಪವನ್ನು** ಕಂಡು ತಿಳಿಯುವುದೆ ವಿಮರ್ಶಕನ ಕೆಲಸ ಉಳಿದಿದೆ ಎಂದು **ಹೇಳಬಹುದು.**

ಪ್ರೊ. ವಿಶ್ವನಾಥನು ಜ್ಯೋತಿಷ್ಯದಲ್ಲಿ ನಂಬಿಗೆಯುಳ್ಳವನಾಗಿದ್ದರೆ ತಪ್ಪಿಲ್ಲ. ಅದು ಮಾನವಸ್ವಭಾವವಾಗಿದೆ. ಮಾನಸಶಾಸ್ತ್ರ ಪಂಡಿತರು ಹೇಳುವ— " ಯಾವ ಮನುಷ್ಯನು ನಿಶ್ಚಿತವಾದ **ರೀತಿಯಲ್ಲಿ** ತನ್ನ ಜೀವನವನ್ನು ಮಾರ್ಪಡಿಸಿಕೊಳ್ಳಲು ಅಸಮರ್ಥ**ನೋ, ಅವನು** ಹೆಚ್ಚಾಗಿ ದೈವ-ಭವಿಷ್ಯಗಳ ಮೇಲೆ ಕೈಯೂರುವನು " ಎಂಬ ಮಾತನ್ನು ಪರಿಶೀಲಿಸಿದಾಗ, ವಿಶ್ವನಾಥನಂತಹ **ಸುಶಿಕ್ಷಿತನು,** ಸುಖವಾಗಿ ಬಾಳಿಕೊಂಡಿದ್ದ ಸುದೈವಿ, ಭವಿಷ್ಯದಲ್ಲಿ **ಇಷ್ಟೇಕೆ ನಂಬಿಗೆ**

ಯುಳ್ಳವನಾಗಿದ್ದನೆಂಬುದು ಓದುಗರಿಗೆ ತಿಳಿಯದೆ, ಅಸಮಾಧಾನ ಕೊಂಚ ತಲೆದೋರಿದರೆ ಅವರ ತಪ್ಪಲ್ಲ. ಇನ್ನು ಹೇಗೋ ಅವನಲ್ಲಿ ಜ್ಯೋತಿಷ್ಯದ ಬಗೆಗೆ ಅಗಾಧ ನಂಬುಗೆ-ವಿಶ್ವಾಸಗಳಿದ್ದುವು ಎಂದು, ಕಥೆಗಾರರ ಕಲ್ಪನೆಯನ್ನು ಕಥೆಯ ರೀತಿಯಲ್ಲಿಯೇ ಹೊಂದಿಸಿಕೊಂಡು ಹೋದರೂ, ಮಕ್ಕಳಿಗಾಗಿ ಅತಿಯಾಗಿ ಹಂಬಲಿಸುವ ವಿಶ್ವನಾಥನ ಮನದ ರೀತಿ ಮಾತ್ರ ಓದುಗರಿಗೆ ಕೌತುಕವನ್ನುಂಟು ಮಾಡದಿರದು. ಸಾಮಾನ್ಯವಾಗಿ ನಿತ್ಯಜೀವನದಲ್ಲಿ ಹೆಣ್ಣುಹೃದಯ ಮಕ್ಕಳಿಗಾಗಿ ಹಂಬಲಿಸುವುದನ್ನು ಕಾಣುತ್ತೇವೆ. ಹೆಣ್ಣಿನ ಹೃದಯದಲ್ಲಡಗಿದ ಈ ತಾಯ್ತನದ ಸುಪ್ತ ಆಶೆಯೇ ಅವಳನ್ನು ಸಂಸಾರದಲ್ಲಿ ಎಳೆದು ತರುತ್ತದೆ; ಪುರುಷನೊಡನೆ ಬಾಳಹಚ್ಚುತ್ತದೆ—ಎಂಬುದು ಸರ್ವಸಮ್ಮತ ಸಿದ್ಧಾಂತ. ಮುಪ್ಪಿನಕಾಲದಲ್ಲಿಯೂ ಮಕ್ಕಳಾಗದಿರಲು, ನರಕದಿಂದೆತ್ತಿ ಉದ್ಧರಿಸುವ ಸತ್ಪುತ್ರನಿಗಾಗಿ ಹಲುಬುವ ಕಾರಣ ಮತ್ತೆ ಮದುವೆಗಾಗಿ ಆಶಿಸುವ ಹಳೆಯ ಕಾಲದ ಜನದ ರೀತಿ ಇಂದು ಮಾಯವಾಗಿದೆ—ಎಂಬುದು, ಕಾಣುತ್ತಿರುವ ಸತ್ಯಸಂಗತಿ. ಅದರಲ್ಲಿ ತದ್ವಿರುದ್ಧವಾಗಿ ಮಂಗಳೆಯಂತಹ ತುಂಬ ಚಲುವೆ ತಿಳಿದವಳು ಕೈಹಿಡಿದಾಗ, 'ಪ್ರಣಯಿಗಳೆಂದರೆ ಇವರೇ' ಎಂದು ಜನ ನೋಡಿ ಅಸೂಯೆಪಡುವಷ್ಟು ಪ್ರೇಮ ಅವರಲ್ಲಿ ತುಂಬಿ ತುಳುಕುವಾಗ, ಮಕ್ಕಳಿಗಾಗಿ ಹಂಬಲಿಸಿ, ಆತುರಪಟ್ಟು ಎರಡನೆಯ ಮದುವೆಯಾಗುವ ವಿಶ್ವನಾಥನ ಬಗೆಗೆ ಓದುಗರು ಅಸಮಾಧಾನ ವ್ಯಕ್ತಮಾಡುವುದು ತಪ್ಪಲ್ಲ. ಕೇವಲ ಕಥೆಯ ಉದ್ದೇಶವನ್ನು ಕಣ್ಣುಮುಂದಿಟ್ಟುಕೊಂಡು ಮಾನವಸ್ವಭಾವದ ಕಟ್ಟುನಿಟ್ಟುಗಳನ್ನು ದಾಟಿಯೂ ಕತೆ ಮುಂದುವರಿಸುವ ಕತೆಗಾರರ ರೀತಿ, ವಿಮರ್ಶಕ ಬುದ್ಧಿಗೆ ಸರಿದೋರದು. ಕತೆಗಾರರಿಗೆ ನಮ್ಮ ಈ ತಪ್ಪು ತಿಳಿದಂತಿದೆ. "ನಂಗಿಲ್ಲದ ಮಕ್ಕಳ ವ್ಯಾಮೋಹ ನಿಮಗಾಯ್ತೇ ?....ಜೀವಕ್ಕಿಂತ ಸಂತಾನವೇ ಹೆಚ್ಚಾಯ್ತೆ ?" ಎಂದು ಕೇಳುವ ಮಂಗಳೆಯ ಪ್ರಶ್ನೆಯಲ್ಲಿಯೆ ಅದನ್ನು ವ್ಯಕ್ತಪಡಿಸಿದ್ದಾರೆ. ಬದಲು ವಿಶ್ವನಾಥನಲ್ಲಿ ಈ ತಾರುಣ್ಯದಲ್ಲಿಯೂ ಇಂತಹ ಮಕ್ಕಳ ವ್ಯಾಮೋಹ ಹುಟ್ಟಿದ ಬಗೆಯನ್ನು ಮೊದಲೇ ಯುಕ್ತವಾದ ಸಹಜರೀತಿಯಲ್ಲಿ ಚಿತ್ರಿಸಿದ್ದರೆ, ಮುಂದಿನ ಕತೆಗೆ ಸ್ವಾಭಾವಿಕ ಮೆರುಗು ಬರಬಹುದಾಗಿತ್ತು.

ಭವಿಷ್ಯದಲ್ಲಿ ನಂಬಿಕೆ ಇರಲಿ ; ಆದರೆ ಮಕ್ಕಳು ಇಲ್ಲದ ಬಾಳು ಹಾಳು—ಎಂದು ಸಂಪೂರ್ಣವಾಗಿ ತಿಳಿಯುವ ಅಂಧಶ್ರದ್ಧೆ ಪ್ರೊ. ವಿಶ್ವನಾಥನಂತಹ ಸುಶಿಕ್ಷಿತನಲ್ಲಿ ನೆಲೆಯೂರಿ ನಿಂತಿತ್ತೆಂಬ ಮಾತನ್ನು ಇಂದಿನ ನವಯುಗದಲ್ಲಿ ಓದುಗರು ಒಪ್ಪುವಂತೆ ಮಾಡುವುದು ದುಸ್ತರವೆಂಬುದು ಕಥೆಗಾರರಿಗೂ ತಿಳಿಯುವಂತಿದೆ. ಈ ರೀತಿಯಲ್ಲಿ ವಿಚಾರಿಸಿದಾಗ, ಭವಿಷ್ಯ ವಿಶ್ವನಾಥನ ಜೀವನವನ್ನು ಹಾಳುಮಾಡಿತೆಂದು ಹೇಳುವುದಕ್ಕಿಂತ, ಸರಸು ತಂದೆಗೆ ಹೇಳುವ, "ಒಂದು ಬಾರಿ ಆತುರಪಟ್ರೆ....ಬಾಳನ್ನೇ ಬರಿದು ಮಾಡಬೇಡ" ಎಂಬ ಮಾತನ್ನು, ವಿಶ್ವನಾಥನಿಗೂ ಅನ್ವಯಿಸಿಕೊಂಡು ನೋಡಿದಾಗ, ಅವನ ಆತುರತೆ, ಹುಚ್ಚುತನವೇ ಹಾಳುಮಾಡಿತವನನ್ನು—ಎಂಬುದು ಕಂಡುಬಾರದಿರದು.

ಕಥೆಯಲ್ಲಿ ಬರುವ ವಿಶ್ವನಾಥನಂತಹ ಮನೋದೌರ್ಬಲ್ಯವುಳ್ಳವರು ಸಮಾಜದಲ್ಲಿ ಇಲ್ಲವೇ ಇಲ್ಲವೆಂತಲ್ಲ. ಅಂತೆಯೇ ಕಥಾವಸ್ತುವನ್ನು ಪೂರ್ಣ ವಾಸ್ತವಿಕತೆಯಿಂದ ದೂರ ಮಾಡುವಂತಿಲ್ಲ. ಆದರೆ ಕೆ. ಎ. ಎನ್ ರಾಯರ ಉಳಿದ ಕತೆಗಳೊಡನೆ ಹೋಲಿಸಿನೋಡಿದಾಗ, ಅವುಗಳ ಮಟ್ಟ ಈ ಕತೆಯಲ್ಲಿ ತೋರಬಾರದು.

ರಾಯರು ಈಗಾಗಲೆ 'ಒಳ್ಳೆಯ ಕತೆಗಾರರು' ಎಂದು ಹೆಸರು ಗಳಿಸಿದ್ದಾರೆ. ಉತ್ತಮ ಕತೆಗಳನ್ನು ಬರೆದಿದ್ದಾರೆ. ಅಂತೆಯೆ ಪರಿಪಕ್ವಗೊಂಡ ಅವರ ಕಥನ ಕೌಶಲ್ಯದ ಬಗೆಯನ್ನು ಇಲ್ಲಿಯೂ ಕಾಣಬಹುದಾಗಿದೆ. ಕಥೆಯ ಪ್ರಾರಂಭ ತುಂಬ ಮನಸೆಳೆಯುತ್ತದೆ. ಅಂದವಾದ ನಿರಾಡಂಬರ ವರ್ಣನೆ—ಹಿತಮಿತವಾದ ಮಾತುಗಳಿಂದ ಮುಂದೊಯ್ಯುತ್ತಾರೆ ಓದುಗರನ್ನು. ಮುಂದಾಗುವುದನ್ನು ಕೂಡಲೆ ತಿಳಿಯಗೊಡದಂತೆ, ಓದುಗರ ಕುತೂಹಲ ಕೆರಳುವಂತೆ ಮಾಡಿ, ಕತೆ ಸಾಗಿಸಿಕೊಂಡೊಯ್ಯುವ ಜಾಣ್ಮೆ ಮೆಚ್ಚತಕ್ಕುದಾಗಿದೆ. ಅಲ್ಲದೆ ಸಂಕಟ ವಿಮೋಚನವಾಗಬೇಕಾದ ತಪೋವನ ಪ್ರದೇಶದಲ್ಲಿ ಸಂಸಾರ ವಿಮೋಚನವಾದ ಮುಖ್ಯ ಕತೆ ಹೇಳಬೇಕಾದ ಪ್ರಸಂಗ ನಿರ್ಮಾಣ ಮಾಡಿಕೊಂಡುದು ಕತೆಗಾರರ ಕುಶಲತೆ ತೋರುತ್ತಿದೆ ಯಾದರೂ, ವಿರಕ್ತನೊಬ್ಬ — ಇವನೇ ಕಥಾನಾಯಕನೆಂಬುದು ಕೂಡಲೆ ತಿಳಿದು ಬರುತ್ತದೆ ಓದುಗರಿಗೆ—ಕಾಣಿಸಿಕೊಳುವುದು, ಪ್ರಶ್ನೋತ್ತರಗಳು ಸಾಗುವುದು, ಆಮೇಲೆ ಕಥೆ ಹೇಳುವುದು—ಮುಂತಾದುವೆಲ್ಲ ಕನ್ನಡ ಕಥಾ ಪ್ರಪಂಚದಲ್ಲಿ ನವೀನವಾದುವೇನಲ್ಲ ಎಂದೆನಿಸದಿರದು. ರಾಯರಂತಹರಿಂದ

ಶಾಂತಿಸೇವಾ ಸದನದ ಸುಂದರ ಪ್ರಕಟನೆ!

"ಮಾಯಾ ಮಂದಿರ"

ಶ್ರೀ ಭುಜೇಂದ್ರ ಮಹಿಷವಾಡಿ

ಅವರ

ಸರ್ವೋತ್ಕೃಷ್ಟ ಕವನ ಸಂಗ್ರಹ.

ಪ್ರೊ. ಮುಗಳಿ ಅವರು ಮುನ್ನುಡಿಯಲ್ಲಿ
ಹೀಗೆ ಬರೆಯುತ್ತಾರೆ :

'ಮಾಯಾ ಮಂದಿರ' ದಿಂದ ಮೊದಲಾಗಿ 'ಶಾಂತಿ' ಯಲ್ಲಿ ಕೊನೆಗೊಳ್ಳುವ ಈ ಸಂಗ್ರಹವು ಭುಜೇಂದ್ರರ ಕಾತ್ತ್ವಿಕದೃಷ್ಟಿಗೆ ಸಾಕ್ಷಿಯಾಗಿದೆ. ಭುಜೇಂದ್ರರಕವಿತಾಶಕ್ತಿ ಅಜೇಯವಾದುದು, ಸಹಜವಾದುದು.' ಬೆಲೆ: ೧-೮-೦

ದೊರೆಯುವ ಸ್ಥಳ :

ಶ್ರೀ. ಮಿರ್ಜಿ ಅಣ್ಣಾರಾಯರು,
ಉಗಾರ (ಜಿಲ್ಲಾ ಬೆಳಗಾವ

ವ್ಯಾಪಾರಿಗಳಿಗೆ ತುಂಬ ಸವಲತ್ತು ಇದೆ.

ಇನ್ನೂ ನವೀನವಾದ ರೀತಿಯಲ್ಲಿ ಈ ಸನ್ನಿವೇಶ ಅಂದವಾಗಿ ನಿರ್ಮಾಣವಾಗಬೇಕಿತ್ತೆಂದು ವಿಮರ್ಶಕನು ಬಯಸಿದರೆ ತಪ್ಪಲ್ಲ.

ಏನಿದ್ದರೂ, ಮಂಗಳೆಯ ಸುಂದರ ಚಿತ್ರವನ್ನು ಕೊಡುವ ಕತೆಗಾರರ ಕೌಶಲ್ಯ ಹೊಗಳತಕ್ಕದ್ದೇ. ಸರಸುವು ಒಂದು ಕ್ಷಣವೇ ಕತೆಯಲ್ಲಿ ಸುಳಿದು ಹೋದರೂ, ಎರಡೇ ಮಾತುಗಳನ್ನಾಡಿದರೂ, ಅವಳ ವ್ಯಕ್ತಿತ್ವ ಗುಣ ಸ್ವಭಾವಗಳನ್ನೆಲ್ಲ ಆ ಎರಡೇ ಮಾತುಗಳಲ್ಲಿ ಮೂಡಿಸಿ ತೋರಿಸಿದ್ದಾರೆ. ಮಂಗಳೆ-ಸರಸುವಿನ ಸುಮಧುರ ಸಂಗಮವಾಗಿ, ವಿಶ್ವನಾಥನ ಬಾಳು ಬದುಕಿನ ದಾರಿ ಹಿಡಿದಿದ್ದರೆ ಎಷ್ಟು ಚೆನ್ನಾಗಿತ್ತು ?—ಎಂದು ಓದುಗರು ಆಶಿಸುವಷ್ಟು ತುಂಬಾ ಸ್ವಾಭಾವಿಕ ರೀತಿಯಲ್ಲಿ ಸರಸುವಿನ ಪಾತ್ರವನ್ನು ಕತೆಗಾರರು ನಿರ್ಮಿಸಿದ್ದಾರೆ. ಮಗಳು ಸರಸುವಿನಷ್ಟೂ ವಿವೇಕವಿಲ್ಲದೆ, ಬುದ್ಧಿಶೂನ್ಯನಾಗಿ ಮಾಡಿದ ತಪ್ಪಿಗೆ ಇನ್ನೊಂದನ್ನು ಜೋಡಿಸಲೆಳಸುವ ಸರಸುವಿನ ತಂದೆಯ ಚಿತ್ರವೂ ಚೆನ್ನಾಗಿ ಚಿತ್ರಿತವಾಗಿದೆ. "ನನ್ನಲ್ಲೇ ನಂಗೆ ಬೇಸರವಾಗಿದೆ" ಎಂದು ಹೇಳುವ ವಿಶ್ವನಾಥನ ಮನೋವ್ಯಾಪಾರವೂ ಅಂದವಾದ ರೀತಿಯಲ್ಲಿಯೇ ವ್ಯಕ್ತವಾಗಿದೆ. "ಪಾಪ, ಆ ಹುಡುಗಿಯ ಪಾಡೇನು ಇನ್ನು ?" ಎಂದು ಮರುಗುವ ಮಂಗಳೆಯ ಮಾತು ಅವಳ ಸುಸಂಸ್ಕೃತತೆಯನ್ನು ಸುಂದರವಾಗಿ ಬಗೆಗಾಣಿಸುವುದಾದರೂ, ಅಂತಹ ಸಂದರ್ಭದಲ್ಲಿ ಈ ಮಾತು ಮಂಗಳೆಯ ಮುಖದಿಂದ ಹೊರಟುದು ಅಸ್ವಾಭಾವಿಕವೇನೋ—ಎಂಬ ಸಂದೇಹವೂ ತಲೆಯಿಕ್ಕದಿರದು.

ವಿಶ್ವನಾಥ-ಮಂಗಳೆಯರ ಸಂಭಾಷಣೆಗಳಾಗಲಿ, ಕತೆಗಾರ-ಲಲಿತೆಯರ ಮಾತು-ಕತೆಗಳಾಗಲಿ ಸರಸವಾಗಿವೆ. ಕಥೆಯ ಪ್ರಾರಂಭವೂ ಅಂದವಾಗಿದೆ. ಸರಳವಾದ ಭಾಷೆಯಲ್ಲಿ ಸುಂದರವಾಗಿ ಕಥೆ ಹೇಳಿಸಿಕೊಂಡೊಯ್ಯುವ ರೀತಿ ಒಳ್ಳೆಯದಾಗಿದೆ. ಕೊನೆಯದಾಗಿ ಕಥೆಯ ಮುಕ್ತಾಯವೂ ಸಹಜತೆಯೊಡಗೂಡಿದೆ. "ನಾಶೀಗಲೇ ಸಾಯುವುದಿಲ್ಲ—ಆಯುಸ್ಸು" ಎಂದು ಹೇಳುವ ವಿಶ್ವನಾಥನ ಮಾತು ಮನುಷ್ಯಜೀವನದ ರಹಸ್ಯವನ್ನೇ ಹಿಂಜಿ ತೋರುತ್ತದೆ. "ಭವಿಷ್ಯ ಪೂರ್ತಿಯಾಯ್ತು" ಎಂದು ಕತೆಗಾರರು ಹೇಳುವ ಮಾತು ಓದುಗರ ಮನದಲ್ಲಿ ಮಾಸದೇ ಉಳಿದು, ವಿಚಾರ ಮಂಥನಕ್ಕೆ ಎಡೆಗೊಡುತ್ತದೆ. "ವಿಚಿತ್ರರೀತಿಯಲ್ಲಿ". ಎಂದು ಮರುಹೇಳುವ ಲಲಿತೆಯ ಮಾತಿನೊಡನೆ ಓದುಗರು ದನಿಗೂಡಿಸದಿರರು. ಇಲ್ಲಿ ವ್ಯಕ್ತವಾದ ಮನಸ್ವಭಾವದ ಸೂಕ್ಷ್ಮ ಒಳಸಿರುಗೆಗಳನ್ನು ತಿಳಿಸು ಚಿತ್ರಿಸುವ ಕತೆಗಾರರ ಹದ ಮೊದಲಿನಿಂದಲೂ ಒದಗಿ ಬಂದಿದ್ದರೆ, ಕತೆಯ ಸ್ವರೂಪವೇ ಬದಲಾಗಬಹುದಿತ್ತೇನೋ ಎಂದು ಎನಿಸದಿರದು.

ಒಟ್ಟಾರೆ ಕತೆ ಒಳ್ಳೆಯದಾಗಿದೆ. ಇದಕ್ಕೂ ಉತ್ತಮವಾದ ಕಥೆಗಳನ್ನು ಕೆ. ಎ. ಎನ್. ರಾಯರಿಂದ ಕನ್ನಡ ಓದುಗರ ಪ್ರಪಂಚ ಬಯಸಿದರೆ ತಪ್ಪಾಗಲಿಕ್ಕಿಲ್ಲ.

(...ಳ ನೆಯ ಪುಟದಿಂದ ಮುಂದುವರಿದುದು)

ಇಲ್ಲದಿದ್ದರೆ ಕಸೂತಿ ಸಿದ್ಧವಾಗುವುದಕ್ಕಿಂತ ಮೊದಲೇ ಬಟ್ಟೆ ಕೊಳೆಯಾಗಿ ಬಿಡಬಹುದು. ಆದುದರಿಂದ ಮೊದಲಿಗೇ ಶಕ್ಯವಿದ್ದಷ್ಟು ಜಾಗರೂಕತೆ ವಹಿಸುವುದು ಒಳ್ಳೆಯದು.

ಚಿತ್ರಮೂಡಿಸುವುದು

ಇಷ್ಟಾದ ಬಳಿಕ ಮೊದಲನೆಯ ಕೆಲಸವೆಂದರೆ, ಬಟ್ಟೆಯ ಮೇ ತುಂಬಬೇಕಾದ ಚಿತ್ರವನ್ನು ಮೂಡಿಸುವುದು. ಇದು ಯಾ ಬಟ್ಟೆಯ ಮೇಲೆ ಚಿತ್ರವನ್ನು ಮೂಡಿಸುವುದಿರುವುದೋ, (ಬಟ್ಟೆಯ ಗುಣವನ್ನವಲಂಬಿಸಿರುತ್ತದೆ.

ತೀರ ತೆಳುವಾಗಿರದ, ದಟ್ಟವಾದ ನೇಯ್ಗೆಯ ಬಟ್ಟೆಯ ಮೇ ಚಿತ್ರವನ್ನು ಮೂಡಿಸುವುದಾದರೆ, ಆ ಬಟ್ಟೆಯನ್ನು ಮೊದ ಮೇಜಿನ ಮೇಲಾಗಲಿ, ಮಣೆಯ ಮೇಲಾಗಲಿ, ಎಲ್ಲಿಯೂ ಮುದ ಯಾಗದಂತೆ ಸಮನಾಗಿ ಹರಡಬೇಕು. ಬಳಿಕ ಯಾವ ಭಾಗದ ಚಿತ್ರವನ್ನು ಮೂಡಿಸುವುದಿರುವುದೋ ಆ ಭಾಗದ ಮೇ ಕಾರ್ಬನ್ ಕಾಗದವನ್ನು—ಬಣ್ಣದ ಮೈಯನ್ನು ಅರಿವೆಗೆ ಹೊಂ ಇಡಬೇಕು ಅದರ ಮೇಲೆ ಚಿತ್ರದ ಕಾಗದವನ್ನಿಟ್ಟು, ಪೆನ್ಸಿಲ್ಲಿನಿಂ ಕಾಗದ ಹರಿಯದಂತೆ ಗೆರೆಗಳನ್ನು ಒತ್ತಿಮೂಡಿಸಬೇಕು. ಹಿ ಮಾಡುವಾಗ ಬಟ್ಟೆ ಕಾಗದಗಳು ಅತ್ತಿತ್ತ ಸರಿದಾಡ ಸಂಭವವೂ ಇದೆ. ಅದಕ್ಕಾಗಿ ನಾಲ್ಕೂ ಬದಿಗೆ ಗುಂಡು ಸೂ ಗಳನ್ನು ಚುಚ್ಚಿ, ಗಟ್ಟಿಯಾಗಿ ಕೂಡಿಸಿದರೆ ಮತ್ತೂ ಒಳ್ಳೆಯ ಕಾರ್ಬನ್ ಕಾಗದವನ್ನಿಟ್ಟು ತೆಗೆಯುವುದರಿಂದ ಚಿತ್ರವು ಬಟ್ಟೆ ಮೇಲೆ ಸ್ಪಷ್ಟವಾಗಿ ಮೂಡುವುದು.

ವಾಯಿಲ್, ಮಲಮಲ್, ಆರ್ಗಂಡಿ, ಜಾರ್ಜೆಟ್ ಇವೇ ಮೊ ಲಾದ ಬಟ್ಟೆಗಳ ಮೇಲೆ ಚಿತ್ರ ಮೂಡಿಸುವುದಿದ್ದರೆ, ಕಾರ್ಬ ಕಾಗದದ ಆವಶ್ಯಕತೆಯೂ ಇಲ್ಲ. ಚಿತ್ರದ ಕಾಗದವನ್ನು ಮಣೆ ಮೇಲೆ ಇಟ್ಟು, ಅದರ ಮೇಲೆ ಬಟ್ಟೆಯನ್ನು ಸಮನಾಗಿ ಹರಡಿ ಬಟ್ಟೆಯ ಮೇಲೆಯೇ ಚಿತ್ರ ಸ್ಪಷ್ಟವಾಗಿ ಕಾಣುವುದು. ನ್ಯ ವಾದ ಪೆನ್ಸಿಲ್ಲಿನಿಂದ ಬಟ್ಟೆಯ ಮೇಲೆ ಚಿತ್ರವನ್ನು ಸ್ಪಷ್ಟವಾಗಿ ಮೂಡಿಸಬಹುದು. ಅಥವಾ ತಕ್ಕಮಟ್ಟಿಗೆ ದಪ್ಪವಾದ ಕಾಗ ಮೇಲೆ ಆ ಚಿತ್ರವನ್ನು ಮೊದಲು ಕಾರ್ಬನ್ನಿನ ಸಹಾಯದಿ ಮೂಡಿಸಿಕೊಳ್ಳಬೇಕು. ಬಳಿಕ ಆ ಕಾಗದದ ಮೇಲೆ ಚಿತ್ರ ಹೆಣೆ ಬೇಕಾದ ಬಟ್ಟೆಯನ್ನಿಟ್ಟು, ಎರಡನ್ನೂ ಬಿಗಿಯಾಗಿ ರಿಂಗು ಅಥ ಹಾಳತವಾದ ಕಟ್ಟಿಗೆಯ ಚೌಕಟ್ಟಿನಲ್ಲಿ ಕೂಡಿಸಿಯೂ, ಯಂತ್ರ ಹೆಣೆಯಬಹುದು. ಯಂತ್ರದಲ್ಲಿಯೇ, ಈ ಬಟ್ಟೆಯ ಮೇ ಮೊದಲು, ಚಿತ್ರದ ಬಾಹ್ಯರೇಖೆಗಳನ್ನಷ್ಟೇ ಬಣ್ಣದ ದಾರದ ಮೂಡಿಸಿಕೊಳ್ಳಬಹುದು. ಬಳಿಕ ಕಾಗದವನ್ನು ತೆಗೆದು ಬಟ್ಟೆಯ ಮೇಲೆ ಮೂಡಿದ ಚಿತ್ರದಲ್ಲಿ ತುಂಬಲೂ ಬರುವು ಜಾಳಿಗೆಯಂತಹ ಅರಿವೆ ಇದ್ದರಂತೂ ಇದೇ ಪದ್ಧತಿಯನ್ನೇ ಅ ಸರಿಸಬೇಕಾಗುವುದು.

ಅಗಸ್ಟ್ ೧೯೪೫ರ ನಮ್ಮ ಪ್ರಕಟನೆಗಳು

ವಾಯ್. ಎಂ. ಚಂದ್ರಯ್ಯ :

GE 8612	ಎಲ್ಲವರು ಮಾಡುವದು ಹೊಟ್ಟೆಗಾಗಿ ಕರೀ ಯಮ್ಮಿಯನು ಕಟ್ಟಿ

ಸಿದ್ಧರಾಮಪ್ಪ

GE 8613	ಬಿದ್ದಿಯ ಬೇ ಮುದಿಕಿ ಗಿರಿಯಲ್ಲದೆ

ಉಮರ್ಜಿ ಬೆಳಾಗಿ

GE 8625	ಬಸವೇಶ್ವರ ಸ್ತುತಿ ಬಸವೇಶಾ ಕಲ್ಯಾಣದ ಬಸವೇಶಾ

GE 8612 ತಮ್ಮ ನಟನಾ ನೈಪುಣ್ಯದಿಂದ ಕರ್ನಾಟಕಕ್ಕೆಲ್ಲ ಸುಪರಿಚಿತರಾದ ಶ್ರೀ. ವಾಯ್. ಎಂ. ಚಂದ್ರಯ್ಯನವರನ್ನು ಈ ರೆಕಾರ್ಡಿನಿಂದ ನಿಮಗೆ ಇನ್ನಿಷ್ಟು ಪರಿಚಯ ಮಾಡಿಕೊಡುತ್ತಿದ್ದೇವೆ. ಇವರು ಹಾಡಿದುದರಲ್ಲಿ ಒಂದು ದಾಸರ ಹಾಡು. ಇನ್ನೊಂದು ಸುಂದರ ಜಾನಪದ ಗೀತ. ಸುಮಧುರವಾದ ಸಂಗೀತ ಎಲ್ಲರ ಮನಸ್ಸನ್ನೂ ಆಕರ್ಷಿಸುವುದು.

GE 8613 ಇದೀಗ ಸಿದ್ಧರಾಮಪ್ಪನವರ ಮೊದಲನೆಯ ಧ್ವನಿಮುದ್ರಿಕೆಯಾದರೂ ಅವರು ತಮ್ಮ ಸಂಗೀತ ಪ್ರಾವೀಣ್ಯದಿಂದಲೂ ವಚನ ಗಾಯನದಿಂದಲೂ ಸುಪ್ರಸಿದ್ಧರಾಗಿದ್ದಾರೆ. ಇವರು ಹಾಡಿದುದರಲ್ಲಿ ಒಂದು ಶಿಶುನಾಳ ಶರೀಫ ಸಾಹೇಬರ ತತ್ತ್ವಪದ. ಇನ್ನೊಂದು ಮಹಾದೇವಿಯಕ್ಕನ ವಚನ.

E 8625 ಶ್ರೀ. ಮಧ್ವರಾಜ ಉಮರ್ಜಿಯವರು ತಮ್ಮ ರಘುಕಾರ ಲಾವಣಿಯ ರೆಕಾರ್ಡಿನಿಂದ ಲೋಕಪ್ರಿಯರಾಗಿದ್ದಾರೆ. ಅವರೇ ಈಗ ಶ್ರೀಮಾನ್ ಗರುಡ ಸದಾಶಿವರಾಯರು ರಚಿಸಿದ ಎರಡು ಸುಂದರ ಗೀತಗಳನ್ನು ಮನೋಹರವಾಗಿ ಹಾಡಿದ್ದಾರೆ.

ಆಮೇಲೆ ನಿರಾಶರಾಗಬೇಕಾದೀತು. ಮುಂಗಡವಾಗಿಯೆ ನಿಮ್ಮ ಬೇಡಿಕೆ ಕಳಿಸಿರಿ !

GE 8554	ಯಾರಿಗೆ ಯಾರಿಲ್ಲ–ತನಗಿಲ್ಲದಾ ವಸ್ತು.

ಈಗಾಗಲೆ ಹೊರಟ ಧ್ವನಿಮುದ್ರಿಕೆಗಳು

ಉಮರಜಿ ಸೋನೂಬಾಯಿ ಮತ್ತು ಪಾರ್ಟಿ

GE 8491 ರಿಂದ 8493	ಮಹಾತ್ಮಾ ಬಸವೇಶ್ವರ ಭಾಗ ೧–೬
GE 8455 ರಿಂದ 8457	ಶರಣ ಬಸವ ೬ ಭಾಗಗಳು
GE 8342 ರಿಂದ 8344	ಅಕ್ಕಮಹಾದೇವಿ ೬ ಭಾಗಗಳು

ಶ್ರೀ. ಸುಶೀಲಾ ಟೇಂಬೆ

GE 8568	ಜಯಕರ್ನಾಟಕ ಹಿಡಿ ಬಾವುಟವಾ
GE 8394	ಇದೇ ನಮ್ಮ ದೇವರ ಪೂಜೆ ಇದು ಸುದರ್ಶನ

ಶ್ರೀ. ಭಾಗವತ

GE 8409	ಏರಿತು ಗಗನಕೆ ನಮ್ಮ ಧ್ವಜ ಬಂತು ಬಂತು ಮಾಗಿ ಧಾಮ

ಕೋಲಂಬಿಯಾ ರೆಕೊರ್ಡ್ಸ

ಕೋಲಂಬಿಯಾ ಗ್ರಾಮೊಫೋನ ಕಂ., ಲಿ.

ಕಲಕತ್ತಾ * ಮುಂಬಯಿ * ದಿಲ್ಲಿ



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar – 2613-50.

ಜಯಂತಿ

JAYANTI

೮ ನೆ ಸಪ್ಟಂಬರ್ ೧೯೫೦

ಸಂಪುಟ ೧೩] ೧ನೆಯ ಸಪ್ಟಂಬರ್ ೧೯೫೦ [ಸಂಚಿಕೆ ೭

ಕನ್ನಡನಾಡಿನ ಅನುಭಾವಮಾರ್ಗ ದರ್ಶನಕಾರರು

ಡಾ. ಆರ್. ಡಿ. ರಾನಡೆಯವರು (ರಾಮಭಾವು ರಾನಡೆಯವರು)

(ಛಾಯಾಚಿತ್ರ ಎ. ಐ. ಆರ್. ಧಾರವಾಡ ಅವರ ಕೃಪೆಯಿಂದ)

ಜಯಂತಿ

JAYANTI

ಸಪ್ಟೆಂಬರ್ ೧೯೪೦

ವಾರ್ಷಿಕ ವರ್ಗಣಿ . . ೫—೦—೦
ಬಿಡಿಸಂಚಿಕೆ . . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ
ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್.ಜಿ. ಬೇಂದ್ರೆ
ಪ್ರಕಾಶಕರು— ಶ್ರೀ ಎಮ್. ವಿ. ಮಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೫೦	ಒಂದು ಸಲ
½	,,	,,	೨೭	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—o—

Rates for Advertising in Jayanti

Full Page	Rs.	50	Single Ins.
Half ,,	,,	27	,,
Quarter ,,	,,	15	,,
1/8 ,,	,,	8	,,

Concession rates for long term Contracts. For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಈ ಸಂಚಿಕೆಯಲ್ಲಿ:

ಮಾನವ ಹಕ್ಕಿ (ಕವನ)
ಎಸ್. ಎಸ್. ಬಸವನಾಳ ಎಂ.ಎ. ಗುಳೇದಗುಡ್ಡ ....

ಭಾರತ ಸ್ವಾತಂತ್ರ್ಯದ ನೂರುವರ್ಷಗಳು (ಸಂಪಾದಕೀ
ಸಂಪಾದಕರು ....

ನಗೀಗೆ ನೈವೇದ್ಯ
'ನಕಲೀ ನಾರಾಯಣಾಚಾರ್ಯ' ....

ಹೊಸನೋಟ (ಒಂದುಕತೆ)
ಶ್ರೀ. ವೆಂ. ಮು. ಜೋಶಿ, ಧಾರವಾಡ ... ...

ಕನ್ನಡ ನಾಟಕದ ಪ್ರಾರಂಭಕಾಲ (ಸಾಹಿತ್ಯವಿಚಾರ)
ಶ್ರೀ. ದ. ರಾ. ಬೇಂದ್ರೆ ಎಂ. ಎ. ಸೊಲ್ಲಾಪುರ ....

ಇದೊ, ಶ್ರಾವಣ ಬಂದಿದೆ! (ಕವನ)
'ಆನಂದಕಂದ' ....

ಧಾರವಾಡದಿಂದ ಉತ್ತರಕ್ಕೆ (ಪ್ರವಾಸಪ್ರಬಂಧ)
ಶ್ರೀ. ಬಿ. ಎಸ್. ದೊಡ್ಡಬಸಪ್ಪನವರ ಬಿ. ಎಸ್‌ಸಿ. (ಆಗ್ರಿ)

ತಂಬಿಟ್ಟು (ಶ್ರಾವಣ ರೂಪಕ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ....

ಜೀವನಶಿಕ್ಷಣದ ಹಿನ್ನೆಲೆ (ಶೈಕ್ಷಣಿಕ ಪ್ರಬಂಧ)
ಶ್ರೀ. ರತ್ನಾಕರ ಹಾವೇರಿ ಬಿ. ಎ., ಬಿ. ಟಿ. ಇತ್ಯಾದಿ

ಸ್ವಾತಂತ್ರ್ಯದ ಹುಟ್ಟುಹಬ್ಬ (ಕವನ)
'ಅಂಬಿಕಾತನಯದತ್ತ' ....

ಹರಿಜನ ಸೇವಾಸಕ್ತ ಕಾಕಾ ಕಾರಖಾನೀಸರು (ಪರಿಚಂ
ಶ್ರೀಮತಿ ಇಂದಿರಾ ಬಿ ರಾವ್ ಎಂ. ಎ. ಜಬಲ್ಪುರ

ಭಾರತವೇ ಬಾಪೂ (ಕವನ)
ಶ್ರೀ. ಮುದೇನೂರ ಸಂಗಣ್ಣ ಚಿಗಟೇರ ....

ಕಸೂತಿ ಕಲಿಯಬೇಕೆ? (ಹೊಲಿಗೆಯ ಕಲೆ)
ಕುಮಾರಿ ಸರೋಜಿನಿ ಮಹಿಷಿ ಎಂ. ಎ. ಧಾರವಾಡ....

ಚೆಲುವೆಯ ಚೆಲುವಿಕೆ
ಶ್ರೀ. ಅರವಿಂದ ರಾಜಪುರೋಹಿತ, ಹೊಂಬಳ ....

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಅನಂತ ಬುರ್ಲಿ, ಬಾಗಲಕೋಟ ....

ಪುಸ್ತಕವಿಮರ್ಶೆ (ತಾಯಿಯಕರುಳು)
ಶ್ರೀ. ವೆಂಕೋಬಾಚಾರ್ಯ ಬಿ. ಎ., ಬಿ. ಟಿ. ಹುಬ್ಬಳ್ಳಿ

ಸಾದರ ಸ್ವೀಕಾರ ....

ವರ್ಷ ೧೩ · ಸಪ್ಟಂಬರ್
ಜಯಂತಿ
ಸಂಚಿಕೆ ೪ · ೧೯೫೦

ಮನದ ಹಕ್ಕಿ

ಡಾ. ಎಸ್. ಎಸ್. ಬಸುಪಟ್ಟದ ಎಂ.ಎ. ಗುಳೇದಗುಡ್ಡ

★

೧

ಗರಿಗೆದರಿ ಹಾರುವುದೊ ಮನದ ಹಕ್ಕಿಯದು
ಭಾವಬಯಲಿನಲ್ಲಿ
ಬಗೆದೆರೆದು ನೋಡುವುದೊ ಸುತ್ತು ದೃಶ್ಯಗಳ
ವಿವಿಧ ರೀತಿಯಲ್ಲಿ
ಸುರಿಯುತಿಹುದೊ ವಿಧವಿಧದ ನೆನಹುಗಳ
ನನೆಯ ಜೇನುಧಾರೆ
ಸಂಗಮಿಸಿ ಬೆರೆದು ಹರಿಯುವುದೊ ಜೀವನದಿ
ವೈವಿಧ್ಯವ ದೀರೆ.

೨

ತುಯ್ಯಲಾಡುತಿಹ ಬಾಳಜೀಕವದು
ತೋರೆ ಎದುರು ಬಂದು
ಏಳು-ಬೀಳುಗಳು, ಹಗಲು-ಇರುಳುಗಳು
ಸುಳಿಯೆ ಕಣ್ಣಮುಂದು
ಕಣ್ಣಂಚಿನಲ್ಲಿ ಹನಿಗೂಡಿ ನಿಂದು ತಾ-
ನಶ್ರು ಬಿಂದುವೊಂದು
ಬಾಳಚರಿತೆಯನು ಹೊತ್ತು ತಂದು ಉಸಿ-
ರುವುದು ಎಲ್ಲ ನಿಂದು.

೩

ಅವರವರ ಆಟ ಅವರವರ ನೋಟ ಅವ-
ರವರಿಗಹುದು ಮಾಟ
ಈ ಆಟನೋಟ, ಈ ನೋಟ-ಕೂಟ ಬೇ-
ಡೆನಗೆ ಇದರ ಕಾಟ
ಎನ್ನದಿಹುದು ಬೇರೊಂದು ಆಟ ಬೇ-
ರವರ ದೃಷ್ಟಿಪಾಟ
ಮುಗಿಲಂಚ ದಾಟಿ ಇಹುದೆನ್ನ ಆಟ ಅದು
ಎನ್ನ ಬಾಳಬೇಟ.

೪

ಸುತ್ತು ನೆರೆದ ಜನವೆಲ್ಲ ಕೂಡಿ ಏ—
ನೇನೋ ಆಟ ಹೂಡಿ
ನಿಂತಿರಲು ಇಲ್ಲಿ ಮನವಿದನು ನೋಡಿ ತಾ
ಸಾಗುತಿಹುದು ಓಡಿ
ಮುತ್ತಿಹದು ಕೂಡ ನಡುದಾರಿಯಲ್ಲಿ ಮುಗಿ-
ಲೋಳಿ ಮುಗಿಲಿನಲ್ಲಿ
ಮನದ ಹಕ್ಕಿ ತಂಗುವುದು ಅಲ್ಲಿ ಆ
ಇಂದ್ರ ಲೋಕದಲ್ಲಿ.

೫

ಹಾರುತಿಹುದು ಹಗಲಿರುಳು ಮೀರಿ ಈ
ಭಾವಲೋಕ ಸಂಚಾರಿ !
ಮುಗಿಲಿನಾಚೆ ಮುಗಿಲಂಚ ಸೇರಿ ಮನ
ಹೋಗುತಿಹುದು ಹಾರಿ
ಬಿಸಿಲು-ತಂಪುಗಳನೆಲ್ಲವುಂಡು ತಾ-
ನೀಗ ಸಮತೆ ಕಂಡು
ಇಂದುಮಂಡಲದ ಸುಧೆಯನುಂಡು ದಿ-
ವ್ಯತೆಯ ಪಡೆದುಕೊಂಡು.

೬

ಗರಿಗೆದರಿ ಹಾರುವುದೊ ಮನದ ಹಕ್ಕಿಯದು
ಭಾವಬಯಲಿನಲ್ಲಿ
ಬಗೆದೆರೆದು ನೋಡುವುದೊ ಸುತ್ತು ದೃಶ್ಯಗಳ
ವಿವಿಧ ರೀತಿಯಲ್ಲಿ
ಸುರಿಯುತಿಹುದೊ ವಿಧವಿಧದ ನೆನಹುಗಳ
ನನೆಯ ಜೇನಧಾರೆ
ಸಂಗಮಿಸಿ ಬೆರೆದು ಹರಿಯುವುದೊ ಜೀವನದಿ
ವೈವಿಧ್ಯವ ದೀರೆ.



ಭಾರತ ಸ್ವಾತಂತ್ರ್ಯದ ಮೂರು ವರ್ಷಗಳು

ಕಳೆದ ಆಗಸ್ಟ್ ೧೫ ನೆಯ ದಿನಾಂಕಕ್ಕೆ, ಭಾರತ ಸ್ವಾತಂತ್ರ್ಯದ ಮೂರು ವರ್ಷಗಳು ಮುಗಿದು ನಾಲ್ಕನೆಯ ವರ್ಷದ ಮೊದಲು ದಿನವನ್ನು ಕಂಡಂತಾಯಿತು.

ರಾಜಕೀಯ ಪರಧಾಸ್ಯವು ಕ್ಷಣ-ಕ್ಷಣಕ್ಕೂ ನಮ್ಮ ಸುಖದ ಮಾರ್ಗದಲ್ಲಿಯೂ ಪ್ರಗತಿಯ ಮಾರ್ಗದಲ್ಲಿಯೂ ಅಡೆತಡೆಗಳನ್ನು ಒಡ್ಡುತ್ತಲಿದ್ದುದರಿಂದ, ರಾಜಕೀಯ ಸ್ವಾತಂತ್ರ್ಯ ಸಂಪಾದಿಸಲೇಬೇಕೆಂದು ನಾವು ನೂರಾರು ವರ್ಷಗಳಿಂದ ಹೋರಾಟ ನಡೆಯಿಸಿದೆವು. ಹೋರಾಟವನ್ನೊಂದು ಯಜ್ಞ—ತಪಸ್ಸು ಎಂದು ತಿಳಿದು ಹಲವು ಬಗೆಯ ತ್ಯಾಗಗಳನ್ನು ಮಾಡಿದೆವು. ಸ್ವಾತಂತ್ರ್ಯದ ಸವಿಬಾಳಿನ ಕನಸನ್ನು ಕಾಣುತ್ತ ಎಂತೆಂತಹ ತ್ಯಾಗಕ್ಕೂ ನಾವು ಸಿದ್ಧರಾದೆವು. ಮಹಾತ್ಮಾಜಿಯವರ ಸನ್ಮಾರ್ಗದರ್ಶನದಿಂದಲೂ ದಣಿವರಿಯದ ನಮ್ಮ ನಾಯಕರ ದುಡಿಮೆಯಿಂದಲೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗೆಲವನ್ನು ಪಡೆದೆವು. ೧೯೪೭ನೆಯ ಆಗಸ್ಟ್ ೧೫ಕ್ಕೆ ಅಖಿಲಭಾರತ ಸ್ವಾತಂತ್ರ್ಯೋದಯದ ಸಮಾರಂಭವನ್ನು ಎಲ್ಲರೂ ಕೂಡಿ ವಿಜೃಂಭಣೆಯಿಂದ ಜರುಗಿಸಿದೆವು. ಭಾರತದ ಆದ್ಯಂತ ಜನತೆ 'ಇನ್ನೇನು ಸುಖಸಾಗರದಲ್ಲಿ ಈಜಾಡುವೆವು' ಎಂಬ ಸಂಭ್ರಮದಿಂದ ಕುಣಿದಾಡಿತು.

ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಆದರೆ ಸ್ವಾತಂತ್ರ್ಯಸಿದ್ಧಿಯ ಮುಖ್ಯೋದ್ದೇಶವಾದ ಸುಖಜೀವನ ನಮ್ಮಲ್ಲಿ ಬಂದಿದೆಯೆ? ನಾವು ನಡೆಯುತ್ತಿರುವ ದಾರಿ ಪ್ರಗತಿಯದಾಗಿ ಕಾಣುತ್ತಿದೆಯೆ?

* * * *

ಸ್ವಾತಂತ್ರ್ಯದ ಸಾಧನೆಯಂತೆಯೆ ಅದರ ಸಂರಕ್ಷಣೆ-ಸಂವರ್ಧನೆಗಳಿಗಾಗಿಯೂ ನಾವು ಪ್ರಸಂಗವೊದಗಿದಾಗ ತ್ಯಾಗಮಾಡಬೇಕಾಗುವುದೆಂಬುದರ ಎಚ್ಚರು ನಮಗೆ ಇರಲೇಬೇಕು. ಭಾರತ ಸ್ವಾತಂತ್ರ್ಯದೊಂದಿಗೇ ನಾವು ಕೆಲವೊಂದು ಕಠಿಣವಾದ ತೊಡಕುಗಳನ್ನೂ ಕಟ್ಟಿಕೊಂಡು ಹೊರಟಿದ್ದೇವೆ. ಅಂತಹ ತೊಡಕುಗಳಲ್ಲಿ ಪ್ರಮುಖವಾದುದೆಂದರೆ ಪಾಕಿಸ್ತಾನದ ದಾಯಾದದ್ವೇಷ. ಎರಡನೆಯದೆಂದರೆ ಪಶ್ಚಿಮದ ಪ್ರಬಲರಾಷ್ಟ್ರಗಳ ಮೈತ್ರಿಯಲ್ಲಿ ಹುದುಗಿದ ಶತ್ರುತ್ವ-ಮತ್ಸರಗಳು. ಮೂರನೆಯದೆಂದರೆ ಜಾಗತಿಕ ಆರ್ಥಿಕ ಆಪತ್ತಿ. ರಾಜಕೀಯ ತತ್ತ್ವಪ್ರಣಾಲಿಗಳ ಹೆಸರಿನಿಂದ ಭಾರತದ ಹೊರಗೂ ಒಳಗೂ ನಡೆದಿರುವ ಪಕ್ಷ-ಪಂಗಡಗಳ ಕಲಹ ನಾಲ್ಕನೆಯದು. ಸ್ವಾತಂತ್ರ್ಯವನ್ನು ಸಂಪಾದಿಸುವಾಗ ಇದ್ದ ಆದರ್ಶನಿಷ್ಠೆ, ಸ್ವಜನಪ್ರೀತಿಗಳು ನಮ್ಮವರಲ್ಲಿ ನಷ್ಟವಾಗಿರುವುದು ಐದನೆಯದು. ಇವೆಲ್ಲ ತೊಡಕುಗಳು ತೀಕ್ಷ್ಣವಾಗಿ ತಲೆದೋರಿ, ಸುಖಜೀವನಕ್ಕಾಗಿ ಆಶಿಸಿಕೊಂಡಿದ್ದ ಭಾರತೀಯ ಬಹುಸಂಖ್ಯಾಕರನ್ನು, ಈ—ಸ್ವಾತಂತ್ರ್ಯದ ಕಾಲದಲ್ಲಿಯೂ—ಕಂಗೆಡಿಸಿ ಬಿಟ್ಟಿರುತ್ತವೆ. ಆದುದರಿಂದಲೇ ಪರಿಸ್ಥಿತಿಯ ಕಲ್ಪನೆಯನ್ನು ಮನದೆದುರು ತಾರದೆ ಅನರು 'ಇಂತಹ ಸ್ವಾತಂತ್ರ್ಯಜೀವನಕ್ಕಿಂತಲೂ ಹಿಂದಿದ್ದ ಪಾರತಂತ್ರ್ಯಜೀವನವೇ ಸುಖಕರವಾಗಿದ್ದಿತಲ್ಲ?,—ಎಂಬ ಅವಿವೇಕದ ಅವಿಚಾರದ ಉದ್ಗಾರಗಳನ್ನು ತೆಗೆಯುತ್ತಿರುವುದೂ ದೇಶದ ತುಂಬ ಆಗಾಗ ಕಿವಿಗೆ ಬೀಳುತ್ತಿರುವುದು.

* * * *

ನಮ್ಮ ಸ್ವಾತಂತ್ರ್ಯಯುದ್ಧದ ಇತಿಹಾಸವು ಒಂದು ವೈಚಿತ್ರ್ಯದಿಂದ ಕೂಡಿದುದಾಗಿದೆ. ಈ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ ಜನರಿಗಿಂತ, ಭಾಗವಹಿಸದೆ ಹೊರಗೆ ಉಳಿದಿದ್ದವರ ಸಂಖ್ಯೆಯೆ ಹೆಚ್ಚಾಗಿದ್ದಿತು. ಇನ್ನೂ ಹೆಚ್ಚಿನದೊಂದು ಮಾತೆಂದರೆ: ಇದ್ದ ಪಾರತಂತ್ರ್ಯವೇ ಮುಂದೆಯೂ ಇರಬೇಕೆಂಬ ಸ್ವಾರ್ಥಸಾಧಕರಿಗೂ ಆಗ ಕೊರತೆಯಿರಲಿಲ್ಲ. ಎಂತಲೆ ಕೊನೆಯ ಕ್ಷಣದ ವರೆಗೂ ಅವರು ಬ್ರಿಟಿಷ್ ಪಕ್ಷಪಾತಿಗಳಾಗಿದ್ದು, ಅವರಿಗೆ ತಮ್ಮ ಸಂಪೂರ್ಣ ಸಹಕಾರವನ್ನು ಕೊಡುತ್ತಲಿದ್ದರು. ಇಷ್ಟಾಗಿಯೂ ದೊರೆತ ಸ್ವಾತಂತ್ರ್ಯದಿಂದ, ಅಂತಹ ಜನರಿಗೆ ಆನಂದವಾಗುವುದರ ಬದಲು ಅಸಮಾಧಾನ-ಅತೃಪ್ತಿಗಳು ಉಂಟಾಗಿವೆ. ಇಂತಹ ಜನರೆಲ್ಲ ಸ್ವಾತಂತ್ರ್ಯಪೂರ್ವ ಭಾರತದ ರಾಜಕಾರ್ಯ, ಸಮಾಜಗಳಲ್ಲಿ ಮೇಲಿನ ಸ್ಥಾನವನ್ನು ಪಡೆದಿದ್ದರು. ಅಂದಿನ ಸ್ಥಾನಬಲದಿಂದ ದೊರಕಿಸಿದ ಆರ್ಥಿಕ ಅನುಕೂಲತೆಯ ಮೂಲಕ, ಈಗ ಕೂಡ ಜನಸಾಮಾನ್ಯರ ಮೇಲೆ ಇದ್ದ ಅವರ ಪ್ರಭಾವ ಕಡಿಮೆಯಾಗಿಲ್ಲ. ಈ ಅಸಂತುಷ್ಟ, ಅತೃಪ್ತ ಮನಸ್ಸಿನ ಜನರೂ ಇಂದು ನಮ್ಮ ಭಾರತಸ್ವಾತಂತ್ರ್ಯದ ದಾರಿಯಲ್ಲಿ ದೊಡ್ಡ ಕಂಟಕಿಗಳಾಗಿ ಕಾರ್ಯ ಮಾಡುತ್ತಲಿದ್ದಾರೆ. ಭಾರತ ಸ್ವಾತಂತ್ರ್ಯದ ವಿಷಯದಲ್ಲಿ ಜನಸಾಮಾನ್ಯರಲ್ಲಿ ಅಸಂತುಷ್ಟಿ ಪ್ರಚಾರವಾಗುವಂತೆ ಸೊಲ್ಲು-ಗುಲ್ಲು ಎಬ್ಬಿಸುವುದೇ ಇವರ ಇಂದಿನ ಕಾರ್ಯವಾಗಿದೆ.

* * * *

ಇನ್ನೊಂದು ಇಂತಹದೇ ಆದ ವೈಚಿತ್ರ್ಯವೆಂದರೆ, ರಾಷ್ಟ್ರೀಯ ಮಹಾಸಭೆಯು ಹೂಡಿದ ಕೊನೆಯ ಯುದ್ಧದಲ್ಲಿ ಅದಕ್ಕೆ ಗೆಲವು ದೊರೆಯುವುದೆಂಬುದನ್ನು ಮುಂಗಂಡು, ಅನೇಕ ಜನ ತತ್ತ್ವಬಾಹಿರರಾದ ಸ್ವಾರ್ಥಸಾಧಕರೂ ವಂಚಕರಾದ ಧೂರ್ತರೂ ರಾಷ್ಟ್ರೀಯ ಮಹಾಸಭೆಯ ಚಟುವಟಿಕೆಗಳಲ್ಲಿ ಸೇರಿಕೊಂಡು ಅದರ ಮಹತ್ತ್ವದ ಸ್ಥಾನಗಳನ್ನು ಬಹ್ವಂಶದಿಂದ ವಶಪಡಿಸಿಕೊಂಡುಬಿಟ್ಟಿರುವುದು. ಸಾಮಾನ್ಯವಾಗಿ ತಲೆಮಣಿಗಳನ್ನಷ್ಟು ಬಿಟ್ಟರೆ ಮಿಕ್ಕ ಕಾಂಗ್ರೆಸ್ಸಿಗರೆಲ್ಲ ಇಂದು ತತ್ತ್ವಬಾಹಿರರಾಗಿ ನಡೆಯುತ್ತಿರುವುದು ಬಹುಜನರು ಕಂಡುಂಡ ಮಾತಾಗಿದೆ. ಕಾಂಗ್ರೆಸಿನ

ತ್ರ್ಯದ ಹೆಸರಿನಿಂದ ಅಧಿಕಾರಗಳನ್ನು ಎಲ್ಲ ಕಡೆಯಲ್ಲಿಯೂ ಭರಿಸುವುದು; ಅವುಗಳ ಬಲದಿಂದ ತನ್ನ ಮತ್ತು ತನ್ನವರ ವಿಧಸ್ವಾರ್ಥಗಳನ್ನು ಸಾಧಿಸಿಕೊಳ್ಳುವುದು. ಇವರಿಂದ ಇಂದು ನ್ಯಾಯವು ಅನ್ಯಾಯವಾಗುತ್ತಲಿದೆ; ಅನ್ಯಾಯವು ನ್ಯಾಯವಾಗುತ್ತಲಿದೆ. ಇವರಿಂದಲೆ ಉಪ್ಪರಿಗೆಗಳು ತಿಪ್ಪೆಗಳಾಗುತ್ತಲಿವೆ; ತಿಪ್ಪೆಗಳು ಉಪ್ಪರಿಗೆಗಳಾಗುತ್ತಲಿವೆ. ಈ ಮಾತು ಮೇಲಾಳುಗಳಿಗೆ ಗೊತ್ತಾಗುತ್ತಲಿದ್ದರೂ, ಬರಲಿರುವ ಮಹಾಚುನಾವಣೆಯಲ್ಲಿಯ ಗೆಲುವಿನ ಆಶೆಯಿಂದಲೋ, ಯಾವುದಾದರೂ ಬೇರೆ ಬಗೆಯ ದಾಕ್ಷಿಣ್ಯಗಳ ಮೂಲಕವೋ— ನಡೆದಿರುವ ಅನ್ಯಾಯಗಳತ್ತ ಅವರು ಕೀಳ್ಗಣ್ಣಿನಿಂದ ನೋಡುತ್ತಿರುವರು. ನಾಡಿನಲ್ಲಿಯ ಪ್ರತಿಯೊಂದು ಜೀವನೋಪಯುಕ್ತ ವಿಭಾಗಗಳಲ್ಲಿಯೂ ಈ ಅರ್ಧಶಿಕ್ಷಿತ ಅಶಿಕ್ಷಿತ— ಜನರೇ ಅಧಿಕಾರಸೂತ್ರಗಳನ್ನು ವಹಿಸಿಕೊಂಡು, ಒಂದು ಬಗೆಯ ನೊಗಲಾಯಿಯನ್ನೇ ಎಲ್ಲೆಲ್ಲಿಯೂ ಎಳೆದು ಕೊಂಡಂತಾಗಿರುವುದು. ಭಾರತದ ಜನತೆಯ ಸುಖ-ಸಮಾಧಾನ ಜೀವನದ ಮಾರ್ಗದಲ್ಲಿ, ಈ ಅಧಿಕಾರಿಗಳಲ್ಲದ ಅಧಿಕಾರಿಗಳು ಬರೀ ಮುಳ್ಳುಕಲ್ಲುಗಳನ್ನು ಹರಡುತ್ತಿದ್ದಾರೆ.

* * * *

ಇವೆಲ್ಲ ಕಾರಣಗಳಿಂದಾಗಿ ಜನತೆ ಕಂಗೆಟ್ಟುಹೋಗಿದೆ. ಜನರ ಕಣ್ಣೆದುರಿದ್ದ ದೇಶಹಿತ—ಸಮಾಜಹಿತದ ಆದರ್ಶವು ಮರೆಯಾಗುತ್ತಲಿದೆ. ಸ್ವಾರ್ಥತ್ಯಾಗದ ಭಾವನೆಯೆ ನಷ್ಟವಾಗುತ್ತಲಿದೆ. ಮೊದಲೇ ನಮ್ಮ ಜನಸಾಮಾನ್ಯರು ರಾಜಕಾರಣ, ಸಮಾಜಕಾರ್ಯಗಳ ಕಡೆಗೆ ಉದಾಸೀನರು. ಸ್ವದೇಶ-ಸ್ವಸಮಾಜಹಿತದ ಭಾವನೆಗಳೂ ಕಡಿಮೆ. ಅದರಲ್ಲಿ ಸ್ವಾತಂತ್ರ್ಯವಿರೋಧಿಗಳಾದ ಸ್ವಾರ್ಥಸಾಧುಗಳು ಸಾಕಷ್ಟು ಬುದ್ಧಿಭೇದವನ್ನುಂಟುಮಾಡುತ್ತಿದ್ದಾರೆ. ಅವರ ಬುದ್ಧಿಭೇದದ ಮಾತು ನಿಜವೆಂದು ಅನುಭವಕ್ಕೆ ಬರುವಂತೆ ಕಾಂಗ್ರೆಸಿಗರ ಸ್ವೈರಾಚರಣೆ ನಿರಾತಂಕವಾಗಿ ನಡೆದಿದೆ. ಇಂತಹ ಗೊಂದಲಗೇಡಿ ಜನತೆಯಿರುವಲ್ಲಿ, ಯಾವ ಸ್ವತಂತ್ರ ಸರಕಾರದಿಂದಲೂ ವಿಧಾಯಕಕಾರ್ಯ ನಡೆಯುವ ಬಗೆ ಹೇಗೆ? ಮಂತ್ರಿವರ್ಗ ಎಷ್ಟೊಂದು ಧೀಮಂತವಿದ್ದರೂ ಅದರ ಸತ್ಪರಿಣಾಮವನ್ನು ಜನತೆ ಅನುಭವಿಸಬೇಕು ಹೇಗೆ? ಭಾರತ ಸ್ವಾತಂತ್ರ್ಯದ ಮೂರು ವರ್ಷಗಳೆಲ್ಲವೂ ಈ ಒಳ-ಹೊರಗಿನ ಅಡ್ಡಿ-ಆತಂಕಗಳನ್ನು ಎದುರಿಸುವುದರಲ್ಲಿಯೆ ಕಳೆದುಹೋಗಿವೆ. ಆಡಳಿತದಲ್ಲಿದ್ದು ಹೊಣೆಗಾರಿಕೆ ವಹಿಸಿದವರಿಗೂ ಸುಖ-ಸಮಾಧಾನಗಳಿಲ್ಲ; ಸ್ವಾತಂತ್ರ್ಯ ಸಿಕ್ಕಿದೆಯೆಂದು ಹುಸಿಹೆಮ್ಮೆಯಲ್ಲಿರುವ ಜನತೆಗೂ ಸುಖವಿಲ್ಲ. ಈ ಪರಿಸ್ಥಿತಿಯನ್ನು ಹೊಡೆದುಹಾಕುವ ಕರ್ತವ್ಯ ಜಾಗೃತಿ ನಮ್ಮೆಲ್ಲರಲ್ಲಿ ಮೂಡಿದಾಗಲೇ ಸ್ವಾತಂತ್ರ್ಯಸುಖದ ೧೦೦ ಕ್ಕೆ ೧೦೦ ಗುಣಗಳನ್ನೂ ನಾವು ಪಡೆಯಬಹುದು.

ಸದ್ಯದ ವಿಷಮಯ ಪರಿಸ್ಥಿತಿಯನ್ನು ನೋಡಿದರೆ, ಅಂತಹ ಸಂಪೂರ್ಣ ಸ್ವಾತಂತ್ರ್ಯದ ಸುಖವನ್ನು ಅನುಭವಿಸುವ ಕಾಲ ಬೇಗನೆ ಬಂದೀತೇ ?– ಎಂದು ಸಂದೇಹಗೊಳ್ಳುವಂತಿದೆ. ಭಾರತದ ಜನತೆಯೆಲ್ಲ ಪಕ್ಷ-ಪಂಗಡ ಭೇದಗಳನ್ನು ಮರೆದು, ಅಧಿಕಾರ ವ್ಯಾಮೋಹವನ್ನು ತೊರೆದು ದುಡಿಯಲು ಸಿದ್ಧರಾದ ಹೊರತು ಸಿಕ್ಕಿರುವ ಸ್ವಾತಂತ್ರ್ಯವಿದು ವ್ಯರ್ಥವೇ ಸರಿ !

ಧಾರವಾಡದಲ್ಲಿ ಆಧ್ಯಾತ್ಮ ಪರಿಷತ್ತು

ಕಳೆದ ತಿಂಗಳ ೨೭ನೆಯ ದಿನಾಂಕ ಬೆಳಗಿನ ೧೦ ಗಂಟೆಗೆ, ಧಾರವಾಡದ ಬಾಸೆಲ್ ಮಿಶನ್ ಹೈಸ್ಕೂಲಿನ ಸಭಾಭವನದಲ್ಲಿ, ಕರ್ನಾಟಕ ಆಧ್ಯಾತ್ಮ ಪರಿಷತ್ತು ಸೇರಿದ್ದಿತು. ಮಾನ್ಯ ದಿವಾಕರ ರಂಗರಾಯರು ಅಧ್ಯಕ್ಷರಾಗಿದ್ದರು. ಭಾರತದಲ್ಲೆಲ್ಲ ಮನ್ನಣೆಹೊಂದಿದ ಅನುಭಾವಮಾರ್ಗದರ್ಶನಕಾರರಾದ ಡಾ. ಆರ್. ಡಿ. ರಾನಡೆ, ನಿವೃತ್ತ ಉಪಕುಲಪತಿ, ಅಲ್ಲಾಬಾದ ವಿ. ವಿ. ನಿಲಯ ಅವರೂ ಪರಿಷತ್ತಿಗೆ ದಯೆಮಾಡಿಸಿ, ತಮ್ಮ ಆಳವಾದ ಅನುಭಾವದ ಅನುಭವಾಮೃತವನ್ನು ಉಣ್ಣಿಸಿದರು. ಅಂದೆಯೇ ಆಧ್ಯಾತ್ಮಭವನದ ಕರ್ನಾಟಕ ಶಾಖೆಯು ಪ್ರಾರಂಭವಾಯಿತು. ಆಧ್ಯಾತ್ಮಪ್ರಿಯರಾದ ಕನ್ನಡಿಗರು ಇದರ ಪ್ರಯೋಜನ ಪಡೆದುಕೊಳ್ಳಬೇಕು.

ಜಯಂತಿಯ ಮೊರೆಗೆ ಜನತೆಯ ಉತ್ತರ

(ಅಗಸ್ಟ ತಿಂಗಳಲ್ಲಿ ಚಂದಾದಾರರನ್ನು ಒದಗಿಸಿಕೊಟ್ಟವರು)

ಶ್ರೀ. ಕೆ. ವಿ. ಸುಬ್ಬಣ್ಣ ಮುಂಡಿಗೆಸರ ೧

ಶ್ರೀ. ಬ. ಗಿ. ಯಲ್ಲಟ್ಟಿ, ಬನ್ಹಟ್ಟಿ ೧

ಶ್ರೀ. ಎಂ. ಎನ್. ಕುಲಕರ್ಣಿ, ಸಾಂಗಲಿ ೧

(ಇನ್ನೂ ೬-೮ ಜನ ಚಂದಾದಾರರನ್ನು ಕೂಡಿಸಿಕೊಡುವುದಾಗಿ ಕಾಗದ ಬರೆದಿದ್ದಾರೆ ಶ್ರೀ. ಕುಲಕರ್ಣಿಯವರು.)

Messrs HOUSE OF COMMERCE

PUBLICITY EXPERTS & COMMERCIAL ARTISTS

257/c BUDHWAR PETH;

Opposite Faraskhana Howd, POONA 2.

WE DEAL IN

Designs, Blocks, Slides, Painting, Printing, Rubber-Stamps and Advertising of any kind.

ನಗೀಗೆ ನೇವಿದ್ಯಾ

೧

ಶಿಕ್ಷಕ:— ಅಲ್ಲೋ ಗುಂಡಾ, ಈ ತಪ್ಪಿದ ಇಂಗ್ಲಿಷ್ ಶಬ್ದಾನ್ನ ನಿನಗ ಇಪ್ಪತ್ತು ಸಾರೆ ಬರಕೊಂಡು ಬಾ—ಅಂತ ಹೇಳಿದ್ದೆ. ಆದರ ನೀನು ಹದಿನೆಂಟೇ ಸಾರಿ ಬರಕೊಂಡು ಬಂದೀದಿಯಲ್ಲಾ?

ಗುಂಡ:— ಇಂಗ್ಲೀಷಿನ್ಹಾಂಗs ನನ್ನ ಗಣಿತನೂ ಕಚ್ಚಾ ಆದನ್ರಿ ಸರ್!

೨

ಡಾಕ್ಟರ್:— ಈ ನಿದ್ದೀ ಗುಳಿಗೀ ತೊಗೊಳ್ಳೂದನ್ನ ನೀವು ನಿಲ್ಲಿಸಿ ಬಿಡಲಿಕ್ಕೇ ಬೇಕು. ಇಲ್ಲದಿದ್ದರ, ಅದರದು ಕಾಯಂ ಚಟಾನs ಬೀಳತsದ ನಿಮಗ.

ರಾಯರು:— ಛೀ ಛೀ ಛೀ! ನೀವು ತಪ್ಪು ತಿಳಕೊಂಡಿದ್ದೀರಿ ಡಾಕ್ಟರ್! ಈಗ ಇಪ್ಪತ್ತು ವರ್ಷಾತು.... ಒಂದು ದಿನಾ ಬಿಡದs ಪ್ರತಿ ರಾತ್ರಿ, ತಪ್ಪದs ಈ ಗುಳಿಗೀ ತೊಗೋಳತs ಬಂದೀನಿ. ಆದರ ನನ ನೇನೂ ಅದರ ಚಟಾ ಅಂತ ಬಿದ್ದಿಲ್ಲ.

೩

ದೇವದಾಸ ಸಿನೇಮಾ ನೋಡಿ, ಸಿನೇಮಾ ಗೃಹದಿಂದ ರಮಾ ಸುಮಾ ಇಬ್ಬರೂ ಹೊರಬಿದ್ದರು. ಸುಮೆಯ ಕಣ್ಣಲ್ಲಿ ಕಂಬನಿಯ ಒಂದು ಗುರುತೂ ಕಾಣದುದನ್ನು ನೋಡಿ ರಮೆಯು ಕೇಳಿದಳು:

ರಮಾ:— ಎಂಥಾ ದುಃಖದ ಕಥೆಯವ್ವಾ ಇದು? ಆದರೂ ನಿನ್ನ ಕಣ್ಣಾಗ ಒಂದ ಹನಿ ನೀರು ಸುದ್ದಾ ಬರದೇ ಇರೂದು ಆಶ್ಚರ್ಯದ ಮಾತು.

ಸುಮಾ:— ಹಾಂಗಲ್ಲs ರಮಾ! ನಾನೂ ಅಳುವಾಕಿನs! ಆದರ ಈಗಲೇ ನನಗ ಫಡ್ನೀಸರ ಮನಿಗೆ ಪಾರ್ಟೀಗೆ ಹೋಗಬೇಕಾಗೇದ. ಮತ್ತ ಎಲ್ಲಿ ಸ್ನೋ-ಪಾವುಡರು ಮಾಡಿಕೊಳ್ಳಲಿಕ್ಕೆ ಆಗತsದ ನೋಡು!

೪

ಒಬ್ಬ ಶೇಖ ರಖವಾಲದಾರನು ಸುಬ್ರಾವುಸೆಟ್ಟರ ಮನೆಯಲ್ಲಿ ಕೆಲಸಕ್ಕೆ ಇದ್ದ. ಎಷ್ಟೋ ವರ್ಷಗಳಾದ ಮೇಲೆ, ಆತ ತನ್ನ ಸಂಬಳ ಹೆಚ್ಚಿಸಬೇಕೆಂದು ಬಿನ್ನವಿಸಿಕೊಂಡ. ಆಗ ಸೆಟ್ಟರು ಹೇಳಿದರು:

"ಏನಪಾ, ನೀನು ಸಂಬಳಾ ಹೆಚ್ಚಿಸಬೇಕಂತ ಹೇಳಿಕೋತೀದಿ! ಆದರ ನೀನು
ನಿಜವಾಗಿಯೂ ಕೆಲಸಾ ಎಷ್ಟು ಮಾಡ
ಅಂಬೂದರ ಲೆಕ್ಕಾ ಎಂದಾರೇ ಹಾ
ನೋಡೀದೀಯೇನು? ಈಗ ನೀನs ನೋ
ಲ್ಲೆ: ವರ್ಷಕ್ಕ ೩೬೫ ದಿವಸ. ಅ
ರೊಳಗ ದಿನಾ ೮ ತಾಸಿನಂತೆ ಅಂ
ಒಂದು ಮೂರಾಂಶ ವರ್ಷ ನಿದ್ದಿಯೊ
ಹೋತೇನಪಾ! ಅಂದರ ಎಷ್ಟು ದಿ
ಅಂತೀ? ೧೨೨ ದಿವಸ. ಇವನ್ನ
ದರ ಉಳಿದೂ ೨೪೩ ದಿವಸ. ಅ
ರೊಳಗ ಮತ್ತ ಎಂಟು ತಾಸು ನಿನ್ನ ಮ
ಕೆಲಸ, ಆಟಾ-ನೋಟಾ ಇದರಾಗ ಕಳೆ
ಅಂದರ ಮತ್ತ ೧೨೨ ದಿವಸ ಹೋ
ಇನ್ನ ಉಳಿದ ದಿನಸ ಅಂದರ ೧
ಮಾತ್ರ. ಆದರೊಳಗ ೫೨ ರವಿವಾ
ಸೂಟಿ, ಮ್ಯಾಲ ಮುಖ್ಯ ಮುಖ್ಯ ಹ
ಗಳ ದಿನದ ಸೂಟಿ ಕೂಡಿ ೬೬ ದಿ
ಹೋಗಿ ಬಿಟ್ಟೊ. ಇನ್ನ ಉಳಿದ
ಅಂದರ ೫೫ ದಿನ. ಆದರೊಳಗಿಂದ
ವಾರದ ಅರ್ಧಾ ದಿನದ ಸೂಟೀವು
ದಿವಸಾ ಕಳದರ, ಬರೀ ೨೯
ಉಳೀತು. ಮತ್ತ ದಿನಾ ಮ
ದೊಳಗ ಒಂದು ತಾಸು ಊಟದ ಪಾ
ಹಿಡದರ, ವರ್ಷಕ್ಕ ೧೫ ದಿನಾ ತ
ತಾವ. ಆ ಮ್ಯಾಲ ಉಳೀತೆಷ್ಟು?
೧೪ ದಿನಾ. ನೀನು ವರ್ಷದೊಳಗ
ದಿನಾ ಚಿಲ್ಲರು ರಜಾ ತೊಗೋತಿಯ
ಅಂದಮ್ಯಾಲ, ನೀನು ಪ್ರತ್ಯಕ್ಷ ಕೆ
ಮಾಡೂ ದಿನಾ ಅಂದರ ಒಂದೇ ಒ
ಈ ಒಂದೇ ಒಂದು ದಿವಸಕ್ಕಾಗಿ
ವರ್ಷದುದ್ದಕ್ಕೂ ತಪ್ಪದs ಸ
ಕೊಡಬೇಕಾಗತsದ. ಹೀಗಿದ್ದೂ
ಮತ್ತೂ ಸಂಬಳಾ ಹೆಚ್ಚಿಸರೀ
ಯಲ್ಲೋ?"

ಯಜಮಾನರ ತಪ್ಪು-ತಡೆ
ಲೆಕ್ಕಾಚಾರವನ್ನು ಕೇಳಿ ಶೇಖನಿಗೆ
ದೊಡ್ಡ ಪ್ರಶ್ನೆ: 'ನಾನು ವ
ಒಂದೇ ಒಂದು ದಿನ ದುಡಿಯುವೆ
ಮಿಕ್ಕ ದಿನಗಳಲ್ಲಿ ಇಲ್ಲಿ ಯಾರು ದ
ತ್ತಾರೆ?'—ಎಂದು.

ಹೊಸ ನೋಟ

(ಒಂದು ಕತೆ)

ಶ್ರೀ. ನೆಂ. ಮು. ಜೋಶಿ, ಧಾರವಾಡ

★

ಅನುಭವದ ಉತ್ಕಟತೆ ಮಾನವನ ಸ್ವಭಾವವನ್ನೇ ಮಾರ್ಪಡಿಸುತ್ತಿರುತ್ತದೆ. ಅಹಿಂಸೆಯ ವಿಚಾರದಲ್ಲಿ ತೀಕ್ಷ್ಣಶ್ರದ್ಧೆಯಿದ್ದ ಡಾ. ಬರುವಾ ಅವರು, ಹಿಂಸೆಗೆ ಮನಸ್ಸು ಮಾಡಿದರು ಒಂದು ಅನುಭವದಿಂದ. ಮತ್ತೆ ಇನ್ನೊಂದು ಅನುಭವ ಅವರ ಕೈಯಿಂದಾಗುತ್ತಿದ್ದ

ಕೊಲೆಯನ್ನು ನಿಲ್ಲಿಸಿಬಿಟ್ಟಿತು.

★

ಇಂದು ಡಾಕ್ಟರ್ ಮೇಜರ್ ಬರುವಾ, ಹೊಸದಾಗಿ ಈ ಮಿಲಿಟರೀ ಆಸ್ಪತ್ರೆಗೆ ವರ್ಗವಾಗಿ ಬರುವವರಿದ್ದರು. ಎಲ್ಲ ವಾರ್ಡನ್ಸ್, ಪರಿಚಾರಕರು, ಮತ್ತು ಇಬ್ಬರು ಮೂವರು ಚೀನೀ ನರ್ಸುಗಳು ತಮ್ಮ ಹೊಸ ಅಧಿಕಾರಿಯನ್ನು ಸ್ವಾಗತಿಸಲು ಸಿದ್ಧ-ರಾಗಿದ್ದರು. ಅಲ್ಲಿದ್ದ ಮೊದಲಿನ ಡಾಕ್ಟರು ಕೆಲಸದಿಂದ ನಿವೃತ್ತ-ರಾಗಿ ಭಾರತಕ್ಕೆ ಈ ಮೊದಲೇ ಮರಳಿದ್ದರು. ನಾನು ಆಸ್ಪತ್ರೆಯ ಯಾವುದೇ ಅಧಿಕಾರಿ ವರ್ಗದವರಲ್ಲಿ ಸೇರಿರದಿದ್ದರೂ, ಹಳೆಯ ಡಾಕ್ಟರರನ್ನು ಬೀಳ್ಕೊಡುವ ಸಮಾರಂಭಕ್ಕೂ ಹೊಸಬರನ್ನು ಸ್ವಾಗತಿಸುವ ಸಭೆಗೂ 'ಹಾಜರ್' ಇದ್ದೆ. ಮಲಾಯಾದಲ್ಲಿ ಮಲೇರಿಯಾ ಬೇನೆಯಿಂದ ಮೂರು ತಿಂಗಳು ಮಂಚದ ಮೇಲೆ ಇದ್ದುದೇ ಇದಕ್ಕೆ ಕಾರಣ.

೧೯೪೫ ರ ಅರ್ಧ ವರುಷ ಸಂದು ಹೋಗಿತ್ತು. ಮಹಾಯುದ್ಧದ ಮುಕ್ತಾಯವಾಗಿತ್ತು. ಜಾವಾದಲ್ಲಿಯ ಗಲಭೆಯೊಂದನ್ನು ಬಿಟ್ಟರೆ ಜಗತ್ತಿನ ಇತರ ಮೂಲೆಗಳಲ್ಲಿ ಶಾಂತಿ ನೆಲಸಿತ್ತು. ಗಮರದ ಕಾಲದಲ್ಲಿ ಎದ್ದ ಉರಿಯಿಂದ ಬಿದ್ದ ಕೆಂಡಗಳನ್ನು ಆರಿಸುವುದಕ್ಕೆ ನಾವು ಮಲಾಯಾ ಸೇರಿದ್ದೆವು. ಯುದ್ಧೋತ್ತರ ಪುನರ್ಘಟನೆ-ಗಾಗಿ ಮಲಾಯಾಕ್ಕೆ ಭಾರತದ ಏಳನೆಯ ಪಡೆಯೊಂದಿಗೆ ನಾನು ಹೋಗಿದ್ದೆ. ಯುದ್ಧವೇನೋ ಆಗ ಮುಗಿದು ಹೋಗಿತ್ತು; ಆದರೆ ಪರಿಸ್ಥಿತಿ ಪ್ರತಿಕೂಲವಾಗಿ ಬಿಟ್ಟಿತ್ತು. ಬಾಂಬಿನ ಬೆಂಕಿಯಲ್ಲಿ ಒಂದೇ ಒಂದು ಕ್ಷಣದಲ್ಲಿ ಸಾಯುವುದು ಲೇಸು; ಆದರೆ ಆ ಬೆಂಕಿಯ ಸೆಕ್ಕೆ ಬೆಂದು ಬಳಲಿ ನರಳಿ ಸಾಯುವುದು ಬೇಡವಾಗಿತ್ತು. ಮಲಾಯಾದ ಪರಿಸ್ಥಿತಿ ಹೀಗೆ ಆಗಿತ್ತು : ಮಹಾಯುದ್ಧ ಮುಗಿದ ಬಳಿಕ ಮಲಾಯಾದಲ್ಲಿ ಮನೆಗೊಬ್ಬ ಕಮ್ಯುನಿಸ್ಟ್, ಮಾರಿ-ಗೊಬ್ಬ ದರೋಡೆಕೋರ. ವಿಶ್ವನಾಟಕದ ರಂಗಭೂಮಿಯಲ್ಲಿ ಅವೇ ಆಗ ಕಾಲಿಡಬೇಕೆಂದು ಹವಣಿಸುತ್ತಿರುವ ಶಾಂತಿ-ದೇವಿಯ ಮುಖಕ್ಕೆ ಈ ಪುಂಡರು ಮಸಿ ಬಳೆಯಲು ಯತ್ನಿ-ಸುತ್ತಿದ್ದರು. ಇಂತಹ ಜನರೊಂದಿಗೆ ದಿನವೂ ನಡೆಯುತ್ತಿರುವ ವ್ಯವಹಾರಕ್ಕೆ ಬೇಸತ್ತು ಹೋಗಿದ್ದೆವು. ಇದಲ್ಲದೆ ನಿಸರ್ಗದ ಪ್ರತಿಕೂಲ ಪರಿಸ್ಥಿತಿಯೂ ನಮ್ಮನ್ನು ಕಾಡುತ್ತಿತ್ತು. ಮಲಾಯಾ ದೇಶದಲ್ಲಿ ಬಿಸಿಲು ಮಳೆಯ ಹೊರತು ಚಳಿಯ ಮಾತೇ ಇರಲಿಲ್ಲ. ದಿನವೂ ಮಳೆ, ದಿನವೂ ಬಿಸಿಲು. ಹನ್ನೆರಡೂ ತಿಂಗಳೂ ಇದೇ ಹಾಡು. ಊರು ಬಿಟ್ಟು ಸ್ವಲ್ಪ ಮುಂದೆ ಸರಿದರೆ, ಕೈಮುಟ್ಟದ ದಟ್ಟ ಕಾಡುಗಳು. ಮನುಷ್ಯನ ತಲೆಯ ವರೆಗೂ ಹುಲ್ಲೇ ಸೊಕ್ಕಿ-ನಿಂದ ಬೆಳೆಯುತ್ತಿತ್ತು ; ಇನ್ನು ಬೇರೆ ಗಿಡಗಳ ಮಾತೇ ಬೇಡ. ರಾಜಮಾರ್ಗಗಳಲ್ಲಿ ಹಾಯುವಾಗ, ಎಡ ಬಲ ಬದಿಗೆ ಅತಿ ಎತ್ತರ ಕಪ್ಪು ಗೋಡೆಗಳನ್ನು ಕಟ್ಟಿದಂತೆ ಭಾಸವಾಗಿ ಬಿಡುತ್ತಿತ್ತು. ಇಂಥ ಭಯಾನಕ ರುದ್ರ ಅರಣ್ಯಗಳಲ್ಲಿ ಕೂಡ ಒಂದು ಬಗೆಯ ಜನ — ಜನ ಎನ್ನುವುದಕ್ಕಿಂತಲೂ ಜಾನುವಾರುಗಳೆಂದರೂ ಸರಿಯೆ— ವಾಸಿಸುತ್ತಾರೆ. ಅವರಿಗೆ ಜಾತಿ ಇಲ್ಲ, ದೇವರು ಇಲ್ಲ. ಮೇಲು ಇಲ್ಲ, ಕೀಳು ಇಲ್ಲ. ಎತ್ತರೆತ್ತರವಾದ ಮರಗಳ ಮೇಲೆ ಮನೆ ಕಟ್ಟುತ್ತಾರೆ. ಬಾಣಗಳನ್ನು ಊದಿ ಬಿಡುವುದು ಇವರ ಪರಿಪಾಠ. ಬೇಟೆ ಮಾಡಿ ಹೊಟ್ಟೆ ಹೊರೆದುಕೊಳ್ಳುವರು. ಇವರನ್ನು ಮಲಯದ ಜನ "**ಸಕಾಯಿ**" ಎಂದು ಕರೆಯುತ್ತಾರೆ. ಇಂಥ ಕಾಡು ಜನರ ಜತೆ-ಯಲ್ಲಿ ಜಪಾನಿಗಳು, ಪ್ರಯಾಸ ಪಟ್ಟು ಸಹವಾಸ ಮಾಡಿ ಸಾಹಸ ತೋರಿದರು ಇಂಥ ಜಪಾನಿಗಳಿಗೆ ಎದುರಾಳಿಗಳಾಗಿ ಅವಿಶ್ರಾಂತ ಹೋರಾಡಿದ ಚೀನಿ ಕೆಲವು ಕಮ್ಯುನಿಸ್ಟರು, ತಾವು ಕಲಿತ ವಿದ್ಯೆಯ ಪ್ರಭಾವದ ಪ್ರಯೋಗವನ್ನು ನಮ್ಮ ಮೇಲೆ ಮಾಡತೊಡಗಿದ್ದರು. ಇಷ್ಟು ಇದ್ದರೂ, ಪ್ರತಿ ಭಾರತೀಯನೂ ಇದ್ದಷ್ಟು ದಿನ ಎದೆ ತಟ್ಟಿಯೇ ನಿಂತು ಕೊಂಡಿದ್ದ. ಆದರೂ ನಿಸರ್ಗ ತನ್ನ ಆಟ ತೋರಿಸುತ್ತಿತ್ತು.

ಮಲಾಯಾಕ್ಕೆ ಬಂದು ಮೂರು ಮಾಸಗಳಲ್ಲಿಯೇ ನಮ್ಮಲ್ಲಿ ಅನೇಕರಿಗೆ ಮಲೇರಿಯಾ ಅಂಟಿಕೊಂಡಿತು. ನಾನೂ ಅವರಲ್ಲೊಬ್ಬ-ನಾಗಿದ್ದೆ. ನಾವು ಆಗ ಪಾಳೆಯ ಹಾಕಿದ್ದುದು ಮಲಾಯದ ಪೂರ್ವ ಭಾಗಕ್ಕೆ, ಚೀನೀ ಸಮುದ್ರದ ದಂಡೆಯ ಮೇಲಿನ ಕ್ವಂಟನ್ ನಗರ-ದಲ್ಲಿ. ಕ್ವಂಟನ್ ಒಂದು ವಿಚಿತ್ರ ಊರು. ಒಂದು ಬದಿಯಲ್ಲಿ ಸಾಗರ, ಮೂರು ಬದಿಗೆ ಮೂರು ಮಹಾನದಿಗಳು. ಆ ನದಿಗಳು ಸೊರಗಿದ ದಿನಗಳನ್ನೇ ಅಲ್ಲಿಯ ಜನ ಕಂಡಿರಲಿಲ್ಲವಂತೆ. ಸದಾ-ಕಾಲ ತುಂಬಿ ಹರಿಯುತ್ತಿದ್ದವು. ಆದರೂ ಒಂದೂ ಹೊಳೆಗೂ ಸೇತುವೆ ಕಟ್ಟಿರಲಿಲ್ಲ. ಫೆರಿ (Ferry) ಯ ಸಹಾಯದಿಂದಲೇ ವ್ಯವಹಾರ ಸಾಗುತ್ತಿತ್ತು. ಒಂದೊಂದು ಸಲ ಫೆರಿಗಳು ಮುಳು-ಗಿಯೋ ಕೆಟ್ಟೋ ಕಟ್ಟಾದುವು ಎಂದರೆ, ನಮ್ಮ ಕ್ವಂಟನ್ ನಗರ ಅಂದಮಾನವಾಗಿ ಬಿಡುತ್ತಿತ್ತು. ಇಂಥ ಊರಲ್ಲಿಯೇ ಮಲೇ-ರಿಯಾ ಅಂಟಿದ್ದು. ಅದೇ ಊರಲ್ಲಿದ್ದ ಮಿಲ್ಟ್ರಿ ಆಸ್ಪತ್ರೆಗೆ ಸೇರಿ-

ಕೊಂಡೆವು. ಆಸ್ಪತ್ರೆ ಅಷ್ಟೇನೂ ದೊಡ್ಡದಾಗಿರಲಿಲ್ಲ. ಒಬ್ಬನೇ ಒಬ್ಬ ಡಾಕ್ಟರ್; ಇಬ್ಬರು ಅಸಿಸ್ಟಂಟ್ ವಾರ್ಡನ್ಸ್, ಐದಾರು ಜನ ಪರಿಚಾರಕರು, ಒಬ್ಬಿಬ್ಬರು ಚೀನೀ ಪರಿಚಾರಿಕೆಯರು (ನರ್ಸ್). ಆಸ್ಪತ್ರೆಯಲ್ಲಿ ಮುವತ್ತೈದು ನಾಲ್ವತ್ತು ಮಂಚಗಳು. ಯಾವಾಗಲೂ ಅವು ಖಾಲಿ ಉಳಿಯುತ್ತಿರಲೇ ಇಲ್ಲ. ಎಲ್ಲರೂ ಭಾರತೀಯ ಸೈನಿಕರೇ. ಅದರಲ್ಲಿಯೂ ಕ್ಯಾಂಟೀನ್ ಪಡೆಗಳಲ್ಲಿ ಹೆಚ್ಚಾಗಿ ಪಂಜಾಬೀ ಮದ್ರಾಸಿಯರೇ ತುಂಬಿಹೋಗಿದ್ದರು. ನಾನು ಈ ಆಸ್ಪತ್ರೆಯಲ್ಲಿ ಬಿದ್ದುದು ಒಂದೂವರೆ ತಿಂಗಳ ಮೇಲಾಗಿ ಹೋಗಿತ್ತು. ಹಳಬರು ಹೋಗಿ ಹೊಸಬರು ಬರುವ ಹೊತ್ತಾದರೂ ನಾನು ನನ್ನ ಮಂಚ ಬಿಟ್ಟು ಕದಲಲಿಲ್ಲ. ಇಂದೇ ಹೊಸ ಡಾ. ಮೇಜರ್ ''ಬರುವಾ'' ಬರುವವರು.

ಆಸ್ಪತ್ರೆಯ ಪರಿಚಾರಕ ತಂದುಕೊಟ್ಟ ಊಟ ಮುಗಿಸಿ, ನಾವೆಲ್ಲ ನಮ್ಮ ಮಂಚದ ಮೇಲೆಯೇ ಕುಳಿತು, ಬರುವಾ ಅವರನ್ನು ಸ್ವಾಗತಿಸಲು ಸಿದ್ಧರಾಗಿದ್ದೆವು. ಗಡಿಯಾರದ ಮುಳ್ಳು ಹತ್ತನ್ನು ಬಿಟ್ಟು ಮುಂದೆ ಸರಿಯುತ್ತಿತ್ತು. ಜೀಪ್ ಟ್ರಕ್ ಬಂದ ಸಪ್ಪಳವಾಯಿತು. ಸಪ್ಪಳವಡಗಿದ ಕೆಲ ನಿಮಿಷಗಳಲ್ಲಿ ಮೇಜರ್ ಬರುವಾ ನಮ್ಮ ಹಾಲಿನಲ್ಲಿ ಕಾಲಿಟ್ಟರು. ನಾವೆಲ್ಲರೂ ಕೂತಲ್ಲಿಂದ ಸ್ವಾಗತಿಸಿದೆವು. ಮೇಜರ್ ಬರುವಾ ಮುದುಕರಿರಬಹುದು ಎಂದು ನಾವೆಲ್ಲ ಲೆಕ್ಕ ಹಾಕಿದ್ದೆವು; ಆದರೆ, ಬರುವಾ ಅ ಮುಖದ ಮೇಲಿಂದ ೨೭–೩೦ ರ ಒಳಗಿನವರೆಂಬುದನ್ನು ಕಂ ಹಿಡಿದೆವು. ಮೇಜರ್ ಬರುವಾ ಗಂಭೀರವದನರಾಗಿಯೇ ಸ್ಮಿಗೈದರು.

“ಎಲ್ಲಕ್ಕೂ ಹಳೆಯ ರೋಗಿ ಯಾರು ಇಲ್ಲಿ?” ಬರುವಾ ತ ವಾರ್ಡನ್ನನ್ನು ಕೇಳಿದರು.

ವಾರ್ಡನ್ ನನ್ನ ಕಡೆಗೆ ಬೊಟ್ಟು ಮಾಡಿ ತೋರಿಸಿದ. ಬರು ನನ್ನನ್ನು ಪ್ರಶ್ನಿಸಿದರು:

“ಹೇಗಿದ್ದೀಯಪ್ಪಾ?”

“ಗುಣವಾಗಿದ್ದೇನೆ ಸಾರ್. ಆಸ್ಪತ್ರೆಯಿಂದ ಬಿಡುಗಡೆ ಮಾ ನನ್ನ ಪಾಳೆಯಕ್ಕೆ ಕಳಿಸಿ!” ಬೇಸರು ಬೆರೆತ ಧ್ವನಿಯಲ್ಲಿ ನಾ ವಿನಂತಿಸಿಕೊಂಡೆ.

“ಪೂರ್ಣ ಗುಣವಾಗದ ಹೊರತು ನೀನು ಹೇಗೆ ಹೋ ಬಲ್ಲೆ?”

“ಈಗೇನೂ ಕಾಹಿಲೆ ಇಲ್ಲಾ ಸಾರ್, ಪೂರ್ಣವಾಗಿ ಗು ವಾಗಿದೆ!”

“ಡಾಕ್ಟರು ನಾನೋ ನೀನೋ?”

“ನೀವು ಸಾರ್!”

“ಹಾಗಾದರೆ ಗುಣವಾದದ್ದು ಬಿಟ್ಟಿದ್ದು ನೀನು ಹೇಗೆ ಬಲ್ಲೆ?”

“ಹೊಸ ವೈದ್ಯನಿಗಿಂತಲೂ ಹಳೆಯ ರೋಗಿಯೇ ಮೇಲು” ಎಂದು ನಾನು ಇಂಗ್ಲಿಷಿನಲ್ಲಿ ಉತ್ತರಿಸಿದೆ. ನನ್ನ ಉತ್ತರ ಕೇ ಡಾಕ್ಟರ್ ಬರುವಾ, ಕ್ಷಣ ಕಾಲ ತಾವು ಎಲ್ಲಿದ್ದೇವೆ ಎಂಬುದ ಮರೆತು ಒಮ್ಮೆಲೇ ಗುಡುಗು ಹೊಡೆದಂತೆ ನಕ್ಕುಬಿಟ್ಟರು. ನ ಬೆನ್ನ ಮೇಲೊಮ್ಮೆ ಚಪ್ಪರಿಸಿ ಮುಂದುವರೆದರು. ಎಲ್ಲ ರೋಗಳನ್ನೊಮ್ಮೆ ವಿಚಾರಿಸಿ, ಅನಂತರ ಬರುವಾ ತಮ್ಮ ರೂಮಿ ನಡೆದರು.

* * * *

ಮೇಜರ್ ಬರುವಾ ಶುದ್ಧ ಬಂಗಾಲಿ; ವಯಸ್ಸು ಕೇವಲ ಆಷ್ಟೇ ಮದುವೆಯಾಗಿತ್ತು. ಕಲ್ಕತ್ತೆಯಲ್ಲಿಯೇ ಮನೆ. ಮ ತನದಿಂದ ಅಷ್ಟೇನೂ ಸಿರಿವಂತರಾಗಿರಲಿಲ್ಲ. ಮಧ್ಯಮ ತರಗ ಸೇರಿದ ಜನ. ತನ್ನ ತಾಯಿ, ತಂಗಿ, ಪ್ರೀತಿಯ ಹೆಂಡತಿ ಇ ಹೊರತು ತನಗೆ ಬೇರೆ ಆಸ್ತಿಯೇ ಇಲ್ಲವೆಂದು ಬರುವಾ ಆಗ ಹೇಳುತ್ತಿದ್ದರು. ಬರುವಾರಿಗೆ ಚೆನ್ನಾಗಿ ಹಿಂದಿಯಲ್ಲಿ ಮಾತಾ ಬಾರದು. ಆದರೆ ಅವರು ಇಲ್ಲಿಗೆ ಬಂದಾಗಿನಿಂದ, ಅವರ ದೈ ಒಬ್ಬನೂ ಬಂಗಾಲಿ ಭಾಷೆ ಬಲ್ಲವನು ಬಿದ್ದಿರಲಿಲ್ಲ. ಬಂಗ ಹೋಗಲಿ, ಚೆನ್ನಾಗಿ ಇಂಗ್ಲಿಷ್ ಬಲ್ಲವರೂ ಅವರಿಗೆ ಸಿಕ್ಕಿಲಿಲ್ಲ. ಆಸ್ಪತ್ರೆಯಲ್ಲಿ ಬಿದ್ದವರೆಲ್ಲ ಅರೆಬರೆ ಬಲ್ಲ ಸೈನಿ

ಯೂ ತನ್ನದಲ್ಲ—ಪರದೇಶ. ಬರುವಾ ಬಾಯಿ ಸತ್ತವರಲ್ಲ. ವರಿಗೆ ಹರಟೆ ಬೇಕು. ಮನಸ್ಸನ್ನು ಕೆಲಸದಲ್ಲಿ ತೊಡಗಿಸ ಕೆಂದರೆ ಸಾಕಷ್ಟು ಕೆಲಸವಿರಲಿಲ್ಲ. ಒಂದೆರಡು ತಿಂಗಳಲ್ಲಿಯೇ ವರಿಗೆ ಬೇಜಾರು ಬಂದು ಬಿಟ್ಟಿತು. ಮೂರು ಮೂರು ದಿನಕ್ಕೆ ವರ ಪ್ರೀತಿಯ ಹೆಂಡತಿಯಿಂದ ಬಂದ ಕಾಗದಗಳನ್ನು ಅವರು ತ್ತತ್ತು ಸಲ ಓದುತ್ತಿದ್ದರು ; ಆದರೂ ಬೇಸರು ಮಾಯವಾಗು-ತಲಿಲ್ಲ. ಅವರ ಮನಸ್ಸು ತನ್ನ ವಯಸ್ಸಿನವರ ಗೆಳೆತನ ಬಯ-ತ್ತಿತ್ತು. ಆದರೆ ಗೆಳೆಯರಾಗಲು ಯೋಗ್ಯರಾದವರು ಬೇಕಲ್ಲ....! ಸರ ಮಾಯಗೊಳಿಸಲು ಮೆಲ್ಲನೆ ಬರುವಾರ ಬಾಯಲ್ಲಿ ಸಿಗ-ಟು ಬಂದಿತ್ತು. ಕೈಯಲ್ಲಿ ಇಸ್ಪೀಟು. ಬರುವ ಬೇಸರು ಕ್ಕೂ ಹೋಗಲಿಲ್ಲ. ಬೀರ್ ಬಾಟಲ್ ಟೇಬಲ ಮೇಲೆ ನಿಲ್ಲ ಡಗಿದುವು. ಇವೆಲ್ಲವುಗಳಿಂದ ಮನಸ್ಸಿನ ಬೇಜಾರು ಕೊಂಚ ಗಿದರೂ, ಬಾಯ ಬೇಸರು ಹೇಗೆ ಹೋಗಬೇಕು? ಒಂದು ದಿನ, ನು ಊಟಮಾಡಿ ಮಧ್ಯಾಹ್ನ ಮಲಗುವ ಹವಣಿಕೆಯಲ್ಲಿದ್ದೆ. ರುವಾರ ಸೇವಕ ಬಂದು ನನಗೆ ಹೇಳಿದ :

"ಸಾಹೇಬರು ನಿಮ್ಮನ್ನು ಕರೀತಾರ್ರಿ!" ನಾನು ನನ್ನ ಆಸ್ಪತ್ರೆಯ ಡುಪಿನಲ್ಲಿಯೇ ಬರುವಾರ ಕೋಣೆಯಲ್ಲಿ ಕಾಲಿಟ್ಟೆ. ಡಾಕ್ಟರರಿಗೆ ಲ್ಯೂಟ್ ಕೊಟ್ಟು ನಿಂತುಬಿಟ್ಟೆ. ಬರುವಾ ತಮ್ಮ ಬದಿಯ ರ್ಚಿ ತೋರಿಸಿ ಕುಳಿತುಕೊಳ್ಳಲಿಕ್ಕೆ ಹೇಳಿ—

"ನಿಮಗೆ ಇಸ್ಪೀಟು ಆಟ ಬರುತ್ತೆಯೆ?" ಎಂದು ಕೇಳಿದರು.

"ಬರುತ್ತೇ ಸಾರ್!"

"ಸರಿ, ಒಳ್ಳೇದಾಯ್ತು, ಒಂದೆರಡು ಆಟ ಆಡೋಣ!"

ಮುಂದೆ ಆಟ ಆಡುತ್ತಿರುವಾಗಲೆ ನಮ್ಮಿಬ್ಬರಲ್ಲಿ ಸಂಭಾಷಣೆ-ಗಾದುವು. ನಾವಿಬ್ಬರೂ ಇಂಗ್ಲಿಷಿನಲ್ಲಿಯೇ ಮಾತನಾಡುತ್ತಿದ್ದೆವು. ಆಟ ಮುಗಿದನಂತರ ಡಾ. ಬರುವಾ ಕೇಳಿದರು:

"ನೀವು ಬೀರು ಕುಡಿಯುತ್ತೀರಾ?"

"ಹೌದು ಇಲ್ಲ" ಎಂದು ಎರಡನ್ನೂ ಹೇಳದೆ, ಅವರು ಕೊಟ್ಟ ಸನ್ನು ತುಟಿಗೆ ಹಚ್ಚಿ ಖಾಲೀ ಮಾಡಿದೆ. ಮುಂದೆ ಅವರು ಟ್ಟ ಸಿಗರೇಟೂ ನನ್ನ ಬಾಯ ಸೇರಿತ್ತು. ಮತ್ತೆ ಬರುವಾ ತಿಗೆ ಮೊದಲು ಮಾಡಿದರು :

"ನೋಡಿ, ಇನ್ನು ಇಂಗ್ಲಿಷಿನಲ್ಲಿ ಮಾತನಾಡುವುದು ಬೇಡ; ದಿಯಲ್ಲಿಯೇ ಮಾತಾಡೋಣ!"

"ಏಕೆ ಸಾರ್?"

"ನನಗೆ ಹಿಂದೀ ಕಲಿಯಬೇಕಾಗಿದೆ. ಹರುಕು ಮುರುಕು ದಿಯಲ್ಲಿ ಜನರ ಮುಂದೆ ಮಾತನಾಡಿದರೆ ನಗೆಯಾಡುತ್ತಾರೆ."

"ನನ್ನ ಮುಂದೆ ನೀವು ಹರುಕು-ಮುರುಕು ಹಿಂದಿಯಲ್ಲಿ ತಾಡಿದರೆ, ನಾನು ನಗೆಯಾಡೇನೆಂಬ ಭಯ ನಿಮಗಿಲ್ಲವೇ?"

"ನೀವು ನಗೆಯಾಡಿದರೆ ಪರವಾ ಇಲ್ಲ!"

ಕೆಲ ನಿಮಿಷಗಳಲ್ಲಿಯೇ ನನ್ನ ಬಗ್ಗೆ ಅವರಲ್ಲಿ ಮೂಡಿದ ಆತ್ಮೀಯಭಾವನ ಈ ಬಗೆಯ ನುಡಿಯನ್ನು ಅವರ ಬಾಯಿಂದ ಆಡಿಸಿತ್ತು.

"ಸರಿ, ಹಾಗೇ ಆಗಲಿ ಸಾರ್!" ಎಂದು ಉತ್ತರಿಸಿ, ನಾನು ನಮಸ್ಕರಿಸಿ ಹೊರಳಿದೆ.

* * * *

ಅನಂತರ ಒಂದು ತಿಂಗಳಲ್ಲಿ ನಮ್ಮ ಪರಿಚಯ ಗಾಢವಾಗಿ ಬಿಟ್ಟಿತು. ಹೆಚ್ಚು ಕಡಿಮೆ ಒಂದೇ ವಯಸ್ಸಿನವರು. ಅಣ್ಣ-ತಮ್ಮಂದಿರಷ್ಟು ಗಾಢಸ್ನೇಹ ನಮ್ಮಿಬ್ಬರಲ್ಲಿ ಬೆಳೆದುಬಿಟ್ಟಿತು. ಆಟ ನೋಟ, ಕೆಲಿತ ಎಲ್ಲವೂ ಕೂಡಿಯೇ ನಡೆಯತೊಡಗಿತು. ಸಮಯ ಸಿಕ್ಕಾಗಲೆಲ್ಲ ಬರುವಾ ನನ್ನ ಮುಂದೆ ತಮ್ಮ ಮನೆಯ ಜನರನ್ನು ಹೊಗಳುತ್ತಿದ್ದರು. ತಾಯಿ ತಮ್ಮನ್ನು ಬಹು ಪ್ರೀತಿಯಿಂದ ಸಾಕಿ ಸಲಹಿದಳಂತೆ. ಚಿಕ್ಕವನಿರುವಾಗಲೆ ತಂದೆ ತೀರಿಹೋಗಿದ್ದರು. ತಾಯಿ ಬೀಸು-ಕುಟ್ಟುಗಳನ್ನು ಮಾಡಿ ತನ್ನನ್ನು ಇಂದಿನ ರೀತಿ-ಯಲ್ಲಿ ತಂದಿದ್ದಾಳೆ. ಆದಕ್ಕಾಗಿ ಅದರ ಋಣವು ತಮ್ಮ ಚಿಕ್ಕ ತಂಗಿ—ಸಬಿತಾಳ ಮದುವೆಯನ್ನು ಸಂಭ್ರಮದಿಂದ ಮಾಡಿದರೂ ಮುಗಿಯಲಾರದು; ಏಳೇಳು ಜನ್ಮದಲ್ಲಿ ನಾನು ಅವಳ ಮಗನಾಗಿ ಹುಟ್ಟಬೇಕು.... ಎಂದು ಬರುವಾ ಹೃದಯದಿಂದಲೇ ಹೇಳು-ತ್ತಿದ್ದರು. ಇನ್ನು ತಮ್ಮ ಹೆಂಡತಿಯ ಬಗೆಗಂತೂ ಅವರಿಗೆ ಬಹಳ

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City

ಕುಟುಂಬ
ದೊಳಗಿನ
ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಬಳಿಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಕೊಟ್ಟೆನೋವು, ವಾಂತಿ, ಅಜೀರ್ಣ, ಕಫ, ಮೈನೋವು, ಹಲ್ಲುನೋವು, ಮಕ್ಕಳ ರೋಗ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ...

ಜವೇರಿಯನ್ ... ಮುಂಬಾಯಿ

ಅವರ. ತಮ್ಮ ಮನೆತನದ ಪರಿಸ್ಥಿತಿಯನ್ನೂ ಲಕ್ಷಿಸದೆ, ತನ್ನ ನೈಜಪ್ರೇಮಕ್ಕಾಗಿ ಎಲ್ಲವನ್ನೂ ತೊರೆದ ತ್ಯಾಗದ ದೇವಿ ರೂಪಾ—ಎಂದು ಹೇಳುತ್ತಿದ್ದರು. ಡಾ. ಬರುವಾ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರುವಾಗಲೇ ಲಗ್ನವಾದರು. ಅಲ್ಲಿಯೇ ಓದುತ್ತಿದ್ದ ರೂಪಾಕುಮಾರಿ ಅವರನ್ನು ಸ್ವಯಂವರಿಸಿದ್ದಳು. ಬರುವಾ ಸನಾತನಿಯಲ್ಲದಿದ್ದರೂ ನಾಸ್ತಿಕರಲ್ಲ. ದಿನವೂ ಮಲಗುವ ಪೂರ್ವದಲ್ಲಿ ದೇವರ ಧ್ಯಾನವನ್ನು ಮಾಡುತ್ತಿದ್ದರೋ ಇಲ್ಲವೋ ಗೊತ್ತಿಲ್ಲ; ಆದರೆ ತಮ್ಮ ಮನೆಯ ಮೂರೂ ಜನರ ಭಾವಚಿತ್ರಗಳನ್ನು ನೋಡಿದ ಹೊರತು ಕಣ್ಣು ಮುಚ್ಚುತ್ತಿರಲಿಲ್ಲ.

"ಒಂದು ದಿನ ಬೆಳುದಿಂಗಳು ಬಿದ್ದಿತ್ತು. ನಾವಿಬ್ಬರೂ ಕಡಲ ತಡಿಯಲ್ಲಿ ಹರಟೆ ಹೊಡೆಯುತ್ತ ಕುಳಿತಿದ್ದೆವು. ಮಾತಿಗೆ ಮಾತು ಹೊರಟು, ವಿಷಯ ಭಾರತದ ರಾಜಕಾರಣದ ಕಡೆಗೆ ಹೊರಳಿತು. ಬರುವಾರಿಗೆ ಮಹಾತ್ಮಾ ಗಾಂಧಿಯವರಲ್ಲಿ ನಿಸ್ಸೀಮ ಭಕ್ತಿ; ಗಾಢವಾದ ನಂಬಿಕೆ. ಆದರೆ ನನಗೇಕೋ ಅವರ ಸೌಮ್ಯರೀತಿ-ನೀತಿಯಲ್ಲಿ ನಂಬಿಕೆ ಇರಲಿಲ್ಲ. ಬರುವಾ ಹೇಳಿದ ಪ್ರತಿ ಮಾತಿಗೂ ನಾನು ವಿರೋಧಿಸ ತೊಡಗಿದೆ. ಪ್ರತಿಪಕ್ಷ ಎದ್ದಾಗಲೇ ಮೂಲದ ಮಾನ ಹೆಚ್ಚುತ್ತದೆಯಲ್ಲವೆ? ಹಾಗೆಯೆ ನಮ್ಮಿಬ್ಬರ ಹರಟೆಗೆ ಕಳೆ ಬರುತ್ತಿತ್ತು. ಬರಬರುತ್ತ ಹರಟೆ ವಿಕೋಪಕ್ಕೆ ಮುಟ್ಟತೊಡಗಿತು. ನಾನು ಬೇಕೆಂತಲೇ ಮತ್ತೆ "ನೋಡಿ ಸಾರ್, ಗಾಂಧಿಯವರು ಲೋಕಸಾಕ್ಷಾತ್ಕಾರದ ಸಲುವಾಗಿ ಹೋರಾಡುತ್ತಿದ್ದರು. ತಮ್ಮ ಸ್ವಾತಂತ್ರ್ಯ ಕಾಯ್ದುಕೊಳ್ಳಬೇಕೆನ್ನುತ್ತಾರೆ. ಅವರ ಅಧಿಕಾರವನ್ನು ದೇವದತ್ತದಂತೆ ನಡಿಸಿಕೊಳ್ಳಬೇಕೆನ್ನುತ್ತಾರೆ. ತ್ರಿಪುರೀ ಕಾಂಗ್ರೆಸ್ಸಿನ ಮಾತನ್ನೇ ನೋಡಿರಿ! ಜನತೆ ಆರಿಸಿಕೊಟ್ಟ ಪ್ರತಿನಿಧಿ ಸುಭಾಷ ಬಾಬುಗಳನ್ನು ಅಧ್ಯಕ್ಷ ಪಟ್ಟದಿಂದ ತಳ್ಳಲು ಹಟವೇಕೆ ಹಿಡಿದರು? ಅದನ್ನು ಸಾಧಿಸಿಯೆ ಬಿಟ್ಟರಲ್ಲ!" ನಾನು ಬೇಕೆಂತಲೇ ಈ ಮಾತನ್ನು ಒತ್ತಿ ಹೇಳಿದೆ. ಸುಭಾಸ ಬಂಗಾಲಿ, ಬರುವಾ ಬಂಗಾಲಿ; ಪ್ರಾಂತೀಯತೆಯ ಅಭಿಮಾನ ಅವರಲ್ಲಿ ತಲೆಯೆತ್ತಿ, ಅವರ ಮತವನ್ನು ಬದಲಿಸಬಹುದೇ—ಎಂದು. ಆದರೆ ಬರುವಾರ ಉತ್ತರ ಕೇಳಿ ಸ್ತಬ್ಧನಾಗಿ ಬಿಟ್ಟೆ.

"ಚಿನ್ನ ಎಂದಿಗಾದರೂ ಚಿನ್ನವೇ. ಆದರೆ ಕಲ್ಲುಗುಡ್ಡದಲ್ಲಿ ಕಾಣಿಸದೇ ಬಿದ್ದಂಥ ವಜ್ರಗಳನ್ನು ಆರಿಸಿ ಮೇಲೆ ತೆಗೆಯಬೇಕಲ್ಲವೇ? ಸುಭಾಸ ಮುತ್ಸದ್ದಿ; ಗಾಂಧಿಯವರಿಗೂ ಚೆನ್ನಾಗಿ ಗೊತ್ತಿತ್ತು. ಆದರಂತೇ ಉಳಿದ ಕೆಲವರನ್ನು ಬೆಳಗಿಸಬೇಕಾಗಿತ್ತು. ಅದಕ್ಕೆ ಗಾಂಧೀ ಮಾಡಿದ್ದು ಯೋಗ್ಯ!"

ಮುಂದೆ ಮಾತು ಗಾಂಧಿಯವರ ಪ್ರೊಮುಸ್ಲಿಂ ಪಾಲಿಸಿಯ ಕಡೆಗೆ ಜಾರಿತು. ನಾನು ಅದನ್ನು ತೀವ್ರವಾಗಿ ಖಂಡಿಸತೊಡಗಿದೆ. ಬರುವಾ ತಮ್ಮ ಮತವನ್ನು ಮಂಡಿಸಿದರು: "ಹುಚ್ಚಾ, ನಿಮ್ಮಂಥ ಕಲಿತವರೂ ಗಾಂಧಿಯವರ ಈ ಪಾಲಿಸಿಯನ್ನು ಖಂಡಿಸಬೇಕೆ? ಜಾತಿ ಬೇರೆಯಾದರೇನು? ಜನಾಂಗ ಒಂದೇ ಅಲ್ಲವೆ? ಹಿಂದುಗಳು ಮುಸ್ಲಿಂರನ್ನು ಸೌಮ್ಯರೀತಿಯಲ್ಲಿ ನಡೆಸಿಕೊಳ್ಳಬೇಕು. ಅವರು ಅಲ್ಪಸಂಖ್ಯಾಕರು!" ಆದರೆ ಅಂದೇಕೋ ನನ್ನಲ್ಲಿ ಭೂತಸಂಚಾರವಾಯಿತು. ಕೊನೆಯ ವರೆಗೂ ಅವರ ಮಾತನ್ನು ಮನ್ನಿಸಲಿಲ್ಲ. ಡಾ. ಬರುವಾರವರಿಗೆ ಕೊಂಚ—ಕೊಂಚವೇಕೆ ಹೆಚ್ಚು—ಕೋಪ ಬಂದು ಬಿಟ್ಟಿತು; ಮಾತನ್ನೇ ನಿಲ್ಲಿಸಿದರು; ಮುಖ ಗಂಟು ಹಾಕಿದರು. ಚಂದ್ರ ಮೋಡದಲ್ಲಿ ಮರೆಯಾದ. ಸಾಗರದ ತೆರೆಗಳು ಕತ್ತಲೆಯಲ್ಲಿ ಭೋರ್ಗರೆಯುತ್ತಿದ್ದುವು. ಮೊದಲಿದ್ದ ಬೆಳುದಿಂಗಳು ಮಾಯವಾಗಿ ಕತ್ತಲೆ ಪಸರಿಸತೊಡಗಿತ್ತು. ಹೆಚ್ಚು ವಾದ ಹಾಕಿದಲ್ಲಿ ನಮ್ಮಿಬ್ಬರ ಸ್ನೇಹಕ್ಕೂ ಕತ್ತಲೇ ಬಿದ್ದೀತು—ಎಂದು ನಾನೆದ್ದೆ. ಆಸ್ಪತ್ರೆಯ ವರೆಗೂ ಇಬ್ಬರೂ ಮಾತಾಡದೆ ಬಂದೆವು. ಮರುದಿನವೇ ನನ್ನದು ಆಸ್ಪತ್ರೆಯಿಂದ ಬಿಡುಗಡೆ ಆಗುವ ದಿನವಿತ್ತು.

* * * *

ಈಗ ನಾನು ಆಸ್ಪತ್ರೆಯಲ್ಲಿರದಿದ್ದರೂ, ಸಂಜೆ ಊಟವಾದನಂತರ ದಿನವೂ ಡಾಕ್ಟರ್ ಬರುವಾರ ಕಡೆಗೆ ಹೋಗಿ ಒಂದೆರಡು ಇಸ್ಪೀಟು ಆಟಗಳನ್ನು ಆಡಿಯೇ ಬರುತ್ತಿದ್ದೆ. ಅವರೂ ನನ್ನನ್ನು ಮೊದಲಿನ ಪ್ರೇಮ-ಉತ್ಸಾಹಗಳಿಂದಲೇ ಕಾಣುತ್ತಿದ್ದರು. ಆದರೆ ನಮ್ಮಿಬ್ಬರಲ್ಲಿ ಒಂದು ಒಪ್ಪಂದವಾಗಿತ್ತು: ಯಾರೂ ರಾಜಕಾರಣ ಮಾತನ್ನೇ ತೆಗೆಯಕೂಡದೆಂದು. ನಮ್ಮಿಬ್ಬರಲ್ಲಿಯ ಭಿನ್ನ ಮತಗ-

ಒಪ್ಪಂದಕ್ಕೆ ಕಾರಣವಾಗಿದ್ದುವು. ನನ್ನದು ಕೊಂಚ ಕಿಡಿಗೇಡಿ ಭಾವ, ಆಟ ಮುಗಿಸಿ ಹೊರಬರುವಾಗ:

" ಗಾಂಧೀಕೀ ಜಯ! "

" ಪ್ರೋಮುಸ್ಲಿಂ ಪಾಲಿಸಿಕಿ ಜೈ " ಎಂದು ಎಂದು ನಗೆಯಾಡು ತ್ತಿದ್ದೆ. ಅದನ್ನು ಕೇಳಿದ ಬರುವಾ ಆಗ ಕೋಪಿಸಿಕೊಂಡರೂ, ರುದಿನ ಸಂಜೆ ಮತ್ತೆ ಮೊದಲಿನಂತೆ ನಗುಮೊಗದಿಂದ ನನ್ನನ್ನು ಗತಿಸುತ್ತಿದ್ದರು.

* * * *

ದಿನಗಳು ಕಳೆದಂತೆ, ೧೯೪೬ ರ ಮೇ ಹದಿನಾರರ ಉದಯ- ಯಿತು. ಜಿನ್ನಾರು ಕಲ್ಕತ್ತೆಯಲ್ಲಿ ಕ್ರಾಂತಿಯ ಕಹಳೆಯನ್ನು ಊದಿದರು. ' ಡಾಯರೆಕ್ಟ್ ಆಕ್ಶನ್ ' ತಾನೇ ತಾನಾಗಿ ತಾಂಡವ- ಡತೊಡಗಿತು. ಸುಂದರ ನಗರ ಸ್ಮಶಾನವಾಗಲು ತೊಡಗಿತು. ವು ಆಗ ಭಾರತದಲ್ಲಿರದಿದ್ದರೂ ಬಾನುಲಿಯ ಮುಖಾಂತರ ಲ್ಲವೂ ತಿಳಿಯುತ್ತಿತ್ತು. ಆದರಿಂದಾಗಿ ನಮ್ಮಿಬ್ಬರ ಆಟ ಕಡಿಮೆ- ಾಗತೊಡಗಿತು. ಬಿಡುವು ಸಿಕ್ಕಿದಾಗಲೆಲ್ಲ ರೇಡಿಯೋ ಬಳಿಸಾರಿ, ಲ್ಕತ್ತೆ ಸ್ಟೇಶನ್ ತಿರುವಿ ಕೇಳುತ್ತ ಕುಳಿತುಬಿಡುತ್ತಿದ್ದೆವು. ನನ- ತಲೂ ಹೆಚ್ಚಾಗಿ ಡಾಕ್ಟರ್ ಬರುವಾರ ಎದೆ ಢವಢವ ಬಡಿದು- ಳ್ಳುತ್ತಿದ್ದಿತು. ತನ್ನ ಮುಖ್ಯ ಮೂರು ಆಸ್ತಿ ಕಲ್ಕತ್ತೆಯಲ್ಲಿ. ೂರು ದಿನಕ್ಕೊಮ್ಮೆ ರೂಪಕುಮಾರಿಯ ಪತ್ರ ಬರುತ್ತಿತ್ತು. ಮುವೆ ತಡವಾದಾಗ ಬರುವಾರ ಪರಿಸ್ಥಿತಿ ನೋಡಲು ಬಾರದು. ಒಮ್ಮೆ ಪತ್ರ ಬಂದಿತೆಂದರೆ—ಆಕಾಶ ದಾಳಿ ಮುಗಿಯಿತೆಂದರೆ ನೆಲ- ಮನೆಯಿಂದ ಹೊರಬಂದ ಸೈನಿಕನಂತೆ—ಹಾಯಾಗಿ ಉಸಿರಾಡು- ವರು. ಹೋದ ಜೀವ ಸಿಕ್ಕಂತಾಗುತ್ತಿತ್ತು ಅವರಿಗೆ. ಅವೊತ್ತೊಂದು ದಿನ ನಾವು, ಆಟದಲ್ಲಿ ಬಾಟ್ಲಿಯಲ್ಲಿ ತಲ್ಲೀನರಾಗುತ್ತಿದ್ದೆವು.

* * * *

ಅಂದು ಶನಿವಾರ. ನಮ್ಮ ಮಿಲ್ಟ್ರಿ ವರ್ಕ್‌ಶಾಪಿಗೆ ಒಪ್ಪತ್ತೇ ಕೆಲಸ. ಊಟ ಮುಗಿಸಿ ಊರಲ್ಲಿ ನಡೆದೆ. ದಿನವೂ ಸಿಂಗಪೂರ ಎಕ್ಸ್‌ಪ್ರೆಸ್ ಕೊಂಡು ಅದರಲ್ಲಿಯ ತಲೆಬರೆಹಗಳನ್ನಷ್ಟೆ ಓದುವುದು ನನ್ನ ವಾಡಿಕೆ. ಅಂದೂ ವಾಡಿಕೆಯಂತೆ ಕೊಂಡೆ. ದಪ್ಪಕ್ಷರಗಳಲ್ಲಿ ಬರೆದಿತ್ತು: " ಕಲ್ಕತ್ತೆಯ ಕೊಲೆಯ ಸಂಖ್ಯೆ ೫೦೦೦ಕ್ಕೆ ಮೇಲ್ಪ- ಟ್ಟಿದೆ! " ಎಂದು.

ನನ್ನ ರೋಷ ನೂರ್ಮಡಿಯಾಯಿತು; ' ಹೀಗೆಯೆ ಹೋಗಿ ಆ ಗಾಂಧೀ ಭಕ್ತ ಬರುವಾನ ಕಣ್ಣೆದುರಿನಲ್ಲಿ ಇದನ್ನು ತೋರಿಸಿ ಕೇಳೋಣವೇ? ' ಎಂದು ಆಸ್ಪತ್ರೆಯ ಕಡೆಗೆ ಹೊರಳಿದೆ. ಎವೆ ಮುಚ್ಚಿ ಎವೆ ತೆಗೆಯುವ ಮುನ್ನ ಬರುವಾರ ರೂಮಿನ ಬಾಗಿಲಿಗೆ ಬಂದಿದ್ದೆ. ಆದರೆ?

ಅಲ್ಲಿ ಡಾ. ಬರುವಾ ಎಚ್ಚರದಪ್ಪಿ ಬಿದ್ದು ಬಿಟ್ಟಿದ್ದಾರೆ. ಎಲ್ಲರೂ ಶುಶ್ರೂಷೆಯನ್ನು ನಡೆಯಿಸಿದ್ದಾರೆ. ನಾನು ದಂಗುಬಡೆದು ನಿಂತು ಬಿಟ್ಟಿದ್ದೆ. ಕಾರಣ ಕೇಳಿದೆ. ಅಲ್ಲಿದ್ದವರಿಗೆ ಅಷ್ಟು ತಿಳಿಯದು.





ಆದರೆ ಬರುವಾರ ಕೈಯಿಂದ ಕಳಚಿ ಬಿದ್ದ ತಂತಿಯ ಫಾರ್ಮ್ ನೆಲದ ಮೇಲೆ ಹೊರಳಾಡುತ್ತಿತ್ತು. ಅದನ್ನೆತ್ತಿ ಓದಿದೆ :

"Your mother, Sabita, Roopa murdered. House burnt. Come soon."

" ನಿಮ್ಮ ತಾಯಿ, ಸಬಿತಾ ರೂಪಾ ಕೊಲ್ಲಲ್ಪಟ್ಟಿದ್ದಾರೆ. ಮನೆ ಸುಟ್ಟಿದೆ. ಬನ್ನಿ ! " ಎಂದು ಅವರ ಕಲ್ಕತ್ತೆಯ ಗೆಳೆಯನೊಬ್ಬ ಬರುವಾರಿಗೆ ತಾರು ಕಳಿಸಿದ್ದ. ಆಗ ಬರುವಾರ ಈ ಸ್ಥಿತಿಯ ಕಾರಣ ತಿಳಿಯಿತು: ಮನಕ್ಕೆನೋ ವ್ಯಸನವಾಯಿತು. ಆದರೆ ಕಣ್ಣೊಳಗಿಂದ ನೀರೆ ಬರಲಿಲ್ಲ. ಮೈಯೊಳಗಿನ ರಕ್ತ ಮಾತ್ರ ಕುದಿಯುತ್ತಿತ್ತು. ಪ್ರತಿ ರಕ್ತದ ಕಣ ಕೂಗುತ್ತಿತ್ತು : "ಸೇಡು" ಎಂದು. ಕೆಲಹೊತ್ತಿನ ನಂತರ ಬರುವಾ ಮೂರ್ಛೆ ತಿಳಿದೆದ್ದರು. ಪೂರ್ಣ ರಸಾತಳಕ್ಕೇ ಇಳಿದಿದ್ದರು. ಆದರೆ ನಾನು ಅವರನ್ನು ಸಮಾಧಾನ ಪಡಿಸುವುದನ್ನು ಬಿಟ್ಟು, " ಹಾವಿಗೆ ಹಾಲೆರೆದವನ ಸಂಗದ ಫಲವಿದು ! " ಎಂದು ತೀಕ್ಷ್ಣ ಬಾಣ ಬಿಟ್ಟೆ. ನನ್ನ ಮನಸ್ಸೇ ಸ್ಥಿಮಿತದಲ್ಲಿರಲಿಲ್ಲ. ಬರುವಾ ನಿಸ್ಸಹಾಯಕರಾಗಿ ನರಳುತ್ತ ನನ್ನನ್ನಪ್ಪಿ, ಹಸುಗೂಸಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದರು.

* * * *

ಒಂದೆರಡು ವಾರ ನಮ್ಮಿಬ್ಬರ ಮುಖದಲ್ಲಿ ಹುಚ್ಚುಕಳೆ ಮೂಡಿತ್ತು. ಬರುವಾರವರಿಗೆ ರಜೆ ಸಿಗುವಂತಿದ್ದರೂ, ಭಾರತಕ್ಕೆ ಅವರು ಹೋಗಬಯಸಲಿಲ್ಲ. ಅಂದಿನಿಂದ ಬರುವಾರ ದೈನಂದಿನ ಕೆಲಸದಲ್ಲಿ ಬದಲಾವಣೆಯಾಗಿಬಿಟ್ಟಿತ್ತು. ಬೀರ್‌ಬಾಟಲ್, ಸಿಗರೇಟ್, ಇಸ್ಪೀಟ್ ಇದರ ಹೊರತು ಮತ್ತೇನನ್ನೂ ಅವರು ಮುಟ್ಟುತ್ತಿರಲಿಲ್ಲ. ಅವರಿಗೆ ಹರಟೆಯೂ ಬೇಡವಾಗತೊಡಗಿತು. ರಾಜಕೀಯ ಕಾರಣದ ಮಾತಂತೂ ದೂರವೇ ಉಳಿಯಿತು. ನಾನು ಅಂಜುತ್ತಂಜುತ್ತ ಗಾಂಧಿಯವರ ಬಗ್ಗೆ ಮಾತೆತ್ತಿದರೆ, ಅವರು ಪ್ರತ್ಯುತ್ತರವನ್ನೇ ಕೊಡುತ್ತಿರಲಿಲ್ಲ. ಮನೆಯ ಮೂರು ಜನರ ದುರ್ಮರಣ ಇವರ ಮತವನ್ನು ಬದಲಾಯಿಸಲಿಲ್ಲವೇ ?— ಎಂದು ನನಗೇ ಆಶ್ಚರ್ಯವಾಗುತ್ತಿತ್ತು. ' ಶಾಂತಿಯ ಸೇವಕ ' ಎಂದು ಸುಮ್ಮನಾಗುತ್ತಿದ್ದೆ.

* * * *

ಅಂದು ರಾತ್ರಿ ಹತ್ತು ಹೊಡೆದು ಹೋಗಿತ್ತು. ಮರುದಿನ ರವಿವಾರವಿದ್ದುದರಿಂದ ಬೀರ್ ಸೇವಿಸಿ ಮನದಣಿಯೆ ಇಸ್ಪೀಟಿಗೆ ಕುಳಿತುಕೊಂಡಿದ್ದೆವು. ಆಟ ಒಳ್ಳೇ ಭರಕ್ಕೆ ಬಂದಿತ್ತು. ಒಕ್ಕೈ ಕೋಟಿಗೆ ನಾನು ಕೈಹಾಕಿದ್ದೆ. ರಾಜಾ, ರಾಣಿ, ಗುಲಾಮ, ಒಂದು ಚಿಲ್ಲರೇ ಎಲೆ ನನ್ನಲ್ಲಿ. ಒಂದು ಎಕ್ಕಾ ಅವರ ಬಳಿಯಲ್ಲಿ ಬಂದಿರಲಿ. ಕ್ಕಿಲ್ಲವೆಂದು ನಾನು ಧೈರ್ಯವಾಗಿಯೇ ಕೋಟ್ ಹೇಳಿದ್ದೆ. ಆಟಕ್ಕೆ ಎಲೆಗಳನ್ನು ಹಾಕುವುದೇ ತಡವಾಗಿತ್ತು. ನಡುವೆಯೇ ಬೆಲ್ಲಿನ ಸಪ್ಪಳವಾಯಿತು. ಅಸಿಸ್ಟಂಟ್ ವಾರ್ಡನ್ ಲಗುಬಗೆಯಿಂದಲೇ ಓಡಿ ಬಂದು :

" ಡಾಕ್ಟರ್ ಸಾಹೇಬ್, ಗನ್‌ಶಾಟ್ ಕೇಸ್ ಬಂದಿದೆ; ಲಗೂನೆ ಬನ್ನಿ! " ಎಂದ.

ನಾನಂಜಿದೆ. ಯುದ್ಧ ಮುಗಿದನಂತರ ಗುಂಡುಬಡಿದ ಗಾಯಾಳು ಇರುತ್ತಿರಲಿಲ್ಲ. ಇದೇನೋ ಹೊಸದು— ಎನ್ನುತ್ತಿರುವಷ್ಟರಲ್ಲಿ ಡಾಕ್ಟರು ಆಟ ಬಿಟ್ಟಿದ್ದರು.

" ಈ ಆಟ ಮುಗಿಸಿ ಹೋಗಿರಿ " ನಾನೆಂದೆ.

" ಆಗದು, ಮೊದಲು ಕರ್ತವ್ಯ! " ಎಂದು ಬರುವಾ ಉಪಕರಣ ಜೋಡಿಸತೊಡಗಿದರು. ಅಷ್ಟರಲ್ಲಿ ಕೇಸ್‌ಫಾರ್ಮನ್ನು ವಾರ್ಡನ್‌ನಿಗೆ ತುಂಬಲು ಹೇಳಿದರು ವಾರ್ಡನ್ ತನ್ನ ಕೆಲಸ ಮುಗಿಸಿ ಆಪರೇಶನ್ ರೂಮಿನತ್ತ ಮರಳಿದ. ಡಾ. ಬರುವಾ ಕೇಸ್ ಫಾರ್ಮ್ ಓದಹತ್ತಿದರು. ಓದುತ್ತಿರುವಂತೆ ಬರುವಾರ ಮೊದಲಿನ ಕೆಲಸದಲ್ಲಿಯ ಉತ್ಸಾಹ ಕುಂದಿಹೋಯಿತು. ಮುಖದ ಮೇಲಿನ ಭಾವ ಉಗ್ರತೆಯನ್ನು ತಾಳಹತ್ತಿತು. ನಾನೆದ್ದು ಕೇಸ್ ಫಾರ್ಮನ್ನು ಓದಿದೆ :

" ಮೇಜರ್ ಅಕ್ರಮ ಖಾನ್, ತಾನೇ ತನ್ನ ಬಂದೂಕಿನಿಂದ ಹೊಡೆದುಕೊಂಡಿದ್ದಾನೆ. ಗುಂಡು ಭುಜಕ್ಕೆ ತರೆದು ಹೋಗಿದೆ ಅಷ್ಟೆ! " ಎಂದಿತ್ತು. ಬರುವಾ ಹೇಳತೊಡಗಿದರು :

" ಚೆನ್ನಾದ ವೇಳೆ ಸಿಕ್ಕಿದೆ! "

" ಏಕೆ ಸಾರ್? "

" ನೋಡಿಗೆ! ನನ್ನ ಕೊಲೆಗೊಂಡ ಬಳಗಕ್ಕೆ ಶಾಂತಿ ನೀಡಬೇಕು!

" ಅಂದರೆ? "

"ಸಿಕ್ಖ ಬೇಟಿಯ ಕೊಲೆ!"

ನನ್ನ ಎದೆ ಅಳುಕಿತು. ಬರುವಾರ ಆಗಿನ ಭಾವ ಭಂಗಿ ಯಾವ ಕೊಲೆಗಡುಕನಿಗೂ ಕಡಿಮೆಯಾಗಿರಲಿಲ್ಲ. ರೌದ್ರತೆ ತಾಂಡವವಾಡುತ್ತಿತ್ತು ಅಲ್ಲಿ. ನನ್ನ ಮನಸ್ಸು ಅವರ ಈ ಕೃತಿಗೆ ಸಮ್ಮತಿಸುತ್ತಿದ್ದಿಲ್ಲ. ನಾನು ಮತ್ತೆ ಹೇಳಿದೆ:

"ನಿಮ್ಮ ಜನರನ್ನು ಈ ಅಕ್ರಮ ಖಾನ ಕೊಲ್ಲಲಿಲ್ಲವಲ್ಲ!"

"ಈ ಹಾವು ಕಚ್ಚದಿದ್ದರೇನಾಯಿತು? ಕಚ್ಚಿದ್ದು ಹಾವೇ ಅಲ್ಲವೇ?"

ಇಷ್ಟನ್ನು ಹೇಳಿ ಬರುವಾ ಕೆಲಸದಲ್ಲಿ ತೊಡಗಿದರು. ಉಪಕರಣಗಳು ಸಜ್ಜಾಗತೊಡಗಿದ್ದುವು. ಇಂಜೆಕ್ಶನ್ ಟ್ಯೂಬಿನಲ್ಲಿ ವಿಷ ಸೇರಿಕೊಂಡಿತು.

ಡಾಕ್ಟರ್ ಮೇಜರ್ ಬರುವಾ ಸಜ್ಜಾಗಿ, ಆಪರೇಶನ್ ರೂಮಿನತ್ತ ಸಾಗಿದರು. ನನಗೇನು ಮಾಡಬೇಕೋ ತಿಳಿಯದಾಯಿತು. ಅವರನ್ನು ಆತಂಕಿಸಬೇಕೆಂದರೆ ಧೈರ್ಯ ಸಾಲದು; ಬಿಡಿಸಬೇಕೆಂದರೆ ಮನಸ್ಸು ಒಪ್ಪದು. ಗತಿಗಾಣದಂತೆ ಅವರ 'ಪರವಾನಿಗಿ' ಪಡೆದು, ಆಪರೇಶನ್ ರೂಮಿನಲ್ಲಿ ಸೇರಿಕೊಂಡೆ.

—ಘಾಯಾಳು ಅಕ್ರಮಖಾನ್ ಮಂಚದ ಮೇಲೆ ಬಿದ್ದಿದ್ದ, ನರಳುತ್ತಿದ್ದ, ಕಿರಿಚಿಕೊಳ್ಳುತ್ತಿದ್ದ. ಅವನ ಆ ಕೂಗು ಕೊಲೆಗಡುಕರ ಎದೆಯನ್ನೂ ಕೊರೆದುಬಿಡುತ್ತಿತ್ತು. ಆದರೂ ಬರುವಾ ಸ್ಥಿತಪ್ರಜ್ಞನಂತೆ ಕೆಲಸ ಮಾಡುತ್ತಿದ್ದರು. ನಡುನಡುವೆ ಅಕ್ರಮ ಬಡಬಡಿಸುತ್ತಿದ್ದ: "ಡಾ–ಕ್ಟ–ರ ಸಾ–ಬ್, ಗುರಿ ಎದೆಗೆ ಇ–ಟ್ಟ–ದ್ದೆ. ತಪ್ಪಿ ಭುಜಕ್ಕೆ ತಗಲಿತು!"

"ಅಲ್ಲೇ ಸಾಯಲಿಲ್ಲೇಕೆ?" ಎನ್ನುವ ಅರ್ಥ ಡಾಕ್ಟರರ ಮುಖದ ಮೇಲೆ ಮೂಡಿತ್ತು. ಆಪರೇಶನ್ನಿನ ನಿಮಿತ್ತಕ್ಕಾಗಿ ಮೇಜರ್ ಅಕ್ರಮನ ಬಟ್ಟೆಗಳನ್ನು ತೆಗೆಯಲು ಬರುವಾ ಆಜ್ಞಾಪಿಸಿದರು. ನರ್ಸ್ ಆ ಕೆಲಸವನ್ನು ತ್ವರಿತವಾಗಿಯೇ ಮಾಡಿದರು. ಕಿಸೆಯಲ್ಲಿದ್ದ ಕಾಗದಗಳನ್ನು ಒತ್ತಟ್ಟಿಗೆ ಕಟ್ಟತೊಡಗಿದರು. ಅದರಲ್ಲಿ ನನಗೆ ಕಂಡದ್ದು ಒಂದು ತಂತಿಯ ಫಾರ್ಮ. "ಡಾಕ್ಟರ್, ತಂತಿಯ ಫಾರ್ಮ!" ನಾನು ಒದರಿದೆ. "ಹಾಂ" ಎಂದು ಡಾಕ್ಟರು ನಡುಗಿದರು. ಒಂದು ತಂತಿಯ ಫಾರ್ಮೇ ಬರುವಾರ ನೋಟ ಬದಲಿಸಿತ್ತು. ಅದಕ್ಕಾಗಿಯೇ ಅವರು ಅಂಜಿದ್ದು. ನಾನೆತ್ತಿ ಅದನ್ನು ಘಟ್ಟಿಸಿ ಓದಿದೆ: "All at home murdered" 'ಮನೆಯ ಜನರೆಲ್ಲರದೂ ಕೊಲೆ ಮಾಡಲ್ಪಟ್ಟಿದೆ" ಎಂದು ಜಲಂಧರದಿಂದ ಮೇಜರ್ ಅಕ್ರಮನಿಗೆ ತಾರು ಬಂದಿತ್ತು. ಅದರ ಜತೆಯಲ್ಲಿಯೇ ಮೇಜರು ತನ್ನ ಕೈಯಿಂದ ಬರೆದ ಚೀಟಿಯಿತ್ತು. ಅದನ್ನು ಓದಿಯೇ ಬಿಟ್ಟೆ:

"ನನ್ನ ಮನೆಯ ಜನ ಹೋದ ಮೇಲೆ ನಾನಿದ್ದರೇನು ಇಲ್ಲವಾದರೇನು?—ಅಲ್ಲಾನ ಇಚ್ಛೆ. ನಾನೂ ಅವರನ್ನು ಸೇರಬಯಸುತ್ತೇನೆ. ನಾನು ಯಾರ ಮೇಲಿನ ಸಿಟ್ಟಿನಿಂದ ಸಾಯುತ್ತಿಲ್ಲ. ಸ್ವಖುಷಿಯಿಂದಲೆ ಗುಂಡುಹಾಕಿಕೊಂಡು ಸಾಯುತ್ತಿದ್ದೇನೆ.

ಇತಿ

ಅಕ್ರಮ್"

ಕೊನೆಯ ವಾಕ್ಯ ಮುಗಿಯುವುದಕ್ಕೂ ಬರುವಾರ ಕೈಯಲ್ಲಿಯ ಇಂಜೆಕ್ಶನ್‌ಟ್ಯೂಬು ಕೆಳಫರಸಿಯಮೇಲೆ ಬಿದ್ದು ಒಡೆಯುವುದಕ್ಕೂ ಒಂದುಗೂಡಿತು. ಎಲ್ಲರೂ ಬರುವಾರ ಮುಖದ ಕಡೆಗೆ ನೋಡತೊಡಗಿದರು.

ಅವರ ಕಣ್ಣಲ್ಲಿ ನೀರು ಧಾರೆಯಾಗಿ ಹರಿಯತೊಡಗಿತು. ಒಂದೇ ಸವನೇ ಅಳಲಿಕ್ಕೆ ಪ್ರಾರಂಭಿಸಿದರು. ಬಹುಶಃ ಅವರ ಜನರ ನೆನಪಾಗಿರಬೇಕು. ಮೇಜರ್ ಅಕ್ರಮ್ ಮೂರ್ಛೆಬೀಳಹತ್ತಿದ್ದ. ಬರುವಾ ಕಣ್ಣೊರಸಿಕೊಂಡು ಕೆಲಸಮಾಡತೊಡಗಿದರು. ಮೊದಲಿನ ಉಪಕರಣಗಳಿಂದಲ್ಲ; ಉಪಕರಣಗಳು ಬದಲಾಗಿದ್ದುವು. ನೋಟವೇ ಬದಲಾದನಂತರ?

ಮೂರು ತಾಸಿನ ವರೆಗೆ ತುಂಬಾ ಪರಿಶ್ರಮ ಪಟ್ಟು ಬರುವಾ ಆಪರೇಶನ್ ಮಾಡಿದರು. ಅದು ಯಶಸ್ವಿಯಾಯಿತೆಂದು ಬೇರೆ ಹೇಳಬೇಕಾಗಿಲ್ಲ. ಆಪರೇಶನ್ ಮುಗಿದ ನಂತರ ನಾನು ಅವರ ಕೈಯನ್ನು ಕುಲುಕಿಸಿದೆ:

"ಗಾಂಧೀಜಿಕೀ ಜೈ!" ಎಂದು ಮನಃಪೂರ್ವಕವಾಗಿ ಹೇಳಿದೆ. ಅದಕ್ಕುತ್ತರವಾಗಿ

"ಅಹಿಂಸಾ ಜಿಂದಾಬಾದ್" ಎಂದು ಬರುವಾ ವಿಜಯಧ್ವನಿಯಲ್ಲಿ ಗುಡುಗಿದರು. ಅವರ ಕಣ್ಣಲ್ಲಿಯ ಬಣ್ಣವೇ ಬದಲಾಗಿತ್ತು. ಹೊಸನೀರು ಬಂದು ಹಳೆಯ ನೀರನ್ನು ಕೊಚ್ಚಿಕೊಂಡು ಹೋಗಿತ್ತು. ಡಾ. ಬರುವಾರವರಲ್ಲಿ ಹೊಸ ನೋಟ ಮೂಡಿತ್ತು; ಆ ನೋಟ ನೋಡಿದ ನನ್ನ ದೃಷ್ಟಿಯೂ ಬದಲಾಯಿತು.

* * * *

"ಮೂರು ತಿಂಗಳ ನಂತರ ಮೇಜರ್ ಅಕ್ರಮ್, ನಮ್ಮ ಕಂಪನಿಯಲ್ಲಿ ಮೂರನೆಯ ನಂಬರಿಗೆ ಬಿಟ್ಟರು.

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ

ಔಷಧಿ!

ಡಾ. ವಾಮನ ಗೋಪಾಳ

ಇವರ

ಸಾರ್ಸಾ ಪರಿಲ್ಲಾ

ಕನ್ನಡ ನಾಟಕದ ಪ್ರಾರಂಭಕಾಲ

ಶ್ರೀ. ದ. ರಾ. ಬೇಂದ್ರೆ ಎಂ. ಎ., ಸೊಲ್ಲಾಪುರ

★

ಕನ್ನಡ ಪ್ರಾಚೀನ ಸಾಹಿತ್ಯದಲ್ಲಿ ನಾಟಕ, ನಾಟಕರಂಗ, ನಟ-ನಟಿಯರು ಇವುಗಳ ವಿಚಾರ ಸಾಕಷ್ಟು ಬಂದಿದೆಯಾದರೂ, ಬರೆದ ನಾಟಕಗಳು ಒಂದಕ್ಕಿಂತ ಹೆಚ್ಚಾಗಿ ಇಲ್ಲ. ಇನ್ನೊಂದೆರಡು— ನಾಟಕಗಳಿರಬಹುದೆಂದು ಅನುಮಾನಿಸಬಹುದಾದಂತಹವು— ಕಣ್ಮರೆಯಾಗಿ ಹೋಗಿವೆ.

★

ಸಂಸ್ಕೃತದಲ್ಲಾಗಲಿ, ಇಂಗ್ಲೀಷಿನಲ್ಲಾಗಲಿ, ಯಾವುದಕ್ಕೆ 'ನಾಟಕ' ಎನ್ನುವರೋ— ಅಂಥ ಸಾಹಿತ್ಯ, ಕನ್ನಡದಲ್ಲಿ ಇಲ್ಲವೇ ಇಲ್ಲ—ಎನ್ನಲು ಬರುವದಿಲ್ಲ. ಯಾಕೆಂದರೆ— ಚಿಕ್ಕ ದೇವರಾಯನ ಕಾಲದ ಒಂದು ನಾಟಕ ಇದೆ. ಅದರ ಹೆಸರು 'ಮಿತ್ರವಿಂದಾ **ಗೋವಿಂದ.**' ಸಂಸ್ಕೃತದಲ್ಲಿ ಹರ್ಷಕವಿಯು 'ರತ್ನಾವಳಿ'ಯನ್ನು ಬರೆದನು. ಅದೇ ನಾಟಕ, ಪಾತ್ರದ ಹೆಸರುಗಳನ್ನು ಬದಲಾಯಿಸಿಕೊಂಡು ಈ ನಾಟಕ ಆಗಿದೆ. ಸ್ವತಃ ಶ್ರೀಹರ್ಷನ ಎರಡು ನಾಟಕಗಳು— **ರತ್ನಾವಳಿ** ಮತ್ತು **ಪ್ರಿಯದರ್ಶಿಕಾ**— ಒಂದೇ ಮೂರ್ತಿಯ ಎರಡು ಭಾವಚಿತ್ರಗಳಂತೆ ಇವೆ. ಮಿತ್ರವಿಂದಾ ಅದರದೇ ಮೂರನೆಯ ಮುಖ. ಮಿತ್ರವಿಂದೆಯನ್ನು ಗೋವಿಂದನಿಗೆ— ಎಂದರೆ— ಶ್ರೀಕೃಷ್ಣನಿಗೆ ಗಂಟು ಹಾಕುವುದೇ ಈ ನಾಟಕದ ಕಾರ್ಯ. ಶ್ರೀಹರ್ಷನ ಉದಯನ ಒಬ್ಬ ಅದ್ಭುತರಮ್ಯ ಚಾರಿತ್ರ್ಯದ ಹಳೆಯ ರಾಜ. ಅವನ ಬಗ್ಗೆ ಭಾಸಕವಿ ತನ್ನ ಸ್ವಪ್ನವಾಸವದತ್ತ ನಾಟಕ ಬರೆದ. ಮೇಘದೂತದಲ್ಲಿ ಕಾಲಿದಾಸನು ಉಜ್ಜಯಿನಿಯ ಸುತ್ತುಮುತ್ತಲಿನ ಹಳ್ಳಿಹಳ್ಳಿಗಳಲ್ಲಿ ಉದಯನ-ಕಥಾಕೋವಿದರಾದ ಗ್ರಾಮವೃದ್ಧರಿರುವರು— ಎಂದು ಹೇಳಿದ್ದಾನೆ. ಆದರೆ ಈ ಉದಯನ ಕರ್ನಾಟಕದೊಳಗಿನ ಜನರಿಗೆ ಅಷ್ಟು ಗುರುತಿನವನಲ್ಲ; ಹೃದಯಂಗಮವೆನಿಸಲಾರದು ಅವನ ಪ್ರಣಯ ಲೀಲೆ. ಮಿತ್ರವಿಂದೆ ಶ್ರೀಕೃಷ್ಣನ ಸೋದರತ್ತೆಯ ಮಗಳು. ಅತ್ತೆಯ ಮಗಳ ಮೇಲೆ ಅಳಿಯನದು ಜನ್ಮಸಿದ್ಧ ಹಕ್ಕು. ಶ್ರೀಕೃಷ್ಣನಂತೆ ಚಿಕ್ಕದೇವರಾಯನಿಗೂ ಅಷ್ಟನಾಯಿಕೆಯರು— ಅಂಥ ಈ ಕಾಲಕ್ಕೆ ಕೃಷ್ಣಚಾರಿತ್ರ್ಯದ ಛಾಯೆಯುಳ್ಳ ಈ ಕಥೆಗೆ ನಾಟಕರೂಪ ದೊರೆತುದು ಆಶ್ಚರ್ಯವಲ್ಲ. ಮೂಲಕಥೆಯೊಳಗಿನ ಮಿತ್ರವಿಂದೆ ರುಕ್ಮಿಣಿಯಂತೆ ಸ್ವಯಂವರಕಾಲಕ್ಕೆ ಅಪಹೃತಳಾದಳು. ಈ ನಾಟಕದಲ್ಲಿ ಆಕೆಗೆ ರತ್ನಾವಲಿಯ ಪಾರ್ಟು ಮಾಡಬೇಕಾಗಿದೆ. ನಾಟಕದ ನಾಯಕನು ಶ್ರೀಕೃಷ್ಣನಾಗಿದ್ದುದರಿಂದ ಸ್ವಲ್ಪ ಗೌರವ ಬಂದರೂ, ಆ ಕೃಷ್ಣನೂ ಉದಯನನ ಪಾರ್ಟು ಮಾಡುತ್ತಾನೆ— ಆದ್ದರಿಂದ— ಕೃಷ್ಣನ ಗೌರವ ಸ್ವಲ್ಪ ಕಡಿಮೆಯಾಗುತ್ತದೆ. ಹಾಗಾಗುವುದರಿಂದ ನಾಟಕಕಾರನಿಗೆ **ಸಮಕಾಲಿಕನಾದ** ಚಿಕ್ಕ ದೇವರಾಜನ ಗೌರವ ಸ್ವಲ್ಪ ಹೆಚ್ಚಾಗುತ್ತದೆ. ಏನಾದರೂ **ನಾಟಕ** ಕೃಷ್ಣನೇ ಆಗಲಿ, ಯಾವುದೇ ರಾಜನಾಗಲಿ, **ಜೀವಂತಪರಾಕ್ರ**ಯಾದ ಚಿಕ್ಕದೇವರಾಯನಿದಿರು ನಿಷ್ಪ್ರಭರಾಗಿಯೆ **ತೋರಿರಬೇಕ**

ಚಿಕ್ಕದೇವರಾಯನ ಮಿತ್ರನೂ **ಮಂತ್ರಿಯೂ ಆದ ತಿರುಮಲಾ**ರ್ಯನ ಅಣ್ಣನ ಮಗ ಸಿಂಗರಾರ್ಯ ಬರೆದ ಈ "**ಮಿತ್ರವಿಂ**ದಾ ಗೋವಿಂದ" ನಾಟಕವು, ತನ್ನ ಕಾಲದಲ್ಲಿ **ಏಕಮೇವ ಅದ್ವಿತೀ**ಯ ಎನಿಸಿಕೊಂಡಿರಲಿಕ್ಕೆ ಸಾಕು. ಇಂದಿಗೂ **ಹಳೆಯ ನಾಟಕ ಚರಿ**ತ್ರೆಯಲ್ಲಿ ಅದು ಏಕಮೇವ ಅದ್ವಿತೀಯ— ಆ **ನಾಟಕದ** ಹೊರ ಬೇರೊಂದು ನಾಟಕ ಸಿಕ್ಕಿಲ್ಲ. ನಾಟಕಗಳಿರಬೇಕು **ಎಂಬ** ಸಂ ಯವೋ ಆಶೆಯೋ ಉಂಟಾಗುವಂತೆ, ಸಾಹಿತ್ಯದ ತುಂ ನಾಟಕದ ಪರಿಭಾಷೆ ಬರುತ್ತದೆ. ನಮ್ಮ ಕೈಗೆ ಗ್ರಂಥಗಳು ಸಿಕ್ಕ ಬರಿಯ ಹೆಸರಿನಲ್ಲಿ ಸಿಕ್ಕ ಒಂದೆರಡು ಗ್ರಂಥನಾಮಗಳು ನಾಟ ಗಳಾಗಿರಲಾರವೇ? ಆಗಿರಬಹುದು, ಆಗಿರಲೇ **ಬೇಕು.** **ಯಾ**ಗಿರಬಾರದು? ಎಂಬ ತರ್ಕಕ್ಕೆ ಎಡೆಕೊಡುವಂತಿವೆ. ಕರ್ಣಪಾರ್ಯಕವಿ 'ಮಾಳವಿ ಮಾಧವ' ಬರೆದದ್ದು ಪಂಚತಂತ್ರವನ್ನು ಬರೆದ ದುರ್ಗಸಿಂಹನು—

"ಪರಮ ಕವೀಶ್ವರ ಚೇತೋ | ಹರಮೆಂಬಿನಮೆಸೆವ
ಮಾಳವೀಮಾಧವ
ವಿರಚಿಸಿದ ಕರ್ಣಪಾರ್ಯಂ | ಬರಮಾಗಂ ಸುಕವಿ
ಬಗೆವೊಡಿನ್ನುಂ ಮುನ್ನ

ಎಂದು ಆ ಕರ್ಣಪಾರ್ಯನನ್ನು ಹೊಗಳಿದ್ದಾನೆ. ದೊಡ್ಡ ದೊ ಕವಿಗಳಿಗೂ ಚಿತ್ತಾಕರ್ಷಕವೆನಿಸಿರಬೇಕಾದ ಈ ಕಾವ್ಯ— ನಾಟ ಇರಬೇಕು ಎಂದು ಊಹೆ! ಯಾಕೆಂದರೆ ಸಂಸ್ಕೃತದಲ್ಲಿ ಭ ಭೂತಿಯು 'ಮಾಲತೀಮಾಧವ' ಎಂಬ ನಾಟಕ ಬರೆದ ಪ್ರಖ್ಯಾತವೇ ಇದೆ. ಕಾದಂಬರಿ, ಪಂಚತಂತ್ರ, ಭಾರತ, ಮುಂ ದಾದವುಗಳು ಆದಾಗಲೆ ಕನ್ನಡರೂಪ ಕಂಡಿದ್ದವು. ಈ ನಾಟಕ

ಕನ್ನಡದಲ್ಲಿ ಅವತರಿಸಿರಲಾರದು? ಮಿತ್ರವಿಂದಾ ಗೋವಿಂದದ ಕಾಲ ಕ್ರಿ. ಶ. ೧೬೮೦— ಸುಮಾರು ೨೭೦ ವರ್ಷಗಳ ಪೂರ್ವ. ಕನ್ನಮಯ್ಯನು ದುರ್ಗಸಿಂಹನಿಗಿಂತ ಹಳಬ. ದುರ್ಗಸಿಂಹ ಕ್ರಿ. ಶ. ೧೦೩೦ ರಲ್ಲಿ ಪಂಚತಂತ್ರ ಬರೆದ. ಅಂದರೆ ೧೧ ನೆಯ ಶತಮಾನದಾದಿಯಲ್ಲಿಯೇ 'ಮಾಳವಿಮಾಧವ' ಕನ್ನಡದಲ್ಲಿ ಮೂಡಿತ್ತು. ರನ್ನನ ಗದಾಯುದ್ಧ ಇದರಿಂದ ಬಹು ದೂರವಿಲ್ಲ. ಗದಾಯುದ್ಧದ ನಾಟಕೀಯತೆಯನ್ನೂ ನಾಟಕವನ್ನೂ ಆಮೇಲೆ ನೋಡೋಣ. ಈ ಮಧ್ಯೇ ೫೦೦ ವರ್ಷ ನಾಟಕದ ವಾಸನೆಯೇ ಇಲ್ಲವೆ?— ಎಂದು ಯಾರಾದರೂ ಕೇಳಬಹುದು. ಚಿಕ್ಕದೇವರಾಯನ ಕಾಲ ಶಿವಾಜಿಯ ಕಾಲ. ಅದಕ್ಕೂ ಮೊದಲು ಶಹಾಜಿಯ ಸಮಕಾಲೀನ ಶ್ರೀಕಂಠೀರವ ನರಸರಾಜನ ಕಾಲಕ್ಕೆ ಮೈಸೂರರಮನೆಯಲ್ಲಿ ನಾಟಕ ನೆಲೆಗೊಂಡೇ ಇದ್ದಿತು.

ಸಾಂಗತ್ಯ— ಮೆರೆವ ತಾರೆಗಳ ಸಮೂಹದೊಡನೆ ಬಹ
ಮಿರುಪ ರಾಕಾಚಂದ್ರನಂತೆ
ತರುಣಿರನ್ನೆಯರ ಮೊತ್ತದಲಿ **ನಾಟಕಶಾಲೆ**-
ಗರಸನೈತಂದನರ್ತಿಯಲಿ.

ಆಗ **ನಾಟ್ಯವಧುಗಳ** ಸಂತೋಷ ವರ್ಣಿಸಬೇಕೇ ?
ತೊಳಗುವ ನವರತ್ನಗಾಸೆಯ ಸರ್ವಾಂಗ-
ಕಳವಟ್ಟ ಮಣಿಭೂಷಣದ
ಥಳಥಳಿಸುವ ಮುದ್ದುಮೊಗದ ನರ್ತಕಿಯರು
ಘಳಿಲನೆ ನಡೆತಂದರಾಗ.

ನಾಟಕದ ದಿಗ್ದರ್ಶಕನೂ ಅಲ್ಲಿದ್ದ :
ಉಡಿಯ ಸುತ್ತಿದ ಪಲ್ಲಿಪಾಟಿನ ಕರದಲಿ
ಪಿಡಿದು ರಂಜಿಪ ರನ್ನ ಸೆಳೆಯ
ಕಡುಜಾಣ **ಭರತಾಚಾರ್ಯನು** ರಾಜಿಪ
ಬೆಡಗನದೇನ ಬಣ್ಣಿಸುವೆ !

ಆಗ— ನಾಟ್ಯವಧುಗಳ ಕಾಲ್‌ಗೆಜ್ಜೆಯ ರವ ಗತಿಗೂಡಿ ಶೃತಿಗೆ ವಿಶಾಲದ ಸೊಗಸ ಬೀರಿದವು. ಮತ್ತು—

ಸುರುಚಿರ ಸೂತ್ರಧಾರಕ ತತ್ತಕಾರವ
ವಿರಚಿಸಿ ಜವನಿಕೆ ತೆಗೆಯೆ,
ಭರತ ಶಾಸ್ತ್ರಾಗಮವಿಡಿದು ಸುಪ್ರಾರ್ಥಿಯ-
ರುರು ಪುಷ್ಪಗಳ ಸೂಸಿದರು.

ನರಸಿಂಹನ ಸ್ತುತಿಗೀತ ಪ್ರಬಂಧವ
ಸಿರಿದು ಸುಳಾದಿತಾಳದಲಿ
ಕರದಭಿನಯಗೂಡಿ ಕಡುಕುಶಲದೆ ನಾಟ್ಯ-
ದಿರವ ಮೆರೆದರಂಗನೆಯರು.

ಅಂದರೆ ಕಂಠೀರವ ನರಸರಾಜನನ್ನೇ ಕುರಿತು ಆದರೆ ಶ್ರೀನೃಸಿಂಹಸ್ವಾಮಿಗೂ ಅನ್ವಯಿಸುವಂತೆ ನಾಂದೀಪದ್ಯ ಹಾಡಿದರು. ಆಮೇಲೆ ಅವರು ಮಾಡಿದ ನೃತ್ಯದ ವರ್ಣನೆಯನ್ನು ಕವಿ ಗೋವಿಂದ ವೈದ್ಯನು ಮುಂದುವರಿಸುತ್ತಾನೆ. ಆ ನಾಟ್ಯ—

ರಂಭಾನಾರಿಯ ಪಾತ್ರದ ಪರಿಣತಿ-
ಯಂಬುಜಾನನೆಯೂರ್ವಶಿಯ
ಮುಂಬರಿದೆಸೆವ ಕಟ್ಟಣೆಗಳ ಗತಿಯ ನಿ-
ತಂಬನಿಯರುಗಳಾಡಿದರು.

ಅವರೆ—

ಸಿರಿದು ಪ್ರಬಂಧ ಜಕ್ಕಿಣಿ·ರಾಜಕೀರನ
ಮೆರೆವ ಕಟ್ಟಳೆಯಾಟಗಳನ್ನೂ ಆಡಿದರಂತೆ.

ಇದಾವ ಯಕ್ಷಗಾನದಾಟವೋ, ಯಕ್ಷಿಣಿ ಅರಗಿಳಿ ಸಾಕಿದ ಯಾವ ಕಟ್ಟಳೆಯ ಆಟವೋ—ಅಂತೂ ನಾಟ್ಯಶಾಲೆಯಲ್ಲಿ ನಡೆದ ನಾಟ್ಯ—ನಾಟಕ ಇದು. ಮಿತ್ರವಿಂದಾ ಗೋವಿಂದದ ಪೂರ್ವದಲ್ಲಿ ೫೦ ವರ್ಷ ನಾಟ್ಯವಧುಗಳಿಗೂ ಭರತಜ್ಞ ಮೇಳಗಾರರಿಗೂ ಸನ್ಮಾನವಿತ್ತು ಕನ್ನಡದ ಕೆಚ್ಚೆದೆಯಲ್ಲಿ. ಆದರೆ ಭಾರತ, ಭಾಗವತ ರಾಮಾಯಣಾದಿ ಪುರಾಣ·ಪುಣ್ಯಕಥೆಗಳನ್ನು ಬತ್ತೀಸ ರಾಗದೊಳೋದಿ ಮೆಚ್ಚಿಸುವ ಬಾಲಶಾರದೆಗಳು ಆದಾಗಲೆ ತಮ್ಮ ಗಮಕ ನೈಪುಣ್ಯ ಮೆರೆಯಿಸುತ್ತಿದ್ದರು. ಸ್ವತಃ ಆಸ್ಥಾನ ಗಮಕಿ ಭಾರತೀನಂಜನು ಗೋವಿಂದ ವೈದ್ಯನ ಇಡೀ ಕಂಠೀರವ ನರಸರಾಜ

'ಬಗನ' ಬಾಲಾಮೃತ

ಮಕ್ಕಳ
ಸಧೃಢತೆಗಾಗಿ
'ಬಗನ'
ಬಾಲಾಮೃತ.
ವನ್ನು ಉಪ-
ಯೋಗಿಸಿರಿ.

ಎಂದರೆ
ಅವರಿಗೆ

ರೋಗದ ಭಯವಿಲ್ಲ.
ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಕೀಲರಿನ'
ಅಂಶವೂ ಇರುವದರಿಂದ, ಇದು ಮಕ್ಕಳ
ಉತ್ತಮ 'ಟೋನಿಕ್ಕು' ಇರುವದು.

THE NATIONAL PHARMACIES &
PHARMACEUTICALS Ltd. DHARWAR.

ವಿಜಯ ಸಾಂಗತ್ಯ ಕಾವ್ಯವನ್ನು ಓದಿದನಂತೆ. ಕ್ರಿ. ಶ. ೧೬೪೮ರ ಜ್ಯೇಷ್ಠದಲ್ಲಿ ಮುಗಿದ ಈ ಕಾವ್ಯವನ್ನು ದಸರಾದ ಕಾಲಕ್ಕೆ ಓದಿರಬಹುದು. ಇದಕ್ಕೂ ನೂರು ವರ್ಷ ಹಿಂದೆ, ವಿಜಯನಗರದ ರಾಯರ ಅವಸಾನ ಕಾಲ. ಆಗ, ದಕ್ಷಿಣಕನ್ನಡದ ಕವಿಶೇಖರ ರತ್ನಾಕರ ಕವಿ ತನ್ನ ಭರತೇಶವೈಭವ ಬರೆದ. ಅದರಲ್ಲಿ ಪೂರ್ವ-ನಾಟಕ—ಉತ್ತರ ನಾಟಕ ಸಂಧಿಗಳಲ್ಲಿ ಇದೇ ಬಗೆಯ, ಇದಕ್ಕೂ ಮಿಗಿಲಾದ ನೃತ್ಯದ ವರ್ಣನೆಯಿದೆ. ಅದೂ ಕೂಡ ನಾವೆನ್ನುವ ನಾಟಕವಲ್ಲ. ಆದರೆ ನೃತ್ಯದ ಮರೆಗೆ ನಡೆದ ನಿಜವಾದ ನಾಟಕವೊಂದನ್ನು ಕವಿ ರತ್ನಾಕರ ವರ್ಣಿಸಿದ್ದಾನೆ—ಅದು ಭರತೇಶನಲ್ಲಿಯೂ ವಧುಗಳಲ್ಲಿಯೂ ನಡೆದ ಹೃದಯದ ನಾಟಕ.

'ಹೆಣ್ಣವೆಂಗಳ ನೃತ್ಯವೇನೆಂದು ಮಂತ್ರಿಯ | ಗಡ್ಡವೊಂದನೆ ನೋಡುತಿದ್ದಾ,' ಎಂದು ನಾಟ್ಯತಾರಕೆಯರು ಮರುಗುತ್ತಾರೆ. ಅವರ ಹೃದಯಕ್ಕೆ ಆನಂದವಾಗುವಂತೆ ಅರಸ ಅವರನ್ನು ಮನ್ನಿಸಿ ಕಳಿಸುತ್ತಾನೆ. ಕರ್ಣಾಟಕದಲ್ಲಿ ನಾಟಕವಡಗಿ ನಾಟ್ಯ ವಿಸ್ತರಿಸಿತ್ತು ಎಂಬುದೇ ಇದರ ಅರ್ಥ. ಗಂಧರ್ವಗಾನವು ಕರ್ಣಾಟ ಪದ್ಧತಿಯಾಗಿ ಕಲ್ಯಾಣ ಚಾಲುಕ್ಯರ ಕಾಲದಿಂದಲೂ, ವಾಗ್ಗೇಯಕಾರರ ಗಮಕದ ಪ್ರೌಢ ಸಂಪ್ರದಾಯವು ವಿಜಯನಗರದ ರಾಯರ ಕಾಲದಲ್ಲಿ ಇದರಂತೆಯೆ ಬೆಳೆದು, ನಾಟಕ ಮೂರಾಬಟ್ಟೆಯಾಗಿ ಹೋಯಿತು. ಈ ನಾಟಕಸಮಾಧಿಗೆ ವೈಷ್ಣವರ ಕಥಾಕೀರ್ತನ ಪದ್ಧತಿಯೂ ತನ್ನ ಪಾಲಿನ ಕಾರ್ಯ ಮಾಡಿರಬೇಕು. ಅಂತೂ, ಭಾವನೃತ್ಯ, ಭಾವಗೀತ, ಭಾವ-ಕಥೆಗಳು ನಾಟಕದ ಪಿಂಡವನ್ನು ಕತ್ತರಿಸಿದುವು. ಅದರಲ್ಲಿ ಬೇರೆ ಚಂಪೂ, ಷಟ್ಪದಿ, ಸಾಂಗತ್ಯ ಕಾವ್ಯಗಳ ನಾಟಕೀಯತೆಯು ಇನ್ನುಳಿದ ರುಚಿಯನ್ನು ತೃಪ್ತಿಗೊಳಿಸಿತು. ರನ್ನನ ಗದಾಯುದ್ಧ ಅಂಥ ನಾಟಕೀಯತೆಯ ಪರಿಪಾಕ. ಅದೇ ರಾಘವಾಂಕನಲ್ಲಿ, ಕುಮಾರವ್ಯಾಸನಲ್ಲಿ, ಲಕ್ಷ್ಮೀಶನಲ್ಲಿ ಪುಟಗೊಂಡು ಕನ್ನಡ ಯಕ್ಷಗಾನಗಳಿಗೆ ಹಾದಿ ಮಾಡಿರಬೇಕು. ಮಧುರೆಯ ನಾಯಕರಲ್ಲಿಯ ಯಕ್ಷಗಾನಪದ್ಧತಿಯೆ, ಆಂಧ್ರ, ಕರ್ಣಾಟಕ, ಮಹಾರಾಷ್ಟ್ರಗಳಲ್ಲಿ ಅದರ ತೆರೆಗಳನ್ನು ಮುಟ್ಟಿಸಿತೆಂಬುದು ಮುಂದಿನ ಇತಿಹಾಸ. ವಿಜಯನಗರದ ಪೂರ್ವದಲ್ಲಿ ಹೊಯ್ಸಳರ ಕಾಲಕ್ಕೆ ವೈಯ್ಯಾಕರಣಿ ಕೇಶಿರಾಜನು ಬರೆದ—ಆದರೆ ನಮ್ಮ ಕೈಗೆ ಇನ್ನೂ ಸಿಕ್ಕಿರದ—'ಸುಭದ್ರಾಹರಣ,' 'ಪ್ರಬೋಧಚಂದ್ರ' ಈ ಕೃತಿಗಳು ನಾಟಕಗಳಾಗಿರಬೇಕು—ಎಂಬಾಶೆ ಸಾಹಿತ್ಯ ಸಂಶೋಧಕರಿಗಿದೆ. ಪ್ರಬೋಧಚಂದ್ರೋದಯ ಎಂಬೊಂದು ಸಂಸ್ಕೃತ ನಾಟಕ ಇದೆ— ಅದರಿಂದಲೇ ಈ ಪ್ರಬೋಧಚಂದ್ರವೂ ನಾಟಕವಾಗಿರಬೇಕು—ಎಂದು ಊಹೆ. ಸೌಭದ್ರಾದಿ ನಾಟಕಗಳನ್ನು ನೋಡಿರುವ ನಮಗೆ ಸುಭದ್ರಾಹರಣ— ನಾಟಕವಿರಲೇಬೇಕೆಂದು ತರ್ಕ. ಈ ತರ್ಕ, ಈ ಊಹೆ, ತೀರ ತಪ್ಪಾಗಿರಲಾರದು ಎಂಬುದಕ್ಕೆ, ಇನ್ನೊಬ್ಬ ವೈಯಾಕರಣಿ ಭಟ್ಟಾಕಳಂಕನು, ಕರ್ಣಾಟ ಭಾಷೆಯಲ್ಲಿ—'ಕಾವ್ಯ, ನಾಟಕ, ಅಲಂಕಾರ ಶಾಸ್ತ್ರವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಂ (ಅಂದರೆನೇ ಕನ್ನಡದಲ್ಲಿ) ಉಪಲಭ್ಯಮಾನತ್ವಾತ್' ಎನ್ನುತ್ತಾನೆ. ಕ್ರಿ. ಶ. ೧೭ನೆಯ ಶತಮಾನದಾದಿಯಲ್ಲಿಯೆ ಅಂದರೆ ವಿಜಯನಗರದ ರಾಯರ ರಾಜ್ಯದಲ್ಲಿ ನಾಟಕ ಇತ್ತು— ಎಂದು ಅರ್ಥ. ಸ್ವತಃ ಕೃಷ್ಣರಾದೇವರಾಯನು 'ಜಾಂಬವತೀಪರಿಣಯ' ನಾಟಕದಲ್ಲಿ ಹಾಕಿದ್ದ ಮನಸ್ಸು ಆ ಕಾಲದ ಅಭಿರುಚಿಯನ್ನು ವ್ಯಕ್ತಗೊಳಿಸುತ್ತದೆ. ರಂಗದೇವರಾಯನು ಬೊಂಬೆಯಾಟದವನೊಬ್ಬನಿಗೆ ಕ್ರಿ. ಶ. ೧೫೨೦ ರಲ್ಲಿ ದತ್ತಿ ಹಾಕಿಕೊಟ್ಟಿದ್ದಿದೆ. ಇದೇ ಸುಮಾರಿಗೆ ಯಕ್ಷಗಾನದವರಿಗೆ ಪ್ರಿಯವಾದ ಲಕ್ಷ್ಮೀಶನ ಜೈಮಿನಿ, ನಂಜುಂಡನ ಕುಮಾರರಾಮನ ಸಾಂಗತ್ಯ ಪ್ರಕಟವಾದುವು. ಕುಮಾರರಾಮನ ಕಥೆ ವಿಜಯನಗರ ಸ್ಥಾಪನೆಯ ಪೂರ್ವದ ವೀರವಿಲಾಸದ, ದೈವದುರ್ವಿಲಾಸದ ಕಥೆ. ನಮ್ಮ ಇಂದಿನ ನಾಟಕಕಾರರಾದ ಶ್ರೀಯುತ ಗರುಡ ಸದಾಶಿವರಾಯರಿಗೆ ಅದು ಕಥೆ ಒದಗಿಸಿತು.

ಶ್ರೀ. ಗಳಗನಾಥ ಗೋವಿಂದ ಪೈ, ತಾತಾಚಾರ್ಯ ಶರ್ಮ, ದಿವಂಗತ ಮುಳಿಯ ತಿಮ್ಮಪ್ಪಯ್ಯ ಮೊದಲಾದವರು ಕನ್ನಡ ನಾಟಕದ ಪ್ರಾರಂಭಕಾಲದ ಮೇಲೆ ಬೆಳಕು ಕೆಡಹಲು ಪ್ರಯತ್ನಪಟ್ಟಿದ್ದಾರೆ. ಕನ್ನಡ ಜನಕ್ಕಂತೂ ಸಂಸ್ಕೃತ ನಾಟಕ ಗೊತ್ತಿತ್ತು. ಹಳ್ಳಿಯ ಹಗರಣಗಳೂ ಪ್ರಸಿದ್ಧವಾಗಿರಲೇ ಬೇಕು. ಅದೇ ಯಕ್ಷಗಾನದ ಹುಟ್ಟು ಆಗಿರಲು ಸಾಕು. ಆದರೂ ಕ್ರಿ. ಶ. ೧೦ನೆಯ ಶತಮಾನದನಂತರದಲ್ಲಿ ಹೇಳಿಕೊಳ್ಳುವಂಥ ಸಂಸ್ಕೃತ ನಾಟಕ ಹುಟ್ಟಲೇ ಇಲ್ಲ. ಜೈನ ಕವಿಗಳ ಚಂಪೂಕಾವ್ಯಗಳಲ್ಲಿ ನೃತ್ಯವರ್ಣನೆ ಇದೆ, ನಾಟಕೀಯತೆ ಇದೆ, ನಾಟಕವಿಲ್ಲ. ಪಂಪನ ಆದಿಪುರಾಣದೊಳಗಿನ ನೀಲಾಂಜನೆಯ ನೃತ್ಯ, ಭರತೇಶ ವೈಭವದ ನೃತ್ಯದಂತೆಯೇ, ಕಾಳಿದಾಸನ ಮಾಲವಿಕೆಯ ನೃತ್ಯವನ್ನೂ ನೆನಪಿಗೆ ತರುತ್ತದೆ. ಕಾವ್ಯಗಮಕವೂ, ಕಥಾಕೀರ್ತನವೂ, ಸಂಗೀತಮಾರ್ಗವೂ, ನೃತ್ಯದ ಪ್ರಸಾರವೂ ನಾಟಕವನ್ನು ನುಂಗಿರಬೇಕು. ರನ್ನನ ಗದಾಯುದ್ಧಕ್ಕೆ ನಾಟಕರೂಪ ಕೊಟ್ಟ ಪ್ರತಿಭೆ ಶ್ರೀಕಂಠಯ್ಯನವರದು. ಆ ಪ್ರತಿಭೆಯೆ ಒಂದು ಗ್ರೀಕ ನಾಟಕವನ್ನು—'ಅಶ್ವತ್ಥಾಮನ್' ನಾಟಕ ಮಾಡಿ ಕನ್ನಡ ದೇಶಕ್ಕೆ ಕರೆತಂದಿತು. ಒಂದು ಹಳೆಯ ಗ್ರೀಕ ನಾಟಕದಲ್ಲಿ ಕನ್ನಡ ಮಾತುಗಳಿವೆಯಂತೆ. ಕನ್ನಡನಾಡವರಿಗೆ ನಾಟ್ಯವೂ ಪ್ರಿಯ. ಈ ಹಾದಿಯ ನೂಲಿನಿಂದ ಕ್ರಿ. ಶ. ದ ಹಿಂದೆಯೂ ನುಗ್ಗಿಯೂ ಹೋಗಬಹುದು. ಅದು ಅವಶ್ಯವಿಲ್ಲ ಸದ್ಯಕ್ಕೆ— ಆಡುವ ವಿಶ್ವದಾಟವನು ನಿನ್ನೊಳು ನಿಂದು | ನೋಡಬೇಕೆನ್ನದ ನಿಚ್ಚ | ನೋಡುವುದಾಸೀನ ಭಾವನೆ ಸುಮತಿಯು | ನೀಡು ನಿರಂಜನಸಿದ್ಧ— ಎಂದು ನಾವೂ ಬೇಡಿಕೊಳ್ಳೋಣ.

ಇದೊ, ಶ್ರಾವಣ ಬಂದಿದೆ!

‘ ಆನಂದಕಂದ ’*

★

ಇದೊ, ಶ್ರಾವಣ ಬಂದಿದೆ ಭುವನಕೆ,
ಜನ-ಜೀವನ ಪಾವನಗೈಯಲಿಕೆ —
ಇದೊ, ಶ್ರಾವಣ ಬಂದಿದೆ ಭಾರತಕೆ !

೧

ತೆರಳಿತು ವೈಶಾಖದ ಬಿರುಬಿಸಿಲು ....
ಸರಿಯಿತು ಮೃಗಜಲದಾ ಹುಸಿಕೊನಲು ....
ಮರೆಯಾಯಿತು ಸುಟ್ಟುರಿಗಳ ಹೊಯಿಲು ....
ಬರಿಬಾನೊಳು ತುಂಬಿದೆ ನೀರ್ಮುಗಿಲು !
ಬರಗಾಲದ ಬಾಧೆಯ ಹಣಿಯಲಿಕೆ —
ಇದೊ, ಶ್ರಾವಣ ಬಂದಿದೆ ಈ ನೆಲಕೆ !

೨

ಮುಂಗಾರಿನ ಕಾರ್ಮೋಡದ ಕೂಟ ....
ಮುನ್ನೀರಲೆಗಳ ತಾಂಡವದಾಟ ....
ಕಂಗೆಡಿಸುವ ಕೋಲ್ಮಿಂಚಿನ ಕಾಟ ....
ಹಿಂಗಿದುವೋ ಸಿಡಿಲಿನ ಗುಡುಗಾಟ !
ಸಮಯೋಗದ ಸಿರಿಗಳ ಸುರಿಸಲಿಕೆ
ಇದೊ, ಶ್ರಾವಣ ಬಂದಿದೆ ಭೂತಲಕೆ !

೩

ಕಾದುವ ತಗರಿನ ಕೊಂಬನು ಕಳೆದು ....
ಹೋರುವ ಹೋರಿಯ ಹಮ್ಮನು ಹಿಳಿದು ....
ಹೆಣ್-ಗಂಡನು ಹುರುಪಿಸಿ ಮನವೆಳೆದು ....
ರಣಹೇಡಿ ಎಡಿಯಾ ಕಲಿ ತುಳಿದು ....
ಮೃಗರಾಜನ ಮೈಗುಣ ಮೆರಿಸಲಿಕೆ —
ಇದೊ, ಶ್ರಾವಣ ಬಂದಿದೆ ಈ ನೆಲಕೆ !

೪

ಬಾನೊಳು ತುಂಬಿದೆ ಜೀವದ ಜಲವು ....
ಬುವಿಯೊಳು ತಂಗಿದೆ ಬೆಳಸಿನ ಬಲವು ....
‘ ಏಳಲಿ ಏಳಲಿ, ಕೃಷಿಕರ ಕುಲವು ! ’ ....
ಗಾಳಿ ಕೂಗುತಿದೆ — ಕೇಳದೆ ಉಲಿವು ?
ನಮ್ಮೆಲ್ಲರ ಹಸಿವನು ಹರಿಸಲಿಕೆ —
ಇದೊ ಶ್ರಾವಣ ಬಂದಿದೆ ಈ.ಕೆಲಕೆ !

೫

ಬರತ ತೊರೆಗಳದೊ ಸೂಸಿ ಹರಿದಿವೆ ....
ಅರತ ಕೆರೆಗಳಿಗೊ ತುಂಬಿ ಮೆರೆದಿವೆ ....
ಬರಡು ಒಳ್ಳಿಗಿಡ ಚಿಗಿತು ನಗುತಿವೆ ....
ಬರಿಹೊಲ-ನೆಲ ಸಸಿ-ಹಸಿರನುಗುತಿವೆ !
ಚೆಲುವಿಂಗೆ ಗೆಲವ ತಾನೀಯಲಿಕೆ —
ಇದೊ, ಶ್ರಾವಣ ಬಂದಿದೆ ಭುವನಕೆ !

೬

‘ ಬಂದಿದೆ ಗೆಳೆಯರೆ ನಲ್ಮೆಗಾಲ ....
ತಂದಿದೆ ಬಲ್ ಬೆಳಸಿಗೆ ಹದಗಾಲ ....
ಉಳುಮೆ-ಬಿತ್ತಿಗೆಗೆ ಇದುವೆ ಸಕಾಲ ....
ಕಳೆದುಕೊಳ್ಳದಿರಿ ನಿಮ್ಮಯ ಪಾಲ ! ’
ಇಂತೊರೆದು ಜಗವ ಜಾಗರಿಸಲಿಕೆ —
ಇದೊ, ಶ್ರಾವಣ ಬಂದಿದೆ ಭೂತಲಕೆ !

೭

ಶ್ರಾವಣದೀ ಶುಭಯೋಗವೆಂಥದೋ —
ದೇವಭಾವ ತಲೆಯೆತ್ತಿ ನಿಂತುದೋ !
ಹಾವು-ಹುಳುವನೂ ದೇವರು ಎನುವಾ
ಭಾವನೆಯಲಿ ಜನ ಪೂಜಿಸಲಿಹುದೋ !
ಆ ದೇವನ ಮಹಿಮೆಯ ಗಾಯನಕೆ
ಇದೊ ಶ್ರಾವಣ ಬಂದಿದೆ ಭುವನಕೆ !

೮

ಕನಸಿರದಾ ನಿದ್ದೆಯನೋಡಿಸುತ ....
ಮನದಾಶೆಗೆ ಕುಸುರನು ಮೂಡಿಸುತ ....
ಮನುಕುಲವನೆ ಉಯ್ಯಲೆಯಾಡಿಸುತ ....
ಕಣಸಿನ ಕತೆಗಳ ಕೊಂಡಾಡಿಸುತ ....
ಸವಿಯೊಲವನು ಹಂಚುತ ಮನ-ಮನಕೆ
ಇದೊ, ಶ್ರಾವಣ ಬಂದಿದೆ ಭುವನಕೆ !

೯

ಬರಲಿದೆ ಮಾನವಮಿಯ ಬಲ-ರಾಗ ....
ಕರೆದಿದೆ ಗೆಲವಿನ ದಸರೆಯ ಭೋಗ....
ತರಲಿದೆ ಇದೆ ದೀವಳಿಗೆಯ ಯೋಗ ....
ಬೆಳಕಿನ ರಾಜ್ಯವೆ ಇಳೆಯೊಳಗಾಗ !
ಆ ಬೆಳಕಿನ ದಾರಿಯ ತಿಳುಹಲಿಕೆ
ಇದೊ, ಶ್ರಾವಣ ಬಂದಿದೆ ಭುವನಕೆ !

* ಭಾರತ ಸ್ವಾತಂತ್ರ್ಯದ ೩ನೆಯ ಹುಟ್ಟುಹಬ್ಬದಂದು ಧಾರವಾಡದ ಬಾನುಲಿಯಲ್ಲಿ ಬಿತ್ತರಗೊಂಡ ಕವನವಿದು. ಸಂ. ಜ.

ಧಾರವಾಡದಿಂದ ಉತ್ತರಕ್ಕೆ

(ಪ್ರವಾಸದ ದಿನಚರಿ)

ಶ್ರೀ ಬಿ. ಎಸ್. ದೊಡ್ಡಜ್ಜಪ್ಪನವರ ಬಿ. ಎಸ್‌ಸಿ. (ಅಗ್ರಿ)

★

ಕನ್ನಡನಾಡಿನಲ್ಲಿ ನೀರಿಗೆ ಕೊರತೆಯಿಲ್ಲ; ಹದದ ನೆಲಕ್ಕೆ ಕೊರತೆಯಿಲ್ಲ; ದುಡಿವ ಜನಕ್ಕೆ ಕೊರತೆಯಿಲ್ಲ; ಬಂಡವಾಳಕ್ಕೂ ಕೊರತೆಯಿಲ್ಲ. ಆದರೂ ಗುಜರಾತದಂತೆ ಕರ್ನಾಟಕ ವ್ಯವಸಾಯದಲ್ಲಿ ಮುಂದಿಲ್ಲವೇಕೆ?

★

ಬಡೋದಾ
೧೬-೧೦-೪೯
ಸಂಜೆ ೯-೩೦

ನಮ್ಮ ಕಾರ್ಯಕ್ರಮದ ಮೇರೆಗೆ, ಒಕ್ಕಲುತನ ವಿಭಾಗದವರ ಅಂಕಿತದಲ್ಲಿರುವ ಹಣ್ಣಿನ ತೋಟ ಮತ್ತು ಇದೇ ತರದ ಬೇರೆ ಪ್ರಯೋಗಗಳನ್ನು ನಡೆಯಿಸುತ್ತಿರುವ ಪ್ರಯೋಗಮಂದಿರಕ್ಕೆ ಹೋಗಿದ್ದೆವು. ತೋಟದಲ್ಲಿ ಮಾವು, ಲಿಂಬೆ (ಕಾಗಡಿ), ಫಾಲ್ಸಾ, ಪೇರಲ, ಸೀತಾಫಲ, ರಾಮಫಲ, ಅಂಜೂರಿ, ನೆಲ್ಲಿಯಕಾಯಿ, ದ್ರಾಕ್ಷಿ ಇತ್ಯಾದಿ ಹಣ್ಣಿನ ಗಿಡಗಳನ್ನು—ಸಶಾಸ್ತ್ರೀಯವಾದ ರೀತಿಯಲ್ಲಿ ಅವುಗಳ ಅನುಪಾನಮಾಡಿ ಬೆಳೆಸಿದ್ದಾರೆ. ಇಲ್ಲಿಯ ಪ್ರಯೋಗಶಾಲೆಯವರು ಮಾಡಿದ ಕಾರ್ಯಗಳಲ್ಲಿ ಅತೀವ ಸ್ತುತ್ಯವಾದುದೆಂದರೆ—ಲಿಂಬೆಯ ಹಣ್ಣಿನಿಂದ, ಆರ್ಥಿಕ ದೃಷ್ಟಿಯಿಂದ ಮಹತ್ವದುವೆನಿಸಿಕೊಂಡ ಅನೇಕ ನೂತನ ಉತ್ಪಾದನಗಳನ್ನು ಸಿದ್ಧಗೊಳಿಸುವುದು. ತೋಟಗಳಲ್ಲಿ ಬೆಳಸಲಾದ ಕಾಗಡಿ ಲಿಂಬೆಯ ಹಣ್ಣುಗಳ ಉತ್ತಮೋತ್ತಮ ಉಪಯೋಗ ತೆಗೆದುಕೊಳ್ಳುವ ವ್ಯಾವಹಾರಿಕ ವಿಧಾನಗಳನ್ನು ನಾವಿಲ್ಲಿ ಕಣ್ಣುಟ್ಟಿ ಕಾಣಬಹುದು:—ರಸ ತೆಗೆದು ಅದನ್ನು ಕಾಜಿನ ಸೀಸೆಗಳಲ್ಲಿ ತುಂಬಿ, ಹವೆಯಾಡದಂತೆ ಬಾಯಿ ಬಿಗಿಮಾಡಿ ಸಂಗ್ರಹಿಸಿಡುವುದು, ಲಿಂಬೆಯ ರಸ ತೆಗೆದನಂತರ, ಸಿಪ್ಪೆಗಳಿಂದ ಎಣ್ಣೆ ತೆಗೆಯುವುದು, ಎಣ್ಣೆ ತೆಗೆದುಕೊಂಡನಂತರ ಇಂತಹ ಸಿಪ್ಪೆಯನ್ನು ಉಪ್ಪಿನಕಾಯಿ ಹಾಕಲಿಕ್ಕೆ ಉಪಯೋಗಿಸುವುದು, ಇಲ್ಲವೆ ಸಿಪ್ಪೆಗಳನ್ನು ಒಣಗಿಸಿ ಕಾಜಿನ ಭರಣಿಗಳಲ್ಲಿ ತುಂಬಿಟ್ಟು ಬೇಕಾದಾಗ ಉಪ್ಪಿನಕಾಯಿಗಾಗಿ ಉಪಯೋಗಿಸುವುದು, ಶುದ್ಧರಸವನ್ನಷ್ಟೇ ಬೇರ್ಪಡಿಸಿದನಂತರ ಉಳಿಯುವ ಜಂಟಿವನ್ನು ಪಾತ್ರೆಗಳ ಮೇಲ್ಮೈಗೆ ಹೊಳಪು ಕೊಡಲಿಕ್ಕೆ ಉಪಯೋಗಿಸುವುದು—ಮುಂತಾಗಿ. ಇವಲ್ಲದೆ ಮಾವು, ಅಕ್ಕ-ತಂಗಿಯರ ಹಣ್ಣು (ಪಪ್ಪಾಯಿ), ಪೇರಲ ಮೊದಲಾದ ಹಣ್ಣುಗಳ ತಿರುಳನ್ನು ತುಂಡರಿಸಿ, ಆ ತುಂಡುಗಳನ್ನು ತವರದ ಡಬ್ಬಿಗಳಲ್ಲಿ ಹಾಕಿ ಕಾಯ್ದಿಡುವುದು, ಮತ್ತೆ ಕೆಲವು ಹಣ್ಣುಗಳಿಂದ ರಸತೆಗೆದು ಅದಕ್ಕೆ ಸಕ್ಕರೆ ಕೂಡಿಸಿ ಪಾನಕ- ಪಾನೀಯಗಳನ್ನು ಸಿದ್ಧಮಾಡುವುದು ಇವೆಲ್ಲವುಗಳನ್ನೂ ಈ ಸಂಶೋಧನ ಮಂದಿರದವರು, ನೆರೆನಾಡಿನ ತೋಟಿಗರಿಗೆ ಪ್ರತ್ಯಕ್ಷ ಪ್ರಯೋಗಗಳಿಂದ ತೋರಿಸಿ ಮನಗಾಣಿಸಿದ್ದಾರೆ. ಇವೆಲ್ಲವುಗಳ ಬಗ್ಗೆ ನಮಗೆ ವಿವರಣಪೂರ್ವಕವಾಗಿ ಪಾಠ ಕೊಡಲಾಯಿತು.

ಜಿಲ್ಲಾ ಒಕ್ಕಲುತನದ ಅಧಿಕಾರಿಗಳಿಂದ ಜಿಲ್ಲೆಯ ಒಕ್ಕಲುತನ-ಉದ್ಯಮದ ಸ್ಥಾನಮಾನಗಳನ್ನು ಕುರಿತು ಕೆಲವು ಮಾತುಗಳನ್ನು ಕೇಳಿದನಂತರ, ಒಕ್ಕಲುತನದ "ವಸ್ತು-ಸಂಗ್ರಹಾಲಯ"ಕ್ಕೆ ಬಂದೆವು. ಒಕ್ಕಲಿಗರಿಗೆ, ಕೃಷಿಯಲ್ಲಿ ಅಡಕವಾದ ನೂತನವೂ ವೈಜ್ಞಾನಿಕವೂ ಆದ ವಿಧಾನಗಳ ಮನವರಿಕೆ ಮಾಡಿಕೊಡಲು ಇಲ್ಲಿ ಅನೇಕ ಚಿತ್ರಗಳನ್ನು ಬರೆಸಿಟ್ಟಿದ್ದಾರೆ, ಪ್ರತಿಮೆಗಳನ್ನು ನಿಲ್ಲಿಸಿದ್ದಾರೆ. ಭೂಸವಕಳಿಯಿಂದ ಹರಿದು ಹೋಗುವ ಜಿನುಗುಮಣ್ಣನ್ನು ಹೊಲಗಳಲ್ಲಿಯೇ ತಡೆಗಟ್ಟುವುದು, ಕಡಿದಾದ ಗುಡ್ಡದ ಓರೆಗಳನ್ನು ಸಾಗುಭೂಮಿಗಳನ್ನಾಗಿ ಮಾರ್ಪಡಿಸುವುದು, ಒಳ್ಳೆಯ ಕಸುವಾದ ಗೊಬ್ಬರಗಳನ್ನು ಸಶಾಸ್ತ್ರೀಯವಾಗಿ ಸಿದ್ಧಮಾಡುವುದು, ಹೈನದ ದನಗಳು ಮತ್ತು ಕುರಿ-ಆಡುಗಳ ಪೋಷಣೆ, ಅನುಪಾನ ಮೊದಲಾದ ವಿಷಯಗಳನ್ನು ಪ್ರತಿಮೆಗಳ ಮೂಲಕ ತೋರಿಸಿದ್ದಾರೆ. ಗ್ರಾಮ-ಸುಧಾರಣಾ ಕಾರ್ಯದಲ್ಲಿ ಎದುರು ನಿಲ್ಲುವ ಇತರ ಸಮಸ್ಯೆಗಳಾದ ಸಹಕಾರ, ಶಿಕ್ಷಣ, ಆರೋಗ್ಯ ಇವುಗಳ ಬಗ್ಗೆಯೂ ಚಿತ್ರ-ಪ್ರತಿಮೆಗಳಿವೆ. ಹಳ್ಳಿಯ ಬಂಧುಗಳಿಗೆ ಒಮ್ಮೆಲೇ ಜ್ಞಾನೋದಯ ಮಾಡುವ ಒಂದು ಪವಿತ್ರ ಆಗರವಿದಾಗಿದೆ. ಇದೊಂದು ಪ್ರೇಕ್ಷಣೀಯವಾದ ವಸ್ತುಸಂಗ್ರಹಾಲಯ. ಹಳ್ಳಿಗರಿಗೆ ಹಾಗೂ ಒಕ್ಕಲಿಗರಿಗೆ ಇದೊಂದು ಕೈಪಿಡಿ. ಮುಂಬಯಿ ಪ್ರಾಂತದಲ್ಲಿಯೇ ಈ ತೆರನಾದ ವಸ್ತು-ಸಂಗ್ರಹಾಲಯ ಬೇರೊಂದಿಲ್ಲವಂತೆ.

ಮಧ್ಯಾಹ್ನದಲ್ಲಿ "ಗಾಯಕವಾಡ-ಮಹಾರಾಜರ" ಅರಮನೆಯನ್ನು ನೋಡಲು ಹೋಗಿದ್ದೆವು. ಹೋಗುವ ಸ್ಥಳಮಹತ್ವ-

ಲೋ ಏನೋ, ಅಲ್ಲಿಗೆ ಹೋಗುವ ಮುನ್ನ ನಮ್ಮ ಗೆಳೆಯರ ಸಿದ್ಧತೆ— ಉಡುಪು-ತೊಡುಪು, ಅಲಂಕಾರ, ಬೆಡಗು- ಇವೆಲ್ಲವುಗಳಿಗೆ ವಿಶೇಷ ಆಸ್ಥೆ ಇತ್ತು—ಸಾಗಿಯೇ . ಆದರ ಪರಿಣಾಮವಾಗಿಯೇ ಉರಿಬಿಸಿಲಿನಲ್ಲಿ ಹೊರಬಿ- —ಉಣ್ಣೆಯ ಕೋಟುಗಳು; ಬಣ್ಣ ಬಿಳಿದಲ್ಲ ಮತ್ತೆ, ಕಪ್ಪು ಜಾಂಬಳಿ; ಬಹಳವೆಂದರೆ ನಾಸೀಪುಡಿ ಬಣ್ಣದುವು. ಕಾಲಿಗೆ ಕುಪ್ಪಸವನ್ನು ತೊಡಿಸಿ ಬೂಟು ಬಿಗಿದುಕೊಂಡನಂತರ— ಲ್ಲಿಯೂ ಹೊಕ್ಕುಳಿನಿಂದ ಅಂಗಾಲವರೆಗೆ ದೇಹದ ಯಾವ ವನ್ನೂ ನಮ್ಮ ಆವರಣವಿಲ್ಲದೆ ಬಿಡಲಾರೆವೆಂಬ ಹಮ್ಮು— ನ ಉಣ್ಣೆಯ ಕರಿ ಬಣ್ಣದ ಪ್ಯಾಂಟುಗಳು ಮೈಯನ್ನಾವರಿಸಿ- ವಾಸ ಅಂತಹ ಗೆಳೆಯರ ಮುಖ—ಬೆಂಗದಿರನ ಬಿಸಿಲಿನ ಕಾಪದಿಂದ ಕಪ್ಪಿಟ್ಟು ಬೆವರೊಡೆಯುತ್ತಲೇ ಇದ್ದಿತು. ಇದ- ಜಿಗವೇನಿಲ್ಲ. ಕಾಲಾಯ ತಸ್ಮೈ ನಮಃ! ನವಿಲು ವುದನ್ನು ನೋಡಿ ಮುಸಿಯುರಿನೆಯು ಕುಣಿಯುವ ಸಾಹಸ ಮ ತಪ್ಪೆಂದು ಹೇಳಲು ಬಾರದು. ಆದರೆ ಮುಸಿಯುರಿನೆಯು ತೋಳಿನ ಮೇಲೆ ಇಲ್ಲದಾಗ ಇಂತಹ ಪ್ರಯತ್ನ ಮಾಡಲಿ. ಲ್ಲಿ ಬಿದ್ದು ಸುಟ್ಟುಕೊಂಡೀತೆಂಬ ಭಯದಿಂದ ಈ ಹಿತದ ನ್ನು ಯಾರಾದರೂ ಅದಕ್ಕೆ ಆಡುವುದು ಸಹಜ.

ಮನೆಯ ಒಳಗೆ ಪ್ರವೇಶಿಸಲು ನಮಗೆ ಮುಂಚಿತವಾಗಿಯೇ ದೊರೆತಿತ್ತು. ಒಬ್ಬರು ನಮಗೆ ದಿಗ್ದರ್ಶಕರಾಗಿದ್ದರು. ಈ ಅರಮನೆ ಮೈಸೂರ ಮಹಾರಾಜರ ಅರಮನೆಯಷ್ಟು ನಿಲ್ಲ. ಆದರೂ ರಮ್ಯವೂ ಭವ್ಯವೂ ಆದ ನಿಲಯುಗಳಿವೆ— ವ ಒಳ ಅಂಗಳದಲ್ಲಿ. ಅಲ್ಲಲ್ಲಿ ಗಾಯಿಕವಾಡ ಮನೆತನದ ನ ಮಹಾರಾಜರುಗಳ, ಮಹಾರಾಜ್ಞಿಯರ ಮತ್ತು ಅವರ ದವರ ಲೋಹಪ್ರತಿಮೆಗಳನ್ನು ನಿಲ್ಲಿಸಿದ್ದಾರೆ; ದೊಡ್ಡ ತ್ರಗಳೂ ಅಲ್ಲಲ್ಲಿ ನೇತಾಡುತ್ತಿವೆ. ಒಂದೆರಡು ನಿಲಯ- ಮರಾಠಾ ಶೂರರ ಮಲ್ಲತನ, ಯುದ್ಧಪ್ರಿಯತೆ ಮತ್ತು ತಲ್ಲೀನತೆಗಳನ್ನು ಪ್ರದರ್ಶಿಸುವ ಭಾವಚಿತ್ರಗಳನ್ನಿಟ್ಟಿದ್ದಾರೆ. ಇರುವ ಭವನದಲ್ಲಿ ದಸರೆಯ ದಿನ (ವಿಜಯದಶಮಿ) , ರಾಜ್ಯದ ಪ್ರತಿಷ್ಠಿತ ಪ್ರಜೆಗಳು ಮತ್ತು ಅಧಿಕಾರಿವರ್ಗ- ಎಲ್ಲರೂ ಸಭೆಸೇರುವರಂತೆ. ಇದು ದಸರಾ—ಶುಭ ದ ಪವಿತ್ರ ಮಂದಿರ. ಇಲ್ಲಿ ವಿಶ್ವಾಮಿತ್ರ— ಮೇನಕೆ, ಟ್ಟಾಭಿಷೇಕ, ರಾಮಪಾದುಕಾಪಟ್ಟಾಭಿಷೇಕ ಮೊದಲಾದ ಯಣದ ಕಾಲದ ಮಹತ್ತ್ವದ ಘಟನೆಗಳ ಕಾಲ್ಪನಿಕ ತ್ರಗಳನ್ನು ತೂಗುಹಾಕಿದ್ದಾರೆ ಒಂದೆಡೆ ಶಸ್ತ್ರಾಗಾರ- ಳಗೆ ಕತ್ತಿ, ಬಾಣ, ಬಂದೂಕು, ಕವಚ ಮೊದಲಾದ ಗಳನ್ನು ಓರಣದಿಂದ ಹೊಂದಿಸಿ ಇಟ್ಟಿದ್ದಾರೆ. ಶೃಂಗಾರ ತಿಮೆಗಳಿಗೇನೂ ಕೊರತೆ ಇಲ್ಲ. ವಿರಾಮಾಸನಗಳಲ್ಲಿ ನೋಟದ ಹಿಡಿತದಲ್ಲಿ ಸಿಕ್ಕುವಂತೆ, ಶತಪಥ ಹಾಕುತ್ತ ತ್ತಿರುವಾಗ ಬದಿಗಳ ಕುಡಿನೋಟಕ್ಕೆ ಒಳಗಾಗುವಂತೆ, ಪುಟ್ಟ ತೋಟಗಳಲ್ಲಿಯ ವಿರಾಮಾಸನಗಳಲ್ಲಿ ಮಂಡಿಸಿದಾಗ ಕಣ್ತುಂಬ ನೋಡಲು, ಅಲ್ಲಲ್ಲಿ ನಗ್ನ ಸ್ತ್ರೀಯ ವಿವಿಧ ಬಿನ್ನಾಣದ ಮೆರುಗಿನ ಪ್ರತಿಮೆಗಳೂ ಭಾವ-ಚಿತ್ರಗಳೂ ಇರಿಸಲ್ಪಟ್ಟಿವೆ. ಇನ್ನೊಂದೆಡೆಗೆ ಮಾಂಡಲಿಕ ದೊರೆಗಳಿಂದ ಮತ್ತು ಗೆಳೆಯ- ದೊರೆಗಳಿಂದ ಅರ್ಪಿತವಾದ ಕಪ್ಪ-ಕಾಣಿಕೆ ಮತ್ತು ಮುಖ್ಯ- ರೂಪದ ಬೆಳ್ಳಿ-ಬಂಗಾರದ ದರ್ಶನೀಯವಸ್ತುಗಳ ಸಂಗ್ರಹವಿದೆ. ಸಂಸ್ಥಾನಿಕ ಅರಸರ ಸುಖಲೋಲುಪತೆ, ಶೃಂಗಾರಪ್ರಿಯತೆ, ಅತೀವ ಆಡಂಬರಮಯ ಸುಖಜೀವನ ಮೊದಲಾದುವುಗಳನ್ನು ಬಿಚ್ಚಿತೋರಿಸುವ ಯಾವತ್ತೂ ಸಾಧನ-ಸಲಕರಣೆಗಳಿಂದ ಅರಮನೆ ಕೂಡಿದೆ— ಎಂದು ಹೇಳಿದರೆ ಸಾಕಾದೀತು. ನಾವು ಬಡೋದೆಗೆ ಹೋದ ಕಾಲಕ್ಕೆ ದೊರೆಗಳು ವಿಲಾಯತಿಗೆ ಹೋಗಿದ್ದರು. ಈಗಿರುವ ಅರಮನೆಯ ಎಲ್ಲ ಸೊತ್ತಿನ ಮೇಲೆ ಮಹಾರಾಜರ ವೈಯುಕ್ತಿಕ ಹಕ್ಕು ಬಾಧ್ಯತೆಗಳಿರುವುವಂತೆ. ಅರಮನೆಯ ಒಳಗೂ ಹೊರಗೂ ತುಂಬ ಶಾಂತವಾದ ವಾತಾವರಣ; ಎಲ್ಲೆಲ್ಲಿಯೂ ನಿಶ್ಶಬ್ದ, ನೀರವತೆಗಳು.

ಬಡೋದೆಯಲ್ಲಿ ಇನ್ನುಳಿದ ಪ್ರೇಕ್ಷಣೀಯ ಸ್ಥಳಗಳೆಂದರೆ, ವಸ್ತುಸಂಗ್ರಹಾಲಯ ಮತ್ತು ಪ್ರಾಣಿಸಂಗ್ರಹಾಲಯ. ವಸ್ತು- ಸಂಗ್ರಹಾಲಯದಲ್ಲಿ ಅನೇಕ ಬಗೆಯ ವಸ್ತುಗಳನ್ನು ಓರಣದಿಂದ,

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ-ಬಡಬಗ್ಗರ-ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಯೋಗ್ಯವೆನಿಸಿದ ರೀತಿಯಲ್ಲಿ ಪ್ರದರ್ಶಿಸಿದ್ದಾರೆ. ವೈಶಿಷ್ಟ್ಯವೆಂದರೆ— ಇಲ್ಲಿ ಪುರಾತನ ಕಾಲದ ಮತ್ತು ಐತಿಹಾಸಿಕ ಕಾಲದ ಕೆತ್ತಿಗೆಯ ಮತ್ತು ಕಲಾಕುಸುರಿನ ವಸ್ತುಗಳನ್ನು ಶೋಧಿಸಿ ಅವುಗಳ ಐತಿಹ್ಯದೊಡನೆ ನೋಡಲು ಇಟ್ಟಿದ್ದಾರೆ. ಮಾನವಧರ್ಮದ ಸಂಸ್ಕೃತಿ ಹಾಗೂ ನಾಗರಿಕತೆಗಳಲ್ಲಿ ಸಂಶೋಧನೆಗೈದುದರಿಂದ, ಪ್ರತಿಫಲಗಳಾಗಿ ದೊರೆತ ಅನೇಕ ಮನೋರಂಜಕವಸ್ತುಗಳನ್ನಿಲ್ಲಿ ಕಾಣಬಹುದು. ಈ ದಿಶೆಯಲ್ಲಿ ಅಭ್ಯಾಸಕುತೂಹಲಿಗಳಿಗೊಂದು ಹಬ್ಬ. ಬೇರೆ ಬೇರೆ ರಾಷ್ಟ್ರ-ಜನಾಂಗಗಳ ಮಾನವವರ್ಗಗಳು ಪ್ರಗತಿಯ ಮಟ್ಟವನ್ನು ಮುಟ್ಟಿದ್ದರ ಹಿನ್ನೆಲೆಯ ಐತಿಹ್ಯವು ಕಲಾರೂಪವಾಗಿ ಮೂರ್ತಿವೆತ್ತಿದೆ. ಇನ್ನೊಂದೆಡೆಗೆ ರಾಜವೈಭವದ ಸಾಮಗ್ರಿಗಳಿವೆ. ಅವರ ಉಡುಪು-ತೊಡುಪುಗಳ ವೈವಿಧ್ಯತೆ, ಹಾಸಿಗೆ-ಹೊದಿಕೆಗಳ ವೈಖರಿ, ಊಟ-ಉಪಚಾರ, ಪೂಜಾ, ತಾಂಬೂಲ, ಸಂತೋಷ-ಕೂಟ, ವಿಶೇಷ ಸಂಭ್ರಮಗಳಲ್ಲಿ ಉಪಯೋಗಿಸುವ ಅನೇಕ ತರದ ಪಾತ್ರೆಗಳ ಗಡಣ— ಇವೆಲ್ಲವುಗಳು ಕನ್ನಡಿಯ ಕಪಾಟುಗಳಲ್ಲಿ ಶೋಭಾಯಮಾನವಾಗಿ ಮೆರೆಯುತ್ತಿವೆ. ಮತ್ತೊಂದೆಡೆಗೆ ಪ್ರಾಚೀನ ಹಾಗೂ ಐತಿಹಾಸಿಕ ಕಾಲಗಳಲ್ಲಿ ನೆಲಸಿದ ವಿವಿಧ ಜನಾಂಗಗಳ ಭಾಷೆ, ಸಾಹಿತ್ಯ, ಸಂಸ್ಕೃತಿ, ನಾಗರಿಕತೆ, ಆಚಾರ-ವಿಚಾರ, ರೀತಿ-ನೀತಿ, ವೈಜ್ಞಾನಿಕಮನೋಭಾವ ಹಾಗೂ ವಿಕಾಸಗಳನ್ನು ವಿಸ್ತರಿಸುವ ಪ್ರತಿಮೆಗಳೂ ಭಾವಚಿತ್ರಗಳೂ ವಿರಚಿಸಲ್ಪಟ್ಟಿವೆ. ಮುಗುದೊಂದೆಡೆಗೆ ಶಿಲಾಶಾಸನಗಳ ಮಾಲಿಕೆಯನ್ನೇ ಹೆಣೆದಿಟ್ಟಿದ್ದಾರೆ. ಶಿಲಾಶಾಸನಗಳಲ್ಲಿಯ ಚಿತ್ರ-ವಿಚಿತ್ರವಾದ ಬರೆಹದ ವೈವಿಧ್ಯ, ಕುತೂಹಲಿಗಳನ್ನು ಮುಗ್ಧರನ್ನಾಗಿ ಮಾಡಿಬಿಡುವುದು. ಬೇರೆ ಬೇರೆ ಪಶು-ಪಕ್ಷಿಗಳ ಅಸ್ಥಿಪಂಜರಗಳು,

ಎಲುಬಿಲ್ಲದ ಕೀಟಕ ಮೊದಲಾದ ಕೆಳವರ್ಗದ ಪ್ರಾಣಿಗಳ ಷ
ಶರೀರಗಳು ಇತ್ಯಾದಿಗಳನ್ನೂ ನಾವಿಲ್ಲಿ ಕಾಣಬಹುದು. ವ
ಸಂಗ್ರಹಾಲಯದ ಎದುರಿಗೆ ಇನ್ನೊಂದು ದೊಡ್ಡ ಭವನವಿದೆ.
ಭವನದಲ್ಲಿ ಪಾಶ್ಚಾತ್ಯರ—ಅದರಲ್ಲಿಯೂ ವಿಶೇಷವಾಗಿ ಇಂಗ್ಲಿ
ಫ್ರೆಂಚ, ಡಚ್ ಮತ್ತು ಇಟಾಲಿಯನ್ ಕಲಿಗಳ, ರಾಜಕಾರಣ
ಮತ್ತು ಒಳ್ಳೆಯ ಮೇಧಾವಿ ಮುತ್ಸದ್ದಿಗಳ ಭಾವ-ಚಿತ್ರಗಳಿವೆ.
ಭವನದಲ್ಲಿಯೂ ಮೂರು ಕಡೆಗೆ ಶೃಂಗಾರಮಯ ಪ್ರತಿಮೆಗ
ಭವನದ ಎಡ ಮತ್ತು ಬಲ ಪಕ್ಕಗಳಲ್ಲಿ ನಗ್ನಸ್ತ್ರೀಯ ಪ್ರ
ಗಳು ನಿಂತಿವೆ. ಭವನದ ಮಧ್ಯೆ ವಿಟನೊರ್ವನು ವಿಟಗಾತಿ
ರ್ವರನ್ನು ತನ್ನ ಎರಡೂ ತೋಳುಗಳಲ್ಲಿ ತಕ್ಕೆಹಾಕಿಕೆ
ದೃಶ್ಯವನ್ನು ತೋರುವ ಇನ್ನೊಂದು ಪ್ರತಿಮೆ ಸ್ಥಾಪಿತವಾ
ಈ ಪ್ರತಿಮೆಯಲ್ಲಿಯ ವಿಟ ಮತ್ತು ವಿಟಗಾರ್ತಿಯರು ನಗ್ನ
ದ್ದಾರೆ. ವಸ್ತುಸಂಗ್ರಹಾಲಯವನ್ನು ಪ್ರವೇಶಿಸುವಾಗ ಬ
ಯಿಂದ ಹೋಗಬೇಕು. ನಮ್ಮ ಕೊಡೆ, ಕ್ಯಾಮರಾ ಮೊದ
ವಸ್ತುಗಳು ದ್ವಾರದಲ್ಲಿದ್ದ ಪೋಲಿಸನ ಅಧೀನಕ್ಕೆ ಒಳಪಟ್ಟಿದ
ಇನ್ನೂ ಅತ್ತಿತ್ತ ಅಲೆಯುತ್ತಲೇ ಇದ್ದಾಗ ಗಂಟೆ ಬಾರಿಸಿ
ಹೊರಗೆ ಹೋಗಲು ಇದು ಸಂಜ್ಞೆ ಎಂದು ಗೊತ್ತಾಗಿ ಹ
ಬಿದ್ದೆವು. ಐದು ಗಂಟೆ ಸಾಯಂಕಾಲದ ಹೊತ್ತಿಗೆ ವಸ್ತುಸಂಗ್ರ
ಲಯವು ಮುಚ್ಚುವುದು.

ವಸ್ತುಸಂಗ್ರಹಾಲಯದ ಬಲಬದಿಗೆ ಒಂದೂವರೆ ಫರ್ಲಾಂ
ಗಳ ಮೇಲೆ ಪ್ರಾಣಿ ಸಂಗ್ರಹಾಲಯವುಂಟು. ಮೈಸೂರಿನ
ಸಂಗ್ರಹಾಲಯಕ್ಕೂ ಇದಕ್ಕೂ ಬಹಳ ಮಟ್ಟಿಗೆ ಅಂತರವಿದೆ.
ದೊಡ್ಡದು; ಪ್ರಾಣಿಗಳ ಸಂಖ್ಯೆ ಹೆಚ್ಚು. ಇಲ್ಲಿರುವ ಹಿಂಸ್ರ

ಕ್ಯಾಸೋಶಿನ್
ಎಂಥ ಕೆಮ್ಮಿದ್ದರೂ ಕೂಡಲೆ ಗುಣ ಪಡಿಸುವುದು.
ಏಜೆಂಟರು, ಸ್ಟಾಕಿಸ್ಟರು ಬೇಕು.

ಯದುಪತಿ
ಸ್ವತಂತ್ರ ಸಾಮಾಜಿಕ ಕಾದಂಬರಿ.
ಬರೆದವರು :
ಶ್ರೀಮಾನ್ ಸಾಲಿ ರಾಮಚಂದ್ರರಾಯ
ಭಾರತದ ಸ್ವಾತಂತ್ರ್ಯ ಸಂವರ್ಧನೆಗೂ
ಕ್ಷೇಣೆಗೂ ಇಂದು ಆದರ್ಶಜೀವಿಗಳ ಅ
ತುಂಬ ಇದೆ. ಅಂತಹ ಸುಂದರ ಆದರ್ಶ
ಜನತೆಯ ಕಣ್ಣೆದುರು ಇರಿಸಬಲ್ಲ ನ
ಕಾದಂಬರಿ. ಕರ್ನಾಟಕ ವಿ. ವಿ. ನ
ಕುಲಪತಿಗಳಾದ ಶ್ರೀಮಾನ್ ಆರ್. ಎ.
ದಾರರು ಮುನ್ನುಡಿ ಬರೆದಿದ್ದಾರೆ.
ವಿಳಾಸ : ಶ್ರೀ. ಸಾಲಿ ರಾಮಚಂದ್ರರಾ
'ಶ್ರೀನಿಕೇತನ' ಧಾರವಾಡ.

ವರೆ ಹುಲಿ, ಸಿಂಹ, ಕರಡಿ, ಚಿರ್ಚ ಇಷ್ಟೇ. ಸರಿ, ಮಂಟ-
, ಬಿಳಿ ಇಲಿ ಮೊದಲಾದ ಸೌಮ್ಯ ಪ್ರಾಣಿಗಳು, ಶಹಾಮೃಗ
ನ್ನಿತರ ಪಕ್ಷಿಗಳು, ನೀರಬೆಕ್ಕು, ಎಮೂ, ಬಾತುಗೋಳಿ ಇವೇ
ಲಾದುವುಗಳು ಈ ಪ್ರಾಣಿಸಂಗ್ರಹಾಲಯದ ಸಂಪತ್ತು.
ಸಂಗ್ರಹಾಲಯದ ಕ್ಷೇತ್ರವು ಒಂದು ಪುಟ್ಟ ಕೊಳ್ಳದಿಂದ
ಗಿಸಲ್ಪಟ್ಟದೆ. ಆಚೀಚೆಗೆ ಹಾಯ್ದಾಡಲು ಕೊಳ್ಳದ ಮೇಲೆ
ತೂಗಾಡುವ ಸೇತುವೆ (ಹ್ಯಾಂಗಿಂಗ್ ಬ್ರಿಜ್) ಯುಂಟು.
ಡೋದೆಯು ರಾಜಧಾನಿಸ್ಥಳವಾದುದರಿಂದ ಊರು ಭವ್ಯ
ರಮಣೀಯವಾದ ಇಮಾರತುಗಳಿಂದಲೂ ಪ್ರಶಸ್ತವಾದ
ಗಳಿಂದಲೂ ಕೂಡಿದೆ. ಊರಲ್ಲಿ ಅಲ್ಲಲ್ಲಿ ಉದ್ಯಾನಗಳನ್ನು
ದ್ದಾರೆ. ಸುರತ, ಭಡೋಚಗಳಂತೆ ಊರು ಮುಡಿಕೆಯಾಗಿಲ್ಲ.
ಾರದಲ್ಲಿ ಮಾತ್ರ ಬಡೋದೆಯು ಸುರತ, ಭಡೋಚಗಳಿಗಿಂತ
ಹಿಂದೆ ಬೀಳಬಹುದು. ಇಲ್ಲಿಯೂ ಸಾಕಷ್ಟು ನೂಲುವ
ನೇಯುವ ಗಿರಣಿಗಳುಂಟು. ಈ ಊರಲ್ಲಿ ಶೈಕ್ಷಣಿಕ ಸಂಸ್ಥೆ-
ವಿಪುಲವಾಗಿ ಬೆಳೆದಿವೆ. ಜನರು ಸುಶಿಕ್ಷಿತರು, ಒಳ್ಳೆಯ
ಂಕರು, ಸಂಸ್ಕೃತಿ ಸಂಪನ್ನರೆಂದು ಅವರ ಉಡುಪು-ತೊಡಪು,
ಳಿಯಿಂದ ಗೊತ್ತಾಗುತ್ತದೆ. ಬಡೋದೆಯಲ್ಲಿ ಜನರ ಓಡಾ-
ಮುಖ್ಯ ಬೀದಿ ಎಂದರೆ "ಪಾಣೀಗೇಟ್" ರೋಡು. ಇದು
ವಾಡದ ದತ್ತಾತ್ರೇಯ ಗುಡಿಯ ಓಣಿ ಇದ್ದಂತೆ. ಪಾಣಿಗೇಟಿ
ಸ್ವಲ್ಪ ಹಿಂದೆ ಹೋದರೆ ಅಲ್ಲಿಯು ಬಳೆ, ಕುಂಕುಮ ಮತ್ತು
ನ ಅಂಗಡಿಗಳಿವೆ. ಈ ಬೀದಿಯು ಮಾತ್ರ ಅಡ್ಡ ಒಡೆದಿರು-
ಂದ ಸ್ವಲ್ಪ ಇಕ್ಕಟ್ಟಾಗಿದೆ. ಸಾಯಂಕಾಲಕ್ಕೆ ಈ ಬೀದಿಯಲ್ಲಿ
ಮಕ್ಕಳ ದಟ್ಟಣೆ ಅತಿ ವಿಶೇಷ. ಇಲ್ಲಿಯ "ಕಿಲಿ ಬಿಲಿ"
ದೂರದಿಂದಲೇ ಕರ್ಣಗಳನ್ನು ಸೆರೆಹಿಡಿಯುತ್ತದೆ.
ೀಗೇಟ್ ಕೂಟದ ಸಮೀಪದಲ್ಲಿ ಒಂದು ದೊಡ್ಡ ಜೈನ ಬಸ್ತಿ
ಊರ ಇನ್ನೊಂದು ಭಾಗದಲ್ಲಿ "ಕೀರ್ತಿ ಮಂದಿರ" ಎಂಬ
ಣೀಯವಾದ ಗುಜ್ಜರ ದೇವಸ್ಥಾನ ಉಂಟು. ಈ ಎರಡೂ
ಸ್ಥಾನಗಳಿಗೆ ಸಾಯಂಕಾಲದಲ್ಲಿ ಭಕ್ತಜನರು ಮುತ್ತಿರು-
ಪಾಣೀಗೇಟ್ ಮೊದಲಾದ ಮುಖ್ಯ ಬೀದಿಗಳಲ್ಲಿ ವಾಹನ-
ಡಾಟ ಅತೀವವಿರುವುದರಿಂದ, ಪಾದಚಾರಿಗಳಿಗೆ ಒಂದು
ಿಂದ ಇನ್ನೊಂದು ಬದಿಗೆ ಹಾಯ್ದಾಡಲಿಕ್ಕೆ ಬಹಳ ಕಠಿಣ
ುತ್ತದೆ. ಬಹುಮಟ್ಟಿಗೆ ಜನರ ಸಾಗಾಟವು ಸಿಟಿ-ಸರ್ವ್ಹಿಸ್
ಗಳ ಮೂಲಕವಾಗಿಯೇ ನಡೆಯುತ್ತದೆ. ಊರಿನ ಒಂದು
ಯಿಂದ ಇನ್ನೊಂದು ತುದಿಗೆ ಪ್ರಯಾಣ ಬೆಳಸುವವರು ಎರಡು
ಟರ ವಾಹನಗಳ ಸಹಾಯ ತೆಗೆದುಕೊಳ್ಳಬೇಕಾಗುತ್ತದೆ.
ಲ್ಲಿಯ ಜನರಾಡುವ ಭಾಷೆ ಗುಜರಾತಿ, ಹಿಂದೀ ಭಾಷೆಯೂ
ರಾತದ ಉಳಿದ ಭಾಗಗಳಲ್ಲಿಗಿಂತ ಇಲ್ಲಿ ಹೆಚ್ಚು ಮಟ್ಟಿಗೆ
ಯಲ್ಲಿದೆ. ಮಹಾರಾಜರು ಮರಾಠರಿರುವುದರಿಂದ ಅರಮನೆ
ತರ ಸರಕಾರೀ ಭವನಗಳಲ್ಲಿ ಮರಾಠಿಯೂ ತಲೆ ಎತ್ತಿದೆ.
ಮ ಜೀವನವು ತೀರ ವೆಚ್ಚದಾಯಕವಾದದ್ದು. ಹಾಟೆಲ್ಲು
ಊಟದ ಗೃಹಗಳಿಗೆ ಭೆಟ್ಟಿ ಕೊಟ್ಟವರಿಗೆಲ್ಲ ಈ ಮಾತು ಮನವರಿಕೆ
ಯಾಯಿತು.

ಆನಂದ
೧೬ನೆಯ ಅಕ್ಟೋಬರ್, ೪೯
ಸಂಜೆ ೯ ಗಂಟೆ,

ಇಂದು ಮುಂಜಾವು ಬಡೋದೆಯ ಫಾರ್ಮಿನವರು ಬೆಳೆಗಳ ಸಾಲಗ್ಗೈ (Rotations) ಪದ್ಧತಿಯ ಸಂಬಂಧವಾಗಿ ನಡೆಸಿದ ಪ್ರಯೋಗವನ್ನು ನಿರೀಕ್ಷಿಸಿದೆವು. ಅಲ್ಲಿಂದ ಮತ್ತೆ ಹಣ್ಣು ತೋಟ-ದಲ್ಲಿ ತಿರುಗಾಡಿ "ಅಲೆಂಬಿಕ್ ಕೆಮಿಕಲ್ ವರ್ಕ್ಸ್" ಸಂಸ್ಥೆಯವರ ರಾಸಾಯನಿಕ ಕಾರಖಾನೆಯನ್ನು ಸಂದರ್ಶಿಸಿದ್ದಾಯಿತು. ದೊಡ್ಡ ಪ್ರಮಾಣದ ಮೇಲೆ ಮದ್ಯಾರ್ಕ ಮಿಶ್ರಿತವಾದ ಔಷಧಗಳನ್ನು ಉಳಿದ ಶಕ್ತಿವರ್ಧಕಗಳನ್ನು ಚುಚ್ಚುಮದ್ದು (ಇಂಜಕ್ಶನ್ ಸೀರಮ್) ಗಳನ್ನು, ಸೂಕ್ಷ್ಮ ತರದ ಕಾಜಿನ ಸಾಮಾನುಗಳನ್ನು ಇಲ್ಲಿ ತಯಾರಿಸುತ್ತಾರೆ. ಒಡೆದ ಕಾಜಿನ ತುಂಡುಗಳನ್ನು ಕರಗಿಸಿ, ಈ ಕರಗಿ ಕಾಯ್ದ ರಸವನ್ನು ಬೇರೆ ಬೇರೆ ಹಡಿಯಚ್ಚುಗಳಲ್ಲಿ ಹೊಯ್ದು ಕಾಜಿನ ಸೀಸೆ ಮೊದಲಾದ ಉಪಯುಕ್ತ ವಸ್ತುಗಳನ್ನು ತಯಾರಿಸುವ ಯಂತ್ರವೊಂದನ್ನು ಅಮೇರಿಕೆಯಿಂದ ಇಲ್ಲಿಗೆ (ಬಡೋದೆಯ ಅಲೆಂಬಿಕ್ ಕೆಮಿಕಲ್ ವರ್ಕ್ಸ್) ತರಿಸಿದ್ದಾರೆ.

ಗಜಕರ್ಣ, ಹುರುಕು, ಇಸಬು
ಮುಂತಾದ ಚರ್ಮರೋಗಗಳನ್ನು ತಪ್ಪದೆ
ಗುಣಪಡಿಸುವ ಔಷಧ
ಗೋವಾ ಮಲಮ್
ಸ್ಟಾರ್ ಕಂಪನಿ,
ಬೆಳಗಾಂವಿ.

ಶಾಂತಿ ಸಾಹಿತ್ಯಮಾಲೆ

ಬಾದಾಮಿ

(ವಿಜಾಪೂರ ಜಿಲ್ಲೆ)

ಈಗ ಹಾನೆ ಅರಳಿವೆ :

ಪೂಜಾ (ಗದ್ಯಗೀತಗಳು)
ಶ್ರೀ. ಸಿಂಪಿ ಲಿಂಗಣ್ಣನವರು.

ಶೋಚನೀಯ ನಿಧನ (ಕಥಾಸಂಗ್ರಹ)
ಶ್ರೀ. ರಾ. ಪಾ. ಶಿರೋಳ.

ಅರಿಯಾಳು (ನೀಳ್ಗತೆಗಳೆರಡು)
ಶ್ರೀ ಕುಲಕರ್ಣಿ ಬಿಂದುಮಾಧವ.

ಕೇವಲ ನಾಲ್ಕು ರೂಪಾಯಿ ಚಂದಾ ಹಣಕ್ಕೆ
ಈ ಮೇಲಿನ ಪುಸ್ತಕಗಳಲ್ಲದೆ ಇನ್ನೊಂದು ಕಾದಂಬರಿ
ಚಂದಾದಾರರಾಗುವವರಿಗೆ ದೊರೆಯುತ್ತದೆ.

ಆ ಯಂತ್ರ ನಡೆಸಲು ಮತ್ತು ಅದರ ತಾಂತ್ರಿಕ ವಿದ್ಯೆಯನ್ನು **ಇಲ್ಲಿಯ ಜನರಿಗೆ ಕಲಿಸಲು ಅಮೇರಿಕೆಯಿಂದ** ಒಬ್ಬ (ಇಂಜನೀಯರ್) **ತಂತ್ರಜ್ಞನನ್ನೂ** ಇಲ್ಲಿಗೆ ಕರೆಯಿಸಿಕೊಂಡಿದ್ದಾರೆ. ಅವನ **ಪ್ರತಿ ತಿಂಗಳ ಸಂಬಳವು ಮೂರು** ಸಾವಿರ ರೂಪಾಯಿಗಳೆಂದು **ಕೇಳಿದೆವು.** ಅವನ ಸಂಬಳದ ಅಂಕಿ ನಂಬಲು ಅರ್ಹವೋ **ಅನರ್ಹವೋ ಆ ಮಾತು ಬೇರೆ.** ಆದರೆ ಭಾರತೀಯರ ಯಂತ್ರ ವಿದ್ಯೆಯ ಪ್ರಗತಿಯ ಮಟ್ಟವು ಮಾತ್ರ ಪ್ರತಿಯೊಬ್ಬ ಭಾರತೀಯನ **ಹೃದಯವನ್ನು** ಕಂಪಿಸಲೇ ಬೇಕು.

ಬಡೋದೆಯಿಂದ ಸಾಯಂಕಾಲ ಹೊರಟು ಇರುಳು ಇಲ್ಲಿಗೆ **ಬಂದಿಳಿದಿದ್ದೇನೆ.**

ಆನಂದ
೧೮ನೆಯ ಅಕ್ಟೋಬರ್, ೫೦.
ಸಂಜೆ ೯ ಗಂಟೆ.

ಆನಂದದಲ್ಲಿ ನಮ್ಮ ಬಿಡಾರವಿದುವುದು, ' ಆನಂದ ಒಕ್ಕಲುತನ **ಸಂಸ್ಥೆ 'ಯವರ ಒಕ್ಕಲುತನದ** ಕಾಲೇಜಿನಲ್ಲಿ. ಸಂಸ್ಥೆಯವರು **ಕಾಲೇಜಿನ ಜೊತೆಗೆ ಒಂದು ಒಕ್ಕಲುತನದ** ಶಾಲೆಯನ್ನೂ ನಡೆಸಿ**ಕೊಂಡು ಹೋಗುತ್ತಿದ್ದಾರೆ.** ಮಾರವಾಡಿಗಳು ಅನೇಕ ಪರೀಕ್ಷಾ**ಕಾಲಗಳಲ್ಲಿ ಕೊಡುಗೈ ದೊರೆಗಳೆಂದು** ಹೆಸರು ಗಳಿಸಿಕೊಂಡಿರುವ **ಮಾತಿನಲ್ಲಿ ಆಶ್ಚರ್ಯವೇನಿಲ್ಲ.** ' ಮನಸುಖಲಾಲ ' ಮತ್ತು ' **ಛಗನ್‌ಲಾಲ** ' ಎಂಬಿರ್ವರು **ಕೊಡುಗೈ** ಶೇಟಜಗಳ ಉದಾರ **ದೇಣಿಗೆಯಿಂದ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ.** ಸಂಸ್ಥೆಯವರು **ಮೊದಲು** ಪ್ರಾರಂಭಿಸಿದ್ದು **ಒಕ್ಕಲುತನದ ಶಾಲೆಯನ್ನು.** ...ಗರ ಮಕ್ಕಳು ಕೃಷಿಕರ್ಮ ಶಾಸ್ತ್ರದಲ್ಲಿ ಸುಧಾರಿಸಿದ ಮತ್ತು ... ಮಾದರಿಯ ಶಿಕ್ಷಣವನ್ನು ಹೊಂದಿ ಮರಳಿ ತಮ್ಮ ತಮ್ಮ ... ಗಳಿಗೆ ಹೋಗಿ ಸ್ವತಃ ಒಕ್ಕಲುತನ ಮಾಡಲು **ಸಮರ್ಥರಾಗ**... ಬುದು, ಶಾಲಾ ಸ್ಥಾಪನೆಯ ಪೂರ್ವದಲ್ಲಿ **ಸಂಸ್ಥೆಯವರು** ... ಕೊಂಡ ಉದ್ದೇಶವು. ಮೊನ್ನೆ ಮೊನ್ನೆ ೧೯೪೭ನೆಯ **ವರ್ಷ**... ಧಾರವಾಡದಲ್ಲಿ ಒಕ್ಕಲುತನದ ಕಾಲೇಜು **ಸ್ಥಾಪಿಸಲ್ಪಟ್ಟಾಗ**... ಸಂಸ್ಥೆಯವರೂ ಸರಕಾರದ ಮನ್ನಣೆ **ಪಡೆದು** ಕಾಲೇ... ಸ್ಥಾಪಿಸಿದರು, ಈಗ ಧಾರವಾಡ ಮತ್ತು **ಆನಂದದ ಒಕ್ಕಲು**... ಕಾಲೇಜುಗಳೆರಡೂ ಅಕ್ಕ-ತಂಗಿಯರು. (**ಅಕ್ಕನಾರು** ತಂಗಿ... ಎಂದು ನಿರ್ಣಯಿಸುವ ಹೊಣೆಯನ್ನು **ನಿಮಗೇ** ಬಿಡು... ಆನಂದದ ಕಾಲೇಜು ' ಖಾಸಗಿ '**ಯದಾಗಿದ್ದರೂ** ಒಕ್ಕಲು... ಸಂಬಂಧಪಟ್ಟ ವಿವಿಧ ವೈಜ್ಞಾನಿಕ **ವಿಷಯಗಳಲ್ಲಿ** ಸಂಶೋ... ನಡೆಸುವ ಏರ್ಪಾಡು ಇಲ್ಲಿ ಇದೆ. ಒಕ್ಕಲುತನದಲ್ಲಿ ಪದವೀಧ... ವರು ಈ ಸಂಶೋಧನಾ ಮಂದಿರಗಳಲ್ಲಿ, **ಉಚ್ಚ** ಶಿಕ್ಷಣ... ಅಭ್ಯಸಿಸುತ್ತಾರೆ. ಧಾರವಾಡ ಒಕ್ಕಲು**ತನದ ಕಾಲೇಜು** ... ಕಾರಿ ' ಯದಿದ್ದರೂ, ಈ ವರೆಗೆ ಇಂತಹ **ಸೌಕರ್ಯ**ಗಳಿಂದ ... ವಾಗಿದೆ. ಮುಂದಿನ ವರುಷ ಕರ್ನಾ**ಟಕ** ವಿಶ್ವವಿದ್ಯಾ... ಕಾರ್ಯರಂಗಕ್ಕೆ ಇಳಿದ ನಂತರ ಇಲ್ಲಿ **ಉಚ್ಚ ಶಿಕ್ಷಣದ** ... ಸಲಕರಣೆಗಳ ಸೌಕರ್ಯಗಳು **ಒದಗಬಹುದೇನೋ** ಎಂಬ ಕಿರಣ ಅಂಕುರಗೊಂಡಿದೆ ಬಹುಜನರಲ್ಲಿ.

ಆನಂದದ ಕಾಲೇಜು, ವಸತಿಗೃಹ, **ಪ್ರಯೋಗ**ಶಾ... ಮೊದಲಾದ ಎಲ್ಲ ಇಮಾರತುಗಳು ರಮಣೀಯವಾಗಿವೆ. ... ಜನ ವಾತಾವರಣವೇ ಸೊಗಸಾಗಿದೆ. ಎಲ್ಲೆಲ್ಲಿಯೂ **ಶಿಸ್ತು**, ... ಕಟ್ಟುನಿಟ್ಟುತನಗಳು ಒಡೆದು ಕಾಣುತ್ತವೆ. **ಇಲ್ಲಿಯ** ಫಾ... ಮೇಲೆ ನಡೆಯಿಸಲಾಗಿದ್ದ ಅನೇಕ **ಪ್ರಯೋಗಗಳನ್ನು** ನಿರೀಕ್ಷಿಸಿದೆವು. ವಿವಿಧ ಶಾಖೆಗಳಲ್ಲಿ ನಡೆದ **ಸಂಶೋ**... ವಿಷಯವಾಗಿಯೂ ನಮಗೆ ಕೆಲವು **ಸಂಗತಿಗಳನ್ನು** ವಿ... ಲಾಯಿತು.

ಆನಂದವು " ಚರೋತ್ತರ " ಎಂಬ **ಪ್ರದೇಶ**ದಲ್ಲಿದೆ. ಪ್ರದೇಶವು ಹೈನದ ಉತ್ಪಾದನೆಯ **ದೃಷ್ಟಿಯಿಂದ** ಇಡಿ ... ಪ್ರಾಂತದಲ್ಲಿಯೇ ಮಹತ್ತ್ವದ ಸ್ಥಾನವನ್ನು **ಗಳಿಸಿಕೊಂಡಿದೆ.** ... ದದ ಸುತ್ತುಮುತ್ತಲಿನ ದೂರದ ಹಳ್ಳಿಗಳಿಂದ ಹಾಲು ಸಂಗ್ರ... ಆ ಹಾಲನ್ನು ಶಾಸ್ತ್ರೋಕ್ತ ರೀತಿಯಲ್ಲಿ ಕಾಯಿಸಿ, **ಡಬ್ಬಿ**ಗಳಲ್ಲಿ ಮುಂಬೈ ನಗರಕ್ಕೆ ಕಳಿಸುವ ಕಾರ್ಯವನ್ನು " **ಆನಂದ** ... ಪ್ರಾಡಕ್ಟ್ಸ ಲಿಮಿಟೆಡ್ ಫ್ಯಾಕ್ಟರಿ "ಯವರು **ನಿರ್ವಹಿಸಿ**... ಇದೊಂದೇ ದುಗ್ಧಾಲಯದಿಂದ ಮುಂಬೈ ನಗರಕ್ಕೆ ದಿನಾಲ... ನೆಂಟು ಸಾವಿರ ಪೌಂಡುಗಳಷ್ಟು ಹಾಲು **ಕಳಿಸಲ್ಪಡುತ್ತ**ದೆ. ... ನ್ನುಳಿದು, ಆನಂದದಲ್ಲಿಯೇ ಹಾಲಿನ **ಪುಡಿಯನ್ನು** ತಯಾ... **ಮತ್ತು ಬೆಣ್ಣೆಯನ್ನು** ತೆಗೆಯುವ **ಇನ್ನೆರಡು ದೊಡ್ಡ** ಕಾ...

ಶಾಂತಿಸೇವಾ ಸದನದ ಸುಂದರ ಪ್ರಕಟನೆ!

" ಮಾಯಾ ಮಂದಿರ "

ಶ್ರೀ ಭುಜೇಂದ್ರ ಮಹಿಷವಾಡಿ

ಅವರ

ಸರ್ವೋತ್ಕೃಷ್ಟ ಕವನ ಸಂಗ್ರಹ.

ಪ್ರೊ. ಮುಗಳಿ ಅವರು ಮುನ್ನುಡಿಯಲ್ಲಿ
ಹೀಗೆ ಬರೆಯುತ್ತಾರೆ:

'**ಮಾಯಾ ಮಂದಿರ**' ದಿಂದ ಮೊದಲಾಗಿ '**ಶಾಂತಿ**' ಯಲ್ಲಿ ಕೊನೆಗೊಳ್ಳುವ ಈ ಸಂಗ್ರಹವು **ಭುಜೇಂದ್ರ**ರ ...ತ್ತ್ವಕದೃಷ್ಟಿಗೆ ಸಾಕ್ಷಿಯಾಗಿದೆ. **ಭುಜೇಂದ್ರ**ರಕವಿತಾಶಕ್ತಿ ...ಜೇಯವಾದುದು, ಸಹಜವಾದುದು.' **ಬೆಲೆ**: ೧-೮-೦

ದೊರೆಯುವ ಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,
ಉಗಾರ (ಜಿಲ್ಲಾ ಬೆಳಗಾವ

ವ್ಯಾಪಾರಿಗಳಿಗೆ ತುಂಬ ಸವಲತ್ತು ಇದೆ.

...ಉಂಟು. ಹಾಲಿನ ಪುಡಿಯನ್ನು ತಯಾರಿಸುವ ಮತ್ತು ...ಲ್ಲಿಯೇ ಕೆಲವೊಂದು ಸಂಶೋಧನೆಯ ಕಾರ್ಯ ನಡೆಸುವ ...ವರ್ನಮೆಂಟ್ ರಿಸರ್ಚ್ ಕ್ರೀಮರಿ "ಯ ಆಡಳಿತವು ಕೇಂದ್ರ ...ಕಾರದವರ ಅಧೀನತೆಗೊಳಪಟ್ಟಿದೆ. ಬೆಣ್ಣೆಯನ್ನು ತೆಗೆಯುವ ...ರಖಾನೆಯು ಪೋಲ್ಸನ್ ಎಂಬ ಗೃಹಸ್ಥನದು. " ಪೋಲ್ಸನ್ ...ಟರ್ " ಎಂಬ ವಾಡಿಕೆಯ ಹೆಸರಿನಿಂದ ನಮ್ಮಲ್ಲಿಯ ಕಿರಾಣಿ ...ಅಂಗಡಿಗಳಲ್ಲಿ ಮಾರಾಟವಾಗುವ ಬೆಣ್ಣೆಯು ಇಲ್ಲಿಯೇ ತಯಾರಾ...ದ್ದು. ಗ್ರಾಮಾಂತರ ಪ್ರದೇಶಗಳಲ್ಲಿ, ಹಾಲಿನಿಂದ " ಕೇಸಿನ್ " ...ಬ ಪದಾರ್ಥವನ್ನು ತಯಾರಿಸುವುದು ಒಳ್ಳೆಯ ಉಪ-ಉದ್ಯಮ...ಗಿದೆ. " ಸುರತಿ " ಜಾತಿಯ ಎಮ್ಮೆಗಳು ಇಲ್ಲಿಯ ಹೈನದ ...ನಗಳು. ಇದು ಮೇಲಾದ ಹೈನದ ಸಮೃದ್ಧಿಯ ಪ್ರದೇಶವು.

ಇಲ್ಲಿಯ ಭೂಮಿಗೆ " ಗೋರ್ಯಾಡು " ಎಂಬ ಹೆಸರಿದೆ. ಇಂತಹ ...ಮಿಗಳಲ್ಲಿ ಸುಣ್ಣನ್ನ ಜಿನುಗು ಮಳಲಿನ ಅಂಶವು ವಿಶೇಷ...ಗಿದ್ದು, ಕಿಳಮಣ್ಣು ಕಡಿಮೆ ಪ್ರಮಾಣದಲ್ಲಿರುತ್ತದೆ. ಹಸಿಯು ...ರಿ ಹೋದ ಕೂಡಲೆ ನೆಲವು ಬಿಗಿದು ಬಂಡೆಯಂತಾಗುತ್ತದೆ; ...ತ್ತೆ ಮಳೆ ಬಿದ್ದ ಕೂಡಲೆ ಬೆಣ್ಣೆಯಂತೆ ಮಿದುವಾಗುತ್ತದೆ. ಈ ...ಮಿ ನೀರಾವರಿಗೆ ಬಹಳತಕ್ಕದ್ದಾಗಿದೆ. ಚರೋತ್ತರ ಪ್ರದೇಶ...ದ್ದಿಯ ಮುಖ್ಯ ಬೆಳೆ ಹೊಗೆಸೊಪ್ಪು (ತಂಬಾಕು). ಅನಂತರ ...ಮವಾಗಿ ತೃಣಧಾನ್ಯಗಳಲ್ಲಿ ಸಜ್ಜೆ, ಕೋದ್ರಾ, ರಾಗಿ ಮತ್ತು ...ಯಿಪಲ್ಲೆಗಳಲ್ಲಿ ವಿಶೇಷವಾಗಿ ಸುವರ್ಣಗಡ್ಡೆ, ಹೆಗ್ಗೆಣಸು, ...ಳಕಾಯಿ ಬೆಳೆಯುತ್ತಾರೆ. ಶುಂಠಿ, ಅರಿಸಿಣಗಳೂ ಇಲ್ಲಿ ...ವು.

ಆನಂದದಿಂದ ಮೂರು ನಾಲ್ಕು ಮೈಲುಗಳ ಮೇಲೆ ತಂಬಾಕಿನ ಬೆಳೆಯ ಮೇಲೆ ಸುಧಾರಣೆಯ ಕ್ರಮಗಳಲ್ಲಿ ಸಂಶೋಧನೆ ನಡೆಯುತ್ತಿರುವ ಎರಡು ಸಂಸ್ಥೆಗಳು ಇವೆ. ಒಂದು ಸಂಸ್ಥೆಯಲ್ಲಿ ಬೀಡಿ-ತಂಬಾಕಿನ ಜಾತಿಗಳಲ್ಲಿ ಉತ್ತಮ ಜಾತಿಯನ್ನು ತೆಗೆಯುವ ಕಾರ್ಯ ನಡೆಸಿದ್ದಾರೆ. ಇನ್ನೊಂದು ಪ್ರಯೋಗಕ್ಷೇತ್ರದಲ್ಲಿ, ತಂಬಾಕಿನ ಬೆಳೆಗೆ ಅಪಾಯವನ್ನುಂಟು ಮಾಡುವ ಸೂಕ್ಷ್ಮ ಕ್ರಿಮಿಗಳ ಪ್ರತಿಬಂಧ-ಕೋಪಾಯಗಳನ್ನು ಹುಡುಕುವ ಕಾರ್ಯದಲ್ಲಿ ಭರದಿಂದ ಪ್ರಯತ್ನ-ಗಳು ನಡೆದಿವೆ. ಚರೋತ್ತರ ಪ್ರದೇಶದಲ್ಲಿ ತಂಬಾಕು ಆರ್ಥಿಕ-ದೃಷ್ಟಿಯಿಂದ ಮಹತ್ತ್ವದ ಬೆಳೆಯಾಗಿರುವುದರಿಂದ, ಅಲ್ಲಿಯ ಒಕ್ಕಲಿಗರು ಈ ಬೆಳೆಯನ್ನು ತೆಗೆದುಕೊಳ್ಳುವ ವಿಷಯದಲ್ಲಿ ತಮ್ಮದೆ ಆದ ನೈಪುಣ್ಯತೆಯನ್ನು ಗಳಿಸಿಕೊಂಡಿದ್ದಾರೆ.

ಆನಂದದಿಂದ ಸುಮಾರು ಹನ್ನೆರಡು ಮೈಲುಗಳ ಮೇಲೆ " ಜೋಟಾನಾ " ಎಂಬಲ್ಲಿ ಸರಕಾರಿ ಪ್ರಾಯೋಗಿಕ ಕ್ಷೇತ್ರವಿದೆ. ಅಲ್ಲಿ, ಖೈರಾ ಜಿಲ್ಲೆಯ ಮುಖ್ಯ ಬೆಳೆಗಳಾದ ತಂಬಾಕು, ಸಜ್ಜೆ, ಕೋದ್ರಾ ಮುಂತಾದ ಬೆಳೆಗಳನ್ನು ತೆಗೆದುಕೊಳ್ಳುವ ವಿಧಾನಗಳಲ್ಲಿ ಪ್ರಯೋಗಗಳನ್ನು ನಡೆಯಿಸಿದ್ದಾರೆ. ಈ ಭಾಗದಲ್ಲಿಯ ಆಕ್ಟೋ-ಬರ ಬಿಸಿಲಿನ ಪರಮಾವಧಿ ತಾಪದಿಂದ ಬಳಲಿ ಬೇಸರಪಟ್ಟದ್ದು ನಾವು ಈ ಫಾರ್ಮಿನಲ್ಲಿ ತಿರುಗಾಡುತ್ತಿದ್ದಾಗಲೇ. ಭಾರತದೇಶದ, ಬಡತನದ ಆದರೆ ಸಾಂಪತ್ತಿಕ ಸ್ಥಿತಿಯಲ್ಲಿ ಅಚ್ಚುಕಟ್ಟಾದ ಒಕ್ಕಲುತನದ ಪದ್ಧತಿಗಳನ್ನು ಕಾಣಬೇಕಾದರೆ ಯಾರಾದರೂ ಚರೋತ್ತರ ಪ್ರದೇಶದಲ್ಲಿ ಒಮ್ಮೆ ಪ್ರವಾಸ ಮಾಡಿ ಬರಬೇಕು. ಚಿಕ್ಕ ಚಿಕ್ಕ ಹಿಡುವಳಿಗಳು, ಅಲ್ಪಸ್ವಲ್ಪ ಒಕ್ಕಲುತನದ ಸಾಧನ ಸಲಕರಣೆಗಳು; ಆದರೂ ಬೇಸಾಯಗಾರನಿಗೆ ಆರ್ಥಿಕ ಮುಗ್ಗಟ್ಟು ಉಳಿದೆಡೆಗಳಲ್ಲಿಯಂತೆ ಅಷ್ಟು ಕರಾಳ ಸ್ವರೂಪದಲ್ಲಿ ಎದುರಾಳಿ-ಯಾಗಿ ಮೈವೆತ್ತಿಲ್ಲ. ಇದೇ ಅಲ್ಲಿಯ ಬೇಸಾಯ-ಪದ್ಧತಿಯ ಗುಟ್ಟು.

೫೦ ವರ್ಷಗಳಿಂದ ಅನುಭವಪಟ್ಟ

ಕರ್ಕಿ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ತಂಬಿಟ್ಟು

(ಶ್ರಾವಣ ರೂಪಕ)*

[illegible]. ಬೆಟಗೇರಿ ಕೃಷ್ಣಶರ್ಮ, ಧಾರವಾಡ

★

ವೃಂದಗೀತ

(ಎಲ್ಲರೂ ಕೂಡಿ ಹೇಳಬೇಕಾದ ಹಾಡು)

ಬಾ, ಶ್ರಾವಣ ಶುಭಸಮೀರ ಬಾರಾ !

೧

ಬಾ ಶ್ರಾವಣ ಶುಭಸಮೀರ,
ಕಾಲನೊಲುಮೆಯೋಲೆಕಾರ,
ಸುಖನಾಟಕ ಸೂತ್ರಧಾರ,
ಬುವಿಯ ಬೇಟಗಾರಾ !
ಬಾ, ಶ್ರಾವಣ ಶುಭಸಮೀರ ಬಾರಾ !

೨

ತೆಂಗು ಕಂಗು ಬಾಳೆ ಹಲಸು
ಹೊಂಗೇದಗೆ ಬನದ ಬೆಳಸು
ನಿನ್ನಿಂದಲೆ ಎಲ್ಲ ಹುಲುಸು
ಸಿರಿಯ ಸಂಚುಗಾರಾ !
ಬಾ, ಶ್ರಾವಣ ಶುಭಸಮೀರ ಬಾರಾ !

ನಿವೇದಕ :

ಶ್ರಾವಣಮಾಸ ಸುಖದ ಆಶೆಯನ್ನು ಹುಟ್ಟಿಸುವ ಕಾಲ ಬಾಳಿಗೆ ಬೇಸತ್ತವರಲ್ಲಿ ಬದುಕುವ ಬಯಕೆಯನ್ನು ಹುಟ್ಟಿಸುವ ಸಿರಿಗಾಲ. ಶ್ರಾವಣದ ದಿನಗಳೆಂದರೆ ಒಂದೊಂದೂ ಹಬ್ಬದ ಉಬ್ಬಿನ ದಿನಗಳು. ಸಂಪತ್‌ಶುಕ್ರವಾರ, ಸಂಪತ್‌ಶನಿವಾರ, ಶ್ರಾವಣ ಸೋಮವಾರ, ಹೊಸ ಮದುವಣಗಿತ್ತಿಯರಿಗೆ ಮಂಗಳಗೌರಿಯ ಮಂಗಳವಾರ, ಬುಧ-ಬೃಹಸ್ಪತಿಗಳ ಪೂಜಾದಿನಗಳಾದ ಬುಧವಾರ-ಗುರುವಾರ.... ಹೀಗೆ ವಾರದ ಹೆಸರಿನಿಂದಲೂ ಹಬ್ಬಗಳು; ನಾಗರಚವತಿ, ನಾಗರ ಪಂಚಮಿ, ಸಿರಿಯಾಳ ಷಷ್ಠಿ, ರಕ್ಷಾದ್ವಾದಶಿ, ನೂಲಹುಣ್ಣಿವೆ, ಗೋಕುಲಾಷ್ಟಮಿ.... ಹೀಗೆ ತಿಥಿಗಳ ಹೆಸರಿನಿಂದಲೂ ಹಬ್ಬಗಳು !

ವೃಂದಗೀತ

(ಎಲ್ಲರೂ ಕೂಡಿ ಹಾಡುವುದು)

ಬಂದಿತು ಬಂದಿತು ಹಬ್ಬದ ಮಾಸ --
ತಂದಿದೆ ತರುತಿದೆ ಸವಿಸವಿ ತಿನಿಸ —
ಚೆಂದದರಳು ತಂಬಿಟ್ಟನು ಮೆಲ್ಲುತ
ಉಯ್ಯಾಲೆಯಾಡುವುದೆಂಥಾ ಸರಸ ?
ನಾಗರ ಪಂಚಮಿ ಹಬ್ಬಾ....ಸೊಗಸಿನ
ಸಾಗರವೇ ಸರಿಯಬ್ಬಾ !
ನಾಗರ ಪಂಚಮಿ ಹಬ್ಬಾ....ಒಲವಿನ
ಬೀಗವ ತೆಗೆಯುವ ಕಬ್ಬಾ !

ನಿವೇದಕ

ಏನು ? ನಾಗರಪಂಚಮಿಯ ಹಬ್ಬ ! ಅಬ್ಬಾ, ನಮ್ಮ ನಾಡ ಎಷ್ಟೊಂದು ರಸಮಯವಾದ ದಿನವಿದು ! ಭೂಮಿತಾಯಿ ಆ ವತಾರ ಮಾಡಲಿರುವ ದೇವನನ್ನು ಬಸಿರಲ್ಲಿ ಧರಿಸಿರುವ ಸಂ... ಸಮಯ. ಮುಂಗಾರಿಯ ಬಿತ್ತಿಗೆಯನ್ನು ಮುಗಿಸಿದ ಒಕ್ಕ... ಮಕ್ಕಳಿಗೆ ಹೊಲಗಸ್ತದ ಬಿಡುವಿನ ಕಾಲ. ತನ್ನ ಬಳಗದೊ... ಜತೆತು, ಬಿಡುವಿನಲ್ಲಿ ಒಲವಿನ ಸವಿಬಾಳನ್ನು ಬಾಳಲು ಆ ಕನ... ಯೋಗಿಗಳ ಕುಲ ಬಯಸುವುದು ಆದುದರಿಂದಲೇ ಅತ್ತೆ... ಮನೆಗೆ ಹೋಗಿದ್ದ ಅಕ್ಕ-ತಂಗಿಯರನ್ನು ನಾಗರಪಂಚಮಿ ನೆವದಿಂದ ತವರೂರಿಗೆ ಕರೆಯಿಸಿಕೊಳ್ಳುವರು. ಹೊಸ... ಅತ್ತೆಯ ಮನೆಗಳಿಗೆ ಹೋಗಿ ಹೊಗೆಮನೆಯಲ್ಲಿ ಸಿಕ್ಕಂತಾ... ಅಕ್ಕ-ತಂಗಿಯರು, ತವರಿನ ಸವಿಯೊಲವಿಗಾಗಿ ಹಾರೈಸಿ, ನಾ... ಪಂಚಮಿಯ ಬಾರಿಯನ್ನೇ ಕಾಯುತ್ತಿರುವರು. ಅದೋ... ಕೇಳಿರಿ : ಹಳ್ಳಿಯ ಹೊಸ ಮೊದಲುಗಿತ್ತಿಯರ ಹೃದ... ಹಾತೊರಿಕೆಯನ್ನು :

(ದೂರದಿಂದ ನಾಲ್ಕಾರು ಹುಡುಗಿಯರ ದನಿಯಲ್ಲಿ ಹಾಡು ಕೇಳು...

ಪಂಚಮಿ ಬಂತೌ ಸನಿಯಾಕs—ಸನಿಯಾಕs !
ಅಣ್ಣ ಬರಲಿಲ್ಲ ಕರಿಯಾಕ s !

---

* ತಾ. ೧೯-೮-೫೦ ನೆಯ ದಿನ ಧಾರವಾಡದ ಬಾನುಲಿಯಲ್ಲಿ ಬಿರಿ... ಆಡಿದ ರೂಪಕವಿದು.

ಅವರೇನವ್ವಾ ಸಾವಕಾರ್ರು....ಸಾವಕಾರ್ರು !
ನಾವೇನವ್ವಾ ಬಡವರು !
ಎಂಥಾ ಸೊಗಸೂ ತವರೂರು!....ತವರೂರು
ತಾಯಿ-ತಂದಿ ನಮ್ಮ ದೇವರು !
ಜುರು ಜುರು ಜೋಕಾಲಿ ಆಡವರೂ—ನಾವು
ಜುರು ಜುರು ಜೋಕಾಲಿ ಆಡವರು—
ಅರಳಿಟ್ಟು ತಂಬಿಟ್ಟು ತಿನ್ನವರು !
ಪಂಚಮಿ ಬಂತಾ ಸನಿಯಾಕs....ಸನಿಯಾಕs !
ಅಣ್ಣ ಬರಲಿಲ್ಲ ಕರಿಯಾಕs !

ನಿವೇದಕ

ಪಾಪ, ತವರನ್ನು ನೆನೆದು ಬಂಬಲಿಸುವ ತಂಗಿಯನ್ನು, ಅವರಣ್ಣ ನಾಗರಪಂಚಮಿಗಾಗಿ ಕರೆದು ತಂದಿರಲೇ ಬೇಕು. ಇದೊ, ಇಲ್ಲಿ ಕೇಳಿ; ಹಳ್ಳಿಯ ಸವಿಗಾರನೊಬ್ಬ ಪಂಚಮಿಯ ಪವಾಡವನ್ನು ಹಾಡುತ್ತಿದ್ದಾನೆ:—

(ಲಾವಣೀಕಾರನೊಬ್ಬ ಹಾಡುವನು)

ಪಡವಾದs ಪಂಚಿಮಿಗೆ ನಾಡ ವ್ಯಾಗಿನ ನಾರೇರೆಲ್ಲಾ
ಬರುವ್ರೋ ವಿಸ್ತಾರ ನೋಡರೀ !
ಪಟ್ಟೀ ಬುತ್ತೀ ಕಟ್ಟಿಕೊಂಡು ಎತ್ತಿನ ವ್ಯಾಗ ಹತ್ತಿಕೊಂಡು
ಉಟ್ಟು ಬರುವ್ರೋರಲ್ಲಾ ಕರಿಸೀರಿ !
ಪಾಡವಾಸಾ ಬಂದಿತವ್ವಾ ಖಾಸಾ ನಮ್ಮಣ್ಣ ಬರಲಿಲ್ಲ,
ಏಸದಿನಾ ನೋಡಲ್ಯವನ ದಾರಿ ? !
ಆರಹುಣ್ಣಿವೀ ಮರದಿನಾನs ಕರಿಯಾಕ ಬರತೇನಂದಾ
ಯಾಕ ತಡದಾನೇನೋ ಅಣ್ಣದೊರಿ !

ಊರು ದೂರಾ ಮೂರುಗಾವುದಾ ಹತ್ತಿದ ಹಳ್ಳೀ ಹೆಂತ್ಯಾಕಿಲ್ಲ,
ಯಾರ ಕೂಡಾ ಹೇಳಿ ಕಳಸಲಿ ?
ಸಾವುಕಾರ್ರು ನಮ್ಮವರು ಸಂತೀ ಪ್ಯಾಟೀ ಮಾಡವರಲ್ಲ,
ಯಾರ ಮುಂದ ಹೇಳಿ ಕಳುವಲಿ ?
ಚಿಂತಿಗೊಂಡು ಭ್ರಾಂತಳಾಗಿ ನಿಂತಿರುವ ಸಮಯದಲ್ಲೀ
ಅಣ್ಣ ಬಂದs ಮೂರೂಚಂಜಿಲಿ ?
ಪಾಡವಾದ ಪಂಚಿಮಿಗೆ ನಾಡವ್ಯಾಗಿನ ನಾರೇರೆಲ್ಲಾ
ಬರುವ್ರೋ ವಿಸ್ತಾರ ಏನ ಹೇಳಲಿ ?

ನಿವೇದಕ

ಕೇಳಿದಿರಾ ? ಪಂಚಮಿಗಾಗಿ ನಮ್ಮ ಜನ ಪಡುವ ಹಂಬಲಿಕೆಯನ್ನು ? ಅಹುದು, ಯಾಕೆ ಹಂಬಲಿಸಬಾರದು ? ನಾಗರ ಪಂಚಮಿ ಕಿರಿಯರಿಗೂ ಹಿರಿಯರಿಗೂ, ಹೆಂಗುಸರಿಗೂ ಗಂಡುಸರಿಗೂ ಸಂಭ್ರಮದ ಹಬ್ಬ. ಅಣ್ಣ-ತಮ್ಮ, ಅಕ್ಕ-ತಂಗಿಯರ ಎದೆಯಲ್ಲಿ ಪ್ರೀತಿಯ ಗುಡಿಯನ್ನು ಕಟ್ಟುವ ಉತ್ಸವದಿನ. ತಂದೆ-ತಾಯಿಗಳು ಮಕ್ಕಳ ಉಲ್ಲಾಸವನ್ನು ಕಂಡು ಹಿರಿಹಿರಿ ಹಿಗ್ಗುವ ಹರ್ಷಯೋಗ. ಮನೆ-ಮನೆಯಲ್ಲಿಯೂ ನಾಲಗೆಗೆ ನೀರೂರಿಸುವ ಸವಿ-ಸವಿಯ ತಿಂಡಿ-ತಿನಿಸುಗಳು ! ಮೊಗಸಾಲೆ-ಮೊಗಸಾಲೆಗಳಲ್ಲಿಯೂ ತೂಗು-ಮಣೆ-ಉಯ್ಯಾಲೆಗಳು ! ಮರ-ಮರಗಳಿಗೂ ಜೋಲುವ ಜೋಕಾಲಿಗಳು; ಬಯಲು-ಬಯಲುಗಳಲ್ಲಿಯೂ ತಿರುಗುವ ಕೊಟ್ಟಿಲ ಜೀಕಗಳು. ಎಲ್ಲೆಲ್ಲಿಯೂ ಉತ್ಸಾಹ.

ಇಂತಹ ನಾಗರಪಂಚಮಿಯನ್ನು ಜನರು ಎದುರು ನೋಡುತ್ತಿರುವಾಗ....ಅದು ಬಂದೇ ಬಿಟ್ಟಿತು. ನಾಳೆಯ ದಿನವೇ ನಾಗರ ಚವತಿ. ರಾಯರ ಮಗ ಪುಟ್ಟಣ್ಣ, ಸಂಜೆಯ ಶಾಲೆ ಬಿಟ್ಟಕೂಡಲೆ

ಬಾಯೋಟೋನಾ
ಇದರ ಸೇವನೆಯಿಂದ
ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ಮಿದುಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨. ಟ.ಖರ್ಚು ಬೇರೆ.ಸೂಚಿಪತ್ರ ಪಡೆಯಬಹುದು.
ROY & CO. BOMBAY 2.

ಚಿತ್ರಕಲಾ ಪ್ರವೇಶ
೩ನೆಯ ಆವೃತ್ತಿ
ಅಚ್ಚಾಗಿ ಸಿದ್ಧವಾಗಿದೆ.
ಬೇಕಾಗಿರುವವರು
ಬೇಗನೆ ಬೇಡಿಕೆ ಕಳುಹಿರಿ !
ಬರೆದವರು :
ಡಾ. ಜಿ. ಎಸ್. ಹುದ್ದಾರ



ಮನೆಗೆ ಬಂದಿದ್ದಾನೆ. ಮರುದಿನದ ಹಬ್ಬದ ಸಂಭ್ರಮ ಆವನಿಂದ ಹಾಡು ಹಾಡಲಿಕ್ಕೆ ಹಚ್ಚಿದೆ:—

ಪುಟ್ಟ್ಯಾ:— ತಂದಿದ್ದ ಳಂಗಡಿ ಸಂಗಕ್ಕನ:—ಕಾರಾ—
ಬುಂದೀ ಪುರಾಣಿ ಮಂಡಕ್ಕಿಯನು!
ಬಂದಿದ್ದ ಳಾಚಾರ್ರ ತಂಗಕ್ಕನ—ಕಟ್ಟಿ—
ಕೊಂಡು ಅಳ್ಳಿಟ್ಟವಲಕ್ಕಿಯನು!

(ಎಂದು ತನ್ನ ಪತ್ನಪುಸ್ತಕದೊಳಗಿನ ಹಾಡನ್ನು ಹೇಳುತ್ತ ಪುಸ್ತಕದ ಚೀಲವನ್ನು ಗೋಡೆಯ ಮೊಳೆಗೆ ಹಾಕುವನು. ಎತ್ತ ಕಡೆಗೋ ನೋಡುತ್ತ ಪಾಟಿಯನ್ನೂ ಮೊಳೆಗೆ ಹಾಕುತ್ತಿರುವಾಗ, ಅದು ಕೆಳಗೆ ಬಿದ್ದು ಒಡೆದು ಚೂರಾಗುವುದು. ಆಗ ಅಲ್ಲಿಯೇ ನಿಂತಿದ್ದ ಆತನ ತಂಗಿ ರಂಗೂ, ಕುಣಿಕುಣಿಯುತ್ತ ಹೇಳುವಳು.)

ರಂಗೂ:— ಓಹೋ, ಪುಟ್ಟ್ಯಾನ ಪಾಟೀ ಒಡೀತೋ.... ಒಡೀತೋ! ನಾ ಹೇಳತೀನಿ ನಿಂದ್ರು: ಪುಟ್ಟ್ಯಾ ಪಾಟೀ ಒಡ-ಕೊಂಡಾ ಅಂತ....ಅಪ್ಪನ ಮುಂದ!

ಪುಟ್ಟ್ಯಾ:— ಹೋಗಲಿ ಬಿಡs, ಎಷ್ಟು ಬಡೀತೀ ಡೌಲು! ಹೋಗು, ಹೇಳಿದರ ಹೇಳಿಕೋ ಹೋಗು! ಈ ಪಾಟೀ ಮೊದಲs ಒಡದು ಹೋಗಿತ್ತು. ನಾಳೆ ಚವತೀ ಪಾಟೀ ಪೂಜೆಗೆ.... ಅಪ್ಪ ಹೊಸಾ ಪಾಟೀ ಕೊಡಸತೀನಂತ ನನಗ ಹೇಳೇ ಹೇಳ್ಯಾನ!

ರಂಗೂ:— ಹೂಂ, ಕೊಡಸತೀನಂತ ಹೇಳ್ಯಾನ! ನೀ ಹೀಂ ದಿನಾ ಒಂದು ಪಾಟೀ ಒಡಕೋತs ಇರು; ನಿನಗ ದಿನಾ ಒಂದ ಪಾಟೀ ಕೊಡಸತಾನ ಅಪ್ಪ....ಬಂದೀದಿ!

ಪುಟ್ಟ್ಯಾ:— ಹಾಂಗಾದರ ನೀನು....? ದಿನಾ ಒಮ್ಮೆ ಬಳೀ ಸೆ ಗೊಳ್ಳ್ಯಾಬಲ್ಲೇನು? ಹೇಳಲಿಕ್ಕೆ ಬರತಾಳಿಲ್ಲೆ, ಮತ್ತ! ಇದೇನ ರಂಗೀ, ನೋಡೋಣು: ಈವತ್ತ ಇಷ್ಟರಾಗs ಮತ್ತ ಬಳೀ ಹೆ ಗೊಂಡೀದೀ ಏನು? ಓ! ಪುಟಗ್ಯಾ ಚೆನ್ನೀ ರೊಟ್ಟೀವಾದ ಹೊನ್ನೀ! ಹುಟಗ್ಯಾ ಚೆನ್ನೀ ರೊಟ್ಟೀ ಮಾಡೂ ಹೊನ್ನೀ! (ಎಂ ತಾಳಹಾಕಿ ಹಾಡಿದಂತೆ ಮಾಡುವನು.)

ರಂಗೂ:— ಯಾಕೋ ಪುಟ್ಟ್ಯಾ ಲೊಟ್ಟ್ಯಾ! ನನಗ ಹುಟ ಚೆನ್ನಿ ಅಂತೀಯಾ? ನಾಳಿಗೇ ನಾಗರ ಚವತಿ ಅದ....! ಆ ನನಗ ರಾಜಾವರೀ, ರಾಣೀಗೋಟೂ.... ಥಂದಾಥಂದ ಬ ಇಡಸತೀನಂತ ಹೇಳ್ಯಾಳ!

ಪುಟ್ಟ್ಯಾ:— ಹೂಂ, ಇಡಸತೀನಂತ ಹೇಳತಾಳ! ನನ್ನ ಬ ಪಾಟೀ ಒಡದರ, ಅಪ್ಪನ ಮುಂದ ಹೇಳಿ ಬೈಸತೀನೀ ಅ ಕುಣಿದಾಡಲಿಕ್ಕೆ ಹತ್ತೀದಿ! ನಿಂದ್ರು. ನಿನಗಿಂತಾ ಮೊದಲ ನಾ ಹೋಗಿ ಅವ್ವಗ ಹೇಳತೀನಿ: ರಂಗಿ ಕೈಯಾಗಿನ ಬಳೀ, ಬೇ ಬೇಕಂತs ಹೆಚ್ಚಿಕೊಂಡಾಳs— ಅಂತ.

ರಂಗೂ:— ಹೇಳಿದರ ಹೇಳಿಕೋ ಹೋಗು! ಅವ್ವ ಬೈಯೂದೇ ಇಲ್ಲ. ಪಂಚಮಿ ಹಬ್ಬ ಬಂದsದ; ಹೆಣ್ಣುಮಕ್ಕ ಬೈದೂ ಅಂದೂ ಮನಸು ನೋಯಿಸಬಾರದೂ ಅಂತ ಅಪ್ಪ ಹೇಳತಿದ್ದ!

ಪುಟ್ಟ್ಯಾ:— ಹಾಂಗಾದರ.... ಪಂಚಮಿ ಹಬ್ಬದೊಳಗ ಗಂ ಮಕ್ಕಳಿಗೆ ಬೈದೂ ಅಂದೂ ಮನಸು ನೋಯಿಸಬೇಕ ಹೇಳ್ಯಾನೇನು ಅವ್ವ? ಹಬ್ಬಾ ಅಂದ ಮ್ಯಾಲ, ಯಾರ ಯಾರೂ ಬೈಯಲೂ ಬಾರದು....ಬೈಯಿಸಲೂ ಬಾರದೂ— ಅಪ್ಪ ಹೇಳ್ಯಾನ ನನಗ!

ರಂಗೂ:— (ಪಶ್ಚಾತ್ತಾಪದ ಧ್ವನಿಯಲ್ಲಿ) ಹೂಂ! ಹೀಂ ಹಾಂಗಾದರ? ಅವ್ವಗ ನೀ ಪಾಟೀ ಒಡಕೊಂಡದ್ದು ಹೇಳ ಬಿಡು! 'ಪಾಪ, ಪುಟ್ಟಣ್ಣ ಎಡವಿಬಿದ್ದ; ಪಾಟೀ ಕೆಳಗ ಒಡೀತೂ!' ಅಂತ ಹೇಳತೀನಿ!

ಪುಟ್ಟ್ಯಾ:— ಶಾಬಾಸ್! ಅಂದರ ನೀ ನನ್ನ ತಂಗಿ ನೋಡು! ನಮ್ಮ ರಂಗಣ್ಣಿ ಭಂಗಾರದಂಥಾ ಹುಡಿಗೀ ನಾನೂ ಎಲ್ಲಾರ ಮುಂದೂ ಹೇಳತೀನಿ! ಅಲ್ಲs ರಂಗೂ! ಫಮ್ ಫಮ್ ವಾಸನಿ ಬರಲಿಕ್ಕೆ ಹತ್ತೀದಲ್ಲಾ! ಯಾಕರ

ರಂಗೂ:— ಅಯ್ಯs! ಇಂವಗ ಗೊತ್ತs ಇಲ್ಲ. (ಮ ಅವ್ವ, ಅಡಿಗೀಮನ್ಯಾಗ ತಂಬಿಟ್ಟು ಮಾಡಲಿಕ್ಕೆ ಹತ ಅದರದಿದು ವಾಸನಿ! ಇಷ್ಟೊತ್ತನಕಾ ಕೂತುಕೊಂಡು ಯಾಲಕ್ಕೀ ಸುಲಿದುಕೊಟ್ಟೆ. ಮತ್ತ....

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ
ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ
ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಪುಟ್ಟ:— ತಂಬಿಟ್ಟಿನುಂಡೀ ಮಾಡಲಿಕ್ಕೆ ಹತ್ಯಾಳ ಅವ್ವ? ಓ! ವಂದೇಮಾತರಂ! ಬಿಸಿ ಬಿಸಿ ತಂಬಿಟ್ಟಿನುಂಡಿ! ನಾ ಈಗ ಇಸಕೊಂಡು ಹೊಡೀತೀನಿ ನಿಂದ್ರು!

(ಓಡುತ್ತಲೆ ಅಡಿಗೆ ಮನೆಗೆ ಹೋಗುವನು. ಅಲ್ಲಿ ಪಾತೀಲಿ- ಸಪ್ಪಳಗಳ ಸ್ವಳನೊಂದಿಗೆ ಅವ್ವ ಹಾಡುತ್ತ, ಹಾಡುತ್ತ ಉಂಡಿ ಮಾಡುವ ಕೆಲಸದಲ್ಲಿ-ದ್ದಳು.)

(ಅವ್ವನ ಹಾಡು)

ಭಾಗ್ಯದ ಲಕ್ಷ್ಮೀ ಬಾರಮ್ಮಾ!- ನಮ್ಮಮ್ಮಾ ನೀ ಸೌ-
ಭಾಗ್ಯದ ಲಕ್ಷ್ಮೀ ಬಾರಮ್ಮಾ! ||

ಪುಟ್ಟ:— (ಓಡುತ್ತ ಬಂದು) ಅವ್ವಾ, ನನಗ ತಂಬಿಟ್ಟು ಕೊಡ!

ಅವ್ವ:— ಹೋಗೋ ಹುಚ್ಚುಖೋಡೀ! ಇಂದ ಹ್ಯಾಂಗ ಕೊಡತಾರೋ ತಂಬಿಟ್ಟು? ಇವು ನಾಗಪ್ಪನ ನೈವೇದ್ಯದ್ದು! ಇಂದ ಇವನ್ನ ತಿನ್ನೂಹಾಂಗಿಲ್ಲ!

ಪುಟ್ಟ:— ಹಾಂಗಾದರ.... ಎಂದ ತಿನ್ನೂದವ್ವಾ ಇವನ್ನ?

ಅವ್ವ:— ನಾಳೆ ನಾಗರಚವತಿ, ...ನೀವೆಲ್ಲಾರೂ ಎಣ್ಣೀ-ಹಚ್ಚಿಕೊಂಡು ಎರಕೋಬೇಕು ....

ಪುಟ್ಟ:— ಎರಕೊಂಡಮ್ಯಾಲ ತಿನಬೇಕೇನು ತಂಬಿಟ್ಟು?

ಅವ್ವ:—ಎರಕೊಂಡಮ್ಯಾಲ ಅಲ್ಲೋ! ನಿನಗೊಂದು ತಿನ್ನೂದೇ ಹುಚ್ಚು! ಸೀ ತಿಂಡೀ ಅಂದರ ಆತು ನಿನಗ! ಯಾವಾಗ ಅದನ್ನ ತಿಂದೇನೋ ಅಂತ ಕೂತಿರತೀ! ಅದಕ್ಕ ಈಗ ಬೆಲ್ಲಾ, ಸಕ್ಕರೀ ಸಿಗದ್ಹಾಂಗ ಆಗ್ಯಾವ ನೋಡು!

ಪುಟ್ಟ:— ಸಿಗದ್ಹಾಂಗ ಏನ ಆಗತಾವ! ಅಂಗಡೀಕಾರ್ರು ಕೇಳಿದಷ್ಟು ಹಣಾ ಕೊಟ್ಟರ, ಕೇಳಿದಷ್ಟು ಬೆಲ್ಲಾ, ಸಕ್ಕರೀ ಕೊಡತಾರ! ಇರಲಿ ಬಿಡವ್ವಾ, ತಂಬಿಟ್ಟು ಯಾವಾಗ ಕೊಡತೀ ಹೇಳ?

ಅವ್ವ:— ನಾಳೆ ನಾವೆಲ್ಲಾರೂ ಮುತ್ತೈದೆಯರು ಕೂಡಿ ಹೋಗಿ, ಹುತ್ತಪ್ಪಗ ಹಾಲು ಎರದು, ಪೂಜೀಮಾಡಿ, ಆರಳಿಟ್ಟು— ತಂಬಿಟ್ಟು— ಸೆನೆಗಡ್ಲಿ ನೇವೇದ್ಯಾ ತೋರಿಸಿ ಬರತೀವಿ; ಆಮ್ಯಾಲ ನಿನಗ ತಂಬಿಟ್ಟು ಸಿಗತದ ನೋಡು!

ಪುಟ್ಟ:— ಅಂದರ.... ನಾಳೆ ಮಧ್ಯಾನದ ತನಕಾ ನನಗೇನೂ ಸಿಗೂದಿಲ್ಲಾ-ಅನ್ನು!

ಅವ್ವ:— ನಾಗಪ್ಪನ ನೇವೇದ್ಯ ಆಗದ ಹೊರತು ಹ್ಯಾಂಗ ಸಿಕ್ಕೀತು ಹೇಳು!

ಪುಟ್ಟ:— ಒಳ್ಳೇ ನಾಗಪ್ಪ ಬಂದ **ಬಿಡು! ಹೋಗಲಿ,....** ಹೋಗಲಿ **ಬಿಡವ್ವಾ**, ಇನ್ನ ಈ ಉಂಡೀ ಮಾಡಿ, ಎಲ್ಲಿ ಇಡುವಾಕಿ ಇದ್ದೀದೀ ನೀನು?

ಅವ್ವ:— ಯಾಕ? ಕಳವಿಲೇ ತಿನಬೇಕಂತ ಮಾಡೀದೀ ಏನು? ನಾಗಪ್ಪನ ನೈವಸಲು **ತಂಬಿಟ್ಟು** ಮೊದಲ ತಿಂದರ, ಮೈಗೆಲ್ಲಾ ತದ್ದು ಆಗತಾವ! ತಿಳೀತೇನು?

ಪುಟ್ಟ:— ತದ್ದು ಆಗತಾವ?....ಹಾಂಗಾದರ ಮೊನ್ನೆ ಮೊನ್ನೆ ಅಪ್ಪಗ ನಾಲ್ಕಾರು ತದ್ದು ಆಗಿದ್ದು ಅಲಾ! ಅಂವ ನಾಗಪ್ಪನ ನೈವಸಲ **ತಂಬಿಟ್ಟು** ಮೊದಲ ತಿಂದಿದ್ದನೇನು?

ಅವ್ವ:— ಖೋಡಿ ಹುಡುಗಾ! ಹಾಂಗ ಇಲ್ಲದ್ದ ಒಂದು ಮಾತಾಡ ಬಾರದು! **ನೋಡು**, ರಂಗೂ ಹ್ಯಾಂಗ ಶಾಣ್ಯಾ ಹುಡಿಗಿ ಇದ್ದಾಳ! ಆಕಿ ನಾಗಪ್ಪಗ ನೇವೇದ್ಯಾ ಆಗೂತನಕಾ **ತಂಬಿಟ್ಟು** ಬೇಡೂದಿಲ್ಲಾ ಅಂತ **ಖಂಡಿತ** ಹೇಳಿಬಿಟ್ಟ್ಯಾಳ!

ರಂಗೂ:— ಹೌದವಾ ಪುಟ್ಟಣ್ಣಾ, ನಾನು ತಂಬಿಟ್ಟು ಎಂದೂ **ಬೇಡೂದಿಲ್ಲ!**

ಕುಟಜಾರಿಷ್ಟ:— ಆಮಾಂಶ, ಅಜೀರ್ಣ,
ಹೊಟ್ಟೆ ಮುರಿಯುವದು ಮೊದಲಾದ
ವಿಕಾರಗಳಿಗೆ ಶ್ರೇಷ್ಠವಾದ
ಔಷಧ.

ಕಾಸಶ್ವಾಸಾರಿ:— ದಮ್ಮು, ಕೆಮ್ಮುಗಳಿಗೆ
ಅನುಭವಸಿದ್ಧ ಔಷಧ.

ನೂತನ ಆಯುರ್ವೇದ
ಕಾರ್ಯಾಲಯ ಲಿ.
ವಿಜಾಪುರ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ನೂತನ ಕಳೆಯಿಂದ ಹೊರಟ ಈ ಮಾಲೆಯ ಎರಡನೆಯ ಪುಸ್ತಕ 'ಹೂ ಅರಳಿತು' (ಪ್ರಸಿದ್ಧ ತೆಲುಗು ಲೇಖಕರ ಕಥಾ ಸಂಕಲನ) ಇದೀಗ ಮಾರಾಟಕ್ಕೆ ತಯಾರಾಗಿದೆ. ಮಾರಾಟಗಾರರಿಗೆ ವಿಶೇಷ ಸವಲತ್ತು ಇದೆ. ವಿವರಗಳಿಗೆ ಬೇಗ ಬರೆಯಿರಿ.

ಮಾಲೆಯ ಪುಸ್ತಕಗಳು :

ಅರ್ಪಣ (ಮೋಪಾಸಾನ ಕಥಾ ಸಂಕಲನ) ರೂ. ೧—೮—೦
ಹೂ ಅರಳಿತು (ತೆಲುಗು ಕಥೆಗಳ ಸಂಗ್ರಹ) ,, ೨—೪—೦
ವರುಷದಲ್ಲಿ ನಾಲ್ಕು ಪುಸ್ತಕಗಳಿಗೆ ಚಂದಾ ಹಣ ,, ೫—೪—೦

ಆನಂದ ಗ್ರಂಥಮಾಲಾ, ಹುಬ್ಬಳ್ಳಿ | **ಪಿ. ವೆಂಕೋಬಾಚಾರ್ಯ**, ಸಂಪಾದಕರು.

ಪುಟ್ಟ :— ಹೌದು, ನೀಯಾಕ ಬೇಡೀ ತಂಬಿಟ್ಟ? ನಿನಗ ಸೀ ಸೇರತಿದ್ದರೇ ಎಲ್ಲಿ! ಈಗ ನಾಗಪ್ಪನ ನೇವೇದ್ಯಕ್ಕಂತ ಉಪ್ಪು-ಖಾರದ ಅವಲಕ್ಕೀ ಮಾಡಿದ್ದರ, ನೀ ಬೇಡತಿದ್ದ್ಯೋ ಇಲ್ಲೋ ತಿಳೀತಿತ್ತು!

ರಂಗೂ :— ನಾ ಹಾಂಗ ಎಂದೂ ಬೇಡತಿದ್ದಿಲ್ಲ. ನಾಗಪ್ಪನ ನೇವೇದ್ಯ ಆಗದ ಹೊರತು ತಿನಬಾರದಂದ ಮ್ಯಾಲ, ಹ್ಯಾಂಗ ಬೇಡತಾರ ನೋಡು! ನಾಳೆ ನಾನೂ ಹೊಸಾ ಪರಕಾರಾ ಉಟಗೊಂಡು, ...ಜರದ ಪೋಲಕಾ ತೊಟಗೊಂಡು, ಕೊಳ್ಳಾಗ ಬಂಗಾರದ ಜೇನು ಹಾಕ್ಕೊಂಡು, ಹುತ್ತಪ್ಪಗ ಹಾಲು ಎರೀಲಿಕ್ಕೆ ಹೋಗತೀನಿ!

ಪುಟ್ಟ :— ಹುತ್ತಪ್ಪಗರೇ ಹಾಲು ಎರೀ—ದತ್ತಪ್ಪಗರೇ ಹಾಲು ಎರೀ! ನಿನಗ ಹಾಲು ಎರೀಲಿಕ್ಕೆ ನಾ ಎಲ್ಲೆ ಬ್ಯಾಡ ಅಂತೀನಿ? ನನಗೊಂದು ತಂಬಿಟ್ಟು ಸಿಕ್ಕರ ಸಾಕು! ಅವ್ವಾ, ತದ್ದಿಗೆ ಔಷಧಾ ಹಚಿಕೊಂಡರ ಹೋಗತಾವಲ್ಲs? ಅಪ್ಪಗ ತರಿಸಿದ ಮುಲಾಮು ಇನ್ನೂ ಅದ ಅಲ್ಲೆ ...ಕಪಾಟಿನೊಳಗ!

ಅವ್ವ :— ಭಾಳ ತಿನಿಸುಬಕ್ಕ ಹುಡುಗನಪ್ಪಾ ಪುಟ್ಟ್ಯಾ ನೀನು! ಅಲ್ಲೋ, ಮಿಾಸಲ ತಂಬಿಟ್ಟು ತಿಂದು, ತದ್ದು ಆದರ, ಆ ಮುಲಾಮು ಹಚ್ಚಿ ಕಳಕೋಬೇಕಂತೀ ಏನು? ತಿಳೀತು ಬಿಡು, ಅಲ್ಲೋ ಬಕಾಸುರಾ, ನಾಳೆ ಮಧ್ಯಾನ ತನಕಾ ನಿನಗ ತಡೀಲಿಕ್ಕೆ ಆಗೂದಿಲ್ಲೇನು?

ಪುಟ್ಟ :— ಹಾಂಗಲ್ಲs ಅವ್ವಾ!........

ಅವ್ವ ;— ಹಾಂಗ ಅಲ್ಲದಿದ್ದರ ಇನ್ನ ಹ್ಯಾಂಗ? ನಾನು ನಿನ್ನ ಅವ್ವ ಇದ್ದೀನಿ ತಿಳೀತೇನು? ನಿನ್ನಕ್ಕಿಗುಟ್ಟು ನನಗ ಗೊತ್ತಾಗೂದಿಲ್ಲs? ಇಲ್ಲಿ ನೋಡು, ಪುಟ್ಟಣ್ಣಾ, ನೀನು ನಾಗಪ್ಪನ ವರಪ್ರಸಾದದಿಂದ ಹುಟ್ಟಿದ ಹುಡುಗ! ನಾಳೆ ನೀನೂ ನಾಗಪ್ಪನ ಪೂಜೀ ಮಾಡಬೇಕು. ಅದನ್ನೆಲ್ಲಾ ಬಿಟ್ಟು ಹೀಂಗೆಲ್ಲಾ ಹುಡುಗಾಟಾ ಮಾಡಿದರ, ನಾಗಪ್ಪ ಸಿಟ್ಟಿಗೇಳತಾನ........ಎಲ್ಲಾರನ್ನೂ ಕಚ್ಚಲಿಕ್ಕೆ....ತನ್ನ ಹಾವಿನ ಬಳಗಾನs ಕಳಸತಾನ!

ಪುಟ್ಟ :— ಅಬ್ಬಬ್ಬಾ! ಹೀಂಗೇನು? ನಾಗಪ್ಪ ಅಂದರ ದೇವರೇನು?

ಅವ್ವ :— ಮತ್ತೇನಂತ ತಿಳದೀದಿ? ಅಂವ ದೇವರಂತ! ನಾಗರ ಚವತೀ ದಿನಾ—ನಾಗರ ಪಂಚಮಿಾ ದಿನಾ ಅವನ ಪೂಜಿ ಮಾಡೂದು! ಪೂಜೀ ಮಾಡಿ, ತಂಬಿಟ್ಟಿನ ನೈವೇದ್ಯಾ ಕೊಟ್ಟರ ಅಂವ ನಮ್ಮ ಕುಟುಂಬಕ್ಕ ಕಲ್ಯಾಣ ಮಾಡತಾನ! ಸಂತಾನ.. ಸಂಪತ್ತು ಕೊಡತಾನ!

ಪುಟ್ಟ :— ಇಷ್ಟೆಲ್ಲಾ ಮಾಡತಿದ್ದರ, ನಾ ಈಗೇನೂ ತಂಬಿಟ್ಟ ಬೇಡೂದಿಲ್ಲ ಬಿಡವ್ವಾ! ನಾಳೆ ನೇವೇದ್ಯಾ ಆದ ಮ್ಯಾಲs ಕೊಟ್ಟಿಯಂತ!

ಅವ್ವ :— ನಮ್ಮ ಪುಟ್ಟಣ್ಣ ಶಾಣ್ಯಾ ಹುಡುಗ! ರಂಗ ಅಲ್ಲೆ ಮಾಡದಾಗ....ಒಂದು ಬೇಸನುಂಡಿ ಅದ; ಅದನ್ನ ಪುಟ್ಟಗ ಕೊಡವ್ವಾ!

ಪುಟ್ಟ :— ಏನು? ಬೇಸನುಂಡೀ! ಹುಯ್ಯಪಾ! ಇ ಬೇಸನುಂಡಿ; ನಾಳೆ ತಂಬಿಟ್ಟನುಂಡಿ! ಉಂಡೀ ಮ್ಯಾಲ ಉಂ

ಅವ್ವ :— ರಂಗೂ ನೀ ಅಂವಗ ಉಂಡೀ ಕೊಟ್ಟು ಇ ಕೂತುಕೋ! ನಿಮ್ಮ ಪುಸ್ತಕದೊಳಗ ಅದs ಅಲ್ಲಾ : 'ನಾ ಹಾವೇ' ಅಂತ ಕವಿತಾ! ಅದನ್ನ ಇಂಪಾಗಿ ಹೇಳವ್ವಾ!

ರಂಗೂ :— (ಕೆಮ್ಮಿ ದನಿ ಸರಿಪಡಿಸಿಕೊಂಡು) ಪುಟ್ಟ ತಕ್ಕೊಳ್ಳಪಾ ಉಂಡೀ! ಹುಂ, ಹೇಳತೀನಿ ಕೇಳವ್ವಾ!

(ಇಬ್ಬರೂ ಹಾಡುವರು)

ನಾಗರ ಹಾವೇ ಹಾವೊಳು ಹೂವೇ!
ಬಾಗಿಲ ಬಿಲದಲಿ ನಿನ್ನಯ ಠಾವೇ!
ಕೈಗಳ ಮುಗಿವೆ, ಹಾಲನ್ನೀವೆ,
ಬಾಬಾ ಬಾಬಾ—ಬಾಬಾ ಬಾಬಾ!

ಹಳದಿಯ ಹೆಡೆಯನು ಬಿಚ್ಚೋ ನಾಗಾ!
ಹೊಳಹಿನ ಹೊಂದಲೆ ತೂಗೊ ನಾಗಾ!
ಕೊಳಲನ್ನೂದುವೆ ಲಾಲಿಸು ರಾಗಾ
ನೀನೀ ನೀನೀ—ನೀನೀ ನೀನೀ!

ಪುಟ್ಟ :— ನಾಳೆ ಮಧ್ಯಾನ ತಿಂತೀನಿ ತಂಬಿಟ್ಟು!

(ದೂರದಲ್ಲಿ)

ಬಾ, ಶ್ರಾವಣ ಶುಭ ಸವಿಾರ ಬಾರಾ!
ನಿನ್ನ ಗತಿಯ ಗೆಜ್ಜೆನಾದ
ಹೆಣ್ಣುಗಂಡುಗಳಿಗೆ ಮೋದ
ಶೃಂಗಾರದ ಸುಖೋನ್ಮಾದ
ಸೃಷ್ಟಿಯ ಸಹಕಾರಾ!
ಬಾ, ಶ್ರಾವಣ ಶುಭಸವಿಾರ ಬಾರಾ!

ಜೀವನ ಶಿಕ್ಷಣದ ಹಿನ್ನೆಲೆ

ಶ್ರೀ. ರತ್ನಾಕರ ಹಾವೇರಿ ಬಿ. ಎ., ಬಿ. ಟಿ. ಡಿ. ಪಿ. ಇಡಿ.
ಮತ್ತು ಡಿ. ಬಿ. ಇ. ಧಾರವಾಡ

★

ವ್ಯಕ್ತಿಯ ದೇಹ-ಬುದ್ಧಿ-ಮನಸ್ಸುಗಳ ವಿಕಾಸ, ಸಮಾಜದ ಸುಖಶಾಂತಿ ಇವೇ ಶಿಕ್ಷಣದ ಮುಖ್ಯ ಗುರಿಗಳಾಗಿರಬೇಕು. ಇವಿಲ್ಲದ ಶಿಕ್ಷಣಕ್ರಮ ರಾಷ್ಟ್ರಪೋಷಕವಾಗಿ ನಿಲ್ಲದು; ವ್ಯಕ್ತಿಯ ಉದ್ಧಾರವನ್ನೂ ಮಾಡಲಾರದು.

★

ಹಳೆಯ ಶಿಕ್ಷಣ

ಬೇರೆ ಬೇರೆ ದೇಶಗಳ ಶಿಕ್ಷಣವು ಆ ಆ, ದೇಶದ ಆಶೆ-ಆಕಾಂಕ್ಷೆಗಳ ಸಾಧನೆಗೆ ಸಹಾಯಕವಾಗಬೇಕೆಂಬುದು ಸರ್ವಸಮ್ಮತ ತತ್ತ್ವ. ಈ ತತ್ತ್ವವನ್ನು ಕಣ್ಣೆದುರಲ್ಲಿಟ್ಟುಕೊಂಡು ಶಿಕ್ಷಣ ಸಾಗದಿದ್ದರೆ, ಆ ಶಿಕ್ಷಣವು ಶೈಕ್ಷಣಿಕ ದೃಷ್ಟಿಯಿಂದಲೂ, ಸಮಾಜ ಪ್ರಗತಿಯ ದೃಷ್ಟಿಯಿಂದಲೂ ಮತ್ತು ಆರ್ಥಿಕ ದೃಷ್ಟಿಯಿಂದಲೂ ಹಾನಿಕರ, ಭಯಾನಕ. ಈ ದೃಷ್ಟಿಯಿಂದ ವಿಚಾರಿಸಿದರೆ, ಬ್ರಿಟಿಶ್ ಆಳಿಕೆಯಲ್ಲಿಯ ಭಾರತದ ಶಿಕ್ಷಣ ಅರಾಷ್ಟ್ರೀಯವಾಗಿತ್ತು; ದೇಶದ ಆಶೆ-ಆಕಾಂಕ್ಷೆಗಳನ್ನು ಪೂರಯಿಸುವ ವಿಚಾರವು ಅದಕ್ಕೆ ಸಂಬಂಧಿಸಿದ ವಿಚಾರವೇ ಆಗಿದ್ದಿಲ್ಲ. ಯಾಕೆಂದರೆ ಆಳಿಕೆಯ ಭದ್ರತೆಗೆಂದು ಮಾತ್ರ ಅಂದಿನ ಶಿಕ್ಷಣ ಸಾಗಿತ್ತು. ಅಲ್ಲದೆ ಅಂದು ಶಿಕ್ಷಣವು ಸಾರ್ವತ್ರಿಕವೂ ಆಗಿದ್ದಿಲ್ಲ; ಮಾತೃಭಾಷೆಯ ಮುಖಾಂತರವೂ ಸಾಗುತ್ತಿದ್ದಿಲ್ಲ. ಈ ರೀತಿಯ ಶಿಕ್ಷಣದಿಂದ 'ಕಲಿತವರು,' 'ಕಲಿಯದವರು' ಎಂಬ ಭೇದ ಬೆಳೆಯಲು ಅವಕಾಶ ದೊರೆತು, ಸಮಾಜ ಜರ್ಜರಿತವಾಯಿತು. ಕಲಿತ ವರ್ಗದವರು ತಾವು ಪಾಶ್ಚಾತ್ಯರಂತೆ 'ಬಿಳಿಯ ದೇವರೆಂ'ದೇ ನಂಬಿ ನಡೆಯಹತ್ತಿದ್ದರಿಂದ, ಈ ಕೃತ್ರಿಮ ಭೇದವು ಭಾರತದ ಐಕ್ಯವನ್ನೇ ಹಾಳುಮಾಡಿತು; ಜಾತೀಯತೆಗೆ ಮಾರ್ಗಮಾಡಿಕೊಟ್ಟಿತು. ಕಾಯಕ್ರಮಮಾಡದವರೇ ಸುಸಂಸ್ಕೃತರು, ಸಭ್ಯಗೃಹಸ್ಥರು— ಎನ್ನುವ ನಂಬಿಗೆ ನಮ್ಮ ಕಲಿತ ವರ್ಗದಲ್ಲಿ ಬೆಳೆದು, ರಾಷ್ಟ್ರಘಾತಕ ಮನೋವೃತ್ತಿ ಪಸರಿಸಲು ಸಹಾಯಕವಾಯಿತು. ಇದೊಂದು ಹೊಸ ಬಗೆಯ 'ಅಸ್ಪೃಶ್ಯತೆ.' ಒಟ್ಟಾರೆ, ಗುಲಾಮಗಿರಿಯು ಸ್ಥಿರವಾಗಿ ಉಳಿಯುವಂತಹ ಮನೋವೃತ್ತಿಯ ಜನರು ಬೆಳೆಯಲು ಈ ಶಿಕ್ಷಣವು ಅನುವು ಮಾಡಿಕೊಟ್ಟಿತು. ಪಾಶ್ಚಿಮಾತ್ಯ ಸಾಹಿತ್ಯ-ಸಂಸ್ಕೃತಿಯ ವ್ಯಾಮೋಹ ಬೆಳೆದು, ನಮ್ಮತನವನ್ನೇ ನಾವು ಮರೆಯುವಂತಾಯಿತು. ಇದು ಹಳೆಯ ಶಿಕ್ಷಣದ ಕಟು-ಪರಿಣಾಮದ ಸ್ಥಿತಿ.

ಕಾಂಗ್ರೆಸಿನ ಜನನ

ಭಾರತವನ್ನು ಈ ಅಧೋಗತಿಯಿಂದ ಉಳಿಸಲು ಅವತರಿಸಿದ ಪ್ರಥಮ ಭಾರತೀಯ ಸಂಸ್ಥೆಯೆಂದರೆ ಕಾಂಗ್ರೆಸ್ಸೆಂದೇ ಹೇಳಬೇಕು. ಈ ಸಂಸ್ಥೆ ನಿದಾನವಾಗಿ, ಸೌಮ್ಯವಾಗಿ ಜನಜಾಗೃತಿಯ ಕಾರ್ಯವನ್ನು ಪ್ರಾರಂಭಿಸಿತು. ಗಾಂಧೀಜಿಯವರ ನೇತೃತ್ವದಲ್ಲಿ ಈ ಕಾರ್ಯವು ತುಂಬ ರಭಸದಿಂದ ಸಾಗಿತು. ರಾಜಕಾರಣದಲ್ಲಿ, ಅರ್ಥಶಾಸ್ತ್ರದಲ್ಲಿ, ಶಿಕ್ಷಣದಲ್ಲಿ ಹೊಸ ಪ್ರಯೋಗಗಳು ಜಾರಿಯಲ್ಲಿ ಬಂದುವು. ಈ ಪ್ರಯೋಗಗಳಲ್ಲೆಲ್ಲ ಭಾರತೀಯ ಸಂಪ್ರದಾಯಗಳ ಪ್ರಭಾವ ಒಡೆದು ಕಾಣುತ್ತದೆ. ಆದರೂ ಈ ಪ್ರಯೋಗಗಳಲ್ಲಿ ವಿಶಾಲತೆಯಿದೆ; ವಿವೇಕವಿದೆ; ಹೊಸ ದೃಷ್ಟಿಯಿದೆ; ಹೊಸ ಸೃಷ್ಟಿಯಿದೆ; ಜಾಗತಿಕ ಮುನ್ನೋಟವೂ ಇದೆ. ಗಾಂಧೀಜಿಯವರ ಇಂತಹ ಒಂದು ಪ್ರಯೋಗವೇ ಜೀವನಶಿಕ್ಷಣಕ್ಕೆ ಮಾರ್ಗಮಾಡಿಕೊಟ್ಟಿದೆ.

ಶಿಕ್ಷಣವು ಜನತೆಯ ಆಶೆ—ಆಕಾಂಕ್ಷೆಗಳನ್ನು ಅರಿತುಕೊಳ್ಳಬೇಕಾದರೆ, ಶಿಕ್ಷಣದಲ್ಲಿ ಜನಜೀವನಕ್ಕೆ ಸ್ಥಾನ ಸಿಕ್ಕಬೇಕಾದುದು ಅವಶ್ಯ. ಇದುವೆ ಜೀವನ-ಶಿಕ್ಷಣದ ಜೀವಾಳ; ವಿಕಾಸದ ಸಾಧನ. ಜೀವನದಿಂದ ಅಗಲಿ ಹೋದ ಶಿಕ್ಷಣವನ್ನು ಈ ಹೊಸ ಶಿಕ್ಷಣವು ಜೀವನಸನ್ನಿವೇಶಗಳಿಗೆ ಜೋಡಿಸಬಯಸುತ್ತದೆ. ಅರ್ಥಾತ್ ಜೀವನವೇ ಶಿಕ್ಷಣವೆಂದು ಪ್ರತಿಪಾದಿಸುತ್ತದೆ. ಇದು ಜೀವನದಲ್ಲಿ ಇಂದು ಕಂಡುಬರುವ ಅಸಮತೆ, ವಿಷಮತೆ, ಅಸ್ಪೃಶ್ಯತೆಗಳನ್ನು ಹೋಗಲಾಡಿಸಿ, ಹೊಸಸಮಾಜರಚನೆಗೆ ಕೈಹಾಕಿದೆ. ಈ ವಿಷಮತೆ ದೇವನಿರ್ಮಿತವಲ್ಲ; ಮಾನವನು ತನ್ನ ಸ್ವಾರ್ಥಕ್ಕಾಗಿ ವಿಲಾಸಕ್ಕಾಗಿ ನಿರ್ಮಿಸಿದ ಕೃತ್ರಿಮತೆ. ಈ ಕೃತ್ರಿಮತೆ ಅಳಿದು ಸ್ವಾಭಾವಿಕವಾದ ಸಮಾಜರಚನೆಗೆ ಶಿಕ್ಷಣವು ಮಾರ್ಗಮಾಡಿ ಕೊಡಲೇಬೇಕು. ಈ ಆದರ್ಶ ಸಮಾಜನಿರ್ಮಾಣಕ್ಕೆ ಪರಿಪೂರ್ಣ ವಿಕಾಸಹೊಂದಿದ ವ್ಯಕ್ತಿಯು ಸಮಾಜದ ಅಂಗವಾಗಿ ನಿಲ್ಲಬೇಕು. ಆಗಲೇ ಆದರ್ಶ-ಸಮಾಜನಿರ್ಮಾಣದ ಕನಸು ನನಸಾದೀತು; ಕಟ್ಟಿದ ಸಮಾಜ ಬಾಳೀತು.

ಪರಿಪೂರ್ಣವ್ಯಕ್ತಿ

ಪರಿಪೂರ್ಣ ವಿಕಾಸಹೊಂದಿದ ವ್ಯಕ್ತಿ ಯಾರು? ವ್ಯಕ್ತಿಯಲ್ಲಿ ಮೂರು ಶಕ್ತಿಗಳು ಕೇಂದ್ರೀಕೃತವಾಗಿವೆ:— ಶಾರೀರಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ. ಈ ಮೂರು ಶಕ್ತಿಗಳ ಸಮನ್ವಯಾತ್ಮಕ ಬೆಳವಣಿಗೆಯೇ ವಿಕಾಸದ ಗುರುತು. ಹಳೆಯ ಶಿಕ್ಷಣದಲ್ಲಿ ಈ ವಿಚಾರವು ಕಂಡುಬರುತ್ತಿದ್ದರೂ ಅದು ಸಮನ್ವಯಕ್ಕೆ ಸಾಕಷ್ಟು ಪ್ರಾಶಸ್ತ್ಯವನ್ನು ಕೊಡಲಿಲ್ಲ. ಆದ ಕಾರಣ, ವ್ಯಕ್ತಿತ್ವವು ಕುಂಠಿತವಾಗಿತ್ತು. ಈಗ ಮಾತ್ರ ಆ ಭಯವಿಲ್ಲ. ಯಾಕೆಂದರೆ, ಜೀವನವೇ ಶಿಕ್ಷಣವಾಗಿದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ ರ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ
ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣ-
ದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನ-
ಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ
ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

‘ ನಂಜನಗೂಡು ಟೂತ್ ಪೌಡರು ’ ಮತ್ತು
ಆಯುರ್ವೇದೀಯ ಔಷಧಗಳು ತಯಾರಾಗುವ
ಕಾರ್ಖಾನೆ.

ಈ ತರ್ಕವನ್ನು ನಾವು ಒಪ್ಪುವುದಾದರೆ ನಮ್ಮ ಜೀವನ, ನಮ್ಮ ಜನತೆಯನ್ನೇ ಅಳತೆಗೋಲಾಗಿಟ್ಟುಕೊಂಡು ಮುಂದೆ ಸಾಗಬೇಕು. ಇಲ್ಲಿಯ ವರೆಗೆ ಪಾಶ್ಚಾತ್ಯ ಸಂಸ್ಕೃತಿಯ ಅಳತೆಗೋಲಿನಿಂದ ನಮ್ಮ ಸಮಾಜವನ್ನು ಅಳೆಯಲು ಯತ್ನಿಸಲಾಗಿದೆ. ಆದ್ದರಿಂದಲೇ, ನಮ್ಮ ಸಂಸ್ಕೃತಿ ನಮಗೆ ವಿಕೃತವಾಗಿ ತೋರುತ್ತಿತ್ತು. ನಮ್ಮ ಸಂಸ್ಕೃತಿಯಲ್ಲಿ ನಿಜವಾಗಿ ವಿಕೃತಿಯಿದ್ದರೆ, ಧೈರ್ಯದಿಂದ ಅದನ್ನು ಎದುರಿಸಲೇ ಬೇಕು. ನಮ್ಮ ಪುರಾತನ ಗುರಿಗಳು ನಮ್ಮ ಗೋರಿ-ಗಳಾಗದಂತೆ ವರ್ತಿಸುವ ಸ್ವಾತಂತ್ರ್ಯವು ನಮಗಿದೆ. ಆ ಸ್ವಾತಂತ್ರ್ಯವನ್ನು ಸರಿಯಾಗಿ ಅವಕಾಶಸಿಕ್ಕಾಗಲೆಲ್ಲ ಉಪಯೋಗಿ-ಸೋಣ. ಆದರೆ ಸಂಸ್ಕೃತಿಯ ದುರಭಿಮಾನಕ್ಕಾಗಿ ಜೀವನ ಹದಗೆಡದಂತೆ ನೋಡಿಕೊಳ್ಳುವುದು ಅತಿ ಅವಶ್ಯ. ನಮ್ಮ ಜೀವನದ ಮೂಲಕ ಜಗತ್ತಿನ ಜೀವನದ ಅರಿವು ನಮಗಾಗಬೇಕು. ರಾಷ್ಟ್ರೀಯಜೀವನ ಸಂಕುಚಿತವಾಗಿರದೆ, ಅಂತರರಾಷ್ಟ್ರೀಯದತ್ತ ನಮ್ಮನ್ನು ಒಯ್ಯುವಷ್ಟು ಶಕ್ತಿಯುಳ್ಳದ್ದಾಗಿರುವಂತೆ ರಚಿತ-ವಾಗಬೇಕು ಆದರೆ ಅಂಧಾನುಕರಣಕ್ಕೆ ಸ್ಥಾನವಿಲ್ಲದಂತೆ ವರ್ತಿಸುವುದು ಬುದ್ಧಿವಂತಿಕೆಯ ಲಕ್ಷಣವಾಗಲಿ.

ನಮ್ಮ ಜನತೆಯ ಜೀವನವೇ ನಮ್ಮ ಸಮಾಜದ ರಚನೆಗೆ ಸ್ಥಾನವನ್ನು ಕಲ್ಪಿಸಿಕೊಡುವುದು ವಿಹಿತ. ಈ ರೀತಿಯ ಒಂದು ಸಮಸ್ಯೆಯನ್ನು ಬಿಡಿಸುವಾಗ, ಆ ಜನತೆಯ ತತ್ತ್ವಜ್ಞಾನ, ಸಾಂಸ್ಕೃತಿಕ ಪರಂಪರೆಗಳ ಮತ್ತು ಆರ್ಥಿಕ ರಚನೆಯ ಸರಿಯಾದ ಜ್ಞಾನವಿರುವುದು ಅತಿ ಅವಶ್ಯ.

ತತ್ತ್ವಜ್ಞಾನ ಮತ್ತು ಸಂಸ್ಕೃತಿ.

ಭಾರತೀಯರು ಆಧ್ಯಾತ್ಮವಾದಿಗಳೆಂದು ಜಗತ್ತು ನಂಬಿ
ಈ ಆಧ್ಯಾತ್ಮವಾದದ ಮುಖ್ಯ ಅಂಶ ದೇವರಲ್ಲಿಯ ಅಚಲ ಶ್ರದ್ಧೆ
‘ ಎಲ್ಲರೂ ದೇವರ ಮಕ್ಕಳು ; ಸರಿಸಮಾನರು. ನೀತಿವಂತರಾ
ಬಾಳಿ, ತಮ್ಮನ್ನು ತಾವು ಅರಿತುಕೊಂಡು ಮುಕ್ತಿಯನ್ನು ಅಥ
ಜೀವನ ಸಾರ್ಥಕತೆಯನ್ನು ಗಳಿಸಿಕೊಳ್ಳಲು ಸ್ವತಂತ್ರರು ’ ಎಂ
ವಿಚಾರವೂ ಮುಖ್ಯ. ಇದಲ್ಲದೆ ‘ ದೇವನು ಸರ್ವವ್ಯಾಪಿ, ೮
ನನ್ನು ತಪ್ಪಿಸಿ, ಯಾವ ಕೆಲಸವನ್ನೂ ನಾವು ಮಾಡುವುದು
ಸಾಧ್ಯವಿಲ್ಲ ’ ಎನ್ನುವ ನಂಬಿಗೆ, ನಾವು ಕಾಯಾ ವಾಚಾ ಮತ್ತು
ಮನಸಾ ಪರಿಶುದ್ಧರಾಗಿರಬೇಕೆಂಬುದನ್ನು ಸೂಚಿಸುತ್ತದೆ.
‘ ಮನಮೆಚ್ಚಿ ’ ನಡೆದುಕೊಳ್ಳುವಂಥ ವ್ಯಕ್ತಿಗಳಿಂದಲೇ ಸಮಾ-
ಜವೂ ಪವಿತ್ರವಾಗಬಲ್ಲದು. ಈ ತತ್ತ್ವಜ್ಞಾನವನ್ನು ಆದರ್ಶ
ವಾಗಿಟ್ಟುಕೊಂಡೇ ನಮ್ಮ ಶಿಕ್ಷಣ ಸಾಗಿದರೆ, ಮನಸ್ಸು (ಭಾವನೆ
ಗಳು) ಶುದ್ಧವಾಗಿ, ಯೋಗ್ಯ ಗುರಿಗಳನ್ನು ಸಾಧಿಸಲು ಯೋಗ್ಯ
ಮಾರ್ಗಗಳನ್ನೇ ಉಪಯೋಗಿಸಬೇಕಾಗುವುದರಿಂದ ಗುರಿ ಮತ್ತು
ಸಾಧನೆಗಳು ಪವಿತ್ರವಾಗಿ, ಸಮಾನತೆ ಸಮಾಜದಲ್ಲಿ ಬೆಳೆದು
ಬರುತ್ತದೆ.

ನಮ್ಮ ಧರ್ಮಗಳು ನಾವು ಮಾನವರಾಗಿ, ಮಾನವರಿಗಾ
ಮತ್ತು ಇತರ ಜೀವಿಗಳಿಗಾಗಿ ಮಾಡಬೇಕಾದ ಕಾರ್ಯಗಳನ್ನು
ವಿಧಿಸುತ್ತವೆ. ನಮ್ಮ ಶ್ರೇಷ್ಠ (ಪರಮ) ಧರ್ಮವು ಅಹಿಂಸೆ
ಬುದ್ಧ ಜಿನರ ಧರ್ಮ ಅಹಿಂಸೆ; ಇವರು ಅಹಿಂಸೆಗಾಗಿ ತಮ್ಮ
ಜೀವನವನ್ನೇ ಮುಡುಪಾಗಿಟ್ಟಿದ್ದರು. ಅಹಿಂಸಾ-ತತ್ತ್ವಪ್ರಚಾರ
ಕ್ಕಾಗಿ ಹೊಸ ಧರ್ಮಗಳನ್ನು ಸ್ಥಾಪಿಸಿದರು. ಬಸವ, ಗಾಂಧಿ
ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಅಹಿಂಸೆಯನ್ನು ಪ್ರಯೋಗಿಸಿದರು
ಭಾರತೀಯ ತತ್ತ್ವಜ್ಞಾನದ ತಿರುಳು ಅಹಿಂಸೆ ! ಸತ್ಯ ಭಾರತೀಯ
ಜೀವನದ ಬೆಳಕು ! ಸತ್ಯ-ಅಹಿಂಸೆಗಳು ಭಾರತೀಯ ಜೀವನ
ಎರಡು ಕಣ್ಣುಗಳು ! ನಮ್ಮ ಧರ್ಮಸ್ಥಳ, ನಮ್ಮ ಮಠಗಳು ಮತ್ತು
ಹಬ್ಬಹುಣ್ಣಿವೆಗಳು ಭಾರತದ ಸಾಂಸ್ಕೃತಿಕ ಪರಂಪರೆಯನ್ನು
ಕಾಯುವ ಕೋಟೆಗಳಂತಿವೆ. ನೀತಿಯನ್ನೇ ಇವು ಆಧಾರವಾಗಿಟ್ಟು
ಕೊಂಡಿರುತ್ತವೆ. ನಮ್ಮಪರಧರ್ಮ ಸಹಿಷ್ಣುತೆಯನ್ನು ಈ ಪರಂಪ
ಯಲ್ಲಿ ಕಾಣಬಹುದು. ಬೌದ್ಧ, ಜೈನರ ತತ್ತ್ವಗಳನ್ನು ನಾವು ಅಳ
ವಡಿಸಿಕೊಂಡಿದ್ದೇವೆ. ಕ್ರೈಸ್ತ, ಮಹಮ್ಮದೀಯರಿಗೆ ನಮ್ಮಲ್ಲಿ ಸ್ಥಾ
ಸಿಕ್ಕಿದೆ. ಅವರ ಹಬ್ಬಗಳು ನಮ್ಮ ಹಬ್ಬಗಳೂ ಆಗಿವೆ. ಆದರೆ ಈ
ಧರ್ಮ ಸಹಿಷ್ಣುತೆ ಹಾಳಾಗಲು ಹಳೆಯ ಶಿಕ್ಷಣವು ಬಹುಮಟ್ಟಿ
ಕಾರಣವಾಗಿದೆ. ಆದ್ದರಿಂದಲೇ ಈ ಹೊಸ ಶಿಕ್ಷಣಕ್ಕೆ ಸ್ವಾಗತ
ಸಿಕ್ಕಿದೆ. ಮತ್ತೊಮ್ಮೆ ಧರ್ಮಸಹಿಷ್ಣುತೆ ಭಾರತದಲ್ಲಿ ಬೆಳಗಲಿದೆ
ಧರ್ಮಗಳು ಬೇರೆ ಬೇರೆಯಾಗಿದ್ದರೂ ಈ ಸಾಂಸ್ಕೃತಿಕ ಎ
ಒಂದೇ ಆಗಿದೆ. ಈ ಎಳೆಯಲ್ಲಿ ಎಲ್ಲರನ್ನೂ ಒಂದುಗೂಡಿಸು
ಶಕ್ತಿಯಿದೆ. ವಿಶ್ವಬಂಧುತ್ವವನ್ನು ಬೆಳೆಯಿಸುವ ಶಕ್ತಿಯೂ ಇದರ
ಲ್ಲಿದೆ.

ರ್ಥಶಾಸ್ತ್ರ.

ಪ್ರಾಚೀನ-ಭಾರತದ ಅರ್ಥರಚನೆ ಬಹು ಭದ್ರವಾದುದು. ರತವು ಹಳ್ಳಿಗಳ ನಾಡು. ಹಳ್ಳಿಗರ ಮುಖ್ಯವಾದ ಉದ್ಯೋಗ ಕ್ಕಲುತನ. ಒಕ್ಕಲುತನವು ವಿಕೇಂದ್ರೀಕೃತ ಉದ್ಯಮ. ಅದ್ದರಿಂದ ಲ್ಲಿ ಪೈಪೋಟಿ ಅಥವಾ ಶೋಷಣಕ್ಕೆ ಸ್ಥಾನವೇ ಇಲ್ಲ. ಈ ಾಲೋದ್ಯೋಗಕ್ಕೆ ಸಹಾಯಕವಾಗುವ ಅನೇಕ ಸಣ್ಣಪುಟ್ಟ ದ್ಯೋಗಗಳು ವಿಕೇಂದ್ರೀಕೃತವಾಗಿವೆ.

ಈ ಉದ್ಯೋಗದಲ್ಲಿ ತೊಡಗಿರುವವರೆಲ್ಲರಿಗೂ ಸಮಾಜದಲ್ಲಿ ನ್ಯಾದ ಸ್ಥಾನವಿತ್ತು. ಒಕ್ಕಲಿಗನಿಗೆ 'ನೇಗಿಲಯೋಗಿ' ಂದು ಹೇಳುವ ವಾಡಿಕೆಯುಂಟು. ಕಾಯಕಷ್ಟದಿಂದ, ಪ್ರಾಮಾ- ಕತನದಿಂದ ದುಡಿದು ಉಣ್ಣುವುದು ಕೀಳು; ಈ ಉದ್ಯೋಗದಲ್ಲಿ ೊಡಗಿರುವವರು ಕೀಳು—ಎಂಬ ಭಾವನೆಯಿಲ್ಲದ್ದರಿಂದ, ಸಮಾ- ವು ಸ್ವಾವಲಂಬಿ ವ್ಯಕ್ತಿಗಳಿಂದ ಕೂಡಿತ್ತು. ಆರ್ಥಿಕ ದೃಷ್ಟಿಯ ಳು-ಮೇಲುಗಳಿಗೆ ಸ್ಥಾನವೇ ಇಲ್ಲದುದರಿಂದ 'ಕಾಯಕವೇ ಲಾಸ'ವಾಗಿತ್ತು.

ಆದರೆ, ಈಗಿನ ಆರ್ಥಿಕ ರಚನೆಯಲ್ಲಿ ಭಂಡವಾಳಶಾಹಿ ಒಂದು ಡೆ ಭದ್ರವಾಗಿ ನಿಂತಿದೆ. ಈ ಸಣ್ಣ ವರ್ಗವೇ ಶೋಷಣದಿಂದ ಪ್ರತಿ ನ ಹೆಚ್ಚು ಶ್ರೀಮಂತವಾಗುತ್ತ ನಡೆದಿದೆ, ಆದರೆ ಶೋಷಿತವರ್ಗ ೊಡ್ಡದಾದರೂ ದಿನ ದಿನ ಬಡವಾಗುತ್ತ ನಡೆದಿದೆ. ಆದರೆ ಈ ತಿಯ ಕೃತಿಗೆ ಆಸ್ಪದವಿದ್ದರೆ ಸಮಾಜದಲ್ಲಿ ದ್ವೇಷಕ್ಕೆ ಆಮಂತ್ರಣ ತ್ತಂತಾಗುತ್ತದೆ. ಪ್ರಜಾಪ್ರಭುತ್ವವು ಅಳಿದು ಬೇರೆ ಯಾವು- ದರೊಂದು 'ವಾದ' ಬರಬಹುದು. ರಶಿಯಾದಂತೆ ್ರಾಣಾಹುತಿಯೂ ಆಗಬಹುದು. ಯಾಂತ್ರಿಕಯುಗದ ಪರಿ- ಾಮವಾಗಿ ಆರ್ಥಿಕ ಸಮಸ್ಯೆ ವಿಕಾರರೂಪವನ್ನು ತಾಳುತ್ತದೆ.

ಈ ಅನರ್ಥ ತಪ್ಪಿಸಲು ಹಳ್ಳಿಯ ಉದ್ಯೋಗಗಳು ಊರ್ಜಿತ- ಾಗಲು ಸಹಾಯ ಮಾಡುವುದು ಒಂದು ಪರಿಣಾಮಕಾರಿ ಪಾಯ: ಯಾಕೆಂದರೆ—ಮಾಲಿನ ಮೇಲೆ ಹಿಡಿತ ಉಳಿ- ಯುತ್ತದೆ; ಎಲ್ಲ ಹಳ್ಳಿಗಳು ತಮಗೆ ಅವಶ್ಯವಿರುವಂಥ ಮಾಲನ್ನೇ ಯಾರಿಸುವುದರಿಂದ, ದೇಶದ ಎಲ್ಲ ಹಳ್ಳಿಗಳಲ್ಲಿ ಒಂದು ವಿಧದ ಹಕಾರ ಬೆಳೆದು, ಸಮಾಜ ಸ್ವಾಸ್ಥ್ಯಕ್ಕೆ ಆಸ್ಪದ ಸಿಗುತ್ತದೆ. ಡ್ಡು ಹಳ್ಳಿಗಳಲ್ಲಿ ಹಂಚಿ ಹೋಗುವುದರಿಂದ, ಶ್ರೀಮಂತಿಕೆಗೆ ಸ್ಪದವಿಲ್ಲದಂತಾಗುತ್ತದೆ.

ವನ ಶಿಕ್ಷಣ ಶಾಲೆಗಳು.

ಮೇಲೆ ವಿವರಿಸಿದ ತತ್ತ್ವಗಳನ್ವಯ ಒಂದು ಹೊಸ ಸಮಾಜ- ನ್ನು ಕಟ್ಟುವುದೇ ಜೀವನ ಶಿಕ್ಷಣದ ಧ್ಯೇಯವಾಗಿದೆ. ಈ ಸಮಾ- ದ ವ್ಯಕ್ತಿಗಳಲ್ಲಿ ಸರಳ ಮತ್ತು ಉದಾತ್ತಜೀವನದ ತತ್ತ್ವಗಳು ಗೊಳ್ಳುವಂತೆ, ಶಾಲೆಯಲ್ಲಿಯೇ ಈ ಗುಣಗಳ ಪರಿಚಯಕ್ಕೆ ಕಾಶವನ್ನೀಯಲಾಗಿದೆ. ಪ್ರಾರ್ಥನೆ, ಕೌಟುಂಬಿಕ ಜೀವನದ ಟಿಕೆಗಳು, ಶಾಲೆಯ ಆಡಳಿತ, ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆ, ಮೂಲೋದ್ಯೋಗ ಮುಂತಾದುವು- ಗಳನ್ನು ಪ್ರತಿಯೊಂದು ಶಾಲೆಯಲ್ಲಿ ನಾವು ಕಾಣಬಹುದು. ಮಕ್ಕಳು ಜೀವಿಸಿಯೇ ಈ ತತ್ತ್ವಗಳನ್ನು ಅರಿಯುವುದರಿಂದ, ಜೀವನ ಕಲೆಯು ಮಕ್ಕಳಿಗೆ ಕರಗತವಾಗುವುದು. ಶಿಕ್ಷಣವೃಕ್ಷವು ಬೇರಿಳಿಸಿ- ಕೊಂಡು ಬೆಳೆಯಹತ್ತಿದೆ. ಅದರ ಫಲವೇ ಸುಂದರವಾದ ಸಮಾಜ!

ಈ ಸಮಾಜ-ವ್ಯಕ್ತಿಗಳಲ್ಲಿ ದೇವರ ಮತ್ತು ತಮ್ಮಲ್ಲಿರುವ ದೇವತ್ವವನ್ನು ಅರಿತುಕೊಳ್ಳುವ ಶಕ್ತಿಯು ಬರಬೇಕು. ಸತ್ಯ, ಅಹಿಂಸೆಗಳೇ ಅವರ ಜೀವನದ ಕಣ್ಣುಗಳಾಗಬೇಕು. ಸ್ನೇಹ, ಸಹಕಾರ, ಸೌಹಾರ್ದ, ಸಹಿಷ್ಣುತೆ, ಶ್ರಮಗೌರವ, ಸಮಾನತೆ- ಗಳು ಅವರ ಜೀವನದ ಕೈದೀವಟಿಗೆಗಳಾಗಬೇಕು. ಪರಾವಲಂಬಿ ಜೀವನವೇ ಮರಣ, ಸ್ವಾವಲಂಬಿ ಜೀವನವೇ ಜೀವನವೆಂದು ನಂಬಿ, ಆರ್ಥಿಕ ವಿತರಣದಲ್ಲಿ ಸದಾರತರಾಗಬೇಕು. ಈ ರೀತಿಯ ವ್ಯಕ್ತಿ- ಗಳಿಂದ ನಿರ್ಮಿತ ಸಮಾಜ ವರ್ಗರಹಿತವಾಗುವುದು, ಸುಖಶಾಂತಿ ಸಮೃದ್ಧಿಗಳ ಬೀಡಾಗುವುದು ಸಂಭವನೀಯ.

ಮಾನವನ ಎಲ್ಲ ಶಕ್ತಿಗಳ ಸಮನ್ವಯ ವಿಕಾಸವೇ ವರ್ಧಾ- ಶಿಕ್ಷಣದ ಧ್ಯೇಯ. ಇದರಲ್ಲಿಯೇ ವ್ಯಕ್ತಿಯ ಕಲ್ಯಾಣವಿದೆ; ಸಮಾಜದ ಕಲ್ಯಾಣವಿದೆ; ಜಗತ್ತಿನ ಕಲ್ಯಾಣವಿದೆ.

ಪ್ರತಿಯೊಬ್ಬ ಕನ್ನಡಿಗನು
ಸಂಗ್ರಹಿಸಬೇಕಾದ ಗ್ರಂಥಗಳು.

ಗ್ರಂಥವಿಜ್ಞಾನ.... ಸಂಪಾದಕರು ಶ್ರೀ ಸಾಂಗಲಿ ವೆಂಕಟೇಶ
ಬೆಲೆ ರೂ. ೨-೦-೦

ಲೋಕೂರ ನಾರಾಯಣರಾಯರು.
ಲೇ. ಶ್ರೀ. ಎನ್. ಕೆ. ಕುಲಕರ್ಣಿ ಮತ್ತು
ಶ್ರೀ. ಎಚ್. ವಿ. ಇನಾಂತಿ.
ಬೆಲೆ ರೂ. ೧-೮-೦

ಜರಾಸಂಧಿ ಲೇ. ಶ್ರೀರಂಗ.
ಬೆಲೆ ರೂ. ೧-೮-೦
ಮೂರೂ ಪುಸ್ತಕದ ಒಟ್ಟು ಬೆಲೆ... ರೂ. ೪-೮-೦
ಅಂಚೇವೆಚ್ಚ.... ೦-೫-೦

ಕರ್ನಾಟಕ ಸಂಘ,
ಸಾಂಜಗಿರಿ ಸದನ, ಗಿರಗಾಂವ, ಮುಂಬಯಿ ೪

ಸ್ವಾತಂತ್ರ್ಯದ ಹುಟ್ಟುಹಬ್ಬ

'ಅಂಬಿಕಾತನಯದತ್ತ'*

೧

ಸ್ವಾತಂತ್ರ್ಯದ ಹುಟ್ಟುಹಬ್ಬ
ಕರೆವುದು ಸಾವಿರದ ಕಬ್ಬ
ಸುರಭಿಯಂತೆ ಇಂದಿಗೂ—
ಅದರ ಪದಕೆ ಗೆಜ್ಜೆ ಬೇಕೆ?
ಅದಕೆ ಬೇರೆ ರಾಗ ಬೇಕೆ?
ಅದೇ ಗೀತವೆಂದಿಗೂ!

೨

ಶಾಂತಜಲಧಿಯಂತರಂಗ
ಕಾರಿತಣ್ಣ ಬೆಂಕೆಯು!
ಕೋರಿಯಾದ ಕುರುಕ್ಷೇತ್ರ
ಮರೆಯಿತ್ತಗೋ ಶಂಕೆಯು!
ಮರೆಯಿಸುವುದೊ, ನೆನೆಯಿಸುವುದೊ....
ರಾವಣನಾ ಲಂಕೆಯು!

೩

ಮಹಾಕಾಲಿ ಇಳಿದಳಣ್ಣ
ತನ್ನ ರುದ್ರಲೀಲೆಗೆ....
ಸೋರಿದಸಂತಾ ರಕ್ತಕುಡಿಯು
ಚಾಚಿ ತನ್ನ ನಾಲಗೆ;
ಬೇರೆ ದೇವಿ ಬರುತಲಿಹಳು
ನೋಡು ಸ್ವಲ್ಪ ಮೇಲಗೆ!

೪

ಹಿಗ್ಗಿನೊಂದು ಉರುಳೆಯಂತೆ
ಅವಳ ಮುಖದ ಮಂಡಲ;
ಸಂಜೆಬಂಜೆತನವ ಹರಿಸಿ
ಮೆರೆಯು ತುಟಿಯ ತೊಂಡಿಲ—
ಹಜ್ಜೆಯಿಟ್ಟ ಎಡೆಯೆಡೆಯಲಿ
ಅಗೋ ಯಜ್ಞಸ್ಥಂಡಿಲ!

೫

ಮೂರು ಮುಸುಕು ಎಳೆದುಕೊಂಡು
ಮಲಗಿದೇಕೆ ಮಾನವಾ?
ಸುಡಿಸಿ ಸುಟ್ಟು, ಕೆಡಿಸಿ ಕೆಟ್ಟು
ಕುಣಿಯುತಿಹನು ದಾನವಾ—
ಧೀರೆ ಇಳೆಯು ಸೀರೆ ಸೆಳೆವ
ಉಳಿಸೊ ಉಳಿಸೊ ಮಾನವಾ!

೬

ಅದೇ ಅನ್ನ ಅದೇ ನೀರು
ವಿಶ್ವನರನ ಹಸಿವೆಗೆ—
ಬೆಳಕು ಗಾಳಿ ಸುತ್ತು ಹಿಂದು
ಪ್ರಾಣದ ಒಳ ಆಸುವಿಗೆ
ಒಂದೆ ಬಯಲು ಬದುಕಲುಂಟು
ವಸುಂಧರೆಯ ಹಸುವಿಗೆ!

೭

ಚುಕ್ಕೆಗಳನು ಮೆಟ್ಟು ಮಾಡಿ
ಬರುತಲಿಹಳು ತಾಯಿಯು—
ಅವಳ ಮಾತ ಕಲಿಯಲೆಂದು
ತೊದಲುತಿಹುದು ಬಾಯಿಯು;
ಅವಳ ಬರವ ಕಾಯುತಿಹುದು
ಮರದ ಮರದ ಕಾಯಿಯು!

೮

ಚಪಲಂಬವನವಲಂಬಿಸಿ
ನಗೆಯು ಕಣ್ಣ ಕೊನೆಗಿದೆ,
ಮುತ್ತು ಉರುಳಿ ಹೊರಳಿ ಮರಳಿ
ಬರಲು ತುಟಿಯು ನನೆಗಿದೆ,
ಮುಕ್ತಿ ಉಯ್ಯಾಲಾಟ ನೋಡು
ಮೂಗ-ಮೂಗತೆನೆಗಿದೆ.

೯

ಏಳೊ ಏಳು ಗೆಳೆಯ ಕೇಳು,
ಕರೆವ ತೂರ್ಯನಾದವ—
ಗೋಳಗುಮ್ಮಟದಂತೆ ಸೃಷ್ಟಿ
ನುಡಿಸುವ ಪಡಿನಾದವ—
ಹೆಜ್ಜೆ ಹಾಕು, ಹಾಡ ಹೇಳು,
ನೀನೆ ನಾಳೆ ಯಾದವ!

೧೦

ದೀಪ ದೀಪ ಸಮ-ಸಮಾಸ
ಬಂತು ಬೇಗ ಹುಣ್ಣಿವೆ;
ಜೀವರಥಕೆ ಪ್ರಾಣದಶ್ವ
ತಾವೆ ತಾವು ಹಣ್ಣಿವೆ.
ಎಲ್ಲ ಬೆಳಕು ಎಲ್ಲ ಬಯಲು
ಮಣ್ಣ ಕಣಕು ಕಣ್ಣಿವೆ!

೧೧

ಪ್ರೀತಿ ದೂತಿಯಾಗಿ ಬಂದು
ಕರೆಯುತಿಹಳು ಯಾತ್ರೆಗೆ,
ಎದೆ-ಎದೆಗೂ ಹಬ್ಬವಾಗೆ
ದೇವಿ-ದೇವ ಜಾತ್ರೆಗೆ,
ಬಾಳಿರಣ್ಣ ಆಳಿರಣ್ಣ
ಬೆಳಗು ಉಂಟು ರಾತ್ರಿಗೆ!

೧೨

ಬಾರೆ ತಾಯಿ, ಬಾರೆ ದೇವಿ,
ಓಗರೆವರು ಭಕ್ತರು,
ನಿನ್ನ ಮಕ್ಕಳೆಂದು ನಿನಗೆ
ಒಲಿವ ಜ್ಞಾನ ಶಕ್ತರು.
ನಿನ್ನ ಮನೆಯ ಕಟ್ಟಲಿಹರು
ದಿವ್ಯ ಕರ್ಮಯುಕ್ತರು!

೧೩

ನುಗ್ಗಿರಣ್ಣ ರಣದ ಕಣಕೆ—
ಅಸುರರಿಂದ ಬಿಡಿಸಿರಿ
ತಾಯ ಸೆರೆಯ, ಎಲ್ಲರಿಂದ
ಗೆಲುವಿನ ಗುಡಿ ಹಿಡಿಸಿರಿ,
ಭೂಮಿದೇವಿ ನಲಿಯುವಂತೆ
ವಿಜಯಗೀತ ನುಡಿಸಿರಿ!

೧೪

ಕನ್ನಡವ್ವೂ ಕನ್ನಡಿಸಲಿ
ನಾಳೆಬಾಳಿನೊಸಗೆಯ—
ಜೀವನಕಲೆ ಬೆಳಗಲಿಲ್ಲಿ
ತಿಳಿದು ಕರಣ ಹಸುಗೆಯ—
ಪೂರ್ಣಪ್ರಜ್ಞರಾಗಿ ಪಡಲಿ
ಜೀವ ದೇವ ಬೆಸುಗೆಯ!

೧೫

ಸ್ವಾತಂತ್ರ್ಯದ ಹುಟ್ಟುಹಬ್ಬ
ಕರೆವುದು ಸಾವಿರದ ಕಬ್ಬ
ಸುರಭಿಯಂತೆ ಇಂದಿಗೂ—
ಅದರ ಪದಕೆ ಗೆಜ್ಜೆ ಬೇಕೆ—?
ಅದಕೆ ಬೇರೆ ರಾಗ ಬೇಕೆ—?
ಅದೇ ಗೀತವೆಂದಿಗೂ!

ಸಂ. ಜ.

---

* ತಾ. ೧೫-೮-೫೦ ರಂದು ಧಾರವಾಡದ ಬಾನುಲಿಯಲ್ಲಿ ಬಿತ್ತರಿಸಿದ ಗೀತವಿದು

ಹರಿಜನಸೇವಾಸಕ್ತ ಕಾಕಾ ಕಾರಖಾನೀಸ

(ವ್ಯಕ್ತಿ ಪರಿಚಯ)

ಶ್ರೀಮತಿ ಇಂದಿರಾ ಲ. ರಾವ್. ಎಂ. ಎ. ಜಬಲ್ಪುರ

★

ಕಾಕಾ ಕಾರಖಾನೀಸರಂತಹ ಆದರ್ಶವಾದಿ ಕೆಲಸಗಾರರು ಕನ್ನಡನಾಡಿನ ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ಕಾರ್ಯ ಮಾಡಲು ತೊಡಗಿದರೆ, ಇಂದಿನ ವಿಷಮ—ವಿಷಮಯ-ವಾತಾವರಣ ಖಂಡಿತ ತೊಲಗದಿರದು!

★

ಅಂದು ೪೬ನೆಯ ಇಸ್ವಿಯ ಜೂನ್ ತಿಂಗಳ ೧೯ನೆಯ ದಿನಾಂಕದ ಬೆಳಗಿನ ೧೧ ಗಂಟೆಯ ಸಮಯ. ವಿಜಾಪುರದ ಶನದ ಬದಿಯಿಂದ ಮುಖ್ಯ ಬೀದಿಗುಂಟ ವಿಜಾಪುರದ ಮುಖ ನಾಗರಿಕರು, ಮಹನೀಯರು, ಮಹಿಳೆಯರು, ಗುಂಪು-ಪಾಗಿ, ಗುಜು ಗುಜು ಮಾತಾಡುತ್ತ ಹೊರಟಿದ್ದರು. ಎಲ್ಲರ ಯಲ್ಲಿಯೂ ಅಂದು ಒಂದೇ ಮಾತು: “ಕಾಕಾ ಎಂಥ ರ್ಯಜೀವಿ! ನಾವೂ ಹರಿಜನ ಕನ್ಯೆಯರಾಗಿ ಹುಟ್ಟಬಾರ-ಗಿತ್ತೇ?” ಎಂದು.

ಅಂದೇ ಬೆಳಗಿನ ೯ ಗಂಟೆಗೆ, ಮುಂಬಯಿಯ ಪ್ರಧಾನಮಂತ್ರಿ-ಳಾದ ಮಾನ್ಯ ಖೇರರ ಹಸ್ತದಿಂದ “ಹರಿಜನ ಕನ್ಯಾಮಂದಿರ”ದ ಗಲ್ಲಿಡುವ ಸಮಾರಂಭ ಜರುಗಿತ್ತು. ಮುಂಬಯಿಯ ಪ್ರಮುಖ ಡಿಗರಾದ ಶ್ರೀ. ಕಬ್ಬೂರ ಕೃಷ್ಣರಾಯರು ತಮ್ಮ ಸಹಧರ್ಮಿಣಿ ಮತಿ ಸೋನೂತಾಯಿಯವರ ಹೆಸರಿನಲ್ಲಿ ೨೫೦೦೦ ರೂಪಾಯಿ-ನ್ನು, “ಹರಿಜನ ಕನ್ಯಾಮಂದಿರ” ಕಟ್ಟಲು ಧರ್ಮಾರ್ಥವಾಗಿ ಕಾ” ಅವರಿಗೆ ಕೊಟ್ಟಿದ್ದರು. ಸರಕಾರವು ೨೫೦೦೦ ರೂ. ಟ್ಟಿತು. “ಕಾಕಾ” ಭಿಕ್ಷೆಬೇಡಿ ೩೦,೦೦೦ ರೂಪಾಯಿ ಡಿಸಿದ್ದರು. ಅವರ ಹನ್ನೆರಡು ವರುಷಗಳ ಪರಿಶ್ರಮದ ಫಲ-ಗಿಯೆ ಅಂದು “ಕನ್ಯಾಮಂದಿರ”ದ ಅಡಿಗಲ್ಲಿಡುವ ಸಮಾರಂಭ ಕನ್ನು ಕಂಡಿತು.

ಕಾಕಾ ವಿಜಾಪುರಜಿಲ್ಲೆಯ ಹರಿಜನ ಮಕ್ಕಳಿಗೆಲ್ಲ ಆಸರೆ ಡುವ ತಂದೆ; ಅಕ್ಷರ ಕಲಿಸುವ ಗುರು. ೧೯೩೩ಕ್ಕೇ ಕಾಕಾ ಜನ ವಿದ್ಯಾರ್ಥಿ ವಸತಿಗೃಹವನ್ನು ಸ್ಥಾಪಿಸಿದ್ದರು. ೧೯೩೮ರಲ್ಲಿ ರಿಜನ ಕನ್ಯಾಮಂದಿರ”ದ ಸ್ಥಾಪನೆಯಾಯಿತು. ಕನ್ಯೆಯರ ಗ ಬೆಳೆದಂತೆ ವಸತಿಗೃಹವನ್ನೂ ಬೆಳೆಸಬೇಕೆಂದು ಕಾಕಾ ಸು ಕಟ್ಟಿದರು. ಆ ಕನಸು ೪೬ನೆಯ ಜೂನ್ ತಿಂಗಳಲ್ಲಿ ಸಾಯಿತು.

ಅಂದಿನ ಸಭೆಗೆ ಇಂದಿನ ಕೇಂದ್ರ ಸರಕಾರದ ಸುದ್ದಿಖಾತೆಯ ಮಂತ್ರಿಗಳಾದ ಮಾನ್ಯ ದಿವಾಕರರೂ ಆಗಮಿಸಿದ್ದರು. ದಾನಿಗಳಾದ ಕಬ್ಬೂರರಿಗೆ ಒಳ್ಳೇ ಸಿಮೆಂಟ್ ಕಟ್ಟಡ ಕಟ್ಟಿಸಬೇಕೆಂಬ ಮನೀಷೆ. ಅಂದಿನ ಸಭೆಯಲ್ಲಿ ಆ ಸಿಮೆಂಟ್ ಕಟ್ಟಡದ ರೂಪ-ರೇಷೆಗಳನ್ನು ಓದಿ ತೋರಿಸಲಾಯಿತು. ೩೦ ಕೋಣೆಗಳು, ವಿದ್ಯುದ್ದೀಪ, ಮಂಚ, ಕಪಾಟುಗಳ ಏರ್ಪಾಡು, ಬಿಸಿನೀರು, ತಣ್ಣೀರು ನಲ್ಲಿಗಳ ಬೇಸಿನುಗಳು, ನಾಲ್ಕು ಸ್ನಾನದ ಮನೆಗಳು, ಅಡಿಗೆಯ ಮನೆ, ಊಟದ ಮನೆ, ಉಗ್ರಾಣ, ಒಂದು ಸಭಾಭುವನ, ಪ್ರಾರ್ಥನಾಲಯ, ವಾಚನಾಲಯ, ಆಟದ ಬೈಲು, ಕಟ್ಟಡದ ಮುಂದೆ ಹೂದೋಟ..... ಇ. ಇ. ಯಾಗಿ ಕಟ್ಟಡದ ವಿವರಗಳನ್ನು ಓದಿ ತೋರಿಸಲಾಯಿತು. ಈ ವಿವರಗಳನ್ನು ಕೇಳಿಯೇ ನಾಗರಿಕರ ಬಾಯಲ್ಲಿ “ನಾವೂ ಹರಿಜನ ಕನ್ಯೆಯರಾಗಿ ಹುಟ್ಟಬಾರದಾಗಿತ್ತೇ?” ಎಂಬ ಮಾತು ಹುಟ್ಟಿತು. ಎಲ್ಲಿ ಕೇಳಿದಲ್ಲಿ ಅಂದು ಕಾಕಾ ಅವರನ್ನು ಹೊಗಳುವ ಉದ್ಗಾರಗಳೇ ಕೇಳಬರುತ್ತಿದ್ದುವು.

ಯಾರಿವರು ಈ ಕಾಕಾ? ವಿಜಾಪುರ ಜಿಲ್ಲೆಯಲ್ಲಿಲ್ಲ—ಅದೇಕೆ ಉತ್ತರಕರ್ನಾಟಕದಲ್ಲೆಲ್ಲ—‘ಕಾಕಾ’ ಎನಿಸಿಕೊಳ್ಳುವ, ಎಲ್ಲರಿಗೂ ಅಕ್ಕನಂತಿರುವ ಈ ವ್ಯಕ್ತಿ ಯಾರು?

ಇವರೇ ಹರಿಜನ ಸೇವಾಸಕ್ತ ಕಾಕಾ ಕಾರಖಾನೀಸ....ಗಣೇಶ ಗೋವಿಂದ ಕಾರಖಾನೀಸ

ಇವರಿಗೆ ಕಳೆದ ಏಪ್ರಿಲ್ ೨೦ಕ್ಕೆ ಷಷ್ಟ್ಯಬ್ದಿಪೂರ್ತಿ. ಇವರ ೬೦ ವರುಷಗಳ ಜೀವನ ಪರಿಚಯ ಬರೆಯಬೇಕೆನಿಸಿತು. ಕಾಕಾ ಚಿಕ್ಕಂದಿನಿಂದಲೂ ನನ್ನ ಸಂಸ್ಕೃತ ಗುರು. ನನ್ನಲ್ಲಿ ಸಂಸ್ಕೃತದ ಅಭಿರುಚಿಯನ್ನೂ ಹೆಚ್ಚಿನ ವಿದ್ಯಾವ್ಯಾಸಂಗದ ಹಂಬಲವನ್ನೂ ಹುಟ್ಟಿಸಿದವರು ಇವರೇ ಎಂದು ಹೇಳಬಹುದು. ವಿದ್ಯಾರ್ಥಿ ದಶೆಯಲ್ಲಿ ಸಂಸ್ಕೃತ ಕಲಿಸಿ ಪ್ರೋತ್ಸಾಹಿಸಿದವರೂ, ಆಧ್ಯಾತ್ಮಿಕ

ಮತ್ತು ಆದರ್ಶ ವಿಚಾರಗಳನ್ನು ಅಂಕುರಿಸಿದವರೂ ಇವರೇ ಎಂದು ಹೇಳಬಹುದು. ಅತ್ಯಂತ ವಿನೋದಿಗಳು ; ದಯಾನ್ವಿತರು.

ಪರಿಚಯ ಬರೆಯಲು ವಿವರಗಳನ್ನು ಕೇಳಲು ೨-೩ ಸಲ ಹೋಗಿದ್ದೆ. "ಅನೇಕ ಹರಿಜನ ಪ್ರಮುಖರು, ಇನ್ನಿತರರು, ನನಗೆ ೬೦ ವರುಷ ಸಮಾಪಿಸಿತೆಂದು ನನ್ನ ಜೀವನ ಪರಿಚಯವನ್ನು ವಿವರವಾಗಿ ತಿಳಿದುಕೊಳ್ಳಲು ಬಂದಿದ್ದರು ; ನಾನು ಯಾರಿಗೂ ಹೇಳಿಲ್ಲ. ಈ ೬೦ ವರುಷಗಳಲ್ಲಿ ನಾನೇನು ಮಹಾ ಕೃತಿಗಳನ್ನು ಎಸಗಿದ್ದೇನೆ? ನನಗಾರ ಸ್ತುತಿಯೂ, ಪ್ರಚಾರವೂ, ಪ್ರಖ್ಯಾತಿಯೂ ಬೇಡ ಆದರೂ ನಿನ್ನ ಬಲವಂತಕ್ಕಾಗಿ ಕೆಲವು ವಿವರಗಳನ್ನು ಮಾತ್ರ ಕೊಡುವೆ," ಎಂದು ವಿಶ್ವಾಸದಿಂದ ನಾನು ಕೇಳಿದ ಎಲ್ಲ ವಿವರಗಳನ್ನೂ ಹೇಳಿದರು.

ಕಾಕಾ ಕಾರಖಾನೀಸರು ೧೮೯೦ನೆಯ ಇಸ್ವಿಯ ಎಪ್ರಿಲ್ ೩೦ನೆಯ ದಿನಾಂಕ, ಕೊಲ್ಹಾಪುರ ಸಂಸ್ಥಾನದ ಮುಲಕಾಪುರ ಎಂಬಲ್ಲಿ ಹುಟ್ಟಿದರು. ತಂದೆ ಗೋವಿಂದ ರಘುನಾಥ ಕಾರಖಾನೀಸ. ಆ ಊರ ಮಹಾಲಕರಿ. ತಾಯಿ ಪಾರ್ವತೀಬಾಯಿ, ಕನಕಾಡಿ (ಕೊಂಕಣ) ಯ ಸರದೇಶಪಾಂಡೆ ನಾರಾಯಣರಾಯರ ಮಗಳು. ಮಗನು ವಿದ್ಯಾವಂತನಾಗಲೆಂದು ತಾಯಿ "ಗಣೇಶ" ಎಂದು ನಾಮಕರಣ ಮಾಡಿದರು. ಮಗನು ವಿದ್ಯಾವಂತನಾಗುವುದಲ್ಲದೆ, ಹರಿಜನ ಮಕ್ಕಳಿಗೆಲ್ಲ ವಿದ್ಯಾದಾನ ಮಾಡುವ ಗುರುವಾಗುವನೆಂದು ಅವರಿಗೇನು ಗೊತ್ತು ?

ಕಾಕಾ ಅವರಿಗೆ ಬಾಳಕೃಷ್ಣ (ಅಣ್ಣಾಸಾಹೇಬ) ಎಂಬ ಅಣ್ಣ, ಶಂಕರನೆಂಬ ತಮ್ಮ. ಗೋದೂಬಾಯಿ ಎಂಬ ಹೆಸರಿನ ಅಕ್ಕ. ಬಾಳೂತಾಯಿ ಎಂಬ ತಂಗಿ—ಹೀಗೆ ಇವರು ಒಟ್ಟು ಐದು ಜನರು. ಗೋದೂಬಾಯಿ ಮುಲಕಾಪುರದ ಮನೆಯಲ್ಲಿ ವಾಸವಾಗಿರುವರು. ಸೌ. ಬಾಳೂತಾಯಿ, ಠಾಕೂರ ಮನೆತನವನ್ನು ಸೇರಿ ಮುಂಬಯಿಯಲ್ಲಿ ವಾಸವಾಗಿದ್ದಾರೆ. ತಮ್ಮ ಶಂಕರರಾವ ಇವರು, ಮುಂಬಯಿಯಲ್ಲಿ ಮೆಕ್ಯಾನಿಕಲ್ ಎಂಜಿನೀಯರರು.

ಇವರ ತಾಯಿ-ತಂದೆ ಶಿವಭಕ್ತರು. ನಿತ್ಯ ಶಿವಲೀಲಾಮೃತ ಪಠಿಸುತ್ತಿದ್ದರು. ಅಕ್ಕ ಆನಂದೀಬಾಯಿ ಇವರಿಗೆ ದೇವ-ದಾನವರ ಕತೆಗಳನ್ನು ಹೇಳುತ್ತಿದ್ದರು. ಇಂಥ ವಾತಾವರಣದಲ್ಲಿ ಬೆಳೆದ ಕಾಕಾ, ಚಿಕ್ಕಂದಿನಿಂದಲೇ ದೇವನಿಷ್ಠರಾದರು. ಇವರ ಪೂರ್ವಜರು ವಿಶಾಲಗಡದ ಮನೆತನಕ್ಕೆ ಪ್ರಧಾನ ಮಂತ್ರಿಗಳಾಗಿದ್ದರು.

ಇವರ ತಂದೆ ೧೯೧೬ರಲ್ಲಿಯೂ ತಾಯಿ ೧೯೨೨ರಲ್ಲಿಯೂ ಕಾಲವಶವಾದರು. ಅನಂತರ ಇವರ ಅಣ್ಣ ಡಾ. ಅಣ್ಣಾಸಾಹೇಬ ಕಾರಖಾನೀಸ ಇವರು ತಮ್ಮನನ್ನು ಅತ್ಯಂತ ಮಮತೆಯಿಂದ ಪೋಷಣೆ ಮಾಡಿದರು. ಡಾ. ಕಾರಖಾನೀಸರು, ಕೊನೆಯ ವರೆಗೂ ಅವಿವಾಹಿತರಾಗಿಯೇ ಉಳಿದು, ವಿಜಾಪುರದಲ್ಲಿಯೂ ಜಮಖಂಡಿಯಲ್ಲಿಯೂ ವ್ಯವಸಾಯಮಾಡಿ, ಬಡವರಿಗೆ ಕಡಿಮೆ ಬೆಲೆಗೆ ಔಷಧಿಯನ್ನು ಕೊಟ್ಟು, ಒಳ್ಳೇ ಡಾಕ್ಟರರೆಂದು ಹೆಸರನ್ನು ಗಳಿಸಿದರು.

ಕಾಕಾ ಅವರ ಪ್ರಾಥಮಿಕ ಶಿಕ್ಷಣ ಮುಲಕಾಪುರದಲ್ಲಿ ಆಯಿತು. ಮಾಧ್ಯಮಿಕ ಶಿಕ್ಷಣ, ಅಣ್ಣನ ಆಶ್ರಯದಲ್ಲಿ ಜಮಖಂಡಿಯಲ್ಲಿ. ಶಾಲೆಯಲ್ಲಿದ್ದಾಗ ವ್ಯಾಸಂಗದಲ್ಲಿ ಅಷ್ಟು ಒಲವು ಇರಲಿಲ್ಲ ; ವ್ಯಾಯಾಮದಲ್ಲಿ ಇವರಿಗೆ ಹೆಚ್ಚಿನ ಆಸಕ್ತಿ. ಆಟದ ಬಯಲಿನಲ್ಲಿಯೇ ಇವರ ವಾಸ್ತವ್ಯ ಹೆಚ್ಚು. ಡಂಬೆಲ್ಸ್, ಲಾಠಿ, ಕುಸ್ತಿ, ಈಸುವುದು ಇವು ಇವರ ಮೆಚ್ಚಿಗೆಯ ಆಟಗಳು. ಗಣಿತ ಮಾತ್ರ ಇವರ ಕಡುವೈರಿ. ವ್ಯಾಯಾಮವೇ ಇವರ ಜೀವಾಳ. ಅಂತೆಯೇ ಅಂದಿನ ಕಾಕಾ ಇಂದಿಗೂ—೬೦ ವರುಷಗಳಾದರೂ ೩೦ ವರುಷದವರಂತೆ ಕಾಣುತ್ತಾರೆ. ಇವರು ಒಂದು ದಿನ ಶಾಲೆಯಲ್ಲಿ ಆಟದ ಬಯಲಿನಲ್ಲಿದ್ದಾಗ, ಒಂದುಸಲ ಜಮಖಂಡಿ ಮಹಾರಾಜರು ಶಾಲೆಗೆ ಬಂದರಂತೆ. ಆಟದ ಬಯಲಿನಲ್ಲಿ ಇವರ ವರ್ಗದ ವಿದ್ಯಾರ್ಥಿಗಳು ಸಾಲಾಗಿ ನಿಂತಿದ್ದರಂತೆ. ಮಹಾರಾಜರು ಒಬ್ಬೊಬ್ಬರನ್ನಾಗಿ ನೋಡುತ್ತ ಬಂದು, ಇವರ ದೇಹಯಷ್ಟಿಯನ್ನು ಕಂಡು ಸಂತುಷ್ಟರಾಗಿ, "ಗಣೇಶ" ನನ್ನು ಪರೀಕ್ಷಿಸುವುದಕ್ಕಾಗಿ ಅವರ ತೆರೆದ ಎದೆಯ ಮೇಲೆ, ತಮ್ಮ ಕೈಯ ಉಂಗುರದಿಂದ ಬಲವಾಗಿ ಬಡಿದರಂತೆ! "ಗಣೇಶ" ಮಿಸುಕಾಡದೆ ಸೆಟೆದು ನಿಂತಿದ್ದನಂತೆ! ಡಾ. ಕಾರಖಾನೀಸರನ್ನು ಕಂಡಾಗ ಮಹಾರಾಜರು "ನಿನ್ನ ತಮ್ಮ ಒಳ್ಳೇ ಜಟ್ಟಿಯಾಗುವನು" ಎಂದರಂತೆ. ಜಟ್ಟಿಯಾಗಬೇಕಾಗಿದ್ದ "ಕಾಕಾ" ಹರಿಜನ ಮಕ್ಕಳಿಗೆಲ್ಲ ಬಟ್ಟೆ ಅನ್ನ-ಅಕ್ಷರ ಒದಗಿಸಿಕೊಡುವ ತಂದೆಯಾದರು.

ಇವರ ಹೆಚ್ಚಿನ ಶಿಕ್ಷಣ ಪರಶುರಾಮಭಾವು ಕಾಲೇಜಿನಲ್ಲಿಯೂ ಡೆಕ್ಕನ್ ಕಾಲೇಜಿನಲ್ಲಿಯೂ ಆಯಿತು. ಕಾಲೇಜಿನಲ್ಲಿದ್ದಾಗ ವ್ಯಾಯಾಮದಲ್ಲಿಯೂ, ೧೨ ಮೈಲು ಓಡುವುದರಲ್ಲಿಯೂ ಬಹುಮಾನಪಡೆದರು. ಡೆಕ್ಕನ್ ಕಾಲೇಜಿನಲ್ಲಿದ್ದಾಗ ಬೋಟ್ ಕ್ಲಬ್ಬಿನ ಸದಸ್ಯರು. ಕಾಲೇಜಿನಲ್ಲಿ ತುಂಟ ವಿದ್ಯಾರ್ಥಿಯೆಂದು ಇವರ ಖ್ಯಾತಿ. ಹರಟೆ, ಊಟ, ತಿರುಗಾಟ, ವ್ಯಾಯಾಮ ಇವು ಇವರ ಮುಖ್ಯ ವಿಷಯಗಳು. ಒಂದು ಸಲದ ಕಾಮನ ಹಬ್ಬದ ಕಾಲದಲ್ಲಿ ಇವರ ಗೆಳೆಯರು ಇವರನ್ನು ಕಾಡಿಸಿ ಪೀಡಿಸಿ, ಕೋಣೆಯಿಂದ ಹೊರಗೆ ಬರುವಂತೆ ಮಾಡಿ, ಇವರಿಗೂ ಶಂಖವಾದ್ಯಮಾಡಲು ಪ್ರೇರಿಸಿದರಂತೆ. ಈ ಗುಂಪನ್ನೆಲ್ಲ ಮರುದಿನ ಕಾಲೇಜ ಪ್ರಿನ್ಸಿಪಾಲರು ಕರೆಸಿದರಂತೆ. ಎಲ್ಲರಿಗೂ ಗಾಬರಿ. ಕೈಕಾಲು ನಡುಗುತ್ತಿದ್ದುವು. "ಗಣ್ಯಾ" (ಗೆಳೆಯರು ಇವರನ್ನು ಕೂಗುವ ಹೆಸರು) ನನ್ನು ಮುಂದೆಮಾಡಿದರಂತೆ. ಕಾಕಾ ಬೆದರಲಿಲ್ಲ. ಪ್ರಿನ್ಸಿಪಾಲರು ಗದರಿ "ಹೀಗೇಕೆ ಆಚರಿಸಿದಿರಿ? ನಿಷ್ಠಾವಂತ ಬ್ರಾಹ್ಮಣನಾದ ನೀನು ಈ ಗುಂಪನ್ನು ಸೇರಬೇಕೇ?" ಎಂದು ಕೇಳಿದರಂತೆ. ಸಾವಧಾನವಾಗಿ ಎಲ್ಲ ಕೇಳಿಕೊಂಡು "ಶಿವಲೀಲಾಮೃತ"ದಲ್ಲಿಯ ಒಂದು ಶ್ಲೋಕ ಹೇಳಿ, "ಅಂದು ಹಾಗೆಯೇ ಮಾಡಬೇಕು. ಅಂದರೆ ಭೂತ-ಪಿಶಾಚಿಗಳಿಗೆ ಶಾಂತಿ" ಎಂಬರ್ಥದ ಶ್ಲೋಕ ಹೇಳಿ, ಅವರ ಬಾಯಿ ಮುಚ್ಚಿಸಿದರಂತೆ. ನಿರ್ಭೀತಿ ಇವರಲ್ಲಿ ದೈವಗೊಟ್ಟು ಬಂದ ಗುಣ.

ಕಾಲೇಜಿನಲ್ಲಿದ್ದಾಗಲೇ ವ್ಯಾಯಾಮ ಶಾಲೆ ನಡೆಸುವುದು, ಲೋಕಶಿಕ್ಷಣ ಕೊಡುವುದು, ಗೋರಕ್ಷಣ ಮಾಡುವುದು, ಸ್ವಾವಲಂಬನದಿಂದ ಶೇತಕೀ ಉದ್ಯೋಗ ಮಾಡುವುದು— ಇವು ಇವರ ಆದರ್ಶಗಳಾಗಿದ್ದುವು. ಆದರೆ ದೈವ ಇವರಿಗಾಗಿ ಕಾದಿರಿಸಿದ ದಿಕ್ಕೇ ಬೇರೆಯಾಗಿತ್ತು. ದೇಶ ಇವರ ಸೇವೆಯನ್ನು ಬಯಸಿತ್ತು. ೧೯೦೫ ರ ವಂಗಭಂಗದ ಚಳವಳಿ ಇವರಲ್ಲಿ ದೇಶಭಕ್ತಿಯನ್ನು ಅಂಕುರಿಸಿತು. ಆಗಲೇ, ಯಾವ ಪರೀಕ್ಷೆ ಪಾಸಾದರೂ ಸರಕಾರದ ಗುಲಾಮರಾಗಲಾರೆನೆಂದು ದೃಢನಿಶ್ಚಯ ಮಾಡಿದರು. ೧೯೦೬ ರಲ್ಲಿ ಮೊದಲನೆಯ ಸಲ ಪರದೇಶೀ ವಸ್ತುಗಳನ್ನು ಬಹಿಷ್ಕರಿಸುವುದರಲ್ಲಿ ಭಾಗವಹಿಸಿದರು. ಲೋಕಮಾನ್ಯ ತಿಲಕರೇ ಇವರ ಸ್ಫೂರ್ತಿಯ ಮೂರ್ತಿ. ಕೇಸರಿ, ಕಾಳ, ಭಾಲಾ, ಇವುಗಳೇ ಇವರು ಓದುವ ಸಾಪ್ತಾಹಿಕಗಳು. ಚಿಕ್ಕಂದಿನಿಂದಲೂ ಜ್ಞಾನೇಶ್ವರ ಕೃತ ಜ್ಞಾನೇಶ್ವರೀ (ಮರಾಠಿಯ ಭಗವದ್ಗೀತೆ), ರಾಮದಾಸ ಕೃತ ದಾಸಬೋಧ— ಈ ಗ್ರಂಥಗಳಲ್ಲಿ ಇವರ ಆಸಕ್ತಿ ಹೆಚ್ಚು. ಈಗಲೂ ಈ ಗ್ರಂಥಗಳು ಇವರ ನಿತ್ಯಪಠನದ ಗ್ರಂಥಗಳು. ಜ್ಞಾನೇಶ್ವರಿ, ದಾಸಬೋಧಗಳ ಮೇಲೆ ನೂರಾರು ಸಲ ವ್ಯಾಖ್ಯಾನ ಮಾಡಿದ್ದಾರೆ. ಮರಾಠಿ ಪತ್ರಿಕೆಗಳಲ್ಲಿ ಇವುಗಳನ್ನು ಕುರಿತು, ಅನೇಕ ಅಭ್ಯಾಸಪೂರ್ಣ ಲೇಖನಗಳನ್ನೂ ಬರೆದಿದ್ದಾರೆ.

ಬಿ. ಎ. ಪದವಿಯನ್ನು ಗಳಿಸಿದ ಮೇಲೆ, ೧ ವರ್ಷ ಎಲ್.ಎಲ್.ಬಿ. ಓದಿ, ಅದನ್ನು ಅರ್ಧಕ್ಕೇ ಬಿಟ್ಟು, ೧೯೧೧ ರಲ್ಲಿ ಚಿಂಚವಡದ ಬಾಳುಕಾಕಾ ಕಾನಿಟಕರರ ರಾಷ್ಟ್ರೀಯ ಪಾಠಶಾಲೆಯಲ್ಲಿ ಶಿಕ್ಷಕರೆಂದು ಕೆಲಸ ಪ್ರಾರಂಭಿಸಿದರು. ಅಲ್ಲಿ ೭ ವರ್ಷ ಕೆಲಸಮಾಡಿ ಒಳ್ಳೇ ಶಿಕ್ಷಕರೆಂದು ಖ್ಯಾತಿ ಗಳಿಸಿದರು. ಟಿಳಕ ವಿದ್ಯಾಪೀಠದ ಸಂಸ್ಥೆಯಾಗಿದ್ದ ಈ ಶಾಲೆಯಲ್ಲಿ, ಕೆಲವು ವರುಷ ಮುಖ್ಯ ವ್ಯವಸ್ಥಾಪಕರೂ ಆಗಿದ್ದರು. ಇದೇ ಅವಧಿಯಲ್ಲಿಯೇ ಇವರು ತಮ್ಮ ಆದರ್ಶಗಳನ್ನು ಬೆಳಕಿಗೆ ತರಲು ಪ್ರಯೋಗಗಳನ್ನು ಮಾಡಿದರು. ೧೯೨೦ ರಲ್ಲಿ ಇಂಚಗೇರಿಯ ಶ್ರೀ ಉಮದೀಕರ್ ಭಾವು ಮಹಾರಾಜರ ಶಿಷ್ಯರಾದರು. ೧೯೨೦ ರಿಂದ ಖಾದೀಧಾರಣೆಗೆ ಪ್ರಾರಂಭಿಸಿದರು,

ಯಾತ್ರೆಗಳನ್ನು ಮಾಡಬಯಸುವವರಿಗೆ ಅಪೂರ್ವ ಸಂಧಿ!

ಕಾಶೀ ಯಾತ್ರೆ

ಮುಂಬಯಿಯಿಂದ ಕಾಶೀಯಾತ್ರೆಯ ಸುಖಪ್ರವಾಸ: ಪ್ರವಾಸದಲ್ಲಿಯೂ ಮನೆಯಲ್ಲಿಯಂತೆ ಎಲ್ಲ ಸುಖಸೌಕರ್ಯಗಳು. ಯಾತ್ರೆಯ ಗಾಡಿ ಪ್ರತಿ ೧೫ ದಿನಗಳಿಗೊಂದು ಸಲ ಹೊರಡುವದು. ನೀವು ಈಗಲೇ ಬರೆದು ಅದರ ವಿವರಗಳನ್ನು ತರಿಸಿಕೊಳ್ಳಿರಿ. ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

ಯಾತ್ರಾ ನಂ. ೧ :— ಮುಂಬಯಿಯಿಂದ ಹೊರಟು ೨ ದಿವಸ ಪ್ರಯಾಗ, ೧ ದಿನ ಅಯೋಧ್ಯಾ, ೩ ದಿನ ಕಾಶೀ, ೨ ದಿನ ಗಯಾ, ತಿರುಗಿ ಬರುವಾಗ ಒಂದೂವರೆ ದಿನ ನಾಶಿಕ ಹೀಗೆ ೧೨ ದಿವಸಗಳ ಪ್ರವಾಸ. ಊಟ, ತಿಂಡಿ, ದೇವದರ್ಶನಕ್ಕೆ ಹೋಗುವಾಗ ಬೇಕಾಗುವ ವಾಹನ ಮೊದಲಾದ ಎಲ್ಲ ಖರ್ಚು ಸೇರಿ ೧೫೦ **ರೂ.**

ಯಾತ್ರಾ ನಂ. ೨ :— ಉಳಿದ ಅನುಕೂಲಗಳು ಮೇಲಿನಂತೆಯೇ. ಆಗ್ರಾ ಒಂದೂವರೆ ದಿನ, ದಿಲ್ಲಿ ೨ ದಿನ, ಹರದ್ವಾರ (ಹೃಷೀಕೇಶ, ಲಕ್ಷ್ಮಣಝೂಲಾ) ೩ ದಿನ ಹೀಗೆ ೨೦ ದಿನಗಳ ಪ್ರವಾಸ **ರೂ. ೨೫೦.**

ರೂ. ೫೧ ಮುಂಗಡ ಕಳುಹಿಸಿ ನಿಮ್ಮ ಸ್ಥಳವನ್ನು ಕಾಯ್ದಿರಿಸಿರಿ.

ಯಾತ್ರೆಯ ಗಾಡಿಗಳು ರಾಮೇಶ್ವರ, ಜಗನ್ನಾಥಪುರಿ ಮುಂತಾದ ದಕ್ಷಿಣದ ತೀರ್ಥಸ್ಥಳಗಳಿಗೂ ಹೊರಡುವವು. ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ ಇಂಗ್ಲೀಷದಲ್ಲಿಯೇ ನಡೆಯಿಸಬೇಕು —

NEW INDIA TRAVEL SERVICES

2nd Floor, Co-operative Insurance Building
Sir Pherozshaha Mehta Road, Fort, BOMBAY.

ಹಳಪೇಟೆ ಮತ್ತು ಕಂಪನಿ, ಧಾರವಾಡ

ಮರ್ಚಂಟ್ ಟೇಲರ್ಸ್

ನಮ್ಮಲ್ಲಿ ಉತ್ತಮ ತರಗತಿಯ ಹೊಲಿಗೆಯ ಸಾಧನ ಸಲಕರಣೆಗಳಲ್ಲ ದೊರೆಯುವುವಲ್ಲದೇ ಹೊಲಿಗೆಯ ವಿಷಯದ ಪುಸ್ತಕಗಳು (ಕನ್ನಡ, ಇಂಗ್ರೇಜಿ, ಹಿಂದಿ, ಮರಾಠಿ) ಎಲ್ಲ ಭಾಷೆಗಳಲ್ಲಿ ಬರೆದುವುಗಳೂ ದೊರಕುತ್ತವೆ.

ಶ್ರೇಷ್ಠ ತರಗತಿಯ ಹೊಲಿಗೆಯ ಯಂತ್ರಗಳು ಮಾರಲಿಕ್ಕೆ ದೊರೆಯುತ್ತವಲ್ಲದೆ, ಹಳೇ ಯಂತ್ರಗಳ ರಿಪೇರಿ ಕೆಲಸವೂ ತಜ್ಞರಿಂದ ನಡೆಯುತ್ತದೆ.

ಕುಸುರಿನ ಝಿಗ್ ಝ್ಯಾಗ್ ಹೊಲಿಗೆ ಬೇಕಾದರೆ ನಮ್ಮಲ್ಲಿಯೇ ಬನ್ನಿರಿ.

ಅದು ಇಂದಿನವರೆಗೂ ಅವ್ಯಾಹತವಾಗಿ ಸಾಗಿದೆ. ೨೨ರಲ್ಲಿ ಮುಳಸಿ- ನೇರಾ ಸತ್ಯಾಗ್ರಹದಲ್ಲಿ ೪ ತಿಂಗಳ ವರೆಗೆ ಸಶ್ರಮಶಿಕ್ಷೆಯನ್ನು ಅನುಭವಿಸಿದರು. ಅನಂತರ ಬೇಲಾಪುರದಲ್ಲಿ ಸ್ವಾವಲಂಬನದ ಶೇತಕೀ ಪ್ರಯೋಗಗಳನ್ನು ಮಾಡಿದರು. ಭೂಮಿ ಅನ್ನದಾಯಿನಿ, ಅವಳ ಸೇವೆಯನ್ನು ಮನಃಪೂರ್ವಕವಾಗಿ ಮಾಡಬೇಕೆಂದು ಈ ಪ್ರಯೋಗಗಳನ್ನು ಪ್ರಾರಂಭಿಸಿದರು. ನಾಲ್ಕು ಜನ ವಿದ್ಯಾರ್ಥಿ- ಗಳು ದೊರಕಿದರು. ಅದು ಯಶಸ್ವಿಯಾಗಲಿಲ್ಲವಾದ್ದರಿಂದ, ೧೯೨೭ ರಲ್ಲಿ ಸಾಬರಮತಿ ಆಶ್ರಮಕ್ಕೆ ಹೋಗಿ, ಅಲ್ಲಿ ೩ ವರುಷ ಖಾದೀ ಶಿಕ್ಷಣ ಪಡೆದರು. ಗಾಂಧೀಜಿಯವರ ಸಾನ್ನಿಧ್ಯದ ಸುಯೋಗವನ್ನು ಹೊಂದಿ, ಅವರ ಮೆಚ್ಚಿಗೆಯ ಶಿಷ್ಯರಾದರು.

ಶಿಕ್ಷಣ ಪಡೆದ ನಂತರ ಕರ್ನಾಟಕದಲ್ಲಿ ಒಂದು ವರ್ಷದ ವರೆಗೆ ಸಂಚಾರಮಾಡಿ, ಖಾದೀಪ್ರಸಾರ ಮಾಡಿದರು. ಗಲಗಲಿ, ಹುದ್ಲಿ, ಉಪ್ಪಿನಬೆಟಗೇರಿ ಇವು ಇವರ ಕೇಂದ್ರಸ್ಥಳಗಳಾಗಿದ್ದುವು. ೩೦ ರ ಉಪ್ಪಿನ ಸತ್ಯಾಗ್ರಹ ಚಳವಳಿಯಲ್ಲಿ ಅಂಕೋಲಾ ಸತ್ಯಾಗ್ರಹ ಶಿಬಿರದ ವ್ಯವಸ್ಥಾಪಕರಾಗಿದ್ದರು. ನಾಲ್ಕು ತಿಂಗಳು ಜೇಲುವಾಸ- ವನ್ನು ಅನುಭವಿಸಿದರು. ಹೊರಗೆಬಂದ ಮೇಲೆ ೩೨ರಲ್ಲಿ, ವಿಜಾಪುರ ಜಿಲ್ಲೆಯಲ್ಲಿ ಸೇವಾದಲದ ಕೆಲಸ ಮಾಡಿದರು. ಹೀಗೆ ನಾನಾಕ್ಷೇತ್ರ- ಗಳಲ್ಲಿ ಸುತ್ತಾಡಿ ಸುತ್ತಾಡಿ, ಕೊನೆಗೆ ತಮ್ಮ ಜೀವನದ ಕಾರ್ಯ- ಕ್ಷೇತ್ರವನ್ನಾರಿಸಿಕೊಂಡರು. ೧೯೩೩ ರಲ್ಲಿ ಹರಿಜನ ಸೇವಕಸಂಘ- ವನ್ನು ಸೇರಿದರು. ಅಂದಿನಿಂದ ಹರಿಜನೋದ್ಧಾರದ ಕ್ಷೇತ್ರದಲ್ಲಿಯೇ ಕೆಲಸಮಾಡುತ್ತಿದ್ದಾರೆ. ಮೂರುವರುಷ ಬ್ಯಾಕ್‌ವರ್ಡ್ ಕ್ಲಾಸ ಬೋರ್ಡ್ ಮೆಂಬರರಾಗಿದ್ದರು.

ಕರ್ನಾಟಕವು ಶ್ರೇಷ್ಠ ಆಚಾರ್ಯರ, ಸಾಧುಸಂತರ, ಸನಾತನಿಗಳ ತಾಯ್ನಾಡು. ಹರಿಜನೋದ್ಧಾರಕ್ಕಾಗಿ ಕಾಕಾ ಕರ್ನಾಟಕದ ಭಾಗವಾದ ವಿಜಾಪುರವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಒಣ ಖ್ಯಾತಿಗಾಗಿ, ಸಮಾಜದಲ್ಲಿ ಹೆಸರು ಗಳಿಸುವುದಕ್ಕಾಗಿ, ಹತ್ತೆಂಟು ಕಾರ್ಯಗಳನ್ನು ಕೊರಳಿಗೆ ಹಾಕಿ ಕೊಳ್ಳದೆ ಒಂದೇ ಒಂದು ಕಾರ್ಯವನ್ನು ಪ್ರಾಮಾಣಿಕವಾಗಿ ಮನಃಪೂರ್ವಕವಾಗಿ ಮಾಡಬೇಕೆಂದು ಟೊಂಕ ಕಟ್ಟಿದರು. ಗಾಂಧೀಜಿಯವರು ಗೋರಕ್ಷಣೆ, ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಸಾರ, ಇವುಗಳಲ್ಲಿ ಒಂದನ್ನಾದರೂ ಸಂಪೂರ್ಣ ಯಶಸ್ವಿಯಾಗಿ ನೆರವೇರಿಸುವಂತೆ ಕಾಕಾ ಅವರಿಗೆ ಹೇಳಿದ್ದರಂತೆ. ಖಾದೀಧಾರಿ- ಗಳಾದ ಕಾಕಾ, ಅಸ್ಪೃಶ್ಯತಾ ನಿವಾರಣೆಯೊಂದರಲ್ಲಿಯೇ ೧೯೩೩ ರಿಂದ ಕಾರ್ಯನಿರತರಾಗಿ ಬಿಟ್ಟರು. ಅಸ್ಪೃಶ್ಯತೆ ಹಿಂದೂಧರ್ಮದ ಮೇಲಿನ ಕಲಂಕ, ಅದನ್ನು ತೊಳೆಯದೆ ದೇಶಕ್ಕೆ ಉತ್ಕರ್ಷವಿಲ್ಲ- ವೆಂದು ಬಗೆದು, ಮಳೆ ಗಾಳಿ ಚಳಿ ಬಿಸಿಲು ಎನ್ನದೆ, ಹಳ್ಳಿ ಹಳ್ಳಿಗ- ಳಿಗೆ ಸುತ್ತಾಡಿ, ಕುಡಿಯಲು ಜೀವನಾಧಾರವಾದ ನೀರಿಲ್ಲ- ಗೋಳಿಡುತ್ತಿರುವ ಹರಿಜನರಿಗೆ ಆಶ್ವಾಸನಕೊಟ್ಟು, ತಾಲೂಕಿನ ಅಧಿಕಾರಿಗಳನ್ನು ಕಂಡು. ಹಳ್ಳಿಹಳ್ಳಿಗಳಲ್ಲಿ ಬಾವಿ ಕಡಿಸ- ಬಿನ್ನವಿಸಿ, ಹರಿಜನರಿಗೆ ನೀರಿನ ಸೌಕರ್ಯ ಒದಗಿಸಿಕೊಟ್ಟರು. ಹರಿಜನ ವಸತಿಗಳಿಗೆ ಹೋಗಿ, ಆರೋಗ್ಯವನ್ನು ಕಾಪಾಡಲು ಸ್ವಚ್ಛತೆ ಹೇಗೆ ಆವಶ್ಯವೆಂಬುದನ್ನು ತೋರಿಸಿಕೊಟ್ಟರು.

ಕಾಲಾವಧಿಯಲ್ಲಿ ಹರಿಜನ ಮಕ್ಕಳಿಗೆ ಅಕ್ಷರಾಭ್ಯಾಸ ಹೇಳಿ- ವುದು ಆವಶ್ಯಕವೆಂದೆನಿಸಿದ್ದರಿಂದ, ಹರಿಜನ ವಿದ್ಯಾರ್ಥಿ ವಸತಿ- ಗೃಹವನ್ನು ೧೯೩೩ ರಲ್ಲಿ ಸ್ಥಾಪಿಸಿದರು. ಜಿಲ್ಲೆಯ ಎಲ್ಲ ಭಾಗ- ಗಳಿಂದ ವಿದ್ಯಾರ್ಥಿಗಳು ಬರತೊಡಗಿದರು. ಅವರಿಗೆಲ್ಲ ಕಾಕಾ ಅ- ಅಕ್ಷರ ಕೊಡುವ ತಂದೆಯಾದರು. ಆದರೆ ಹಳ್ಳಿಹಳ್ಳಿಗಳ ಸುತ್ತಾಡಿದ ಕಾಕಾ ಅವರಿಗೆ ಹರಿಜನ ಭಗಿನಿಯರ ಪ್ರಶ್ನೆ ಬಿಡಿಸ- ಹೊರಟಿತು. ಹರಿಜನರ ಉದ್ಧಾರದ ಮಾತು ನಿರುಪಯೋಗ- ವೆಂದು ಮನವರಿಕೆಯಾಯಿತು. ಹರಿಜನ ಕನ್ಯೆಯರಿಗೂ ಒಂದು ವಸತಿಗೃಹವನ್ನು ಕಟ್ಟಿಸುವುದು ಆವಶ್ಯಕವೆನಿಸಿತು. ೩೭ ರಲ್ಲಿ ಪ್ರಾಂತಿಕ ಸ್ವಾಯತ್ತ ಸರಕಾರದ ಚಾಲನೆಯಿಂದ, ೩೮ ರಲ್ಲಿ ಹರಿ- ಜನ ಕನ್ಯಾ ಮಂದಿರವು ಸ್ಥಾಪಿತವಾಯಿತು. ಕನ್ಯೆಯರ ವಸತಿ- ಗೃಹದ ಮೇಲ್ವಿಚಾರಣೆ ಮಾಡಲು, ಒಬ್ಬ ಮೇಲ್ವಿಚಾರಿ- ದೊರೆಯಬೇಕಾದರೆ ಬಹಳ ಕಷ್ಟವಾಯಿತು. ಸ್ಥಾಪನೆಯಾ- ಮರುವರುಷವೇ ಇನ್ನೂ ಹೆಚ್ಚಿನ ಸಮಸ್ಯೆಗಳು ತಲೆದೋರಿದುವು. ಒಂಮ ದಿನ ೭ ವರುಷ ದೇವದಾಸಿ ಜೀವನ ಸಾಗಿಸಿದ್ದ ಇಬ್ಬ-

ಜಯ

ನ್ಯೆಯರು ಬಂದು, 'ಮಂದಿರ'ದಲ್ಲಿ ಪ್ರವೇಶಬೇಕೆಂದು ಕೇಳಿ ರು. ಇಂಥ ಸ್ಥಿತಿಯಲ್ಲಿದ್ದ ನೀವೇಕೆ ಇಲ್ಲಿಗೆ ಬರುವ ಸಾಹಸ ಮಾಡಿದಿರೆಂದು ಕೇಳಲು "ನಮಗೆ ಪಶ್ಚಾತ್ತಾಪಕ್ಕೆ ಎಡೆ- ಇಲ್ಲವೇ ?" ಎಂದು ತುಂಬಿದ ಕಂಗಳಿಂದ ಕೇಳಿದರಂತೆ. ಬಹಳ ವಿಚಾರಮಾಡಿ ದಿ. ಕೌಜಲಗಿ ಹಣಮಂತರಾವ್, ಶ್ರೀ. ಠಕ್ಕರ್ ಬಾಪಾ, ಶ್ರೀ. ದಿವಾಕರ, ಪೂಜ್ಯ ಗಾಂಧೀಜಿ ಇವರೆಲ್ಲರ ಸಲಹೆ ಕೇಳಿ, ಅವರಿಬ್ಬರಿಗೆ ಪ್ರವೇಶ ಕೊಟ್ಟರಂತೆ. ಗಾಂಧೀಜಿಯವರು ಮಾತ್ರ "ಒಂದೇ ಸಮಯಕ್ಕೆ ಎರಡು ಕುದುರೆಗಳನ್ನು ಹತ್ತುವ ಸಾಹಸ" ಎಂಬ ಎಚ್ಚರಿಕೆಯನ್ನು ಕೊಡಲು ಮರೆಯಲಿಲ್ಲ. ಈ ಹೀನವಾದ ದೇವದಾಸಿ ಪದ್ಧತಿಯನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಲು, ಕಾಕಾ ಪ್ರಯತ್ನ ಮಾಡಿದರು. ಇಂದಿನ ವರೆಗೆ ೧೦ ಜನ ದೇವದಾಸಿಯರಿಗೆ ಶಿಕ್ಷಣಕೊಡಿಸಿ, ಅವರೀಗ ಒಳ್ಳೇ ಜೀವನ ಸಾಗಿಸುವಂತೆ ಅನುಕೂಲಮಾಡಿಕೊಟ್ಟಿದ್ದಾರೆ. ಮುಂಬೈನಗರ ಒಂದರಲ್ಲಿಯೇ ೩ ರಿಂದ ೫ ಸಾವಿರದ ವರೆಗೆ ಈ ದೇವದಾಸಿಯರಿರುವರು. ಈ ಘಾತುಕ ಪದ್ಧತಿಯನ್ನು ನಿಲ್ಲಿಸಲು ಸರಕಾರಕ್ಕೆ ಅನೇಕ ಸಲ ಕೇಳಿಕೊಂಡರು.

ವಸತಿಗೃಹದಲ್ಲಿ ದಿನದಿನಕ್ಕೆ ಕನ್ಯೆಯರ ಸಂಖ್ಯೆ ಬೆಳೆಯ ತ್ತಿತು. ಒಂದು ದೊಡ್ಡ ಕಟ್ಟಡದ ಅವಶ್ಯಕತೆ ಉಂಟಾಯಿತು. ದಿ. ಕೌಜಲಗಿಯವರ ಸಲಹೆ ಪ್ರೇರಣೆಯ ಮೇರೆಗೆ ಕಬ್ಬೂರ ದಂಪತಿಗಳನ್ನು ಕಂಡರು. ಉದಾರದಾನಿಗಳಾದ ಕಬ್ಬೂರರು ಉದಾರ ಹಸ್ತವನ್ನು ನೀಡಿದರು. ಕಟ್ಟಡ ಕಟ್ಟಿಸಲು ಬಯಲು ಸ್ಥಳ ಸಿಗುವುದು ಸ್ವಲ್ಪ ಕಷ್ಟವಾಯಿತು. ಸರಕಾರದ ಸಹಾನು- ಭೂತಿಯಿಂದ, ಆಸಾರ್‌ಮಹಾಲಿನ ಹತ್ತಿರ ಒಳ್ಳೇ ಸ್ಥಳ ದೊರಕಿತು.

ಕಾಕಾರ ನಿಸ್ವಾರ್ಥಸೇವೆಯ ನಿಶಾನಿಯೆಂಬಂತೆ, ಆ ಕಟ್ಟಡ ಈಗ ನಿಂತಿದೆ. ಅದರ ಉದ್ಘಾಟನ ಸಮಾರಂಭಕ್ಕೆ, ಮುಂಬಯಿಯ ಹರಿಜನ ಮಂತ್ರಿಗಳಾದ ಶ್ರೀ. ತಪಾಸೆಯವರು ಅತಿಥಿಗಳಾಗಿದ್ದರು. ೦ ಸಾವಿರ ವೆಚ್ಚಮಾಡಿ ಕಟ್ಟಿದ ಆ ಭವ್ಯ ಕಟ್ಟಡ ನೋಡಿ, ನಾಗರಿಕರು ಅಚ್ಚರಿಗೊಂಡರು. ಅಂದು ೪೯ ನೆಯ ವರುಷದ (ವಿರೋಧಿ ಸಂವತ್ಸರ) ಸಂಕ್ರಮಣ ದಿನ. ಕಾಕಾರ ಜೀವನ- ದಲ್ಲಿಯ ಒಂದು ಸುವರ್ಣ ದಿನ. ಹರಿಜನ ಮಕ್ಕಳಿಗೆ ಆಸರೆ- ಯಾಡುವ ಆ ಕಟ್ಟಡ ನೋಡಿ ಕಾಕಾ ಅವರ ಮನವು ಶಾಂತತೆ- ಯಿಂದ ತುಂಬಿಕೊಂಡಿತು. ಅಂದು ದಾನಿಗಳಾದ ಕಬ್ಬೂರ ದಂಪತಿಗಳೂ ಸಭೆಗೆ ಆಗಮಿಸಿದ್ದರು. ಕಾಕಾ ಅವರ ನಿಸ್ವಾರ್ಥ- ಸೇವೆಯನ್ನು ಹೊಗಳುವ ಅನೇಕ ತಂತಿಗಳು, ಅನೇಕ ಧುರೀಣ- ರಿಂದ ಬಂದಿದ್ದುವು. ಅವರ ಮಾತುಗಳೇ ಕಾಕಾ ಅವರ ಸೇವೆಯ ಸ್ವರೂಪವನ್ನು ತೋರಿಸುತ್ತವೆ.

ಕನ್ಯಾಮಂದಿರವು ಸ್ಥಾಪನೆಯಾದಂದಿನಿಂದ ಇಂದಿನ ವರೆಗೆ ೨೧ ಹೆಣ್ಣುಮಕ್ಕಳು ಶಿಕ್ಷಣ ಪಡೆದಿದ್ದಾರೆ. ಇಬ್ಬರು ವಿದ್ಯಾರ್ಥಿ- ನಿಯರು, (ಕು. ಯಮುನಾ ಇಂಗಳಗಿ, ಕು. ಸೈದಾ ದ್ಯಾಪುರ) ಬಿ. ಎ. ಬಿ. ಟಿ. ಆಗಿ, ಧಾರವಾಡದ ಹೆಣ್ಣುಮಕ್ಕಳ ಸರಕಾರಿ ಹಾಯಸ್ಕೂಲಿನಲ್ಲಿ ಶಿಕ್ಷಕಿಯರಾಗಿದ್ದಾರೆ. ೨೫ ವಿದ್ಯಾರ್ಥಿನಿಯರು ಕನ್ನಡ ಮುಲ್ಕೀಪರೀಕ್ಷೆ ಪಾಸಾಗಿದ್ದಾರೆ. ಇವರೆಲ್ಲರೂ, ಪ್ರಾಥಮಿಕ ಶಾಲೆಯ ಶಿಕ್ಷಕಿಯರಾಗಿದ್ದಾರೆ. ಟ್ರೇನಿಂಗ್ ಕಾಲೇಜಿನಲ್ಲಿಯೂ ಇಬ್ಬರು ವಿದ್ಯಾರ್ಥಿನಿಯರಿದ್ದಾರೆ. ೬ ಹೆಣ್ಣುಮಕ್ಕಳು ವಿಜಾಪುರದ ಸರಕಾರಿ ಆಸ್ಪತ್ರೆಯಲ್ಲಿ 'ದಾಯಿ' ಶಿಕ್ಷಣ ಪಡೆಯುತ್ತಿದ್ದಾರೆ. ಇದಲ್ಲದೆ, ವಿದ್ಯಾರ್ಥಿ ವಸತಿಗೃಹದಲ್ಲಿ ಇಲ್ಲಿಯವರೆಗೆ ಸುಮಾರು ೫೦–೬೦ ವಿದ್ಯಾರ್ಥಿಗಳು ಮ್ಯಾಟ್ರಿಕ್ (S.L.C.) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕು. ನರಸಿಂಹ ಗಜಾಕೋಸ, ಎಂಬವನು B. Sc. ೧ನೆಯ ವರ್ಗದಲ್ಲಿ ಪಾಸಾಗಿ- ದ್ದಾನೆ ೮–೧೦ ವಿದ್ಯಾರ್ಥಿಗಳು ಪದವೀಧರರಾಗಿದ್ದಾರೆ. ಹೀಗೆ ಅನೇಕ ಹರಿಜನ ವಿದ್ಯಾರ್ಥಿಗಳು, ವಿದ್ಯಾದಾನ ಹೊಂದಿದ್ದಾರೆ. ಕೆಲವರು ಒಳ್ಳೇ ವ್ಯವಸಾಯವನ್ನೂ ಮಾಡುತ್ತಿದ್ದಾರೆ. ಕಾಕಾ ಅವರು, ಹರಿಜನರು ಒಳ್ಳೇ ಜೀವನ ಸಾಗಿಸಲು ಅನುಕೂಲವಾಗ- ಲೆಂದು, ತಮ್ಮ ವಸತಿಗೃಹದಲ್ಲಿಯೇ ಯೋಗ್ಯ ವಧೂವರರನ್ನು ಆರಿಸಿ, ಆವರವರ ತಂದೆ-ತಾಯಿಗಳ ಅನುಮತಿ ಪಡೆದು—ತಾವು ಬ್ರಹ್ಮಚಾರಿಗಳಾಗಿದ್ದರೂ—೩-೪ ವಿವಾಹಗಳನ್ನು ಜರುಗಿಸಿದ್ದಾರೆ.

ಈ ರೀತಿಯಾಗಿ ಕಾಕಾ ಅವಿವಾಹಿತರಾಗಿ ಉಳಿದು ಹರಿಜನ ಸೇವಾಸಕ್ತರಾಗಿದ್ದಾರೆ. ಕೇವಲ ಕಾಯದೆ-ಕಾನೂನುಗಳಿಂದ ಹರಿಜನ ಸಮಸ್ಯೆ ಎಂದಿಗೂ ಬಿಡದು. ಅದಕ್ಕೆ ಕಾಕಾರಂಥ ನಿಸ್ವಾರ್ಥ ಸೇವಕರು ಬೇಕು. ನಿಷ್ಠಾವಂತ ಕೆಲಸಗಾರರು ಬೇಕು. ಅವರ ನಿಷ್ಠಾಯುಕ್ತ ನಿಃಸ್ವಾರ್ಥ ಸೇವೆಯೇ ಕನ್ಯಾಮಂದಿರದ ಭವ್ಯ ಕಟ್ಟಡದಲ್ಲಿ ಅವತರಿಸಿ ನಿಂತಿರುವುದು.

ಬಲಶಾಲಿಗಳೂ ತೇಜಸ್ವಿಗಳೂ ಆಗಬೇಕೆನ್ನುವವರಿಗಾಗಿ

ಶ್ರೀ ಶಿವಾನಂದಸ್ವಾಮೀಜಿ ಬರೆದ ಪುಸ್ತಕ

ಬ್ರಹ್ಮಚರ್ಯವೇ ಜೀವನ

ಅರ್ಥಾತ್ ವೀರ್ಯನಾಶವೇ ಮೃತ್ಯು!

ಅಂಚೆವೆಚ್ಚ ಸೇರಿ ಬೆಲೆ : ೩–೮–೦

ಶ್ರೀಮುರಘಾಮಠದ ಸ್ವಾಮಿ ಮತ್ತು ಆಲೂರ ವೆಂಕಟರಾಯರ ಅಭಿಪ್ರಾಯಗಳಿವೆ. ವ್ಯಾಯಾಮ ಆಸನಾದಿಗಳ ಚಿತ್ರಾವಲಿಯಿದೆ. ವೀರ್ಯನಾಶದ ಕಾರಣ, ಲಕ್ಷಣ ಮತ್ತು ರಕ್ಷಣೆಗಾಗಿ ರಾಮಬಾಣ ಉಪಾಯಗಳಿವೆ.

ಇಂದೇ ಬರೆಯಿರಿ :

ಸಮಾಜ ಪುಸ್ತಕಾಲಯ, ಸುಭಾಸ ಬೀದಿ, ಧಾರವಾಡ

ಯಾರು ಹೊಣೆ?

(ಕಥಾಸಂಕಲನ)

ಲೇಖಕರು ಶ್ರೀ. ಬಿ. ಆರ್. ವಾಡಪ್ಪಿ ಬಿ. ಎ., ಬಿ. ಟಿ.

ಕನ್ನಡಿಗರ ಸ್ವರೂಪವನ್ನೂ ಜೀವನವನ್ನೂ ಯಥಾವತ್ತಾಗಿ ಚಿತ್ರಿಸಿ ತೋರಿಸಿದ ಕತೆಗಳು. ಸಂಯುಕ್ತ ಕರ್ನಾಟಕದ ಸಂಪಾದಕರಾದ ಶ್ರೀ. ವಿ. ಬಿ. ನಾಯಕ ಎಂ. ಎ. ಅವರ ಮುನ್ನುಡಿಯಿದೆ.

ಬೆಲೆ ಒಂದು ರೂಪಾಯಿ

ಮನೋಹರ ಗ್ರಂಥಭಾಂಡಾರ,

ಧಾರವಾಡ

ಭೌತಿಕ ಸಂಪತ್ತಿಗಿಂತ ವಿದ್ಯಾರ್ಥಿಸಂಪತ್ತು ಅವರೊಲ್ಮ ಸಂಪತ್ತು. ಈ ಸಂಪತ್ತಿನಲ್ಲಿ ಕಾಕಾ ಧನಿಕರಾಗಿದ್ದಾರೆ. ನೂರಾರು ಹರಿಜನ ವಿದ್ಯಾರ್ಥಿಗಳಲ್ಲದೆ ಇನ್ನೂ ಅನೇಕ ಇತರ ವಿದ್ಯಾರ್ಥಿಗಳು ಇವರಿಗೆ ಇದ್ದಾರೆ. ಇವರು ೧೦-೧೫ ವರುಷಗಳಿಂದ ಇಂಗ್ಲಿಷ ನಾಲ್ಕನೆಯ ವರ್ಗದಿಂದ ೭ನೆಯ ವರ್ಗದ ಬೇಕಾದ ಸ್ಕೂಲಿನ ವಿದ್ಯಾರ್ಥಿ-ವಿದ್ಯಾರ್ಥಿನಿಗಳಿಗೆ ಸಂಸ್ಕೃತ ಅಭ್ಯಾಸ ಪುಕ್ಕಟೆಯಾಗಿ ಹೇಳಿಕೊಡುತ್ತಿದ್ದಾರೆ. ಶನಿವಾರ ರವಿವಾರ ಇವರಿಗೆ ಒಂದು ಗಳಿಗೆಯ ವಿಶ್ರಾಂತಿಯೂ ಇಲ್ಲ. ಇವರ ಊಟ ತೀರ ಸಾಮಾನ್ಯ; ತಾವು ನಯವಾಗಿ ನೂತ ಬಟ್ಟೆಗಳನ್ನೇ ಧರಿಸುವರು. ನಿತ್ಯ ನೂಲುವರು. ನಿತ್ಯ ವ್ಯಾಯಾಮ ಮಾಡುವರು. ಗಾಂಧೀ ಕೊಲೆಪಾತಕಿ ಗೋಡಸೆ ಕೊಂಕಣಸ್ಥ ಕುಲಕ್ಕೆ ಕಲಂಕಪ್ರಾಯನೆಂದು, ಅಂದಿನಿಂದ ಜನಿವಾರ ಧರಿಸುವುದನ್ನು ಬಿಟ್ಟಿದ್ದಾರೆ. ಕಾಕಾ ಯಾವಾಗಲೂ ಹಸನ್ಮುಖಿಗಳು. ದಯಾಳುಗಳು. ಪರೋಪಕಾರಿಗಳು. ವಿನೋದಿಗಳು. ಊರ ಮಕ್ಕಳಿಗೆ ೮-೧೦ ವರುಷ ಈಸು ಕಲಿಸಿ ಕಿವಿಗಳನ್ನು (ಶ್ರವಣಶಕ್ತಿ) ಕಳೆದುಕೊಂಡಿದ್ದಾರೆ. ಒಂದು ಯಂತ್ರವನ್ನು ಕೈಯಲ್ಲಿ ಹಿಡಿದುಕೊಂಡು ತಿರುಗುತ್ತಾರೆ. ಗಿಡ್ಡವಾದ ಖಾದಿ ಪಂಚೆ, ಒಂದು ಜುಬ್ಬ, ತಲೆಗೆ ಖಾದೀ ಟೊಪ್ಪಿಗೆ, ಹೆಗಲಿಗೆ ಒಂದು ಖಾದೀ ಚೀಲ—ಅಯ್ತು ಕಾಕಾರ ವೇಷಭೂಷಣ. ಎಲ್ಲರಿಗೆ ಚಿರಪರಿಚಿತವಾದ ಈ ವೇಷದಿಂದ ಕಾಕಾರನ್ನು ಎಲ್ಲಿಂದಲು ಗುರುತಿಸಬಹುದು.

ಕಾಕಾ ಹರಿಜನ ಸೇವೆಯನ್ನಷ್ಟೇ ಅಲ್ಲ; ೪೨ನೆಯ ಇಸ್ವಿಯ ವಿಜಾಪುರ ಜಿಲ್ಲೆಯಲ್ಲಿ ಬರಗಾಲ ಬಂದಾಗ ಇವರು ದಿ. ಕೌಜಲಗಿ ಹಣಮಂತರಾಯರ ನೇತೃತ್ವದಲ್ಲಿ, ಹಸಿವೆ ನೀರಡಿಕೆ ಎನ್ನದೆ ಹಳ್ಳಿ ಹಳ್ಳಿಗಳಿಗೆ ಹೋಗಿ, ಅನ್ನ-ವಸ್ತ್ರಗಳನ್ನು ದಾನಮಾಡಿದ್ದಾರೆ. ಬರಗಾಲದ ಕಾರ್ಯಾಲಯದ ಇನ್ನಿತರ ಕೆಲಸಗಳನ್ನೂ ಮಾಡಿದ್ದಾರೆ. ಇಂಥ ಕಾರ್ಯಜೀವಿಗಳಿಗೆ ದೇವರು ದೀರ್ಘಾಯುರಾರೋಗ್ಯವನ್ನು ದಯಪಾಲಿಸಲಿ !

ನಿಂಬಾಳದ ಶ್ರೀ. ಮ. ರಾ. ರಾ. ರಾನಡೆಯವರು ಕಾಕಾ ಈಗಿನ ಗುರುಗಳು. ಹಬ್ಬಹುಣ್ಣಿಮೆಗಳಲ್ಲಿ ಅವರ ಸಾನ್ನಿಧ್ಯದಲ್ಲಿಯೆ ಇವರು. ಕಾಕಾರಿಗೆ ಕನ್ನಡ ಭಾಷೆಯಲ್ಲಿ ಪ್ರೀತಿ ಹೆಚ್ಚು. ಕನ್ನಡಿಗನೆಂದು ಹೇಳಿಕೊಳ್ಳುವುದರಲ್ಲಿ ಅವರಿಗೊಂದು ಹೆಮ್ಮೆ. ಜ್ಞಾನೇಶ್ವರಿಯಲ್ಲಿಯ ಅನೇಕ ಕನ್ನಡ ಶಬ್ದಗಳನ್ನು ಆಯ್ದು, ಅವುಗಳ ವ್ಯುತ್ಪತ್ತಿಯ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ.

ಕಾಕಾ ಅವರಿಗೆ ಅವರ ಅಂತಿಮ ಆಶೆಯೇನೆಂದು ಕೇಳಿದರೆ ಹೇಳುತ್ತಾರೆ: "ಪ್ರಶಾಂತ ನದಿಯ ದಡದಲ್ಲಿ ಸಣ್ಣ ಕೊಂಪೆಯಲ್ಲಿದ್ದುಕೊಂಡು, ಈಶಧ್ಯಾನದಲ್ಲಿ ಮಗ್ನನಾಗಬೇಕೆಂಬುದೇ ನನ್ನ ಹೃದಯದ ಆಶೆ" ಎನ್ನುತ್ತಾರೆ. ಹರಿಜನ ಸೇವಾಸಕ್ತ ಕಾಕಾ ಅವರ ಈ ಆಶೆ ಪೂರ್ತಿಯಾದೀತೇ?

ಭಾರತವೆ ಬಾಪೂ!

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ

ಜಗದ ನಂದನದಿಂದ ಹಸುರೆಲೆಯ ಮರೆಯಿಂದ
ಹೊರಡುತಿದೆ ಭಾರತದ ಶುಭದುದಯ ರಾಗ !
ಸಕಲ ಭುವನ ಪ್ರಾಣಿಗಳ ಕಿವಿದೆರೆಯ ಹೊಗುತ
ಚಿತ್ತರಂಜನವನ್ನೆ ಮಾಡುತಿದೆ ಬೇಗ ! ೧

ಜನ ಮನದ ಹೀನತನ ಮೂಢತನ ಮೊದಲಾದ
ಕೋಟಿತರದಳಲು ಬಳಲಿಕೆಗಳಿರುಳಳಿದು,
ಸುವಿವೇಕದಾನಂದದುದಯದಾ ಸಿರಿವೆಳಗ
ಹಾಲುಮಳೆ ಇಳೆಗಿಳಿದು ಹರಿಯುತಿದೆ ಇಂದು ! ೨

ತುಂಬು ಬಿರಿದರವಿಂದದಿಂದೊಗೆದು ಬೀಸಿ ಬಹ
ನವ್ಯಮಯ ಪೂರ್ಣ ಜೀವನದ ಸವಿಗಂಪ
ಸವಿಸವಿದು ದಿವ್ಯ ಚೇತನಗೊಂಡು ಭವ್ಯ ಮೂ-
ರುತಿಯಾಗಿ ನಾಡಿದುವೆ ಬೀರುತಿದೆ ಸೊಂಪ ! ೩

ಜ್ಞಾನಮಾರ್ಗವ ತೋರಿ, ಲೋಕಮಾನ್ಯತೆ ಪಡೆದು
ಆಗುತಿದೆ ನಾಡಿದುವೆ ಇಳೆಯತುಲ ಸೈಪು !
ಕರುಣಾಳು ಬೆಳಕಾಗಿ, ಬ್ರಹ್ಮಾಂಡದುಸಿರಾಗಿ,
ಎನಿಸುತಿದೆ ಭಾರತವೆ ಗುರುದೇವ ಬಾಪೂ ! ೪

ಕಸೂತಿ ಕಲಿಯಬೇಕೆ?

ಕು. ಸರೋಜಿನಿ ಮಹಿಷಿ ಎಂ. ಎ , ಧಾರವಾಡ

★

ನೂಲಿನ ತೊಡಕುಗಳನ್ನು ಬಿಡಿಸಲು ಬಲ್ಲ ಮಹಿಳೆ ಬಾಳಿನ ತೊಡಕುಗಳನ್ನೂ ಸುಗಮವಾಗಿ ಬಿಡಿಸಬಲ್ಲಳಂತೆ. ಇಂತಿರುವಾಗ, ನೂಲಿನಿಂದ ಸೌಂದರ್ಯವನ್ನು ಸಾಧಿಸಲು ಕಲಿತ ಗರತಿ ಬಾಳಿನಲ್ಲಿ ಸೌಂದರ್ಯ ಸಾಧಿಸದೆ ಇರುವಳೆ?

★

ಟ್ಟೆಯನ್ನು ರಿಂಗಿನಲ್ಲಿ ಕೂಡಿಸಬೇಕು !

ಬಟ್ಟೆಯ ಮೇಲೆ ಚಿತ್ರವನ್ನು ಮೂಡಿಸಿದ ಬಳಿಕ, ಆ ಬಟ್ಟೆ ನ್ನು ಬಿಗಿಯಾಗಿ ರಿಂಗಿನಲ್ಲಿ ಕೂಡಿಸಬೇಕಾಗುವುದು. ಕೈ- ೂತಿಯನ್ನು ರಿಂಗಿನ ಸಹಾಯವಿಲ್ಲದೆಯೂ ತೆಗೆಯಬಹುದು. ದರೆ ಯಂತ್ರದಲ್ಲಿ ಮಾತ್ರ ರಿಂಗಿನಲ್ಲಿ ಬಟ್ಟೆಯನ್ನು ಬಿಗಿಯಾಗಿ ಡಿಸದೆ ತೆಗೆಯುವುದೇ ಸಾಧ್ಯವಿಲ್ಲ ಕೈ ಕಸೂತಿಯಲ್ಲಿ ಸೂಜಿ ನ್ನು ಚುಚ್ಚಿಯೂ ಬಟ್ಟೆಯನ್ನು ಸರಿಸಬಹುದು. ಆದರೆ ಂತ್ರದಲ್ಲಿ ಬಟ್ಟೆಯನ್ನು ಸರಿಸಾಡಿ ಸೂಜಿಯನ್ನು ಚುಚ್ಚುವು- ುತ್ತದೆ. ಬಟ್ಟೆಯನ್ನು ಸರಿಸಿದತ್ತ ಸೂಜಿ ಚುಚ್ಚುತ್ತ ೇಗುತ್ತದೆ. ಆದಕ್ಕಾಗಿ ಬಟ್ಟೆಯನ್ನು ಸುಲಭವಾಗಿ ಬೇಕಾದ ಗೆ ಸರಿಸಲು ರಿಂಗಿನ ಅವಶ್ಯಕತೆ ಎಷ್ಟಿದೆಯೆಂಬುದನ್ನು ಬೇರೆ ಳಬೇಕಾಗಿಲ್ಲ. ಹೀಗೆ ಸರಿಸಾಡಲು ಸುಲಭವಾಗುವಂತೆ, ಗು ಹಾಳತಾಗಿರಬೇಕು. ಯಂತ್ರದಲ್ಲಿ ಕಸೂತಿಯನ್ನು ಹಾಕಲು ಮಾರು ೧೦-೧೨ ಇಂಚು ವ್ಯಾಸವುಳ್ಳ ಕಟ್ಟಿಗೆಯ ವರ್ತುಲ ್ನ ಉಪಯೋಗಿಸುವುದುಂಟು. ಈ ಅಳತೆ ತೀರ ದೊಡ್ಡದೂ ್ಲ, ತೀರ ಚಿಕ್ಕದೂ ಅಲ್ಲ.

ಯಂತ್ರದ ಕಸೂತಿಯಲ್ಲಿ, ರಿಂಗಿನಲ್ಲಿ ಬಟ್ಟೆಯನ್ನು ಕೂಡಿಸು ಸೂ ಮಹತ್ವದ ವಿಷಯವೇ. ಕೈಕಸೂತಿಯಲ್ಲಿ, ರಿಂಗಿನಲ್ಲಿಯ ಡ್ಡ ವರ್ತುಳ ಮೇಲೆ ಬರುವುದು. ಬಟ್ಟೆ ರಿಂಗಿನ ಮೇಲಂಚಿಗೆ ಸಿನಾಗಿ, ಚಿತ್ರ ತುಂಬಬೇಕಾದ ಭಾಗ ಎತ್ತರವಾಗಿ ಬರುವುದು. ರೆ ಯಂತ್ರದ ಕಸೂತಿಯಲ್ಲಿ ಇದಕ್ಕೆ ವಿರುದ್ಧವಾಗಿರುವುದು. ನ ದೊಡ್ಡ ವರ್ತುಳ ಕೆಳಗೆ ಹೋಗಿ, ಸಣ್ಣ ವರ್ತುಳ ಮೇಲೆ ುವುದು. ಚಿತ್ರ ತುಂಬಬೇಕಾದ ಬಟ್ಟೆಯ ಭಾಗ ರಿಂಗಿನ ಗಿನ ಅಂಚಿಗೆ ಸರಿಯಾಗಿ ಹೊಂದಿಕೊಳ್ಳುವುದು. ಬಟ್ಟೆಯು ತ್ರದ ಪ್ಲೇಟಿಗೆ ಹತ್ತಿರಬೇಕಾದ್ದರಿಂದ, ಹೀಗೆ ಕೂಡಿಸುವುದು ಅವಶ್ಯವಿದೆ. ಇಲ್ಲಿಯೂ ತುಂಬಬೇಕಾದ ಚಿತ್ರ ಆದಷ್ಟು ರಿಂಗಿನ ಮಧ್ಯದಲ್ಲಿ ಬರುವಂತೆ ನೋಡಬೇಕು. ಎಂದರೆ ಹೊಲಿಗೆ ಸರಿಯಾಗಿ ಬೀಳಲು ಅನುಕೂಲವಾಗುವುದು. ಚಿತ್ರವನ್ನು ತುಂಬಬೇಕಾದ ಬಟ್ಟೆ ಸಣ್ಣದಾಗಿದ್ದರೆ, ಬಟ್ಟೆಯನ್ನು ಬಿಗಿಯಾಗಿ ರಿಂಗಿನಲ್ಲಿ ಕೂಡಿಸುವುದು ಸಾಧ್ಯವಾಗದು. ಸ್ವಲ್ಪ ಸಡಿಲಾದರೂ, ಯಂತ್ರದಲ್ಲಿ ಹೊಲಿಗೆ ಚೆನ್ನಾಗಿ ಬೀಳದು. ಆದಕ್ಕಾಗಿ ಆ ಸಣ್ಣ ಬಟ್ಟೆಯ ತುಂಡು ನಡುವೆ ಬರುವಂತೆ, ನಾಲ್ಕೂ ಬದಿಗೆ ಬೇರೊಂದು ಬಟ್ಟೆಯನ್ನು ಹಚ್ಚಿಹೊಲಿದು, ರಿಂಗಿನಲ್ಲಿ ಬಿಗಿಯಾಗಿ, ಸ್ಕ್ರೂ ಮೊಳೆಯ ಸಹಾಯದಿಂದ ಕೂಡಿಸಿ ತುಂಬಬೇಕಾಗುವುದು. ತುಂಬಿದ ಮೇಲೆ ನಾಲ್ಕೂ ಬದಿಗೆ ಜೋಡಿಸಿದ ಅರಿವೆಯನ್ನು ಬಿಚ್ಚಿಬಿಡಬಹುದು.

ಒಂದೊಂದು ಸಲ ಚಿತ್ರತುಂಬಬೇಕಾದ ಬಟ್ಟೆ, ತೀರ ತೆಳುವಾಗಿರುವಾಗ, ಅಥವಾ ಜಾಳಿಗೆಯದಾಗಿರುವಾಗ, ರಿಂಗಿನಲ್ಲಿ ಬಿಗಿಯಾಗಿ ಕೂಡಿಸುವುದೇ ಅಸಾಧ್ಯವಾಗಿ ಬಿಡುತ್ತದೆ. ಆದಕ್ಕಾಗಿ ಬಟ್ಟೆಯ ಹಿಂದೆ, ಚಿತ್ರದ ಕಾಗದವನ್ನಾಗಲಿ ಅಥವಾ ಬಿಳಿ ಬಿರುಸು ಕಾಗದವನ್ನಾಗಲಿ ಇಟ್ಟು ಬಿರುಸಾಗಿ ಕೂಡಿಸಬೇಕಾಗುತ್ತದೆ. ಸ್ಯಾಟಿನ್, ಜಾರ್ಜೆಟ್ ರೇಶಿಮೆ ಬಟ್ಟೆಗಳನ್ನು ರಿಂಗಿನಲ್ಲಿ ಬಿಗಿಯಾಗಿ ಕೂಡಿಸುವುದರಿಂದಲೇ, ಒಂದೊಂದು ಸಲ, ರಿಂಗಿನ ಎರಡು ವರ್ತುಳಗಳ ನಡುವೆ ಸಿಕ್ಕ ಬಟ್ಟೆಯ ಭಾಗ ಜಿಬ್ಬೆಯಾಗುವುದುಂಟು. ಆಗ ಎರಡೂ ವರ್ತುಳಗಳ ನಡುವೆ, ತೆಳುವಾದ ಬೇರೊಂದು ಅರಿವೆಯ ಪಡಿಕೆಯನ್ನು ಸುತ್ತಲೂ ಹಾಕಿ, ಬಳಿಕ ರೇಶಿಮೆ ಬಟ್ಟೆಯನ್ನು ಕೂಡಿಸಬೇಕು. ಚಿತ್ರ ತುಂಬುವ ಬಟ್ಟೆಯ ಭಾಗವೆಲ್ಲ ಒಮ್ಮೆಲೇ ರಿಂಗಿನಲ್ಲಿ ಸೇರಲು ಸಾಧ್ಯವಿಲ್ಲದಾಗ, ಒಂದು ಭಾಗವನ್ನು ತುಂಬಿ, ರಿಂಗನ್ನು ಹೊರದೆಗೆದು, ಮತ್ತೊಂದು ಭಾಗವನ್ನು ಕೂಡಿಸಬೇಕಾಗುವುದು. ಆಗ ರಿಂಗಿನ ಎರಡು ವರ್ತುಳಗಳಲ್ಲಿ ತೆಳುವಾದ

ಅರಿವೆಯು ಮಡಿಕೆಯನ್ನಿಟ್ಟರೆ, ಚಿತ್ರದ ಮಧ್ಯಭಾಗ ಸುರಕ್ಷಿತವಾಗಿಯೇ ಉಳಿಯುವುದು. ಅಂತೂ ಯಂತ್ರದ ಕಸೂತಿಯಲ್ಲಿ ರಿಂಗಿನಲ್ಲಿ ಬಟ್ಟೆಯನ್ನು ಸರಿಯಾಗಿ ಕೂಡಿಸುವುದೇ ಒಂದು ಜಾಣತನ. ಹಲವು ಸಲ, ಸ್ಯಾಟಿನ್ ರೇಶ್ಮೆ ಬಟ್ಟೆಗಳ ಮೇಲೆ ಚಿತ್ರ ತುಂಬುವಾಗ, ಒಳವಸ್ತ್ರವನ್ನೂ ರಿಂಗಿನಲ್ಲಿ ಸೇರಿಸಬೇಕಾಗುವುದು. ಇಲ್ಲದಿದ್ದರೆ, ಹೊಲಿಗೆಯ ದಾರ ಇಂತಹ ಬಟ್ಟೆಗಳ ಮೇಲೆ ಉಂಡೆಯಾಗಿ ಮೇಲೆ ಬರುವುದು. ಕಸೂತಿಯ ಕಲೆಯಲ್ಲಿ ಕೈ ಸುರಿತಂತೆ, ಈ ಉಪಾಯಗಳೆಲ್ಲ ತಾವೇ ತಿಳಿಯುತ್ತ ಹೋಗುವವು. ಅಲ್ಲದೆ ಇನ್ನೂ ಅನೇಕ ಉಪಯುಕ್ತ ಸೂಚನೆಗಳೂ ತಲೆದೋರಬಹುದು.

ಸೂಜಿಯ ವಿಷಯ

ಕಸೂತಿಯನ್ನು ತುಂಬುವಾಗ ಯಂತ್ರದ ಸೂಜಿಯ ವಿಷಯವಾಗಿಯೂ ಲಕ್ಷ್ಯಕೊಡುವುದಿದೆ. ಸೂಜಿ ಮಣಿದಿದ್ದರೆ, ಸರಿಯಾಗಿ ಕೂತಿರದಿದ್ದರೆ, ಅಥವಾ ಪ್ಲೇಟಿನ ತೂತಿನಲ್ಲಿ ನೇರವಾಗಿ ಹೋಗದಿದ್ದರೆ, ಒಮ್ಮೆಲೇ ಮುರಿದುಬಿಡುವುದು. ಅದಕ್ಕಾಗಿ ಈ ಎಲ್ಲ ವಿಷಯಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಕಸೂತಿಯನ್ನು ಪ್ರಾರಂಭ ಮಾಡತಕ್ಕದ್ದು. ಇನ್ನು ಕಸೂತಿಯನ್ನು ಹೆಣೆಯತಕ್ಕ ಬಟ್ಟೆಗನುಸಾರವಾಗಿ ಸೂಜಿ, ದಾರಗಳಲ್ಲಿಯೂ ಬದಲಾವಣೆಯನ್ನು ಮಾಡುವುದಿರುತ್ತದೆ. ಸಾಮಾನ್ಯವಾಗಿ ಪಾಪ್ಲಿನ್ ಬಟ್ಟೆಯ ಮೇಲೆ ಚಿತ್ರ ತುಂಬುವುದಿದ್ದಾಗ, ಮೇಲಿನ ಎಳೆ ೮೦ ನಂಬರಿನದಿದ್ದು, ಕೆಳಗಿನ (ಬಾಬಿನ್) ಎಳೆ ೬೦ ನಂಬರಿನದು ಇದ್ದರೂ ನಡೆಯುವುದು. ಆಗ '೯' ನಂಬರಿನ ಸೂಜಿಯನ್ನು ಯಂತ್ರದಲ್ಲಿ ಉಪಯೋಗಿಸಬೇಕು. ಅಲ್ಲದೆ ದಿನದ ಹೊಲಿಗೆಗಾಗಿ ಉಪಯೋಗಿಸುವ '೧೪', '೧೬', ನಂಬರಿನ ಸೂಜಿಗಳನ್ನು ಉಪಯೋಗಿಸಿದರೆ, ಬಟ್ಟೆಗೆ ತೂತು ಬಿದ್ದಂತೆ ಕಾಣುವುದು. ಜಾರ್ಜೆಟ್, ಆರ್ಗಂಡಿ ಬಟ್ಟೆಗಳ ಮೇಲೆ ಚಿತ್ರ ತುಂಬುವಾಗ, ತುಂಬಲು ಉಪಯೋಗಿಸುವ ರೇಶಿಮೆಯ ಎಳೆಗಳಲ್ಲಿ ಬದಲು ಮಾಡಬೇಕಾಗುತ್ತದೆ. ಆಗ '೯' ನಂಬರಿನ ಸೂಜಿಯನ್ನುಪಯೋಗಿಸಿದರೆ, ಹೆಣಿಗೆ ಇನ್ನೂ ಅಂದವಾಗಿ ಕಾಣುವುದು.



ಮೂಲಚಿತ್ರವನ್ನು ಮೂಡಿಸಿಕೊಳ್ಳುವ ವಿಧಾನ.

ಪ್ರಾರಂಭಕ್ಕೇ ಸಣ್ಣ ಸೂಜಿ-ದಾರಗಳನ್ನುಪಯೋಗಿಸಿದ ಸೂಜಿಗಳು ಮುರಿದು ದಾರ ಹರಿದು ಬೇಸರವಾಗಿ ಬಿಡುವು ಅದಕ್ಕಾಗಿ '೧೪' ನಂಬರಿನ ಸೂಜಿಯನ್ನೇ ಹಾಕಿ '೬ ನಂಬರಿನ ದಾರವನ್ನೇ ಎರಡೂ ಬದಿಗಿಟ್ಟು, ದಪ್ಪವಾದ ಬಿ ಬಟ್ಟೆಯ ಮೇಲೆ ರೂಢಿ ಮಾಡುವುದು ಒಳ್ಳೆಯದು. ಕಸೂ ಯನ್ನು ಹಾಕುವಾಗ ಕೈಬೆರಳುಗಳು ಆದಷ್ಟು ಸೂಜಿಯ ಸಮೀ ದಲ್ಲಿಯೇ ಆಡುವುದರಿಂದ, ಬೆರಳಿನ ಮೇಲೆ ಸೂಜಿ ತಪ್ಪಿಬೀ ಸಂಭವ ಹೆಚ್ಚಾಗಿದೆ; ಅಲ್ಲದೆ ಪ್ಲೇಟಿಗೆ ತಗಲಿ, ಅಥವಾ ಯಂ ಚಕ್ರ ವಿರುದ್ಧ ದಿಕ್ಕಿಗೆ ತಿರುಗಿ ಸೂಜಿ ಮುರಿಯಿತೆಂದರೆ ಅ ತುದಿ ಒಮ್ಮೆಲೆ ಕಣ್ಣಿನಲ್ಲಿ ನೆಗೆಯುವುದೂ ಉಂಟು. ಇವೆ ಬಗ್ಗೆಯೂ, ವಿದ್ಯಾರ್ಥಿಗಳು ಹೆಚ್ಚು ಜಾಗರೂಕತೆಯನ್ನು ವಹಿ ವುದು ಒಳ್ಳೆಯದು.

ಕತ್ತರಿ

ಇನ್ನು ಕಸೂತಿಯ ಕತ್ತರಿಯ ವಿಷಯವಾಗಿಯೂ ಸ್ವ ಪರಿಚಯ ಬೇಕಾಗುವುದು. ಈ ಕತ್ತರಿ ಆಕಾರದಲ್ಲಿ ತೀರ ಸಣ್ಣ ರೇಶಿಮೆಯ ಎಳೆಗಳನ್ನು ಕತ್ತರಿಸುವ ಪ್ರಸಂಗಗಳೆ ಅದಕ್ಕೆ ಹೆಚ್ಚು ಅಲ್ಲದೆ ಕತ್ತರಿಸುವ ಕಸೂತಿ (cut work) ಮೊದಲಾದುವುಗಳ ಬಟ್ಟೆಯ ತೀರ ಸಣ್ಣ ಸಣ್ಣ ಭಾಗಗಳನ್ನು, ಅಂಚಿಗೆ ಹೊಂ ಕತ್ತರಿಸಬೇಕಾಗುವುದು. ಅದಕ್ಕಾಗಿ ಈ ಕತ್ತರಿಯು ತು ವಿಶಿಷ್ಟರೀತಿಯಲ್ಲಿ. ಹಾಗೆ ಕತ್ತರಿಸಲು ಅನುಕೂಲವಾಗುವ ಮಣಿದಿರುತ್ತದೆ.

ಉಪಕರಣಸಿದ್ಧತೆಯ ನಂತರ :

ಸರಿ ! ಬಟ್ಟೆ, ಚಿತ್ರ, ರಿಂಗು, ಸೂಜಿ, ಬಣ್ಣದ ದಾರ, ಕ ಎಲ್ಲವೂ ಅಣಿಯಾಗಿರುವುವಲ್ಲವೇ ? ಹಾಗಾದರೆ ಬಟ್ಟೆಯ ಮೆ ಚಿತ್ರವನ್ನು ಮೂಡಿಸಿ, ಚಿತ್ರ ಮಧ್ಯದಲ್ಲಿ ಬರುವಂತೆ, ರಿಂಗಿ ಬಿಗಿಯಾಗಿ ಸೇರಿಸಿರಿ. ಬಳಿಕ, ಯಂತ್ರದಲ್ಲಿಯ ಒತ್ತ ವನ್ನು ಮೇಲೆ ಕೆಳಗೆ ಮಾಡುವ ಕುದುರೆಯನ್ನು ಮೇ ಮಾಡಿ, ಸೂಜಿಯನ್ನು ಮೇಲಕ್ಕೆ ಒಯ್ದು, ರಿಂಗ ಮೆಲ್ಲಗೆ ಸೂಜಿಯ ಕೆಳಗೆ ಸೇರಿಸಿರಿ. ಅದು ಸರಿಯಾಗಿ ಕು ಬಳಿಕ ಕುದುರೆಯನ್ನು ಕೆಳಗಿಳಿಸಿಡಿರಿ ! ಬಳಿಕ ಮೇಲಿನ ಯನ್ನು ಎಡಕ್ಕಿದ್ದ ಸ್ಕ್ರೂದಿಂದ ಕೊಂಚ ಮಾತ್ರ ಸಡಿಲು ಮಾ ಸೂಜಿಯನ್ನು ಕೆಳಕ್ಕಿಳಿಸಿ, ಮೆಲ್ಲಗೆ ಯಂತ್ರವನ್ನು ತಿರುಗಿ ಪ್ರಾರಂಭಿಸಿರಿ. ಮೊದಮೊದಲು, ಬೇಕಾದಾಗ ನಿಲ್ಲಿಸಬೇಕಾ ರಿಂದ, ಒಂದು ಕೈ ಚಕ್ರಕ್ಕೆ ಹೊಂದಿಕೊಂಡೇ ಉಳಿಯುವ ಆವರೆ ಯಂತ್ರವನ್ನು ಕಾಲಿನಿಂದಲೇ ಮೆಲ್ಲಗೆ ತಿರುಗಿಸಿ ತ ನಲ್ಲಿಟ್ಟುಕೊಂಡು, ಎರಡೂ ಕೈಗಳನ್ನೂ ರಿಂಗನ್ನು ಸರಿಸಾ ಉಪಯೋಗಿಸುವುದು ಒಳ್ಳೆಯದು ಅದಕ್ಕಾಗಿ ಹಾಗೇ ಮಾಡಬೇಕು.

ಹೊಲಿಯುವಾಗ ಬಟ್ಟೆಯನ್ನು ಕ್ರಮಬದ್ಧವಾಗಿ ಮುಂದೆ ಸರಿಸುವ ಹಲ್ಲುಗಳೂ, ಬಟ್ಟೆಯನ್ನು ಒತ್ತಿಹಿಡಿಯುವ ಒತ್ತಡವೂ ಈಗ ಇಲ್ಲ; ಅದಕ್ಕಾಗಿ ಬಟ್ಟೆಯನ್ನು, ಸಮಾನ ಅಂತರವನ್ನಿಟ್ಟು ಸರಿಸಲು ಕೈಗೆ ರೂಢಿಬೇಕಾಗುವುದು. ಸುರುವಿಗೆ, ರೂಢಿಯಿಲ್ಲದ್ದರಿಂದ ಒಂದು ಹೊಲಿಗೆ ದೊಡ್ಡದು, ಒಂದು ಸಣ್ಣದು, ಒಂದು ರೇಷೆಯಲ್ಲಿ, ಒಂದು ರೇಷೆಯ ಹೊರಗೆ, ಕೈತೂಕ ತಪ್ಪಿ ಬೀಳಬಹುದು. ಮೊದಲು ಒಂದೇ ರೇಷೆಯಲ್ಲಿ ಬಟ್ಟೆಯನ್ನು ಹೊಲಿಗೆಗಳ ಮಧ್ಯೆ ಸಮಾನ ಅಂತರವನ್ನಿಟ್ಟು, ಸರಿಸಲು ಪ್ರಯತ್ನ ಮಾಡಿರಿ! ಇದು ಬೇರೇನೂ ಅಲ್ಲ. ದಿನದ ಹೊಲಿಗೆಯಲ್ಲಿ ಉಪಯೋಗಿಸುವ ಸಾದಾ ಹೊಲಿಗೆಯೇ. ಮೇಲಿನಿಂದ ಕೆಳಕ್ಕೂ, ಕೆಳಗಿನಿಂದ ಮೇಲೂ, ಒಂದೇ ರೇಷೆಯಲ್ಲಿ ಹೊಲಿಗೆಗಳು ಸಮಾನ ಅಂತರದಲ್ಲಿ ಬೀಳತೊಡಗಿದ ಬಳಿಕ, ಮತ್ತೆ ಮುಂದಿನದನ್ನು ಹೇಳುವೆ. ಸಾಮಾನ್ಯವಾಗಿ ಹೊಲಿಗೆಯಲ್ಲಿ ಬಟ್ಟೆ ಮುಂದಕ್ಕೆ ಮಾತ್ರ ಸರಿಯುತ್ತದೆ. ಆದ್ದರಿಂದ ಹೊಲಿಗೆ ಮೇಲಿನಿಂದ ಕೆಳಕ್ಕೆ ಬೀಳದು. ಆದರೆ ಕಸೂತಿಯನ್ನು ಹಾಕುವಾಗ ಬಟ್ಟೆಯನ್ನು ಮುಂದಕ್ಕೆ ಸರಿಸುವ ಹಲ್ಲುಗಳೇ ಇಲ್ಲ : ಬಟ್ಟೆಯನ್ನು ಮೇಲಿನಿಂದ ಕೆಳಕ್ಕೂ, ಕೆಳಗಿನಿಂದ ಮೇಲೂ, ಎಡದಿಂದ ಬಲಕ್ಕೂ, ಬಲದಿಂದ ಎಡಕ್ಕೂ, ಮೂಲೆಯ ಮೇಲೆಯೂ ಬೇಕಾದ ಹಾಗೆ ಸರಿಸಿ, ಹೆಣೆಯಬಹುದು. ದುಂಡು ಹೊಲಿಗೆ, ಸಾಟಿನ್ ಹೊಲಿಗೆಗಳನ್ನೂ ಹಾಕಿ, ಕಸೂತಿಯ ಸೌಂದರ್ಯವನ್ನು ಹೆಚ್ಚಿಸಲೂಬಹುದು.

ಸದ್ಯ, ರಂಗಿನ ಮಧ್ಯದ ಬಟ್ಟೆಯ ಮೇಲೆ, ಉದ್ದಕ್ಕೆ ಹತ್ತೆಂಟು ಗೆರೆಗಳನ್ನೆಳೆದು ಮೇಲಿನಿಂದ ಕೆಳಕ್ಕೂ, ಕೆಳಗಿನಿಂದ ಮೇಲೂ, ಅವುಗಳನ್ನು ಬಣ್ಣದ ದಾರದಲ್ಲಿ ಮೂಡಿಸಲು ಪ್ರಯತ್ನಮಾಡಿರಿ. ಬಳಿಕ ಮುಂದಿನದನ್ನು ವಿಸ್ತರಿಸಿ ಹೇಳುವೆ: ಈ ಗೆರೆಗಳನ್ನು ಮೂಡಿಸಲು ಬಂದರೆ, ನಿಮ್ಮಲ್ಲಿ ಆನಂದವೂ, ಮುಂದಿನದನ್ನು ಕಲಿಯಲು ಉತ್ಸಾಹವೂ ತಮ್ಮಿಂದ ತಾವೇ ತಲೆದೋರುವವು.

ಚೆಲುವೆಯ ಚೆಲುವಿಕೆ

(ಒಂದು ಕಿರುಗತೆ)

' ಅರವಿಂದ ' ಹೊಂಬಳ

ಸುಂದರಿಯು ನಿಲುವುಗನ್ನಡಿಯೆದುರು ನಿಂತು ತನ್ನ ನೀಳವಾದ ಕೇಶರಾಶಿಗಳನ್ನು ಸರಿಪಡಿಸಿಕೊಳ್ಳುತ್ತಿದ್ದಳು. ಆ ಕರಿಗೂದಲುಗಳನ್ನು ಯಾವ ರೀತಿಯಿಂದ ಹೊಂದಿಸಿಕೊಂಡರೆ ತಾನು ಚೆಲುವೆಯಾಗಿ ಕಂಡೇನೆಂದು ಆ ನೀರೆ ಬಗೆಬಗೆಯಾಗಿ ವಿಚಾರಿಸಿದಳು. ಒಂದು ತೆರನಾಗಿ ಹೊಂದಿಸಿದ ಕೇಶರಾಶಿಯಲ್ಲಿ ಮತ್ತಾವುದೋ ಒಂದು ಕುಂದನ್ನು ಕಂಡುಹಿಡಿದು, ಅದನ್ನು ಮತ್ತೊಂದು ತೆರನಾಗಿ ಹೊಂದಿಸುವಳು. ಕಡೆಗೆ ಒಂದು ತೆರನಾದ ವೇಣೀಸಂಹಾರಕ್ಕೆ ಆ ನಾರಿ ಮೆಚ್ಚಿ ಸಂತಸಪಟ್ಟಳು.

ಈಗ ಆ ಚೆಲುವೆ ನಿಲುವುಗನ್ನಡಿಯಲ್ಲಿ ಮತ್ತೊಮ್ಮೆ ತನ್ನ ಮೊಗದಾವರೆಯನ್ನೀಕ್ಷಿಸಿದಳು. ಅದೆಷ್ಟು ಚೆಲುವಾಗಿದೆ! ಆ ಸಂಪಿಗೆಮೂಗು ಅದೆಂಥ ಚೆಲುವು ಬೀರುತ್ತಿದೆ! ಆ ಕೆಂದಾದ ತುಟಿಗಳು ಅದೆಂತು ಸೊಂಪೆಸೆಯುತ್ತಿವೆ! ಆ ಚೆಲುವುಗಣ್ಣುಗಳು ಅದೆಂತು ಚಂಚಲವಾಗಿವೆ! ಸುಂದರಿಯು ತನ್ನ ಸೌಂದರ್ಯವನ್ನು ಮನದಣಿ ನೋಡಿದಳು. ನೋಡಿ ನೋಡಿ ಹಿಗ್ಗಿದಳು; ಉಬ್ಬಿದಳು.

ತೊಟ್ಟಿಲಲ್ಲಿ ಮಲಗಿದ ಮಗು ಏಕೋ ಕಿರಚಿಕೊಳ್ಳತೊಡಗಿತು. ಚೆಲುವೆಯು ತನ್ನ ಅಂಗಾಂಗಗಳಲ್ಲಿಯೂ ಹೊರಸೂಸುವ ಚೆಲುವಿಕೆಯನ್ನು ನೋಡುತ್ತಲೇ ನಿಂತಿದ್ದಳು. ಕೂಸು ಅರಚುವ ಕಡೆಗೆ ಅವಳ ಲಕ್ಷ್ಯವೇ ಇಲ್ಲ. ಮಗು ಮತ್ತಷ್ಟು ಅರಚಿತು. ಸುಂದರಿ ಈಗ ಮುನಿಸುಗೊಂಡಳು. ಇನಿಯನು ಬರುವುದರೊಳಗಾಗಿ ತಾನು ಸಿಂಗರಿಸಿಕೊಂಡು ಸಿದ್ಧಳಾಗಬೇಕೆಂದರೆ ಈ ಕೂಸಿನದೊಂದು ಕಾಟ. ಈಗ ಅದನ್ನು ಎತ್ತಿಕೊಂಡರೆ ಜೊಲ್ಲುಮೊಗವನ್ನು ತನ್ನ ಮೊಗಕ್ಕೆ ತಿಕ್ಕಿ ಅಲ್ಲಿಯ ಚೆಲುವಿಕೆಯನ್ನಳಿಸಿಬಿಡುವುದು. ಸ್ವಚ್ಛವಾದ ತನ್ನ ಅರಿವೆಗಳನ್ನು ಹೊಲಸುಮಾಡಿಬಿಡುವುದು. ಆದುದರಿಂದ ನೀರೆ ಮಗುವನ್ನು ಎತ್ತಿಕೊಳ್ಳಲೇ ಇಲ್ಲ. ಅವಳೂ ಅದರ ಜೊತೆಗೆ ಸತ್ಯಾಗ್ರಹತೊಟ್ಟಳು. ಗಂಟಲು ಹರಿಯುವಂತೆ ಕಿರುಚಿದರೂ ಮಿಟ್ಟುಮಿಸುಕಲಿಲ್ಲ.

ಮಗು ಕಿರುಚಿಯೇ ಕಿರುಚಿತು. ಆದಾದರೂ ಎಷ್ಟೆಂದು ಅರಚೀತು? ಕಿರುಚಿ-ಅರಚಿ ಗಂಟಲು ಆರಿ ಸುಮ್ಮನಾಯಿತು!

ಇತ್ತ ಚೆಲುವೆಯ ಚೆಲುವಿಕೆ ಕಂದಿ ಕುಂದಿಹೋಯಿತು!

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಆಗಸ್ಟ್ ಸಂಚಿಕೆಯಲ್ಲಿ ನಾವು ಕೋರಿಕೊಂಡಂತೆ 'ವಿರೋಧ' ಕತೆಯನ್ನು ವಿಮರ್ಶಿಸಿದ ಲೇಖನಗಳು ಬೇರೆ ಬೇರೆ ಹನ್ನೊಂದು ಜನರಿಂದ ಬಂದಿವೆ. ಅವರ ಅನುಕ್ರಮ ಹೀಗಿದೆ:

೧. ಶ್ರೀ. ವೈ. ಮಹಾಲಿಂಗಭಟ್ಟ, ಸೆಲ್ಲೂರ, ದ. ಕ. ಜಿಲ್ಲೆ. ೨. ಶ್ರೀ. ಕ. ಮ. ಶಿ. ಚಂದ್ರಶೇಖರಯ್ಯ ಬಿ ಎಸ್‌ಸಿ. ವಿದ್ಯಾರ್ಥಿ, ಬೆಂಗಳೂರು. ೩. ಶ್ರೀ ಅಮರಾನಂದ ಬೆಟ್ಟದೂರು, ರಾಯಚೂರು ಜಿಲ್ಲಾ. ೪ ಶ್ರೀ ಅನಂತ ಬಾರ್ಲಿ ಸೀ.ಬಿ.ಎ. ಬಸವೇಶ್ವರ ಕಾಲೇಜು, ಬಾಗಲಕೋಟೆ ೫ ಶ್ರೀ. ಎಚ್. ಎಸ್. ರಾಮಚಂದ್ರನ್, ಉಗರಗೋಳ. ೬. ಶ್ರೀ. ಸಿ. ಅನಂತ-ರಾಜನ್ ಪುಲಿಗೆರೆ — ಲಕ್ಷ್ಮೇಶ್ವರ. ೭. ಶ್ರೀ. ಸೀತಾರಾಘವ, ಚಿತ್ರದುರ್ಗ. ೮. ಶ್ರೀ. ವಿ. ಕೆ. ಹೆಗಡೆ, ಹೊನ್ನಳ್ಳಿ, ಉ. ಕ. ಜಿಲ್ಲಾ. ೯. ಶ್ರೀ. ಎಸ್. ವಿ. ಬಡಿಗಣ್ಣವರ, ಗದಗು. ೧೦, ಶ್ರೀ. ಡಿ. ಜೆ. ಗುಮಾಸ್ತೆ ಬಿ. ಎ ತರಗತಿಯ ವಿದ್ಯಾರ್ಥಿ, ಸೊಲ್ಲಾಪುರ. ೧೧. ಶ್ರೀಮತಿ ಪದ್ಮಾ, ಬೆಂಗಳೂರು.

ವಿಮರ್ಶೆಗಳ ಸಂಖ್ಯೆ ಕಡಿಮೆಯಾಗಿದ್ದರೂ, ಕನ್ನಡನಾಡಿನ ಎಲ್ಲ ಮೂಲೆಗಳ ತರುಣ ವಿಮರ್ಶಕರ ಪ್ರಾತಿನಿಧ್ಯ ಈ ಸಲದ ಮೇಲಾಟದಲ್ಲಿ ಕಾಣುವುದು ಸಮಾಧಾನದ ಸಂಗತಿಯಾಗಿದೆ.

ಈ ಸಲದ ವಿಮರ್ಶೆಗಳನ್ನು ನಮ್ಮ ಸಂಪಾದಕ ಸಮಿತಿಯವರೇ ನೋಡಿ ನಿರ್ಣಯ ಕೊಟ್ಟಿದ್ದಾರೆ. ಶ್ರೀ. ಅನಂತ ಬಾರ್ಲಿಯವರ ವಿಮರ್ಶೆ ಅತ್ಯುತ್ತಮವೆಂದೂ ಶ್ರೀಮತಿ ಪದ್ಮಾ, ಬೆಂಗಳೂರು, ಶ್ರೀ. ಅಮರಾನಂದ ಬೆಟ್ಟದೂರು, ಶ್ರೀ. ಸೀತಾರಾಘವ ಚಿತ್ರದುರ್ಗ ಇವರ ವಿಮರ್ಶೆಗಳು ಉತ್ತಮವಾಗಿವೆಯೆಂದೂ, ಶ್ರೀ. ಡಿ. ಜೆ. ದಿವಾಣ ಮತ್ತು ಶ್ರೀ. ವಿ. ಕೆ. ಹೆಗಡೆಯವರ ವಿಮರ್ಶೆಗಳು ಚೆನ್ನಾಗಿವೆಯೆಂದೂ ನಿರ್ಣಾಯಕರ ಅಭಿಪ್ರಾಯ.

ಮುಂದಿನ ತಿಂಗಳ ಮೇಲಾಟಕ್ಕಾಗಿ ಒಂದು ಹೊಸಮಾದರಿಯ ವಿಷಯವನ್ನು ಕೊಡಬೇಕೆಂದಿದ್ದೇವೆ. ಜಯಂತಿಯ ಈ ಸಪ್ಟೆಂಬರ್ ಸಂಚಿಕೆಯನ್ನೇ ವಿಮರ್ಶೆಯ ವಿಷಯವನ್ನಾಗಿ ತೆಗೆದುಕೊಳ್ಳಬೇಕು. 'ಜಯಂತಿಯ ಸಪ್ಟೆಂಬರ್ ಸಂಚಿಕೆ' ಎಂದು ತಲೆಬರೆಹವನ್ನಿರಿಸಿ, ಇದರಲ್ಲಿ ಬಂದಿರುವ ವಿಷಯಗಳಲ್ಲಿ ತಮಗೆ ಮೆಚ್ಚಿಗೆಯಾದ— ಆಗದೆ ಇದ್ದ - ಲೇಖನಗಳನ್ನು ಅದೇಕೆಂಬುದಕ್ಕೆ ಕಾರಣ ಕೊಟ್ಟು ವಿಮರ್ಶಿಸಬೇಕು. ಈ ಹೊಸ ಉಪಕ್ರಮವು, ನಮ್ಮ ವಾಚಕರು ಏನು ಬಯಸುತ್ತಾರೆಂಬುದನ್ನು ತಿಳಿದುಕೊಳ್ಳಲಿಕ್ಕೆ ನಮಗೂ ಅನುಕೂಲವಾದೀತೆಂಬ ನಿರೀಕ್ಷೆಯಿದೆ. ಹೆಚ್ಚು ಜನ ವಾಚಕರು ಇದರಲ್ಲಿ ಭಾಗವಹಿಸಬೇಕಾಗಿ ಬಿನ್ನಹ.

— **ಸಂಪಾದಕರು**.

ವಿರೋಧ

(ಕಥಾವಿಮರ್ಶೆ)

ಶ್ರೀ. ಅನಂತ ಬಾರ್ಲಿ, ಸಿ. ಬಿ. ಎ.
ಬಸವೇಶ್ವರ ಕಾಲೇಜ್ ಬಾಗಲಕೋಟೆ,

ನಿಸರ್ಗದ ರೋಷ-ತೋಷಗಳ ಮಧ್ಯದಲ್ಲಿ ಸುಖ ಸಂತೃಪ್ತಿಯ ಬಾಳಬದುಕ ಬಯಸುವ ಜೀವನ ಶ್ರೀಮತಿ ವಾಂಗಳದು. ಇಂದಿನ ವಿಜ್ಞಾನದ ಕಾಲಚಕ್ರದಲ್ಲಿ ಸಿಲುಕಿ, ಮಾನವತೆಯ ಮರೆದು, ಸ್ವಾರ್ಥಕೂಯೆಗಳ ಸುಳುವಿನಲ್ಲಿ ಮುಳುಗೇಳುತ್ತ ಅಶಾಂತಿಯ ಕಡಲಲ್ಲಿ ಹೇಗೊ ತೇಲುತ್ತಿರುವ ಇಂದಿನ ಜಗದ ರೀತಿ ಅವಳಿಗೆ ಹೊಸದು. ಇಂದೂ ಅಂದಿನ ಮಾನವತೆಯನ್ನೇ ಕಾಣಬಯಸುತ್ತಾಳೆ; 'ಅಂದು' ಇಂದಿಗೂ ಸಾಗಿಬಂದಿದೆಯೆಂದು ತಿಳಿದ ಅವಳು, ಅಂದು ಕಲ್ಪನೆಗೂ ನಿಲುಕದಷ್ಟು ವಿಶಾಲವಾಗಿದ್ದ ವಿಶ್ವವನ್ನು, ಇಂದು ಹಿಡಿಮುಷ್ಟಿಯಲ್ಲಿ ಅಡಗಿಸಿ ಹಿಡಿದು, ಆಶೆ-ಆಕಾಂಕ್ಷೆಗಳ ಆಕಾಶವನ್ನೇ ವ್ಯಾಪಿಸಿ ಪ್ರತಿ ವಾಮನರಾಗ ಬಯಸುವ ಮಾನವರ ಸಾಹಸದಲ್ಲಿ, ಮಾನವತೆಯ ಕುರುಹನ್ನು ಕಾಣದೆ ವಿಭ್ರಾಂತಳಾಗುತ್ತಾಳೆ. ಅನ್ಯಾಯವನ್ನೆದುರಿಸಲು, ಧೈರ್ಯ ಸಾಹಸಗಳಷ್ಟೇ ಇಂದಿನ ಯುಗದಲ್ಲಿ ಸಾಲವೆಂಬುದನ್ನು ತಿಳಿಯುವ ಮೊದಲು, ತನ್ನ ಜನರ ಹೇಡಿತನಕ್ಕಾಗಿ ಹೇಸಿಕೊಳ್ಳುವ ವಾಂಗಳು ಮದ್ದು, ಗುಂಡು, ವಿಮಾನಗಳೆದುರು ಮಾನವನಾಟ-ಮುಗ್ಗರಿಸುವುದನರಿತು, ನಿಸರ್ಗವನ್ನೇ ನೆಮ್ಮಿದ ಅವಳು ಮಾನವನ ಕ್ರೌರ್ಯ ಅಡಗಿಸಲು ನಿಸರ್ಗವನ್ನೇ ಆವ್ಹಾನಿಸುತ್ತಾಳೆ. ಮೊದಲ ಬಲಿಯಾಗಿ ಆ ಪ್ರಚಂಡ ಪ್ರವಾಹದಲ್ಲಿ ಕೊಚ್ಚಿಹೊದರೂ, ಗೆಲುವಿನ ಕೈಯ ಮೇಲೆತ್ತಿ, ಬಾಳಬಯಸುವ ಎಳೆಯರಿಗೆ ವಿಶ್ವಶಾಂತಿಯ ದಾರಿತೋರಿ ಮುನ್ನಡೆಯುತ್ತಾಳೆ.

'ವಿರೋಧ' ಕತೆ, ಅಂದು ಇಂದಿನ ಜನ, ಜೀವನ, ವಿಚಾರಗಳನ್ನು ನಿಚ್ಚಳವಾಗಿ ಅಷ್ಟೇ ಕಲಾಪೂರ್ಣವಾಗಿ ತೋರಿ, ಮುಂದಿನ ಮಾರ್ಗವನ್ನು ಬಗೆಗಾಣಿಸುವ ಸುಂದರ ರೂಪಕವಾಗಿದೆ. ವಾಂಗಳು ಶಾಂತಿ ಸಮಾಧಾನಗಳ ಬಯಸುವ ಸಾಕ್ಷಾತ್ಕರ ಪ್ರತಿನಿಧಿ. ಯಾವುದನ್ನೂ

ಸ್ವಾರ್ಥಸಾಧನೆಗಳವಡಿಸಿಕೊಂಡು ಎಲ್ಲವನ್ನೂ ತಮ್ಮದಾಗಿಸಿಕೊಳ್ಳುವ ತಾಮಸಿಗಳ ಕೋಲಾಹಲ ಇಂದಿನ ಯುದ್ಧ. ಆದಿ ಬುನಾದಿ ಕಾಲದಿಂದಲೂ ಸಾಗಿಬಂದ, ದೇವ ದಾನವ, ಸತ್ಯಾಸತ್ಯಗಳ ಈ ಹೋರಾಟ ಇಂದಿಗೂ ನಿಲ್ಲದಿದ್ದರೆ, ಈ ವಿಶ್ವಮೋಧದಲ್ಲಿ ಶಾಂತಿ ಸುಖಗಳ ಆಹುತಿ ಅರ್ಪಿತವಾಗುವುದು ನಿಶ್ಚಿತವೆಂಬುದನ್ನು ತೋರುವುದೇ ಈ ಕತೆಯ ಉದ್ದೇಶವಾಗಿದೆ.

ಬರಗಾಲ, ನೆರೆಹಾವಳಿಗಳ ನಿಸರ್ಗರೋಷಕ್ಕೆ ಸಿಕ್ಕು ಸಾವಿರಾರು ವರುಷಗಳಿಂದಲೂ ಸಂಕಷ್ಟಗಳ ಅನುಭವಿಸಿ ಸೋತ ಚೀನೀಯರ ಕರುಣಕತೆ ಶ್ರೀಮತಿ ಪರ್ಲ ಬಕ್‌ರ ಹೃದಯ ಹಿಡಿದಿದೆ; ಮನ ಮಿಡಿದಿದೆ. ಅವರ ಮಧ್ಯದಲ್ಲಿ ಅನೇಕ ವರುಷ ಕಾಲ ಬಡತನ-ಬವಣೆಗಳ ಕಂಡುಂಡ ಅನುಭವ ಅವರ ತಿಳಿವಿಗೆ ನೆಲುವಾಗಿ ನಿಂತಿವೆ. ಅಂತೆಯೆ ಚೈನಾದೇಶದ ದೀನದಲಿತರ ಜೀವನ ಹೋರಾಟದಲ್ಲಿಯೇ, ವಿಶ್ವದ ಎರಡು ಮಹಾಶಕ್ತಿಗಳ ಹೋರಾಟವನ್ನು ಕಾಣುವ ದಿವ್ಯದೃಷ್ಟಿ ಶ್ರೀಮತಿಯವರಲ್ಲಿದೆ. ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದ ಚೀನಾದೇಶದ ವಾಂಗಳಂತಹರಲ್ಲಿ, ಅಂತಹ ಹಾಳೆಯಲ್ಲೂ ಆಶಾಕಿರಣವು ಬೆಳಗುವುದನ್ನು ಕಂಡಿದ್ದಾರೆ ಬಕ್‌ರು. ಪ್ರಳಯದೆಡೆಗೆ ವೇಗವಾಗಿ ಧಾವಿಸುತ್ತಿರುವ ವಿಶ್ವವನ್ನೂ ತಡೆದು, ಶಾಂತಿ-ಸುಖಗಳೆಡೆಗೆ ಹೊರಳಿಸುವ ಲೋಕಕಲ್ಯಾಣ ದೃಷ್ಟಿ ಅವರ ಮುಂದಿದೆ. ಜತೆಯೆ ಈ ಎಲ್ಲ ವಿಚಾರಗಳನ್ನು ಸುಂದರವಾಗಿ ಸಮನ್ವಯಗೊಳಿಸಿ ಸಾಹಿತ್ಯದಲ್ಲಿ ಎರಕ ಹೊಯ್ದು, ನೂತನ ಕಲ್ಪನಾ ಸೃಷ್ಟಿಯನ್ನು ಕಲ್ಪಿಸಬಲ್ಲ ಸಾಮರ್ಥ್ಯವಿದೆ. ಇಂತಹರಿಂದ 'ವಿರೋಧ' ಕತೆ ಮೂಡಿ ಬಂದಿದೆ.

“ಜಪಾನಿಗಳೂ ಮನುಷ್ಯರಲ್ಲವ್ರೋ?” ಎಂಬ ವಾಂಗಳ ಪ್ರಶ್ನೆಯಲ್ಲಿ ಮಾನವರೆಲ್ಲರಲ್ಲಿಯೂ ಒಳ್ಳೆಯತನವಿದೆಯೆಂದು ಹೇಳುವರ ಜತೆ, ಬೇಡಿದಷ್ಟು ಹಣ ದೊರೆತಲ್ಲಿ ಯಾರನ್ನೂ ಸ್ವರ್ಗಕ್ಕೆ ಕಳಿಸುವ ನೀಚ ಮೋಸ-(ಪೂಜಾರಿಗಳ)-ವೃತ್ತಿಯೂ ಇದೆ ಎಂಬುದನ್ನು ತೋರುತ್ತಾರೆ. ತನ್ನ, ತನ್ನವರೆಲ್ಲರ ಕಲ್ಯಾಣ ಬಯಸುವ ವಾಂಗಳಂತಹರ ಜತೆಯೆ, ಕೇವಲ ತಾವು ತಮ್ಮ ದೇಶದ ಶದ ನೆವದಲ್ಲಿ ಸ್ವಾರ್ಥ ಸಾಧಿಸುವ, ನಿರಪರಾಧಿಗಳ ಕೊಲೆಗೈಯ್ಯುವ ಕಟುಗರೂ ಉಂಟೆಂಬುದನ್ನು ಕಾಣಿಸುತ್ತಾರೆ. ಕರ್ತವ್ಯಕ್ಕೆ ನಿರತಳಾಗಿ ಜೀವನದಲ್ಲಿಯೇ ಎಂದೂ ಹೆದರಿ ಓಡದ ವಾಂಗಳಿಗೆ ತೋರಿ, ಕರ್ತವ್ಯದರಿವಿಲ್ಲದೆ ಧೈರ್ಯ ಕಳೆದುಕೊಂಡು ದಿಕ್ಕುಗಾಣದೆ ಓಡುವ ಚೀನಿಯರ ಅಸಹಾಯಕ ಕರುಣಾಜನಕ ದೃಶ್ಯವನ್ನು ಬಗೆಗಾಣಿಸುತ್ತಾರೆ. “ವೆಗ್ಗಗ ಏರ್ಪಾರ ಅಪಘಾತ...ಕೂಸಿನ ಸುಸಮಾಚಾರ ತಗೊ” ಎಂದು ಎಚ್ಚರಿಸುವ ವಾಂಗಳ ದೃಷ್ಟಿಯಲ್ಲಿ, ವೆಗ್ಗನು ಈ ಹೋರಾಟದಲ್ಲಿ ಅರ್ಪಿತವಾಗುವ ಬಲಿ; ಹೋರಾಟ ಕೊನೆಗೊಮ್ಮೆ ನಿಂದ ಮೇಲಾದರೂ ಬದುಕಿ ಬಾಳಬೇಕಾದವರ ಕುರುಹು ಈ ಕೂಸು. ಮಾನವನು ವಿನಾಶದೆಡೆಗೆ ಸಾಗಿದಾಗ್ಯ ಹೇಗಾದರೂ ಅವನನ್ನುಳಿಸಿಕೊಳ್ಳುವ ಪ್ರಯತ್ನ ಆಶೆಗಳ ಫಲವಾಗಿ ಜನ್ಮಿಸುವ ನವಸೃಷ್ಟಿಯ ಸಂಕೇತವಿದು ಮಗು. ಅಂತೆಯೇ ಅದನ್ನು ಉಳಿಸಿಕೊಳ್ಳಹೇಳುವಳು ವಾಂಗಳು. ಗಾಯಗೊಂಡು ಪ್ರಜ್ಞೆತಪ್ಪಿಬಿದ್ದ ಜಪಾನೀ ಸೈನಿಕನಲ್ಲಿ ಅವಳು ಕಾಣುವದು ವೈರಿಯನ್ನಲ್ಲ; ಅಸಹಾಯನಾಗಿ ಬಿದ್ದ ಮಾನವನನ್ನು. ಜಪಾನೀಯನೆಂದು ತಿಳಿದರೂ ದ್ವೇಷವಿಲ್ಲ ಅವನಿಗಾಗಿ. ಬದುಕಿಸಲೆಳಸುತ್ತಾಳೆ. ಮಾಡಿದ ತಪ್ಪಿಗೆ ತಾನೇ ಬಲಿಯಾಗಿ ಬಿದ್ದ ತಪಿತಸ್ಥನನ್ನೂ ಉಪಚರಿಸುವ. ಒಳ್ಳೆಯ ಮಾರ್ಗದಲ್ಲಿ ಮುನ್ನಡೆಸುವ ಮೃದುಹೃದಯವಿದೆ ವಾಂಗಳಲ್ಲಿ. ಮೇಲು-ಕೀಳು, ಹೆಚ್ಚು-ಕಡಿಮೆಗಳ ಮರೆತು, ನಮ್ಮವರು-ಪರರು ಎಂಬುದನ್ನು ಇಲ್ಲದಾಗಿಸಿ, ನಾವೆಲ್ಲ ಒಂದು, ನಾವೆಲ್ಲ ಮಾನವರು- ಎಂಬ ವಿಶಾಲತೆ ತಲೆಯೆತ್ತಬೇಕಾಗಿದೆ ಇಂದು. “ಮನೆಯನ್ನು ಮರಳಿ ಕಟ್ಟಬಹುದು....ಕಷ್ಟ.” ಎಂಬ ವಾಂಗಳ ಮಾತಿನಲ್ಲಿ, ಒಂದು ಊರು ಹಾಳಾದರೆ ಇನ್ನೊಂದನ್ನು ಕಟ್ಟಬಹುದು, ಒಂದು ದೇಶ ಬಿದ್ದರೆ ಮತ್ತೆ ಎತ್ತಿ ಹಿಡಿಯಬಹುದು; ಆದರೆ ಇಡೀ ಮಾನವತೆಯೆ ನುಚ್ಚುನೂರಾಗಿ ಕೆಳಬಿದ್ದರೆ ಎತ್ತಿಹಿಡಿಯುವುದೆಂತು- ರಕ್ಷಿಸುವದೆಂತು? ಎಂಬ ಪ್ರಶ್ನೆ ಅವಳಲ್ಲಿ ಒಡಮೂಡಿದುದನ್ನು ಕಾಣುತ್ತೇನೆ. ಅಣೆಕಟ್ಟು ಅವಳಿಗೆ ಮಾನವತೆಯ ಪ್ರತೀಕವಾಗಿದೆ.

‘ಒಂದೆಡೆಗೆ ಹೀನ ದೀನ ದುರ್ಬಲರು—ಇನ್ನೊಂದೆಡೆ ಪ್ರಚಂಡ ಅಸುರೀಶಕ್ತಿ’ ಇವುಗಳ ಹೋರಾಟದಲ್ಲಿ, ನಿಸರ್ಗದ ಸಹಾಯದಿಂದ ದೀನ ದುರ್ಬಲರ ಉಳಿಸಿಕೊಳ್ಳುವ ವಿಚಾರ ವಾಂಗಳಿಗೆ. ಅಂತೆಯೆ ಅಣೆಕಟ್ಟಿನ ಬಾಗಿಲ ತೆರೆದು ಪ್ರಚಂಡಪ್ರವಾಹಕ್ಕೆ ದಾರಿ ಮಾಡಿ, ವೈರಿಗಳ ತಡೆಯುವ ವಿಚಾರ ಅವಳದು. ಈ ಮೊದಲು ಅವಳೆಷ್ಟು ಯೋಚಿಸಿರಬಹುದೋ! ಅನ್ಯಾಯ—ನ್ಯಾಯ, ಸತ್ಯ—ಅಸತ್ಯಗಳ ಹೋರಾಟದಲ್ಲಿ ಸತ್ಯ ನ್ಯಾಯಗಳಿಗೆ ಗೆಲುವಿಲ್ಲವೆಂಬುದು ಅವಳಿಗೆ ಹೊಳೆದಿದೆ. ಶಕ್ತಿ ಸಂಪತ್ತುಗಳ ರಾಜ್ಯದಲ್ಲಿ ಸತ್ಯನ್ಯಾಯಗಳಿಗೆ ಎಡೆಯಿಲ್ಲವೆಂದು ತಿಳಿದಿದೆ. ಅಂತೆಯೆ ಹೇಗಿದ್ದರೂ ನಾಶವಿದೆಯೆಂಬ ನಿರ್ಧಾರ ಅವಳ ಮನದಲ್ಲಿ ಮೂಡಿದೆ. ಎಪ್ಪತ್ತು ವರುಷದ ಹಣ್ಣು ಮುದುಕಿ, ಅನ್ಯಾಯ ಅಸತ್ಯಗಳ ವಿರುದ್ಧ ಯುದ್ಧಸನ್ನದ್ಧಳಾಗುತ್ತಾಳೆ. ವೈರಿಗಳ ಮೇಲಿನ ದ್ವೇಷದಿಂದಲ್ಲ; ತನ್ನ ವಂಶದ ಒಂದೇ ಒಂದು ದೀಪ, ವೆಗ್ಗನ ಮಗು-ನಾಳೆಯ ನೂತನ ಜಗದ ಅಂಕುರ-ಉಳಿಯಲೆಂಬ ಆಶೆಗಾಗಿ. ವಾಂಗಳ ವಿರೋಧ ಪ್ರವಾಹದೊಡನೆ ಒಂದುಗೂಡಿ ಮಾಯವಾದರೂ ಮಾಯದ ಸರೆ ಹರಿದಿದೆ. ಎಚ್ಚರುಗೊಳಿಸಿದೆ.

ಒಟ್ಟಾರೆ ‘ವಿರೋಧ’ ಒಂದು ಉತ್ತಮವಾದ, ವಿಶ್ವತತ್ತ್ವವನ್ನು ಪ್ರತಿಪಾದಿಸುವ ಕತೆ. ಮಾನವತೆಯನ್ನು ಎತ್ತಿ ತೋರುವ ಉತ್ತಮ ಕಲಾಕೃತಿ. ಕಥಾವಸ್ತುವೆಷ್ಟು ಉಚ್ಚತಮವಾದುದೊ, ಅದನ್ನು ವಿವರಿಸುವ ಬಗೆಯೂ ಅಷ್ಟೇ ಸಹಜ ಸ್ವಾಭಾವಿಕ ಸುಂದರವಾಗಿದೆ. ಅಂತೆಯೆ ಓದುಗರ ಅಂತರಾಳ ಹೊಕ್ಕು, ಬಗೆ ಕದಡಿ ಮನದಲ್ಲಿ ಅಚ್ಚೊತ್ತುತ್ತದೆ ಮಾನವತೆಯ ಮುದ್ರೆಯನ್ನು. ಇಂತಹ ಒಳ್ಳೆಯ ಅನುವಾದಿತ ಕತೆಗಳು ಕನ್ನಡದಲ್ಲಿ ಬಂದಷ್ಟು ಕಡಿಮೆಯೆ.

ತಾಯಿಯ ಕರುಳು

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಲೇಖಕರು ಶ್ರೀ. ಅ. ನ. ಕೃಷ್ಣರಾಯರು. ಪ್ರಕಾಶಕರು ಮ. ಆನಂದ ಬ್ರದರ್ಸ್, ಬೆಂಗಳೂರು.

ಇಸ್ಪೀಟು ಆಟದ ಜಾಲದಲ್ಲಿ ಸಿಲುಕಿದ ಬ್ಯಾಂಕ್ ಗುಮಾಸ್ತೆ ವೆಂಕಟರಾಯನ ಎರಡನೆಯ ಹೆಂಡತಿ ಸಾವಿತ್ರಿ. ಈ ಆಟದ ಚಟಕ್ಕೇ ಅವನ ಮೊದಲನೆಯ ಹೆಂಡತಿ ಆಹುತಿಯಾದಳು. ಸಾವಿತ್ರಿ ಅವನನ್ನು ಸೇರಿದಾಗಿನಿಂದಲೂ ಅವನ ಈ ದುರಭ್ಯಾಸವನ್ನು ಹೋಗಲಾಡಿಸಲು ಮಾಡಿದ ಪ್ರಯತ್ನಗಳು ನಿಷ್ಫಲವಾದುವು. ಒಂದು ಸಲ, ಬ್ಯಾಂಕಿನಿಂದ ಉಪಯೋಗಿಸಿದ ಐದು ನೂರು ರೂಪಾಯಿಯ ವಿಪತ್ತಿನಿಂದ ಗಂಡನನ್ನು ಪಾರುಮಾಡಿದಳು; ಆದರೆ ಎರಡನೆಯ ಸಲ ಬಂದ ಕುತ್ತಿನಿಂದ ತಪ್ಪಿಸಲು ಅವಳಿಗೆ ಅಸಾಧ್ಯವಾಯಿತು. ಈ ಸಮಯದಲ್ಲಿಯ ಇವಳ ಅಲೆದಾಟ ಬಹು ಕರುಣಾಜನಕವಾಗಿದೆ. ಇದರಿಂದ ವೆಂಕಟರಾಯನು ಮೂರು ವರುಷ ಕಾಲ ಜೈಲಿನ ಶಿಕ್ಷೆಗೆ ಗುರಿಯಾದ.

ಗಂಡನೊಂದಿಗಿದ್ದಾಗ ಸಾವಿತ್ರಿಗೆ ನೆರೆಯವರಿಂದ ಹೆಚ್ಚು ಸಮಾಧಾನವೂ, ನೆರವೂ ದೊರೆಯುತ್ತಿತ್ತು. ಪೂರ್ವಜನ್ಮದಲ್ಲಿ ತಾಯಿಯಾಗಿದ್ದಳೇನೋ ಎಂಬಂತೆ ಆಗ ಸಾವಿತ್ರಿಗೆ ಬಹಳ ನೆರವನ್ನಿತ್ತ ವಾಸುದೇವರಾಯರ ಹೆಂಡತಿ ಜೀವಕ್ಕ, ಸಾವಿತ್ರಿಯ ಮೊದಲನೆಯ ಹೆರಿಗೆಗೆ ಮಾಡಿದ ಸಹಾಯ ಮುಂತಾದುವು ಸಾವಿತ್ರಿಯ ಸೋದರತ್ತೆಯವರಿಂದಲೂ ಸಿಕ್ಕಿದ್ದಿಲ್ಲ. ಜೀವಕ್ಕನ ಉಪದೇಶವೇ ಸಾವಿತ್ರಿಯ ಮುಂದಿನ ಜೀವನಕ್ಕೆ ತಳಹದಿಯಾಯಿತು

ಗಂಡನು ಜೈಲುಸೇರಿದ ಮೇಲೆ, ಗವೀಪುರದ ವಿಸ್ತರಣದಲ್ಲಿ ಬಹುದೂರ ಒಂದು ಸಣ್ಣ ಗುಡಿಸಲಿನಲ್ಲಿ ಇರಲು ನಿಶ್ಚಯಿಸಿದಳು ಸಾವಿತ್ರಿ. ಚಿಕ್ಕವರಾದ ನರಸಿಂಹ, ಸರೋಜರೊಂದಿಗೆ ಮುಂದಿನ ಜೀವನವನ್ನು ಸಾಗಿಸಲು, ಕಂಟ್ರಾಕ್ಟುದಾರರಾದ ವೆಂಕಟಾಚಾರ್ಯರ ಹೆಂಡತಿ ಚೊಕ್ಕಮ್ಮನವರು ಸಹಾಯವನ್ನಿತ್ತರು. ಸುಬ್ಬಯ್ಯ, ರಂಗಮ್ಮ, ಸಂಗೀತೋಪಾಧ್ಯಾಯಿನಿ ಅಂಬುಜಮ್ಮ ಇವರುಗಳು ಸಾವಿತ್ರಿಗೆ ಅನೇಕ ರೀತಿಯಲ್ಲಿ ನೆರವಾದರು. ಜೈಲಿನಿಂದ ವೆಂಕಟರಾಯ ಹೊರಬರುವಾಗ, ಅಲ್ಲಿ ನಡೆದ ಅಪೆಂಡಿಸೈಟಿಸ್ ಆಪರೇಷನಿನಿಂದಲೇ ಬಹಳ ಹಣ್ಣಾಗಿದ್ದ. ಸಾವಿತ್ರಿಯ ಗುಣವನ್ನು ಕಂಡು ಮರುಗಿದ ವೆಂಕಟಾಚಾರ್ಯರು, ವೆಂಕಟರಾಯನಿಗೆ ತಮ್ಮ ಕಚೇರಿಯಲ್ಲಿ ಕೆಲಸವನ್ನಿತ್ತರು; ಆದರೆ ಸಾವಿತ್ರಿಯ ಜೀವನ ದುಃಖಮಯವಾಗಬೇಕೆಂದು ದೇವರ ಎಣಿಕೆಯಾದುದರಿಂದ, ಮತ್ತೆ ಅಪೆಂಡಿಸೈಟಿಸ್ ಬೇನೆ ಕಾಣಿಸಿಕೊಂಡು ಎರಡನೆಯ ಸಲ ಚಿಕಿತ್ಸೆ ನಡೆದಾಗ, ಇವರೆಲ್ಲರನ್ನೂ ಅನಂತದುಃಖದಲ್ಲಿ ಕೆಡವಿ ವೆಂಕಟರಾಯ ತನ್ನ ಇಹಲೋಕದ ಯಾತ್ರೆಯನ್ನು ಮುಗಿಸಿದ.

ಸ್ವಕಷ್ಟದಿಂದ ಸಾವಿತ್ರಿ, ನರಸಿಂಹ–ಸರೋಜರನ್ನು ಬೆಳೆಸಿದಳು. ಅವರು ದೊಡ್ಡವರಾದರು. ನರಸಿಂಹ ಬಿ. ಎ. ಪ್ಯಾಸಾಗಿ ಪ್ರೊಬೇಷನರಿ ಅಮಲ್ದಾರನಾದ. ಸುಬ್ಬಯ್ಯ, ರಂಗಮ್ಮ ಸಲಹೆಯಂತೆ ಅವನಿಗೆ ಮಂಡ್ಯದಲ್ಲಿ ಸರಸುವೊಂದಿಗೆ ಮದುವೆಯು ಆಯಿತು. ಅವನಿಗೆ ಮಂಡ್ಯಕ್ಕೆ ವರ್ಗವಾದುದರಿಂದ ಸಾವಿತ್ರಿ, ನರಸಿಂಹನು ತನ್ನಿಂದ ದೂರವಾದುದಕ್ಕೆ ಮರುಗಿದಳು. ಸರಸು ಮನೆಗೆ ಬಂದನಂತರ ಅವನೂ ಅವಳೂ ತೋರುತ್ತಲಿದ್ದ ಅನಾದರಣೆ, ಮನೆಯಲ್ಲಿಯ ರಗಳೆ—ಹೆಚ್ಚಾದುದರಿಂದ, ಸಾವಿತ್ರಿಗೆ ಜೀವನದಲ್ಲಿ ಜುಗುಪ್ಸೆ ಉಂಟಾಯಿತು. ಅಣ್ಣ ಮಂಡ್ಯಕ್ಕೆ ಹೋದ ನಂತರ ತಾಯಿಯು ಆಡುತ್ತಲಿದ್ದ ಬೇಸರದ ಬಿರುನುಡಿಗಳ ಸರಿಯಾದ ಅರ್ಥಮಾಡಿಕೊಳ್ಳಲಾರದೆ ತಾನು ಆತ್ಮಹತ್ಯೆ ಮಾಡಿಕೊಂಡು ಸಾಯುವುದು ಒಳಿತೆಂದು ನಿರ್ಧರಿಸಿದಳು ಸರೋಜ. ದೊಡ್ಡವಳಾಗಿ ವಿದ್ಯೆ ಕಲಿತು ಮದುವೆ ಬೇಡವೆಂದು ಹಟ ಹಿಡಿದಿದ್ದ ಸರೋಜಳು, ಒಂದು ದಿನ ಸಂಗೀತ ಪಾಠ ಮುಗಿಸಿಕೊಂಡು ಹಿಂದಿರುಗುವಾಗ ತಾಯಿ ಆಡಿದ ಚುಚ್ಚುಮಾತನ್ನು ಸಹಿಸಲಾರದೆ, ಬಾವಿಯಲ್ಲಿ ಬಿದ್ದು ಮಡಿದಳು.

ಅತ್ತ ಅಗಲಿದ ಮಗ, ಇತ್ತ ಮಡಿದ ಮಗಳು ಇವರಿರ್ವರಿಂದ ದೂರಾದ ಸಾವಿತ್ರಿಗೆ ಜಗತ್ತೇ ಶೂನ್ಯಮಯವಾಯಿತು. ಅವಳು "ಮಳೆ ಮೋಡಗಳು ಕವಿದು, ಆಕಾಶದಲ್ಲಿ ಗುಡುಗು ಮಿಂಚುತ್ತಿರುವಾಗ ಮನೆ ಬಿಟ್ಟು ಹೊರಟು ಬಿಟ್ಟಳು. ಆದರೆ ಎಲ್ಲಿಗೆ? ಹೋಗುವುದೆಲ್ಲಿಗೆ ?...."

ಹೀಗೆ ಸಾವಿತ್ರಿಯ ಜೀವನ ಕೊನೆಗಂಡಿತು. ತಾಯಿಯಾದ ಸಾವಿತ್ರಿಯ ಕರುಳು ಕೊನೆಯವರೆಗೂ ಮಿಡಿಯಿತು. ಕೊನೆಗೆ ಮಿಡಿಯುತ್ತಲೇ ನಂದಿತು. ಇದೀಗ ಕಥಾವಸ್ತು.

ಇದೊಂದು ಸಾಮಾನ್ಯ ಜೀವನ ಚಿತ್ರ. ಸಮಾಜದ ಮತ್ತು ಸಂಪ್ರದಾಯದ ನಿಯಮಗಳಲ್ಲಿ ಸಿಕ್ಕು, ಪತಿಯನ್ನೇ ದೈವವೆಂದು ನೆನೆದು ಆತನ ತಪ್ಪುಗಳಲ್ಲೂ ದೈವಸ್ವರೂಪವನ್ನು ಕಂಡು, ಕೊನೆಯವರೆಗೂ ತನ್ನ ಶೀಲವನ್ನು ಕಾಯ್ದುಕೊಂಡ ಸಾವಿತ್ರಿ—ನಿಜವಾ

ಸಾವಿತ್ರಿಯೇ ಸರಿ. ಇವಳ ಜೀವನ ಆದರ್ಶಮಯ, ಇವಳ ತಾಯಿಯ ಕರುಳಿನ ಜೀವನಕ್ಕೆ ಇತರ ತಾಯಂದಿರುಗಳು ನೀರೆರೆಯುತ್ತಾರೆ. ಜೀವಕ್ಕ, ರಂಗಮ್ಮ, ಚೊಕ್ಕಮ್ಮ ಇವರಲ್ಲಿ ನಾವು ಕಾಣುವುದು ಹಿಂದೂ ಸಮಾಜದ ತಾಯಂದಿರ ಚಿತ್ರಗಳನ್ನೆ!

ಸಾವಿತ್ರಿಯ ಬಾಳು ವೆಂಕಟರಾಯನೊಂದಿಗೆ ಒಂದು ದಿನವಾದರೂ ಸುಖದಾಯಕವಾಗಿರಲಿಲ್ಲ. ಆದರೂ ಅದರಲ್ಲಿಯೇ ತನ್ನ ಸುಖವಿದೆಯೆಂದು ಜೀವನವನ್ನು ತೃಪ್ತಿಯಿಂದ ಕಳೆದ ದಿವ್ಯಜೀವಿ ಸಾವಿತ್ರಿ. ಅವಳ ಎರಡು ಮಕ್ಕಳು ನರಸಿಂಹ-ಸರೋಜರು. ಇವರಿರ್ವರಿಂದಲೂ ಅವಳಿಗೆ ಸುಖ ದೊರೆಯಲಿಲ್ಲ.

ಇದೊಂದು ಮಹಾತಾಯಿಯ ಪೂರ್ಣಚಿತ್ರ. ಕನ್ನಡ ಸಹೃದಯ ವಾಚಕರ ಕರುಳು, ಈ ತಾಯಿಯ ಸೌಮ್ಯ ಋಜುಮಾರ್ಗದ, ಸಾಮಾನ್ಯ ಜೀವನ ಚಿತ್ರವನ್ನು ಕಂಡು ಮಿಡಿಯದಿರದು. ಇಲ್ಲಿಯ ಸಂಭಾಷಣಾರೀತಿ, ವರ್ಣನೆಯ ಹೊಳಪುಗಳು, ಆದ್ಯಂತವಲ್ಲಿಯೂ ತುಂಬಿ ತುಳುಕುತ್ತಿರುವ ಕರುಣಾಜನಕ ದೃಶ್ಯಗಳು, ಓದುಗರ ಕಣ್ಣಲ್ಲಿ ನೀರು ಉಕ್ಕಿಸದಿರಲಾರವು.

" ತಾಯಿಯ ಕರುಳು " ನಿಜವಾಗಿಯೂ ಎಲ್ಲ ತಾಯಂದಿರೂ ಓದಲೇಬೇಕಾದ—ಹೆಣ್ಣು ಹೃದಯವನ್ನು ಚಿತ್ರಿಸುವ-ಕಾದಂಬರಿ.

———— o ————

ಸಾದರ ಸ್ವೀಕಾರ

★

೫೩. **ಆದರ್ಶ ಮಹಿಳೆಯರು** (ಜೀವನಪರಿಚಯ ಸಂಕಲನ) ಲೇಖಕರು ಶ್ರೀ. ಬಿ. ಪದ್ಮನಾಭ ಸೋಮಯಾಜಿ, ವಿದ್ವಾನ್ ಅವರು. ಪ್ರಕಾಶಕರು ಮಂಗಳೂರು ಟ್ರೇಡಿಂಗ್ ಅಸೋಸಿಯೇಷನ್ ಲಿ. ಮಂಗಳೂರು. ಕ್ರೌ. ೮. ೧೧೨ ಪುಟಗಳು. ಬೆಲೆ ೧-೦-೦.

೫೪. **ಅರಿಯೊಳು** (ಎರಡು ನಿಳ್ಗತೆಗಳು). ಬರೆದವರು ಶ್ರೀ. ಕುಲಕರ್ಣಿ ಬಿಂದುಮಾಧವರು. ಬಾದಾಮಿಯ ಶಾಂತಿಸಾಹಿತ್ಯಮಾಲೆಯ ೩ ನೆಯ ಪುಷ್ಪ. ಕ್ರೌ. ೮. ೧೨೪ ಪುಟಗಳು. ಬೆಲೆ ೧-೪-೦

೫೫. **ಸೆಲ್ಫ್ ರಿಯಲೈಝೇಶನ್** (ಇಂಗ್ಲಿಷ್ ದ್ವೈಮಾಸಿಕ) ಅಮೇರಿಕೆಯ ಕ್ಯಾಲಿಫೋರ್ನಿಯಾದಲ್ಲಿ ಹೊರಡುವ ಭಾರತೀಯ ಆಧ್ಯಾತ್ಮಿಕ ತತ್ತ್ವಜ್ಞಾನ ಪ್ರಚಾರಕ ಪತ್ರಿಕೆಯಿದು. ಸಂಪಾದಕರು ಶ್ರೀಮತ್ ಪರಮಹಂಸ ಯೋಗಾನಂದರು ೨೮೦ ಸ್ಯಾನ್ ರ್‍ಯಾಫೆಲ್ ಅವಿನ್ಯು, ೩೧ ಕ್ಯಾಲಿಫೋರ್ನಿಯಾ ; ಯು. ಎಸ್. ಎ

೫೬. MARRIAGE (ಭಾರತೀಯ ವಿವಾಹ ಸಂಸ್ಥೆಯ ವಿಚಾರಚರ್ಚೆ) ಬರೆದವರು ಶ್ರೀ. ರಾಮು ಕೇಶವ ರಾನಡೆ LL. M. ಅವರು. ಪುಣೆಯ ಇಂಡಿಯನ್ ಲೀಗಲ್ ಫಿಲಾಸಫಿ ಸಿರೀಜ್‌ನಲ್ಲಿ ಪ್ರಕಟವಾದುದು. ೧ ನೆಯ ಭಾಗ. ಕ್ರೌ. ೮.೫೬. ಪುಟಗಳು. ಬೆಲೆ ೧-೨-೦

೫೭. **ಬಡವರ ಬಾಪೂಜಿ ಅಥವಾ**

ಗಾಂಧೀಜಿ (ಪದ್ಯಮಯ ಗ್ರಂಥ). ಲೇಖಕರು ಮತ್ತು ಪ್ರಕಾಶಕರು ಶ್ರೀ. ಎ. ಕೃಷ್ಣಭಟ್ಟರು, ಸತ್ಯನಾರಾಯಣ ಹೈಸ್ಕೂಲ್, ಪೆರ್ಲ. ದ. ಕ. ಜಿಲ್ಲಾ. ಫೂ. ಕ್ಯಾ. ೮. ೯೪ ಪುಟಗಳು, ಬೆಲೆ ೦-೧೨-೦.

೫೮. ಮುಂಬಯಿ ಮೊಗವೀರ ವ್ಯವಸ್ಥಾಪಕ ಮಂಡಳಿಯ ನಲವತ್ತೇಳನೆಯ ವಾರ್ಷಿಕ ವರದಿ. ಡೆ. ೮. ೫೨ ಪುಟಗಳು.

ಮುಂಬಯಿಯಲ್ಲಿರುವ ಹಲವು ಕನ್ನಡಿಗರ ಸಂಸ್ಥೆಗಳಲ್ಲಿ ಹೆಚ್ಚು ಸುಸಂಘಟಿತವಾಗಿ ಸಮಾಜಸೇವೆಯನ್ನು ಮಾಡುತ್ತ ಈ ಮೊಗವೀರ ವ್ಯವಸ್ಥಾಪಕ ಮಂಡಳಿಯು ಜನತೆಯ ಆಕರ್ಷಣೆಗೂ ಪ್ರಶಂಸೆಗೂ ಪಾತ್ರವಾಗಿದೆ. ಇಂತಹ ವಿಧಾಯಕ ಕಾರ್ಯ ಮಾಡುವ ಸಂಸ್ಥೆಗಳಿಂದಲೇ ನಾಡು ಒಳ್ಳೆಯ ದಿನಗಳನ್ನು ಕಾಣಬಹುದು.

೫೯. **ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ** (ಸಾಹಿತ್ಯ ಮತ್ತು ಜೀವನ ಭಾಗ ೨). ಲೇಖಕರು ಶ್ರೀ. ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್ ಬೆಂಗಳೂರು, ಕ್ರೌ. ೮. ೧೩೦ ಪುಟಗಳು. ಬೆಲೆ ೧-೮-೦.

೬೦. **ಹೆಣ್ಣಿನ ಕಣ್ಣು** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ರಾ. ವೆಂ. ಶ್ರೀನಿವಾಸ. ಪ್ರಕಾಶಕರು

ಹಂಸ ಸಾಹಿತ್ಯ ಲಿಮಿಟೆಡ್, ಮೈಸೂರು. ಕ್ರೌ. ಅ. ೨೦೩ ಪುಟಗಳು. ಬೆಲೆ ೧-೧೫-೦

೬೧. **ನಾಗಚಂದ್ರನ ಕಾವ್ಯಗಳು** (ಕವಿಕೃತಿ ವಿಮರ್ಶಾತ್ಮಕ ಗ್ರಂಥ). ಲೇಖಕರು ಮತ್ತು ಪ್ರಕಾಶಕರು ಶ್ರೀಮಾನ್ ಡಿ. ವಿ. ಶೇಷಗಿರಿರಾಯರು ಎಂ. ಎ. ಪ್ರಥಮದರ್ಜೆ ಕಾಲೇಜು, ತುಮಕೂರು. ಕ್ರೌ. ಅ. ೧೧೨ ಪುಟಗಳು. ಬೆಲೆ ೧-೮-೦

೬೨. **ಶ್ರೀಚೆನ್ನಕೇಶವ ಅಂತಃಪುರ ಗೀತೆ** (ಸಚಿತ್ರ ಕವನ ಸಂಗ್ರಹ) ಬರೆದವರು **ಶ್ರೀಮಾನ್ ಡಿ. ವಿ. ಜಿ. ಅವರು.** ಪ್ರಕಾಶಕರು ಕಾವ್ಯಾಲಯ, ಮೈಸೂರು. ಕ್ರೌ. ಅ. ೧೩೨ ಪುಟಗಳು. ಬೆಲೆ ೩-೮-೦.

೬೩. **ಭೂಗರ್ಭಯಾತ್ರೆ** (ಅನುವಾದಿತ ಕಥಾಸಂಕಲನ) ಮೂಲ ಕತೆಗಾರರು ಮಿ. ಜೂಲ್ಸ್‌ವೆರ್ನ್, ಅನುವಾದಕರು **ಶ್ರೀಮಾನ್ ಎಂ. ಗೋಪಾಲಕೃಷ್ಣ ಅಡಿಗರು.** ಮೈಸೂರಿನ ಕಾವ್ಯಾಲಯದ ಪ್ರಕಟನೆ. ಕ್ರೌ. ಅ. ೧೬೦ ಪುಟಗಳು. ಬೆಲೆ ೧-೧೨-೦.

೬೪. **ನೀತಿಚಿಂತಾಮಣಿ** (ನೈತಿಕ ಕಥಾಸಂಕಲನ ಭಾಗ ೩). ಬರೆದವರು ದಿವಂಗತ ಎಂ. ಎಸ್. ಪುಟ್ಟಣ್ಣನವರು. ಕಾವ್ಯಾಲಯದ ಪ್ರಕಟನೆ. ಕ್ರೌ. ಅ. ೮೪ ಪುಟಗಳು. ಬೆಲೆ ೦-೧೪-೦.

೬೫. Planned Under Graund Organisation (ಪರಿಚಯಾತ್ಮಕ ಕಿರುಹೊತ್ತಗೆ). ಪ್ರಕಾಶಕರು ದಿ ಡೈರೆಕ್ಟರೇಟ್ ಆಫ್ ಪಬ್ಲಿಸಿಟಿ, ಗವರ್ನ್‌ಮೆಂಟ್ ಆಫ್ ಬಾಂಬೆ. ಕ್ರೌ. ಅ. ೧೪ ಪುಟಗಳು.

ಕಮ್ಯೂನಿಸ್ಟ್ ಪಕ್ಷದ ಕೂಟಯಂತ್ರವನ್ನು ತಿಳಿಹಲು ಪ್ರಕಟವಾದುದು.

೬೬. **ಉಡುಪಿಯ ಕಲಾವೃಂದದ** ಆರನೆಯ ವರ್ಷದ ವರದಿ. ಕಾರ್ಯದರ್ಶಿ ಶ್ರೀ. ಉ. ಜನಾರ್ದನಾಚಾರ್ಯರು, ಶ್ರೀ. ಚಂದ್ರೇಶ್ವರ ದೇವಾಲಯ, ಉಡುಪಿ. ಡೆ. ಅ. ೧೨ ಪುಟಗಳು.

೬೭. ಶ್ರೀಸಂತ ಮಹಾರಾಜ ಬಾಳೇಕುಂದ್ರಿ ಅವರ ಚರಿತ್ರೆ (ಸಚಿತ್ರ ಜೀವನ ಚರಿತ್ರೆ). ಬರೆದವರು ಶ್ರೀಮಾನ್ ಕೃಷ್ಣರಾವ್ ವಿನಾಯಕರಾವ್ ಗೋಕಾಕ, ಸವಣೂರು. ಪ್ರಕಾಶಕರು ಶ್ರೀ. ಶ್ರೀಪಾದ ಗೋಪಾಳರಾವ್ ಬಾಳೇಕುಂದ್ರಿ ಬಿ. ಎ., ಎಲ್ ಎಲ್. ಬಿ ವಕೀಲರು, ಮ್ಯಾನೇಜಿಂಗ್ ಟ್ರಸ್ಟಿ ಶ್ರೀ ದತ್ತ ಸಂಸ್ಥಾನ, ಬೆಳಗಾಂವಿ. ಡೆ.ಅ. ೨೬+೬೪೬ ಪುಟಗಳು ಬೆಲೆ ೮-೦-೦.

೬೮. **ಪ್ರಾಥಮಿಕ ಶಿಕ್ಷಣ** (ಮಾಸಪತ್ರಿಕೆಯ ೯ನೆಯ ಸಂಪುಟದ ೧-೨ ಸಂಚಿಕೆ). ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಆರ್ ವಿ. ದೇಸಾಯಿ, ಪ್ರಿನ್ಸಿಪಾಲ್ ಟ್ರೈ.ಕಾ. ಫಾರ್ ಮೆನ್ ಮತ್ತು ಶ್ರೀಮತಿ ವೈ. ಡಿ. ನಾಡ ಕರ್ಣಿ, ಲೇಡಿ ಸೂಪರಿಂಟೆಂಡೆಂಟ್ ಟಿ. ಡಬ್ಲ್ಯು. ಟಿ. ಧಾರವಾಡ, ಕ್ರೌ. ೪ ದ ೪ ಪುಟಗಳು. **ವಾರ್ಷಿಕ ಚಂದಾ** ೪ ರೂ ಈ ಸಂಚಿಕೆಯ **ಬೆಲೆ** ೦-೧೨-೦.



೬೯. **ಶವದ ಮನೆ** (ಕಥಾಸಂಕಲನ) ಬರೆದವರು 'ಚದುರಂಗ' ಬೆಂಗಳೂರು ಶಾರದಾ ಸಾಹಿತ್ಯಮಾಲೆಯ ೧೦ ನೆಯ ಕಿರಣ. ಕ್ರೌ. ಅ. ೧೦೮ ಪುಟಗಳು ಬೆಲೆ ೧-೪-೦.

೭೦. **ಎದಿರೇಟು** (ಸ್ವತಂ ಸಾಮಾಜಿಕ ಕಾದಂಬರಿ). ಬರೆದವ ಶ್ರೀ. ನಾಡಿಗೇರ ಕೃಷ್ಣರಾಯರು. ಮೇಲೆ ಶಾರದಾ ಸಾ. ಮಾಲೆಯ ೧೧ನೆ ಕಿರಣ. ಕ್ರೌ. ಅ. ೧೪೦ ಪುಟಗಳು ಬೆಲೆ ೧-೮-೦.

೭೧. **ಸ್ವಪ್ನಸೃಷ್ಟಿ** (ಸ್ವತಂ ಕಾದಂಬರಿಯ ೧ ನೆಯ ಭಾಗ). ಬರೆ ವರು 'ಕಲ್ಯಾಣ ಸುಂದರ'. ಪ್ರಕಾಶಕ ಕೆ. ಎಲ್. ನಾರಾಯಣ ಅಂಡ್ ಬ್ರದರ್ ಪುಸ್ತಕ ವ್ಯಾಪಾರಿಗಳು, ಸುಭೇದಾ ಛತ್ರಂ ರೋಡು, ಬೆಂಗಳೂರು. ಕ್ರೌ. ೧೭೮ ಪುಟಗಳು. ಬೆಲೆ ೧-೧೨-೦.

೭೨. **ಪ್ರಣಯಪರ್ಶನ** (ನಾಟ ಸಂಕಲನ) ಲೇಖಕರು ಶ್ರೀಮಾ ಅಮ್ಮೆಂಬಳ ಶಂಕರನಾರಾಯಣ ಪ್ರಕಾಶಕರು, ಸಾಹಿತ್ಯಾಂಜಲಿ ಗ್ರಂ ಮಾಲಾ, ಆನಂದಾಶ್ರಮ, ಕೋಟೆಕಾ ದ. ಕ. ಜಿಲ್ಲಾ. ಕ್ರೌ. ಅ. ೮೮ ಪುಟಗ ಬೆಲೆ ೧-೮-೦.

೭೩. **ಕನ್ನಡ ಕುಮಾರ** ಸಂಭ (ಮಹಾಕವಿ ಕಾಲಿದಾಸನ ಕಾವ್ ಪದ್ಯಾನುವಾದ) **ಅನುವಾದಕ** ಶ್ರೀ. ಅಮ್ಮೆಂಬಳ ಶಂಕರನಾರಾಯ ಸಾಹಿತ್ಯಾಂಜಲಿ ಗ್ರಂಥಮಾಲಾ, ಆನ ದಾಶ್ರಮ, ಕೋಟೆಕಾರ— ದ.ಕ. ಜಿಲ ಕ್ರೌ.ಅ. ೭೪ ಪುಟಗಳು. **ಬೆಲೆ** ೧-

೭೪ **ಮಹಾವೀರ** (ಕನ್ನಡ ಮಾಸಪತ್ರಿಕೆ) ಸಂಪಾದಕರು ಶ್ರೀಯುತರುಗಳಾದ ಶ್ರೀರಂಗ, ನೆರಂಗ, ಪಿ. ವಾಸುದೇವ ಪ್ರಕಾಶಕರು ಶ್ರೀ. ನೆಗಳೂರ ರಂಗನಾಥ, ಸವಿತಾ ಪ್ರಕಾಶನ, ಸುಭಾಸ ಬಿಲ್ಡಿಂಗ್, ಧಾರವಾಡ. ಡೆ. ೮. ೪೮ ಪುಟಗಳು. ವಾ. ಚಂ. ೮ ರೂಪಾಯಿ; ಬಿಡಿ ಸಂಚಿಕೆಗೆ ೦-೧೨-೦.

ಧಾರವಾಡದಲ್ಲಿ ಈ ಮೊದಲು ಪ್ರಕಟವಾಗುತ್ತ ಕೆಲಕಾಲ ತಡೆದು ನಿಂತಿದ್ದ 'ನರಸಿಂಹ' ಪತ್ರಿಕೆಯ ಹೊಸ ವ್ಯವಸ್ಥೆ, ಹೊಸ ಆಕಾರಗಳಿಂದ 'ಮಹಾವೀರ' ಎಂಬ ಹೆಸರಿನಿಂದ ಹೊರಟಿದೆಯೆಂಬುದು ಸಂಪಾದಕರ ನಿವೇದನದಿಂದ ಗೊತ್ತಾಗುತ್ತದೆ. ಸಂಪಾದಕರು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಹೆಸರು ಪಡೆದವರು. ಆರ್ಥಿಕ ಅನುಕೂಲತೆಯನ್ನೂ ಭದ್ರವಾಗಿ ಮಾಡಿಕೊಂಡು ಹೊರಟಿರುವ ಈ ಪತ್ರಿಕೆಯ ಭವಿಷ್ಯ ಶುಭದಾಯಕವಾಗಿ, ಕನ್ನಡ ನಾಡು-ನುಡಿಗಳ ಸೇವೆ ಮಾಡುತ್ತ ಬಹುಕಾಲ ಬಾಳಲಿ.

೭೫. ERANDGAON (Story of violence and Terror) ಇದು ಕೂಡ ಕಮ್ಯುನಿಸ್ಟ್ ಪಕ್ಷದವರ ವಿಧ್ವಂಸಕ ಚಟುವಟಿಕೆಯ ಪರಿಚಯ ಮಾಡಿಕೊಡಲು ಹೊರಟ ಕಿರುಹೊತ್ತಿಗೆ. ಪ್ರಕಾಶಕರು ದಿ ಡೈರೆಕ್ಟರೆಟ್ ಆಫ್ ಪಬ್ಲಿಸಿಟಿ, ಗವರ್ನಮೆಂಟ್ ಆಫ್ ಬಾಂಬೆ. ಕ್ರೌ. ೮. ೩೨ ಪುಟಗಳು.

೭೬ YOGODA (ಇಂಗ್ಲಿಷ್ ತ್ರೈಮಾಸಿಕ) ಸಂಪಾದಕರು ಬ್ರಹ್ಮಚಾರಿ ಶ್ರೀಪ್ರಕಾಶ. ಪ್ರಕಾಶಕರು. ಶ್ರೀ. ಇಂದಿರಾನಾಥ ಸೇಠ ಬಿ. ಎಲ್. ಯೋಗೋದಾ ಸತ್‌ಸಂಗ, ಯೋಗೋದಾ-ಮಠ, ದಕ್ಷಿಣೇಶ್ವರ, ಪೋ. Ariadaha, 24 ಪರಗಣಾ, ಬಂಗಾಲ ಕ್ರೌ. ೮. ೩೨ ಪುಟಗಳು. ವಾ. ಚಂ. 3-0-0.

೭೭. **ಜೀವನ** (ಮಾಸಪತ್ರಿಕೆಯ ಸಂಸ್ಕೃತಿ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ಮಾಸ್ತಿ ವೆಂಕಟೇಶಯ್ಯಂಗಾರ್, 'ಜೀವನ' ಕಾರ್ಯಾಲಯ, ಬಸವನ ಗುಡಿ, ಬೆಂಗಳೂರು ೪. ಕ್ರೌ. ೪ದ ೮೨ ಪುಟಗಳು. ಬೆಲೆ ೧-೦-೦.

ಭಾರತ ಮತ್ತು ಕರ್ನಾಟಕ ಸಂಸ್ಕೃತಿಗಳನ್ನು ಕುರಿತು ಬರೆದ ಬೇರೆ ಬೇರೆ ಲೇಖಕರ ಬರೆಹಗಳೂ ಕವನಗಳೂ ಇದರಲ್ಲಿ ಅಡಕವಾಗಿವೆ. ಸಂಗ್ರಾಹ್ಯವಾದ ಸಂಚಿಕೆಯಿದು.

೭೮. **ಕರ್ನಾಟಕ ವೈಭವ** (ವಾರಪತ್ರಿಕೆಯ ಭಾರತೀಯ ಸ್ವಾತಂತ್ರ್ಯ ವಿಶೇಷ ಸಂಚಿಕೆ).

ಶ್ರೀಮಾನ್ ನಾಯಕರವರ ಸಂಪಾದಕತ್ವದಲ್ಲೀಗ ಹೊರಡುತ್ತಿರುವ ಈ ವಾರಪತ್ರಿಕೆ, ಕನ್ನಡಿಗರಿಗೆ ಸಾಕಷ್ಟು ಪರಿಚಯುದ್ದು. ಈ ವಿಶೇಷ ಸಂಚಿಕೆಯು ಲೇಖನ ವೈವಿಧ್ಯದಿಂದ ಕೂಡಿದ್ದು ವಾಚನೀಯವಾಗಿದೆ.

೭೯. **ಅಶೋಕ** (ಸೈಕ್ಲೊಸ್ಟೈಲಿನ ಸಹಾಯದಿಂದ ಪ್ರಕಟವಾಗುವ ವಾರಪತ್ರಿಕೆಯ ಸ್ವಾತಂತ್ರ್ಯ ಸಂಚಿಕೆ). ಸಂಪಾದಕರು ಶ್ರೀ. ಕೆ. ವಿ. ಸುಬ್ಬಣ್ಣ ಮತ್ತು ಎಂ. ಡಿ. ಸುಬ್ಬರಾವ್, ಶ್ರೀ ಪಿ. ಎಸ್. ರಾಮಪ್ಪ. ಅಶೋಕ ನಿಲಯ ಹೆಗ್ಗೋಡು (ಸಾಗರ – ಶಿವಮೊಗ್ಗಾ).

ಹೊಸ ಕನ್ನಡ ರೆಕಾರ್ಡುಗಳು

ಸಂಗೀತ : ಕುಮಾರ ಸ್ವಾಮಿ ಬೆಳ್ಳಾರಿ

N 25847 { ಕಲ್ಯಾಣ ಬಸವಣ್ಣ — ಸ್ವಕೃತ
ಒಂದೆ ಸಾಕು ನೆನೆವ ಮನಕೆ — ,,

ಶ್ರೀ ಬಸವರಾಜ ರಾಜಗುರು

N 25944 { ಜಗವ ಸುತ್ತಿಪುದು ಕಾಫಿ. ಕವಿ : ಶ್ರೀ ಬಸವೇಶ್ವರ ವಚನ
ಎನ್ನ ಕಾಯದ ಕತ್ತಲೆಯ ಭೈರವಿ. ಅಕ್ಕಮಹಾದೇವಿ ,,

ಕಮಲಾಬಾಯಿ ವಿಜಾಪುರಕರ

N 25945 { ವೇಣುಲೀಲಾ ಗೋಪಿವೃಂದ ಎಚ್. ಬಿ. ಕೊಣ್ಣೂರ್‌ಕೃತ
ಪಾವನಾ ನೃಕಾಯ ಕಾಣೊ ,, ,, ,,

ಶ್ರೀ ಭೀಮಸೇನ ಜೋಶಿ

N 25946 { ವಿಣಾಧರೆ ಶಾರದೆ — ಬೆಟಗೇರಿ ಕೃಷ್ಣಶರ್ಮಕೃತ
ನಿನಗೇಕೆ ಸಂಮೋದ ಮರಾಳಾ ,, ,, ,,

HIS MASTER'S VOICE

THE GRAMOPHONE CO. LTD., CALCUTTA, BOMBAY, MADRAS, DELHI.

ಕಿರ್ಲೋಸ್ಕರ
ಸೆಂಟ್ರಿಫ್ಯೂಗಲ್ ಪಂಪುಗಳು



ಯು. ಸಿ. ಟೈಪ್ ಪಂಪ್

ಒಕ್ಕಲುತನ ಮತ್ತು ಕಾರಖಾನೆಯ ಉದ್ಯೋಗಗಳಿಗೆ ಅತ್ಯಂತ ಉಪಯುಕ್ತವಾದುದು. ಬಾಳಿಕೆ, ಭದ್ರವಾದ ರಚನೆ ಮತ್ತು ಆಕೃತಿ ಇವುಗಳ ಮೂಲಕ ದಿನದಿನಕ್ಕೂ ಬೆಳೆಯುತ್ತಿರುವ ಲೋಕಪ್ರಿಯತೆಯನ್ನು ಪಡೆಯುತ್ತಲಿವೆ ಈ ಪಂಪು.

ಬಿ. ಎಸ್. ಎ. ಪಂಪು

ಅತ್ಯಂತ ಆಧುನಿಕ ಹಾಗು ಯಾಂತ್ರಿಕ ರಚನೆಯ ಮೇರೆಗೆ ತಯಾರಿಸಲ್ಪಟ್ಟಿರುವದು. ಗಿರಾಕಿಗೆ ಕಳಿಸುವ ಮುನ್ನ ಪ್ರತಿಯೊಂದು ಪಂಪನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತದೆ. ಈ ಪಂಪುಗಳು ಔದ್ಯೋಗಿಕ ಹಾಗು ಒಕ್ಕಲುತನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತವೆ.



ಕಿರ್ಲೋಸ್ಕರ ಬಂಧುಗಳು ಲಿ: ಕಿರ್ಲೋಸ್ಕರವಾಡಿ

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar - 2651 50.

ಜಯಂತಿ

JAYANTI

ಸಂಪುಟ ೧೩]   ೧ನೆಯ ಅಕ್ಟೋಬರ್ ೧೯೫೦   [ಸಂಚಿ



ಭಾರತದ ಹೊಸ ರಾಷ್ಟ್ರಸಭಾಧ್ಯಕ್ಷ ಬಾಬು ಪುರುಷೋತ್ತಮದಾಸ ಟಂಡನರು.

೮
ಅಣೆ
ಅಕ್ಟೋಬರ್
೧೯೫೦

ಜಯಂತಿ

JAYANTI

ಅಕ್ಟೋಬರ್ ೧೯೫೦

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ

ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು— ಶ್ರೀ. ಎಲ್.ಜಿ. ಬೇಂದ್ರೆ

ಪ್ರಕಾಶಕರು— ಶ್ರೀ ಎಸ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೫೦	ಒಂದು ಸಲ
½	,,	,,	೨೭	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

——o——

Rates for Advertising in Jayanti

Full	Page	Rs.	50	Single Ins.
Half	,,	,,	27	,,
Quarter	,,	,,	15	,,
1/8	,,	,,	8	,,

Concession rates for long term Contracts.
For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೩ | ೧ ನೆಯ ಅಕ್ಟೋಬರ್ ೧೯೫೦ | ಸಂಚಿಕೆ ೩

ಈ ಸಂಚಿಕೆಯಲ್ಲಿ:

ಬಾಪೂಜಿ (ಕವನ)
ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ ೧೬೬

ಉದ್ಗಾರಕ (ಕವನ)
ಶ್ರೀ. ಚಿದಾನಂದ ಬಿ. ಎ., ಬಿ. ಟಿ. ಧಾರವಾಡ ೧೬೬

ನಮ್ಮಲ್ಲಿಯ ಆಹಾರ ನಿಯಂತ್ರಣ ಶಾಸನ (ಸಂಪಾದಕೀಯ)
ಸಂಪಾದಕರು ೧೬

ನಗೀಗೆ ನೇವೀದ್ಯ
'ನಕಲೀ ನಾರಾಯಣಾಚಾರ್ರು' ೧೮೦

ವಧೂವಧ (ಸಣ್ಣಕತೆ)
ಶ್ರೀ. ದೇವಳಿ ಕೃಷ್ಣರಾಯರು ಬಿ ಎ ವಿಜಾಪುರ ೧೮೧

ಕನ್ನಡ ಕಂಪನಿ ನಾಟಕಗಳು (ಸಾಹಿತ್ಯಚರಿತ್ರೆ)
ಪ್ರೊ. ರಾ. ಯ. ಧಾರವಾಡಕರ ಎಂ. ಎ. ಧಾರವಾಡ ೧೮೫

ತೀರ್ಪು (ಕಥನಕವನ)
ಶ್ರೀ. ಚೆನ್ನವೀರ ಕಣವಿ ಬಿ. ಎ. (ಆನರ್ಸ್) ಧಾರವಾಡ ೧೯

ರಾಷ್ಟ್ರೀಕರಣ (ಆರ್ಥಿಕವಿಚಾರ)
ಶ್ರೀ. ಮೋಹನ ಜಾಲೀಹಾಳ ಬಿ. ಕಾಮ್. ಕಿ. ವಾಡಿ ೧೯

ಜ್ಯೋತಿಷಿ (ಲಲಿತಪ್ರಬಂಧ)
ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ, ಬಿ. ಟಿ. ಧಾರವಾಡ ೧೯

ನಾನು ಕಂಡ ನಾಡು (ಪ್ರವಾಸಪ್ರಬಂಧ)
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೨೦

ಕಣ್ಣುಮುಚ್ಚಾಲೆ (ಅನುವಾದಿತ ಕತೆ)
ಶ್ರೀ ಎಸ್. ಸುಬ್ಬರಾಮಯ್ಯ ಬಿ. ಎ. (ಆನರ್ಸ್) ೨೦

ಸಕ್ಕರೆ ಮತ್ತು ಸಬಲ ಮದ್ಯಸಾರ (ವೈಜ್ಞಾನಿಕ)
ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ. ೨೧

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಶ್ರೀನಿವಾಸಶರ್ಮಾ 'ವಿದ್ವಾನ್' ೨೧

ಪುಸ್ತಕವಿಮರ್ಶೆ
ಶ್ರೀ. ಬಿ. ಸಿ. ಎಸ್. ರಾವ್ ೨೨

ಸಾದರ ಸ್ವೀಕಾರ ೨೨

ಮುಂಬಯಿಯಲ್ಲಿ ಜಯಂತಿಯ ಏಜಂಟರು

ವಿ. ಆರ್. ಪ್ರಭು ನ್ಯೂಜ್ ಏಜಂಟ್

ದಾದರ (ಜಿ. ಐ. ಪಿ.)

ವರ್ಷ ೧೩ ಸಂಚಿಕೆ ೫

ಜಯಂತಿ

ಅಕ್ಟೋಬರ್ ೧೯೫೦

ಬಾಪೂಜಿ !

ಶ್ರೀ ಎಸ್. ಎಸ್. ಬಸುಪಟ್ಟದ, ಎಮ್. ಎ.
ಗುಳೇದಗುಡ್ಡ

★

ಮಾನವತೆ ಮೈಗೊಂಡ ಓ ಮೂರ್ತಿ ಮೋಹನನೆ,
ಕರ್ತವ್ಯ— ಕರಮುರಾ ಓ ಪುಣ್ಯ ಬೆಳಸೇ,—
ಗುಣಕೆ ಗಣ್ಯತೆ ತಂದೆ ಶ್ರೀಗಂಧಿ ಪಾರ್ಶ್ವದಲಿ ;
ಭಾರತಕೆ ಬಾಪೂಜಿ ಭಾಗ್ಯನಿಧಿ ವಿಶ್ವದಲಿ
ಶಾಂತಿ—ಸತ್ಯಾಹಿಂಸೆ ಸುಗುಣಗಳ ತವಮೂರ್ತಿ
ಪುಣ್ಯಾದ್ರಿ ಶಿಖರದಾ ಧವಳ ಕಾಂತಿಯು ಕೀರ್ತಿ ;
ದೇಹದಾಸ್ಯದಲಿದ್ದ ನಿನಾತ್ಮ ತೇಜವದು
ವಿಶ್ವಾತ್ಮವಾಗಿಹುದು, ನಿತ್ಯಾತ್ಮವಾಗಿಹುದು.

ತನ್ನ ಗರ್ಭದೊಳಾಂತು ತವಪುಣ್ಯಸೌರಭವ
ಬಿಂದು ಬೀರಲಿ ಜಗದಿ ಹೊಸ ಯುಗದ ಹೊಸಮೊಗ್ಗು
ನಿತ್ಯತೆಯು ಗಬ್ಬದಲಿ ನಿನ್ನಮಲ ಶುಭಚರಿತೆ ;

ಯುಗಪುರುಷ ಬಾಪೂಜಿ ಹಿರಿದು ನಿನ್ನಯ ಸ್ಥಾನ,
ನೈತಿಕದ ತುತ್ತ ತುದಿ ನೀನಿಂತ ಆ— ಸ್ಥಾನ.

ಉದ್ಧಾರ

ಶ್ರೀ ಚಿದಾನಂದ, ಬಿ. ಎ., ಬಿ. ಟಿ. ಧಾರವಾಡ

★

'ಶ್ವೇತವರ್ಣಗಳೆ ಶ್ರೇಷ್ಠರು ಮಾನವರಲಿ; ಅವರ
ಜನ್ಮಸಿದ್ಧಾಧಿಕಾರವು ಜಗವನಾಳುವುದು'
ಎಂದು ಮಿಕ್ಕವರನ್ನು ಮೆಟ್ಟಿ ಶಸ್ತ್ರದ ಬಲದಿ,
ಅವರ ಅಸ್ಥಿಗಳಿಂದ ಜಗದ ಬಹು ಭಾಗದೊಳು
ಅಸ್ತಿಭಾರವ ಹಾಕಿ ಸಾಮ್ರಾಜ್ಯಗಳ ಕಟ್ಟಿ,
ಕೃಷ್ಣವರ್ಣದ ಜನರ ರಕ್ತರಂಜಿತವಾದ—
ಅವರ ನಿಟ್ಟುಸಿರ ಶಾಪಾವಿದ್ಧ—ಸಮೃದ್ಧ—
ಮಾದಕವಿಲಾಸದೊಳು ನಲಿಯುತಿರೆ ಬಿಳಿಯರು—

ಗಾಂಧಿಯೆಂಬಭಿಧಾನದಿಂದ ಭೂಮಿಗೆ ಬಂದು
ಆತ್ಮಶಕ್ತಿಯ ಮರೆದು ದಾಸ್ಯನೊಗವನು ಹೊತ್ತು
ಬಿಳಿಯರಿಗೆ ತಲೆಬಾಗಿ ಬಿದ್ದಿರುವ ಜನತೆಯನು

" ಕಪ್ಪು ಮೋಡದೊಳಿಲ್ಲವೆ ಗುಡುಗು ಮಿಂಚುಗಳು ?
ಆತ್ಮ ಪ್ರಜ್ಞೆಯ ತಾಳಿ ! ಎದ್ದೇಳಿ ! " ಎಂದು
ಉದ್ಧರಿಸಿದವ ನೀನು ! ನಮನ ನಿನಗಿಂದು !



ನಮ್ಮಲ್ಲಿಯ ಆಹಾರನಿಯಂತ್ರಣ ಶಾಸನ

ಸರಕಾರವು ಜನಹಿತದ ಉದ್ದೇಶವನ್ನಿರಿಸಿಕೊಂಡು—ವಿಶಿಷ್ಟ ಸಂದರ್ಭಗಳಲ್ಲಿ—ಕೆಲವೊಂದು ವಿಶಿಷ್ಟ ರೀತಿಯ ಶಾಸನಗಳನ್ನು ಮಾಡಬೇಕಾದುದು ಅವಶ್ಯವೆ. ಆದರೆ ಮಾಡಿದ ಶಾಸನಗಳು ಸುಪರಿಣಾಮಕರವಾಗಿ ಆಚರಣೆಯಲ್ಲಿ ಬರುವಂತ ಸರಕಾರದ—ಮೊದಲಿನಿಂದ ಕೊನೆಯ ವರೆಗಿನ—ಆಡಳಿತದಲ್ಲಿರುವ ಅಧಿಕಾರಿವರ್ಗವೂ ಜನತೆಯೂ ಜಾಗೃತಿ ವಹಿಸದೆ ಹೋದರೆ, ಬಹುಜನರ ಹಿತಸಾಧನೆಗೆಂದು ಹೊರಟ ಶಾಸನಗಳೇ ಬಹುಜನರಿಗೆ ಅಹಿತಕಾರಕಗಳಾಗಿ ಪರಿಣಮಿಸುವುವು. ಇದಕ್ಕೆ ಪ್ರತ್ಯಕ್ಷವಾದ ಉದಾಹರಣೆಯೆಂದರೆ, ನಮ್ಮ ಕೇಂದ್ರ ಸರಕಾರದ ಆಹಾರವಸ್ತು-ನಿಯಂತ್ರಣಶಾಸನ. ಈ ಶಾಸನವು ಇಂದು ಬಹುಜನರ ಬಾಳನ್ನು ಗೋಳಿಗೊಳಗಾಗಿಸಿದೆಯೆಂಬುದು ಎಲ್ಲೆಲ್ಲಿಯೂ ಕಂಡುಬರುವ ಸಂಗತಿ.

ಮೊನ್ನೆ ಮೊನ್ನೆ ನಡೆದ ನಾಸಿಕ ಕಾಂಗ್ರೆಸ್ ಅಧಿವೇಶನದಲ್ಲಿ, ಪ್ರಮುಖ ವಿಷಯವಾಗಿ ಅಲ್ಲದೆ ಹೋದರೂ ಆನುಷಂಗಿಕವಿಷಯವಾಗಿ ಈ ಆಹಾರ ನಿಯಂತ್ರಣಶಾಸನದ ವಿಚಾರದಲ್ಲಿ ಮಹತ್ತ್ವದ ಚರ್ಚೆ, ವಾದ-ವಿವಾದ ನಡೆಯಿತು. ಕೊನೆಗೆ ಇದನ್ನು ಪ್ರತಿನಿಧಿಗಳ ಮತಕ್ಕೂ ಇರಿಸಲಾಯಿತು. ಆದರೆ ಸೋಜಿಗದ ಮತ್ತು ವಿಷಾದದ ಸಂಗತಿಯೆಂದರೆ: ಇಂತಹ ಜೀವನಾವಿನ ವಿಷಯದ ಚರ್ಚೆಯ ಕಾಲದಲ್ಲಿಯೂ, ಕಾಂಗ್ರೆಸಿಗೆ ಬಂದಿದ್ದ ಸುಮಾರು ೨೦೦೦ ಪ್ರತಿನಿಧಿಗಳಲ್ಲಿ ೩೦೭ ಜನರು ಮಾತ್ರ ಸಭಾಮಂಟಪದಲ್ಲಿದ್ದರು. ಅಷ್ಟೇ ಜನರು ಮತದಾನ ಮಾಡಿದರು. ನಿಯಂತ್ರಣಕ್ಕೆ ಅನುಕೂಲ ಮತ ೧೯೫; ಪ್ರತಿಕೂಲ ಮತ ೧೧೭. ಎಲ್ಲ ಪ್ರತಿನಿಧಿಗಳೂ ಆಗ ಅಲ್ಲಿ ಇದ್ದುಬಿಟ್ಟಿದ್ದರೆ, ಈ ನಿಯಂತ್ರಣಶಾಸನದ ನಿರ್ಣಯದ ಗತಿ ಯಾವ ದಿಕ್ಕಿಗೆ ಬದಲಾಯಿಸುತ್ತಿದ್ದಿತೆಂಬುದನ್ನು ನೋಡಬಹುದಾಗಿತ್ತು.

ಮತ್ತೆ ಹೀಗೆನಿಸುವುದು: ಇದರಲ್ಲಿ ನೋಡಬಹುದಾದಂತಹದು ಏನಿದೆ? ಎಲ್ಲ ಪ್ರತಿನಿಧಿಗಳಿದ್ದು ಮತದಾನ ಮಾಡಿದ್ದರೂ ಈಗಿನ ಪ್ರಮಾಣದಲ್ಲಿಯೆ ನಿಯಂತ್ರಣಕ್ಕೆ ಅನುಕೂಲ ಮತಗಳು ಬೀಳಬಹುದಾಗಿತ್ತು. ಏಕೆಂದರೆ, ಈ ನಿಯಂತ್ರಣ ಶಾಸನವನ್ನು ಜೀವಂತವಾಗಿ ಇರಿಸುವುದರಲ್ಲಿ ಸ್ವಂತದ ಲಾಭ ಮಾಡಿಕೊಳ್ಳುವ ವ್ಯಕ್ತಿಗಳು ಹಲವು ಜನರಿದ್ದಾರೆ. ನಾಸಿಕ ಕಾಂಗ್ರೆಸಿಗಾಗಿ ಸೇರಿದ ಪ್ರತಿನಿಧಿಗಳಲ್ಲಿ, ಇಂತಹ ನಿಯಂತ್ರಣ ಶಾಸನಪ್ರಿಯ ವ್ಯವಹಾರಿಗಳ ಸಂಖ್ಯೆ ಕಡಿಮೆಯಾಗಿರಲಿಲ್ಲ. ಇವರಲ್ಲದೆ ಮೇಲಿನ ಸರಕಾರದಲ್ಲಿ
ರುವ ಮಹತ್ತ್ವದ ವ್ಯಕ್ತಿಗಳನ್ನು ತುಂಬ ಆದರದಿಂದ ಕಾಣು
ಜನರೂ ಕೆಲವರಿರುವರು. 'ಮೇಲಿನವರಿಗೆ ಬೇಕಾಗಿದೆಯೆಂದ ಮೇ
ಇದ್ದು ಬಿಡಲಿ'—ಎಂದು ಕಣ್ಣುಮುಚ್ಚಿ ಒಪ್ಪಿಗೆ ಕೊಡುವ ಜ
ವಿದು. ಇವರನ್ನು ಬಿಟ್ಟರೆ ಮಿಕ್ಕವರಲ್ಲಿ ನಿಯಂತ್ರಣವನ್ನು ತೆಗೆದ
ತಮ್ಮ ಪರಿಸ್ಥಿತಿ ಇನ್ನೂ ಹೆಚ್ಚಿಗೆ ಎಲ್ಲಿ ಭೀಕರವಾಗುವುದೋ—ಎಂಬ ಸಂದಿಗ್ಧ ಮಾನಸರ ಸಂಖ್ಯೆಯೂ ಕೆಲವು ಹೊರಡುವುದು
ಅವರೂ ಅಂಜಂಜುತ್ತಲಾದರೂ ನಿಯಂತ್ರಣ ಶಾಸನಕ್ಕೆ ಅನು
ಕೂಲ ಮತ ಕೊಡುವವರೇ! ಇಂತಹರೆಲ್ಲರೂ ನಿಯಂತ್ರಣ
ಶಾಸನವನ್ನು ಎತ್ತಿ ಹಿಡಿಯುತ್ತಿರುವಾಗ, ನಿಯಂತ್ರಣವನ್ನು ತೆಗೆದ
ಹಾಕಿರೆಂಬ ಮಾತು ಬಹುಮತದಿಂದ ಪುರಸ್ಕೃತವಾಗಬೇ
ಹೇಗೆ?

ಇನ್ನು ನಿಯಂತ್ರಣಶಾಸನಕ್ಕೆ ವಿರೋಧಿಗಳಾಗಿ ಇರುವವರ
ಕೇವಲ ಈ ಶಾಸನವೇ ತಂದೊಡ್ಡಿರುವಂತೆ ಭಾಸವಾಗುವ ದುಷ್ಟ
ಪರಿಸ್ಥಿತಿಯಿಂದ ಸಂತಪ್ತರಾಗಿ ಆ ಭಾವನೆಯ ಆವೇಶದಲ್ಲಿ
ಅದನ್ನು ವಿರೋಧಿಸುತ್ತಿದ್ದಾರೆ ಹೊರತು, ಅದು ಹೋದರೆ ಒಳ್ಳೆ
ಪರಿಸ್ಥಿತಿಯನ್ನು ತಾವು ಕಂಡೇಕಾಣುವೆವೆಂಬ ಸಂಪೂರ್ಣವಾ
ತಿಳಿವಳಿಕೆಯಿಂದೇನೂ ಅಲ್ಲ. ಏಕೆಂದರೆ ಮಹಾತ್ಮಾ ಗಾಂಧಿಯವ
ಆದೇಶದಂತೆ ಉಪಸಂಹರಿಸಿಕೊಂಡಿದ್ದ ನಿಯಂತ್ರಣಶಾಸನವನ್ನು-ಆದರಿಂದುಂಟಾದ ವಿಷಮಪರಿಸ್ಥಿತಿಯ ಮೂಲಕ—ಸ್ವಲ್ಪ ಕಾ
ದಲ್ಲಿಯೇ ಮರಳಿ ಅಭಿಯೋಗಿಸಬೇಕಾಯಿತೆಂಬುದರ ಅನುಭ
ನಮಗೆಲ್ಲ ಇದೆ. ನಿಯಂತ್ರಣಶಾಸನದ ಅಭಿಯೋಗವಾದ ಮೇಲ
ಜನಜೀವನಕ್ಕೆ ಅನುಕೂಲ ಪರಿಸ್ಥಿತಿ ಉಂಟಾಗಿಲ್ಲವೆಂಬುದ
ನಮ್ಮ ಅನುಭವದ ಮಾತಾಗಿದೆ.

ಭಾರತದಲ್ಲಿಯ ಆಹಾರಪದಾರ್ಥಗಳ ಸಮಸ್ಯೆಯನ್ನು ಕೇವ
ಸರಕಾರದ ಶಾಸನವೂ ಬಿಡಿಸಲಾರದು; ಮಹಾಸಭೆ, ಮಹ
ಸಮ್ಮೇಳನಗಳ ಬಹುಮತದ ನಿರ್ಣಯಗಳೂ ಬಿಡಿಸಲಾರ
ಆಹಾರವಸ್ತುಗಳನ್ನು ಉತ್ಪಾದನಮಾಡುವ ಶ್ರಮಜೀವಿಗಳ ವರ
ದಲ್ಲಿಯೂ, ಹೇಗಾದರೂ ಮಾಡಿ ಅವುಗಳನ್ನು ಸಂಗ್ರಹಿ
ಲಾಭದಾಯಕ ವ್ಯಾಪಾರಮಾಡಬೇಕೆನ್ನುವ ಬಂಡವಾಳಗಾ
ರರಲ್ಲಿಯೂ ನಿಜವಾದ ರಾಷ್ಟ್ರೀಯ ಭಾವನೆ ಮೂಡಿದ
ನಮ್ಮಲ್ಲಿಯ ಆಹಾರಪದಾರ್ಥದ ಸಮಸ್ಯೆಯ ನಿವಾರಣೆ
ಆಗುವಂತಿಲ್ಲ.

ಇಂದು ಆಹಾರವಸ್ತುವಿದ್ದವರೆಲ್ಲ ತಮಗೆ ಹೆಚ್ಚಿಗೆ ಹ
ದುಡ್ಡು ಬಂದಾಗ ಅದನ್ನು ಮಾರಬೇಕೆಂದು ದಾರಿಕಾಯ
ಕುಳಿತುಕೊಳ್ಳುವರಲ್ಲದೆ, ಅವಶ್ಯವಿರುವವರಿಗೆ ಅನುಕೂಲವ
ಯೋಗ್ಯಬೆಲೆಗೆ ಸಿಕ್ಕುವುದರ ಕಡೆಗೆ ಲಕ್ಷ್ಯಕೊಡುತ್ತಿಲ್ಲ. ಜ
ಈ ಪಡಿಪಾಟಲದ ಉಪಯೋಗವನ್ನು ತಾವು ಮಾಡಿಕೊ
ಬೇಕೆಂದು, ಬಂಡವಾಳಗಾರರು ಆಹಾರವಸ್ತುವಿನ ಉತ್ಪಾದ

ದಷ್ಟು ಹೆಚ್ಚು ಹಣ ಕೊಟ್ಟು ಸಂಗ್ರಹಿಸಿ, ಅದರ ಮೇಲೆ ಂದಕ್ಕೆ ನಾಲ್ಕರಷ್ಟು ಲಾಭಮಾಡಿಕೊಳ್ಳುತ್ತಿರುವರೇ ಹೊರತು ನತೆಯ ಅನುಕೂಲದ ಕಡೆಗೆ ಲಕ್ಷ್ಯಕೊಡುತ್ತಿಲ್ಲ. ನಿಯಂತ್ರಣ ಾಸನ ಇಲ್ಲದೆ ಹೋದರೆ, ಈ ಅವರ ಮನಸ್ಥಿತಿಯಲ್ಲಿ ಬದಲಾವಣೆಯೇನೂ ಆಗುವಂತಿಲ್ಲ.

ಇನ್ನು ಈ ನಿಯಂತ್ರಣಶಾಸನವು ಇರುವುದರಿಂದಲೂ ಒಳ್ಳೆಯ ಸ್ಥಿತಿ ನಿರ್ಮಾಣವಾಗುವುದೆಂಬ ಆಶೆಯು ಇಲ್ಲ. ಜನಹಿತದ ದೃಷ್ಟಿಯಿಂದ ಈ ಶಾಸನ ಹೊರಟಿದೆಯಾದರೂ, ಆಡಳಿತದಲ್ಲಿರುವ ವರ ಅಜಾಗರೂಕತೆಯ ಮೂಲಕವೂ ಅತಾತ್ವಿಕವ್ಯವಹಾರದ ಮೂಲಕವೂ ಈ ಜೀವನವಿಧಾಯಕಶಾಸನ, ಜೀವನವಿಘಾತಕವಾಗಿ ರಿಣಮಿಸುತ್ತಿದೆ. ಆದುದರಿಂದ ಸರಕಾರವೂ ಜನತೆಯೂ ಕೂಡಿ ಾಮರಸ್ಯದಿಂದ ವಿಚಾರಮಾಡಿ, ಜನರಲ್ಲಿ ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸಿದಲ್ಲದೆ, ನಮ್ಮಲ್ಲಿಯ ಆಹಾರವಸ್ತುಗಳ ಸಮಸ್ಯೆಯ ಪರಿಹಾರವಾಗದೆಂಬುದನ್ನು ನಾವೆಲ್ಲರೂ ನಸಿನಲ್ಲಿಟ್ಟುಕೊಳ್ಳಬೇಕು.

ಜಯಂತಿಯ ಹೇಮಂತ ಸಂಚಿಕೆ

ಈ ಸಲ ಜಯಂತಿಯ ವಿಶೇಷ ಸಂಚಿಕೆಯನ್ನು ದೀಪಾವಳಿಗೆ ಹೊರಡಿಸದೆ, 'ಹೇಮಂತ ಸಂಚಿಕೆ' ಎಂಬ ಹೆಸರಿನಿಂದ ೧೯೫೧ ಯ ಜನವರಿ ೧ನೆಯ ತಾರೀಖಿಗೆ ಹೊರಡಿಸಬೇಕೆಂದಿದ್ದೇವೆ. ನವೆಂಬರ್ ಸಂಚಿಕೆಯು ದೀಪಾವಳಿ ವಿಶೇಷಸಂಚಿಕೆಯಾಗಿ ಹೊರಡದಿದ್ದರೂ, ಕೆಲವೊಂದು ವೈಶಿಷ್ಟ್ಯಗಳಿಂದ ಕೂಡಿ ದೀಪಾವಳಿ ಸಂಚಿಕೆಯಾಗಿ ಹೊರಡುವುದು. ಆದರೆ ಪುಟಸಂಖ್ಯೆ ಇದ್ದಷ್ಟೆ ಇರುವುದು. ಜಯಂತಿಯ ಅಭಿಮಾನಿವರ್ಗ ನಮ್ಮ ಈ ಮಾರ್ಪಾಡನ್ನು ಮನ್ನಿಸುವುದೆಂದು ನಮ್ಮ ಭರವಸೆ.

ಕೆ. ಇ. ಬೋರ್ಡ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸಗಳು

ಕಳೆದ ತಿಂಗಳ ಪೂರ್ವಾರ್ಧದಲ್ಲಿ ಧಾರವಾಡದಲ್ಲಿ, ಕೆ. ಇ. ಬೋರ್ಡ್ ಕಾಲೇಜಿನ ಸಂಚಾಲಕರ ಏರ್ಪಾಡಿನಂತೆ ಬೇರೆ ಬೇರೆ ವಿದ್ವಾಂಸರಿಂದ ಕನ್ನಡ ಸಾಹಿತ್ಯದ ವಿವಿಧ ವಿಷಯಗಳ ಮೇಲೆ ಉಪನ್ಯಾಸಗಳು ನಡೆದುವು. ಉಪನ್ಯಾಸಕ ವಿದ್ವಾಂಸರಲ್ಲಿ ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿ, ಪ್ರೊ. ಎಸ್. ಎಸ್. ಬಸವನಾಳ, ಪಂಡಿತ ಮ. ಪ್ರ. ಪೂಜಾರ, ಶ್ರೀ. ಬೆಟಗೇರಿ ಕೃಷ್ಣಶರ್ಮ, ಶ್ರೀ. ಎನ್. ಕೆ. ಕುಲಕರ್ಣಿ, ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಇವರು ಇದ್ದರು. ಇವರೆಲ್ಲ ತೆಗೆದುಕೊಂಡ ವಿಷಯಗಳೂ ಕನ್ನಡ ಸಾಹಿತ್ಯದ ಅಭ್ಯಾಸದ ದೃಷ್ಟಿಯಿಂದ ಮಹತ್ತ್ವದುವಾಗಿದ್ದುವು. ಈ ಉಪನ್ಯಾಸಗಳು ಬರೀ ಗಾಳಿಮಾತಾಗಿ ಹೋಗದೆ, ಬರೆಹದಲ್ಲಿ ರೂಪುಗೊಂಡು ಒಟ್ಟುಗೂಡಿ ಪ್ರಕಟವಾದರೆ, ಕನ್ನಡದ ಅಭ್ಯಾಸಿಗಳಿಗೆ ಒಂದು ಉಪಯುಕ್ತವಾದ ಗ್ರಂಥವು ದೊರೆತಂತಾಗುವುದು. ಉಪನ್ಯಾಸ ಮಾಲೆಯ ಏರ್ಪಾಡುಮಾಡಿದ ಸಂಸ್ಥೆಯವರೇ ಈ ಸಂಕಲನ ಗ್ರಂಥವನ್ನು ಪ್ರಕಟಿಸುವ ಹೊಣೆ ಹೊತ್ತರೆ ಅನುಕೂಲವಾದೀತು.

—ಸಂಪಾದಕರು

ಕನ್ನಡಿಗನ ಹಾಡು

'ಕನ್ನಡಿಗ'

ಭಾರತಕ್ಕೆ ಬಂದಿತಂತೆ ಸ್ವಾತಂತ್ರ್ಯದ ಹುಣ್ಣಿವೆ !
ಕನ್ನಡಿಗರಿಗೇನಿದೆ ಬರಿ ಕಂಬನಿಗಳ ಕಣ್ಣಿವೆ !
ಈ ಹಬ್ಬದ ಬರವಿಗಾಗಿ ನಾವು ದುಡಿದುದೆಷ್ಟು !
'ಹಬ್ಬ ಬಹುದು ಬಹುದು' ಎಂದು ಹಿಗ್ಗಿ ಮಿಡಿದುದೆಷ್ಟು!
ಆದರೇನು ನಮಗಿಲ್ಲವು ಸುಖವು ಎಳ್ಳಿನಷ್ಟು !
  ಭಾರತಕ್ಕೆ ಬಂದಿತಂತೆ ಸ್ವಾತಂತ್ರ್ಯದ ಹುಣ್ಣಿವೆ ! ೧
ಗೆಳೆಯರೆಂದು ನಂಬಿದವರೆ ತಿಂಬ ಹುಲಿಗಳಾದರು
ಹುಲಿಗಳೆಂದು ಮೊಳಗಿದವರೆ ಬಿಲದ ಇಲಿಗಳಾದರು,
ಬಲೆಗಳಲ್ಲಿ ಸಿಲುಕಿದ್ದರು ಬರಿದೆ ಗಳಹುತಿರುವರು!
  ಭಾರತಕ್ಕೆ ಬಂದಿತಂತೆ ಸ್ವಾತಂತ್ರ್ಯದ ಹುಣ್ಣಿವೆ! ೨
ಹಬ್ಬದಲ್ಲಿ ಪಲ್ಲಕ್ಕಿಯು ಹೊರುವುದೆಮ್ಮ ಪಾಲು—
ಕೇಳುವವರು ಯಾರು ಇಲ್ಲ ನೊಂದರೆಮ್ಮ ಕಾಲು !
ನಮಗೆ ಕರುಳ ಕುದಿತ; ಕುಡಿವುದಿನ್ನಾರೋ ಹಾಲು !
  ಭಾರತಕ್ಕೆ ಬಂದಿತಂತೆ ಸ್ವಾತಂತ್ರ್ಯದ ಹುಣ್ಣಿವೆ! ೩
ಗುಡುಗು ಕೇಳಿ ಮಳೆಯಾಗಲೆ ಸುರಿವುದೆಂದೆವು—
ನಮ್ಮ ಹೊಲವ ನಾವೆ ಬಿತ್ತಿ ಬೆಳೆವೆವೆಂದೆವು,
ಬಂಜೆ ಗುಡುಗು, ಮಳೆಗೆ ಪಿಡುಗು ! ಬರವೇ ಬರವು !
  ಭಾರತಕ್ಕೆ ಬಂದಿತಂತೆ ಸ್ವಾತಂತ್ರ್ಯದ ಹುಣ್ಣಿವೆ! ೪
ಭಾರತಕ್ಕೆ ಬಂದಿತಂತೆ ಸುಖ-ಶಾಂತಿಯ ಹುಣ್ಣಿವೆ !
ಕನ್ನಡಿಗರ ಮುಂದೆ ಮಾತ್ರ ಮುಳ್ಳು-ಕಲ್ಲು-ಮಣ್ಣಿವೆ !



(೧)

ಟೆಲಿಫೋನ್ ಗಂಟೆ.

' ಹಲ್ಲೋ '

' ಹಲ್ಲೋ, ಯಾರು ನೀವು ? '

' ನಾನು ಬಂಡೆಪ್ಪ. ನೀವ್ಯಾರು ? ಶೀಷಪ್ಪನವರೇನು ?

' ಹೌದು. ನಾನು ಶೀಷಪ್ಪ! '

' ದನಿಯು ಮೇಲಿಂದ ಯಾಕೋ ತಾವು ಶೀಷಪ್ಪ ಅಂತ ಅನಿಸವೊಲ್ಲದು.

' ಛೆ, ಛೆ, ನಾನು ಶೀಷಪ್ಪನೇ! '

' ಖಂಡಿತವಾಗಿ ? '

' ನಿಸ್ಸಂಶಯವಾಗಿ. '

ಸಂತೋಷ. ನನಗೊಂದು ೫೦ ರೂಪಾಯಿ ಸಾಲ ಬೇಕಾಗಿತ್ತು. '

' ಹೀಂಗs ! ಶೀಷಪ್ಪನವರು ಹೊರಗ ಹೋಗ್ಯಾರ. ಬಂದ ಮ್ಯಾಲ ತಿಳಸ್ತೀನಿ! '

* * *

(೨)

ಕುಡುಕ :—' ಏನ್ರಿ, ನಾ ಎಲ್ಲಿ ನಿಂತೇನಿ !

' ರಸ್ತೇದ ಮ್ಯಾಲ '

' ಆದಕs ನೋಡ್ರಿ, ನನಗದು— ಕಾಣಿಸವಲ್ಲದು.... ಈಗ ತಿಳೀತು. '

* * *

(೩)

ಕುಡುಕರೊಬ್ಬರು ತಮ್ಮ ಚಟವನ್ನು ಕಳೆದುಕೊಳ್ಳಲು ಸಾಧನ ನಡೆಸಿದ್ದರು.

" ಹ್ಯಾಂಗದ ನಿಮ್ಮ ಅನುಭವ ? " ಸ್ನೇಹಿತರು ಕೇಳಿದರು.

" ಬಹಳ ಕೆಟ್ಟ ಅನುಭವ! ಈಗ ಆರು ತಿಂಗಳಾತು. ಬರೇ ಅನ್ನ, ನೀರು ಈ ಎರಡರ ಮ್ಯಾಲs ಜೀವ ಹಿಡದೀನಿ; "

(೪)

ಇಬ್ಬರು ಕುಡುಕರು ಒಂದು ಹೋಟೆಲಿಗೆ ಹೋದರು – ಅವರಲ್ಲೊಬ್ಬ ತಮಗೆ ಬೇಕಾದದ್ದೇನು ಎಂಬುದನ್ನು ತಿಳಿಸಲು ಪ್ರಯತ್ನಮಾಡಿದ. ಆದರೆ ಅದು ವ್ಯರ್ಥವಾಯಿತು. ಆಗ ಜೊತೆಗಿದ್ದವನು ಹೇಳಿದ:—ನಮಗೆ ಎರಡು ಹೋಲಿಗಳಿದ್ದ ಒಂದು ಕಾಟು ಬೇಕು. "

ಮ್ಯಾನೇಜರ್ ಎಂದ :—" ಛೆ, ಹಾಗಿರಲಾರದು. ಕಾಟಿಗೆ ಹೋಲಿಗಳು ಹ್ಯಾಂಗಿದ್ದಾವು ? ನಿಮಗ ಎರಡು ಕಾಟುಗಳಿದ್ದ ಒಂದು ಹೋಲಿ ಬೇಕಾಗಿರಬೇಕು! "

ಇದು ಅವರಿಗೆ ಒಪ್ಪಿಗೆಯಾಗಿ ಅವರಿಬ್ಬರೂ ಒಂದೇ ಕಾಟಿನ ಮೇಲೆ ಮಲಗಿಕೊಂಡರು,

ಕೆಮ್ಲಿನ್ ಲಿಮಿಟೆಡ್. ಬೊಂಬಾಯಿ ೨೮

ತುಸು ಹೊತ್ತಿನ ಮೇಲೆ — ಅವರಲ್ಲೊಬ್ಬ :—"ಗಣ್ಯಾ, ನನ್ನ ಹಾಸಿಗಿಯೊಳಗ ಯಾರೋ ಇದ್ದಾರೋ ! "

ಇನ್ನೊಬ್ಬ:—" ನನ್ನ ಹಾಸಿಗೆಯೊಳಗೂ ಯಾರೋ ಇದ್ದಾರಪಾ ! "

" ಅವನ್ನ ಒದ್ದು ಹೊರಗ ಹಾಕಿದರ ಹ್ಯಾಂಗಾದೀತು ? "

" ಹಾಂಗs ಮಾಡೋಣ ! "

ಒಬ್ಬರನ್ನೊಬ್ಬರು ಒದೆದ ಸಪ್ಪಳ !

ಒಬ್ಬನು ಕೇಳುತ್ತ :— "ನಾನಂತೂ ಅವನ್ನ ಹೊರಗ ಹಾಕಿದೆ. "

ಇನ್ನೊಬ್ಬ :—"ಆದರ ನನಗ ಮಾತ್ರ ಸಾಧ್ಯ ಆಗಲಿಲ್ಲ. ನನ್ನs ಅಂವ ಹೊರಗ ಹಾಕಿದನಪಾ ! "

" ಹೀಂಗs ಹಾಕಿದರ ಹಾಕಿದ ನನ್ನ ಹಾಸಿಗೀಮ್ಯಾಲs ಬಂದು ಮಲಗಿಬಿಡು ! "

* * *

(೫)

" ನೀವು ಕಾರ್ಯದಕೌನ್ಸಿಲಿಗೆ ಆರಿಸಿ ಬಂದರೆ ಏನು ಮಾಡ್ತೀರಿ ? "

" ಆರಿಸಿ ಬರದಿದ್ದರೆ ಏನು ಮಾಡ್ತೀರಿ ? "

* * *

(೬)

ಒಬ್ಬ ಪರಪ್ರಾಂತದ ಪ್ರವಾಸಿಗ ಗೆರೆಸೊಪ್ಪೆಯನ್ನು ನೋಡಲು ಹೋಗಿದ್ದ. ಗೆರೆಸೊಪ್ಪೆಯವನೊಬ್ಬ ಇವನನ್ನು ಕೇಳಿದ :—" ತಡಸಲು ಅದ್ಭುತವಾಗಿಯಲ್ಲವೆ ? "

ಪ್ರವಾಸಿಗ ಆಶ್ಚರ್ಯಪಡದೆ ತಣ್ಣಗೆ ನಿಂತಿದ್ದ.

" ಲಕ್ಷಾವಧಿ ಗ್ಯಾಲನ್ನಿನಷ್ಟು ನೀರು ಒಂದೇ ಸವನೆ ಬೀಳುತ್ತಾ ಇರುತ್ತದೆ " ಅಲ್ಲಿಯವನೆಂದ-

ಆದರೂ ಪ್ರವಾಸಿಗ ಅಚ್ಚರಿಪಡಲಿಲ್ಲ.

" ಲಕ್ಷಾವಧಿ ಏಕೆ, ಕೋಟ್ಯಾವಧಿ ಗ್ಯಾಲನ್ ನೀರು ಧೋ ಧೋ ಎಂದು ಅಖಂಡವಾಗಿ ಸುರಿಯುತ್ತಾ ಇರುತ್ತದೆ " ಅಲ್ಲಿಯವನೆಂದ-

" ರಾತ್ರೀಕೂಡ?" ಪ್ರವಾಸಿಗ ಕೇಳಿದ

ವಧೂವಧ !

ಶ್ರೀ ಸೌ. ಕೃಷ್ಣರಾವ್, ಎಂ.ಎ.

★

ಮದುವೆಗಾಗಿ ವಧುವನ್ನು ಆರಿಸಬೇಕಾದುದು ಅವಶ್ಯಕ ಸಂಗತಿಯೆ. ಆದರೆ ಆರಿಸಬೇಕಾದವರು ಯಾರು ? ಆರಿಸಬೇಕಾದುದು ಹೇಗೆ? ಸಹೃದಯಿಯಾದ ಶ್ಯಾಮ, ತನ್ನ ವಧುವಿನ ಆಯ್ಕೆಯಿಂದ, ತುಚ್ಛ ತಿಳಿವಳಿಕೆಯ ಹಿರಿಯರನ್ನು ಚೆನ್ನಾಗಿ ಕಣ್ತೆರೆಸಿದ.

★

ವೆಂಕಟರಾಯರು ತಮ್ಮ ಚಿರಂಜೀವ ಶ್ಯಾಮನ ಸಲುವಾಗಿ ಬಿಟ್ಟುಬಿಡದೆ ಕನ್ಯಾಪರೀಕ್ಷೆ ಮಾಡುತ್ತಲೇ ಇದ್ದರು. ಮನೆಯವರೂ ತಾವೂ ಕೂಡಿಯೇ ಒಂದಿಲ್ಲೊಂದು ನೆವದಿಂದ, ಪರೀಕ್ಷೆ ಕೊಡಲು ಬಂದ ವಧುವನ್ನೂ ಅವಳ ಸಂಗಡದವರನ್ನೂ ವಿಧ-ವಿಚಿತ್ರ ಪ್ರಶ್ನೆಗಳ ಸುರಿಮಳೆಯಿಂದ ಸೋಲಿಸಿ, ಅಪ್ಪಣೆ ಕೊಡುತ್ತಲೂ ಇದ್ದರು. ವೆಂಕಟರಾಯರು ದೊಡ್ಡ ಜಹಾಗೀರುದಾರರು. ಅವರ ಶ್ರೀಮಂತಿಕೆಯ ಸೊಕ್ಕು ಅವರ ನಡತೆ-ಮಾತುಗಳಿಂದಲೇ ಎದ್ದು ಕಾಣುತ್ತಿತ್ತು. ಮನೆಯೆಲ್ಲವೂ ಅದೇ ವಾತಾವರಣದಿಂದ ತುಂಬಿತ್ತು. ಈ ವಾತಾವರಣಕ್ಕೆ ಹೇಸಿದವನೊಬ್ಬನೆಂದರೆ ಶ್ಯಾಮನೇ. ಒಳ್ಳೆಯ ಸುಸಂಸ್ಕೃತ. ಸಮಾಜದಲ್ಲಿಯ ಆಗು-ಹೋಗುಗಳನ್ನು ಮಮತೆಯ ದೃಷ್ಟಿಯಿಂದ ಕಂಡು ಅಭ್ಯಸಿಸಿದವ. ವಧೂಪರೀಕ್ಷೆಯಲ್ಲಿ ತಂದೆ ನಡೆಸಿದ ದಿಗ್ವಿಜಯ ಯಾಗವನ್ನು ನೋಡಿ ಅವನು ಹೇಸಿಕೊಂಡಿದ್ದ.

ಈ ಸಲ ಕನ್ಯಾಪರೀಕ್ಷೆ ೩೩ನೆಯ ಸಲ.

ವೆಂಕಟರಾಯರ ಪತ್ರದಂತೆ ಅಂದು ರವಿವಾರ, ವಧುವಿನ ತಂದೆ ಊರಿನಿಂದ ಹೆಂಡತಿಯೊಡನೆ ಮಗಳನ್ನು ಕರೆದುಕೊಂಡು ಬಂದಿದ್ದರು. ವಧುವನ್ನು ವೆಂಕಟರಾಯರ ಮನೆಗೆ ಕರೆದುಕೊಂಡು ಬಂದಾಗ, ಸಂಜೆ ೬ ಗಂಟೆಯಾಗಿತ್ತು. ಆಗಲೇ ವೆಂಕಟರಾಯರ ಮನೆಯವರೆಲ್ಲ 'ಕತ್ತಲೆಯಾದ ಮೇಲೆ ಏಕೆ ಕರೆದುಕೊಂಡು ಬಂದರು ! ಬೇಗ ಬರಲು ಹೇಳಿಕಳಿಸಿದರೂ ಬರಬಾರದೇಕೆ ? ' ಎಂದು ತಮ್ಮತಮ್ಮಲ್ಲಿ ಗುಜುಗುಜು ನಡೆಯಿಸಿದ್ದರು.

ಪಡಸಾಲೆಯಲ್ಲಿ ವಧೂಪರೀಕ್ಷೆಯು ಪ್ರಾರಂಭವಾಯಿತು. ಶ್ಯಾಮ ಗೋಡೆಗೆ ಆತುಕೊಂಡು ಯಾವುದೋ ವಿಚಾರದಲ್ಲಿ ಮಗ್ನನಾಗಿ ಕುಳಿತುಕೊಂಡಿದ್ದ. ವೆಂಕಟರಾಯ ಮತ್ತು ವಧುವಿನ ತಂದೆ ಖುರ್ಚಿಯ ಮೇಲೆ ಕುಳಿತುಕೊಂಡಿದ್ದರು. ವೆಂಕಟರಾಯರ ಪತ್ನಿ, ವಧುವಿನ ತಾಯಿ, ಮತ್ತೆ ಕೆಲ ಹೆಂಗಸರು ಒಳಗೆ ನಿಂತು ನೋಡುತ್ತಿದ್ದರು. ವಧುವು ಕೆಳಗೆ ಮುಖಮಾಡಿ ಕುಳಿತಿದ್ದಳು. ಅವಳ ತಾಯಿ " ಮೇಲೆ ಮುಖ ಮಾಡು; ಎಲ್ಲರೂ ನೋಡಲಿ ! " ಎಂದಳು. ನಾಚಿಗೆಯಿಂದಲೇ ಆ ವಧುವು ಅರ್ಧ ಮುಖ ಮೇಲೆ ಮಾಡಿದಳು.

ವೆಂಕಟರಾಯರ ಪ್ರಶ್ನೆ, ವಧುವಿನ ಉತ್ತರ:—

" ನಿನ್ನ ಹೆಸರೇನು ತಂಗೀ ? "

" ಶಾಂತಾ. "

" ಆಂ, ಕೇಳಿಸಲಿಲ್ಲ ! ಒದರಿ ಹೇಳು ! "

" ಶಾಂತಾ " ಎಂದು ಸ್ವಲ್ಪ ಜೋರಿನಿಂದ ಹೇಳಿದಳು. ಮುಖದ ಮೇಲೆ ಮೂಡಿದ ಬೆವರು ಒರಸಿಕೊಂಡಳು.

" ಶಿಕ್ಷಣವೆಷ್ಟಾಗಿದೆ ? "

" ಮುಲಕೀ ಪರೀಕ್ಷೆಯಾಗಿದೆ. "

"ಹಾಗಾದರೆ ಈ ವರ್ತಮಾನಪತ್ರವನ್ನು ಓದು ನೋಡುವಾ!"

" ಮುಲಕೀಪರೀಕ್ಷೆಯಾಗಿದ್ದ ಮೇಲೆ ಓದುವ ಅವಶ್ಯಕತೆ ಇದೆಯೇ ? " ಎಂದು ನಡುವೆಯೇ ಶ್ಯಾಮ ತಂದೆಗೆ ಕೇಳಿದ.

" ಎಂಥ ಹುಚ್ಚನೋ ನೀನು ? ಮೊನ್ನೆ ಬಿ. ಎ. ಪಾಸಾದ ಹುಡುಗಿ ಓದಿದ್ದನ್ನು ಕೇಳಲಿಲ್ಲವೇ ? ಎರಡು ನಾಲ್ಕು ನೆಟ್ಟಗೆ ಓದಲಿಲ್ಲ,.... .... ಶ್ಯಾಮೂ, ಇವೆಲ್ಲವೂ ಅವಶ್ಯವಾದುವುಗಳೇ. ಹುಡುಗಿ ತೊದಲಿಸುತ್ತಿದ್ದಳೆ ? "

ವಧುವು ಮೂರು-ನಾಲ್ಕು ನಿಮಿಷ ಓದಿದಳು. ಅಲ್ಲಲ್ಲಿ ತಪ್ಪು-ತಡೆಗಳಾಗುತ್ತಿದ್ದುವು—ಗಾಬರಿಯಿಂದ.

" ಮುಲಕೀಪರೀಕ್ಷೆ ಪಾಸಾಗಿದ್ದಾಳೆ ಅಂತೀರಿ. ಬಾಯಿ ಜಡವಿದ್ದಂತೆ ಕಾಣುತ್ತದೆಯೇನೋ ! " ಎಂದು ಶ್ಯಾಮನ ಕಿರಿಯ ಅಕ್ಕ ವಧುವಿನ ತಂದೆಯನ್ನು ಕುರಿತು ಕೇಳಿದಳು. ಅವರು ಏನು ಹೇಳಬೇಕೆಂದು ತೋಚದೆ ಸುಮ್ಮನೆ ಕುಳಿತರು.

" ತಂಗೀ, ನಿನಗೆ ಅಣ್ಣ-ತಮ್ಮಂದಿರೆಷ್ಟು ? " ವೆಂಕಟರಾಯರ ಪ್ರಶ್ನೆ.

" ಇಬ್ಬರು ಅಣ್ಣಂದಿರು, ಒಬ್ಬ ತಮ್ಮ. "

" ಹಾಡು ಕಲಿತಿರುವಿಯೇನು ? "

" ಇ.... ....ಲ್ಲ. "

" ಹಾಂ ! .... ಅದ್ಹೇಗೆ ! "

" .... "

ವಧುವಿನ ತಂದೆಯೇ ಹೇಳಿದರು. " ಮನೆಯಲ್ಲಿ ಹೆಂಡತಿ ಕೆಲ ವರ್ಷಗಳಿಂದ ಆಜಾರಿಯಿಂದ ಅಶಕ್ತಳಾಗಿದ್ದಾಳೆ. ಆದ್ದರಿಂದ ಮನೆಯ ಎಲ್ಲ ಕೆಲಸದ ಭಾರವೂ ಮಗಳ ಮೇಲೆಯೇ ಬಿದ್ದಿದೆ. ಒಂದೆರಡು ದೇವರ ಪದ ಕಲಿತಿದ್ದಾಳೆ ' ಈ ' ಪರೀಕ್ಷೆಗಳಿಗಾಗಿ. ಆದರ ಅಭ್ಯಾಸವೇನೋ ಮಾಡಿಲ್ಲ, ಕ್ಷಮಿಸಬೇಕು. ಉಳಿದ ಕೆಲಸ-ಬೊಗಸೆಗಳನ್ನೆಲ್ಲ ಚೊಕ್ಕಾಗಿ ಮಾಡುತ್ತಾಳೆ. "

" ಅವಳ ಕೆಲಸ-ಗಿಲಸ ನಮಗೆಲ್ಲಿ ಬೇಕಾಗಿದೆ ? ನಮ್ಮಲ್ಲಿ ಆಳುಜನ ಬೇಕಾದಷ್ಟು ತುಂಬಿದ್ದಾರೆ. ಶ್ಯಾಮನಿಗೆ ಸಂಗೀತ ಎಂದರೆ ಬಲು ಪ್ರೇಮ........ "



ಶ್ಯಾಮು ತಂದೆಯನ್ನು ತೀಕ್ಷ್ಣವಾಗಿ ನೋಡಿದ.

ವೆಂಕಟರಾಯರು ವಧುವಿಗೆ ಒಳಗೆ ಹೋಗಲು ಸಂಜ್ಞೆಮಾಡಿದರು. ಆವಳು ಎದ್ದು ಎಲ್ಲರಿಗೂ ನಮಸ್ಕರಿಸಿ ಒಳಗೆ ಹೋಗುವಾಗ, ಅವಳು ಜೋಲಿಹೊಡೆದಂತೆ ಕಂಡುಬಂದಿತು.

"ತಾಯಿಯಂತೆ ಮಗಳೂ ಕೂಡ ಅಶಕ್ತಳಿದ್ದಂತೆ ಕಾಣುವುದು" ಎಂದು ಒಳಮನೆಯ ಹೆಂಗುಸರು ಮತ್ತೆ ಗುಜುಗುಜು ನಡಿಸಿದರು.

"ಹಾಗೇನೂ ಇಲ್ಲ, ನಿನ್ನೆ ಒಂದೇಸವನೇ ರಾತ್ರಿಯೆಲ್ಲವೂ ೨೦೦ ಮೈಲು ಪ್ರವಾಸಮಾಡಿ ಬಂದದ್ದರಿಂದ ನಿದ್ದೆಯಿಲ್ಲ. ಹುಡುಗಿ ಅಶಕ್ತಳಿಲ್ಲ." ಎಂದು ಕನಿಕರದಿಂದ ವಧುವಿನ ತಾಯಿ ಹೇಳಿಕೊಂಡಳು,

ಮರುವಿನ ವಧುವಿನ ಮನೆಯವರೂ ಆವರೂ ಹೊರಟು ಹೋದರು. ಹೋದ ಮರುದಿನವೇ ಆವರ ಕೈಯಲ್ಲಿ ಪತ್ರ: "ವಧುವು ಒಪ್ಪಿಗೆಯಿಲ್ಲ!"

* * * *

ಮರುರವಿವಾರ ಮತ್ತೊಂದು ಕನ್ಯಾ ಪರೀಕ್ಷೆ. ೩೪ ನೆಯ ನಂ ೧೮. 'ಅಬ್ಬಾ! ವಧುವೇ ಇವಳು! ಎಷ್ಟು ದಪ್ಪಾಗಿದ್ದಾಳೆ! ಎರಡು ಮೂರು ಮಕ್ಕಳ ತಾಯಿಯಂತೆ ಕಾಣುತ್ತಾಳೆ!" ಎಂದು ವೆಂಕಟರಾಯರ ಹೆಣ್ಣು ಗುಂಪಿನ ಒಳಮನೆಯ ವಿಮರ್ಶೆಯಾಯಿತು.

ಪರೀಕ್ಷೆಗೆ ಪ್ರಾರಂಭ.

ಮೊದಲ ಪ್ರಶ್ನೆಗಳಾದ ಮೇಲೆ.......

"ತಂಗೀ, ಹಾಡು ಬರುತ್ತದೆಯೋ?"

"ಬರುತ್ತದೆ."

"ಎಂಥ ಹಾಡು?"

"ಶಾಸ್ತ್ರೋಕ್ತವಾಗಿ ಹಾಡುತ್ತಾಳೆ" ಎಂದು ವಧುವಿನ ತಂ ಹೇಳಿದರು.

"ದಾಸರ ಮತ್ತು ದೇವರ ಪದ ಹಾಡುತ್ತಾಳೇನು?" ಎಂ ಒಳಕೂಗು.

"..................."

"ತಂಗೀ, ಹೆಣೆಯುವ ಕೆಲಸ ಬರುತ್ತದೆಯೆ?" ಎಂದು ಪ್ರ ವೆಂಕಟರಾಯರು.

"..................."

"ಬರುವುದಿಲ್ಲವೇ?... ನಮ್ಮ ಶೋಭೆಗೆ ಬರುತ್ತದೆ. ಒಳ್ಳೇದು. ರಾಟೇ ನೂಲುತ್ತೀಯಾ?"

"..................."

ಹಾಗಾದರೆ ಏನು ಬರುತ್ತದೆ?"

"ಮನೆಗೆಲಸ ವ್ಯವಸ್ಥಿತವಾಗಿ ಮಾಡಿಕೊಂಡು ಹೋಗುತ್ತಾಳೆಂದು ನಿರ್ಧಾರವಾಗಿ ಹೇಳಬಲ್ಲೆ!" ಎಂದು ವಧುವಿನ ತಂದೆ.

"ಅದಕ್ಕೆಲ್ಲ ನಮ್ಮಲ್ಲಿ ಬೇರೆ ಜನ ಇದ್ದಾರೆ.......ಒಳ್ಳೇದು ಹೋಗಲಿ." ಎಂದರು ವೆಂಕಟರಾಯರು.

ಅಂದೇ ರಾತ್ರಿ ವಧುವಿನ ತಂದೆಗೆ "ಬೇರೆ ಕಡೆಗೆ ನೋಡಿಕೊಳ್ಳಿರಿ" ಎಂದು ತಿಳಿಸಿದರು.

* * * *

ಆದರ ಶ್ಯಾಮು? ಅವನಿಗೆಲ್ಲವೂ ವಿಚಿತ್ರವೆನಿಸಿತು. 'ವಯಸ್ಸಿಗೆ ಬಂದ ಕನ್ಯೆಯರೆಂದರೆ ಬೀದಿಯಲ್ಲಿ ಮನೆಯಿಂದ ಮನೆಗೆ ಅಲೆದಾಡುವ ಭಿಕ್ಷುಕಿಯರೇ! ಹಿರಿಯರಾದವರೂ ಕೂಡ 'ಗಂಡು ಎಂಬ ಹೆಮ್ಮೆಯ ಹೆಬ್ಬಾಗಿಲ ದಾಟಿ ಹೆಣ್ಣಿನ ಬಾಳನ್ನು ಗೋಳಿಗೆ ಹೇಗೆ ತಾನೇ ತಮ್ಮ ಬುದ್ಧಿಯನ್ನು ಮಾರಿಕೊಳ್ಳುತ್ತಾರೆ "ಮುಂದಿನ ಮನೆಗೆ ಹೋಗು" ಎಂಬುದೇನು ಜಿಲ್ಲಾ ಉಪಯೋಗಿಸಿಕೊಂಡ ಚೇಷ್ಟೆಯೋ? ಇದೆಂಥ ವಧೂಪರೀಕ್ಷೆ ಬಂಗಾರದ ತೂಕ ಮಾಡಿದಂತೆ ಮಾಡುತ್ತಾರಲ್ಲ! ಪ್ರಶ್ನೆಗಳಿಗೇ ಮಿತಿಯೇ ಇಲ್ಲವೇ! ಟೀಕಿಸಿಸಾಡುವ ಹಿರಿಯ ಹೆಂಗುಸರು ತಾವು ಒಂದು ಕಾಲಕ್ಕೆ ವಧುವಾಗಿ ಬಾಕುತೆಗೆದವರೆಂಬುದನ್ನು ಹೇ ಮರೆಯುತ್ತಾರಲ್ಲ!! ಇವೆಲ್ಲ ಪರೀಕ್ಷೆಗಳೇ! ಅಲ್ಲ. ವಧುವಿನ ವಧಪ್ರಯೋಗಗಳೇ ಸರಿ!— ಎಂದು ಶ್ಯಾಮುನ ಎದೆ ಕೊರೆಯ ಹತ್ತಿತು.

* * * *

ಮುಂದೆ ನಾಲ್ಕೈದು ತಿಂಗಳು ಕನ್ಯಾಪರೀಕ್ಷೆ ನಡೆಯಿತು. ಮನೆಯಲ್ಲಿ ಶ್ಯಾಮನಲ್ಲಿ ಮತ್ತು ಉಳಿದವರಲ್ಲಿ ತಕ್ಕಮಟ್ಟಿಗೆ ವಾದ-ವಿವಾದಗಳೂ ನಡೆದುವು. ಮನೆಯವರು ಯಾವ ಕನ್ಯೆಯನ್ನೂ ಒಪ್ಪಲಿಲ್ಲ. ವೆಂಕಟರಾಯರಲ್ಲಿ ಅಂಧಂತಮಸ್ಸು ತುಂಬಿದಂತೆ ಶ್ಯಾಮನಲ್ಲಿ ಹೊಸ ಬೆಳಕು ಹರಡುತ್ತಿತ್ತು. ಒಂದು ವರ್ಷದ ವರೆಗೆ ಕನ್ಯಾಪರೀಕ್ಷೆ ಕುಂಠಿತವಾಯಿತು. ಶ್ಯಾಮನ ತಂಗಿ ಶೋಭಾ. ಬೆಳೆದು ನಿಂತಳು. ವೆಂಕಟರಾಯರು ವಿಚಾರಕ್ಕೊಳಗಾದರು. 'ಹುಡುಗಿ ಬೆಳೆದುನಿಂತಿದ್ದಾಳೆ. ಬೇಗ ವರಶೋಧನ ಮುಗಿಸಬೇಕು ಶ್ಯಾಮನ ಲಗ್ನವನ್ನೂ ಶೋಭೆಯ ಲಗ್ನವನ್ನೂ ಒನ್ಮೈಲೆ ಮುಗಿಸಿಬಿಡಬೇಕು" ಎಂದು ೮-೧೦ ಕಡೆಗೆ ತೋರಿಸಿದರು. ವರದಕ್ಷಿಣೆಯ ...ರಿ ಕೋರಿಸಿದರು. ಆದರೆ ಶೋಭೆಯ ದುರ್ದೈವ; ಜನ್ಮದಾರಭ್ಯ ...ಟಿಕೊಂಡ ಆವಳ 'ಆ' ಕುಂದು, ಜನರ ಒಪ್ಪಿಗೆ ಮೆಚ್ಚ-ದಾಯಿತು. ವೆಂಕಟರಾಯರೇನೋ ತಮ್ಮ ಶ್ರೀಮಂತಿಕೆಯಲ್ಲಿ, ಇನ್ನೂ ನೋಲ್ತರಗತಿಯ ವರಯಾಚನೆಯಲ್ಲಿಯೇ ಕಂಕಣಬದ್ಧ-ರಾಗಿದ್ದರು. ಶ್ಯಾಮ ಶೋಭೆಗಾಗಿ ಮರುಗಿದ. ತಂದೆಯ ಹುಚ್ಚು ಹವ್ಯಾಸ ನೆನೆದು ಛೀ ಎಂದುಕೊಂಡ.

ಮತ್ತೆ ಒಂದು ವರುಷ ದಾಟಿತು.

ಶೋಭೆಗೆ ವರ ಸಿಗಲಿಲ್ಲ; ಶ್ಯಾಮನ ಲಗ್ನ! ಶೋಭೆಗೆ ವರ ...ಕ್ಕಲಾರದೆ ಶ್ಯಾಮನ ಲಗ್ನ ಹೇಗೆ!

ಕೆಲವು ದಿನಗಳ ಮೇಲೆ ಶೋಭೆಯನ್ನು ಶ್ಯಾಮನ ಹಟದಿಂದ ...ಂದು ಮನೆಯಲ್ಲಿ ತೋರಿಸಿದರು.

ಮರುದಿನವೇ ಶ್ಯಾಮನ ಮನೆಯಲ್ಲಿ ಒಂದು ವಧೂಪರೀಕ್ಷೆ ...ಡೆಯಿತು. ೪೭ ನೆಯ ನಂಬರು.

ಇಂದು ಶ್ಯಾಮನ ಮುಖದಲ್ಲಿ ಗಾಂಭೀರ್ಯವಿತ್ತು. ಅವನು ...ಾವುದೋ ಒಂದು ದೃಢನಿಶ್ಚಯಕ್ಕೆ ಬಂದವನಂತೆ ತೋರುತ್ತಿದ್ದ. ...ಂಕಟರಾಯರ ಪ್ರಶ್ನೆ—ವಧುವಿನ ಉತ್ತರಕ್ಕೆ ಪ್ರಾರಂಭ:

"ತಂಗೀ ನಿನ್ನ ಹೆಸರೇನು?"

"ಕಮಲಾ."

"ಸಾಲೆ ಎಷ್ಟಾಗಿದೆ?"

"ಕನ್ನಡ ಆರನೆಯತ್ತೆಯವರೆಗೆ ಆಗಿದೆ. ತಂದೆಯವರು ತೀರಿ...ಂಡ ಕಾರಣ ಮುಂದೆ ಕಲಿಯುವುದಾಗಲಿಲ್ಲ."

"ಹಿಂದೀ ಅಭ್ಯಾಸವಾಗಿದೆಯೇನು?" ಎಂದರು. ಶ್ಯಾಮನ ...ಗೆ ನೋಡಿದರು. ಅವನು ಕೆಳಮುಖಮಾಡಿ ಕುಳಿತುಕೊಂಡಿದ್ದ.

ಪ್ರಥಮಾ ಆಗಿದೆ."

ಬಾಸ್!—ಅಷ್ಟೇ ಏನು?"

................"

ಸಂಗೀತ?"

ದೇವರ ಪದ ಕೆಲವು ಬರುತ್ತವೆ."

ಶಾಸ್ತ್ರೋಕ್ತವಾಗಿ ಬರುವುದಿಲ್ಲವೇ? ನಮ್ಮ ಶೋಭೆಯೀಗ ...ಬಾಜಿಯಮೇಲೆ ಹಾಡುತಲಿದ್ದಾಳೆ." ಎಂದರು.

ಶ್ಯಾಮನ ಸಂತಾಪ ಉಕ್ಕೇರಿತು.

"ಮೇಲೆ ಹುಡುಗಿ ಸಾದುಗಪ್ಪು" ಎಂದಳು ವೆಂಕಟರಾಯರ ಹಿರಿ ಮಗಳು.

"ಶ್ಯಾಮಾ, ನಿನಗೇನಾದರೂ ಕೇಳುವುದಿದೆಯೋ?"

ಶ್ಯಾಮ ವಧುವಿನ ಕಡೆಗೆ ಮೊದಲು ಬಾರಿಗೆ ನೋಡಿದ. ತಂದೆಗೆ ಹೇಳಿದ.

"ಕೇಳುವುದನ್ನೆಲ್ಲ ಕೇಳಿ ಬಿಟ್ಟಿದ್ದೀರಿ. ಹೇಳುವುದಷ್ಟೇ ಉಳಿದಿದೆ. ಈ ವಧುವನ್ನು ನಾನು ಲಗ್ನವಾಗುತ್ತೇನೆ."

ವೆಂಕಟರಾಯರು ಗಾಬರಿಯಾದರು. ಗಡಿಬಿಡಿಯಿಂದ ವಧು-ವಿಗೂ ಆವಳ ವಯಸ್ಸಾದ ತಾಯಿಗೂ ಒಳಗೆ ಹೋಗಲು ಹೇಳಿದರು.

"ಶ್ಯಾಮಾ, ಇದೇನೋ? ನಿನಗೆ ಹುಚ್ಚು ಹಿಡಿದಿಲ್ಲವಷ್ಟೇ?"

"ಹುಚ್ಚು ಹಿಡಿದಿಲ್ಲವೆಂದೇ ಗೋಳಾಡುತ್ತಿದ್ದೇನೆ. ಈ ಹುಚ್ಚು-ಜಗತ್ತಿನಲ್ಲಿ, ಬುದ್ಧಿ ಜಾಗೃತಿಯುಳ್ಳವನು ಏತಕ್ಕೂ ಬಾರನು........"

"ಅದೆಲ್ಲ ನನಗೆ ಬೇಕಾಗಿಲ್ಲ ಶ್ಯಾಮಾ. ಸ್ಪಷ್ಟಮಾತಿನಲ್ಲಿ ಹೇಳಿಬಿಡು"

"ಸ್ಪಷ್ಟಮಾತಿನಲ್ಲಿ ಹೇಳಲೇ? ಸಂತೋಷ. ಈ ವಧುವನ್ನು ಲಗ್ನವಾಗುತ್ತೇನೆ."

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇನೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರೆ ಹೋಗುವದು ಶಕ್ಯವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ.

ಜವೇರಿಯನ್ ಜೀವನ ಮಿಕ್ಶ್ಚರ್

ಎಮ್. ಎಚ್. ಜವೇರಿಯನ್ ಮಿಸ್ತ್ರಿ
ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ೨

"ಛೀ ಮೂರ್ಖಾ! ಅರ್ಧಕಲಿತ, ಸಂಗೀತ ಗೊತ್ತಿಲ್ಲದ ಸಾದುಗಪ್ಪಿನ ಹುಡಿಗಿ ನಿನ್ನ ಹೆಂಡತಿಯಾಗಬೇಕೇ!"

"ಇಬ್ಬರೂ ಶಾಂತರಾಗಿರಿ. ಅಮೇಲೆ ಮಾತಾಡಿರಂತೆ" ಎಂದು ಶ್ಯಾಮನ ತಾಯಿ ಗಾಬರಿಯಾಗಿ ಮುಂದೆ ಬಂದಳು.

ಶ್ಯಾಮು ಸಂತಪ್ತನಾಗಿ ನುಡಿದ:

"ತಾತಾ, ವರನ ತಂದೆಯಾದ ನೀವು ವಧುವಿನ ತಂದೆಯೂ ಆಗಿರುವುದನ್ನು ಮರೆತಿರಾ? ಶೋಭೆಯ ವಿಚಿತ್ರ ಪರಿಸ್ಥಿತಿ ಈಗಲೂ ನಿಮ್ಮಲ್ಲಿ ಪರಿವರ್ತನೆಯನ್ನು ಬಿಂಬಿಸಲಾರದಾಯಿತೇ! ಜನ್ಮದಾರಭ್ಯ ಅವಳು ತನ್ನ ಒಂದು ಕಾಲು ಎಳೆಯುವುದು ತಪ್ಪಿಲ್ಲ. ಅವಳಲ್ಲಿ ಸೌಂದರ್ಯ ತುಳುಕಿದ್ದರೂ 'ಕುಂಟಿ'ಯೆಂದು ಎಲ್ಲೆಲ್ಲಿಯೂ ತ್ಯಜಿಸಲ್ಪಡುತ್ತಿರುವುದಿಲ್ಲವೇ! ನೀವು ಶೋಭೆಯನ್ನು ಕರೆದುಕೊಂಡು ಮನೆಮನೆಗೆ ತಿರುಗಿದಂತೆ, ನಿಮ್ಮಂತೆ ಎಷ್ಟೋ ಹೆಣ್ಣಿನ ತಂದೆಯರು ನಿಮ್ಮ ಮನೆಗೆ ವರಶೋಧನಾರ್ಥವಾಗಿ ಬರುತ್ತಿದ್ದಾರೆ. ಇಲ್ಲಿ ಕುಳಿತ ವಧುವಿಗೆ ಅಡಿಗೆ--ಮನೆಕೆಲಸ ಬರುತ್ತವೆಯೋನು ಎಂದು ಕೇಳಿದಿರಾ? ಅವಳ ಉತ್ತಮ ದೇಹಾರೋಗ್ಯದ ವಿಚಾರ ಮನದಲ್ಲಿ ತಂದಿರಾ? ಅವಳ ತಂದೆ ತೀರಿಕೊಂಡುದನ್ನೂ ಅವಳ ಮನೆತನದ ಬಡತನದ ಬಾಳನ್ನೂ ತಿಳಿದುಕೊಳ್ಳುವ ಹವ್ಯಾಸಕ್ಕೆ ಬಿದ್ದಿರಾ?..................."

"ಶ್ಯಾಮಾ ಇದೇನು ನಡಿಸಿದ್ದೀ ನೀನು....ಬೇಡಪ್ಪಾ" ಎಂ
ತಾಯಿ ಮತ್ತೆ ನಡುವಾದಳು.

ಶ್ಯಾಮು ಮುಂದುವರಿಸಿದ:

"ವಧುವಿಗೂ ಅವರ ಮನೆಯವರಿಗೂ ಅಸ ಪ್ರಶ್ನೆಗಳನ್ನು ಕೇ
ಹಣ್ಣುಮಾಡಿ, ಕಡೆಗೆ ಉಫ್ ಎಂದು ಸಹಜವಾಗಿ ತ್ಯಜಿಸುವ ನೀ
ನಿಮ್ಮ ಮನೆತನದ ಕುಂದುಕೊರತೆಗಳನ್ನು ಬರೀ ಸಿರಿವಂತಿಕೆಯ
ಮಬ್ಬಿನಲ್ಲಿ ಮರೆತು ಬಿಟ್ಟಿರಾ?.... ಶೋಭೆಯನ್ನು ನಿನ್ನೆ ನೋಡಿ
ಗೋವಿಂದಾಚಾರ್ಯರ ಮನೆಯವರು ಒಪ್ಪಿದ್ದಾರೆ. ಅಂತಃಕರ
ದಿಂದ ಬರಮಾಡಿಕೊಳ್ಳುತ್ತಿದ್ದಾರೆ. ಅವರ ಮಗನು ಬಡತ
ನ್ನೊಂದನ್ನು ಬಿಟ್ಟರೆ ಉತ್ತಮ ವರನಾಗಿದ್ದಾನೆ. ನಿಶ್ಚಯ
ಮಾಡಿರಿ......"

"ಆ ಮಾಸ್ತರನಿಗೆ!!? ಸಾಲತೀರಿಸಲಾಗದ ಆ ಮಾಸ್ತರನಿ
೬೦ ರೂಪಾಯಿ ಸಂಬಳ ಇರುವ ಆ ಮಾಸ್ತರನಿಗೆ!........ ಮೇ
ಅವನ ತಂದೆ ಗೋವಿಂದಾಚಾರಿ ಯಾಜ್ಞೀಕಿ ಮಾಡಿ ಹೊ
ಸಾಗಿಸುತ್ತಾನೆ. ಛೀ! ಛೀ!" ಎಂದು ವೆಂಕಟರಾಯರು ತ
ಹಿಡಿದುಕೊಂಡರು.

"ಹಾಗಾದರೆ ನಿಮಗೆ ಸಂಪತ್ತಿದೆಯಲ್ಲ? ಅವರ ಸಾಲ ತೀರಿಸಿ
ಅವರ ಮನೆತನಕ್ಕೆ ದೊಡ್ಡ ಉಪಕಾರವಾದೀತು."

"ಶ್ಯಾಮಾ. ಶ್ಯಾಮಾ. ಸುಮ್ಮನಾಗು. ನಾನು ಒಪ್ಪುತ್ತೇನೆ
ನನ್ನ ಒಪ್ಪಿಗೆಯಿದೆ......." ಎಂದು ಅವನ ತಾಯಿ.

"ಅಮ್ಮಾ, ನಿನಗೇನೋ ಈಗ ಸ್ವಲ್ಪ ಪಶ್ಚಾತ್ತಾಪದ ಮಂ
ಗಾಳಿ ಸೋಂಕಿರಬಹುದು. ಆದರೆ ತಾತನಿಗೇನು? ಅವ
ಪ್ರೊಳ್ಳು ಭಾಗ್ಯಶ್ರೀಗೆ ಬಲಿಯಾಗಿ ಶೋಭೆಯನ್ನು ಬಾವಿಯ
ನೂಕಲು ಹೊರಟಿದ್ದಾರೆ."

"ಶ್ಯಾಮಾ!" ಎಂದು ಒದರಿದರು ವೆಂಕಟರಾಯರು.

"ಹಾಗಾದರೆ ಶೋಭೆಯ ಲಗ್ನ ನಿಶ್ಚಯಿಸಿರಿ...." ಮಾ
ವ್ಯಾಸಿಸಿತು.

"ನಾನು ಈ ಕಮಲೆಯನ್ನು ಲಗ್ನವಾಗುತ್ತೇನೆ. ಅವಳಿಗು
ಜೀವನವಿದೆ. ಕರುಳಿದೆ. ಕಳೆಯಿದೆ."

"................"

ಸಾಧ್ಯವಿದ್ದರೆ ಮಾನವವರ್ಗಕ್ಕೆ ನೀವು ಮಾಡುತ್ತಿದ್ದ ಕ್ರೂ
ವಧೂಪರೀಕ್ಷೆಯನ್ನು ಬಿಡಲು ಬೇಡಿಕೊಳ್ಳಿರಿ. ಇಲ್ಲವಾದ
'ವಧೂ-ವರ' ಎಂಬ ಸವಿ ಶಬ್ದರಚನೆಯೇ ಕಮರಿ ಹೋಗಿ
'ವಧೂವಧ'ದ ಹೊಸ ಪಾಠ ಕಲಿಸಿದ ಪಾಪ ನಿಮ
ತಪ್ಪೀತು!!"

ವೆಂಕಟರಾಯರು ಮಾತಾಡಲಿಲ್ಲ. ಒಳಗೆದ್ದು ಹೊರಟರ
ಬಾಗಿಲಿನಲ್ಲಿ ನಿಂತ ವಧುವು ಅವರಿಗೆ ನಮಸ್ಕರಿಸಿದಳು. ಅವಳನ
ಅಂತಃಕರಣದಿಂದ ಆಶೀರ್ವದಿಸಿ ರಾಯರು ಕಣ್ಣೀರನ್ನು ಒ
ಸುತ್ತಾ ದೇವರ ಮನೆಗೆ ಹೊರಟು ಹೋದರು.

ಕನ್ನಡ ಕಂಪನಿ ನಾಟಕಗಳು

(ಪೂರ್ವಾರ್ಧ)

ಪ್ರೊ. ರಾ. ಯ. ಧಾರವಾಡಕರ ಎಂ. ಎ. ಧಾರವಾಡ

★

ಕನ್ನಡ ನಾಟಕದ ಇತಿಹಾಸ ಪ್ರಾಚೀನವಾಗಿದೆಯೆಂಬುದಕ್ಕೆ ಪ್ರಮಾಣಗಳು ಸಾಕಷ್ಟು ದೊರೆಯುತ್ತಿವೆಯಾದರೂ, ಅಂದಿನ ನಾಟಕಗಳ ಪ್ರತ್ಯಕ್ಷ ಚರಿತ್ರೆ ಅಜ್ಞಾತವೇ ಆಗಿದೆ. ಆದುದರಿಂದ ಆಧುನಿಕ ಕಂಪನಿ ನಾಟಕಗಳ ಚರಿತ್ರೆಯೇ ಕನ್ನಡ ನಾಟಕಪರಂಪರೆಯ ನಿಜವಾದ ಇತಿಹಾಸವೆನಿಸಿಕೊಳ್ಳುತ್ತದೆ.

★

ಕನ್ನಡ **ನಾಟಕಪರಂಪರೆಯು** ಕ್ರಿ. ಶ. ಹದಿನೇನೆಯ ಶತ-
ಾನದ "**ಮಿತ್ರವಿಂದಾಗೋವಿಂದ**" ದಿಂದಲೇ ಪ್ರಾರಂಭ-
ಾಗಿದ್ದರೂ, ಅದು ನಿಜವಾಗಿ, ಕನ್ನಡ ಜನಮನವನ್ನು ಸೂರೆ-
ೊಳ್ಳಲು ಇನ್ನೂ ಸುಮಾರು ಎರಡುನೂರು ವರುಷಗಳು ಹಿಡಿ-
ವು. ಈ ಹೊತ್ತು ನಾವು ನಾಟ್ಯಗೃಹದಲ್ಲಿ ನೋಡುವಂಥ ನಾಟಕ
ಳ ಪರಂಪರೆಯು ಪ್ರಾರಂಭವಾದದ್ದು ಈ ಕಾಲದಿಂದಲೇ. ಕನ್ನಡ
ಲ್ಲಿ ಕಂಪನಿ ನಾಟಕಗಳು ಪ್ರಾರಂಭವಾಗುವವರೆಗೆ, ಜೀವಂತವಾದ
ುತ್ತು ನಾಟಕೀಯವಾದ, ಪ್ರಯೋಗಗಳು ಇದ್ದಿರಲಿಲ್ಲವೆಂದೇ
ೇಳಬೇಕು. "**ಮಿತ್ರವಿಂದಾ ಗೋವಿಂದ**" ವು ಸಂಸ್ಕೃತದ "ರತ್ನಾ-
" ನಾಟಕದ ಭಾಷಾಂತರವಾಗಿದ್ದರೂ ಕೂಡ, ಇನ್ನೂ ಅದು
ಪ್ರಾಚೀನ ಜಡಪ್ರಪಂಚಕ್ಕೆ ಸೇರಿದ್ದು. ಹೀಗಾಗಿ, ಯಾವುದೇ
ದು ನಾಟಕದ ತೀರ ಮುಖ್ಯ ಗುಣವಾದ "ಪ್ರಯೋಗಾರ್ಹತೆ"
ನ್ನು ಈ ಮೊದಲಿನ ಕನ್ನಡ ನಾಟಕಗಳಲ್ಲಿ ನಾವು ಎಷ್ಟೋಮಟ್ಟಿಗೆ
ಾಣುವುದಿಲ್ಲ. **ತೋಡಿದ ಪ್ರತಿಯೊಂದು** ತಗ್ಗೂ, ಯಾವರೀತಿ
ವಿಯಾಗಲಾರದೋ, ಹಾಗೆಯೇ ಬರೆದಂಥ ಪ್ರತಿಯೊಂದು
ಗ್ರಾದವು ಸಂಭಾಷಣೆಯಾಗಬಹುದೇ ಹೊರತು, ನಾಟಕವಾಗ
ರದು. **ತೋಡಿದ ತಗ್ಗಿನಲ್ಲಿ ನೀರು ಸೆಲೆಯೊಡೆದಾಗಲೇ** ಬಾವಿ
ಾಗುವಂತೆ—ಬರೆದ ಸಂಭಾಷಣೆಯು **ಪ್ರಯೋಗಾರ್ಹವಾದಾ**
ಗೇ ಅದಕ್ಕೆ ನಾಟಕದ ಕಳೆ ಬರುವುದುಂಟು. ಇಂಗ್ಲೀಷಿನಲ್ಲಿ
ದು ಗಾದೆಮಾತು ಹೇಳುವುದುಂಟು : "Test of the pudd-
, is in the eating" ಎಂದು. ಅಂದರೆ "ಯಾವುದೇ ಒಂದು
ಡುಬಿನ ರುಚಿ ಅದನ್ನು ತಿನ್ನುವುದರಲ್ಲಿದೆ." ನಾನು ತಯಾರಿಸಿದ
ಡುಬು ರುಚಿಯಾಗಿದೆಯೆಂದು ಪ್ರಸ್ಥಾಪಿಸಲು ನಾನೆಷ್ಟು ತಾಸು
ಾಷಣ ಮಾಡಿದರೂ ನಿರರ್ಥಕ; ಎಷ್ಟು ನೂರು ಪಾನು ಬರೆದರೂ
ರ್ಥ. ಯಾರೂ ಒಂದು thesis ಬರೆದು ಕಡುಬಿನ ಈ ರುಚಿ-
ನ್ನು ಪ್ರಸ್ಥಾಪಿಸಲಾರರು. ಅದರ ಸ್ವಾದ ಇಲ್ಲವೆ ಅಸ್ವಾದ.
ವನ್ನು **ತಿಂದಾಗಲೇ ಗೊತ್ತಾಗುವುದುಂಟು**. ಹಾಗೆಯೇ
**ಯಾವುದೇ ಒಂದು ನಾಟಕದ ಯಶಾಪಯಶಗಳು ಅದ
ಯಶಸ್ವಿ ಪ್ರಯೋಗದಲ್ಲಿವೆಯೇ ಹೊರತು,** ಬರಿ ಅದರ ಬ
ನಾವು ಕೊಡುವಂಥ ಭಾಷಣಗಳಲ್ಲಿಲ್ಲ. ನಿಜ ; ಕಾಳಿದಾಸನಂ
ಮಹಾಕವಿಯ "ಶಾಕುಂತಲ" ನಾಟಕವು ಒಂದು ವಿಧವಾ
ಪ್ರಯೋಗದ ಎಲ್ಲೆಯನ್ನೂ ಮೀರಿ ನಿಂತಿದೆ. ಅದರ ಅಭಿನಯವನ
ನಾವು ಮನಸ್ಸಿನ ವೇದಿಕೆಯ ಮೇಲೆ ಅಂತಶ್ಚಕ್ಷುವಿನಿಂ
ಕಾಣಬೇಕೇ ಹೊರತು, ಬಾಹ್ಯ—ವೇದಿಕೆಯ ಮೇಲೆ, ಅದನ
ಆಡಿ ಯಶಸ್ವಿಯಾಗಲಾರೆವು. ಆದರೂ ಸಾಮಾನ್ಯವಾಗಿ ಪ್ರ
ಯೊಂದು ನಾಟಕದ ಯಶಸ್ಸು ಅದರ ಯಶಸ್ವಿ ಪ್ರಯೋಗದಲ್ಲಿಯೆ
ಇದೆ ಎಂಬುದನ್ನು ನಾವು ಕಾಣುತ್ತೇವೆ. ಈ ರೀತಿ ಕನ್ನಡ ನಾಟ
ಗಳಿಗೆ ಪ್ರಥಮತಃ ಇಂಥ **ನಾಟಕೀಯ** ಅಂಶಗಳನ್ನು ಒದಗಿ
ಕೊಟ್ಟು, ಅವು ಈ ಮೊದಲಿನಂತೆ ಕೇವಲ ಸಪ್ಪೆಯಾಗಿರ
(wooden ಆಗಿರದೆ), ಸಜೀವವಾಗಿ, ಸಚೇತನವಾಗಿ, ಪ್ರಯೊ
ಗಾರ್ಹವಾಗುವಂತೆ ಮಾರ್ಪಡಿಸಿದ ಶ್ರೇಯಸ್ಸು ಕಂಪನಿ ನಾಟಕಗಳ
ಗಿದೆ. ಎಂತಲೇ, ಇಂದಿನ ಕನ್ನಡ ನಾಟಕ ಪರಂಪರೆಯು ನಿಜವಾ
ಕಂಪನಿ ನಾಟಕಗಳಿಂದಲೇ ಪ್ರಾರಂಭವಾಯಿತೆಂದು ಹೇಳುವುದ

ಎರಡನೆಯದಾಗಿ ನಾಟಕವು **ದೃಶ್ಯಕಾವ್ಯವಾಗಿದ್ದರಿಂ**
ಅದರ ಸನ್ನಿವೇಶಗಳೆಲ್ಲವೂ ಪ್ರೇಕ್ಷಣೀಯವಾಗಿರಬೇಕು. ಈ ದೃ
ಯಿಂದಲೂ ಕೂಡ ನಾಟಕ ಕಂಪನಿಗಳು ರಂಗಸ್ಥಳದ ನಿರ್ಮಾ
ಕಾಗ್ಗಿ ಸಾಕಷ್ಟು ಲಕ್ಷ್ಯವನ್ನು ಪೂರೈಸಿದುವು ಸುಂದರವಾದ ರಂ
ಸ್ಥಳ, ಪಡದೆಗಳು, ವಿಂಗ್ಸ್ (wings) ಮತ್ತು ಯುಕ್ತವಾದ ವೇಷ
ಭೂಷಣಗಳನ್ನು ಸಲೀಲವಾಗಿ ಉಪಯೋಗಿಸಿ, ನಾಟಕದ ಕಲ್ಪ
ಕತೆಯು (illusion) ಉಳಿಯುವಂತೆ ನೆರವಾದುವು. ರಂಗಸ್ಥಳ
ಈ ಬಾಹ್ಯ ಅಂಶಗಳಿಗೆ ಲಕ್ಷ್ಯವನ್ನು ಪೂರೈಸಿ **ನಾಟಕಗಳ** illu
sion ಉಳಿಯುವಂತೆ ಮಾಡಿದ್ದು ಈ ಕಂಪನಿಗಳ **ಎರಡನೆಯ**
ಕಾಣಿಕೆ.

ಮೂರನೆಯದಾಗಿ ಈ ಕಂಪನಿಗಳ ಮೂಲಕ ನಾಟಕ ಪ್ರಯೋ

ಗವು ಒಂದು ನಿರಂತರ ಪರಂಪರೆಯಾಯಿತು. ಇಲ್ಲವಾದರೆ, ಈ ವರೆಗೆ ಎಲ್ಲಿಯೋ ಹಬ್ಬ-ಹರಿದಿನಗಳಲ್ಲಿಯೋ, ಇಲ್ಲವೆ ಸುಗ್ಗಿ-ಉತ್ಸವ ಪ್ರಸಂಗಗಳಲ್ಲಿಯೋ ಮಾತ್ರ ಪ್ರಯುಕ್ತವಾಗಿ, ಅದರ ಮರುದಿನ ಸಾಯುತ್ತಿದ್ದ ನಾಟಕಪರಂಪರೆಯು ಈ ಕಂಪನಿಗಳ ಮೂಲಕ ನಿರಂತರ ಹರಿಯುವ ನೀರಿನ ಹಾಗೆ ಒಂದು ನಿತ್ಯದ ಪರಂಪರೆಯಾಯಿತು. ಇದರಿಂದ ಲೋಕಬೋಧೆಗೆ ಸಾಕಷ್ಟು ಅನುಕೂಲತೆಯೊದಗಿತು.

ನಾಲ್ಕನೆಯದಾಗಿ, ದೃಶ್ಯ ಮತ್ತು ಶ್ರಾವ್ಯ ಸಂಗೀತಗಳ ಹಿತವಾದ ಬೆರಕೆಯಿಂದ, ಕಂಪನಿ ನಾಟಕಗಳು ಕರ್ನಾಟಕದಲ್ಲಿ ನಷ್ಟಪ್ರಾಯವಾಗುತ್ತಿದ್ದ ಸಂಗೀತಕಲೆಗೆ ಪೋಷಕಗಳಾದುವು.

ಹೀಗಾಗಿ, ನಿಜವಾದ ಮತ್ತು ನಾವು ಈ ವರೆಗೆ ನೋಡುತ್ತಿರುವ ಕನ್ನಡ ನಾಟಕಪರಂಪರೆ ಈ ಕಂಪನಿಕಾಲದಿಂದಲೇ ಪ್ರಾರಂಭವಾಯಿತೆಂದು ಹೇಳಿದರೆ ಅದರಲ್ಲಿ ಅತಿಶಯೋಕ್ತಿಯೇನೂ ಇಲ್ಲ.

ಹಾಗಾದರೆ, ಈ ಕಂಪನಿ ನಾಟಕಗಳ ಉಗಮ ಎಂದು ?.... ಎಂತು ?...., ಸುಪ್ರಸಿದ್ಧ ಕಂಪನಿಗಳು ಯಾವು.... ? ಅಲ್ಲಿಯ ಪ್ರಸಿದ್ಧ ನಟರಾರು.... ? ಅವರ ನಾಟಕಗಳಾವು.... ? ಆ ಕಾಲದ ಅಭಿನಯದ ರೀತಿ ಯಾವ ವಿಧವಾಗಿದ್ದಿತು ?—ಮತ್ತು ಈ ಕಂಪನಿ ನಾಟಕಗಳ ಲೋಪ-ದೋಷಗಳೇನು? ಎಂಬುದನ್ನು ವಿಚಾರಿಸೋಣ.

ಐತಿಹಾಸಿಕವಾಗಿ ನೋಡಿದರೆ, ಹಳೆಯ "ದಶಾವತಾರ ಆಟಗಳು" ಇಲ್ಲವೆ "ಬಯಲಾಟಗಳು" "ಯಕ್ಷಗಾನಗಳು" ಮತ್ತು "ಗೊಂಬೆ ಆಟಗಳು" ನಿಧಾನವಾಗಿ ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡು, ನಮ್ಮ ಈ ಕಂಪನಿ-ನಾಟಕಗಳಿಗೆ ಎಡೆಮಾಡಿಕೊಡುವ ಮೊದಲು, ನಮ್ಮ ನಾಟಕ ಪರಂಪರೆಯಲ್ಲಿ ಒಂದು ತೀರ ಚಿಕ್ಕದಾದ ಮಧ್ಯಂತರ ಕಾಲವು ಆಗಿ ಹೋಯಿತು. ಈ ಕಾಲದ 'ನಾಟಕ' ಇಲ್ಲವೆ 'ಆಟ'ಗಳು ಹೆಚ್ಚು ಕಡಿಮೆ ಹಳೆಯ ಬಯಲಾಟಗಳಂತೆಯೇ ಇದ್ದರೂ, ಅವು ಒಂದು ಕಾಲಕ್ಕೆ ಹುಟ್ಟಿ ಮರುದಿನವೇ ಸಾಯುವಂಥ ನಾಯಿ ಛತ್ತರಿಗೆಗಳಾಗಲಿಲ್ಲ. ಕಂಪನಿಗಳಂತೆ ಇವು ಪ್ರತಿನಿತ್ಯ ನಾಟಕಗಳನ್ನಾಡದಿದ್ದರೂ, ಜನ ಕರೆಸಿದಾಗ ಬೇರೆ ಬೇರೆ ಸ್ಥಳಗಳಿಗೆ ಹೋಗಿ ತಮ್ಮ "ಆಟ"ಗಳನ್ನು ಇವರು ಆಡುತ್ತಿದ್ದರು.......ಎರಡನೆಯದಾಗಿ ಎಷ್ಟೋ ಸಲ ಇಂಥ ಆಟದವರು ಹಿಂದಿನ ಪುರಾಣದ ಕಥೆಗಳನ್ನೇ ತಮ್ಮ ಆಟದ ವಸ್ತುವನ್ನಾಗಿ ಇಟ್ಟುಕೊಂಡಿದ್ದರೂ. ಅದಕ್ಕೊಂದು ತರದ ಮಾನವೀಯತೆಯನ್ನು ಕೊಡಲು ಹೆಣಗಿದರು. ಹೀಗಾಗಿ, ಕಥೆ ಅದೇ ಕೃಷ್ಣ-ಸತ್ಯಭಾಮೆಯರಿಗೆ ಸಂಬಂಧಪಟ್ಟದ್ದಾದರೂ ನಾವು ನಿತ್ಯ ಜೀವನದಲ್ಲಿ ಕಾಣುತ್ತಿರುವ ಶೃಂಗಾರವು ನಿಧಾನವಾಗಿ ಈ ನಾಟಕಗಳಲ್ಲಿ ಸೇರತೊಡಗಿತು. ಹೀಗಾಗಿ, ಈ ವರೆಗೆ ಕೇವಲ ಸ್ವರ್ಗ-ನರಕಗಳ ವೇದಿಕೆಯ ಮೇಲೆ ನಡೆಯುತ್ತಿದ್ದ 'ಆಟ'ಗಳು, ನಿಧಾನವಾಗಿ ಈ ಭೂಮಿಗೆ ಸಂಬಂಧಿಸಿದ ಮಾನವೀಯ ಭಾವನೆಗಳನ್ನೂ ಅಳವಡಿಸಿಕೊಳ್ಳುವಂತಾದುವು. ಉದಾಹರಣೆಗೆ, ಈ ಕಾಲದ ಉತ್ತರ ಕರ್ನಾಟಕದಲ್ಲಿ ಕುಲಗೋಡ ತಮ್ಮಣ್ಣನ "ಪಾರಿಜಾತ" ನಾಟಕ,



ಸುಪ್ರಸಿದ್ಧ ಬಸರಗಿ ಕುಂಬಾರನ "ರಾಜಾನಾಟ", ಹೆಣಮುಂತನ "ಪಾರಿಜಾತ" ಆಟ–ಈ ಮೊದಲಾದುವುಗಳನ್ನು ಹೇಳಬಹುದು. ಇಲ್ಲಿ ಬರುವ ಕಥೆಯ ಚೌಕಟ್ಟು ಪೌರಾಣಿಕವಾಗಿದ್ದರೂ, ಭಾವನೆಗಳೆಲ್ಲ ಈ ಜಗತ್ತಿಗೇ ಸೇರಿದುವು. ಪೌರಾಣಿಕ ಕೃಷ್ಣ-ಸತ್ಯಭಾಮೆಯರು ಆ ರೀತಿ ಪ್ರೀತಿ ಮಾಡಿರಲಿ ಇಲ್ಲವೆ ಬಿಟ್ಟಿರಲಿ; ಇಲ್ಲಿಯ ನಟ-ನಟಿಯರು ಮಾತ್ರ ಈ ಭಾವನೆಗಳನ್ನು ತಮ್ಮ ಜೀವನದಲ್ಲಿ ಪ್ರತ್ಯಕ್ಷವಾಗಿ ಅನುಭವಿಸಿದವರು. ಅಷ್ಟೇ ಏಕೆ?– ಬಡಕುಂದ್ರಿ ಬಸಪ್ಪ; ನಿಂಗಾಸಾನಿ ಕೌಜಲಗಿ ಮತ್ತು ಹಿಡಕಲ್ಲ ಕಲ್ಲಪ್ಪ, ಮೊದಲಾದವರು ಆಡಿದ ಆಟಗಳಲ್ಲಿ ಕೆಲವು ಸಾಮಾಜಿಕವಾದುವುಗಳು. "ಸಂಗ್ಯಾಬಾಳ್ಯಾ"ನ ಆಟದ ಕಥೆ ಬೈಲಹೊಂಗಲದಲ್ಲಿ ನಡೆದ ಒಂದು ಘಟನೆಯ ಸಾಹಿತ್ಯರೂಪ ಅಷ್ಟೇ. ಇದರಂತೆಯೇ, ಈ ಕಾಲದಲ್ಲಿ ತೀರ ಜನಪ್ರಿಯವಾಗಿದ್ದ ಇನ್ನೊಂದು ಆಟವೆಂದರೆ, ಹಲವು ಮೇಳದವರು ಆಡುತ್ತಿದ್ದ "ಮುಕ್ಕುಂದ ಗೋವಿಂದ"ನ ಆಟ. ಈ "ಮುಕ್ಕುಂದ" "ಗೋವಿಂದ"ರು ಯಾವ ಪೌರಾಣಿಕ ವ್ಯಕ್ತಿಗಳೂ ಅಲ್ಲ; ಅವರು ಕೇವಲ ಈ ಜಗತ್ತಿಗೆ ಸೇರಿದವರು, ಈ ಜಗತ್ತಿನವರು. "ಮುಕ್ಕುಂದ" ಮತ್ತು "ಗೋವಿಂದ"ರು ಇಬ್ಬರು ಮಿತ್ರರು. ಅನ್ಯೋನ್ಯ ಪ್ರೇಮಿಗಳು. ಆದರೆ, ವಿಧಿವಶದಿಂದ ಇವರಲ್ಲಿ ಒಬ್ಬನು ತನ್ನ ಮಿತ್ರನ ಹೆಂಡತಿಯ ರೂಪ-ಗುಣಗಳಿಗೆ ಲುಬ್ಧನಾಗಿ, ಆವಳಲ್ಲಿ ಅನುರಕ್ತನಾದಾಗ ನಡೆಯುವ ಕಥೆಯೇ ಈ ಆಟದ ಕಥಾವಸ್ತು. ಕೊನೆಗೂ ತನ್ನ ಮಿತ್ರನ ಸಲುವಾಗಿ ಸ್ವತಃ ತನ್ನ ಹೆಂಡತಿಯನ್ನೇ ಅವನಿಗೆ ಒಪ್ಪಿಸುತ್ತಾನೆಂದು ಕಥೆ ಮುಕ್ತಾಯ ಹೊಂದುತ್ತದೆ.... ಪರಂಪರಾಗತವಾಗಿ ನಡೆದು ಬಂದ ನೈತಿಕ ಕಟ್ಟಳೆಗಳನ್ನು ಬದಿಗಿರಿಸಿ ಈ ರೀತಿ ಕ್ರಾಂತಿಕಾರಕವಾದ ಸಾಮಾಜಿಕ ಕಲ್ಪನೆಗಳನ್ನು ಒದಗಿಸಿದ ಈ ನಾಟಕಗಳು ಇಂದಿನ ಕಂಪನಿ ನಾಟಕಗಳಲ್ಲಿಯ ಸಾಮಾಜಿಕ ಪಂಥದ ಮುಂಗಾಣಿಕೆಯಾಗಿವೆ. ಕಲಾದಿಗಿ ಜಿಲ್ಲೆಯ ಗುಳೇದಗುಡ್ಡದಿಂದ, ದೂರದ ಧಾರವಾಡ—ಬೆಳಗಾವಿ ಜಿಲ್ಲೆಗಳಿಗೆ ಹೋಗಿ ಆ ಕಾಲದಲ್ಲಿ ಆಟವಾಡಿದ 'ಗುಳೇದಗುಡ್ಡದಾಸರ' ಆಟಗಳನ್ನು ಸಹ ಈ ಪುರೋಗಾಮಿ ಪರಂಪರೆಗೇ ಸೇರಿಸಬಹುದು. ಒಟ್ಟಾರೆ, ಕನ್ನಮಟ್ಟಿನ ರಂಗಸಲಕರಣೆ, ಆಡಿದ ಮರುದಿವಸವೇ ನಿಲ್ಲಿಸದೇ ಹಾಗೇ ನಿರಂತರವಾಗಿ ಈ ಗುಂಪುಗಳನ್ನು ಇಟ್ಟುಕೊಳ್ಳುವುದು ಮತ್ತು ಪೌರಾಣಿಕ ಪ್ರಪಂಚದಿಂದ ನಿಧಾನವಾಗಿ ಈ ಮಾನವೀಯ ಜೀವನಕ್ಕೆ ಕಥಾನಕವನ್ನು ಹೊಂದಿಸಿಕೊಳ್ಳುವಲ್ಲಿ ತೋರಿದ ಸಾಮಾಜಿಕ ಕ್ರಾಂತಿಯ ದೃಷ್ಟಿ— ಇವುಗಳ ಮೂಲಕ ಈ ನಾಟಕಗಳು ಹಳೆ ಮತ್ತು ಹೊಸದರ ನಡುವಿನ ಸೇತುವೆಯಂತಿವೆ. ಆದರೆ ಸಾಮಾನ್ಯವಾಗಿ ಈ ಎಲ್ಲ ನಾಟಕಗಳಲ್ಲಿ, ಪಾತ್ರವಹಿಸಿದ ವ್ಯಕ್ತಿಯೇ ತನ್ನ ಹಾಡನ್ನು ಹೇಳದೆ, ಹಿಮ್ಮೇಳದವರು ಈ ಹಾಡುಗಳನ್ನು ಹೇಳುತ್ತಿದ್ದರು.

ಅನಂತರದ ಅನೇಕ ಕಂಪನಿ-ನಾಟಕಗಳಲ್ಲಿಯೂ ಕೂಡ ಎಷ್ಟೋ ಕಾಲ ಇದೇ ಪರಂಪರೆಯೇ ಸಾಗಿ ಬಂದದ್ದನ್ನು ನಾವು ನೋಡುತ್ತೇವೆ. ಕೌಜಲಗಿ ನಿಂಗಾಸಾನಿಯ ಸಂಗಡದವರು ಅಪರಾಳ ತಮ್ಮಪ್ಪನು ರಚಿಸಿದ 'ಕೃಷ್ಣ ಪಾರಿಜಾತವನ್ನು' ನಾಟಕ ರೂಪವಾಗಿ ತುಂಬಾ ಯಶಸ್ವಿಯಾಗಿ ಅಭಿನಯಿಸುತ್ತಿದ್ದರೆಂದೂ, ಸ್ವತಃ ನಿಂಗಾಸಾನಿಯು ತುಂಬಾ ನರ್ತನಕುಶಲಳಾಗಿದ್ದಳೆಂದೂ ಸನ್ಮಾನ್ಯ ಶ್ರೀ. ಮುದವೀಡು ಕೃಷ್ಣರಾಯರು ಬರೆಯುತ್ತಾರೆ. ಈ ನಿಂಗಾಸಾನಿಯು ತಲೆಯ ಮೇಲೆ ದೀಪಹಚ್ಚಿದ ಸಮೆಯನ್ನಿಟ್ಟುಕೊಂಡು ಯಾವ ಅಂಗಭಂಗಿಗಳಲ್ಲಿ ತಾಳಲಯಬದ್ಧವಾಗಿ ಕುಣಿದರೂ ಸಮೆಯ ದೀಪಕ್ಕೆ ಏನೂ ಧಕ್ಕೆ ತಗಲುತ್ತಿರಲಿಲ್ಲವಂತೆ! ಇಷ್ಟು ಪ್ರಖ್ಯಾತಳಾದ ಇವಳ ನರ್ತನವನ್ನು ಕಂಡು ಆಗಿನ ಜನ ಬೊಟ್ಟುಕಚ್ಚುತ್ತಿದ್ದರಂತೆ.

ಅದೇನೆ ಇರಲಿ!.... ಕನ್ನಡ ಕಂಪನಿ ನಾಟಕಗಳ ಇತಿಹಾಸವೂ ಏನಿಲ್ಲವೆಂದರೂ ಸುಮಾರು ಒಂದು ನೂರು ವರುಷದಷ್ಟು ಪ್ರಾಚೀನವಾಗಿದೆ. ಉತ್ತರ ಕರ್ನಾಟಕದ ಕಂಪನಿಗಳಲ್ಲಿ ತೀರ ಹಳೆಯ ಕಂಪನಿಯೆಂದರೆ ಸುಮಾರು ಕ್ರಿ. ಶ. ೧೮೬೯ರಲ್ಲಿ ಬೆಳಗಾಂವಿ ಜಿಲ್ಹೆಯ ಹಲಸಿಗೆಯಲ್ಲಿ ಸ್ಥಾಪಿತವಾದದ್ದು. ಈಗ ಉಪಲಬ್ಧವಾಗಿರುವ ಮಟ್ಟಿಗೆ ಇದೇ ತೀರ ಪ್ರಾಚೀನ ಕಂಪನಿಯೆಂದು ಹೇಳಬೇಕು. ಈ ಕಂಪನಿಯವರು "ಶ್ರೀನಿವಾಸ" ಕವಿಗಳು ಇಲ್ಲವೆ ವೆಂಕಣ್ಣಾಚಾರ್ಯ ಅಗಳಗಟ್ಟಿ ಎಂಬವರು ಬರೆದು ಕೊಡುತ್ತಿದ್ದ "ಶ್ರೀಮತಿ ಪರಿಣಯ" "ಮದಾಲಸಾ ಪರಿಣಯ"

'ಬಗನ' ಬಾಲಾಮೃತ

ಮಕ್ಕಳ ಸಧೃಢತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

“ ಭೌಮಾಸುರ ವಧೆ ”— ಮೊದಲಾದ ನಾಟಕಗಳನ್ನು ಆಡುತ್ತಿದ್ದರು. ಈ ಕಂಪನಿಯವರು ಬೆಳಗಾಂವಿಯಿಂದ ಬಳ್ಳಾರಿ ಪ್ರಾಂತದ ವರೆಗೆಲ್ಲ ಸುತ್ತಾಡಿ, ತಮ್ಮ ವಿಜಯ ದುಂದುಭಿಯನ್ನು ಮೊಳಗಿದರು. ನಾಟಕೋಪಜೀವಿಗಳಿಗೂ, ಧಾರ್ಮಿಕ ಜೀವನಕ್ಕೂ ಏನೂ ಸಂಬಂಧವಿರಲಾರದೆಂಬ ಇಂದಿನ ನಮ್ಮ ಕಲ್ಪನೆಗೆ ವ್ಯತಿರಿಕ್ತವಾಗಿ, ನಟರು ಕೂಡ ಯಾವ ರೀತಿ ತುಂಬಾ ಪರಿಶುದ್ಧವಾದ ಧಾರ್ಮಿಕ ಜೀವನವನ್ನು ಸಾಗಿಸಬಹುದೆಂಬುದನ್ನು ಪ್ರತ್ಯಕ್ಷವಾಗಿ ತೋರಿಸಿದ ಶ್ರೇಯಸ್ಸು ಈ ಕಂಪನಿಯವರಿಗಿದೆ. ಈ ಕಂಪನಿಯ ನಟವರ್ಗವೆಲ್ಲ ಕೇವಲ ಉಂಡಾಡಿ — ಪೋರರಾಗಿರದೆ, ವೇದಶಾಸ್ತ್ರಸಂಪನ್ನರೂ, ಸದಾಚಾರಿಗಳೂ ಆಗಿದ್ದರು. ಇವರು ತಮ್ಮ ವ್ಯವಸಾಯದಲ್ಲಿಯೂ ಕೂಡ ತಮ್ಮ ಸ್ನಾನ ಸಂಧ್ಯಾದಿಗಳನ್ನು ಎಂದೂ ಬಿಡಲಿಲ್ಲ. ಇವರು ಸಂಚಾರ ಹೋದಲ್ಲೆಲ್ಲಾ ಗುಡಿ–ಗುಂಡಾರಗಳಲ್ಲಿ ಪ್ರತಿನಿತ್ಯ ಪುರಾಣ ಪ್ರವಚನವನ್ನು ಸಾಗಿಸುತ್ತಿದ್ದರೆಂದೂ ಪ್ರತೀತಿ ಇದೆ. “ ಪಾಪವಿದು; ಪುಣ್ಯವಿದು; ಹಿತರೂಪವಿದು; ಅಹಿತಪ್ರಕಾರವಿದು ” ಎಂದು ಮೊದಲಾಗಿ ಹೇಳುವುದೇ ಕಾವ್ಯಗಳ ಉದ್ದೇಶವಾಗಿದ್ದರೆ, ಉತ್ತರಕರ್ನಾಟಕದ ಕಂಪನಿ ನಾಟಕಗಳ ಶ್ರೀಕಾರವು ಇಂಥ ಸಚ್ಚಾರಿತ್ರ್ಯವುಳ್ಳ ಋಷಿಗಳಿಂದಲೇ ಪ್ರಾರಂಭವಾಯಿತೆಂದು ಹೇಳಬೇಕು.

ಅನಂತರ, ಈ ನಾಟಕ ಮಂಡಳಿಯು ಮುರಿದು ಹೋದ ಮೇಲೆ ಪುನಃ ಇದರ ಜೀರ್ಣೋದ್ಧಾರಕಾರ್ಯವನ್ನು ಕ್ರಿ. ಶ. ೧೮೮೦ರ ಸುಮಾರು ಮಾಡಲಾಯಿತು. ಇವರು “ ವಿರಾಟಪರ್ವ ” ಮೊದಲಾದ ನಾಟಕಗಳನ್ನು ಆಡಿದರು. ಈ ಕಾಲದಲ್ಲಿ ‘ ಸಂಡಿಗಿ ಮತ್ತೂ ಮುಂಡಿಗಿ ’ ಎಂಬ ಇಬ್ಬರು ಸದ್ಗೃಹಸ್ಥರು ಸ್ತ್ರೀಪಾತ್ರಾಭಿನಯದಲ್ಲಿ ತುಂಬಾ ಪ್ರಖ್ಯಾತರಾಗಿದ್ದರೆಂದೂ ಅವರನ್ನು ಪುರುಷರೆಂದು ಗುರುತಿಸಲು ಸಹ ಸಾಧ್ಯವಿರಲಿಲ್ಲವೆಂದೂ ನೋಡಿದವರು ಹೇಳುತ್ತಾರೆ.

ಈ ‘ ಹಲಸಿಗೆ ನಾಟಕ ಮಂಡಳಿ ’ಯ ತರುವಾಯ, ಉತ್ತರ ಕರ್ನಾಟಕದಲ್ಲಿ ತೀರ ಪ್ರಾಚೀನವಾದ ಎರಡನೆಯ ನಾಟಕ ಕಂಪನಿಯೆಂದರೆ ಕ್ರಿ. ಶ. ೧೮೭೫ರ ಸುಮಾರು ಸ್ಥಾಪಿತವಾದ ಗದುಗಿನ ‘ ಶ್ರೀವೀರನಾರಾಯಣ ಪ್ರಾಸಾದಿಕ ಕೃತಪುರ ನಾಟಕ ಮಂಡಳಿ ’. ಕ್ರಿ. ಶ. ೧೮೭೫ ರ ಸುಮಾರಿನ ಈ ಕಾಲವು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಒಂದು ವಿಧದಿಂದ ಹೆಮ್ಮೆ ಮತ್ತೂ ಹೀಯಾಳಿಕೆ ಎರಡೂ ಕೂಡಿದ ಕಾಲ. ಯಾಕೆಂದರೆ, ಕನ್ನಡ ನಾಟಕಪರಂಪರೆ ಮಹಾರಾಷ್ಟ್ರಕ್ಕಿಂತ ಮೊದಲೇ ಪ್ರಾರಂಭವಾಗಿ ಇತರ ಪ್ರಾಂತೀಯರ ಮೇಲೆ ಪ್ರಬಲವಾದ ಪ್ರಭಾವವನ್ನು ಮಾಡುವಷ್ಟು ಸತ್ತ್ವಯುತವಾಗಿದ್ದರೂ, ಆರಂಭಶೂರರಾದ ಕನ್ನಡಿಗರು ೮–೧೦ ವರುಷಗಳಲ್ಲಿಯೇ ತಾವು ಕ್ರಮಿಸಿದ ಪ್ರಗತಿಯನ್ನು ಹಾಗೆಯೇ ಸಾಗಿಸಲಾರದೆ, ಇತರ ಪ್ರಾಂತೀಯರ ಮೋರೆಯನ್ನು ನೋಡುತ್ತ ಕುಳಿತುಕೊಳ್ಳುವಂತಾಯ್ತು.... ಯಾಕೆಂದರೆ ನಿಜವಾಗಿಯೂ ಈ ಕಾಲದ ಮೊದಲಿನ ಕನ್ನಡ ನಟರು ಮತ್ತು ಲೇಖಕರು ಅನ್ಯಪ್ರಾಂತಿಯರ ಮೇಲೆ ಪ್ರಭಾವ ಕೆಡುಹುವಷ್ಟು ಸತ್ತ್ವಶಾಲಿಗಳಾಗಿದ್ದರು.... ಕ್ರಿ. ಶ. ೧೮೭೦ ರಲ್ಲಿ ಮುದ್ರಿತವಾದ ಶ್ರೀ. ಚುರಮುರಿ ಶೇಷಗಿರಿರಾಯರ ‘ ಶಾಕುಂತಲ ’ ನಾಟಕವನ್ನೇ ಆಧಾರವಾಗಿಟ್ಟುಕೊಂಡು ಅಣ್ಣಾ ಕಿರ್ಲೋಸ್ಕರವರು ತಮ್ಮ ‘ ಸಂಗೀತ ಶಾಕುಂತಲ ’ವನ್ನು ಬರೆದರೆಂಬುದು, ಮತ್ತು ಕನ್ನಡ ಪದಗಳ ಧಾಟಿಯಲ್ಲಿಯೇ ತಮ್ಮ ಮರಾಠಿ ಹಾಡುಗಳನ್ನು ಬರೆದರೆಂಬುದು ಇಂದು ತುಂಬಾ ಒಪ್ಪಿತವಾದ ಮಾತಾಗಿದೆ. ಕ್ರಿ. ಶ. ೧೮೮೩ ರಲ್ಲಿ ಅಣ್ಣಾ ಕಿರ್ಲೋಸ್ಕರವರು ಪುಣೆಯಲ್ಲಿ ಮೊಟ್ಟ ಮೊದಲಿಗೆ ತಮ್ಮ ನಾಟಕದ ಪ್ರಯೋಗವನ್ನು ಮಾಡಿದಾಗ, ಅದರಲ್ಲಿಯ ಹಾಡುಗಳ ಮಟ್ಟವನ್ನು ಕಂಡು ಎಲ್ಲರೂ ಮುಗ್ಧರಾದರೆಂದು ಕೇಳಿದವರು ಹೇಳುತ್ತಾರೆ. ಕ್ರಿ. ಶ. ೧೯೧೭ರ ‘ ಕೇಸರಿ ’ಯಲ್ಲಿ ಬರೆದ ಒಂದು ಲೇಖದಲ್ಲಿ ಶ್ರೀ. ವಿಠ್ಠಲ ರಾಮಜಿ ಸಿಂಧೆ ಎನ್ನುವವರು, ಶ್ರೀ ವಿಷ್ಣುದಾಸ ಭಾವೆ ಎಂಬ ಸುಪ್ರಸಿದ್ಧ ಮರಾಠೀ ನಾಟಕಕಾರರ ಪೌರಾಣಿಕ ನಾಟಕಗಳಿಗೆ ಕನ್ನಡದ ‘ ಯಕ್ಷಗಾನ ’ಗಳೇ ಮೂಲವಾಗಿದ್ದುವೆಂದು ಹೇಳುತ್ತಾರೆ. ಅದರಂತೆಯೆ, ಕ್ರಿ. ಶ ೧೮೭೪ ರ ಸುಮಾರು, ಕನ್ನಡದ ಘಟ್ಟದ ಆಟದವರನ್ನು ನೋಡಿ ಮಿರಜಿ, ಕೊಲ್ಹಾಪುರ ಮೊದಲಾದ ಮರಾಠೀ ಪ್ರದೇಶಗಳಲ್ಲಿಯ ನಾಟಕಕಂಪನಿಗಳು ತಮ್ಮಲ್ಲಿಯ ಅನೇಕ ಸುಧಾರಣೆಗಳನ್ನು ಮಾಡಿಕೊಂಡುವಂತೆ ಎಂದು ಶ್ರೀ. ನಾರಾಯಣ

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಂಕಟೇಶ ಕುರಡಿಯವರು ಹೇಳುತ್ತಾರೆ. ಅದೇನೆ ಇರಲಿ, ನ್ನಡ ನಾಟಕ ಪರಂಪರೆ ಅನ್ಯರ ಮೇಲೆ ಇಷ್ಟರಮಟ್ಟಿನ ಪ್ರಭಾವ ನ್ನು ಕೆಡುಹುವಷ್ಟು ಶಕ್ತಿಯುತವಾಗಿದ್ದರೂ ಕೂಡ, ಕ್ರಿ. ಶ. ೭೦ ರ ಸುಮಾರು ತೇಜೋಹೀನವಾಗಿ ಮರಾಠಿಯ ಕಂಪನಿಗಳ ಖವನ್ನು ನೋಡುವಂತಾಯ್ತು. ಕನ್ನಡಿಗರು ಮರಾಠಿಗರ ಲೆ ಮಾಡಿದ ಪ್ರಭಾವ ಮತ್ತು ಅನಂತರ ತಾವೇ ಸೋತು ಗಾದುದನ್ನು ದಿವಂಗತ ಶಾಂತಕವಿಗಳು ತುಂಬಾ ಮನನೀಯ ಗಿ ವರ್ಣಿಸುತ್ತಾರೆ—ಕನ್ನಡದ ಭಾಗವತರ ಆಟಗಳನ್ನು ೋಡಿದ ಮರಾಠಿಗರು—

ಅವುಗಳ " ಗಂಡುಡಿಗೆ ಗಂಡುಗಾಯನ ಗಂಡುಗುಣಿತಂ
ಗಂಡುಗೇಕೆ ಹಾಂಕೆ ಲಾಲಿ
ಗಂಡುಗರ್ನಿಸು ಮರ್ದಳಾವಾದ್ಯ ಗಂಡುಜಾಂಗಟೆ ಫುಂಡಿ-
ಕಟ್ಟಿಗೆಗಳ,
ಪೆಂಡೆಗಳ ಬೊಂಬಾಳ ಪಂಜುಗಳೊಡನೆ ಧರ್ಮ-
ಮಂಡನ ಪುರಾಣ ಕಥೆ ಆಟಗಳನಾಡಿ ಬುಧಮಂಡಳಿಯ
ಮೆಚ್ಚಿಸಿದ......"

ಘಟ್ಟದ ಬುಡದ ಭಾಗವತರ ಆಟಗಳನ್ನು ನೋಡಿ ಮಹಾ- ಷ್ಟ್ರೀಯರು ಅನೇಕ ಸುಧಾರಣೆಗಳನ್ನು ತಮ್ಮ ನಾಟಕಗಳಲ್ಲಿ ಡಿಕೊಂಡರು. 'ಶಾಂತ ಕವಿಗಳು' ಹೇಳುವಂತೆ:

ನೆರೆ ಮಹಾರಾಷ್ಟ್ರದವರೀ ಭಾಗವತರ ಮಾ-
ದರಿಗಳಂ ಕೊಂಡು ಅವುಗಳಲಿ ನಸುತಿದ್ದುಪಡಿ
ಮೆಂಸಿ ತಬಲಾಝಾಂಜು ಸೀನು ಪಡದಾ ವಿದೂಷಕ
ಸೂತ್ರಧಾರ ಮೇಣು
ಕರಿವದನ ಶಾರದಾಗಮನ ಮಧ್ಯಮಗಾನ
ಕರವಾಳಗಳ ತಿರುಪು ನಯದ ಪೆಣ್ಸೋಗು ಜಂ-
ದರ ಥಿಯೇಟರುಗಳೊಡನಾಡಿ ನಾಟಕವೆಂದು ಗಳಿಸಿದರ್
ದೃಶ್ಯವನ್ನು......"

ಹೀಗಾಗಿ, ಮಹಾರಾಷ್ಟ್ರೀಯರು ಕನ್ನಡ ನಾಟಕಗಳಲ್ಲಿ ಹೊಸ- ಗಿ ಸೇರಿಸಿದ ತಬಲಾ ಝಾಂಜು ಮೊದಲಾದ ಸಂಗೀತ ಸಲ- ಣೆಗಳ ಮೂಲಕವೂ, ಸೀನು ಪಡದೆ ಮೊದಲಾದ ರಂಗೋಪ- ಣಗಳ ಮೂಲಕವೂ ನಯದ ಪೆಣ್ಸೋಗು ವಿದೂಷಕ ದಲಾದ 'ಪಾತ್ರಗಳ ಸುಂದರ ಅಭಿನಯದ ಮೂಲಕವೂ ವಾಳಗಳ ತಿರುಪಿನ ಚಾಕಚಕ್ಯದ ಮೂಲಕವೂ' ಕನ್ನಡ ನುಸನನ್ನು ಸೂರೆಗೊಂಡರು. ಮಹಾರಾಷ್ಟ್ರಕ್ಕೆ ಈ ಮೊದಲು ಸ್ಥಾನದಲ್ಲಿದ್ದ ಕನ್ನಡವು ಈಗ ಹೌಹಾರಿ ಅದರ ಮುಖವನ್ನು ನೋಡುವಂತಾಯಿತು. ಶಾಂತಕವಿಗಳು ಹೇಳಿದ ಹಾಗೆ ಈ ಲವಲ್ಲಿ:

"ಎಲ್ಲಿ ನೋಡಿದರು ಮರಾಠಿಯರ ನಾಟಕಕೀರ್ತಿ |
ಯೆಲ್ಲಿ ನೋಡಲು ಮರಾಠಿಯರ ನಾಟಕದರ್ಥಿ |
ಯೆಲ್ಲಿ ನೋಡಲು ಮರಾಠಿಯರ ನಾಟಕ ನಟರ ಮೂರ್ತಿಗಳ
ಸಂಚಾರವು ||

ಶಾಂತಿ ಸಾಹಿತ್ಯಮಾಲೆ

ಬಾದಾಮಿ

(ವಿಜಾಪೂರ ಜಿಲ್ಹೆ)

ಈಗ ತಾನೆ ಅರಳಿವೆ:

ಪೂಜಾ (ಗದ್ಯಗೀತಗಳು)
ಶ್ರೀ. ಸಿಂಪಿ ಲಿಂಗಣ್ಣನವರು.

ಶೋಚನೀಯ ನಿಧನ (ಕಥಾಸಂಗ್ರಹ)
ಶ್ರೀ. ರಾ. ಪಾ. ಶಿರೋಳ.

ಅರಿಯಾಳು (ನೀಳ್ಗತೆಗಳೆರಡು)
ಶ್ರೀ. ಕುಲಕರ್ಣಿ ಬಿಂದುಮಾಧವ.

ಕೆರೆಗೆಹಾರ (ಅಚ್ಚಿನಲ್ಲಿ) ಕಾದಂಬರಿ

ಕೇವಲ ನಾಲ್ಕು ರೂಪಾಯಿ ಚಂದಾ ಹಣಕ್ಕೆ

ಈ ಮೇಲಿನ ಪುಸ್ತಕಗಳಲ್ಲದೆ ಇನ್ನೊಂದು ಕಾದಂಬರಿ ಚಂದಾದಾರರಾಗುವವರಿಗೆ ದೊರೆಯುತ್ತದೆ.

ಎಲ್ಲಿ ನೋಡಲು ಮರಾಠಿಯರ ನಾಟಕದಾಟ- |
ವೆಲ್ಲಿ ನೋಡಲು ಮರಾಠಿಯರ ನಾಟಕದೂಟ- |
ವೆಲ್ಲಿ ನೋಡಲು ಮರಾಠಿಯರ ನಾಟಕಮಯಂ
ತಾನಾಯ್ತು ಕರ್ನಾಟಕಂ ||

ಈ ಸಮಯದಲ್ಲಿ "ಸ್ವಾರಸ್ಯವಿಲ್ಲ; ನಾಟಕವಿಲ್ಲ; ನಟನರ್ತಿಗಳಿಲ್ಲ, ಮುಂದಾಗುವಾಶೆಕೂಡಿಲ್ಲ" ಎಂದು ಧಾರವಾಡ ಸೀಮೆಯ ಜನವು ಸೊಲ್ಲಿಸುವ ಕಾಲದಲ್ಲಿ, ಕೃತುಪುರದಲ್ಲಿ ಹೊಸದಾಗಿ ಒಂದು ನಾಟಕ ಕಂಪನಿಯು ಹುಟ್ಟಿತು. ಈ ಕಂಪನಿಯ ಪೂರ್ಣ ಹೆಸರು "ಶ್ರೀ ವೀರ- ನಾರಾಯಣ ಪ್ರಾಸಾದಿಕ ಕೃತುಪುರ ನಾಟಕ ಮಂಡಳಿ" ಇದನ್ನು ಕ್ರಿ. ಶ. ೧೮೭೨-೭೩ ರಲ್ಲಿ ಶ್ರೀಗಳಾದ ಉಮಚಗಿ ಲಚ್ಚಪ್ಪ ನಾಯಕರು, ಗುಡಿ ರಾಘವೇಂದ್ರಾಚಾರ್ಯರು, ಕೋಣ್ಣೂರ ಜೀವಬಾಳಪ್ಪನವರು ಮತ್ತು ಕುನ್ನಿಭಾವಿ ಇಮ್ಮಣ್ಣ ಮೊದಲಾ- ದವರುಕೂಡಿ ಸ್ಥಾಪಿಸಿದರು. ಅನಂತರ ಇದಕ್ಕೆ ಅಸುಂಡಿ ವೆಂಕಪ್ಪ, ಡೋಣಿ ರಂಗಪ್ಪ, ತಳಕಲ್ಲ ಗುರುಲಿಂಗಪ್ಪ ಮತ್ತು ಯಜ್ಞೇಶ್ವರ ಪಂತ ಮೊದಲಾದವರು ಸೇರಿಕೊಂಡರು. ಈ ಕಂಪನಿಯವರು ಬಹು ದೂರದ ವರೆಗೆ ಧಾರವಾಡ, ಬೆಳಗಾಂವಿ, ನರಗುಂದ ನವಿಲುಗುಂದ ಮೊದಲಾದ 'ಪ್ರದೇಶಗಳಿಗೆ' ಹೋಗಿ ತಮ್ಮ ದಿಗ್ವಿಜಯವನ್ನು ಮೆರೆದರು. ಈ ಕಂಪನಿಯವರು ಸಾಮಾನ್ಯವಾಗಿ "ಶಾಂತಕವಿ"ಗಳು ಒರೆದ ನಾಟಕಗಳನ್ನು ಆಡುತ್ತಿದ್ದರು. ಇವರು ಆಡಿದ ಮೊದಲನೆಯ ನಾಟಕವೆಂದರೆ "ಬಾಣಾಸುರ" ಎಂಬ ಆಖ್ಯಾನ. ಈ ಕಂಪನಿಯ ನಾಟಕಗಳು ಒಮ್ಮೆಲೇ ಯಶಸ್ವಿಯಾ-

ದುವು. ಈ ಯಶಸ್ಸನ್ನು ಸಹಿಸದ ಮರಾಠೀ ಶಿಕ್ಷಣಾಧಿಕಾರಿಗಳು, ಶಾಂತಕವಿಗಳನ್ನು ಈ ಕಂಪನಿಯಿಂದ ಹೊರಗಿಡಬೇಕೆಂಬ ದೃಷ್ಟಿಯಿಂದ ಹೊಂಬಳಕ್ಕೆ ವರ್ಗಮಾಡಿದರು. ಆದರೂ ಕನ್ನಡದ ಮೇಲೆ ಅಪಾರ ಅಭಿಮಾನವಿದ್ದ ಶಾಂತಕವಿಗಳು, ಕುದುರೆಯ ಮೇಲಾಗಲಿ ನಡೆದಾಗಲಿ ೯ ಮೈಲು ಗದುಗಿನ ವರೆಗೆ ಬಂದು, ದಿನಾಲು ಸೂಚನೆಗಳನ್ನು ಕೊಟ್ಟು ಹೋಗುತ್ತಿದ್ದರು. ಈ ಕಂಪನಿಯು ಸುಮಾರು ೨೨ ವರ್ಷ ಕನ್ನಡ ರಂಗಭೂಮಿಯ ಸೇವೆಯನ್ನು ಸಲ್ಲಿಸಿ ಕ್ರಿ. ಶ. ೧೮೯೮-೯೯ರಲ್ಲಿ ಮುರಿದುಹೋಯಿತು. ಎಷ್ಟು ಸಾಹಸಪಟ್ಟರೂ ಇದರ ಜೀರ್ಣೋದ್ಧಾರವು ಸಾಧ್ಯವಾಗಲಿಲ್ಲ—ಈ ಮಂಡಳಿಯವರು ನಾಟಕವಾಡುವ ರೀತಿಯು ಹೀಗಿದ್ದಿತು—ಮೊದಲು ಸೂತ್ರಧಾರನು ಬಂದು ಮಂಗಳಾಚರಣವನ್ನು ಹೇಳಿದ ಮೇಲೆ, ವಿದೂಷಕನು ಜೇವುಗೊಂಚಲುಗಳನ್ನು ಮುಖಕ್ಕೆ ಕಟ್ಟಿಕೊಂಡು ಜನರಲ್ಲಿ ಹಾಸ್ಯವು ಹುಟ್ಟುವಂತೆ ಕುಣಿಯುತ್ತಿದ್ದನು. ಆನಂತರ ನಾಟಕದ ಪ್ರಸ್ತಾವನೆಯಾದ ಮೇಲೆ ಸಿದ್ಧಿವಿನಾಯಕನು ಬಂದು ಆಶೀರ್ವದಿಸಿ ಹೋಗುವನು. ಅದಾದ ಮೇಲೆ ಶಾರದಾದೇವಿಯು ತನ್ನ ನವಿಲ ಮೇಲೆ ಕುಳಿತು, ಪ್ರವೇಶ ಮಾಡಿ, ಕುಣಿದು, ತಾನೂ ಆಶೀರ್ವಾದ ಮಾಡಿ ಹೋಗುವಳು. ಇದಾದನಂತರ ಸೂತ್ರಧಾರನು ಎಲ್ಲ ಪಾತ್ರಗಳ ಪರಿಚಯವನ್ನು ಮಾಡಿಕೊಡುವನು. ಹಲಸಿಗೆ ನಾಟಕ ಕಂಪನಿಯಲ್ಲಿಯಂತೆ ಇಲ್ಲಿಯ ನಟರೂ ಕೂಡ ವೇದಾಧ್ಯಯನ ಸಂಪನ್ನರೂ, ಸಚ್ಚಾರಿತ್ರ್ಯವುಳ್ಳವರೂ ಆಗಿದ್ದರು. ಹೋದಲ್ಲೆಲ್ಲ ಇವರಲ್ಲಿ ಅನೇಕರು ಜನರಿಗೆ ಕಾವ್ಯಾದಿಗಳನ್ನು ಹೇಳಿ ಕೊಡುತ್ತಿದ್ದರು. ಈ ಕಂಪನಿಯ ಮುಖ್ಯ ನಟರಾದ ಗುಡಿ ರಾಘವೇಂದ್ರಾಚಾರ್ಯರು ಅಭಿನಯಿಸಿದ ಭೀಮಸೇನ-ಘಟೋತ್ಕಚ ಪಾತ್ರಗಳು ತುಂಬಾ ಪ್ರೇಕ್ಷಣೀಯವಾಗಿದ್ದುವೆಂದೂ ಮತ್ತು ಇವರ ಅಭಿನಯಪಟುತ್ವವನ್ನು ಮೆಚ್ಚಿ ವಿಜಾಪುರದ ಕಲೆಕ್ಟರ್ ಸಾಹೇಬರು ಸಂತುಷ್ಟರಾಗಿ ಇವರಿಗೆ ಒಂದು ಪ್ರಶಸ್ತಿಪತ್ರಿಕೆಯನ್ನು ಕೊಟ್ಟರೆಂದೂ ನೋಡಿದವರು ಹೇಳುತ್ತಾರೆ. ಈ ಕಂಪನಿಯವರು ಆಡಿದ ಪ್ರತಿ ನಾಟಕಕ್ಕೆ ಆಗಿನ ಅಗ್ಗಳತೆಯ ಕಾಲದಲ್ಲಿ ಸುಮಾರು ೧೦೦೦—೧೨೦೦ ರೂಪಾಯಿಗಳಷ್ಟು ಉತ್ಪನ್ನವಾಗುತ್ತಿತ್ತಂತೆ! ಈ ಕಂಪನಿಯಲ್ಲಿ ಡಂಬಳ ಹುಚ್ಚಾಚಾರ್ಯರು ಸ್ತ್ರೀ ಪಾತ್ರವನ್ನೂ, ಜೇನು ಬಾಳಪ್ಪನವರು ಸೂತ್ರಧಾರನ ಪಾತ್ರವನ್ನೂ, ಬಾದಾಮೀ ಪುಟ್ಟಾಚಾರ್ಯರು ವಿನೋದದ ಪಾತ್ರಗಳನ್ನೂ ಅಭಿನಯಿಸುತ್ತಿದ್ದರಂತೆ. ಇವರ ಗಾಯನಕ್ಕೆ ಮದ್ದಳೆಯ ಜೋಡು, ಕುನ್ನಿಭಾವಿ ಇಮ್ಮಣ್ಣನದು. ಈ ರೀತಿ ಯಶೋದುಂದುಭಿಯನ್ನು ಮೊಳಗಿದ ಈ ಕಂಪನಿಯ ಗುರುಗಳಾದುದಕ್ಕೆ ಸ್ವತಃ ಶಾಂತಕವಿಗಳೂ ತುಂಬಾ ಹೆಮ್ಮೆಪಟ್ಟುಕೊಂಡಿದ್ದಾರೆ.—' ಬರೆದು ಕಲಿಸಿದರಿಂದೆ ಗುರುಗಳಾದೆವು ನಾವು, ನರ ಕಲಿತು ನಟಿಸಿದವರೆಲ್ಲರೂ ಶಿಷ್ಯರಾದರು.

" ಈ ನಾಟಕ ಪ್ರಥಮ ಪ್ರಯೋಗವಂ ಕಂಡ ಯೆಮ್ಮ ಕನ್ನಡಿಗರು ಹರುಷದುದ್ರೇಕದಿಂದ " ಆನಂದಬಾಷ್ಪವನ್ನು ಸುರಿಸಿದರಂತೆ. ಆಗಿನ ಕನ್ನಡ ಜನತೆ ಈ ಕಂಪನಿಯ ಬಗ್ಗೆ ತೆಗೆದ ಉದ್ಗಾರಗಳೆಂದರೆ "ಚೆಲುವ ರೂಪಗಳಿಹವು! ಚೆಂದ ವೇಷಗಳಿಹವು!! ಲಲಿತ ಭಾಷಣವಿಹುದು! ತಿಳಿಗಾನವೂ ಇಹುದು ಬೆಳೆದ ಭಕುತರ ಮಹಿಮೆಯಿಹುದು ಹರಿಹರರ ಅಗಾಧ ಲೀಲೆಯು!!!" ಎಂದು ಉತ್ಸಾಹವುಕ್ಕಿ ಆನಂದಪಟ್ಟರಂತೆ.

ಇದೇ ಕಾಲಕ್ಕೆ ಹೆಚ್ಚು ಕಡಿಮೆ ಗುಳೇದಗುಡ್ಡದ "ಬಾ... ಕಂಪನಿಯೂ" ಬಾದಾಮಿಯ ಅನೇಕ ಕಂಪನಿಗಳೂ ಕನ್ನಡ ರಂಗಭೂಮಿಗೆ ತಮ್ಮ ಸೇವೆಯನ್ನು ಸಲ್ಲಿಸಿದುವು. ಹೆಚ್ಚು ಕಡಿಮೆ ಇದೇ ಸುಮಾರಿಗೇ ಈ ಭಾಗದಲ್ಲಿ ಸುಪ್ರಸಿದ್ಧವಾದ ಇನ್ನೊಂದು ನಾಟಕ ಕಂಪನಿಯೆಂದರೆ ಧಾರವಾಡದ "ತಂತುಪುರ ಸಂಗೀತ ನಾಟಕ ಮಂಡಳಿ." ಈ ಕಂಪನಿಯಲ್ಲಿ ಶ್ರೀಯುತರು ಭೀಮಾಚಾರ್ಯ ಪರಿ, ದತ್ತಾತ್ರಯ ಧಾರವಾಡ, ರಾಮಚಂದ್ರ ಹಲಸಗಿ—ಮೊದಲಾದವರು ಪಾತ್ರವಹಿಸುತ್ತಿದ್ದರು. ಈ ಕಂಪನಿಯವರು ಮಹಾರಾಷ್ಟ್ರ, ಗುಜರಾಥ, ವಿದರ್ಭ, ಆಂಧ್ರ— ಮೊದಲಾದ ಪ್ರಾಂತಗಳಿಗೆ ಹೋಗಿ, ಅಲ್ಲಿಯ ಪ್ರಾದೇಶಿಕ ಭಾಷೆಗಳಲ್ಲಿಯೇ ನಾಟಕಗಳನ್ನಾಡುತ್ತಿದ್ದರೆಂದು ಪ್ರತೀತಿ. ಕ್ರಿ. ಶ. ೧೮೮೭ರಲ್ಲಿ ಧಾರವಾಡಕ್ಕೆ ರೇಲ್ವೆ ಬರಲು, ಈ ಕಂಪನಿಯ ಜನರೆಲ್ಲ ಕಲಾಸೇವೆಯನ್ನು ಬಿಟ್ಟು, ನೌಕರಿಯ ಹಿಡಿದರಂತೆ!

ಇದಾದ ಮೇಲೆ ಸುಪ್ರಸಿದ್ಧವಾದ ನಾಟಕ ಕಂಪನಿಯೆಂದರೆ ಬೈಲಹೊಂಗಲದ ಶ್ರೀ. ಕಣಬರಗೀಮಠ ಶಿವಮೂರ್ತಿಸ್ವಾಮಿಗಳ "ಕೊಣ್ಣೂರ ನಾಟಕ ಮಂಡಳಿ." ಶ್ರೀಯುತರು ಕನ್ನಡ ರಂಗಭೂಮಿಯ ಮಟ್ಟವು ಉನ್ನತವಾಗಬೇಕೆಂಬ ದೃಷ್ಟಿಯಿಂದ ಈ ಹಣವನ್ನು ವ್ಯಯಿಸಿದರು. ಅವರು ಪಟ್ಟ ಶ್ರಮಕ್ಕೆ ತಕ್ಕ

ಶಾಂತಿಸೇವಾ ಸದನದ ಸುಂದರ ಪ್ರಕಟಣೆ!

" ಮಾಯಾ ಮಂದಿರ '

ಶ್ರೀ ಭುಜೇಂದ್ರ ಮಹಿಷವಾಡಿ

ಅವರ

ಸರ್ವೋತ್ಕೃಷ್ಟ ಕವನ ಸಂಗ್ರಹ.

ಪ್ರೊ. ಮುಗಳಿ ಅವರು ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ:

'ಮಾಯಾ ಮಂದಿರ' ದಿಂದ ಮೊದಲಾಗಿ 'ಶಾಂತ' ಯಲ್ಲಿ ಕೊನೆಗೊಳ್ಳುವ ಈ ಸಂಗ್ರಹವು ಭುಜೇಂದ್ರರ ಶಾಂತಿತ್ವ ಕವೃಷ್ಟಿಗೆ ಸಾಕ್ಷಿಯಾಗಿದೆ. ಭುಜೇಂದ್ರರ ಕವಿತಾಶಕ್ತಿ ಅಜೇಯವಾದುದು, ಸಹಜವಾದುದು.' ಬೆಲೆ: ೧-೮-೦

ದೊರೆಯುವ ಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,

ಉಗಾರ (ಜಿಲ್ಲಾ ಬೆಳಗಾವ

ವ್ಯಾಪಾರಿಗಳಿಗೆ ತುಂಬ ಸವಲತ್ತು ಇದೆ.

ಪ್ರೋತ್ಸಾಹವು **ದೊರಕದಿದ್ದರೂ, ಅವರು ಕನ್ನಡ ರಂಗಭೂಮಿಯ** ಸೇವೆಗಾಗಿ ಗೈದ ಸೇವೆಯು ಅಮೋಘವಾಗಿದೆ.

ಇದಾದ ನಂತರ ಸುಪ್ರಸಿದ್ಧವಾದ ನಾಟಕ ಕಂಪನಿಯೆಂದರೆ—ಶಿರಹಟ್ಟಿಯ ಶ್ರೀ. ವೆಂಕೋಬರಾಯರ "ಶ್ರೀಲಕ್ಷ್ಮೀ ಪ್ರಾಸಾದಿಕ ನಾಟಕ ಮಂಡಳಿ". ಈ ಕಂಪನಿಯು ಕ್ರಿ. ಶ ೧೯೦೪ ರಲ್ಲಿ ಸ್ಥಾಪಿತವಾಗಿ, "ಪದ್ಮಾವತಿ" "ಕೃಷ್ಣಲೀಲೆ" "ದಶಾವತಾರ" ಮೊದಲಾದ ನಾಟಕಗಳನ್ನು ಆಡಿತು. ಮೊದಮೊದಲೇನೋ ಈ ಕಂಪನಿಯು ಹೆಚ್ಚಾಗಿ ಸಂಗೀತಪ್ರಧಾನವಾಗಿಯೇ ಪ್ರಾರಂಭವಾಗಿದ್ದರೂ, ಕೊನೆಗೆ ಹೆಚ್ಚಾಗಿ ರಂಗ-ಸಲಕರಣೆಗಳ ಬಗ್ಗೆ ಆಸಕ್ತಿಯನ್ನು ವಹಿಸಿತು. ಈ ಕಂಪನಿಯ ಅದ್ಭುತರಮ್ಯ—ರಂಗಸಲಕರಣೆಗಳು, ಸುಂದರವಾದ ವೇಷಭೂಷಣಗಳು, ವೈವಿಧ್ಯಪೂರ್ಣವಾದ ಸಂಗೀತದ ಸಲಕರಣೆಗಳು— ಈ ಮೊದಲಾದುವು ಇಂದಿಗೂ ಜನಮನದಲ್ಲಿ ನಿರಂತರವಾಗಿ ನಿಂತಿವೆ. ಶ್ರೀಯುತರ ಕಂಪನಿಯ "ದಶಾವತಾರ" ನಾಟಕದಲ್ಲಿ, ನರಸಿಂಹಾವತಾರದ ಕಾಲಕ್ಕೆ ಆಗುತ್ತಿದ್ದ "transfer Seenery" ಯು ಇಂದಿಗೂ ಕಣ್ಣೆದುರಿಗೆ ಕಟ್ಟುವಂತಿದೆ. ಈ ಸನ್ನಿವೇಶದಲ್ಲಿ ಶ್ರೀಯುತರು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ರಂಗಸ್ಥಲದಲ್ಲಿದ್ದ ೮-೧೦ ಕಂಬಗಳಲ್ಲೆಲ್ಲ ಒಂದೇ ಕ್ಷಣಕ್ಕೆ ನರಸಿಂಹವಿಗ್ರಹವು ಕಾಣುವಂತೆ ಮಾಡಿದ್ದರಲ್ಲಿ ಕನ್ನಡ ನಾಟ್ಯಪ್ರಪಂಚವು ಸಿನೀಮಾಪ್ರಪಂಚದ ಸನ್ನಿಧಾನವನ್ನು ಹೊಂದಿಸಿಕೊಳ್ಳುತ್ತಿದ್ದ ಒಲವನ್ನು ಕಾಣುತ್ತೇವೆ. "ಅಭಿನವ ಆಂಜನೇಯ"ನೆಂದು ಪ್ರಖ್ಯಾತಿಪಡೆದ ಇದೇ ಕಂಪನಿಯ ಶ್ರೀ ನಂಜುಂಡಯ್ಯನವರ "ಆಂಜನೇಯ"ನ ಪಾತ್ರವಂತೂ ಜನರನ್ನು ಮುಗ್ಧಗೊಳಿಸುವಂತಿತ್ತು. ಅನಂತರ ತಮ್ಮದೇ ಆದ ಕಂಪನಿಯನ್ನು ಸ್ಥಾಪಿಸಿದ ಶ್ರೀ. ವಾಮನರಾವ್ ಮಾಸ್ತರ ಅವರು ಈ ಕಂಪನಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು.



೩೫ ವರ್ಷಗಳಿಂದ ಅನುಭವಪಟ್ಟ

ಕರ್ಕರೆ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:—

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಶ್ರೀ. ವಾಮನರಾವ್ ಮಾಸ್ತರ ಅವರು ಶಿರಹಟ್ಟಿ ಕಂಪನಿಯಿಂದ ಹೊರಬಿದ್ದ ಮೇಲೆ, ಕ್ರಿ. ಶ. ೧೯೧೩ ರ ಸುಮಾರಿಗೆ ತಮ್ಮ "ವಿಶ್ವಗುಣಾದರ್ಶ ನಾಟಕ ಮಂಡಳಿ" ಯನ್ನು ಪ್ರಾರಂಭಿಸಿದರು. ಶ್ರೀ. ವೆಂಕೋಬರಾಯರ ನಾಟಕಗಳಲ್ಲದೆ, ಈ ಕಂಪನಿಯವರು "ಸಂಶಯಕಲ್ಲೋಳ" "ಬಾಜೀರಾವ್ ಪೇಶವೆ"—ಮೊದಲಾದ ಅನೇಕ ಮರಾಠೀ ನಾಟಕಗಳ ಅನುವಾದವನ್ನು ಆಡುತ್ತಿದ್ದರು. ಈ ಕಂಪನಿಯ ಮುಖ್ಯ ನಟ-ನಟಿಯರೆಂದರೆ ಶ್ರೀ. ವಾಮನರಾವ್ ಮಾಸ್ತರ್ ಮತ್ತು ಗಾನರತ್ನ ಗಂಗೂಬಾಯಿ ಗುಳೇದಗುಡ್ಡ ಅವರು. ಹೆಚ್ಚಾಗಿ ಸಾಮಾಜಿಕ ಮತ್ತು ಐತಿಹಾಸಿಕ ಅಂಶಗಳನ್ನು ಸೇರಿಸಿ ಕನ್ನಡ ಕಂಪನಿಗಳು ಹೆಚ್ಚೆಚ್ಚು ಸುವ್ಯವಸ್ಥಿತವಾಗಿರುವಂತೆ ಮಾಡಿದ ಶ್ರೇಯಸ್ಸು ಶ್ರೀ. ವಾಮನರಾಯರಿಗೆ ಸಲ್ಲಲೇಬೇಕು.

"ವಿಶ್ವಗುಣಾದರ್ಶ" ನಾಟಕ ಮಂಡಳಿಯನ್ನು ಬಿಟ್ಟಮೇಲೆ ಗಾನರತ್ನ ಗಂಗೂಬಾಯಿಯವರು, ತಮ್ಮದೇ ಆದ "ಶ್ರೀಕೃಷ್ಣ ನಾಟಕಮಂಡಳಿ" ಎಂಬ ಬೇರೊಂದು ಕಂಪನಿಯನ್ನು ಸ್ಥಾಪಿಸಿದರು. ಶ್ರೀಮತಿಯವರು ನಾಟಕವೇ ಉಸಿರಾಗಿರುವ ಸುಪ್ರಸಿದ್ಧ ಗುಳೇದಗುಡ್ಡದವರು; ಅಲ್ಲದೆ, ಅವರ ತಾಯಿಯೂ ಕೂಡ ಒಂದು ಕಾಲಕ್ಕೆ ನಾಮಾಂಕಿತ ನಟಿಯಾಗಿದ್ದರು. ಹೀಗಾಗಿ, ನಾಟಕದ ವಾತಾವರಣದಲ್ಲೇ ಬೆಳೆದ ಗಂಗೂಬಾಯಿಯವರು ಕನ್ನಡ ರಂಗಭೂಮಿಗೆ ಅಮೋಘವಾದ ಸೇವೆಯನ್ನು ಸಲ್ಲಿಸಿದರು. ಸುಮಧುರವಾದ ಕಂಠ, ಶಾಸ್ತ್ರೀಯವಾದ ಸಂಗೀತ ಸಾಧನೆ, ಸುಂದರವಾದ ದೇಹಯಷ್ಟಿ, ಅದಕ್ಕೆ ತಕ್ಕ ನಯವಾದ ಹಾವ-ಭಾವ ಅಂಗವಿನ್ಯಾಸ—ಇವುಗಳ ಮೂಲಕ ಶ್ರೀಮತಿಯವರ ಅಭಿನಯವು ಕಣ್ಣಿಗೆ ಒಂದು ಹಬ್ಬವಾಗಿದ್ದಿತು. ಅವರಲ್ಲಿಯೂ ಶ್ರೀಮತಿಯವರ "ಮಹಾನಂದಾ" ನಾಟಕದಲ್ಲಿ ವೇಷಧಾರಿಯಾದ ಶಿವನು ಸರ್ವವಿಧವಾಗಿಯೂ ಪಾರ್ವತಿಯ ಸತ್ತ್ವಪರೀಕ್ಷೆಯನ್ನು ಮಾಡಿದಾಗ ಇವನೇ ಶಿವನಿರಬೇಕೆಂದು ನಿಶ್ಚಯಿಸಿ ಪಾರ್ವತಿಯು ಹೇಳುತ್ತಿದ್ದ—"ಇವನೇ ಗಿರಿಜಾರಮಣನೇ—ಇವನೇ ಫಾಲಾಕ್ಷಶಿವನೇ" ಎಂಬ ಹಾಡು ಒಂದು ಕಾಲಕ್ಕೆ ಜನತೆಗೆ ಹುಚ್ಚು ಹಿಡಿಸಿತ್ತು.

ತೀರ್ಪು

ಶ್ರೀ ಚೆನ್ನವೀರ ಕಣವಿ, ಧಾರವಾಡ

★

"Judge not, that ye be not judged"
—*Jesus Christ.*

ಒಂದು ಸಂಜೆ ಪಿಂಜರಿತ ಮೋಡ ಪಡುವಣದ ಬಾನಿನಲ್ಲಿ
ಶ್ರೀ ಸ್ವಯಂಭು ವಿಚ್ಛಂದ ಮನದಿ ಕುಳಿತಂತೆ ಲೀಲೆಯಲ್ಲಿ
ಶೋಭಿಸಿರಲು, ಕಟ್ಟಿಟ್ಟ ಹರಿವನರ ಹಬ್ಬಿದಂಥ ಕಡಲು
ತೆರೆಯನಟ್ಟಿ ತೆರೆ ತೂರುತಿತ್ತು ಹುಡಿ ಚಿನ್ನದಂಥ ಮಳಲು.

ಕಡಲಿನಂಚಿನಲಿ ಸೂರ್ಯಬಿಂಬವಿನ್ನೇನು ಮುಳುಗುತಿತ್ತು
ಕಿರಣಗೊಂಡ ಕೆಂದಳಿರ ಹಾಸಿದೊಲು ನೀರು ಮಿರುಗುತಿತ್ತು
ಮಂದಗಾಮಿ ತಂಗಾಳಿ ರಮ್ಯನೊಯ್ಯಾರದಿಂದ ಬಂದು
ಮುಟ್ಟಿ ಮುಟ್ಟದೊಲು ತೀಡುತಿತ್ತು ತೆರೆ-ಚುಂಬನಕ್ಕೆ ಸಂದು.

ಯೇಸು ಕ್ರಿಸ್ತ ಅಸ್ವಸ್ಥ ಮನದಿ ಕುಳಿತಿದ್ದ ಮಳಲ ತಡಿಗೆ
ಕೆನ್ನೆಗೈಯು ಅರೆತೆರೆದ ಕಣ್ಣು ನಸುಬಾಗು ಮೊಗದ ಬಗೆಗೆ
ನೂರು ಯೋಚನೆಯ ಗಾಣದಲ್ಲಿ ಮನ ಸಿಕ್ಕಿ ಗಾಸಿಗೊಂಡು
ಲೋಕಹಿತದ ಚಿಂತನೆಗೆ ತೊಡಗೆ ತನ್ನಲ್ಲಿ ನಿಜವ ಕಂಡು :

ಮತದ ಮೌಢ್ಯ ಕಟ್ಟಳೆಯ ನಿಗಳ ದ್ವೇಷಗಳ ಕಳೆವುದೆಂತು
ಫರಿಸಾಯರವರ ದುರ್ನಡತೆ ನೀಗಿ ಜನ ನೇರಿತಾಗಲೆಂತು?
ಲೋಕದಿಚ್ಛೆ ನಾನುಡಿದು ಸತ್ಯ ಧ್ವಜವೆತ್ತಿ ಹಿಡಿಯಲೆಂತು ?
ಒಬ್ಬರೊಬ್ಬರನು ಅರ್ಥಮಾಡಿಕೊಳ್ಳದಿರೆ ಸವಿಯು ಏನು
ಬಂತು—

ಇಂತು ಚಿಂತೆಯಲಿ ಮುಳುಗಿ ಯೇಸು ಪ್ರಾರ್ಥಿಸಿದನಾಗ ಮನದಿ
"ತಂದೆ ತಾಯೆಯೇ ಜನರಿಗೊಳ್ಳೆಯದ ತಿಳಿವ ಬುದ್ಧಿ ಭರದಿ
ಬೆಳೆಸು ಸತ್ಯ ಧರ್ಮಾನುಚರಣೆ ಬೇರೂರ ಕರುಣೆಯಲ್ಲಿ
ಕೊನೆಗೆ ಎಲ್ಲ ಲಯಹೊಂದಲಲ್ಲಿ ವಿಶ್ವಾತ್ಮ ಪ್ರೇಮದಲ್ಲಿ"
ಅದೇ ಸಮಯ ಫರಿಸಾಯರೇಸುಗವ ಧ್ಯಾನ ಮಾಡಲೆಂದು
ಹೊತ್ತುಕಾದು ನವಯುವತಿ ಮುಡಿಯ ಹಿಡಿದುಗೂಡಲನ್ನು
ಹಿಡಿದು

ಹುಲಿಯು ಚಿಗುರೆಯನು ಎಳೆವ ತೆರದಿ ದರದರನೆ ಎಳೆದು
ತರಲು

ಕಲ್ಲು ಮುಳ್ಳಿನಲಿ ಹಾಸಿಬೀಸಿ ಯೇಸುವಿನ ಮುಂದೆ ಬರಲು :
ಊರು ಮುಗ್ದಲಾ ಹೆಸರು ಮೇರಿ ಏನೆಂಥ ರೂಪರಾಶಿ!
ಕಪಟರಹಿತೆ ದೀನಾಸ್ಯೆಯಾಗಿ ಪಾಷಂಡಿಗಳಿಗೆ ರೋಸಿ
ಚಿಂದಿ ಬಟ್ಟೆ ಮೈಯೆಲ್ಲ ಘಾಯ ಚೀರಿಡುವ ಗೋಳು ಕೇಳಿ
ಕರಗಲಿಲ್ಲ ಎದೆ ಮರುಗಲಿಲ್ಲ ಮನ ಅವರಿಗದುವೆ ಹೋಳಿ!

ಪ್ರಾಣಸಂಕಟದಿ ಕೆಡೆದು ಬಿದ್ದ ಮುಗ್ದಲದ ಕುವರಿ ಮೇರಿ
ಹಿಂದೆಯೊಮ್ಮೆ ಕಂಡಿದ್ದಳವನ ಆ ಸ್ವಾಮಿ ಗುಡ್ಡವೇರಿ
ಜನರ ಗುಂಪಿಗುಪದೇಶಗೈವ ದಿನ ತಾನು ನಿಂತು ಕೇಳಿ
ತೃಪ್ತಿಹೊಂದಿ ಹೋಗಿದ್ದಳಂದು ಇಂದೂನು ಧೈರ್ಯತಾಳಿ—

ಇಂಥ ಸಮಯದಲಿ ಮತ್ತೆ ಆವನಿಗೆಯೆ ಶರಣು ಹೋಗುವೆನೆಂದು
ರಕ್ತ ಸಿಕ್ತ ದೇಹವನು ಎಳೆದು ಶ್ರೀಪಾದದೆಡೆಗೆ ಬಂದು
ತಲೆಯನಿರಿಸುತಿರೆ ಸುತ್ತುನಿಂತ ಮುತ್ತಿಗೆಟ್ಟ ಜನರ ಗುಂಪು
ಮರುಳರಂತೆ ಹೋಯೆಂದು ನಕ್ಕು ಮೂದಲಿಸಿ ನುಡಿದರಿಂತು ;

"ದೇವಸುತನು ನಾನೆಂದು ನುಡಿಯುತಿಹ ಎಲವೊ ಮೂರ್ಖ
ಮರಿಯೆ,

ನ್ಯಾಯ ಮತ್ತೆ ಅನ್ಯಾಯಗಳನು ಪರಿಕಿಸುವೆನೆಂಬ ಕುರಿಯೆ,
ಸತ್ಯ ಪ್ರೇಮಗಳ ಬಿತ್ತಲಿಹೆಯ ಹೇ ಮತ್ತಮತಿಗಳೊಡೆಯ,
ಈಗ ಹೇಳು! ಈ ಯುವತಿ ನಡತೆಯಲಿ ಇಹುದು ಯಾವ
ನ್ಯಾಯ ?

"ಇವಳು ಪಾಪಿ ವ್ಯಭಿಚಾರಿಯೆಂದು ಇದೊ ನುಡಿವರೆಲ್ಲ ಸಾಕ್ಷಿ
ಕಣ್ಣಾರೆ ಕಂಡು ಆರೋಪ ಹೊರಿಸಿ ಎಳೆದಿಹರು ಇಲ್ಲಿ ನೂಕಿ
ಹೇಳು ನಿನ್ನ ತೀರ್ಪೇನು ಇಲ್ಲಿಯೇ ನಿಂತ ಕಾಲಮೇಲೆ
ಮೂರ್ಖಮಂದಿ ನೀನೊಬ್ಬ ಶ್ರೇಷ್ಠಗುರು ಎಂದು ಸಾರಲಿಲ್ಲೆ?"

ಚುಚ್ಚು ಮಾತುಗಳನೆಸೆಯುತಿರಲು ಪುಂಖಾನುಪುಂಖವಾಗಿ
ಶಾಂತಚಿತ್ತದಲಿ ಸೌಮ್ಯಭಾವದಲಿ ಕೇಳುತಿದ್ದ ಯೋಗಿ;
ತಲೆಯ ಬಾಗಿ ನಿಟ್ಟುಸಿರನಿಟ್ಟು ಸೈತಿಟ್ಟು ಕ್ರಿಸ್ತ ಸ್ವಾಮಿ
ತನ್ನ ಕಾಲ ಬಳಿ ಬಿದ್ದ ಮುಗ್ಧೆಯನು ಕಂಡ ವಿಶ್ವಪ್ರೇಮಿ.

ಕತ್ತನೆತ್ತಿ ಯೇಸುವಿನ ಮೊಗವ ನೋಡಿದಳು ಮೇರಿ ತಣಿಯೆ
ಎದೆಯ ದೈನ್ಯ ಕಣ್ಣಿನಲಿ ಬಂದು ಕಂಬನಿಗಳಾಗಿ ಹರಿಯೆ
ತನ್ನ ದುಃಖವನು ತೋಡಿಕೊಳ್ಳುವರೆ ಮಾತು ಬಾರದಿತ್ತು
ಮೂಕ ಶೋಕದಲಿ ಒಡಲ ಭಾಂಡ ಒಳಗೊಳಗೆ ಕುದಿಯುತಿತ್ತು.

ಆವರವಳ ಜೀವಾತ್ಮ ಶೋಕ ಪರಮಾತ್ಮನೆದೆಯ ಸೇರಿ
ಮೌನ ವೀಣೆ ಮಿಡಿದಂತೆ ತಂತಿ ಸಿಡಿದಂತೆ ದನಿಯು ಬೀರಿ :
"ನನ್ನ ಸ್ವಾಮಿ ಓ ಯೇಸು ಕ್ರಿಸ್ತ ಪ್ರಭು ಕರುಣಿಸೆನ್ನ ತಂದೆ,
ನಾನು ಪಾತ್ರ ಅರಿಯದೆಯೆ ಗೈದ ಅಪರಾಧ ಮನ್ನಿಸೆಂದೆ"

ಎಂದು ನೊಂದು ಪರಿತಪಿಸಿ ಆತ್ಮ ನೈವೇದ್ಯ ನೀಡಲಾಗಿ
ಆವನ ಕಣ್ಣಿನಲಿ ಕ್ಷಮೆಯು ರಮಿಸುತಿರೆ ಶಾಂತಚಿತ್ತಳಾಗಿ
ಮತ್ತೆ ಮತ್ತೆ ಆ ದಿವ್ಯ ಮೊಗದ ಸಂಪದವ ನೋಡಿ ನಂಬಿ
ಕಣ್ಣು ತುಂಬಿ ಎದೆತುಂಬಿ ತಲೆಯ ಬಾಗಿದಳು ಜೀವ ತುಂಬಿ.

ತಲೆಯನೆತ್ತಿ ಕಣ್ದೆರೆದು ಯೇಸು ನೋಡಿದನು ನೆರೆದ ಜನವ
ಧೈರ್ಯವಾಗಿ ಗಂಭೀರನಾಗಿ ಪ್ರಶ್ನಿಸಿದನವರ ಮನವ :
ನಿಮ್ಮ ಧರ್ಮಶಾಸ್ತ್ರದಲಿ ಇದಕೆ ಪ್ರತಿಶಿಕ್ಷೆ ಯಾವುದೆನಲು—
ಕಲ್ಲು ಹೊಡೆದು ಸಾಯಿಸುವುದೆಂಬ ಉತ್ತರವು ಕೇಳಿಬರಲು

“ ನಿಮ್ಮ ಧರ್ಮ ಶಾಸನಕೆ ನಾನು ಪ್ರತಿಘಾತನಾಗುತಿಲ್ಲ;
ಹೆಣ್ಣಿನಂತೆ ಗಂಡಸಿಗು ಶಿಕ್ಷೆ ಕಟ್ಟಳೆಯದೇಕೆ ಇಲ್ಲ ?—
ಎಂಬ ಯೋಚನೆಯ ಮಾಡುವೆ; ಸರಿ ನಿಮ್ಮ ಶಾಸ್ತ್ರಕೋಶ
ನೀವು ನಡೆಯುತಿರೆ ನಿಮ್ಮ ಇಷ್ಟವಿದು ಆದರೊಂದು ಮಾತು :

“ ಇಲ್ಲಿನೆರೆದ ಜನರಲ್ಲಿ ಯಾರು ಈ ಮೊದಲು ಒಂದು ಕೂಡ
ಪಾಪಗೈಯದಿಹರವರು ಮೊದಲು ಕಲು ಹೊಡೆಯ ಬೇಕು
ನೋಡ
ದುಷ್ಟಕೃತಿಯ ಮುಚ್ಚಿಟ್ಟುಕೊಂಡು ಸಂಭಾವ್ಯರಂತೆ ನಟಿಸಿ
ಕೊಂಡ ಪಾಪ ಅವನನ್ನೇ ತಾನು ತೀಗುವುದು ಪೀಡೆಗೊಳಿಸಿ ”

ಎಂದು ನುಡಿಯೆ ನೆರೆದಿದ್ದ ಜನತೆ ತಳಮಳಿಸಿ ತಮ್ಮ ತಮಗೆ
ಅವರು ಇವರ ಮುಖನೋಡಿ ಆತ್ಮವಂಚಕರು ತೆಪ್ಪಗಾಗೆ—
ಒಂದು ಸಿಳ್ಳೆಯೂ ಕಲ್ಲನೆತ್ತಿ ಹೊಡೆಯಲಿಕೆ ಧೈರ್ಯವಿರದೆ
ಬಂದದಾರಿಯನು ಹಿಡಿದು ಸಾಗಿದರು ನಿಲ್ಲಲಿಷ್ಟಪಡದೆ.

ಮೇರಿ ಯೇಸುವಿನ ಚರಣ ತೊಳೆಯುತಿರೆ ಕಣ್ಣಧಾರೆಯಿಂದ
ಪಾದ ಪದ್ಮಗಳ ತಬ್ಬಿ ಹಿಡಿದು ತನ್ನೆರಡು ಕೈಗಳಿಂದ....
“ ಪಾಪವೆಂಬ ತಿಳಿವಳಿಕೆ ಆಗ ನನಗಾಗಲಿಲ್ಲ ತಂದೆ,
ಇದಕೆ ಅವರು ಅಪರಾಧವೆನಲು ನಾನರಿಯದೇನೆ ಗೈದೆ !

“ ನನ್ನ ಊರಿನೆಡೆ ಇನ್ನು ಹೋಗೆ ನನಗಾರು ಇಲ್ಲವಲ್ಲಿ
ನಿನ್ನ ಮಗಳು ನಾ ನಿನ್ನ ತಾಯಿಯೊಲು ಇದ್ದು ಬಿಡುವೆನಿಲ್ಲಿ
ಅನುಗ್ರಹಿಸು ಓ ಗುರುವೆ ನಿನ್ನ ಆಜನ್ಮ ಸೇವೆಯೊಂದು ”
ಎಂದು ದುಃಖತಾಪದಲಿ ಕರುಣ ಕಥೆ ತೋಡಿಕೊಂಡಳಂದು.

ಪವಿತ್ರಾತ್ಮ ಪರಮಾತ್ಮ ಪರರ ಕರೆ ಚಾಚಿ ಕರುಣೆ ಹೊನಲು
ಘಾಯ ಸವರಿ ಸ್ತ್ರೈಪದವಿ ಮೊಳ್ಳಿನಲಿ ಯೇಸು ಸಂತವಿಸಲು
ನ್ಯಾಯ ನೋಡಿದರು ನಯವಾಗಿ ತಂಪಾಗಿ ಸೌಖ್ಯಪೊಂದಿ
ಆತ್ಮ ಶಾಂತಿಯಮೃತದಲಿ ತೇಲಿ ಆನಂದ ಲೋಲೆಯಾಗಿ.

ತಂಪುಗಾಳಿ ನಿಷ್ಪಂದವಾದ ಸಾಗರದಿ ತೀಡುತಿರಲು
ಕ್ರಿಸ್ತನಮರ ಸಂದೇಶ ಪೊತ್ತು ಸಮತೆಯಲಿ ಹಂಚುತಿರಲು
ಅಮೃತ ಕಿರಣನುದಯಿಸಿದ ಇಳೆಯ ಬೆಳುದಿಂಗಳಲ್ಲಿ ತೊಳೆದು
ತೇನೆ ಹಕ್ಕಿ ಮುಂಗಲವ ಪಾಡಿ ಹಾರಿತ್ತು ನಭವನಳೆದು.

ಪ್ರತಿಯೊಬ್ಬ ಕನ್ನಡಿಗನು ಸಂಗ್ರಹಿಸಬೇಕಾದ ಗ್ರಂಥಗಳು.

ಗ್ರಂಥವಿಜ್ಞಾನ....ಸಂಪಾದಕರು ಶ್ರೀ. ಸಾಂಗಲಿ ವೆಂಕಟೇಶ
ಬೆಲೆ ರೂ. ೨-೦-೦

ಲೋಕೂರ ನಾರಾಯಣರಾಯರು.
ಲೇ. ಶ್ರೀ. ಎನ್. ಕೆ. ಕುಲಕರ್ಣಿ ಮತ್ತು
ಶ್ರೀ. ಎಚ್. ವಿ. ಇಮಾರತಿ.
ಬೆಲೆ ರೂ. ೧-೮-೦

ಜರಾಸಂಧಿ ಲೇ. ಶ್ರೀರಂಗ.
ಬೆಲೆ ರೂ. ೧-೮-೦

ಮೂರೂ ಪುಸ್ತಕದ ಒಟ್ಟು ಬೆಲೆ... ರೂ. ೪-೮-೦
ಅಂಚೇವೆಚ್ಚ.... ೦-೫-೦

ಕರ್ನಾಟಕ ಸಂಘ,
ಸಾಂಜಗಿರಿ ಸದನ, ಗಿರಗಾಂವ, ಮುಂಬಯಿ ೪

ಕುಟಜಾರಿಷ್ಟ :— ಆಮಾಂಶ, ಅಜೀರ್ಣ
ಹೊಟ್ಟೆ ಮುರಿಯುವದು ಮೊದಲಾದ
ವಿಕಾರಗಳಿಗೆ ಶ್ರೇಷ್ಠವಾದ
ಔಷಧ.

ಕಾಸಶ್ವಾಸಾರಿ :— ದಮ್ಮು, ಕೆಮ್ಮುಗಳಿಗೆ
ಅನುಭವಸಿದ್ಧ ಔಷಧ.

ನೂತನ ಆಯುರ್ವೇದ
ಕಾರ್ಯಾಲಯ ಲಿ.
ವಿಜಾಪುರ.

ರಾಷ್ಟ್ರೀಕರಣ

(ಆರ್ಥಿಕ ವಿಚಾರ)

ಪ್ರೊ. ಮೋಹನ ಜಾಲೀಹಾಳ ಬಿ. ಕಾಮ್. ಕಿರ್ಲೋಸ್ಕರವಾಡಿ

★

ಜನತೆಯಲ್ಲಿ ಆದರ್ಶಜೀವನದ ಅಭಾವವಾದಾಗ, ದೇಶದ ಆರ್ಥಿಕ ಅಭ್ಯುದಯದ ಎಲ್ಲ ವ್ಯವಹಾರ-ಸೂತ್ರಗಳನ್ನೂ ಪ್ರಾಮಾಣಿಕ ಬುದ್ಧಿಯ ಸರಕಾರವೇ ವಹಿಸಿಕೊಳ್ಳಬೇಕಾಗುತ್ತದೆ; ಆದರೆ ಅಧಿಕಾರಬಲವಿದ್ದು ಪ್ರಾಮಾಣಿಕ ಬುದ್ಧಿಯಿಲ್ಲದಿರುವ ಸರಕಾರ ವ್ಯವಹಾರಸೂತ್ರಗಳನ್ನು ಕೈವಶಪಡಿಸಿಕೊಳ್ಳುವುದು ಹೆಚ್ಚು ಗಂಡಾಂತರವಲ್ಲವೆ?

★

ರಾಷ್ಟ್ರೀಕರಣ ಎಂದರೆ ರಾಷ್ಟ್ರದ (ನಾಡಿನ) ಒಡೆತನ; ನಾಡ ಒಡೆತನ. ಮಾನವ ಒಂಟಿಗನಾಗದೆ, ಗುಂಪು ಕಟ್ಟಿಕೊಂಡು ಸಮಾಜ ಜೀವಿಯಾದ ಮೆಲ್ಲಮೆಲ್ಲನೆ ಸಮಾಜದಲ್ಲಿ ಕ್ರಾಂತಿಯಾದಂತೆ ಕುಟುಂಬ, ಕುಲ, ಗ್ರಾಮ, ಪ್ರಾಂತ, ನಾಡು ಮೊದಲಾದ ವಿವಿಧ ಘಟಕಗಳು ತಲೆದೋರಿದುವು. ಕುಟುಂಬದ ಆಡಳಿತ ಸೂತ್ರಗಳಿಗೆ ಹಿರಿಯ ಯಜಮಾನ, ಕುಲಗಳಿಗೆ ಕುಲಪ್ರಮುಖ, ಗ್ರಾಮಗಳಿಗೆ ಗ್ರಾಮಪಂಚಾಯತಿ, ನಾಡಿಗೆ ಅರಸು — ಹೀಗೆ ವಿವಿಧ ಘಟಕಗಳ ಆಡಳಿತದ ಸೂತ್ರಗಳು ವಿವಿಧ ವ್ಯಕ್ತಿ — ಸಂಘ — ಸಂಸ್ಥೆಗಳಿಗೆ ಒಪ್ಪಿಸಲ್ಪಟ್ಟವು. ಒಪ್ಪಿಸಲ್ಪಟ್ಟ ಘಟಕಗಳ ಮೇಲ್ವಿಚಾರಣೆ, ಪರಾಮರಿಕೆ, ಸಂರಕ್ಷಣೆ, ಮೊದಲಾದುವುಗಳು ಆ ಸೂತ್ರಧಾರರ ಕೆಲಸ. ಆಡಳಿತದ ಸೂತ್ರಗಳೊಡನೆ ಒಡೆತನವೂ ಆ ಸೂತ್ರಧಾರರ ಕೈಸೇರಿತು. ಕಾಲಕಾಲಕ್ಕೆ ತಕ್ಕಂತೆ ಈ ವಿವಿಧ ಘಟಕಗಳಲ್ಲಿ, ಸೂತ್ರಧಾರರಲ್ಲಿ ಸೂತ್ರಧಾರರ ಕರ್ತವ್ಯಗಳಲ್ಲಿ ಮಾರ್ಪಾಟುಗಳು ಆಗಿವೆ. ಅರಸೊತ್ತಿಗೆಯ ಸಂಸ್ಥೆ ಸರ್ವತ್ರ ಪ್ರಚಲಿತವಿದ್ದ, ಹಾಗು ಸರ್ವಸಮ್ಮತವಿದ್ದ ಕಾಲವೊಂದಿತ್ತು. ಆದರೆ ಈಗ ಇಂಗ್ಲಂಡದಂತಹ ಒಂದೆರಡು ದೇಶಗಳನ್ನು ಬಿಟ್ಟರೆ, ಅರಸೊತ್ತಿಗೆ ಹೇಳಹೆಸರಿಲ್ಲದಾಗಿದೆ. ಈಗಿನದು ಪ್ರಜಾಪ್ರಭುತ್ವದ ಯುಗವೆಂದು ಹೇಳುತ್ತಾರೆ. ಆದರೆ ಇನ್ನು ಮುಂದೆ ಪ್ರಜಾಪ್ರಭುತ್ವವೇ ಆದರ್ಶವಾಗಿ ಉಳಿಯಲಾರದು. ಸಾಮ್ಯವಾದದ ಕಡೆಗೆ ಇಡಿಯ ಜಗತ್ತೀ ನಾಗಾಲೋಟದಿಂದ ಮುನ್ನುಗ್ಗುತ್ತಿದೆ.

ನಾಡ ವ್ಯಾಪಾರ-ಉದ್ದಿಮೆಗಳು ವ್ಯಕ್ತಿಗಳ ಸಂಪೂರ್ಣ ಒಡೆತನಕ್ಕೇ ಸೇರಿದ ಕಾಲವೊಂದಿತ್ತು. ನಮ್ಮ ನಾಡಿನಲ್ಲಂತೂ ವ್ಯಾಪಾರ-ಉದ್ದಿಮೆಗಳು ನೊನ್ನೆ ಮೊನ್ನೆಯ ವರೆಗೆ ವಿಶಿಷ್ಟ ಕ ಗಳಿಗೇ ಮೀಸಲಾಗಿದ್ದುವು. ಬಡ್ಡಿಯ ವ್ಯವಹಾರವೆಂದ ಕೂ ವೈಶ್ಯ ಸಾವುಕಾರರ— ಮಾರವಾಡಿಗಳ— ಚೆಟ್ಟಿಯಾರರ ಚಿತ್ರ ಕಣ್ಮುಂದೆ ಕಟ್ಟುತ್ತದೆ ಕಂಪನಿ ಸರಕಾರದ ಆಳಿಕೆಯಲ್ಲಿ (E India Company) ಸಂಯುಕ್ತ ಬಂಡವಲದ ವ್ಯಾಪಾರೀ ಕಂಪ ಗಳು (Joint Stock Companies) ವ್ಯಾಪಾರ, ಉದ್ದಿ ಗಳಲ್ಲಿ ಪ್ರವೇಶ ಮಾಡಿದುವು.

ವ್ಯಾಪಾರಸ್ಥರಿಂದ ನಡೆಯುತ್ತಿದ್ದ ಬಳಕೆಗಾರರ (ಗ್ರಾಹಕ ಶೋಷಣೆಯನ್ನು ನಿಲ್ಲಿಸುವುದಕ್ಕೆಂದೇ ಇಂಗ್ಲೆಂಡಿನಲ್ಲಿ ಮೊ ಮೊದಲು ಬಳಕೆಗಾರರ ಸಹಕಾರೀ ಸಂಸ್ಥೆಗಳು ಹುಟ್ಟಿದು ಭಾರತದಲ್ಲಿ ಸಹಕಾರೀ ಆಂದೋಲನ ಸಾಲ ಕೊಡುವ ಸಂಘಗಳ ಶುರುವಾದರೂ ಬೆಲೆಗಳು ಮಿತಿಮೀರಿ ಏರಿದ ಯುದ್ಧ ಕಾ ಯುದ್ಧೋತ್ತರ ಕಾಲದಲ್ಲಿ ಬಳಕೆಗಾರರ ಸಹಕಾರೀ ಸಂಘಗ ಬೆಳೆದು ಸಮಾಜಕ್ಕೆ ಅತ್ಯುಪಯುಕ್ತವಾದ ಸೇವೆಯನ್ನು ಸ ತಮಗೆ ಸಾಧ್ಯವಿದ್ದ ಮಟ್ಟಿಗೆ ಲಾಭಬಡಕತನವನ್ನು ತಡೆದಿ ಸಹಕಾರೀ ಸಂಘಗಳಿಗೆ ವ್ಯಾಪಾರದಿಂದ ಲಾಭವಾಗುತ್ತಿದ್ದ ಲಾಭದ ಕಡೆಗೇ ದೃಷ್ಟಿಯಿಲ್ಲ. ಲಾಭಕ್ಕೂ ಒಂದು ಮಿತಿಯಿ ಬಂದ ಲಾಭವನ್ನೆಲ್ಲ ಸದಸ್ಯರಲ್ಲಿ ಹಂಚಲಾಗುತ್ತಿದೆ.

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳೂ ಇತ್ತೀಚೆಗೆ ವ್ಯಾಪಾ ಉದ್ಯೋಗಗಳ ಕ್ಷೇತ್ರಗಳಲ್ಲಿ ಪ್ರವೇಶಮಾಡಿ, ಇವು ಕೂಡ ಲಾ ದೃಷ್ಟಿಯನ್ನೆ ಮುಖ್ಯವಾಗಿ ಇಟ್ಟುಕೊಳ್ಳದೆ ಸಹಕಾರೀ ಸಂ ಗಳಂತೆ ಸೇವೆಯನ್ನು ಸಲ್ಲಿಸುವ ದೃಷ್ಟಿಯಿಂದ ವಿದ್ಯುದ್ದೀಪ ನೀರು, ಟ್ರಾಮು, ಬಸ್‌ಗಳಂತಹ ಸಾರಿಗೆಸೌಕರ್ಯ— ಸೀ ಆಹಾರಧಾನ್ಯ ಇವುಗಳ ಪೂರೈಕೆ— ಇವುಗಳನ್ನು ಕೈಕೊಂಡಿ ಬಂದ ಲಾಭವನ್ನು ಹಂಚುವಂತಿಲ್ಲ. ಆ ಲಾಭ ಆ ಸಂಸ್ಥೆ ಉತ್ಪನ್ನವನ್ನು ಹೆಚ್ಚಿಸುತ್ತದೆ.

ಸರಕಾರವೀಗ ಮೊದಲಿನಂತೆ ಪ್ರಜೆಗಳಿಗೆ ಸಂರಕ್ಷಣೆಯನ್ನ ಒದಗಿಸುವುದಿಲ್ಲ. ಬಂಡವಲವಾದದ ಕೇಂದ್ರವಾದ ಅಮೇ ಯಲ್ಲಿ ಕೂಡ ಸರಕಾರ ಜನರಿಗೆ ಹಿತವಾಗುವಂತಹ ಅ ಯೋಜನೆಗಳನ್ನು ಕೈಕೊಂಡಿದೆ. ಸಂರಕ್ಷಕ ಸರಕಾರ ಹಿ ಸರಕಾರವಾಗಿ ನಿರುದ್ಯೋಗ ನಿವಾರಣೆಗಾಗಿ ವಿವಿಧ ಯೋ ವಿರಾಮವೇತನ, ಕನಿಷ್ಟ ಕೂಲಿಯನ್ನು ಗೊತ್ತುಪಡಿಸುವ ಮತ್ತು ಸಾರ್ವತ್ರಿಕ ಶಿಕ್ಷಣ, ಆರೋಗ್ಯಸಂವರ್ಧಕಯೋಜನೆ ಮೊದಲಾದುವುಗಳನ್ನು ಕೈಕೊಳ್ಳಬೇಕಾಗುತ್ತದೆ. ಇದಕ ಅಪಾರ ಹಣ ಬೇಕು. ಸರಕಾರ ಕರಗಳನ್ನು ಹೇರಿ ಹಣವ ಕೂಡಿಸುತ್ತದೆ.

ಕೆರೆಯ ನೀರನ್ನು ಕೆರೆಗೆ ಹಾಕಿ ವರವ ಪಡೆಯುವಂತೆ ಜ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಕೈಕೊಂಡು ಅವುಗ ಬೇಕಾಗುವ ಹಣವನ್ನು ಸರಕಾರ ಜನರ ಮೇಲೆ ಕರಗಳ ಹೇರಿ ವಸೂಲು ಮಾಡುತ್ತದೆ. ಈ ದ್ರಾವಿಡೀಪ್ರಾಣಾಯಾಮವ

ಜಯ

ಬಿಟ್ಟುಗೊಟ್ಟು, ರಶಿಯನ್ ಸರಕಾರದಂತೆ ನಮ್ಮ ಸರಕಾರವೂ ನೇರವಾಗಿ ವ್ಯಾಪಾರ ಉದ್ದಿಮೆಗಳ ಒಡೆತನವನ್ನೂ, ಆಡಳಿತದ ಸೂತ್ರಗಳನ್ನೂ ತನ್ನ ಕಡೆಗೆ ಏಕೆ ತೆಗೆದುಕೊಳ್ಳಬಾರದು ? ಎಂಬ ಪ್ರಶ್ನೆ ಬರುತ್ತದೆ.

ಸರಕಾರವು ಬೆಲೆನಿಯಂತ್ರಣ, ಉತ್ಪಾದನೆ ನಿಯಂತ್ರಣ, ವಿತರಣ (ಹಂಚಿಕೆ) ನಿಯಂತ್ರಣ ಮೊದಲಾದ ವಿವಿಧ ನಿಯಂತ್ರಣಗಳ ಸಂಕೋಲೆಗಳಿಂದ ನಮ್ಮನ್ನು ಬಿಗಿಯುವುದಕ್ಕಿಂತ ವ್ಯಾಪಾರ, ಉದ್ದಿಮೆಗಳನ್ನು ತಾನೇ ನಡಿಸಲಿ— ಎಂದು ಉದ್ದಿಮೆದಾರರೂ ವರ್ತಕರೂ ಸರಕಾರಕ್ಕೆ ಒಂದು ಬಗೆಯ ಆಹ್ವಾನವನ್ನೇ ಕೊಟ್ಟಿದ್ದಾರೆ.

ಇತ್ತ ದುಡಿಮೆಗಾರರೂ ನಾಡ ಉದ್ದಿಮೆಗಳ ರಾಷ್ಟ್ರೀಕರಣವಾಗಬೇಕೆಂದು ಕೇಳುತ್ತಿದ್ದಾರೆ. ರಾಷ್ಟ್ರೀಕರಣವಾದರೆಯೇ ತಮಗೆ ಯೋಗ್ಯವೇತನ, ವಿರಾಮವೇತನ, ಗ್ರ್ಯಾಚ್ಯುಯಿಟಿ, ನೆಲೆಯುಸೌಕರ್ಯ, ಲಾಭದಲ್ಲಿ ಪಾಲು ಮೊದಲಾದುವುಗಳು ದೊರೆತು ತಮ್ಮ ಸ್ಥಿತಿ ಸುಧಾರಿಸುವುವೆಂದು ಅವರು ನಂಬಿದ್ದಾರೆ.

ರಾಷ್ಟ್ರೀಕರಣದ ವಿಷಯವಾಗಿ ಅರ್ಥಶಾಸ್ತ್ರಜ್ಞರಲ್ಲಿ ಮೊದಲು ತೀವ್ರ ಭಿನ್ನಾಭಿಪ್ರಾಯಗಳಿದ್ದರೂ ರಾಷ್ಟ್ರೀಕರಣದ ವಿರುದ್ಧವಾಗಿದ್ದ ಅನೇಕ ತಾತ್ತ್ವಿಕ ಆಕ್ಷೇಪಗಳಲ್ಲಿ ಸತ್ಯಾಂಶವಿಲ್ಲವೆಂಬುದನ್ನು ರಶಿಯವು ತನ್ನ ಐದು ವರ್ಷಗಳ ಯೋಜನೆಯಲ್ಲಿ ಯಶಸ್ವಿಯಾಗಿ ಮಾಡಿ ತೋರಿಸಿದೆ.

ರಾಷ್ಟ್ರೀಕರಣವನ್ನು ವಿರೋಧಿಸುವವರ ಮುಖ್ಯ ಆಕ್ಷೇಪವೊಂದನ್ನು ನೋಡಿದರೆ, ಅವರಲ್ಲಿ ಎಷ್ಟು ಹುರುಳು ಇದೆಯೆಂಬುದು ತಿಳಿಯುವುದು :

ಲಾಭದಾಶೆಯಿಲ್ಲದೆ ಹೋದರೆ ಕಾರ್ಯಕ್ಷಮತೆ ಕಡಿಮೆಯಾಗುವುದು. ಕಾರಖಾನೆಯ ಒಡೆಯನಿಗೆ ಇರುವ ಲಾಭದಾಶೆ ಸರಕಾರೀ ಕಾರಖಾನೆಯ ಸಂಚಾಲಕರಿಗೆ ಇಲ್ಲದಿರುವುದರಿಂದ ಅವನು ವೆಚ್ಚ ಕಡಿಮೆ ಮಾಡುವುದರ ಕಡೆಗೆ ಹಾಗು ಉತ್ಪಾದನೆಯನ್ನು ಹೆಚ್ಚಿಸುವುದರ ಕಡೆಗೆ ಲಕ್ಷ್ಯಕೊಡುವುದಿಲ್ಲ. ಇದರಿಂದ ತಯಾರಾಗುವ ಸರಕುಗಳ ಬೆಲೆ ಹೆಚ್ಚಾಗಿ ಬಳಕೆಗಾರರು ಹೆಚ್ಚು ಬೆಲೆಯನ್ನು ಕೊಡಬೇಕಾಗುತ್ತದೆ. ಬೆಲೆ ಹೆಚ್ಚುವುದರಿಂದ ಬೇಡಿಕೆ ಕಡಿಮೆಯಾಗಿ ಉತ್ಪಾದನೆಯನ್ನೇ ನಿಲ್ಲಿಸುವ ಪ್ರಸಂಗ ಬಂದು ನಿರುದ್ಯೋಗ ಬೆಳೆಯಬಹುದು.

ಸರಕಾರದ ಆಡಳಿತ ಹಾಗು ಒಡೆತನಕ್ಕೆ ಈ ಆಕ್ಷೇಪವನ್ನು ಎತ್ತುವುದಾದರೆ ಸಂಯುಕ್ತ ಬಂಡವಲದ ಸಂಸ್ಥೆಗೂ ಈ ಆಕ್ಷೇಪವು ಪೂರ್ಣವಾಗಿಯಲ್ಲದಿದ್ದರೂ ಬಹಳಷ್ಟು ಮಟ್ಟಿಗೆ ಅನ್ವಯಿಸುತ್ತದೆ. ಕಂಪನಿಯ ಪಾಲುಗಾರರು ಆಡಳಿತ ಮಂಡಲವನ್ನು (Board of Directors) ಆರಿಸುತ್ತಾರೆ. ಈ ಆಡಳಿತಗಾರರು (Directors) ದೈನಂದಿನ ಕೆಲಸಕ್ಕಾಗಿ ಸಂಚಾಲಕರನ್ನು (Managing Director, Managers. etc) ನಿಯಮಿಸುತ್ತಾರೆ. ಈ ಸಂಚಾಲಕರು ಕಂಪನಿಯ ಪ್ರಗತಿಯ ವಿಷಯವಾಗಿ ಆಸ್ಥೆವಹಿಸಬೇಕೆಂದು ಅವರಿಗೆ ನಿರ್ದಿಷ್ಟ ಸಂಬಳವಲ್ಲದೆ ಕಂಪನಿಯ ಲಾಭದಲ್ಲಿಯೂ ಗೊತ್ತು ಮಾಡಿದ ಪಾಲು ದೊರಕುತ್ತದೆ. ಕಂಪನಿಯ ಏಳ್ಗೆಯಾಗದಿದ್ದರೆ ಮತ್ತು ಅದಕ್ಕೆ ಸಂಚಾಲಕನ ಅಸಮರ್ಥತೆಯೇ ಕಾರಣವೆಂದು ಆಡಳಿತಗಾರರಿಗೆ ಮನವರಿಕೆಯಾದರೆ, ಅವರು ಅವನನ್ನು ತೆಗೆದು ಹಾಕಬಹುದು. ಇದರಂತೆ ಪಾಲುಗಾರರಿಗೂ ಆಡಳಿತಗಾರರ ಆಡಳಿತ ಸರಿಯಾಗಿ ಸಾಗಿಲ್ಲವೆಂದು ಅನಿಸಿದರೆ, ಅವರು ಬೇರೆ ಆಡಳಿತ-

ಬಾಯೋಟೋನಾ
ಇದರ ಸೇವನೆಯಿಂದ
ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ಸ್ನಾಯುಗಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋಟೋನಾ' ಸೇವಿಸುವದೇ ಆಗಿದೆ. ೪೦ ದಿನಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨. ಟಿ. ಖರ್ಚು ಬೇರೆ. ಸೂಚಿಪತ್ರ ಪಡೆಯಬಹುದು.
ROY & CO. BOMBAY 2.

ಚಿತ್ರಕಲಾ ಪ್ರವೇಶ
೩ನೆಯ ಆವೃತ್ತಿ
ಅಚ್ಚಾಗಿ ಸಿದ್ಧವಾಗಿದೆ.
ಬೇಕಾಗಿರುವವರು
ಬೇಗನೆ ಬೇಡಿಕೆ ಕಳುಹಿರಿ !
ಬರೆದವರು :
ಪ್ರೊ. ಜಿ. ಎಸ್. ಹುದ್ದಾರ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

● ಧ್ವನಿವಾಹಕ ಯಂತ್ರದ ಮೂಲಕ
★ ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಗಾರರನ್ನು ಆರಿಸಬಹುದು. ಇಲ್ಲವೆ ತಮ್ಮ ಪಾಲುಗಳನ್ನು ಮಾರಬಹುದು. ಇದು ಕಂಪನಿಯ ಆಡಳಿತದ ತಾತ್ತ್ವಿಕ ನಿರೂಪಣೆ. ಪ್ರತ್ಯಕ್ಷ ವ್ಯವಹಾರದಲ್ಲಿ ಪಾಲುಗಾರರೂ, ಆಡಳಿತಗಾರರೂ ಲೆಕ್ಕತಪಾಸಿಗರೂ ಸಂಚಾಲಕ ಮಂಡಲದ (ಮ್ಯಾನೇಜಿಂಗ್ ಏಜೆಂಟ್ಸ್, ಮ್ಯಾನೇಜಿಂಗ್ ಡಾಯರೆಕ್ಟರ್) ಕೈಗೊಂಬೆಗಳಾಗಿರುತ್ತಾರೆ. ಆಡಳಿತದ ರೂಪರೇಷೆಗಳನ್ನು ಆಡಳಿತಗಾರರು ನಿರ್ಣಯಿಸುತ್ತಾರೆ. ನಿರ್ಣಯಗಳನ್ನು ನಿರ್ವಹಿಸುವ ಹೊಣೆ ಸಂಚಾಲಕರದು. ಲಾಭ, ಹಾನಿ ಮಾತ್ರ ಪಾಲುಗಾರರದು. ಸಂಯುಕ್ತ ಬಂಡವಲ ಸಂಸ್ಥೆಯಲ್ಲಿ ಒಡೆತನ, ಆಡಳಿತ ಸೂತ್ರ ಹಾಗು ಆಡಳಿತ ಇವು ಪಾಲುಗಾರರು, ಆಡಳಿತಗಾರರು, ಮತ್ತು ಸಂಚಾಲಕರು ಇವರಲ್ಲಿ ಹಂಚಲ್ಪಟ್ಟಿವೆ.

ವ್ಯಕ್ತಿಯ ಒಡೆತನದಲ್ಲಿರುವ ಚಿಕ್ಕ ವ್ಯಾಪಾರ–ಉದ್ದಿಮೆಯಲ್ಲಿ ಮಾತ್ರ ಒಡೆತನ, ಆಡಳಿತದ ಸೂತ್ರ ಹಾಗು ಆಡಳಿತ ಇವು ಆ ವ್ಯಕ್ತಿಯ ಕೈಯಲ್ಲಿಯೇ ಇರುತ್ತವೆ. ವ್ಯವಹಾರ ಬೆಳೆಯುತ್ತ ಹೋದರೆ ಆ ವ್ಯಕ್ತಿ ಕೂಡ ಆಡಳಿತವನ್ನು ತನ್ನ ನೌಕರ ವರ್ಗಕ್ಕೆ ಒಪ್ಪಿಸಬೇಕಾಗುತ್ತದೆ.

ವ್ಯಕ್ತಿಯ ಒಡೆತನದಲ್ಲಿರುವ ವ್ಯಾಪಾರ ಉದ್ದಿಮೆಗಳಂತೆ, ಸಂಯುಕ್ತ ಬಂಡವಲ ಸಂಸ್ಥೆಯ ಒಡೆತನದಲ್ಲಿರುವ ವ್ಯಾಪಾರ–ಉದ್ದಿಮೆಗಳೂ ಪ್ರಗತಿ ಹೊಂದುತ್ತಿರುವುದರಿಂದ, ಆಡಳಿತದ ಸೂತ್ರ ಹಾಗು ಆಡಳಿತ ಇವು ಒಡೆತನದಿಂದ ಭಿನ್ನವಾದರೂ ಪ್ರಗತಿಯನ್ನು ತಡೆಯುವುದಿಲ್ಲವೆಂಬುದು ಸ್ಪಷ್ಟವಾಯಿತು

ಇದರಂತೆ ಲಾಭದಾಶೆಯೇ ಇಲ್ಲದೆ ಕೆಲಸ ಮಾಡಿದರೂ ಮರ್ಯಾದಿತ ಲಾಭದೊರಕಿಸುತ್ತಿರುವ ಸಹಕಾರೀ ಸಂಸ್ಥೆ ಹಾಗು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ನೋಡಿದರೆ, ಲಾಭದಾಶೆಯೇ ಪ್ರಗತಿಗೆ ಕಾರಣವಲ್ಲವೆಂಬುದು ಮನವರಿಕೆಯಾಗುತ್ತದೆ.

ನಮ್ಮ ನಾಡಿನ ಸ್ವಾತಂತ್ರ್ಯದ ಆಂದೋಲನದಲ್ಲಿ ಜನರು ಮಾಡಿದ ಸ್ವಾರ್ಥತ್ಯಾಗವನ್ನು ನೆನೆದರೆ ಜನರು ಲಾಭದಾಶೆಯಿಂದಲೇ ಕೆಲಸ ಮಾಡುತ್ತಾರೆನ್ನುವುದು ಸರಿಯಲ್ಲವೆಂದು ಹೇಳಬಹುದು.

ನಾಡ ಬಿಡುಗಡೆಗಾಗಿ ತೀರ ನಿಃಸ್ವಾರ್ಥತೆಯಿಂದ ದುಡಿದ ನಮ್ಮ ಜನ, ನಾಡ ಮುನ್ನಡೆಗಾಗಿ ಕಡಿಮೆ ಪ್ರತಿಫಲವನ್ನು ಸ್ವೀಕರಿಸಿ ನಾಡ ಒಡೆತನದ, ವ್ಯಾಪಾರ ಉದ್ದಿಮೆಗಳ ಅಭಿವೃದ್ಧಿಗಾಗಿ ಯತ್ನಿಸುವುದರಲ್ಲಿಯೇ ನಿಜವಾದ ದೇಶಾಭಿಮಾನವೆಂದು ಎಣಿಸಬಾರದೇ?

ರಶಿಯವು ತನ್ನ ನಾಗರಿಕರ ದೇಶಾಭಿಮಾನವನ್ನು ಪ್ರಚೋದನೆಗೊಳಿಸಿ, ನಾಡ ಒಡೆತನದ ವ್ಯಾಪಾರ ಉದ್ದಿಮೆಗಳನ್ನು ಅಭಿವೃದ್ಧಿಗೊಳಿಸಿ ಮುಂದುವರಿಸಿದೆ.

ಪ್ರತಿಫಲ, ಲಾಭದಾಶೆಯಿಲ್ಲದಿದ್ದರೂ ವ್ಯಾಪಾರ-ಉದ್ದಿಮೆಗಳ ಏಳ್ಗೆ ಆಗಬಲ್ಲದು.

ಆದರೆ ನಾಡ ಒಡೆತನದಲ್ಲಿ (ರಾಷ್ಟ್ರೀಕರಣದಲ್ಲಿ) ಪ್ರತಿಫಲ ಇದ್ದೇ ಇದೆ. ನಾಡ ಒಡೆತನಕ್ಕೂ ಸಂಯುಕ್ತ ಬಂಡವಲ ಸಂಸ್ಥೆಗೂ ಆಡಳಿತದಲ್ಲಿ ವಿಶೇಷ ಅಂತರವಿಲ್ಲ. ಸರಕಾರ ಮೇಲ್ವಿಚಾರಕರನ್ನು (ಸಂಚಾಲಕರನ್ನು) ನಿಯಮಿಸಿ ಅವರಿಗೆ ನಿರ್ದಿಷ್ಟ ಸಂಬಳವಲ್ಲದೆ ಲಾಭದಲ್ಲಿ ಕೆಲವೊಂದು ಅಂಶವನ್ನೂ ಕೊಡುವುದು. ಇದರಿಂದ ಕಾರ್ಯಕ್ಷಮತೆ ಹೆಚ್ಚುತ್ತ ಹೋಗುವುದು. ದುಡಿಮೆಗಾರರಿಗೆ ಶಿಕ್ಷಣ ಕೊಟ್ಟು, ಅವರ ಸ್ಥಿತಿ ಸುಧಾರಿಸಿ, ಅವರಿಗೆ ಲಾಭದಲ್ಲಿ ಪಾಲನ್ನು ಕೊಡುವುದರಿಂದ ಅವರ ದುಡಿಮೆ ಹೆಚ್ಚಿ, ನಾಡ ಒಡೆತನದ ಉದ್ದಿಮೆಗಳ ಉತ್ಪಾದನೆ ಹೆಚ್ಚಿ ಉತ್ಪಾದನೆಯ ವೆಚ್ಚ ಕಡಿಮೆಯಾಗುತ್ತದೆ. ರಾಷ್ಟ್ರೀಕರಣಕ್ಕೆ ತಾತ್ತ್ವಿಕ ಆಕ್ಷೇಪಗಳೂ ಅವುಗಳಿಗೆ ಸಮಾಧಾನಗಳೂ ಇನ್ನೂ ಅದೆಷ್ಟೋ ಇವೆ.

ಈಗ ನಮ್ಮ ಸರಕಾರದ ಧೋರಣವೇನಿದೆ? ಸರಕಾರ ರಾಷ್ಟ್ರೀಕರಣವನ್ನು ಕೈಕೊಳ್ಳಲು ಇಚ್ಛಿಸುತ್ತಿದೆಯೊ? ನಾಡಿನ ಸದ್ಯದ ಪರಿಸ್ಥಿತಿಯಲ್ಲಿ ರಾಷ್ಟ್ರೀಕರಣ ಎಷ್ಟರ ಮಟ್ಟಿಗೆ ಸಾಧ್ಯವಾಗಬಹುದು? ಈ ಅಂಶಗಳನ್ನು ಪರಿಶೀಲಿಸಬಹುದು.

ನೆಹರೂ ಸರಕಾರವು ಉದ್ದಿಮೆಗಳ ವಿಷಯವಾಗಿ ತನ್ನ ನಿಲುಮೆಯನ್ನು ಸ್ಪಷ್ಟಪಡಿಸಿದೆ. ನಾಡಿನ ಸಂರಕ್ಷಣೆಗೆ ಅವಶ್ಯವಿರುವ ಉದ್ದಿಮೆಗಳು, ವಿಮಾನ, ಮದ್ದು, ಗುಂಡು ಮೊದಲಾದ ಯುದ್ಧೋಪಯೋಗಿ ಉಪಕರಣಗಳನ್ನು ತಯಾರಿಸುವ ಕಾರಖಾನೆಗಳು, ಹಾಗು ಸಾರಿಗೆಯಂತಹ ಲೋಕೋಪಯೋಗೀ ಉದ್ದಿಮೆಗಳು ಇವು ಸರಕಾರದ ಒಡೆತನದಲ್ಲಿ ಇರುವುವು ಈಗ ಇರುವ ಉದ್ದಿಮೆಗಳ ರಾಷ್ಟ್ರೀಕರಣವನ್ನು ಈಗಲೇ (ಸುಮಾರು ೧೦ ವರುಷಗಳ ವರೆಗೆ) ಮಾಡುವುದಿಲ್ಲ.

ಕಾಂಗ್ರೆಸು ಆರ್ಥಿಕ ವಿಷಮತೆಯನ್ನು ಹೋಗಲಾಡಿಸಿ, ಬಡವರ ಶೋಷಣೆಯನ್ನು ನಿಲ್ಲಿಸುವುದಾಗಿ ಎಂದಿನಿಂದಲೂ ಸಾರುತ್ತ ಬಂದಿದೆ

ನಾಡಿನಲ್ಲಿಯ ಸಕ್ಕರೆ, ಕಬ್ಬಿಣ, ಉಕ್ಕು ಮೊದಲಾದ ಉದ್ದಿಮೆಗಳಿಗೆ ಸರಕಾರದಿಂದ ಸಂರಕ್ಷಣೆ ಸಿಕ್ಕಿದೆ. ಪರದೇಶದಿಂದ ಬರುತ್ತಿದ್ದ ಸರಕುಗಳ ಮೇಲೆ ಭಾರವಾದ ಕರಗಳನ್ನು ಹೇರಿ ಸ್ವದೇಶೀ ಉದ್ಯಮಗಳಿಗೆ ಸಂರಕ್ಷಣೆ ಕೊಡಲಾಗಿದೆ. ಬಳಕೆಗಾರರು ಹೆಚ್ಚು

ಕೆಯನ್ನು ತೆತ್ತು ಸ್ವಾರ್ಥತ್ಯಾಗಮಾಡಿದ್ದಾರೆ. ಸರಕಾರದ ರಕ್ಷಣೆ ಸಿಗುವುದಕ್ಕಿಂತ ಮುಂಚಿತವಾಗಿ ಜನರು ಸ್ವದೇಶಾಭಿಮಾನದಿಂದ ಪರದೇಶದ ಅಗ್ಗವಾದ ಸರಕುಗಳನ್ನು ಕೊಳ್ಳದೆ ತುಟ್ಟಿಯಾದ ಸ್ವದೇಶೀ ವಸ್ತುಗಳನ್ನೇ ಕೊಂಡಿದ್ದಾರೆ. ಆದರೆ ನಾಡಿನಲ್ಲಿಯ ಕೆಲವು ಉದ್ದಿಮೆಗಳು ಸ್ವಾತಂತ್ರ್ಯೋತ್ತರದ ಈ ಕಾಲದಲ್ಲಿ ಕೂಡ ಲಾಭಬಡಕತನದಿಂದ ಬೆಲೆಯನ್ನು ಮಿತಿಮೀರಿ ಏರಿಸಿ, ಉಂಡಮನೆಯ ಗಳವನ್ನೆಣಿಸಿ, ಜನರನ್ನು ರೊಚ್ಚಿಗೆಬ್ಬಿಸಿವೆ. ಸರಕುಗಳನ್ನು ಪರದೇಶಗಳಿಂದ ಆಯಾತಮಾಡಿಯಾದರೂ ಉದ್ದಿಮೆಗಳ ಲಾಭಬಡಕತನವನ್ನು ಬಗ್ಗುಬಡಿಯಬೇಕೆಂದು ಜನರು ಹೇಳುತ್ತಿದ್ದಾರೆ.

ಅನೇಕ ಪ್ರೇಕ್ಷಕರು, ಉದ್ದಿಮೆದಾರರು ಲೆಕ್ಕಪತ್ರಗಳಲ್ಲಿ ಮೋಸಮಾಡಿ ಕಳ್ಳಪೇಟೆಯಿಂದ ಗಳಿಸಿದ ಅಪಾರಹಣವನ್ನು ಬಚ್ಚಿಟ್ಟಿದ್ದಾರೆ—ಎಂಬುದನ್ನು ವರದಾಚಾರ್ಯರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ಉತ್ಪನ್ನಕರವಿಚಾರಣಾ ಸಮಿತಿಯು ಕಂಡು ಹಿಡಿದಿದೆ.

ಜನತಾ ಕಲ್ಯಾಣದ ಕಂಕಣವನ್ನು ಕಟ್ಟಿಕೊಂಡ ಕಾಂಗ್ರೆಸ್ ಸರಕಾರವೇಕೆ ವ್ಯಾಪಾರೋದ್ಯೋಗಗಳ ರಾಷ್ಟ್ರೀಕರಣ ಮಾಡಿ ಕಳ್ಳಪೇಟೆ, ಲಾಭಬಡಕತನಗಳ ಹುಟ್ಟನ್ನು ಅಡಗಿಸಬಾರದು ?—ಎಂಬ ಪ್ರಶ್ನೆಯನ್ನು ಕೇಳಲಾಗುತ್ತಿದೆ.

ನಾಡಿನಲ್ಲಿ ಈಗ ಬಂಡವಲದ ಬರವಿದೆ. ನಾಡಿನ ಸಂರಕ್ಷಣೆಯ ದೃಷ್ಟಿಯಿಂದ ಯುದ್ಧೋಪಯೋಗಿ ಯಾಂತ್ರಿಕ ಉಪಕರಣಗಳ ಉದ್ದಿಮೆ, ಹಾಗು ಉಳಿದ ಉದ್ದಿಮೆಗಳಿಗೆ ಅವಶ್ಯವಾದ ಮೂಲ ಉದ್ದಿಮೆಗಳು ಇವುಗಳನ್ನು ಸ್ಥಾಪಿಸುವುದು ಅಗತ್ಯವಿದ್ದಿದೆ. ನಾಡಿನ ಮುನ್ನಡೆಯ ದೃಷ್ಟಿಯಿಂದ ವಿವಿಧೋದ್ದೇಶಗಳ ಯೋಜನೆಗಳನ್ನು ಕೈಕೊಳ್ಳಬೇಕಾಗಿದೆ. ನಾಡಿನ ಅಭಿವೃದ್ಧಿಗೆ ಅವಶ್ಯವಿರುವ ಈ ಯೋಜನೆಗಳನ್ನು ಸರಕಾರವೇ ಕೈಕೊಳ್ಳಬಲ್ಲದು.

ಇದ್ದ ಹಣವನ್ನು, ಈಗಿರುವ ಉದ್ದಿಮೆಗಳನ್ನು ಕೊಳ್ಳುವುದರಲ್ಲಿಯೇ ವೆಚ್ಚಮಾಡದೆ, ಮೂಲ ಉದ್ದಿಮೆ, ಸಂರಕ್ಷಕ ಉದ್ದಿಮೆ, ಹಾಗು ವಿವಿಧೋದ್ದೇಶದ ಯೋಜನೆ ಇವುಗಳಿಗಾಗಿ ವೆಚ್ಚಮಾಡಬೇಕೆಂದು ಸರಕಾರವು ನಿರ್ಧರಿಸಿದ್ದು ಸರಿಯಾಗಿದೆ ಎಂದು ಹೇಳಬಹುದು.

ಪರಿಹಾರವನ್ನು ಕೊಡದೆ ವ್ಯಾಪಾರ-ಉದ್ದಿಮೆಗಳನ್ನು ಸರ್ಕಾರವು ವಶಪಡಿಸಿಕೊಳ್ಳುವಂತಿಲ್ಲವೆಂದು ಘಟನೆಯಲ್ಲಿ ಹೇಳಿದೆ. ಘಟನೆಯಲ್ಲಿಯೇ ಬದಲಾಗಿ ಪರಿಹಾರ ಕೊಡುವುದು ತಪ್ಪಬಹುದೆಂದು ಆದರೂ ಸರಕಾರೀ ಅಧಿಕಾರಿಗಳಿಗೆ ವ್ಯಾಪಾರ ಉದ್ದಿಮೆಗಳ ಆಡಳಿತದ ಅನುಭವವಿಲ್ಲ. ಸರದಾರ್ ಪಟೇಲರು ಹಿರಿಯೋಲಗದಲ್ಲಿ ಅಧಿಕಾರಿ ವರ್ಗವನ್ನು ಅದೆಷ್ಟು ಹೊಗಳಿದ್ದರೂ ಉದ್ದಿಮೆಗಳನ್ನು ನಡೆಸಿಕೊಳ್ಳುವಂತಹ ಅನುಭವ, ಸೇವಾವೃತ್ತಿ, ಕರ್ತವ್ಯದಕ್ಷತೆ ಈ ಗುಣಗಳಿಂದ ಕೂಡಿದ ಅಧಿಕಾರಿಗಳು ತೀರ ವಿರಳ. ಈ ಗುಣಗಳುಳ್ಳ ಅಧಿಕಾರಿಗಳಿದ್ದರೆ ಈಗ ಕಳ್ಳಪೇಟೆ ಲಂಚದ ಪ್ರಸಂಗಗಳ ಅಸ್ತಿತ್ವವೇ ಉಳಿಯುತ್ತಿದ್ದಿಲ್ಲ. ಮೊನ್ನೆ ಮೊನ್ನೆ ಮುಂಬಯಿ ಪ್ರಾಂತದಲ್ಲಿ ಸುರುವಾದ ಸರಕಾರೀ ಸಾರಿಗೆಯ ವ್ಯವಹಾರವು ಸರಕಾರೀ ಆಡಳಿತದ ಕುಂದು-ಕೊರತೆಗಳಿಗೆ ಸಾಕ್ಷಿಯಾಗಿದೆ. ಆದುದರಿಂದ ರಾಷ್ಟ್ರೀಕರಣದ ವಿಷಯವಾಗಿ ದುಡುಕದಿರುವುದೇ ಒಳಿತು.

ಕೇಂದ್ರ ಸರಕಾರವು ಇತ್ತೀಚೆಗೆ ಶ್ರೀ. ಪಂಜಾಬರಾವ ದೇಶಮುಖರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿಯಮಿಸಿ, ವ್ಯಾಪಾರದ ರಾಷ್ಟ್ರೀಕರಣದ ವಿಷಯವಾಗಿ ವರದಿ ಒಪ್ಪಿಸಲು ಕೇಳಿತ್ತು.

ದೇಶಮುಖ ಸಮಿತಿಯು ನಾಡಿನ ಸದ್ಯದ ಪರಿಸ್ಥಿತಿಯಲ್ಲಿ ಸರಕಾರವೇ ಎಲ್ಲ ವ್ಯಾಪಾರೋದ್ಯೋಗಗಳನ್ನು ಕೈಕೊಳ್ಳುವುದು ಅಸಾಧ್ಯ ಹಾಗು ಅನುಚಿತವೆಂಬ ತೀರ್ಮಾನಕ್ಕೆ ಬಂದಿದೆ. ಆದರೆ ಕೆಲವು ವಿಷಯಗಳಲ್ಲಿ, ವಿಶೇಷವಾಗಿ ಆಯಾತ, ನಿರ್ಯಾತಗಳಂತಹ ಅಂತರರಾಷ್ಟ್ರೀಯ ವ್ಯಾಪಾರವನ್ನು ಸರಕಾರವೇ ಕೈಕೊಳ್ಳಬೇಕೆಂದು ಸೂಚಿಸಿದೆ. ಈ ಆಯಾತ ನಿರ್ಯಾತ ವ್ಯಾಪಾರವನ್ನು ಅಧಿಕೃತ ಬಂಡವಲು ರೂ. ೧೦ ಕೋಟಿ, ಆರಂಭದ ಬಂಡವಲು ರೂ. ೨ ಕೋಟಿ ಇರುವ ಶಾಸನಬದ್ಧ ವ್ಯಾಪಾರೀ ಮಂಡಲಕ್ಕೆ ಒಪ್ಪಿಸಬೇಕೆಂದೂ ಸೂಚಿಸಿದೆ. ಮತ್ತು ಬಂಡವಲದಲ್ಲಿ ಸರಕಾರದ ಪಾಲು ೧೦೦ ಕ್ಕೆ ೫೧ ರಷ್ಟು ಇರಬೇಕು. ಪ್ರಾಮಾಣಿಕ ಉದ್ದಿಮೆದಾರರ ಆಡಳಿತಸಮಿತಿಯನ್ನು ನಿಯಮಿಸಬೇಕು— ಇವು ದೇಶಮುಖ ಸಮಿತಿಯ ವರದಿಯ ಮುಖ್ಯಾಂಶಗಳು. ಈ ವರದಿಯನ್ನು ಬಂಡವಲಗಾರರಷ್ಟೇ ಕಟುವಾಗಿ ಸಾಮ್ಯವಾದಿಗಳೂ ಟೀಕಿಸಿದ್ದಾರೆ. ಆದರೆ ಇದು ರಾಷ್ಟ್ರೀಕರಣದ ಮೊದಲನೆಯ ಹೆಜ್ಜೆಯೆಂದು ಹೇಳಬಹುದು.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂಪಾದಕರು: ಶ್ರೀ. ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.)

ಒಂದು ವರುಷದಲ್ಲಿ ಸುಂದರ ನಾಲ್ಕು ಪುಸ್ತಕಗಳು:

ಚಂದಾ ರೂ. ೫-೪-೦ (ಅಂಚೆವೆಚ್ಚ ಸಹಿತ)

ಈಗಾಗಲೇ ಮಾರಾಟಕ್ಕೆ ಸಿದ್ಧವಾದ ಪುಸ್ತಕಗಳು :—

"ಅರ್ಪಣ" ಮೋಪಾಸಾನ ಕತೆಗಳು (ಪಿ. ವೆಂಕೋಬಾಚಾರ್ಯ) ರೂ. ೧—೪—೦

"ಹೂ ಅರಳಿತು" ತೆಲುಗು ಕತೆಗಳು ,, ,, ೨—೪—೦

ಈ ವರುಷ ಬರಲಿರುವ ಮುಂದಿನ ಎರಡು ಪುಸ್ತಕಗಳು

"ಮನೋರಾಜ್ಯ" ಪ್ರೊ. ರಂ. ಶ್ರೀ. ಮುಗಳಿ ಇವರ ನಾಟಕ

"ಪರಿಣಯ" ಶ್ರೀಮತಿ ಜಯಲಕ್ಷ್ಮೀ ಶ್ರೀನಿವಾಸನ್ ಇವರ ಎರಡು ಚಿಕ್ಕ ಕಾದಂಬರಿಗಳು :

ಏಜಂಟರಿಗೆ, ಮಾರಾಟಗಾರರಿಗೆ ಹೆಚ್ಚಿನ ಸವಲತುಗಳು : ಬೇಗ ಚಂದಾದಾರರಾಗಿರಿ : ವಿವರಗಳಿಗೆ ಬರೆಯಿರಿ.

ಆನಂದ ಗ್ರಂಥಮಾಲಾ
ಗಡಳಿಗಲ್ಲಿ ಹುಬ್ಬಳ್ಳಿ, | ವ್ಯವಸ್ಥಾಪಕರು.
ಪಿ. ವಿ. ಆಚಾರ್ಯ ಕಂ.

ಜ್ಯೋತಿಷಿ

(ಲಲಿತ ಪ್ರಬಂಧ)

ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ

★

ಇಂದಿನ ನಿರಾಶಾಮಯ ವಾತಾವರಣದಲ್ಲಿ ಜ್ಯೋತಿಷ್ಯದ ಮೇಲೆ ಭರವಸೆಯಿಟ್ಟು ಜೀವನ ಸಾಗಿಸುವವರ ಸಂಖ್ಯೆಯೇ ಹೆಚ್ಚಾಗುತ್ತಲಿದೆ! ಈ ಜನಸಂಖ್ಯೆಯೇ ದಿನದಿನವೂ 'ಸುಪ್ರಸಿದ್ಧ ಜ್ಯೋತಿಷಿಗಳ' ನಿರ್ಮಿತಿಗೆ ಕಾರಣವಾಗಿ, ಅವರ ಬರಿಮನೆಯನ್ನು ಸಿರಿಮನೆಯಾಗಿಸುತ್ತಲಿದೆ.

★

ನನಗೆ ಒಮ್ಮೊಮ್ಮೆ ಈ ಜಗತ್ತಿನ ರೀತಿಯನ್ನು ಕಂಡು ವಿಚಿತ್ರವೇ ಎನಿಸುತ್ತದೆ! 'ಅದು ಹೇಗೆ?' ಎಂದು ನನ್ನ ಸಂಗಡ ವಾದಹೂಡಿದ್ದರೆ— ನನಗೆ ಹೇಳುವ ನಾಲ್ಕು ಮಾತುಗಳನ್ನಾದರೂ ಹೇಳಲಿಕ್ಕಾದೀತು. ಸೋಲು ಗೆಲುವಿನ ಶರ್ಯತ್ತಿನ ಕಣವೇ ಈ ಜಗದಂಗಣವಲ್ಲವೆ? ಸಂಸಾರದ ಅನೇಕ ತಾಪತ್ರಯಗಳಲ್ಲಿ ನೊಂದ ನಮ್ಮಂತಹ ಭವಿಗಳಿಗೆ ಅನೇಕ ಸಲ ಇನ್ನುಳಿದ ಉಪಾಯಗಳನ್ನು ಹುಡುಕಿ ಮನಃಶಾಂತಿಯನ್ನು ಪಡೆಯಬೇಕಾಗುತ್ತದೆ. ನಾನು ಇತ್ತೀಚೆಗೆ ಕಚೇರಿಯ ಕೆಲಸ ತೀರಿಸಿಕೊಂಡು ಮನೆಗೆ ಬಂದು ಬಿಡುತ್ತೇನೆ. ನನ್ನ ಮನೆಯೆಂದರೆ ಬಕಿಂಗ್‌ಹ್ಯಾಮ್ ಅರಮನೆಯೆಂದು ತಿಳಿದು, ಇಲ್ಲಿಯ ಸುಂದರ ಚಿತ್ರ ಕಣ್ಣು ಮುಂದೆ ನೀವು ತಂದುಕೊಂಡರೆ—ಅದಕ್ಕೆ ಹೊಣೆಗಾರರು ನೀವೇ ಮತ್ತೆ! ಮನೆಯಲ್ಲಿ ಮೊದಲು ಕಾಲಿಟ್ಟಾಗ ಆಡರುವುದು ಹುಡಿ. ಹರಳುಕಲ್ಲುಗಳನ್ನು ಹರಡಿ ಆಡುವ ಮಕ್ಕಳ ಆಡುಂಬೊಲ—ಆ ನಮ್ಮ ಪಡಸಾಲೆ. ಹಾಗೇ ಒಳಹೊಕ್ಕರೆ, ಮಡದಿಯು ತನ್ನದೊಂದು ಜಗತ್ತನ್ನೇ ನಡುಮನೆಯಲ್ಲಿ ನಿರ್ಮಿಸಿಕೊಂಡಿರುತ್ತಾಳೆ. ಅದರಿಗೆ ಮನೆಯ ವಿಚಾರ ಊಹೆಗೆ ಬಿಡುವುದೇ ಲೇಸು. ನನಗೊ, ಒಂದು ಅಂಕಣದ ಮಹಡಿ ಇದೆ— ಅದುವೇ ನನ್ನ ಶಾಂತಿಸದನ! ಅಲ್ಲಿಯೊಂದು ವಿರಾಮ ಖುರ್ಚಿಯನ್ನೆಳೆದುಕೊಂಡು ಕುಳಿತೆನೊ, ಎದುರಿಗೇ ಕಾಣುವುದು ಸುಂದರವಾದ ಕನ್ನಡ ಅಕ್ಷರಗಳ ಮುದ್ದು ಹಲಗೆ: '**ಜ್ಯೋತಿಷಿ**' ಎಂದು.

ಮೊದಲು ಮೊದಲು ನಾನೇನು ಅಷ್ಟು ಲಕ್ಷ್ಯ ಆ ಜ್ಯೋತಿಷಿಗಳ ಮನೆಯ ಕಡೆಗೆ ಕೊಟ್ಟಿರಲಿಲ್ಲ. ಆದರೆ ನನಗೆ ಈಗ ಪ್ರತಿದಿನ ಜ್ಯೋತಿಷಿಗಳ ಮನೆಯಲ್ಲಿ ನಡೆಯುವ ಅನೇಕ ಕಾರ್ಯಕಲಾ
ಗಳನ್ನು ನೋಡುವುದರಲ್ಲಿಯೇ ಒಂದು ಬಗೆಯ ಸುಖಶಾಂ
ಸಿಕ್ಕುತ್ತದೆ! ಹೀಗಾಗುವುದಕ್ಕೆ ಒಂದು ಕಾರಣವೂ ಉಂಟು
ಮನುಷ್ಯನಿಗೆ ಬಾಳುವೆಯಲ್ಲಿ ಸೋಲುಂಟಾದಾಗ, ಅವನು ತನ್ನನ್ನ
ಬಿಟ್ಟು ಇನ್ನುಳಿದ ಪ್ರಪಂಚದ ಸಂಗತಿಗಳೆಲ್ಲ ಸರಿಯಾಗಿ ನಡೆದಿ
ಎಂದು ತಿಳಿದುಕೊಂಡು, ತನ್ನ ದುಃಖದ ಭಾರವನ್ನು ಇನ್ನೂ
ಹೆಚ್ಚಿಸಿಕೊಳ್ಳುತ್ತಾನೆ. ನನಗಾದದ್ದೂ ಅದುವೆ! ನಾ
ಪಡೆಯದ ತೃಪ್ತಿ, ಸುಖ, ಶಾಂತಿಗಳನ್ನು ಆ ಸಾಮಾನ್ಯ ಜ್ಯೋತಿ
ಪಡೆಯುತ್ತಾನಲ್ಲ—ಎಂದು ನನ್ನ ಮನಸ್ಸಿಗೆ ತುಸು ಮತ್ಸರ
ಮುಂಜಾವಿನಿಂದ ಸಂಜೆಯ ತನಕ ಜನದಟ್ಟಣೆ ಅಲ್ಲಿ ತಪ್ಪಿಲ್ಲ. ಅ
ಬರುವ ಜನರ ವಿಚಾರವನ್ನು ತಿಳಿದುಕೊಂಡರೆ— ಪ್ರಪಂ
ಜ್ಞಾನವೇ ನಮಗಾಗುವುದು!

ಜ್ಯೋತಿಷಿಗಳು ಮೇಲಿಂದ ಮೇಲೆ ಕಣ್ಣಿಗೆ ಬೀಳದಿದ್ದ
ಅವರ ಸಿಂಹಸಂತಹ ಧ್ವನಿ ಓಣಿಯನ್ನೆಲ್ಲ ತುಂಬಿಕೊಂಡಿರುತ್ತ
ಒಮ್ಮೊಮ್ಮೆ ಪಟಾಂಗಣದಲ್ಲಿ ನಿಂತುಕೊಂಡು ಅವರು ದೂ
ದೃಷ್ಟಿಯನ್ನು ಹರಿಬಿಟ್ಟಿರುತ್ತಾರೆ. ಆ ದೃಷ್ಟಿ ನಕ್ಷತ್ರಮಂಡ
ದಾಚೆಯ ಜಗತ್ತಿನ ಕಡೆಗೆ ಇರುವಂತಿರುತ್ತದೆ. ವಿಜ್ಞಾನಿ
ಕುತೂಹಲಕ್ಕಿಂತಲೂ ಸಾವಿರ ಪಟ್ಟು ಮಿಗಿಲು ಅವರ ಕುತೂಹಲ
ನಕ್ಷತ್ರಮಂಡಲವನ್ನು ನಿರೀಕ್ಷಿಸುವಲ್ಲಿ. ಅಂದಬಳಿಕ ಅವ
ಅಗಾಧಜ್ಞಾನದ ಫಲ ಜನಕ್ಕೆ ಸಿಕ್ಕರೆ ಒಳ್ಳೇದಲ್ಲವೆ? ನಮ
ಶಾಸ್ತ್ರಿಗಳು ಆಕಾರದಲ್ಲಿ ತುಸು ಕುಳ್ಳರು. ಹಸಿರು ಕಾಶ್ಮೀರೀ ಶಾ
ಅವರ ದೇಹವನ್ನು ಮುಚ್ಚಿರುತ್ತದೆ. ಕೊರಳಲ್ಲಿ ರುದ್ರಾಕ್ಷಿ
ಸರವೂ ಕಂಗೊಳಿಸುತ್ತಿರುತ್ತದೆ, ಭಸ್ಮಲೇಪನಕ್ಕೇನೂ ಕೊ
ಇದ್ದಂತಿಲ್ಲ. ಲಲಾಟದಲ್ಲಿ ಕುಂಕುಮದ ಬೊಟ್ಟು ಅವರ ಮುಖ
ಅಪೂರ್ವ ಕಳೆಯನ್ನೂ ಗಾಂಭೀರ್ಯವನ್ನೂ ಒದಗಿಸಿ ಕೊಟ್ಟಿರುತ್ತ
ಅವರನ್ನೊಮ್ಮೆ ನೋಡಿದರೆ, ಎಂದೂ ಸಿದ್ಧಿಸದ ಕಾರ್ಯಗ
ಸಿದ್ಧಿಸಬಹುದೆಂಬ ಆದರಭಾವ ಜನಸಾಮಾನ್ಯರಿಗೆ ಆದರೆ ಅದ
ಏನು ಆಶ್ಚರ್ಯವಿಲ್ಲ! ಅವರ ಸವಿಮಾತುಗಳನ್ನು ಲಾಲಿಸಿ
ಹಸಿವು ಹಿಂಗಿದಂತಾಗುತ್ತದೆ. ರೇಶನ್ ಕಾಲದಲ್ಲಿ ಇಂಥ ಜ್ಯೋತಿ
ಗಳು ಹೆಚ್ಚಾದರೆ, ಸರಕಾರಕ್ಕೆ ಎಷ್ಟೋ ತೊಂದರೆ ತಪ್ಪಬಹುದೆಂ
ನಮ್ಮಂತಹ ಅವಿವೇಕಿಗಳಿಗೆ ಎನಿಸಬಹುದು. ಆದರೆ ಸತ್ಯಸಂಗ
ಯನ್ನರಿತಾಗ, ಜ್ಯೋತಿಷಿಗಳ ಮಾತನ್ನು ನೀವು ಒಪ್ಪಬೇಕಾಗುತ್ತ
ತಾವು ಹೇಳುವ ಮಾತು ಪೂರ್ಣ ಸತ್ಯವೆಂದು ಎಂದೂ ಅ
ನಿಮಗೆ ಹೇಳುವುದಿಲ್ಲ. ಗ್ರಹಗಳ ಗತಿ, ಅದಕ್ಕೆ ಜೊತೆಯ
ನಿಮ್ಮ ಪೂರ್ವಕೃತ ಕರ್ಮದ ಬಂಧನ—ಇವುಗಳ ಯೋ
ಯೋಗದ ಫಲ ನಿಮ್ಮ ಮೇಲಾದರೆ, ಆಗುವಲ್ಲಿ ತುಸು ಹೆ
ಕಡಿಮೆಯಾದರೆ— ಅದಕ್ಕೆ ಜ್ಯೋತಿಷಿಗಳೇನು ಮಾಡಬೇಕ
ಡಾಕ್ಟರರು ತಾವು ರೋಗಿಯನ್ನು ಬದುಕಿಸಿಯೇ ತೀರುತ್ತೇನೆ
ಬರೆದು ಕೊಡುತ್ತಾರೆಯೆ? ವೈದ್ಯಕೀಯ ಶಾಸ್ತ್ರದ ಆಧಾ
ಮೇಲೆ ಔಷಧಗಳನ್ನು ಕೊಡುತ್ತಾರೆ; ಅದು ಶಾಸ್ತ್ರೀಯ ಎ

ನೀವು ಹಟ ಹಿಡಿದರೆ—ನಿಮಗೆ ತಿಳಿಯದ ಜ್ಯೋತಿಷ ಶಾಸ್ತ್ರದಲ್ಲಿ ಕೇಳಿದ ವಿಚಾರ ಶಾಸ್ತ್ರಿಗಳು ಹೇಳಿದರೆ—ನೀವೇಕೆ ನಂಬಬಾರದು? ನಂಬಿಗೆಯ ತಳಗಿಂಬಿನ ಆಧಾರದ ಮೇಲೆ ಮುಂದೆ ಬರಬಹುದಾದ ಸುಖದ ಕನಸನ್ನಾದರೂ ಕಂಡು ಹಿಗ್ಗುವ ಯೋಗವಾದರೂ ನಿಮಗೆ ಲಭಿಸಬಹುದಲ್ಲ! ಇದು ಏನು ಬಿಸಿಲುಗುದುರೆಯ ಆಟ ಎಂದು ನೀವು ಮುಖ ತಿರುಹಿದರೆ— ಬಿಸಿಲುಗುದುರೆ ಕಣ್ಣಿಗಾದರೂ ಕಾಣುತ್ತದಲ್ಲ! ಅಷ್ಟರಮಟ್ಟಿಗೆ ಅದು ಸತ್ಯವಲ್ಲವೆ? ಹೀಗೆಂದ ಮಾತ್ರಕ್ಕೆ ಜ್ಯೋತಿಷ್ಯಶಾಸ್ತ್ರವನ್ನು ಹೀಗಳೆಯುತ್ತೇನೆಂದು ತಿಳಿಯುವ ಕಾರಣವಿಲ್ಲ. ಸೂರ್ಯ-ಚಂದ್ರರು ಬಾನಂಗಳದಲ್ಲಿ ಮೂಡಿ ಮುಳುಗುವುದು ಸತ್ಯವಲ್ಲವೆಂದು ಹೇಳುವುದು ಧಾರ್ಷ್ಟ್ಯವಾದೀತು! ಕ್ಷಾನುಲಕ್ಷ ವರುಷ ಮೂಡಿದ್ದಾರೆ ಮುಳುಗಿದ್ದಾರೆ, ಭೂಮಿಗೆ ನ್ನು ಬೆಳಕನ್ನಿತ್ತಿದ್ದಾರೆ. ಶಾಸ್ತ್ರವು ಸುಳ್ಳಲ್ಲ ಎಂಬುದು ನಿಮಗೆ ಗ ಹೊಳೆದಿರಲು ಸಾಕು. ಜ್ಯೋತಿಷಿಗಳು ಹೇಳುವ ರೀತಿ ಬೇರೆ-ಯಾದರೆ, ಕೇಳುವವರ ತಿಳಿವಳಿಕೆ ಸರಿಯಾಗಿರಬೇಕಷ್ಟೆ? ಅದ-ಲ್ಲಿಯೂ ಜ್ಯೋತಿಷ್ಯಶಾಸ್ತ್ರದ ಬಗ್ಗೆ ಹೇಳುವ ಕಥೆಯನ್ನಾಲಿಸಿದರೆ ವರ ಹಿರಿಮೆ ನಿಮಗೆ ತಿಳಿಯದಿರದು: ಒಂದಾನೊಂದು ಕಾಲದಲ್ಲಿ ಜ್ಯೋತಿಷ ಶಾಸ್ತ್ರವು ಬಹಳ ಪ್ರಬಲವಾಗಿ, ಇಡೀ ಪ್ರಪಂಚವೇ ಜ್ಯೋತಿಷಿಗಳ ಕೈಯ ನೆಲ್ಲೀಕಾಯಿ ಆಗುವ ಪ್ರಸಂಗ ದಗಿತಂತೆ. ಪ್ರಪಂಚವನ್ನು ನಿರ್ಮಾಣಮಾಡಿ, ಬಹುದೂರದಲ್ಲಿ ನ್ನುದೊಂದು ಬೇರೆ ಬೇರೆ ಪ್ರಪಂಚವನ್ನು ನಿರ್ಮಿಸಿಕೊಂಡ ಬ್ರಹ್ಮ, ಶಿವ, ವಿಷ್ಣುವಿನ ವಿಚಾರಗಳನ್ನೂ ಕೂಡ ಜ್ಯೋತಿಷಿಗಳು ನ್ನು ಶಾಸ್ತ್ರದ ಆಧಾರದ ಮೇಲೆ ಕಂಡುಹಿಡಿಯಲು ಯತ್ನಿಸದಿರ-ಲ್ಲಿ! ಕೈಲಾಸ-ಪರ್ವತದಲ್ಲಿ ಶ್ರೀಶಂಕರನು ಪಾರ್ವತಿಯ ಜೊತೆಗೆ ರಸ ಸಲ್ಲಾಪ ಮಾಡುತ್ತಿರುವ ವೇಳೆಯನ್ನು ಗೊತ್ತು ಹಚ್ಚಿದರು ಜ್ಯೋತಿಷಿಗಳು! ಶ್ರೀಶಂಕರನಿಗೆ ತುಂಬ ತೊಂದರೆಯಾಗಿರಬೇಕು. ದಕ್ಕೆ ಮಹಾದೇವನು ಕೋಪಾವಿಷ್ಟನಾಗಿ "ನಿಮ್ಮ ಶಾಸ್ತ್ರ ಟ್ಟಿತು; ಪಂಚಭವತಿ, ಪಂಚ ನ ಭವತಿ!" ಎಂದು ಶಾಪವನ್ನಿತ್ತ. ಕಥೆಯ ನಿಜಗುಟ್ಟನ್ನರಿತು ಜ್ಯೋತಿಷ್ಯ ಕೇಳುವವರು ತುಸು ಡಿದುಕೊಂಡರೆ—ಜ್ಯೋತಿಷಿಗಳಿಗೂ ಹಾಗು ನಿಮಗೂ ಪರಸ್ಪರ-ಲ್ಲಿ ಭಿನ್ನಾಭಿಪ್ರಾಯವಾಗಲಿಕ್ಕಿಲ್ಲ! ಈ ಕಥೆ, ಶಾಸ್ತ್ರ, ಪುರಾಣ-ಳ ವಿಚಾರ ಬಿಟ್ಟು, ನಮ್ಮ ಸುಪ್ರಸಿದ್ಧ ಜ್ಯೋತಿಷಿಗಳ ಕಡೆಗೆ ಮನ ಹೊರಳಿಸುವುದೇ ಲೇಸು. ನಮ್ಮ ಜ್ಯೋತಿಷಿಗಳೊ ತೀರಾ ಸರಳ ಪ್ರಾಣಿ. ಶಾಸ್ತ್ರದ ಆಧಾರದ ಮೇಲೆ ಹಾಗೂ ತಮ್ಮ ಕುಶಾಗ್ರ ಬುದ್ಧಿಯನ್ನು ಉಪಯೋಗಿಸಿ ನಮಗೆಲ್ಲ ಮೆಚ್ಚುಗೆಯಾಗುವಂತೆ—ವಿಷ್ಯ ಹೇಳಿ, ಹರ್ಷಮನಸ್ಕರಾಗುವಂತೆ ಮಾಡುತ್ತಾರೆ. ನೀವೇ ಚ್ಚಿ ಕಾಣಿಕೆ ಕೊಟ್ಟರೆ ಸ್ವೀಕರಿಸುತ್ತಾರೆ. ಕೆಲವು ಜನ ಅವರ ರಳತನದ ಉಪಯೋಗ ಮಾಡಿಕೊಂಡು ಹಾಗೆಯೇ ಹೊರಟು-ಹೋಗುತ್ತಾರೆ. ಶಾಸ್ತ್ರಿಗಳು ಎಂದೂ ಮುನಿದುಕೊಳ್ಳುವುದಿಲ್ಲ. ಟತ್ತೆ ಆ ಜನ ಬಂದರೆ, ಅವರ ಭವಿಷ್ಯ ಹೇಳುವಲ್ಲಿ ಏನೂ ಅಸಕ್ತಿ ತೋರಿಸುವುದಿಲ್ಲ. ಅದನ್ನು ಅರಿತು ಅವರು ಆಗ ತಮ್ಮ ವರ್ತನೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ ರ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ
ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣ-
ದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನ-
ಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ
ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'**ನಂಜನಗೂಡು ಟೂತ್ ಪೌಡರು**' ಮತ್ತು
ಆಯುರ್ವೇದೀಯ ಔಷಧಗಳು ತಯಾರಾಗುವ
ಕಾರ್ಖಾನೆ.

ತಿದ್ದಿಕೊಳ್ಳದಿದ್ದರೆ ಹೇಗೆ ನಡೆದೀತು! ಇದನ್ನೆಲ್ಲ ನಾನು ನನ್ನ ಮನೆಯ ಮಹಡಿಯ ಮೇಲೆ ಕುಳಿತುಕೊಂಡು ಅವಲೋಕಿಸಿದೇನೆ. ಒಮ್ಮೆ ಅವರ ಬಳಿಗೂ ಹೋಗಿಬರಬೇಕೆಂದು ನನ್ನ ಮನಸ್ಸು ಹವಣಿಸುತ್ತಿತ್ತು. ಜ್ಯೋತಿಷ್ಯ ಶಾಸ್ತ್ರದ ಮೇಲೆ ನಂಬುಗೆ ಹುಟ್ಟು-ವಷ್ಟು ಸಂಸಾರದಲ್ಲಿ ಇನ್ನೂ ತೊಂದರೆಗಳು ಬಂದಿರಲಿಲ್ಲ. ಈಗ ಆಗ ತುಸು ತೊಂದರೆಗಳು ಪ್ರಾರಂಭವಾದುದರಿಂದಲೇ— ಜ್ಯೋತಿಷಿಗಳ ಮನೆಯ ಕಡೆಗೆ ನನ್ನ ಮುಖ ಹೊರಳಿತು. ಪ್ರತಿನಿತ್ಯ ನನ್ನವಳು "ಜ್ಯೋತಿಷ್ಯ ಕೇಳಿಬರಬಾರದೆ? ಎಷ್ಟು ಜನ ಪ್ರತಿದಿನ ಬರುತ್ತಾರೆ! ಜ್ಯೋತಿಷಿಗಳು ಬಹಳ ಪ್ರಸಿದ್ಧರು. ನಮ್ಮ ತಾಪತ್ರಯಗಳೂ ಹಿಂಗಿದರೆ ಒಳಿತಲ್ಲವೆ?" ಎಂದು, ಇಲ್ಲದ ನಯವಿನಯವನ್ನು ಕಡ ತಂದು, ನಾನು ಊಟಕ್ಕೆ ಕುಳಿತಾಗ ನುಡಿಯುವಳು. ನಾನು ಅವಳ ಮಾತಿಗೆ ಎಷ್ಟೋ ಸಲ ಉತ್ತರ ಕೊಡದೆ ಬಿಟ್ಟು ಬಿಡುತ್ತಿದ್ದೆ. ಆದರೆ ಈ ಸಲ "ಏನು ? ಜ್ಯೋತಿಷ್ಯ ಕೇಳಿದರೆ ನಮ್ಮ ಸಂಕಟ ವಿಮೋಚನೆಯಾಗುತ್ತದೆಯೆ?" ಎಂದು ಬಿರುಸಾಗಿಯೇ ಪ್ರಶ್ನಿಸಿದೆ. ಅವಳೇನು ಸೋಲಲಿಲ್ಲ. "ಹಾಗೆಂದರೇನು....ಇಷ್ಟು ಜನ ಸುಮ್ಮನೇ ಬರುತ್ತಾರೆಯೇ? ಜ್ಯೋತಿಷಿಗಳು ಬಹಳ ಪಂಡಿತ-ರಿದ್ದಾರಂತೆ. ಸಮೀಪದಲ್ಲಿದ್ದು ನೀವೇಕೆ ಹೋಗಿಬರಬಾರದು ಒಮ್ಮೆ ಅವರ ಹತ್ತಿರ?" ಎಂದು ನನ್ನ ಮನ ಒಪ್ಪಿಸಲು ಹೆಣಗಿದಳು. "ಒಳಿತು. ಒಮ್ಮೆ ಹೋಗುತ್ತೇನೆ" ಎಂದು ಅವಳಿಗೆ ಆಶ್ವಾಸನವಿ-ತ್ತಾಗ, ತನ್ನ ಎಲ್ಲ ತೊಂದರೆಗಳು ದೂರವಾದುವೇದೇ ಬಗೆದು ಗಾಳಿಗಿಂತ ತನ್ನ ಮನಸ್ಸು ಹಗುರು ಮಾಡಿಕೊಂಡವನ್ನು ಕಂಡು

"ಜ್ಯೋತಿಷ್ಯ ಶಾಸ್ತ್ರದಲ್ಲಿ ಇದೇ ಗಮ್ಮತ್ತು" ಎಂದು ಮನಸ್ಸಿನಲ್ಲಿಯೇ ನಕ್ಕೆ.

ಜ್ಯೋತಿಷಿಗಳ ಮನೆಗೆ ಪ್ರತಿದಿನ ಎಷ್ಟೋ ಜನ ಬರುತ್ತಾರೆ–ಹೋಗುತ್ತಾರೆ. ಆದರೆ ಪ್ರತಿ ರವಿವಾರ ತಪ್ಪದೆ ಬರುವರು ಒಬ್ಬ ಪ್ರೊಫೆಸರ ಸಾಹೇಬರು. ಆಂಗ್ಲ ಉಡುಪಿನಲ್ಲಿ ಅವರು ಜ್ಯೋತಿಷಿಗಳ ಮನೆ ಹೊಕ್ಕಾಗ, ಮೊದಲು ಮೊದಲು ಜನ ಅಚ್ಚರಿ ಪಡುತ್ತಿತ್ತು. ಪ್ರೊಫೆಸರ್ ಸಾಹೇಬರಲ್ಲಿ ಜ್ಯೋತಿಷಿಗಳ ಮೇಲೆ ಇರುವಂಥ ಶ್ರದ್ಧೆ ಮತ್ತಿನ್ನಾರಲ್ಲೂ ಇದ್ದಂತೆ ಕಾಣುವುದಿಲ್ಲ. ನಾನು ನನ್ನ ಅಟ್ಟದ ಮೇಲೆಯೇ ನಿಂತುಕೊಂಡು, ಅವರ ಬರುವನ್ನು ನಿರೀಕ್ಷಿಸುತ್ತಿರುತ್ತೇನೆ. ಜ್ಯೋತಿಷಿಗಳು ಅವರನ್ನು ಬಹಳ ಆದರದಿಂದ ಬರಮಾಡಿಕೊಳ್ಳುತ್ತಾರೆ. ಅವರಿಗೆ ಇತ್ತೀಚೆಗೆ ಸಿಕ್ಕ ಪ್ರಮೋಶನ್ ಜ್ಯೋತಿಷಿಗಳ ಅನುಗ್ರಹದಿಂದಲೆ–ಎಂದು ಪ್ರೊಫೆಸರು ತಿಳಿದುಕೊಂಡಿದ್ದಾರೆ. ಈಗಂತೂ ಅವರು ವಾರಕ್ಕೊಂದು ಸಲ ಬರುವ ರೂಢಿ ಇಟ್ಟಿದ್ದಾರೆ. ನೋಡಬೇಕು ಅವರು ಇನ್ನಾವ ಪ್ರಗತಿಪಥದಲ್ಲಿ ಅಡಿ-ಇಡುವರೊ! ಅವರು ಹೋದರೋ ಇಲ್ಲವೋ ಎನ್ನುವದರಲ್ಲಿಯೇ "ನಮಸ್ಕಾರ ಶಾಸ್ತ್ರಿಗಳೆ!" ಎಂದು ಹಾಜರ್ ಆಗುತ್ತಾರೆ ಅಂಗಡಿಯ ಚೆನ್ನಪ್ಪನೋರು. ವ್ಯಾಪಾರದಲ್ಲಿ ಇಷ್ಟು ಉತ್ಕರ್ಷ ಇತ್ತೀಚೆಗೆ ರೇಶನ್‌ಯುಗದಲ್ಲಿ ಗ್ರಹಗಳ ಗತಿಯಿಂದಲೇ ಬಂದಿದೆ ಎಂದೂ—ಚೆನ್ನಪ್ಪನವರ ಜನ್ಮಕುಂಡಲಿಯಲ್ಲಿ ಶನಿಮಹಾರಾಯನೆ ಅಗ್ರಸ್ಥಾನದಲ್ಲಿದ್ದಾನೆಂದೂ ಜ್ಯೋತಿಷಿಗಳು ತಿಳಿಪಡಿಸಿ ಮಹದುಪಕಾರವನ್ನು ಮಾಡಿದ್ದಾರೆ. ಚೆನ್ನಪ್ಪನವರು ಜ್ಯೋತಿಷಿಗಳ ಮನೆಗೆ ಬರಲು ಪ್ರಾರಂಭಮಾಡಿದಂದಿನಿಂದ ಶಾಸ್ತ್ರಿಗಳ ಕುಂಡಲಿಯಲ್ಲಿಯೂ ಧನಸ್ಥಾನಕ್ಕೆ ಗುರುಬಂದು ಕುಳಿತಿದ್ದಾನೆಂದು ಹೇಳಿದರೆ, ನನಗೆ ಜ್ಯೋತಿಷ್ಯದಲ್ಲಿ ಗತಿಯಿದೆ—ಎಂದು ನೀವು ತಪ್ಪು ತಿಳಿದುಕೊಳ್ಳದಿದ್ದರೆ ಸಾಕು! ಇತ್ತೀಚೆಗೆ ವಿದ್ಯಾರ್ಥಿಗಳ ತಂಡವು ಶಾಸ್ತ್ರಿಗಳ ಮನೆ ಮುತ್ತಿರುತ್ತದೆ. ಅದಕ್ಕೆ ಆ...ನಮ್ಮ...ಇನ ಎಂಟು ವರುಷ ಇಂಟರ್ ಫೇಲಾಗಿ ಇದೇ ವರುಷ ತೇರ್ಗ ಹೊಂದಿದ ಬಂಟ ವಿದ್ಯಾರ್ಥಿ ಕಾರಣ. ಇಂಥ ವಿದ್ಯಾರ್ಥಿಗಳ ಜ್ಯೋತಿಷಿಗಳು, ಸುಸ್ವಾಗತವನ್ನು ಕೋರುತ್ತಾರೆ ಕನ್ಯಾರ್ಥಿಯಾದ ವರಗಳು, ವರಾರ್ಥಿಯಾದ ಕನ್ಯಾಪಿತೃಗಳು ಓಡಾಡುವುದನ್ನು ನೋಡಿದರೆ, ನಿಜವಾಗಿಯೂ ಶಾಸ್ತ್ರಿಗಳು ಈ ಜನ್ಮದ ಸುಖ ಪಡೆದುಕೊಂಡು ಬಂದಿದ್ದಾರೆ—ಎಂದು ಹೇಳಹೇಳಿಸು ಕಾರಣವಿಲ್ಲ

ಅಂದು ರವಿವಾರದ ಶುಭ ಮುಹೂರ್ತದಲ್ಲಿ ನಾನು ಶಾಸ್ತ್ರಿಗಳ ದರ್ಶನಲಾಭ ಪಡೆಯುವುದಕ್ಕಾಗಿ ಒಳಹೊಕ್ಕೆ. ಜ್ಯೋತಿಷಿಗಳು ಬಹಳ ಆದರದಿಂದ "ಓ... ಹೋ, ಬನ್ನಿ. ನೀವ ಬಂದಿರಾ, ನಮಸ್ಕಾರ!" ಎಂದು ಬರಮಾಡಿಕೊಂಡರು. ಅವ ಈ ಮಾತುಗಳಲ್ಲಿ, ನನಗೆ ಜ್ಯೋತಿಷ್ಯಶಾಸ್ತ್ರದ ಮೇಲೆ ನಂಬಿ ಇಲ್ಲವೆಂಬುದು ಸ್ಪಷ್ಟವಾಗುವಂತಿತ್ತು. ಶಾಸ್ತ್ರಿಗಳು ತಮ್ಮ ಎದುರಿ ಬಿದ್ದ ಅನೇಕ ಕುಂಡಲಿಗಳನ್ನು ಮತ್ತೆ ನೋಡುವುದಕ್ಕೆ ಕುಳಿತುಕೊಂಡರು. ನನಗೆ ಮಾತ್ರ ಸುತ್ತು ಮುತ್ತಲೂ ನೋಡುತ್ತ ಕುಳಿತುಕೊಳ್ಳುವುದೊಂದೇ ಕೆಲಸ ಆಯಿತು. ನವಗ್ರಹಗಳ ದಿವ್ಯ ಫೋಟೋ ಒಂದು ಗೋಡೆಯ ಮೇಲೆ ತೂಗಾಡುತ್ತಿದೆ! ಹಸ್ತಸಾಮುದ್ರಿಕೆಯ ಲಕ್ಷಣಗಳನ್ನೊಳಗೊಂಡ ಸಿದ್ಧಹಸ್ತವು ನೋಡುವವರ ಮನಸ್ಸನ್ನು ಆಕರ್ಷಿಸಿಕೊಳ್ಳುವಂತಿದೆ. ಶಾಸ್ತ್ರಿಗಳ ಬ ಪಕ್ಕಕ್ಕೆ ೫೦ ವರುಷಗಳಿಂದ ಕೂಡಿಟ್ಟ ಪಂಚಾಂಗಗಳ ಗಂ ಬಿದ್ದುಕೊಂಡಿದೆ. ಬಂದ ಜನಕ್ಕೆ ಕುಳಿತುಕೊಳ್ಳಲು ನಾಲ್ಕು ಕುರ್ಚಿಗಳು ಹಾಗೂ ಸಾಮಾನ್ಯ ಜನರಿಗೆ ಕೂಡಲು ಒಂ ಗುಡಾರ— ಎಲ್ಲವೂ ಒಂದು ಬಗೆಯ ಅಪೂರ್ವ ಶೋಭೆಯನ ತಂದೊಡ್ಡಿವೆ ಆ ಸ್ಥಳಕ್ಕೆ. ನಾನು ಹೋದಾಗ ಒಬ್ಬ ಅವರಿಗೆ ಹಸ್ತ ತೋರಿಸುತ್ತಲಿದ್ದರು. ನಾನು ಕುತೂಹಲಿಯಾ ನೋಡುತ್ತ ಕುಳಿತೆ. ಜ್ಯೋತಿಷಿಗಳು ಬಹಳ ಹೊತ್ತಿನ ವರೆ ಯೋಚಿಸಿ "ನಿಮ್ಮ ಕುಂಡಲಿಗೂ— ಈ ಹಸ್ತಕ್ಕೂ ಕೂಡುತ್ತ ನೋಡಿರಿ! ಇದರ ಮೇಲಿಂದ ನೀವು ಫೌಜ್‌ದಾರರಾಗುವುದರ ಸಂದೇಹವಿಲ್ಲ. ಮಂಗಳ ಬಹಳ ಬಲಿಷ್ಠನಿದ್ದಾನೆ" ಎಂದು ಬಹ ಗಂಭೀರವಾಗಿ ನುಡಿದರು. ಇದನ್ನು ಕೇಳಿದ ನನಗೆ ಮಾತ್ರ ಬಾನಗಳಿಂದ ಮಂಗಳ ಅಂಗಳಕ್ಕೇ ಇಳಿದು ಬಂದನೋ ಏನೋ ಅನ ವಂತಾಯಿತು. ಶಾಸ್ತ್ರಿಗಳಿಗೆ ಕಾಣಿಕೆ ಸಲ್ಲಿಸಿ, ಅವರು ಹೊರಡುವಾ ಶಾಸ್ತ್ರಿಗಳು "ನಿಮಗೆ ನೌಕರಿ ಹತ್ತಿದ ಕೂಡಲೆ ಭೆಟ್ಟಿಯಾಗಿರಿ" ಎಂದು ಮುಗುಳುನಗೆ ನಕ್ಕು ಬೀಳ್ಕೊಟ್ಟರು. ಇಪ್ಪತ್ತನೆಯ ಶಮಾನದಲ್ಲಿ ಜಾಹೀರಾತಿನ ಮಹತ್ವ ಹೇಳುವ ಕಾರಣವಿಲ್ಲ. ಶಾಸ್ತ್ರಿಗಳೋ ಇದರ ಮರ್ಮ ತೀರಾ ಅರಿತು, ನುರಿತ ವ್ಯಾಪಾರಿಗಳ ವರ್ತಿಸಿದ್ದನ್ನು ಕಂಡು ನನಗೆ ಶಾಸ್ತ್ರಿಗಳ ಬಗ್ಗೆ ಇನ್ನೂ ಆ ಹೆಚ್ಚಿತು. ಭಾವೀ ಫೌಜ್‌ದಾರರು ಹೊರಗೆ ಅಡಿ ಇಟ್ಟಿದ್ದರೋ ಇಲ್ಲವೋ ಅನ್ನುವಷ್ಟರಲ್ಲಿ, ಮತ್ತೊಬ್ಬರ ಆಗಮನವಾಯಿ

ಬಲಶಾಲಿಗಳೂ ತೇಜಸ್ವಿಗಳೂ ಆಗಬೇಕೆನ್ನುವವರಿಗಾಗಿ

ಶ್ರೀ ಶಿವಾನಂದಸ್ವಾಮೀಜಿ ಬರೆದ ಪುಸ್ತಕ

ಬ್ರಹ್ಮಚರ್ಯವೇ ಜೀವನ

ಅರ್ಥಾತ್ ವೀರ್ಯನಾಶವೇ ಮೃತ್ಯು!

ಅಂಚೆವೆಚ್ಚ ಸೇರಿ **ಬೆಲೆ : ೩-೮-೦**

ಶ್ರೀಮುರಘಾಮಠದ ಸ್ವಾಮಿ ಮತ್ತು ಆಲೂರ ವೆಂಕಟರಾಯರ ಅಭಿಪ್ರಾಯಗಳಿವೆ. ವ್ಯಾಯಾಮ ಆಸನಾದಿಗಳ ಚಿತ್ರಾವಳಿಯಿದೆ. ವೀರ್ಯನಾಶದ ಕಾರಣ, ಲಕ್ಷಣ ಮತ್ತು ರಕ್ಷಣೆಗಾಗಿ ರಾಮಬಾಣ ಉಪಾಯಗಳಿವೆ.

ಇಂದೇ ಬರೆಯಿರಿ :

ಸಮಾಜ ಪುಸ್ತಕಾಲಯ, ಸುಭಾಸ ಬೀದಿ, ಧಾರವಾಡ

ಸ್ತ್ರಿಗಳ ಮುಗುಳುನಗೆಯ ಸುಸ್ವಾಗತ ಸಿಕ್ಕಿತು ಅವರಿಗೆ. ನಾನು "ನಿಮ್ಮ ಕೆಲಸ ಸಾಗಲಿ, ನನ್ನ ವಿಷಯ ಹಿಂದುಗಡೆ ವಿಚಾರಿಸುವ" ಂದು ಅವರ ಕೆಲಸ ಮುನ್ನಡೆಯಲು ಅವಕಾಶ ಒದಗಿಸಿಕೊಟ್ಟೆ. ಕ್ಕೆ ಶಾಸ್ತ್ರಿಗಳು "ನೀವೇನು, ಜ್ಯೋತಿಷಿಗಳ ಮನೆಯವರಿದ್ದ ಾಗೆ" ಎಂದರು. ನಾನು ಘೊಳ್ಳನೆ ನಕ್ಕೆ. ಮತ್ತೆ ಕಾರ್ಯಾರಂಭ- ಯಿತು. ಬಂದವರು ರಾಜಕಾರಣದಲ್ಲಿ ಹೆಸರು ಗಳಿಸಿದವರೆಂಬುದು ವರ ವೇಷ-ಭೂಷಣಗಳಿಂದಲೇ ತಿಳಿಯುವಂತಿತ್ತು. ಅವರಿಗೆ ತ್ತೀಚೆಗೆ ಸಮಾಜದಲ್ಲಿ ಮನ್ನಣೆ ಕಡಿಮೆಯಾಗಿದೆ ಎಂಬ ಸಂಶಯ ಿದ್ದಿತೋ ಏನೋ "ಜ್ಯೋತಿಷಿಗಳೆ— ಹಿಡಿದ ಕೆಲಸ ಈ ಆರು ಂಗಳಲ್ಲಿ ಒಂದೂ ಆಗಿಲ್ಲ ನೋಡಿರಿ. ಏನಾದರೂ ಗ್ರಹಗಳ ಬಾಧೆ ದೆಯೆ?" ಎಂದು ಬಿಸಿ ಉಸಿರನ್ನು ಬಿಡಲು, ಶಾಸ್ತ್ರಿಗಳು ರ್ಥಾತ್—ಹಾಗೇ ಆಗಿರಲೇ ಬೇಕು. ನಿಮ್ಮ ನಕ್ಷತ್ರ—ರಾಶಿ ಳಿರಿ ನೋಡೋಣ" ಎಂದು ಹೊಸ ಹುರುಪಿನಿಂದ ಪಂಚಾಂಗ ುಂದೆಳೆದು ಕೊಂಡರು. ರಾಜಕಾರಣಿಗಳು "ನನಗೆ ಅದಾವುದೂ ತ್ತಿಲ್ಲ! ಶಾಸ್ತ್ರಿಗಳೆ, ನೀವೆ ನೋಡಿ ಹೇಳಿರಲ್ಲ!" ಎಂದು ಸೋತು ಡಿದರು. ಶಾಸ್ತ್ರಿಗಳು ಧೈರ್ಯಗೆಡದೆ "ಓಹೋ ಹೀಗೆಯೇ— ಮ್ಮ ಕೈ ಮುಂದೆ ಮಾಡಿರಿ" ಎಂದು ಅವರ ಹಸ್ತ ಪರೀಕ್ಷೆ ನಡಿಸಿ- ು. ಸುದೀರ್ಘವಾಗಿ ಹಸ್ತ ಪರೀಕ್ಷೆ ಮಾಡಿ "ಪಾಪ! ಶನಿಯು ಮ್ಮನ್ನು ಬಹಳ ಹಣ್ಣು ಮಾಡಿದ್ದಾನೆ. ದುಡ್ಡಿನ ತೊಂದರೆ ಬಹಳ ಿರಬೇಕಲ್ಲ"? ಎಂದು ಅವರು ಮುಖ ನೋಡಿದರು.

"ನಿಮ್ಮ ಮಾತು ನೂರಕ್ಕೆ ನೂರು ಸತ್ಯ. ಎಲ್ಲೆಲ್ಲಿಯೂ ಡ್ಡಿನ ಮುಖವಿಲ್ಲ" ಎಂದು ತಮ್ಮ ಬಗ್ಗೆ ಅವಿಶ್ವಾಸ ವ್ಯಕ್ತಪಡಿಸುವ ಮಾಜವನ್ನು ತುಂಬಾ ಹಳಿದರು. ಶಾಸ್ತ್ರಿಗಳು ಎಲ್ಲವನ್ನೂ ಕೇಳಿ ಂತಚಿತ್ತದಿಂದ "ನೀವು ೨-೩ ದಿನ ಬಿಟ್ಟು ಬನ್ನಿ. ನಿಮ್ಮ ಂಡಲಿ ತಯಾರು ಮಾಡುತ್ತೇನೆ" ಎಂದು ಲೋ ೯ ಡಿ ಗಾ ತು ಿತುಕೊಂಡರು. ರಾಜಕಾರಣಿಗಳು "ನೋಡಿರಿ ಶಾಸ್ತ್ರಿಗಳೆ, ನಗೆ ತುಂಬಾ ಜನಸೇವೆ ಮಾಡುವ ಹವ್ಯಾಸ. ಅದಕ್ಕೆ ದುಡ್ಡು ೇಕು. ಏನೋ ನೀವೆ ಗ್ರಹಗಳ ಕಾಟ ತಪ್ಪುವಂತೆ ಮಾಡಿದರೆ ುಗೂ........!" ಮಾತು ಮುಗಿಯುವ ಮೊದಲೆ "ಛೇ....ಛೇ. ದಕ್ಕೇನು? ಅವಶ್ಯವಾಗಿ ಮಾಡೋಣ" ಎಂದರು ಜ್ಯೋತಿಷಿಗಳು. ಾಜಕಾರಣಿಗಳಿಗೆ ಮರಳಿ ಸುದಿನಗಳು ಬರುವುವೆಂಬ ಭರವಸೆ ಂಟಾಗಿರಬೇಕು. ಉತ್ಸಾಹದಿಂದ ನಕ್ಕು "ನಮಸ್ಕಾರ ಶಾಸ್ತ್ರಿಗಳೆ, ಬುವೆ" ಎಂದು ಹೊರಟರು. ಶಾಸ್ತ್ರಿಗಳು ಉತ್ತರರೂಪವಾಗಿ ನಮಸ್ಕಾರ" ಎಂದರು.

ಈ ವರೆಗೆ ಸುಮ್ಮನೆ ಕುಳಿತುಕೊಂಡ ನನ್ನ ಕಡೆಗೆ ಜ್ಯೋತಿಷಿ- ಳು ಹೊರಳಿ "ರಾಯರ....... ಈಗ ನೋಡಿರಿ ನನ್ನ ಮುಂದೆ ಪ್ಪತ್ತು ಕುಂಡಲಿಗಳು ಬಿದ್ದಿವೆ. 'ಬಹುಚಿತ್ರ ಜಗದ್ಬಹುಧಾ- ಕಾರಾತ್' ಅನ್ನೋಹಾಗೆ....... ಇದು ಎಲ್ಲಾ ತುಂಬಾ ನಿಜ ೋಡಿರಿ. ಒಬ್ಬರ ಹಾಗೆ ಇನ್ನೊಬ್ಬರ ಕುಂಡಲಿಗಳಿಲ್ಲ. ಇವು- ಗಳನ್ನೆಲ್ಲ ಇಂದೇ ಟಪಾಲಿಗೆ ಹಾಕಬೇಕು. ಅಂದರೆ ನಮ್ಮ ಉದ್ಯೋಗದ ದಕ್ಷತೆಯ ಬಗ್ಗೆ ಜನರಿಗೆ ನಂಬಿಗೆ ಉಳಿಯುತ್ತದೆ." ಎಂದು ತಮ್ಮೆದುರಿನಲ್ಲಿ ಬಿದ್ದ ಆ ಕುಂಡಲಿಗಳನ್ನೆಲ್ಲ ಜೋಡಿಸಿ ಸಿದ್ಧ ಮಾಡಿದರು. "ಇವುಗಳಿಗೆ ಪ್ರತಿಫಲ ಬಂದಿದೆಯೇ,?" ಎಂದು ಹಸುರಾಗಿ ಕೇಳಿದೆ ಶಾಸ್ತ್ರಿಗಳು ತಮ್ಮ ಸಹಜ ನಗುವಿನಲ್ಲಿ "ಓಹೋ— ಕುಂಡಲಿಗಳ ಜೊತೆಗೇ ಶ್ರೀ ಬಂದು ಬಿಡುತ್ತಾಳೆ" ಎಂದು ಅಟ್ಟಹಾಸದಿಂದ ನುಡಿದರು. "ಶಾಸ್ತ್ರಿಗಳೆ, ನಿಮ್ಮ ವಿದ್ಯೆ ಅಪಾರವಾದುದು ಎಂತಲೇ ಜನ ನಿಮ್ಮ ಬೆನ್ನುಬಿದ್ದಿದ್ದಾರೆ" ಎಂದೆ.

"ಏನೋ ಪರಮೇಶ್ವರನ ಅನುಗ್ರಹ. ನಿಮ್ಮ ಕುಂಡಲಿ ನೋಡೋಣ" ಎಂದು ಕೈ ಮುಂದು ಮಾಡಿದರು. ನಾನು ಅದಕ್ಕೆ "ಇಲ್ಲಾ, ಏನೋ ನಿಮ್ಮನ್ನು ಕಂಡು ಹೋದರಾಯಿತು ಅಂತ ಬಂದಿದ್ದೆ. ಸಧ್ಯ ನನ್ನದೆಲ್ಲ ನೆಟ್ಟಗೆ ನಡೆದಿದೆ" ಎಂದು ಅವರ ಉತ್ಸಾಹಕ್ಕೆ ತಡೆಮಾಡಿದೆ. ಅವರಿಗೆ ಮುನಿಸು ಬಂದಿತೋ ಏನೋ, "ಹಾಗೆಂದರೇನು? ಮುಂದಾಗುವುದನ್ನು ಇಂದೇ ತಿಳಿದುಕೊಳ್ಳು- ವುದು ಲೇಸಲ್ಲವೇ?" ಎಂದು ನನ್ನ ಮೋರೆ ನೋಡಿದರು. ನಾನು "ಇರಲಿ ಮತ್ತೊಮ್ಮೆ ಬರುವೆ. ಈ ವರೆಗೆ ನಿಮ್ಮ ಕಾರ್ಯ- ಕಲಾಪಗಳಿಗೆ ಅಡ್ಡಿ ಬಂದದ್ದಕ್ಕೆ ಕ್ಷಮೆ ಇರಲಿ" ಎಂದು ಹೊರಟು, ಮತ್ತೆ ನನ್ನ ಶಾಂತಿಸದನವನ್ನೇರಿ ಕುಳಿತುಕೊಂಡೆ. ಎದುರಿನಲ್ಲಿ ಅದುವೇ "ಜ್ಯೋತಿಷಿ" ಹಲಗೆ ಕಂಡಿತು! ನನಗೋ ನಗು ಬಂದಿತು. ನಾನು ಶಾಸ್ತ್ರಿಗಳ ಮನೆಯಿಂದ ಬಂದೆನೆಂದರಿತು ನನ್ನ- ವಳು ಬಂದು "ಏನು ಕೇಳಿದಿರಾ ಜ್ಯೋತಿಷ್ಯ?" ಎಂದು ಕೇಳ- ದಳು. ನಾನು ಕೂಡಲೆ ಉತ್ತರವಿತ್ತೆ "ನಮ್ಮದೆಲ್ಲಾ ಚೆನ್ನಾಗಿದೆ- ಯಂತೆ" ಎಂದು ಮುಗುಳು ನಗೆ ನಕ್ಕೆ. ಅವಳಿಗಾದ ಸಮಾಧಾನ ಅಷ್ಟಿಷ್ಟಲ್ಲ, ಇದೆಲ್ಲಾ ಜ್ಯೋತಿಷ್ಯದ ಫಲ!

ನಗೀನವಿಲು

(ಲಘುಪ್ರಬಂಧ ಸಂಕಲನ)

ಲೇಖಕರು: ಎನ್. ಎಸ್. ಗದಗಕರ

ಪ್ರೊ. ದ. ರಾ. ಬೇಂದ್ರೆಯವರು ಮುನ್ನುಡಿ ಬರೆದಿದ್ದಾರೆ.

ಬೆಲೆ ೦-೧೫-೦

ಮುಖ್ಯ ಮಾರಾಟಗಾರರು:

ಮನೋಹರ ಗ್ರಂಥಭಾಂಡಾರ, ಧಾರವಾಡ

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

★

(೬) ಬಿಹಾರದ ವಿಹಾರಗಳು

ಭಾರತ ವಿಶಾಲವಾದ ರಾಷ್ಟ್ರ. ಪ್ರತಿಯೊಬ್ಬ ಭಾರತೀಯನಿಗೆ ತನ್ನ ರಾಷ್ಟ್ರದ ಮೂಲೆ ಮೂಲೆಯ ಪರಿಚಯವಿರಬೇಕಾದುದು ಅತ್ಯಗತ್ಯ. ಅಂತಹ ಪರಿಚಯ ಈ ಬಗೆಯ ಪ್ರವಾಸ ಪ್ರಬಂಧಗಳಿಂದ ಸುಲಭವಾಗಿ ಸಿಕ್ಕುವುದು.

★

ಇರುಳು ಹತ್ತು ಗಂಟೆಯ ಸುಮಾರಿಗೆ ನಾವು ಭಾಗಲಪುರವನ್ನು ಸಮೀಪಿಸಿದೆವು. ಅದು ನಮಗೆ ಅಪರಿಚಿತ ಸ್ಥಳ. ಅದರಿಂದ ರೈಲಿನಲ್ಲಿರುವಾಗಲೇ ಹತ್ತಿರಿನ ಜನರಿಗೆ ಇಳಿದುಕೊಳ್ಳುವ ಸ್ಥಳ ಹಾಗೂ ಊರ ವಿಷಯವನ್ನು ಕೇಳಿ ತಿಳಿದುಕೊಳ್ಳಲು ಬಯಸಿದೆ. ಮಗ್ಗುಲಿನ ಒಂದಿಬ್ಬರನ್ನು ಕೇಳಿದರೆ, ಅವರು ನನ್ನ ಮಾತಿನಲ್ಲಿ ಆಸ್ಥೆಯನ್ನು ತೋರಿಸಲಿಲ್ಲ. ಅದಕ್ಕಾಗಿ ತುಸು ಹೊತ್ತು ಸುಮ್ಮನುಳಿಯಬೇಕಾಯಿತು ನೆರೆಯವರ ಮೇಲೆ ಸ್ವಲ್ಪ ಸಿಟ್ಟೂ ಬಂತು; 'ಎರಡನೆಯವರ ಕೂಡ ಮಾತನಾಡಲೂ ಕೂಡ ಸಿದ್ಧವಿಲ್ಲವಲ್ಲ ಈ ಜನ!' ಎಂದು. ಹಾಗೇ ವಿಚಾರಿಸುತ್ತ ಕುಳಿತೆ. ನನ್ನ ವಿಚಾರಮುದ್ರೆಯನ್ನು ಕಂಡು, ಎದುರಿಗಿನ ತರುಣನೊಬ್ಬನು ನನ್ನೊಡನೆ ಮಾತಿಗೆ ಆರಂಭಿಸಿದ:

"ನೀವು ಎಲ್ಲಿಗೆ ಹೋಗಬೇಕು?" ಗೊತ್ತಿದ್ದೂ ಕೇಳಿದ ಆತ.

"ಭಾಗಲಪುರ" ಎಂದೆ ನಾನು.

"ನಾನೂ ಅಲ್ಲಿಯೇ ಇಳಿಯ ಬೇಕು. ನನ್ನ ಕೂಡ ಬನ್ನಿ. ಕೂಡಿಯೇ ಇಳಿದುಕೊಳ್ಳೋಣ"

ಎಂದು ಕರೆದ. ತಲೆಯ ಮೇಲೆ ಕೆದರಿದ ಕೂದಲು. ಮೈಯಲ್ಲೊಂದು ನೆಹರು ಶರಟು. ಕೆಳಗೊಂದು ಪಾಯಜಮಾ, ಸಾದುಗಪ್ಪು ವ್ಯಕ್ತಿ. ಒಮ್ಮೆಲೇ ಅವನ ಔತಣವನ್ನು ನಾನು ಸ್ವೀಕರಿಸಲಿಲ್ಲ. ಪ್ರವಾಸದಲ್ಲಿ ಇಂಥವರನ್ನು ಒಮ್ಮೆಲೇ ನಂಬುವಂತಿರಲಿಲ್ಲ. ಅದರಿಂದ ತುಸು ತಡೆದೆ. ನನ್ನ ಅನುಮಾನವನ್ನು ಗುರುತಿಸಿದನೇನೋ ಆತ. ಮುಂದೆ ತಾನೇ ಹೇಳ ಹತ್ತಿದ:

"ನನ್ನ ತಂಗಿಯನ್ನು ಕಳಿಸಲಿಕ್ಕೆ ಹೊರಟಿರುವೆ. ಗಾಡಿ ತಡಮಾಡಿ ಬಂದುದರಿಂದ, ಭಾಗಲಪುರದಲ್ಲಿ ವಸ್ತಿ ಮಾಡಬೇಕಾಯಿತು. ನಿಲ್ದಾಣದ ಸಮೀಪದಲ್ಲಿಯೇ ಧರ್ಮಶಾಲೆಯಿದೆ. ಅಲ್ಲಿಯ ಮುನೀಮರು ನನಗೆ ಗೊತ್ತು. ಒಂದು ಕೋಣೆಯನ್ನು ಇಸಿದು ಕೊಳ್ಳುವೆ. ಎಲ್ಲರಿಗೂ ಸ್ಥಳವಾಗುವುದು."

ಹಾಗೆಯೇ ಅವನು ತನ್ನ ತಂಗಿ ಸುಮಿತ್ರೆಯ ಪರಿಚ ಮಾಡಿಕೊಟ್ಟ. ಅವಳೂ ನನ್ನ ತಾಯಿಯ ಹತ್ತಿರವೇ ಕುಳಿತಿದ್ದ ತನ್ನ ಪರಿಚಯವನ್ನೂ ಇನ್ನಿಷ್ಟು ಮಾಡಿಕೊಟ್ಟ: ಅವನ ಹೆಸರು ಶರ್ಮಾ ಎಂದು. ನಲವತ್ತೆರಡರ ಕ್ರಾಂತಿಯ ಪೂರ್ವದಲ್ಲಿಯೂ ಆ ಕ್ರಾಂತಿಯಲ್ಲಿಯೂ ಕಾಂಗ್ರೇಸಿನಲ್ಲಿ ದುಡಿದ ವ್ಯಕ್ತಿಯದು. ಆಮೇಲೆ 'ಸೋಶ್ಯಾಲಿಸ್ಟ್' ಪಾರ್ಟಿಯಲ್ಲಿ ಸೇರಿದ್ದ. ಆ ಪಾರ್ಟಿಯ ವಿಷಯಕ್ಕೆ ಬಹಳ ಅಭಿಮಾನ ಅವನಿಗೆ. ಬಂಧುಗಳ ವಿಷಯದಲ್ಲಿ ತುಂಬ ಅಭಿಮಾನಿ. ಕಾಂಗ್ರೇಸ್ಸು ಅವರ ಚೆನ್ನಾಗಿ ಕಾಣಲಿಲ್ಲವೆಂದು ತನ್ನ ಅತೃಪ್ತಿಯನ್ನು ಪ್ರದರ್ಶಿಸಿದ.

ಭಾಗಲಪುರದಲ್ಲಿ ಧರ್ಮಶಾಲೆಯಲ್ಲಿ ಶರ್ಮಾನೊಡನೆ ಅದೊಂ ದಿನ ಇರುಳ ಕಳೆದೆವು. ಮರುದಿನ ನಮಗೆ ಅಲ್ಲಿಂದ ಮಂದಾ ಗಿರಿಗೆ ಹೋಗಬೇಕಾಗಿದ್ದಿತು. ಅದು ಮೂವತ್ತು ಮೈಲು ಮೋಟ ರಿನ ಪ್ರವಾಸವಾಗಿದ್ದಿತು. ಮಂದಾರಗಿರಿಯ ಪರಿಚಯ, ಅಲ್ಲಿ ಮೋಟಾರಿನ ಡ್ರಾಯ್‌ವರ್ – ಏಜಂಟರಿಗೂ ಗೊತ್ತಿರಲಿಲ್ಲ. ಶ್ರೀ ವಾಸುಪೂಜ್ಯ ತೀರ್ಥಂಕರರ ಮುಕ್ತಸ್ಥಾನವೆಂದು ನಾವಲ್ಲಿಗೆ ಹೋ ಬೇಕಾಗಿದ್ದಿತು. ಮೋಟಾರಿನಲ್ಲಿ ಕುಳಿತ ಪ್ರಯಾಣಿಕರೊಬ್ಬ 'ಭೈಂಸಿ'ಗೆ ತಿಕೀಟು ಕೊಡಲಿಕ್ಕೆ ನಮಗಾಗಿ ಮೋಟರ್ ಏಜಂ ನಿಗೆ ಹೇಳಿದರು. ಭೈಂಸಿ ಎಂಬುದೊಂದು ಹಳ್ಳಿ. ಆ ಹಳ್ಳಿಯ ನೆ ಯಲ್ಲಿಯೇ ಮಂದಾರಗಿರಿ. ಊರಲ್ಲಿ ನಾಲ್ಕೆಂಟು ಜೈನರ ಮನೆಗ ಒಂದು ಸುಂದರ ಜಿನಮಂದಿರವೂ ಇದೆ. ಅದರ ನೆರೆಯಲ್ಲಿ ಯಾತ್ರಿಕರಿಗಾಗಿ ಕಟ್ಟಿಸಿದ ಒಂದು ಧರ್ಮಶಾಲೆಯಿದೆ. ಹೋದೊಡನೆಯೇ ಪೂಜಾರಿಯು ನಮಗೆ ಮೊದಲು ಪ್ರ ಮಾಡಿದುದು:

"ನೀವು ಸಮ್ಮೇದಗಿರಿಯಿಂದ ಬಂದಿರಾ?" ಎಂದು.

"ಇಲ್ಲ; ಭಾಗಲಪುರದಿಂದ!" ಎಂದು ನಾವು ಹೇಳಿದೆವು. ಅವ ತುಸು ಆಶ್ಚರ್ಯವಾಯಿತು. ಅಲ್ಲಿ ಬರುವ ಯಾತ್ರಿಕರೆಲ್ಲ ಸಮ್ಮೇದಗಿರಿಯಿಂದಲೇ ಬರುವರು. ಸಮ್ಮೇದಗಿರಿ–ಮಂದಾರ ಚಂಪಾಪುರ ಎಂದು ಮೊದಲಾಗಿ ಬಿಹಾರದಲ್ಲಿ ಜೈನಯಾತ್ರಿ ಒಂದು ಮಾರ್ಗವೇ ಆಗಿದೆ. ಆ ಮಾರ್ಗದಿಂದ ಸಾಗಿದರೆ ಬಿಹ ದೊಳಗಿನ ಎಲ್ಲ ಜೈನವಿಹಾರಗಳ ದರ್ಶನವಾಗುವುದುಂಟು. ರಿಂದ ನಾವು ದಾರಿತಪ್ಪಿ ಬಂದವರೆಂದು ಆ ಪೂಜಾರಿ ಭಾವಿ ತೀರ್ಥಯಾತ್ರೆಯಲ್ಲಿ ಶಾಂತಿನಿಕೇತನವನ್ನು ಸೇರಿಸಿಕೊಂಡುದ ನಾವು ಯಾತ್ರಿಕರ ದಾರಿಯನ್ನು ಬಿಡಬೇಕಾಗಿತ್ತು. ಈಗ ಆ ದಾರಿಗೆ ಬಂದು ಸೇರಿದೆವು.

ಜೈನ ತೀರ್ಥಂಕರರು ಮುನಿಗಳು ತಪಸ್ಸು ಮಾಡಿದ ಸ ಗಳಿಗೆ–ಮೋಕ್ಷಸ್ಥಾನಗಳಿಗೆ–ವಿಹಾರಗಳೆಂದು ಬಿಹಾರದಲ್ಲಿ ಹೇ ವರು. ಅದರಂತೆ ಬೌದ್ಧರ ಮಹಾಪುರುಷರು ಸಂಚರಿಸಿದ ಸ್ಥಾ ಗಳಿಗೂ ವಿಹಾರಗಳೆಂದೇ ಹೆಸರು. ಇಲ್ಲಿ ಪ್ರತಿಯೊಂದು

ಕ್ಷೇತ್ರಗಳಿರುವ ಊರುಗಳಲ್ಲಿಯೂ ಬೌದ್ಧವಿಹಾರಗಳೂ ಇವೆ. ಲವು ಕಡೆಗೆ ಮಹಾವೀರ ಈ ಸಲ ವರ್ಷಾಯೋಗ ಮಾಡಿ, ಜೈನ ರ್ಮದ ಪ್ರಚಾರ ಮಾಡಿಹೋದ ಮರುವರ್ಷದಲ್ಲಿಯೇ ಆ ಊರಲ್ಲಿ ಬುದ್ಧ ತನ್ನ ಸಂಘದೊಡನೆ ಚಾತುರ್ಮಾಸ ಕಳೆದು ೌದ್ಧ ಧರ್ಮವನ್ನು ಬೋಧಿಸಿದ್ದುಂಟು. ಈ ಎರಡೂ ಧರ್ಮಗಳ ರಾಟದಲ್ಲಿ ಸಿಕ್ಕಿ, ತನ್ನ ರೂಪವನ್ನು ಬದಲಿಸಿಕೊಂಡ—ಜೈನ ೌದ್ಧ ಸಂಸ್ಕೃತಿಗಳ ಸಾರವನ್ನು ಸ್ವೀಕರಿಸಿ ಪುಷ್ಟಗೊಂಡ—ಹಿಂದೂ ಂಸ್ಕೃತಿಯನ್ನೂ ನಾವು ಹಳ್ಳಿಹಳ್ಳಿಗಳಲ್ಲಿ ಕಾಣುತ್ತೇವೆ. ಬಿಹಾರ- ಲ್ಲಿ ಗಯಾ, ರಾಜಗ್ರಹ, ನಾಲಂದ, ಪಾವಾಪುರಗಳು ಜೈನ- ೌದ್ಧ ಧರ್ಮಗಳ ಸಂಘರ್ಷ ಸ್ಥಳಗಳಾಗಿವೆ. ಇವೆಲ್ಲ ಕ್ಷೇತ್ರಗಳಲ್ಲಿ ಎರಡೂ ಧರ್ಮಗಳ ಸಂಸ್ಕೃತಿಯನ್ನು ಕಾಣುತ್ತೇವೆ. ಗಯೆಯ ೆಯಲ್ಲಿರುವ 'ಕುಲುಅ' ಪರ್ವತವು ಪ್ರಾಚೀನ ಕಾಲದಲ್ಲಿ ಜೈನರ ೇಂದ್ರಸ್ಥಾನವಾಗಿದ್ದಿತು. ಈ ಪರ್ವತದ ಮೇಲೆ ನೂರಾರು— ನ ಮೂರ್ತಿಗಳ ಭಗ್ನಾವಶೇಷಗಳವೆ. ಹಲವು ಮೂರ್ತಿಗಳೂ ಲವು ಜಿನಮಂದಿರಗಳೂ ಒಳ್ಳೆಯ ಸ್ಥಿತಿಯಲ್ಲಿವೆ. ಇಲ್ಲಿ ಭ. ೀತಲನಾಥ ತೀರ್ಥಂಕರರು ತಪಸ್ಸುಮಾಡಿ ಕೇವಲಜ್ಞಾನವನ್ನು ಂಪಾದಿಸಿದರೆಂದು ಹೇಳಲಾಗುತ್ತದೆ. ಇಲ್ಲಿ, ಬುದ್ಧನ ಭಗ್ನ ೂರ್ತಿಯೂ ಇದೆ. ಸಮೀಪದ ಗಯೆಯಂತೂ ಬೌದ್ಧರ ಪ್ರಮುಖ ್ಥಾನವು. ಆದರಿಂದ ಇಲ್ಲಿ ಎರಡೂ ಧರ್ಮಗಳ ಸಂಸ್ಕೃತಿಯನ್ನು ಾಣುತ್ತೇವೆ. ಆದರಂತೆ ಜೈನರ ಪದ್ಮಾವತಿಯ ಗುಡಿಯು ಈಗ ್ಗಾದೇವಿಯ ಮಂದಿರವಾದುದನ್ನು ಕಾಣುತ್ತೇವೆ. ರಾಜ- ಹದಲ್ಲಿಯೂ ಮಹಾವೀರ-ಬುದ್ಧರ ಸಂಚಾರ ಆಗಾಗ ಆಗಿದೆ. ಲ್ಲಿ ಮಹಾವೀರನ 'ಸಮವಸರಣ' ಅವತರಿಸಿದ ಪರ್ವತಗಳನ್ನು ೋರಿಸಿದಂತೆ, ಬುದ್ಧನ ಆಗಮನದ ಸ್ಥಾನಗಳನ್ನು ತೋರಿಸುವರು. ಸ್ತಿಗಳಿರುವಂತೆ ಬುದ್ಧನ ಗುಡಿಯೂ ಇದೆ. ನಾಲಂದದ ನೆರೆ- ಯಲ್ಲಿ ಕುಂಡಲಪುರವಿದೆ, ಎರಡೂ ಪ್ರಸಿದ್ಧ ಸ್ಥಳಗಳು. ಪ್ರಾಚೀನ ಂಸ್ಕೃತಿಯ ಕೇಂದ್ರಸ್ಥಾನಗಳು. ನಾಲಂದದಲ್ಲಿ ಬೌದ್ಧ ಸಂಸ್ಕೃ- ಯ ಪ್ರಭಾವವನ್ನು ಹೆಚ್ಚಾಗಿ ಕಂಡರೆ, ಮಹಾವೀರನ ಜನ್ಮ ್ಥಳವಾದ ಕುಂಡಲಪುರದಲ್ಲಿ ಜೈನಸಂಸ್ಕೃತಿಯ ಮೇಲ್ಮೆಯನ್ನು ಾಣುತ್ತೇವೆ. ಕುಂಡಲಪುರದ ವಿದ್ಯಾಲಯವೇ ನಾಲಂದವಾಗಿರು- ಂತೆ ತೋರುತ್ತದೆ. ಕುಂಡಲಪುರದ ಹೊರಬದಿಗೆ ಎರಡು ೆರ್ಲಾಂಗಿನ ಅಂತರದಲ್ಲಿಯೇ ಈ ವಿದ್ಯಾಲಯವು ನೆಲದಲ್ಲಿ ಸಿಕ್ಕಿದೆ. ನ್ನೂ ಅಗೆಯುತ್ತ ಹೋದರೆ, ಊರ ಮಗ್ಗಲಿಗೇನೇ ವಿಶ್ವವಿದ್ಯಾ- ಯದ ಅವಶೇಷಗಳು ಸಿಕ್ಕುತ್ತ ನಡೆದಿವೆ. *

ಭೈಂಸಿಯ ಬನಿಯಾ ಹಾಗೂ ಬ್ರಾಹ್ಮಣರು ಮಾತ್ರ ಸುಧಾ- ಸಿದ ಜನರು. ಉಳಿದ ಜನವೆಲ್ಲ ಹಿಂದುಳಿದವರು. ಅವರಲ್ಲಿ ದ್ಯೆಯ ಪ್ರಸಾರವಿಲ್ಲ. ಸ್ವಚ್ಛತೆಯಿಂದ ಇರುವುದಕ್ಕೂ ಅವರಿಗೆ ೊತ್ತಿಲ್ಲ. ನಮ್ಮ ಕಡೆಯ ಹರಿಜನರಷ್ಟು ಅಲ್ಲಿಯ ಹಳ್ಳಿಗರು ಹೀನಸ್ಥಿತಿಯಲ್ಲಿದ್ದಾರೆ. ಊರ ಸುತ್ತಲೂ ಚೆನ್ನಾಗಿ ನೀರುಂಡು ಬೆಳೆಯುವ ಬತ್ತದ ಗದ್ದೆಗಳಿವೆ. ಆದರೆ ಅವೆಲ್ಲ ಕೆಲವೇ ಜನರ ಸ್ವತ್ತಾಗಿರುವುದರಿಂದ, ಬಹುಸಂಖ್ಯಾಕರೆಲ್ಲ ಬಡವರಾಗಿಯೇ ಇದ್ದಾರೆ. ಆದರಿಂದ ಅಲ್ಲಿ ಹೋಗುವ ಯಾತ್ರಿಕರ ಹತ್ತಿರ ಎಲ್ಲರೂ ಭಿಕ್ಷೆಗೆ ಕೈಯೊಡ್ಡುವವರೇ. ಊರು ಬಿಟ್ಟು ಒಂದು ಮೈಲು ಅಂತರದ ಮೇಲೆ ಇರುವ ಗುಡ್ಡಕ್ಕೆ ಹೋಗಿ ಜಿನದರ್ಶನವನ್ನು ಮಾಡಿ ಊರಿಗೆ ಬರುವಾಗ, ದಾರಿಯಲ್ಲಿ ಹೊಲದೊಳಗೆ ಕೆಲಸ ಮಾಡುವವರೂ ದನಗಾಹಿಗಳೂ ಬಂದು ದುಡ್ಡು ಕೊಡೆಂದು ಗಂಟು ಬೀಳುತ್ತಾರೆ. ಯಾತ್ರಿಕರು ದಾನ ಮಾಡುತ್ತಾರೆಂಬ ಕಲ್ಪನೆಯೂ ಒಂದು ಇದಕ್ಕೆ ಕಾರಣವಾಗಿರಬೇಕು ಆದರೆ ಇದಕ್ಕೆ ಬಡತನವೇ ಪ್ರಬಲ ಪ್ರಚೋದಕವಾಗಿದೆ.

ಮರುದಿನ ನಾವು ಭೈಂಸಿಯಿಂದ ಮರಳಿ ಭಾಗಲಪುರಕ್ಕೆ ಬಂದೆವು. ಬರುಹೋಗುವಾಗ ದಾರಿಯ ಎರಡೂ ಮಗ್ಗುಲಿಗೆ ಅಡವಿಯಲ್ಲೆಲ್ಲ ನೀರನ್ನೇ ಕಾಣುತ್ತಿದ್ದೆವು. ಇದೆಲ್ಲ ಎರಡು ದಿನಗಳ ಹಿಂದೆ ಆದ ಮಳೆಯ ಪ್ರಭಾವವೆಂದು ಭಾವಿಸಿದ್ದೆವು. ಆದರೆ ಭಾಗಲಪುರಕ್ಕೆ ಹೊಂದಿ ಹಬ್ಬಿರುವ ನಾಥನಗರವನ್ನು ಪ್ರವೇಶಿಸಿ- ದೊಡನೆಯೇ ನಮ್ಮ ಭಾವನೆಯು ಸುಳ್ಳಾಯಿತು. ಅಲ್ಲಿ ಗಂಗಾ ನದಿಗೆ ತೆಗೆದ ಹಲವು ಕಾಲುವೆಗಳನ್ನು ಕಂಡೆವು ಅವೆಲ್ಲ ಪ್ರಾಚೀನ ಕಾಲದಲ್ಲಿ ತೆಗೆದ ಕಾಲುವೆಗಳು. ಅವುಗಳಲ್ಲಿ ಒಂದಕ್ಕೆ 'ಚಂಪಾ'

ಶ್ರೀ ನೀಲಕಂಠೇಶ್ವರ ನಾಟ್ಯಸೇವಾಸಂಘ, ಹೆಗ್ಗೋಡು, ಇವರ
ಪ್ರಥಮ ಪ್ರಕಟಣೆ.
ಈಗ ತಾನೆ ಹೊರಬಿದ್ದಿದೆ!

ಕೈಲಾಸಂ ದರ್ಶನ

'ಕೈಲಾಸಂ' ರವರ ಮಿತ್ರರಾಗಿದ್ದು ಅವರ ಗ್ರಂಥಗಳನ್ನು, ಜೀವನವನ್ನು, ಚೆನ್ನಾಗಿ ಅಭ್ಯಸಿಸಿದ ಕನ್ನಡದ ಸುಪ್ರಸಿದ್ಧ ಬರೆಹಗಾರರ ಲೇಖನಗಳಿಂದೊಡಗೂಡಿ, **'ಕೈಲಾಸಂ'** ರವರ ಜೀವನ ಮತ್ತು ಕೃತಿಗಳೆರಡರ ಮೇಲೂ ಹೊಸಬೆಳಕನ್ನು ಚೆಲ್ಲುವ ವಿಮರ್ಶಾಲೇಖನ ಸಂಕಲನ.

ಸಂಪಾದಕ : ಶ್ರೀ. ಕೆ. ವಿ. ಸುಬ್ಬಣ್ಣ

ಕನ್ನಡದ ಸುಪ್ರಸಿದ್ಧ ಪತ್ರಿಕೆಗಳು, ಸಾಹಿತಿಗಳು, ಮುಕ್ತಕಂಠದಿಂದ ಹೊಗಳಿದ್ದಾರೆ. ಕನ್ನಡದ ರಾಜಕವಿ **ಶ್ರೀ ಗೋವಿಂದಪೈ**ಗಳು ಈ ಗ್ರಂಥವನ್ನು ಕುರಿತು

" ಲೇಖನಗಳೆಲ್ಲ ಬುಟ್ಟಿಯಿಂದಾಯ್ದ ಬಲಿತ ಹಣ್ಣುಗಳಂತಿವೆ " ಎಂದಿದ್ದಾರೆ.

ಬೆಲೆ : ೨-೦-೦. ವ್ಯಾಪಾರಗಾರರಿಗೆ ಯೋಗ್ಯ ಕಮಿಷನ್

ವಿವರಗಳಿಗೆ :— ಅಶೋಕ ನಿಲಯ, ಹೆಗ್ಗೋಡು
(ಸಾಗರ—ಶಿವಮೊಗ್ಗ) ಮೈಸೂರು ಸಂಸ್ಥಾನ

* ರಾಜಗೃಹ ನಾಲಂದಗಳನ್ನು ಕುರಿತು ಮುಂದಿನ ಲೇಖನದಲ್ಲಿ ವಿಸ್ತಾರವಾಗಿ ವಿವರಿಸುವದಿರುವುದರಿಂದ ಇಲ್ಲಿ ಸ್ವಲ್ಪದರಲ್ಲಿ ಸೂಚಿಸಿದೆ.

ವೆಂದೂ ಹೆಸರಿದೆ. ಅದರ ನೆರೆಯಲ್ಲಿ ಹಬ್ಬಿದ ಊರಿಗೇನೆ ಪ್ರಾಚೀನ ಕಾಲದಲ್ಲಿ ಚಂಪಾನಗರವೆಂದು ಹೆಸರಿತ್ತು. ಇಲ್ಲಿ ನಾಥವಂಶದ ಅರಸರು ಆಳುತ್ತಿದ್ದರು. ಇಲ್ಲಿಯೇ ವಾಸುಪೂಜ್ಯ ತೀರ್ಥಂಕರರ ಪಂಚಕಲ್ಯಾಣಕಗಳಾಗಿವೆ. ಧರ್ಮಘೋಷನೆಂಬ ಮುನಿಯು ಸಮಾಧಿಮರಣವನ್ನು ಹೊಂದಿದ ಸ್ಥಾನವನ್ನೂ ತೋರಿಸುತ್ತಾರೆ. ಈ ನಾಥನಗರದಲ್ಲಿಯೇ ಪ್ರಸಿದ್ಧ ಹರಿವಂಶವು ಆರಂಭವಾಗಿದೆ. ನಾಥನಗರಿಗೂ ನಾಥಪಂಥಕ್ಕೂ ಇರುವ ಸಂಬಂಧವನ್ನು ಅಭ್ಯಾಸಿಗಳು ಕಂಡು ಹಿಡಿಯುವುದು ಅವಶ್ಯವಾಗಿದೆ.

ನಾವು ಒಂದು ದಿನದಲ್ಲಿ ಭಾಗಲಪುರದೊಳಗಿನ ಮಂದಿರಗಳನ್ನೆಲ್ಲ ಕಂಡೆವು; ಚಂಪಾಪುರ ನಾಥನಗರಗಳಲ್ಲಿಯ ಹಳೆ ಹೊಸ ಮಂದಿರಗಳನ್ನು ನೋಡಿಕೊಂಡು, ನಾಥನಗರ ನಿಲ್ದಾಣದಿಂದಲೇ ರೈಲನ್ನು ಹತ್ತುವದೆಂದು ಯೋಚಿಸಿದ್ದೆವು. ಆದರೆ ಅಲ್ಲಿ ರೈಲಿನಲ್ಲಿ ಸ್ಥಳವು ದೊರೆಯಲಿಲ್ಲ, ಚಿಕ್ಕ ನಿಲ್ದಾಣವಾದುದರಿಂದ ರೈಲೂ ಹೆಚ್ಚು ಹೊತ್ತು ನಿಲ್ಲುತ್ತಿರಲಿಲ್ಲ. ಆದರಿಂದ ಟಾಂಗಾ ಮಾಡಿಕೊಂಡು ತಿರುಗಿ ಭಾಗಲಪುರ ನಿಲ್ದಾಣಕ್ಕೆ ಬಂದು, ಇರುಳಿನ ಗಾಡಿಯನ್ನು ಹಿಡಿಯಬೇಕಾಯಿತು. ನಮಗೆ ಭಾಗಲಪುರದಿಂದ ಗಯೆಯ ಕಡೆಗೆ ಹೋಗುವ ಉಗಿಬಂಡಿಯನ್ನು ಹಿಡಿದು, ನಡುವೆ ಹತ್ತುವ ನವದಾಹ ಸ್ಟೇಶನಿಗೆ ಹೋಗಬೇಕಾಗಿದ್ದಿತು.

ರೈಲಿನಲ್ಲಿ ಹಾಯಾಗಿ ಸ್ಥಳ ಸಿಕ್ಕಿದ್ದರೂ ಕೂಡ ರಜೆಯ ಮೇಲೆ ಹೊರಟ ಮಿಲಿಟರಿ ಸಿಪಾಯಿಗಳ ಜೊತೆಯಲ್ಲಿ ಪ್ರಯಾಣ ಬೆಳೆಸಬೇಕಾದುದರಿಂದ ವಿಶ್ರಾಂತಿ ಸಿಕ್ಕಲಿಲ್ಲ. ದಣಿದ ದೇಹವನ್ನು ಹೊತ್ತು ಬೆಳಗಿನ ಹತ್ತು ಗಂಟೆಗೆ ನವದಾಹದಲ್ಲಿ ಬಂದಿಳಿದೆವು. ಈ ನಿಲ್ದಾಣದ ನೆರೆಯಲ್ಲಿಯೇ ಗುಣಾವಾ ಕ್ಷೇತ್ರವಿದೆ. ಇದು ಭ. ಮಹಾವೀರನ ಪ್ರಥಮ ಗಣಧರನಾದ ಗೌತಮಸ್ವಾಮಿಯ ನಿರ್ವಾಣಸ್ಥಾನವು. ಊರು ಬಿಟ್ಟು ಸುಮಾರು ಎರಡು ಮೈಲಿನ ಮೇಲೆ ಅಡವಿಯಲ್ಲಿ ಎರಡು ಜಿನಮಂದಿರಗಳಿವೆ. ಒಂದು ಶ್ವೇತಾಂಬರರದು, ಇನ್ನೊಂದು ದಿಗಂಬರರದು. ಬಿಹಾರದ ಬಯಲು ಸೀಮೆಯಲ್ಲಿ— ತಂಗೊಳದ ಮಧ್ಯದಲ್ಲಿ ಕಟ್ಟಿದ ಜಲ-ಮಂದಿರವಂತೂ ನೋಡಲಿಕ್ಕೆ ಬಹು ರಮಣೀಯವಾಗಿದೆ. ಈ ಮಂದಿರದಲ್ಲಿಯೇ ಮಹಾವೀರ ಹಾಗೂ ಇಂದ್ರಭೂತಿಯ ಪಾದುಕೆಗಳಿವೆ.

ನಾವು ಮೊದಲು ದಾರಿಗೆ ಹೊಂದಿ ಇರುವ ಭವ್ಯ ಜಿನಮಂದಿರವನ್ನು ಹೊಕ್ಕೆವು. ಅದು ಶ್ವೇತಾಂಬರರ ಮಂದಿರವು. ಅದರಲ್ಲಿ ಪಾರ್ಶ್ವನಾಥ ತೀರ್ಥಂಕರನಿಗೇ ಅಗ್ರಪೂಜೆಯು. ಅಲ್ಲಿಯ ವ್ಯವಸ್ಥಾಪಕರು ನಮಗೆ ದೇವದರ್ಶನವನ್ನು ಮಾಡಿಸಿ, ದಾರಿಗೆ ಕಳಿಸಿದರು. ಆ ಭಾಗಕ್ಕೆ ಅಪರಿಚಿತರಾದ ನಾವು ಕೇಳಿದೆವು:

"ಅಲ್ಲಿ ದೂರದಲ್ಲಿ ಕಾಣುವವು ಜಿನಮಂದಿರಗಳಲ್ಲವೆ?"

"ಅಹುದು; ಆದರೆ ಇದೇ ಮುಖ್ಯ ಮಂದಿರ. ಯಾತ್ರಿಕರೆಲ್ಲ ಇಲ್ಲಿಯೇ ಬಂದು ಹೋಗುವರು;" ಎಂದ ಆತ.

"ಆ ಮಂದಿರಗಳಿಗೂ ಹೋಗಬೇಕು!" ಎಂದೆ ನಾನು.

ಆವನಿಗೆ ನನ್ನ ಮಾತು ಸರಿದೋರಲಿಲ್ಲ. ಏನೂ ಹೇಳದೆ ಸಿ ಹೋಗಿ ಬಿಟ್ಟ. ನಮಗೆ ದಾರಿಯನ್ನು ಕೂಡ ತೋರಿಸಲಿಲ್ಲ. ನಾ ಬಯಲಿನಲ್ಲಿ ಕಾಣುವ ಮಂದಿರಗಳ ಜಾಡನ್ನು ಹಿಡಿದು ಹಾ ಸಾಗಿದೆವು. ಅಲ್ಲಿ ಒಂದು ಬಯಲು. ಆ ಬಯಲಿನಲ್ಲಿ ಕಲ್ಲ ಮಂಟಪ. ಅಲ್ಲಿಯೇ ಇಂದ್ರಭೂತಿಯು ಕೇವಲಜ್ಞಾನವನ ಪಡೆದ ಮೇಲೆ ಜಿನವಾಣಿಯನ್ನು ಜೀವಿಗಳಿಗೆ ಉಪದೇಶಿಸ ಕುಳ್ಳಿರುತ್ತಿದ್ದನು. ಅದರ ಮಗ್ಗುಲಿಗೆ ಒಂದು ಪುಟ್ಟ ಜಿನಮಂದಿ ಅದರಲ್ಲಿ ಮಹಾವೀರನ ಸುಂದರ ಮೂರ್ತಿ. ಆ ಮಂದಿರ ಹಿಂದೆಯೇ ಸರೋವರ. ಅದರ ಮಧ್ಯದಲ್ಲಿ ನಿರ್ವಾಣಭೂಮಿ ಇಷ್ಟೆಲ್ಲ ಸ್ಥಳಗಳು ನೋಡಲಿಕ್ಕೆ ಸಿಕ್ಕುವು. ಅವು ಪವಿತ್ರ ಕ್ಷೇತ್ರ ಗಳಾಗಿರುವಂತೆಯೇ ಐತಿಹಾಸಿಕ ಸ್ಥಾನಗಳಾಗಿವೆ. ಭಾರತ ಪ್ರಾಚೀನ ಇತಿಹಾಸ ಲೇಖಕರಿಗೆ ಇವೆಲ್ಲ ಸ್ಥಾನಗಳು ವಿಪುಲವಾ ಸಾಮಗ್ರಿಯನ್ನು ಒದಗಿಸುತ್ತವೆ. ಇಲ್ಲಿಯ ವ್ಯವಸ್ಥಾಪಕ ವರ್ಗ ದಲ್ಲಿರುವ ಶ್ವೇತಾಂಬರ-ದಿಗಂಬರರೆಂಬ ಭೇದ ಭಾವನೆ ಯಾತ್ರಿಕರಿಗೆ ಇಂಥ ಪವಿತ್ರ ಸಾಂಸ್ಕೃತಿಕ ಸನ್ನಿವೇಶದಲ್ಲಿಯ ಕೂಡ ಬೇಸರವನ್ನುಂಟು ಮಾಡುವುದು.

ಇಲ್ಲಿಂದ ಹದಿಮೂರು ಮೈಲಿನ ಮೇಲಿರುವುದು ಪಾವಾಪುರಿಯ ಬಿಹಾರ ಶರೀಫ್ ನಿಲ್ದಾಣಕ್ಕೆ ಹೋಗುವ ಬಸ್ಸಿನಲ್ಲಿ ಹತ್ತಿ, ಪಾವ ಪುರಿಗೆ ಹೋಗಿ ಇಳಿಯಬೇಕಾಗುವುದು. ಇದು ಮಹಾವಿ ತೀರ್ಥಂಕರರ ನಿರ್ವಾಣಸ್ಥಳವು, ಪುಣ್ಯಭೂಮಿಯು. ಇ ನೆರೆಯಲ್ಲಿಯೇ ಮಲ್ಲರಾಜರ ಪ್ರಮುಖ ಗ್ರಾಮವಾದ ಹಸ್ತಿಗ್ರಾಮ ವಿದ್ದಿತು. ಇದು ಪಾಂಡವರ ಹಸ್ತಿನಾಪುರವಲ್ಲ. ಇಂದಿಗೆ ೨೫ ವರ್ಷಗಳ ಹಿಂದೆ ಭಾರತದಲ್ಲಿ ಗಣತಂತ್ರ ರಾಜ್ಯಪದ್ಧತಿಯ ಹೆಸರಾದ ಮಲ್ಲರ ರಾಜಧಾನಿಯಿದು.

ಪವಾಪುರಿಯೊಳಗಿನ 'ಧೋಬಿ' ಜನರ ಉಡಿಗೆ ತೊಡಿ ಸಂಸ್ಕೃತಿಗಳನ್ನು ನೋಡಿದರೆ, ಅವರು ಬಹಳ ಹಿಂದುಳಿದವರೆಂ ತೋರುವುದು. ಹಯನು ಮಾರಿ ಹೊಟ್ಟೆ ತುಂಬಿಕೊಳ್ಳುವ ಜ ವರು. ದೊಡ್ಡ ದೊಡ್ಡ ಎಮ್ಮೆ ಆಕಳುಗಳು ಇರುತ್ತವೆ. ಅದ ಅವರು ಹೊಲದೊಡೆಯರಲ್ಲ. ಅಸ್ಮದ ಅಡವಿಗಳನ್ನು ಲಾವ ಯಿಂದ ಮಾಡಿ ದುಡಿಯತಕ್ಕವರು. ತಮ್ಮ ದನಗಳಿಗೆ ಭತ್ತ ಹುಲ್ಲು ಅಷ್ಟು, ಉಳಿದರೆ ಸಾಕೆನ್ನುವ ವೃತ್ತಿ ಅವರದು. ಒಕ್ಕ ತನದಲ್ಲಿಯೂ ಪ್ರಗತಿ ಕಾಣದು. ಬಂಡಿ, ರೆಂಟೆ ಕುಂಟೆಗಳಲ್ಲಿಯ ಇನ್ನೂ ಕಿನ್ನಡಿಗರಷ್ಟು ಸುಧಾರಣೆಯನ್ನು ಕಂಡಿಲ್ಲ ಈ ಬಿಹಾ ಜನ. ಅವರ ಆರ್ಥಿಕ ಅವನತಿಯೂ ಸುಧಾರಣೆಯ ಕಡೆ ಮನಸ್ಸು ಹಾಕುವಷ್ಟು ಅವಕಾಶವನ್ನೂ ಅವರಿಗೆ ಕಲ್ಪಿಸಿ ಕೊಟ್ಟ ಆದರೂ ಪ್ರಾಮಾಣಿಕ ಜನರು. ಹಾಲಿನಲ್ಲಿ ನೀರು ಕೂಡಿಸು ವನ್ನೂ ಕೂಡ ಹೇಳಿ ಕೊಡುವರು. ಅವರು ತಮ್ಮ ಹಾಲಿನ ಕೂಡಿಸಿದ ನೀರಿನ ಪ್ರಮಾಣದ ಮೇಲೆ ಬೇರೆ ಬೇರೆ ದರಗಳನ ಹಾಲಿಗೆ ಹೇಳುವರು. ಶುದ್ಧಹಾಲಿನ ದರವೂ ಬೇರೆಯಾಗಿ ವುದು. ಆ ದರದಲ್ಲಿ ಕೊಂಡರೆ ನೀರಿಲ್ಲದ ಒಳ್ಳೆಯ ಹಾಲನ

ಪುವರು. ಆದರಲ್ಲಿ ಮೋಸ ಮಾಡುವುದಿಲ್ಲ. ಅಕ್ಷರಸ್ಥರನ್ನು— ನಾಗರಿಕತೆಯ ಸಂಪರ್ಕ ಇಟ್ಟುಕೊಂಡವರನ್ನು ಬಿದರೆ— ಉಳಿದ ವೆಲ್ಲ ಬಹು ನಮ್ರ ಸ್ವಭಾವವುಳ್ಳದು. ಅವರ ಬಾಳಿನಲ್ಲಿ ಸತ್ಯ-ಂನೆಗಳನ್ನು ಕಾಣುತ್ತೇವೆ. ಆ ಶಬ್ದಗಳ ಅರ್ಥವನ್ನು ಹೇಳ- ಅವರಿಗೆ ಬಾರದು ಮಾತ್ರ! ಇದಕ್ಕೇ ಎನ್ನುವುದಲ್ಲವೆ ಸ್ಕೃತಿಯೆಂದು ?

ಇಂಥ ಹಸನಾದ ಬಾಳನ್ನು ಇಂದು ಆ ಭಾಗದಲ್ಲಿ* ವಾಸಿಸಿರುವ ಮಿಹಾರರ "ಜಥರಿಯಾ" ಜಾತಿಯ ಜನರಲ್ಲಿ ನಾವು ವಿಶೇಷ-ಗಿ ಕಾಣುತ್ತೇವೆ. ಇವರಂತೆಯೇ "ಕಹಾರ" ಜನರ ಬಾಳೂ ಾದುದು. ಈ ಜಥರಿಯಾ ಜನರೇ ಮೋಪಲಿನ ಕಾಲದಲ್ಲಿ ತ್ಯಗಳೆನಿಸಿಕೊಂಡಿರಬೇಕು. ಏನೇ ಇದ್ದರೂ ಅವರ ಇಂದಿನ ವನ ಪರಿಶುದ್ಧವಾದುದು. ಗಿರಿ-ಕಾನನಗಳಲ್ಲಿ ಇವರನ್ನು ಜೊತೆ-ಲ್ಲಿ ಕರೆದುಕೊಂಡು, ಪರಪ್ರಾಂತದ ಯಾತ್ರಿಕರು ಇರುಳಿನಲ್ಲಿಯೂ ಗುತ್ತಾರೆ. ಸಂಗಡ ದುಡ್ಡು ಇರುತ್ತವೆ. ಮೈಮೇಲೆ ಆಭರಣ-ರುತ್ತವೆ. ಎಷ್ಟೋ ಸಲ ಯಾತ್ರಿಕರ ಹೆಣ್ಣುಮಕ್ಕಳಷ್ಟೇ ಈ ನರ ಗಂಡುಸರ ಜೊತೆಯಲ್ಲಿ ಪರ್ವತಗಳಲ್ಲಿಯ ಜಿನಮಂದಿರಗಳ ರ್ಶನಕ್ಕೆ ಹೋಗುವುದುಂಟು. ಹಾಗೆ ಹೊರಡುವಾಗ ನಾಲ್ಕು ಗಂಟೆಗೇನೇ ಗುಡ್ಡಗಳನ್ನು ಹತ್ತಬೇಕಾಗು-ದೆ. ಆದರೂ ಕಳವಿನ ಹೆದರಿಕೆಯಿಲ್ಲ. ಯಾತ್ರಿಕರನ್ನು ಲಿದು ಒಂದೇ ದಿನದಲ್ಲಿ ಸಾವಿರಾರು ರೂಪಾಯಿಗಳನ್ನು ಗಳಿಸಬಹುದು, ಅವರು ಮನಸ್ಸು ಮಾಡಿದರೆ. ಆದರೆ ವರ ಮನಸ್ಸು ಹಾಗಿಲ್ಲ. ನಾವು ಕೊಟ್ಟ ಹತ್ತೆಂಟು ಆಣೆ-ಲ್ಲಿಯೇ ಸಮಾಧಾನ ಹೊಂದಿರುತ್ತಾರೆ. ಇವರು ದಿನಾಲು ಪ್ಪಿನವಿಲ್ಲದ ಊಟ ಮಾಡರು. ದಯಾಳುಸ್ವಭಾವದವರು, ನಿಗಳು. ಆದರೆ ದಾನ ಕೊಡಲಿಕ್ಕೆ ಇವರಲ್ಲಿ ದುಡ್ಡಿಲ್ಲ.

ಅಂದರೂ ದಾರಿದಾರಿಗಳಲ್ಲಿ ಅರವಟ್ಟಿಗೆಗಳನ್ನು ಇಟ್ಟು ಪಾಂಥಸ್ಥರಿಗೆ ಕುಡಿಯಲು ನೀರು ಹಾಕುವರು. ಬಾವಿಗಳಿರುವಲ್ಲಿ ತಾವು ಕಷ್ಟ-ಪಟ್ಟು ಹೊಸೆದ ಹಗ್ಗಗಳನ್ನೂ ಬಕೆಟ್ಟನ್ನೂ ಇಟ್ಟುಬಿಡುವು-ದುಂಟು. ನಿರ್ಜನವಾದ ಅಡವಿಯೊಳಗಿನ ಬಾವಿಗಳ ಮೇಲೂ ಈ ಸಲಕರಣೆಗಳನ್ನು ನಾವು ಕಾಣಬಹುದು. ನಮ್ಮಲ್ಲಿ ಹೊಲ-ದೊಳಗಿನ ಮಣ್ಣಿನ ಕೊಡಗಳನ್ನೂ ಕದಿಯುವ ನೆರೆಯವರನ್ನು ನೆನೆದರೆ- ಈ ಭೂಮಿಹಾರರ ಬಾಳನ್ನು ಕಂಡು ನಮ್ಮಲ್ಲಿ ಅವರ ವಿಷಯಕ್ಕೆ ಆದರ ಹುಟ್ಟುವುದರಲ್ಲಿ ಸಂಶಯವಿಲ್ಲ. ಇವರು ಹುಲ್ಲಿನ ಗುಡಿಸಿಲಿನಲ್ಲಿ ವಾಸಿಸಿದರೇನು? ಹೊಲಸು ಅರಿವೆಗಳನ್ನು ತೊಟ್ಟ-ರೇನು? ಇವರ ಹೃದಯದ ಸಿರಿವಂತಿಕೆ ನಮ್ಮಲ್ಲಿಯ ಶ್ರೀಮಂತರಿಗೆ ಎಂದೂ ಬಾರದು. ಬಿಹಾರದ ಜನರ ಬಾಳಿನಲ್ಲಿ ನಾವು ಧರ್ಮ-ವನ್ನು ಕಾಣುತ್ತೇವೆ. ಮಾತಿನಲ್ಲಲ್ಲ. ಇಂದು ಉಚ್ಚಕುಲದವರಿಗೇನೆ ತೆರೆದಿರುವ ವಿಹಾರಗಳು ಇವರ ಪಾಲಿಗೆ ಇಲ್ಲವಾದರೇನಾಯ್ತು ? ಇವರ ಹೃದಯವೈಶಾಲ್ಯವು ಪವಿತ್ರ ವಿಹಾರಭೂಮಿಯಂತಿದೆ. ಆದರ ಪಾವಿತ್ರ್ಯದ ಮುಂದೆ ಈ ಕಲ್ಲುಮಣ್ಣುಗಳ ವಿಹಾರ ಮಂಟಪಗಳ ಬೆಲೆಯೇನು ? ಆದರೂ ಬಿಹಾರಿನ ಜನರ ಹೃದ-ಯದ ಪ್ರತೀಕಗಳಂತಿವೆ ಈ ವಿಹಾರಗಳು !

ಅಹುದು ; ಬಿಹಾರದ ವಿಹಾರಗಳೆಲ್ಲವೂ ಐತಿಹಾಸಿಕ ಸ್ಥಾನ-ಗಳಾಗಿವೆ; ಮಹಾಪುರುಷರ ಜೀವನ ರಂಗಸ್ಥಳಗಳಾಗಿವೆ. ಸಮ್ಮೇದಗಿರಿಯು ಹಲವು ಜನ ತೀರ್ಥಂಕರರು ತಪಸ್ಸು ಮಾಡಿದ ಸ್ಥಳವು. ಮಂದಾರಗಿರಿ, ಚಂಪಾಪುರ, ಗುಣಾವಾ, ಪಾವಪುರ ರಾಜಗೃಹಗಳೆಲ್ಲವೂ ಜಿನಮುನಿಗಳ ತಪಸ್ಸಿನ ಪ್ರತೀಕಗಳಾಗಿವೆ. ಬಿಹಾರ ಪ್ರಾಂತದ ರಾಜಧಾನಿಯಾದ ಪಾಟಣಾದ—ಗುಲಜಾರ ಬಾಗವೂ ಕೂಡ ಸುದರ್ಶನ ಸೆಟ್ಟಿಯ ಮುಕ್ತಸ್ಥಾನವಾಗಿದೆ. ಈ ಸ್ಥಳಗಳೆಲ್ಲ ಭಗವಾನ್ ಬುದ್ಧನ ಧರ್ಮಕ್ಷೇತ್ರಗಳೂ ಆಗಿವೆ. ಹೀಗೆ ಜೈನ-ಬೌದ್ಧ ಧರ್ಮಗಳ ವಿಹಾರಗಳಿಗೆ ನೆಲೆವನೆಯಾದ ಬಿಹಾರವು ಭಾರತೀಯ ಧರ್ಮದೇವತೆಯ ವಿಹಾರಭೂಮಿಯಾಗಿದೆ.

* ಚಂಪಾರಣ್ಯ, ಮುಜಫರಪುರ, ದರಬಂಗಾ ಮತ್ತು ಛಪರಾ ಜಿಲ್ಹೆಗಳಿಗೆ ರಿದ ಈಗಿನ ಭಾಗ.

ಗದಗು ಮತ್ತು ಬಾಗಿಲುಕೋಟೆಯ ಏಜೆಂಟರು
ಶ್ರೀ. ಟಿ. ವಿ. ಕೋಟಿ, ಗದಗು

ವಿಜಾಪುರದ ಏಜಂಟರು
ಮ್ಯಾನೇಜರ್ ಯುನಿಕ್ ಸ್ಟೋರ್ಸ್

ಹುಬ್ಬಳ್ಳಿಯ ಏಜೆಂಟರು
ಕಂಬೈಂಡ್ ನ್ಯೂಜ್ ಏಜನ್ಸಿ, ಹುಬ್ಬಳ್ಳಿ

ಜಮಖಂಡಿಯ ಏಜಂಟರು
ಶ್ರೀ ಅಶೋಕ ಕೋನಾಪುರಕರ್, ನಾವೆಲ್ಟಿ ಸ್ಟೋರ್ಸ್

ಅಳಣಾವರದ ಏಜಂಟ್
ಶ್ರೀ. ಎಫ್. ಎಸ್. ಸೊಪ್ಪಿ, ಅಳಣಾವರ

ಸಾಂಗಲಿಯ ಏಜಂಟ್
ಶ್ರೀ. ಎಂ. ಜಿ, ಗಡಾದ, ಸಾಂಗಲಿ

ಕಣ್ಣು ಮುಚ್ಚಾಲೆ

(ಕತೆಯೊಂದು)*

ಶ್ರೀ ಎಸ್. ಸುಬ್ಬರಾಮಯ್ಯ, ಬಿ. ಎ. (ಆನರ್ಸ್)
ಮಂಚೇನಹಳ್ಳಿ

卐

ಆತ್ಮೀಯರ ಮರಣದ ಭೀತಿ ಎಂತಹ ಬುದ್ಧಿಪ್ರಧಾನ ಮನುಷ್ಯನನ್ನೂ ಭಾವಿಕನನ್ನಾಗಿ ಮಾಡುವುದೆಂದ ಮೇಲೆ, ಸೆರಾಫಿಮಾನಂತಹ ಪ್ರೀತಿಯ ತಾಯಿಯನ್ನು ಭಾವಿಕಳನ್ನಾಗಿ ಮಾಡದೆ? ಭಾವಿಕ ಜೀವಿಗಳೇ ಶಕುನಪರಂಪರೆಗೆ ಕಾರಣರಾಗಿದ್ದಾರೆ.

★

೧

ಲಿಲೆಚ್‌ಕಾಳ ಆಟದ ಕೊಟಡಿಯಲ್ಲಿ ಪ್ರತಿಯೊಂದೂ ಶೋಭಾಯಮಾನವಾಗಿ, ಅಂದವಾಗಿ, ಹಿತಕರವಾಗಿ ಇದ್ದಿತು. ಅವಳ ಇನಿದನಿ ಅವಳ ತಾಯಿಯನ್ನು ಮುಗ್ಧಗೊಳಿಸಿತ್ತು. ಲಿಲಿಚ್‌ಕಾ ಆನಂದವನ್ನೀಯುವಂತಹ ಮಗು. ಅಂತಹ ಇನ್ನೊಂದು ಮಗು ಎಲ್ಲೂ ಇರಲಿಲ್ಲ, ಹಿಂದೆ ಎಂದೂ ಇದ್ದಿರಲಿಲ್ಲ, ಮುಂದೆಯೂ ಹುಟ್ಟುವಂತಿರಲಿಲ್ಲ—ಎಂದು ಹೇಳುವಂತಿದ್ದಿತು. ಲಿಲೆಚ್‌ಕಳ ತಾಯಿ ಸೆರಾಫಿಮಾ ಅಲೆಕ್ಸಾಂಡ್ರೊವ್ನಾಳಿಗೆ ಎನಿಸಿದುದು ಹೀಗೆಯೆ. ಲಿಲೆಚ್‌ಕಳ ಕಣ್ಣುಗಳು ವಿಶಾಲವಾಗಿ ಕಪ್ಪಗಿದ್ದುವು; ಕಪೋಲಗಳು ಗುಲಾಬಿಯಂತಹವು; ಅವಳ ತುಟಿಗಳು ಇದ್ದುದು ಮುತ್ತುಗಳಿಗಾಗಿ ಮತ್ತು ನಗೆಗೋಸ್ಕರ. ಆದರೆ ಲಿಲೆಚ್‌ಕಳ ಈ ಸೌಂದರ್ಯವೊಂದೇ ಅವಳ ತಾಯಿಗೆ ಆನಂದ ತರುತ್ತಿದ್ದಿತೆಂದಲ್ಲ; ಲಿಲೆಚ್‌ಕಾ ಅವಳ ತಾಯಿಗೆ ಇದ್ದ ಒಂದೇ ಒಂದು ಮಗು, ಇದರಿಂದಲೇ ಅವಳ ಒಂದೊಂದು ಆಟವೂ ತಾಯಿಯನ್ನು ಮಂತ್ರಮುಗ್ಧಳನ್ನಾಗಿ ಮಾಡುತ್ತಿದ್ದುದು. ಲಿಲೆಚ್‌ಕಳನ್ನು ತೊಡೆಯ ಮೇಲೆ ಸಿಲ್ಲಿಸಿಕೊಂಡು ಮುದ್ದಾಡುವುದು ಬಹಳ ಸಂತೋಷದ ಕೆಲಸ; ಆ ಸಣ್ಣ ಕಂದನನ್ನು ತೋಳುಗಳ ಸೆರೆಯಲ್ಲಿ ಹೂವಿನಂತೆ ಹಿಡಿದಿರುವುದು—ಹುಂ! ಒಂದು ಪುಟ್ಟ ಹಕ್ಕಿಯಷ್ಟೇ ಹಗುರವಾಗಿ ಹೊಳೆಯುವ ಪದಾರ್ಥ ಅದು!

* ಸುಪ್ರಸಿದ್ಧ ರಷ್ಯನ್ ಕತೆಗಾರ ಫಿಯೊಡರ್ ಸೊಲೊಗಬ್ಬನ ಕತೆಯೊಂದರ ಅನುವಾದ. ಲೇ.

ನಿಜ ಹೇಳುವುದಾದರೆ, ಸೆರಾಫಿಮಾ ಶಿಶುಗೃಹದಲ್ಲಿರುವಾ ಮಾತ್ರ ಸುಖವಾಗಿರುತ್ತಿದ್ದಳು. ತನ್ನ ಪತಿಯೊಡನೆ ಅವ ತಣ್ಣಗಿರುತ್ತಿದ್ದಳು. ಪ್ರಾಯಶಃ ಇದರ ಕಾರಣ ಅವನಿಗೆ ಇಷ್ಟವಾಗಿದ್ದುದು ಕೇವಲ ತಣ್ಣಗಿರುವ ಪದಾರ್ಥಗಳಾದುದರಿಂ ತಣ್ಣಗಿರುವ ನೀರು ಕುಡಿಯಲು ಅವನಿಗೆ ಪ್ರೀತಿ, ತಣ್ಣನೆಯ ಗಾಳಿಯನ್ನು ಉಸಿರಾಡುವುದು ಅವನಿಗೆ ಇಷ್ಟ. ಅವನು ಯಾವಾಗಲೂ ತಣ್ಣಗೆ, ಶಾಂತನಾಗಿರುತ್ತಿದ್ದು ಸ್ನೇಹರಹಿತವಾದ ನ ನಗುತ್ತಿದ್ದನು. ಅವನು ನಡೆದ ಕಡೆಯ ಗಾಳಿಯೆಲ್ಲಾ ಶೀತವಾ ಹೋಗುವಂತಿತ್ತು.

ನೆಸಲ್ ಟಿಯೊವ್ ವಂಶಕ್ಕೆ ಸೇರಿದ ಸರ್ಗೆ ಮಾಡೆಸ್ಟೊವಿಚ ಮತ್ತು ಸೆರಾಫಿಮಾ, ಪ್ರೇಮ ಅಥವಾ ಮುಂದಾಲೋಚನೆಯಿಲ್ಲ ಮದುವೆಯಾಗಿದ್ದರು; ಏಕೆಂದರೆ ಅದು ಆಗ ವಾಡಿಕೆಯಲ್ಲಿದ್ದ ಪದ್ಧತಿ. ಅವನು ಮೂವತ್ತೈದು ವರ್ಷದ ಯುವಕ; ಅ ಇಪ್ಪತ್ತೈದು ವರ್ಷದ ಯುವತಿ. ಇಬ್ಬರೂ ಒಂದೇ ಬಳಗದ ರಾಗಿದ್ದು ಸುಸಂಸ್ಕೃತರಾಗಿದ್ದರು. ಅವನಿಗೆ ಒಬ್ಬ ಹೆಂಡತಿಯ ಆವಶ್ಯಕತೆ ಇತ್ತು; ಅವಳಿಗೂ ಪತಿಯೊಬ್ಬನ ಕೈ ಹಿಡಿಯು ಕಾಲ ಒದಗಿತ್ತು.

ತನ್ನ ಭಾವೀ ಪತಿಯಲ್ಲಿ ತನಗೆ ಪ್ರೇಮವಿದೆಯೆಂದು ಕೂ ಅನ್ನಿಸಿ, ಇದು ಸೆರಾಫಿಮಳಿಗೆ ಸುಖಕೊಟ್ಟಿತ್ತು. ಅವನು ಸುಂದ ನಾಗಿಯೂ ಸುಸಂಸ್ಕೃತನಾಗಿಯೂ ಕಾಣುತ್ತಿದ್ದನು; ಅವ ಬುದ್ಧಿಪೂರ್ಣವಾದ ಬಿಳಿಯ ಕಣ್ಣುಗಳು, ಯಾವಾಗಲೂ ಹೆಚ್ಚಿ ಗಾಂಭೀರ್ಯ ಹೊಂಸೂಸುತ್ತಿದ್ದುವು; ಪತಿಯಾಗುವವನಿಂ ನಿರೀಕ್ಷಿಸುವ ಎಲ್ಲ ವಿಷಯಗಳಲ್ಲೂ ಸ್ವಲ್ಪವೂ ಕುಂದಿಲ್ಲದೆ ಅವನ ಮರ್ಯಾದೆಯಿಂದ ತೃಪ್ತಿಗೊಳಿಸಿದ್ದನು.

ವಧುವೂ ನೋಡುವುದಕ್ಕೆ ಚೆನ್ನಾಗಿದ್ದಳು; ಅವಳು ಎತ್ತರ ವಾದ, ನೀಲನಯನಗಳ, ಕೃಷ್ಣವರ್ಣದ ತಲೆಗೂದಲಿನ ಹುಡುಗಿ ಸ್ವಲ್ಪ ಭೀರುವಾದರೂ ಬಹಳ ಚತುರೆ. ಅವಳ ಸ್ವಂತ ಹಣ ಸ್ವ ಇತ್ತೆಂದು ಮಾಡೆಸ್ಟೊವಿಚ್ಚನಿಗೆ ಸಮಾಧಾನವಾದರೂ, ಅವನ ವರದಕ್ಷಿಣೆಗಾಗಿ ಅವಳನ್ನು ಮದುವೆಯಾಗಿರಲಿಲ್ಲ. ಆವನ ಶ್ರೀಮಂತ ನಂಟರಿದ್ದರು; ಅವಳೂ ಉತ್ತಮರಾದ ಪ್ರಭಾವಶಾಲಿಗಳ ವಂಶದವಳು. ಇದು ತಕ್ಕ ಸಮಯದಲ್ಲಿ ಉಪಯೋಗಕಾ ಯಾಗಬಹುದಾಗಿತ್ತು. ಯಾವಾಗಲೂ ತಪ್ಪು ಮಾಡದೆ ಚತುರ ನಾಗಿದ್ದ ಅವನು, ತನ್ನ ಕೆಲಸದಲ್ಲಿ ಇತರರು ಯಾರೂ ಕರುಬು ವಷ್ಟು ವೇಗವಾಗಿ ಮುಂದಕ್ಕೆ ಬರಲೂ ಇಲ್ಲ; ತಾನೇ ಬೇರೆಯವರನ್ನು ಕಂಡು ಹೊಟ್ಟೆ ಉರಿದುಕೊಳ್ಳುವಷ್ಟು ನಿಧಾನವಾಗಿಯ ಇರಲಿಲ್ಲ—ಪ್ರತಿಯೊಂದೂ ಸಕಾಲದಲ್ಲಿ ತಕ್ಕಷ್ಟು ಪ್ರಮಾಣದಲ್ಲಿ ಬರುತ್ತಿತ್ತು.

ವಿವಾಹವಾದ ಮೇಲೆ ಅವನ ನಡೆವಳಿಕೆಯಲ್ಲಿ ಯಾವ ತಪ್ಪೂ ಅವನ ಹೆಂಡತಿಗೆ ಕಂಡುಬರುವಂತೆ ಇರಲಿಲ್ಲ. ಆದರೆ ಆ ಮೇಲೆ ಅವನ ಹೆಂಡತಿಗೆ—ಇನ್ನೇನು ಮಗುವು ಹುಟ್ಟುವುದರಲ್ಲಿದ್ದಾಗ

ವನು ಬೇರೆ ಕಡೆ ಅಲ್ಪಕಾಲದ ಹಗುರವಾದ ಸಂಬಂಧ ಇಟ್ಟು-ಕೊಂಡದ್ದನ್ನು ಸೆರಾಫಿಮಾ ಕಂಡುಹಿಡಿದಳು. ಆದರೆ ಇದರಿಂದ ತನ್ನ ಮನಸ್ಸಿಗೆ ನೋವಾಗದೆ ಇದ್ದುದು ಅವಳನ್ನೇ ಬೆರಗು-ಗೊಳಿಸಿತ್ತು; ತನ್ನ ಮಗುವಿಗಾಗಿ ಅವಳಲ್ಲಿದ್ದ ಆತುರದ ನಿರೀಕ್ಷಣೆ ಇತರ ಎಲ್ಲಾ ಭಾವನೆಯನ್ನೂ ನುಂಗಿಬಿಟ್ಟಿತ್ತು.

ಒಂದು ಪುಟ್ಟ ಹೆಣ್ಣು ಹುಟ್ಟಿತು. ಸೆರಾಫಿಮಾ ತನ್ನನ್ನು ಪೂರ್ತಿಯಾಗಿ ಆ ಮಗುವಿಗೆ ಧಾರೆಯೆರೆದುಕೊಂಡುಬಿಟ್ಟಳು. ಮೊದಮೊದಲು ಲಿಲೆಚ್‌ಕಳ ಜೀವನದ ಎಲ್ಲಾ ಸಂತೋಷದ ವಿಷಯವನ್ನೂ ಆನಂದಾತಿಶಯದಿಂದ ಪತಿಗೆ ಹೇಳುತ್ತಿದ್ದಳು. ಆದರೆ ಅವನಿಗೆ ಅವರಲ್ಲಿ ಸ್ವಲ್ಪವೂ ಆಸಕ್ತಿಯಿಲ್ಲದಿದ್ದರೂ ತನ್ನ ಮನಸ್ಸನ್ನು ನೋಯಿಸಲಾರದೆ ತನ್ನ ಮಾತನ್ನು ಕೇಳುತ್ತಿದ್ದಾ-ನೆಂಬುದು ಅವಳಿಗೆ ಅರ್ಥವಾಯಿತು. ಸೆರಾಫಿಮಾ ಅವನಿಂದ ಹೆಚ್ಚು ಹೆಚ್ಚು ದೂರ ಸರಿಯಲಾರಂಭಿಸಿದಳು. ತಮ್ಮ ಪತಿಗಳಿಂದ ದೂರಹೋದ ಇತರ ಸ್ತ್ರೀಯರು ತಮ್ಮ ಯುವಕಪ್ರೇಮಿಗಳಲ್ಲಿ ಇಡುವಷ್ಟು ಗಾಢಪ್ರೀತಿಯನ್ನು, ಈಕೆ ಲಿಲೆಚ್‌ಕಳ ಮೇಲೆ ಇರಿಸಿದ್ದಳು.

'ಅಮ್ಮಾ, ಕಣ್ಣುಮುಚ್ಚಾಲೆ ಆಡೋಣ' ಎಂದು ಲಿಲೆಚ್‌ಕಾ ತನ್ನ ತೊದಲ್ನುಡಿಯಲ್ಲಿ ಹೇಳುತ್ತಿದ್ದಳು. ಮಗುವಿನ ಮಾತಿನ ಈ ಮನೋಹಾರಿ ಅಶಕ್ತಿ, ಯಾವಾಗಲೂ ಸೆರಾಫಿಮಾ ಮೃದು-ವಾದ ಪ್ರೇಮದಿಂದ ನಗುವಂತೆ ಮಾಡುತ್ತಿತ್ತು. ಆ ಮೇಲೆ ಲಿಲೆಚ್‌ಕಾ ಅಲ್ಲಿಂದ ಓಡಿ, ತನ್ನ ಸಣ್ಣ ದುಂಡುಕಾಲುಗಳನ್ನು ಜಮ-ಖಾನದ ಮೇಲೆ ಊರಿಕೊಂಡು ಓಡಿಹೋಗಿ, ತನ್ನ ಹಾಸಿಗೆಯ-ಬಳಿ ಪರದೆಯ ಹಿಂದೆ ಅವಿತುಕೊಳ್ಳುತ್ತಿದ್ದಳು.

'ಜೂಟ್, ಜೂಟ್ ಅಮ್ಮಾ!' ಚಾತುರ್ಯದ ಒಂಟಿಕಣ್ಣಿ-ನಿಂದ ನೋಡುತ್ತಾ ಮಗಳು ತನ್ನ ಮಧುರವಾದ ನಗೆಯ ಧ್ವನಿ-ಯಲ್ಲಿ ಕೂಗಿಕೊಳ್ಳುವಳು. ತಾಯಿ ಮಗಳನ್ನು ಹುಡುಕುತ್ತಾ, ನಿಜವಾಗಿಯೂ ತಾನು ಅವಳನ್ನು ಕಾಣದಂತೆ ನಟಿಸುತ್ತಾ, 'ನನ್ನ ಪುಟ್ಟ ಹೆಣ್ಣು ಎಲ್ಲಿ?' ಎಂದು ಕೇಳುವಳು.

ಇದನ್ನು ನೋಡಿ ಲಿಲೆಚ್‌ಕಾ ತಾನು ಅವಿತುಕೊಂಡಿದ್ದ ಸ್ಥಳ-ದಿಂದಲೇ ನಗೆಯ ಅಲೆಯನ್ನು ತೇಲಿಬಿಡುವಳು. ಆ ಮೇಲೆ ಅವಳು ಅಲ್ಲಿಂದ ಸ್ವಲ್ಪ ಮುಂದಕ್ಕೆ ಬರುವಳು. ತಾನು ಅವಳನ್ನು ಈಗ ತಾನೇ ಕಂಡುಹಿಡಿದಂತೆ, ತಾಯಿ ಅವಳ ಪುಟ್ಟ ಭುಜಗಳನ್ನು ಹಿಡಿದುಕೊಂಡು, ಆನಂದಾತಿಶಯದಿಂದ 'ಸಿಕ್ಕಿದಳು, ನನ್ನ ಲಿಲೆಚ್‌ಕಾ!' ಎಂದು ಉದ್ಗಾರತೆಗೆಯುವಳು.

ಲಿಲೆಚ್‌ಕಾ ದೀರ್ಘವಾದ ಸಂತೋಷದ ನಗೆ ನಗುವಳು. ಅವಳ ತಲೆ ತಾಯಿಯ ತೊಡೆಗಳ ಮಗ್ಗುಲಲ್ಲಿಯೇ ಇದ್ದು, ಅವಳ ದೇಹವೆಲ್ಲ ತನ್ನ ತಾಯಿಯ ಬಿಳಿಯ ಕೈಗಳ ಅಪ್ಪುಗೆಯಲ್ಲಿ ಸಿಕ್ಕಿಬಿಡುವುದು. ಆಗ ಅವಳ ತಾಯಿಯ ಕಣ್ಣುಗಳು ಗಾಢವಾದ ಪ್ರೇಮದಿಂದ ಹೊಳೆಯಲಾರಂಭಿಸುವುವು.

'ಅಮ್ಮಾ, ಈಗ ನೀನು ಅವಿತುಕೋ.' ಲಿಲೆಚ್‌ಕಾ ನಗೆ ನಿಲ್ಲಿಸಿ ತಾಯಿಗೆ ಹೇಳಿದಳು.

ಅವಳ ತಾಯಿ ಬಚ್ಚಿಟ್ಟುಕೊಳ್ಳುವುದಕ್ಕೆ ಹೋದಳು. ನೋಡಿ-ಕೊಳ್ಳಕೂಡದೆಂದು ಮಗಳು ಬೇರೆ ಕಡೆಗೆ ತಿರುಗಿದಳು; ಆದರೆ ಮೊದಲಿನಿಂದ ಕೊನೆಯ ವರೆಗೂ ತಾಯಿಯ ಚಲನವಲನವನ್ನು ಕದ್ದು ನೋಡುತ್ತಿದ್ದಳು. ತಾಯಿ ಬೀರುವಿನ ಹಿಂದೆ ಅವಿತು, 'ಜೂಟ್, ಜೂಟ್, ಪುಟಾಣಿ!' ಎಂದು ಕೂಗಿದಳು.

ಲಿಲೆಚ್‌ಕಾ ಕೊಟಡಿಯ ಸುತ್ತಲೂ ಓಡಿ,ಎಲ್ಲಾ ಮೂಲೆಗಳಲ್ಲೂ ಹುಡುಕಿದಳು. ತಾಯಿ ಅವಿತಿರುವ ಜಾಗ ತನಗೆ ಮೊದಲೇ ಗೊತ್ತಿದ್ದರೂ, ತನ್ನ ತಾಯಿ ಹಿಂದೆ ಮಾಡಿದಂತೆ ತಾನೂ ಈಗ ನಿಜವಾಗಿ ಹುಡುಕುತ್ತಿರುವಂತೆ ನಟಿಸುತ್ತಿದ್ದಳು. ಒಂದು ಮೂಲೆ-ಯಿಂದ ಇನ್ನೊಂದು ಮೂಲೆಗೆ ಓಡುತ್ತಾ ಲಿಲೆಚ್‌ಕಾ, 'ಅಮ್ಮ ಎಲ್ಲಿ? ಅವಳು ಇಲ್ಲಿಲ್ಲ.......ಇಲ್ಲೂ ಇಲ್ಲಾ!' ಎಂದು ತನ್ನಷ್ಟಕ್ಕೆ ತಾನೇ ಜೋರಾಗಿ ಹೇಳಿಕೊಳ್ಳುತ್ತಿದ್ದಳು.

ತಾಯಿಯು ಉಸಿರು ಕೂಡ ಬಿಡದೆ, ತಲೆಯನ್ನು ಗೋಡೆಗೆ ಒರಗಿಸಿ, ಕೂದಲು ಸ್ವಲ್ಪಮಟ್ಟಿಗೆ ಕೆದರಿದ್ದರೂ ಹಾಗೆಯೇ ನಿಂತಿದ್ದಳು. ಅವಳ ಚೆಂದುಟಿಗಳ ಮೇಲೆ ಪೂರ್ಣ ಸುಖದ ನಗೆ ನಲಿದಾಡುತ್ತಿತ್ತು.

ಬುದ್ಧಿಯಲ್ಲಿ ಸ್ವಲ್ಪ ಮೊದ್ದಾದರೂ ನೋಡಲು ಸುಂದರ-ಳಾಗಿಯೂ ಒಳ್ಳೆಯ ಸ್ವಭಾವದವಳೂ ಆದ ದಾದಿ ಫೆಡೋಸಿಯಾ ತನ್ನ ಸ್ವಾಭಾವಿಕ ಮುಖಭಾವದೊಡನೆ— ಒಡತಿಯ ಹುಚ್ಚಾಟ-ಗಳನ್ನು ಕಂಡು ಅಡ್ಡಿತರುವುದು ತನ್ನ ಕೆಲಸವಲ್ಲವೆಂಬುದೇ ಆ ಭಾವ—ತನ್ನ ಒಡತಿಯ ಕಡೆ ನೋಡುತ್ತಾ, ಮುಗುಳು ನಗೆ ನಗುತ್ತಿದ್ದಳು. ಅವಳು ತನ್ನಲ್ಲಿ ತಾನೇ ಅಂದುಕೊಂಡಳು: 'ತಾಯಿಯೂ ಒಂದು ಪುಟ್ಟ ಮಗುವಿನಂತೆಯೇ ಇದ್ದಾಳೆ. ಅದಲೂ ಅವಳು ಎಷ್ಟು ಉದ್ವೇಗಕ್ಕೆ ಒಳಗಾಗಿದ್ದಾಳೆ!'

ಲಿಲೆಚ್‌ಕಾ ತಾಯಿಯಿದ್ದ ಮೂಲೆಯನ್ನು ಸಮೀಪಿಸುತ್ತಿದ್ದಳು; ಅವಳ ಹೃದಯ ವೇಗವಾಗಿ ಢಡಢಡನೆ ಹೊಡೆದುಕೊಳ್ಳಲಾರಂಭಿ-ಸಿತು; ಗೋಡೆಗೆ ಇನ್ನೂ ಬಲವಾಗಿ ಅತುಕೊಂಡಳು; ಕೂದಲೆಲ್ಲಾ ಮೊದಲಿಗಿಂತ ಹೆಚ್ಚಾಗಿ ಕೆದರಿತು. ಲಿಲೆಚ್‌ಕಾ ಅಕಸ್ಮಾತ್ತಾಗಿ ತಾಯಿಯಿದ್ದ ಮೂಲೆಯ ಕಡೆ ದೃಷ್ಟಿ ಬೀರಿ, ಆನಂದದಿಂದ ಅರಚಿ-ದಳು: 'ತಿಕ್ಕಿ ಬಿತ್ತೇ!' ಎಂದು ಕೂಗಿಕೊಂಡಳು. ಈ ತಪ್ಪು-ತಪ್ಪಾದ ಮುದ್ದುಮಾತು ತಾಯಿಯನ್ನು ಪುನಃ ಸುಖಿಯನ್ನಾಗಿ ಮಾಡಿತು.

ಅವಳು ತನ್ನ ಕೈಗಳಿಂದ ತಾಯಿಯನ್ನು ರೂಮಿನ ಮಧ್ಯಕ್ಕೆ ಎಳೆದುಕೊಂಡು ಬಂದಳು;. ಅವರು ಆನಂದದಿಂದ ನಗುತ್ತಿದ್ದರು; ಈಗ ಲಿಲೆಚ್‌ಕಾ ಪುನಃ ತನ್ನ ತಲೆಯನ್ನು ತಾಯಿಯ ಮೊಣ-ಕಾಲುಗಳ ನಡುವೆ ಒತ್ತಿಟ್ಟುಕೊಂಡು, ಅಡ್ಡಾದಿಡ್ಡಿಯಾಗಿದ್ದರೂ ಮನಮೋಹಕವಾದ ಮಾತುಗಳನ್ನು ಕೊನೆಯಿಲ್ಲದಂತೆ ಒಂದೇ ಸಮನಾಗಿ ಗೊಣಗುಟ್ಟುತ್ತಿದ್ದಳು.

ಸರ್ಗೆ ಮಾಡೆಸ್ಟೊವಿಚ್, ಈ ಸಮಯಕ್ಕೆ ಸರಿಯಾಗಿ ಶಿಶುಗೃಹದ

ಕಡೆಗೆ ಬರುತ್ತಿದ್ದವನು, ಅರೆತೆರೆದಿದ್ದ ಬಾಗಿಲುಗಳ ಮೂಲಕ ನಗೆ, ಆನಂದದ ಅರಚಾಟ, ಕುಣಿತದ ಶಬ್ದ ಎಲ್ಲವನ್ನೂ ಕೇಳಿದ್ದನು. ತನ್ನ ಎಂದಿನ ಉದಾಸೀನದ ನಗೆಯೊಡನೆ ಅವನು ಒಳಹೊಕ್ಕನು; ಅವನು ಸ್ವಲ್ಪವೂ ಐಬಿಲ್ಲದಂತೆ ಬಟ್ಟೆ ಧರಿಸಿದ್ದನು. ನೆಟ್ಟಗೆ ಉತ್ಸಾಹಪರನಾಗಿ ಕಾಣುತ್ತಿದ್ದು, ತನ್ನ ಸುತ್ತಲೂ ಸ್ಥೈರ್ಯ, ಉತ್ಸಾಹ ಮತ್ತು ಉದಾಸೀನವನ್ನು ಹರಡುತ್ತಿದ್ದನು. ಹಗುರವಾಗಿದ್ದ ಆಟದ ಮಧ್ಯೆ ಬಂದು ಅವನು ಎಲ್ಲರನ್ನೂ ತನ್ನ ಔದಾಸೀನ್ಯದ ಸೋಂಕಿನಿಂದ ಗಾಬರಿಪಡಿಸಿದನು. ಫೆಡೋಸಿಯಾ ಕೂಡ, ಒಮ್ಮೆ ತನ್ನ ಒಡತಿಗಾಗಿ, ಇನ್ನೊಮ್ಮೆ ತನಗಾಗಿಯೇ ತಲೆ ತಗ್ಗಿಸಿದಳು. ಸೆರಾಫಿಮಾ ತಕ್ಷಣ ಶಾಂತಳಾಗಿ ಉದಾಸೀನ ಭಾವವನ್ನು ತೋರ್ಪಡಿಸಿಕೊಂಡಳು— ಈ ಭಾವ ಒಡನೆಯೇ ಪುಟ್ಟ ಹುಡುಗಿಗೂ ಅಂಟಿ, ಅವಳು ನಗುವುದನ್ನು ನಿಲ್ಲಿಸಿ, ಅದಕ್ಕೆ ಬದಲು ನಿಶ್ಶಬ್ದವಾಗಿ ನೆಟ್ಟ ದೃಷ್ಟಿಯಿಂದ ತಂದೆಯ ಕಡೆಗೇ ನೋಡಲಾರಂಭಿಸಿದಳು.

ಸರ್ಗೇ ಮಾಡೆಸ್ಟೊವಿಚ್ ಕೊಟಡಿಯ ಸುತ್ತಲೂ ಚುರುಕಾದ ದೃಷ್ಟಿ ಬೀರಿದನು ಈ ಸ್ಥಳಕ್ಕೆ ಬರಲು ಅವನಿಗೆ ಇಷ್ಟ; ಏಕೆಂದರೆ ಇಲ್ಲಿ ಎಲ್ಲವೂ ಅಚ್ಚುಕಟ್ಟಾಗಿ ಜೋಡಿಸಿರುತ್ತಿತ್ತು. ತನ್ನ ಮಗಳ ಬಾಲ್ಯದಿಂದಲೇ ಅವಳ ಸುತ್ತಲೂ ಅತ್ಯಂತ ಸುಂದರ ವಸ್ತುಗಳನ್ನೇ ಇಡಬೇಕೆಂದು ಇಷ್ಟಪಟ್ಟು, ಸೆರಾಫಿಮಾ, ಕೊಟಡಿಯನ್ನೆಲ್ಲಾ ಅಂದವಾಗಿ ಸಜ್ಜುಗೊಳಿಸಿರುತ್ತಿದ್ದಳು. ಸೆರಾಫಿಮಾ ತನ್ನ ಉಡುಪಿಗೂ ಬಹಳ ಗಮನ ಕೊಡುತ್ತಿದ್ದಳು ; ಇದೂ ಲೆಲೆಚ್ಕಾನಿಗೋಸ್ಕರವೇ ಮತ್ತು ಅದೇ ಉದ್ದೇಶದಿಂದ. ಆದರೆ ಒಂದು ವಿಷಯ ಮಾತ್ರ ಮಾಡೆಸ್ಟೊವಿಚ್ಚನಿಗೆ ಒಪ್ಪಿಗೆಯಾಗಿರಲಿಲ್ಲ; ಅದೇನೆಂದರೆ, ಯಾವಾಗಲೂ ಸೆರಾಫಿಮಾ ಎಡೆಬಿಡದೆ ಶಿಶುಗೃಹದಲ್ಲಿಯೇ ಇದ್ದುಬಿಡುತ್ತಿದ್ದುದು.

'ನಾನು ಅಂದುಕೊಂಡ ಹಾಗೆಯೇ ಆಯಿತು....ನೀನು ಇಲ್ಲಿಯೇ ಇರುತ್ತೀಯೆಂದು ನನಗೆ ಗೊತ್ತೇ ಇತ್ತು!' ಎಂದು ಗೇಲಿಮಾಡುವ ನಮ್ರಭಾವದಿಂದ ಅವನು ಹೇಳಿದನು.

ಅವರಿಬ್ಬರೂ ಶಿಶುಗೃಹವನ್ನು ಒಟ್ಟಿಗೆ ಬಿಟ್ಟರು. ಬಾಗಿಲಿನ ಮೂಲಕ ಪತ್ನಿಯನ್ನೇ ಹಿಂಬಾಲಿಸುತ್ತಾ ಮಾಡೆಸ್ಟೊವಿಚ್ ತನ್ನ ಮಾತಿಗೆ ಹೆಚ್ಚು ಪ್ರಾಮುಖ್ಯತೆ ಕೊಡದೆ, ಏನೋ ಸುಮ್ಮನೆ ಹೇಳುತ್ತಿರುವವನಂತೆ 'ಒಂದೊಂದು ಸಲ ನಿನ್ನ ಜೊತೆಯಲ್ಲಿರದೆ ದೂರ ಇದ್ದರೆ ಮಗುವಿಗೆ ಅದರಿಂದ ಒಳ್ಳೆಯದಾಗಬಹುದಲ್ಲವೇ?' ಎಂದು ಕೇಳಿ, ಹೆಂಡತಿಯ ಪ್ರಶ್ನಾರ್ಥಕ ದೃಷ್ಟಿಗೆ ಉತ್ತರವಾಗಿ ಪುನಃ 'ಇನ್ನೇನೂ ಇಲ್ಲ; ನೋಡು, ಅದರಿಂದ ಮಗುವಿಗೆ ತನ್ನ ವ್ಯಕ್ತಿತ್ವದ ಅರಿವೂ ಸ್ವಲ್ಪ ಆಗಬಹುದು!' ಎಂದು ಜವಾಬು ಕೊಟ್ಟನು.

'ಇನ್ನೂ ಇಷ್ಟು ಚಿಕ್ಕಮಗು!'.ಎಂದು ಸೆರಾಫಿಮಾ ರಾಗ ಎಳೆದಳು.

'ಏನೋ, ಅಂತೂ ಇದು ನನ್ನ ಅಲ್ಪ ಅಭಿಪ್ರಾಯ. ನಾನೇನೂ ಬಲವಂತ ಪಡಿಸುವುದಿಲ್ಲ ಎಷ್ಟಾಗಲಿ, ಅದು ನಿನ್ನ ಸಾಮ್ರಾಜ್ಯ!'

'ಆಗಲಿ, ನಾನು ಈ ವಿಷಯ ಆಲೋಚಿಸುತ್ತೇನೆ.' ಎಂ ಅವನಂತೆಯೇ ತಾನೂ ಉದಾಸೀನವಾದರೂ ಹಿತವಾದ ನ ನಗುತ್ತಾ ಜವಾಬುಕೊಟ್ಟಳು ಸೆರಾಫಿಮಾ. ಆಮೇಲೆ ಅವರು ಬೇರೆ ವಿಷಯ ಮಾತಾಡಲಾರಂಭಿಸಿದರು.

೩

ಆ ಸಂಜೆ ಅಡಿಗೆಮನೆಯಲ್ಲಿ ಕುಳಿತು ದಾದಿ ಫೆಡೋಸಿಯಾ, ಮೌನವಾಗಿದ್ದ ಮನೆಗೆಲಸದ ಹುಡುಗಿ ದರಿಯಾ ಮತ್ತು ಹರಟೆಮಲ್ಲಿ ಅಡಿಗೆಯ ಮುದುಕಿ ಅಗಾಥಿಯಾ ಇವರಿಬ್ಬರಿಗೂ, ಮನೆಯ ಮಗು ಹೇಗೆ ತನ್ನ ತಾಯಿಯೊಡನೆ ಕಣ್ಣುಮುಚ್ಚಾಲೆ ಆಡುತ್ತಿತ್ತೆಂದು ಹೇಳುತ್ತಿದ್ದಳು 'ತನ್ನ ಪುಟ್ಟ ಮುಖವನ್ನು ಮುಚ್ಚಿಕೊಂಡು ಆ ಮಗು "ಜೂಟ್, ಜೂಟ್!" ಎಂದು ಕೂಗುತ್ತದೆ!'

ಫೆಡೋಸಿಯಾ ಮುಗುಳುನಗೆ ನಗುತ್ತಾ, 'ಮನೆಯ ಒಡತಿ ಕೂಡ ತಾನೂ ಚಿಕ್ಕಮಗುವಿನಂತೆಯೇ ಇದ್ದಾಳೆ' ಎಂದು ಮುಂದುವರಿಸಿದಳು.

ಅಗಾಥಿಯಾ ಇದನ್ನು ಕೇಳಿ ಅನಿಷ್ಟಸೂಚಕದಂತೆ ತಲೆ ಆಡಿಸಿದಳು. ಅವಳ ಮುಖ ಗಂಭೀರವಾಗಿ ದುಮ್ಮಾನದಿಂದ ತುಂಬಿತ್ತು

'ಒಡತಿ ಮಾಡಿದರೇನೋ ಪರವಾಗಿಲ್ಲ, ಅದು ಒಂದು ತರಹ ಆದರೆ ಮಗು ಹಾಗೆ ಮಾಡುವುದು....ಅದು ಕೆಟ್ಟದ್ದು.'

ಫೆಡೋಸಿಯಾ ಕುತೂಹಲದಿಂದ, 'ಏಕೆ?' ಎಂದು ಕೇಳಿದಳ. ಈ ಕುತೂಹಲದ ಭಾವ ಅವಳ ಮುಖವನ್ನು ಒಡ್ಡೊಡ್ಡಾಗಿ ಬಣ ಬಳಿದ ಮರದ ಬೊಂಬೆಯ ಹಾಗೆ ಕಾಣುವಂತೆ ಮಾಡಿತ್ತು.

'ಹೌದು, ಅದು ಕೆಟ್ಟದ್ದು.' ಅಗಾಥಿಯಾ ದೃಢವಾಗಿ ಪು ಹೇಳಿದಳು, 'ಭಯಂಕರವಾದ ಕೆಡುಕನ್ನು ತರುವಂಥಾದ್ದು!'

ಹಾಸ್ಯಾಸ್ಪದವಾದ ಅವಳ ಕುತೂಹಲದ ಮುಖಭಾವ ಇನ ಸ್ಪಷ್ಟವಾಗಿ ಕಾಣುತ್ತಿರಲು ಫೆಡೋಸಿಯಾ ಕೇಳಿದಳ 'ಹಾಗೆಂದರೆ?'

'ಅವಳು ಅವಿತುಕೊಂಡು, ಅವಿತುಕೊಂಡು, ಅವಿತುಕೊಂ ಬಿಡುತ್ತಾಳೆ!' ಎಂದು ಅಗಾಥಿಯಾ ಬಾಗಿಲಿನ ಕಡೆ ಜಾಗರೂಕ ಯಿಂದ ನೋಡುತ್ತಾ ಗೌಪ್ಯವಾದ ಪಿಸುಮಾತಿನಲ್ಲಿ ಹೇಳಿದಳು.

ಫೆಡೋಸಿಯಾ ಹೆದರಿಕೆಯಿಂದ, 'ಏನು ಹೇಳಿದೆ?' ಎಂ ಉದ್ಗಾರ ತೆಗೆದಳು.

'ನಾನು ಹೇಳುವುದು ನಿಜ. ನನ್ನ ಮಾತನ್ನು ಜ್ಞಾಪಕದಲ್ಲಿ ಕೊಂಡಿರು.' ಅಗಾಥಿಯಾ ಮೊದಲಿನಷ್ಟೇ ನಿಶ್ಚಯ ಮ ಗೌಪ್ಯವಾಗಿ ಹೇಳಿದಳು, 'ಅದು ಅತ್ಯಂತ ಖಂಡಿತವಾದ ಚಿ ಮುದುಕಿ ಈ ಚಿಹ್ನೆಯನ್ನು ಆಕಸ್ಮಾತ್ತಾಗಿ 'ತಾನೇ ಕಂ ಹಿಡಿದಿದ್ದಳು; ಆದರಿಂದ ಅವಳಿಗೆ ಸಹಜವಾಗಿಯೇ ಹೆಮ್ಮೆಯಿ ಎದೆ ಉಬ್ಬಿತು.

೪

ಲೆಲೆಚ್ಕಾ ನಿದ್ದೆಹೋಗಿದ್ದಳು; ಸೆರಾಫಿಮಾ ತನ್ನ ರೂಮಿನ ಕುಳಿತುಕೊಂಡು ಲೆಲೆಚ್ಕಾಳ ವಿಷಯವನ್ನು ಪ್ರೇಮಪೂರ್ವಕ

ದದಿಂದ **ಯೋಚಿಸುತ್ತಿದ್ದಳು.** **ಅವಳ ಮನಸ್ಸಿನಲ್ಲಿ ಮೊದಲು** ಚ್‌ಕಾ **ಒಂದು ಪುಟ್ಟ** ಮಗುವಾಗಿತ್ತು; **ಆ ಮೇಲೆ** ಮಧುರ-ಒಂದು **ದೊಡ್ಡ** ಮಗು; ಅನಂತರ ಪುನಃ ಆನಂದದಾಯಕ-ಸಣ್ಣ ಮಗು. ಅಂತೂ ಕೊನೆಯವರೆಗೂ ಅವಳು ಅಮ್ಮನ ಲಿಲೆಚ್‌ಕಳೇ ಆಗಿದ್ದಳು.

ಡೋಷಿಯಾ ತನ್ನ ಮುಂದೆ ಬಂದು ನಿಂತು ಸ್ವಲ್ಪ ತ್ತಾಗಿದ್ದುದು ಕೂಡ ಸೆರಾಫಿಮಾಳ ಗಮನಕ್ಕೆ ಬಂದಿರಲಿಲ್ಲ. ೀಷಿಯಳ ಮುಖದಲ್ಲಿ ಗಾಬರಿ ಮತ್ತು ಕಳವಳಗಳು ಎದ್ದು ತ್ತಿದ್ದುವು.

ಅಮ್ಮಾ, ಅಮ್ಮಾ!' ನಡುಗುವ ಧ್ವನಿಯಲ್ಲಿ ಅವಳು ಭಿಸಿದಳು.

ರಾಫಿಮಾ **ಬೆಚ್ಚಿಬಿದ್ದಳು.** ಫೆಡೋಷಿಯಳ ಮುಖಭಾವ ನ್ನು **ಗಾಬರಿಗೊಳಿಸಿತ್ತು.** 'ಏನದು, ಫೆಡೋಷಿಯಾ?' ಾ ಗಾಬರಿಯಿಂದ ಅವಳು ಕೇಳಿದಳು, 'ಲಿಲೆಚ್‌ಕಾಗೆ ಕೆಡಕಾಗಿಲ್ಲ ತಾನೇ?'

ಇಲ್ಲಮ್ಮಾ' ಫೆಡೋಷಿಯಾ ತನ್ನ ಒಡತಿಯ ಚಿಂತೆಯನ್ನು ಅವಳನ್ನು ಪುನಃ ಕುಳಿತುಕೊಳ್ಳುವಂತೆ ಮಾಡುವುದಕ್ಕೋ-ಕೈಗಳನ್ನು ಆಡಿಸುತ್ತಾ ಹೇಳಿದಳು, 'ಲಿಲೆಚ್‌ಕಾಳಿಗೆ ನಿದ್ದೆ ದೆ; ದೇವರು ಅವಳನ್ನು ಕಾಪಾಡಬೇಕು! ನಾನು ಏನೋ ಮಾತು ಹೇಳಬೇಕು— ನೋಡಿ— ಲಿಲೆಚ್‌ಕಾ ಯಾವಾ- ಅವಿತುಕೊಳ್ಳುತ್ತಾ ಇರುತ್ತಾಳೆ— ಅದು ಒಳ್ಳೆಯದಲ್ಲ.' ನಿಂದ ಚೆಂಡಿನಂತಾಗಿದ್ದ ತನ್ನ ಕಣ್ಣುಗಳ ನೆಟ್ಟದೃಷ್ಟಿಯನ್ನು ೀಷಿಯಾ ಒಡತಿಯ ಮೇಲಿನಿಂದ ಬೇರೆ ಕಡೆಗೆ ಹರಿಸಲಿಲ್ಲ.

ಏಕೆ ಒಳ್ಳೆಯದಲ್ಲ?' ಸೆರಾಫಿಮಾ ಚಿಂತಾಕುಲಳಾಗಿ ತನ್ನ ಲ್ಲದೆಯೇ ಅಸ್ಪಷ್ಟವಾದ ದಿಗಿಲಿಗೆ ಬಲಿಯಾಗಿ ಕೇಳಿದಳು.

ಅದು ಎಷ್ಟು ಕೆಟ್ಟದ್ದೆಂದು ಹೇಳುವುದೇ ಸಾಧ್ಯವಿಲ್ಲ' ೀಷಿಯಾ **ನಿರ್ಧಾರದ** ನಿಶ್ಚಲತೆಯ ಮುಖಭಾವದೊಡನೆ ಬಾಬು ಕೊಟ್ಟಳು.

ದಯವಿಟ್ಟು ಅರ್ಥವಾಗುವಂತೆ ಹೇಳು,' ಸೆರಾಫಿಮಾ ಶುಷ್ಕ-ಯಲ್ಲಿ ಕೇಳಿದಳು; 'ನೀನು ಹೇಳುತ್ತಿರುವುದು ಸ್ವಲ್ಪವೂ ನನಗೆ ರ್ಥವಾಗುತ್ತಿಲ್ಲ.'

ನೋಡೀಮ್ಮಾ! ಅದು ಒಂದು ತರದ ಶಕುನ' ಅವಮಾ-ಮುಖಭಂಗಿಯಲ್ಲಿ ಫಿಡೋಷಿಯಾ ಕೂಡಲೇ ಹೇಳಿದಳು.

ಬರೀ ಕಗ್ಗ!' ಸೆರಾಫಿಮಾ ತನ್ನ ಅಭಿಪ್ರಾಯ ಕೊಟ್ಟಳು. ಅದು ಎಂತಹ ಶಕುನ, ಅದರ ಸೂಚನೆಯೇನು ಎಂಬುದನ್ನು ಳಲು ಅವಳಿಗೆ ಇಷ್ಟವಿರಲಿಲ್ಲ. ಆದರೆ ಹೇಗೋ ಹೆದರಿಕೆ ಮತ್ತು ಗುಡದ ಭಾವ ಅವಳ ಮನಸ್ಸನ್ನು ಹೊಕ್ಕಿತು. ಅರ್ಥಹೀನ ದ ಆ ಕತೆ ತನ್ನ ಪ್ರೇಮಮಯ ಕನಸನ್ನೆಲ್ಲಾ ಒಡೆದು ಹಾಕಿ ನಸ್ಸಿಗೆ ಅಷ್ಟು ಗಾಢವಾದ ಕಳವಳ ತಂದದ್ದನ್ನು ನೋಡಿ ಅವ-ಳ ತೇಜೋಭಂಗವಾದಂತಾಯಿತು.

'**ದೊಡ್ಡ** ಮನುಷ್ಯರಿಗೆ ಶಕುನಗಳಲ್ಲಿ ನಂಬಿಕೆಯಿಲ್ಲವೆಂಬು-ದೇನೋ ನನಗೆ ಗೊತ್ತಮ್ಮಾ' ಫೆಡೋಷಿಯಾ ಆರ್ತಧ್ವನಿಯಲ್ಲಿ ಮುಂದುವರಿಸಿದಳು, 'ಚಿಕ್ಕ ಒಡತಿ ಅವಿತುಕೊಂಡು, ಅವಿತು ಕೊಂಡು....'

ಇದ್ದಕ್ಕಿದ್ದಂತೆ ಕಣ್ಣೀರಿನ ಪ್ರವಾಹ ಹರಿಸುತ್ತಾ ಜೋರಾಗಿ ಬಿಕ್ಕಿ ಬಿಕ್ಕಿ, 'ಅವಳು ಅವಿತುಕೊಂಡು, ಅವಿತುಕೊಂಡು, ಅವಿತು ಕೊಂಡೇ ಬಿಡುತ್ತಾಳೆ— ದೇವರಂತಹ ಪುಟ್ಟ ಮಗು, ತಣ್ಣಗಿನ ಗೋರಿಯಲ್ಲಿ!' ಎಂದು ಕಣ್ಣೊರಸಿಕೊಂಡು ಮೂಗನ್ನು ಸೊರ-ಕ್ಕೆನಿಸಿ ಅವಳು ಹೇಳಿದಳು.

'ಇದನ್ನೆಲ್ಲಾ ನಿನಗೆ ಯಾರು ಹೇಳಿದರು?' ಸೆರಾಫಿಮಾ ಕಠೋರವಾದ ಮೆಲುದನಿಯಲ್ಲಿ ಕೇಳಿದಳು.

'ಅಗಾಥಿಯಾ ಹೇಳಿದಳು. ಅಮ್ಮಾ. ಅವಳಿಗೇ ಇದೆಲ್ಲಾ ಗೊತ್ತಿರುವುದು,' ಎಂದು ಫೆಡೋಷಿಯಾ ಜವಾಬು ಕೊಟ್ಟಳು

ಅನಿರೀಕ್ಷಿತವಾದ ಗಾಬರಿಯಿಂದ ಪಾರಾಗುವ ಇಷ್ಟದಿಂದಲೋ ಎಂಬಂತೆ ಸೆರಾಫಿಮಾ ಕೋಪದಿಂದ ಉದ್ಗಾರ ತೆಗೆದಳು: 'ಗೊತ್ತಿರುವುದು! ಏನಿದು ಮೌಢ್ಯ! ಇನ್ನು ಮೇಲೆ ದಯವಿಟ್ಟು ಇಂತಹ ಅಭಿಪ್ರಾಯಗಳನ್ನು ನನಗೆ ಹೇಳಲು ಬರಬೇಡ ಇನ್ನು ನೀನು ಹೋಗು!'

ಚಿಂತಾಕ್ರಾಂತಳಾಗಿ ಮುಖಭಂಗಿತಳಂತೆ ಫೆಡೋಷಿಯಾ ಹೊರಟು ಹೋದಳು.

ಲಿಲೆಚ್‌ಕಾ ಸಾಯಬಹುದೆಂಬ ಯೋಚನೆ ಬಂದೊಡನೆಯೇ ಅವಳನ್ನು ಆಕ್ರಮಿಸಿದ ತೀಕ್ಷ್ಣಭೀತಿಯನ್ನು ಜಯಿಸುವ ಪ್ರಯತ್ನದಲ್ಲಿ ಸೆರಾಫಿಮಾ ತನ್ನಲ್ಲಿ ತಾನೇ ಯೋಚಿಸಿದಳು: 'ಶುದ್ಧ ಮೌಢ್ಯ! ಲಿಲೆಚ್‌ಕಾ ಇದರಿಂದ ಹೋಗಿ ಬಿಡುವಳೋ ಎನ್ನುವ ಹಾಗೆ!' ಆಲೋಚನೆ ಮಾಡಿ ಕೊನೆಗೆ ಹೆಂಗುಸರಿಗೆ ಈ ಶಕುನದಲ್ಲಿರುವ ನಂಬಿಕೆಗೆ ಮೌಢ್ಯವೇ ಕಾರಣವೆಂದು ತೀರ್ಮಾನಿಸಿದಳು. ಏಕೆಂದರೆ ಒಂದು ಮಗುವಿನ ಸ್ವೈರಾವಿನ ಆಟದ ರೀತಿಗೂ ಅವಳು ಜೀವಂತಳಾಗಿ ಉಳಿಯುವುದಕ್ಕೂ ಯಾವ ಸಂಬಂಧವೂ ಇದ್ದಂತೆ ಅವಳಿಗೆ ತೋರಲಿಲ್ಲ. ಆ ಸಂಜೆ ಬೇರೆ ವಿಚಾರಗಳಲ್ಲಿ ಮಗ್ನಳಾಗಲು ಹೆಚ್ಚು ಪ್ರಯತ್ನ ಮಾಡಿದಳು; ಆದರೆ ಲಿಲೆಚ್-ಕಳಿಗೆ ಅವಿತುಕೊಳ್ಳುವುದರಲ್ಲಿ ತುಂಬಾ ಪ್ರೀತಿಯೆಂಬ ವಿಷಯ ಅನೈಚ್ಛಿಕವಾಗಿ ಅವಳ ತಲೆಗೆ ಹಿಂದಿರುಗುತ್ತಿತ್ತು.

ಲಿಲೆಚ್‌ಕಾ ಇನ್ನೂ ತುಂಬಾ ಪುಟ್ಟವಳಾಗಿದ್ದು, ತನ್ನ ತಾಯಿ-ಯನ್ನೂ ದಾದಿಯನ್ನೂ ಗುರುತು ಹಿಡಿಯಲು ಆಗ ತಾನೇ ಕಲಿತ್ತಿದ್ದಾಗ, ಒಂದೊಂದು ಸಲ ದಾದಿಯ ತೋಳುಗಳಲ್ಲಿ ಕುಳಿತು, ಥಟ್ಟನೆ ಚಾತುರ್ಯದ ನಗೆ ನಗುತ್ತಾ, ತನ್ನ ಮುಖವನ್ನು ದಾದಿಯ ಹೆಗಲಿನ ಮೇಲೆ ಬಚ್ಚಿಟ್ಟುಕೊಳ್ಳುತ್ತಿದ್ದಳು. ಆ ಮೇಲೆ ಅವಳು ಕಳ್ಳತನದಿಂದ ಇಣಿಕಿ ನೋಡುತ್ತಿದ್ದಳು.

ಆಮೇಲೆ, ತಾಯಿ ಶಿಶುಗೃಹದಿಂದ ದೂರವಾಗಿರುತ್ತಿದ್ದ ಅಪ-ರೂಪ ಸಂದರ್ಭಗಳಲ್ಲಿ, ಫೆಡೋಷಿಯಾ ಮಗುವಿಗೆ ಅವಿತುಕೊಳ್ಳು-

ವುದನ್ನು ಕಲಿಸಿದ್ದಳು; ಲೆಲೆಚ್‌ಕಳ ತಾಯಿ ಒಳಕ್ಕೆ ಬಂದು, ಮಗು ಅವಿತುಕೊಂಡಾಗ ಎಷ್ಟು ಮನಮೋಹಕವಾಗಿರುತ್ತಿತ್ತೆಂಬುದನ್ನು ಕಂಡುಕೊಂಡು, ತನ್ನ ಪುಟ್ಟ ಮಗುವಿನೊಡನೆ ತಾನೇ ಸ್ವತಃ ಕಣ್ಣುಮುಚ್ಚಾಲೆ ಆಡಲಾರಂಭಿಸಿದ್ದಳು.

೪

ಲೆಲೆಚ್‌ಕಳ ವಿಷಯದಲ್ಲಿ ಹಿತವಾದುದನ್ನೇ ಯೋಚಿಸುತ್ತಿದ್ದ ಸೆರಾಫಿಮಾಳಿಗೆ ಮಾರನೆಯ ದಿನದ ವೇಳೆಗೆ ಫೆಡೋಸಿಯಾಳ ಈ ಮಾತೆಲ್ಲಾ ಮರೆತು ಹೋಗಿತ್ತು.

ಆದರೆ ಊಟ ಸಿದ್ಧಮಾಡಲು ಅಪ್ಪಣೆ ಮಾಡಿ ಶಿಶುಗೃಹವನ್ನು ಹೊಕ್ಕೊಡನೆಯೇ, ಮೇಜಿನ ಬುಡದಿಂದ ಅಕಸ್ಮಾತ್ತಾಗಿ ಮಗು, 'ಜೂಟ್, ಜೂಟ್' ಎಂದು ಕೂಗಿದಾಗ ಪುನಃ ಭೀತಿ ಅವಳನ್ನಾವರಿಸಿತು. ನಿರಾಧಾರವಾದ ಈ ಮೂಢನಂಬಿಕೆಗಾಗಿ ಅವಳು ತನ್ನನ್ನು ತಾನೇ ಹಳಿದುಕೊಂಡರೂ, ಲೆಲೆಚ್‌ಕಳಿಗೆ ಪ್ರಿಯವಾದ ಈ ಆಟದ ಮನೋಭಾವಕ್ಕೆ ಮನಃಪೂರ್ವಕವಾಗಿ ಹೊಂದಿಕೊಳ್ಳಲು ಅವಳಿಗೆ ಸಾಧ್ಯವಾಗದೆ, ಅವಳು ಲೆಲೆಚ್‌ಕಳ ಮನಸ್ಸನ್ನು ಬೇರೆ ಕಡೆಗೆ ಎಳೆಯಲು ಪ್ರಯತ್ನಿಸಿದಳು.

ಲೆಲೆಚ್‌ಕಾ ಮುದ್ದಾದ ವಿಧೇಯಳಾದ ಮಗು. ಅವಳು ಉತ್ಸಾಹದಿಂದ ತನ್ನ ತಾಯಿಯ ಇಷ್ಟದಂತೆಯೆ ನಡೆದುಕೊಂಡಳು. ಆದರೆ ತನ್ನ ತಾಯಿಗೆ ಮರೆಯಾಗಿ,ಯಾವುದಾದರೂ ಮೂಲೆಯಲ್ಲಿ ಅವಿತುಕೊಂಡು. 'ಜೂಟ್, ಜೂಟ್', ಎನ್ನುವ ಅಭ್ಯಾಸ ಅವಳಲ್ಲಿ ನೆಲಸಿಬಿಟ್ಟಿದ್ದುದರಿಂದ. ಈ ದಿನವೂ ಅವಳು ಎಷ್ಟೋ ಸಲ ಪುನಃ ಆ ಆಟದ ಕಡೆಗೇ ತಿರುಗಿದಳು.

ಸೆರಾಫಿಮಾ ಮಗುವನ್ನು ಸಂತೋಷ ಪಡಿಸಲು ವಿಶ್ವಪ್ರಯತ್ನ ಮಾಡಿದಳು. ಆದರೆ ಇದು ಅಷ್ಟು ಸುಲಭವಾಗಿರಲಿಲ್ಲ. ಏಕೆಂದರೆ ಅವಿಶ್ರಾಂತವಾಗಿ ಆ ದಿಗಿಲಿನ ಯೋಚನೆ ಅವಳನ್ನು ಎಡೆಬಿಡದೆ ಕಾಡುತ್ತಿತ್ತು.

'ಲೆಲೆಚ್‌ಕಾ ಏಕೆ ಜೂಟ್ ಜೂಟ್ ಎಂಬುದನ್ನೇ ಜ್ಞಾಪಿಸಿಕೊಳ್ಳುತ್ತಾಳೆ? ಅವಳಿಗೆ ಬೇಸರವನ್ನೆ ತರುವುದಿಲ್ಲವೇ ಆ ವಿಷಯ– ಯಾವಾಗಲೂ ಕಣ್ಣುಮುಚ್ಚಿಕೊಂಡು ಮುಖ ಮರೆಮಾಡಿಕೊಳ್ಳುವುದು ?— ಬಹುಶಃ' ಸೆರಾಫಿಮಾ ಯೋಚಿಸಿದಳು, 'ಎಷ್ಟೋ ಪದಾರ್ಥಗಳಿಂದ ಆಕರ್ಷಿತರಾಗುವ ಇತರ ಮಕ್ಕಳಷ್ಟು ಬಲವಾಗಿ ಇವಳಿಗೂ ಪ್ರಪಂಚಕ್ಕೂ ಸಂಬಂಧವಿಲ್ಲವೋ ಏನೋ! ಇದು ಅವಳ ಜೀವದ ನಿಶ್ಶಕ್ತಿಯ ಗುರುತಲ್ಲವೇ? ಜೀವಿಸಲು ಇಷ್ಟವಿಲ್ಲದೆ ಇರುವ ಭಾವದ ಸೂಕ್ಷ್ಮ ಅಣು ಅಲ್ಲವೇ ಇದು?'

ಭವಿಷ್ಯದ ಶಂಕೆ ಸೆರಾಫಿಮಾಳನ್ನು ಯಾತನೆಗೆ ಸಿಕ್ಕಿಸಿತ್ತು. ಫೆಡೋಸಿಯಾಳ ಎದುರಿಗೆ ತಾನು ಲೆಲೆಚ್‌ಕಳೊಡನೆ ಕಣ್ಣುಮುಚ್ಚಾಲೆ ಆಡುವುದನ್ನು ನಿಲ್ಲಿಸಿದ್ದಕ್ಕೆ ಅವಳಿಗೇ ಅಪಮಾನವೆನಿಸಿತ್ತು. ಆದರೆ ಈ ಆಟ ಅವಳಿಗೆ ದಿಗಿಲನ್ನುಂಟುಮಾಡಿತ್ತು; ತುಂಬಾ ದಿಗಿಲು! ಏಕೆಂದರೆ ಅದನ್ನು ಆಡಲು ಅವಳಿಗೆ ತುಂಬಾ ಆಶೆ ಮತ್ತು ಲೆಲೆಚ್‌ಕಳಿಂದ ಬಚ್ಚಿಟ್ಟುಕೊಳ್ಳುವಂತೆ ಮತ್ತು ಅವಿತುಕೊಂಡ ಮಗುವನ್ನು ಹುಡುಕುವಂತೆ ಯಾವುದೋ ಒಂ ಶಕ್ತಿ ಅವಳನ್ನು ಪ್ರೇರೇಪಿಸುತ್ತಿತ್ತು. ಒಂದೆರಡು ಸಲ ಆ ಆ ನನ್ನು ಮಗುವಿನೊಡನೆ ತಾನೇ ಆರಂಭಿಸಿದ್ದಳು. ಭಾರವಾ ಹೃದಯದೊಡನೆ ಆಡಿದಳೆಂಬುದೇನೋ ನಿಜ. ಪೂರ್ತಿ ತಿಳಿದ ತಿಳಿದೂ ಪಾಪದ ಕೃತ್ಯವನ್ನೆಸಗುವವರಂತೆ ಅವಳು ಕೊರಗಿದ

ಆ ದಿನ ಸೆರಾಫಿಮಳಿಗೆ ಒಂದು ದುಃಖದ ದಿನ.

೫

ಲೆಲೆಚ್‌ಕಳಿಗೆ ನಿದ್ದೆ ಬರುವುದರಲ್ಲಿತ್ತು. ಸುತ್ತಲೂ ಸೊಳ್ಳೆಪರ ಮುಚ್ಚಿದ್ದ ಮಂಚದ ಮೇಲೆ ತನ್ನ ಹಾಸಿಗೆಯನ್ನು ಸೇರಿದಕೂಡಲೆ ಅವಳ ಕಣ್ಣುಗಳು ಆಯಾಸದಿಂದ ಮುಚ್ಚಿಕೊಳ್ಳತೊಡಗಿದ್ದವ ತಾಯಿ ಅವಳಿಗೆ ನೀಲಿಯ ಕಂಬಳಿ ಹೊದಿಸಿದ್ದಳು. ಲೆಲೆಚ್‌ಕಾ ತ ಮುದ್ದಾದ ಪುಟ್ಟ ಕೈಗಳನ್ನು ಕಂಬಳಿಯ ಹೊರಕ್ಕೆ ತೆಗೆದು ತಾಯಿ ಯನ್ನು ಅಪ್ಪಿಕೊಳ್ಳಲು ಅವುಗಳನ್ನು ನೀಡಿದಳು. ತಾಯಿ ಕೆಳ ಬಗ್ಗಿದಳು. ತನ್ನ ನಿದ್ರೆಯ ಮುಖದ ಮೇಲೆ ಪ್ರೀತಿಯ ಸ್ನ ಭಾವದೊಡನೆ ಮಗು ತಾಯಿಗೆ ಮುತ್ತು ಕೊಟ್ಟು, ತನ್ನ ತಲೆಯ ದಿಂಬಿನ ಮೇಲೆ ಇಟ್ಟುಕೊಂಡಳು. " ಕೈಗಳು ತಮ್ಮಷ್ಟಕ್ಕೆ ತಾ ಕಂಬಳಿಯ ಒಳಗೆ ಮರೆಯಾಗುತ್ತಿದ್ದ ಹಾಗೆಯೇ ಲೆಲೆಚ್ ಪಿಸುಗುಟ್ಟಿದಳು : 'ಕೈಗಳಿಗೆ–ಜೂಟ್, ಜೂಟ್!'

ತಾಯಿಗೆ ಎದೆ ಬಡಿತ ನಿಂತಂತಾಯಿತು. ಲೆಲೆಚ್‌ಕಾ ಅ ಸೂಕ್ಷ್ಮವಾಗಿ, ನಿಶ್ಶಕ್ತಳಾಗಿ ಮೌನವಾಗಿ ಮಲಗಿದ್ದಳು. ಅವ ಮೃದುವಾಗಿ ಮುಗುಳುನಗೆ ನಕ್ಕು, ಕಣ್ಣುಗಳನ್ನು ಮುಚ್ಚಿಕೊಂ ಮೆಲ್ಲನೆ ಉಸುರಿದಳು: 'ಕಣ್ಣುಗಳಿಗೆ–ಜೂಟ್, ಜೂಟ್!'

ಆ ಮೇಲೆ ಇನ್ನೂ ಮೆಲ್ಲಗೆ: 'ಲೆಲೆಚ್‌ಕಾಳಿಗೆ– ಜೂ ಜೂಟ್!'

ಈ ಮಾತುಗಳನ್ನಾಡಿ ಅವಳು ನಿದ್ದೆ ಹೋದಳು; ಅವಳ ಮ ದಿಂಬನ್ನು ಒತ್ತಿಕೊಂಡಿತ್ತು. ಹೊದ್ದಿದ್ದ ಕಂಬಳಿಯ ಒಳಗೆ ಅ ತುಂಬಾ ಪುಟ್ಟವಳಾಗಿಯೂ ನಿಸ್ಸಹಾಯಳಾಗಿಯೂ ಕಂಡ ತಾಯಿ ದುಗುಡದಿಂದ ತುಂಬಿದ ಕಣ್ಣುಗಳಿಂದ ಅವಳ ಕಡೆ ನೋಡುತ್ತಿದ್ದಳು. ಲೆಲೆಚ್‌ಕಳ ಹಾಸಿಗೆಯ ಹತ್ತಿರ ಬ ಹೊತ್ತು ನಿಂತಿದ್ದು, ಪ್ರೇಮಪೂರ್ಣವಾದ ದಿಗಿಲಿನಿಂದ ಅವಳ ನೋಡುತ್ತಿದ್ದಳು. ಲೆಲೆಚ್‌ಕಳನ್ನು ಕಾಡಬಹುದಾದ ಕೇಡುಕು ನ್ನೆಲ್ಲಾ ಆಲೋಚಿಸುತ್ತಾ ಅವಳು ಅಂದುಕೊಂಡಳು: 'ನ ಅವಳ ತಾಯಿ; ನಾನೇ ಅವಳನ್ನು ಕಾಪಾಡಲು ಅಶಕ್ತಳೇ?

ಅವಳು ಆ ರಾತ್ರಿ ಬಹಳ ಹೊತ್ತು ದೇವರ ಪ್ರಾರ್ಥನೆ ಮ ದಳು; ಆದರೆ ಆ ಪ್ರಾರ್ಥನೆ ಅವಳ ದುಃಖವನ್ನು ದೂರಮಾಡ

೬

ಅನೇಕ ದಿನಗಳು ಕಳೆದುವು. ಲೆಲೆಚ್‌ಕಳಿಗೆ ಚಳಿ ಬಂತು. ಜ್ವರವೂ ಬಂತು. ಫೆಡೋಸಿಯಾ ಸೆರಾಫಿಮಳನ್ನು ಅಲ್ಲಿಗೆ ಕ ಕೊಂಡು ಬಂದಳು. ಆಗ ಲೆಲೆಚ್‌ಕಳ ಮೈ ತುಂಬಾ ಬಿಸಿಯಾ ಅವಳು ಅಸ್ವಸ್ಥಳಾಗಿ ಬಹಳ ಯಾತನೆಪಡುತ್ತಿದ್ದುದನ್ನು ಸೆ

ಾಫಿಮಾಳಿಗೆ ತಕ್ಷಣ ಆ ಅಪಶಕುನದ ವಿಷಯ ಜ್ಞಾಪಕ ಬಂದು, ಾದಲಿನ ಆ ನಿಮಿಷದಿಂದಲೇ ನಿರಾಶೆಯ ಭೀತಿ ಅವಳನ್ನು ಕ್ರಮಿಸಿತು.

ವೈದ್ಯನನ್ನು ಕರೆದರು; ಆ ಸಂದರ್ಭಗಳಲ್ಲಿ ವಾಡಿಕೆಯಾದದ್ದ-ಲ್ಲಾ ಮಾಡಿದರು. ಆದರೆ ಆಗಬೇಕಾದ್ದು ಆಗಿಹೋಯಿತು. ಲೆಚ್ಕಾ ಗುಣಹೊಂದಿ ಪುನಃ ನಗುತ್ತಾ ಆಟವಾಡುತ್ತಾಳೆಂದು ಬಿ ಸೆರಾಫಿಮಾ ತನ್ನನ್ನು ತಾನೇ ಸಮಾಧಾನ ಮಾಡಿಕೊಳ್ಳಲು ಯತ್ನಿಸಿದಳು. ಆದರೆ ಅದು ಎಣಿಸಲಾರದ ಸುಖವೆಂದು ಅವಳಿ-ಗ್ನಿಸಿತು! ಲೆಲೆಚ್ಕಾ ಗಂಟೆಗಂಟೆಗೂ ಮೆತ್ತಗಾಗುತ್ತ ಬಂದಳು. ಾಫಿಮಳನ್ನು ಗಾಬರಿಗೊಳಿಸಬಾರದೆಂದು ಎಲ್ಲರೂ ಶಾಂತತೆ-ಯನ್ನು ನಟಿಸಿದರು. ಆದರೆ ಅವರ ಮುಖದ ಮೇಲಿನ ಮುಸುಕು ವಳನ್ನು ವ್ಯಸನಗೊಳಿಸಿತು, ಅಷ್ಟೆ.

ಫೆಡೋಷಿಯಾ ಬಿಕ್ಕಿಬಿಕ್ಕಿ ಅಳುತ್ತಾ ಪುನಃ, ' ಅವಳು ಅವಿತು-ಕೊಂಡು, ಅವಿತುಕೊಂಡು, ಸುಮ್ಮನೆ ಅವಿತುಕೊಂಡುಬಿಟ್ಟಳು! ಮ್ಮ ಲೆಲೆಚ್ಕಾ! ' ಎಂದು ಜ್ಞಾಪಿಸಿಕೊಂಡಾಗ ಆದಷ್ಟು ದುಃಖ ಾಫಿಮಾಳಿಗೆ ಬೇರೆ ಯಾವಾಗಲೂ ಆಗಿರಲಿಲ್ಲ.

ಆದರೆ ಸೆರಾಫಿಮಾಳ ಆಲೋಚನೆಗಳೆಲ್ಲ ವಿಕಲವಾಗಿದ್ದು, ತ್ತಲೂ ಏನು ನಡೆಯುತ್ತಿದೆಯೆಂಬುದೇ ಅವಳಿಗೆ ಸರಿಯಾಗಿ ರ್ಥವಾಗುತ್ತಿರಲಿಲ್ಲ.

ಜ್ವರ ಲೆಲೆಚ್ಕಳನ್ನು ತಿಂದುಹಾಕುತ್ತಿತ್ತು. ಎಷ್ಟೋಸಲ ಅವಳು ಜ್ಞಿನತಪ್ಪಿ ಏನೇನೋ ಒದರುತ್ತಿದ್ದಳು. ಆದರೆ ಅವಳಿಗೆ ಪುನಃ ಜ್ಞೆ ಬಂದಾಗ ಯಾತನೆ ಮತ್ತು ಆಯಾಸವನ್ನೆಲ್ಲಾ ಬಹಳ ಸಹಿಸಿ ಳ್ಳುತ್ತಿದ್ದಳು; ತಾಯಿಗೆ ತನ್ನ ನೋವಿನ ಅರಿವಾಗಿ, ಅವಳಿಗೆ ಸನವಾಗಬಾರದೆಂದು, ಅವಳು ತನ್ನ ತಾಯಿಯನ್ನು ನೋಡಿ ಸಕಾಗಿ ತಿಳನಗೆ ನಗುತ್ತಿದ್ದಳು.

ದುಃಸ್ವಪ್ನದಂತೆ ಮೂರು ದಿನ ಯಾತನೆಯಲ್ಲಿ ಕಳೆಯಿತು. ಲೆಚ್ಕಾ ತುಂಬಾ ಮೆತ್ತಗಾದಳು, ತಾನು ಸಾಯುತ್ತಿದ್ದೇನೆಂದು ವಳಿಗೆ ಗೊತ್ತಿರಲಿಲ್ಲ.

ಮುಸುಕಾಗಿದ್ದ ತನ್ನ ಕಣ್ಣುಗಳನ್ನು ತಾಯಿಯ ಕಡೆ ತಿರುಗಿಸಿ ಕೇಳ ವುದೇ ಕಷ್ಟವೆನಿಸುವಷ್ಟು ಇಳಿದನಿಯಲ್ಲಿ ನುಡಿದಳು; 'ಜೂಟ್, ಟ್, ಅಮ್ಮಾ-ಜೂಟ್ ಆಡೋಣ ಅಮ್ಮಾ!' ಸೆರಾಫಿಮಾ ತನ್ನ ಚ್ಕಳ ಹಾಸಿಗೆಯ ಬಳಿ ಪರದೆಯ ಹಿಂದೆ ಮುಖವನ್ನು ಚ್ಚಿಟ್ಟುಕೊಂಡಳು. ಆದರೂ ಎಷ್ಟು ಹೃದಯ ವಿದ್ರಾವಕ!

'ಅಮ್ಮಾ! ' ಎಂದು ಲೆಲೆಚ್ಕಾ ಕೇಳಲಾರದಷ್ಟು ಇಳಿಧನಿಯಲ್ಲಿ ಗಿದಳು.

ಲೆಲೆಚ್ಕಳ ತಾಯಿ ಅವಳ ಮುಖದ ಮುಂದೆ ಬಗ್ಗಿದಳು. ಲೆಲೆ-ಕಳ ದೃಷ್ಟಿ ಆ ವೇಳೆಗೆ ಇನ್ನೂ ಮಂಕಾಗಿ ಹೋಗಿತ್ತು. ಕೊನೆಯ ತಾಯಿಯ ಬಿಳಿಚಿಕೊಂಡ ನಿರಾಶೆಯ ಮುಖನೋಡಿ, ' ಬಿಳಿಚಿ ಕೊಂಡಿರುವೆ ಅಮ್ಮಾ! ' ಎಂದು ಉಸುರಿದಳು.

ಅಮ್ಮನ ಬಿಳಿಯ ಮುಖ ಮುಸುಕಾಯಿತು; ಲೆಲೆಚ್ಕಳಿಗೆ ಎಲ್ಲಾ ಕತ್ತಲೆಯಾಯಿತು. ಬೆಡ್‌ಷೀಟಿನ ತುದಿಯನ್ನು ಮೆತ್ತಗೆ ಕೈಗಳಲ್ಲಿ ಹಿಡಿದುಕೊಂಡು ಅವಳು ಪಿಸುಗುಟ್ಟಿದಳು; ' ಜೂಟ್, ಜೂಟ್! '

ಅವಳ ಗಂಟಲಿನಲ್ಲಿ ಏನೊ ಸಿಕ್ಕಿಕೊಂಡಿತು. ವೇಗವಾಗಿ ಬಿಳಿಚಿ-ಕೊಂಡು ಬಂದಿದ್ದ ತುಟಿಗಳನ್ನು ಒಂದುಸಲ ತೆರೆದು ಪುನಃ ಮುಚ್ಚಿಕೊಂಡು ಅವಳು ಪ್ರಾಣ ನೀಗಿದಳು.

ಲೆಲೆಚ್ಕಳನ್ನು ಬಿಟ್ಟು ಕೊಟಡಿಯಿಂದ ಹೊರಕ್ಕೆ ಹೋದಾಗ ಸೆರಾಫಿಮಳಿಗೆ ಮೂಕಶೋಕ. ಅವಳು ಪತಿಯನ್ನು ಸಂಧಿಸಿದಳು.

' ಲೆಲೆಚ್ಕಾ ಸತ್ತು ಹೋದಳು. ' ಎಂದು ಅವಳು ನಿರ್ಜೀವ-ವಾದ ಮಂಕುಧ್ವನಿಯಲ್ಲಿ ಹೇಳಿದಳು.

ಮಾಡೆಸ್ಟೊವಿಚ್ಚನು ಅವಳ ಬಿಳಿಚಿಕೊಂಡ ಮುಖವನ್ನು ಆತುರದಿಂದ ನೋಡಿದನು. ಮೊದಲು ಜೀವ ತುಂಬಿದ್ದ ಅವಳ ಸುಂದರ ಮುಖದಲ್ಲಿ ಈಗ ನೆಲಸಿದ್ದ ವಿಚಿತ್ರ ಮಂಕುತನ ಅವನನ್ನು ದಂಗು ಬಡಿಸಿತು.

೭

ಲೆಲೆಚ್ಕಳಿಗೆ ಉಡುಪು ತೊಡಿಸಿ, ಒಂದು ಪುಟ್ಟ ಶವಧಾನಿಯಲ್ಲಿಟ್ಟು ಅಂಗಳಕ್ಕೆ ಹೊತ್ತುಕೊಂಡು ಹೋದರು. ಸೆರಾಫಿಮಾ ಪೆಟ್ಟಿಗೆಯ ಮಗ್ಗುಲಲ್ಲಿ ನಿಂತು, ತನ್ನ ಅಳಿದ ಮಗುವಿನ ಕಡೆಗೆ ದೃಷ್ಟಿಸಿ ನೋಡು ತ್ತಿದ್ದಳು. ಮಾಡೆಸ್ಟೊವಿಚ್ಚನು ತನ್ನ ಪತ್ನಿಯ ಬಳಿಗೆ ಹೋಗಿ ತನ್ನ ಶೀತಲವಾದ ನಿಸ್ಸತ್ತ್ವ ಮಾತುಗಳಿಂದ ಸಮಾಧಾನಪಡಿಸುತ್ತಾ ಅವಳನ್ನು ಪೆಟ್ಟಿಗೆಯಿಂದ ಆ ಕಡೆಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿದನು. ಸೆರಾಫಿಮಾ ಮುಗುಳುನಗೆ ನಕ್ಕು, ' ದೂರ ಹೋಗಿ ' ಎಂದು ಶಾಂತಳಾಗಿ ಹೇಳಿದಳು; '' ಲೆಲೆಚ್ಕಾ ಆಡುತ್ತಿ-ದ್ದಾಳೆ. ಇನ್ನೊಂದು ನಿಮಿಷದಲ್ಲಿ ಎದ್ದು ಬಿಡುತ್ತಾಳೆ. '

' ನನ್ನ ಪ್ರಿಯೆ ಸೈಮಾ, ಉದ್ವೇಗಗೊಳ್ಳಬೇಡ.' ಮಾಡೆಸ್ಟೊ-ವಿಚನು ಪಿಸುಮಾತಿನಲ್ಲಿ ಹೇಳಿದನು, '' ಹಣೆಯಲ್ಲಿ ಬರೆದಿದ್ದನ್ನು ಅನುಭವಿಸಲೇಬೇಕು."

' ಇನ್ನೊಂದು ನಿಮಿಷದಲ್ಲೇ ಎದ್ದುಬಿಡುತ್ತಾಳೆ ನನ್ನ ಮುದ್ದು-ಮಗು. ' ಸೆರಾಫಿಮಾ ಮರಣ ಹೊಂದಿದ್ದ ಪುಟ್ಟಮಗುವನ್ನೇ ನೋಡುತ್ತಾ ಪುನಃ ತನ್ನ ಹಟವನ್ನೇ ಸಾಧಿಸಿದಳು.

ಮಾಡೆಸ್ಟೊವಿಚ್ಚನು ಎಚ್ಚರಿಕೆಯಿಂದ ಸುತ್ತಲೂ ನೋಡಿದನು; ಅಸಂಭವವಾದ ಈ ಹಾಸ್ಯಾಸ್ಪದ ವಿಷಯ ಅವನನ್ನು ದಿಗಿಲು ಗೊಳಿಸಿತ್ತು.

' ಸೈಮಾ, ಉದ್ರೇಕಗೊಳ್ಳಬೇಡ ' ಎಂದು ಅವನು ಪುನಃ ಹೇಳಿದನು, ' ನೀನು ಹೇಳುವಂತೆ ಆಗಬೇಕಾದರೆ ಅದು ಒಂದು ಸೋಜಿಗ, ಈ ಶತಮಾನದಲ್ಲಿ ಅಂತಹ ಸೋಜಿಗಗಳು ನಡೆಯು ವುದಿಲ್ಲ. '

ಈ ಮಾತುಗಳನ್ನು ತಾನು ಆಡುತ್ತಿದ್ದಾಗಲೇ ಈಗ ನಡೆದ ಘಟನೆಗೂ ಇವಕ್ಕೂ ಅರ್ಥಾರ್ಥಕ್ಕೆ ಸಂಬಂಧವಿಲ್ಲೆಂದು ಅವನಿಗೆ ಎನ್ನಿಸಿತು. ಅವನು ಗೊಂದಲಕ್ಕೆ ಸಿಕ್ಕಿ ಕಿರುಕುಳ ಪಟ್ಟನು.

ಅವನು ತನ್ನ ಪತ್ನಿಯ ಹೆಗಲ ಮೇಲೆ ಕೈಯಿಟ್ಟು ಅವಳನ್ನು

ಪೆಟ್ಟಿಗೆಯ ಹತ್ತಿರದಿಂದ ಆಚೆಗೆ ಕರೆದುಕೊಂಡು ಹೋದನು. ಅವಳೇನೂ ವಿರೋಧಿಸಲಿಲ್ಲ. ಅವಳ ಮುಖದಲ್ಲಿ ಶಾಂತತೆ ತುಂಬಿ ಕಣ್ಣುಗಳು ಬತ್ತಿದ್ದುವು. ಅವಳು ಶಿಶುಗೃಹವನ್ನು ಹೊಕ್ಕು ಲಿಲೆಚ್‌ಕಾ ಅವಿತುಕೊಳ್ಳುತ್ತಿದ್ದ ಸ್ಥಳಗಳಲ್ಲೆಲ್ಲಾ ಹುಡುಕಲಾರಂಭಿಸಿದಳು. ಕೋಟಡಿಯಲ್ಲೆಲ್ಲಾ ಓಡಾಡುತ್ತಾ, ಮೇಜಿನ ಕೆಳಗೋ ಇಲ್ಲವೇ ಹಾಸಿಗೆಯ ಹಿಂದೆಯೋ ನೋಡಲು ಆಗಾಗ ಅವಳು ಬಗ್ಗುತ್ತಾ, ತುಂಬಾ ಉತ್ಸಾಹದಿಂದ ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುತ್ತಿದ್ದಳು: 'ನನ್ನ ಪುಟಾಣಿ ಎಲ್ಲಿ? ನನ್ನ ಲಿಲೆಚ್‌ಕಾ ಎಲ್ಲಿ?'

ಒಂದು ಸಲ ಕೋಟಡಿಯನ್ನೆಲ್ಲಾ ಹುಡುಕಿಯಾದಮೇಲೆ, ಪುನಃ ಅವಳು ಮೊದಲಿನಿಂದ ಆರಂಭಿಸಿದಳು. ನಿರಾಶೆಯ ಮುಖಮುದ್ರೆಯೊಡನೆ ಒಂದು ಮೂಲೆಯಲ್ಲಿ ಸ್ತಂಭೀಭೂತಳಾಗಿ ಕುಳಿತಿದ್ದ ಫೆಡೋಸ್ಯಾ ತನ್ನ ಒಡತಿಯನ್ನು ನೋಡಿ ಹೆದರಿದಳು; ಆ ಮೇಲೆ ಇದ್ದಕಿದ್ದಂತೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿ, ಜೋರಾಗಿ ಒರಲಿದಳು; 'ಅವಳು ಅವಿತುಕೊಂಡು, ಅವಿತುಕೊಂಡು ಅವಿತುಕೊಂಡೇ ಬಿಟ್ಟಳು, ನಮ್ಮ ಲಿಲೆಚ್‌ಕಾ, ದೇವರಂತಹ ಆ ಪುಟ್ಟ ಕಂದ!'

ಸೆರಾಫಿಮಾ ನಡುಗಿದಳು, ಸ್ವಲ್ಪ ಹೊತ್ತು ಸುಮ್ಮಗಿದ್ದಳು, ಫೇಡೋಸ್ಯಾಳ ಕಡೆ ಕಳವಳದ ದೃಷ್ಟಿ ಬೀರಿದಳು; ರೋದಿಸುವುದಕ್ಕಾರಂಭಿಸಿ, ಸದ್ದು ಮಾಡದೆ ಅಲ್ಲಿಂದ ಹೊರಕ್ಕೆ ಹೊರಟು ಹೋದಳು.

೮

ಮಾಡೆಸ್ಟೊವಿಚ್ಚನು ಸಮಾಧಿಕ್ರಿಯೆಯನ್ನು ತ್ವರೆ ಪಡಿಸಿದನು. ಈ ಅನಿರೀಕ್ಷಿತವಾದ ದುರದೃಷ್ಟದ ಪೆಟ್ಟಿನಿಂದ ಸೆರಾಫಿಮಾಳಿಗೆ ಬುದ್ಧಿಭ್ರಮಣೆಯಾದಹಾಗಿತ್ತು. ಮತ್ತು ಇದರಿಂದ ಅವಳ ಯೋಚನಾಶಕ್ತಿಯೇ ಪೂರ್ತಿ ಅಳಿಸಿಹೋಗಬಹುದೆಂದು ಅವನು ಹೆದರಿದ್ದನು. ಲಿಲೆಚ್‌ಕಳನ್ನು ಬೇಗ ಗೋರಿಮಾಡಿದರೆ ಸೆರಾಫಿಮಾ ಇದನ್ನು ಸ್ವಲ್ಪ ಮರೆತು ಬೇರೆ ವಿಷಯಗಳ ಕಡೆಗೆ ಗಮನ ಕೊಡಬಹುದೆಂದು ಅವನು ಭಾವಿಸಿದ್ದನು.

ಮಾರನೆಯ ಬೆಳಗ್ಗೆ ಸೆರಾಫಿಮಳು ಹೆಚ್ಚಿನ ಜಾಗರೂಕತೆಯಿಂದ ಉಡುಪನ್ನು ಧರಿಸಿದಳು— ಹಗಲೂ ಲಿಲೆಚ್‌ಕಳಿಗೋಸ್ಕರ ಅವಳು ಅಂಗಳವನ್ನು ಸೇರಿದಾಗ, ಅವಳಿಗೂ ಲಿಲೆಚ್‌ಕಳಿಗೂ ನಡುವೆ ಅನೇಕ ಜನರಿದ್ದರು. ಪಾದ್ರಿ ರೂಮಿನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಶತಪಥ ತಿರುಗುತ್ತಿದ್ದನು; ನೀಲಿಯ ಹೊಗೆಯ ಮೋಡಗಳು ರೂಮಿನಲ್ಲಿ ಮೇಲಕ್ಕೇಳುತ್ತಿದ್ದುವು, ಮತ್ತು ಧೂಪ ಹಾಕಿದ ವಾಸನೆ ಬರುತ್ತಿತ್ತು. ಲಿಲೆಚ್‌ಕಳನ್ನು ಸಮೀಪಿಸಿದಂತೆಲ್ಲ ಸೆರಾಫಿಮಾಳಿಗೆ ತನ್ನ ತಲೆ ಸಿಡಿದು ಹೋಗುವಷ್ಟು ಭಾರವಾಗಿ ತೋರಿತು. ಲಿಲೆಚ್‌ಕಾ ಬಿಳಿಚಿಕೊಂಡು ಕದಲದೆ ಅಲ್ಲೇ ಮಲಗಿದ್ದಳು ಮತ್ತು ಅವಳ ತುಟಿಗಳ ಮೇಲೆ ಕನಿಕರ ಹುಟ್ಟಿಸುವಂತಹ ಮುಗುಳುನಗೆ ಇತ್ತು. ಸೆರಾಫಿಮಾ ಲಿಲೆಚ್‌ಕಳ ಪೆಟ್ಟಿಗೆಯ ಅಂಚಿನ ಮೇಲೆ ಕೆನ್ನೆಯನ್ನಿಟ್ಟು ಪಿಸುಗುಟ್ಟಿದಳು; 'ಜೂಟ್, ಜೂಟ್, ಪುಟಾಣೀ!'

ಪುಟಾಣಿ ಜವಾಬು ಕೊಡಲಿಲ್ಲ. ಆ ಮೇಲೆ ಸೆರಾಫಿಮ ಸುತ್ತುಮುತ್ತಲೂ ಒಂದು ತೆರದ ಗಲಭೆ ಮತ್ತು ಗಲಿ ಎದ್ದಿತು; ವಿಚಿತ್ರವಾದ ಅನಾವಶ್ಯಕವಾದ ಮುಖಗಳು ಅ ಮುಂದೆ ಒಡ್ಡಿದುವು, ಯಾರೋ ಅವಳನ್ನು ಹಿಡಿದುಕೊಂ ಮತ್ತು ಲಿಲೆಚ್‌ಕಳನ್ನು ಎಲ್ಲಿಗೋ ಹೊತ್ತುಕೊಂಡುಹೋದರು

ಸೆರಾಫಿಮಾ ನೆಟ್ಟಗೆ ನಿಂತು, ನಿರಾಶೆಯ ನಿಟ್ಟುಸಿರು ಬಿ ಮುಗುಳುನಗೆ ನಕ್ಕು ಜೋರಾಗಿ ಕೂಗಿದಳು; 'ಲಿಲೆಚ್‌ಕಾ!'

ಲಿಲೆಚ್‌ಕಳನ್ನು ಹೊರಕ್ಕೆ ಸಾಗಿಸುತ್ತಿದ್ದರು. ತಾಯಿ ದು ಭರದಲ್ಲಿ ರೋದಿಸುತ್ತಾ ಪೆಟ್ಟಿಗೆಯ ಹಿಂದೆ ಓಡಿದಳು, ಆ ಅವಳನ್ನು ಹಿಡಿದು ನಿಲ್ಲಿಸಿದರು. ಅವಳು ಲಿಲೆಚ್‌ಕಳು ಹೋ ಬಾಗಿಲಿನ ಹಿಂದೆ ಅವಿತು ನಿಂತು, ಅಲ್ಲೇ ನೆಲದಮೇಲೆ ಕ ತಳು. ಬಾಗಿಲಿನ ಸಂದಿಯಿಂದ ಇಣಿಕಿ ನೋಡುತ್ತ ಕೂಗಿಕೊ ಡಳು: 'ಲಿಲೆಚ್‌ಕಾ, ಜೂಟ್, ಜೂಟ್!'

ಆ ಮೇಲೆ ಬಾಗಿಲಿನ ಹಿಂದಿನಿಂದ ಹೊರಕ್ಕೆ ತಲೆ ಚ ನಗುವುದಕ್ಕಾರಂಭಿಸಿದಳು.

ಲಿಲೆಚ್‌ಕಳನ್ನು ತಾಯಿಯ ಬಳಿಯಿಂದ ಬೇಗ ಸಾಗಿಸಿದ ಅವಳನ್ನು ಹೊತ್ತಿದ್ದವರು ನಡೆಯುವುದಕ್ಕೆ ಬದಲು ಓಡುತ್ತಿ ತೋರುತ್ತಿತ್ತು.

ಮಹಾಮೌನ ಮುಕ್ತಿ

೧

ಶಬ್ದ-ಶಬ್ದಗಳ ಅರ್ಥ-ಅರ್ಥದಲಿ ಜೀವಭಾವ ತುಂಬಿ
ಅಬ್ಧಿ-ಅಬ್ಧಿಗಳ ಶಬ್ದದಲ್ಲಿ ಹಿಡಿದಿಡುವ ಗುಟ್ಟ ನಂಬಿ
ಶಬ್ದಮೂಲ "ಅಕ್ಷರ"ದ ದರ್ಶನವ ಮೌನದಲ್ಲಿ ಕಾಂಬಿ!
ಅಬ್ಧಿ ಅಬ್ಧಿಯನೆ ಮೌನದಕ್ಷರದಿ ಅಳೆದು ಬಿಡುವ ಗೊಂಬಿ!!

೨

ಕಂಡೆ ನಿನ್ನ ಘನ ಮಹಾಮೌನದಾವರಣ ಮಧ್ಯದಲ್ಲಿ
ಚಂದ ಕಿರಣನೊಲು ಮೇಘ ನೀಲಘನ ಮಹಾ ಬಾನಿನಲ್ಲಿ
ಮೌನದಿಂದಲೇ ಅಣು ಮಹತ್ತಿನಲಿ ಮಹತು ಅಣುವಿನಲ್ಲಿ
ಬೆರೆತು ನಮರಸತೆ ವೇದ್ಯವಾಯ್ತು ಹೃದಯಾಂತರಾಳದಲ್ಲಿ.

೩

ಅಣುವಿನಲ್ಲಿ ಅಣು; ಮಹತು ಮಹತಿನಲಿ; ನಾಮರಹಿತ ದಿಕ್ತಿ
ಕಣದಿ ಕಣದಿ ಬೆಳಗಿದ ಮಿಣಿತದಲಿ ಎಚ್ಚರಾಯಿತ್ತು ಭಕ್ತಿ
ಜೀವಚೇತನವು ಅರಳಿನಿಂದಿಸ್ಸೆ ತೆರೆದು ದೇಹಮುಕ್ತಿ
ತಾನೆ ತನ್ನೊಳಗೆ ಕೂಡಿ ಹೋಯಿತ್ತೆ ಮಹಾಮೌನಮುಕ್ತಿ!

ದೇಸಾಯಿ ದತ್ತಮೂರ್ತಿ, ಹುಬ್ಬಳ್ಳಿ

ಸಕ್ಕರೆ ಮತ್ತು ಸಬಲಮದ್ಯಸಾರ

(Sugar & Power alcohol)

ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ. ಹೈದರಾಬಾದ್

★

ಸಕ್ಕರೆಯನ್ನು ಬಳಸುವವರು ನಮ್ಮಲ್ಲಿ ನೂರಕ್ಕೆ ನೂರು ಜನರಾದರೂ, ಅದರ ಉತ್ಪಾದನದ ಉದ್ಯಮವನ್ನು ಅರಿತವರು ನೂರರಲ್ಲಿ ತೊಂಬತ್ತೊಂಬತ್ತು ಜನರಾದರೂ ದೊರೆಯುವರೊ?

★

ಇಂದು ಭಾರತದ ಹಿರಿಯ ಉದ್ಯಮಗಳಲ್ಲಿ ಶರ್ಕರೋದ್ಯಮವು ಒಂದು ಮಹತ್ತ್ವದ ವಿಭಾಗವಾಗಿದೆ. ಸುಮಾರು ೭೫ ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ, ಹತ್ತು ಲಕ್ಷ ಟನ್ನುಗಳಿಗೆ ಮಿಕ್ಕಿದ ಬಿಳಿಯ ಸಕ್ಕರೆಯೂ, ಒಂದೂವರೆ ಲಕ್ಷ ಟನ್ನುಗಳಷ್ಟು ಖಂಡಸಾರ್ ಸಕ್ಕರೆಯೂ, ಮೂವತ್ತು ಲಕ್ಷ ಟನ್ನುಗಳನ್ನು ಮೀರಿದ ಬೆಲ್ಲವೂ ಈ ಉದ್ಯಮದ ವಾರ್ಷಿಕ ಉತ್ಪಾದನೆಯಾಗಿದೆ. ಯಾವ ಕಾಲದಲ್ಲಿಯೂ ಭಾರತವು, ಜಗತ್ತಿನಲ್ಲಿ ಸಕ್ಕರೆಯ ನಿರ್ಮಿತಿಯಲ್ಲಿ ಆದ್ಯವೆಂದು ಹೆಸರು ಪಡೆದ ರಾಷ್ಟ್ರಗಳಲ್ಲಿ ಒಂದಾಗಿದೆ. ಆದರೂ ಮೊನ್ನೆಮೊನ್ನೆಯವರೆಗೆ ಅದು ಹೆಚ್ಚಾಗಿ ಬೆಲ್ಲ ಹಾಗೂ ಖಂಡಸಾರ್ ಸಕ್ಕರೆಯನ್ನೇ ತಯಾರು ಮಾಡುತ್ತಿತ್ತು. ಆಂತೆಯೆ ದೊಡ್ಡ ದೊಡ್ಡ ಕಾರಖಾನೆಗಳ ಮುಖಾಂತರ ದೊಡ್ಡ ಪ್ರಮಾಣದ ಮೇಲೆ ಸಕ್ಕರೆಯ ನಿರ್ಮಿತಿಯು ನಮ್ಮ ನಾಡಿನಲ್ಲಿ ಹೊಸದಾಗಿಯೇ ಪ್ರಾರಂಭವಾಗಿದೆಯೆಂದು ಹೇಳಬೇಕಾಗುತ್ತದೆ. ಹದಿನೈದು ವರ್ಷಗಳ ಹಿಂದೆ ನಮ್ಮ ನಾಡಿನೊಳಗಿನ ಶುದ್ಧ ಸಕ್ಕರೆಯ ಬೇಡಿಕೆಯ ೯೦ ಶತಾಂಶದಷ್ಟು ಸಕ್ಕರೆಯು ಜಾವಾ ದೇಶದಿಂದ ಇಲ್ಲಿಗೆ ಆಯಾತವಾಗುತ್ತಿತ್ತು. ಆದರೆ ಈಗ ದೈವದಿಂದ ೧೯೩೨ ರಲ್ಲಿ ಶರ್ಕರೋದ್ಯಮಕ್ಕೆ ಸಿಕ್ಕ ಸರಕಾರೀ ಸಂರಕ್ಷಣೆಯ ಪರಿಣಾಮವಾಗಿ ನಮ್ಮ ದೇಶದಲ್ಲಿ ಬೆಳೆದ ಸಕ್ಕರೆಯ ಬೇಡಿಕೆಯನ್ನೆಲ್ಲ ಸಂಪೂರ್ಣವಾಗಿ ಪೂರಯಿಸುವುದು ಭಾರತಕ್ಕೆ ಇಂದು ಸಾಧ್ಯವಾಗಿದೆ.

ಭಾರತೀಯ ಕಾರಖಾನೆಗಳು ೧೯೩೦ ರ ಸುಮಾರಿಗೆ ತಯಾರಾಗುತ್ತಿರುವ ಸಕ್ಕರೆಗಿಂತಲೂ ಹೆಚ್ಚು ಒಳ್ಳೆಯ ತರಗತಿಯ ಸಕ್ಕರೆಯನ್ನು ಕಡಿಮೆ ಬೆಲೆಯಲ್ಲಿ ಇಂದು ತಯಾರು ಮಾಡುತ್ತವೆ. ಜಗತ್ತಿನಲ್ಲಿ ತಯಾರಾಗುತ್ತಿರುವ ಅತ್ಯುತ್ತಮ ಸಕ್ಕರೆಗೆ ಕಡಿಮೆಯಿಲ್ಲದ ಸಕ್ಕರೆಯನ್ನು ತಯಾರು ಮಾಡಬಲ್ಲ ಕಾರಖಾನೆಗಳು ನಮ್ಮಲ್ಲಿ ಹೇರಳವಾಗಿವೆ. ಜಾವಾ ದೇಶದಲ್ಲಿ ಸ್ಥಾಪಿತವಾಗಿರುವ ಶರ್ಕರಾ ನಿರ್ಮಾಣಶಾಸ್ತ್ರ ಸಂಸ್ಥೆಗಳನ್ನನುಸರಿಸಿ ಕಾನಪುರದಲ್ಲಿಂದು "ಇಂಪೀರಿಯಲ್ ಇನಸ್ಟಿಟ್ಯೂಟ್ ಆಫ್ ಶುಗರ್ ಟೆಕ್ನಾಲಜಿ" ಎಂಬ ಹೆಸರಿನ ವಿಜ್ಞಾನ ಸಂಸ್ಥೆಯೊಂದು ಕೆಲಸ ಮಾಡುತ್ತ ಬಂದಿದೆ. ಈ ಸಂಸ್ಥೆಯು ಶರ್ಕರೋದ್ಯಮಕ್ಕೆ ಸಂಬಂಧಿಸಿದ ಅದರ ತಯಾರಿಕೆಯ ಅಖಿಲ ವಿಷಯಗಳಲ್ಲಿಯೂ ಅದರ ಸಂಜನಿತಗಳ ಉಪಯೋಗ ವಿಧಾನಗಳಲ್ಲಿಯೂ ಸಂಶೋಧನವನ್ನು ಕೈಕೊಂಡಿದೆ.

ಈ ಹೊತ್ತು ನಮ್ಮ ದೇಶದಲ್ಲಿ ೧೬೦ರಷ್ಟು ಸಕ್ಕರೆಯ ಕಾರಖಾನೆಗಳು ಸ್ಥಾಪಿತವಾಗಿವೆ. ೧೪ ಕಾರಖಾನೆಗಳು ಶರ್ಕರೋತ್ಪಾದನೆಯಲ್ಲಿ ಕಾರ್ಬೋನೇಶನ್ (carbonation) ವಿಧಾನವನ್ನು ಉಪಯೋಗಿಸುತ್ತಿದ್ದರೆ, ಉಳಿದ ಎಲ್ಲ ಕಾರಖಾನೆಗಳು ಸಲ್ಫಿಟೇಶನ್ (Sulphitation) ವಿಧಾನದಿಂದ ಸಕ್ಕರೆಯನ್ನು ತಯಾರುಗೊಳಿಸುತ್ತವೆ. ಈ ಉದ್ಯಮದಲ್ಲಿ ಸೇರಿಕೆಯಾದ ಬಂಡವಾಳವು ಮೂವತ್ತು ಕೋಟಿ ರೂಪಾಯಿಗಳನ್ನು ಮೀರಿದೆಯೆಂದು ಅಂದಾಜು ಮಾಡಲಾಗಿದೆ. ಪ್ರತಿವರುಷ ಭಾರತದಲ್ಲಿ ಒಂದು ಕೋಟಿ ರೂಪಾಯಿ ಬೆಲೆಯುಳ್ಳ ಯಂತ್ರಸಾಮಗ್ರಿಯು, ಸಕ್ಕರೆಯ ಕಾರಖಾನೆಗಳಿಗಾಗಿ ಆಯಾತವಾಗುತ್ತದೆ.

ಭಾರತ ದೇಶದಲ್ಲಿ ಬೆಳೆಯುತ್ತಿರುವ ಕಬ್ಬಿನಲ್ಲಿ ಸಕ್ಕರೆಯ ಸರ್ವಸಾಧಾರಣ ಪರಿಮಾಣವು ೧೨ ಶತಾಂಶದಷ್ಟು ಮಾತ್ರ ಇರುತ್ತದೆ. ಇದರ ವಿರುದ್ಧವಾಗಿ ಫಾರ್ಮೋಸಾದಲ್ಲಿ ೧೩.೫, ಫಿಲಿಪೈನ್ಸ್‌ನಲ್ಲಿ ೧೩.೭ ಮತ್ತು ಜಾವಾದಲ್ಲಿ ೧೬ ಶತಾಂಶದಷ್ಟು ಇರುತ್ತದೆ. ಇಲ್ಲಿ ಬೆಳೆಯುವ ಎಲ್ಲ ತರದ ಕಬ್ಬುಗಳಲ್ಲಿ ಜುಬ್ಬರದ ಅಧಿಕಾಂಶವಿರುವ ಕಾರಣ, ಅನೇಕ ಕಾರಖಾನೆಗಳಲ್ಲಿ ಉರಿಯುವುದಕ್ಕಾಗಿ ಕಟ್ಟಿಗೆಯ ಬದಲಾಗಿ ಕಬ್ಬಿನ ಸಿಪ್ಪೆಯನ್ನೇ ಸಂಪೂರ್ಣವಾಗಿ ಉಪಯೋಗಿಸುತ್ತಾರೆ.

ಹೈದರಾಬಾದ್ ಸಂಸ್ಥಾನದಲ್ಲಿ ಬೋಧನದಲ್ಲೊಂದು ಸಕ್ಕರೆಯ ಕಾರಖಾನೆಯಿದೆ. ಹೋದ ವರುಷ ಈ ಕಾರಖಾನೆಯಲ್ಲಿ ೨೩೩, ೨೫೧ ಟನ್ನುಗಳಷ್ಟು ಕಬ್ಬನ್ನೊಡೆದು, ೨೧೪೬೬ ಟನಗಳಷ್ಟು ಸಕ್ಕರೆಯನ್ನು ತಯಾರುಮಾಡಲಾಯಿತು. ಇಲ್ಲಿ ದೊರೆತ ಕಾಕಂಬಿಯಿಂದ ನಾಲ್ಕು ಲಕ್ಷ ಗ್ಯಾಲನ್ನು ಸಬಲಮದ್ಯಸಾರವನ್ನು ತಯಾರುಮಾಡಲಾಯಿತು. ಇದೇ ವರುಷ ಈ ಕಾರಖಾನೆಯು ೩೬೦೬ ಎಕರೆ ಜಮೀನನ್ನು ಸಾಗುಮಾಡಿತು. ಈ ಕಾರಖಾನೆಯು

ಬೆಳೆವಣಿಗೆಯ ಯೋಜನೆಯು ಯಾವ ಅಡ್ಡಿ-ತಡೆಗಳಿಲ್ಲದೆ ಮುನ್ನಡಿಯನ್ನಿಡುತ್ತಲಿದೆ.

ಸಕ್ಕರೆಯನ್ನು ತಯಾರಿಸಲು ಬೇಕಾದ ಕಚ್ಚಾವಸ್ತುಗಳಲ್ಲಿ ಕಬ್ಬು ಮುಖ್ಯವಾದುದು. ಕಬ್ಬಿನಿಂದ ಸಕ್ಕರೆ ತಯಾರಿಸುವಾಗ ಮೊದಲು ಅವುಗಳನ್ನು ಹೈಡ್ರಾಲಿಕ್ ಪ್ರೆಸ್ಸಿನಲ್ಲಿ ಹಿಸುಕಿ ರಸವನ್ನು ತೆಗೆಯುತ್ತಾರೆ. ಆ ರಸದಲ್ಲಿ ಸಕ್ಕರೆಯ ಜೊತೆಗೆ ನೀರು, ಸಸಾರಜನಕಾಂಶ ಮತ್ತು ಲೋಹ-ಲವಣಗಳು ಕೂಡಿಕೊಂಡಿರುತ್ತವೆ. ಅವುಗಳನ್ನು ದೂರಪಡಿಸುವುದಕ್ಕೆ ಆ ರಸದಲ್ಲಿ ಸುಣ್ಣವನ್ನು ಬೆರೆಯಿಸಿ, ಆದರೊಳಗೆ ಇಂಗಾಲಾಮ್ಲ ಅಥವಾ ಗಂಧಕದ ಡಾಯ್‌ಆಕ್ಸಾಯಿಡ್ ಹಾಯಿಸುತ್ತಾರೆ. ಹೀಗೆ ಮಾಡುವುದರಿಂದ ರಸದಲ್ಲಿದ್ದ ಉಳಿದ ಪದಾರ್ಥಗಳು ದೂರವಾಗಿ ತಿಳಿಯಾದ ರಸವು ಉಳಿಯುತ್ತದೆ. ಅದನ್ನು ಚೆನ್ನಾಗಿ ಸೋಸಿ, ತೆರೆದ ಕಡಾಯಿಗಳಲ್ಲಿ ಕಾಯಿಸುವುದರಿಂದ ಪರಬತ್ತು ತಯಾರಾಗುತ್ತದೆ. ಪರಬತ್ತನ್ನು ತಣ್ಣಗೆ ಮಾಡಿದ ಮೇಲೆ ಸಕ್ಕರೆ, ಹಳದಿ-ಬಣ್ಣದ ಕಣಗಳ ರೂಪದಲ್ಲಿ ಬೇರೆಯಾಗುತ್ತದೆ. ಈ ಹಳದಿ ಬಣ್ಣವನ್ನು ಹೋಗಲಾಡಿಸುವುದಕ್ಕೆ ಸಕ್ಕರೆಯನ್ನು ನೀರಿನಲ್ಲಿ ಕರಗಿಸಿ, ಉಂಟಾಗುವ ದ್ರವವನ್ನು ಮೇಲಿಂದ ಮೇಲೆ ಎನಿಮಲ್ ಚಾರಕೋಲ್ (Animal charcoal)ದ ಮುಖಾಂತರ ಸೋಸುತ್ತಾರೆ. ಇದರಿಂದ ವರ್ಣರಹಿತ ಸಕ್ಕರೆ ತಯಾರಾಗುತ್ತದೆ.

ತುಂಬುವುದು ಮತ್ತು ಸಂಗ್ರಹಿಸುವುದು.

ಹೀಗೆ ತಯಾರಾದ ಸಕ್ಕರೆಯನ್ನು ಚೀಲಗಳಲ್ಲಿ ತುಂಬುವಾಗ ಅದು ವಾತಾವರಣದಲ್ಲಿರುವ ತೇವನ್ನು ಹೀರಿಕೊಳ್ಳದಂತೆ ನೋಡಿಕೊಳ್ಳಬೇಕು. ಏಕೆಂದರೆ ತೇವು ಇದ್ದ ಸ್ಥಳದಲ್ಲಿ ಸಕ್ಕರೆಯನ್ನು ಸಂಗ್ರಹಿಸಿದಲ್ಲಿ, ಅದು ತೇವನ್ನು ಹೀರಿಕೊಂಡು ಸಕ್ಕರೆ ಕೆಡುವ ಸಂಭವವಿರುತ್ತದೆ. ತೇವು ಸಕ್ಕರೆಯನ್ನು ಕೆಡಿಸಬಹುದಾದ ಮೈಕ್ರೊಆರ್ಗ್ಯಾನಿಜಮ್ಸ್ ಬೆಳವಣಿಗೆಯಲ್ಲಿ ಸಹಾಯ ಮಾಡುತ್ತದೆ. ತಟ್ಟಿನ ಚೀಲಗಳ ಬದಲಾಗಿ ಬಟ್ಟೆಯ ಚೀಲಗಳಲ್ಲಿ ಸಕ್ಕರೆಯನ್ನು ತುಂಬಿದರೆ, ಅದು ಅಷ್ಟು ಬೇಗ ಕೆಡುವುದಿಲ್ಲವೆಂದು ಪ್ರಯೋಗಗಳಿಂದ ತಿಳಿದು ಬಂದಿದೆ.

ಗೊಬ್ಬರಗಳು

ಕಬ್ಬಿನ ಬೆಳೆವಣಿಗೆಗಾಗಿ ಫಾಸ್ಫೇಟ್ ಮತ್ತು ಪೊಟಾಸಿಯಮ್ ಗೊಬ್ಬರಗಳಿಗಿಂತ ಸಾರಜನಕಯುಕ್ತ ಗೊಬ್ಬರಗಳು

ಉತ್ತಮವಾದುವುಗಳೆಂದು ತಿಳಿದುಬಂದಿದೆ. ಪೊಟಾಸಿಯಮ್ ಗೊಬ್ಬರಗಳ ಉಪಯೋಗದಿಂದ ಕಬ್ಬಿನ ಬೆಳೆ ಕಡಮೆಬರುತ್ತದೆ. ಸಾರಜನಕಯುಕ್ತ ಗೊಬ್ಬರಗಳಲ್ಲಿ ಅಮೋನಿಯಮ್ ಸಲ್ಫೇಟು ಉತ್ತಮ ತರದ ಗೊಬ್ಬರವಾಗಿದ್ದು, ಅದರ ಜೊತೆಗೆ ಸಾವಯವ (organic) ಗೊಬ್ಬರಗಳನ್ನು ಉದಾಹರಣೆಗಾಗಿ ಎಣ್ಣೆಯ ಹಿಂಡಿ, ಕೊಲದ ಗೊಬ್ಬರಗಳನ್ನು ಬೆರೆಯಿಸಿ ಉಪಯೋಗಿಸಿದಲ್ಲಿ ಉತ್ತಮ ಬೆಳೆ ಬರುತ್ತದೆ. ಎಲ್ಲಕ್ಕೂ ಅಗ್ಗ ಮತ್ತು ಉತ್ತಮವಾದ ಗೊಬ್ಬರ-ವೆಂದರೆ ತೊಪ್ಪಲುಗೊಬ್ಬರ. ಇದನ್ನು ಕಬ್ಬಿನ ಬೆಳವಣಿಗೆಗಾಗಿ ಸಾರಜನಕಯುಕ್ತ ಗೊಬ್ಬರದಂತೆ ಉಪಯೋಗಿಸಬಹುದಾಗಿದೆ.

ರೋಗಗಳು ಮತ್ತು ಕ್ರಿಮಿ-ಕೀಟಗಳು

ನಾನಾತರದ ರೋಗ ಹಾಗೂ ಕ್ರಿಮಿಕೀಟಗಳು ಅಂಟಿಕೊಳ್ಳುವುದರಿಂದ ಕಬ್ಬಿನ ಬೆಳೆ ಕೆಡುವುದಲ್ಲದೆ, ಅದರ ರುಚಿಯು ಕೂಡ ಕೆಟ್ಟುಹೋಗುತ್ತದೆ. ಕಬ್ಬಿನ ಬೆಳೆಗೆ ಅಂಟಿಕೊಳ್ಳುವ ಸಾಮಾನ್ಯ ರೋಗಗಳಲ್ಲಿ ಮೋಸೆಯಿ (Mosaic), ರೆಡ್‌ರಾಟ್ (Redrot) ಫ್ರಂಗಾಲ್ (Fungal) ಮತ್ತು ಬೆಕ್ಟೀರಿಯಲ್ (Bacterial) ಮುಂತಾದವುಗಳು ಮಹತ್ವದುವು. ಉಳಿದ ರೋಗಗಳಿಗಿಂತ ರೆಡ್‌ರಾಟ್ ರೋಗದಿಂದ ಬಹಳ ಅಪಾಯ ಸಂಭವಿಸುತ್ತದೆ. ಈ ರೋಗದ ನಿವಾರಣೆಯ ಸಲುವಾಗಿ ಬೆಳೆಯ ಮೇಲೆ ಗಂಧಕದ ಪುಡಿಯನ್ನು ಉದುರಿಸುತ್ತಾರೆ.

ಸಾಮಾನ್ಯವಾಗಿ ಕ್ರಿಮಿಕೀಟಗಳಲ್ಲಿ ಗೆದ್ದಲು, ಬಿಳಿಯ ನೊಣಗಳು, ಕಬ್ಬು ಸಸಿ ಇರುವಾಗಲೇ ಅದಕ್ಕೆ ಅಂಟಿಕೊಳ್ಳುತ್ತವೆ. ಗೆದ್ದಲು ಹತ್ತದಂತೆ ನೋಡಿಕೊಳ್ಳಲು ಕಬ್ಬಿನ ಬುಡದ ಗಣಿಕೆಗಳ ಮೇಲೆ ಕೋಲ್‌ಟಾರ್ (coal tar) ಹಚ್ಚಬೇಕು. ಇದು ಕಬ್ಬಿನ ಬೆಳೆಯನ್ನು ಗೆದ್ದಲುಗಳಿಂದ ರಕ್ಷಿಸುತ್ತದೆ. ಬಿಳಿಯ ನೊಣಗಳು ಅಂಟಿಕೊಳ್ಳದಂತೆ ನೋಡಿಕೊಳ್ಳಲು Gammexene ಉಪಯೋಗಿಸಬೇಕು. ನೀರು ಹಾಗೂ ಚಿಮಣಿ ಎಣ್ಣೆಯ ಮಿಶ್ರಣದಲ್ಲಿ ಸಾಬೂನು ಕರಗಿಸಿ ಅದರಿಂದ ತಯಾರಾದ ಎಮಲ್‌ಷನ್ (Emulsion) ಕಬ್ಬಿನ ಸಸಿಗಳ ಮೇಲೆ ಸಿಂಪಡಿಸಿದಲ್ಲಿ, ಅವುಗಳಿಗೆ ಅಂಟಿಕೊಂಡ ರೋಗಗಳು ಮತ್ತು ಕ್ರಿಮಿಗಳು ನಾಶವಾಗುತ್ತವೆಂದು ಇತ್ತೀಚಿನ ಪ್ರಯೋಗಗಳಿಂದ ಕಂಡುಬಂದಿದೆ.

ಸಂಜನಿತಗಳು

ಕಾರಖಾನೆಗಳಲ್ಲಿ ಸಕ್ಕರೆಯನ್ನು ಸ್ವಚ್ಛ ಮಾಡುವಾಗ ಸಂಜನಿತವಾಗುವ ವಸ್ತುವೇ ಕಾಕಂಬಿ. ಮೊದಮೊದಲು ಕಾಕಂಬಿಯನ್ನು ಅಗ್ಗವಾದ ಬೆಲೆಯಲ್ಲಿ ಮಾರುತ್ತಿದ್ದರು. ಆದರೆ ಇತ್ತೀಚೆಗೆ ಇದನ್ನು ಹಾರಪೆ, ಇದರಿಂದ ಸುಕ್ರೋಜ್ ಸಕ್ಕರೆ, ಮದ್ಯಸಾರ, ಸಬಲಮದ್ಯಸಾರ, ದನಕರುಗಳ ಆಹಾರ, ಪರಬತು ಮತ್ತು ಗೊಬ್ಬರ ಮುಂತಾದುವುಗಳನ್ನು ತಯಾರಿಸತೊಡಗಿದ್ದಾರೆ. ಪೆಟ್ರೋಲಿನ ಜೊತೆಗೆ ನೇಕಡಾ ೩೦ ರಿಂದ ಸಬಲ ಮದ್ಯಸಾರ ಮಿಶ್ರಮಾಡಿ, ಈ ಮಿಶ್ರಣವನ್ನು ಮೋಟಾರು ಯಂತ್ರಗಳಲ್ಲಿ ಉಪಯೋಗಿಸುತ್ತಾರೆ. ಇನ್ನೂ ಅನೇಕ ಇತರ ಉದ್ಯಮಗಳಲ್ಲಿಯೂ ಇದನ್ನು ಉಪಯೋಗಿಸಬಹುದಾಗಿದೆ. ಅಂತೆಯೇ ಹಿಂದುಸ್ತಾನ್ ಸರಕಾರವು ಕಾಕಂಬಿಯಿಂದ ಸಬಲಮದ್ಯಸಾರವನ್ನು ದೊಡ್ಡ ಪ್ರಮಾಣದ ಮೇಲೆ ತಯಾರಿಸುವ ಯೋಜನೆಯನ್ನು ಕೈಕೊಂಡಿದೆ. ಈ ಯೋಜನೆಯ ಪ್ರಕಾರ ಒಂದು ದಿನಕ್ಕೆ ೩೫೧೦ ಗ್ಯಾಲನ್ನು ಸಬಲಮದ್ಯಸಾರ ತಯಾರಿಸಬಹುದು.

ಇದಲ್ಲದೆ ಜಮಾಯಿಕಾದ ಒಂದು ದೊಡ್ಡ ಕಾರಖಾನೆಯಲ್ಲಿ ಕಾಕಂಬಿಯಿಂದ ಯೀಸ್ಟ್ (Yeast) ತಯಾರಿಸಿ, ಇದರಿಂದ ವರುಷಕ್ಕೆ ೨೧೦೦ ಟನ್ನಿನಷ್ಟು ಕೃತಕ ಮಾಂಸವನ್ನು ತಯಾರಿಸುತ್ತಿದ್ದಾರೆ. ಈ ಮಾಂಸವು ರುಚಿಯಲ್ಲಿ ಸ್ವಾಭಾವಿಕ ಮಾಂಸದಂತೆಯೇ ಆಗಿದ್ದು ಇದರಲ್ಲಿ ಉತ್ತಮ ತರದ ಜೀವಸತ್ವ ಮತ್ತು ಸಾರಜನಕಾಂಶಗಳು ಕೂಡಿಕೊಂಡಿರುತ್ತವೆ.

ಕಾಕಂಬಿ ಮತ್ತು ಸಿಪ್ಪೆಯಿಂದ ಕೂಡಿದ ಹಿಂಡೆಯ ರೂಪದಲ್ಲಿಯ ಮಿಶ್ರಣವು, ದನ-ಕರುಗಳಿಗೆ ಉತ್ತಮವಾದ ಆಹಾರವೆಂದು ಪ್ರಯೋಗಗಳಿಂದ ತಿಳಿದುಬಂದಿದೆ. ಸಾರಜನಕವು ಕಡಮೆ ಪ್ರಮಾಣದಲ್ಲಿದ್ದ ಭೂಮಿಯಲ್ಲಿ ಕಾಕಂಬಿಯನ್ನು ಬೆರಸಿದರೆ ಆ ಭೂಮಿಯ ಸಾರಜನಕಾಂಶವು ಹೆಚ್ಚುತ್ತದೆ. ಇದಲ್ಲದೆ ಕಾಕಂಬಿಯ ಮೇಲೆ Resinification ಕ್ರಿಯೆಯಿಂದ ಪಡಕೆಗಳ ತಯಾರಿಯಲ್ಲಿ ಉಪಯೋಗವಾಗುವ ವಸ್ತುಗಳನ್ನು ತಯಾರಿಸಬಹುದಾಗಿದೆ.

ಇನ್ನು ಸಕ್ಕರೆಯ ಕಾರಖಾನೆಯಲ್ಲಿ ದೊರೆಯುವ ಎರಡನೆಯ ಸಂಜನಿತ ಕಬ್ಬಿನ ಸಿಪ್ಪೆ. ಇದು ನಮ್ಮ ನಾಡಿನಲ್ಲಿ ಸಕ್ಕರೆಯ ಕಾರಖಾನೆಗಳಲ್ಲಿ ಉರುವಲಿನಂತೆ ಉಪಯೋಗಿಸದೆ, ಇದರಿಂದ ದಪ್ಪಗಿನ ಕಾಗದ ಮತ್ತು 'Activated carbou' ತಯಾರಿಸಲು ಪ್ರಾರಂಭಿಸಿದ್ದಾರೆ.

ಮೂರನೆಯ ಸಂಜನಿತ ಪ್ರೆಸ್‌ಮಡ್ (Press mud). ಇದರಿಂದ 'Activated carbon' ತಯಾರಿಸಬಹುದು. ಇದು ಕಬ್ಬಿನ ಸಿಪ್ಪೆಯಿಂದ ತಯಾರಾಗುವ ಇಂಗಾಲಕ್ಕಿಂತ ಅಗ್ಗವಾಗಿದೆ. ಇದಲ್ಲದೆ ಪ್ರೆಸ್‌ಮಡ್ಡಿನಿಂದ ಗಂಧಕಗಳ ನಾಶಿ ಬಣ್ಣವನ್ನು ಕೂಡ ತಯಾರಿಸಬಹುದು. ಈ ರೀತಿ ತಯಾರಾದ ನಾಶಿ ಬಣ್ಣವನ್ನು ಹೇದಿ ಗಂಧಕದ ಜೊತೆಗೆ ಬೆರಸಿದಲ್ಲಿ ಹೆಚ್ಚು ಉಪಯೋಗದಲ್ಲಿರುವ ಖಾಕಿ ಬಣ್ಣವು ತಯಾರಾಗುತ್ತದೆ.

ನಾಲ್ಕನೆಯ ಸಂಜನಿತ ಕಬ್ಬಿನ ಮೇಣ. ಇದು ಕಬ್ಬಿನ ಸಿಪ್ಪೆಯ ಹೊರಗಡೆಯಲ್ಲಿದ್ದು, ಕಬ್ಬುಗಳನ್ನು ಹಿಸುಕುವಾಗ ರಸದ ಸಂಗಡ ಹೊರಟು ಹೋಗುತ್ತದೆ. ಸಾಲ್ವೆಂಟ್ (Solvent) ಎಣ್ಣೆಯಿಂದ ಇದನ್ನು ಬೇರ್ಪಡಿಸಿ, ತೊಗಲು ಮತ್ತು ಪಾಲಿಷ್‌ಗಳ ತಯಾರಿಯಲ್ಲಿ ಉಪಯೋಗಿಸಬಹುದು.

ಒಟ್ಟಿನಲ್ಲಿ ಸಕ್ಕರೆಯನ್ನೇ ಕಚ್ಚಾ ವಸ್ತುವನ್ನಾಗಿಟ್ಟುಕೊಂಡು ಅನೇಕ ಹೊಸ ಉದ್ಯಮಗಳನ್ನು ಸ್ಥಾಪಿಸಬಹುದಾಗಿದೆ. ಸಕ್ಕರೆಯಿಂದ ಮದ್ಯಸಾರ ತಯಾರಿಸಿ, ಇದನ್ನು ಸಾಲ್ವೆಂಟ್‌ನಂತೆ ಉಪಯೋಗಿಸಬಹುದಲ್ಲದೆ, ಇದರಿಂದ Abutanol ಮತ್ತು Acetone ಮುಂತಾದ ಬೆಲೆಬಾಳುವ ವಸ್ತುಗಳನ್ನು ತಯಾರಿಸಬಹುದು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ನಾವು ಅಪೇಕ್ಷಿಸಿದಂತೆ ಜಯಂತಿಯ ಸಪ್ಟಂಬರ್ ಸಂಚಿಕೆಯನ್ನು ವಿಮರ್ಶಿಸಿ ಬೇರೆ ಬೇರೆ ಹತ್ತು ಜನರು ಬರೆಹಗಳನ್ನು ಕಳುಹಿದ್ದಾರೆ. ಅವರ ಅನುಕ್ರಮ ಹೀಗಿದೆ:

೧ ಶ್ರೀ. ಕೆ. ಶ್ರೀನಿವಾಸ ಶರ್ಮ 'ವಿದ್ವಾನ್' ಪಿ. ಟಿ., ಬಿ. ಇ. ಎಂ. ಹೈಸ್ಕೂಲ್, ಕಾಸರಗೋಡು. ೨ ಶ್ರೀ. ಸೀತಾರಾಘವ, ಚಿತ್ರದುರ್ಗ. ೩ ಶ್ರೀ. ವಸಂತ ದೇಸಾಯಿ, ಸಾಧನಕೇರಿ— ಧಾರವಾಡ ೪ ತುಮಕೂರಿನ ಅಂಚೆಯ ಮುದ್ರೆಯಿಂದ ಕೂಡಿದ ಕಟ್ಟೋಲೆಯಲ್ಲಿ, ಹೆಸರಿಲ್ಲದೆ ಒಂದು ವಿಮರ್ಶೆ ಬಂದಿದೆ ೫ ಶ್ರೀ. ಬೋಧರಾಯಾಚಾರ್ಯ ಕಲ್ಲಾಪುರ, ಹೊಳೆಹೊನ್ನೂರು. ೬ ಶ್ರೀ. ಅನಂತ ಬುರ್ಲಿ, ಬಾಗಲಕೋಟೆ. ೭ ಶ್ರೀ. ಎ ಎಚ್. ನಾಗರಾಳ, ಗುಳೇದ ಗುಡ್ಡ. ೮ ಶ್ರೀ. ಪಿ. ಅನಂತರಾಜನ್, ಲಕ್ಷ್ಮೇಶ್ವರ. ೯ ಶ್ರೀ. ಕ ಮ. ಶಿ. ಚಂದ್ರಶೇಖರಯ್ಯ ಬಿ. ಎಸ್‌ಸಿ. ವಿದ್ಯಾರ್ಥಿ, ಬೆಂಗಳೂರು. ೧೦ ಶ್ರೀ. ಡಿ. ಜೆ. ಗುಮಾಸ್ತೆ, ಸೊಲ್ಲಾಪುರ.

ಈ ಸಲದ ವಿಮರ್ಶಾಲೇಖನಗಳನ್ನು ಪರೀಕ್ಷಿಸಿ ನಿರ್ಣಯ ಕೊಟ್ಟವರು. ಶ್ರೀಮಾನ್ ಎನ್. ಎಸ್. ಗದಗಕರ ಬಿ ಎ. ಅಧ್ಯಾಪಕರು ಕರ್ನಾಟಕ ಹೈಸ್ಕೂಲ್ ಧಾರವಾಡ ಅವರು. ಅವರ ನಿರ್ಣಯದಂತೆ **ಶ್ರೀ. ಕೆ. ಶ್ರೀನಿವಾಸ ಶರ್ಮ 'ವಿದ್ವಾನ್'** ಅವರ ವಿಮರ್ಶೆ ಅತ್ಯುತ್ತಮ. ಶ್ರೀ. ಅನಂತ ಬುರ್ಲಿ, ಶ್ರೀ. ಡಿ. ಜೆ. ಗುಮಾಸ್ತೆ, ಶ್ರೀ. ಸೀತಾರಾಘವ ಚಿತ್ರದುರ್ಗ ಅವರ ವಿಮರ್ಶೆಗಳು ಉತ್ತಮ. ಶ್ರೀ. ಪಿ. ಅನಂತರಾಜನ್, ಶ್ರೀ. ಕೆ. ಬೋಧರಾಯಾಚಾರ್ಯ, ಶ್ರೀ. ಕ. ಮ. ಶಿ. ಚಂದ್ರಶೇಖರಯ್ಯ ಇವರವೂ ಚೆನ್ನಾಗಿವೆ. ಮಿಕ್ಕುವು ಸಾಮಾನ್ಯವಾಗಿವೆ.

ಪರೀಕ್ಷಕರು ಒಟ್ಟಿನ ಮೇಲೆ ತಮ್ಮ ಅಭಿಪ್ರಾಯವನ್ನು ಈ ಬಗೆಯಾಗಿ ಕೊಟ್ಟಿದ್ದಾರೆ:

"೧ ಬಹುಶಃ ಹೆಚ್ಚು ವಿಮರ್ಶಕರಿಗೆ ಕಾವ್ಯವಿಭಾಗದಲ್ಲಿಯ 'ಅಂಬಿಕಾತನಯ ದತ್ತ' ಮತ್ತು 'ಆನಂದಕಂದ'ರ ಕವನಗಳು ಒಪ್ಪಿಗೆಯಾಗಿವೆ.

೨ ಗದ್ಯಲೇಖನಗಳಲ್ಲಿ ಕಾಕಾ ಕಾರಖಾನೀಸರ ವ್ಯಕ್ತಿಪರಿಚಯ, 'ತಂಬಿಟ್ಟು' (ಶ್ರಾವಣರೂಪಕ), ಕನ್ನಡ ನಾಟಕದ ಪ್ರಾರಂಭಕಾಲ (ವಿಮರ್ಶಾತ್ಮಕ) ಇವು ವಿಮರ್ಶಕರ ಮನ ಸೆಳೆದಿವೆ.

೩ ನಕಲೀ ನಾರಾಯಣಾಚಾರ್ಯರ 'ನಗೀಗೆ ನೈವೇದ್ಯ' ಇನ್ನೂ ಹೆಚ್ಚು ಸ್ವಾರಸ್ಯಪೂರ್ಣವಾಗಬೇಕೆಂದು ಬಹು ಜನರ ಅಭಿಪ್ರಾಯವಿದೆ.

೪ 'ಕಸೂತಿ ಕಲಿಯಬೇಕೆ?' ಎಂಬ ಲೇಖನದಲ್ಲಿ ರೇಖಾಚಿತ್ರಗಳು ಇದ್ದಲ್ಲಿ ಉಪಯುಕ್ತತೆ ಹೆಚ್ಚುವುದೆಂಬ ಸೂಚನೆ ಬಂದಿದೆ. ಸೂಚನೆ ಸಮಂಜಸವಾಗಿದೆ.

೫ ಹೆಚ್ಚು ವಿಮರ್ಶಕರು ತಮ್ಮ ಅವಸರದ ಸಿದ್ಧಾಂತಗಳನ್ನು ಮುಂಡಿಸುವಲ್ಲಿ ಲಕ್ಷ್ಯಪೂರಯಿಸಿರುವರೇ ವಿನಾ ಸಬಲ ಕಾರಣ ಕೊಟ್ಟು ಪುಷ್ಟೀಕರಿಸಿಲ್ಲ. ಶಬ್ದಪ್ರಯೋಗದಲ್ಲಿಯೂ ಹಲವೆಡೆ ಸಂದಿಗ್ಧತೆ ತಲೆಯೆತ್ತಿದೆ. ಆದರೆ ಸಾಹಿತ್ಯವಿಮರ್ಶಕನಲ್ಲಿ ಆವಶ್ಯಕವಾದ ಸಹಾನುಭೂತಿಯಾಗಲಿ, ಸಹೃದಯತೆಯಾಗಲಿ, ಇಲ್ಲಿಯ ಬಹಳ ಜನ ತರುಣ ವಿಮರ್ಶಕರಲ್ಲಿ ಕಾಣುತ್ತಿರುವುದು ಆನಂದದ ಸಂಗತಿ."

ತುಂಬ ಜಾಗರೂಕತೆಯನ್ನು ವಹಿಸಿ ಪರೀಕ್ಷಿಸಿ ನಿರ್ಣಯ ಕೊಟ್ಟುದಕ್ಕಾಗಿ ಶ್ರೀ. ಎನ್. ಎಸ್. ಗದಗಕರ ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳು. ಮೇಲಾಟದಲ್ಲಿ ಭಾಗವಹಿಸಿದ ವಿಮರ್ಶಕರಿಗೆಲ್ಲ ಧನ್ಯವಾದಗಳು.

ಮುಂದಿನ ತಿಂಗಳ ಮೇಲಾಟಕ್ಕಾಗಿ **'ವಿಮರ್ಶಕನಲ್ಲಿರಬೇಕಾದ ಗುಣಗಳು'** ಎಂಬ ವಿಷಯವನ್ನು ಕುರಿತು ಪ್ರಬಂಧ ಬರೆದು ಕಳುಹಬೇಕು. ಇದು ವಿಮರ್ಶಾಶಿಕ್ಷಣರಂಗದ ಒಂದು ಹೊಸಪಾಠವೆಂದು ಭಾವಿಸಿ, ಹೆಚ್ಚು ಜನ ವಿಮರ್ಶಾರಸಿಕರು ಇದರಲ್ಲಿ ಭಾಗವಹಿಸಬೇಕು.

—ಸಂಪಾದಕರು.

ಸೆಪ್ಟೆಂಬರ ಜಯಂತಿ ಸಂಚಿಕೆ

ಮರ್ಶಕ: **ಶ್ರೀ. ಕೆ. ಶ್ರೀನಿವಾಸ ಶರ್ಮಾ ವಿದ್ವಾನ್**
ಕಾಸರಗೋಡು ದ. ಕ ಜಿಲ್ಲಾ.

ಚಿಕೆಯ **ವಿಮರ್ಶನವೆಂದ**ಬಳಿಕ ಸ್ಥೂಲವಿಚಾರದಲ್ಲಿ ಒಂದು : ಲೇಖನಗಳೆಡೆಯಲ್ಲಿ– ಕಥೆಗಳೆಡೆಯಲ್ಲಿ– ಪ್ರಕಟಣೆಗಳ– ರಾತುಗಳನ್ನಿರಿಸುವುದು **ಅವೆಷ್ಟುಮಾತ್ರಕ್ಕೂ** ಚೆಲುವಲ್ಲ. ರ್ಶಿತವಾದ ಲೇಖನಗತಿಯು ಇವುಗಳೆಡೆಯಲ್ಲಿ ಒಮ್ಮೆ ಹೋಗುವುದೆಂಬುದನ್ನರಿತಿರಬಹುದೆಲ್ಲರೂ. ಇದೊಂದ ನಿಗೆ ನಿಜವಾಗಿ ತೊಡರಾಗಬಹುದೆಂದೆನಿಸುತ್ತದೆ.

ಪಾದಕೀಯ ವಿಭಾಗದ ಮಾತು ನಿಜವಾಗಿ ಸ್ವಾಭ್ಯ- . ಸರ್ವರೂ ಈ ಮಾತನ್ನು ಒಪ್ಪಲೇ ಬೇಕು. ಅದರಲ್ಲೂ ದಕರು– ಇಂದಿನ– ಬಿಕ್ಕಟ್ಟಿನ ಪರಿಸ್ಥಿತಿ, ಸ್ವಾರ್ಥ ಸಾಧಕ ರಿಗಳ ತಿಳಿವಿಲ್ಲದ ಸೂತ್ರಚಾಲನೆ, ಕಾಂಗ್ರೆಸಿಗರ ಸ್ವೈರಾ- ಯಲ್ಲಿ ಬೆಂದು ಬೇಗುದಿಗೊಂಡ ರಾಷ್ಟ್ರದ ದುರಂತಸ್ಥಿತಿ ಈ ನಿರ್ದಾಕ್ಷಿಣ್ಯವಾಗಿ ತಮ್ಮ ಲೇಖನಿಯನ್ನು ಹರಿಯಬಿಟ್ಟಿರು- ಸ್ವಾರ್ಥವೇ ಹಿರಿಗ್ಯೆಯಾಗಿ— ಮೊದಲೇ ರಾಜಕಾರಣ ತ ಸಮಾಜ ಕಾರ್ಯಗಳಲ್ಲಿ ಹಿಂದುಳಿದು ಉದಾಸೀನರಾದ— ರ– ಸ್ವಸಮಾಜ ಹಿತದ ಭಾವನೆಯಿರದ ನಮ್ಮ ಮುಂದಾಳು- ಕರ ಹಸ್ತಗತವಾಗಿ ತೊನೆದಾಡುವ ಈ ಸ್ವಾತಂತ್ರ್ಯವು ನ್ನೀಯುವುದೇ— ಎಂಬುದನ್ನು ಚೆನ್ನಾಗಿ ವಿಶದಗೊಳಿಸಿರು- ಇಂತಹ ಸಂಪಾದಕೀಯವು ಆಗತ್ಯವಿದೆ.

ನ್ನು ಮುಂದೆ ಕೆಲವು ಭಾಗದ ಗುಣದೋಷಗಳನ್ನು ವಿಶದಿಸುತ್ತ ಲನೆಯದಾಗಿ "ನಗೀಗೆ ನೇವೀದ್ಯ" ಎಂಬ ಕುರಿತು ಒಂದೆ- ಮಾತುಗಳನ್ನಾಡುವೆ. ತಮ್ಮ ಬೆಲೆಯೇರಿದ ಈ ಪತ್ರಿಕೆಯ ಗದಲ್ಲಿ, ನಿಜವಾಗಿ ನಗುವೆಬ್ಬಿಸದ ಈ ತೆರನ ನಗುಗಳಿಂದ ಉಪಯೋಗವಿಲ್ಲವೆಂದು ಹೇಳುತ್ತೇನೆ. **ಚರ್ವಿತಚರ್ವಣ**, ನಗುವೇಳದ ಮಾತುಗಳೇ ಇವುಗಳಲ್ಲಿ ಕಾಣುತ್ತಿರುವುದು ದದ ಮಾತು. ಈ ಭಾಗವು ಇಲ್ಲದಿದ್ದುದರಿಂದ, ಕಳೆದ ಸಂಚಿಕೆಯೇನಾದರೂ ಕಳೆಗೆಟ್ಟಿಲ್ಲವೆಂದು ಹೇಳಬಲ್ಲೆ. ಸು ಸೆಟ್ಟರ ಮತ್ತು ರಖವಾಲದಾರನ ಮಾತುಕತೆಗಳಲ್ಲಿ ನಾವು ಪ ನಗುವೇನಾದರೂ ಇದ್ದರೆ ಅದು ಚರ್ವಿತಚರ್ವಣವು.

ನ್ನೊಂದು **ವಿಚಾರ** "ಚೆಲುವೆಯ ಚೆಲುವಿಕೆ" ಯಲ್ಲಿ ನದ ಹಿರಿಮೆಯನ್ನು ಲೆಕ್ಕಿಸದ, ಮಗುವಿನ—ಬಾಳದೀವಿ- —ಕೂಗಿಗೆ ಮನವೀಯದ ಆ ಹೆಣ್ಣು ಅವಳಾರು ಗರತಿಯೆ? ಮಗುವಿನ ಜೊಲ್ಲುಮೊಗವನ್ನು ಹೇಯವೆಂದೆಣಿಸುವ ಆ ನದ ಬಗ್ಗೆ ನಿಜವಾಗಿ ನಾಚಿಕೆಯಾಗುತ್ತದೆ. ಇದು ಸರಿ- ತಾಯ್ತನದ ಗುರುತಲ್ಲ. "ಚೆಲುವೆಯ ಚೆಲುವಿಕೆ ಕಂದಿ ಹೋಯಿತೆ"ನ್ನುವಾಗ, ನಿಜವಾಗಿ ಹೃದಯದ ಮಾತು ಅಲ್ಲಿ ಬರುವುದೇ ಇಲ್ಲ.

ಮೆಚ್ಚುಗೆಗೆ ಪಾತ್ರವಾದ ಒಂದು ಕತೆಯೆಂದರೆ "ಹೊಸ ನೋಟ". ಅಹಿಂಸಾ ಮನೋಭಾವನೆಯು ಹಿಂಸೆಯ ಕ್ರೌರ್ಯ- ವನ್ನು ಸಹಿಸದಾಯಿತು. ಅಂದಿನ ವರೆಗೆ ಅಹಿಂಸಾ ಶಸ್ತ್ರವನ್ನು ಸಮೆಯುತ್ತಿದ್ದ ಡಾ. ಬರುವಾ ಅವರು, ತನ್ನ ಪ್ರಿಯ ಕುಟುಂಬಕ್ಕೆ ಒದಗಿದ ಭೀಕರ ಪರಿಸ್ಥಿತಿಯಲ್ಲಿ ತಡೆಯಲಾರದವರಾಗಿ, ಹಿಂಸಾ ಮನೋಭಾವನೆಗೆ ಗುರಿಯಾದರು. ಕುದಿದರು. ಪರಿಸ್ಥಿತಿ ಅನು- ಕೂಲವಾಗಿ ಬಂದಾಗ, ವಿಷ ತುಂಬಿದ ಸೂಜಿಯನ್ನು ಚುಚ್ಚಬಂದ- ವರು, ತನ್ನಂತೆಯೆ ಹಿಂಸೆಗೆ ಸಿಲುಕಿ ತಪಿಸಿ– ಆತ್ಮಹತ್ಯೆಗೆ ತೊಡಗಿ ನಿಷ್ಫಲನಾದ ಒರ್ವ ಮುಸಲೀಂ ಬಂಧುವಿನ ಕುಟುಂಬದ ಪರಿಸ್ಥಿತಿಯ ದುರಂತಚಿತ್ರವನ್ನು ನೆನೆದು, ಕಕ್ಕಾಬಿಕ್ಕಿಯಾಗಿ ಅರಚಾಡಿದರು. ಇಲ್ಲಿಂದ ಹಿಂಸಾಬುದ್ಧಿಯು ತೊಲಗಿತು. ಸಮಾಜ- ಗಳು ಒಂದಕ್ಕಿಂತ ಒಂದೊಂದು ಕಡಿಮೆಯಿಲ್ಲ; ಸಮಾನ ತುಲೆ- ಯಲ್ಲಿದೆ—ಎಂಬ ಭಾವ ಮೂಡಿದಾಗ ನಿರುತ್ತರರಾದರು. ಲೇಖಕರು, ಡಾ. ಬರುವಾರ ಆಗಮನದ ಬಳಿಕ, ಹಳೆಯ ರೋಗಿಯ ಕುಶಲ- ದಿಂದಾರಂಭಿಸಿ, ಅವರೊಳಗಿನ ಮೈತ್ರಿ– ಸಂಭಾಷಣೆ– ರಾಜಕೀಯ ಚರ್ಚೆಗಳು - ಪರಸ್ಪರ ಕಲಹ– ಇವುಗಳನ್ನು ಉತ್ತಮ ರೀತಿಯಲ್ಲಿ ಉದಾತ್ತ ರೀತಿಯಲ್ಲಿ ಬೆಳಸುತ್ತ, ನಿಜವಾದ ಮಾನವನ ಚಿತ್ರ- ವನ್ನು ಕಣ್ಣಲ್ಲಿ ಮೂಡಿಸಿರುತ್ತಾರೆ. "ಪರಕೀಯ ಸಂಬಂಧ ವಿಚಾರಧರ್ಮವು ತನ್ನದಾಗುವಾಗ ಅಹಿಂಸೆಯು ಹಿಂಸೆಯ ನೆಲೆಯಾಯಿತು. ಆದರೆ– ಅದುವೆ ಹಿಂಸೆಯು ಸಮಾನನಾದವ- ನೊಬ್ಬನನ್ನು ದುರಂತಕ್ಕೀಡುಮಾಡಿದಾಗ ಮಾತ್ರ ಕಣ್ಣು ತೆರೆ- ಯಿತು." "ಚೆನ್ನಾದ ಮೇಕೆ ಸಿಕ್ಕಿದೆ. ಈ ಹಾವು ಕಚ್ಚದಿದ್ದ- ರೇನಾಯಿತು; ಕಚ್ಚಿದ್ದು ಹಾವೇ ಅಲ್ಲವೇ?" ಈ ಮಾತುಗಳನ್ನು ಆಡಿದ ಬರುವಾರವರು, ಕೊನೆಗೆ "ಅಹಿಂಸಾ ಜಿಂದಾಬಾದ್" ಎನ್ನುವಾಗ, ಲೇಖಕರ ಎತ್ತಿದ ಕೈ–ನಾಗಿನ ಕೈ ಧನ್ಯವಾಯಿತೆಂದೇ ನನ್ನ ಮತವು".

ಕನ್ನಡ ನಾಟಕದ ಪ್ರಾರಂಭಕಾಲ— ಇದು ವಿಮರ್ಶಾತ್ಮಕ ವಿಚಾರಗಳುಳ್ಳ ಕನ್ನಡನಾಡಿನ ಸುಪ್ರಸಿದ್ಧ ವಿಮರ್ಶಕರ ವಿಮರ್ಶೆ- ಗಳನ್ನುಂಡ ವಾಚಕರಿಗೆ ಹೊಸತಲ್ಲ. ಆದರೂ ಲೇಖಕರು ಸೂಕ್ಷ್ಮ- ವಾಗಿ ಕೆಲವು ಅಂಶಗಳನ್ನು ಶೋಧಿಸಿದ್ದಾರೆ. 'ನಾಟ್ಯ' ಭಾಗದ ವಿಚಾರವು ಮಾತ್ರ ಪ್ರಾಕ್ತನ ಗ್ರಂಥಗಳಿಂದ ಸಿಗುವುದಲ್ಲವೆ, ನಾಟಕ- ಗಳೂ ಒಂದೇ ಎಂಬುದು ನಿರ್ಣಯವಾಗಿರುತ್ತದೆ.

ತಂಬಿಟ್ಟು — ಈ ಶ್ರಾವಣ ರೂಪಕವು ಬಹುನೂತ್ನವಾಗಿದೆ. ಶ್ರಾವಣಮಾಸದ ಸಂತಸದಿನಗಳನ್ನು ಇಷ್ಟೊಂದು ಮನಮೋಹಕ ವಾಗಿ ಜಾನಪದ ಗೀತಗಳಿಂದ, ಹಳ್ಳಿಯ ಜೀವನದ ಒಳದನಿಗಳಿಂದ ಲೇಖಕರು ಎತ್ತಿ ತೋರಿರುವುದು ಸ್ತುತ್ಯವಾಗಿದೆ. ಶ್ರಾವಣಮಾಸದ ಉದ್ದೇಶವನ್ನು "ನಿವೇದಕ" ನ ಬಾಯಿಂದ ಹೊರಡಿಸಿ, "ಪಂಚಮಿ ಬಂತೌ ಸನಿಯಾಕಾ– ಸನಿಯಾಕಾ; ಅಣ್ಣ ಬರಲಿಲ್ಲ ಕರಿಯಾಕಾ! ...."ಎಂದೆನ್ನುವಾಗ, ಆ ಅತ್ತೆಮನೆ ಸೇರಿದ ಹೆಣ್ಣು– ಜೀವನದ ಚಿತ್ರವು ರೂಪುಗಟ್ಟಿ ನಿಲ್ಲುತ್ತದೆ. "ಅರಳಿಟ್ಟು ತಂಬಿಟ್ಟು

ತಿನ್ನುವರು''. ತಂಬಿಟ್ಟೆಂದರೆ ಬಹು ಮುದ್ದು ಹೆಸರು. ದಕ್ಷಿಣ ಕನ್ನಡ ಜಿಲ್ಲೆಗೆ ಇದು ಅಪರೂಪದ ಶಬ್ದವಾದರೂ— ಈ ಜಿಲ್ಲೆಯವರಾದರೂ ಮರುಳಾಗಬೇಕಾದ ಸಿಹಿಯ ತಿಂಡಿ—ಅಲ್ಲಲ್ಲ ಶಬ್ದ. ಹೀಗೆ ನಿವೇದಕನ ಮಾತಿನಿಂದ ತೊಡಗಿದ ಶ್ರಾವಣನ ಗತಿಯು, "ಪುಟ್ಟಿ—ರಂಗೂ" ಅವರ ಒಲುಮೆಯು— ಭಾವಪೂರ್ಣ—ನಿಷ್ಕಳಂಕ— ಬಾಲ್ಯ ಜೀವನದ ನುಡಿಗಳಲ್ಲಿ ಕಳೆಯೇರುತ್ತದೆ. "ತಂಬಿಟ್ಟ"ನ ರುಚಿ ಅಲ್ಲಿದೆ. ತಾಯಿಯ "ಭಾಗ್ಯದಾ ಲಕ್ಷ್ಮಿ"ಅನ್ನುವಾಗಲೇ ತಂಬಿಟ್ಟು ಗಮಗಮಿಸುವುದಿದ್ದರೆ, ಸಹೋದರ—ಸಹೋದರಿಯರ "ಪಾಟಿಯ" ಕುರಿತಾಗಿ ನಡೆದ ಕಚ್ಚಾಟದ ರಗಳೆಯು "ಹಬ್ಬದ ದಿನ—ಬೈಬಾರದು—ಬೈಸಿಕೊಳ್ಳಬಾರದು" ಎಂಬ ಮಾತಿನಲ್ಲಿ ಪಾಕವಾಗುತ್ತದೆ. ಅಲ್ಲಿ ತಾಯಿ-ಮಕ್ಕಳ ಸಂವಾದವು, ನಿಜವಾದ ಎಳೆಯನ ಜೀವನವನ್ನು ನೆನಪಿಗೆ ತರುತ್ತದೆ. ಅಲ್ಲಿಯ ಮಾತುಗಳನ್ನು ಒಂದೊಂದಾಗಿ ಹೇಳುವುದರ ಅವಶ್ಯಕತೆಯಿಲ್ಲ. ಪ್ರತಿಯೊಂದೂ ಸಹಜ ನುಡಿಗಳು. ನಾಗಪ್ಪನ ಮೊದಲು ತಿಂಡಿ ತಿಂದರೆ ಕಜ್ಜಿ—ರೋಗ ಬರುವುದೆಂದಾಗ, ಮುಲಾಮಿನ ವಿಚಾರ— ಅಲ್ಲಿಂದ ತಾಯಿಯ ಗದರಿಕೆ "ಬಕಾಸುರಾ'' ಎಂದು. ಅಷ್ಟೂ ಒಪ್ಪುವ ಮಾತುಗಳವು. ಪ್ರತ್ಯಕ್ಷವಾಗಿ ಈ ರೂಪಕವು ಕಳೆ ಬೀರಿದಾಗ ಆಗಬಹುದಾದ ಸಂತಸದ ಎಣಿಕೆಯನ್ನು "ಬಾನುಲಿಯಲ್ಲಿ ಬಿತ್ತರಗೊಂಡು ಆಡಿದುದು" ಎಂದಾಗಲೇ ಎಣಿಸಬಹುದು. ಇಂತಹ ರೂಪಕಗಳು ಹಳ್ಳಿಯ ಜೀವನದ ಮಾರ್ಮಿಕ ಚಿತ್ರಗಳು ಮೂಡಿಬಂದರೆ, ನಿಜವಾಗಿ ಸಾಹಿತ್ಯವು ಸರ್ವತೋಮುಖವಾಗಿ ಬೆಳೆಯುವುದು ಎಂದಿಷ್ಟೇ ನನ್ನ ಮತವು.

ಇನ್ನಿದರಲ್ಲಿ ಕಾಣುವುದು ವ್ಯಕ್ತಿಪರಿಚಯದ ಚಿತ್ರವೊಂದು. ಈ ಕುರಿತು ಬರೆಯತಕ್ಕ ಮಾತೇನೂ ಇಲ್ಲ. ಮಹಾತ್ಮರೊಬ್ಬರ ಜೀವನವು ಸಂಸ್ಕೃತ ಶೈಲಿಯಿಂದ ರೂಪಿತವಾಗಿದೆ — ಮಹಾತ್ಮರ ಆದರ್ಶ ಜೀವನತತ್ತ್ವಗಳನ್ನು ಸಾರಲು ಈ ವ್ಯಕ್ತಿ ಪರಿಚಯಾತ್ಮಕ ಲೇಖನವು ತುಂಬಾ ಸಹಕಾರಿಯಾಗಿದೆಯೆಂದು ಹೇಳಬಹುದು. "ಕಸೂತಿ ಕಲಿಯಬೇಕೆ" ಎಂಬ ಭಾಗದಲ್ಲಿದ್ದ ಸಂಪಾದಕರ ಮಾತಿನಂತೆ "ನೂಲಿನ ಸೌಂದರ್ಯವನ್ನು ಸಾಧಿಸಲು ಕಲಿತ ಗರತಿ ಬಾಳಿನ ಸೌಂದರ್ಯದ ಸಾಧಕಿಯಾಗದಿರಳು" ಎಂಬುದೇ ನನಗೂ ನ್ಯಾಯ್ಯವೆನಿಸುತ್ತದೆ. ಈ ವಿಭಾಗದಲ್ಲಿ ಕಸೂತಿಯ ಶಿಕ್ಷಣವನ್ನು ತಿಳಿಯಾದ ಶೈಲಿಯಿಂದ ವ್ಯಕ್ತವಾಗಿ ಲೇಖಕಿಯರು ಸೂಚಿಸಿರುತ್ತಾರೆ. ಇದು ಮಹಿಳೆಯರಿಗೊಂದು ಹೆಮ್ಮೆಯ ಹಾಗೂ ಜೀವನದ ಕಸುಬಿನ ತತ್ತ್ವ. "ನೂಲಿನ ತೊಡಕಿನಂತೆ ಬಾಳಿನ ತೊಡಕಿದೆ" ಎಂಬ ತತ್ತ್ವದಂತೆ— ಈ ಪಂಕ್ತಿಯ ವಿಚಾರವೂ ಪತ್ರಿಕೆಗೊಂದು ಪ್ರಧಾನ ಅಂಗವಾಗಿದೆ. ಉತ್ತಮವಾದ "ರೇಖಾ ಚಿತ್ರಗಳನ್ನೂ" ಇದರೊಂದಿಗೆನೇ ತುಸು ತುಸುವಾಗ— ಒಂದೊಂದಾಗಿ—ಕಾಣಿಸಿದರೆ, ಇನ್ನಷ್ಟು ಚೆನ್ನಾಗದೇ? ಆಗಬಹುದು!

"ಜೀವನಶಿಕ್ಷಣದ ಹಿನ್ನೆಲೆ"— ಎಂಬೀ ಭಾಗವನ್ನು ಓದುವಾಗ ನನಗೆ ಮೊದಲು ತೋರಿದ ಚಿತ್ರವು ಕೊನೆಯವರೆ[ಗೂ] ಉಳಿಯದೆ, ಅದೊಂದು ತೆರನಾದ ವಿಚಾರಕ್ರಾಂತಿಯಲ್ಲಿ ಕಾ[ಣಿ]ಸಿತು. "ಹಳೆಯ ಶಿಕ್ಷಣ"ವೆನ್ನುವಾಗ ನನಗೆ ತೋರಿದ ಭಾವ[ನೆ] ಓದುವಾಗ ಅಲ್ಲವೆಂದಾಯಿತು. ಹಳೆಯ ಶಿಕ್ಷಣದ ದೋಷವನ್ನ[ು] ಎತ್ತಿಕೊಂಡು ದೂಷಿಸುವುದಕ್ಕಿಂತ— ಅವರು ಯುಕ್ತಿಯಿ[ಂದ] ಆ ವಿದ್ಯೆಯನ್ನು ನಮ್ಮ ದೇಶದಲ್ಲಿ ಹಚ್ಚಿದ ಭಾಗವನ್ನು ಹೊಗ[ಳು]ವುದು ಲೇಸು. ಲೇಖಕರು ಬರೆದಂತೆ—"ಶಾರೀರಿಕ, ಬೌದ್ಧ[ಿಕ] ಆಧ್ಯಾತ್ಮಿಕ" ಈ ವಿಭಾಗದಲ್ಲಿ ಕಾಣಬಂದ ಕೊರತೆಗೆ ನ[ಮ್ಮ] ಜನತೆಯೂ ಕಾರಣವಾಗಿದೆ; ಹಳೆಯ ಶಿಕ್ಷಣವೇ ಅ[...] ಎಂ[ಬು]ದನ್ನೂ—"ಶಿಸ್ತು, ಕ್ರಮ, ಶಾರೀರಿಕ ಬಲ" ಇವನ್ನು ಶಿಕ್ಷಣವೇ ನೀಡಿರುತ್ತದೆಯೆಂಬುದನ್ನೂ ತಿಳಿಯಬಹುದಿತ್ತು. ಕಾ[...] ದೇಶಗಳಿಗನುಸಾರವಾಗಿ ವ್ಯಕ್ತಿಯ ಶಿಕ್ಷಣವು ಆಗಬೇಕೆ[ಂಬು]ದನ್ನು ಲೇಖಕರು ಉತ್ತಮ ರೀತಿಯಲ್ಲಿ ಚರ್ಚಿಸಿ ಸಿದ್ಧ[...] ಮಾಡಿರುತ್ತಾರೆ. ಅಂತೂ ಈ ಪ್ರಬಂಧವು ವಿಚಾರಭ[...]ವಾಗಿದೆ.

ಇನ್ನು ಮುಂದೆ 'ಕವಿತೆ'ಗಳ ಕುರಿತು ಒಂದೆರಡೇ ಮಾ[ತು]. "ಸ್ವಾತಂತ್ರ್ಯದ ಹುಟ್ಟುಹಬ್ಬ", "ಇದೊ ಶ್ರಾವಣ ಬಂದಿ[ದೆ]" ಇವೆರಡು ಕವಿತೆಗಳು ಹೃದಯಪೂರ್ಣವಾಗಿ ಹರಿಯುತ್ತ[ವೆ]. ವಿಶಾಲವಾಗಿ—ಆಳವಾಗಿ ವಿಮರ್ಶಿಸಲು ಎಡೆಯಿಲ್ಲವಾದರೂ "ಭಾರತದ ಸ್ವಾತಂತ್ರ್ಯದ ಹುಟ್ಟುಹಬ್ಬದಂದು" ಬಿತ್ತರಗೊ[ಂಡ] ಈ ಎರಡು ಹಾಡುಗಳು, ನಾಡಿನ ಸ್ವಾತಂತ್ರ್ಯದ ರಸವನ್ನು [ಉಣಿ]ಸುತ್ತವೆ. ಒಂದು ಆಹ್ವಾನ! "ಇದೊ ಶ್ರಾವಣ ಬಂ[ದಿದೆ] ಭೂವನಕೆ" ಎಂಬುದಾಗಿ—ಶ್ರಾವಣದ ಕಥನದಿಂದಲೇ—ಸ್ವಾ[ತಂ]ತ್ರ್ಯದ ಕರೆಯನ್ನು ಅನ್ಯೋಕ್ತಿಯಿಂದ ಕರೆದ ಗಾನ. [...]ಯೊಂದು ಭಾಗವನ್ನೂ ಜಾಗರೂಕತೆಯಿಂದ ಜೋಡಿಸಿದ್ದಾ[ರೆ]. ಇನ್ನೊಂದು ಉಜ್ವಲಗೀತ. "ಅಂಬಿಕಾತನಯದತ್ತ[ರ] ಹಾಡೆಂದರೆ ಅದು ಕರ್ನಾಟಕ್ಕೆ ವಿದಿತವಾಗಿದೆ. "ಅದರ ಪ[...] ಗೆಜ್ಜೆ ಬೇಕೆ, ಅದಕೆ ಬೇರೆ ರಾಗಬೇಕೆ" ಎಂಬುದಾಗಿ ಅಲೆಯ[...]ಯಂತೆ ಸಾಗಿದ ಕೈ-ನೀಡಿದ ಮನಸ್ಸು— 'ನುಗ್ಗಿರಣ್ಣ ರ[...] ಕಣಕೆ—ಅಸುರರಿಂದ ಬಿಡಿಸಿರಿ ತಾಯ ಸೆರೆಯ, ಎಲ್ಲರಿಂದ ಗೆಲ[...] ಗುಡಿ ಹಿಡಿಸಿರಿ" ಎಂದು ಆವೇಶಭರಿತರಾಗಿ ಮುನ್ನುಗ್ಗಿದ್ದಾ[ರೆ]. ಉಳಿದ ಕವಿತೆಗಳು ಸರ್ವಸಾಧಾರಣ ವಿಷಯಗಳು.— ದೋ[ಷ]ರಹಿತವಾಗಿವೆ.

'ಧಾರವಾಡದಿಂದ ಉತ್ತರಕ್ಕೆ"— ಎಂಬ ದಿನಚರಿ ಓಲೆಯಲ್ಲಿ ಲೇಖಕರು ಕನ್ನಡ ನಾಡಿನ ಸಂಪತ್ತನ್ನು ವಿವರಿಸಿದ[ುದ]ಲ್ಲದೆ— "ಗುಜರಾತದಂತೆ ಕರ್ನಾಟಕವು ವ್ಯವಸಾಯದಲ್ಲಿ ಮುಂದುವರಿದಿಲ್ಲ" ಎಂಬುದನ್ನು ಪ್ರಶ್ನರೂಪವಾಗಿಯೆ ಕೇಳಿ[ದ]ವಂತಿದೆ. ಅಂತೂ ಈ ಬರೆಹದಲ್ಲಿ ಒಂದು ನಾಡಿನ ಸ್ಥಿತಿಗತಿಗಳ[ನ್ನು] ಚೆನ್ನಾಗಿ ನಿರೂಪಿಸಿರುತ್ತಾರೆ. ಇದೊಂದು ಪ್ರವಾಸದ ದಿನಚ[ರಿ].

(೩೨೯ ನೆಯ ಪುಟ ನೋಡಿರಿ)

ಆಹಾರ ವಿಜ್ಞಾನಸಾರ

ಬರೆದವರು : ಶ್ರೀ. ಎನ್. ಬಿ. ನಾಡಗೀರ ಬಿ. ಎ. (ಆನರ್ಸ್). ...ನಾಡದ ಮಿಂಚಿನಬಳ್ಳಿಯ ಪ್ರಕಾಶನ.

...ಷ್ಟಿದ ಪ್ರತಿಯೊಬ್ಬ ಮಾನವನಿಗೂ ತಾನು ಬಹುಕಾಲ ...ಬೇಕೆಂಬ ಅಪೇಕ್ಷೆ ಇದ್ದೇ ಇರುತ್ತದೆ. ಬಹುಕಾಲ ಬಾಳ...ಬೇಕಾದರೆ ಅವನ ದೇಹಯಂತ್ರ ಅಚ್ಚುಕಟ್ಟಾಗಿಯೂ ಗಟ್ಟಿ...ಟ್ಟಾಗಿಯೂ ಇರಬೇಕಾಗುತ್ತದೆ. ಅದಕ್ಕಾಗಿ ದೇಹಯಂತ್ರವು ...ತಿಗೊಳ್ಳದಂತೆ ದೇಶ-ಕಾಲೋಚಿತವಾದ ಪೌಷ್ಟಿಕವಾದ ಹಿತ...ವ ಮಿತವಾದ ಆಹಾರವನ್ನು ಅದಕ್ಕೆ ಒದಗಿಸಬೇಕಾಗುತ್ತದೆ. ...ನಮ್ಮಲ್ಲಿ ಬಹುಜನರು ಬಹುಕಾಲ ಬಾಳಲು ಬಯಸುತ್ತಿದ್ದರೂ, ...ನ ಕಡೆಗೆ ಲಕ್ಷ್ಯ ಹರಿಸದೆ ಬಾಯ ಸವಿಯ ಕಡೆಗೇ ಹೆಚ್ಚು ...ಕೊಟ್ಟು ಆಹಾರಗಳನ್ನು ಸೇವಿಸುತ್ತಲಿರುವರು. ಹಗಲಿರುಳು ...ಯುವ ಬಡವರ ಆಹಾರದಲ್ಲಿ ದೇಹಪೋಷಕ ಜೀವಸತ್ತ್ವಗಳ ...ಹ ಸಾಕಷ್ಟಿರುವುದಿಲ್ಲ. ದುಡಿಯದೆ ಅಲಸಿಕೆಯಲ್ಲಿ ...ನೂಕುವ ಸಿರಿವಂತರು ಬಾಯರುಚಿಗಾಗಿ ಬೇಕಾದುದನ್ನೆಲ್ಲ ...ದೊಳಗೆ ತುಂಬುತ್ತಿರುತ್ತಾರೆ. ಈ ಬಗೆಯ ಆಹಾರಕ್ರಮ...ನಮ್ಮ ಭಾರತದ ಜನತೆಯಲ್ಲಿ ಆರೋಗ್ಯಶಾಲಿಗಳ ಸಂಖ್ಯೆಯು ...ಮೆಯಾಗುತ್ತ ನಡೆದಿದೆ. ದೇಶದ ಅಭ್ಯುದಯದ ದೃಷ್ಟಿಯಿಂದ ...ತುಂಬ ಅನಿಷ್ಟವಾದ ಸಂಗತಿ. ಆದುದರಿಂದ ಪ್ರತಿಯೊಬ್ಬನೂ ...ಮ ಸೇವಿಸುವ ಆಹಾರದ ಕಡೆಗೆ ವೈಜ್ಞಾನಿಕದೃಷ್ಟಿಯನ್ನಿ...ವುದು ಅತ್ಯಗತ್ಯದ ಸಂಗತಿಯಾಗಿದೆ.

...ಈ ಆಹಾರವಿಜ್ಞಾನವನ್ನು ಜನರಿಗೆ ತಿಳಿಸಿಕೊಡಲೆಂದು ಕನ್ನಡ... ಈ ಮೊದಲೇ ೩-೪ ಪುಸ್ತಕಗಳು ಪ್ರಕಟವಾಗಿವೆ. ಈಗ ...ಮಾನ್ ಎನ್. ಬಿ. ನಾಡಗೀರರು ತಮ್ಮ ಅಭ್ಯಾಸ ಅನುಭವ...ನಗಳ ಫಲವಾಗಿ ಮತ್ತೊಂದು ಒಳ್ಳೆಯ ಪುಸ್ತಕವನ್ನು ...ಡಿಗರಿಗಾಗಿ ಒದಗಿಸಿಕೊಟ್ಟುದು ತುಂಬ ಸಂತೋಷದ ...ಗತಿಯಾಗಿದೆ.

...ಪ್ರಿ. ಅ. ೧೧೦ ಪುಟಗಳ ಈ ಗ್ರಂಥ ೧೪ ವಿಷಯವಿಭಾಗಗಳಿಂ... ೨ ಉಪಯುಕ್ತ ಪರಿಶಿಷ್ಟಭಾಗಗಳಿಂದಲೂ ಕೂಡಿದೆ. ಮೊದಲಿ...ನೆರಡು ಪ್ರಕರಣಗಳು ಆಹಾರವಿಜ್ಞಾನದ ಮಹತ್ತ್ವ, ಆಹಾರದ ಘಟಕ, ಅವುಗಳ ಕಾರ್ಯ— ಇವುಗಳ ವಿವರಣೆಯಿಂದ ಕೂಡಿದ್ದು ಮುಂದೆ ಕ್ರಮವಾಗಿ ಆಹಾರಘಟಕಗಳಾದ ಪಿಷ್ಟ, ಕೊಬ್ಬು, ಪ್ರೋಟೀನ್, ಖನಿಜಪದಾರ್ಥ, ಜೀವಸತ್ತ್ವ ಇವುಗಳನ್ನೆಲ್ಲ ಒಂದೊಂದು ವಿಭಾಗದಲ್ಲಿ ತಿಳುಹಿಕೊಟ್ಟಿರುವರು. ಮುಂದೆ ಸಮತೋಲ ಆಹಾರದ ಅವಶ್ಯಕತೆಯನ್ನು ಒಂದು ವಿಭಾಗದಲ್ಲಿ ಹೇಳಿ, ಮುಂದೆ ಖಾದ್ಯಪೇಯ ಆಹಾರಗಳನ್ನು ಕುರಿತು ಚರ್ಚಿಸಿರುವರು. ಕೊನೆಯ ಮೂರು ಪ್ರಕರಣಗಳಲ್ಲಿ ಕ್ರಮವಾಗಿ 'ಆಹಾರಸಮಸ್ಯೆ— ಭೂಮಿಯ ಪ್ರಮಾಣ— ಜನಸಂಖ್ಯೆ' 'ಆಹಾರಸಮಸ್ಯೆಯೂ ಕೆಲವು ಪರಿಹಾರೋಪಾಯಗಳೂ' 'ಆಹಾರಪದ್ಧತಿಯ ಸುಧಾರಣೆಯೂ ಸಾರ್ವಜನಿಕ ಆರೋಗ್ಯವೂ' ಎಂಬ ವಿಷಯವನ್ನು ಸರಳವಾಗಿ ತಿಳುಹಿರುವರು. ಪರಿಶಿಷ್ಟಗಳಾಗಿ ಕೊಟ್ಟಿರುವ ಆಹಾರಗಳ ಗುಣಾಂಶಗಳ ಪಟ್ಟಿ, ಆಯುರ್ವೇದವೂ ಆಹಾರವಿಜ್ಞಾನವೂ ಎಂಬ ವಿಷಯಗಳು ಉಪಯುಕ್ತವಾಗಿವೆ.

ಓದು-ಬರೆಹಬಲ್ಲವರೆಲ್ಲ ಓದಬೇಕಾದ ಉಪಯುಕ್ತ ಪುಸ್ತಕವಿದು. ಪ್ರಾಥಮಿಕ ಶಾಲೆಯ ಮೇಲಿನ ತರಗತಿಗಳಿಗೆ ಇದನ್ನು ಅಭ್ಯಾಸಪುಸ್ತಕವನ್ನಾಗಿಯೂ ಇರಿಸಬಹುದು.

— ವಿ. ಪಿ. ಎನ್. ರಾವ್

(ಹಿಂದಿನ ಪುಟದಿಂದ ಮುಂದುವರಿದುದು)

ಸಾಮಾನ್ಯವಾದ ಓಲೆ ಮಾತ್ರ. ಬರೆಯತಕ್ಕ ವಿಶೇಷವಾದ ಮಾತೇನೂ ಇಲ್ಲ.

ಇನ್ನು ಸಮಷ್ಟಿಯಿಂದ ಒಂದು ಮಾತು. ಲೇಖನಗಳ ಆರಂಭದಲ್ಲಿ, ಸಂಪಾದಕರು ತಮ್ಮ ಅಭಿಪ್ರಾಯವನ್ನು ಅಗ್ರಭಾಗದಲ್ಲೇ ಇತ್ತು ಸಹಕರಿಸುವುದು ಉತ್ತಮವಾಗಿದೆ. ಇದರಿಂದ ವಿಚಾರವನ್ನು ಮುಂದಾಗಿ ತಿಳಿದು, ಲೇಖನವನ್ನು ಓದಿ ಮತ್ತೊಮ್ಮೆ ವಿಚಾರಿಸಲು ಆಸ್ಪದವಾಗುತ್ತದೆ.

'ಜಯಂತಿ'ಯ ಮೇಲ್ಮೆಯನ್ನು ಹೊಂದಿಕೊಂಡು "ವಿಮರ್ಶೆಯ ಶಿಕ್ಷಣರಂಗವನ್ನು ತೆರೆದು, ಆ ಮೂಲಕ ನಾಡ-ಕನ್ನಡಿಗರನ್ನು ಸಂಸ್ಕೃತಿಯ ಶಿಕ್ಷಣದ ಕಡೆಗೆ ಆಹ್ವಾನಿಸುವುದು ಸ್ತುತ್ಯವಾಗಿದೆ.

ಅಂತೂ ಪತ್ರಿಕೆಯು ಸರ್ವಾಂಗ ಸುಂದರವಾಗಬೇಕಾದರೆ— ಕೆಲವೊಂದು ಮೇಲೆ ಹೇಳಿದ ದೋಷಗಳಿಂದ ಬಿಡುಗಡೆಯಾಗುವುದು ಯೋಗ್ಯವೆಂದು ನನಗೆನಿಸುತ್ತದೆ.

ಸಾದರ ಸ್ವೀಕಾರ

★

೮೦. **ನವಯುಗ** (ದಿನಪತ್ರಿಕೆಯ ಭಾರತ ಸ್ವಾತಂತ್ರ್ಯದ ವಿಶೇಷ ಸಂಚಿಕೆ). ಸಂಪಾದಕರು ಶ್ರೀಮಾನ್ ತಿ. ರು. ನೇಸ್ವಿ ಎಂ. ಎಲ್. ಎ. ನವಯುಗ ಕಾರ್ಯಾಲಯ, ಹುಬ್ಬಳ್ಳಿ. ಡೆ ಫೋ ೬೦ ಪುಟಗಳು ಬೆಲೆ ೦-೮-೦

ಸುಂದರವಾದ ಸಂಚಿಕೆ. ಸುಪ್ರಸಿದ್ಧ ರಾಜಕಾರ್ಯವಿದರ ರಾಜಕೀಯ ಲೇಖನಗಳೂ ಸಾಹಿತ್ಯಿಕರ ಲೇಖನ, ಕವಿತೆ, ಕಥೆಗಳೂ ಇದರಲ್ಲಿ ಪ್ರಕಟವಾಗಿ— ಬೆಲೆಯನ್ನು ಕಡಿಮೆಯಾಗಿ ಇಟ್ಟಿದ್ದರೂ— ಸಂಚಿಕೆಯು ಬೆಲೆಯನ್ನು ಹೆಚ್ಚಿಸಿರುವುವು. ಮೂರು ಬಣ್ಣದ ಚಿತ್ರದಿಂದ ಕೂಡಿದ ಮೇಲೋಲೆಯೂ ಆಕರ್ಷಕವಾಗಿದೆ. ಸಂಚಿಕೆಯು ಸಂಗ್ರಹದಲ್ಲಿ ಇರಿಸಬಹುದಾದ ಯೋಗ್ಯತೆಯುಳ್ಳದ್ದಿದೆ.

೮೧. **ಅವಳ ಹುಚ್ಚು** (ಕಥಾಸಂಕಲನ) ಬರೆದವರು ದಿವಂಗತರಾದ ಕಾರ್ಯಹಳ್ಳಿ ರಾಮಕೃಷ್ಣ ಸೆಟ್ಟಿಯವರು. ಪ್ರಕಾಶಕರು ಕನ್ನಡ ಪ್ರಪಂಚ ಪ್ರಕಾಶನ, ಮಂಗಳೂರು. ಕ್ರಾ. ೱ ೯೦ ಪುಟಗಳು. ಬೆಲೆ ೦-೧೪-೦.

೮೨. **ಸ್ತ್ರೀ** (ಮರಾಠಿ ಮಾಸಪತ್ರಿಕೆಯ ಕುಮಾರ ಅಂಕ) ಸಂಪಾದಕರು ಶ್ರೀ. ಶಂ. ವಾ. ಕಿರ್ಲೋಸ್ಕರರು. ಕಿರ್ಲೋಸ್ಕರ ಬಂಧು ಲಿಮಿಟೆಡ್, ಕಿರ್ಲೋಸ್ಕರವಾಡಿ. ಡೆ. ೧/೮ ದ ೧೦೦ಕ್ಕಿಂತ ಹೆಚ್ಚು ಪುಟಗಳು. ಬೆಲೆ ೦-೧೨-೦.

ಮಗು ಹುಟ್ಟಿದಂದಿನಿಂದ ಕುಮಾರಾವಸ್ಥೆಯನ್ನು ದಾಟುವವರೆಗಿನ ಜೀವನವನ್ನು ಕುರಿತ ಅನೇಕ ವೈಜ್ಞಾನಿಕ, ಆರೋಗ್ಯವಿಷಯಕ, ಮನೋವಿಕಾಸಾತ್ಮಕ ಲೇಖನಗಳನ್ನು, ಅಧಿಕಾರಿಗಳಾದ **ಲೇಖಕ ಲೇಖಿಕೆಯರಿಂದ ಬರೆಯಿಸಿ ಇದರಲ್ಲಿ ಸಂಗ್ರಹಿಸಲಾಗಿದೆ. ಪದ್ಧತಿ**ಯಂತೆ ಹಲವು ಸಂದರ್ಭ ಚಿತ್ರಗಳೂ ವ್ಯಕ್ತಿ ಚಿತ್ರಗಳೂ ಪ್ರಕಟವಾಗಿವೆ. ಪ್ರತಿಯೊಬ್ಬ ಗೃಹಿಣಿಯೂ ಗೃಹಸ್ಥನೂ ಓದಿ ಪ್ರಯೋಜನ ಪಡೆಯಬಹುದಾದ ಸಂಚಿಕೆಯಿದು.

೮೩. **ಕಲ್ಪನಾ** (ಹುಬ್ಬಳ್ಳಿಯಲ್ಲಿ ಹೊಸತಾಗಿಯೆ ಪ್ರಾರಂಭವಾಗಿರುವ ಚಲಚ್ಚಿತ್ರವಿಷಯಕ ಮಾಸಪತ್ರಿಕೆ). ಸಂಪಾದಕರು ಶ್ರೀ. ಕೆ. ರಾಮಚಂದ್ರ ಅವರು. ಪ್ರಕಾಶಕರು ಎಕೊ ಅಡ್ವರ್ಟೈಜಿಂಗ್ ಬ್ಯೂರೊ, ಹುಬ್ಬಳ್ಳಿ. ಕ್ರಾ. ೧/೮ ದ ೪೦ ಪುಟಗಳು. ವಾರ್ಷಿಕ ಚಂದಾ ೩-೦-೦; ಬಿಡಿಸಂಚಿಕೆಗೆ ೦-೪-೦.

ಈಗಾಗಲೆ ಕರ್ನಾಟಕದಲ್ಲಿ ಇದೇ ಮಾದರಿಯ ಪತ್ರಿಕೆಗಳು ಸಾಕಷ್ಟು ಇವೆ. ಸಂಪಾದಕರು ತಮ್ಮದೇ ಆದ ವೈಶಿಷ್ಟ್ಯಗಳನ್ನು ಇದರಲ್ಲಿ ಬೆಳೆಯಿಸಿಕೊಂ... ಪತ್ರಿಕೆ ಬಹುಕಾಲ ಬಾಳುವಂತೆ ಮಾ... ಬೇಕೆಂಬುದೇ ನಮ್ಮ ಹಾರಯಿಕೆ.

೮೪ **ಸರ್ವೋದಯ** (ಮಂಗಳ... ವಾರ ಪತ್ರಿಕೆಯ ಸ್ವಾತಂತ್ರ್ಯ... ಸಂಚಿಕೆ) ಸಂಪಾದಕರು ಶ್ರೀ. ಎನ್. ... ಕಿಲ್ಲೆಯವರು. ಪ್ರಕಾಶಕರು : ಸರ್ವೋ... ದಯ ಲಿಮಿಟೆಡ್, ಮಂಗಳೂರು. ... ೧/೮ ದ ೪೪ ಪುಟಗಳು. ಬೆಲೆ ೦-೨-...

೮೫. **ಕಳ್ಳರ ಕೂಟ**— (ಕಾದಂ... ರಿಯ ೨ನೆಯ ಮುದ್ರಣದ ಪ್ರತಿ) ಬ... ವರು ಶ್ರೀಮಾನ್ ದೇವುಡು. ಪ್ರಕಾಶ... ಆನಂದ ಬ್ರದರ್ಸ್, ಬೆಂಗಳೂರು... ಕ್ರಾ. ೩. ೫೬ ಪುಟಗಳು. ಬೆಲೆ ೦-೧...

೮೬. **ಸೋಲೋ ಗೆಲುವೋ** (ಮೂರು ಕತೆಗಳು. ೨ನೆಯ ಮುದ್ರ... ಬರೆದವರು ಶ್ರೀ. ದೇವುಡು ... ಪ್ರಕಾಶಕರು : ಆನಂದ ಬ್ರದರ್ಸ್, ...ಳೂರು ೨. ಕ್ರಾ. ೩. ೧೦೮ ಪು...

೮೭ **ಮದುವೆಯೋ ಹಾಳೋ?**— (ಸಾಮಾಜಿಕ ನಾ... ತಿದ್ದಿ ಬೆಳಸಿದ ೨ನೆಯ ಆವೃತ್ತಿಯ ಬರೆದವರು ಶ್ರೀ. ಅ. ನ. ಕೃಷ್ಣರಾ... ಪ್ರಕಾಶಕರು : ಆನಂದ ಬ್ರದರ್ಸ್, ...ಳೂರು ೨, ಕ್ರಾ. ೩. ೯೨ ಪು... ಬೆಲೆ ೧-೮-೦.

೮೮. **ಮಯ್ಯಿಗೆ ಮಯಿ**... (ಸ್ವತಂತ್ರ ಸಾಮಾಜಿಕ ಕಾದಂ... ಬರೆದವರು ಶ್ರೀ ಅ. ನ. ಕೃಷ್ಣರಾ... ಪ್ರಕಾಶಕರು : ಆನಂದ ಬ್ರದರ್ಸ್, ...ಳೂರು ೨. ಕ್ರಾ. ೩. ೧೬೮ ಪು... ಬೆಲೆ ೨-೮-೦.

೮೯. **ರಾಷ್ಟ್ರೀಯ ಚಾರಿತ್ರ**... (ಪರಿಚಯಾತ್ಮಕ ಕಿರು ಹೊತ್ತಿಗೆ) ...ಕರು ಶ್ರೀ. ನಾಡಿಗ ಕೃಷ್ಣಮೂರ್ತಿ. ... ಶಕರು : ಗೀತಾ ಸಾಹಿತ್ಯ ... ಮಲ್ಲೇಶ್ವರಂ— ಬೆಂಗಳೂರು. ... ೨೦ ಪುಟಗಳು. ಬೆಲೆ ೦-೩-೦.

೯೦. **ನೆನಪಿಗಾಗಿ** (ಸಂಕಲನ ಗ್ರಂಥ). ಬೇರೆ ಬೇರೆ ಖಕರು ಬರೆದ ಲೇಖನಗಳು. ಉಡುಪಿಯ ದಿವಂಗತ ಕೊರಡ್ಕ-ಸ್ಮಾರಕ ಸ... ಿಂದ ಪ್ರಕಟವಾದುದು. ಕ್ರೌ. ಅ. ೧೨೬ ುಗಳು. ಬೆಲೆ ೨ ೦-೦.

೯೧. **ಬದುಕಿನ ಆದರ್ಶ** (ಕಥಾಸಂಕಲನ). ಬರೆದವರು ವ್ಯಾಸರಾಯ ಬಲ್ಲಾಳ. ಪ್ರಕಾಶಕರು ಹಂಸಸಾಹಿತ್ಯಮಾಲಾ, ಲಬಾಗ್, ಮುಂಬಯಿ ೧೨. ಕ್ರೌ. ಅ. ೧೦೮ ಪುಟಗಳು. ೧-೮-೦.

೯೨. **ನಗೀಸವಿಲು** (ಲಲಿತಪ್ರಬಂಧ ಸಂಕಲನ) ಲೇಖಕರು . ಎನ್. ಎಸ್. ಗಡಗಕರ ಬಿ.ಎ. ಧಾರವಾಡ. ಪ್ರಕಾಶಕರು ನೋಹರ ಗ್ರಂಥಭಾಂಡಾರ, ಧಾರವಾಡ ಕ್ರೌ. ಅ. ೫೬ ುಗಳು. ಬೆಲೆ ೦-೧೫ ೦.

೯೩. **ಕನ್ನಡ ನುಡಿ** (ಕನ್ನಡ ಸಾ. ಪರಿಷತ್ತಿನ ಮಾಸ ್ರಕೆ.) ಸಂಪಾದಕರು ಶ್ರೀ. ಎಂ. ಆರ್. ಶ್ರೀನಿವಾಸ ಮೂರ್ತಿ-, ಅಧ್ಯಕ್ಷ ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು. ್ಡಿದ ೪೦ ಪುಟಗಳು. ವಾರ್ಷಿಕ ಚಂದಾ ೩-೦-೦.

೯೪ **ದಾದಾಭಾಯಿ ನವರೋಜಿ ಅವರ ಸಂಕ್ಷಿಪ್ತ ಜೀವನ ಚರಿತ್ರೆ.** ಲೇಖಕರು ಶ್ರೀಮಾನ್ ಡಿ. ವಿ. ಜಿ. ಪ್ರಕಾಶಕರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ವ್ಯಾಸಂಗ ಗೋಷ್ಠಿ ಬಸವನ ಗುಡಿ, ಬೆಂಗಳೂರು ಫ್ಲೂ. ಕ್ರಾ. ಅ. ೪೨ ಪುಟಗಳು ಬೆಲೆ ೦-೪-೦.

೯೫ **ಬ್ರಹ್ಮಚರ್ಯವೇ ಜೀವನ ಅರ್ಥಾತ್ ವೀರ್ಯನಾಶವೇ ಮೃತ್ಯು** (ಸಚಿತ್ರ ಜೀವನ ಸ್ವಾಸ್ಥ್ಯ ವಿಚಾರ ಗ್ರಂಥ) ಮೂಲ ಮರಾಠಿ ಲೇಖಕರು ಶ್ರೀಶಿವಾನಂದಸ್ವಾಮಿ ವರೂಡ ಅವರು. ಅನುವಾದಕರು ಶ್ರೀ. ಈಶ್ವರ ಸಣಕಲ್ಲ ಅವರು ಪ್ರಕಾಶಕರು ಶ್ರೀ. ಭಾಲಚಂದ್ರ ವೆಂಕಟೇಶ ಘಾಣೇಕರ. ಸಮಾಜ ಪುಸ್ತಕಾಲಯ, ಧಾರವಾಡ. ಬೆಲೆ ೩-೦-೦.

೯೬ **ಮಕ್ಕಳ ಮನಸ್ಸು** (ಮನೋವಿಜ್ಞಾನ ವಿಷಯಕ ಗ್ರಂಥ) ಬರೆದವರು ಡಾ. ಬಿ. ಕುಪ್ಪುಸ್ವಾಮಿ ಎಂ. ಎ., ಡಿ ಲಿಟ್. ಮೈಸೂರು ಪ್ರಕಾಶಕರು ಹೆಚ್. ವೆಂಕಟರಾಮಯ್ಯ ಅಂಡ್ ಸನ್ಸ್, ವಿದ್ಯಾನಿಧಿ ಬುಕ್‌ಡಿಪ್ಪೊ, ಬೆಂಗಳೂರು. ಕ್ರೌ. ಅ. ೧೪೨ ಪುಟಗಳು ಬೆಲೆ ೨-೦-೦

ಧಾರವಾಡ ಬಾನುಲಿಕಟ್ಟೆಯಲ್ಲಿ ಮಂತ್ರಿವರ ದಿವಾಕರರು



ಎಡಗಡೆಯಿಂದ ಮೊದಲನೆಯವರು, ಧಾರವಾಡ ಬಾನುಲಿಕಟ್ಟೆಯ ಅ. ಡೈರೆಕ್ಟರ್ ಶ್ರೀ. ವಾಳನಿಸರು. ಆರನೆಯವರು ಮಾನ್ಯಮಂತ್ರಿ ದಿವಾಕರರು. ಮಿಕ್ಕವರೆಲ್ಲ ಧಾರವಾಡ-ಹುಬ್ಬಳ್ಳಿ ನಗರಗಳಲ್ಲಿಯ ಬೇರೆ ಬೇರೆ ಪತ್ರಿಕೆಗಳ ಸಂಪಾದಕರು.

ಜಯಂತಿಯ
ಹೇಮಂತ ಸಂಚಿಕೆ

(೧ನೆಯ ಜನವರಿ ೧೯೫೧ಕ್ಕೆ ಪ್ರಕಟವಾಗುವುದು.)

ಚಳಿಗಾಲದಲ್ಲಿ ಬೆಚ್ಚಗೆ ಮನೆಯಲ್ಲಿ ಕುಳಿತು ಮನತಣಿಯುವಂತೆ ಓದಲು ಬೇಕಲ್ಲವ ?

ಜಯಂತಿಯು ಈಸಲ ನಿಮಗೆ ಅದನ್ನು ಒದವಿಸಿಕೊಡುವದು.

ಕನ್ನಡದ ಉತ್ತಮೋತ್ತಮ ಬರೆಹಗಾರರಿಂದ ಬರೆಯಿಸಿ ತರಿಸಿದ ವಿವಿಧ ವಿಷಯಗಳ ಮೇಲಿನ ಲೇಖನಗಳು, ಕಥೆ, ಹರಟೆ, ಏಕಾಂಕ, ಕವಿತೆ ಮುಂತಾದವು.

ಇದಲ್ಲದೆ ಮುಂಬಯಿಯಲ್ಲಿ ಜರುಗಲಿರುವ ಕನ್ನಡದ ಸಾಹಿತ್ಯ ಸಮ್ಮೇಲನದ ಬಗ್ಗೆ ವಿಶೇಷ ಲೇಖನಗಳೂ ಪ್ರಕಟವಾಗುವವು.

ಹೊದಿಕೆಯ ಮೇಲೆ ತ್ರಿವರ್ಣದಲ್ಲಿ ಸುಂದರವಾದ ಚಿತ್ರ. ಒಳಗೂ ಅನೇಕ ಚಿತ್ರಗಳು

ಪುಟಸಂಖ್ಯೆ ೮೦ .... ಬೆಲೆ ೧೨ ಆಣೆ.

ಜಾಹೀರಾತು ಕೊಡಬಯಸುವವರೂ ಏಜಂಟರೂ ಕೂಡಲೆ ನಮಗೆ ಬರೆಯಬೇಕು.

ವ್ಯವಸ್ಥಾಪಕ
ಜಯಂತಿ ಧಾರವಾಡ

ಹೊಸ ಕನ್ನಡ ರೆಕಾರ್ಡುಗಳು

ಶ್ರೀ. ಜೋಳದರಾಶಿ ದೊಡ್ಡನಗೌಡರು, ಬಳ್ಳಾರಿ

N 25947	ಕಲ್ಯಾಣ ಬಸವಣ್ಣ	ಸ್ವಕೃತ
	ಒಂದೆ ಸಾಕು ನೆನೆವ ಮನಕೆ	,,

ಶ್ರೀ. ಬಸವರಾಜ ರಾಜಗುರು

N 25944	ಜಗವ ಸುತ್ತಿಪ್ಪುದು ಕಾಫಿ.	ಕವಿ : ಶ್ರೀ ಬಸವೇಶ್ವರ ವಚನ
	ಎನ್ನ ಕಾಯದ ಕತ್ತಲೆಯು ಭೈರವಿ.	ಅಕ್ಕಮಹಾದೇವಿ ,,

ಕಮಲಾಬಾಯಿ ವಿಜಾಪುರಕರ

N 25945	ವೇಣುಲೀಲಾ ಗೋಪಿವೃಂದ	ಎಚ್. ಬಿ. ಕೊಣ್ಣೂರ್ ಕೃತ
	ಜೀವನಾ ನೃಕಾಯ ಕಾಣೊ	,, ,, ,,

ಶ್ರೀ. ಭೀಮಸೇನ ಜೋಶಿ

N 25946	ವಿಜಾಧರೆ ಶಾರದೆ	ಬೆಟಗೇರಿ ಕೃಷ್ಣಶರ್ಮ ಕೃತ
	ನಿನಗೇಕೆ ಸಂಮೋದ ಮರಾಳಾ	,, ,, ,,

HIS MASTER'S VOICE

THE GRAMOPHONE CO. LTD., CALCUTTA, BOMBAY, MADRAS, DELHI

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar 2712-50.

ಜಯಂತಿ

JAYANTI

ದೀಪಾವಳಿ ಸಂಚಿಕೆ

ಕರ್ನಾಟಕ ನಾಟಕ ಪರಂಪರೆಯ ನಂದಾದೀಪ

ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಉತ್ತರ ಕನ್ನಡ ಜಿಲ್ಲೆಯಿಂದ ಬಂದು ಆಡಿದ ಯಕ್ಷಗಾನ ಕಲಾವಿದರೊಬ್ಬರ ದುರ್ಯೋಧನನ ಭೂಮಿಕೆ.

೬ ಆಣೆ
ನವ್ಹೆಂಬರ್
೧೯೫೦

ಜಯಂತಿ

JAYANTI

ನವೆಂಬರ್ ೧೯೫೦

ವಾರ್ಷಿಕ ವರ್ಗಣಿ . . ೫—೦—೦
ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ
ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್. ಜೆ. ಬೇಂದ್ರೆ
ಪ್ರಕಾಶಕರು— ಶ್ರೀ ಎಮ್. ವಿ. ಮೊಳ್ಳಿಗಟ್ಟಿ

ಜಾಹೀರಾತಿನ ದರಗಳು

೧	ಪುಟ	ರೂ.	೫೦	ಒಂದು ಸಲ
೧/೨	,,	,,	೨೭	,,
೧/೪	,,	,,	೧೫	,,
೧/೮	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—o—

Rates for Advertising in Jayanti

Full Page	Rs.	50	Single	Ins.
Half ,,	,,	27	,,	
Quarter ,,	,,	15	,,	
1/8 ,,	,,	8	,,	

Concession rates for long term Contracts.
For particulars write to

Advt: *Manager*, Jayanti; Dharwar

ಜಯಂತಿಗೆ—
ಎಲ್ಲ ಕಡೆಗೂ ಏಜಂಟರು ಬೇಕು.

ಈ ಸಂಚಿಕೆಯಲ್ಲಿ:

ಕೈಜನದ ಪೂಜೆ (ಕವನ)
ಡಾ. ಡಿ. ಎಸ್. ಕರ್ಕಿ ಎಂ. ಎ., ಪಿಎಚ್. ಡಿ. ಬೆಳಗಾಂವಿ ೨೫
ನಿಜವಾದ ದೀವಳಿಗೆಯು ಬರಲಿ! (ಸಂಪಾದಕೀಯ)
ಸಂಪಾದಕರು. ೨೫
ನಗೀಗೆ ನೈವೇದ್ಯ
'ನಕಲೀ ನಾರಾಯಣಾಚಾರ್ಯ' ೨೫
ನವರಾತ್ರಿ (ಬಾನುಲಿ ನಾಟಕ)
ಶ್ರೀ ಬೆಟಗೇರಿ ಕೃಷ್ಣಶರ್ಮ, ಧಾರವಾಡ ೨೬
ಕನ್ನಡ ಕಂಪನಿ ನಾಟಕಗಳು (ಉತ್ತರಾರ್ಧ)
ಪ್ರೊ. ರಾ. ಯ. ಧಾರವಾಡಕರ್ ಎಂ.ಎ. ಧಾರವಾಡ ೨೬
ಅರ್ವಾಚೀನ ಪ್ರೇಮಗೀತ (ನಾಟ್ಯಗೀತ)
ಶ್ರೀ. ಚಿದಂಬರ ದೀಕ್ಷಿತ ಬಿ. ಎ. (ಆನರ್ಸ್) ಧಾರವಾಡ ೨
ನಗರದ ಒಂದು ಇರುಳು (ಅನುವಾದಿತ ಪ್ರಬಂಧ)
ಶ್ರೀ. ಶ್ರೀ. ಅ. ಸಂ[illegible] ಬಿ.ಎ. (ಆನರ್ಸ್) ಕಲಬುರ್ಗಿ ೨೮
ರಾಬರ್ಟ್ ಓವೆನ್ (ವ್ಯಕ್ತಿಪರಿಚಯ)
ಶ್ರೀ. ಮೋಹನರಾವ್ ಬಿ ಎ, ಎಫ್. ಆರ್. ಇ ಎಸ್. (ಕಂ) ೨೮
ಕಸ್ತೂರಬಾ ಮಂದಿರ (ಒಂದು ಕತೆ)
ಶ್ರೀ ಎ. ಎಸ್. ರಾಮಕೃಷ್ಣ, ಮಣಿಪಾಳ–ಉಡುಪಿ ೨೮
ಮಿತ್ರವಿಂದಾ ಪರಿಣಯ (ಪ್ರಾಚೀನ ನಾಟಕ ಪರಿಚಯ)
ಶ್ರೀ. ವೆಂಕಟರಾಯಾಚಾರ್ಯ, ಸುರತ್‌ಕಲ್ಲು ೨೯
ಮೌಲ್ಯವಿಚ್ಛೇದನೆ (ಆರ್ಥಿಕ ವಿಚಾರ)
ಶ್ರೀ. ಪಾ. ಭೀ. ಜೋರಾಪೂರ, ವಿಜಾಪುರ ೨
ಕಸೂತಿ ಕಲಿಯಬೇಕೆ? (ಹೊಲಿಗೆಯ ವಿಚಾರ)
ಕು. ಸರೋಜಿನಿ ಮಹಿಷಿ ಎಂ. ಎ. ಧಾರವಾಡ ೨
ವಿಮರ್ಶೆಯ ಶಿಕ್ಷಣರಂಗ
ವಿದ್ವಾನ್ ಕೆ. ಶ್ರೀನಿವಾಸಶರ್ಮ ೨
ಸಾದರ ಸ್ವೀಕಾರ ೩

ಮುಂಬಯಿಯಲ್ಲಿ ಜಯಂತಿಯ ಏಜಂಟರು
ವಿ. ಆರ್. ಪ್ರಭು ನ್ಯೂಜ್ ಏಜಂಟ್
ದಾದರ (ಜಿ. ಐ. ಪಿ.)

ವರ್ಷ ೧೪ — ಸಂಚಿಕೆ ೭

ಜಯಂತಿ

ನವಂಬರ್ — ೧೯೫೦

ತೈಜಸದ ಪೂಜೆ

ಡಾ. ಡಿ. ಎಸ್. ಕರ್ಕಿ, ಎಂ. ಎ. ಪಿಎಚ್. ಡಿ. ಬೆಳಗಾಂವಿ

೧

ಬಂದಿಹವು ಎಲ್ಲಿಂದ ?
ನಿಂದಿಹವು ಏನಂದ !
ದೀಪ-ದೀಪದ ಸಾಲು ಎನಿತು ಚೆಂದ !
ಸ್ಪಂದಿಸುವುದಿಲ್ಲ ಆನಂದ-ಛಂದ.

೨

ಕಾಲಪ್ರವಾಹದಲಿ
ಬಂದಿಹವು ಇವು ತೇಲಿ
ಎಂದಿನಿಂದಲೊ ಏನೊ ಬಲ್ಲರಾರು ?
ಮೊದಲದಾರೀ ದೀಪ ಬೆಳಗಿಸಿದರು ?

೩

ಕಣ್ಣಿಟ್ಟು ಕಾಂತಿಯಲಿ
ಮನವಿಟ್ಟು ಶಾಂತಿಯಲಿ
ಶೂನ್ಯದಿಂ ಕಡೆದಿಹರು ಹೊಳೆವ ರೂಪ.
ಬೆಳಗಿಸಿಹರೆಮ್ಮವರು ಆತ್ಮ-ದೀಪ.

೪

ಉಪನಿಷತ್ತಿನ ಕಿರಣ
ಶರಣರಂತಃಸ್ಫುರಣ
ತೊಳಗುತಿವೆ ಈ ಜ್ಯೋತಿ ಜ್ಯೋತಿಯಲ್ಲಿ
ದೀಕ್ಷೆಗೊಳ್ಳಲಿ ಭಾವ ದೀಪ್ತಿಯಲ್ಲಿ.

೫

ಬುದ್ಧನಂತಃಕರಣ
ಪ್ರಭು ಚೈತ್-ಪ್ರಭಾವರಣ
ಪೂಜ್ಯ ಬಾಪೂಜಿಯನುರಾಗವರುಣ
ಸೋಂಕಲಂಕುರಿಸದೇ ನವಜೀವನ ?

೬

ನೋಡಿ ಕಣ್ಣಿದ್ದವರು
ಏಳಿ ಮನವಿದ್ದವರು
ಏಳಿ ಹಚ್ಚಿರಿ ಎಚ್ಚರದ ದೀಪ—
ಹೊಸ ಸೂಸುವೊಲೆಲ್ಲ ದೇಶದ ಮುಖ.

೭

ನೈಜವಾಗಿಯೆ ಹಿರಿದು
ತೈಜಸದ ಪೂಜೆಯಿದು—
ಭಾರತದ ಬೆಳ್ಗಸವು ದೀಪೋತ್ಸವ,
ಬೆಂಬಳಿಸಿ ಬಹುದದನು ವಿಜಯೋತ್ಸವ.



ನಿಜವಾದ ದೀವಳಿಗೆ ಬರಲಿ!

ಭಾರತಕ್ಕೆ ನಿಜವಾದ ದೀವಳಿಗೆಯ ಹಬ್ಬ ಬಂದಿದೆಯೆಂದು ಈಗಲೂ ಹೇಳುವಂತಿಲ್ಲ. ಪರತಂತ್ರ ಭಾರತದಲ್ಲಿಯೂ ಪ್ರತಿ ವರ್ಷದ ದೀವಳಿಗೆಯ ಹಬ್ಬಕ್ಕೊಮ್ಮೆ ನಾವು ಇದೇ ಮಾತನ್ನು ಒರೆಯುತ್ತಲಿದ್ದೆವು. ಅಂದಿನ ಪಾರತಂತ್ರ್ಯದ ಕಗ್ಗತ್ತಲೆಯಲ್ಲಿ ನಮಗೆ ಎನಿಸುತ್ತಿದ್ದ ಮಾತೆಂದರೆ, ರಾಜಕೀಯ ಸ್ವಾತಂತ್ರ್ಯ-ಜ್ಯೋತಿಯು ಭಾರತಕ್ಕೆ ಖಂಡಿತವಾಗಿ ದೀವಳಿಗೆಯನ್ನು ತರುವುದೆಂದು. ಈಗ ರಾಜಕೀಯ ಸ್ವಾತಂತ್ರ್ಯ ನಮ್ಮಲ್ಲಿ ಬಂದಿದೆಯೆಂದು ನಾವು ಸಮಾಧಾನಪಡುತ್ತಲಿದ್ದರೂ, ನಮ್ಮನ್ನು ಮುಸುಕಿದ ಕಗ್ಗತ್ತಲೆಯೇನೂ ಕಡಿಮೆಯಾಗಿಲ್ಲ. ಇಷ್ಟೇ ಅಲ್ಲ, ಮೊದಲಿಗಿಂತಲೂ ಅದರ ಗಾಢತೆ ಹೆಚ್ಚಾಗುತ್ತಲಿದೆ. ರಾಜಕೀಯ ಸ್ವಾತಂತ್ರ್ಯದ ಹೆಸರಿನಿಂದ ಒಂದು ರಾತ್ರಿ ಮಾತ್ರ ನಾಡು ದೀಪ-ಮಾಲೆಗಳ ಬೆಳಕಿನಿಂದ ಬೆಳಗಿದಂತೆ ಹೊರಗಣ್ಣಿಗೆ ಕಂಡಿತು. ಆದರೆ ನಮ್ಮ ರಾಷ್ಟ್ರದ ಪರಿಸ್ಥಿತಿಯನ್ನು ಒಳಗಣ್ಣಿಂದ ನೋಡುತ್ತಿದ್ದವರಿಗೆ, ಆ ದೀಪಮಾಲೆಯ ಬೆಳಕಿನಲ್ಲೂ ನಮ್ಮ ನಾಡನ್ನೆಲ್ಲ ಕಬಳಿಸಿದ್ದ ಘೋರಾಂಧಕಾರ ಕಾಣುತ್ತಲಿದ್ದಿತು. ಆದುದರಿಂದಲೇ ಆ ಭಾರತದ ಭಾಗ್ಯವಿಧಾತ ಬಾಪೂಜಿ, ಭಾರತ ಸ್ವಾತಂತ್ರ್ಯೋತ್ಸವದ ದೀವಳಿಗೆಯನ್ನು ಹಬ್ಬವೆಂದು ಭಾವಿಸದೆ, ಆ ಹಬ್ಬದ ಸಾಧನೆಗೆಂದೇ ನವಖಾಲಿಯ ಕಾಡು-ಮೇಡುಗಳನ್ನು ಕಾಲುನಡಿಗೆಯಿಂದ ಸುತ್ತುತ್ತಲಿದ್ದನು. ಅಲ್ಲಿಯ ವ್ಯಕ್ತಿ-ವ್ಯಕ್ತಿಗಳ ಅಂಧಕಾರಮಯ ಹೃದಯಗಳಲ್ಲಿ, ಮಾನವತೆಯ ಅರಿವಿನ ದೀವಳಿಗೆಯನ್ನು ಬೆಳಗಿಸಲು ಕಷ್ಟಪಡುತ್ತಲಿದ್ದನು.

ಇಂದು ನಮ್ಮ ಜನತೆ ನಿಜವಾದ ದೀವಳಿಗೆಯೆಂದರೆ ಏನೆಂಬುದನ್ನು ಅರಿತು ವರ್ತಿಸುವಂತೆಯೆ ಕಾಣುವುದಿಲ್ಲ. ದೀವಳಿಗೆಯ ಹಬ್ಬ ಪ್ರತಿಷ್ಠಾಪಿತವಾದುದು ದುಷ್ಟನಿಗ್ರಹ, ಶಿಷ್ಟರಕ್ಷಣೆ, ದೈವೀ ಸಂಪತ್ತು, ಬಂಧುಪ್ರೇಮ, ಜೀವನದಲ್ಲಿಯ ತೃಪ್ತಿ ಇವೆಲ್ಲ ವಿಧಾಯಕ ಗುಣಗಳ ಮೇಲೆ. ಇಂದಿನ ದೀವಳಿಗೆಯ ಹಬ್ಬದಲ್ಲಿ ಇವುಗಳಲ್ಲಿಯ ಒಂದು ಗುಣವಾದರೂ ತಲೆಯೆತ್ತಿ ನಿಂತುದು ಕಾಣುತ್ತದೆಯೆ? ಬಲಿಷ್ಠರು ಬಲಹೀನರನ್ನು ನಿರ್ದಯತೆಯಿಂದ ಮೆಟ್ಟುತ್ತಲಿದ್ದಾರೆ. ಬಹುಜನಮತಾತ್ಮಕ ಭೂತ-ಬೇತಾಳಗಳು ಎದ್ದು ಕುಣಿದಾಡುತ್ತ, ಸತ್ಯ-ನ್ಯಾಯಗಳನ್ನೂ ಧರ್ಮ-ನಿಯತಿಗಳನ್ನೂ ಪಾತಾಳಖಾತಕ್ಕೆ ತುಳಿಯುತ್ತಲಿವೆ. ಎಲ್ಲೆಲ್ಲಿಯೂ ಅತೃಪ್ತಿ-ಅಸಂತುಷ್ಟಿಗಳು ತಾಂಡವವಾಡುತ್ತಲಿವೆ. ಕಾಯುವ ಕಟ್ಟಳೆಗಳು ಸಾಯಿಸುವ ಹಾವುಗಳಾಗಿ ಕಚ್ಚುತ್ತಲಿವೆ. ಮಾನವ ದಾನವನಾಗಿ ಮಾನವನನ್ನೇ ತಿನ್ನತೊಡಗಿದ್ದಾನೆ. ದೈವೀಸಂಪತ್ತಿಗೆ ಮುಂದೆ ಬರಲು ದಾರಿಯನ್ನೇ ಕೊಡಲೊಲ್ಲರು.... ಕಳ್ಳಪೇಟೆಯ ಕಾಳರಕ್ಕಸರು.

ಹಿಂದೆ ಒಬ್ಬನೇ ಒಬ್ಬನಾಗಿದ್ದ—ಲೋಕಕಂಟಕ—ನರಕಾಸುರನನ್ನು, ಶ್ರೀಕೃಷ್ಣ ಲೋಕಕಲ್ಯಾಣಕ್ಕಾಗಿ ಸಂಹಾರ ಮಾಡಿದ; ಎಂತಲೆ ಆ ಶುಭದಿನ 'ನರಕ ಚತುರ್ದಶಿ'ಯಾಗಿ ದೀಪಾವಳಿಯ ಮೊದಲದಿನವಾಗಿ ಮೆರೆಯಲು ತೊಡಗಿತು. ಇಂದೋ, ನಮ್ಮ ನಾಡಿನಲ್ಲಿ ಅಂತಹ ಲೋಕಕಂಟಕಿಗಳಾದ ನರಕಾಸುರರು ಸಾವಿರ ಸಾವಿರ ಜನರು ಲಕ್ಷ ಲಕ್ಷ ಜನರು ತಲೆಯೆತ್ತಿಕೊಂಡು, ಹಲವು ರೀತಿಯ ಹಗರಣ ನಡೆಯಿಸಿದ್ದಾರೆ. ಅವರ ಕಾಲಾಟ ನಡೆದಿರುವರೆಗೆ ಭಾರತಕ್ಕೆ ದೀವಳಿಗೆಯ ಮೊದಲ ದಿನ ಬರಬೇಕೆಂತು?

ದೀವಳಿಗೆಯ ಅಮಾವಾಸ್ಯೆಯ ದಿನ ಎಲ್ಲೆಲ್ಲಿಯೂ ಧನಲಕ್ಷ್ಮಿಯ ಪೂಜೆ ನಡೆಯಬೇಕು. ಆದರೆ ಹಾಗೆ ಸಾರ್ವತ್ರಿಕವಾಗಿ ನಡೆಯಲಿಕ್ಕೆ ಧನವು ಇದೆ ಎಷ್ಟು ಜನರ ಹತ್ತಿರ? ಬಂಡವಾಳಗಾರಿಕೆಯ ಇಂದ್ರಜಾಲಿಗ, ಇದ್ದ ಧನವನ್ನೆಲ್ಲ ತನ್ನ ಕಡೆಗೆ ಸೆಳೆದುಕೊಂಡಿದ್ದಾನೆ. ದೇಶದಲ್ಲಿಯ ಮುಕ್ಕಾಲು ಮೂರುವೀಸಪಾಲು ಮನೆಗಳು ಬಡವರ ಬರಿಮನೆಗಳು. ಆ ಮನೆಗಳಲ್ಲಿ ವಾಸಿಸುವವರಿಗೆ ಬರಿಹೊಟ್ಟೆಯ ಬವಣೆ ಬೆನ್ನುಹತ್ತಿಬಿಟ್ಟಿದೆ. 'ಬುಭುಕ್ಷಿತಃ ಕಿಂ ನಕರೋತಿ ಪಾಪಂ?' ಇಂತಹ ಜನರಿಗೆ ದೇವರೆಲ್ಲಿಯದು? ಧರ್ಮವೆಲ್ಲಿಯದು? ಪೂಜೆಯೇತರದು? ಪುರಸ್ಕಾರವೇತರದು? ಇನ್ನು ಬಂಡವಾಳಗಾರರು! ಬಹುಸಂಖ್ಯಾಕರಾದ ಅತೃಪ್ತ ದೀನ-ದರಿದ್ರರ ಹೆದರಿಕೆಯ ಮೂಲಕ, ಬಹಿರಂಗವಾಗಿ ಧನಲಕ್ಷ್ಮಿಯ ಪೂಜೆಯನ್ನು ಮಾಡುವ ಧೈರ್ಯವೇ ಅವರಿಗಿಲ್ಲವಾಗಿದೆ. ಇಂತಹ ಕಾಲದಲ್ಲಿ ದೀವಳಿಗೆಯ ಧನಲಕ್ಷ್ಮಿಯ ಪೂಜೆಗೆ ಆಸ್ಪದವೆಲ್ಲಿ?

ಅಂದು ಇಂದ್ರನ ಪಟ್ಟವನ್ನು ಅನಧಿಕೃತವಾಗಿ ಬಯಸಿದ ಬಲಿರಾಯನನ್ನು, ಅವನ ಅನ್ಯಾಯದ ಕೃತಿಗಾಗಿ, ಉಪೇಂದ್ರ ವಾಮನನು ತ್ರಿವಿಕ್ರಮನಾಗಿ, ಉಪಾಯದಿಂದ ಅವನನ್ನು ಪಾತಾಳಕ್ಕೆ ಮೆಟ್ಟಿದನು. ನಿಯತಿಯ ಕಟ್ಟಳೆ ಸುಗಮವಾಗಿ ನಡೆವಂತೆ ಮಾಡಿದನು. ಆದುದರಿಂದಲೇ ಆ ಸಂಸ್ಮರಣೀಯ ದಿನ 'ಬಲಿಪ್ರತಿಪದೆ'ಯಾಗಿ ದೀವಳಿಗೆಯ ಹಬ್ಬದಲ್ಲೊಂದು ಮಹತ್ತ್ವದ ದಿನವಾಗಿ ವಿರಾಜಿಸುತ್ತಿರುವುದು. ಇಂದು ಅಂತಹ ಅನೇಕ ಬಲಿರಾಯರು— ಅನಧಿಕಾರಿಗಳಾಗಿದ್ದರೂ— ರಾಜ್ಯವಿಧಾನ ಪಟ್ಟಗಳನ್ನೇರಿ, ಸ್ವಾರ್ಥಸಾಧಿಸಿಕೊಳ್ಳಬೇಕೆಂಬ ಹವಣಿಕೆಯ ಹದನುಗಳಲ್ಲಿರುವರು. ಅವರ ಆ ಆಸುರೀಶಕ್ತಿಗೆ ಗೆಲವು ದೊರೆತು ದೈವೀಶಕ್ತಿಗೆ ಅಪಜಯವಾಯಿತೆಂದರೆ, ಭಾರತಕ್ಕೆ ನಿಜವಾದ ದೀವಳಿಗೆ ದೂರವೇ ಉಳಿಯುವುದು.

ಹಬ್ಬದಲ್ಲಿ ಬಳಗಕ್ಕೆಲ್ಲ ಮೃಷ್ಟಾನ್ನಭೋಜನವಾಗಬೇಕು. ಇಂದು ಸರಕಾರದವರು ಕೃಪೆಮಾಡಿ ಕೊಡುತ್ತಲಿರುವ ಕೊಳೆ

ಹುಳುಕು ಆಹಾರಧಾನ್ಯಗಳ ಹೊರತು ಇನ್ನೇನೂ— ನಮ್ಮಲ್ಲಿಯ ಬಹುಜನರಿಗೆ— ಸಿಕ್ಕುವಂತಿಲ್ಲ. ತುಪ್ಪ-ಸಕ್ಕರೆಗಳು ಪ್ರದರ್ಶನದಲ್ಲಿಯ ಪದಾರ್ಥಗಳಾಗಿವೆ. ಸರಕಾರ, ವ್ಯಾಪಾರಸ್ಥರು ಇವರ ಅಸಾಮರಸ್ಯ ವ್ಯವಹಾರದ ಮೂಲಕ, ಬಡವರು ಬಳಸಬಹುದಾಗಿದ್ದ ಬೆಲ್ಲ ಕೂಡ, ಕಳ್ಳಪೇಟೆಯ ಕತ್ತಲುಮನೆಯಲ್ಲಿ ಅಡಗಿ ಹೋಗಿದೆ. ಒಂದೇ, ಎರಡೆ? ಯಾವ ಕಾರಣಗಳಿಂದ ನೋಡಿದರೂ ನಮ್ಮಲ್ಲಿಯ ದೀಪಾವಳಿಯ ಹಬ್ಬ ಕೇವಲ ಪಂಚಾಂಗದಲ್ಲಿ ಕಾಣಬಹುದು ಹೊರತು, ಜೀವನದಲ್ಲಿ ಅನ್ವಯಿಸಿಕೊಳ್ಳುವಂತಹ ಪರಿಸ್ಥಿತಿ ಬಂದಿಲ್ಲ.

ನಿಜವಾದ ದೀವಳಿಗೆ ನಮ್ಮಲ್ಲಿ ಬರಬೇಕೆಂದರೆ, ಭಾರತದ ವ್ಯಕ್ತಿ-ವ್ಯಕ್ತಿಗಳ ಹೃದಯದಲ್ಲಿ ಕೆಲವೊಂದು ದೀಪಗಳು ಬೆಳಗತೊಡಗಬೇಕು: ಜ್ಞಾನದ ದೀಪ, ದಯೆಯ ದೀಪ, ಸತ್ಯದ ದೀಪ, ಪ್ರೇಮದ ದೀಪ, ಮಾನವಬಂಧುತ್ವದ ದೀಪ, ಸಾರ್ಥತ್ಯಾಗದ ದೀಪ.... ಇವೆಲ್ಲ ತೊಳಗಿ ಬೆಳಗಲು ತೊಡಗಿದರೆ, ನಾವು ನಮ್ಮ ದೀವಳಿಗೆಗಾಗಿ ಪಂಚಾಂಗವನ್ನು ನೋಡುವುದೆ ಬೇಕಿಲ್ಲ. ನಿಜ್ಜ-ದೀವಳಿಗೆಯ ಹಬ್ಬ ನಮಗೆ ಸಿಕ್ಕುವುದು.

ಕನ್ನಡ ಬಾನುಲಿ, ನಾಡಹಬ್ಬ

ಈ ಸಲದ ಒಂದು ವಿಶೇಷ ಸಂತೋಷದ ಸಂಗತಿಯೆಂದರೆ ಧಾರವಾಡದ ಬಾನುಲಿಕಟ್ಟೆಯವರು, ನವರಾತ್ರಿಯ ಹತ್ತು ದಿನವೂ ನಾಡಹಬ್ಬದ ವಿಶೇಷ ಕಾರ್ಯಕಲಾಪವನ್ನು ಏರ್ಪಡಿಸಿದುದು. ನಮ್ಮ ನಾಡಿನ ಸಾಂಸ್ಕೃತಿಕ ಹಬ್ಬವಾಗಿರುವ ಈ ದಿನಗಳಲ್ಲಿ ನಾಡಿನ ಜಾನಪದ, ನಾಗರಿಕ ಎರಡೂ ಬಗೆಯ ಸಾಹಿತ್ಯ-ಸಂಗೀತ-ನಾಟಕಗಳ ಪ್ರದರ್ಶನದ ಕಾರ್ಯಕಲಾಪಗಳಿದ್ದುವು. ನಾಟಕ ವಿಭಾಗದಲ್ಲಿ 'ಕೃಷ್ಣಾರ್ಜುನ ಯುದ್ಧ' ಎಂಬ ದೊಡ್ಡಾಟವಿದ್ದಿತು. ಇದಲ್ಲದೆ 'ನವರಾತ್ರಿ' 'ಸಮ್ರಾಜ್ಞಿ' 'ವಿಜಯದಶಮಿ' ಎಂಬ ಮೂರು ಆಕಾಶನಾಟಿಕೆಗಳು ಬಿತ್ತರಗೊಂಡುವು. ಸಂಗೀತ-ವಿಭಾಗದ ವೈವಿಧ್ಯವೆಂದರೆ ಒಂದು ದಿನ ಲಾವಣಿ, ಇನ್ನೊಂದು ದಿನ ಹಳ್ಳಿಯ ಬಯಲಾಟದೊಳಗಿನ ಪದಗಳು, ಮತ್ತೊಂದು ದಿನ ಕನ್ನಡ ನಾಟಕದಲ್ಲಿಯ ಪದಗಳು ಆದುವು. ಯಲ್ಲಮ್ಮನ ಜೋಗಿತಿಯರ ಹಾಡುಗಳನ್ನು ಹೇಳಿಸುವ ಕಾರ್ಯಕ್ರಮವೂ ಒಂದುದಿನ ಇದ್ದಿತು.

ಎಲ್ಲ ಕಾರ್ಯಕ್ರಮಗಳೂ ಜನಪ್ರಿಯವೂ ಕಲಾಪೂರ್ಣವೂ ಆಗಿದ್ದುದು ತುಂಬ ಆನಂದದ ಸಂಗತಿ. ಧಾರವಾಡದ ಬಾನುಲಿಯಲ್ಲಿ, ಕನ್ನಡಿಗರ ಅಪೇಕ್ಷೆಗೆ ಅನುಗುಣವಾಗಿ, ಸ್ವಯಂ ಪ್ರೇರಣೆಯಿಂದ ಈ ನಾಡಹಬ್ಬದ ಕಾರ್ಯಕ್ರಮವನ್ನು ಏರ್ಪಡಿಸಿ, ಯಶಸ್ವಿಯಾಗಿ ನೆರವೇರುವಂತೆ ಜಾಗ್ರತೆ ತೆಗೆದುಕೊಂಡುದಕ್ಕಾಗಿ, ಬಾನುಲಿಯ ಅಧಿಕಾರಿಗಳು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಕನ್ನಡ ನಾಡಿನ ವಿಶಿಷ್ಟದಿನಗಳನ್ನು ಮೊದಲೆ ಅರಿತುಕೊಂಡು, ಆ ದಿನೋಚಿತ ಕಾರ್ಯಕ್ರಮವನ್ನು ಇದರಂತೆ ಮುಂದೆಯೂ ಏರ್ಪಡಿಸುತ್ತಿರಬೇಕೆಂದು ನಮ್ಮ ಹಾರಯಿಕೆ.

ದೀಪಾವಳಿಯ ಮಂಗಲಸಮಯದಲ್ಲಿ

— ಕೂದಲುಗಳಿಗೆ —

ಕಾಮಿನಿಯಾ ಆಯಿಲ್

(ರಜಿಸ್ಟರ್ಡ್)

ಉಪಯೋಗಿಸಿ ನಿಮ್ಮ ಚಿತ್ತವನ್ನು ಸುಪ್ರಸನ್ನವಾಗಿಸಿರಿ.

ಬಟ್ಟೆಯಮೇಲೆ ಒಂದು ಹನಿ ಸಿಮ್ಮಡಿಸಿದಲ್ಲಿ ಅಲ್ಲಿಯ ಮನೆಯನ್ನೆಲ್ಲ ಸುವಾಸನೆಯಿಂದ ಸೂಸಿಬಿಡುವ

ಒಟ್ಟೊ ದಿಲ್‌ಬಹಾರ

(ಅತ್ತರುಗಳ ರಾಜ) [ರಜಿಸ್ಟರ್ಡ್]

ಇದನ್ನೇ ಉಪಯೋಗಿಸಿರಿ. ಎಲ್ಲಕಡೆಯಲ್ಲಿ ದೊರೆಯುತ್ತದೆ.

ಆ್ಯಂಗ್ಲೊ ಇಂಡಿಯನ್ ಡ್ರಗ್ ಆ್ಯಂಡ್ ಕೆ. ಕಂ.

೨೮೫ ಜುಮ್ಮಾಮಸಿದ್, ಮುಂಬಯಿ ೨.



(೧)

"ನಾನು ನಿಮ್ಮನ್ನ ಮಾಡಿಕೊಳ್ಳುವ-ದಿಲ್ಲ ಅಂದರ, ನೀವು ಆತ್ಮಹತ್ಯಾ ಮಾಡಿ-ಕೊಳ್ತೀರೇನು ?"

"ಅದಂತೂ ನನ್ನ ಜನ್ಮದುದ್ದಕ್ಕೂ ಹತ್ತ್ಯಾದ"

* * *

(೨)

ತಾಯಿ— 'ಕಟೀ ಭಕ್ರಿ ತಿನಬೇಕು. ಅದರಿಂದ ಹಲ್ಲು ಗಟ್ಟ್ಯಾಗತಾವ.'

ಮಗಳು— 'ಅವ್ವಾ, ಹಂಗಾರ ಅವನ್ನ ಅಜ್ಜಿಗ್ಯಾಕ ತಿನಿಸೂದಿಲ್ಲ ?'

* * *

(೩)

"ಅಪ್ಪಾ, ಒಂದು ಚವಲಾ ಕೊಡ್ತೀಯಾ"

"ಮಗನ, ಈಗ ನೀ ದೊಡ್ಡವನಾದಿ. ಚವಲಾ ಪಾವಲಿ ಕೇಳಬಾರದು."

"ಹಂಗಾರ ಒಂದು ರುಪಾಯನs ಕೊಟ್ಟುಬಿಡಪಾ !"

* * *

(೪)

"ನಿಮ್ಮ ಹುಡುಗ ಇತಿಹಾಸ ಪರೀಕ್ಷ್ಯಾ ದಾಗ ಹ್ಯಾಂಗ ಮಾಡ್ಯಾನ ?"

"ಅಷ್ಟೇನು ಚಲೊ ಮಾಡಿಲ್ಲ. ಆದರ ಅವನದೇನೂ ಅದರಾಗ ತಪ್ಪಿಲ್ಲ. ಅವ ಹುಟ್ಟೋದಕ್ಕಿಂತಾ ಎಷ್ಟೋ ನೂರು-ವರ್ಷಗಳ ಹಿಂದಿನ ಇತಿಹಾಸ ಕೇಳಿದರ, ಪಾಪ, ಅವ ಹ್ಯಾರೆ ಏನು ಬರೀಬೇಕು ?"

* * *

(೫)

"ಮಧು, ಟೇಬಲ್‌ಮ್ಯಾಲ ಸಾಗರ-ಬಿದ್ದು ಕೈಚಾಚಿ ತಕ್ಕೊಳ್ಳೋದು ಮಾಡ-ಬ್ಯಾಡ. ನಿನಗ ನಾಲಿಗಿ ಇಲ್ಲೇನು ?"

"ಇದ್ದರೂ ಕೈಯಷ್ಟು ಎಲ್ಲಿ ಉದ್ದದ-ನವಾ ?"

* * *

(೬)

"ಅಪ್ಪಾ, ಅವ್ವಗ ಮಕ್ಕಳ್ನ ಹ್ಯಾಂಗ ಸಂಭಾಳಸಬೇಕು ಅಂಬೋದು ಗೊತ್ತs ಇಲ್ಲ ನೋಡು"

"ಅದ್ಹ್ಯಾಂಗ ?"

"ನಾ ಪೂರಾ ಎಚ್ಚರಿದ್ದಾಗ ಮಲಕೊ ಅಂತ ಹಚ್ಚತಾಳ ; ಮತ್ತ ನಾ ಪೂರಾ ನಿದ್ದಿಯೊಳಗಿದ್ದಾಗ ಏಳು ಅಂತ ಹಚ್ಚ-ತಾಳ"

* * *

(೭)

ಗ್ರಂಥಕರ್ತ :— 'ನಾ ಬರೀಲಿಕ್ಕೆ ಪ್ರಾರಂಭಮಾಡಿ ೨೦ ವರ್ಷದ ಮ್ಯಾಲ ನನಗ ತಿಳೀತು: ನನ್ನಲ್ಲಿ ಬರೆಯುವ ಬುದ್ಧಿ ಇಲ್ಲಾ ಅಂತ.'

ಸ್ನೇಹಿತ :— 'ಆಮ್ಯಾಲ ಬರೆಯೋ-ದನ್ನು ಬಿಟ್ಟುಕೊಟ್ಟರೇನು ?'

ಗ್ರಂ. ಕ. :— 'ಇಲ್ಲ, ಅಷ್ಟೊತ್ತಿಗೆ ನಾನು ಪ್ರಸಿದ್ಧ ಬರಹಗಾರನಾಗಿದ್ದೆ.'

* * *

(೮)

"ಅಲ್ರೀ ಸಾಹಿತಿಗಳೆ, ನೀವು ನಮ್ಮ ಮನೀ ಬಾಡಿಗೀ ಯಾವಾಗ ಕೊಡು-ವವರು ?"

"ಪ್ರಕಾಶಕನಿಂದ ಚೆಕ್ಕು ಬಂದ-ಕೂಡಲೆ"

"ಅದು ಯಾವಾಗ ಬರೋದು ?"

"ಅವನಿಗೆ ನಾನು ಕಾದಂಬರಿ ಕಳುಹಿ-ಸಿದ ಕೂಡಲೆ."

"ಮತ್ತ ಅದನ್ನ ಯಾವಾಗ ಕಳುಹಿ-ಸುವವರು ?"

"ನಾ ಬರೆದಕೂಡಲೆ !"

"ಅದನ್ನ ಯಾವಾಗ ಬರೆಯು-ವವರು ?"

"ಸ್ಫೂರ್ತಿ ಬಂದಕೂಡಲೆ."

* * *

(೯)

"ಈ ಹೇಸಿ ಅನ್ನ ನಾ ಉಣಲಾರೆ ಮ್ಯಾನೇಜರನ್ನ ಕರಿ !"

ಮಾಣಿ— 'ಮತ್ತ ಅಂವ ಹ್ಯಾರೆ ಉಣ್ತಾನೇನ್ರಿ ?'

* * *

ಕೆಮ್ಲಿನ್ ಲಿಮಿಟೆಡ್. ಬೊಂಬಾಯಿ ೨೮

ನವರಾತ್ರಿ

(ಶ್ರಾವಣರೂಪಕ)*

ಡಾ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

★

ಇದಕ್ಕೆ ಬೇಕಾಗುವ ಜನರು

೧ ನಿವೇದಕ
೨ ಕೃಷ್ಣದೇವರಾಯ
೩ ತಿಮ್ಮರಸ
೪ ದಂಡನಾಯಕ
೫ ಸ್ತುತಿಪಾಠಕ
೬ ಪಾರುಪತ್ಯಗಾರ
೭ ಎಚ್ಚರದೋಲಗದವ
೮ ಚಿನ್ನಮ್ಮಾಜಿ

೧ ವೃಂದಗೀತ ಹೇಳುವವರು
೨ ಅರ್ಚಕ ಬ್ರಾಹ್ಮಣರು
೩ ವಾದ್ಯವಾದನಕಾರರು
೪ ಮಾಂಡಲಿಕ-ಮನ್ನೆಯರು
೫ ಮಂಗಲಾರತಿ ಬೆಳಗುವ ಸುಮಂಗಲೆಯರು
೬ ಸೈನಿಕರು
೭ ಡಂಗುರದವರು
೮ ನರ್ತಕಿಯರು

ವೃಂದಗೀತ

ಜಯ ಭವಾನೀ, ಜಯ ಮೃಡಾನೀ, ಜಯವು ಜಯ ಭುವನೇಶ್ವರೀ!
ಭಯನಿವಾರಿಣಿ, ಭವವಿದಾರಿಣಿ, ಜಯವು ಜಯ ಜಗದೀಶ್ವರೀ!!!

ಚಿನ್ನಯೇ ನೀನೆಮ್ಮ ಮನವನು ನಿನ್ನ ವಾಹನವಾಗಿಸೇ—
ಪನ್ನಗಜದೊಲು ನಮ್ಮ ಕಾಡುವ ಬನ್ನಗಳ ನೀ ನೀಗಿಸೇ—
ಉನ್ನಿಯಂದದ ಹಂದೆತನವನು ಇನ್ನು ನಾಡಿಂದೋಡಿಸೇ ॥ ೧ ॥

ಕರದೊಳಿರುವಾ ಕೈದುಗಳ ಕೊಡು, ಕಿರಿಯರಿಗೆ ನೀನಾಡಲು—
ತರುಬಿ ತಡೆಯುವ ಎಡರ ಬೇಲಿಯ ಮುರಿದು ಮುಂದಕೆ ಸಾಗಲು—
ಹಿರಿಯ ಕನ್ನಡ ನಾಡ ಗುಡಿಯನು ಧರೆಯೊಳೆಲ್ಲೆಯು ಮೆರೆಯಿಸೇ ॥ ೨ ॥

೧
ನಿವೇದಕ

(ಹಿನ್ನೆಲೆಯಲ್ಲಿ ವಾದ್ಯವೃಂದದ ಆಲಾಪನೆಯಿರಬೇಕು)

ನವರಾತ್ರಿ ಕನ್ನಡಿಗರ ನಾಡಹಬ್ಬ. ನಾಡಿನ ಕಳೆದುಹೋದ […]ದ ಹಿರಿಮೆಯ ಕತೆಯನ್ನು ಸ್ಮರಣೆಗೆ ತಂದುಕೊಳ್ಳುವ […]ಪಿನ ಕಾಲ. ನಾಡೊಳಿರುವ ಜನಬಲ, ಧನಬಲ, ವಿದ್ಯಾಬಲ, […]ಸಂಪತ್ತಿ, ಕಲಾಸಂಪತ್ತಿ, ಆಹಾರಸಂಗ್ರಹಗಳನ್ನು ನಾಡಿಗ[…]ರು ಪ್ರದರ್ಶಿಸಿ, ನಾಡಿನ ಆಳವಿನಳತೆಯನ್ನು ಅಳೆದುಕೊಳ್ಳುವ […]ರ್ವಕಾಲ. ಬರಲಿರುವ ಕಾಲದ ನಾಡಿನ ಅಭ್ಯುದಯ, ಅಭಿವೃದ್ಧಿಗಳಿಗಾಗಿ, ರಾಷ್ಟ್ರಸಂವರ್ಧಕ ಶಕ್ತಿದೈವತಗಳಿಗೆ ಪೂಜೆ-ಪ್ರಾರ್ಥನೆ, ಹೋಮ-ಹವನಗಳನ್ನು ಸಲ್ಲಿಸುವ ಭಾವ-ಭಕ್ತಿಯ ಬೆಳಗಾಲ. ಕಾವೇರಿಯಿಂದ ಗೋದಾವರಿಯ ವರೆಗೂ ಕನ್ನಡ ನಾಡನ್ನು ಕಟ್ಟಿ ಆಳಿದ ಕನ್ನಡ ನಾಡವರು, ಎಂದಿನಿಂದಲೂ ಈ ನವರಾತ್ರಿಯ ಹಬ್ಬವನ್ನು ಜಾನಪದ ಹಬ್ಬವನ್ನಾಗಿ ಆಚರಿಸುತ್ತ ಬಂದಿದ್ದಾರೆ.

ವಿಜಯನಗರದ ಕನ್ನಡ ರಾಜ್ಯರಮಾರಮಣರು, ತಮ್ಮ ರಾಜಧಾನಿಯಲ್ಲಿ ಸಾರ್ವಜನಿಕವಾಗಿ ನೆರವೇರಿಸುತ್ತಿದ್ದ ನವರಾತ್ರಿಹಬ್ಬದ ವೈಭವವಂತೂ ಲೋಕವಿಖ್ಯಾತವಾಗಿದೆ. ಅಲ್ಲಿ ನಡೆಯುತ್ತಿದ್ದ

* ಧಾರವಾಡ ಬಾನುಲಿಕೇಂದ್ರದ ನಾಡಹಬ್ಬದ ವಿಶೇಷಕಾರ್ಯಕ್ರಮದಲ್ಲಿ, ತಾ. ೧೪-೧೦-೫೦ ನೆಯ ರಾತ್ರಿ ಎಂಟುಗಂಟೆಗೆ ಬಿತ್ತರಿಸಿದುದು.
—ಸಂ. ಜ.

ಈ ಹಬ್ಬದ ವಿಜೃಂಭಣೆಯನ್ನು ಕಣ್ಣಾರೆ ಕಂಡ ಪಶ್ಚಿಮ ದೇಶೀಯ ಪ್ರವಾಸಿಗರೂ, ಇರಾಣದ ರಾಯಭಾರಿಯೂ— ಬೆರಗಾಗಿ ಬೆರಳು ಕಚ್ಚಿ, ಪವಾಡವೊಂದನ್ನು ಕಂಡ ವಿಸ್ಮಯವಾಣಿಯಲ್ಲಿ ಹೊಗಳಿ ಹಾಡಿದ್ದಾರೆ. ವಿಜಯನಗರದ ಅಂದಿನ ಪರಂಪರೆಯನ್ನೇ ಇದುವರೆಗೂ ನಡೆಯಿಸಿಕೊಂಡು ಬಂದಿರುವ ಮೈಸೂರಿನ ದೊರೆಗಳು, ವರು-ವರುಷವೂ ಜರುಗಿಸುತ್ತಲಿರುವ ನವರಾತ್ರಿ ಮಹೋತ್ಸವವನ್ನು ಕಣ್ಣಾರೆ ಕಂಡವರಿಗೆ, ಈ ನಾಡಹಬ್ಬದ ಮಹತ್ತ್ವ ಎಂತಹದೆಂಬುದನ್ನು ಬೇರೆಯಾಗಿ ಬಣ್ಣಿಸಲಿಕ್ಕೇ ಬೇಡ.

ಒಂದು ಹಳ್ಳಿಯೂ ಒಂದು ರಾಜ್ಯ; ಹಳ್ಳಿಯ ಗೌಡನೇ ಅಲ್ಲಿಯ ರಾಜ—ಎಂಬ ಭಾವನೆಯಿಂದ ಸಂಘಟಿತವಾದ ನಮ್ಮ ನಾಡಿನ ಹಳ್ಳಿ-ಹಳ್ಳಿಗಳಲ್ಲಿಯೂ, ನವರಾತ್ರಿಯ ಹಬ್ಬ, ಸಾರ್ವಜನಿಕ ಹಬ್ಬವೆಂದು ತಿಳಿದು ನೆರವೇರಿಸುವ ರೀತಿಯನ್ನು, ಈಗಲೂ ನಾವು ಕಾಣಬಹುದು. ನಾಡಿಗರ ಬಾಳಿಗೆ ಅವಶ್ಯಕವಾದ ಶಕ್ತಿ–ಸಂಪತ್ತು–ಜ್ಞಾನಗಳಿಗೆ ಅಭಿಮಾನಿ ದೈವತಗಳಾದ ದುರ್ಗಾ, ಶ್ರೀದೇವಿ, ಸರಸ್ವತಿಯರ ಉಪಾಸನೆಯೇ ಈ ಉತ್ಸವದ ಮುಖ್ಯಾಂಗವಾಗಿ ಇರುವುದು.

ನವರಾತ್ರಿ ಹಬ್ಬಕ್ಕೆ— ನಮ್ಮ ಪ್ರಾಚೀನ ರಾಜಕೀಯ ಇತಿಹಾಸದಲ್ಲಿ— ಇನ್ನೂ ಒಂದು ಕಾರಣಕ್ಕಾಗಿ ಮಹತ್ತ್ವವನ್ನು ಕೊಡಲಾಗಿದೆ. ರಾಜ-ಮಹಾರಾಜರುಗಳೂ ಸಮ್ರಾಟರೂ ಈ ಹಬ್ಬವನ್ನು ಆಚರಿಸಿ, ಶ್ರದ್ಧೆಯನ್ನೂ ಉತ್ಸಾಹವನ್ನೂ ತುಂಬಿಕೊಂಡು, ವೈರಿರಾಜರನ್ನು ಜಯಿಸಲು ದಿಗ್ವಿಜಯ ಯಾತ್ರೆಯನ್ನು ಕೈಕೊಳ್ಳಲಿಕ್ಕೆ, ವಿಜಯದಶಮಿಯ ಸುಮುಹೂರ್ತದಲ್ಲಿಯೇ ಸಿಮೋಲ್ಲಂಘನವನ್ನು ಮಾಡುತ್ತಿದ್ದರು. ಕನ್ನಡ ನಾಡಿನ ಸಂಸ್ಕೃತಿಯ ಮೂರ್ತಿವೆತ್ತಂತಿದ್ದ ಕವಿರಾಜಹಂಸ ರತ್ನಾಕರಸಿದ್ಧನು, ತನ್ನ 'ಭರತೇಶವೈಭವ'ದಲ್ಲಿ ಈ ಹಬ್ಬದ ವೈಶಿಷ್ಟ್ಯವನ್ನು ಕುರಿತು ತುಂಬ ಹೇಳಿದ್ದಾನೆ. ಅವನ್ನು ಆತನ ವಾಣಿಯಲ್ಲಿಯೆ ಕೇಳಿರಿ :

'ಲೀಲೆಯೊಳು ರಾಜ್ಯವನಾಳುತಿರ್ದ ಭೂಪಾಲನ ಬತ್ತಿಗೆ' ಬುದ್ಧಿಸಾಗರನೆಂಬ ಮಹಾಮಂತ್ರಿ ಬಂದು ಹೀಗೆ ಆಲೋಚನೆಗೆಯ್ದನು :

(ರಾಗವಾಗಿ ಅಂದು ತೋರಿಸಬೇಕು)

'ಮಳೆಗಾಲ ಹೋದುದು, ಬೆಳಗಾಲ ಬಂದುದು,
ಬಳ ಸಡಿಲ್ವುದಕಿನ್ನು ಚಿನ್ನು ! !
ಬಳಸಿಕೆ ಪರಿಹಾರವಾಗಿ ದಿಗ್ವಿಜಯಕೆ–
ನ್ನೇಳಿಸುವುದೊಳ್ಳಿತು ನೃಪತಿ ! ! ||೧||

ಸುಪ್ರದಕ್ಷಿಣವಾಗಿ ಪೋಗಿ ಸಮಸ್ತ ಭೂ-
ಪಿ.ಪ್ರಭುಗಳ ವಶಮಾಳ್ಪ !
ಭೂಪ್ರದಕ್ಷಿಣ ಕೇಳು ದುಷ್ಟಮರ್ದನ ಶಿಷ್ಟ-
ವಿಪ್ರ-ತಾಪಸ-ಧರ್ಮರಕ್ಷ! ||೨||

ದ್ವೀಪ-ದ್ವೀಪದೊಳುಕ್ಕಿ ಸೊಕ್ಕಿದ್ದ ದಿಂಡೆಯ
ಭೂಪತಿಗಳ ಹಿಂಡ ನಿನ್ನ !
ಶ್ರೀಪಾದಕೆರಗಿಸಿಕೊಳಲಡಿಯಿಡು ಜಂಬೂ-
ದ್ವೀಪ ದಕ್ಷಿಣಲೋಕ ಸೂರ್ಯ !

ಗಿರಿದುರ್ಗ ಜಲದುರ್ಗ ವನದುರ್ಗದೊಳಗಿರ್ದ
ನರಪತಿಗಳ ಸೊಕ್ಕ ಮುರಿದು,
ಭರತ ಷಟ್‌ಖಂಡದ ಧರೆಯ ಸಾಧಿಸಿ ತೋರು,
ಭರತೇಶನೆಂಬ ಬೀರವನು !

ಎಂದು ನುಡಿದ ಬುದ್ಧಿಸಾಗರ ಮಂತ್ರಿಗಾ-
ನಂದದಿ ಉಡುಗೊರೆಯಿತ್ತು,
ಮುಂದಿಗೆ ಹೇಳ ಸುಪಯಣಕುಜ್ಜುಗಿಸು ಹೋ-
ಗೆಂದು ಬೀಳ್ಕೊಟ್ಟನು ಮುಂದೆ !

ನವರಾತ್ರಿ ಜಿನಮಹಿಮೆಯ ಮಾಡಿ ದಶಮಿಯ
ದಿವಸದೊಳ್ ಪಯಣವಪ್ಪುದಕೆ—
ಹವಣಿಸಿ ಜೋಕೆ ಮಾಡುವೆನೆಂದು ಮಂತ್ರಿ ಬಿ-
ನ್ನವಿಸಿ ಬೀಳ್ಕೊಂಡು ನಡೆದನು ||

ಮುಂದೆ ಭರತರಾಜನ ರಾಜಧಾನಿಯಲ್ಲಿ ಜರುಗಿದ ನವ[ರಾತ್ರಿ] ಮಹೋತ್ಸವದ ಅಂಗೋಪಾಂಗದ ವಿವರಣೆಗಳನ್ನು ರತ್ನಾಕರಸಿದ್ಧ[ನ] ಬಾಯಿಂದಲೆ ಕೇಳಿ ತಿಳಿದುಕೊಳ್ಳಬೇಕು.

೩

(ಸ್ವಲ್ಪ ದೂರದಿಂದ ಪರಾಕಿನ ಉಗ್ಗಡಣೆ ಕೇಳುವುದು)

"ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ, ಮಹಾ
ಮಂಡಲೇಶ್ವರ
ಕರ್ಣಾಟಸಾಮ್ರಾಜ್ಯಲಕ್ಷ್ಮೀ ಮನೋಹರ, ಅನ್ಯರಾಜ-
ಬಲತಮೋಭಾಸ್ಕರ
ಕನ್ನಡರಾಜ್ಯರಮಾರಮಣ, ಹಿಂದೂರಾಯ ಸುರತ್ರಾಣ
ಮೂರುರಾಯರ ಗಂಡ, ಮಹಾಸಮರ ಪ್ರಚಂಡ....
ಶ್ರೀನರಪತಿ ಕೃಷ್ಣದೇವರಾಜೇಂದ್ರ ಭೋ.... ಪರಾಕು !

ನಿವೇದಕ

ಓಹೋ ! ಇದೇನಿದು ? ವಿಜಯನಗರದ ನರಪತಿ ಶ್ರೀಕೃಷ್ಣದೇವರಾಜೇಂದ್ರನ ಸ್ತುತಿನಾದಧ್ವನಿ ! ಓ ! ಆ ಅಮರ ಕನ್ನ[ಡ] ಸಮ್ರಾಟ, ತನ್ನ ರಾಜಧಾನಿ ವಿಜಯನಗರದಲ್ಲಿ ಎಂದಿನ[ಂತೆ] ನವರಾತ್ರಿಯ ಮಹೋತ್ಸವವನ್ನು ನಡೆಯಿಸಿದ್ದಾನೆ. ಅದನ್ನು ಇಂದಿನವರಾದ ನಾವು ಕಣ್ಣಿಂದ ನೋಡಲಾರೆವಾದರೂ ಅಂತಃಶ್ರವಣಗಳಿಂದ ಕೇಳಬಲ್ಲೆವು. ಇದೊ, ನರಪತಿಯು ಅಂದಿ[ನ] ಓಲಗವನ್ನು ಪೂರಯಿಸಿಕೊಂಡು, ತನ್ನ ಪ್ರೀತಿಯ ರಾಣಿ

ಚಿನ್ನಮಾಂಬೆಯ ಅಂತಃಪುರಕ್ಕೆ ದಯಮಾಡಿಸಿ ಇದ್ದಾನೆ. ಚಿನ್ನಮಾಂಬೆಯ ಸಂತೋಷ, ಅವಳ ನಗೆಗಣ್ಣಲ್ಲಿ ಹೊರಸೂಸುತ್ತಲಿದೆ.

ಚಿನ್ನಮಾಂಬೆ:— ದೊರೆಗಳ ಶುಭಾಗಮನದಿಂದ ಧನ್ಯಳಾದೆ.

ಕೃಷ್ಣರಾಜ:— ರಾಣೀ, ಬರಲಿರುವ ಶರತ್ಕಾಲದ ಪೌರ್ಣಿಮೆಯ ಚಂದ್ರನನ್ನು, ಇಂದಿನ ಪದ್ಮಪಕ್ಷದ ಚತುರ್ದಶಿಯ ದಿನವೇ ನೋಡಬೇಕೆಂಬ ಬಯಕೆಯುಂಟಾಯಿತು; ಅದು ಇಲ್ಲಿಯೇ ನೋಡಲು ಸಿಕ್ಕುವುದೆಂದು ಆತುರದಿಂದ ಬಂದಿದ್ದೇನೆ.

ಚಿನ್ನಮಾಂಬೆ:— (ಮೆಲುನಗೆ ನಗುತ್ತ) ವಿಜಯನಗರದ ರಾಯರ ಪರಾಕ್ರಮಕ್ಕೆ ಕೊರತೆ ಏತರದು? ಅದು ಪದ್ಮಪಕ್ಷದಲ್ಲಿಯೂ ಪೂರ್ಣಚಂದ್ರನನ್ನು ಎಳೆದುತಂದು ನಿಲ್ಲಿಸುವ ಸಾಮರ್ಥ್ಯದಿಂದ ಕೂಡಿದೆ.

ಕೃಷ್ಣರಾಜ:— (ವ್ಯಂಗ್ಯನಗೆ ನಗುತ್ತ) ಅದೇನೋ ಸರಿಯೆ! ಆದರೆ.... ಆ ಪೂರ್ಣಚಂದ್ರನನ್ನು ಆಗಾಗ ಮುಸುಕುವ ಗ್ರಹಣಗಳನ್ನು ಹೊಡೆದೋಡಿಸುವ ಮಂತ್ರಶಕ್ತಿ ಮಾತ್ರ ನಮ್ಮ ಪರಾಕ್ರಮದಲ್ಲಿ ಇಲ್ಲವಾಗಿದೆ.

ಚಿನ್ನಮಾಂಬೆ:— ಇಲ್ಲವೇಕೆ? ಬೇಕಾದಷ್ಟು ಇದೆ. ಎಂತಲೇ ಸನ್ನಿಧಿಯ ದರ್ಶನಮಾತ್ರದಿಂದಲೇ ಎಂತೆಂತಹ ಗ್ರಹಣಗಳೂ ಬಿಟ್ಟು ಓಡಿಹೋಗುತ್ತವೆ. ಗ್ರಹಣದ ನೆನಪುಗಳು ಕೂಡ ಮಾಸಿಹೋಗುತ್ತವೆ.

ಕೃಷ್ಣರಾಜ:— ಆದ್ದರಿಂದಲೇ ನಾನು ಭಾವಿಸಿದ್ದೇನೆ: ಬಯಸಿದಾಗೆಲ್ಲ ಇಲ್ಲಿ ಪೂರ್ಣಚಂದ್ರನ ದರ್ಶನ ದೊರೆಯುವುದೆಂದು!

ಚಿನ್ನಮಾಂಬೆ:— ತಮ್ಮ ಭಾವನೆ ಯಾವಾಗಲೂ ಸತ್ಯವಾಗಲಿ! ಆದಾಯಿತಲ್ಲ! ಇಂದಿನ ಓಲಗದಲ್ಲಿ ನಡೆದ ವಿಶೇಷವೇನೆಂಬುದನ್ನು ಕೇಳಬಹುದೇ ನಾನು?

ಕೃಷ್ಣರಾಜ:— ನೋಡು ಚಿನ್ನಾ, ರಾಯಚೂರಿನ ವಿಜಯದಿಂದ ವಿಜಯನಗರದ ರಾಯರ ಮಹಾಶಕ್ತಿಯ ಪರೀಕ್ಷೆ ಮಾಡಿದಂತಾಗಿದೆ. ಈ ವಿಜಯ, ನಮ್ಮ ಪಿತೃಗಳ ಅತೃಪ್ತ ಆಶೆಯನ್ನು ಪೂರೈಸಿ, ಅವರನ್ನು ಮುಕ್ತರನ್ನಾಗಿ ಮಾಡಿದೆ. ಇನ್ನು ಉಳಿದಿರುವುದೆಂದರೆ ಉತ್ತರದ ದಿಗ್ವಿಜಯ. ವಿಜಯನಗರದ ಅಧೀನತೆಯನ್ನು ತಪ್ಪಿಸಿಕೊಂಡಿರುವ ಉತ್ತರ ಕರ್ನಾಟಕದ ಸೀಮಾಪ್ರದೇಶಗಳನ್ನು ನಾವೀಗ ಸಾಧಿಸಿಕೊಳ್ಳಬೇಕಾಗಿದೆ. ಇಂದಿನ ಓಲಗದಲ್ಲಿ ಇದೇ ವಿಷಯದ ಚರ್ಚೆ ನಡೆಯಿತು.

ಚಿನ್ನಮಾಂಬೆ:— ಬರೀ ಚರ್ಚೆಯೊ; ನಿರ್ಣಯವೇನಾದರೂ ಆಯಿತೊ?

ಕೃಷ್ಣರಾಜ:— ನಿರ್ಣಯವೂ ಆಯಿತು: ನವರಾತ್ರಿಯ ಮಹೋತ್ಸವವನ್ನು ಮುಗಿಸಿಕೊಂಡು, ವಿಜಯದಶಮಿಯ ದಿನವೇ ವಿಜಯನಗರದ ಸೈನ್ಯದ ಸೀಮೋಲ್ಲಂಘನ— ಎಂದು.

ಚಿನ್ನಮಾಂಬೆ:— ಕರ್ನಾಟಸಾಮ್ರಾಜ್ಯಲಕ್ಷ್ಮಿಗೆ ಗೆಲುವಾಗಲಿ ಈ ಉತ್ತರದ ದಿಗ್ವಿಜಯ, ವೀರಪತ್ನಿತ್ವದ ನನ್ನ ಹೆಮ್ಮೆಯನ್ನು ಹೆಚ್ಚಿಸಲಿ!

ಕೃಷ್ಣರಾಜ:— ಇನ್ನೊಂದು ವಿಷಯ ಚಿನ್ನಾ! ಈ ಸಲದ ನವರಾತ್ರಿಯ ಸಮಾರಂಭದ ಸಂದರ್ಶನಾಕಾಂಕ್ಷೆಯಿಂದ, ಪೋರ್ಚುಗೀಜ್ ರಾಯಭಾರಿಯೊಬ್ಬ— ನಾಳೆಯ ದಿನವೇ— ಇಲ್ಲಿಗೆ ಬರಲಿದ್ದಾನೆ. ನಮ್ಮ ರಾಷ್ಟ್ರೀಯ ಮಹೋತ್ಸವದ ವಿವರಗಳನ್ನೆಲ್ಲ ಅವನು ನೋಡಬೇಕೆಂದಿದ್ದಾನಂತೆ!

ಚಿನ್ನಮಾಂಬೆ:— ಆ ಕುದುರೆವ್ಯಾಪಾರಿ ಕೆಂಪುಮೊಗದವರಿಗೆಲ್ಲಾ ನಮ್ಮ ಹಿಂದುಗಳ ಹಬ್ಬದ ವಿಚಾರವೇಕೆ ಬೇಕೋ?

ಕೃಷ್ಣರಾಜ:— ಅವರು ಬರೀ ಕುದುರೆಯ ವ್ಯಾಪಾರಿಗಳಲ್ಲ ಚಿನ್ನಾಜೀ! ಅವರಿಗೂ ಒಂದು ದೇಶವಿದೆ; ಅವರಿಗೂ ಒಂದು ಧರ್ಮವಿದೆ. ತುಂಬಾ ಸಾಹಸಿಗಳು! ಎಲ್ಲೆಲ್ಲಿ ಏನೇನಿದೆಯೆಂಬುದನ್ನು ಕಂಡುಕೊಳ್ಳಬೇಕೆಂದು ತುಂಬ ಕುತೂಹಲಿಗಳವರು! ರಾಜಧಾನಿಯ ನವರಾತ್ರಿಯ ಉತ್ಸವವೆಂದರೆ ಕನ್ನಡ ನಾಡಿನ ಸಾಮರ್ಥ್ಯ, ಸಂಪತ್ತು, ರಾಜವೈಭವ, ಲಲಿತಕಲೆ— ಇವೆಲ್ಲವು

ಗಳನ್ನು ಒಂದೇ ಕಾಲದಲ್ಲಿ ನೋಡಲಿಕ್ಕೆ ಅವರಿಗೆ ಅನುಕೂಲ ವಾಗುವುದು

(ದೂರದಿಂದ ಡಂಗುರದ ಸಪ್ಪಳ ಕೇಳುವುದು)

ಡಂಗುರದವ:—

ಕೇಳಿರಣ್ಣಾ ಎಲ್ಲಾರೂ ಕೇಳ್ರೀ....! ನಾಳೆ ಅಮಾಸಿ ಅದ. ಮರುದಿನಾ ಪಾಡ್ಯೇದಿಂದ, ರಾಜಧಾನ್ಯಾಗ ನವರಾತ್ರೀ ಉತ್ಸವ ಮೊದಲಾಗತೈತಿ....! ಅದಕಾಗಿ ನಗರದ ಬೀದಿ ಬೀದಿಗಳೂ ಮನೆ ಮನೆಗಳೂ ಅಲಂಕಾರವಾಗಬೇಕು....! ದೇವಸ್ಥಾನದೊಳಗ ದೀಪಗಳು ಬೆಳಗಿ, ಹಬ್ಬದ ಅಲಂಕಾರ–ಉತ್ಸವ–ಸೇವೆಗಳೆಲ್ಲಾ ನಡೀಬೇಕು...! ಇದಕ್ಕ ತಪ್ಪಿದವರು ರಾಜರ ತಪ್ಪುದಂಡಕ್ಕ ಗುರಿಯಪ್ಪೋರೀ!

(ಮತ್ತೆ ತಮ್ಮಟೆಯ ಶಬ್ದ)

ಚಿನ್ನಮಾಂಬೆ:— ಓ, ಉತ್ಸವದ ಸಿದ್ಧತೆ ರಭಸದಿಂದಲೆ ನಡೆದಂತೆ ತೋರುವುದಲ್ಲ!

ಕೃಷ್ಣದೇವರಾಜ:— ನಡೆಯಲೇ ಬೇಕಲ್ಲ ದೇವಿ! ಅಮಾವಾಸ್ಯೆಯ ಸಂಜೆಯೊಳಗಾಗಿ ಎಲ್ಲ ಮಾಂಡಲಿಕ-ಮನ್ನೆಯರೂ ಸರದಾರ-ಸಾಮಂತರೂ ಸಾಮ್ರಾಜ್ಯಕ್ಕೆ ಸಲ್ಲಿಸಬೇಕಾದ ಅನ್ನಸಾಮಗ್ರಿಯನ್ನೂ ಕರಭಾರವನ್ನೂ ತಂದು ತಂದು ಒಪ್ಪಿಸತೊಡಗುವರು. ಅಮಾವಾಸ್ಯೆಯ ದಿನವೆ 'ಜಾಳಿಗೆಪೂಜೆ' 'ಅನ್ನಧಾನ್ಯಪೂಜೆ' ನಡೆಯಬೇಕು. ರಾಯಚೂರಿನ ನಮ್ಮ ವಿಜಯದ ಮೂಲಕ ಈ ಸಲದ ಉತ್ಸವಕ್ಕೆಂದು ದೇಶ ದೇಶಗಳಿಂದ ತುಂಬ ಜನ ಬರಲಿದೆ. ಎಲ್ಲರ ಊಟ-ಪಾನಗಳ ವ್ಯವಸ್ಥೆಯಾಗಬೇಕು.

ಚಿನ್ನಮಾಂಬೆ:— ಪಂಪಾಪತಿಯ ಕರುಣೆಯಿರುವ ಕರ್ನಾಟ-ಸಾಮ್ರಾಜ್ಯದಲ್ಲಿ ಯಾವುದಕ್ಕೆ ಕೊರತೆಯಿದೆ? ಎಲ್ಲವೂ ದೈವಿಕ ಪವಾಡದಂತೆ ಸುಯಂತ್ರಿತವಾಗಿ ಸಾಗುವುದು.

ಕೃಷ್ಣದೇವರಾಜ:— ಚಿನ್ನಾ, ನಿನ್ನ ಶ್ರದ್ಧೆ ದೊಡ್ಡದು! ಆತ್ಮೀಯರಾದ ನಿಮ್ಮೆಲ್ಲರ ಸಾಮ್ರಾಜ್ಯವಿಷಯಕ ಶ್ರದ್ಧೆಯೇ ಈ ವಿಜಯನಗರದ ರಾಯರ ಕೀರ್ತಿಪ್ರಭೆಗೆ ಕಾರಣವಾಗಿದೆ. ಇರಲಿ, ದೇವೀ! ನಿನ್ನ ಸವಿಯಾದ ಕಂಠದಿಂದ, ನೀನೆ ರಚಿಸಿದ ಗೀತೆಯೊಂದನ್ನು ಕೇಳಬೇಕೆಂಬ ಆಶೆಯಾಗಿದೆ.

ಚಿನ್ನಮಾಂಬೆ:— ದೊರೆಗಳ ಚಿತ್ತ!

(ತಂಬೂರಿಯೊಂದಿಗೆ ಹಾಡಲು ತೊಡಗುವಳು.)

ಹೃದಯರಾಜ ಬಾರೋ, ವದನ ವಿಧುವ ತೋರೋ ॥ ಪಲ್ಲವಿ ॥
ಮೃದುಹಾಸದ ಮೆರೆವ ಸುಧಾ-
ಸದನ ಕಾಯುತಿಹೆನಿದೋ ॥ ಅನುಪಲ್ಲವಿ ॥
ಸವೆದುವೆನಿತೊ ರಾತ್ರಿ–ದಿನ!
ಒಲವಿನ ಧನ ಬಯಸಿ....
ಸವಿಗಾರಾ ಗೋಪವರಾ,
ಜವನಳಿ ಬಾ ಕರದತೀ ॥ ೧ ॥

೪

ತಿರೋವಳ

(ನಾಗಸ್ವರದ ಹಿನ್ನೆಲೆಯೊಂದಿಗೆ)

ಮರುದಿನವೆ ವಿಜಯನಗರದ ಜನರ ಸಂಖ್ಯೆ ಒಂದಕ್ಕೆ ಎರಡಾಯಿತು; ಮೂರಾಯಿತು; ನಾಲ್ಕಾಯಿತು. ಹತ್ತಾಯಿತು. ಗಜಶಾಲೆ, ಹಯಗಳ ಲಾಯ, ದಿವ್ಯಾಯುಧಗಳ ಪೂಜೆ ನಡೆವ ಭವ್ಯ ಭವನ, ತುರುಗಳ ಹಟ್ಟಿ; ಸೈನಿಕರ ಬೀಡಾರ ಇವೆಲ್ಲ ಅಲಂಕಾರದಿಂದ ಸಜ್ಜುಗೊಂಡುವು. ಬೀದಿಬೀದಿಗಳಲ್ಲೆಲ್ಲ ಪನ್ನೀರ ಚಳೆಯ. ಸಾದು ಕಸ್ತೂರಿಯ ಸಾರಣೆ. ಬಣ್ಣಬಣ್ಣದ ರಂಗವಲ್ಲಿಯ ದಾಂಗುಡಿ. ಮನೆ-ಮನೆಯ ಮಾಳಿಗೆಗಳಿಗೆ ಗುರುಜು-ಕೇತುಗಳು. ಕೂಡುಬೀದಿಗಳಲ್ಲಿ ತೋರಣಬಾಗಿಲು—ವಾದ್ಯದ ಕರುವಾಡುಗಳು.

ನವರಾತ್ರಿಯ ಓಲಗಕ್ಕಾಗಿಯೆ ಕಟ್ಟಿಸಿದ ಭವ್ಯವಾದ ಓಲಗ ಮಂಟಪವು ನಾನಾದೇಶಗಳಿಂದ ಬಂದ ಶಿಲ್ಪಕಲಾಪ್ರವೀಣ ಶಿಲ್ಪಸೌಂದರ್ಯದಿಂದ ತುಂಬಿನಿಂತಿರುವುದು. ಎಲ್ಲೆಲ್ಲಿಯೂ ಅಗಿಲು ಸಾಮ್ರಾಣಿಯ ಧೂಪದ ವಾಸನೆಗಳು. ಮನೆ ಮನೆಯ ಬಾಗಿಲುಗಳಿಗೂ ತಳಿರು ತೋರಣಗಳು, ಹೂವಿನ ಗುಚ್ಛ-ಝಲ್ಲರಿಗಳು. ವಿಜಯನಗರದ ಇಂದಿನ ನೋಟ ಕುಬೇರನ ಅಲಕಾವತಿಯ ವೈಭವವನ್ನು ವಿಡಂಬಿಸುವಂತಹದು. ಹಗಲು ಒಂದು ಪ್ರಹರದ ತಾಸು ಬಾರಿಸಿತು ಕೇಳಿರಿ. (ಗಂಟೆಯ ಸಪ್ಪಳ) ಅರಮನೆಯ ಓಲಗಶಾಲೆಯಲ್ಲಿ ಕೃಷ್ಣದೇವರಾಯನು ಮಂತ್ರಿಯಾದ ಸಾಳುವ ತಿಮ್ಮರಸನೂ ಮಾತನಾಡುತ್ತಲಿದ್ದಾರೆ.

ಕೃಷ್ಣದೇವ:— ಅಪ್ಪಾಜಿ, ಸಮಾರಂಭದ ಸಿದ್ಧತೆ ಪೂರ್ಣವಾಗುತ್ತಲಿದೆಯಲ್ಲವೆ?

ತಿಮ್ಮರಸ:— ಎಲ್ಲ ಸಿದ್ಧತೆಯೂ ಪುರಜನ-ಪರಿವಾರದ ಸಹಕಾರದಿಂದ ಅಚ್ಚುಕಟ್ಟಾಗಿ ನಡೆದಿದೆ. ಪೋರ್ತುಗೀಜ ಪರ್ಷಿಯಾದೇಶದ ರಾಯಭಾರಿಗಳಿಗಾಗಿ, ಹೊರವಳಯದ ಅತಿಥಿಗೃಹದಲ್ಲಿ ವಸತಿಸೌಕರ್ಯವನ್ನು ಏರ್ಪಡಿಸಲಾಗಿದೆ. ಮಾಂಡಲೀಕರಿಗೆಲ್ಲ ಪ್ರತಿವರ್ಷದಂತೆ ಅವರವರಿಗೆ ನಿಯಮಿತವ ಬೀಡಾರಗಳು ಇದ್ದೇ ಇವೆ.

ಕೃಷ್ಣದೇವ:— ಎಲ್ಲ ಮಾಂಡಲಿಕ-ಮನ್ನೆಯರಿಂದಲೂ ಜಾಳಿಗೆ ಪೂಜೆಗಾಗಿ ಸಲ್ಲಬೇಕಾದ ಕಪ್ಪಕಾಣಿಕೆ ಬಂದಂತಾಯಿತಲ್ಲವೆ?

ತಿಮ್ಮರಸ:— ಉತ್ತರಕೊಂಕಣ, ಬೆಳಗಾಂವಿನಾಡು, ಬೆಳುವಲನಾಡುಗಳವರಿಂದ ಮಾತ್ರ ಇದುವರೆಗೂ ಬಂದಿಲ್ಲ. ಬರುವಂತೆಯೂ ತೋರುವುದಿಲ್ಲ.

ಕೃಷ್ಣದೇವ:— ಇದೆಲ್ಲವೂ ವಿಜಾಪುರದವರ ಅಧಿಕಪ್ರಸಂಗ ಕೈವಾಡ ಅಪ್ಪಾಜೀ! ರಾಯಚೂರುಯುದ್ಧದಲ್ಲಿ ತಾಗಿದ ಬಿಸಿಯಿಂದ ಅವರ ಬೆಣ್ಣೆಯನ್ನೂ ಪೂರ್ಣವಾಗಿ ಕರಗಿಲ್ಲವೆಂದು ತೋರುವುದು. ಈ ಸಲದ ನಮ್ಮ ವಿಜಯತುರಂಗಮವು, ಕೃಷ್ಣೆಯ ತಿಳಿನೀರಲ್ಲಿ ಈಸಿ ಪಾರಾಗಿ, ಆಚೆಯ ಕರವೀರ, ಕರಹಾಡ ನಾಡುಗಳಲ್ಲಿ ಹೇಷಾರವವನ್ನು ಮಾಡಲೇ ಬೇಕು. ನಮ್ಮಲ್ಲಿಯ

ಜಯಾ!

ನೇಕ ಜನರಿಗೆ ಈ ವಿಜಯನಗರದ ಹಿಂದೂ ಸುರತ್ರಾಣರ ಸಾಮ್ರಾಜ್ಯವು ಯಾವ ಮಹಾಕಾರ್ಯಕ್ಕಾಗಿ ನಿಂತಿದೆಯೆಂಬುದರ ಕಲ್ಪನೆಯೆ ಇದ್ದಂತಿಲ್ಲ. ಅಧಿಕಾರದಾಶೆ-ಅರ್ಥದಾಶೆಗಳ ಮುಂದೆ, ಧರ್ಮ-ಸ್ವದೇಶಗಳ ಬೆಲೆಯೂ ಅವರಿಗೆ ಇಲ್ಲದಂತಾಗಿದೆ. ಇರಲಿ, ಇದಿಷ್ಟು ಮಹೋತ್ಸವ ಮುಗಿಯಲಿ. ಆ ಮತ್ತ ಆದಿಲ್‌ಶಾಹಿಗೆ, ಉತ್ತರದ ಕಡೆಗೂ ಒಂದು ಕೈ ತೋರಿಸಿಬರೋಣ!

(ಸೇವಕನೊಬ್ಬ ಬಂದು ಹೇಳುವನು)

"ದೇವರು ಚಿತ್ತಯಿಸಬೇಕು. ಕೋಶವಾಲ ನಂಜನಾಯಕರು ಸನ್ನಿಧಿಯ ಆಜ್ಞೆಗಾಗಿ ದಾರಿಕಾಯುತ್ತಲಿದ್ದಾರೆ."

ಕೃಷ್ಣದೇವ:—ಅವರಿಗೆ ಇಲ್ಲಿಗೇ ಬರಲಿಕ್ಕೆ ಹೇಳು.

ಸೇವಕ:— ಪ್ರಭುಗಳ ಆಜ್ಞೆ!

ತಿಮ್ಮರಸ:—ನಂಜನಾಯಕರ ಕಡೆಗೆ ನಮ್ಮ ಐದೂ ಜನ ಮಹಾಮಾಂಡಲಿಕರ ಆತಿಥ್ಯದ ವ್ಯವಸ್ಥೆಯನ್ನು ಒಪ್ಪಿಸಿಕೊಡಲಾಗಿದೆ. ಗೇರುಸೊಪ್ಪೆ-ಭಟಕಳದ ಅರಸರು ನಿನ್ನೆಯ ದಿನವೇ ಬಂದಿರುವುದನ್ನು ಸನ್ನಿಧಿಗೆ ವಿದಿತಪಡಿಸಿದ್ದೇನೆ. ಕರ್ನಾಟ ಸಿಂಹಾಸನಕ್ಕೆ, ಕಾಣಿಕೆಯನ್ನು ಒಪ್ಪಿಸುವುದಕ್ಕೆ ತಮ್ಮ ಸಾಗರ ತೀರದ ಹಲವು ಅಪರೂಪದ ಪದಾರ್ಥಗಳನ್ನು ತಂದಿರುತ್ತಾರೆ.

(ನಂಜನಾಯಕನು ಬರುವನು.)

ನಂಜ:— ಪ್ರಭುಗಳಿಗೆ ವಂದನೆಗಳು.

ಕೃಷ್ಣದೇವ.—ಬರಬೇಕು, ನಾಯಕರು.

ನಂಜ:—ಇದೀಗ ಬಂಕಾಪುರದ ಮಾಂಡಲಿಕರು ತಮ್ಮ ಪರಿವಾರದೊಂದಿಗೆ ಬಂದರು. ಅವರನ್ನು ಸತ್ಕರಿಸಿ ಬೀಡಾರದಲ್ಲಿ ಇರಿಸುವ ಏರ್ಪಾಡು ಮಾಡಿದ್ದೇನೆ. ಅವರಿಂದ ಒಂದು ವಿಶೇಷ ಸಂಗತಿ ಗೊತ್ತಾಯಿತು. ಅದನ್ನು ಸನ್ನಿಧಿಗೆ ಅರಿಕೆ ಮಾಡಿಕೊಳ್ಳಲು ಅವಸರದಿಂದ ಬಂದೆ.

ತಿಮ್ಮರಸ:—ಅದೇನು ವಿಶೇಷಸಂಗತಿ ನಾಯಕರೇ?

ನಂಜ:— ಬೆಳಗಾಂವಿಯ ಮನ್ನೆಯ ಮಲ್ಲಿನಾಯಕರು ಕಪ್ಪ-ಕಾಣಿಕೆಯೊಂದಿಗೆ ರಾಜಧಾನಿಗೆ ಬರಲು ಹೊರಟಿದ್ದರಂತೆ. ವಿಜಾಪುರದವರ ಸೈನ್ಯದ ತುಣುಕೊಂದು ಅವರನ್ನು ದಾರಿಯಲ್ಲಿಯೆ ತಡೆದು, ಒತ್ತಾಯದಿಂದ ಹಿಂದಕ್ಕೆ ಅಟ್ಟಿದೆಯಂತೆ. ಈಗ ಮಲ್ಲಿನಾಯಕರನ್ನು ಸೆರೆಯಲ್ಲಿ ಇರಿಸಲಾಗಿದೆಯಂತೆ.

ಕೃಷ್ಣದೇವರಾಯ:—ಒಂದುರೀತಿಯಿಂದ ನಮಗಿದು ಶುಭಸಮಾಚಾರವೇ ಅಲ್ಲವೇ ಅಪ್ಪಾಜಿ! ಆ ನಾಡಿನ ಜನರಲ್ಲಿ ನಮ್ಮ ರಾಜ್ಯದ ಬಗ್ಗೆ ವಿಶ್ವಾಸ-ಪ್ರೀತಿಗಳಿವೆಯೆಂದಹಾಗಾಯಿತು. ಮಲ್ಲಿನಾಯಕರನ್ನು ಸೆರೆಯಲ್ಲಿ ಇರಿಸಿರುವುದರಿಂದ ಅಲ್ಲಿಯ ಜನರಲ್ಲಿ ಒಂದು ಬಗೆಯ ಅತೃಪ್ತಿ-ಅಸಂತುಷ್ಟಿಗಳು ಹೊತ್ತಿರಬಹುದು.

ತಿಮ್ಮರಸ:— ನಮ್ಮ ವಿಜಯಯಾತ್ರೆಗೆ ಕ್ಷೇತ್ರವನ್ನು ಹದಗೊಳಿಸಿಯೇ ಇಟ್ಟಂತಾಯಿತು; ಇದರ ಪ್ರಯೋಜನವನ್ನು ನಾವು ಪಡೆಯಲೇ ಬೇಕು.

ಕೃಷ್ಣದೇವ:— ನಂಜನಾಯಕರೆ, ಈ ಮಾತು ಇರಲಿ! ರಾಜಧಾನಿಯ ಉಗ್ರಾಣದ ಏರ್ಪಾಡು ತೃಪ್ತಿಕರವಾಗಿದೆಯೆ?

ನಂಜನಾಯಕ:— ಸಮೃದ್ಧವಾಗಿದೆ ಪ್ರಭು! ಉಲುಪೆಯ ಮನೆಗಳು, ಉಗ್ರಾಣಗಳು ಆಹಾರದ ಸರಕುಗಳಿಂದ ತುಂಬಿನಿಂತಿವೆ. ಹಾಲು, ಮೊಸರು, ತುಪ್ಪ, ಎಣ್ಣೆಗಳನ್ನು ಕಲ್ಲುಗಚ್ಚಿನ ಬಾವಿಗಳಲ್ಲಿ ತುಂಬಿಸಿ ತುಂಬಿಸಿ ಇರಿಸಲಾಗಿದೆ. ಛತ್ರಗಳಲ್ಲಿ, ಧರ್ಮಶಾಲೆಗಳಲ್ಲಿ, ಮಠಗಳಲ್ಲಿ, ದೇವಾಲಯಗಳಲ್ಲಿ ಅಡಿಗೆಯ ವ್ಯವಸ್ಥೆಯನ್ನು ಮಾಡಿ, ಸಲ್ಲುವ ಪಡಿಪದಾರ್ಥಗಳನ್ನವರಿಗೆ ಒಪ್ಪಿಸಿ ಆಗಿದೆ. ಎಂದೂ ಇಲ್ಲದಷ್ಟು ಅಡಿಗೆ ಮಾಡುವ ತಿಗುಳ ಜನ ಈ ಸಲ ಬಂದಿದ್ದಾರೆ. ಅವರನ್ನೆಲ್ಲ ಬೇರೆ ಬೇರೆ ಪಾಕಶಾಲೆಗಳಲ್ಲಿ ನಿಯಮಿಸಿ ಆಗಿದೆ.

ಕೃಷ್ಣದೇವರಾಯ:— ಸಂತೋಷ! ಇದೊಂದು ರಾಷ್ಟ್ರೀಯ ಯಜ್ಞ! ಪಂಪಾಪತಿಯು ಈ ರಾಜ್ಯದ ಸಂಪತ್ತು, ಆತನ ಸಂತಾನದ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ
ವಿ. ಎಸ್. ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೦ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ ಮು. ಪೋ. ಮಿರಜ

ಮೂಲಕ ಚಂಪಾಪತಿಗೇ ಸಲ್ಲುತ್ತಿರಬೇಕು. ರಾಜ್ಯದ ಜನಸಂಕುಲದ ಸಂತೃಪ್ತಿಯೇ ದೈವಪ್ರಸಾದವಾಗಿ ನಮಗೆ ಸತ್ಫಲ ಕೊಡುವುದು. ಇರಲಿ, ನಾಯಕರೆ, ಈ ಸಲ ವಿದೇಶೀಯ ರಾಯಭಾರಿಗಳು ನಮ್ಮ ಉತ್ಸವ ನೋಡಲಿಕ್ಕೆಂದು ಬಂದಿದ್ದಾರೆ. ನಮ್ಮ ನಾಡಿನ ಎಲ್ಲ ವಿದ್ಯೆ, ಬುದ್ಧಿ, ಜ್ಞಾನ, ಕಲೆಗಳೆಲ್ಲದರ ಪ್ರದರ್ಶನವೂ ವಿವರವಾಗಿ ನಡೆಯಬೇಕು. ಎಲ್ಲ ಬಗೆಯ ಜನರೂ ಬಂದಿದ್ದಾರಲ್ಲವೆ?

ನಂಜನಾಯಕ :— ಗಣನೆಯಿಲ್ಲದಷ್ಟು ಜನ ಬಂದಿದ್ದಾರೆ. ಓಲಗದ ಪಾರುಪತ್ಯಗಾರರು ಎಲ್ಲರ ಹೆಸರುಗಳನ್ನೂ ಪಟ್ಟಿಮಾಡಿಕೊಂಡು, ಅವರೆಲ್ಲರಿಗೆ ಬಿಡದಿ-ಬತ್ತಗಳನ್ನು ಏರ್ಪಡಿಸಿಕೊಟ್ಟಿದ್ದಾರೆ. ಕವಿಗಳು, ಗಮಕಿಗಳು, ವಾದಿಗಳು, ವಾಗ್ಮಿಗಳು, ತಾರ್ಕಿಕರು, ಜ್ಯೋತಿಷಿಗಳು, ವೇದ-ವೇದಾಂಗ ವಿದ ಪಂಡಿತರು— ನಾಡಿನ ಮೂಲೆ ಮೂಲೆಗಳಿಂದಲೂ ಬಂದಿದ್ದಾರೆ. ಅಲ್ಲದೆ ಬೊಂಬೆಗಳಾಟದವರು, ಪಾತ್ರದವರು, ನಟ್ಟುವರು, ವಾದ್ಯಕಾರರು, ವೈಣಿಕರು ತುಂಬಿಬಿಟ್ಟಿದ್ದಾರೆ. ಆಟದ ದಾಸರು, ಗಣಿಯಾಟದ ಡೊಂಬರು, ಕೋಡಿಗರು, ಬಹುರೂಪಿಗಳು, ಇಂದ್ರಜಾಲಿಗರು, ಗೋವಿಂದಗತಿಗಳು, ಮಹೇಂದ್ರಜಾಲಿಗರು, ಗಾರುಡಿಗರು, ವಿಸ್ಮಯಕಾರರು, ಸುಪ್ರಸಿದ್ಧ ಜಟ್ಟಿಗಳು, ಮುಷ್ಟಿಯುದ್ಧದ ಮಲ್ಲರು ಲೆಕ್ಕವಿಲ್ಲದಷ್ಟು ಜನ ಬಂದಿದ್ದಾರೆ. ನಾಡಿನ ವಿದ್ಯೆ-ಕಲೆಗಳೆಲ್ಲ ರಾಜಧಾನಿಯಲ್ಲಿಯೆ ಒಟ್ಟುಗೂಡಿದಂತಾಗಿದೆ ಮಹಾಪ್ರಭು!

ಕೃಷ್ಣದೇವರಾಯ :— ಸಂತೋಷ! ಸಂತೋಷ! ಎಲ್ಲರಿಗೂ ಸರಿಯಾದ ಅವಕಾಶ, ಪುರಸ್ಕಾರ ದೊರೆಯಲಿ! ಯಾರನ್ನೂ ನಿರಾಶೆಗೊಳಿಸುವುದು ಬೇಡ!

ನಂಜನಾಯಕ :— ದೊರೆಗಳ ಅಪ್ಪಣೆ!

ತಿಮ್ಮರಸ :— (ಸಲುಗೆಯ ಧ್ವನಿಯಲ್ಲಿ) ದೊರೆಗಳಿಗೆ ಇಂದೆಯೆ ಆರೋಗಣೆಯ ಕೊನೆಯ ದಿನ. ನಾಳೆಯಿಂದಲೂ ಒಂಬತ್ತು ದಿನಗಳವರೆಗೂ ವ್ರತಿಗಳು ತಾವು! ಒಂಬತ್ತು ದಿನಗಳವರೆಗೂ ಉಪವಾಸಿಗಳಾಗಿರಬೇಕು ಈ ರಾಜಕೀಯ ಅಧ್ವರದ ಯಜಮಾನರು ತಾವು. ಮುಂದಿನ ಉಪವಾಸದ ಕಾರಣದಿಂದ ಇಂದಿನ ಆರೋಗಣೆಯಲ್ಲಿ ಇಮ್ಮಡಿಯಾಗಿ ಉಣ್ಣುವಂತಹ ಬಿರ್ದುಣಿಸುಗಳ ಸುಗ್ಗಿಯಾಗಿರಬೇಕಲ್ಲ!

ಕೃಷ್ಣದೇವರಾಯ:—(ನಕ್ಕು) ಯಾಕೆ? ಅಪ್ಪಾಜಿಗೆ ಒಮ್ಮೆಲೆ ಅರಮನೆಯ ಬಿರ್ದುಣಿಸಿನ ನೆನಪಾಯಿತು?

ತಿಮ್ಮರಸ :— ಮುಪ್ಪಿನ ನಾಲಗೆ! ಯಾವಾಗಲೂ ರುಚಿಯ ಬದಲಾವಣೆಯನ್ನು ಅಪೇಕ್ಷಿಸುತ್ತಿರುತ್ತದೆ.... ಇನ್ನೇನು?

ಕೃಷ್ಣದೇವರಾಯ :— ಸರಿ ಸರಿ! ಹಾಗಾದರೆ ಇಂದು ಪಜ್ಜಿ ಲಾಭವನ್ನು ಕೊಟ್ಟುಬಿಡಿರಿ. ನಿಮ್ಮ ಜೊತೆ ಕುಳಿತು ಉಣ್ಣುವುದೆಂದರೆ, ನನ್ನ ತಾಯಿಯ ಕೈದುತ್ತಿನ ಸವಿಯ ನೆನಪಾಗುತ್ತದೆ ಅಪ್ಪಾಜೀ!

ತಿಮ್ಮರಸ :— ಇಂದಿನ ಸಹಪಜ್ಞಿಯ ಔತಣ, ಇದಕ್ಕೂ ಮೊದಲೇ, ನನಗೆ ಬರಬೇಕಾದ ಕಡೆಯಿಂದ ಬಂದೇ ಬಿಟ್ಟಿದೆ. ತಾವು ಬೇರೆಯಾಗಿ ಔತಣ ಕೊಡಲೇಬೇಕಾಗಿಲ್ಲ!

ಕೃಷ್ಣದೇವ :—(ನಕ್ಕು) ಸರಿ! ಎಲ್ಲರನ್ನೂ ವಶಪಡಿಸಿಕೊಳ್ಳುವ ಮೋಡಿಗಾರರು ನೀವು! ನಂಜನಾಯಕರೇ, ತಾವಿನ್ನು ದಯಮಾಡಿಸಬಹುದು.

ನಂಜನಾಯಕ :— ಪ್ರಭುಗಳಿಗೂ ದಂಡನಾಯಕರಿಗೂ ನಮನಗಳು.

(ಹೋಗುವನು.)

೪

ನಿವೇದಕ

(ಕೋಳಿಗಳ ಬೆಳಗಿನ ಕೂಗು. ಬಿಲಹರಿರಾಗದ ಆಲಾಪನೆ ಹಿನ್ನೆಲೆಯಲ್ಲಿ)

ಇಂದು ಆಶ್ವಿನ ಶುದ್ಧ ಪ್ರತಿಪದೆಯ ಸೂರ್ಯೋದಯದ ಸಮಯ. ರಾಜಧಾನಿಯಲ್ಲೆಲ್ಲ ಹಬ್ಬದ ಉತ್ಸವ-ಉತ್ಸಾಹಗಳು ಲಾಸ್ಯವನ್ನಾಡುತ್ತಲಿವೆ. ಹೆಣ್ಣು-ಗಂಡುಗಳಲ್ಲೆಲ್ಲ ಹೊಸ ಹೊಸ ಚಟುವಟಿಕೆ. ಎಲ್ಲರ ಮೈಯನ್ನೂ ಬೆಡಗಿನ ಉಡಿಗೆ-ತೊಡಿಗೆಗಳು ಅಲಂಕರಿಸಿವೆ. (ವಿವಿಧ ವಾದ್ಯಗಳ ಸಪ್ಪಳ) ಅದೋ, ಆಲಿಸಿರಿ! ಮಂಗಲವಾದ್ಯಗಳ ಮೊರೆತ. ಶ್ರೀಕೃಷ್ಣದೇವರಾಯನು, ಸಪ್ತ ಮಹಾನದಿಗಳ ಸಪ್ತಸಾಗರಗಳ ಪುಣ್ಯೋದಕದಿಂದ ಮಂಗಲಸ್ನಾನ ಮಾಡುತ್ತಲಿದ್ದಾನೆ ಇದೋ, ಸ್ನಾನ ಮುಗಿಯಿತು. ಸಮ್ರಾಟನು ರತ್ನಾಭರಣಗಳನ್ನು ಬಿಟ್ಟು, ದೀಕ್ಷಾವಸ್ತ್ರಧಾರಿಯಾಗಿ ಪೂಜಾ ಮಂಟಪಕ್ಕೆ ಹೊರಟನು.

(ವಾದ್ಯವೈಭವ, ಸಮೂಹದ ಗಜಬಜೆಯೊಡನೆ ಮೆರವಣಿಗೆ ಸಾಗಿದ ಧ್ವನಿ)

ಸ್ತುತಿಪಾಠಕರು :—

"ಶ್ರೀಮದ್ರಾಜಾಧಿರಾಜ ಮಹಾರಾಜಪರಮೇಶ್ವರಾ!
ಕರ್ನಾಟ ಸಾಮ್ರಾಜ್ಯಲಕ್ಷ್ಮೀ ಮನೋಹರಾ!
ಹಿಂದೂರಾಯ ಸುರತ್ರಾಣಾ!
ಗೋ-ದೇವ-ದ್ವಿಜ ಸಂರಕ್ಷಣ ಧುರೀಣಾ!
ವಿಜಯನಗರ ಸತ್ಯಸಿಂಹಾಸನಾಧೀಶ—
ಶ್ರೀಕೃಷ್ಣದೇವರಾಜೇಂದ್ರ ಭೋ ಪರಾಕು!

(ವಾದ್ಯಗಳ ರಭಸದ ಸಪ್ಪಳ)

ನಿವೇದಕ

ಇದೋ, ಕೃಷ್ಣದೇವರಾಜೇಂದ್ರ ದೇವತಾಮಂಟಪಕ್ಕೆ ಚಿತ್ತೈಸಿದ. ಸಿಂಹವಾಹಿನಿಯಾದ ಮಹಿಷಾಸುರಮರ್ದಿನಿ—ಮಹಾಶಕ್ತಿಯ ಆಳೆತ್ತರದ ಸುಂದರಮೂರ್ತಿ, ಉತ್ಸವಕಾಲದ ಅಲಂಕಾರಗಳಿಂದ ಸಜ್ಜುಗೊಂಡು ಸಂಸ್ಥಾಪಿತವಾಗಿದೆ. ವೈದಿಕರ ಪುರೋಹಿತರ ಬಳಗ, ಮಹಾರಾಜರಿಂದ ದೇವಿಯ ಪೂಜೆ ಮಾಡಿ-

ಸುನ ತವಕದಿಂದ ನಿಂತುಕೊಂಡಿದೆ. ವಿಜಯನಗರದ ವೈಭವಕ್ಕೆ ಉಚಿತವೆನಿಸುವ ಪೂಜೋಪಕರಣಗಳು, ಮೂರ್ತಿಯ ಎದುರಲ್ಲಿ ರಾಶಿ-ರಾಶಿಯಾಗಿ ವಿರಾಜಿಸುತ್ತಲಿವೆ. ಆಮಂತ್ರಿತ ಅಧಿಕಾರಿಗಳಿಂದಲೂ ನಗರಪ್ರಮುಖರಿಂದಲೂ ಪೂಜಾಮಂಟಪ ಗಜಬಜಿಸುತ್ತಿದೆ. - ಓ, ಮಹಾರಾಜರ ಆಗಮನವಾಗಿಯೆ ಬಿಟ್ಟಿತು. (ವಾದ್ಯದ ಸಪ್ಪಳ)

ಸ್ತುತಿಪಾಠಕ :— ವೈರಿಬಲ ತಿಮಿರ ಮಾರ್ತಾಂಡ !
ಮೂರು ರಾಯರ ಗಂಡ !
ಕನ್ನಡ ರಾಜ್ಯರಮಾರಮಣ
ಪ್ರಜಾಪಾಲನ ಕಲಾಪ್ರವೀಣ
ಗೋ-ದೇವ-ದ್ವಿಜಸೇವಾಧುರೀಣ !
ಶ್ರೀಕೃಷ್ಣದೇವರಾಜ ನರಪತಿ ಭೋ, ಪರಾಕು !

ನಿವೇದಕ

ಶ್ರೀಕೃಷ್ಣದೇವರಾಯನು ಪೂಜಾಪ್ರತಿಮೆಯ ಬಳಿ ಬಂದು, ಭಕ್ತಿಯಿಂದ ಕೈಮುಗಿದು ನಿಂತ. ಸಭೆಯಲ್ಲೆಲ್ಲ ಆತುರ-ಕುತೂಹಲಗಳು. ಅರ್ಚಕವೃಂದ ದೊರೆಯನ್ನು ಆದರಿಸಿ, ಪೂಜಾಪೀಠದಲ್ಲಿ ಕುಳ್ಳಿರಿಸಿ ಪೂಜೆ ಮಾಡಿಸುತ್ತಲಿದೆ :

(ಇಲ್ಲಿ ಪೂಜಾಮಂತ್ರಗಳು ಕೇಳುತ್ತಿರಬೇಕು.)
(ಜೊತೆಗೆ ಮಂಗಳವಾದ್ಯಗಳ ಸಪ್ಪಳವಿರಬೇಕು)
(ದೂರದಲ್ಲಿ ಸೂಳೆಯರ ಸಂಗೀತವೊಂದಿಗಿನ ನರ್ತನಧ್ವನಿ ಕೇಳುತ್ತಿರಬೇಕು)

ನಿವೇದಕ

ದೇವಿಯ ಪೂಜೆ ಮುಗಿಯಿತು. ಇನ್ನು ಪಟ್ಟದಾನೆಗಳ ಪೂಜೆ ನಡೆಯುವುದು. ಮಂಟಪದ ಮಧ್ಯಚೌಕದಲ್ಲಿ, ಕಲಾಬತ್ತಿನ ಜೂಲುಗಳಿಂದಲೂ ರತ್ನಾಭರಣಗಳಿಂದಲೂ ಅಲಂಕರಿಸಿದ ನಾಲ್ಕು ಆನೆಗಳು ಗಂಭೀರವಾಗಿ ಮೈತೂಗುತ್ತ ನಿಂತಿರುವವು. ಇದೋ, ಪುರೋಹಿತರೊಂದಿಗೆ ದೊರೆಯು ಆನೆಗಳ ಪೂಜೆಗೆ ಬಂದ. ಪೂಮಾಲೆಗಳನ್ನರ್ಪಿಸಿ ಪೂಜಿಸಿದ. ಆನೆಗಳಿಗೆ ಆರತಿಯಾಗುತ್ತಲಿದೆ ; ಕೇಳಿ !

(ಮಂಗಲಗೀತ—ಸುಮಂಗಲಿಯರಿಂದ)

ಜಯಮಂಗಲ ಜಯಮಂಗಲ ಜಯಮಂಗಲ ಗಜಲಕ್ಷ್ಮೀ !
ಜಯಮಂಗಲ ಜಯಮಂಗಲ ಸಾಮ್ರಾಜ್ಯದ ಶುಭಲಕ್ಷ್ಮೀ !

ನಿವೇದಕ

ಆನೆಗಳ ಪೂಜೆ ಮುಗಿಸಿ ದೊರೆಯು ಪಟ್ಟದ ಕುದುರೆಗಳೆಡೆಗೆ ನಡೆದು ಬಂದ. ರತ್ನಾಭರಣ, ಚೀನಾಂಬರಗಳಿಂದ ವಿಭೂಷಿತವಾದ ಹನ್ನೊಂದು ಜಾತ್ಯಶ್ವಗಳು, ಸಾಮ್ರಾಜ್ಯದ ಅಶ್ವಸಂಪತ್ತಿಯನ್ನು ಪ್ರತಿನಿಧೀಕರಿಸುತ್ತ ನಿಂತುಕೊಂಡಿವೆ (ಕುದುರೆಗಳ ಕೆಳೆರು ಕೇಳುವದು.) ಪುರೋಹಿತರು ಕೈಗೆ ಕೊಟ್ಟ ಪುಷ್ಪಾಂಜಲಿಯನ್ನು ಕುದುರೆಗಳಿಗೆ ದೊರೆಯು ಅರ್ಪಿಸಿದ. ಸುಮಂಗಲೆಯರು ಮಂಗಲಾರತಿಯೆತ್ತಿದರು :

(ಮಂಗಲ ಗೀತ)

ಜಯದೇವೀ ಜಗದಂಬೇ ಶಕ್ತಿಸಂವಾಹಿನಿ !
ಜಯದೇವೀ ಸಮರಜೀವನ ವೀರಜನನೀ !
ಜಯದೇವೀ ಜಗದಂಬೇ ! ||

ನಿವೇದಕ

ಆನೆ-ಕುದುರೆಗಳ ಪೂಜೆಗಳಾದ ಮೇಲೆ, ದೇವಿಗೆ ಬಲಿಯ ಸಮರ್ಪಣವಾಯಿತು. ಅದೇ ದೇವೀಮಂಟಪದಲ್ಲಿ ಬೇರೊಂದು ಕಡೆಗೆ, ಕಲಿಕುಂಡ, ವಜ್ರಪಂಜರ, ಮೃತ್ಯುಂಜಯ, ಬಲಸಿದ್ಧಿ, ಜಯಸಿದ್ಧಿ— ಎಂಬ ಹೆಸರಿನ ಯಜ್ಞಗಳು ನಡೆದಿರುವವು. (ಯಜ್ಞಕ್ಕೆ ಆಹುತಿಗಳನ್ನು ಹಾಕುವ ಮಂತ್ರಗಳು ಕೇಳುತ್ತಿರಬೇಕು) ನರಪತಿಯು ಯಜ್ಞಗಳನ್ನು ಒಂದೊಂದಾಗಿ ಸಂದರ್ಶಿಸಿ, ತಾನು ಸಲ್ಲಿಸಬೇಕಾದ ಹೋಮದ್ರವ್ಯವನ್ನು ಅಗ್ನಿಗೆ ಸಲ್ಲಿಸಿ, ಮತ್ತೆ ದೇವಿಯ ಬಳಿ ಬಂದ; ದೇವಿಗೆ ಸಾಷ್ಟಾಂಗವೆರಗಿದ.

(ಬಹುಜನರ ಬಾಯಿಂದ ಜಯಘೋಷ.)

" ಜಯ ಭುವನೇಶ್ವರೀ ! ಜಯ ಮೃಡಾನೀ ! "

ಬಗನ ' ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖದ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ' ಗ್ರಾಯಿಪ್ ಹೀಲರಿನ ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ ' ಟೊನಿಕ್ಕು ' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಶ್ರೀವೇದಕ

ದೇವಿಯ ಪೂಜೆಯನ್ನು ಮುಗಿಸಿಕೊಂಡ ದೊರೆಯು, ನವರತ್ನ-ಚಿತ ಕಿರೀಟಧಾರಿಯಾಗಿ, ರತ್ನಸಿಂಹಾಸನದ ಮೇಲೆ ಕುಳಿತು-ಕೊಂಡನು.

(ಬಹುಜನರ ಬಾಯಿಂದ ಉಲ್ಲಾಸದ ಕೂಗು.)

' ಜಯ ಕನ್ನಡ ರಾಜ್ಯರಮಾರಮಣ! ಜಯ ಶ್ರೀಕೃಷ್ಣದೇವ-ರಾಜೇಂದ್ರ ! '

(ಓಲಗ ಪ್ರಾರಂಭದ ವಾದ್ಯಗಳು ಮೊರೆಯುವುವು.)

ಹಾರುಪತ್ಯಗಾರ :— ವಿಜಯನಗರದ ಸಾಮ್ರಾಜ್ಯದ ಅಭಿಮಾನಿಗಳಾದ ವೀರಮಾಂಡಲಿಕ-ಮನ್ನೆಯರೆ, ಸಾಮಂತ-ಸರದಾರರೆ, ಶ್ರೀಮಂತ ಶ್ರೇಷ್ಠಿಗಳೇ, ಇಂದು ಇದೀಗ ನವರಾತ್ರಿಯ ಮೊದಲುದಿನದ ಓಲಗ ಪ್ರಾರಂಭವಾಯಿತು. ಮೊದಲು ಮಾಂಡಲಿಕ-ಮನ್ನೆಯರ ರಾಜಸಂದರ್ಶನ. ಹೆಸರು ಕೂಗಿದಂತೆ, ಕ್ರಮವಾಗಿ ಬಂದು, ಸಿಂಹಾಸನಕ್ಕೆ ಪ್ರಣಾಮಗಳನ್ನು ಸಲ್ಲಿಸಿ ಮರಳಬೇಕು.

ಎಚ್ಚರೂಳಿಗದವ :— ಹೋss ! ಜಾಗು, ಜಾಗು, ಭೋss! ಎಚ್ಚರು ಎಚ್ಚರು !

ಹಾರುಪತ್ಯಗಾರ :— ಬಂಕಾಪುರದ ಮಹಾಮಾಂಡಲಿಕರು !

(ಆತ ಬಂದು ಪ್ರಣಾಮ ಸಲ್ಲಿಸಿ ಮರಳುತ್ತಾನೆ.)

ಹಾರುಪತ್ಯಗಾರ :— ಭಟಕಳದ ಸಾಗರಸಾಮಂತರು !

(ಆತ ಬಂದು ಪ್ರಣಾಮ ಸಲ್ಲಿಸಿ ಮರಳುತ್ತಾನೆ.)

ಹಾರುಪತ್ಯಗಾರ :— ತಂಜಾವೂರಿನ ಪೆದ್ದಿರಾಜರು.

(ಆತ ಬಂದು ವಂದನೆ ಅರ್ಪಿಸಿ ಮರಳುತ್ತಾನೆ.)

ಹಾರುಪತ್ಯಗಾರ :— ಮೈಸೂರಿನ ಒಡೆಯರು.

(ಅವರೂ ಬಂದು ಪ್ರಣಾಮ ಸಲ್ಲಿಸುತ್ತಾರೆ.)

ಹಾರುಪತ್ಯಗಾರ :—ಇನ್ನು ಗೇರುಸೊಪ್ಪೆಯರಸರು, ದುರ್ಗದ ನಾಯಕರು, ಬಿದನೂರಿನ ಪಾಳೆಯಗಾರರು, ಬೀಳಗಿಯ ನಾಯಕ-ರಾಜರು, ಸೋದೆಯ ಪ್ರಭುಗಳು— ಒಬ್ಬೊಬ್ಬರಾಗಿ ಬರಬೇಕು !

(ಅವರೆಲ್ಲಾ ಕ್ರಮವಾಗಿ ಬಂದು, ಪ್ರಣಾಮ ಸಲ್ಲಿಸಿ ಮರಳುವರು.)

ಹಾರುಪತ್ಯಗಾರ:—ಇನ್ನುಳಿದ ಮಾಂಡಲಿಕ- ಮನ್ನೆಯರ ಸಂದರ್ಶನ, ಸಂಜೆಯ ಹಿರಿಯೋಲಗದಲ್ಲಿ ನಡೆಯಬೇಕೆಂದು ಮಹಾಪ್ರಭುಗಳ ಆಜ್ಞೆಯಾಗಿದೆ. ಇಂದಿನ ಓಲಗದ ರಾಜಕಾ-ರ್ಯದ ತರುವಾಯ, ಹಾನಗಲ್ಲಿನ ಮೇಳದವರಿಂದ ಗೊಂಬೆ-ಯಾಟವಾಗುವುದು ಹೊನ್ನಾವರದ ಹೆಗ್ಗಡೆಗಳ ಯಕ್ಷಗಾನ ಪ್ರಸಂಗ ಜರಗುವುದು. ಕೃಷ್ಣಾತೀರದ ಸುಪ್ರಸಿದ್ಧ ಜಟ್ಟಿಗಳ ಮಲ್ಲಗಾಳಿಗ ನಡೆಯುವುದು. ಗೋವಳಕೊಂಡದಿಂದ ಬಂದ ಬಹುರೂಪಿಗಳ ವೇಷಗಾರಿಕೆ ನಡೆಯುವುದು. ಅಲ್ಲದೆ ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳೂ ಪ್ರದರ್ಶಿತವಾಗುವುವು. ಜಯ ಭುವನೇಶ್ವರಿ !

ಎಚ್ಚರೂಳಿಗದವ:—ಜಾಗು ಜಾಗು, ಓಲಗ ತೀರ್ದುದೊ, ಓಲಗ ತೀರ್ದುದು !

(ಭೇರಿಗಳ ಎಡೆಬಿಡದ ಮೊಳಗು)

ಸ್ತುತಿಪಾಠಕ :—

ಶ್ರೀಮತ್ ಕರ್ನಾಟಕ ರಾಜ ಕಂಠೀರವ,
ಪರರಾಜ ಚತುರಂಗ ಪ್ರಲಯಭೈರವ !
ಶ್ರೀ ಪಂಪಾವಿರೂಪಾಕ್ಷ ಪಾದಾಂಬುಜಭೃಂಗ
ಸಕಲಕಲಾವಿಜ್ಞಾನ ಪ್ರವೀಣ ಪ್ರಸಂಗ !
ಶ್ರೀಕೃಷ್ಣದೇವ ನರಪತೀ, ಭೋ ಪರಾಕು !

೫

ನಿವೇದಕ

ನವರಾತ್ರಿಯ ಪೂಜೆಯೋಲಗ ಮುಗಿಸಿ, ಶ್ರೀಕೃಷ್ಣದೇವ ರಾಜೇಂದ್ರ ಅರಮನೆಯತ್ತ ತೆರಳಿದ. ಮತ್ತೆ ಮೂರನೆಯ ಪ್ರಹರದ ಕೊನೆಯೊಂದಿಗೆ ಇಂದಿನ ಹಿರಿಯೋಲಗ ನಡೆಯುವುದು. ಮೊದಲನೆಯ ದಿನಕ್ಕಿಂತ ಎರಡನೆಯ ದಿನ, ಎರಡನೆಯ ದಿನಕ್ಕಿಂತ ಮೂರನೆಯ ದಿನ, ಮೂರನೆಯ ದಿನಕ್ಕಿಂತ ನಾಲ್ಕನೆಯ ದಿನ— ಹೀಗೆ ಉತ್ತರೋತ್ತರವಾಗಿ, ದಿನಕ್ಕೊಂದು ಪರಿಯ ವೈಭವದಿಂದ, ವಿದ್ಯೆ-ಕಲೆಗಳ ಪ್ರದರ್ಶನಗಳಿಂದ ನವರಾತ್ರಿಯ ಪೂಜೆ-ಹೋಮ ಗಳೂ ಒಡ್ಡೋಲಗಗಳೂ ಒಂಬತ್ತು ದಿನಗಳ ವರೆಗೆ ನಡೆಯುತ್ತ-ಲಿದ್ದುವು. ವಿಜಯನಗರದ ಪ್ರಜೆಗಳಿಗೆ ಈ ಹಬ್ಬದ ದಿನಗಳು ಸ್ವರ್ಗದ ಸುಖವನ್ನು ಮರೆಯಿಸಿದ್ದುವು. ಕುದುರೆಗಳ ವೈಹಾಳಿ ನಡೆಯಿತು. ಸೈನಿಕರ ಹುಸಿಕಾಳೆಗಗಳು ನಡೆದುವು. ಮದ್ದು-ಬಾಣಗಳ ವಿಸ್ಮಯಕರವಾದ ಅಗ್ನಿಕ್ರೀಡೆ ನಡೆಯಿತು. ನಾಳೆಯ ದಿನವೇ ದಿಗ್ವಿಜಯಕ್ಕಾಗಿ ಸೀಮೋಲ್ಲಂಘನ.

ಇಂದಿದೋ ! ಮಹಾನವಮಿಯ ಶಸ್ತ್ರಪೂಜೆ. ಶಸ್ತ್ರಪೂಜೆ ಮಾಡಿದ ಸೈನಿಕರು ನಗರದ ಬೀದಿಬೀದಿಗಳಲ್ಲಿ ಕೂಚು ಮಾಡುತ್ತ, ರಣಗೀತವನ್ನು ಹಾಡುತ್ತಲಿದ್ದಾರೆ ಕೇಳಿ.

(ಬಹುಜನರ ಧ್ವನಿಯಲ್ಲಿ ಹಾಡು)

ಜಯಭವಾನೀ ಜಯ ಮೃಡಾನೀ ಜಯವು ಜಯ
ಭುವನೇಶ್ವರಿ!
ಭಯನಿವಾರಿಣೆ, ಭವವಿದಾರಿಣಿ, ಜಯತು ಜಯ
ಜಗದೀಶ್ವರೀ!
ನಿನ್ನ ಹುರುಳಿನ ಹಾಲೊಳಿರುವಾ ಬೆಣ್ಣೆಯನು ನಮಗುಣ್ಣಿಸಿ—
ನಿನ್ನ ತೇಜದ ತಿರುಳು ತುಂಬಿದ ಹಣ್ಣು ಹಂಪಲ ತಿನ್ನಿಸಿ—
ಕನ್ನಡದ ಚಿಣ್ಣರನು ಕರುಣದಿ ಉನ್ನತರ ನೀನಾಗಿಸೆ ||೧||

ಜಯ ಭುವನೇಶ್ವರೀ !

ಜಯಂತಿ

ಕನ್ನಡ ಕಂಪನಿ ನಾಟಕಗಳು

(ಉತ್ತರಾರ್ಧ)

ಪ್ರೊ. ರಾ. ಯ. ಧಾರವಾಡಕರ ಎಂ. ಎ. ಧಾರವಾಡ

★

' ಕಂಪನಿ ನಾಟಕ ' ಎಂದು ಯಾವ ದೋಷಗಳ ಮೂಲಕ ಟೀಕೆಗಳಿಗೆ ಗುರಿಯಾಗಿವೆಯೋ ಆ ದೋಷಗಳನ್ನು ಕಳೆದುಕೊಂಡು ಹೊರಟರೆ, ಅವುಗಳಿಂದಲೇ ನಮ್ಮ ರಂಗಭೂಮಿಗೆ ಸಂರಕ್ಷಣೆ ದೊರೆತೀತು, ಅಭಿವೃದ್ಧಿಯ ಕಾಲವೂ ಬಂದೀತು.

★

ನಂತರ ಸ್ಥಾಪಿತವಾದ ಸುಪ್ರಸಿದ್ಧ ನಾಟಕ ಕಂಪನಿಯೆಂದರೆ ನಾಟಕಾಲಂಕಾರ " " ಅಭಿನಯಕೇಸರಿ " ಗರುಡ ಸದಾಶಿವರಾಯರು ಸ್ಥಾಪಿಸಿದ " **ಶ್ರೀ ದತ್ತಾತ್ರೇಯ ನಾಟಕ ಮಂಡಳಿ** ". ನಾಟ್ಯಕಲೆಯ ಸೇವೆಗಾಗಿ **ಬೇಕಾಗಿರುವ ಅವಿರತವಾದ** ಪರಿಶ್ರಮ, ಸ್ವಚಾರಿತ್ರ್ಯ, **ಸಂಯಮ ಮತ್ತು ತ್ಯಾಗಬುದ್ಧಿ**ಗಳಿಂದ ಕೂಡಿದ ಸದಾಶಿವರಾಯರು, **ನಾಟ್ಯ**ಪ್ರಪಂಚದಲ್ಲಿ ಒಂದು ವಿಧದ ಕ್ರಾಂತಿಯನ್ನೇ ಮಾಡಿದರು. **ಸುಮಾರು** ಕ್ರಿ. ಶ. ೧೯೧೬ರಲ್ಲಿ ಸ್ಥಾಪಿತವಾದ ಈ ಕಂಪನಿಯು, **ಕನ್ನಡ** ರಂಗಭೂಮಿಯಲ್ಲಿ ಈ ವರೆಗೆ ನಡೆದು ಬಂದ Free-Pass ಹಾವಳಿಯನ್ನು ಪ್ರಥಮತಃ ತಡೆಯಿತು. ಇದರ ಜೊತೆಗೆ ಶ್ರೀ. ಸದಾಶಿವರಾಯರ ದೃಷ್ಟಿ ಹೆಚ್ಚಾಗಿ ಕನ್ನಡ ದೃಷ್ಟಿಯುಳ್ಳದು; ಐತಿಹಾಸಿಕ ದೃಷ್ಟಿಯುಳ್ಳದು. ಹೀಗಾಗಿ ಇವರು ಬರೆದ " **ಎಚ್ಚಮ್ಮ ನಾಯಕ** " ನಾಟಕವು ಒಮ್ಮೆಲೇ ಜನರ ಮನವನ್ನು ಸೂರೆಗೊಂಡಿತು. ಎಂತಲೇ, ೧೯೨೯ರಲ್ಲಿ ಬೆಳಗಾವಿಯಲ್ಲಿ ಸೇರಿದ ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಶ್ರೀಯುತರಿಗೆ "ಕರ್ನಾಟಕ **ನಾಟಕಾಲಂಕಾರ** " ಎಂಬ ಗೌರವ ಪದವಿಯನ್ನು ಕೊಡಲಾಯಿತು.

ಇದರ ಮೊದಲು ೧೯೦೪ ರಲ್ಲಿ ಸ್ಥಾಪಿತವಾದ ಧಾರವಾಡದ "**ಭರತ ಕಲೋತ್ತೇಜಕ**" ನಾಟಕ ಮಂಡಳಿಯು ಕೂಡ ಎಷ್ಟೋ ಪ್ರಯೋಗಗಳನ್ನು ಯಶಸ್ವಿಯಾಗಿ ಆಡಿ ತೋರಿಸಿತು.

ಈ ಕಾಲಕ್ಕೆ ಕನ್ನಡದ ವೈಶಿಷ್ಟ್ಯವಾಗಿ ಹಲವು 'ಸ್ತ್ರೀ ಸಂಗೀತ ನಾಟಕಮಂಡಳಿ'ಗಳೂ ಕರ್ನಾಟಕದಲ್ಲಿ ಇದ್ದುವು. ಅವುಗಳಲ್ಲಿ ಮುಖ್ಯವಾಗಿ ಲಕ್ಷ್ಮೇಶ್ವರದ ಸ್ತ್ರೀ ಸಂಗೀತ ನಾಟಕ, ಬೆಳಗಾವಿಯ ಸ್ತ್ರೀಸಂಗೀತ ನಾಟಕ, ಧಾರವಾಡದ ಸ್ತ್ರೀಸಂಗೀತ ನಾಟಕ, ಮತ್ತು ಹಾವೇರಿಯ ಸ್ತ್ರೀ ಸಂಗೀತ ನಾಟಕಗಳನ್ನು ಹೇಳಬಹುದು. **ಇವೂ ಅಲ್ಲದೆ ಉಳಿದ** ಕಂಪನಿಗಳಲ್ಲಿ "ಚಿಕ್ಕೋಡಿ ನಾಟಕ ಮಂಡಳಿ " " **ಕೊಪ್ಪಳ ನಾಟಕ ಮಂಡಳಿ** " ಮೊದಲಾದವುಗಳನ್ನು **ಹೇಳಬಹುದು.**

ಆನುಷಂಗಿಕವಾಗಿ, ಕ್ರಿ. ಶ. ೧೯೩೦ರ ಸುಮಾರು ಧಾರವಾಡದಲ್ಲಿ ಯಾವ ರೀತಿ ನಾಟಕವನ್ನು ಆಡುತ್ತಿದ್ದರೆಂಬ ಬಗ್ಗೆ ಶಾಂತಕವಿಗಳು ಬರೆದ "ಮುಚ್ಚಂಜೆ" ಎಂಬ ಕವಿತೆಯಲ್ಲಿ ಸುಂದರವಾದ ಉಲ್ಲೇಖವು ದೊರಕುತ್ತದೆ. ಗಡಿಯಾರದಲ್ಲಿ ಸರಿಯಾಗಿ ಆರು ಗಂಟೆಯು ಬಾರಿಸಲು, ಶಾಂತಕವಿಗಳು ನಾಟಕಾವಲೋಕನಕ್ಕೆ ಹೊರಡುತ್ತಾರಂತೆ. ಸಂಚರೆ ಓಲಗದ ತಾಸಿನ ಗಂಟೆಯು ಏಳು ಬಾರಿಸಿದರೂ ಯಾರೂ ನಾಟಕದ ಸ್ಥಾನದಲ್ಲಿ ಇರಲಿಲ್ಲವಂತೆ. ಅದೇ ಆಗ ಜನರು ನಾಟಕವನ್ನು ನೋಡಲು ಧಾವಿಸಿ ಹೋಗುತ್ತಿದ್ದರಂತೆ. ಹಲವರು ಬಾಯಲ್ಲಿ ತುಂಬಿದ ತಂಬುಲವನ್ನು ಉಗುಳುತ್ತ ಹೊರಟಿದ್ದರೆ ಮತ್ತೆ ಕೆಲವರು :

> ಶಿರದಿ ತಿದ್ದಿ ಸುತ್ತಿರುವ ರುಮಾಲಿದೆ
> ಜರದಂಚಂದದಿ ಮಿಂಚುತಿದೆ;
> ಬೆಳಗಿದ ಜೀನ್ ಎದೆಯೊಳು ನೇತಾಡುತೆ
> ಥಳಕ್ಕೆಂದು ಸಲಿ ಹೊಳೆಯುತಿದೆ.

ಮತ್ತೊಬ್ಬನು ಇದೇ ಅವಸರದಲ್ಲಿ ಬಾಯಿಸಿಕಲ್ ಮೇಲೆ ಕುಳಿತು ಭರ್ರೆಂಬ ವೇಗದಿಂದ ಕಾಮನಕಟ್ಟೆಯ ಕಡೆಗೆ ಹೋಗುತ್ತಾನೆ. ಈ ರೀತಿಯಾಗಿ ಆಷ್ಟರಲ್ಲಿಯೇ ಜನರು :

> ಹೊಸನೀರ್ ಬರುತಿಹ ಕೆರೆಯೋ
> ಹೊದೆಗಳನಿಳಿಸುವ ಬೆಳಸಿನ ಹೊಲವೋ ?

ಎಂಬಂತೆ ಬಂದು ಸೇರುತ್ತಾರಂತೆ. ಇಂಥ ಒಂದು ಕನ್ನಡ ನಾಟಕದ ಅಭಿನಯವನ್ನು ನೋಡಲು, ಭಕ್ತಿಪೂರ್ವಕವಾಗಿ ಶಾಂತಕವಿಗಳು ಹೋಗಿದ್ದರು. ಆದರೆ ದುರ್ದೈವದಿಂದ ಅವರು ನೋಡಿದ ಈ ನಾಟಕವು ಯಾವುದು ಎಂಬುದರ ಉಲ್ಲೇಖವು ಉಪಲಬ್ಧವಿಲ್ಲ. ಇದೇ ಸಂದರ್ಭದಲ್ಲಿ ನಾಟಕವನ್ನು ನೋಡಲು **ಹೊರಟ** ವ್ಯಕ್ತಿಯು ಹೇಗೆ ಹೋಗಬೇಕೆಂಬ ಬಗ್ಗೆ ಶಾಂತಕವಿಗಳು **ಕೊಡುವ ಉಪದೇಶವೆಂದರೆ :**

'ಮಧುರವಹ ನಿರ್ದುಷ್ಟ ಲಘುತರಾನ್ನವನುಣ್ಣು,
ಸದನದೊಳು ಸ್ವಸ್ಥಮಿರು ದಾವತಿಯು ಗೈಯದಿರು....
....ಆಗಲಿಹ ನಾಟ್ಯಭಾಗವನೋದಿ

ತದ್ ವಿಷಯಮಂ ಹೃದಯದಲ್ಲಿರಿಸಿಕೊಂಡು' ಹೋಗಬೇಕಂತೆ.

ಮೈಸೂರ ಕಡೆಯಿಂದ ಬಂದು ಇಲ್ಲಿ ಆಡಿದ ಮಹತ್ತ್ವದ ನಾಟಕ ಕಂಪನಿಗಳೆಂದರೆ 'ಶ್ರೀಚಾಮುಂಡೇಶ್ವರೀ ಕರ್ನಾಟಕ ನಾಟಕ ಸಭೆ' "ಶ್ರೀಶಾಕುಂತಲ ಕರ್ನಾಟಕ ನಾಟಕ ಸಭೆ" "ಗುಬ್ಬಿ ಶ್ರೀ. ವೀರಣ್ಣನವರ ಚೆನ್ನಬಸವೇಶ್ವರ ಥಿಯೇಟ್ರಿಕಲ್ ಕಂಪನಿ" ಮಹಮ್ಮದ ಪೀರರವರ "ಚಂದ್ರಕಲಾ ನಾಟಕ ಸಭಾ" ಸುಬ್ಬಯ್ಯ ನಾಯ್ಡು ಮತ್ತು ನಾಗೇಂದ್ರರಾವ್ ಅವರ 'ಸಾಹಿತ್ಯ ಸಾಮ್ರಾಜ್ಯ ನಾಟಕ' ಮಂಡಳಿ, 'ಸೀತಾ ಮನೋಹರ ನಾಟಕ ಮಂಡಳಿ' ಮತ್ತು ಕೆ. ಹಿರಣ್ಣಯ್ಯನವರ 'ಮಿತ್ರ ಮಂಡಳಿ' ಮೊದಲಾದುವು ಕನ್ನಡ ರಂಗಭೂಮಿಯ ಸೇವೆಯನ್ನು ಸಲ್ಲಿಸಿವೆ, ಸಲ್ಲಿಸುತ್ತಿವೆ. ಗತಿಸಿದ ಚಾಮರಾಜ ಒಡೆಯರ ಕಾಲದಲ್ಲಿ ಸ್ಥಾಪಿತವಾದ "ಚಾಮರಾಜೇಂದ್ರ ನಾಟಕ ಕಂಪನಿ"ಯು ಅನೇಕ ಅರಮನೆಯ ವಿದ್ವಾಂಸರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಇಂಥವರಲ್ಲಿ ರಾಯಚೋಟಪ್ಪನವರು, ಸುಬ್ಬಣ್ಣನವರು, ಮತ್ತು ಚಿಕ್ಕರಾಮರಾಯರು ಮೊದಲಾದವರ ಹೆಸರುಗಳನ್ನು ಹೇಳಬಹುದು ಎಲ್ಲಕ್ಕೂ ಮೊದಲು ಇದ್ದ ದಿವಂಗತ ನಟ-ಶಿರೋಮಣಿ ಎ. ವಿ. ವರದಾಚಾರ್ಯ ಅವರ "ರತ್ನಾವಳಿ" ನಾಟಕ ಕಂಪನಿಯಂತೂ ಈ ಎಲ್ಲ ಕಂಪನಿಗಳಿಗೂ ಮೇಲ್ಪಂಕ್ತಿಯದಾಗಿದೆ.

ಗುಬ್ಬಿ ವೀರಣ್ಣನವರ ನಾಟಕ ಕಂಪನಿಯು ಕ್ರಿ. ಶ. ೧೮೮೪ರಲ್ಲಿ ಗುಬ್ಬಿ ಗ್ರಾಮದಲ್ಲಿ ಶ್ರೀ. ಚಂದಣ್ಣ ಎಂಬವರಿಂದ ಸ್ಥಾಪಿಸಲ್ಪಟ್ಟಿತು. ಇವರು ಗುಬ್ಬಿಯ ವಾಸಸ್ಥರಾದ ಶ್ರೀ. ಶಿವಕಥಾ ವೀರಪ್ಪ ಶಾಸ್ತ್ರಿಗಳು ಎಂಬವರಿಂದ ನಾಟಕಗಳನ್ನು ಬರೆಯಿಸಿ ಆಡುತ್ತಿದ್ದರು. ಸದ್ಯ ಈ ಕಂಪನಿಯ ಒಡೆಯರಾಗಿದ್ದ ಶ್ರೀ. ಜಿ. ಎಚ್. ವೀರಣ್ಣನವರು, ಕೇವಲ ತಿಂಗಳಿಗೆ ಐದು ರೂಪಾಯಿ ಸಂಬಳದ ಮೇಲೆ ಮೊದಲು ಈ ಕಂಪನಿಯಲ್ಲಿ ಸೇರಿ, ಅನಂತರ ತಮ್ಮ ನಿಸರ್ಗಸಹಜವಾದ ಅಭಿನಯಪಟುತ್ವ, ಸೌಜನ್ಯ, ಮತ್ತು ಮುಂಗಾಣಿಕೆಯ ಮೂಲಕವಾಗಿ ತೀರ ಪ್ರಸಿದ್ಧರಾದರು. ಅನಂತರ ಈ ಕಂಪನಿಗೆ ಬೆಳ್ಳಾವೆ ನರಹರಿಶಾಸ್ತ್ರಿಗಳು ಅನೇಕ ನಾಟಕಗಳನ್ನು ಬರೆದುಕೊಟ್ಟರು. ವೀರಣ್ಣನವರ ಅಭಿನಯಕ್ಕೆ ಮೆಚ್ಚಿದ ಮೈಸೂರಿನ ಶ್ರೀಮನ್ ಮಹಾರಾಜರವರು ಕ್ರಿ.ಶ. ೧೯೩೪ ರಲ್ಲಿ ಇವರಿಗೆ Versatile comecdian ಎಂಬ ಬಿರುದನ್ನೂ ಮತ್ತು ಒಂದು ಭಂಗಾರದ ಪದಕವನ್ನೂ ಅನುಗ್ರಹಿಸಿದರು. ಇಂದಿಗೂ ವೀರಣ್ಣನವರ ನಾಟಕ ಕಂಪನಿಯೆಂದರೆ, ಒಂದು ಸಂಸ್ಥಾನವಿದ್ದಂತೆ. ಇವರ ಕಂಪನಿಯಲ್ಲಿ ಸುಮಾರು ೧೮೦ಕ್ಕೆ ಮಿಕ್ಕಿ ಕುಟುಂಬಗಳು ಕಲಾಸೇವೆಯ ಮೂಲಕ ಆಶ್ರಯ ಹೊಂದುತ್ತಿವೆ. ಸುಮಧುರವಾದ ಶಾಸ್ತ್ರೀಯ ಸಂಗೀತ, ಸಿನಿಮಾಪ್ರಪಂಚಕ್ಕೆ ಸೇರಬಹುದಾದಷ್ಟು ಅದ್ಭುತವಾದ ರಂಗೋಪಕರಣಗ[ಳು] ಸುಸಂಸ್ಕೃತವಾದ ನಟನೆ, ಮತ್ತು ನಯವಾದ ಹಾಸ್ಯಾಭಿನ[ಯ] ಇವುಗಳ ಮೂಲಕ ವೀರಣ್ಣನವರ ನಾಟಕಕಂಪನಿಯು ಅ[ಸ]ಸಾಧಾರಣವಾದ ಯಶಸ್ಸನ್ನು ಪಡೆದಿದೆ. ಇವರ 'ರಾಜಭ[ಕ್ತಿ]' ನಾಟಕದಲ್ಲಿಯ ಆ ಕೋಟೆಯ ದೃಶ್ಯವನ್ನೂ, ಕುರುಕ್ಷೇ[ತ್ರ] ನಾಟಕದಲ್ಲಿಯ ಆ ಆನೆಯನ್ನು ತರುವ ದೃಶ್ಯವನ್ನೂ ಪ್ರೇಕ್ಷ[ಕ] ವೃಂದವು ಎಂದಿಗೂ ಮರೆಯಲಿಕ್ಕೆ ಸಾಧ್ಯವಿಲ್ಲ. ಇಷ್ಟು ಬ[ಡ] ಬಡತನದ ರೀತಿಯಲ್ಲಿ ಕನ್ನಡ ನಾಟಕಗಳನ್ನು ನಡಿಸಿಕೊಂ[ಡು] ಹೋಗುವ ಕಾಲದಲ್ಲಿ, ತುಂಬಾ ಠಾಕುಠೀವಿಯಲ್ಲಿ ಅದನ್ನು ನಡಿ[ಸಿದ] ಶ್ರೇಯಸ್ಸು ಶ್ರೀ. ವೀರಣ್ಣನವರಿಗೆ ಸಲ್ಲಬೇಕು.

ಶ್ರೀ. ಹಿರಣ್ಣಯ್ಯನವರ 'ಮಿತ್ರಮಂಡಳಿ'ಯು ಕ್ರಿ. ಶ. ೧೯೪೨ ಜುಲೈ ೫ನೆಯ ತಾರೀಖಿನಂದು ಪ್ರಾರಂಭವಾಯ್ತು. ಮಂಡಳಿಯು ಹುಟ್ಟಿದ್ದು, ಒಂದು ಯೋಗಾಯೋಗವೆಂದೇ ಹೇಳ[ಬೇ]ಬೇಕು. ಯಾಕೆಂದರೆ ಈ ಮೊದಲು ಪ್ರಗತಿ ಪಿಕ್ಚರ್ಸಿನವರ ಚಲನ[ಚಿ]ಚಿತ್ರಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದ ಹಿರಣ್ಣಯ್ಯನವರು, ೧೯೪೨ರಲ್ಲಿ ಕಾರಣಾಂತರದಿಂದ ಮೈಸೂ[ರಿಗೆ] ಹಿಂತಿರುಗಬೇಕಾಯಿತು. ಆಗ ನಾಲ್ಕಾರು ಜನ ಹಿಂದಿನ ಮಿತ್ರ[ರು] ಕೂಡಿ ಸಹಜ ವಿನೋದಕ್ಕಾಗಿ ಯಾವುದಾದರೂ ಒಂದು ನಾಟ[ಕ]ವನ್ನು ಆಡಬೇಕೆಂದು ನಿರ್ಧರಿಸಿ, ಅದರ ಉತ್ಪನ್ನದ ಅ[ರ್ಧ] ಭಾಗವನ್ನು ವಕೀಲ ರಂಗಾಚಾರ್ಯ ಎಂಬುವವರು ನಡಿಸುತ್ತಿ[ದ್ದ] ಅನ್ನದಾನಕ್ಕೆ ಸಹಾಯವಾಗಿ ಕೊಡಬೇಕೆಂದೂ, ಉಳಿದ ಅ[ರ್ಧ] ಭಾಗವನ್ನು ಕೂಡಿದ ಮಿತ್ರರ ಸತ್ಕಾರಕ್ಕಾಗಿ ವಿನಿಯೋಗಿ[ಸ]ಬೇಕೆಂದೂ ನಿರ್ಧರಿಸಿ, ಮೈಸೂರ ಟೌನ್‌ಹಾಲಿನಲ್ಲಿ ತಾರೀ[ಖು] ೫-೭-೧೯೪೨ರಂದು 'ಸದಾರಮೆ' ಎಂಬ ನಾಟಕವ[ನ್ನು] ಪ್ರಥಮತಃ ಪ್ರಯೋಗಿಸಿದರು. ಈ ನಾಟಕದ ಸುಂದರವ[ಾದ] ಅಭಿನಯ, ಸಾಮಾಜಿಕ ಅಂಶ ಮೊದಲಾದುವುಗಳ ಮೂ[ಲಕ] ಪ್ರಯೋಗವು ತುಂಬಾ ಯಶಸ್ವಿಯಾಯಿತು. ಅನಂತರ ಮಿತ್ರರು "ಮಿತ್ರಮಂಡಳಿ"ಯ ಕೈಯನ್ನು ಅಲ್ಲಿಯೇ ಬಿ[ಟ್ಟು] ೧೯೪೪ ರಲ್ಲಿ ದಾವಣಗೆರೆ, ೧೯೪೬-೪೭ ರಲ್ಲಿ ಹರಿಹರ, ಹುಬ್ಬ[ಳ್ಳಿ], ಬೆಳಗಾಂವ, ಅನಂತರ ೧೯೪೯-೫೦ ರಲ್ಲಿ ಜಮಖಂಡಿ, ಗದ[ಗ], ಬಾಗಲು ಕೋಟೆ ಮೊದಲಾದ ಕಡೆಗಳಲ್ಲಿ ತಮ್ಮ ನಾಟಕಗಳ[ನ್ನು] ಅಭಿನಯಿಸಿದರು.

ಇತ್ತೀಚೆ 'ಶ್ರೀ ತಿಸುಂಡಿ ನಾಟಕ ಕಂಪನಿ' 'ಅಬ್ಬಿ[ಗೇರಿ] ನಾಟಕ ಕಂಪನಿ, 'ವಾಣೀವಿಲಾಸ' ನಾಟಕ ಕಂಪನಿ, ಹಾಲ[ಸಿದ್ಧೇಶ್ವರ] ನಾಟಕ ಕಂಪನಿ, ಕಲಾವೈಭವ ನಾಟಕ ಕಂಪನಿ, ಮೊದ[ಲಾದ] ಅನೇಕ ನಾಟಕ ಕಂಪನಿಗಳು, ಕನ್ನಡ ರಂಗಭೂಮಿಯ ಸೇ[ವೆ]ಯನ್ನು ಸಲ್ಲಿಸುತ್ತಿವೆ.

ಈ ರೀತಿ ಕನ್ನಡ ಕಂಪನಿ ನಾಟಕಗಳ ಪರಂಪರೆಯು ಹೆ[ಚ್ಚು] ಕಡಿಮೆ ೧೦೦ ವರ್ಷದಷ್ಟು ಪ್ರಾಚೀನವಾಗಿದ್ದರೂ, ಇಂದಿ[ನ] ಕಂಪನಿ ನಾಟಕಗಳ ವಿಪನ್ನಾವಸ್ಥೆಗೆ ಕಾರಣಗಳೇನು? ವ

ನಃ ಈ ಕಂಪನಿಗಳು ತಲೆಯೆತ್ತಲು ಸಾಧ್ಯವಿದೆಯೇ?—ಎಂಬು- ನ್ನು ವಿಚಾರಮಾಡಬೇಕು.

ಇಂದಿನ ಕಂಪನಿ ನಾಟಕಗಳ ವಿಪನ್ನಾವಸ್ಥೆಗೆ ಮುಖ್ಯವಾಗಿ ರ್ಥಿಕ ದೃಷ್ಟಿಯೇ ಕಾರಣವೆಂದು ತೋರುತ್ತಿದೆ. ಒಂದೇ ಣಾಯಿಯಲ್ಲಿ ಒಳ್ಳೇ ಸ್ಥಳದಲ್ಲಿ ಕುಳಿತು ಬೇಕಾದಂಥ ಚಲ- ತ್ರವನ್ನು ನೋಡಬಲ್ಲ ವ್ಯಕ್ತಿಯು, ಅದರ ನಾಲ್ಕರಷ್ಟು ಹಣವನ್ನು ಚ್ಚಮಾಡಿ ಕಂಪನಿ ನಾಟಕಗಳನ್ನು ನೋಡಲು ಹೋಗಲಾರ. ಈ ರ್ಥಿಕ ಹೊಡೆದಾಟದಲ್ಲಿ ಕಂಪನಿಗಳಾದರೂ ಕೂಡ ತಮ್ಮ ಟಿಕೀಟಿನ ಲೆಯನ್ನು ಕಡಿಮೆ ಇಡಲಾರವು. ಯಾಕೆಂದರೆ ಇಂಥ ದೊಡ್ಡ ಸ್ಥೆಯನ್ನು ನಡೆಯಿಸಿಕೊಂಡು ಹೋಗಲು ಅವರಿಗೆ ಅದಕ್ಕಿಂತ ಮೆ ಬೆಲೆ ಸಾಧ್ಯವಿಲ್ಲ. ಆದ್ದರಿಂದ ಆರ್ಥಿಕ ಮುಗ್ಗಟ್ಟಿನ ಇಂದಿನ ಲದಲ್ಲಿ ಚಲಚ್ಚಿತ್ರದಷ್ಟು, ಕಂಪನಿನಾಟಕವು ಯಶಸ್ವಿಯಾಗ- ರವು ಇದೂ ಅಲ್ಲದೆ, ಈ ನಾಟಕಗಳ ಅಂತರ್ಯದಲ್ಲಿದ್ದ ಅವು ವಿಶಿಷ್ಟ ಅಂಗಗಳೂ ಈ ನಾಟಕಗಳ ಉನ್ನತಿಗೆ ವಿಘಾತಕ- ಗಿವೆ ತರ್ಕದ ಇಂದಿನ ಯುಗದಲ್ಲಿ ಹಿಂದಿನ ಆ ಭಾವನಾ- ಶವು ಸರಿ ಹೋಗದು. ಹೀಗಾಗಿ ಈ ಕೆಳಗಿನ ಕಾರಣಗಳ ಮೂಲಕ ಕಂಪನಿ ನಾಟಕಗಳು ಇಂದು ಅಷ್ಟು ಜನಪ್ರಿಯ- ಗುತ್ತಿಲ್ಲ:

೧. ಇಲ್ಲಿಯ ಕಥಾನಕ :— ಸಾಮಾನ್ಯವಾಗಿ ಇನ್ನೂ ಎಷ್ಟೋ ಪನಿಗಳು ಪೌರಾಣಿಕ ಕಾಲವನ್ನು ಮೀರಿ ನಿಂತಿಲ್ಲ. ಪುರಾಣ- ವರೇ ಬೇಸರುಬರುತ್ತಿದ್ದ ಇಂದಿನ ಸಮಾಜದಲ್ಲಿ, ಸ್ವಾಭಾವಿಕ- ಗಿಯೇ ಆ ಹಳೆಯ ಪರಂಪರೆಯ ನಾಟಕಗಳು ಜನರ ಮನ- ನ್ನು ಹಿಡಿಯುವು.

೨ ಉದ್ದವಾದ ಕಥೆಗಳು :— ವೇಗದ ಇಂದಿನ ಯುಗದಲ್ಲಿ ರಿಗೆ ಸ್ವಲ್ಪದರಲ್ಲಿಯೇ ಸ್ವಾರಸ್ಯ ಬೇಕಾಗಿದೆಯೇ ವಿನಾ, ನೋರಂಜನೆಗಾಗಿಯೂ ಕೂಡ ಅವರು ಇಡೀ ದಿನವನು ಳುಮಾಡಲಾರರು ಒಂದು ಸಿನೇಮಾಕ್ಕೆ ಹೋದ ವ್ಯಕ್ತಿಯು ಮರುದಿವಸದ ದಿನಚರಿಯನ್ನು ಯಥಾಪ್ರಕಾರವಾಗಿ ಸಾಗಿಸ ಹುದು; ಆದರೆ ಹಳೆಯಕಾಲದ ವೆಂಕೋಬರಾಯರ ನಾಟಕ ಪನಿಯ ದಶಾವತಾರ ನಾಟಕವನ್ನು ನೋಡಿದವರಿಗೆ, ಈ ನಾಟಕ- ಎಷ್ಟು ದೊಡ್ಡವಾಗಿದ್ದುವೆಂಬ ಕಲ್ಪನೆ ಬಾರದಿರದು. 'ರಾಮ ದುಕಾ ಪಟ್ಟಾಭಿಷೇಕ'ದಲ್ಲಿ ನಗಾರಿ ಬಾರಿಸುತ್ತಿದ್ದ ವ್ಯಕ್ತಿಯು ಗಿನ ಐದರ ಸುಮಾರು ರಂಗಭೂಮಿಯ ಮೇಲೆ ಪ್ರವೇಶಿಸಿ, ಲಗಿದವರನ್ನು ಎಚ್ಚರಿಸಿ "ರಾಮ ಪಟ್ಟಾಭಿಷೇಕವಾಗುತ್ತದೆ ರಿ" ಎಂದು ಹೇಳುತ್ತಿದ್ದ ಕಾಲವು ಒಂದಿತ್ತು. ಇಷ್ಟು ದೊಡ್ಡ- ನಾಟಕವನ್ನು ನೋಡಿದಾಗ, ರಾಮನು ಸೀತೆಗೆ ಏನಾಗ- ಕೆಂಬ ಜ್ಞಾನದ ಮರೆವು ಪ್ರೇಕ್ಷಕರಲ್ಲಾಗುತ್ತಿದ್ದರೆ, ಮತ್ತು ಆ ರಿಯುವನು ಅದನ್ನು ನೆನಪು ಮಾಡಿಕೊಡುತ್ತಿದ್ದರೆ ಅದರಲ್ಲಿ ರ್ಯವೇನೂ ಇಲ್ಲ. ಹರಿಶ್ಚಂದ್ರನ ನಾಟಕವನ್ನು ನೋಡಿದ ದು ಚಿಕ್ಕ ಮಗುವು, ಹರಿಶ್ಚಂದ್ರನು ಸತ್ಯದ ಪ್ರತಿಜ್ಞೆಯನ್ನು ಹೊತ್ತಿದ್ದನ್ನೂ ಮತ್ತು ವಿಶ್ವಾಮಿತ್ರನು ಅದಕ್ಕಾಗಿ ಅವನನ್ನು ಕಾಡಿದ್ದನ್ನೂ ನೋಡುವ ಹೊತ್ತಿಗೆ—ಸುಮಾರು ೨॥ ಹೊಡೆದ— ಮಲಗಿಬಿಟ್ಟಿತಂತೆ ಮರುದಿವಸ ಆ ಮಗುವಿನ ತಂದೆಯು ನಾಟ- ಕದ ಪರಿಣಾಮವು ಮಗುವಿನ ಮೇಲೆ ಏನಾಗಿದೆ ಎಂದು ಪ್ರಶ್ನೆಯನ್ನು ಕೇಳಿದಾಗ, ಮುಂದಿನ ನಾಟಕವನ್ನು ನೋಡದಿದ್ದ ಆ ಮಗುವು ಸ್ವಾಭಾವಿಕವಾಗಿಯೆ:

"ಯಾರಾದರೂ ಗಡ್ಡವನ್ನು ಕಟ್ಟಿಕೊಂಡು ಬಂದು ಸತ್ಯವನ್ನು ಹೇಳು ಎಂದರೆ ಹೇಳಬಾರದು. ಒಂದು ವೇಳೆ ಹೇಳಿದರೂ ನಾಟ- ಕದಲ್ಲಿ ಆ ಅರಸನ ಹಾಗೆ ಪರಿಪಾಲಿಸಬಾರದು. ಇಲ್ಲವಾದರೆ ಇದ್ದ ಎಲ್ಲವನ್ನೂ ಕಳಕೊಳ್ಳಬೇಕಾಗುತ್ತದೆ" ಎಂದು ಹೇಳಿತಂತೆ. ಈ ಮಾತಿನಲ್ಲಿ ಅತಿಶಯೋಕ್ತಿ ಇರಬಹುದಾದರೂ, ವಸ್ತುಸ್ಥಿತಿಯ ವಿಪರ್ಯಾಸವೇನೂ ಇಲ್ಲ. ಅತಿಯಾಗಿ ಲಂಬಿಸಿದ ನಾಟಕ ಇಂದಿನ ವೇಗದ ಯುಗದಲ್ಲಿ ತನ್ನ ಉದ್ದೇಶವನ್ನು ಸಫಲಗೊಳಿಸದು. ಅಂತೆಯೇ ಚುಟುಕಿನ ಸಿನಿಮಾ ಪ್ರಪಂಚವು ತುಂಬಾ ಜನಪ್ರಿಯ- ವಾಯಿತು.

ಮೂರನೆಯದಾಗಿ; ಹಳೆಯ ನಾಟಕಗಳಲ್ಲಿ ಬರುತ್ತಿರುವ ಸ್ವಗತಗಳು. ಅನೇಕ ಕಂಪನಿ ನಾಟಕಗಳಲ್ಲಿ ಈ ಸ್ವಗತಗಳನ್ನು ಯಾವ ರೀತಿ ಸರಿಯಾಗಿ ಉಪಯೋಗಿಸಬೇಕೆಂಬುದರ ಅರಿವು-

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City

ಕನ್ನಂತೆ ಕಾಣುವಿಲ್ಲ. ಮಧ್ಯರಾತ್ರಿ ಯಾರಿಗೂ ಗೊತ್ತಾಗದ ಹಾಗೆ ಒಬ್ಬರ ಮನೆಯಲ್ಲಿ ಕನ್ನವನ್ನು ಕೊರೆದು ತುಡುಗಿಗೆ ಹೋದ ಕಳ್ಳನು, ತನ್ನ ಕೆಲಸವನ್ನು ತೀವ್ರ ನಿರ್ವಹಿಸದೆ, ಹತ್ತು ನಿಮಿಷ ಸ್ವಗತವನ್ನು ಕುಟ್ಟುವವನೇ. ವೃತ್ತಿಕಪಟಿಕನ ತುಡುಗನಿಗೆ ಕೂಡ ತನ್ನ ಉನ್ಯಪಕ್ಕಿಂತ ತಾನು ತೆಗೆದ ಹೋರನ್ನು ವರ್ಣಿಸುವುದರಲ್ಲಿಯೇ ಹೆಚ್ಚು ಅಭಿಲಾಷೆ. ಸಾಯುವ ದಶರಥನು ಕೂಡ ಹದಿನೈದು ನಿಮಿಷ ಪ್ರಾಣವನ್ನು ಹಿಡಿದಾದರೂ ಸ್ವಗತವನ್ನು ಮುಗಿಸಿಯೇ ಸಾಯುತ್ತಾನೆ. ಇಂಥ ಅಸ್ವಾಭಾವಿಕವಾದ ಸ್ವಗತಗಳು, ಇಂದಿನ ಶಾಸ್ತ್ರೀಯ ಮತ್ತು ತಾರ್ಕಿಕ ದೃಷ್ಟಿಗೆ ಸರಿಹೋಗವು. ಇಂಥ ಸ್ವಗತಗಳಿಂದ ಎಷ್ಟೋ ಸಲ ನಾಟಕದ ಕ್ರಿಯೆಗೆ ಬಾಧೆ ಬಂದುದೂ ಉಂಟು. ಹಲಕೆಲವು ಸಲ ಸಾಯುತ್ತಿರುವ ವ್ಯಕ್ತಿಯಾಗಲಿ ಇಲ್ಲವೆ ವೃದ್ಧನಾಗಲಿ, ಸ್ವಗತ ಭಾಷಣವನ್ನು ಮಾಡುತ್ತಿರುವಾಗ, ಆ ಭಾಷಣವು ಕೇಳಿಸದ ಪ್ರೇಕ್ಷಕ ವೃಂದವು "ಸ್ವಲ್ಪ ಜೋರಾಗಿ ಮಾತಾಡು" ಎಂದು ಕೂಗಿ ರಸಾಭಾಸವನ್ನು ಮಾಡಿದ ದೃಷ್ಟಾಂತಗಳು ಏನೂ ಕಡಿಮೆಯಿಲ್ಲ.

ನಾಲ್ಕನೆಯದಾಗಿ ಅನಾವಶ್ಯಕವಾದ ಮತ್ತು ಪಾಂಡಿತ್ಯಪೂರ್ಣ ಸಂಗೀತ. ಈ ಸಂಗೀತದ ಹೊಯಿಲಿನಲ್ಲಿ ಎಷ್ಟೋ ಸಲ ಅನೇಕ ಶುದ್ಧ ಕನ್ನಡ ಪದಗಳು ವಿಕೃತರೂಪವನ್ನು ಪಡೆದದ್ದನ್ನೂ ಕಾಣುತ್ತೇವೆ. ಈ ಸಂಗೀತದ ಭರದಲ್ಲಿ ಸಂಗ ಮಂಗ ಎಂಬ ಪ್ರಯೋಗಗಳು, ಸೌಂಗ ಮೌಂಗ ಎಂಬೂ ಇಲ್ಲವೆ ಇದಕ್ಕೂ ಹೆಚ್ಚಿನ ಅಸ್ವಾಭಾವಿಕ ರೂಪಗಳನ್ನೂ ಪಡೆವದ್ದನ್ನು ಕಾಣುತ್ತೇವೆ. ಕೈಲಾಸಂ ಅವರು ಚೇಷ್ಟೆ ಮಾಡಿದ ಹಾಗೆ ಹಲಕೆಲವು ನಾಟಕಗಳಲ್ಲಿ ಪುಣ್ಯಾತ್ಮ ಸೀತಾಪತಿ ಶ್ರೀರಾಮಚಂದ್ರನು, ರಘುಪತಿ ರಾಮನಷ್ಟೇ ಆಗದೆ, ಪನೀಕುಲ ತಿಲಕನೂ ಸ್ವನೀಕುಲ ತಿಲಕನೂ ಆದದ್ದುಂಟು.

" ರಘುಪತಿ ರಾಮಾ ರಕ್ಷಿಸು
ಪನೀಕುಲ ತಿಲಕ
ಸ್ವನೀಕುಲ ತಿಲಕ
ರಘುಪತಿ ರಾಮಾ ರಕ್ಷಿಸು."

ರಾಮಾಯಣದ ತಬಲದ ಗತ್ತಿನಲ್ಲಿ ತರಕಿಟದೊಡನೆ ಗದಗಿನ ಟಕೀಟು ಬಂದರೆ ಆಶ್ಚರ್ಯವಿಲ್ಲ.

ಇದೂ ಅಲ್ಲದೆ ಹಲಕೆಲವು ಸಲ ನಟರು ಕೂಡ ಸಂಗೀತದ ಔಚಿತ್ಯವನ್ನು ಅರಿಯದೆ ಅವಾಸ್ತವವಾಗಿ ರಾಗಾಲಾಪಗಳನ್ನು ಬೆಳಸಿದ್ದ ಸನ್ನಿವೇಶಗಳು ಉಂಟು. ದಶರಥನು ಸಾಯುವ ಸನ್ನಿವೇಶದಲ್ಲಾಗಲಿ ಅಥವಾ "ನಲ್ಲೆ, ಇದೋ ಹೊರಟೆನು" ಎಂದು ಹೇಳಿ, ಅರ್ಧ ಗಂಟೆಯ ಕಾಲ ಹಾಡುವ ನಾಯಕನ ಹಾಡುಗಳಲ್ಲಿಯೂ ಈ ಸಂಗೀತದ ಅನೌಚಿತ್ಯವು ಸ್ಪಷ್ಟವಾಗಿ ಕಂಡುಬರುತ್ತಿದೆ. ಸತ್ತ ದಶರಥನು ಒಮ್ಮೆ Once more ಎಂದಾಗ ಪುನಃ ಎದ್ದು ಕುಳಿತು ಮೊದಲಿನ ಹಾಡನ್ನು ಹಾಡಿದನೆ
ಹೇಳುವ ಲೋಕರೂಢಿಯ ಮಾತು ಅತಿಶಯೋಕ್ತಿವುಳ್ಳದ್
ದರೂ ಮೇಲಿನ ಸಂದರ್ಭಗಳನ್ನು ನೆನೆದಾಗ ಅಸಂಭವವೇನೂ
ಎನಿಸುವುದಿಲ್ಲ.

ಐದನೆಯದಾಗಿ, ಇಂಥ ನಾಟಕಗಳಲ್ಲಿ ಬರುವ ಕೀಳು
ಗತಿಯ ವಿನೋದ. ಎಷ್ಟೋ ಕಂಪನಿಗಳಲ್ಲಿ ಈ ವಿನೋದವು
ಕೆಳಗಿನ ಮಟ್ಟಕ್ಕಿಳಿದು, ಸುಸಂಸ್ಕೃತರ ಮನಸ್ಸಿಗೆ ಬೇಜಾ
ಬರುವಂತೆ ಮಾಡಿತು.

ಆರನೆಯದಾಗಿ ಎಷ್ಟೋ ಕಂಪನಿ ನಾಟಕಗಳ ಭಾಷೆಯ
ಕೂಡ, ಹಳೆಯ ದಶಾವತಾರದ ಆಟಗಳ ಅತಳ ವಿತಳ ತಳಾ
ರಸಾತಳ ಪಾತಾಳಗಳ ಭಾಷೆಯಿಂದ ದೂರವಿರಲಿಲ್ಲ
ಕಂಪನಿ ನಾಟಕಗಳ ದಾಸೀ ಜನರು, ಕೂಡ ಆಡುವ ಭಾಷೆಯ
ಎಂತಹ ವೈಯಾಕರಣಿಗಳೂ ಕೂಡ ತಲೆ ಕೆಳಗೆ ಹಾಕುವಂ
ಹದು. ಎಂತಹ ಹುಚ್ಚನಿದ್ದರೂ ಅವನ ಭಾಷೆಯು
ವ್ಯಾಕರಣ ಶುದ್ಧ ಮತ್ತು ಸಂಸ್ಕೃತ ಪೂರ್ಣ. ಇದರಿಂದ ನಾ
ಟಕ್ಕೆ ಅವಶ್ಯವಾಗಿ ಬೇಕಾದ ವಾಸ್ತವಿಕಾಂಶವು ಲೋಪವಾ
ನಾಟಕಗಳೆಲ್ಲ ಯಾವುದೋ ಬೇರೆ ಭೂಮಿಗೆ ಸೇರಿದುವೇ
ವಿಚಾರವು ರೂಢವಾಯಿತು.

ಇವುಗಳ ಜೊತೆಗೆ ಬೆಳೆಯುತ್ತಿರುವ ವೆಚ್ಚ. ನಿರಕ್ಷರ
ತನ್ಮೂಲಕವಾಗಿ ಪ್ರಾಪ್ತವಾದ ಕಾರ್ಯಕ್ಷಮತೆ ಇಲ್ಲದಿ
ರೀತಿ, ಸ್ತ್ರೀ ನಟವರ್ಗದಲ್ಲಿ ಸ್ತ್ರೀಯರ ಪ್ರವೇಶ ಈ ಮೊದಲಾದು
ಗಳೆಲ್ಲ ಕೂಡಿ, ಕನ್ನಡ ಕಂಪನಿ ನಾಟಕಗಳು ತಮ್ಮ ವೈಭ
ಅತ್ಯುನ್ನತ ಶಿಖರದಿಂದ ಇಳಿಯುವಂತಾಯಿತು.

ಈ ರೀತಿ ಮೇಲಿನ ವಿಮರ್ಶೆಯಲ್ಲಿ ಕಂಪನಿ ನಾಟಕಗಳ
ಅನೇಕ ಲೋಪ-ದೋಷಗಳನ್ನು ಕಾಣಬಹುದಾದರೂ, ಇ
ಯಾವುದೋ ಒಂದು ವಿಷಯದ ಹ್ರಾಸ ಕಾಲದಲ್ಲಿ ಕಂ
ಬರುವಂಥವೇ ಆಗಿವೆ. ನಮ್ಮ ಕಂಪನಿ ನಾಟಕಗಳಲ್ಲಿಯ
ಉದ್ಬುದ್ಧವಾದ ಕಥಾನಕಗಳ ಬಗ್ಗೆ ಆಕ್ಷೇಪವೆತ್ತುವ ನಾವು, ಇಂ
ಎಷ್ಟು ಬೃಹದಾಕಾರದ ಕಾದಂಬರಿಗಳನ್ನು ಓದುತ್ತಿಲ್ಲ? ತಿ
ಕೇಳಿದರೆ ದೊಡ್ಡವಾಗಿರುವ ಕಾದಂಬರಿಗಳನ್ನು ಬರೆಯುವು
ಇಂದಿನ ಸಾಹಿತ್ಯದಲ್ಲಿ, ಒಂದು ಫ್ಯಾಶನ್ ಆಗುವಂತೆ ಕಾಣುತ್ತ
ಇಂಗ್ಲಿಷ್ ಸಾಹಿತ್ಯದ ಡಿ. ಎಚ್. ಲಾರೆನ್ಸಿನ ಮನೋವಿಶ್ಲೇ
ಣೆಯನ್ನು ಓದಿ, ಅದಕ್ಕೆ ಮಾರುಹೋದ ವಾಚಕರು ಯಾ
ಮುಖದಿಂದ ಕಂಪನಿ ನಾಟಕಗಳ ಸ್ವಗತದ ಬಗ್ಗೆ ಆಕ್ಷೇಪವನ
ಎತ್ತಬಹುದು? ಇಂದು ಸಂಗೀತ ಪೂರ್ಣವಾದ ಗೀತನಾಟ
ಗಳನ್ನೆ ನಾವು ಬರೆಯುತ್ತಿರುವಾಗ, ಇಂದಿನ ನಾಟಕಗ
ಸಂಗೀತದ ಬಗ್ಗೆಯೂ, ಆಕ್ಷೇಪವೆತ್ತಲಾರೆವು ಇವುಗಳಲ್ಲಿ
ಅವಾಸ್ತವತೆಯ ಮಾತನ್ನು ನಾವಿಂದು ವಿಚಾರಿಸಬೇಕಾಗಿ
ಎಂತಹ ಒಳ್ಳೇ ವಸ್ತುವೂ, ಅಕ್ಷಮವ್ಯಕ್ತಿಯ ಕೈಯಲ್ಲಿ ಸಿಕ್ಕಾ

ಕ್ಷಿಲಬುಗೆಡಿಸಿಕೊಳ್ಳುವುದೆಂಬ ಮಾತಿನ ಸತ್ಯತೆಯನ್ನೇ ಆ ಎಲ್ಲ ಸಂದರ್ಭಗಳೂ ಸೂಚಿಸುತ್ತವೆ. ಸತ್ತ ದಶರಥನು Once more ಎಂದಾಗ ಎದ್ದು ಕೂತರೆ, ರಂಗಸ್ಥಳದ ಹೊರಗೆ ಆವನಿಗೆ ನಿಜವಾದ ಮರಣದಂಡನೆಯನ್ನೇ ಕೊಡಬೇಕು. ಅವಾಸ್ತವವಾಗಿ ರಾಗಾಲಾಪ ಮಾಡಿದ ವ್ಯಕ್ತಿಗೆ ಪ್ರೇಕ್ಷಕರ ಉದ್ಗಾರಗಳೇ ತಕ್ಕ ಪ್ರತಿಫಲವಾಗಿವೆ. ಒಟ್ಟಾರೆ ಒಳ್ಳೆಯ ಕಾಯ್ದೆಯನ್ನು ಕೂಡ ಹೊಲೆಗೆಡಿಸಲು ಸಾಧ್ಯವಿದ್ದಂತೆ, ಇಂಥ ಒಳ್ಳೆಯ ವಿಷಯಗಳನ್ನೂ ಅಕ್ಷಮ ಲೇಖಕರು ಕೀಳುದರ್ಜೆಗೆ ಒಯ್ಯಲು ಸಾಧ್ಯವಿದೆ. ಬೆಳೆಯುತ್ತಿರುವ ಭ್ರಷ್ಟ, ಅಕ್ಷಮತೆ ಮತ್ತು ಸ್ತ್ರೀಯರ ಸಮಸ್ಯೆಗಳು ಜೀವನಕ್ಕೇ ಎಂದು ಎದುರು ನಿಂತಿರುವ ಸಮಸ್ಯೆಗಳು. ಅವುಗಳನ್ನು ಜೀವಂತವಾಗಿಯೇ ಬಿಡಿಸಬೇಕು.

ಇದೂ ಅಲ್ಲದೆ, ಇಂದಿನ ನಾಮಾಂಕಿತ ಲೇಖಕರ ನಾಟಕಗಳ ಅಭಿನಯವನ್ನೂ ಮತ್ತು ಕಂಪನಿ ನಾಟಕಗಳ ಅಭಿನಯವನ್ನೂ ನೋಡಿದಾಗ, ಇವುಗಳ ಪರಿಣಾಮವು ಯಾವ ರೀತಿಯಾಗುತ್ತಿದೆ ಎಂಬುದು ಸ್ಪಷ್ಟವೇ ಇದೆ. ಇಂದಿನ ನಾಮಾಂಕಿತ ಲೇಖಕರ ಅನೇಕ ನಾಟಕಗಳಲ್ಲಿ ಸಾಮಾನ್ಯವಾಗಿ ಜನರ ಮನಸ್ಸನ್ನು ಆಕರ್ಷಿಸುವ ಶಕ್ತಿಯು ಕಡಿಮೆ ಇದ್ದಂತೆ ಕಂಡಿತು. ಅವರು ಉದ್ದೇಶಿಸಿದ ಪ್ರೇಕ್ಷಕವರ್ಗವು ಹೆಚ್ಚು ಕಡಿಮೆ ಮಧ್ಯಮವರ್ಗದ್ದೇ, ಮತ್ತು ಅಷ್ಟೇ ಸುಶಿಕ್ಷಿತವಾದದ್ದೇ. ಈ ಜನಾಕರ್ಷಣವಿದ್ಯೆ (Popular appcae) ಕಂಪನಿ ನಾಟಕಗಳಿಗೆ ಹೆಚ್ಚಿದ್ದಂತೆ ಕಾಣುತ್ತದೆ. ಇದರಂತೆಯೇ ಇಂದಿನ ಸಾಹಿತ್ಯಿಕ ನಾಟಕಗಳು ಹೆಚ್ಚು ಸೋದ್ದೇಶವಾಗಿ (Purposive) ಯಾವುದೋ ಒಂದು ಬಗೆಯ ಜಾಹೀರಾತಿನಂತೆ ಕಾಣಿಸತೊಡಗುತ್ತವೆ. ಅಷ್ಟೇ ಅಲ್ಲದೆ ಈ ನಾಟಕಗಳಲ್ಲಿಯ ಸಂಭಾಷಣೆಯ ವಾಕ್‌ಚಾತುರ್ಯವು ವಿದ್ವಾಂಸರಿಗೆ ಮಾತ್ರ ಗಮ್ಯವಾದುದು. ಎಂತಹ ಹಳ್ಳಿಯ ಮುದುಕನೂ ಅಷ್ಟೇ ಶಬ್ದಬಲದಲ್ಲಿ ತನ್ನ ಮೇಲ್ಮೆಯನ್ನು ಸಾರಲು ತೊಡಗುತ್ತಾನೆ. ಇದರ ಜೊತೆಗೆ ಇಂದಿನ ಅನೇಕ ಅಮೆಚ್ಯೂರ್ ಸಂಸ್ಥೆಗಳಲ್ಲಿಯ Prompting ಪ್ರಕರಣವನ್ನು ನೆನೆದರಂತೂ, ಇಂದಿನ ಕಂಪನಿ-ನಾಟಕಗಳು ಸಾವಿರಮಡಿ ಮೇಲೆನಿಸುತ್ತವೆ.

ಒಟ್ಟಾರೆ ಸಂಸ್ಕಾರ ಹೊಂದಿದ ನಟ-ನಟಿಯರು, ಪರಿಪೂರ್ಣ ನಾಟ್ಯದೃಷ್ಟಿ, ಅದಕ್ಕೆ ಆವಶ್ಯಕವಾಗಿ ಬೇಕಾದ ಅವಿರತವಾದ ಅನುಭವ, ಸಹಜ ಸಲೀಲತೆ, ಕಥಾನಕಗಳ ನಾಟಕೀಯತೆ, ಸುಂದರವಾದ ವೇಷ-ಭೂಷಣಗಳು, ಸರಿಯಾದ ರಂಗವಿನ್ಯಾಸಗಳು, ಮಧುರವಾದ ಗಾಯನ, ಎಲ್ಲಕ್ಕೂ ಹೆಚ್ಚು ಸಮಾರ್ದವರಣೀಯವಾದ ಜನಾಕರ್ಷಣ ಶಕ್ತಿ ಇವುಗಳ ಮೂಲಕ ಕನ್ನಡ ಕಂಪನಿ ನಾಟಕಗಳಿಗೆ ಇನ್ನೂ ಉಜ್ವಲವಾದ ಭವಿಷ್ಯವಿದೆ. ಈ ವಿಧದಲ್ಲಿ ಅದು ಚುಟುಕಿನ ಸಿನಿಮಾದ ಅಘಾತವನ್ನೂ ತಡೆಯಬಲ್ಲುದು. ಯಾಕೆಂದರೆ ಒಂದು ಸಜೀವ ಕಲೆ, ಮತ್ತೊಂದು ನಿರ್ಜೀವ ಚಿತ್ರ. ಒಂದು ಜೀವಂತ ಸಂಗೀತ, ಮತ್ತೊಂದು ಗ್ರಾಮಫೋನ್ ರೆಕಾರ್ಡ್. ಒಂದು ಗಾಳಿಯಲ್ಲಿ ಹುಟ್ಟಿ ಗಾಳಿಯಲ್ಲಿ ಲೀನವಾಗುವ ಬಾನುಲಿಯ ವಾರ್ತಾ ವಿಸ್ತರಣ, ಮತ್ತೊಂದು ನಮ್ಮ ಕಣ್ಣೆದುರಿಗೆ ಓದಿ ನೋಡಿ ಮನನ ಮಾಡಿಕೊಳ್ಳುವ ವರ್ತಮಾನ ಪತ್ರಿಕೆ. ಕನ್ನಡ ಕಂಪನಿ ಕಲಾವಿದರು ಕೂಡ ತಮ್ಮ ಈ ಉಜ್ವಲ ಭವಿಷ್ಯದಲ್ಲಿ ವಿಶ್ವಾಸವಿಟ್ಟು, ಕಲಾಸೇವೆ ಮಾಡಿದರೆ, ಕನ್ನಡ ನಾಟಕಗಳು ಕೆಲದಿನಗಳಲ್ಲಿಯೇ ಕಾಣಲಿರುವ ಶತಸಾಂವತ್ಸರಿಕ ಉತ್ಸವವು ಕನ್ನಡಕ್ಕೆ ಕೀರ್ತಿಯನ್ನು ತರುವಂತಹದಾದೀತು. ಇಂಥ ಕಲಾ ವಿಭಾಗದಲ್ಲಿ ಕರ್ನಾಟಕದ ನಗರಸಭೆಗಳೂ ಸಹಕರಿಸಿ, ದೊಡ್ಡ ದೊಡ್ಡ ಸ್ಥಳಗಳಲ್ಲಿ ಸರಿಯಾದ ನಾಟ್ಯಗೃಹಗಳನ್ನು ಕಟ್ಟಿಸುವ ಏರ್ಪಾಡು ಮಾಡಿದರೆ, ಮೃತಿ ಹೊಂದುತ್ತಿರುವ ಈ ಕಲೆ ಪುನಃ ಅಭಿವೃದ್ಧಿ ಹೊಂದೀತು ಕನ್ನಡ ಕಂಪನಿಗಳು ತಮ್ಮ ಉಜ್ವಲವಾದ ಭವಿಷ್ಯವನ್ನು ಕಾಣಲಿ—ಎಂದಿಷ್ಟೇ ನಾವು ಇಂದು ಆಶಿಸಬಹುದು.

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ—ಬಡಬಗ್ಗರ—ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್,
ಮುಂಬಯಿ—೨.

ಅರ್ವಾಚೀನ ಪ್ರೇಮಗೀತ

(ನೆಳಲುನಾಟಕವೊಂದು)

ಶ್ರೀ. ಚಿದಂಬರ ದೀಕ್ಷಿತ ಬಿ. ಎ. (ಆನರ್ಸ್), ಧಾರವಾಡ

★

ಹರವಾದ ಮೊಗಸಾಲೆ. ತೆರೆ ಸರಿದಾಗ ನೋಟಕನಿಗೆ ಗೋಚರಿಸುವುದೆಂದರೆ ಎರಡು ಕೋಣೆಗಳ ಕಲ್ಪನೆ. ಆ ಎರಡು ಕೋಣೆಗಳ ಮಧ್ಯದ ನೆಳಲು-ಗೋಡೆಯ ಕಲ್ಪನೆ ಶ್ವೇತಪರದೆಯ ಮಧ್ಯದಲ್ಲಿ ಲಂಬಾಕೃತಿಯಾಗಿ ಕಾಣುವ ಕೋಲಿನ ನೆಳಲಿನಿಂದ ವ್ಯಕ್ತವಾಗುತ್ತದೆ. ಒಂದು ಕೋಣೆಯಲ್ಲಿ ಗಂಡ, ಇನ್ನೊಂದರಲ್ಲಿ ಹೆಂಡತಿ ಅತ್ತಿತ್ತ ಅಲೆದಾಡುತ್ತ ಸಾಭಿನಯವಾಗಿ ಹಾಡುವ ಭಂಗಿಯಲ್ಲಿ ಇರುತ್ತಾರೆ. ಈ ಪಾತ್ರಗಳನ್ನು ಕೂಡ ಅವರ ನೆಳಲಿನ ಮೂಲಕವೇ ಕಾಣುವಂತೆ ಮಾಡಿದೆ.

ಪಾತ್ರಗಳ ವಿಚಾರದಲ್ಲಿ ಎರಡು ಮುನ್ನುಡಿಗಳು. ಗಂಡ-ಹೆಂಡತಿ ಇರ್ವರೂ ನೂತನ ದಂಪತಿಗಳು. ಇರ್ವರೂ ಪ್ರಾಮಾಣಿಕ ಜೀವಿಗಳು. ಒಳ್ಳೆಯ ಭವಿಷ್ಯದ ಬದುಕಿಗಾಗಿ ಹಂಬಲಿಸುವವರು. ಒಬ್ಬರನ್ನೊಬ್ಬರು ಮೆಚ್ಚಿಕೊಂಡಿರುವವರು, ಎನ್ನಿರಿ. ಆದರೆ, ಇದಕ್ಕೂ ಪೂರ್ವದ—ಮದುವೆಗೆ ಮುಂಚೆಯ—ಕೆಲ ದುಷ್ಟ ಘಟನೆಗಳನ್ನು ಪ್ರಾಮಾಣಿಕವಾಗಿ ತಿಳಿಸುವ ಮನಸ್ಸಿನಿಂದ ಶುದ್ಧಾಂತಃಕರಣದಿಂದ ಒಬ್ಬರೊಬ್ಬರಲ್ಲಿ ಒಪ್ಪಿಕೊಳ್ಳುವ ಸಂಗತಿಯ ನಿರೂಪಣೆಯೇ ಈ ಹಾಡಿನ ಸಂಭಾಷಣೆಯ ಹುರುಳು.

ಎಂತಹ ಸಜ್ಜನನೂ ಕೆಲವೇಳೆ ಎಡಹುತ್ತಾನೆ. ಅಥವಾ ನಿಸರ್ಗ ಪ್ರವೃತ್ತಿಗಳಿಗೆ ಸುಲಭವಾಗಿ ಬಲಿಯಾಗುತ್ತಾನೆ. ನಾವು ಅನೀತಿ (?) ಯೆಂದು ಹೇಳುವ ಹಾದಿಯನ್ನು ಅನಿವಾರ್ಯವಾಗಿ ಸುಲಭವಾಗಿ ತುಳಿಯುತ್ತಾನೆ. ಅದಿಷ್ಟಕ್ಕೆ ಆತನು ಸಜ್ಜನನಲ್ಲವೆಂದು ಟೀಕೆಮಾಡಬಾರದು, ನಾವು. ತನ್ನ ಕೆಟ್ಟುದರಲ್ಲಿಯೂ ಒಂದು ಒಳ್ಳೆಯ ಬದುಕನ್ನು ನಿರ್ಮಿಸಬೇಕೆಂಬ ಅಪೇಕ್ಷೆ, ಆತನ ವಿವೇಕವು ಆತನನ್ನು ಎಚ್ಚರಿಸಿದಾಗ ಆಗುತ್ತದೆ ಅವನಿಗೆ. ಆ ಅಪೇಕ್ಷೆಯನ್ನು ಫಲವಾಗಿ ಕಾಣುವ ಪ್ರಯತ್ನ ಈ ಗೀತದಲ್ಲಿ ಸೂಚ್ಯವಾಗಿ ಬರುತ್ತದೆ.

ಮದುವೆಗೆ ಮೊದಲು ಗಂಡ ಕೆಲ ತಪ್ಪುಗಳನ್ನು ಮಾಡಿದ್ದಾನೆ. ಹೆಂಡತಿಯೂ ತಪ್ಪಿನ ಅಂಚನ್ನು ತಲುಪುವ ಮಟ್ಟಿಗೆ ವ್ಯವಹರಿಸಿದ್ದಾಳೆ. ಅವರ ತಪ್ಪುಗಳ ತಿಳಿವಳಿಕೆ ಈ ಪೂರ್ವದಲ್ಲಿ ಪರಸ್ಪರರಿಗೆ ಗೊತ್ತಿಲ್ಲ. ಈಗ, ಮದುವೆಯಾದ ಮೇಲೆ ತಮ್ಮ ಭವಿಷ್ಯದ ಬದುಕಿನ ವಿಚಾರ ಹೆಚ್ಚು ಹೆಚ್ಚು ಬರುತ್ತಿರುವುದರಿಂದ ಅವರ ಮೆಚ್ಚಿಗೆ, ಪ್ರೀತಿ ಅನಿವಾರ್ಯವಾಗುತ್ತದೆ, ಸಹಜವೂ ಆಗಲಾರದೆಂದು ಹೇಳುವುದು ಸಾಧ್ಯವಿಲ್ಲ. ಇಂಥ ಸಂದರ್ಭದಲ್ಲಿ ಅವರವರ ಹಳೆಯ ದೋಷಗಳ ಚಿಂತೆ ಅವರ ಹೃದಯವನ್ನು ಒಳಗೊಳಗೇ ಸುಡುತ್ತದೆ; ಹೃದಯ ಭಾರವೆನಿಸುತ್ತದೆ. ಆ ಭಾರವನ್ನು ಕಡಿಮೆ ಮಾಡಿಕೊಂಡು ಮನಸ್ಸನ್ನು ಹಗುರುಗೊಳಿಸಲು ಅವರು ತವಕಪಡುತ್ತಿದ್ದಾರೆ. ಆದರೆ ಸಂಕೋಚವೊಂದು! ಅಂತೆಯೇ ಬೇರೆ ಬೇರೆ ಕೋಣೆಯಲ್ಲಿದ್ದು ಹಾಡಿಕೊಳ್ಳುವ ಸಂವಿಧಾನಕವನ್ನು ಕಲ್ಪಿಸಲಾಗಿದೆ. ನಡುವಿನ ಗೋಡೆ ಆ ಸಂಕೋಚದ ಪ್ರತೀಕ......

ಗಂಡ :—

ನೀನು ಅಲ್ಲಿ, ನಾನು ಇಲ್ಲಿ, ಇಂತೆ ಇರಲಿ ನಲ್ಲೆ.
ನೀನು ಎದುರು ಬರಲು ಅಮರಬಹುದು ಹಾತಲಲ್ಲೆ
ಗೆಳೆಯ ನಾಳೆ ಅಂಚೆಕಾರನಾಗಿ ಬಹನು ; ಬಲ್ಲೆ

ಒಲವ ಬಳ್ಳಿಮಲರ ಮುಡಿದುದೊಂದು ದಿವ್ಯರೂಪ,
ಮನದ ಗುಡಿಯ ಮಧುರ ಬೆಳಕಿಗಾಗಿ ನಂದ·ದೀಪ ;
ಈ ಅನೂನ ಜ್ಯೋತಿ ತೊಡೆಯಬಹುದು ಹೃದಯ ಶಾಪ !

ಮುದ್ದು ಗೆಳತಿ ನಿನ್ನ ಪ್ರೀತಿ ಅಳೆಯೆ ಸೋತೆ ನಾನು.
ಬರಿಯ ಎದೆಯ ಬೇಟೆಕಲ್ಲ ; ಬೇಡರೊಡತಿ ನೀನು—
ಮದುವೆಯ ಋಷಿ ಹರಸಿ ಹೋದ ಹಿಚ್ಚ ಬದುಕ ತಾನು.

ಏನೊ ಕೆಳದಿ ಎದೆಯೊಳಿಂತು ಇರುವುದೊಂದು ಭಾಲೆ.
ಆಟಪಂಥ ಮೈಲಿಗೆನುಲಿಗಂಟು ಹರಿಯಲೇಳೇ ;
ಅದೇ ನೂಲು ನೇಯಲುಂಟು ನಲುಮೆ ಹಾಡ ಬಾಳೆ!

ನಾ ಮೂಸಿಹೆ ಮುಖನೆರವತ ಹುಸಿಹೂವಿನ ಗಂಧಾ,
ರತಿಯೊಲವಿಗೆ ಬಲಿಯಿರಿಸಿದೆ ಈ ಜಡತನು ಬಂಧಾ ;
ಕಮರಿಸಿತೆಲೆ ಚಣದೊಳಗೆಯೆ ದಿಟ ಮನದೊಳ ಚಂದಾ

ಇದನುಸಿರಲು ನಾ ಬೆದರುವೆ, ಪಾವಿತ್ರ್ಯದ ಹೆಣ್ಣೆ ;
ಕಿಡಿ ಹುದುಗುವ ಬಗೆ ಬದುಕಿಗೆ ಪ್ರಾಮಾಣಿಕವೆನ್ನೆ
ಸುಡಲರಿಯದೆ ಹುಲು ಜನುಮವ ? ಇದು ಸರಿಯೇ ಚೆನ್ನೆ ?

ಹೆಂಡತಿ:—

ಸರಲಿ ಬಿಡೋ, ಒಲವ ನುಡಿಸು. ಕೊಲಲು ಬೇಡೊ ಎನ್ನಾ
ನೀನು ಮಿಡಿವ ಹೃದಯದ ದನಿ ಸವಿ ಸುಸಿಲಿನ ಜೊನ್ನಾ
ಆದರಹಾ ! ಕೆದಕುತಲಿದೆ ಹುಗಿದ ಹಳೆಯ ಬನ್ನಾ.

ಹರೆಯವೊಂದು ಯಾಗಶಾಲೆ ಜೀವಲೋಕದೊಳಗೆ.
ಹೊಸ ವಸಂತ ಬನ ವಿಲಾಸ ಮೆಯ್ಯತುಂಬ ತೊಳಗೆ,
ಈ ಬಸತ್ ಪ್ರಭಾವರಸ್ಮಿ ಉರಿಪುದಿದೆಯ ಒಳಗೇ

ಆಸೆಯೊಮ್ಮೆ ಒಲವ ಮರೀಚಿಕೆಯನು ಬಯಸಿ ನಲ್ಲಾ,
ಸೋತ ಬಗೆಯ ಸೊಲ್ಲು ಮೂಡೆ ಬಗೆಗಡಿತು ಎಲ್ಲಾ.
ನಂಬಿದೆದೆಗೆ ಬರಿ 'ನ' ಕಾರ ವಂಚನೆ ಸಮ ; ಹೊಲ್ಲಾ.

ಕಣ್ಣ ಹುಬ್ಬ ಬಿಲ್ಲ ಬಲವ ಅಳಿವನಾವ ಜಾಣಾ ?
ಉಸಿರಿಗಿಂತ ಕಸುವು ಮಿಗಿಲು; ಅಂಥ ಸುಪ್ತ ತ್ರಾಣ.
ಛಲವು ಬರಿಯ ಗಾಳಿ ಜಗಳ; ತಿಳಿದು ನೋಡೆ ಕಾಣ.

ಸಿಲುಕಿಹೋದ್ದೆ ಬಲೆಯ ಹೆಣೆಯೆ ಹಲವು ಪ್ರೇಮದೋಲೆ
ಕನಸ ನೆಂಬಿ ಮನಸ ಹಂಬಿ ರಚಿಸೆ ಜಾಲಲೀಲೆ,
ಸನಿಹ ಸುಳಿಯೆ ಕಂಡೆನವರ ಬಾರಾಗು ಮೇಲೆ ಮೇಲೆ.

ಅರೆರೆ, ಅಕಟ ! ಏನೋ ಕಟುಕ ಹಂಬಲದೀ ಮಾಯಾ
ಕಾಂಬ ಬೆಂಕಿ ಹಿಡಿಯ ಹೋದೆ ಬಳಸಿ ಬರಿಯ ಛಾಯಾ,
ಜಳಕೆ ಹೃದಯ ಕಳವಳಿಸಿತು ತುಳುಕಿ ನವಿರ ಗಾಯಾ.

(ಗಂಡ ಮೊದಲು ಹೊರಬರುವ, ಆ ಬಳಿಕ ಹೆಂಡತಿ ಬರುವಳು. ಒಬ್ಬರನ್ನೊಬ್ಬರು ಬೆಟ್ಟಿಯಾಗುವ ಬಗೆಯಲ್ಲಿ ಎದುರು ಬದರು ಬರತೊಡಗಿದಾಗ...)

ಗಂಡ :

ತೊಳೆಯಲಿ ತೆಗ, ಆ ಹುಲುಹೊಗೆ ; ತಿಳಿಯಲಿ ಬಗೆ ನಾರಿ
ಹೊಗೆಯ ಹಿಂದೆ ಬೆಳಕಿನ ಬೆಳೆ ತೋರೆ ದಿಟದ ದಾರಿ,
ಬಾ ಕರವಿಡಿ, ಮುಂದೆ ನಡೆವ ಬಾಳ ತೇರನೇರಿ !

ಹೆಂಡತಿ :

ಇರಲಿರಲಿ ದೊರೆ, ತವ ಆಸರೆ; ನಮೊ ರಥಿಕನೆ ನಿನಗೆ
ಇಳಿದು ಹೋಗೆ ಇಬ್ಬನಿ ಮಳೆ ಅನುತಪನದ ಕೊನೆಗೆ,
ಮಂಜ ಹರಿದು ಬರ ಹೊಸರವಿ, ನಿನ್ನ ಹಗಲೆ ಎನಗೆ !

ಗಂಡ :

ಚಿಹಿ, ಚಿಹಿ ಬಿಡು ಏನಿದು ಹುಡುಗಾಟಕೆ ಒಳಿತೇನೆ ?
ಅಳುಕುವೆ ಬಲು, ಅಬಲೆಯು ವೊಲು ; ನೀ ಸಬಲೆಯು ಜಾಣೆ
ಸತಿ ಪತಿ ಬಗೆ ಸರಿಸಮವೆನೆ ಗೀತ ರಾಣಿ ನೀನೆ !

(ಒಬ್ಬರನ್ನೊಬ್ಬರು ಅತಿ ಸಮೀಪಿಸುವುದರೊಳಗಾಗಿಯೇ ಮಂದಣ ತೆರೆ ಇಳಿಯುವುದು.)

ಬಾಯೋಟೋನಾ

ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸ ಬಹುದು. ಮಿದುಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨. ಟ.ಖರ್ಚು ಬೇರೆ. ಸೂಚಿಪತ್ರ ಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ನೆಯ ಆವೃತ್ತಿ

ಅಚ್ಚಾಗಿ ಸಿದ್ಧವಾಗಿದೆ.
ಬೇಕಾಗಿರುವವರು
ಬೇಗನೆ ಬೇಡಿಕೆ ಕಳುಹಿರಿ !

ಬರೆದವರು :
ಡಾ. ಜಿ. ಎಸ್. ಹುದ್ದಾರ

ನಗರದ ಒಂದು ಇರುಳು

ಶ್ರೀ. ಶ್ರೀ. ಅ. ಸರ್ನಾಡ ಬಿ. ಎ. (ಆನರ್ಸ್), ಕಲಬುರ್ಗಿ

(ಗೋಲ್ಡ್‌ಸ್ಮಿತ್‌ನ ' A City Night piece ' ಎಂಬ ಪ್ರಬಂಧದ ಭಾವಾನುವಾದ)

★

ವರ್ತಮಾನದ ಕಡೆಗೆ ಮಾತ್ರ ಕಣ್ಣಿಡುತ್ತಿರುವವರಿಗೆ, ಇರುಳಿನ ನಿಶ್ಶಬ್ದತೆಯನ್ನು ವಿಶ್ಲೇಷಿಸಿ ನೋಡುವುದಕ್ಕೆ ಸಾಧ್ಯವೇ ಇಲ್ಲ. ಭೂತಕಾಲದ ಘಟನೆಗಳ ಅನುಭವದಿಂದಲೂ ಭವಿಷ್ಯತ್ತಿನ ಆಶೆ-ಆಕಾಂಕ್ಷೆಗಳಿಂದಲೂ ಪರಿತಪಿಸುವವನೇ ಇಂತಹ ಇರುಳಿನ ರಹಸ್ಯವನ್ನು ಕಂಡುಹಿಡಿಯಬಲ್ಲ.

★

ಈಗ ತಾನೆ ಎರಡು ಗಂಟೆಯಾಗಿದೆ. ಆರುತ್ತಿರುವ ದೀಪವು **ಇನ್ನೊಮ್ಮೆ** ಪ್ರಜ್ವಲಿಸುವ ವ್ಯರ್ಥ ಪ್ರಯತ್ನ ಮಾಡುತ್ತಿದೆ. ಗಂಟೆ **ಬಾರಿಸುವ** ಪಹರೆಯವನು ನಿದ್ದೆಯ ಮಬ್ಬಿನಲ್ಲಿ ವೇಳೆಯನ್ನೇ **ಮರೆತುಬಿಟ್ಟಿದ್ದಾನೆ.** ಶ್ರಮಜೀವಿಗಳೂ ಸುಖಿಗಳೂ ನಿಶ್ಚಿಂತತೆ**ಯಿಂದ** ಮಲಗಿ ನಿದ್ದೆಹೋಗಿದ್ದಾರೆ. ಕೇವಲ ಧ್ಯಾನ, ಮದ್ಯಾ**ಮೋದ,** ಪಾಪ, ಬಡತನ ಮತ್ತು ನೈರಾಶ್ಯ—ಇವುಗಳು ಮಾತ್ರ **ಎಚ್ಚತ್ತಿವೆ.** ಕುಡುಕನು, ತನ್ನ ಬದುಕನ್ನೇ ಹಾಳು ಮಾಡಿದ **ಸೆರೆಯನ್ನು ಮತ್ತೊಮ್ಮೆ** ಬಟ್ಟಲಲ್ಲಿ ತುಂಬಿಕೊಂಡು ತನ್ಮಯತೆ**ಯಿಂದ ಕುಡಿಯುತ್ತಿದ್ದಾನೆ.** ಕಳ್ಳನು ಬೀದಿಗಳಲ್ಲಿ ನಿರ್ಭಯನಾಗಿ **ಸಂಚರಿಸುತ್ತಿದ್ದಾನೆ.** ಆತ್ಮಹತ್ಯೆಯು ಸ್ವಕೀಯವಾದ ಪವಿತ್ರ **ದೇಹದ** ವಿರುದ್ಧ ತನ್ನ ಕ್ರೂರಹಸ್ತವನ್ನೆತ್ತುತ್ತಿದೆ.

ಕೆಲವು ಗಂಟೆಗಳ ಪೂರ್ವದಲ್ಲಿಯೇ ತನ್ನ ಎಲ್ಲ ವೈಭವದೊಂದಿಗೆ **ಮೆರೆದ ಪಟ್ಟಣವು** ಈಗ ಅದೆಷ್ಟು ನೀರವವಾಗಿದೆ! ತನಗೆ ಬೇಕಾದ **ವಸ್ತುವಿಗಾಗಿ** ಬಹಳ ಹೊತ್ತು ಹಟಮಾಡಿ, ಅದನ್ನು ಪಡೆದನಂತರ **ಸಮಾಧಾನ** ಹೊಂದಿ ನಿದ್ದೆಹೋಗುವ ಮಗುವಿನಂತೆ ಅದರ ಎಲ್ಲ **ಅಬ್ಬರವೂ ಅಡಗಿಹೋಗಿದೆ.** ನಾಲ್ಕೂ ಕಡೆಗೂ ಭೀಷಣವಾದ ಕಗ್ಗತ್ತಲೆಯು ವ್ಯಾಪಿಸಿಬಿಟ್ಟಿದೆ. ಗಡಿಯಾರದ ' ಟಿಕ್-ಟಿಕ್ ' ಶಬ್ದ, ಆಗಾಗ ದೂರದ ನಾಯಿಗಳ ಬೊಗುಳುವಿಕೆ - ಇವುಗಳನ್ನು ಳಿದು **ಎಲ್ಲವೂ** ಮೌನಮಯ. ಮನುಷ್ಯನ ಅಹಂಮನ್ಯತೆಯ ಸಂತೆಯೆಲ್ಲ ಚೆದರಿಹೋಗಿದೆ. ನಗರದ ಈ ದೃಶ್ಯವು ಮಾನವ ಜೀವನದ ನಶ್ವರತೆಯನ್ನು ಚೆನ್ನಾಗಿ ವ್ಯಕ್ತಗೊಳಿಸುತ್ತದೆ.

ಸ್ವಲ್ಪ ಹೊತ್ತು ಕಾಣುವ ಈ ನಿರ್ಜನತೆಯು, ನಿರಂತರವಾಗಿ **ಉಳಿಯುವ** ಕಾಲವು ಒಂದುದಿನ ಬರಬಹುದು. ಆದರ ಜನತೆ**ಯಂತೆ** ನಗರವೂ **ಕೂಡ** ಅದೃಶ್ಯವಾಗಿ ಆ ಸ್ಥಳದಲ್ಲಿ ಕೇವಲ **ಮರುಭೂಮಿಯೇ ಉಳಿಯಬಹುದು.**

ಅದೆಷ್ಟು ಪಟ್ಟಣಗಳು ತಮ್ಮ ಅಸ್ತಿತ್ವ-ವಿಜಯಗಳಿಗಾಗಿ, **ಸಂಪತ್ತು**-ಆಡಂಬರಗಳಿಗಾಗಿ ಹೆಮ್ಮೆಪಟ್ಟು, **ತಾವು** ಅಮರವೆಂದು ಭ್ರಮಿಸಿ ಕಾಲನ ದವಡೆಗೆ ಸಿಲುಕಿ ನಷ್ಟವಾಗಿಲ್ಲ! **ಅವುಗಳಲ್ಲಿ** ಕೆಲವನ್ನು ಇಂದಿನ ಸಂತತಿಯು ಗುರುತಿಸಲು **ಸಹ** ಆರದ ಉಳಿದ ಹಲವುಗಳ ಭಗ್ನಾವಶೇಷಗಳನ್ನು **ದಾರಿಕಾರನು** ಖಿನ್ನತೆ**ಯಿಂದ** ತುಳಿಯುತ್ತ ಸಾಗುತ್ತಾನೆ. **ಅವುಗಳನ್ನು ಕಾಣುತ್ತಲೇ** ಈ ಎಲ್ಲ ಪಾರ್ಥಿವ ವಸ್ತುಗಳ ಕ್ಷಣಿಕತೆಯು **ಅವನ ಮನಸ್ಸಿನಲ್ಲಿ** ಸ್ಪಷ್ಟವಾಗಿ ಬಿಂಬಿಸುತ್ತದೆ.

" ಇಲ್ಲಿಯೇ ಆ ನಾಗರಿಕರ ಕೋಟೆ-**ಕೊತ್ತಲಗಳಿದ್ದುವು** ; ಆದ**ರೆ ಆ** ಸ್ಥಳದಲ್ಲಿ ಈಗ ಹಾವಸೆ ಬೆಳೆದುಹೋಗಿದೆ. **ಅಲ್ಲಿ ಅವರ** ಸಭಾ ಮಂದಿರವಿದ್ದಿರಬಹುದು—ಈಗ ಕ್ರೂರ ಜಂತುಗಳ **ವಾಸಸ್ಥಾನ**ವಾಗಿದೆ. ದೇವಾಲಯ, ನಾಟಕಗೃಹ ಮುಂತಾದುವುಗಳೆಲ್ಲ ಗುರು**ತಿ**ಸಲೂ ಬಾರದ ಮಣ್ಣಿನ ರಾಶಿಯಾಗಿ ಬಿದ್ದಿವೆ. **ಅವರ** ವಿನಾಶಕ

ಶಾಂತಿಸೇವಾ ಸದನದ ಸುಂದರ ಪ್ರಕಟನೆ!

" ಮಾಯಾ ಮಂದಿರ '

ಶ್ರೀ ಭುಜೇಂದ್ರ ಮಹಿಷವಾಡಿ

ಅವರ

ಸರ್ವೋತ್ಕೃಷ್ಟ ಕವನ ಸಂಗ್ರಹ.

ಪ್ರೊ. ಮುಗಳಿ ಅವರು **ಮುನ್ನುಡಿಯಲ್ಲಿ**

ಹೀಗೆ ಬರೆಯುತ್ತಾರೆ :

' ಮಾಯಾ ಮಂದಿರ ' ದಿಂದ ಮೊದಲಾಗಿ **' ಶಾಂತಿ '** ಯಲ್ಲಿ ಕೊನೆಗೊಳ್ಳುವ ಈ ಸಂಗ್ರಹವು **ಭುಜೇಂದ್ರರ** ತಾತ್ತ್ವಿಕದೃಷ್ಟಿಗೆ ಸಾಕ್ಷಿಯಾಗಿದೆ. **ಭುಜೇಂದ್ರರ**ಕವಿತಾಶಕ್ತಿ ಅಜೇಯವಾದುದು, ಸಹಜವಾದುದು.' **ಬೆಲೆ: ೧-೮-೦**

ದೊರೆಯುವ ಸ್ಥಳ :

ಶ್ರೀ. ಮಿರ್ಜಿ ಅಣ್ಣಾರಾಯರು,

ಉಗಾರ (ಜಿಲ್ಲಾ ಬೆಳಗಾವ

ವ್ಯಾಪಾರಿಗಳಿಗೆ ತುಂಬ ಸವಲತ್ತು ಇದೆ.

ರಣವೆಂದರೆ ಮೊದಲು ಅವರನ್ನು ಮುಂದುಗಾರಿಕೆ ಮತ್ತು ಯಾಸಕ್ತಿಗಳು ಹತಬಲಗೊಳಿಸಿದುವು. ಪ್ರಭುತ್ವವು ಬಹು-ನಗಳನ್ನು ಸಮಾಜದ ಉಪಯುಕ್ತ ವ್ಯಕ್ತಿಗಳಿಗೆ ಕೊಡದೆ, ಖ್ಯಲೋಲುಪರಿಗೇ ಅರ್ಪಿಸಿತು. ಅವರ ಸಂಪತ್-ಸಮೃದ್ಧಿಯು ರಣಕಾರರನ್ನು ಆವಾಹನ ಮಾಡಿತು. ಮೊದಮೊದಲು ರು ದಾಳಿಗಾರರನ್ನು ಎದುರಿಸಿದರೂ, ಕ್ರಮೇಣ ಅವರು ಈ ಗಂಕರ ದೌರ್ಬಲ್ಯವನ್ನು ಕಂಡುಹಿಡಿದು, ಉಪಾಯದಿಂದ ಧ್ಧ, ಅವರನ್ನು ನಿಃಶೇಷವಾಗಿ ಹಾಳುಮಾಡಿರಬಹುದು." ದು ಅವನು ಮಿಡುಕುತ್ತಾನೆ.

ಸ್ವಲ್ಪ ಸಮಯಕ್ಕೆ ಮುಂಚೆಯೇ ಜನಸಂದಣಿಯಿಂದ ಕಿಕ್ಕಿರಿದ ದಿಗಳಲ್ಲಿ ಎಷ್ಟು ಕಡಮೆ ಜನ ಕಾಣುತ್ತಿದ್ದಾರೆ! ಹೀಗೆ ಕಾಣಿ ನವರು ಹಗಲಿನಲ್ಲಿಯಂತೆ ಕಪಟವೇಷವನ್ನು ಧರಿಸಿ ತಮ್ಮ ರೂಪವನ್ನು ಅಡಗಿಸಲು ಯತ್ನಿಸುವುದಿಲ್ಲ; ತಮ್ಮ ಕಾಮುಕತೆ ನ್ನು ಗುಟ್ಟಾಗಿರಿಸಲು ಹವಣಿಸುವುದಿಲ್ಲ.

ಆದರೆ ಆ ಸಿರಿವಂತರ ಬಾಗಿಲುಗಳ ಮುಂದೆ, ಬೀದಿಯನ್ನೇ ಂಚವನ್ನಾಗಿ ಮಾಡಿಕೊಂಡು ತಮ್ಮ ದುಃಖವನ್ನು ಒಂದರೆಕ್ಷಣ-ರೆತು ವಿಶ್ರಮಿಸುತ್ತಿರುವವರು ಯಾರು? ಅವರು ಅಪರಿಚಿತರು, ನಾಥರು ಮತ್ತು ಬಡಪ್ರಾಣಿಕರು! ಅವರ ದುಃಸ್ಥಿತಿಯು ಮಿಯ ಮೇರೆಯನ್ನು ಮೀರಿದೆ; ಸಹಾಯದ ಸೀಮೆಯನ್ನು ಕ್ರಮಿಸಿದೆ. ಅವರ ದೈನ್ಯವು ಅನುಕಂಪಕ್ಕಿಂತ ಹೆಚ್ಚಾಗಿ ತಿಯನ್ನು ಹುಟ್ಟಿಸುತ್ತದೆ. ಕೆಲವರಿಗೆ ಮೈಯನ್ನು ಮುಚ್ಚಿ ಳ್ಳಲು ಹರಕು ಚಿಂದೆಗೂ ಗತಿಯಿಲ್ಲ; ಕೆಲವರು ರುಜೆಯಿಂದ ರಗಿ ಬೆಂಡಾಗಿದ್ದಾರೆ. ಜಗತ್ತು ಅವರನ್ನು ನಿರಾಕರಿಸಿಬಿಟ್ಟಿದೆ. ವರ ವಿಪತ್ತುಗಳನ್ನು ಕಂಡು ಸಮಾಜವು ವಿಮುಖವಾಗಿ, ದಿಗಂ-ರತೆ ಮತ್ತು ಉಪವಾಸಗಳಿಗೆ ಅವರನ್ನು ದಾನಮಾಡಿಬಿಟ್ಟಿದೆ. ದಗದನೆ ನಡುಗುತ್ತಿರುವ ಈ ಹೆಂಗುಸರು, ಹಿಂದೆ ಒಂದು ಕಾಲ ಲ್ಲಿ ಸೌಖ್ಯವನ್ನನುಭವಿಸಿದ್ದಾರೆ; ತಮ್ಮ ಸೌಂದರ್ಯಕ್ಕಾಗಿ ಹೊಗ-ಕೆಗೆ ಪಾತ್ರರಾಗಿದ್ದಾರೆ. ವಿಲಾಸಿಗಳಾದ ದುಷ್ಟರಿಗಾಗಿ ಅವರು ಭಿಚರಿಸಲ್ಪಟ್ಟು, ಈಗ ಚಳಿಗಾಲದ ಕಾಠಿಣ್ಯವನ್ನು ಅನುಭವಿ ಬ ತಳ್ಳಲ್ಪಟ್ಟಿದ್ದಾರೆ. ಬಹುಶಃ ಅವರು ತಮ್ಮ ದ್ರೋಹಿಗಳ ಗಿಲು ಮುಂದೆ ಬಿದ್ದುಕೊಂಡು, ಯಾವ ಸಹಾಯವನ್ನೂ ಡದೆ ಕೇವಲ ಹಂಗಿಸಿ ಕಳಿಸುವ ಆ ಕಲ್ಲೆದೆಯ ಜಾರರನ್ನು ಪಿಸುತ್ತಿರಬಹುದು.

ಇಂತಹ ನಿರ್ಭಾಗ್ಯರ ದುಃಖವನ್ನು ನೋಡಿಯೂ ಅದರಿಂದ ವರನ್ನು ತ್ರಾಣಗೊಳಿಸಲು ಸ್ವಲ್ಪವೂ ಸಾಮರ್ಥ್ಯವಿಲ್ಲದ ನಾನು ಕೆ ಹುಟ್ಟಿದೆನೋ? ನಿಃಸಹಾಯರಾದ ಬಡಪಾಯಿಗಳೇ! ಗತ್ತು ನಿಮ್ಮನ್ನು ಬೈಯುವುದೇ ಹೊರತು ಎಳ್ಳಷ್ಟು ಪರಿಹಾರ ನೀಡದು. ಶ್ರೀಮಂತರ ಅತ್ಯಲ್ಪ ಕಷ್ಟವನ್ನು ಕೂಡ ವಾಕ್ ಸಾಮರ್ಥ್ಯದಿಂದ ದೊಡ್ಡದನ್ನಾಗಿ ಮಾಡಿ ನಮ್ಮ ಸಹಾನುಭೂ ಯನ್ನಪೇಕ್ಷಿಸುವಂತೆ ಎತ್ತಿಹಿಡಿಯಲಾಗುತ್ತದೆ. ಆದರೆ ಬಡವ ಮಾತ್ರ ತಮ್ಮನ್ನು ಲಕ್ಷಿಸುವವರಿಲ್ಲದೆ ಅಳುತ್ತಾರೆ; ಪ್ರತಿಯೊಂದ ವಿಧದ ಚಿಕ್ಕಪುಟ್ಟ ಪೀಡೆಯಿಂದ ಹಿಂಸಿಸಲ್ಪಡುತ್ತಾರೆ. ಉಳಿದವ ಗೆಲ್ಲ ಭದ್ರತೆಯನ್ನು ದಯಪಾಲಿಸುವ ಪ್ರತಿಯೊಂದು ಕಟ್ಟಳೆಯು ಇವರ ವೈರಿಯಾಗಿ ಪರಿಣಮಿಸುತ್ತದೆ.

ನನ್ನ ಅಂತಃಕರಣವು ಇಷ್ಟೇಕೆ ಸೂಕ್ಷ್ಮವಾಗಬೇಕಿತ್ತು ಅಥವಾ ನನ್ನ ಈ ಉದ್ವೇಗಕ್ಕೆ ತಕ್ಕಂತೆ ಐಶ್ವರ್ಯವಾದರೂ ಏ ಇರಬಾರದಾಗಿತ್ತು? ಕಷ್ಟ ನಿವಾರಣೆ ಮಾಡುವ ಶಕ್ತಿಯಿಲ್ಲ ಮೃದುಮನಸ್ಸು, ಸಹಾಯವನ್ನು ಕೋರುವ ವಸ್ತುವಿಗಿಂತಲು ಹೆಚ್ಚಾಗಿ ನೊಂದುಕೊಳ್ಳುವುದಲ್ಲದೆ ಅದರಿಂದ ಯಾವ ಪ್ರಯೋ ಜನವೂ ಆಗದು.

ರಾಬರ್ಟ್ ಓವೆನ್

(ವ್ಯಕ್ತಿ ಪರಿಚಯ)

[illegible]. ಮೋಹನರಾವ್ ಬಿ. ಎ., ಎಫ್. ಆರ್. ಇ. ಎಸ್. (ಲಂಡನ್), ಧಾರವಾಡ.

★

ಶ್ರಮಜೀವಿಯು ತನ್ನ ಶ್ರಮದ ಪೂರ್ಣ ಫಲವನ್ನು ಉಪಭೋಗಿಸುವಂತಾಗಬೇಕು; ಉತ್ಪಾದಕನ ಹಾಗೂ ಕೊಳ್ಳುವವನ ನಡುವೆ ದಳ್ಳಾಳಿಯೊಬ್ಬ ಅಡ್ಡ ಬಂದು ಇಬ್ಬರನ್ನೂ ಶೋಷಿಸುವಂತಾಗಬಾರದು— ಎಂಬ ತತ್ತ್ವಸಾಧನೆಗಾಗಿ ಜೀವನವನ್ನೆ ಮುಡುಪಾಗಿಸಿದವನೀತ.

★

'ಸಮಾಜವಾದ' ಎಂಬ ಪದವನ್ನು ಪೊತ್ತ ಮೊದಲು ಪ್ರಯೋಗಿಸಿದವನು ಫ್ರಾನ್ಸ್ ದೇಶದ ಪಿಯರಿ ಲೆರೊ (Pierre Leroux) ಎಂಬಾತನಾದರೂ, ಅದನ್ನು ತನ್ನ ಪ್ರಮುಖ ತತ್ತ್ವವನ್ನಾಗಿ ಪ್ರಚುರಪಡಿಸಿದ ಯಶಸ್ಸು ರಾಬರ್ಟ್ ಓವೆನ್‌ನಿಗೆ ಸಲ್ಲುತ್ತದೆ. ಈತನು ೧೮೪೧ ರಲ್ಲಿ ಪ್ರಕಟಿಸಿದ ತನ್ನೊಂದು ಪುಸ್ತಕಕ್ಕೆ 'ಸಮಾಜವಾದವೆಂದರೇನು ?' ಎಂಬ ಹೆಸರನ್ನು ಇಟ್ಟಿದ್ದನು.

ಆರ್ಥಿಕ ಹಾಗೂ ರಾಜಕೀಯ ತತ್ತ್ವಗಳ ಇತಿಹಾಸದ ಮೇಲೆ ಕಾರ್ಲ್ ಮಾರ್ಕ್ಸ್‌ನು ತನ್ನ ಪ್ರಬಲವಾದ ವರ್ಚಸ್ಸನ್ನು ಬೀರಿದ ಬಳಿಕ ಜೀವಿಸುತ್ತಿರುವ ನಮಗೆ 'ಸಮಾಜವಾದ' ಎಂದೊಡನೆ ಆತನ ದ್ವಂದ್ವಮಾನ ಭೌತಿಕವಾದ, ವರ್ಗಸಮರ, ಉತ್ಪಾದನೆಯ ಸಾಧನಗಳ ರಾಷ್ಟ್ರೀಕರಣ ಇತ್ಯಾದಿ ತತ್ತ್ವಗಳು ದೃಷ್ಟಿಗೋಚರವಾಗುತ್ತವೆ. ಆದರೆ ಓವೆನ್‌ನಿಗೆ ಇವುಗಳಲ್ಲಿ ಮೊದಲನೆಯದರ ಅರಿವೇ ಇರಲಿಲ್ಲವೆನ್ನಬಹುದು. ವರ್ಗಸಮರಕ್ಕೆ ಆತನ ಒಪ್ಪಿಗೆಯಿದ್ದಿಲ್ಲ. ಭಂಡವಳಗಾರರಿಂದ ಭಂಡವಳವನ್ನು ಕಸಿದುಕೊಳ್ಳಬೇಕೆಂದು ಆತನು ಹೇಳಲಿಲ್ಲ. ಇದರ ಬದಲು, ಶ್ರಮಜೀವಿಗಳೇ ಹೊಸ ಭಂಡವಳವನ್ನು ಸೃಷ್ಟಿಸಬೇಕೆಂದು ಬೋಧಿಸಿದನು. ರಾಷ್ಟ್ರೀಕರಣದಿಂದ ವ್ಯಕ್ತಿಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದೆಂದು ಮನಗಂಡು, ಸ್ವಾಯತ್ತಾಧಿಕಾರವುಳ್ಳ ಅನೇಕ ಸಣ್ಣ ಸಣ್ಣ ಸಂಘಗಳು ಸ್ವಯಂಪ್ರೇರಣೆಯಿಂದ ಒಂದುಗೂಡಬೇಕಲ್ಲದೆ, ಇವುಗಳ ಏಕತೆ ಮೇಲಿನಿಂದ ಹೇರಿದುದಾಗಬಾರದೆಂದು ಪ್ರತಿಪಾದಿಸಿದನು. ಓವೆನ್‌ನು ವರ್ಗಸಮರದ ಪ್ರಚೋದಕನಾಗಿರಲಿಲ್ಲ, ಸ್ವತಂತ್ರ ಶ್ರಮದ ಪ್ರಚಾರಕನಾಗಿದ್ದನು; ರಾಷ್ಟ್ರೀಕರಣದ ಪ್ರತಿಪಾದಕನಾಗಿರಲಿಲ್ಲ, ಸಹಕಾರದ ಪ್ರವಾದಿಯಾಗಿದ್ದನು.

ವೇಲ್ಸ್ ದೇಶದ ಕಮ್ಮಾರ ವರ್ಗದಲ್ಲಿ ಜನಿಸಿದ ಓವೆನ್‌ನು ಮೊದಲು ಒಂದು ಅರಳೆಯ ಗಿರಣಿಯಲ್ಲಿ ಕೆಲಸಕ್ಕೆ ಸೇರಿದನು. ಆದರೆ ಉಚ್ಚ ಧ್ಯೇಯವುಳ್ಳ ಈ ಯುವಕನಿಗೆ, ಇತರರ ಅಡಿಯಾಳಾಗುವ ಬಾಳು ಒಗ್ಗಲಿಲ್ಲ. ತನ್ನ ತಂದೆಯಿಂದ ನೂ[illegible] ಪೌಂಡುಗಳನ್ನು ಪಡೆದು, ತನ್ನದೇ ಆದ ಗಿರಣಿಯೊಂದನ್ನು ಪ್ರಾರಂಭಿಸಿದನು. ಆ ಬಳಿಕ ಆತನ ಏಳಿಗೆ ಶೀಘ್ರವಾಗಿ ಸಾಗಿತು. ಸ್ವಸಾಮರ್ಥ್ಯದಿಂದ ಅತ್ಯಲ್ಪ ಅವಧಿಯಲ್ಲೇ ನ್ಯೂ ಲೆನಾರ್ಕ್ ಎಂಬಲ್ಲಿಯ ಗಿರಣಿಯ ಒಡೆಯನೂ ಆದನು. ಈ ಗಿರಣಿಯೇ ಅವನ ವಿವಿಧ ತತ್ತ್ವಗಳ ಪ್ರಯೋಗಶಾಲೆಯಾಯಿತಲ್ಲದೆ, ಆ ತತ್ತ್ವಗಳ ವಿಕಾಸಕ್ಕೂ ಕಾರಣವಾಯಿತು.

ಭಂಡವಳಗಾರರ ಲಾಭಬಡುಕತನದಿಂದ ಶ್ರಮಜೀವಿಗಳಿಗೊದಗಿದ ದಾರುಣ ಅವಸ್ಥೆಯನ್ನು ಕಂಡು ಕನಿಕರಪಟ್ಟ ಓವೆನ್‌ನು, ತನ್ನ ಗಿರಣಿಯ ಕಾರ್ಮಿಕರ ಪರಿಸ್ಥಿತಿಯನ್ನು ಸುಧಾರಿಸಲು ಹಲವು ಪ್ರಯೋಗಗಳನ್ನು ನಡೆಸಿದನು.

ಭಾರತದಂತಹ— ಔದ್ಯೋಗಿಕ ಕ್ಷೇತ್ರದಲ್ಲಿ ಹಿಂದುಳಿದ— ರಾಷ್ಟ್ರಗಳಲ್ಲಿ, ಇಂದು ಕಾರ್ಮಿಕರು ತಮ್ಮ ಯಾವ ಹಕ್ಕುಗಳಿಗಾಗಿ ಸೌಕರ್ಯಗಳಿಗಾಗಿ ಹೋರಾಡಬೇಕಾಗುತ್ತದೋ, ಅವುಗಳನ್ನು ರಾಬರ್ಟ್ ಓವೆನ್‌ನು ತನ್ನ ಗಿರಣಿಯ ಕಾರ್ಮಿಕರಿಗೆ ಒಂದೂವರೆ ಶತಮಾನದ ಹಿಂದೆಯೇ ಒದಗಿಸಿಕೊಟ್ಟಿದ್ದನು.

ಕಾರ್ಮಿಕರಿಗಾಗಿ ಯೋಗ್ಯ ವಸತಿ-ಭೋಜನಾಲಯಗಳನ್ನು ಏರ್ಪಡಿಸಿದನಲ್ಲದೆ, ಅವರ ಸಾಮಾಜಿಕ ಹಾಗೂ ನೈತಿಕ ಉನ್ನತಿಯನ್ನು ಸಾಧಿಸಲೋಸುಗ ಅಧಿಕಾರಿಗಳನ್ನು (Welfare Officers) ನಿಯಮಿಸಿದನು.

ದುಡಿಮೆಯ ಸಮಯವನ್ನು ೧೬ ಗಂಟೆಗಳಿಂದ ೧೦ ಗಂಟೆಗಳಿಗೆ ಇಳಿಸಿದನು.

ಕಾರ್ಮಿಕರು ಕನಿಷ್ಠ ೧೦ ವರ್ಷ ವಯಸ್ಸಿನವರಾದರೂ ಇರಬೇಕೆಂದು ನಿರ್ಧರಿಸಿದನಲ್ಲದೆ, ಅವರ ಮಕ್ಕಳಿಗಾಗಿ ಧರ್ಮಾರ್ಥ ವಿದ್ಯಾಲಯಗಳನ್ನು ಸ್ಥಾಪಿಸಿದನು.

ಕಾರ್ಮಿಕರ ಮೇಲೆ ಹೇರಲ್ಪಡುತ್ತಿದ್ದ ಎಲ್ಲಾ ತರದ ದಂಡಗಳನ್ನೂ ರದ್ದುಗೊಳಿಸಿದನು.

ಇಂತಹ ಸುಧಾರಣೆಗಳಿಂದ ಸ್ಫೂರ್ತಿ ಪಡೆದು ಇತರ ಗಿರಣಿಗಳ ಮಾಲಿಕರೂ ತಮ್ಮ ಕಾರ್ಮಿಕರ ಜೀವನವನ್ನು ಸುಗಮಗೊಳಿಸಬಹುದೆಂದು ಓವೆನ್‌ನು ಬಯಸಿದ್ದನು. ಜನತೆಯ ಮೇಲಂತೂ ಆತನ ಉದಾತ್ತ ಕಾರ್ಯಗಳ ಪ್ರಭಾವ ಬೀಳದಿರಲಿಲ್ಲ. ನ್ಯೂ ಲೆನಾರ್ಕ್ ಗಿರಣಿಯ ಪ್ರಶಸ್ತಿ ದೇಶದಲ್ಲಷ್ಟೆ ಅಲ್ಲ, ಯುರೋಪಿನ ಮೂಲೆ ಮೂಲೆಗಳಿಗೂ ಹಬ್ಬಿತು. ಲೆನಾರ್ಕ್ ಯಾತ್ರಾಸ್ಥಳವಾಯಿತು. ಹೊಲೆಂಡ್, ಪ್ರಷ್ಯಾ ಮುಂತಾದ ರಾಷ್ಟ್ರಗಳ ರಾಜರು ಓವೆನ್‌ನ ಪ್ರಯೋಗಗಳನ್ನು ನೋಡುವುದಕ್ಕೂ ಆತನಿಂದ ಔದ್ಯೋಗಿಕ ಉನ್ನತಿ, ವಿದ್ಯಾಭ್ಯಾಸಕ್ರಮ ಮುಂತಾದ ವಿಷಯಗಳ ಮೇಲೆ ಸಲಹೆ ಪಡೆಯುವುದಕ್ಕೂ ಬಂದುಹೋಗುತ್ತಿದ್ದರು.

ಆದರೆ ಕಲ್ಲೆದೆಯ ಮಾಲಿಕರು ಓವೆನ್‌ನ ಮೇಲೆ ಸಿಡಿಬಿದ್ದರು. ತನ್ನ ಕ್ರಾಂತಿಕಾರಕ ಬದಲಾವಣೆಗಳಿಂದ ಇತರರಿಗೂ ನಷ್ಟ ತಗಲಿಸುತ್ತಿರುವನೆಂದು ದೂರಿದರು. ಅವರೂ ತನ್ನ ರೀತಿಗಳನ್ನು ಒಪ್ಪಿಕೊಳ್ಳುವಂತೆ ಓವೆನ್‌ನು ಬಹಳ ಪ್ರಯತ್ನಪಟ್ಟನು. ಆದರೆ, ಸುಸಜ್ಜಿತವಾದ, ಆಗಾಗ ಸುಧಾರಣೆ ಮಾಡಲ್ಪಟ್ಟ ಯಂತ್ರಗಳಿಂದ ಹೆಚ್ಚಿನ ಉಪಯೋಗವನ್ನು ಪಡೆಯಲು ಆಗುವಂತೆ, ಯಂತ್ರಗಳಿಗಿಂತ ಸಾವಿರಪಾಲು ಮೇಲಾಗಿರುವ ಕಾರ್ಮಿಕನ ಜೀವನಮಟ್ಟವನ್ನು ಏರಿಸದಿದ್ದಲ್ಲಿ, ಅವನಿಗೆ ಯೋಗ್ಯ ಸೌಕರ್ಯಗಳನ್ನು ಒದಗಿಸದಿದ್ದಲ್ಲಿ ಆತನು ಸರಿಯಾಗಿ ಶ್ರಮವಹಿಸಲಾರನೆಂಬ ವಿಷಯವನ್ನು ಇದರ ಮಾಲಿಕರಿಗೆ ಮನದಟ್ಟು ಮಾಡಲು ಅಸಮರ್ಥನಾದನು.

ಬಳಿಕ ಓವೆನ್‌ನು ಸರಕಾರದತ್ತ ಕಣ್ಣು ಹೊರಳಿಸಿದನು. ಶ್ರಮಜೀವಿಗಳ ಜೀವನವನ್ನು ಸುಗಮಗೊಳಿಸುವ ಆವಶ್ಯಕತೆಯನ್ನು ಸರಕಾರವು ಮನಗಾಣುವಂತೆ ದೇಶದಾದ್ಯಂತ ಚಳವಳಿಯನ್ನು ಹೂಡಿದನು. ಈ ಚಳವಳಿಯ ಫಲವಾಗಿಯೇ ೧೮೧೯ ರಲ್ಲಿ ಮೊದಲ ಫ್ಯಾಕ್ಟರಿ ಆಕ್ಟ್ ಜಾರಿಗೆ ಬಂದಿತೆನ್ನಬಹುದು. ಕಾರ್ಮಿಕರ ಕನಿಷ್ಟ ವಯಸ್ಸನ್ನು ೯ ವರ್ಷ ಎಂದು ನಿರ್ಧರಿಸುವುದೇ ಈ ಕಾಯಿದೆಯ ಉದ್ದೇಶವಾಗಿತ್ತು. ಆದರೆ ಸರಕಾರದಿಂದ, ಓವೆನ್‌ನು ಬಯಸಿದ ಕಾಲಂಶ ಸಹಕಾರವಾದರೂ ದೊರೆಯಲಿಲ್ಲ. ಜನತೆಯ ಚಳವಳಿಗೆ ಹೆದರಿ ಸರಕಾರವು ಬಗ್ಗುತ್ತಿತ್ತಲ್ಲದೆ, ಬಡವನ ಜೀವನವನ್ನು ಸುಧಾರಿಸುವ ಇಚ್ಛೆ ಅದಕ್ಕೆ ಇದ್ದಂತೆ ತೋರಲಿಲ್ಲ.

ಹತಾಶನಾದ ಓವೆನ್‌ನಿಗೆ ಮಾಲಿಕರಾಗಲಿ ಸರಕಾರವಾಗಲಿ ಸಾಮಾಜಿಕ ಪ್ರಗತಿಯ ಶಕ್ತಿಗಳಲ್ಲವೆಂಬುದು ಖಚಿತವಾಯಿತು. ಅದೇ ಸಮಯದಲ್ಲಿ (೧೮೧೫) ದೇಶದಲ್ಲುಂಟಾದ ದಾರುಣವಾದ ಮುಗ್ಗಟ್ಟಿನಿಂದ ಆತನ ಮನಸ್ಸು ಕಲಕಿತು. ಪ್ರಸ್ತುತ ಆರ್ಥಿಕ ವ್ಯವಸ್ಥೆಯು ದೋಷಭರಿತವಾಗಿದೆಯೆಂಬುದು ಸಿದ್ಧವಾಯಿತು. ನಿವಾರಣೋಪಾಯಗಳನ್ನು ಹುಡುಕತೊಡಗಿದನು. ಇದರ ಫಲವಾಗಿ ಓವೆನ್‌ನ ಮುಖ್ಯ ತತ್ತ್ವಗಳ ಆವಿರ್ಭಾವವಾಯಿತು—

ಮಾನವನ ಸ್ವಭಾವವು ಆತನ ಸುತ್ತುಮುತ್ತಲಿನ ವಾತಾವರಣವನ್ನು ಅವಲಂಬಿಸಿದೆ. ಇಂದು ಆತನು ಸ್ವಾರ್ಥಿಯೂ ಸಂಕುಚಿತ ಮನೋವೃತ್ತಿಯವನೂ ಇರಲು ಆತನ ವಾತಾವರಣವೇ ಕಾರಣ. ಈ ವಾತಾವರಣವನ್ನು ಬದಲಿಸಿದರೆ ಆತನೂ ಬದಲಾಗುವುದರಲ್ಲಿ ಸಂದೇಹವಿಲ್ಲ. ಇಷ್ಟೇ ಅಲ್ಲ, ಅವನ ಸ್ವಭಾವವನ್ನು ಸುಧಾರಿಸಲು ಬೇರೆ ದಾರಿಯೇ ಇಲ್ಲ.

ಆದರೆ ಪ್ರಸ್ತುತ ವಾತಾವರಣವನ್ನು ಬದಲಿಸುವ ಮೊದಲು, ಅದರ ಮುಖ್ಯ ಗುಣಗಳಾವುವೆಂಬುದನ್ನು ತಿಳಿಯಬೇಕಾಗಿದೆ. ಲಾಭವು ಇಂದಿನ ಆರ್ಥಿಕ ಹಾಗೂ ಸಾಮಾಜಿಕ ಪದ್ಧತಿಗಳ ಜೀವಾಳವಾಗಿದೆ. ಯಾವತ್ತೂ ಮನುಷ್ಯನು ತನ್ನ ಸ್ವಂತದ ಲಾಭದ ದೃಷ್ಟಿಯಿಂದಲೇ ಕಾರ್ಯಪ್ರವೃತ್ತನಾಗುತ್ತಾನೆ. ವಿಶೇಷತಃ ಇಂದಿನ ಆರ್ಥಿಕವ್ಯವಸ್ಥೆಯಲ್ಲಿ ಇದು ಸ್ಪಷ್ಟವಾಗಿ ತೋರುತ್ತಿದೆ. ಮಾಲಿಕರು ಹೆಚ್ಚು ಹೆಚ್ಚು ಲಾಭಪಡೆಯಲು

ಕುಟುಂಬದಲ್ಲಿ ಎಷ್ಟೋಸಾರೆ ಡಾಕ್ಟರರು ಕೈ ಹತ್ತರ ಇರಬೇಕು ಎಂದೆನಿಸುವದು.

ಮನೆತನದಲ್ಲಿಯು ಎಷ್ಟೋ ಜೇನ ಬೇನೆಗಳಿಂದ ಬಳಲುವ ರೋಗಿಗಳಿಗೆ ತಟಕ್ಕನೆ ಔಷಧ ಕೊಡುವುದು ಅವಶ್ಯ. ಹೊಟ್ಟೆ ನೋವು, ಹಲ್ಲು ನೋವು ಬರುವ ಕೂಡಲೇ ಜೀವ ಉಳಿದೀತೋ ಇಲ್ಲೋ ಎಂದು ಅನಿಸುವುದು. ಕಾಲರಾ, ಚಿಕ್ಕ ಮಕ್ಕಳ ಹೊಟ್ಟೆ ಬೇನೆಯು ಮೊದಲಾದವು ಇವುಗಳಿಗೆ ಕೂಡಲೇ ಉಪಚಾರ ಸಿಗದಿದ್ದರೆ ಜೀವಕ್ಕೆ ಧಕ್ಕೆ ಬರಬಹುದು. ಇಂಥಾ ಸಮಯದಲ್ಲಿ ಡಾಕ್ಟರರಾಗಲಿ ಒಪ್ಪಿಗೆಯ ಔಷಧವಾಗಲಿ ಹತ್ತರ ಇರಬೇಕಾಗುವುದು. ಜವೇರಿಯನ ಜೀವನ ಮಿಕ್ಸ್ಚರ ಇದು ಇಂಥಾ ವಿಕಾರಗಳ ಮೇಲೆ ಪ್ರಭಾವಶಾಲಿಯಾದ ಔಷಧವಿರುವದು. ಇದು ಬೇಗನೆ ರೋಗವನ್ನು ಕಡಿಮಾಡಿ ಬೇನೆಯನ್ನು ಹತ್ತಿಕ್ಕುವದು. ಕಳೆದ ಮೂವತ್ತೈದು ವರ್ಷ ಲಕ್ಷಗಟ್ಟಲೆ ಮನೆತನಗಳಲ್ಲಿ ದಿನಾಲೂ ಇದನ್ನು ಜನರು ಉಪಯೋಗಿಸುತ್ತಿರುವರು. ವಾಂತಿ, ಅಜೀರ್ಣ, ನೆಗಡಿ, ಬಾವು, ರಕ್ತ ಹರಿಯುವದು, ತೀವ್ರ ಸುರಿಯುವದು ಮುಂತಾದ ಅನೇಕ ವಿಕಾರಗಳ ಮೇಲೆ ಇದು ಮಹತ್ವವಾದ ಔಷಧ.-ಎಲ್ಲಾ ಕಡೆಯಲ್ಲಿ ಸಿಗುವದು. ಹೆಸರಿನಲ್ಲಿಂತ ಕಡಿಮೆ ಕೇಳುವುದಿಲ್ಲ. ಅಧಿಕೃತ ವ್ಯಾಪಾರಿಗಳ ಕಡೆಯಿಂದ ಕೊಳ್ಳಬೇಕು. ಎಮ್. ಎಚ್. ಜವೇರಿಯನ್ ಮತ್ತು ಕಂ. ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ನಂ. ೨

ಹೆಣಗುತ್ತಾರೆ. ಕಾರ್ಮಿಕರು ಆದಷ್ಟು ಹೆಚ್ಚು ಮಜೂರಿಯನ್ನು ಗಳಿಸಲು ಒದ್ದಾಡುತ್ತಾರೆ. ಇದರಿಂದಾಗಿ ವರ್ಗವರ್ಗಗಳ ನಡುವೆ ಮಾತ್ರವಲ್ಲ, ಒಂದೇ ವರ್ಗದ ಹಲವು ವ್ಯಕ್ತಿಗಳಲ್ಲೂ ಹೋರಾಟಗಳು ಘರ್ಷಣೆಗಳು ಅವಿರತವಾಗಿ ನಡೆಯುತ್ತವೆ.

ಈ ಹೋರಾಟದ ದವಡೆಯಲ್ಲಿ ಸಿಕ್ಕ ದುರ್ಬಲವಾದ ಉದ್ಯಮಗಳು ನಾಶವಾಗುತ್ತವೆ. ಇಲ್ಲವೇ ಪ್ರಬಲ ಉದ್ಯಮಗಳ ಒತ್ತಡದಿಂದ ಪಾರಾಗಲು, ಹಲವು ಸಣ್ಣ ಸಣ್ಣ ಉದ್ಯಮಗಳು ಒಂದುಗೂಡುತ್ತವೆ. ಕೆಲವು ಪ್ರಸಂಗಗಳಲ್ಲಿ ಪ್ರಬಲ ಉದ್ಯಮಗಳು ದುರ್ಬಲವಾದುವುಗಳನ್ನು ನುಂಗುತ್ತವೆ. ಇಂತಾಗುವುದರಿಂದ ಮೊದಮೊದಲು ಔದ್ಯೋಗಿಕ ಉನ್ನತಿಯಾದಂತೆ ತೋರಿದರೂ, ಒಡೆತನವು ಸಂಕುಚಿತವಾಗುತ್ತ ಬರುವುದರಿಂದ, ಲಾಭಬಡುಕತನವು ಮೇರೆಮೀರುತ್ತದೆ. ಒಂದೆಡೆಯಲ್ಲಿ ಉದ್ಯಮಗಳ ಗುತ್ತಿಗೆಗಳನ್ನು ಕಟ್ಟಿಕೊಂಡು ಮಾಲಿಕರು ಹೆಚ್ಚು ಹೆಚ್ಚು ಲಾಭಪಡೆಯುತ್ತಿದ್ದರೆ, ಇನ್ನೊಂದೆಡೆಯಲ್ಲಿ ಶ್ರಮಜೀವಿಗಳ ಪರಿಸ್ಥಿತಿಯು ದಾರುಣವಾಗುತ್ತ ಸಾಗುತ್ತದೆ.

ಇದೇಕೆ? ಹೀಗೆ? ಓವೆನ್‌ನ ಉತ್ತರ ಹೀಗಿದೆ: ವಸ್ತುಗಳ ಬೆಲೆಯು ಅವುಗಳ ಉತ್ಪಾದನೆಯ ವೆಚ್ಚದಿಂದ ನಿರ್ಣಯಿಸಲ್ಪಡುತ್ತದೆ. ಉತ್ಪಾದನೆಯ ವೆಚ್ಚವೆಂದರೆ ಉತ್ಪಾದನೆಗಾಗಿ ಅವಶ್ಯವಿರುವ ಶ್ರಮದ ಬೆಲೆ. ಇದರಿಂದ ವಸ್ತುಗಳ ಬೆಲೆಯು ಸಂಪೂರ್ಣ ಶ್ರಮಜೀವಿಗಳಿಗೇ ಸಲ್ಲತಕ್ಕದ್ದೆಂದು ಸ್ಪಷ್ಟವಾಗುತ್ತದೆ ಇಲ್ಲಿ ಯಾವ ತರದ ಲಾಭಕ್ಕೂ ಎಡೆಯಿಲ್ಲ. ಹಾಗಾದರೆ ಲಾಭಗಳಿ ತ್ತಿರುವ ಮಾಲಕರು ಶ್ರಮಜೀವಿಗಳಿಗೆ ಸಲ್ಲತಕ್ಕ ಮಜೂರಿಯ ಒಂದಂಶವನ್ನು ಕಸಿದುಕೊಳ್ಳುತ್ತಿರುವರೆಂಬುದು ಸಿದ್ಧವಾಯಿ ಉದ್ಯಮಗಳ ಗುತ್ತಿಗೆಗಳು ಪ್ರಬಲವಾದಂತೆ, ಈ ಶೋ ಹೆಚ್ಚುತ್ತ ಹೋಗುತ್ತದೆ. ಏಕೆಂದರೆ ಸ್ವತಂತ್ರ ಉದ್ಯಮಗಳ ಪ್ರಾರಂಭಿಸಲು ಅಸಮರ್ಥರಾದ ಬಡ ಶ್ರಮಜೀವಿಗಳು, ಗುತ್ತಿಗೆಗಳ ಅಡಿಯಾಳುಗಳಾಗಿಯೇ ದುಡಿಯಬೇಕಾಗುತ್ತ ಹೊಟ್ಟೆಪಾಡಿಗಾಗಿ ಶೋಷಣೆಯನ್ನು ಸಹಿಸಬೇಕಾಗುತ್ತದೆ.

ಆದರೆ ಬಹಳ ಕಾಲ ಇದೇ ಪರಿಸ್ಥಿತಿಯು ಮುಂದುವರಿ ಲಾರದು. ಶ್ರಮದ ಪೂರ್ಣ ಪ್ರತಿಫಲ ದೊರೆಯದ ಶ್ರಮಜೀವಿ ಕೊಳ್ಳುವ ಶಕ್ತಿ ಕುಂದುತ್ತದೆ. ತಾನು ಉತ್ಪಾದಿಸಿದ ವಸ್ತುಗಳ ವಿನಿಯೋಗಿಸಲು ಆತನು ಅಶಕ್ತನಾಗುತ್ತಾನೆ. ಹೆಚ್ಚಿನ ಲಾ ಕ್ಕಾಗಿ ಹಾತೊರೆಯುತ್ತಿರುವ ಮಾಲಕರು ಬೆಲೆಗಳನ್ನು ಏರಿಸ ಹೋಗುವುದರಿಂದ, ಒಂದೆಡೆಯಲ್ಲಿ ವಿನಿಯೋಗದ ಪ್ರಮಾ ಕಡಿಮೆಯಾಗುತ್ತ ಹೋಗುತ್ತಿರಲು, ಇನ್ನೊಂದೆಡೆಯಲ್ಲಿ ಉತ್ಪಾದನೆಯಾಗುತ್ತದೆ. ಇಲ್ಲಿಂದ ನಿರುದ್ಯೋಗಕ್ಕೆ ಎ ಹೆಚ್ಚಿ. ದೇಶದಲ್ಲೆಲ್ಲ ನಿರುದ್ಯೋಗದ ಪೆಡಂಭೂತದ ತಾಂಡ ಮೊದಲಾಗುತ್ತದೆ. ಉದ್ಯಮಗಳು ತಮ್ಮ ಗೋರಿಯನ್ನು ತ ಕಟ್ಟಿಕೊಂಡಂತಾಗುವುದು ೧೮೧೫ ರಲ್ಲಿ ಉಂಟಾದ ಮುಗ್ಗಟ್ಟ ಇದೇ ಕಾರಣವಾಗಿತ್ತು.



ಔದ್ಯೋಗಿಕ ಪದ್ಧತಿಯು ಲಾಭವನ್ನಾಧರಿಸಿಕೊಂಡಿರುವತನಕ ತ್ರಗದ ಮುಗ್ಗಟ್ಟುಗಳ ನಿವಾರಣೆಯು ಅಸಾಧ್ಯ. ಲಾಭವನ್ನು ಪಡಿಸಬೇಕಾದರೆ ಲಾಭದ ಮುಖ್ಯ ಉಪಕರಣವಾದ ನಾಣ್ಯ-ನ್ನು ರದ್ದುಗೊಳಿಸತಕ್ಕುದು, ಏಕೆಂದರೆ ವಸ್ತುಗಳನ್ನು ಅವುಗಳ ಮೌಲ್ಯಕ್ಕಿಂತ ಹೆಚ್ಚಿನ ಬೆಲೆಗೆ ಮಾರಲು ಈ ನಾಣ್ಯದಿಂದಲೇ ಸಾಧ್ಯವಾಗುತ್ತದೆ.

ಹಾಗಾದರೆ ವ್ಯವಹಾರವನ್ನು ಹೇಗೆ ನಡೆಸಬೇಕು? ಇವಕ್ಕೆ ವೆನ್‌ನು ಅದ್ವಿತೀಯವೂ ವಿಲಕ್ಷಣವೂ ಆದ ಪದ್ಧತಿಯೊಂದನ್ನು ತಿಪಾದಿಸಿದನು. ನಾಣ್ಯಗಳ ಬದಲು "ಶ್ರಮದ ನೋಟು" abour Notes) ಗಳನ್ನು ಬಳಕೆಯಲ್ಲಿ ತರಬೇಕು. ವಸ್ತುಗಳ ಮೌಲ್ಯವು ಶ್ರಮದಿಂದಲೇ ಉದ್ಭವಿಸುವುದರಿಂದ ಈ ಪದ್ಧತಿಯು ಮೌಲ್ಯವನ್ನು ಅಳೆಯಲು ಯೋಗ್ಯ ಸಾಧನವಾಗಬಲ್ಲುದು. ಮಜೀವಿಗೆ ಆತನು ಉತ್ಪಾದಿಸಿದ ವಸ್ತುಗಳಿಗೆ ಪ್ರತಿಯಾಗಿ ತನು ಪಟ್ಟ ಶ್ರಮದ ಕಾಲಪ್ರಮಾಣದಲ್ಲಿ ಈ ನೋಟುಗಳು ಡಲ್ಪಡಬೇಕು. ಇದೇ ರೀತಿಯಲ್ಲಿ ವಸ್ತುಗಳನ್ನು ಕೊಳ್ಳುವವನು ವುಗಳ ಉತ್ಪಾದನೆಗೆ ತಗಲಿದ ಶ್ರಮದ ಕಾಲಪ್ರಮಾಣದಲ್ಲಿ ಂತಹ ನೋಟುಗಳನ್ನು ಕೊಡತಕ್ಕುದು. ಈ ಪದ್ಧತಿಯಿಂದ ಾಭಕ್ಕೆ ಎಡೆಯೇ ಇಲ್ಲದಾಗುತ್ತದೆ.

ಈ ಹೊಸ ಆವಿಷ್ಕಾರವು "ಮೆಕ್ಸಿಕೊ, ಪೇರು ಇತ್ಯಾದಿ ಸ್ಥಳಗಳಲ್ಲಿರುವ ಎಲ್ಲ ಗಣಿಗಳಿಗಿಂತ ಅಮೂಲ್ಯವಾದದು" ಎಂದು ವೆನ್ನನು ಹೇಳಿಕೊಂಡನಾದರೂ, ಇದು ದೋಷರಹಿತವಲ್ಲ, ್ರತಿಯೊಬ್ಬನಿಗೂ ಆತನ ಅವಶ್ಯಕತೆಗೆ ತಕ್ಕಂತೆ ಕೊಡಲ್ಪಡ-ಬೇಕೆಂಬ ಓವೆನ್‌ನ ತತ್ತ್ವಕ್ಕೆ ಈ ಪದ್ಧತಿಯಿಂದ ಧಕ್ಕೆ ತಗಲುತ್ತದೆ. ್ರಮದ ನೋಟುಗಳಿಂದ ಪ್ರತಿಯೊಬ್ಬನಿಗೂ ಆತನ ಶ್ರಮಕ್ಕೆ ತಕ್ಕ ್ರತಿಫಲ ಕೊಟ್ಟಂತಾಗುತ್ತದೆ. ಕಡಿಮೆ ಶ್ರಮ ವಹಿಸಿದವನಿಗೆ, ತನ ಅವಶ್ಯಕತೆ ಹೆಚ್ಚಿದ್ದರೂ, ಕಡಿಮೆ ಸಿಗುತ್ತದೆ. ಇಷ್ಟೇ ಅಲ್ಲ, ತ್ವಿಕ ದೃಷ್ಟಿಯಿಂದ ಈ ಪದ್ಧತಿಯು ಎಷ್ಟೇ ಉದಾತ್ತವಾದರೂ, ರ್ಯತಃ ಸಫಲವಾಗುವುದು ಸಂದೇಹಾಸ್ಪದ. ಓವೆನ್‌ನು ಸ್ವತಃ ೊಂಡ ಪ್ರಯೋಗಗಳಿಂದ ಇದರ ಅಸಫಲತೆ ವ್ಯಕ್ತವಾಗಿದೆ.

ಓವೆನ್‌ನು ತನ್ನ ಹೊಸ ತತ್ತ್ವದ ಪ್ರಯೋಗಕ್ಕಾಗಿ ೧೮೨೫ರಲ್ಲಿ ಡಿಯಾನಾದಲ್ಲೂ, ಸ್ಕಾಟ್‌ಲೆಂಡಿನ ಆರ್ಬಿಸ್ಟನ್ ಎಂಬಲ್ಲೂ ಡು ವಸತಿಗಳನ್ನು ತೊಡಗಿಸಿದನು. ಆದರೆ ಇವೆರಡೂ ಬಹಳ ಬಾಳಲಿಲ್ಲ. ಆ ಮೇಲೆ ೧೮೩೨ ರಲ್ಲಿ ಲಂಡನಿನಲ್ಲಿ "ರಾಷ್ಟ್ರೀಯ ್ಯಾಯಪರ ಶ್ರಮವಿನಿಮಯ ಸಂಘ" (National Equitable bour Exchange) ವನ್ನು ಸ್ಥಾಪಿಸಿದನು.

ಇದೊಂದು ಸಹಕಾರಿ ಸಂಘ. ಪ್ರತಿಯೊಬ್ಬ ಸದಸ್ಯನೂ ತಾನು ತ್ಪಾದಿಸಿದ ವಸ್ತುಗಳನ್ನು ಸಂಘಕ್ಕೊಪ್ಪಿಸಿ, ಪ್ರತಿಫಲವಾಗಿ ತನ್ನ ಮದ ಕಾಲಪ್ರಮಾಣದಲ್ಲಿ ಶ್ರಮದ ನೋಟುಗಳನ್ನು ಪಡೆಯು-ತ್ತಿದ್ದನು. ಈ ಕಾಲವನ್ನು ಆತನೇ ತಿಳಿಸಬೇಕಾಗಿತ್ತು. ಇದೇ ಕಾಲ-ಪ್ರಮಾಣದಲ್ಲಿ ವಸ್ತುಗಳ ಮೇಲೆ ಅಂಕೆಗಳು ಹಾಕಲ್ಪಡುತ್ತಿದ್ದುವು. ವಸ್ತುಗಳನ್ನು ಕೊಳ್ಳಲಿಚ್ಛಿಸುವವರು, ಅವುಗಳ ಮೇಲಿನ ಅಂಕೆಗಳಿ-ಗನುಗುಣವಾಗಿ ಶ್ರಮದನೋಟುಗಳನ್ನು ಕೊಡಬೇಕಾಗಿತ್ತು. ಇದ-ರಿಂದ ಪ್ರತಿಯೊಬ್ಬನಿಗೂ ತಾನು ಉತ್ಪಾದಿಸಿದ ವಸ್ತುಗಳ ಸಮ ಪ್ರಮಾಣದಲ್ಲಿ ಪ್ರತಿಫಲದೊರೆಯುತ್ತಿತ್ತು. ಉತ್ಪಾದಕರೂ ಕೊಳ್ಳು-ವವರೂ ನೇರವಾದ ವ್ಯವಹಾರ ನಡೆಸುವುದರಿಂದ, ಮಧ್ಯವರ್ತಿಗಳ ಆವಶ್ಯಕತೆಯಿಲ್ಲದಾಗಿ ಲಾಭವು ರದ್ದಾಯಿತು.

ಈ ಪ್ರಯೋಗವು ಸ್ವಲ್ಪ ಸಮಯ ಯಶಸ್ವಿಯಾಗಿ ಸಾಗಿತು. ಸಂಘದಲ್ಲಿ ೪೪೦ ಮಂದಿ ಸದಸ್ಯರು ಸೇರಿದರು. ಹಲವೆಡೆಗಳಲ್ಲಿ ಶಾಖೆಗಳೂ ತೆರೆಯಲ್ಪಟ್ಟುವು. ಆದರೆ ಆ ಬಳಿಕ, ಓವೆನ್‌ನ ಇತರ ಪ್ರಯೋಗಗಳಂತೆ ಇದಕ್ಕೂ ಪರಾಜಯವೇ ಗತಿಯಾಯಿತು. ವಸ್ತುಗಳ ಮೌಲ್ಯವನ್ನೂ ಉತ್ಪಾದಕರೇ ತಿಳಿಸಬೇಕಾದುದರಿಂದ, ಹಲವರು ಅಧಿಕ ಮೌಲ್ಯಗಳನ್ನು ಹೇಳತೊಡಗಿದರು. ಇದನ್ನು ತಡೆಯಲು ಮೌಲ್ಯನಿರ್ಧಾರಕ್ಕಾಗಿ ಪ್ರತ್ಯೇಕ ಅಧಿಕಾರಿಗಳನ್ನು ನಿಯಮಿಸಬೇಕಾಯಿತು. ಆದರೆ ಓವೆನ್‌ನ ತಾತ್ತ್ವಿಕ ದೃಷ್ಟಿಯಿಲ್ಲದ ಈ ಅಧಿಕಾರಿಗಳು, ನಾಣ್ಯಗಳ ಆಧಾರದ ಮೇಲೆ ಮೌಲ್ಯವನ್ನು ನಿರ್ಧರಿಸತೊಡಗಿದರು ಇದರಿಂದ ಓವೆನ್‌ನ ಮುಖ್ಯ ಪದ್ಧತಿಯೇ ಲೋಪವಾಯಿತು.

ಈ ಸಂಘದ ಸೌಕರ್ಯಗಳಿಂದ ಆಕರ್ಷಿತರಾಗಿ ಉತ್ಪಾದಕರು ಗುಂಪುಗುಂಪಾಗಿ ಬಂದು ಸೇರತೊಡಗಿದರಷ್ಟೇ ಅಲ್ಲ; ನಿಷ್ಪ್ರಯೋ-ಜಕ ವಸ್ತುಗಳನ್ನು ತಂದು ಕೊಡತೊಡಗಿದರು. ಅದನ್ನ ಕೊಳ್ಳು

ದೀಪಾವಳಿಯ ಹಬ್ಬದೊಂದಿಗೆ ಜ್ಞಾನದ ಹಬ್ಬವೂ
ಕನ್ನಡಿಗರ ಮನೆ ಮನೆಗೆ ಬೆಳಗಲಿ!
೧ ವರುಷಕ್ಕೆ ೪೦೦ ಪುಟಗಳ ಮಿಕ್ಕ ಸಾಹಿತ್ಯ. ಆದರೂ
ವಾರ್ಷಿಕ ಚಂದಾ ಅಂಚೆ ವೆಚ್ಚಸಹಿತ ಕೇವಲ ೪ರೂ.
ಈಗ ತಾನೆ ಅರಳಿದೆ:
ಕೆರೆಗೆ ಹಾರ
(ಹಳ್ಳಿಯ ಬಾಳನ್ನು ಹೃದಯಸ್ಪರ್ಶಕವಾಗಿ ಚಿತ್ರಿಸಿದ ಕಾದಂಬರಿ)
ಶ್ರೀ. ಕುಲಕರ್ಣಿ ಬಿಂದುಮಾಧವರಿಂದ.
(ಕವಿಭೂಷಣ ಶ್ರೀಕೃಷ್ಣಶರ್ಮ ಬೆಟಗೇರಿ ಅವರ ವಿಸ್ತೃತ ಮುನ್ನುಡಿಯೊಂದಿಗೆ)
ನಮ್ಮ ಮೊದಲಿನ ಕುಸುಮಗಳು
೧. **ಪೂಜಾ** (ಗದ್ಯಗೀತಗಳು) ೨. **ಕೋಚನೀಯ ನಿಧನ** (ಕಥಾಸಂಗ್ರಹ) ೩. **ಅರೆಯಾಳು** (ಎರಡು ನೀಳ್ಗತೆಗಳು)
ವಿವರಗಳಿಗೆ:
ಶಾಂತಿ ಸಾಹಿತ್ಯಮಾಲೆ,
ಬಾದಾಮಿ
(ವಿಜಾಪೂರ ಜಿಲ್ಲೆ)

ವನರು ಮಾತ್ರ ಒಳ್ಳೆಯ ವಸ್ತುಗಳನ್ನೇ ಬೇಡುತ್ತಿದ್ದರು. ಇದರಿಂದ ಕೀಳುತರದ ವಸ್ತುಗಳನ್ನು ಅಧಿಕ ಬೆಲೆಗೆ ಕೊಂಡು, ಒಳ್ಳೆಯ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರುವುದೇ ಸಂಘದ ಕೆಲಸವಾಯಿತು. ಲಾಭಬಡಕರ ಚೀಲಗಳು ತುಂಬತೊಡಗಿದುವು. ಸಂಘವು ಕೀಳುವಸ್ತುಗಳ ಭಾಂಡಾರವಾಯಿತು. ಲಾಭವನ್ನೇ ರದ್ದುಪಡಿಸಿ ಮಾನವನನ್ನು ಸುಧಾರಿಸಲು ಜನ್ಮವೆತ್ತಿದ ಯೋಜನೆಯು ಲಾಭಬಡಕರ ಕೈಯಲ್ಲೇ ಸಿಕ್ಕಿ ನುಚ್ಚುನೂರಾಯಿತು.

ಓವೆನ್‌ನು ಸೋತನು; ಆದರೆ ತನ್ನ ತತ್ತ್ವಗಳಲ್ಲಿ ಆತನಿಗಿದ್ದ ಶ್ರದ್ಧೆ, ವಿಶ್ವಾಸಗಳು ತುಸುವಾದರೂ ಕುಂದಲಿಲ್ಲ. ತನ್ನ ಉಳಿದ ಜೀವಮಾನವನ್ನು ಆ ತತ್ತ್ವಗಳ ಪ್ರಚಾರದಲ್ಲಿಯೇ ಸವೆಸಿದನು. ೧೮೩೪ ರಲ್ಲಿ "The New Moral world" ಎಂಬ ಪತ್ರಿಕೆಯನ್ನು ಹೊರಡಿಸಿದನು. (ಆತನ ಮುಖ್ಯಕೃತಿಯ ಹೆಸರೂ ಇದೇ ಆಗಿದೆ.) ದೇಶದ ಕಾರ್ಮಿಕ ಚಳವಳಿಯಲ್ಲಿ ವಿಶೇಷ ಭಾಗವಹಿಸಿದನು. ಸಹಕಾರಿ ಚಳವಳಿಯಲ್ಲಿ ಆತನ ಪಾತ್ರವಿರದಿದ್ದರೂ, ಸಹಕಾರಿ ಸಂಘಗಳೊಡನೆ ತನ್ನ ಸಂಘಕ್ಕೆ ಸಹಾಯ ಕೋರಲು ಇಚ್ಛಿಸಿದ್ದನೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಓವೆನ್‌ನು ಅಂದು ತನ್ನ ಪ್ರಯೋಗಗಳಲ್ಲಿ ಪರಾಜಯಪಟ್ಟನಾದರೂ, ಐತಿಹಾಸಿಕ ಪರಂಪರೆಯಲ್ಲಿ ಆತನ ಮುಖ್ಯ ತತ್ತ್ವಕ್ಕೆ ಯಶದೊರೆತಿದೆಯೆನ್ನುವುದರಲ್ಲಿ ಸಂದೇಹವಿಲ್ಲ. ಶ್ರಮಜೀವಿಯು ತನ್ನ ಶ್ರಮದ ಪೂರ್ಣಫಲವನ್ನು ಉಪಭೋಗಿಸುವಂತಾಗಬೇಕು. ಉತ್ಪಾದಕನ ಹಾಗೂ ಕೊಳ್ಳುವವನ ನಡುವೆ ಮಧ್ಯವರ್ತಿ ಅಡ್ಡಬಂದು, ಇಬ್ಬರನ್ನೂ ಶೋಷಿಸಿ ಲಾಭಗಳಿಸುವಂತಾಗ ರದು— ಎಂಬುದೇ ಈ ತತ್ತ್ವ. ಇದೇ ವಿಶ್ವದ ಪ್ರಜಾತಂ ಸಮಾಜವಾದಿಗಳು ಕಾರ್ಯತಃ ಸಾಧಿಸಲು ಹೆಣಗಾಡುವ ತತ್ ಇದೇ ಇಂದು ಜಗತ್ತಿನಲ್ಲೆಲ್ಲ ಸರ್ವಮಾನ್ಯವಾದ ಸಹಕಾರಿ ತತ್ ಓವೆನ್‌ನ ಹಲವು ಮಂದಿ ಅನುಯಾಯಿಗಳು ಈ ತತ್ತ್ವ ಕಾರ್ಯರೂಪಕ್ಕಿಳಿಸಲು ಪ್ರಯತ್ನಿಸಿದರು. ೧೮೪೪ ರಲ್ಲಿ ಸ್ಥಾ ಲ್ಪಟ್ಟ ಅಮರವಾದ ರಾಕ್ ಡೇಲ್ ಸಹಕಾರಿಸಂಘದ ಇಪ್ಪತ್ತ ಮಂದಿ ಆವಿರ್ಭಾವಕರಲ್ಲಿ, ಆರುಮಂದಿ ಓವೆನ್‌ನ ಪರಮ ರಾಗಿದ್ದರು. ಓವೆನ್‌ನ ಜೀವಮಾನದಲ್ಲೇ ಹುಟ್ಟಿದ ಈ ಸಂ ಆತನು ಭಾಗವಹಿಸದಿದ್ದರೂ, ಇತಿಹಾಸವು ಅದರ ಯಶ ಆತನಿಗೇ ಸಲ್ಲಿಸುತ್ತದೆ. ರಾಬರ್ಟ್ ಓವೆನ್‌ನು ಸಹಕಾರಿ ಚ ಳಿಯ ತಾತನೆಂದು ಪರಿಗಣಿಸಲ್ಪಡುತ್ತಾನೆ. ಸಹಕಾರಿ ಚಳವ ಅಗ್ರದೂತರಾದ ಸಮಾಜವಾದಿಗಳು, ಆತನು ಸಮಾಜವ ಪ್ರವಾದಿಯೆಂದು ಸಾರುತ್ತಾರೆ. ಸಹಕಾರಿತತ್ತ್ವವು ದೋಷ ವಲ್ಲವೆಂದು ಹಲವರು ಅಭಿಪ್ರಾಯಪಡಬಹುದು; ಆದರೆ ಕ್ಕಿಂತಲೂ ಉತ್ತಮವಾದ ಬೇರೊಂದು ದಾರಿಯನ್ನು ಕಂಡು ಯುವತನಕ ಸಹಕಾರಿತತ್ತ್ವವನ್ನೊಳಗೊಂಡ ಸಮ ವಾದವೇ ಲೋಕಕಲ್ಯಾಣದ ಏಕಮಾತ್ರಸಾಧನವೆಂದು ಬಹುದು.

ಪ್ರತಿಯೊಬ್ಬ ಕನ್ನಡಿಗನು
ಸಂಗ್ರಹಿಸಬೇಕಾದ ಗ್ರಂಥಗಳು.

ಗ್ರಂಥವಿಜ್ಞಾನ....ಸಂಪಾದಕರು ಶ್ರೀ. ಸಾಂಗಲಿ ವೆಂಕಟೇಶ
ಬೆಲೆ ರೂ. ೨-೦-೦

ಲೋಕೂರ ನಾರಾಯಣರಾಯರು.
ಲೇ. ಶ್ರೀ. ಎನ್. ಕೆ. ಕುಲಕರ್ಣಿ ಮತ್ತು
ಶ್ರೀ. ಎಚ್. ವಿ. ಇಮಾರತಿ.
ಬೆಲೆ ರೂ. ೧-೮-೦

ಜರಾಸಂಧ ಲೇ. ಶ್ರೀರಂಗ.
ಬೆಲೆ ರೂ. ೧-೮-೦

ಮೂರೂ ಪುಸ್ತಕದ ಒಟ್ಟು ಬೆಲೆ... ರೂ. ೪-೮-೦
ಅಂಚೆವೆಚ್ಚ.... ೦-೫-೦

ಕರ್ನಾಟಕ ಸಂಘ,
ಸಾಂಜಗಿರಿ ಸದನ, ಗಿರಗಾಂವ, ಮುಂಬಯಿ ೪

ಕುಟಜಾರಿಷ್ಟ:— ಆಮಾಂಶ, ಅಜೀರ್ಣ
ಹೊಟ್ಟೆ ಮುರಿಯುವದು ಮೊದಲಾದ
ವಿಕಾರಗಳಿಗೆ ಶ್ರೇಷ್ಠವಾದ
ಔಷಧ.

ಕಾಸಶ್ವಾಸಾರಿ:— ದಮ್ಮು, ಕೆಮ್ಮುಗಳಿ
ಅನುಭವಸಿದ್ಧ ಔಷಧ

ನೂತನ ಆಯುರ್ವೇದ
ಕಾರ್ಯಾಲಯ
ವಿಜಾ

ಕಸ್ತೂರಬಾ ಮಂದಿರ

(ಇದೂ ಒಂದು ಕತೆ)

ಶ್ರೀ. ಎ. ಎಸ್. ರಾಮಕೃಷ್ಣ, ಮಣಿಪಾಳ-ಉಡುಪಿ

★

...ಕೆಗೆ ಬೇಕಾಗುವ ಮಳೆಯನ್ನು ಸುರಿಸುವ ವಿಧಾ-ಯಕ ಶಕ್ತಿಯಂತೆಯೆ ತಿಳಿನೀರನ್ನು ಕಲಕುಗೊಳಿಸಿ ...ಡಿಸುವ ಪೈಶಾಚ್ಯಶಕ್ತಿಯೂ ನಿರಂತರ ತನ್ನ ಕೈಚಳಕ ...ಡೆಯಿಸಿರುತ್ತದೆ. ಇಂದಿನ 'ಕಸ್ತೂರಬಾ ಮಂದಿರ' ದಲ್ಲಿ ಕುಣಿದಾಡುತ್ತಿರುವುದು ಇಂತಹ ಪೈ ಶಾ ಚ್ಯ ಶ ಕ್ತಿ ಯೆ!

★

ಬೆಳಗಿನಿಂದ ಸುರಿಯುತ್ತಿದ್ದ ಮಳೆ ಆಗ ತಾನೆ ಕೊಂಚ ...ಂತಿತು. ಮೋಡಗಳೇನೋ ದಟ್ಟೈಸಿಕೊಂಡು ತೂಗಾಡುತ್ತಿದ್ದವು. ...ವರೆ ಸೂರ್ಯದೇವ 'ನಾನಿದೇನೆ' ಎಂದು ಭರವಸೆ ಕೊಡುವಂತೆ ...ಮುಗಿಲ ಹಿಂದಿನಿಂದ ನಕ್ಕಾಗ ಕೇಳಬೇಕೆ! ಹೂದೋಟದ ಗಿಡ ...ಳೇನು—ಹಕ್ಕಿಗಳಿಂದ ಕಿಕ್ಕಿರಿದು ತಾನೇ ಕೋಲಾಹಲ ನಡೆಸು-...ದೆಯೋ ಎಂಬಂತಿದ್ದ ಅರಳಿಯ ಮರವೇನು—ಸುತ್ತ ಪ್ರಕೃ-...ಯೇ ಚೈತನ್ಯವೆತ್ತು ನಗುವಂತೆ ಕಾಣಿಸಿತು. ಅಂಪಮೇಲೆ, ...ಸುಮ್ಮನೆ ಕೋಣೆಯಲ್ಲಿ ಕುಳಿತು ಪುಟ ತಿರುವಿದರೇನು ಬಂತು?—...ಂದುಕೊಂಡು ನಾನು ರಸ್ತೆಗಿಳಿದೆ. ಕೊಂಚ ದೂರ ಅಡ್ಡಾಡಿ ...ರುವುದಕ್ಕೆ ಛತ್ರಿಯಿಲ್ಲದಿದ್ದರೇನು ಕೊಳ್ಳೆ ಹೋಗುತ್ತದೆ—ಎಂದು ...ತ್ರಿಯನ್ನು ಉಪೇಕ್ಷಿಸಿ ಹೊರಬಿದ್ದೆ.

ಹತ್ತು ಗಜ ಹರ್ಷದಿಂದ ನಡೆದಿದ್ದೆನೊ ಇಲ್ಲವೊ; ಮಳೆ ಹನಿಯ ...ಡಗಿತು. ಹನಿಗೆ ಅಂಜಿ ಹಿಮ್ಮೆಟ್ಟಲು ಮನಸ್ಸಾಗಲಿಲ್ಲ. ...ಮುಂದೆ ನಡೆದಂತೆಲ್ಲ ಮಾರಿಗೊಂದು ಹನಿಯುತ್ತಿದ್ದುದು ದಟ್ಟ-...ವಾಗಿ ಹನಿಯಲಾರಂಭಿಸಿ, ಕೊನೆಗೆ ಸೋನೆ ಹಿಡಿಯಿತು. ಹಿಂದಿ-...ರುಗಿ ಬೇಗನೆ ಮನೆ ಸೇರುವುದು ಸಾಧ್ಯವಿಲ್ಲವೆಂಬಷ್ಟು ಮುಂಪರಿಸಿ ...ಯಾಗಿತ್ತು. ಹೊಸದಾಗಿ ಆ ಊರು ಸೇರಿದವನಾದ್ದರಿಂದ, ಗೆಳೆ-...ಯರ ಮನೆಯನ್ನು ಸೇರುವ ಸೌಲಭ್ಯವಿರಲಿಲ್ಲ. ಇನ್ನೊಂದು ...ಹತ್ತು ಗಜ ಮುಂದೆ ನಡೆದರೆ ಕಾಫಿ ಹೋಟಲು, ಸಲೂನು ಇವು ...ಗಳಲ್ಲೊಂದಕ್ಕೆ ಶರಣು ಹೋಗಬೇಕಾಗಬಹುದು. ಛತ್ರಿಯೆನ್ನು-...ವುದು "ಒಬ್ಬರಿಗಾದರೆ Shelterಉ, ಇಬ್ಬರಿಗಾದರೆ Shower-...bathಉ"— ಎಂದು ಯಾರೋ ಹೇಳಿದಂತೆ, ಯಾರದಾದರೂ ...ಛತ್ರಿಯನ್ನು ಆಶ್ರಯಿಸಲು ಹೋಗಿ ಇಬ್ಬರೂ ಒದ್ದೆಯಾಗುವ ವೈಭವ ಬೇಡವೆನ್ನಿಸಿತು. ಅದ್ದರಿಂದ ಸರ್ರನೆ ಪಕ್ಕಕ್ಕೆ ತಿರುಗಿ ರಸ್ತೆಯಿಂದ ಕೊಂಚ ದೂರದಲ್ಲಿದ್ದ ಒಂದು ಜಗಲಿಯನ್ನು ಸೇರಿದೆ. ನನ್ನಂತೆ ಒದ್ದೆಯಾಗದೆ ಆ ಕಟ್ಟೆಯನ್ನು ಸೇರಿದ ಮುಂಜಾಗ್ರತೆ-ಯುಳ್ಳ ನಾಲ್ಕೆಂಟು ಚತುಷ್ಪಾದಿಗಳು ನನ್ನನ್ನು ಕಂಡು ನಕ್ಕವೋ ಏನೋ! ಆದರೂ ಪೂರ್ತಿ ಒದ್ದೆಯಾಗಲಿಲ್ಲವಲ್ಲ—ಎಂದು ನಾನು ಹಿಗ್ಗಿದೆ. ಅಷ್ಟರಲ್ಲಿ ಮಳೆ ಧಾರೆಯಾಗಿ ಸುರಿಯತೊಡಗಿತು.

ನನಗೆ ಕಟ್ಟೆಯ ಮೇಲೆ ಆಶ್ರಯಕೊಟ್ಟ ಆ ಮನೆಯಲ್ಲಿ ವಸತಿ-ಯಿರಲಿಲ್ಲ. ಬಾಗಿಲಿಗೆ ದಪ್ಪವಾದ ಬೀಗಗಳನ್ನು ಜಡಿದಿದ್ದರು. ಮನೆ ಹೊಸದಾಗಿ ಕಟ್ಟಿಸಿದಂತಿದ್ದರೂ ಸುಣ್ಣ ಸಾರಣೆ ಸರಿಯಾಗಿ-ಲ್ಲದೆ ಜೇಡರ ಬಲೆ ಹರಡಿಕೊಂಡಿತ್ತು. ದೂಳು ತುಂಬಿಕೊಂ-ಡಿತ್ತು. ನೋಡಿದರೆ Godown ತರಹ ಇತ್ತು. ಈ ವಾತಾ-ವರಣದಲ್ಲಿ ಕೊಳೆಯುವುದಾಯಿತಲ್ಲ—ಎಂದು ತಳಮಳಿಸುತ್ತಿರು-ವಾಗ, ಬೇರೊಬ್ಬರು ಅಲ್ಲಿ ಬಂದು ಸೇರಿದರು. ಅವರು—ಪಾಪ! ಪೂರ್ತಿ ಒದ್ದೆಯಾಗಿದ್ದರು.

ನಾವು ದುರವಸ್ಥೆಯಲ್ಲಿರುವಾಗ ನಮಗಿಂತ ಒಂದು ತೂಕ ಹೆಚ್ಚಿನ ಪಾಡು ಪಡುತ್ತಿರುವವರನ್ನು ಕಂಡರೆ, ಸಾಮಾನ್ಯವಾಗಿ ನಮಗೆ ಒಳಗೊಳಗೆ ಒಂದು ರೀತಿಯ ಸಂತೋಷವಾಗುವುದಂತೆ—ಹಾಗೆಂದು ಯಾರೋ ಹರಿತ ನಾಲಗೆಯವರು ಹೇಳಿದಾರೆ. ಅದೇ-ನಿದ್ದರೂ ನನ್ನ ಹೊಸಗೆಳೆಯರು ಬಂದಾಗ ನನಗೆ ಕೊಂಚ ಸಂತೋಷವಾಯಿತೆಂದು ಒಪ್ಪಿಕೊಳ್ಳುತ್ತೇನೆ; ಅದಕ್ಕಾಗಿಯೇ ಅವರು ಬರುತ್ತಿರುವಾಗ ನಾನು ನಗೆ ಬೀರಿದ್ದಿರಬೇಕು. ಅವರು ಕೂಡ ತುಂಬ ಬೇಸತ್ತವರಂತೆ ಕಂಡರೂ ಹಲ್ಲು ಕಿರಿದೇ ಉತ್ತರಿ-ಸಿದರು.

ಇಂತಹ ಜಾಗದಲ್ಲಿ ವಿಧಿ ಗೊತ್ತು ಗುರುತಿಲ್ಲದ ಇಬ್ಬರನ್ನು ಕೂಡ ಹಾಕಿದ ಮೇಲೆಯೂ ಮಾತನಾಡದಿರಲು ನಮಗೇನು ಮೌನವ್ರತವೇ! ಒಂದರ ಮೇಲೊಂದು ಪ್ರಸ್ತಾಪಗಳು ಬಂದು, ಹೊರಗೆ ಮಳೆ ಸುರಿಯುತ್ತಿದ್ದ ರೀತಿಯಲ್ಲಿಯೇ ನಮ್ಮ ಮಾತು-ಕತೆ ಸಾಗಿತು. ಅವರ ಮಾತು ಸುಳಿದುದೆಲ್ಲ "ತುತ್ತಿನ ಚೀಲ"ದ ಸುತ್ತ. ಕಾರಣ ನಮ್ಮ ಗೆಳೆಯರ ಕೈಯಲ್ಲಿದ್ದ ಜಮಖಾನದ ಚೀಲ ಬರಿದಾಗಿದ್ದುದೇ. ರೇಶನ್ನಿಗಾಗಿ ಅಂಗಡಿಗೆ ಹೋದಾಗ, ಈ ವಾರ ಅಕ್ಕಿ ಬಂದಿಲ್ಲವೆಂದರಂತೆ. ಅದ್ದರಿಂದ ಅವರು ಖಾಲಿ ಚೀಲದೊಡನೆ ಮನೆಗೆ ಹೋಗುವುದಾದರೂ ಹೇಗೆ? ಎಂದು ತಮ್ಮನ್ನೆ ಶಪಿಸಿಕೊಳ್ಳುತ್ತಿದ್ದರು. ಕೊಡುವ ಅರೆಪಾವು ಅಕ್ಕಿಯನ್ನೂ ಆಗ ಬಾ ಈಗ ಬಾ ಎಂದು ವಾರದಲ್ಲಿ ಎರಡೋ ಮೂರೋ ದಿನ-ಗಳಿಗೆ ರೇಶನ್ ಕೊಟ್ಟರೆ ಬದುಕುವುದುಂಟೆ —ಎಂದು ಅವರ ಪರಿತಾಪ. ಮಕ್ಕಳು ಮರಿ ಹೆಂಡತಿ ತಾಯಿ ಅಂತ ದೊಡ್ಡ ಸಂಸಾರ. ಎಷ್ಟೆಂದು ಹೊಟ್ಟೆ ಕಟ್ಟಬಹುದು ಎಂದು ಅವರು ನಿರಾಶೆಯ ನಿಟ್ಟುಸಿರು ಗರೆದರು. ಅವರೆಂದಂತೆ, ತುಂಡುಭೂಮಿಯ ಸಾಗುವಳಿ ಕೂಡ ಅವರಿಗಿಲ್ಲ, ಆದರೂ ಇನ್ನೊಂದು ವಾರದಲ್ಲಿ ಪೈರೆಲ್ಲಾ ಕಟಾವಾಗುತ್ತದೆ. ಆಗ ಬದುಕಿಕೊಂಡೆ—ಎಂದು ಆಶಾ-

ಕರಣವನ್ನು ಕಂಡುಕೊಂಡರು. ನೆಮ್ಮದಿ ಕಂಡುಕೊಂಡರು. ಆದರೆ ಮರುನಿಮಿಷದಲ್ಲಿಯೇ "ಇವತ್ತಿನ ರಾತ್ರಿ ಎಂದಿನಂತೆ ಹಲಸಿನ ಬೇಳೆ ಬೇಯಿಸಿ ತಿನ್ನುವುದೇ ಗತಿಯಾಯಿತು" ಎಂದು ಕೊರಗಿದರು.

ಮಾತು ಮುಂದೆ ಸಾಗಿದಂತೆಲ್ಲ ಅವರ ಹೊಟ್ಟೆಯ ಕಿಚ್ಚು ಪ್ರಜ್ವಲವಾಯಿತೊ ಏನೊ! 'Grow more Food, miss a meal, ಸೊಪ್ಪು ತಿಂದವಗೆ ಸಗ್ಗ, ಮನೆ ಮನೆ ಮುಂದೆ ಮರ'— ಎಂಬೆಲ್ಲ ಹಸಿ ಬಿಸಿ ಸ್ಲೋಗನ್ನುಗಳನ್ನು ಮನಸ್ವೀ ಶಪಿಸಿದರು.

ಅರ್ಧಕಾಸು ಮಾತನಾಡಿದರೂ ನಮಗೆ ಪರಸ್ಪರ ಪರಿಚಯವಾಗಲೇ ಇಲ್ಲ. 'ಯಾರು, ಏನು?' ಎಂದು ನಾನು ಅವರನ್ನು ಪ್ರಶ್ನಿಸಿದೆ. ಆದರೆ ಅವರ ಮನಸ್ಸು ಕೀರ ಹುಳಿಯಾಗಿದ್ದಿರಬೇಕು. 'ನಾನು ಯಾರೆಂದು ತಿಳಿದರೂ ಒಂದೆ ತಿಳಿಯದಿದ್ದರೂ ಒಂದೆ. ನನ್ನ ವಿಚಾರ ಹೇಳಿದರೆ ಕಂತೆ ಪುರಾಣವಾಗುತ್ತದೆ. ಹೇಳದಿದ್ದರೇ ಲೇಸು. ಆದ್ದರಿಂದ ನಾನೀಗ ಹೋಗುತ್ತೇನೆ ಸ್ವಾಮಿ, ನಮಸ್ಕಾರ' ಎನ್ನುತ್ತ ಮಳೆ ಇನ್ನೂ ಪೂರ್ತಿಯಾಗಿ ನಿಂತಿರದಿದ್ದರೂ ಹೊರಟೇ ಬಿಟ್ಟರು. ಮಳೆ ಇನ್ನೂ ಕೊಂಚ ಕಡಮೆಯಾಗುವವರೆಗೆ ನಾನು ಹೊರಡಲು ಇಷ್ಟಪಡಲಿಲ್ಲ. ನನ್ನ ಅರ್ಧ ಕಾಸಿನ ಗೆಳೆಯರು ಕೈಯ ಚೀಲವನ್ನು ತಲೆಯ ಮೇಲೆ ಹಾಕಿಕೊಂಡು ಹೋಗುತ್ತಿದ್ದ ನೋಟವನ್ನು ಮರೆಯಾಗುವ ತನಕ ನೋಡುತ್ತ ನಿಂತಿದ್ದೆ.

ಅನಂತರ ಸೂರನ್ನೆ ನೋಡುತ್ತ ಏನೇನೋ ಯೋಚಿಸಿದೆ. ಬಡತನ ಬೇಸಾಯ, ಬಂಡವಾಳ, ಕಮ್ಯುನಿಸಂ, ಸೋಷಲಿಸಂ— ಹೀಗೆ ಹಲವಾರು ಸಮಸ್ಯೆಗಳನ್ನು ಮನಸ್ಸು ಮೆಲುಕು ಹಾಕುತ್ತಿತ್ತು. ಆಗ ಹಿಂದಿನಿಂದ ಯಾರೋ ನನ್ನನ್ನು ಮಾತನಾಡಿಸಿದರು. ಹಿಂದಿರುಗಿ ನೋಡಿದೆ, ಯಾರೂ ಇರಲಿಲ್ಲ.



"ಅವರು—ನಿನ್ನ ಜೊತೆಯಲ್ಲಿ ಮಾತನಾಡುತ್ತಿದ್ದರಲ್ಲ— ಈಗ ಹೊರಟು ಹೋದರಲ್ಲ— ಅವರು ಯಾರು ಗೊತ್ತೇನು?" ಎಂದು ಪುನಃ ಮನೆಯೊಳಗಿಂದ ಯಾರೋ ಕೇಳಿದರು. ನಾನು ಬೆಚ್ಚಿಬಿದ್ದು ಹಿಂದಿರುಗಿ ನೋಡಿದೆ. ನನ್ನ ಹಿಂದಿದ್ದ ಗಿಟಕಿಯ ಬಾಗಿಲು ಭದ್ರವಾಗಿ ಹಾಕಿತ್ತು. ಸುತ್ತಮುತ್ತ ಯಾರೂ ಕಾಣಿಸಲಿಲ್ಲ.

"ಆತ ಒಂದು ಕಾಲದಲ್ಲಿ ಭಾರೀ ಧನಿಕನಾಗಿದ್ದ ಕಣಯ್ಯ...."

"ಯಾರದು.... ಮಾತನಾಡುತ್ತಿರುವುದು?" ಎಂದು ಗಟ್ಟಿಯಾಗಿ ಕೇಳಿದೆ ನಾನು.

"ಭಯ ಪಡಬೇಡ.... ನಾನು.... ಮನೆ ಕಣಯ್ಯ!"

"ಮನೆಯಂತೆ!.... ಯಾರೆಂದು ಹೇಳಬಾರದೆ?"

"ಮನೆ—ಎಂದರೆ ನಂಬಬಾರದೆ? ಎರಡು ಮಾತು ವಿಶ್ವಾಸದಿಂದ ಹೇಳಿದ್ದನ್ನು ಕೇಳುವುದಕ್ಕೆ ಯಾರಾದರೇನಂತೆ?"

"ಸರಿ, ಮನೆಯೆ ಮಾತನಾಡುತ್ತಿದೆಯೆಂದು ನಾನು ನಂಬಬೇಕೆನ್ನುವಿರಾದರೆ ಅದೂ ಸರಿಯೆ! ವಾದ ನನಗೆ ಹಿಡಿಸದು!"

"ಆತ ಧನಿಕನಾಗಿದ್ದ ಎಂದೆನಲ್ಲ........ಈಗ ಅವನ ಪಾಡು ನೋಡಿ ಕನಿಕರ ಬರುತ್ತದೆ."

"ಆದರೆ ಅದಕ್ಕೇನು ಮಾಡೋದಕ್ಕಾಗುತ್ತದೆ?" ನಾನೆ ಅಷ್ಟೊಂದು ಆಸಕ್ತಿ ತೋರಿಸದೆ ಹೇಳಿದೆ.

ಒಂದು ದೀರ್ಘವಾದ ನಿಟ್ಟುಸಿರು ಕೇಳಿಸಿತು. "ಯಾರೇನು ಮಾಡುವ ವಿಚಾರ ನಾನು ಹೇಳುತ್ತಿಲ್ಲ. ಅವನು ಖಾಲಿ ಕೈ ಹಿಡಿದು ಮನೆಗೆ ಹೋಗುವಂತಾಯಿತಲ್ಲ—ಎಂದು ಮರುಗುತ್ತೇನೆ ಅಷ್ಟೆ."

"ಅವರೊಬ್ಬರೆಂದರೇನು ಲಕ್ಷಗಟ್ಟಲೆ ಜನರ ಪಾಡು ಹಾಗಾಗಿರುವುದು ಕಾಣಿಸುವುದಿಲ್ಲವೆ?"

"ಆದರೆ ಈತನ ಪಾಡಿನಲ್ಲಿ ವಿಧಿಯ ಅಣಕವಿದೆ. ಇವ ಒಂದು ಕಾಲದಲ್ಲಿ ಧನಿಕನಾಗಿದ್ದನೆಂದು ಹೇಳಿದೆನಲ್ಲ. ಆಗ ಹತ್ತು ಮಂದಿ ಬಡಜನರಿಗೆ ಸಹಾಯನೀಡಿದ್ದ ಈತ. ಈಗ ಮೂವತ್ತು ವರ್ಷಗಳ ಹಿಂದೆ ಯುದ್ಧ ನಡೆದಿತ್ತಲ್ಲ. ಇಂದಿನ ಪರಿಸ್ಥಿತಿ ಇದ್ದಿರಲಿಲ್ಲವಾದರೂ ಆಗ ಕೂಡ ಆಹಾರಸಮಸ್ಯೆ ತಲೆದೋರಿತ್ತು. ಆಗ ಈಗಿನ ಕಾಲುಭಾಗದಷ್ಟು ಅಕ್ಕಿಯ ಬೆಲೆ ಇಲ್ಲದಿದ್ದರೂ ಸಾವಿರಾರು ಜನರಿಗೆ ಅದನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆಗ ಒಂದು ಮಳೆಗಾಲದಲ್ಲಿ ಜನರು ಹೊಟ್ಟೆಗಿಲ್ಲದೆ ಶ್ರೀಮಂತರ ಮನೆಗಳ ಮುಂದೆ ಸುಳಿದಾಡಬೇಕಾಯಿತು. ಬೇ ಕಾಡಬೇಕಾಯಿತು. ಒಳಗೊಳಗೆ ಸಾಕಷ್ಟು ಧಾನ್ಯ ಕೂಡಿಟ್ಟಿದ್ದರೂ ಯಾರೂ ಸಹಾಯಮಾಡಲು ಮುಂದೆ ಬರಲಿಲ್ಲ. ಆಗ ಮನುಷ್ಯ ಏನು ಮಾಡಿದ ಗೊತ್ತೆ? ಒಳಗಿದ್ದ ಅಕ್ಕಿಯ ಮುಡಿಗಳನ್ನೆಲ್ಲ ಹೊರಗೆ ಚಾವಡಿಯಲ್ಲಿ ತಂದು ಸುರುವಿಸಿದ. ಬಡಬಗ್ಗರ ಮನೆಮಂದಿಗೆಲ್ಲ ಎರಡೆರಡು ಸೇರು ಅಕ್ಕಿಯಂತೆ ಅಳೆಸಿದ. ಮುಂದೆ ಒಂದು ವಾರದಲ್ಲಿ ಹೇಗೂ ಬೆಳೆ ಕಟಾವಿಗೆ ಪ್ರಾರಂಭ

ಹೋಯಿತು. ಜನರು ತಮ್ಮ 'ಹಿರಿಮನೆ ಮಾಸ್ತರ'ರನ್ನು ತುಂಬ ಕೊಂಡಾಡಿ ಹರಸಿದರು...."

"ಅದೇನು ಹೆಸರು.... ನೀನು ಹೇಳುತ್ತಿರುವುದು?"

"ಹೆಸರು....ಹುಂ 'ಹಿರಿಮನೆ ಮಾಸ್ತರರು' ಎಂದು. ಈಗ ಈತ ಬರಿಯ 'ಮಾಸ್ತರ'ನಾಗಿದ್ದಾನೆ. ಆಗ ಈತನಿಗೆ ಸಾಕಷ್ಟು ಭೂಮಿ-ಕಾಣಿಗಳಿದ್ದುದಲ್ಲದೆ, ಸುತ್ತುಮುತ್ತಲಿನ ನಾಲ್ಕೈದು ಖಾಸಗಿ ಶಾಲೆಗಳ ಆಡಳಿತವೂ ಇತ್ತು. ಆದರೆ ವಿಧಿ ವಿರುದ್ಧ ನಿಂತಿತೋ ಎಂಬಂತೆ, ಅದೇ ಬೇಸಗೆಯಲ್ಲಿ ಇವನ ಮನೆ ಸುಟ್ಟುಹೋಯಿತು. ಮುಂದೆ ಒಂದೊಂದೇ ದುರ್ಘಟನೆಗಳೊದಗಿ ದಿವಾಳಿ ಎನಿಸಿ-ಕೊಂಡ. ಆಸ್ತಿ-ಪಾಸ್ತಿಗಳನ್ನು ಮಾರಿದ. ಬೆಳೆದು ಕೈಗೆ ಬಂದಿದ್ದ ಇಬ್ಬರು ಮಕ್ಕಳು ಯಾವುದೋ ಪಿಡುಗಿನಲ್ಲಿ ತೀರಿಕೊಂಡರು. ಹೀಗಿದೆ ಅವನ ಕಥೆ. ನನಗೆ ಈಗ ಪರಿತಾಪವೇನೆಂದರೆ— ಅಂದು ಹಿಂದೆ ಮುಂದೆ ನೋಡದೆ ಬಡಜನರ ಗೋಳು ಪರಿಹಾರಮಾಡಿದ ಪುಣ್ಯಾತ್ಮನಿಗೆ— ಈಗ ರೇಶನ್ ಇಲ್ಲ ಎನ್ನಿಸಿಕೊಂಡು ಖಾಲಿ ಚೀಲ ಒಯ್ಯುವುದಾಯಿತೇ— ಎಂದು."

ನಾನೂ ನಿಟ್ಟುಸಿರುಬಿಟ್ಟು ಹೇಳಿದೆ. "ಪ್ರಪಂಚದ ಪರಿಯೇ ಹೀಗಾಗಿದೆ." ಒಂದು ನಿಮಿಷ ಮೌನ ವ್ಯಾಪಿಸಿತು. ಕೊನೆಗೆ ನಾನೇ ಕೇಳಿದೆ. "ಮಾತನಾಡುತ್ತಿರುವುದು ಯಾರೆಂದು ಈಗಲಾ-ದರೂ ತಿಳಿಸಬಾರದೆ?"

"ಇನ್ನೂ ನಂಬಿಕೆಯಿಲ್ಲವೆ! ನಾನು ನೀನೀಗ ನಿಂತಿರುವ ಮನೆಯೇ ಎಂದೆನಲ್ಲ. ನೀನು ಕೇಳುವೆಯಾದರೆ ನನ್ನ ಕುರಿತಾಗಿ ಸಹ ಎರಡು ಮಾತು ಹೇಳಬಲ್ಲೆ."

"ಅದಕ್ಕೇನು, ಕೇಳೋಣ!" ಎಂದೆ ನಾನು.

"ಕಸ್ತೂರ್‌ಬಾರವರ ಹೆಸರಿನಲ್ಲಿ ನಿಧಿ ಕೂಡಿಸಿದರಲ್ಲ— ಆಗ ಈ ಊರಿನ ಪ್ರಮುಖರು ಸೇರಿ ನನ್ನನ್ನು ಕಟ್ಟಿಸಿದರು. ಆಗ ನಾನು ಈಗಿನಂತಿರಲಿಲ್ಲ. ನನ್ನಲ್ಲಿ ಊರಿನವರಿಗೆಲ್ಲ ಒಂದು ಪವಿತ್ರ ಭಾವನೆಯಿದ್ದಿತು. ದಿನವೂ ನಲವತ್ತು ಐವತ್ತು ಮಂದಿ ಮಕ್ಕಳು, ಮರಿಗಳು, ಹಿರಿಯರು ಬಂದು ಚರಖಾ ತಿರುಗಿಸುತ್ತಿದ್ದರು. ಒಂದು ಕಡೆಯಲ್ಲಿ ಹಿಂದೀ ಶಿಕ್ಷಣ ನಡೆಯುತ್ತಿತ್ತು. ಆಗಾಗ ವಿದ್ವಾಂಸರುಗಳು ಬಂದು ಉಪನ್ಯಾಸ ಕೊಡುತ್ತಿದ್ದರು. ಆಗ ಇಲ್ಲಿ ಜನ ಕಿಕ್ಕಿರಿಯುತ್ತಿದ್ದರು. ರಾಷ್ಟ್ರೀಯ ವಿಶೇಷದಿನಗಳಲ್ಲಂತೂ ನನ್ನ ಆವಾರದೊಳಗೆಲ್ಲ ಬಲು ಸಂಭ್ರಮ. ಆಗಿನ ವಾತಾವರಣ ನೆನಸಿಕೊಂಡರೆ ಕಣ್ಣೀರು ಬರುತ್ತದೆ ಕಣಯ್ಯಾ!

ನನ್ನ ದುರದೃಷ್ಟದಿಂದ ಬರು-ಬರುತ್ತ ನನ್ನನ್ನು ಕಟ್ಟಿಸಿದ ಮಹನೀಯರಲ್ಲಿ ದ್ವೇಷ ಬೆಳೆಯಿತು. ವಿಷಮಕ್ಕೆ ತಿರುಗಿತು. ಆಗ ನನ್ನ ಈಗಿನ ಯಜಮಾನ ಖರ್ಚುಕೊಟ್ಟು ನನ್ನನ್ನು ಪಡೆಸಿಕೊಂಡ. ಈಗ ಎರಡು ವರ್ಷಗಳಿಂದ ಜನರು ನನ್ನ ಕಡೆ ಸುಳಿಯುವುದಿಲ್ಲ. ಚರಖಾಗಳೆಲ್ಲ ಕತ್ತಲುಮೂಲೆಯಲ್ಲಿ ಬಿದ್ದು ಗೆದ್ದಲುಹಿಡಿಸಿಕೊಂಡಿವೆ. ನನ್ನ ಮುಂದಿನ ಸೊಗಸಾದ ಹೂದೋಟ ಹಸುಗಳ ಪಾಲಾಗಿ, ಈಗ ನಿನಗೆ ಕಾಣಿಸುತ್ತಿರುವ ಕಾಷ್ಠಗಳು ಮಾತ್ರ ಉಳಿದಿವೆ.

ಹಿಂದಿನ ನನ್ನ ಉಚ್ಛ್ರಾಯಸ್ಥಿತಿಯನ್ನು ಜ್ಞಾಪಕಕ್ಕೆ ತಂದು-ಕೊಡಲೋ ಎಂಬಂತೆ, ಆ ಮೂಲೆಯಲ್ಲಿ ತೂಗುಹಾಕಿದ್ದಾರಲ್ಲ ಅಡ್ಡಲಾಗಿ— ಆ ಬೋರ್ಡು ಮಾತ್ರ ಉಳಿದಿದೆ. "ಕಸ್ತೂರ್ ಬಾ ಮಂದಿರ" ಎಂಥ ಭರ್ಜರಿಯಾದ ಬಿರುದು!"

ಮನೆಯ ಕಥೆ ಕೇಳಿ ನನಗೂ ವಿಸ್ಮಯವಾಯಿತು. "ಓ, ನೀನೊಂದು ಕಾಲದಲ್ಲಿ 'ಕಸ್ತೂರ್‌ಬಾ ಮಂದಿರ' ಎನಿಸಿಕೊಂಡಿ-ದ್ದೆಯಾ?"— ಎಂದೆ.

"ಅದೆಲ್ಲ ಹಿಂದಿನ ಮಾತಾಗಿ ಹೋಯಿತು. ಇಲ್ಲಿದ್ದ ಇನ್ನೊಂದು ಎನಾಮೆಲ್ ಬೋರ್ಡನ್ನು, ಒಬ್ಬ ಪುಸ್ತಕ ವ್ಯಾಪಾರಿ ಕೊಂಡು-ಹೋಗಿ ತೂಗಹಾಕಿಕೊಂಡಿದ್ದಾನೆ. ಅವನಂಗಡಿಯೇ ಈಗ ಊರಿಗೆ 'ಕಸ್ತೂರ್‌ಬಾ ಮಂದಿರ'.

"ಓ, ಬಲು ಚೆನ್ನಾಗಿದೆ ಎಂದೆ" ನನಗೆ ನಗು ಬಂತು. ಮರು-ಕ್ಷಣದಲ್ಲೆ ಹೇಳಿದೆ— "ನಿನ್ನ ಈಗಿನ ಸ್ಥಿತಿಗಾಗಿ ತುಂಬ ವ್ಯಸನ ಪಡುತ್ತೇನೆ ಕಣಯ್ಯ".

"ನಾನು ಯಾರಿಗೂ ಬೇಡವಾಗಿ ಹಾಳು ಬಿದ್ದಿದ್ದರೆ ದುಃಖ-ಪಡಲು ಕಾರಣವಿರಲಿಲ್ಲ. ಆದರೆ ನನ್ನ ದುರ್ದೈವ ಏನೆಂದು ಹೇಳಲಿ! ನನ್ನನ್ನು ಈ ಹೇಯವಾದ ಕಾರ್ಯಕ್ಕಾಗಿ ಬಳಸಿ-ಕೊಂಡಿದ್ದಾನೆ ಈಗಿನ ಸಾಹುಕಾರ."

"ಅದೇನು ಹಾಗೆ?"— ನಾನು ಕುತೂಹಲಗೊಂಡು ಕೇಳಿದೆ.

"ರೇಶನ್ ಇಲ್ಲ ಅನ್ನಿಸಿಕೊಂಡು ಖಾಲಿ ಚೀಲದೊಡನೆ ಆತ ಮನೆಗೆ ಹೋದನಲ್ಲ— ಅವನಂತೆಯೇ ನೂರಾರು ಜನರು ಪಾಡು ಪಡುತ್ತಿರುವುದು ನನಗೆ ಕಾಣಿಸುತ್ತದೆ. ಆಗ ನನ್ನೊಡಲು ಹೇಗೆ ಬೇಯುತ್ತದೆ ಬಲ್ಲೆಯಾ? ನನ್ನ ಕೋಣೆ ಕೋಣೆಗಳ ತುಂಬ ಆ ಹಾಳು ಸಾಹುಕಾರ, ಅಕ್ಕಿ ಗೋಧಿ ರವೆ— ಹೀಗೆ ಏನೇನೋ ಪದಾರ್ಥಗಳನ್ನು ತುಂಬಿಟ್ಟಿದ್ದಾನೆ. ಇವೆಲ್ಲ ಕಾಳ ಸಂತೆಯ ವ್ಯವ-ಹಾರದಿಂದ ಮಾತ್ರ ಜನಕ್ಕೆ ದೊರೆಯಬಲ್ಲವು. ನೀನು ನಿಂತಿರುವಿ-

೫೫ ವರ್ಷಗಳಿಂದ ಅನುಭವಪಟ್ಟ

ಕಶೀರ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:—

ಗಣೇಶ ರಾಮಚಂದ್ರ ಕಶೀರ ಮತ್ತು ಕಂ.

ಗಿರಗಾಂವ, ಮುಂಬಯಿ. ೪

ಯಲ್ಲ! ಅಲ್ಲೇ ಪಕ್ಕದ ಕೋಣೆಯಲ್ಲಿ ಸಣ್ಣಕ್ಕಿಯ ಚೀಲ ಚೀಲಗಳೇ ಇವೆ. ಇಲಿಗಳು ತೂತು ಕೊರೆದು ಈ ಮಳೆಗಾಲದಲ್ಲಿ ಎರಡು ಚೀಲ ಮುಗಿಸಿಬಿಟ್ಟಿವೆ. ಇದು ಸಾಹುಕಾರನಿಗೆ ತಿಳಿಯದು. ತಿಳಿದರೂ ಅವನೇನು ಆಚ್ಛೇರು ಅಕ್ಕಿಯನ್ನೂ ತನ್ನ ಬೆಲೆಗಿಂತ ಒಂದು ಕಾಸು ಕಡಿಮೆ ಮಾಡಿ ಕೊಡಲಾರ. ಅದಕ್ಕಿಂತ ಈ ರೀತಿ ನಾಶವಾದರೂ ಅವನಿಗೆ ಅಷ್ಟೊಂದು ಅಸಮಾಧಾನವಿಲ್ಲ. ಆದರೆ ನನಗೆ ಮಾತ್ರ ಇದೊಂದು ಚಿತ್ರ ಹಿಂಸೆ. ನನ್ನೊಳಗೆಲ್ಲ ಆಹಾರ ಸಾಮಗ್ರಿಗಳನ್ನು ತುಂಬಿಕೊಂಡಿರುವುದು..... ಅವುಗಳಿಲ್ಲದೆ ಗೋಳಾಡುತ್ತಿರುವವರಿಗೆ ಒಂದು ಕಾಳು ದೊರೆಯುವಂತೆ ಮಾಡಲು ಶಕ್ಯವಿಲ್ಲದಿರುವುದು. ಇದು ನರಕ ಜೀವನವಲ್ಲದೆ ಮತ್ತೇನು....... ಯಾರಾದರೂ ಒಂದು ಕಿಡಿ ಹಾರಿಸಿ ನನ್ನನ್ನು ಭಸ್ಮ ಮಾಡಿದ್ದರೆ ನನಗೆ ಈ ಯಾತನೆಯಿಂದ ಮುಕ್ತಿ ದೊರೆಯುತ್ತಿತ್ತು!" ಒಂದು ದೀರ್ಘವಾದ ನಿಟ್ಟುಸಿರು ಕೇಳಿಸಿತು.

"ಅಲ್ಲ, ನೀನು ಪೇಟೆಯ ನಟ್ಟ ನಡುವೆ ಇದೀಯ. ಅಂಥಾದ್ದರಲ್ಲಿ ಇಲ್ಲಿ ಕಳ್ಳಸಂತೆಗಾಗಿ ಕೂಡಿಟ್ಟಿದಾರೆ ಅನ್ನುತ್ತೀಯ! ಅಧಿಕಾರಿಗಳ ಕಣ್ಣಿಗೆ ಬಿದ್ದರೆ ನಿನ್ನ ಸಾಹುಕಾರನಿಗೆ ಉಳಿಗಾಲವಿದೆಯೇ?" ಎಂದು ಕೇಳಿದೆ.

"ಅಯ್ಯಾ, ಅವರ ಕಥೆ ಏನು ಹೇಳಲಿ? ಅಧಿಕಾರಿಗಳೆನ್ನುತ್ತೀಯಲ್ಲ— ಅವರೂ ಒಂದು ದಿನ ಬಂದರು. ಜವಾನನ ಅಜಾಗ್ರತೆಯಿಂದ ನನ್ನ ಒಂದು ಕಿಟಕಿ ತುಸು ತೆರೆದಿತ್ತು. ಬಂದವರು ಇಣಿಕಿ ನೋಡಿದರು. ಗುಟ್ಟು ಪತ್ತೆ ಹಚ್ಚಿದರು. ಇನ್ನೇನು ಚೀಲಗಳನ್ನೆಲ್ಲ ಸರಕಾರಿ ಡಿಪೋಗೆ ಸಾಗಿಸಿಬಿಡುತ್ತಾರೆ— ಎಂದು ನಾನು ಹಿಗ್ಗಿದೆ. ಆದರೆ ಅವರೇನು ಮಾಡಿದರು ಗೊತ್ತೆ? ಜವಾನನಿಂದ ಹೇಳಿ ಕಳುಹಿಸಿ ಸಾಹುಕಾರನನ್ನು ಇಲ್ಲಿಗೇ ಕರೆಸಿದರು. ಸಾಹುಕಾರನ ಕಾರು ಬಂದಿತು. ಆತ ಉಸಿರು ಬಿಡುತ್ತಾ ಇಳಿದ. ಅಧಿಕಾರಿಗಳನ್ನು ಕಂಡೊಡನೆ ಹಲ್ಲು ಕಿರಿಯುತ್ತ ಮುಂದೆ ಬಂದ. ಐದು ನಿಮಿಷ ಏನೇನೋ ಗುಸ ಗುಸ ಆಡಿಕೊಂಡರು. ಕೊನೆಗೆ ಸಾಹುಕಾರ ಎಲ್ಲರನ್ನೂ ಕಾರಿನಲ್ಲಿ ಹತ್ತಿಸಿಕೊಂಡು ಕರೆದುಕೊಂಡು ಹೋದುದೊಂದೇ ನನಗೆ ಗೊತ್ತು.

"ಬಲು ಸೊಗಸಾಯಿತು" ಎಂದು ನಕ್ಕೆ ನಾನು.

"ನಿನಗೆ ನಗು ಬರುತ್ತದೆ ಕಣಯ್ಯ. ಆ ತಾಯಿ ಮಾತ್ರ ಮರುಗುತ್ತಿದ್ದಾಳೆ."

"ಯಾವ ತಾಯಿ?"

"ಮಾತೆ ಕಸ್ತೂರ್ ಬಾ"

"ಹ್ಞ ಹ್ಞ....ಎಲ್ಲಿದಾರೆ?"

"ಇಲ್ಲೆ ಒಳಗೆ ಅವರ ಪಟವನ್ನು ಅಂದು ತೂಗ ಹಾಕಿದ್ದ ಹಾಗೆಯೇ ಇದೆ. ಧೂಳು ಮುಚ್ಚಿಕೊಂಡಿದೆ. ತಾಯಿಯ ಕಣ್ಣಿನಿಂದ ಒಂದು ತೊಟ್ಟು ಕಣ್ಣೀರು ಉರುಳಿ ರವೆಯ ಚೀಲದ ಮೇಲೆ ಬಿತ್ತು". "ಹೋ.... ನಿನ್ನ ಭ್ರಮೆಯೋ.... ಸೂರಿನಿಂದ ಒಂದು ಹನಿ ಮಳೆ ನೀರು ತೊಟ್ಟಿಕ್ಕಿತೋ ಏನೋ!"—ಎಂದು ನಕ್ಕೆ ನಾನು.

"ನೀನೇನೆಂದರೂ ಅಂದುಕೋ; ನಾನದನ್ನು ಒಪ್ಪಲಾರೆ. ಮಕ್ಕಳು ಕಂಗೆಟ್ಟಿರುವಾಗ ತಾಯಿಯ ಎದೆ ಬೇಯದಿರುತ್ತದೆಯೇ? ಆದರೆ ಬಾಪು ಮಾತ್ರ ಇಲ್ಲಿ ಬಚ್ಚಬಾಯಿ ತೆರೆದು ನಗುತ್ತಲೇ ಇದಾರೆ. ಯಾಕಾಗಿ ನಗುವರೋ! ದೇವರೇ ಬಲ್ಲ. ಮಕ್ಕಳ ಮೂಢತನಕ್ಕಾಗಿರಲೂ ಬಹುದು."

"ಓ, ಹಾಗಾದರೆ ದಂಪತಿಗಳಿಬ್ಬರನ್ನೂ ಸೆರೆಯಲ್ಲಿಟ್ಟಿದಾನೆ ಅನ್ನು ನಿನ್ನ ಕಂಸ."

"ಜಗತ್ತಿನಲ್ಲಿ ಮತ್ತೊಮ್ಮೆ ಕೃಷ್ಣ ಜನನವಾದಾಗಲೇ ಅವರ ಬಿಡುಗಡೆ!" ನನ್ನ ಮಾತಿನ ರೀತಿಯನ್ನನುಸರಿಸಿಯೇ ಉತ್ತರ ಬಂತು.

"ಆಗ ನಿನಗೂ ಬಿಡುಗಡೆ!."

"ನಿಜ ಅನ್ನು. ಆ ಬಿಡುಗಡೆಗಾಗಿ ನಿನ್ನ ಪಾಲಿನ ಪ್ರಯತ್ನವನ್ನ ನಡೆಸು. ಈಗ ಮಳೆಯೂ ಬಿಟ್ಟಿದೆ ಸದ್ಯ. ಕತ್ತಲಾಗುತ್ತಿದೆ. ನೀನಿನ್ನು ಹೊರಡುವುದೊಳ್ಳೆಯದು. ನನ್ನ ಮುಂದೆ ಒಂದು ದೀಪಕ್ಕೂ ಗತಿಯಿಲ್ಲ......."

ಮಾತು ಕೇಳಿಸುತ್ತಿರುವಾಗಲೇ ಮೈ ಕೊರೆಯುವಂತೆ ಚಳಿಗಾಳಿ ಬೀಸಿತು.

ನಾನು ಎಚ್ಚತ್ತಾಗ ಹಾಸಿಗೆಯಲ್ಲಿದ್ದೆ. ಹೊದ್ದಿಕೆಯಿಲ್ಲದೆ ಚಳಿಯಲ್ಲಿ ನಡುಗುತ್ತಿದ್ದೆ. ಬೆಳಗಿನ ಝಾವದ ಶೀತಲ ಗಾಳಿ ಬೀಸುತ್ತಿತ್ತು.

ಮುನ್ನಾ ದಿನ ಅಡ್ಡಾಡಲು ಹೊರಟವನು, ಮಳೆ ಬೀಳತೊಡಗಿದಾಗ ವಸತಿಯಿಲ್ಲದ ಒಂದು ಮನೆಯ ಮುಂದೆ ನಿಂತುದೂ, ಅನಂತರ ಆ ಊರಿನ ಉಪಾಧ್ಯಾಯರೊಬ್ಬರು ನನ್ನಂತೆಯೇ ಜಗುಲಿಗೆ ಬಂದು ಸೇರಿ ಅವರ ಬದುಕಿನ ಕಷ್ಟನಷ್ಟಗಳನ್ನು ಕುರಿತು ನಾಲ್ಕು ಮಾತನಾಡಿದುದೂ, ಅನಂತರ ನನ್ನ ಹೊಸ ಗೆಳೆಯರೊಬ್ಬರೊಡನೆ ಮನೆ ಸೇರಿದುದೂ, ದಾರಿಯಲ್ಲಿ ಆ ಕಟ್ಟಡದ ಕಥೆಯನ್ನು ಅವರು ಹೇಳಿದುದೂ ಜ್ಞಾಪಕಕ್ಕೆ ಬಂದುವು. ಆ ಸಂಜೆ ಕೇಳಿ ತಿಳಿದ ಅನುಭವಗಳೆಲ್ಲ ಕನಸಿನ ಎಳೆಗಳಾಗಿ ಮೂಡಿ ಉಂಟು ಮಾಡಿದ ವಿಚಿತ್ರಚಿತ್ರಗಳನ್ನು ಮತ್ತೊಮ್ಮೆ ಮನದಲ್ಲಿ ತಿರುವಿ ಹಾಕುತ್ತ, ಹಾಗೆಯೆ ಸ್ವಲ್ಪ ಹೊತ್ತು ಮಲಗಿದೆ.

ಮಿತ್ರವಿಂದಾ ಪರಿಣಯ

(ಕನ್ನಡ ನಾಟಕವೊಂದರ ಪರಿಚಯ)

ಶ್ರೀ. ವೆಂಕಟರಾಯಾಚಾರ್ಯ, ಸುರತ್ಕಲ್

★

ಕನ್ನಡದಲ್ಲಿ ಮೊದಲನೆಯ ನಾಟಕವಾಗಿ ಉಲಬ್ಧವಿರುವ 'ಮಿತ್ರವಿಂದಾ-ಗೋವಿಂದ'ದ ಹೆಸರನ್ನು ಮಾತ್ರ ಕೇಳಿದವರು ಹಲವರಿರಬಹುದು; ಆದರೆ ಆದರೊಳಗಿದ್ಧ ಕಥಾವಸ್ತುವೇನಿದೆಯೆಂಬುದನ್ನು ಕಂಡುಕೊಂಡವರು ತೀರ ಕಡಿಮೆ ಜನರು !

★

ಮೈಸೂರರಸರ ಮಂತ್ರಿಯಾಗಿಯೂ, ಹಲವಾರು ಗ್ರಂಥಗಳನ್ನು **ರಚಿಸಿಯೂ** ಪ್ರಸಿದ್ಧನಾದ **ತಿರುಮಲಾರ್ಯನ** ತಮ್ಮನಾದ, ಆತಏವ **ಆತನಿಂದಲೇ** ವಿದ್ಯಾಭ್ಯಾಸವನ್ನು ಪಡೆದ ಸಿಂಗರಾರ್ಯನು ಬರೆದ ಒಂದೇ ಒಂದು ನಾಟಕೆಯು **'ಮಿತ್ರವಿಂದಾ-ಗೋವಿಂದ'**ವು. ಈ ಕವಿಯು ಕ್ರಿ. ಶ. ಹದಿನೇಳನೆಯ ಶತಕದವನು. **ಈ** ಮೊದಲಿನ, **ಪೂರ್ತಿಯಾದ** '**ನಾಟಕ**'ಗಳು ಕರ್ಣಾಟಕ ಭಾಷೆಯಲ್ಲಿ ಈತನಕ **ದೊರೆತಿಲ್ಲವೆನ್ನು**ವರು.

ಈ **ಕೃತಿಗೆ** ಮೂಲವಾಗಿ **ಆದೆಲ್ಲಿಂದ** ಕಥೆಯನ್ನು **ಕೊಂಡಿರಬಹುದೆಂದೂ, ಆವೆರಡರ ವ್ಯತ್ಯಾಸವೇನೆಂದೂ** ಇಲ್ಲಿ ಮೊತ್ತ ಮೊದಲು ತುಸ **ನೋಡುವ**. 'ಭಾಗವತ'ದಲ್ಲಿ ರುಕ್ಮಿಣಿ, ಸತ್ಯಭಾಮೆ, ಕಾಲಿಂದಿಯರ ವಿವಾಹವಾದ ಮೇಲೆ ಹೇಳಿದ ಬರಿಯ ಎರಡು ಪದ್ಯ (ಶ್ಲೋಕ) ಗಳೇ ಇದಕ್ಕೆ ಮೂಲವಸ್ತು. ಕೃಷ್ಣನು ತನ್ನ ಸೋದರತ್ತೆಯಾದ ರಾಜಾಧಿದೇವಿಯ ಮಗಳು ಮಿತ್ರವಿಂದೆಯನ್ನು, **ಅವಳ ಅಣ್ಣಂದಿರು ವಿಂದಾನುವಿಂದರು** (ಭಾರತ ಯುದ್ಧದಲ್ಲಿ ದುರ್ಯೋಧನನ ಕಡೆಗೆ ಸೇರಿದ್ದರು) **ಕೃಷ್ಣನಿಗೆ ಕೊಡಲೊಪ್ಪದಿರಲು**, ಎಲ್ಲಾ ಅರಸರು **ನೋಡುತ್ತಿ**ರುವಾಗ (ಸ್ವಯಂವರಕ್ಕಾಗಿ, ಅಥವಾ ವಿಂದರ ಕೆಳೆಯ ದುರ್ಯೋಧನನಿಗೋ—ಇನ್ನಾರಿಗೋ—ಮದುವೆಗಾಗಿ ನೆರೆದವರಿರಬೇಕು) ಬಲಾತ್ಕರಿಸಿಕೊಂಡು ತಂದು ಮದುವೆಯಾದನು.

ಹೀಗೆ ಕೃಷ್ಣನು ತನ್ನ ಎಂಟುಮಂದಿ ಪಟ್ಟದ ರಾಣಿಯರನ್ನು ತಾನೇ ಹೋಗಿ ಪಡೆದನೆಂದು ಹೇಳಿದೆ. ಹಾಗಲ್ಲದೆ ಮಂತ್ರಿಗಳಾಗಲಿ ಇತರರಾಗಲೀ **ಯತ್ನಿ**ಸಿ, ತತ್ಫಲವಾಗಿ ದೊರೆತ ಕನ್ನೆಯರನ್ನು ಮದುವೆಯಾದನೆಂದಿಲ್ಲ. ಎಂದರೆ ಕೃಷ್ಣನು ಬರಿಯ ಹೆಣ್ಣಾಳಿಯಲ್ಲ. **ತಾನೇ** ಗೆದ್ದು ತಂದ ಹೆಣ್ಣುಗಳನ್ನು ವರಸಿದನೆಂದು **ವರ್ಣಿಸುವುದರಿಂದ**, ಆತನ ವೀರಾಗ್ರೇಸರತೆ—ಧೀರೋದಾತ್ತತೆಯನ್ನು ಚಿತ್ರಿಸುವ ಸೂಚನೆ ಇದರಲ್ಲಿದೆಯೆನ್ನಬಹುದು

ಈ ಕವಿಯು ಆ ಬಲಂಕರಣವನ್ನು ಗುಟ್ಟಾಗಿ ಒಯ್ಯುವಂತೆ ಮಾರ್ಪಡಿಸಿ, ಆ ಕೆಲಸವೂ **ಮಂತ್ರಿಯಿಂದಲೇ** ಆದಂತೆ **ವರ್ಣಿಸುವನು**. ಇದು ಮೂಲವಸ್ತುವಿನಿಂದ ಕೇವಲ ವಿಪರೀತವಾದರೂ, **ಬೇರೆ** ಕೆಲವು ಪೌರಾಣಿಕ ಕಥೆಗಳಂತೆ ಇದೆ. ತಾನು (ರಾಜನು) **ಸುಮ್ಮನಿದ್ದು**, ಆಗುಹೋಗುಗಳಂತೆ ತನ್ನ ಮದುವೆಗೂ **ಮಂತ್ರಿಯ ಕೈವಾಡದ** ಚಳಕನೇ ಮೆಯ್ಗೊಟ್ಟು, ಫಲಿಸುವಂತಾದಾಗಲೇ ಆ ನಾಯಕನಿಗೆ ಗೊತ್ತಾಗುವುದು. ಭೀಷ್ಮರು ವಿಚಿತ್ರವೀರ್ಯನಿಗೂ, ಕರ್ಣನು ದುರ್ಯೋಧನನಿಗೂ, ತಾವು ಗೆದ್ದು ಮಾಡಿಸಿದ ಮದುವೆಯ ಕಥೆಗಳಿವೆ ; ಎಂದರೆ, ರಾಜನೀತಿಯಲ್ಲಿದು 'ಸಚಿವಾಯತ್ತಸಿದ್ಧಿ'-ಯೆಂಬರು ! (ಆದರೆ ಇದು ರಾಜ್ಯಭರಣಕ್ಕೆ ಮಾತ್ರವಲ್ಲದೆ, ವಿವಾಹಾದಿಗೆ ಪೂರ್ಣವಾಗಿ ಅನ್ವಯಿಸುವುದಿಲ್ಲ.)

ಇದರೊಂದಿಗೆ ಹೇಳಿದ 'ಸಾಲ್ವವಧೆ'ಯು ಮೂಲದಲ್ಲಿ ಬೇರೆ **ತೆರವಿದೆ** : ಕೃಷ್ಣನು ದ್ವಾರಕೆಯಲ್ಲಿಲ್ಲದ (ಇಂದ್ರಪ್ರಸ್ಥಕ್ಕೆ **ಹೋಗಿದ್ದನು**) ಹೊತ್ತು ತಿಳಿದು, ಸಾಲ್ವನು ದ್ವಾರಕೆಗೆ ಮುತ್ತಿಗೆಯಿಕ್ಕಲು, ಅತ್ತ ಶ್ರೀಕೃಷ್ಣನು ಆದೇನೋ ಹಲವು ಆಪಶಕುನಗಳನ್ನು ಕಂಡು 'ದ್ವಾರಕೆಗೆ ಭಯವೊದಗಿದೆ' ಎಂದು, ಒಡನೆ ಅಲ್ಲಿಗೆ ಬಂದು, ಆ ಸಾಲ್ವನೊಡನೆ ಹೋರಾಡಿ, ತಾನೇ ಆತನನ್ನು ಕೊಂದನು.

ಈ ನಾಟಕೆಯಲ್ಲಿ—ವಿಂಧ್ಯದ ತಪ್ಪಲ ಸೌಭಪುರಕ್ಕೆ ಪ್ರದ್ಯುಮ್ನನು ಹೋಗಿ ಸಾಲ್ವನನ್ನು ಕೊಂದು ಬರುವುದು. ಇದರಿಂದ, ಒಂದೆಡೆಗೆ ಕೃಷ್ಣನ ಲೋಲುಪತೆಯನ್ನೂ, ಇನ್ನೊಂದೆಡೆಗೆ ಹಾಗೆ ಸಲ್ಲದಿದ್ದರೂ (ಕೃಷ್ಣನಿಂದಲೇ ಆತನ ಸಾವೆಂದು ಪರವಿದೆ!) ಕೃತಿಸುವ ಅನಾಧಾರತೆಯೂ ಕಾಣಬರುವುದು. ಅಥವಾ ಇದನ್ನು ಸರಿಗೊಳಿಸುವುದಕ್ಕಾಗಿ, 'ಆತ್ಮಾ ವೈ ಪುತ್ರನಾಮಾಸಿ' ಎಂಬಂತೆ ಆ ರಾಜಪುತ್ರ ಪ್ರದ್ಯುಮ್ನನು ಆತನನ್ನು ಕೊಂದನೆಂಬುದುಂಟು. (ಈ ನಾಟಕೆಯ ಈ ಎರಡು ಮಾರ್ಪಾಡಿನ ಆಧಾರಗಳನ್ನು ಬೇರೆಡೆಗೆ ಹುಡುಕಬೇಕು.)

ಅಥವಾ ಹೀಗೆಲ್ಲಾ ಇದನ್ನು ಕಪಯಿಸಲು, 'ಹರ್ಷನ ರತ್ನಾವಳಿ' ನಾಟಕೆಯನ್ನು ಹೆಜ್ಜೆಯಿಟ್ಟು ಅನುಸರಿಸಿರಬೇಕೆಂಬುದೂ ಸುಳ್ಳಲ್ಲ. ಆ ಕಥಾನಕವನ್ನೇ ನೆನಹುಗೊಂಡು, 'ಬರಿಯೊಂದು ಸಾಲಿನ ಮೂಲವನ್ನು ಮಿರುಗಿಸಿ ನೂರಾರು ಪುಟವಷ್ಟು ಬೆಳೆಸುವ ವರ್ಣಕಗಳಂತೆ' ಇದೂ ಕೃತಿಸಿದ್ದೆಂದೆಣಿಸಿ ಇದನ್ನು ಪರಿಶೀಲಿಸಬರುವುದು. ಇವೆರಡರ ಕಥಾನಿರೂಪಣ ಕ್ರಮವು ಪ್ರಾಯಶಃ ಒಂದೇ ತೆರವಿದೆ. ಮಾತ್ರವಲ್ಲ, ಬರಿಯ ಹೆಸರುಗಳನ್ನು ಹಗರಿಸಿದರೆ ಸಾಕು; ಇವೆರಡೂ ಒಂದೇ ಹೊತ್ತಗೆಯ ಎರಡು ಪಡಿಯಚ್ಚುಗಳಂತಿವೆ. ಅಂತಹ ಗೆಯ್ಮೆ, ಏಕರೂಪತೆ, ಸಮಾನತೆಗಳಿವೆ.!

ಆ 'ರತ್ನಾವಳಿ'ಯಾದರೋ ಕರ್ತೃವಿಚಾರದಂತೆ ಮೌಲಿಕ ವಿಷಯದಲ್ಲೂ ಚರ್ಚಾಸ್ಪದವಿದೆ (ಶ್ರೀ. ಎ. ಆರ್. ಕೃಷ್ಣಶಾಸ್ತ್ರಿ-

ಹೊವರೆ (ಸಂಸ್ಕೃತನಾಟಕ ನೋಡಿರಿ)ಯಾದರೆ, ಇಲ್ಲಿಗದು ಅಪ್ರಸ್ತುತವೆಂದು ಬಿಟ್ಟು, ಅವೆರಡರ ಕೆಲವೊಂದು ಭೇದದ, ವೈಚಿತ್ರ್ಯವನ್ನು ನಿರೀಕ್ಷಿಸುವ. ಅದಕ್ಕಾಗಿ ಮೊದಲು 'ಮಿತ್ರವಿಂದಾ ಗೋವಿಂದ'ದ ಸಾರ ಒರೆವೆವು;

ಮೊದಲ ಪರಿವಿಡಿಯನ್ನು ಉದ್ಧವನು ಹೇಳುವನು: ಅವಂತಿಯರಸುಗುವರಿಯು ಪುರುಷೋತ್ತಮನೇ (ಕೃಷ್ಣ) ಮದುವೆಯಾಗುವಷ್ಟು ಲಕ್ಷಣವತಿಯೆಂದು ಬ್ರಾಹ್ಮಣನೊಬ್ಬನು ಹೇಳುವನು. ಅಂತೆ ಅವಳನ್ನು ತನ್ನ ರಾಜನಿಗೆ ಕೊಡಲು ಹೇಳಿಸುವನು. ವಿಂದರು (ಅಣ್ಣಂದಿರು) ಒಪ್ಪದಿದ್ದರೂ (ತಾಯ್ತಂದೆಯರೊಪ್ಪಿದ್ದರು!) ಅವಳನ್ನು ಹಡಗದಿಂದ ದ್ವಾರಕೆಗೆ ತರುವ ಏರ್ಪಾಡು. ನಡುಕಡಲಲ್ಲಿ ರತ್ನದ್ವೀಪದ ಬಳಿ ಹಡಗು ಒಡೆದುದು. ಆ ಕಡೆಯ ಮಂತ್ರಿ, ಈ ಕಡೆಯ ದೂತರು ಒಂದೆಡೆಗೂ ಮಿತ್ರೆಯೊಂದೆಡೆಗೂ ದಡಸೇರುವರು. ಮಿತ್ರೆಯನ್ನು ವ್ಯಾಪಾರಿಯೊಬ್ಬನು ಆತು ತಂದು, ಉದ್ಧವನಿಗೆ (ತನಗೆ) ಒಪ್ಪಿಸಲು, ರುಕ್ಮಿಣಿಗೆ ಸಾಕಗೊಡುವನು ಅವಳನ್ನು 'ಸಾರಸ್ವತಿ'ಯೆಂದು ಕರೆವರು. ಅತ್ತ, ಆ ಮಂತ್ರಿ ದೂತರು ಬರುತ್ತಾ 'ಸಾಲ್ವನಲ್ಲಿ ಕಪನಕ್ಕೋಸ್ಕರ ಮಿಥ್ಯವೆತ್ತ ಹೋಗುವ' ಪ್ರದ್ಯುಮ್ನನಲ್ಲಿ ಸೇರುವರು— ಇದಿಷ್ಟು ಕಥೆಯ ಪಾತ್ರ (ನಾಯಕಿ) ಪರಿಚಯವಾಯಿತು.

ಕಥಾರಂಭದಲ್ಲಿ, ಕೃಷ್ಣನು ವಿದೂಷಕನೊಂದಿಗೆ ವಸಂತೋತ್ಸವಕ್ಕೆ ರುಕ್ಮಿಣಿಯಿಂದ ಕರೆಯಿಸಲ್ಪಟ್ಟು ಹೋಗುವನು. ಅವನನ್ನು ರುಕ್ಮಿಣಿಯು ಪೂಜಿಸುವ ವೇಳೆ, ಮರೆಯಲ್ಲಿದ್ದ ಮಿತ್ರೆಯು 'ಈ ಕೃಷ್ಣನನ್ನು ತಾನೂ ಹೀಗೆ ಪೂಜಿಸೇನು' ಎಂದು ಮೋಹದಿಂದೆಣಿಸಿ, ಅವನನ್ನು ಚಿತ್ರಿಸುವಳು. ಅವಳ ಗೆಳತಿಯು ಅವರಲ್ಲೇ ಮಿತ್ರೆಯ ಚಿತ್ರವನ್ನು ಬರೆಯುವಳು. ಅಷ್ಟರಲ್ಲಿ, 'ತನ್ನ ಸಾಕುಗಿಳಿಯು ಕೋತಿಯ ಉಪದ್ರವದಿಂದ ಹಾರಿತೆಂಬ ಗಲಭೆಗೆ ಹೌಹಾರಿ ಹೋಗುತ್ತಾ' ಸಾರಸ್ವತಿಯು ಬಿಟ್ಟ ಆ ಚಿತ್ರವನ್ನು ಕೃಷ್ಣನೊಮ್ಮೆ ಕಂಡು, ಮೋಹಿತನಾಗುವನು.

ಅದನ್ನು ಕೊಳ್ಳಲು ತಿರುಗಿ ಬಂದ ಸಾರಸ್ವತಿಯನ್ನು ಕಣ್ಣಾರೆ ನೋಡಿ, ಮಾತನಾಡಿಸಿಯೂ ಆಯ್ತು. ಆಗಲೇ ರುಕ್ಮಿಣಿಯು ಬರುತ್ತಾ (ಸಾರಸ್ವತಿ ಅಡಗಿದಳು) ಆ ಚಿತ್ರವನ್ನು ವಿದೂಷಕನು ಕೊಂಡು ಮರೆಯಿಸಿದರೂ ಕೆಳಬಿದ್ದಾಗ—ನೋಡಿ ಕೋಪನೆಯಾಗುವುದು.

ಇನ್ನೊಮ್ಮೆ ಮಿತ್ರೆಗೆ ರುಕ್ಮಿಣಿಯ ವೇಷವಾಗಿ ಕೃಷ್ಣನೊಂದಿಗೆ ಕೂಡಿಸುವ ಆಣಿಯು ತಿಳಿದುದರಿಂದ, ಆ ಸಂಕೇತಸ್ಥಲಕ್ಕೆ ರುಕ್ಮಿಣಿಯೇ ಬರುವಳು. ಅವಳನ್ನು ಮಿತ್ರೆಯೆಂದರಿತು ಕೃಷ್ಣನ ಚೇಷ್ಟಾದಿಗಳು; ಹತ್ತಿ ಹೋದಾಗ ನಿಜದರಿವಾಗಿ ಕ್ಷಮಾಯಾಚನೆ ಮಾಡಿದರೂ ಕೋಪದಿಂ ಹೋಗುವಳು. (ಸಾರಸ್ವತಿಗೆ ಬೆದರಿಸುವಳು)

ಹಾಗೆ ವೇಷತಾಳಿದ ಸಾರಸ್ವತಿಯು ಆ ಸವಿಾಪದಲ್ಲಿ ನೇಣಿಂದ ಸಾಯಲು ಉಪಕ್ರಮಿಸಲು, ಅವಳನ್ನು ರುಕ್ಮಿಣಿಯೆಂದೇ ಬಗೆದು ಕೃಷ್ಣನು ಸಮಾಧಾನಿಸುತ್ತಾ ಸವಿಾಪಿಸಿ ನಿಜವರಿತು ಮಾತನಾಡುವನು. ಅಲ್ಲಿಗೆ ರುಕ್ಮಿಣಿ ಬಂದು, ಆ ಪ್ರೇಮದ ಪ್ರಕಟವಾಯಿತು. ಆ ಸಾರಸ್ವತಿ, ವಿದೂಷಕರನ್ನು ಸೆರೆಯಿಡುವಳು ರುಕ್ಮಿಣಿಯು. ಆ ವಿದೂಷಕನನ್ನು ಬೇಗ ಬಿಡಲಾಯ್ತು, ಸಾರಸ್ವತಿಯನ್ನು ಕುಂಡಿನಕ್ಕೆ ಕಳುಹಿದೆಯೆಂಬ ಹುಸಿ ಸುದ್ದಿಯನ್ನು ರುಕ್ಮಿಣಿಯು ಹರಡಿಸಿದ್ದಳು.

'ಮಿತ್ರೆಯು ತನಗೆ ಕೊಟ್ಟ ರತ್ನಹಾರದಿಂದ' ವಿದೂಷಕನು ರಾಜನನ್ನು ಸಂತೈಸುವನು. ಒಬ್ಬ ಐಂದ್ರಜಾಲಿಕನು ಆಡುವ ಆಟವನ್ನು ನೋಡಲು, ರಾಜನಲ್ಲಿಗೆ ರುಕ್ಮಿಣಿಯು ಬರುವಳು. ಇತ್ತಣ ಪ್ರದ್ಯುಮ್ನಾದಿಯರು ಬಂದರೆಂದು 'ಮಾಯಗಾರ' ನನ್ನು ಕಳುಹುವುದು. ಅವರೆಲ್ಲಾ ಕುಶಲವಾರ್ತೆಯಾಡುತ್ತಿರುವಾಗಲೇ 'ಅರಮನೆಗೆ ಆಕಸ್ಮಿಕ (ಕೃತಕವೆಂದು ಕೊನೆಗೆ ತಿಳಿವುದು) ಅಗ್ನಿದಾಹ' ವಾಗುವುದು. ಆಗ ರುಕ್ಮಿಣಿಯು ಹೆದರಿ, ತಾನು ಸೆರೆಯಿಟ್ಟ ಸಾರಸ್ವತಿಯನ್ನು ಬಿಡಿಸುವಂತೆ ಕೃಷ್ಣನಿಗೆ ಬಿನ್ನವಿಸುವಳು. ಕೃಷ್ಣಾದಿಗಳು ಅರಮನೆಗೆ ಪ್ರವೇಶಿಸಲು, ಅಗ್ನಿಯು ತನ್ನಿಂ ತಾನೇ ಮಾಯವಾಗುವುದು.

ಒಟ್ಟಿಗಿದ್ದ ಅವಂತಿಯ ಮಂತ್ರಿಯು 'ಸಾರಸ್ವತಿಯೇ ಮಿತ್ರೆ' ಎಂದು ಗುರುತುಹಚ್ಚಲು, ಅಲ್ಲಿಗೆ ಉದ್ಧವನು ಬಂದು ಶಾಸ್ತ್ರವಿಹಿತಸಮಾಚಾರವನ್ನು ತಿಳಿಸುವನು. ಇದನ್ನರಿತ ರುಕ್ಮಿಣಿಯೇ 'ಮಿತ್ರವಿಂದಾ-ಗೋವಿಂದ'ರ ವಿವಾಹವನ್ನು ಮಾಡಿಸುವಳು.

ಇಲ್ಲಿ ನಾಯಿಕೆ ಯಾರು?: ಪಟ್ಟದ ರಾಣಿಯಿದ್ದು ಅವಳ ಸ್ವಭಾವ ಚಿತ್ರಣವೂ ಒತ್ತೊತ್ತಿಗೆ ಹಾಸುಹೊಕ್ಕಾಗಿ ಬರುವುದರಿಂದ, ಅವಳೇ ಪ್ರಾಧಾನ್ಯೆಯೆಂಬೆಣಿಕೆಗೆ ಎಡೆಯಿದೆ. ಆದರೆ, ಈ ತೆರದ ರೂಪಕವು ರಸಾವಿರ್ಭಾವದೊಂದಿಗೆ ನಾಯಕನ ಹಂತವನ್ನು ನಿರೂಪಿಸಲು ಬೇಕಾದುದರಿಂದ, ಕವಿಯು ನಾಟಕೆಯ ಹೆಸರಿನವಳೇ ನಾಯಿಕೆಯನ್ನು ನಿಶ್ಚಯಿಸಿ ಹೇಳಿದಂತೆ 'ಮಿತ್ರವಿಂದೆ' ಯೆಂದೇ ತಿಳಿವುದು ಸರಿಯಾದುದು.

ಹೊಟ್ಟೆಯ ವಿಕಾರವೇ? ಅಶಕ್ತತೆಯೇ? ಮರುಗಬೇಡಿ! ಶ್ರೀ ಶಿವಾನಂದ ಸ್ವಾಮಿಗಳ ಅನುಭವಪೂರ್ಣ
ವ್ಯಾಯಾಮ, ಆಸನ ಮೊದಲಾದ ಹಲವಾರು ಚಿಕಿತ್ಸೆಗಳಿಂದ ದೀರ್ಘಾಯುಷಿಗಳಾಗಿರಿ!!

ಉದರದ ಆರೋಗ್ಯ ಮತ್ತು ಸ್ನಾಯುಬಲ ಸಂವರ್ಧನ

೧೫೦ ಚಿತ್ರಗಳುಳ್ಳ ಪುಸ್ತಕ. ಅಂಚೆವೆಚ್ಚ ಸೇರಿ ಬೆಲೆ: ರೂ. ೨—೬—೦

ಬ್ರಹ್ಮಚರ್ಯವೇ ಜೀವನ ಅರ್ಥಾತ್ ವೀರ್ಯನಾಶವೇ ಮೃತ್ಯು!

ವೀರ್ಯರಕ್ಷಣೆಯ ರಾಮಬಾಣ ಉಪಾಯಗಳು! ೨೫೦ ಪುಟ! ಅಂಚೆವೆಚ್ಚ ಸೇರಿ ರೂ. ೧—೮—೦

ಸಮಾಜ ಪುಸ್ತಕಾಲಯ, ಸುಭಾಷ ಬೀದಿ, ಧಾರವಾಡ

ನ್ನು ಔಚಿತ್ಯಗಳೇನು ?: ಆ ' ರತ್ನೆ 'ಯನ್ನು ಮದುವೆ ಗುವವನು ಚಕ್ರವರ್ತಿಯಾಗುವನೆಂಬುದಕ್ಕಿಂತ, ಈ ' ಮಿತ್ರೆ ' ನ್ನು ಪುರುಷೋತ್ತಮನೇ ಪಡೆಯತಕ್ಕವನೆಂಬುದು ನಾಯಕನ ತ್ರೆಯು ಸೂಚಿಯನ್ನಬಹುದು.

ತ್ನಳ ತಂದೆಯು ತನ್ನ ಸೊಸೆಯ(ವಾಸವದತ್ತೆ)ಲ್ಲಿ ಪ್ರೀತಿ ದ, ಆವಳಿಗೆ ತನ್ನ ಮಗಳು ಸವತಿಯಾಗಿ ಕಿಂಕೃತಿಯಾಗುವು ನು ಕೊಡಲೊಪ್ಪನು. ಮಿತ್ರೆಯ ತಂದೆಯಾದರೋ ಹಕ್ಕಿ ನಾದ (ಸೋದರಳಿಯ) ಕೃಷ್ಣನಿಗೇನೇ ಕೊಡಲೊಪ್ಪುವನು ; ರು (ಅಣ್ಣಂದಿರು) ಮಾತ್ರ ಒಪ್ಪರು ! ಇದು ' ತೆಂಕ ' ನ ಕಟ್ಟಳೆಯನ್ನು ಅಳವಡಿಸಿದೆಯೋ ?

ವಾಸವದತ್ತೆಯು ಆಕಸ್ಮಿಕ ಸುಟ್ಟುಹೋದಳೆಂ'ಬ ಸುದ್ದಿ ದಾಗ ಮನವೊಪ್ಪಿದ್ದು, ' ರತ್ನ 'ಳನ್ನು ಸಂಗಾತಿಗಳೊಂದಿಗೆ ಯೇ ಕಳುಹುವನು. ಇಲ್ಲಿಯಾದರೋ, ಅಲ್ಲಿಂದಲ್ಲೇ ತ್ರೆಯ ಕೈವಾಡವು ಸುರುವಾಗುವುದು : ಉದ್ಧವನು ಅವ ಸ್ಸಿಗೆಯಿಂದ ತರಿಸುವ ಗೆಯ್ಮೆಗೆ ಕೈಹಚ್ಚುವನು. ಹಾಗೂ ಯಕಿಯತ್ತಣವ'ರ ಅಡ್ಡಿಯೂ ತುಸನೆಂದೇ (ಗಣನೀಯ) ಹೇಳಬರುವುದು. ' ಸವತಿತನ 'ದ ಹೊಳಪು ಅದೆಷ್ಟೂ ತೋರುವುದಿಲ್ಲ ! ಪರಂತು ' ರಾಜನಿಗೆ ಬಹುಮಂದಿ ರಾಣಿ ರಬಹುದೆಂ'ಬ ಪ್ರಾಚೀನ (ಅರ್ವಾಚೀನವೂ ಇದೆ !) ಯೂ ತೋರ್ಪಡುವುದು.

ಹಡಗೊಡೆದು ' ರತ್ನೆ 'ಯು ದಡಸೇರಿದಾಗ, ಮಂತ್ರಿಗೆ ಸಿದವನು ಕೌಶಾಂಬಿಗೆ (ವತ್ಸದೇಶ) ಹೋಗುವ ಜೇರ ನು. ಇಲ್ಲಿಯಾದರೋ ದ್ವಾರಕೆಯವನೇ ಆದ ವ್ಯಾಪಾರಿಯು ! ದರೆ, ದ್ವಾರಕೆಯವರೆಲ್ಲರಿಗೂ ಬೇಕೆನಿಸಿದ್ದೆಂದು ಅನ್ನಿಸು ತಿದೆ.

ಆವಳ ಜತೆಗಾರರು ಅನುಕ್ರಮವಾಗಿ ನಾಯಕನ ಮಂತ್ರಿ, ರೊಂದಿಗೆ ಆ ಕದನದತ್ತಲೇ ಹೋಗುವುದು, ತಮ್ಮ ಕೆಲಸ ನಾಯಿಕೆಯ ಗೊತ್ತು, ಕಾಪು ಇ.) ಗಳತ್ತ ಮರೆತಂತೇ ರುವುದಷ್ಟೆ ! ಪರಂತು, ಹಿಂಬಂದ ಅವರೇ ' ಕಥಾನಾಯ ಯು ಅರಸುಗುವರಿ 'ಯೆಂದು ಮೊದಲಾಗಿ ಹೇಳುವ ಸಾಕ್ಷಿಕ ಗುವರು ; ಈ ತೆರದ ನಿರೂಪಣವೇಕೆ ? ಅವರು ದಡಸೇರಿ, ನ್ಯದೊಂದಿಗೆ ಕದನಕ್ಕೆ ಹೋಗಿ ಬರುವಷ್ಟು ದಿನಗಳ ಅವಕಾಶ ದಗಿ, ಅಷ್ಟು ಕಾಲವು ಇತ್ತಣ ಪ್ರೇಮದ ಬೆಳಗೆ ಹಾಗೂ ವ್ಯದ ರಸವಂತಿಕೆಗೆ ಎಡೆಯನ್ನುಂಟು ಮಾಡುವುದೇನೋ ? ದರೆ, ಅವರಿಬ್ಬರು ನಾಯಕಿಯ ತಂದೆಯಲ್ಲಿಗೆ ಹೋಗಿ, ಆ ಜಪುತ್ರಿಯನ್ನು ಅರಸುತ್ತಿದ್ದರೂ, ಇಷ್ಟು ದಿನಗಳ ಅವಕಾಶ ಗುತ್ತಿತ್ತೆನ್ನಬಹುದು.

ಅಥವಾ ನಾಯಿಕೆಯು ನಾಯಕನ ಅರಮನೆಯಲ್ಲೇ ಇರುವ ದು ಆ ಸೈನ್ಯವನ್ನು ಸೇರುತ್ತಲೇ ತಿಳಿದಿರಲೂ ಬಹುದು. ಹಾಗೂ ಆ ರಾಜಾದಿಗಳ ಶೋಕಾದಿಗಳು ಅನಾವಶ್ಯಕವಾಗಿ ತೋರ್ಪಡಿಸಲಾಗದೆಂಬಂತೆ ಈ ತೆರದಲ್ಲಿ ಸಂವಿಧಾನವನ್ನು ಕಲ್ಪಿಸಿದುದು ತಪ್ಪೆನ್ನಲಾಗುವುದಿಲ್ಲ!

ಕೃಷ್ಣನ ನರ್ಮಸಚಿವ (ವಿದೂಷಕ) ನ ಹೆಸರು ಕುಚೇಲ ! ಆ ಪಾತ್ರಕ್ಕೆ ತಕ್ಕುದೆನಿಸುವುದಿಲ್ಲ. ಅರಸನೊಂದಿಗಿರುವ ವೇಷಕ್ಕೆ ಸರಿಯಾಗಿಲ್ಲವೆಂದೂ ಖಂಡಿತವಾಗಿ ಹೇಳಬಹುದು. ಬೇರೆ ನಾಟಕಗಳಂತೆ ಇಲ್ಲೂ ಬೇರೆ ಹೆಸರೇ ಒಪ್ಪುವುದಿದೆ (ವಸಂತಕ, ಮಾಣವಕ, ನಂದಕ) ಯೆನ್ನಬಹುದು !

ಅಲ್ಲಿಯಾ ' ರತ್ನೆ 'ಯನ್ನು ಕಂಡು ನಾಯಕನೇ ಮೋದಲು ಕಾತರ (ಮೋಹಿತ) ನೆಂದುದು! ಇಲ್ಲಿಯ ನಾಯಕಿಯೇ ಹಾಗೆಳಸಿದಂತೆ ನಿರೂಪಿಸಿದ್ದುದು ಈ ನಾಯಕನ ಮೇಲ್ಮೆಗೆ ಒಡಮೂಡಿದಂತಿದೆ !

ಹಾಗೆ ಪರವಶೆಯಾದ ನಾಯಕಿಯು ರಾಜನನ್ನು ಚಿತ್ರಿಸುತ್ತಿರುವಾಗ, ಒಮ್ಮಿಂದೊಮ್ಮೆಗೆ ಕೋತಿ ಹೊಕ್ಕಿದ ಗೂಡಿಂದ ತನ್ನ ಸಾಕುಗಿಳಿಯು ಹಾರಿಹೋಯಿತೆಂದು ಹುಡುಕಹೋಗುವುದೇಕೆ ? ಆ ಗಲಭೆಯು ಉದ್ಯಾನಕ್ಕಿಂತ ಮೊದಲಾಗಿ ಅನ್ಯರಿಗೆ (ಅಂತಃಪುರದವರಿಗೆ) ಕೇಳಿಸದೇ ? ಬೇರಾರೂ ಆ ಗಿಳಿಯನ್ನು ಹಿಡಿಯಲಾಗದೇ ? ಎಂದರೆ, ಆ ಚಿತ್ರವನ್ನು ಬಿಟ್ಟುಹೋಗುವಂತಹ ಅವಸರದ (ಅದು ರಾಜನಿಗೆ ದೊರೆತು, ಆತನೂ ಇಂತೆಯೇ ಮೋಹಿಸಬೇಕಷ್ಟೆ !) ವಿವಾಸಕ್ಕೆಡೆಯನ್ನು ಮಾತ್ರ ಕಲ್ಪಿಸಿಸ್ಸೆನ್ನಬರುವುದು. ಅಥವಾ ಕೋತಿಯ ಸಂಗತಿಯಿಲ್ಲದೇನೇ, ರಾಜನೇ ಅಲ್ಲಿಗೆ ಬಂದನೆಂಬ ಕಳಕಳಿಯಿಂದ, ಹೋಗಬರುವಂತೆ ಕೃತಿಸಲೂ ಬಹುದು, ಪರಂತು ' ರತ್ನಾವಳಿ ' ಇತ್ಯಾದಿ ಹಲವೆಡೆಗಳಲ್ಲೇ ವಿವಾಸಕ್ಕೆ ಏನಾದರೊಂದು ಪ್ರಾಣಿಕೂಟದ ಸಂಪರ್ಕವಿದ್ದೇ ಇದೆ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂಪಾದಕರು : ಶ್ರೀ. ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.)

ಒಂದು ವರುಷದಲ್ಲಿ ಸುಂದರ ನಾಲ್ಕು ಪುಸ್ತಕಗಳು :

ಚಂದಾ ರೂ. ೫-೪-೦ (ಅಂಚೆವೆಚ್ಚ ಸಹಿತ)

ಈಗಾಗಲೇ ಮಾರಾಟಕ್ಕೆ ಸಿದ್ಧವಾದ ಪುಸ್ತಕಗಳು :—

"ಅರ್ಪಣ" ಮೋಪಾಸಾನ ಕತೆಗಳು (ಪಿ. ವೆಂಕೋಬಾಚಾರ್ಯ) ರೂ. ೧—೮—೦

"ಹೂ ಅರಳಿತು" ತೆಲುಗು ಕತೆಗಳು ,, ,, ೨—೪—೦

ಈ ವರುಷ ಬರಲಿರುವ ಮುಂದಿನ ಎರಡು ಪುಸ್ತಕಗಳು

"ಮನೋರಾಜ್ಯ" ಪ್ರೊ. ರಂ. ಶ್ರೀ. ಮುಗಳಿ ಇವರ ನಾಟಕ

"ಪರಿಣಯ" ಶ್ರೀಮತಿ ಜಯಲಕ್ಷ್ಮೀ ಶ್ರೀನಿವಾಸನ್ ಇವರ ಎರಡು ಚಿಕ್ಕ ಕಾದಂಬರಿಗಳು :

ಏಜಂಟರಿಗೆ, ಮಾರಾಟಗಾರರಿಗೆ ಹೆಚ್ಚಿನ ಸವಲತ್ತುಗಳು : ಬೇಗ ಚಂದಾದಾರರಾಗಿರಿ : ವಿವರಗಳಿಗೆ ಬರೆಯಿರಿ.

ಆನಂದ ಗ್ರಂಥಮಾಲಾ
ಗವಳಿಗಲ್ಲಿ ಹುಬ್ಬಳ್ಳಿ,

ವ್ಯವಸ್ಥಾಪಕರು.
ಪಿ. ವಿ. ಆಚಾರ್ಯ ಕಂ.

ಆ 'ಥಾಟ'ಗನುಸಾರವಿಲ್ಲೂ ಇದೆ! ಅಂತೂ, ಆ ಕೋತಿಯು ನಾಯಕನ-ನಾಯಕಿಯ ಅಪಾರ ಪ್ರೇಮಸಾಗರಕ್ಕೆ ಸೇತುವೆ-ಯಂತಿದೆ (ಸಂಸ್ಕೃತ ನಾಟಕ) ಯೆಂದರೆ, ಸರಿಹೊಂದಿಕೆಯಾಗಿದೆ. ಸೇತುವೆಯಂತೆ ಈಗಲೀಗ ಅಡ್ಡವಾದರೂ, ಮುಂದೆಗೆ ಉತ್ತಾರಕದ ಫಲವನ್ನೊದಗಿಸುವುದಷ್ಟೆ!

ಇನ್ನೊಂದೆಡೆ, ಪಟ್ಟದ ರಾಣಿಯು ತನ್ನ ವೇಷದಿಂದ ಬಂದ **ಅವಳನ್ನು**— ನಾಯಕಿಯನ್ನು— ನಾಯಕನು ಸಮೀಪಿಸುವುದನ್ನು **ಕಂಡು** ಕುದಿಗೊಂಡು, ಆ ವಿದೂಷಕನನ್ನೂ, ಕಥಾನಾಯಕಿ-ಯನ್ನೂ ಸೆರೆಯಿಡುವಳು. ಆ ವಿದೂಷಕನಿಗೆ ಮಾತ್ರ ಬೇಗದಲ್ಲಿ **ಬಿಡು**ವಾಗುವುದೇಕೆ? ಅವನು ರಾಜನ ಗೆಳೆಯ; ರಾಜನನ್ನು ಸಂತೈಸಬೇಕವನು. ಹಾಗೂ ನಗೆ ಅಂತಹ ಹದನ—**ಚಿತ್ರ**, **ವೇಷ**—ಗಳು ತಿಳಿಯುವರೆ ಕೈಗೊಳಿಸಿದ ಅಂತಸ್ಸಹಾಯಕ-ನಿರುವನು. ಅಥವಾ ಈಯೆಡೆಗೆ ಅವನು ಅಮುಖ್ಯನು!

'ರತ್ನಿ'ಯನ್ನು ಉಜ್ಜೈನಿಗೆ ಕಳುಹಿದ್ದೆಂಬುದಕ್ಕಿಂತ (**ಅದೇ-ಕೆಂದು ಅರಿಯದು**) 'ಮಿತ್ರೆ'ಯನ್ನು ತನ್ನ ತವರೂರಿಗೆ (ಕುಂಡಿನ) ಕಳುಹಿಸಿ, ತನ್ನವರಿಂದಲೇ ಅವಳ ಮರೆ (ಹಾಗೂ ನಾಕಣೆ) ಯನ್ನು ಮಾಡಿಸುತ್ತಾ ತನ್ನ- ನಾಯಕನ ಪ್ರೇಮಕ್ಕೆ ಅಡ್ಡಿಯನ್ನು ದೂರಗೊಳಿಸಿದಳೆನ್ನುವಂತಿದೆ.

(**ಮಾಯದ**) **ಬೆಂಕಿಯು ಅರಮನೆಗೆ ಹತ್ತಲು**, 'ನ **ಕಣ್ತಪ್ಪಿ**ಸಲು ಮಾತ್ರ ಸೆರೆಯಲ್ಲಿಟ್ಟೆ ಆ ನಾಕುಕನ್ನೆಯು ; ಳನ್ನೆ!—ಎಂದು ತಪಿಸುವಳು ಪಟ್ಟದ ರಾಣಿಯು! ಅಷ್ಟ ಹೇಳದೆ, ಬಿಡಿಸುವಂತೆಸಗದೆ ಮನಸ್ಪೊಪ್ಪದು! ಇದು ತುತ್ತ ಆಕೆಯ ಸಾತ್ತ್ವಿಕ ನಿರೂಪಣೆಯೇ ಸರಿ.

ಆ ಬೆಂಕಿಯು 'ಮಾಯಾವಿದ್ಯೆ'ಯೆಂಬಂತೆ ಆ ತನಕದ ವೆಲ್ಲವೂ ತನ್ನ ಮಂತ್ರಿಯಿಂದರಿತಾಗ, ಆ ನಾಯಿಕೆಯ ; ಯನ್ನು ತಾನೇ ಮಾಡಿಸುವಳು. ಈ ತನಕ ರುಕ್ಮಿಣಿಯ ಬೇರಾವ ಪಟ್ಟದ ರಾಣಿಯರನ್ನು ಹೆಸರಿಸದೆ, ಈ ಕಥಾನ ಯನ್ನೇ ದ್ವಿತೀಯ ರಾಜ್ಞಿಯಾಗಿಸಬೇಕೆಂಬ- ಈ ಕಾವ್ಯ (ಪ್ರಮುಖತೆಗಾಗಿ— ಈ ಕವಿಯ ಚಾತುರ್ಯವು ಸಾಂಗವಾಗಿ ತೆನ್ನುವಂತಿದೆ.

'ಶಾಕುಂತಲ'ದಂತೆ ಮೊದಲ ರಾಣಿಯ ಹೆಸರಿಸಡೆಯ ಬಹುದಿತ್ತಾದರೂ, ಆಯೆಸಕಕ್ಕೆ ಮೂಲವಿಲ್ಲ, ಮಾತ್ರವಲ್ಲ ಆ ಸೌಜನ್ಯವನ್ನು ಪ್ರತಿಬಿಂಬಿಸಲೂ ಅವಕಾಶವಿಲ್ಲವಷ್ಟೆ! 'ಸ ರಲ್ಲೂ ಪ್ರೇಮವನ್ನು ಚಿಮ್ಮುವ ಅವಳನ್ನು ಇಲ್ಲಿ ಕಾಣಬ

ಒಟ್ಟಾರೆ, ಈ ನಾಟಿಕೆ ಆಕಾರದಲ್ಲಿ ಕಿರಿಯದಾದರೂ (ಮನರಂಜಕವಾದ ಕಥಾ, ಪಾತ್ರ, ನಿರೂಪಣೆ, ಶೈ ಕೂಡಿದೆಯೆನ್ನಲು ಯಾವನಿಗೂ ಸಂಶಯವಿಲ್ಲವು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತ

ಮನೋಹರ {ನೀಲಿ} **ಹೇರ್ ಆಯಿಲ್**

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} **ಟಾನಿಕ್.**

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣ-ದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನ-ಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} **ರಾಮಬಾಣ.**

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಶ್ರೀ ನೀಲಕಂಠೇಶ್ವರ ನಾಟ್ಯಸೇವಾಸಂಘ, ಹೆಗ್ಗೋಡು, ಇ ಪ್ರಥಮ ಪ್ರಕಟನೆ.

ಈಗ ತಾನೆ ಹೊರಬಿದ್ದಿದೆ!

ಕೈಲಾಸಂ ದರ್ಶನ

'ಕೈಲಾಸಂ' ರವರ ಮಿತ್ರರಾಗಿದ್ದು ಅವರ ಗ ಗಳನ್ನು, ಜೀವನವನ್ನು, ಚೆನ್ನಾಗಿ ಅಭ್ಯಸಿಸಿದ ಕನ್ನ ಸುಪ್ರಸಿದ್ಧ ಬರೆಹಗಾರರ ಲೇಖನಗಳಿಂದೊದಗು **'ಕೈಲಾಸಂ'** ರವರ ಜೀವನ ಮತ್ತು ಕೃತಿಗಳೆರಡರ ಮೇ ಹೊಸಬೆಳಕನ್ನು ಚೆಲ್ಲುವ ವಿಮರ್ಶಾಲೇಖನ ಸಂಕಲನ

ಸಂಪಾದಕ : **ಶ್ರೀ. ಕೆ. ವಿ. ಸುಬ್ಬಣ್ಣ**

ಕನ್ನಡದ ಸುಪ್ರಸಿದ್ಧ ಪತ್ರಿಕೆಗಳು, ಸಾಹಿತಿಗ ಮುಕ್ತಕಂಠದಿಂದ ಹೊಗಳಿದ್ದಾರೆ. ಕನ್ನಡದ ರಾಜ **ಶ್ರೀ ಗೋವಿಂದಪೈ**ಗಳು ಈ ಗ್ರಂಥವನ್ನು ಕುರಿತು

"**ಲೇಖನಗಳೆಲ್ಲ ಬುಟ್ಟಿಯಿಂದಾಯ್ದ ಬಲಿತ ಹ ಗಳಂತಿವೆ**" ಎಂದಿದ್ದಾರೆ.

ಬೆಲೆ : ೨-೦-೦. ಮಾರಾಟಗಾರರಿಗೆ **ಯೋಗ್ಯ** ಕಮಿಷ

ವಿವರಗಳಿಗೆ :— ಅಶೋಕ ನಿಲಯ, **ಹೆಗ್ಗೋಡು**

(ಸಾಗರ–ಶಿವಮೊಗ್ಗ) **ಮೈಸೂರು** ಸಂಸ್ಥಾನ

ಮೌಲ್ಯವಿಚ್ಛೇದನೆ

(ಆರ್ಥಿಕ ವಿಚಾರ)

ಶ್ರೀ. ಸಾ. ಭೀ. ಜೋರಾಪೂರ, ವಿಜಯಪುರ

★

ರತದ ರೂಪಾಯಿಯ ಮೌಲ್ಯವಿಚ್ಛೇದನೆಯಾಗಿ ಬ ದಿನಗಳಾದುವು. ಆದರೂ ನಮ್ಮ ವಾಚಕ-ದಲ್ಲಿ ಮೌಲ್ಯವಿಚ್ಛೇದನೆಯ ಅರ್ಥವನ್ನು ಅರಿತು-ಕೊಂಡವರು ತೀರ ಕೆಲವರು. ಅರಿಯದ ಬಹಳಜನರಿಗಾಗಿ ಈ ತಿಳಿನುಡಿಯು ಬರೆಹ.

★

ಮಳೆ ನಿಂತರೂ ಮರದ ಹನಿ ನಿಲ್ಲಲಿಲ್ಲ' ಎಂಬಂತೆ, ಎರಡನೆಯ ಯುದ್ಧ ನಿಂತರೂ ಅದರ ದುಷ್ಪರಿಣಾಮಗಳು ಇನ್ನೂ ಷ್ಟಾಗಿಲ್ಲ. ಎಲ್ಲೆಲ್ಲೂ ಆರ್ಥಿಕ ಮುಗ್ಗಟ್ಟಿನ ಬಿಕ್ಕಟ್ಟು ತಾಂಡವ-ಡುತ್ತಿದೆ. ಸ್ಟರ್ಲಿಂಗ್ ಮುಗ್ಗಟ್ಟು ಒಂದೆಡೆ, ಡಾಲರ್ ಟ್ಟು ಇನ್ನೊಂದೆಡೆ. ಈ ಮುಗ್ಗಟ್ಟಿನ ಕಟ್ಟಿನಿಂದ ಮುಕ್ತವಾಗ-ಲಂಡನ್ನಿನಲ್ಲಿ ರಾಷ್ಟ್ರಕೂಟ ಮಂತ್ರಿಗಳ ಪರಿಷತ್ತು ಕೂಡಿತ್ತು. ಗ್ಟನ್ನಿನಲ್ಲಿ "ನಾಣ್ಯಚಲನೆಯ"ಯ ಬಗ್ಗೆ ಮಾತುಕತೆ-ಯಿತು. ಡಾಲರಿನ ಹಿಡಿತದಿಂದ ಪಾರಾಗಲು 'ಸ್ಟರ್ಲಿಂಗ್ ಶಗಳು 'ಗಳು, ಡಾಲರ್ ಪ್ರದೇಶದಿಂದ ೨೫ % ಆಯಾತವನ್ನು ಮಾಡಬೇಕೆಂದು ನಿರ್ಧರಿಸಲಾಯಿತು. ಇವನ್ನೇ ದೃಢೀಕರಿ-ಮೊದಲು ಸರ್ವಥಾ ಒಪ್ಪದಿದ್ದ ಬ್ರಿಟನಿನ ಆರ್ಥಿಕ ಮಂತ್ರಿ ಸ್ಸ, ಪೌಂಡಿನ ಮೌಲ್ಯಚ್ಛೇದನೆ ಮಾಡಬೇಕೆಂದು ನಿರ್ಧರಿಸಿ, ಗೂ, ಆಶ್ಚರ್ಯವಾಗುವಂತೆ ಅನಿರೀಕ್ಷಿತವಾಗಿ ಹಾಗೆ ಯೂ ಬಿಟ್ಟರು. ಭಾರತವು ಸ್ಟರ್ಲಿಂಗ್ ಪ್ರದೇಶದಲ್ಲಿರು-ಂದಲೂ ಮತ್ತು ಪರಸ್ಪರ ಒಡಂಬಡಿಕೆಯಾಗಿರುವುದ-ಲೂ, ನಮ್ಮ ರೂಪಾಯಿಯ ಮೌಲ್ಯಚ್ಛೇದನೆಯನ್ನೂ ಮಾಡ-ಯಿತು. ರೂಪಾಯಿಯ ಮೌಲ್ಯಚ್ಛೇದನೆಗೆ ವಿವಿಧ ವಿರೋಧಾ-ಭಿಪ್ರಾಯವಿದ್ದಿತೆಂದು ಬೇರೆ ಹೇಳಬೇಕಿಲ್ಲ. ಸದ್ಯಕ್ಕೆ ಮೌಲ್ಯಚ್ಛೇದನೆ ಎಂದರೇನು, ಮೌಲ್ಯಚ್ಛೇದನೆ ಮಾಡುವ ಕಾರಣವೇನು, ಅದರಿಂದಾಗುವ ಲಾಭಾಲಾಭವೇನೆಂಬುದನ್ನು ಸ್ವಲ್ಪದರಲ್ಲಿ ಚರ್ಚಿಸುವುದೇ ಈ ಬರೆಹದ ಗುರಿ.

೧. **ಮೌಲ್ಯಚ್ಛೇದನೆಯೆಂದರೇನು ? :—** ಒಂದೊಂದು ದೇಶದಲ್ಲಿ ಒಂದೊಂದು ಬಗೆಯ ನಾಣ್ಯಪದ್ಧತಿ ಇರುವುದಷ್ಟೇ ? ರೂಪಾಯಿ, ಪೌಂಡು, ಡಾಲರ್ ಇತ್ಯಾದಿ. ನಾವು ಪರರಾಷ್ಟ್ರ-ಗಳೊಂದಿಗೆ ವ್ಯಾಪಾರಮಾಡಬೇಕಾದಾಗ, ನಮ್ಮ ರೂಪಾಯಿಯ ಬೆಲೆಯನ್ನು ಆ ಆ ದೇಶದ ನಾಣ್ಯದೊಡನೆ ಸರಿಗೊಳಿಸಬೇಕಾಗು-ತ್ತದೆ. ನಾವು ಒಂದು ರೂಪಾಯಿಯ ಹತ್ತಿಯನ್ನು ಇಂಗ್ಲಂಡಿಗೆ ಕಳಿಸಿದರೆ, ಅವರು ೧೮ ಪೇನ್ಸ್ ಕೊಡಬೇಕೆಂದು ನಿರ್ಧರಿಸಿಕೊಳ್ಳುತ್ತೇವೆ. ಇಲ್ಲಿ ರೂಪಾಯಿಯ ಮೌಲ್ಯ ೧೮ ಪೇನ್ಸ್ ಆಯಿತು. ಹೀಗೆ ಪರಸ್ಪರರ ನಾಣ್ಯದ ಬೆಲೆಯನ್ನು ನಿಶ್ಚಯಿಸುವುದೇ ನಾಣ್ಯ-ವಿನಿಮಯ.

ಒಂದು ರೂಪಾಯಿಗೆ ೧೨ ಮಾವಿನ ಹಣ್ಣು ಕೇಳುತ್ತೇವೆ ಎಂದು ತಿಳಿಯೋಣ. ಈಗ ೧ ರೂಪಾಯಿಯ ಬೆಲೆ ೧೨ ಮಾವಿನ ಹಣ್ಣು ಎಂದಂತಾಯಿತು. ನಾವು ೧ ರೂ. ಗೆ ೮ ಮಾವಿನ ಹಣ್ಣು ಕೊಳ್ಳಲು ಒಪ್ಪಿದರೆ, ನಮ್ಮ ರೂಪಾಯಿಯ ಬೆಲೆಯನ್ನು ಕಡಿಮೆ ಮಾಡಿದಂತಾಗಲಿಲ್ಲವೆ ? ಇದೇ ತತ್ತ್ವದ ಮೇಲೆ, ನಮ್ಮ ವಿಷಯ-ವನ್ನು ತಿಳಿಯಬಹುದು. ೧ ರೂ. ಯ ಬೆಲೆ ೧೮ ಪೇನ್ಸ್ ಇದೆ. ನಾವು ೧೬ ಅಥವಾ ೧೪ ಪೇನ್ಸ್ ತಕ್ಕೊಳ್ಳಲು ಒಪ್ಪಿದರೆ, ನಮ್ಮ ರೂ. ಯ ಬೆಲೆ ಕಡಿಮೆ ಮಾಡಿದಂತಾಯಿತು. ಇನ್ನೂ ಹೆಚ್ಚು ಸ್ಪಷ್ಟವಾಗಿ ನೋಡಬೇಕೆಂದರೆ, ನಮ್ಮ ೧ ಸೇರು ಗೋದಿಗೆ ಇಂಗ್ಲಂಡಿನಲ್ಲಿ ೧ ಸೇರು ಬಿಸ್ಕೀಟ್ ಕೊಡುತ್ತಾರೆಂದು ತಿಳಿಯೋಣ. ಒಂದು ವೇಳೆ ೧ ಸೇರು ಗೋದಿಗೆ ೨ ಸೇರು ಬಿಸ್ಕೀಟ ಕೊಟ್ಟರೆ, ನಮ್ಮ ಗೋದಿಯ ಮೌಲ್ಯ ಹೆಚ್ಚಾಯಿತು; ಅರ್ಧ ಸೇರು ಬಿಸ್ಕೀಟು ಕೊಟ್ಟರೆ ನಮ್ಮ ಗೋದಿಯ 'ಕಿಮ್ಮತ್ತು'— ಬೆಲೆ ಕಡಿಮೆ-ಯಾದಂತಾಯಿತು. ಅದರಂತೆಯೇ, ನಮ್ಮ ೧ ರೂ. ೧೮ ಪೇನ್ಸ್-ಗಳಿಸುವಲ್ಲಿ ೧೬ ಪೇನ್ಸ್‌ಗಳಿಸಿದರೆ, ನಮ್ಮ ರೂಪಾಯಿಯ ಮೌಲ್ಯ ಕಡಿಮೆಯಾದಂತಾಯಿತು. ಇದಕ್ಕೇ ಮೌಲ್ಯಚ್ಛೇದನೆ— Devaluation— ಎನ್ನುತ್ತಾರೆ. ಇದು ವಿದೇಶವಿನಿಮಯಕ್ಕೆ ಸಂಬಂಧಿಸಿದೆಯೇ ಹೊರತು, 'ನೋಟು ಮೊದಲು ಜನರು, ೧ ರೂ.ಗೆ ೧೬ ಆಣೆಯಾಯಿತು, ೧೨ ಆಣೆಯಾಯಿತು !' ಎಂದು ತಿಳಿದುಕೊಂಡಂತೆ, ಆಂತರಿಕ ನಾಣ್ಯಚಲನೆಗೆ ಸಂಬಂಧಿಸಿಲ್ಲ.



ಮೊದಲೇ ತಿಳಿಸಿದಂತೆ ಇಂಗ್ಲಂಡನ್ನು ಅನುಸರಿಸಿ, ಡಾಲರಿನ ರೂಪದಲ್ಲಿ ನಮ್ಮ ರೂಪಾಯಿಯ ಮೌಲ್ಯಚ್ಛೇದನೆಯನ್ನು ಮಾಡಲಾಯಿತು. ಮೌಲ್ಯಚ್ಛೇದನೆಯ ಮೊದಲು, ೧ ರೂ. ಯ ಮೌಲ್ಯ ೩೦-೨೨ ಸೆಂಟ್ಸ್, ಅಂದರೆ ೩ ರೂ. ೮ ಆ. ಗೆ ೧ ಡಾಲರ್ ಸಿಗುತ್ತಿತ್ತು ; ಮೌಲ್ಯಚ್ಛೇದನೆಯ ಪರಿಣಾಮವಾಗಿ ೧ ರೂ. ಯ ಮೌಲ್ಯ ೨೧ ಸೆಂಟ್ಸ್ ಆಗಿದೆ; ಅಂದರೆ ೪ ರೂ. ೧೨ ಆಣೆಗೆ ೧ ಡಾಲರು ಸಿಗುತ್ತದೆ.

೨. **ಮೌಲ್ಯಚ್ಛೇದನೆ ಏಕೆ ಯಾವಾಗ ಮಾಡುವರು?—** ಇನ್ನು, ಮೌಲ್ಯಚ್ಛೇದನೆ ಮಾಡುವುದೇಕೆಂಬುದನ್ನು ನೋಡುವ: ನಮ್ಮ ದೇಶದಿಂದ ೧ ರೂ ಯ ಗೋದಿಯನ್ನು ಇಂಗ್ಲಂಡಿಗೆ ಕಳಿಸಿದೆವೆಂದು ತಿಳಿಯೋಣ. ೧ ರೂ. ಬೆಲೆ ೧೮ ಪೇನ್ಸು ಇರುವುದರಿಂದ ಅವರು ೧೮ ಪೇನ್ಸು ಪ್ರತಿಯಾಗಿ, ಕೊಡಬೇಕಾಗುವುದು. ಆಸ್ಟ್ರೇಲಿಯದವರೂ ಅಲ್ಲಿಗೆ ಗೋದಿ ಕಳಿಸಿದರೆಂದು ತಿಳಿಯೋಣ. ಅವರ ನಾಣ್ಯವಿನಿಮಯ ಪದ್ಧತಿ ಪ್ರಕಾರ ನಮ್ಮಷ್ಟೇ ಗೋದಿಗೆ ೧೬ ಪೇನ್ಸು ಕೊಡಬೇಕಾಗುವುದೆಂದೂ ತಿಳಿಯೋಣ. ಈಗ, ಇಂಗ್ಲಂಡಿನವನಿಗೆ, ನಮ್ಮ ಗೋದಿ ೧೮ ಪೇನ್ಸಿಗೆ ಸಿಗುತ್ತದೆ, ಆಸ್ಟ್ರೇಲಿಯದ ಗೋದಿ ೧೬ ಪೇನ್ಸಿಗೆ ಸಿಕ್ಕುತ್ತದೆಯಾದ್ದರಿಂದ, ಸ್ವಾಭಾವಿಕವಾಗಿಯೇ ಆಸ್ಟ್ರೇಲಿಯದ ಗೋದಿಯನ್ನೇ ಇಂಗ್ಲಂಡಿನವರು ಕೊಳ್ಳುತ್ತಾರೆ; ನಮ್ಮ ಗೋದಿ ಮಾರಾಟವಾಗದೆ ನಮಗೆ ಹಾನಿಯಾಗುತ್ತದೆ. ಇದು ನಮ್ಮ ೧ ರೂ. ಯ ಬೆಲೆ ೧೮ ಪೇನ್ಸು ಇದ್ದಾಗ. ನಮ್ಮ ರೂ. ಯ ಬೆಲೆಯನ್ನು ೧೪ ಪೇನ್ಸಿಗೆ ಇಳಿಸಿದೆವೆಂದು ತಿಳಿಯೋಣ. ಅಂದರೆ (ಮೊದಲಿನಷ್ಟೆ) ನಮ್ಮ ಗೋದಿ ೧೪ ಪೇನ್ಸಿಗೆ ಸಿಗುತ್ತದೆ. ಆಸ್ಟ್ರೇಲಿಯಾದ ಗೋದಿ ೧೬ ಪೇನ್ಸಿಗೆ ಸಿಗುತ್ತದೆ. ಇದರ ಪರಿಣಾಮವಾಗಿ ನಮ್ಮ ಗೋದಿಯ ವ್ಯಾಪಾರ ಹೆಚ್ಚಾಗುತ್ತದೆ. ಇಲ್ಲಿ ನಾವು **ಗೋದಿಯ ಬೆಲೆಯಲ್ಲಿ** ಹೆಚ್ಚುಕಡಿಮೆ ಮಾಡಿಲ್ಲವೆಂಬುದನ್ನು ಮರೆಯಲಾಗದು. ಆದರೆ **ರೂಪಾಯಿಯ** ಬೆಲೆ ಕಡಿಮೆ ಮಾಡಿದ್ದೇವೆ. ಹೇಗೆಂದರೆ, ಮೊದಲಿನ ೧ ರೂ ಯ ಗೋದಿಗೆ ೧೮ ಪೆನ್ಸು ತಕ್ಕೊಳ್ಳುತ್ತಿದ್ದೆವು, ಈಗ ೧೪ ಪೆನ್ಸು ತಕ್ಕೊಳ್ಳುತ್ತೇವೆ. ನಮ್ಮ ರೂ. ಯ ಬೆಲೆ ೪ ಪೆನ್ಸು ಕಡಿಮೆಯಾಯಿತು. ಇದರಿಂದ ನಮ್ಮ ಗೋದಿಯ ವ್ಯಾಪಾರ—ನಿರ್ಯಾತ ಹೆಚ್ಚಾಯಿತು. ಆದ್ದರಿಂದ, ಒಂದು ದೇಶದ ನಿರ್ಯಾತ ವ್ಯಾಪಾರ ಕಡಿಮೆಯಾಗಿದ್ದರೆ, ಲಾಭಕರವಾಗಿರದಿದ್ದರೆ, ನಿರ್ಯಾತಿಸುವ ದೇಶದ ನಾಣ್ಯದ ಮೌಲ್ಯದ ರೂಪದಲ್ಲಿ ಆ ದೇಶದ ನಾ… ಮೌಲ್ಯಚ್ಛೇದನೆ ಮಾಡುತ್ತಾರೆ— ಎಂದು ಹೇಳಬಹುದು.

೩. **ಮೌಲ್ಯಚ್ಛೇದನೆಯಿಂದಾಗುವ ಲಾಭಾಲಾಭಗಳು** ಮೇಲೆಯೇ ನೋಡಿದಂತೆ ಮೌಲ್ಯಚ್ಛೇದನೆಯಿಂದ, ವಿದೇಶದ … ಗಳಲ್ಲಿ ನಮ್ಮ ಸರಕುಗಳು ಉಳಿದ ದೇಶಗಳಿಗಿಂತ ಕಡಿಮೆ … ಸಿಗುವುದರಿಂದ, ನಮ್ಮ ಸರಕುಗಳಿಗೆ ಬೇಡಿಕೆ ಹೆಚ್ಚಾಗು… ಅಂದರೆ, ನಮ್ಮ ನಿರ್ಯಾತ ವ್ಯಾಪಾರ ಹೆಚ್ಚಾಗಿ, ಆರ್ಥಿಕ … ಸುಧಾರಿಸುತ್ತದೆ. ಮೌಲ್ಯಚ್ಛೇದನೆಯಿಂದ ಲಾಭವಾಗು… ಹಾನಿಯೂ ಆಗುತ್ತದೆ. ಹೇಗೆಂಬುದನ್ನು ನೋಡೋಣ:— ೧ … ಯ ಬೆಲೆ ೧೮ ಪೆನ್ಸು ಇದೆ. ಇಂಗ್ಲಂಡಿನಲ್ಲಿ ಒಂದು ಫೌಂ… ಪೆನ್ನಿಗೆ ೧೮ ಪೆನ್ಸು ಎಂದು ತಿಳಿಯೋಣ. ನಮಗೆ ೧ ರೂ… ಆ ಪೆನ್ನು ಸಿಗುತ್ತದೆ. ಈಗ ನಮ್ಮ ರೂ. ಯ ಬೆಲೆ… ೧೮ ಪೆನ್ಸುಗಳಿಂದ ೧೬ ಪೆನ್ಸುಗಳಿಗೆ ಕಡಿಮೆಮಾಡಿದೆವೆಂದು … ಯೋಣ. ಫೌಂಟನ್‌ಪೆನ್ನಿನ ಬೆಲೆ ಮೊದಲಿನಷ್ಟೆ— ಅ… ೧೮ ಪೆನ್ಸು ಇದೆ. ಈಗ ನಾವು ೧ ರೂ. ಕೊಟ್ಟರೆ ಪೆನ್ನು ಸಿ… ದಿಲ್ಲ. ಏಕೆಂದರೆ ನಮ್ಮ ರೂಪಾಯಿಯ ಮೌಲ್ಯ ೧೬ … ಇದೆ, ಪೆನ್ನಿನ ಬೆಲೆ ೧೮ ಪೆನ್ಸು ಇದೆ. ಆದ್ದರಿಂದ ನಾವು … ಹಣ ಕೊಡಬೇಕಾಯಿತು. ಇದರಿಂದ ನಾವು ವ್ಯಾಪಾರ… ಕಡಿಮೆಮಾಡಬಹುದು ಇಲ್ಲವೆ ನಿಲ್ಲಿಸಿಬಿಡಬಹುದು. ಆ… ಆಯಾತ ಕಡಿಮೆಯಾಗುತ್ತದೆ. ಇದು ಮೌಲ್ಯಚ್ಛೇದ… ಪರಿಣಾಮ. ಆದ್ದರಿಂದ, ಮೌಲ್ಯಚ್ಛೇದನೆಯಿಂದ ಆ … ಆಯಾತ ವ್ಯಾಪಾರ ಹಾನಿದಾಯಕವಾಗುವುದು, ಕುಗ್ಗಿ… ಎಂದು ಹೇಳಬಹುದು.

ಇಂತು, ಮೌಲ್ಯವಿಚ್ಛೇದನೆಯೆಂದರೇನು; ಮೌಲ್ಯವಿಚ್ಛೇ… ಏಕೆ, ಯಾವಾಗ ಮಾಡುತ್ತಾರೆ; ಇದರಿಂದಾಗುವ ಲಾಭಾ… ಗಳೇನು, ಎಂಬುದನ್ನು ನೋಡಿದ್ದಾಯಿತು. ಇನ್ನು, ರೂಪಾಯಿಯ ಮೌಲ್ಯಚ್ಛೇದನೆಗೆ ಉಂಟಾದ ಕಾರಣಗಳ… ಇದರ ಪರಿಣಾಮವೇನಾಗಬಹುದೆಂಬುದನ್ನು ನೋಡೋಣ.

ಮೌಲ್ಯಚ್ಛೇದನೆಯ ಬಗ್ಗೆ ವಿರೋಧಾಭಿಪ್ರಾಯವಿದೆಯೆ… ತಿಳಿಸಿದೆಯಷ್ಟೇ ? ಅನುಕೂಲಾಭಿಪ್ರಾಯ ಉಳ್ಳವರು ಈ ಕೆ… ಕಾರಣಗಳನ್ನು ಕೊಡುತ್ತಾರೆ :—

೧. ನಮ್ಮ ದೇಶದ ಆಯಾತ ಮಿತಿಮೀರಿದೆ. ೫೧೮ ಕೆ… ರೂ. ಗಳನ್ನು ಆಯಾತಕ್ಕೆ ವೆಚ್ಚಮಾಡುತ್ತಿದ್ದೇವೆ. ನಿಯ…



ತ್ರಿ ಕೋಟಿ ರೂ. ಗಳಷ್ಟಿದೆ. ಇದರಿಂದ ೯೫ ಕೋಟಿ ರೂ. ಳಷ್ಟು ಹಾನಿದಾಯಕ ವ್ಯಾಪಾರವಾಗುತ್ತದೆ. ವ್ಯಾಪಾರದಲ್ಲಿ ಮತೋಲ ಉಳಿಯುವುದಿಲ್ಲ. ಆರ್ಥಿಕಮುಗ್ಗಟ್ಟು ಇದರಿಂದಲೇ ಉಂಟಾಗಿದೆ. ರೂಪಾಯಿಯ ಮೌಲ್ಯಚ್ಛೇದನೆಯಿಂದ ಇದನ್ನು ೋಗಲಾಡಿಸಲು ಸಾಧ್ಯ.

ಆಯಾತ ಮಿತಿಮೀರಿದೆ. ಅದನ್ನು ತಡೆಯಬೇಕು. ಇದರ ಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ನಾವೀಗ ಆಹಾರಧಾನ್ಯ, ಚ್ಚಾಮಾಲುಗಳನ್ನು ಮಾತ್ರ ತಡೆಯಬಹುದೇ ಹೊರತು, ಯಂತ್ರಸಾಮಗ್ರಿ, ಉದ್ದಿಮೆಸರಕು, ಸಿದ್ಧಸರಕು, ರಸಾಯನ ತ್ಯಾದಿ ಔಷಧಗಳ ಆಯಾತವನ್ನು ತಡೆಯುವುದು ಸಾಧ್ಯವಿಲ್ಲ, ಾಧುವೂ ಅಲ್ಲ. ಆಹಾರಧಾನ್ಯ, ಕಚ್ಚಾಮಾಲು ಮುಂತಾದುವು- ಳ ಆಯಾತವನ್ನು, ಹೆಚ್ಚು ಕರಹೇರಿ, ನಮ್ಮ ಹುಟ್ಟುವಳಿ- ಯನ್ನು ಹೆಚ್ಚಿಸಿ, ಕಡಿಮೆಮಾಡಬಹುದು. ಆದರೆ, ಹುಟ್ಟುವಳಿ- ಯನ್ನು ಹೆಚ್ಚಿಸಲು ನಮ್ಮ ನೈಸರ್ಗಿಕಸಂಪತ್ತಿನ ಸದುಪಯೋಗ- ಮಾಡಿಕೊಳ್ಳಲು— ಔದ್ಯೋಗಿಕರಂಗದಲ್ಲಿ ತರುಣ ರಾಷ್ಟ್ರವಾದ ಭಾರತಕ್ಕೆ— ಇಂದು ಯಂತ್ರಸಾಮಗ್ರಿಗಳ ಆವಶ್ಯಕತೆ ಬಹಳ ಇದೆ. ಯಂತ್ರಸಾಮಗ್ರಿಗಳನ್ನು ಹೆಚ್ಚಾಗಿ ಅಮೇರಿಕೆಯಿಂದಲೇ ತರಿಸ- ಬೇಕಾಗುತ್ತದೆ. ಮೌಲ್ಯಚ್ಛೇದನೆಯ ಪರಿಣಾಮವಾಗಿ ದುರ್ಲಭ್ಯ- ವಸ್ತುವುಗಳು ಅಲಭ್ಯವಾಗುತ್ತವೆ. ಕಚ್ಚಾಮಾಲಿನ ಕೊರತೆಯ ಮೂಲವಾಗಿ ಇಂದು ಉದ್ದಿಮೆಗಳನ್ನು ನಿಲ್ಲಿಸಿದ ಗಿರಣೀಕರು, ನಾಳೆ ಯಂತ್ರಸಾಮಗ್ರಿಗಳ ಕೊರತೆಗಾಗಿ ನಿಲ್ಲಿಸಲಿಕ್ಕಿಲ್ಲವೆ? ಇದರಿಂದ ದೇಶದ ಹುಟ್ಟುವಳಿಗೆ ಆಘಾತವಾಗದೆ? ಆದ್ದರಿಂದ ಒಂದು ದುಡ್ಡು ಉಳಿಸಲು ಹೋಗಿ ಒಂದು ರೂಪಾಯಿ ಕಳೆದುಕೊಳ್ಳುವ ಧೋರಣೆಯಂತಿರುವ ಈ ಮೌಲ್ಯಚ್ಛೇದನೆಯ ಧೋರಣೆಯಿಂದ ಹೆಚ್ಚು ಉಪಯೋಗವಾಗಲಿಕ್ಕಿಲ್ಲ. ಹಾನಿಯೇ ಆದೀತು.

೨. ನಮ್ಮ ನಿರ್ಯಾತ ಕಡಿಮೆಯಾಗಿರುವುದರಿಂದ, ನಮ್ಮ ವ್ಯಾಪಾರ ಬುಡಮೇಲಾಗಿದೆ. ಇದರಿಂದ ದೇಶದ ಆರ್ಥಿಕಸ್ಥಿತಿಯ ಮೇಲೆ ಅನಿಷ್ಟಪರಿಣಾಮವಾಗಿದೆ. ನಿರ್ಯಾತವನ್ನು ಹೆಚ್ಚಿಸಲು ರೂಪಾಯಿಯ ಮೌಲ್ಯಚ್ಛೇದನೆಮಾಡಬೇಕು. ಅಂದರೆ ನಮ್ಮ ದೇಶದ ಸರಕುಗಳು ಪರದೇಶಗಳಲ್ಲಿ ಕಡಿಮೆ ಬೆಲೆಗೆ ಸಿಗುವುದರಿಂದ ವ್ಯಾಪಾರವು ಅಭಿವೃದ್ಧಿಹೊಂದಿ ಲಾಭ ಹೆಚ್ಚಾಗುತ್ತದೆ. ದೇಶದ ಆರ್ಥಿಕಸ್ಥಿತಿ ಸುಧಾರಿಸುತ್ತದೆ.

ನಮ್ಮ ನಿರ್ಯಾತ ಕುಗ್ಗಿದೆ, ಹೆಚ್ಚಾಗಬೇಕು ನಿಜ. ನಿರ್ಯಾತ ಏರಿಕೆಯಲ್ಲಿದ್ದಾಗ, ಏರಿಕೆಯಾಗಬಹುದೆಂದು ದೃಢವಿಶ್ವಾಸವಿದ್ದಾಗ ಮಾತ್ರ ಮೌಲ್ಯಚ್ಛೇದನೆಯಿಂದ ಲಾಭವಾಗಬಹುದು. ಇಲ್ಲದೆ ಹೋದರೆ ಹಾನಿಯೇ ಹೆಚ್ಚಾಗಬಹುದು. ಈಗ ಭಾರತದ ನಿರ್ಯಾತ ಇಳಿಮುಖವಾಗಿದೆ. ಹುಟ್ಟುವಳಿಯನ್ನು ಹೆಚ್ಚಿಸ- ಬೇಕೆಂದರೆ, ಕಷ್ಟದಿಂದ ಅತ್ಯವಶ್ಯವಿದ್ದುದನ್ನು ಅಲ್ಪಪ್ರಮಾಣದಲ್ಲಿ ಹೆಚ್ಚಿಸಬಹುದೇ ಹೊರತು, ನಿರ್ಯಾತ ಹೆಚ್ಚಿಸಿ ಲಾಭಪಡೆಯು- ವಷ್ಟು ಹುಟ್ಟುವಳಿ ಹೆಚ್ಚಿಸಲು ಸಾಧ್ಯವಿಲ್ಲ. ಅಮೇರಿಕೆಯೊಡನೆ ನಮ್ಮ ನಿರ್ಯಾತ ವ್ಯಾಪಾರ ಹೇಗೆ ಕಡಿಮೆಯಾಗುತ್ತಿದೆಯೆಂಬು- ದನ್ನು ಕೆಳಗಿನ ವಿವರಣೆಯಿಂದ ತಿಳಿಯಬಹುದು.

ಅಮೇರಿಕೆಗೆ ನಿರ್ಯಾತ—(ನೂರಕ್ಕೆ ಪ್ರಮಾಣ)

೧೯೩೮	೮·೩%
೧೯೪೫	೨೩·೨%
೧೯೪೬	೨೫·೨%
೧೯೪೭	೧೯·೨%

೧೯೪೭-೪೮ ರಲ್ಲಿ ನಿರ್ಯಾತದ ಬೆಲೆ ೬೯.೧೩ ಲಕ್ಷ ಇದ್ದರೆ, ೧೯೪೮-೪೯ ರಲ್ಲಿ ೭೦.೦೩ ಲಕ್ಷ ರೂಪಾಯಿಗೆ ಇಳಿಯಿತು. ಹತ್ತಿ ಮತ್ತು ಸೆಣಬುಗಳ ನಿರ್ಯಾತ, ದೇಶದ ವಿಭಜನೆಯ ಫಲವಾಗಿ ಬಹಳ ಕಡಿಮೆಯಾಯಿತು. ಮೌಲ್ಯಚ್ಛೇದನೆಯ ಪರಿಣಾಮವಾಗಿ ಕೆಲ ಪ್ರಮಾಣದಲ್ಲಿ ನಿರ್ಯಾತ ಹೆಚ್ಚಾಗಿದ್ದರೂ ಹೇಳಿಕೊಳ್ಳುವಷ್ಟು ಹೆಚ್ಚಿಲ್ಲ. ಮೇಲಾಗಿ ನಿಜವಾಗಿ ನಿರ್ಯಾತ ಹೆಚ್ಚಾಗಬೇಕಾದರೆ ದೇಶದ ಮೂಲ ಹುಟ್ಟುವಳಿ ಹೆಚ್ಚಾಗಬೇಕಾದದ್ದು ಮಹತ್ತ್ವದ ಸಂಗತಿ. ಮೌಲ್ಯಚ್ಛೇದನೆ ಕೃತ್ರಿಮ ಉಪಾಯ. ಬಹುಕಾಲ ಉಪಯೋಗವಾಗುವಂತಹದೂ ಅಲ್ಲ. ಹುಟ್ಟುವಳಿ ಹೆಚ್ಚಿದರೆ ನಿರ್ಯಾತ ತನ್ನಷ್ಟಕ್ಕೆ ತಾನೇ ಹೆಚ್ಚಾಗುತ್ತದೆ. ಆದ್ದರಿಂದ ಮೌಲ್ಯ- ಚ್ಛೇದನೆಯಿಂದ ನಿಜವಾದ ಅರ್ಥದಲ್ಲಿ ಲಾಭವಿಲ್ಲ. ರಾಷ್ಟ್ರಕೂಟ ಮತ್ತು ಇಂಗ್ಲಂಡಿನ ಬೆನ್ನಿಗೆ ಬಿದ್ದು ಬಲವಂತ ಮಾಘಸ್ನಾನದಂತೆ ನಿರ್ವಾಹವಿಲ್ಲದೆ ಮೌಲ್ಯಚ್ಛೇದನೆ ಮಾಡಿದಂತಾಗಿದೆ.

ನಮ್ಮ ಪಾಲುಗಾರರಿಗೂ ವ್ಯವಹಾರಿಗರಿಗೂ ದೀಪಾವಳಿಯ ಶುಭಾಶಯಗಳು !

ಬ್ಯಾಂಕ್ ಆಫ್ ಮಹಾರಾಷ್ಟ್ರ ಲಿ. ಪುಣೆ

(ಸೆಡ್ಯೂಲ್ಡ್ ಬ್ಯಾಂಕ್) ಸ್ಥಾಪನೆ ೧೯೩೫

ಅಧಿಕೃತ ಮೂಲಧನ	ರೂ. ೫೦,೦೦,೦೦೦
ವ್ಯವಹೃತ ಮೂಲಧನ	ರೂ ೩೨,೦೦,೦೦೦
ಪೇಡಪ್ ಆದ ಮೂಲಧನ	ರೂ. ೧೬,೦೦,೦೦೦
ಕಾದಿಟ್ಟ ನಿಧಿ ಮತ್ತು ಆಕಸ್ಮಿಕ ನಿಧಿ	ರೂ. ೪,೭೧,೦೦೦

ಶಾಖೆಗಳು

ಮುಂಬಯಿ (ಫೋರ್ಟ್, ಗಿರಗಾಂವ ಮತ್ತು ದಾದರ), ನಾಸಿಕ, ಚಾಳಿಸಗಾಂವ, ಧುಳೆ, ಜಳಗಾಂವ, ನಾಗಪುರ, ರತ್ನಾಗಿರಿ, ಕೋಪರಗಾಂವ, ಹುಬ್ಬಳ್ಳಿ, ಸೊಲ್ಲಾಪುರ, ಕಲ್ಯಾಣ, ಕೊಲ್ಹಾಪುರ ಮತ್ತು ಹೈದರಾಬಾದ್ (ಡೆಕ್ಕನ್).

ಹೆಡ್ ಆಫೀಸ್: **ಲಕ್ಷ್ಮೀ ರೋಡ್, ಪುಣೆ ೨.**

ಸಿ. ವಿ. ಜೋಶಿ
ಮ್ಯಾನೇಜರ್.

PARA MOUNT LTD.

ಕಸೂತಿ ಕಲಿಯಬೇಕೆ?

ಕು. ಸರೋಜಿನಿ ಮಹಿಷಿ ಎಂ. ಎ., ಧಾರವಾಡ

★

ಉಪಯುಕ್ತತೆ–ಸೌಂದರ್ಯಗಳ ಮಧುರ ಸಾಮರಸ್ಯವೆ ಜೀವನಕ್ಕೆ ಉಪಕಾರಿಯಾಗಿ ಪರಿಣಮಿಸ ಬಲ್ಲದು. ಕಸೂತಿಯ ಕಲೆಯಲ್ಲಿ ಅಂತಹ ಸಾಮರಸ್ಯ ಅಡಗಿರುವದೆಂಬುದನ್ನು, ಅನುಭವದಿಂದಲೇ ಕಂಡು ಹಿಡಿಯಬಹುದು

★

ಚಿತ್ರತುಂಬುವ ಬೇರೆ ಬೇರೆ ವಿಧದ ರೀತಿಗಳು

ಯಂತ್ರದಲ್ಲಿ ಕುಸುರಿನ ಕಸೂತಿಯನ್ನು ಹೆಣೆಯಲು ಆ ಯಂತ್ರದ ಕಸೂತಿಯ ತಗಡಿನ ಜೋಡಣೆ(ಎಂಬ್ರೊಯಡರಿ ಪ್ಲೇಟ್)ಯನ್ನು ಸೂಜಿಯ ಕೆಳಕ್ಕೆ ಸರಿಯಾಗಿ ಕೂಡಿಸಿ, ಕೆಳ- [illegible]ನ್ನು ಮೇಲೆ ತಂದು, ಮೇಲೆ ಕಸೂತಿಯ ಬಣ್ಣದ [illegible] ಬರುವಂತೆ ಪೋಣಿಸಿ. ಬಿಳಿಯ ಒಟ್ಟಿಯ [illegible] ರಿಂಗಿನಲ್ಲಿ (ರಿಂಗಿನ ಕೆಳ ಅಂಚಿಗೆ [illegible] ಹೊಂದಿಕೊಳ್ಳುವಂತೆ) ಕೂಡಿಸಿ, ಅದನ್ನು [illegible] ಸೂಜಿಯ ಕೆಳಕ್ಕೆ ಸರಿಸಿ, ಒತ್ತಡದ ಕುದುರೆಯನ್ನು [illegible] ರಿಂಗನ್ನು ಹಿಂದು ಮುಂದೆ ಸರಿಸಾಡಿ, ಬಣ್ಣದ [illegible] ಉದ್ದನ್ನು ಗೆರೆಗಳನ್ನು ಮೂಡಿಸಿದೆಯಲ್ಲವೇ? ಹೇಗಿದ [illegible] ಟಬ್ಬಿ [illegible]? ಟಬ್ಬಿಯೆಲ್ಲವೂ ಸಮಾನ ಅಂತರದಲ್ಲಿ, ಒಂದೇ ಸಮನಾಗಿ ಬಿದ್ದುವೇ? ಮೊದಲಿನ ಒಂದೆರಡು ಸಾಲುಗಳಲ್ಲಿ ಬೀಳದಿದ್ದರೆ ಹೋಗಲಿ; ಮುಂದೆಯಾದರೂ ಬೀಳುತ್ತಿವೆಯಲ್ಲ! ಮೇಲೆ ಟಬ್ಬಿ ಬೀಳುತ್ತಿರುವಾಗ, ಕೆಳಗಿನ ದಾರ ಮೇಲೆ ಬರದಂತೆ ಎಚ್ಚರದಿಂದಿರು! ಅದನ್ನು ಹೇಗೆ ಮಾಡಬೇಕೆಂಬುವನ್ನು ಹಿಂದೆಯೇ ಹೇಳಿದ್ದೇನೆ, ಅಲ್ಲವೇ?

ಈಗ ಟಬ್ಬಿ [illegible] ಸಮಾನ ಅಂತರದಲ್ಲಿ ಒಂದೇಸಮನಾಗಿ ಬೀಳ- [illegible] ರಿಂಗನ್ನು ಸ್ವಲ್ಪ ಸ್ವಲ್ಪ ವೇಗವಾಗಿ [illegible] ಅದನ್ನು [illegible]ನಲ್ಲಿಟ್ಟುಕೊಂಡು, ಟಬ್ಬಿಗಳನ್ನು ಹಾಕಲು ಪ್ರಯತ್ನ ಮಾಡು! ಟಬ್ಬಿ ಹಿಡಿತದಲ್ಲಿ ಬಂದು, ಸಮನಾಗಿ ಸೂಜಿ ಓಡತೊಡಗಿತೆಂದರೆ, ಒತ್ತಡದ ಕುದುರೆಯನ್ನು ಮೇಲಕ್ಕೆತ್ತಿ, ರಿಂಗನ್ನು ಮೆಲ್ಲಗೆ ಹೊರ-



ಉದ್ದ ಟಬ್ಬಿಗಳು.

ದೆಗೆದು, ಆ ಬಟ್ಟೆಯನ್ನು ತೆಗೆದುಬಿಟ್ಟು, ಯಾವ ಬಟ್ಟೆಯ [illegible] ಅಂದವಾದ ಚಿತ್ರವನ್ನು ರೇಶಿಮೆಯಲ್ಲಿ ಹೆಣೆಯುವುದಿದೆ ನೋಡ[illegible] ಆ ಬಟ್ಟೆಯನ್ನು ರಿಂಗಿನಲ್ಲಿ ಹಿಂದೆ ಹೇಳಿದಂತೆ ಕೂಡಿಸು! [illegible] ರಿಂಗಿನ ನಡುವೆ ಬರಲಿ; ಅಂದರೆ ಹೆಣೆಯಲು ಅನುಕೂಲವಾ[illegible]ವುದು. ಮೊದಲನೆಯ ಸಲ, ಯಂತ್ರದಲ್ಲಿ ಕಸೂತಿ ಹಾಕುವ[illegible] ಕಸೂತಿಯನ್ನು ಹೆಣೆಯಲು ಉಪಯೋಗಿಸುವ ಬಟ್ಟೆ [illegible] ನಯವಾಗಿರುವುದು ಬೇಡ ಉದಾಹರಣೆಗೆ ಸ್ಯಾಟಿನ್, ಅರ[illegible] ಇತ್ಯಾದಿಗಳು ಬೇಡ. ಕೊಂಚ ಉರುಟಾದ ಸಾದಾ ಬಿ[illegible] ಬಟ್ಟೆಯೇ ಇರಲಿ. ಬಳಿಕ ಈ ಬಟ್ಟೆಯ ಮೇಲೆ ಮೂಡಿಸಿಕೊ[illegible] ಎಲೆ, ಹೂ, ಟೊಂಗೆಗಳನ್ನು ಬೇರೆ ಬೇರೆ ಬಣ್ಣದ ರೇಶಿಮೆಯ[illegible] ಈ ಟಬ್ಬಿಯಲ್ಲಿ ಮೂಡಿಸು. ಎಲೆಗಳನ್ನು, ಹೂವಿನ ಪಕಳೆಗಳ[illegible] ಡೊಂಕುಡೊಂಕಾಗಿ ಈ ಟಬ್ಬಿಯಲ್ಲಿ ತುಂಬಿದರೆ, ಅದೊಂದು [illegible] ಅಂದವಾಗಿಯೇ ಕಾಣುವುದು. ಛಾಯಾಪ್ರಧಾನ (Shaded s[illegible] ವಾದ ಬಣ್ಣದ ರೇಶಿಮೆಯಿಂದ ತುಂಬಿದರಂತೂ ಬಹಳೇ [illegible]ವಾಗಿ ಕಾಣುವುದು. ಛಾಯಾಪ್ರಧಾನವಾದ ಹಸಿರು ರೇಶಿ[illegible]ಯಿಂದ, ಡೊಂಕು ಡೊಂಕಾಗಿ, ಓಡುವ ಟಬ್ಬಿಯಿಂದ [illegible]ಯನ್ನು ತುಂಬಿ, ನಡುವಿನ ದೇಟನ್ನು, ಎಲೆಯ ಶಿರ—ಉಪ[illegible]ಗಳನ್ನು, ದಟ್ಟಾದ ಹಸಿರು ಬಣ್ಣದ ರೇಶಿಮೆಯಲ್ಲಿ ತುಂಬಿ ಬಿ[illegible] ಅದೇ ಚಿಗಿತ ಗಿಡದ ಎಲೆಯೊಂದನ್ನು ಕಿತ್ತು ತಂದು ಹಚ್ಚಿ ಬಿ[illegible]ತೆಯೇ ಕಾಣುವುದು. ಎಲೆ, ಹೂ, ಪಕ್ಷಿಗಳಿಂದ ಕೂಡಿದ ಚಿತ್ರವನ್ನು, ಬಣ್ಣಬಣ್ಣದ ರೇಶಿಮೆಯಲ್ಲಿ ನಯವಾಗಿ [illegible] ನೋಡಿ ಬಿಟ್ಟರೆ, ಮನಸ್ಸಿನ ಬೇಸರವೆಲ್ಲ ತನ್ನಿಂದ ತಾನೆ ಹ[illegible]ಹೋಗಿ, ನೆಮ್ಮದಿಯೆನಿಸುವುದು; ಹೆಣೆದ ಆನಂದವಂತೂ ಸರಿ [illegible]ಸರಿ; ಜೊತೆಗೆ ಕಣ್ಣು ತುಂಬ ನೋಡುವ ಆನಂದವೂ ಒಂದು

ಇದುವರೆಗೆ ಮೇಲೆ ಹಾಕಿದೆಯಲ್ಲ, ಅದೇ ಓಡುವ [illegible]

ವು. ದಿನಾಲು ಹೊಲಿಗೆಗೆ ಉಪಯೋಗಿಸುತ್ತೇವಲ್ಲ, ಅದೇ ಟಬ್ಬಿಯೇ ಅದು. ಹೊಲಿಗೆಯಲ್ಲಿ ಒತ್ತಡ (Pressure bad) ಟಬ್ಬಿಯನ್ನು ಸರಿಯಾಗಿ ಕೆಡಹುವುದು, ಆದರೆ ಕೈ ಕಸೂತಿಯಲ್ಲಿ ನಿಮ್ಮ ಕೈ ರಿಂಗನ್ನು ಎಷ್ಟು ಚಪಲವಾಗಿ ದಕ್ಷತೆಯಿಂದ ಸರಿಸಡುವುದೋ, ಅಷ್ಟು ವೇಗವಾಗಿ ಅಂದವಾಗಿ ಈ ಟಬ್ಬಿ ಬೀಳುವುದು. ದನ್ನೇ ಇಂಗ್ಲಿಷಿನಲ್ಲಿ 'ರನಿಂಗ್ ಸ್ಟಿಚ್' (Running Stich) ಎಂದು ಹೇಳುವರು.



ಅಭ್ಯಾಸಕ್ಕಾಗಿ ಕೊಟ್ಟ ಹೂವಿನ ಚಿತ್ರ

'ಓಡುವ ಟಬ್ಬಿ' ಎಂದರೇನೆಂಬುದು ಈಗ ಗೊತ್ತಾಯಿತಲ್ಲವೇ? ಯಾವ ಪ್ರಕಾರದ ಚಿತ್ರವನ್ನೇ ಕಸೂತಿಯಲ್ಲಿ ಹೆಣೆಯುವುದಿರಲಿ— ಆ ಚಿತ್ರದ ಎಲೆ-ಹೂಗಳ ಬಾಹ್ಯರೇಷೆಗಳನ್ನು ತುಂಬಲು ಬೇರೆ ಬೇರೆ ಬಣ್ಣದ ದಾರಗಳಲ್ಲಿ, ಈ ಓಡುವ ಟಬ್ಬಿಯನ್ನೇ ಉಪಯೋಗಿಸುವರು. ಎಲೆಗಳ ಶಿರಗಳನ್ನು ತುಂಬುವಾಗಲೂ ಹಾಗೆಯೇ. ಅದರಂತೆ 'ಸಿನೇಲ' ಕೆಲಸದಲ್ಲಿ, ಜೋಡಣೆಯ ಕೆಲಸದಲ್ಲಿ, ಇಲ್ಲವೆ ಕೂತಿನ ಅಥವಾ ನಯವಾದ ಆರ್ಗಂಡಿಯಂಥ ಬಟ್ಟೆಯ ಮೇಲೆ ರೇಶಿಮೆಯಲ್ಲಿ ಚಿತ್ರವನ್ನು ಮೂಡಿಸಿಕೊಳ್ಳುವುದಿದ್ದಾಗ ಇದೇ ಬಗೆಯ ಓಡುವ ಟಬ್ಬಿಯನ್ನು ಪಯೋಗಿಸುವರು. ಈ ಟಬ್ಬಿಯೂ ಒಂದು ರೀತಿಯಲ್ಲಿ ಅಂದವಾಗಿರುವುದು. ಒಂದೇ ಸಾಲಿಗಿಂತ, ಒಟ್ಟಿಗೇ ಎರಡು ಮೂರು ಈ ಟಬ್ಬಿಯ ಎಳೆಗಳನ್ನು ಹಾಕಿದರೆ ದಟ್ಟಾಗಿ ಇನ್ನೂ ಅಂದವಾಗಿ ಕಾಣುವುದು. ಆರ್ಗಂಡಿಯಂಥ ನಯವಾದ ಬಟ್ಟೆಯ ಮೇಲೆ, ಈ ಟಬ್ಬಿಯಿಂದ ಬಾಹ್ಯರೇಷೆಗಳನ್ನು ತುಂಬಿದ ಬಳಿಕ ಒಳಗೆ ಎಲೆ, ಹೂಗಳನ್ನು ತುಂಬಲು, ಬೇರೆ ಬೇರೆ ಬಗೆಯ ಟಬ್ಬಿಗಳನ್ನು ಉಪಯೋಗಿಸಬಹುದು. ಈ ಓಡುವ ಟಬ್ಬಿಯಿಂದಲೇ ಇಡೀ ಎಲೆ-ಹೂವಿನ ಪಕಳೆಗಳನ್ನು ತುಂಬಬೇಕಾದಾಗ ಮಾತ್ರ, ಕೆಳಗಿನ ಬಟ್ಟೆ ಕಾಣಿಸದಂತೆ ಟಬ್ಬಿಗಳನ್ನು ತೀರ ಹತ್ತಿರ ಹತ್ತಿರ (ಒಂದರ ಮೇಲೊಂದು ಬಿದ್ದಂಥ ಎಳೆತಗಳು ಮಾತ್ರ ಆಗಕೂಡದು) ಒಂದೇ ಸಮನಾಗಿ ಹಾಕಬೇಕು.

ಈ ಟಬ್ಬಿಯನ್ನು ಸರಿಯಾಗಿ, ಅಂದವಾಗಿ ಹಾಕುವ ಅಭ್ಯಾಸವಾದರೆ, ಮುಂದೆ ಯಾವ ಟಬ್ಬಿಯನ್ನು ಹಾಕುವುದೂ ಕಠಿಣವಾಗಲಾರದು. ಯಂತ್ರದಲ್ಲಿ ಮೂಡುವ ಎಲ್ಲ ಟಬ್ಬಿಗಳೂ ಈ ಟಬ್ಬಿಯ ರೂಪಾಂತರಗಳೇ! ಯಾಕೆಂದರೆ ಯಂತ್ರದಲ್ಲಿ ಬೀಳುವುದು ಈ ಟಬ್ಬಿಯೊಂದೇ. ದುಂಡು ಟಬ್ಬಿ, (Round Stitch) ಉದ್ದು ಟಬ್ಬಿ (Satin Stitch), ದಾರ ತುಂಬುವುದು (Carding, ಕಾರ್ಡಿಂಗ್), ನೇಯ್ಗೆ ಟಬ್ಬಿ (ವೀವ್ಹಿಂಗ್) ಇತ್ಯಾದಿಗಳೆಲ್ಲವರಲ್ಲೂ ಈ ಓಡುವ ಟಬ್ಬಿಯೇ ರೂಪಾಂತರವನ್ನು ಹೊಂದಿ ಪ್ರಾಮುಖ್ಯತೆಯನ್ನು ಪಡೆದುದು.

ಉದ್ದು ಟಬ್ಬಿ (ಲಾಂಗ್ ಸ್ಟಿಚ್. ಸ್ಯಾಟಿನ್ ಸ್ಟಿಚ್)

ಓಡುವ ಟಬ್ಬಿಯೇ ಬೆಳೆದು ದೊಡ್ಡದಾದರೆ ಉದ್ದು ಟಬ್ಬಿಯಾಗುವುದು. ಬೆಳೆದು ದೊಡ್ಡದಾಗುವುದೆಂದರೆ, ಟಬ್ಬಿಯ ಸಾಲು ದೊಡ್ಡದಾಗುವುದಿಲ್ಲ, ಟಬ್ಬಿಯೇ ಉದ್ದುದ್ದಾಗಿ ಬೀಳುವುದು. ಓಡುವ ಟಬ್ಬಿಯಲ್ಲಿ ಟಬ್ಬಿ ನಿತ್ಯದ ಹೊಲಿಗೆಯಂತೆಯೇ ಹಿಂದುಮುಂದೆ ಬೀಳುವುದು. ಆದರೆ ಉದ್ದು ಟಬ್ಬಿಯಲ್ಲಿ ಮಾತ್ರ ಹೀಗಲ್ಲ. ಒಂದೇ ಸಮನಾಗಿ



ಸಾಟಿನ್ ಹೊಲಿಗೆ ಚಿತ್ರ

ಸಮಾನಾಂತರದಲ್ಲಿ ಟಬ್ಬಿ ಬೀಳಬೇಕಾದರೆ, ರಿಂಗನ್ನು ಬಹು ಚಾತುರ್ಯದಿಂದ, ದಕ್ಷತೆಯಿಂದ, ಹಿಂದೆಮುಂದೆ ಅನ್ನೇ ಅಂತರದಲ್ಲಿ ಸೂಜಿ ಬೀಳುವಂತೆ, ಸರಿಸಾಡಲು ಬರಬೇಕು. ಹಾಗಾಗದೆ ಒಂದು ಸಲ ಹಿಂದೆ ಒಂದು ಸಲ ಮುಂದೆ ಸೂಜಿ ಬಿದ್ದು, ಒಂದು ಟಬ್ಬಿ ದೊಡ್ಡದು ಒಂದು ಟಬ್ಬಿ ಸಣ್ಣದು ಆದರೆ, ಕಸೂತಿಯ ಅಂದವೇ ಕೆಟ್ಟುಹೋಗಿಬಿಡುವುದು. ಈಗ ಉದಾಹರಣೆಗೆ ಎಲೆಯೊಂದನ್ನು ಈ ಉದ್ದು ಟಬ್ಬಿಯಿಂದ ತುಂಬುವುದಿದೆ ಎಂದಿಟ್ಟುಕೊಳ್ಳೋಣ. ಇಡೀ ಎಲೆಯನ್ನು ಒಟ್ಟಿಗೇ ಉದ್ದು ಟಬ್ಬಿಯಿಂದ ತುಂಬುವುದು ಸಾಧ್ಯವೂ ಇಲ್ಲ. ಮತ್ತು ಹಾಗೆ ತುಂಬಿದರೆ ಅದು ಅಂದವಾಗಿಯೂ ಕಾಣಲಾರದು. ಶಿರ, ಉಪಶಿರಗಳಿಂದ ಕೂಡಿದ ಎಲೆಯ ಸೌಂದರ್ಯ ಅದಕ್ಕೆ ಬರಲಾರದು. ಅದಕ್ಕಾಗಿ ಆ ಎಲೆಯಲ್ಲಿ ಅರ್ಧಭಾಗವಮಾಡಿ, ನಡುವಿನ ಶಿರವನ್ನು ಓಡುವ ಟಬ್ಬಿಯಿಂದ ತುಂಬಿ, ಎರಡು ಭಾಗಗಳನ್ನೂ ಉದ್ದು ಟಬ್ಬಿಯಿಂದ ತುಂಬಬೇಕಾಗುವುದು. ಈ ಉದ್ದು ಟಬ್ಬಿಯನ್ನೂ ಶಿರದ ರೇಷೆಗೆ ಕಾಟಕೋನವಾಗಿ ತೆಗೆದುಕೊಳ್ಳದೆ, ಲಘುಕೋನವಾಗಿ ಸಮಾನಾಂತರದಲ್ಲಿ ಸರಿಯಾಗಿ ತುಂಬಿದಲ್ಲಿ, ಎಲೆಯು ಬಹಳೇ ಅಂದಕಾಣುವುದು. ಟಬ್ಬಿಗಳ ಅಂತರ ಮಾತ್ರ ಸರಿಯಾಗಿ ಬರದೆ, ಒಂದು ಹಿಂದೆ ಒಂದು ಮುಂದೆ ಬಿದ್ದರೆ, ಎಲೆಯ ಅಂದವೇ ಕೆಟ್ಟುಹೋಗುವುದು. ಅದಕ್ಕಾಗಿ ಈ ಟಬ್ಬಿಯನ್ನು ಹಾಕುವ ಅಭ್ಯಾಸ ಮಾಡುವುದು ಒಳ್ಳೆಯದು.

ಅಭ್ಯಾಸಕ್ಕಾಗಿ ಮೇಲೆಕೊಟ್ಟ ಚಿತ್ರದಲ್ಲಿ ತೋರಿಸಿದಂತೆ ಎಲೆಯೊಂದನ್ನು ತೆಗೆದುಕೊ. ಬಳಿಕ ಅದರ ಮಧ್ಯದ ಶಿರವನ್ನು ಓಡುವ ಟಬ್ಬಿಯಿಂದ ಹಾಕಿ, ಆ ಎಲೆಯಲ್ಲಿ ಸಮನಾದ ಎರಡು ಭಾಗವನ್ನು ಮಾಡು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ನಾವು ಅಪೇಕ್ಷಿಸಿದಂತೆ '**ವಿಮರ್ಶಕನಲ್ಲಿರಬೇಕಾದ ಗುಣಗಳು**' ಎಂಬ ವಿಷಯವನ್ನು ಕುರಿತು, ಬೇರೆ ಬೇರೆ ೧೬ ಜನರು ಬರೆದು ಕಳುಹಿರುವರು. ಅವರ ಹೆಸರಿಡಿ ಹೀಗಿದೆ :

೧ ಶ್ರೀ. ಎಂ ವಿ. ಬೈಲಹೊಂಗಲ; ೨. ಶ್ರೀ. ವಿ. ಕೆ. ಹೆಗಡೆ, ದೊಡ್ಡನಳ್ಳಿ (ಸಿರಸಿ); ೩. ಶ್ರೀ. ವೀರಭದ್ರ ಎಂ. ಶೆಟ್ಟರ, ಮಹಾಲಿಂಗಪೂರ; ೪ ಶ್ರೀ. ಪಿ. ಅನಂತರಾಜನ್ ಪುಲಿಗೆರೆ-ಲಕ್ಷ್ಮೇಶ್ವರ; ೫ ಶ್ರೀ. ಕೆ. ಶ್ರೀನಿವಾಸ ಶರ್ಮ 'ವಿದ್ವಾನ್' ಸಿ. ಟಿ ಕಾಸರಗೋಡು; ೬. ಶ್ರೀ. ಎಚ್. ಎನ್. ದೇಶಪಾಂಡೆ ಜ್ಯೂನಿಯರ್ ಬಿ. ಎ. ವಿಜಾಪೂರ ೭. ಶ್ರೀ. ಎಸ್. ಶ್ರೀಕೃಷ್ಣ ಪೆರಡಾಲ; ೮. ಶ್ರೀ. ಸೀತಾರಾಮ, ಚಿತ್ರದುರ್ಗ; ೯. ಶ್ರೀ. ಗೌತಮ, ಚಿತ್ರದುರ್ಗ ೧೦. ಶ್ರೀ. ಎನ್. ಎಸ್. ಪುರುಷನ್, ಬಂಕಿಕೊಡ್ಲ; ೧೧. ಶ್ರೀ. ಸ. ವಿ. ಬಡಿಗಣ್ಣವರ, ಗದಗು; ೧೨. ಶ್ರೀ. ಎ. ಎಸ್. ರಾಮಕೃಷ್ಣ ಮಣಿಪಾಳ—ಉಡುಪಿ; ೧೩ ಶ್ರೀ. ಗುರುಲಿಂಗ ಕಾಪಸೇ,—ಲೋಣಿ; ೧೪ ಶ್ರೀ. ನೆಂ. ನಾ. ಮುಗಳಿ ಹುಬ್ಬಳ್ಳಿ; ೧೫ ಶ್ರೀ. ಡಿ. ಜಿ. ಗುಮಾಸ್ತೆ, ಸೊಲ್ಲಾಪುರ; ೧೬ ಶ್ರೀ ಜಿ. ಎಸ್. ಮಠಕರ ಎಂ ಎ, ಬಿ.ಟಿ. ಪುಣೆ

ಇಲ್ಲಿಯ ಕರ್ನಾಟಕ ವಿದ್ಯಾಲಯದಲ್ಲಿ ಸಾಹಿತ್ಯದ ಉಪಾಧ್ಯಾಯರೂ ಒಳ್ಳೆಯ ವಿಮರ್ಶಕರೂ ಆದ ಶ್ರೀಮಾನ ಎನ್. ಪಿ ಕುಲಕರ್ಣಿ ಬಿ. ಎ (ಆನರ್ಸ್) ಅವರನ್ನು ನಿರ್ಣಾಯಕರಾಗಲು ಕೇಳಿಕೊಳ್ಳಲಾಯಿತು. ಅವರು ಸಂತೋಷದಿಂದ ಒಪ್ಪಿಕೊಂಡು, ಎಲ್ಲ ಲೇಖನಗಳನ್ನೂ ವಿಮರ್ಶಾತ್ಮಕ ರೀತಿಯಿಂದ ಓದುವ ಪರಿಶ್ರಮವನ್ನು ವಹಿಸಿ, ನಿರ್ಣಯ ಕೊಟ್ಟಿರಲ್ಲದೆ, ತಮ್ಮ ಅಭಿಪ್ರಾಯವನ್ನೂ ಬರೆದು ತಿಳುಹಿರುವರು. ಅವರ ನಿರ್ಣಯದಂತೆ ಶ್ರೀ. ಕೆ. ಶ್ರೀನಿವಾಸ ಶರ್ಮ ವಿದ್ವಾನ್' ಅವರದು ಅತ್ಯುತ್ತಮ. (ಇಲ್ಲಿ ಪ್ರಕಟವಾಗಿದೆ). ಇನ್ನೊಂದು ಶ್ರೀ. ಸೀತಾರಾಮ ಚಿತ್ರದುರ್ಗ ಅವರದು ತುಂಬ ಚೆನ್ನಾಗಿದೆಯೆಂದೂ ಅದನ್ನೂ ಪ್ರಕಟಿಸಬಹುದೆಂದೂ ನಿರ್ಣಾಯಕರು ಅಭಿಪ್ರಾಯಪಟ್ಟಿದ್ದಾರೆ. (ಸ್ಥಳಸಂಕೋಚ ಮೂಲಕ ಈ ಸಂಚಿಕೆಯಲ್ಲಿ ಪ್ರಕಟಿಸಲಿಕ್ಕಾಗಿಲ್ಲ; ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು).

'ಶ್ರೀ. ಎಸ್. ಶ್ರೀಕೃಷ್ಣ ಪೆರಡಾಲ, ಶ್ರೀ. ಎಚ್. ಎನ್. ದೇಶಪಾಂಡೆ, ಶ್ರೀ. ಎ. ಎಸ್. ರಾಮಕೃಷ್ಣ ಶ್ರೀ ಜಿ ಎಸ್. ಮಠಕರ, ಶ್ರೀ. ನೆಂ. ನಾ. ಮುಗಳಿ ಅವರ **ಬರಿಹಗಳೂ ಉತ್ತಮವಾಗಿವೆ.**

ಇನ್ನುಳಿದ ಲೇಖಕರ ಪ್ರಬಂಧಗಳೂ ಆಶಾದಾಯಕವಿವೆಯೆಂದೂ ಅಭ್ಯಾಸ-ಪರಿಶ್ರಮಗಳಿಂದ ತಮ್ಮ ಕಲೆಯನ್ನು ಬೆಳೆಯಿಸಿಕೊಳ್ಳುವ ಲಕ್ಷಣಗಳನ್ನವರು ತೋರಿಸಿದ್ದಾರೆಂದೂ ನಿರ್ಣಾಯಕರು ಅಭಿಪ್ರಾಯಪಟ್ಟಿದ್ದಾರೆ.

ಒಟ್ಟಿನ ಮೇಲೆ ಈ ವಿಮರ್ಶಕಲೇಖಕರ ವಿಚಾರದಲ್ಲಿ ನಿರ್ಣಾಯಕರು ಪಟ್ಟಿರುವ ಸದಭಿಪ್ರಾಯ ಈ ರೀತಿಯಲ್ಲಿದೆ

"೧. ವಿಷಯಸಂಗ್ರಹ ಸಮಾಧಾನಕರವಿದ್ದು ನಿರೂಪಣೆಯಲ್ಲಿ ಜಾಣ್ಮೆಯಿದೆ.

೨. ಶೈಲಿಯಲ್ಲಿ ಬಿಗುಹು ಇದೆ. ಕೆಲವು ಪ್ರಬಂಧಗಳಲ್ಲಂತೂ ಕನ್ನಡ ನುಡಿಯ ಸತ್ತ್ವವನ್ನೆ ಕಾಣಬಹುದು. ಮಾತುಗಳು ಹಿತವಾಗಿದ್ದು ಮುದ್ದಾಗಿವೆ.

೩ ಕೆಲವು ಲೇಖಕರು ತುಂಬ ಪರಿಶ್ರಮಪಟ್ಟು ವಿಷಯ ಸಂಗ್ರಹಮಾಡಿ ಬರೆದುದು ಸ್ತುತ್ಯ. ಈ ಪ್ರಯತ್ನವನ್ನು ಮುಂದುವರಿಸಿದಲ್ಲಿ, ಅವರಿಂದ ಉತ್ತಮ ವಿಮರ್ಶಾಸಾಹಿತ್ಯವನ್ನು ಅಪೇಕ್ಷಿಸಬಹುದು.

೪. ತರುಣ ಲೇಖಕರು ವಿಮರ್ಶೆ, ವಿಮರ್ಶಕ ಮೊದಲಾದ ಗಂಭೀರ ವಿಷಯಗಳನ್ನೆತ್ತಿಕೊಂಡು ಇಷ್ಟು ಸೊಗಸಾದ ಪ್ರಬಂಧಗಳನ್ನು ಬರೆಯಬಲ್ಲರೆಂದು ನೋಡಿ ಹಿಗ್ಗುವಂತಿದೆ. ಅಂಥವರಿಗೆ ಶಿಕ್ಷಣರಂಗವನ್ನು ಕಲ್ಪಿಸಿಕೊಟ್ಟು, ಅವರನ್ನು ತರಬೇತುಗೊಳಿಸಲು ಅನುವುಮಾಡಿಕೊಡುವ ಜಯಂತಿಯ ಧ್ಯೇಯ ಶ್ಲಾಘನೀಯ. ಹೆಚ್ಚು ಜನ ಲೇಖಕರು ಈ ಸಂಧಿಯ ಲಾಭ ಪಡೆಯಬೇಕು. 'ಕನ್ನಡದಲ್ಲಿ ವಿಮರ್ಶಾಸಾಹಿತ್ಯಕ್ಕೆ ಬುನಾದಿಯಿಲ್ಲ' ಎಂದು ಒಬ್ಬ ಲೇಖಕರು ಹೇಳಿದುದು ನಿಜ. ಈ ಕೊರತೆಯನ್ನು ತುಂಬಿಕೊಡಲು ತನ್ನದೇ ಆದ ರೀತಿಯಲ್ಲಿ ಪ್ರಯತ್ನ ಮಾಡುತ್ತಿರುವ ಜಯಂತಿಯ ಉಪಯೋಗವನ್ನು, ಅನೇಕ ಎಳೆಯರು ಅದೇಕೆ ಮಾಡಿಕೊಳ್ಳಬಾರದು?"

ನಿರ್ಣಾಯಕರಿಗೂ ಮೇಲಾಟದಲ್ಲಿ ಭಾಗವಹಿಸಿದ ತರುಣವಿಮರ್ಶಕರಿಗೂ ಸಹೃದಯ ಧನ್ಯವಾದಗಳು. ಮುಂದಿನ ತಿಂಗಳಿಗಾಗಿ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ '**ಕಸ್ತೂರ್‌ಬಾ ಮಂದಿರ**' ಎಂಬ ಕತೆಯನ್ನು ಕುರಿತು ವಿಮರ್ಶೆ ಬರೆದು ಕಳುಹಬೇಕು.

—**ಸಂಪಾದಕರು**

ವಿಮರ್ಶಕನಲ್ಲಿ ಇರಬೇಕಾದ ಗುಣಗಳು

ಕೆ. ಶ್ರೀನಿವಾಸಶರ್ಮ ವಿದ್ವಾನ್ ಪಿ. ಟಿ. ಕಾಸರಗೋಡು. ದ. ಕ.

ವನಪ್ರತಿಬಿಂಬವಾದ ಸಾಹಿತ್ಯದ ಇತಿಮಿತಿಯು ಕೂಲಂಕಷ ಯುವು ಯೋಗ್ಯವಾದ ವಿಮರ್ಶೆಯಲ್ಲಿ ಅಡಕವಾಗಿದೆ. ರ್ಶಕನೇತ್ರದ ಸಿದ್ಧಾಂತಗಳ ಮಂಡನದಲ್ಲಿ ಮಂಡಿತವಾಗಿದೆ. ರ್ಶೆಯು ಸಾಹಿತ್ಯದ ಮುನ್ನಡೆಯ ಹೆದ್ದಾರಿಯಾಗಿದೆ. ರಿಂದಲೆ ತಪ್ಪು-ಒಪ್ಪುಗಳ ಸತ್ಯಾಸತ್ಯಗಳ ನಿರ್ಣಯಕ್ಕಾ- ಕೆ, ಸಂಸ್ಕೃತಿಯ ಜನನಕ್ಕಾಗಿಯೂ ವಿಮರ್ಶೆಯು ವಾಯಿತು.

ಮರ್ಶೆ'ಯೆಂಬುದು ಚಿಕ್ಕಮಾತಾದರೂ ಅದರಲ್ಲಡಕವಾದ ರ್ಥ ಗಂಭೀರವಾಗಿದೆ. ತುಲನೆ, ಪರಿಶೀಲನೆ, ಪರ್ಯಾ- ಚನೆಯೆಂಬ ನಾನಾಶಬ್ದಗಳನ್ನು ಅದಕ್ಕೆ ಪರ್ಯಾಯವಾಗಿ ಬಹುದು. ಒಂದು ಕಾವ್ಯದ ಇಲ್ಲವೆ ಒಂದು ಕಥಾನಕದ ಒಂದು ನಾಟಕದ ವಿಮರ್ಶನವೆಂದರೆ, ಅದು ಸಣ್ಣ ಮಾತಲ್ಲ. ರ್ಯಾಯ ಶಬ್ದಗಳನ್ನೇ ಅಲ್ಲಿ ಅನುಸ್ಯೂತವಾಗಿ ಬರುವ ರಿಯ ನುಡಿಯನ್ನಾಗಿ ಪರಿಭಾವಿಸಿದರೆ, ಇನ್ನೂ ಚೆನ್ನಾಗ- ು. ಮೊದಲಾಗಿ ವಿಮರ್ಶೆಗಾಗಿರಿಸಿದ ವಸ್ತುವಿನ ನ್ನರಿಯಬೇಕು. ಕಣ್ಣಿಗೆ ನಿಲುಕಿದ ವಿಷಯವೂ ಯವೂ ತುಲೆಯಲ್ಲಿ ವ್ಯತ್ಯಾಸವನ್ನೀಯಬಹುದು. ಆಗ ರ್ಶಕನು ಅದೇ ಭಾರದ- ಅದೇ ರೀತಿಯ- ಅದೇ ವೇಸಿಯ ಕಾವ್ಯದೊಡನೆ ತೂಗಬೇಕು. ಬಳಿಕ ವಿಚಾರಪೂರ್ವಕವಾಗಿ ಲಿಸಬೇಕಾಗುವುದು. ಅಲ್ಲಿ ತಪ್ಪು-ಒಪ್ಪುಗಳ ಯೋಗ್ಯ ಯುವು ಸಾಗುವುದು. ಬಳಿಕ ಪರ್ಯಾಲೋಚನೆ. ತಪ್ಪುಗಳ ಾಗಿ- ಒಪ್ಪುಗಳ ಬೆಳಕಿಗಾಗಿ ಈಯುವ ದಾರಿಯು, ಯು, ಪರ್ಯಾಲೋಚನೆಯಲ್ಲಿದೆ. ಗುಣಾವಗುಣಗಳ ಕ್ಷ ಸಾಕ್ಷಾತ್ಕಾರವು, ವಿಮರ್ಶಕನ ಕೈವಾಡದಲ್ಲಿ ತಲೆಯೆತ್ತಿ, ನ ಲೇಖನಿಗೆ ನವಚೇತನವನ್ನು ತುಂಬುವ ಬುಗ್ಗೆಯಾಗಿರ- ಅಲ್ಲದೆ ಲೇಖನಿಯನ್ನೇ ಮುರುಟಿಸುವ ಕಟುಮಾರ್ಗ- ಾರದು. ಅದು ವಿಮರ್ಶೆಯಲ್ಲ; ಅದು ಮಾತ್ಸರ್ಯದ . ವಿಮರ್ಶೆಯು ಎಂದೆಂದೂ 'ಮನಶ್ಶಾಸ್ತ್ರ'ದ ಮೂಲದಲ್ಲಿ ಬರಬೇಕು. ಒಂದು ಜೀವನವು ಸುಧಾರಣೆಯಾಗ- ದರೆ, ಜೀವನದ ಮರ್ಮವು ಜೀವಿಗೆ ತೋರಿ, ಜೀವನವು ಾಗಬೇಕಾದರೆ, ದಾರಿತೋರುವವನು ಜೀವನದ ಕಹಿಯನ್ನೇ ದರೆ ಸಾಲದು. ಸಿಹಿಯನ್ನು ಮುಂದಿರಿಸಿ— ಸಿಹಿಯು ದಪಿ ಮಧುರಂ" ಆಗುವಂತೆ— ಕಹಿಯನ್ನು ತೋರಿ ಸಾಗಗೊಡಬೇಕು ಹಾಗಾದರೆ ಮಾತ್ರ ಜೀವನವು ಒಪ್ಪುಗಳ ಯಾಥಾರ್ಥ್ಯವನ್ನರಿಯಬಲ್ಲುದು. ಬಲ್ಲವರ : "ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್, ನ ಯಾತ್ ಸತ್ಯಂ ಅಪ್ರಿಯಂ" ಎಂದು. ಪ್ರಿಯವಾದ ಸತ್ಯವೇ ಲೋಕೋನ್ನತಿಯ ಸತ್ಯವಾಗುವುದು. ಅಪ್ರಿಯವಾದ ಸತ್ಯವು ಮೂಲೆಪಾಲಾಗುವುದು. ಅಂತೆಯೆ ವಿಮರ್ಶೆಯು ಸಾಹಿತ್ಯದ ಅಭಿವೃದ್ಧಿಯನ್ನು ಹಾರಯಿಸುವುದರೊಡನೆ ಲೇಖಕನ ಉತ್ಸಾಹವನ್ನು ಕಳೆಯೇರಿಸಬೇಕು. ವಿಮರ್ಶೆಯು ಸಹಾನುಭೂತಿಯ ತಳಹದಿಯಲ್ಲಿದ್ದು, ಸಹೃದಯತೆಯ ಆಳದಲ್ಲಿ ಹುದುಗಿ, ಸೌಹಾರ್ದದ ಮಡಿಲಲ್ಲಿರಬೇಕು. ಅದು ವಿಮರ್ಶೆ. ಅದು ಪರಿಶೀಲನೆಯ ಮರ್ಮ. ಅದು ಸಾಹಿತ್ಯದ ಮುನ್ನಡೆಗೆ ಸಾಧನವಾಗುವುದು, ಇಂತಹ ವಿಮರ್ಶೆಯಿಲ್ಲವಾದರೆ ಮಾತ್ರ ಸಾಹಿತ್ಯವು ವಿಚಾರಕ್ರಾಂತಿಯಲ್ಲಿ ಸಾಗದೆ, ಹುಚ್ಚುಮನಸ್ಸಿನ ಭ್ರಾಂತಜೀವನವಾಗುವುದು. ಸಂಸ್ಕಾರಶೂನ್ಯವಾಗುವುದು. ಸತ್ಯವು ಮರೆಯಾಗುವುದು. ಹೀಗೆಂಥ ಮಾತ್ರಕ್ಕೆ ವಿಮರ್ಶೆಯ ಆಗತ್ಯವು ಸ್ಪಷ್ಟವಾಯಿತು. ಕಾವ್ಯಗುಣದೋಷಗಳ ಅರಿವಿಗಾಗಿ—ಮಹೋನ್ನತಿಯ ದಾರಿಗಾಗಿ— ವಿಮರ್ಶೆಯೆಂದಾದಬಳಿಕ, "ವಿಮರ್ಶಕ"ನು ಹೇಗಿರಬೇಕೆಂಬ ಪ್ರಶ್ನೆಯು ತಾನಾಗಿ ಬರುವುದು.

ಕವಿ-ಕಾವ್ಯ ವಿಮರ್ಶಕನು ಸಂಪ್ರದಾಯಗಳನ್ನರಿತವನಾಗಿ, ವಾತಾವರಣದ ಜ್ಞಾನವುಳ್ಳವನಾಗಿ ಸಾಹಿತ್ಯಕ್ಷೇತ್ರದ ವ್ಯವಸಾಯಿಯಾಗಿರಬೇಕು. ವಿಮರ್ಶೆಗಾಗಿ ಎತ್ತಿಕೊಂಡ ವಿಷಯವನ್ನು ಸರಿಹೋಲುವ ಹಲವು ವಿಷಯಗಳನ್ನು ವಾತಾವರಣದ ಹಿನ್ನೆಲೆಯಲ್ಲಿ ಮಥಿಸಿದವನಿರಬೇಕು. 'ಕವಿಸಮಯ'ಗಳನ್ನರಿತು ವಸ್ತುನಿಯಮದ ಅರಿವುಳ್ಳವನಾಗಿರಬೇಕು. ಹೀಗಿದ್ದರೆ ಆವನೆತ್ತಿದ ಆರಂಭವು ಮುಂದೆ ಸಾಗುವುದು. ವಿಚಾರವರಿಯದೆ ಬರಿಯ ಓದಿನಿಂದ ತೋರಿದ ನಿರ್ಣಯವನ್ನು ಸಾರಿದರೆ, ಅದು ಕವಿ, ಕಾವ್ಯಕುಠಾರವಾಗುವುದು. ವಿಮರ್ಶೆಯು ಲೇಖಕನ ಎದೆಯನ್ನು ಸೀಳಬಾರದು. ತೆರೆಯಬೇಕು. ಅರಳಿಸಬೇಕು. ಉದಾತ್ತಭಾವನೆಯುಳ್ಳ ಸಹೃದಯನೆ— ರಸಿಕನೆ— ಪಂಡಿತನೆ— ವಿಮರ್ಶಕನಾಗಲು ಯೋಗ್ಯಪದವಿಗೆ ಪಾಲುಗಾರನು ರಸಿಕನೆಡೆಗೆ ರಸಾಸ್ವಾದವನ್ನೂ, ಪಂಡಿತನಿಗೆ ಪಾಂಡಿತ್ಯದ ಬೆರಗನ್ನೂ, ಲೋಕಕ್ಕೆ ವಿವೇಕವನ್ನೂ ಸಾರುವ ಕಾವ್ಯವಸ್ತುವ— 'ವಿಮರ್ಶಕ'ನೆದುರಿಗೆ ಎಲ್ಲಾ ಗುಣಗಳಿಂದಲೂ ನಿಲ್ಲುವಂತಿರಬೇಕು. ಎಂದರೆ ಈ ಎಲ್ಲಾ ಭಾಗಗಳಿಂದಲೂ ವಿಮರ್ಶಕನು ಕಾವ್ಯವನ್ನು ತೂಗಬೇಕು. ಆಗ ನಿಜವಾದ ತತ್ತ್ವವು ಕಾಣಿಸುವುದು ವಿಮರ್ಶಕನು ತನ್ನ ಹೊಣೆಗಾರಿಕೆಯನ್ನು ಪೂರ್ತಿಗೊಳಿಸಿ, ಕವಿ-ಕಾವ್ಯಗಳ ಜೀವಿತದಲ್ಲಿ ಸಮರಸನಾಗುವನು.

'ಮನಶ್ಶಾಸ್ತ್ರ'ದ ಅರಿವು ವಿಮರ್ಶಕನಿಗಿಂಬೇಡವೆ? ಒಹು ಅಗತ್ಯ! ಬರೆಯಲು ಮೊದಲಹೆಜ್ಜೆಯಿರಿಸುವ ಲೇಖಕರಿಗೆ ಮುನ್ನುಡಿ, ಮುಮ್ಮಾತು, ವಿಮರ್ಶೆ— ಇವುಗಳ ಆಶೆ ಅಧಿಕ. ಇದು ಲೇಖಕನು ಬೆಳಕಿಗೆ ಬರಲು ಹವಣಿಸುವ ಪ್ರಥಮವೇದಿಕೆ. ಇಲ್ಲಿ ವಿಮರ್ಶಕನು ಮಾನಸಿಕ ಪರಿಪಾಟಿಯಿಂದ ಪ್ರೋತ್ಸಾಹವನ್ನು ಬೀರುವ ಮಾತುಗಳನ್ನಾಡಿ, ತಪ್ಪುಗಳ ಎಣಿಕೆಯೊಡನೆ ವಿಶೇಷವಾಗಿಲ್ಲವಾದರೂ ಸಾಮಾನ್ಯಗಳಾದ ಒಪ್ಪುಗಳನ್ನು ಎದುರಿಗೆ ನಿಲ್ಲಿಸಿ, ನಾಲ್ಕು

ಮಾತುಗಳನ್ನು ಸಿಹಿಯೊಡನೆ ಹೇಳಿ, ಕಹಿಯನ್ನು ಸಿಹಿಯಲ್ಲಿಟ್ಟು ತೋರಿ ಮರೆಯಿಸಬೇಕು. ಪ್ರಥಮ ಪ್ರಯತ್ನದಲ್ಲೇ ಕುಠಾರವನ್ನೆತ್ತಿದರೆ ಭಾವನೆಯು ಕುಸಿದುಬೀಳುವುದು. ಬೀಳದಿದ್ದರೂ ನೊಂದ ಹೃದಯವು ಮುಂದೆ ನೋವನ್ನೇ ಲೇಖನದಲ್ಲಿ ತೋರಬಲ್ಲುದಲ್ಲದೆ, ಬೇರೆನನ್ನೂ ಕಾಣಿಸದು. ಇದು ಸ್ವಾರ್ಥಕ್ಕಾಗಿ ಹರಿದು, ಒಂದಲ್ಲ ಒಂದು ರೀತಿಯಲ್ಲಿ ಹಿಂಸೆಗೆ ಕಾರಣವಾಗುವುದು. "ಎಡವಿಬೀಳದೆ ಮಗುವು ನೇರಾಗಿ ನಡೆಯದು" ಎಂಬ ಮಾತನ್ನು ಇಲ್ಲಿ ವಿಮರ್ಶಕನು ಅರಿಯಲೇಬೇಕು. ವಿಮರ್ಶಕನೊಬ್ಬನ ಕಟುವಾಕ್ಯಗಳಿಗೆ ಬಲಿಯಾಗಿ, ಜನತೆಯೆಡೆಯಲ್ಲಿ ಕೀಳಾದ ಕಾವ್ಯದ ಸ್ಥಿತಿಯು ಕೆಡುವುದರೊಂದಿಗೆ, ಎಂದೆಂದೂ ಅಳಿಯದೆ ಉಳಿಯುವ ಒಂದು ರೀತಿಯ ಅಪನಂಬಿಕೆಯು ಲೇಖಕನಲ್ಲೂ — ಔದಾಸೀನ್ಯವು ಜನತೆಯಲ್ಲೂ —' ಇರಬಹುದೆಂಬುದನ್ನು ಮನಶ್ಶಾಸ್ತ್ರದ ತಳಹದಿಯಿಂದಲೇ ನಾವರಿಯಬಹುದು. ಇದು ವಿಮರ್ಶಕನ ತಿಳಿವಿಗೆ ಬರಬೇಕು.

ಇನ್ನೊಂದು 'ದಾಕ್ಷಿಣ್ಯ'. ಈ ಗುಣವು ವಿಮರ್ಶಕನ ಬಳಿ ಸುಳಿಯಲೇ ಬಾರದು. ವಿಮರ್ಶಕನು 'ನಿರ್ದಾಕ್ಷಿಣ್ಯ'ವಾಗಿ ತಪ್ಪುಒಪ್ಪುಗಳನ್ನು ಹೊರಗೆಳೆಯಲೇ ಬೇಕು. ಮೊದಲೇ ಹೇಳಿದಂತೆ ವಿಮರ್ಶಕನು ತನ್ನ ಮತವನ್ನೀಯುವಾಗ ಮಾತ್ರ ಜಾಗರೂಕನಾಗಿದ್ದು, ತಾನು ಮನಸ್ಸನ್ನು ಎಚ್ಚರಿಸುತ್ತಿದ್ದೇನೆಂಬುದನ್ನರಿಯಬೇಕು ದಾಕ್ಷಿಣ್ಯವುಳ್ಳವನು ವಿಮರ್ಶೆಯ ಬಳಿ ಸುಳಿಯಬಾರದು. ಜನತೆಯ ಮೇಲ್ಮೆಗಾಗಿ ಸಾಗುವ ವಾಙ್ಮಯದೆದುರು ದಾಕ್ಷಿಣ್ಯವು ಕಳ್ಳತನ. ಅದು ಒಂದು ಬಗೆಯ ಸ್ವಾರ್ಥವಾಗಬಹುದು. ಲೇಖಕನು ನಿರ್ದಾಕ್ಷಿಣ್ಯವಾದ ವಿಮರ್ಶೆಗೇನೇ ತನ್ನ ಮನಸ್ಸನ್ನು ಈಯಬೇಕು. ಅವನ ಅಭಿವೃದ್ಧಿಯನ್ನವನು ಅಂತಹ ವಿಮರ್ಶೆಯಲ್ಲಿ ನೋಡಬೇಕು. ಅದು ಅವನಿಗೆ ಕನ್ನಡಿ. ರಂಗಭೂಮಿಯ ನಾಟಕ ಪ್ರಯೋಗದಲ್ಲಿ, ಕವಿ ಕಾವ್ಯಗಳ ಬಗೆಯ ಪ್ರತ್ಯಕ್ಷ ಕಥನದಲ್ಲಿ, ವಿಮರ್ಶಕನು ಕೆಲವು ಬಾರಿ ಉಭಯಸಂಕಟದಲ್ಲಿ ಬೀಳುವನಾದರೂ, ತನ್ನ ಹೃದಯವನ್ನು ಜಾಗರೂಕತೆಯಿಂದ ಮುಂದಿರಿಸಿ, ಸತ್ಯ-ಅಸತ್ಯಗಳ ಮರ್ಮವನ್ನು ಸಾರಲೇಬೇಕು. ವಿಮರ್ಶಕನೂ ನಟನೂ, ವಿಮರ್ಶಕನೂ—ಕವಿಯೂ, ವಿಮರ್ಶಕನೂ—ಲೇಖಕನೂ, ವಿಮರ್ಶಕನೂ-ಕತೆ ಹಾಗೂ ಕಾದಂಬರಿಕಾರನೂ, '**ಮಾನವರು,** ಎಂಬುದನ್ನೂ '**ಹೃದಯ**' ವುಳ್ಳವರೆಂಬುದನ್ನೂ ಎಂದೆಂದೂ ಮರೆಯಬಾರದು. ದಾಕ್ಷಿಣ್ಯವು ಒಮ್ಮೆ ಆನಂದದಾಯಕವಾದರೂ ಸಾಗುವ ದಾರಿಗೆ ಆತಂಕವನ್ನೊಡ್ಡುವುದು. ಇಂದಿನದು ಮೂಢವಾಗಿದ್ದರೂ ಮುಂದಿನದು ತೇಜವಾಗಿರಬೇಕು. ಸಮುದ್ರ ಮಥನದಲ್ಲಿ ಹುಟ್ಟಿಬಂದ ರತ್ನರಾಶಿಗಳೊಡನೆ ವಿಷವೂ ತೋರಿಬಂದರೂ, ರತ್ನಗಳೆಡೆಯಲ್ಲಿ ತಾನು ಕ್ಷೀಣವಾಗಿ, ಕೊನೆಗೆ ಲಭಿಸಿದ ಅಮೃತದಲ್ಲಿ ತೀರಾ ಮರೆಯಾಯಿತು. ವಿಷವೇ ಬಂದರೂ, ಅದು ಅಮೃತದಲ್ಲಿ ಮರೆಯಾಗಿ ಜೀವದಾನ ಮಾಡಬೇಕೆಂಬುದೇ ಈ ಮಾತಿನ ಅರ್ಥ.

ಮುಂದಿನದು 'ಸಹಾನುಭೂತಿ'. ಇದೊಂದು ದೊಡ್ಡ
ಲೇಖನಿಯಿಂದ ಹೊರಸೂಸಿದ ಪ್ರತಿಯೊಂದು ಭಾವದಲ್ಲೂ, ...
ವೇಶದಲ್ಲೂ, ಸನ್ನಿವೇಶದಲ್ಲೂ, ವಿಮರ್ಶಕನು ತನ್ನ ಅನುಭ...
ತೋರಬೇಕು. ಕಾವ್ಯ ನಿರ್ಮಾತೃವಿನ ಹೃದಯ, ಸ...
ಜೀವಿತ, ಆರ್ಥಿಕ ಆಚಾರ ಇವುಗಳೆಡೆಯಲ್ಲೂ ವಿಮರ್ಶ...
ತನ್ನ ಒಲವನ್ನು ತೋರಬೇಕು. ಲೇಖಕನ ಮನವು ನೋ...
ದಂತೆಯೂ, ಅವನ ಜೀವಿತವು ಕುಸಿಯದಂತೆಯೂ, ಮೇ...
ದಾರಿಗೆ ಅವನಿಳಿಯುವಂತೆಯೂ, ವಿಮರ್ಶಕನು ಊರುಗೋ...
ನ್ನೀಯಬೇಕು. ಲೇಖಕನ ಮನವೇ ದಾರಿಯೇ ತತ್ತ್ವವೆ—...
ರ್ಶೆಯ ಕಾಲದಲ್ಲಿ—ವಿಮರ್ಶಕನದಾಗಬೇಕು. ಜನತೆಯ ...
ಒಂದು ಜೀವಿತವು ಸುಗಮವಾಗಿ ಸಾಗಗೊಡುವಂತೆ, ವಿಮರ್ಶ...
ಅನುಭಾವಿಯಾಗಿರಬೇಕು. ಒಂದು ತತ್ತ್ವವನ್ನು ನಿರ್ದಾಕ್ಷಿಣ್ಯ...
ಕೂಲಂಕಷವಾಗಿ ಅರಿತು ಇರುವುದೇ ಅನುಭಾವದ ...
ಅನುಭೂತಿಯ ಲಕ್ಷಣ. ಕಾವ್ಯ ಪರೀಕ್ಷಾಕಾಲದಲ್ಲಿ-ಕವಿಯ ...
ಭಾಷೆ, ಗತಿ, ವಿಚಾರ-ಇವೆಲ್ಲವನ್ನೂ ಸಮೂಲವಾಗಿ ...
ಮಾತ್ರ ಸುಶಿಕ್ಷಿತನಾದ, ಸಂಸ್ಕೃತನಾದ ವಿಮರ್ಶಕನಲ್ಲಿ ಈ ಗ...
ಒಡಮೂಡುವುದಿಲ್ಲ. ಈ ಗುಣವಿಲ್ಲದ ವಿಮರ್ಶಕನು ತ...
ಅಭಿಪ್ರಾಯದಲ್ಲಿ ಹೃದಯದ ಬಾಯಿಂದ ಬಾರದ 'ಅನಾ...
ಓದಬಾರದು, ನಿಷ್ಪ್ರಯೋಜಕ, ಹರಟೆ, ಹುಚ್ಚು' ಈ ಪದಗ...
ಹೆಣೆದುಕೊಳ್ಳುವನು! ಹೃದಯದ ನೋವನ್ನರಿಯಬ...
ಮಾತ್ರ ಹಾಗೆಂದೂ ಬರೆಯಲಾರ. ಈ ಗುಣವು ವಿಮರ್ಶ...
ಅತ್ಯಗತ್ಯವು.

ಇನ್ನೊಂದು 'ಸಹೃದಯತೆ'. ಈಕುರಿತು ಮಾತಾ...
ರಸಿಕನೆಡೆ ವಿಮರ್ಶಕನದಾಗಬೇಕು. ಸಮಾನಹೃದಯವೇ ಸ...
ಯತೆ. ತೂಗುವ ತುಲೆಯಲ್ಲಿ, ವಿಮರ್ಶಕನು ತಾನು ಹೊರ...
ಭಾರವನ್ನು ತೂಗಬಾರದು. ಇದು ಲೋಕನ್ಯಾಯವಲ್ಲ! ...
ನ್ಯಾಯ! ಲೇಖಕನ ಹೃದಯದಿಂದ ಉಕ್ಕಿ ಬಂದ ಉದ...
ಸ್ಥಾನಗಳಲ್ಲಿ ವಿಮರ್ಶಕನು ಸಹೃದಯನಾಗಿ ತಲೆದೂಗ...
ಈ ಭಾಗವು ನಾಟಕಪ್ರಯೋಗದಲ್ಲಿ ಬಹು ಬೇಗನೆ ಸಾಗು...
ತಲ್ಲೀನತೆಯು ಸಹೃದಯನ ಮತ್ತೊಂದು ಹಿರಿಮೆ. ಲಯ...
ರಸವಾಗದು. ಮನಸ್ಸನ್ನು ತಟ್ಟುವೆಡೆಯಲ್ಲಿ ವಿಮರ್ಶಕನು ತ...
ತಾನರಿತಿರಬೇಕು. ವಿಭಾವಾನುಭಾವಗಳಿಂದ ಪೋಷಕವಾಗಿ ...
ರಸದೆಡೆಯಲ್ಲಿ— ಮರುಳಾಗಿಸುವ ಸಂಧಿಯಲ್ಲಿ— ವಿಮರ್ಶ...
ತನ್ನ ತುಂಬಿದ ಲೇಖನಿಯನ್ನು ಸಾಗಿಸಿ, ಲೇಖಕನ—ನ...
ಹೃದಯವನ್ನು ತುಂಬಬೇಕು. ಅಂತೂ ಪ್ರೋತ್ಸಾಹದ...
ಉದಾರದಾನ.

ಮುಂದಿನದು ವಿಶಾಲ ಹೃದಯ. ಸಂಕುಚಿತ ಮನೋ...
ನೆಯು ತರವಲ್ಲ ಈ ಭಾವನೆಯು ಬಂದಾಗ ಮಾತ್ರ ತ...
ತನ್ನ ದೇಶದ ಮಾತು, ಅನ್ಯಭಾಷೆ, ಅನ್ಯಜಾತಿ, ಅನ್ಯ...
ಮೊದಲಾದ ಹೇಯಭಾವಗಳು ಮೂಡುವುವು. ಅಂತಹ

ಮು ಸಾರುವುದು ಕವಿಧರ್ಮವನ್ನಲ್ಲ; ಜಾತಿ ಧರ್ಮದ ಹೊಗೆ-
ನ್ನು ಕಾರುವುದು !! ಸಮಸ್ತವನ್ನು ಸ್ವಾಗತಿಸುವ ಹೃದಯುವು
. ಭಾಷೆ ಮತ್ತು ಹೃದಯುವು ಒಂದೇ ಎಂಬ ಭಾವನೆಯೂ
ಇರಬೇಕು. ವಿಮರ್ಶಕನು ವ್ಯಕ್ತಿಗಾಗಿರುವವನಲ್ಲ; ವ್ಯಕ್ತಿ-

ಶಕ್ತಿಯ ಪರೀಕ್ಷಣೆಗಾಗಿ. ಶಕ್ತಿನ್ಯಾಯವೇ ಅಲ್ಲಿರಬೇಕು. ಅವನಳೆಯುತ್ತಿರುವುದು ಲೇಖಕನ ಶಕ್ತಿಯನ್ನೆಂಬುದನ್ನರಿತರೆ 'ವಿಶಾಲಭಾವನೆಯು' ತಾನಾಗಿ ಒಡಮೂಡುವುದು. ಒಪ್ಪಿದುದನ್ನು ವಂದಿಸಿ ಹರಸಿ ಆನಂದಿಸಲೇಬೇಕು. ಒಪ್ಪದುದನ್ನು ತೆಗಳದೆ ಸರಿದಾರಿಗೆ ಸಾಗಗೊಡಿಸುವಂತೆ ದಾರಿಯನ್ನರುಹಿ—ಚಪ್ಪರಿಸಬೇಕು ಮನವನ್ನು! ಆದುದರಿಂದಲೆ ಲೇಖಕನಿಗಿಂತ ಮೇಲ್ಮಟ್ಟದಲ್ಲಿರುವುದು ವಿಮರ್ಶಕನು ವಿಷಯವನ್ನು ಮಥಿಸಿ ಗುಣ-ದೋಷಗಳನ್ನು ಶೋಧಿಸಿ, ಯೋಗ್ಯವಾದ ದಾರಿಗೆ ಸಾಗಗೊಡಿಸುವಂತೆ ಮಾಡುವ ದೊಡ್ಡ ಹೊಣೆಗಾರಿಕೆ ಹಾಗೂ ಹಿರಿಮೆಯು ವಿಮರ್ಶಕನಿಗಿದೆ.

ಮುಂದಿನದು 'ಪಾಂಡಿತ್ಯ'. ತಾನು ಎತ್ತಿಕೊಳ್ಳುವ ಭಾಗದ ಹಾಗೂ ಇತರ ವಾತಾವರಣದ ಪೂರ್ಣ ಪಾಂಡಿತ್ಯವು ವಿಮರ್ಶಕನಿಗಿರಬೇಕು. ಪಾಂಡಿತ್ಯವಿಲ್ಲದೆ ಕಡೆಯಲು ಸಾಧ್ಯವಾಗದು. ಪಾಂಡಿತ್ಯಪೂರ್ಣ ಹೃದಯದ ಇತ್ಯರ್ಥವು ಸಾರವತ್ತಾಗುವುದು. ವಿವಿಧ ಸಾಹಿತ್ಯ ಮಾರ್ಗಗಳನ್ನು ಓದಿ, ಸಂಪೂರ್ಣ ಪಾಂಡಿತ್ಯವನ್ನು ಪಡೆದವನೇ ನಿಜವಾದ ವಿಮರ್ಶಕನ ಸ್ಥಾನಕ್ಕೇರುವನು. ಹಾಗಿಲ್ಲದವನ ವಿಮರ್ಶೆಯು ಬರಡಾಗದೆ ಇರಲಾರದು

ಪಾಂಡಿತ್ಯದಂತೆಯೆ ವಿಮರ್ಶಕನ ಸ. ಸ್ಕೃಂ. ಗುಣ ಸೌಹಾರ್ದವು ಸ್ಥಾನ ಪಡೆಯಬೇಕು. ವಿಶ. ಇಲ್ಲವೆ. ಎಂತಹವನೂ ಇತ್ತ ಕಾವ್ಯಭಾ. ಪ್ಪೆ ಒಲುಮೆಯ ಸ್ವಾಗತವೀಯುವ ಸ್ನೇಹಭಾವವು ಆತನಲ್ಲಿರಬೇಕು. ಹೀಗಾದರೇನೇ ಸರ್ವತೋಮುಖವಾದ ಸಾಹಿತ್ಯವು ವಿಶಾಲವಾಗಿ ಕಳೆಬೀರುವುದು. ಇಂತಹ ವಿಶಿಷ್ಟ ಗುಣಗಳಿಂದ ತುಂಬಿದ ಸಾಹಿತ್ಯಪುರೋಗತಿಯ ಮಾರ್ಗದರ್ಶಕನಾದ ವಿಮರ್ಶಕನೇ ಜನಜೀವನದ ಸಾಹಿತ್ಯದ ಬೆಳಕು.

———

ಸಾದರ ಸ್ವೀಕಾರ

★

೯೭. **ಅಮರ ಆಗಸ್ಟ್** (ಸ್ವತಂತ್ರ ಕಾದಂಬರಿ) ಬರೆದವರು ಶ್ರೀಮಾನ್ ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು. ಕ್ರಾ. ಅ. ೧೪೨ ಪುಟ ಬೆಲೆ ೨-೦-೦.

೯೮. **ಮುಂಜಾವಿನಿಂದ ಮುಂಜಾವು** (ಸ್ವತಂತ್ರ ಕಾದಂಬರಿ.) ಬರೆದವರು 'ತ. ರಾ. ಸು.' ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು. ಕ್ರಾ. ಅ. ೨೫೮ ಪುಟ. ಬೆಲೆ ೩-೧೨-೦.

೯೯. **ಹಿಗ್ಗು** (ಕವನ ಸಂಕಲನ) ಬರೆದವರು 'ವಿನಾಯಕ' (ಪ್ರಿ. ವಿ. ಕೆ. ಗೋಕಾಕ). ಪ್ರಕಾಶಕರು ಕಾವ್ಯಪ್ರಕಾಶನ ಸಮಿತಿ, ವಿಶ್ರಾಮಬಾಗ, ಸಾಂಗಲಿ. ಕ್ರಾ. ಅ. ೯೨ ಪುಟ, ಬೆಲೆ ಉತ್ತಮ ಪ್ರತಿಗೆ ೨-೦-೦; ಸಾದಾ ಪ್ರತಿಗೆ ೧-೧೨-೦.

೧೦೦. **ಬಾಳಿಗೊಂದು ನಂಬಿಕೆ** (ವಿಚಾರಪ್ರವರ್ತಕ ಪ್ರಬಂಧ) ಬರೆದವರು ಶ್ರೀಮಾನ್ 'ಡಿ. ವಿ. ಜಿ.' ಅವರು. ಪ್ರಕಾಶಕರು ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. ಕ್ರಾ. ಅ. ೯೨ ಪುಟ; ಬೆಲೆ ೧-೦-೦.

೧೦೧. **ಮುಂಬಯಿಯ ಮುನ್ನಡೆ** (೧ ಶಿಕ್ಷಣ) ಮುಂಬಯಿ ಸರಕಾರದ ಪ್ರಸಿದ್ಧಿಶಾಖೆಯ ಪ್ರಕಟನೆ. ಡೆ. ಅ. ೫೨ ಪುಟಗಳು. ಬೆಲೆ ೦-೮-೦.

೧೯೪೭ ನೆಯ ಅಕ್ಟೋಬರಿನಿಂದ ೧೯೪೯ ನೆಯ ಮಾರ್ಚ್ ವರೆಗಿನ ೧೮ ತಿಂಗಳ ಅವಧಿಯಲ್ಲಿ ಮುಂಬಯಿ ಸರಕಾರವು ಶಿಕ್ಷಣ ಶಾಖೆಯಲ್ಲಿ ನಡೆಯಿಸಿದ ಚಟುವಟಿಕೆಗಳ ವರದಿ ಇದರಲ್ಲಡಕವಾಗಿದೆ. ಸರಕಾರ ಇಷ್ಟು ಚಟುವಟಿಕೆ ನಡೆಯಿಸಿದ್ದರೂ, ಅದು ಜನಜೀವನದ ಕಣ್ಣಲ್ಲಿ ಸಾಕಷ್ಟು ಪ್ರಭಾವಿಯಾಗಿ ಕಾಣದಿರುವುದು ವಿಷಾದದ ಸಂಗತಿಯಾಗಿದೆ.

೧೦೨. **ಮಕ್ಕಳ ವರ್ತನೆ** (ಮನಶ್ಶಾಸ್ತ್ರ ವಿಷಯಕ ಗ್ರಂಥ) ಬರೆದವರು ಡಾ. ಡಿ. ಕುಪ್ಪುಸ್ವಾಮಿ ಎಂ. ಎ., ಡಿ ಲಿಟ್. ಮೈಸೂರು. ಪ್ರಕಾಶಕರು ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. ಕ್ರಾ. ಅ. ೧೪೦ ಪುಟ. ಬೆಲೆ ೧-೪-೦.

೧೦೩. **ಆ ಹೆಂಗುಸು** (ಅನುವಾದಿತ ಕಥಾಸಂಕಲನ) ಮೂಲ ಇಂಗ್ಲಿಷ್ ಕತೆಗಳನ್ನು ಅನುವಾದಿಸಿದವರು ಶ್ರೀ. ಎನ್. ಸೂರಪ್ಪ, ಚಿತ್ರದುರ್ಗ. ಪ್ರಕಾಶಕರು ನವೋದಯ ಪ್ರಕಟನಾಲಯ, ಚಿತ್ರದುರ್ಗ. ಫೂ. ಕ್ಯಾ. ಅ. ೧೩೦ ಪುಟ. ಬೆಲೆ ೧-೦-೦.

೧೦೪. **ಸ್ವಾ...ಶವಾದ** (ರಾ... ವಿಚಾರ ಗ್ರಂಥ). ಬರೆದವರು ಶ್ರೀ... ಎಂ. ಹುಣಶಾಳ ಎಂ. ಎ., ... ಧಾರವಾಡ. ಲೇಖಕರೇ ಪ್ರಕ... ಕ್ರಾ. ಅ. ೧೦೮ ಪುಟಗಳು, ಬೆಲೆ ೧...

೧೦೫. **ಮಾಡಿ ಮಡಿ...** (ಸ್ವತಂತ್ರ ಸಾಮಾಜಿಕ ಕಾದ... ಬರೆದವರು ಶ್ರೀ. ಬಸವರಾಜ ಕ... ಮೈಸೂರಿನ ಉಷಾಸಾಹಿತ್ಯದ ೨೩-೨೪ ನೆಯ ಗ್ರಂಥ. ಕ್ರಾ. ... ಪುಟಗಳು. ಬೆಲೆ ೩-೦-೦.

೧೦೬. **ಜಾನಪದ** (ಹೊ... ಪತ್ರಿಕೆ) ಪ್ರತಿ ಗುರುವಾರ ಪ್ರಕಟ... ವುದು. ಸಂಪಾದಕರು ಮತ್ತು ... ಶಕರು ಶ್ರೀ. ಕಲ್ಲೆ ನಾರಾಯಣರ... 'ಜಾನಪದ' ಕಾರ್ಯಾಲಯ, ಕಟ್ಟಾ, ಮಂಗಳೂರು. ಕ್ರಾ. ... ಪುಟಗಳು. ವಾ. ಚಂದಾ ೪ ೮ ... ಸಂಚಿಕೆಗೆ ೦-೧-೬.

ಸಂಪಾದಕರಾದ ಶ್ರೀ. ಕಲ್ಲೆ... ಯಣರಾಯರು, ತಮ್ಮ ವಿವಿಧ ಸಾರ್ವಜನಿಕ ಕಾರ್ಯದಿಂದ ಕನ... ಕ್ಕೆಲ್ಲ ಪರಿಚಿತರು. ಅವರು ಪ... ಘೋರಣೆಯನ್ನಿರಿಸಿಕೊಂಡು ಈ... ಹೊರಡಿಸಿದ್ದಾರೆ. ಬಹುಕಾಲ ಲೋಕಜಾಗೃತಿ ಮಾಡಲಿ !

೧೦೭. **ಅಮೇರಿಕೆಯ ಮೂಲ ಶಿಕ್ಷಣ** (ವಿಷಯ ... ನಾತ್ಮಕ ಗ್ರಂಥ). ಬರೆದವರು ಶ್ರೀ... ಮೇದಿ ಹುಚ್ಚೇಶ್ವರ, ಹುಬ್ಬಳ್ಳಿ. ಲೇ... ಪ್ರಕಾಶಕರು. ಕ್ರಾ. ಅ. ೩... ಪುಟಗಳು. ಬೆಲೆ ೬-೦-೦.

೧೦೮. **ಗ್ರಾಮಾಭ್ಯುದಯ** (... ಪತ್ರಿಕೆಯ ಸ್ವಾತಂತ್ರ್ಯ ದಿನ... ವಿಶೇಷ ಸಂಚಿಕೆ). ಸಂಪಾದ... ಶ್ರೀಮಾನ್ ಜೀರಗೆ ಕಟ್ಟಿ ಬಸಪ್ಪ... ಅವರು. ಮೈಸೂರು ಸರಕಾರದ ಗ್ರಾ... ಭ್ಯುದಯ ಶಾಖೆಯಿಂದ ಪ್ರಕಟ... ಪತ್ರಿಕೆಯಿದು. ಕ್ರಾ. ೪ದ ೬೮ಪು...



೧೦೯. **ಸೇನಾಪತಿ ಚೆನ್ನಪ್ಪ ವಾಲಿ** (ವ್ಯಕ್ತಿ ಮತ್ತು ಕಾರ್ಯ) ...ದವರು ಶ್ರೀ. ಬಸವಂರಾಜ ಕಟ್ಟೀಮನಿಯವರು. ಪ್ರಕಾಶಕರು: ...ತೀಲ ಸಾಹಿತ್ಯಮಾಲೆ, ಧಾರವಾಡ. ಕ್ರಾ. ೮೪ ಪುಟಗಳು, ...೧-೦-೦.

೧೧೦. **ಸನ್ನಬ್ಬೆ** (ನೀಳ್ಗವನ) ಬರೆದವರು ಶ್ರೀ. ಶ... ...ಎಸ್‌ಸಿ. (ಅಗ್ರಿ). ಪ್ರಕಾಶಕರು ತೋಂಟದಾರ್ಯ ಮುದ್ರ... ...ಯ, ಧಾರವಾಡ. ಕ್ರಾ. ಅ. ೩೫ ಪುಟ; ಬೆಲೆ ೦-೮-೦.

೧೧೧. **ದನಕರುಗಳ ಕುರಿ-ಕೋಳಿಗಳ ಸಂಗೋಪನ ...ತ್ತು ಲಘುಚಿಕಿತ್ಸೆ** (ವೈಜ್ಞಾನಿಕ ಪುಸ್ತಕ). ಬರೆದವರು ...ಕಾಶಕರು ಶ್ರೀಮಾನ್ ಟಿ. ಎಸ್. ಕುಲಕರ್ಣಿ ರಿಟಾಯರ್ಡ್ ...ವೆಟರ್ನರಿ ಡಾಕ್ಟರ್, ತೊರವಿ. ಜಿ. ವಿಜಾಪುರ. ಕ್ರಾ. ಅ. ೯೪ ...ಗಳಲ್ಲದೆ ಬೇರೆ ಚಿತ್ರದ ಪುಟಗಳೂ ಇವೆ. ಬೆಲೆ ೨-೦-೦.

೧೧೨. **ಪ್ರಾರ್ಥನೋತ್ತರ ಭಾಷಣ ಸಾರವು** (ಒಂದು ...ಮಕ್ಕಳ ಸಂಸ್ಥೆಯಲ್ಲಿ ಮಾಡಿದ ಭಾಷಣಗಳ ಸಾರಸಂಕಲನ) ...ಷಣಮಾಡಿದವರು 'ಮಹಾಲಕ್ಷ್ಮೀಕುವರಿ'. ಪ್ರಕಾಶಕರು ಡಾ. ...ರಂ. ಪುರಾಣಿಕ, ಆರೋಗ್ಯವರ್ಧಕ ಮಂಡಲ, ಧಾರವಾಡ. ...ಅ. ೧೧೨ ಪುಟಗಳು. ಬೆಲೆ ?

೧೧೩. **ಗರ್ಜನೆ** (ಮಾಸಪತ್ರಿಕೆ) ಗದುಗಿನಲ್ಲಿ ಹಿಂದೆ ...ರಡುತ್ತಿಲಿದ್ದುದು ಪುನಃ ಪ್ರಾರಂಭವಾಗಿದೆ. ಸಂಪಾದಕರು ಶ್ರೀ. ...ಲೋ. ಬಂಕಾಪುರ, ಗರ್ಜನೆ ಕಾರ್ಯಾಲಯ ಗದಗಬೆಟಗೇರಿ. ...ಅ. ೪೫ ಪುಟಗಳು. ವಾರ್ಷಿಕಚಂದಾ ೩-೦-೦. ಬಿಡಿ ...ಚಿಕೆಗೆ ೦-೬-೦.

ಕನ್ನಡ ಯುವಕರ ವಾಣಿಯ ಪ್ರಾತಿನಿಧ್ಯಕ್ಕಾಗಿ ಗರ್ಜನೆ ಹೊಸ ಉತ್ಸಾಹದಿಂದ ಮುಂದೆ ಬಂದಿದೆ. ಹೊಸ ಉತ್ಸಾಹ ಅವಿರತವಾಗ್ಯಿದ್ದು ಕೊಂಡು, ಗರ್ಜನೆಯು ಕೂಗನ್ನು ಬಹುಕಾಲ ಕನ್ನಡಿಗರಿಗೆ ಕೇಳಿಸುವಂತೆ ಮಾಡಲಿ

೧೧೪. **ಅನಿಷ್ಟ ದೇವದಾಸೀ ಪದ್ಧತಿ** (ಒಂದು ಭಾಷಣ) ಭಾಷಣಕಾರರು ಮುಂಬಯಿ ಸರಕಾರದ ಹಿಂದುಳಿದ ವರ್ಗ ಹಾಗೂ ಮಾನುಗಾರಿಕೆ ಶಾಖೆಯ ಮಾನ್ಯಮಂತ್ರಿ ಶ್ರೀ. ಗ. ದೇ. ತಪಾಸೇ ಅವರು. ಮುಂಬಯಿ ಸರಕಾರದ ಪ್ರಸಿದ್ಧಿಶಾಖೆಯ ಪ್ರಕಟನೆ. ಕ್ರಾ. ಅ. ೮ ಪುಟಗಳು.

೧೧೫. **ಹಿಂದೂಕೋಡ ಮಸೂದೆ** (ಅದರ ಹಿನ್ನೆಲೆ ಹಾಗೂ ವಿವರಗಳು). ಬರೆದವರು ಶ್ರೀಮಾನ್ ಐರಣಿ ಶ್ರೀನಿವಾಸ ಬಿ.ಎ. (ಆನರ್ಸ್) ಪ್ರಕಾಶಕರು ಪೂರ್ಣಿಮಾ ಪ್ರಕಾಶನ, ಮುಂಬಯಿ ೧೪. ಕ್ರಾ. ಅ. ೩೪ ಪುಟಗಳು. ಬೆಲೆ ೦-೮-೦.

೧೧೬. **ಹೃದಯ ವೀಣೆ** (ಕವನ ಸಂಕಲನ) ಬರೆದವರು ಶ್ರೀಮಾನ್ ಅಡಿಬಾಯಿ ರಾಮಣ್ಣ ಶೆಟ್ಟಿ. ಧರ್ಮಸ್ಥಳ, ದ. ಕನ್ನಡ ಜಿಲ್ಲಾ. ಕ್ರಾ. ಅ. ೭೬ ಪುಟ. ಬೆಲೆ ೧-೦-೦

೧೧೭. **ಹಳ್ಳಿಗ ವಾಚನಾಲಯ ಹಳದಿಪುರ** (ಪರಿಚಯ ಮತ್ತು ವರದಿ). ಅಧ್ಯಕ್ಷರು ಡಾ. ಜಿ. ಎಸ್. ಸಭಾಹಿತರು, ಹಳದಿಪುರ (ಉ. ಕ. ಜಿಲ್ಲಾ). ಫು. ಕ್ಯಾ. ಅ. ೧೨ ಪುಟಗಳು.

೧೧೮. **ಸುಕುಮಾರ** (ಹೊಸ ಮಾಸಪತ್ರಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಉಮಾಪತಿ ಶಾಸ್ತ್ರಿ ಬಿ. ಎ., ಶಿವಯೋಗ ಮಂದಿರ, ಜಿಲ್ಲಾ ವಿಜಾಪುರ. ಡೆ. ಅ. ೬೪ ಪುಟಗಳು. ವಾ. ಚಂ; ೫ ರೂಪಾಯಿ. ಬಿಡಿಸಂಚಿಕೆಗೆ ೦-೮-೦.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

"ಕರ್ನಾಟಕ ವೈಭವ ಪ್ರಕಾಶ"

ಅಖಿಲ ಕರ್ನಾಟಕ

ಡೈರೆಕ್ಟರಿ

ಕರ್ನಾಟಕದ ಎಲ್ಲ ಪ್ರಮುಖ ಉದ್ಯೋಗಸ್ಥರ ವ್ಯಾಪಾರೀ ಸಂಸ್ಥೆಗಳ, ಕಾರಖಾನೆಗಳ ಹಾಗೂ ಹೊರಗಿನ ಪ್ರಸಿದ್ಧ ಕಂಪನಿಗಳಿಗೆ ಕರ್ನಾಟಕದಲ್ಲೆಲ್ಲ ಎಜೆಂಟ್, ಅರ್ಗನಾಯ್ಝರ್ ಆಗಿರುವ ಸಂಸ್ಥೆ ಹಾಗೂ ವ್ಯಕ್ತಿಗಳ ಪತ್ತೆ (ಅಡ್ರೆಸ್)ಗಳನ್ನು, ಇದರಲ್ಲಿ ಸೇರಿಸಬೇಕೆಂದು ನಿರ್ಧರಿಸಲಾಗಿದೆ. ದಯವಿಟ್ಟು ನಿಮ್ಮ ವಿವರಗಳನ್ನು ಕಳಿಸಿಕೊಡಿ.

ಜಾಹೀರಾತು ಕೊಡಬಯಸುವವರು ಪ್ರಕಾಶಕರೊಡನೆ ಕೂಡಲೆ ಪತ್ರವ್ಯವಹಾರ ಮಾಡಬಹುದು ಜಾಹೀರಾತು ಸ್ವೀಕಾರದ ಕೊನೆಯ ದಿನ ೧೫—೧೧—೧೯೫೦.

ಪ್ರಕಾಶಕರು :—

Dixit Printing Press Ltd.
DAVANGERE CITY

ದೀಕ್ಷಿತ ಪ್ರಿಂಟಿಂಗ ಪ್ರೆಸ್
ದಾವಣಗೆರೆ—ಸಿಟಿ

ಕಿರ್ಲೋಸ್ಕರ



ಸೆಂಟ್ರಿ ಫ್ಯೂಗಲ್

ಪಂಪುಗಳು

ಯು. ಪಿ. ಟೈಪ್ ಪಂಪ್

ಒಕ್ಕಲತನ ಮತ್ತು ಕಾರಖಾನೆಯ ಉಪಯೋಗಗಳಿಗೆ ಅತ್ಯಂತ ಉಪ-ಯುಕ್ತವಾದುದು. ತಾಳಿಕೆ, ಭದ್ರವಾದ ರಚನೆ ಮತ್ತು ಆಕೃತಿ ಇವುಗಳ ಮೂಲಕ ದಿನದಿನಕ್ಕೂ ಬೆಳೆಯುತ್ತಿರುವ ಲೋಕಪ್ರಿಯತೆಯನ್ನು ಪಡೆಯುತ್ತಲಿದೆ ಈ ಪಂಪು.



ಬಿ. ಎಸ್. ಎ. ಪಂಪು

ಅತ್ಯಂತ ಆಧುನಿಕ ಹಾಗು ಯಾಂತ್ರಿಕ ರಚನೆಯ ಮೇರೆಗೆ ತಯಾರಿಸಲ್ಪಟ್ಟಿರುವುದು. ಗಿರಾಕಿಗೆ ಕಳಿಸುವ ಮುನ್ನ ಪ್ರತಿಯೊಂದು ಪಂಪನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದೆ. ಈ ಪಂಪುಗಳು ಔದ್ಯೋಗಿಕ ಹಾಗು ಒಕ್ಕಲತನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತವೆ.

ಕಿರ್ಲೋಸ್ಕರ ಬಂಧುಗಳು ಲಿ. ಕಿರ್ಲೋಸ್ಕರವಾಡಿ

ಜಯಂತಿಯ
ಹೇಮಂತ ಸಂಚಿಕೆ !!!

(೧ನೆಯ ಜನವರಿ ೧೯೫೧ಕ್ಕೆ ಪ್ರಕಟವಾಗುವುದು.)

ಚಳಿಗಾಲದಲ್ಲಿ ಬೆಚ್ಚಗೆ ಮನೆಯಲ್ಲಿ ಕುಳಿತು ಮನತಣಿಯುವಂತೆ ಓದಲು ಬೇಕಲ್ಲವೆ?

ಜಯಂತಿಯು ಈಸಲ ನಿಮಗೆ ಅದನ್ನು ಒದವಿಸಿಕೊಡುವದು.

ಕನ್ನಡದ ಉತ್ತಮೋತ್ತಮ ಬರೆಹಗಾರರಿಂದ ಬರೆಯಿಸಿ ತರಿಸಿದ ವಿವಿಧ ವಿಷಯಗಳ ಮೇಲಿನ ಲೇಖನಗಳು, ಕಥೆ, ಹರಟೆ, ಏಕಾಂಕ, ಕವಿತೆ ಮುಂತಾದವು.

ಇದಲ್ಲದೆ ಮುಂಬಯಿಯಲ್ಲಿ ಜರುಗಲಿರುವ ಕನ್ನಡದ ಸಾಹಿತ್ಯ ಸಮ್ಮೇಲನದ ಬಗ್ಗೆ ವಿಶೇಷ ಲೇಖನಗಳೂ ಪ್ರಕಟವಾಗುವವು.

ಹೊದಿಕೆಯ ಮೇಲೆ ತ್ರಿವರ್ಣದಲ್ಲಿ ಸುಂದರವಾದ ಚಿತ್ರ. ಒಳಗೂ ಅನೇಕ ಚಿತ್ರಗಳ

ಪುಟಸಂಖ್ಯೆ ೪೦ .... ಬೆಲೆ ೧೨ ಆಣೆ.

ಜಾಹೀರಾತು ಕೊಡಬಯಸುವವರೂ ಏಜಂಟರೂ ಕೂಡಲೆ ನಮಗೆ ಬರೆಯಬೇಕು.

ವ್ಯವಸ್ಥಾಪಕ
ಜಯಂತಿ ಧಾರವಾಡ

ರಾಮತೀರ್ಥ ಬ್ರಾಹ್ಮಿ ತೈಲ

(ಸ್ಪೆಶಲ್ ನಂ. ೧) ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ. ಶಾಂತ ನಿದ್ದೆ ಬರುತ್ತದೆ. ಕಣ್ಣಿನ ದೃಷ್ಟಿ ಹೆಚ್ಚುತ್ತದೆ. ಬಕ್ಕ ನಾಶಿಯಾಗುತ್ತದೆ. ಕೂದಲು ಕಪ್ಪಾಗುತ್ತವೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಕ್ರಯ ದೊಡ್ಡ ಬಾಟ್ಲಗೆ ೩ ೮ ೦
ಸಣ್ಣ ಬಾಟ್ಲಗೆ ೨-೦-೦

ಪೋಸ್ಟು ಮೂಲಕ ಒಂದೊಂದು ಬಾಟ್ಲಿ ತರಿಸುವವರು ದೊಡ್ಡ ಬಾಟಲಿಗಾಗಿ ೫ ೫-೦ ಯನ್ನು ಸಣ್ಣ ಬಾಟಲಿಗಾಗಿ ರೂ. ೩-೭-೦ ಯನ್ನು (ಇದು ಅಂಚೆ-ಕಟ್ಟು ವೆಚ್ಚವನ್ನೊಳಗೊಂಡಿದೆ) ಮನಿಆರ್ಡರದಿಂದ ಕಳಿಸಬೇಕು. ವಿ. ಪಿ. ಕಳಿಸಲಾಗುವುದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ

೪೪೮, ಸೆಂಡ್‌ಹರ್ಸ್ಟ್ ರೋಡ್, ಮುಂಬಯಿ ೪.

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar – 27-3-50.

ಮೂರ್ತಿಶಿಲ್ಪಕಲಾವಿದ ಕನ್ನಡಿಗ
ಶ್ರೀ. ದೇಶಪಾಂಡೆ ಕೇಶವರಾಯರು, ಪುಣೆ.



ಈ ತಿಂಗಳ ಲೇಖಕರು :

ಶ್ರೀ. ಮಿರ್ಜಿ ಅಣ್ಣಾರಾಯರು, ಶ್ರೀ. ಖಾನೋಳಕರ ಶ್ರೀಧರರಾಯರು, ಶ್ರೀ. ಬೆಟಗೇರಿ ಕೃಷ್ಣಶರ್ಮ, ಶ್ರೀ. ಎಂ. ಮೋಹನರಾಯರು, ಶ್ರೀ. ಯು. ವೆಂಕಟಕೃಷ್ಣರಾವ್.

ಜಯಂತಿ

JAYANTI

ಡಿಸೆಂಬರ್ ೧೯೫೦

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು— ಶ್ರೀ. ಎಲ್.ಜಿ. ಬೇಂದ್ರೆ

ಪ್ರಕಾಶಕರು— ಶ್ರೀ ಎನ್. ವಿ. ಮೆಳ್ಳಿಗಟ್ಟಿ

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೩ | ೧ ನೆಯ ಡಿಸೆಂಬರ್ ೧೯೫೦ | ಸಂಚಿಕೆ

ಈ ಸಂಚಿಕೆಯಲ್ಲಿ:

ಬನ್ನವೆ ಬಂತೆ? (ಕವನ)
ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ ೩೬೭

ಗೆಲುವ ಗುಟ್ಟು (ಕವನ)
ಶ್ರೀ. ಮುದೇನೂರ ಸಂಗಣ್ಣ, ಬೆಗಟೇರಿ.. .... ೩೬೯

ನೇಪಾಳ ಮತ್ತು ಭಾರತ (ಸಂಪಾದಕೀಯ)
ಸಂಪಾದಕರು ೩೬೮

ನಗೀಗೆ ನೇವೇದ್ಯ
'ನಕಲೀ ನಾರಾಯಣಾಚಾರ್ರ'. ....

ಬಲಿಚಕ್ರವರ್ತಿ (ಆಕಾಶನಾಟಕಾ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ .. ....

ನಾನು ಕಂಡ ನಾಡು (ಪ್ರವಾಸ ಪ್ರಬಂಧ)
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ....

ಭಾರವಿಯ ಅರ್ಥಗೌರವ (ಕವಿಕಾವ್ಯ ವಿಮರ್ಶೆ)
ಶ್ರೀ. ಯು. ವೆಂಕಟಕೃಷ್ಣರಾವ್ ಎಂ. ಎ. ಮದರಾಸು....

ಮರೆವು (ವಿಚಾರಕಿರಣ)
ಶ್ರೀ. ಅನಂತ ಬುರ್ಲಿ, ಬಸವೇಶ್ವರ ಕಾಲೇಜು, ಬಾಗಲಕೋಟೆ ....

ಪಿತೃಹೃದಯ (ಅನುವಾದಿತ ಕಥೆ)
ಶ್ರೀ. ಎಂ ಮೋಹನರಾವ್ ಬಿ. ಎ. ಧಾರವಾಡ ....

ಅರವಿಂದ ದರ್ಶನ (ಶ್ರೀಅರವಿಂದರ ತತ್ತ್ವಪರಿಚಯ)
ಶ್ರೀ. ವೆಂ. ನಾ. ಮುಗಳಿ, ಹುಬ್ಬಳ್ಳಿ .. ....

ಕನ್ನಡ ಕಲಿಯಬೇಕೆ? (ಹೋಲಿಗೆಯ ವಿಚಾರ)
ಕು. ಸರೋಜಿನಿ ಮಹಿಷಿ, ಧಾರವಾಡ ....

ವಿಮರ್ಶೆಯ ಶಿಕ್ಷಣರಂಗ
ಶ್ರೀ. ಸೀತಾರಾಮು, ಚಿತ್ರದುರ್ಗ ....

ಪುಸ್ತಕ ವಿಮರ್ಶೆ
ಶ್ರೀ, ಮೊರಬ ರಘುನಾಥ ....

ಸಾದರ ಸ್ವೀಕಾರ ....

ಮುಂಬಯಿಯಲ್ಲಿ ಜಯಂತಿಯ ಏಜಂಟರು

ವಿ. ಆರ್. ಪ್ರಭು ನ್ಯೂಜ್ ಏಜಂಟ್

ದಾದರ (ಜಿ. ಐ. ಪಿ.)

ವರ್ಷ ೧೩ · ಸಂಚಿಕೆ ೭

ಜಯಂತಿ

ಡಿಸೆಂಬರ್ · ೧೯೫೦

ಬನ್ನವೇ ಬಂತೆ ?

ಶ್ರೀ. ಯಸ್. ಶ್ರೀಕೃಷ್ಣ

★

ಭುವಿಯ ಮುಸುಕಿದ ಬಾನೊಳಿತ್ತಲೂ ಕರಿಮುಗಿಲು,
ಬೆಳ್ಳಿಯಂಚಿಲ್ಲ, ಸೆರೆಮಿಂಚಿಲ್ಲ, ಕಡಲೆಡೆಯಿ-
ನಿರಿವ ಬಿರುಗಾಳಿ ಬಲಿಗೊಳುತಿರಲು ಎದುರಾದು-
ದೆಲ್ಲವನು, ಕಗ್ಗತ್ತಲಿಂ ಕುರುಡುಗೊಂಡ ಕಣ್
ತೆರೆತೆರೆದು ಕಾರಿರುಳ ಕುಡಿವಂತೆ ಬಿರಿಯುತಿರೆ,
ಕಿವಿಯರಸುತಿರೆ ನೆರವುದನಿ—ವ್ಯೋಮ ಪಾತಾಳ-
ದುದ್ದಗಲ ಪ್ರಳಯಾಟ್ಟಹಾಸ ಮೊರೆಯುತ್ತಿರಲು—
ಬಯಲಾಸೆಯೊಂದರಿಯದೆಯೆ, ದಾರಿ ತೋರದಿರೆ,

ಬಾನಂಚಿನತ್ತ ತೋರಿದ ತಾರೆ ಕೈದೀಪ-
ವಾಯ್ತು ಕತ್ತಲೆಗೆ, ತಾನೂರುಗೋಲಾಯ್ತು ಕುರು-
ಡಿಂಗದರ ಕಿರಣಾಳಿ ದಾರಿದೋರುವ ದೇವ-
ದೂತನಾಯ್ತನ್ನಿದೋ ಸರಿದಾರಿ ದೊರೆಯುತಿದೆ
ಎನುವನಿತರೊಳೆ—ಚಿಕ್ಕೆ ಮರೆಯಾಯ್ತು, ಮೊದಲಂತೆ
ಎಂದಿಗೂ ಕೊನೆಯ ಕಾಣದ ಬನ್ನನೇ ಬಂತೆ ?

—

....ಗೆಲುವ ಗುಟ್ಟು !

ಶ್ರೀ ಮುದೇನೂರ ಸಂಗಣ್ಣ, ಚಿಗಟೇರಿ

★

ಬಾಳ ಕಾಳಿರುಳಲ್ಲಿ, ವಿಧಿಯ ಬಾಂದಳದಿಂದ
ಕಿಡಿಗೊಂಡು ಸುರಿಯುವೀ ಸುಡುಸಿಡಿಲ ಧಾರೆಯಲಿ
ಬೆಂದು ಬೇಗುದಿಗೊಂಡು, ಬವಣೆ ಬಿರುಗಾಳಿಯಲಿ
ಕಳವಳದಿ ನಡುಗಿ ತಲ್ಲಣಿಸುತಳಿಮನದಿಂದ,
(ವೇದನೆಯ ದರ್ಪದಲಿ ಕೈಗೊಟ್ಟು ಮುನ್ನೂಕೆ)
ನೋವಿನುರಿದಾರಿಯಲಿ ದಿಕ್ಕುಗೆಟ್ಟೋಡುತಲಿ,
ನೆರವು ಬೇಕೆಂದರಸಿ ದೀನಮುಖಮುದ್ರೆಯಲಿ
ಕಂಬನಿಯ ಕೈಗೋಲ ಹಿಡಿದಲೆವ ಓ “ ಬದುಕೆ ”—

ನಿನ್ನನಾಹ್ವಾನಿಸುವೆ ನಾನಿದೋ ಬಾಯಿಲ್ಲಿ—
ಎನ್ನೆದೆಯ ಹೃದಯದರಮನೆಯ ನಿಡುಗೋಡೆಯಲಿ:
ಜೀವದೀ ತಲ್ಪದಲಿ : ಸ್ಥೈರಣೆಯ ಪೀಠದಲಿ
ಕುಳಿತು ಸಾಂತ್ವನ ಪಡೆದು ಬಲಗೊಳ್ಳು ; ಬಾಯಿಲ್ಲಿ—
ನಿನ್ನ ಬದುಕಿನ ಲತೆಯ ಕೊನರುವುದು ಕುಡಿವಿಟ್ಟು
ತಿಳಿದೀತು ಬಂದ ಬಾಳನು ಗೆಲುವ ಗುಟ್ಟು !

—

ನೇಪಾಳ ಮತ್ತು ಭಾರತ

ನೇಪಾಳ ಭಾರತದ್ದೇ ಒಂದು ಅವಿಭಾಜ್ಯವಾದ ಅಂಗವಾಗಿದ್ದರೂ ಬ್ರಿಟಿಷರ ಆಡಳಿತದ ತಂತ್ರದಲ್ಲಿ ಅದಕ್ಕೆ ಭಾರತಕ್ಕಿರದ ರಾಜಕೀಯ ಸ್ವಾತಂತ್ರ್ಯ ದೊರೆತು, ಬ್ರಿಟಿಷ್ ಭಾರತದಿಂದ ಅದನ್ನು ಪ್ರತ್ಯೇಕವಾಗಿಯೆ ಇರಿಸಲಾಯಿತು. ಈಗ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆತ ಮೇಲೂ—ಬ್ರಿಟಿಷ್ ಪಾರ್ಲ್‌ಮೆಂಟಿನವರು ಭಾರತವನ್ನು ನಮಗೆ ಒಪ್ಪಿಸುವ ಕಾಲದಲ್ಲಿ, ಸಂಸ್ಥಾನಗಳ ಬಗೆಗೆ ಹಾಕಿದ ಕರಾರುಗಳ ಪ್ರಕಾರ— ನೇಪಾಳವು ಭಾರತದಿಂದ ಪ್ರತ್ಯೇಕವಾಗಿ ಉಳಿದಿದೆಯಷ್ಟೇ ಅಲ್ಲ; ೫೪೦೦೦ ಚದರು ಮೈಲು ಕ್ಷೇತ್ರ, ಸುಮಾರು ೫೫,೦೦೦೦೦ ಜನಸಂಖ್ಯೆಯಿರುವ ಈ ಚಿಕ್ಕ ಪರ್ವತಸೀಮಾಪ್ರದೇಶವು, ತಾನೂ ಒಂದು ರಾಷ್ಟ್ರವೆಂದು ಕನಸನ್ನು ಕಾಣುತ್ತ, ಯುನೋದಲ್ಲಿ ತನಗೂ ಪ್ರಾತಿನಿಧ್ಯ ದೊರೆಯಬೇಕೆಂದು ಬಯಸಿ ಪ್ರಯತ್ನಿಸಿತು. ರಷಿಯದ ವಿರೋಧವಿಲ್ಲದೆ ಹೋಗಿದ್ದರೆ, ಕುಟಿಲ ರಾಜಕಾರಣವನ್ನಾಡಿ ಜಗತ್ತನ್ನೇ ತಮ್ಮ ಜಾಲದಲ್ಲಿ ಸೆಳೆದುಕೊಳ್ಳಬೇಕೆನ್ನುತ್ತಿರುವ ಅಮೇರಿಕೆ-ಬ್ರಿಟನ್ನುಗಳು, ನೇಪಾಳದ ರಾಷ್ಟ್ರಪ್ರಾತಿನಿಧ್ಯವನ್ನು ಒಪ್ಪಿಕೊಂಡೇ ಬಿಡುತ್ತಲಿದ್ದುವೇನೋ! ಏಕೆಂದರೆ ನೇಪಾಳದ ಸರಕಾರವನ್ನು ಹೇಗಾದರೂ ಮಾಡಿ ಮೆಚ್ಚಿಸಿ, ತಮ್ಮತ್ತ ಕಡೆಗೆ ಒಲಿಸಿಕೊಳ್ಳಬೇಕೆಂದು ಎರಡು ರಾಷ್ಟ್ರಗಳದೂ ಬಯಕೆ. ಇದಕ್ಕೆ ಕಾರಣವೆಂದರೆ ನೇಪಾಳನಿವಾಸಿಗಳಾದ ಗುರ್ಖಾ ಜನರ ವೀರ-ವಿಕ್ರಮಗಳು. ಬ್ರಿಟಿಷರು ಭಾರತದ ಒಳಯುದ್ಧದಲ್ಲಿ ಮತ್ತು ಹೊರಗಿನ ಯಾವ ಯುದ್ಧದಲ್ಲಿಯೂ ಗೆಲವನ್ನು ಪಡೆದುದು, ವೀರ ಗುರ್ಖಾಸೈನ್ಯದ ಧೈರ್ಯ-ಶೌರ್ಯಗಳಿಂದಲೆ. ಅದಕ್ಕಾಗಿಯೆ ಬ್ರಿಟಿಷರು ಸಂಪೂರ್ಣ ಭಾರತವನ್ನು, ತಮ್ಮ ಆಡಳಿತದಲ್ಲಿ ದಾಸರಾಷ್ಟ್ರವನ್ನಾಗಿ ಮಾಡಿಕೊಂಡಿದ್ದರೂ, ನೇಪಾಳಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಂತೆ ಮಾಡಿದ್ದರು; ಇಷ್ಟೇ ಅಲ್ಲ, ನೇಪಾಳಿಗರನ್ನು ತೃಪ್ತಿಪಡಿಸಲು ಭಾರತದ ಬೊಕ್ಕಸದಿಂದ ಕೆಲವೊಂದು ಹಣವನ್ನು ಕಪ್ಪಗಾಣಿಕೆಯೆಂದೂ ವರು-ವರುಷಕ್ಕೂ ತೆರುತ್ತಿದ್ದರು.

* * * *

ಒಂದು ವಿಚಿತ್ರವೆಂದರೆ, ಈಗ ಕೂಡ ನೇಪಾಳದ ಕೂಡ ಸಲುಗೆ-ಸಂಬಂಧಗಳು, ಭಾರತದಷ್ಟೇ ಬ್ರಿಟನ್ನು ಅಮೇರಿಕೆಗಳಿಗಿವೆ. ತನ್ನದೊಂದು ಅವಿಭಾಜ್ಯ ಭಾಗವೇ ಆಗಿರುವ ನೇಪಾಳದಲ್ಲಿ, ರಾಜಕೀಯ ದೃಷ್ಟಿಯಿಂದ ಯಾವ ಕುಂದು-ಕೊರತೆಗಳನ್ನೂ ತಿದ್ದಲಿಕ್ಕೆ ಸ್ವತಂತ್ರ ಭಾರತಕ್ಕೆ ಅವಕಾಶವಿಲ್ಲ. ಈ ವಸ್ತುಸ್ಥಿತಿ, ಇಂದಿನ ಕ್ರಾಂತಿಯ ಕಾಲದಲ್ಲಿ ಭಾರತಕ್ಕೊಂದು ಗಂಡಾಂತರದ ಸಂಗತಿಯೇ ಆಗಿದೆಯೆಂಬುದನ್ನು ಭಾರತೀಯರೆಲ್ಲರೂ ಲಕ್ಷ್ಯದಲ್ಲಿರಿಸಿಕೊಂಡು ನಡೆಯಬೇಕಾಗಿದೆ.

ಭಾರತದ ಉತ್ತರದ ಗಡಿಯನ್ನು ಸಂರಕ್ಷಿಸಲು ಹಿಮಾಲಯದ ಭದ್ರವಾದ ಭಿತ್ತಿಯನ್ನು ನಿಸರ್ಗವು ನಮಗೆ ನಿರ್ಮಿಸಿಕೊಟ್ಟಿದೆ— ಎಂದು ಭಾವನೆಯ ಆವೇಶದಲ್ಲಿ ಆಡುತ್ತೇವೆ, ಹಾಡುತ್ತೇವೆ.... ಇದೇನೋ ಸರಿಯೆ! ಆದರೆ ಈ 'ನಿಸರ್ಗನಿರ್ಮಿತ ಭದ್ರವಾದ ಭಿತ್ತಿಗೆ' ನಿಸರ್ಗವೇ ನಿರ್ಮಿಸಿದ ದುರ್ಗದ್ವಾರಗಳೂ ಕೆಲವಿವೆ. ಅವೆಲ್ಲ ದ್ವಾರಗಳು ನೇಪಾಳದ ಉತ್ತರದಿಶೆಯ ಹಿಮಶಿಖರದ ಕಂದರಗಳಲ್ಲಿವೆ. ಈ ದಾರಿಗಳಿಂದ ದಾಟಿದರೆ, ಕೂಡಲೆ ತಿಬೇಟ ಸಿಕ್ಕುವುದು. ತಿಬೇಟವನ್ನು ಕೆಂಪುಚೀನದ ಸೈನ್ಯ ಪ್ರವೇಶಿಸಿ ಅದನ್ನು ಆಕ್ರಮಿಸಿಕೊಂಡಿರುವುದು ಇತ್ತೀಚೆಗೆ ಎಲ್ಲರೂ ಅರಿತಿರುವ ಮಾತು. ಚೀನೀಯರ ಆಕ್ರಮಣದೃಷ್ಟಿ ಹಿಮಾಲಯ ಸಾನುಪ್ರದೇಶಗಳಾದ ನೇಪಾಳ, ಸಿಕ್ಕಿಂ, ಭೂತಾನಗಳ ಮೇಲೆಯೂ ಇರುವುದೆಂಬುದನ್ನು ಅವರು ಬಾಯಿಂದಲೂ ಆಡಿ ತೋರಿಸುತ್ತಲಿದ್ದಾರೆ. ಜನಾಂಗ, ಸಂಸ್ಕೃತಿಗಳ ದೃಷ್ಟಿಯಿಂದ ಹಿಮಾಲಯದ ದಕ್ಷಿಣಸೀಮಾಪ್ರದೇಶವು ಚೀನಾರಾಷ್ಟ್ರಕ್ಕೆ ಸೇರಬೇಕಾದುದಂತೆ. ಇದೆಲ್ಲವನ್ನು ಲಕ್ಷ್ಯಕ್ಕೆ ತಂದುಕೊಂಡರೆ, ಭಾರತದ ಉತ್ತರದ ಗಡಿಯ ಸಂರಕ್ಷಣೆಯ ದೃಷ್ಟಿಯಿಂದ ಹಿಮಾಲಯ ಸಾನುಪ್ರದೇಶವು ಎಷ್ಟೊಂದು ಆಯಕಟ್ಟಿನದಾಗಿರುವುದೆಂಬುದನ್ನು ಬೇರೆಯಾಗಿ ಹೇಳಲಿಕ್ಕೇಬೇಡ.

* * * *

ಆದರೇನು? ನಮ್ಮದೇ ಆದ ನೇಪಾಳ ಇಂದು ನಮಗೇ ಪರಕೀಯವಾಗಿ ಕುಳಿತಿದೆ. ಅಹುದೇ? ನೇಪಾಳ ನಮಗೆ ಪರಕೀಯವೆ? ಹೀಗೆಂದು ಹೇಳುವವರು ಕುಟಿಲರಾದ ರಾಜಕಾರಣಿಗಳಿರಬೇಕು; ಇಲ್ಲವೆ ಭಾರತದ ಚರಿತ್ರೆ-ಸಂಸ್ಕೃತಿಗಳನ್ನರಿಯದ ಅಜ್ಞಾನಿಗಳಾಗಿರಬೇಕು. ಸನಾತನ ಸಂಪ್ರದಾಯದ ಭೂಗೋಲದಂತೆ, ಭಾರತದ ಐವತ್ತಾರು ದೇಶಗಳಲ್ಲಿ ನೇಪಾಳವೂ ಒಂದಾಗಿ ಎಣಿಕೆಗೊಂಡಿದೆ. ರಾಮಾಯಣ ಕಾಲದಲ್ಲಿ ಜನಕರಾಜನು ಆಳುತ್ತಿದ್ದ ವಿದೇಹರಾಜ್ಯವು ನೇಪಾಳಪ್ರದೇಶದಲ್ಲಿಯೆ ಇದ್ದಿತೆಂದು ಹೇಳುತ್ತಾರೆ. ಭಗವಾನ್ ಗೌತಮಬುದ್ಧನ ಜನ್ಮಸ್ಥಳವಾದ ಕಪಿಲವಸ್ತು ನಗರವು ನೇಪಾಳದಲ್ಲಿಯೆ ಇದ್ದಿತೆಂಬುದನ್ನು ಈಗಲೂ ತೋರಿಸುತ್ತಾರೆ.

ಈ ಇಪ್ಪತ್ತನೆಯ ಶತಮಾನದಲ್ಲಿಯೂ ನೇಪಾಳದ ರಾಜ್ಯಶಾಸನಪದ್ಧತಿ, ಹದಿನಾರಾಣೆ ಪ್ರಾಚೀನಭಾರತದ ಪರಂಪರೆಯನ್ನ ಕಾಯ್ದುಕೊಂಡುಬಂದಿದೆ. ಆಡಳಿತದ ಮತ್ತು ನ್ಯಾಯದಾನ ಕಾನೂನುಗಳೆಲ್ಲ ಭಾರತದ ಪುರಾತನ ಸ್ಮೃತಿನಿಯಮಗಳನ್ನೆ ಅನುಸರಿಸಿದುವಾಗಿವೆ. 'ನಾವಿಷ್ಣುಃ ಪೃಥಿವೀ ಪತಿಃ' ಎಂಬ ಅಲ್ಲಿಯ ಪ್ರಜಾಕುಲದ ಅಚಲವಾದ ತಿಳಿವಳಿಕೆ. ಹಿಮಗಿರಿಯ

ಹುಟ್ಟಿ ಭಾರತಕ್ಕೆ ಇಳಿದು ಬರುವ ಹಲವು ಪುಣ್ಯನದಿಗಳು ನೇಪಾಳದಲ್ಲಿಯೆ ಹೆಂದುಬರುತ್ತವೆ. ಭಾರತದ ಹೆಮ್ಮೆಯ ಗಿರಿಶಿಖರಗಳಾದ ಧವಲಗಿರಿ, ಕಾಂಚನಗಂಗಾ, ಗೌರೀಶಂಕರ, ಗೋಸಾಯಿಸ್ಥಾನ ಮೊದಲಾದುವುಗಳೆಲ್ಲ ನೇಪಾಳದ ಉತ್ತರ-ಸೀಮೆಗಳಾಗಿವೆ.

ಇನ್ನು ಅಲ್ಲಿ ವಾಸಿಸುವ ಜನರಾದರೂ ಪರಕೀಯಕುಲಕ್ಕೆ ಸೇರಿದವರೆನ್ನಬೇಕೆ? ಅಲ್ಲಿ ಇರುವ ಜನರಲ್ಲಿ ಮೂರು ಪಂಗಡದ ಜನರಿರುವರು: 'ನೇವಾರ' ಎಂಬ ಪಂಗಡದವರು ನೇಪಾಳದ ಮೂಲನಿವಾಸಿಗಳು. ಭಾರತೀಯ ಸಂಸ್ಕೃತಿಯಲ್ಲಿಯೆ ತಮ್ಮ ವಂಶಗಳನ್ನು ಬೆಳೆಯಿಸಿಕೊಂಡು ಬಂದವರು. ಇನ್ನೊಂದು ಪಂಗಡದವರಾದ 'ಮಗರ' ಎಂಬವರು, ದಕ್ಷಿಣಭಾರತದಿಂದ ಬಂದು ಬಹಳ ದಿನಗಳ ಹಿಂದೆ ಬೀಡುಬಿಟ್ಟವರೆಂದು ಇತಿಹಾಸ ಹೇಳುತ್ತದೆ. ಮೂರನೆಯ ಪಂಗಡದವರಾದ 'ಗುರ್ಖಾ'ಗಳು ಪಂಜಾಬ್-ದಿಲ್ಲೀಪ್ರದೇಶಗಳ ಶುದ್ಧ ರಜಪೂತ ವಂಶಕ್ಕೆ ಸೇರಿದವರು. ಇವರೆಲ್ಲರೂ ಆಡುವ ಭಾಷೆ ಭಾರತೀಯ ಪ್ರಾಕೃತಜನ್ಯವಾದ ನೇಪಾಳಿ. ನೇಪಾಳದಲ್ಲಿಯ ಊರ ಹೆಸರುಗಳೆಲ್ಲ ಭಾರತೀಯ ಭಾಷಾಪರಂಪರೆಗೆ ಸೇರಿದುವು. ಬೌದ್ಧಧರ್ಮಾನುಯಾಯಿಗಳು ಕೆಲವು ಜನ ಇದ್ದರೂ, ಹೆಚ್ಚು ಸಂಖ್ಯೆಯ ಜನರು ಸನಾತನ ಹಿಂದೂ ಧರ್ಮೀಯರಾಗಿರುವರು. ಹಟ್ಟಿ, ಪಟ್ಟಣ ಎಂಬ ದ್ರಾವಿಡ ಪರಂಪರೆಯನ್ನು ಸೂಚಿಸುವ ಗ್ರಾಮಗಳು ಅಲ್ಲಿ ಇರುವುದು ಆಶ್ಚರ್ಯದ ಸಂಗತಿಯಾಗಿದೆ.

ರಾಜಧಾನಿಯಾದ ಕಾಟಮಾಂಡು (ಕಾಷ್ಠಮಂಡಪ) ವನ್ನು ನೋಡಿದರಂತೂ ಅದು ಹಿಂದೂ ಸಂಸ್ಕೃತಿಯ ಆಗರವಾಗಿರುವುದು. ನೋಡಿದಲ್ಲೆಲ್ಲ ಶಿವ, ಕಾಲಿ, ವಿಷ್ಣು ದೈವತಗಳ ಮಂದಿರಗಳು. ಭಾರತೀಯ ಪದ್ಧತಿಯ ಬೌದ್ಧಮಂದಿರಗಳೂ ಅಲ್ಲಲ್ಲಿ ಕಾಣುವುವು. ಈ ರಾಜಧಾನಿಯ ಬಳಿ ಹರಿದ ನದಿಯ ಹೆಸರು 'ವ್ಯಾಘ್ರಮತಿ' ಎಂಬ ಶುದ್ಧ ಸಂಸ್ಕೃತನಾಮ. ಪ್ರಾಕೃತರ ಬಾಯಲ್ಲದು 'ವಾಘಮತಿ' ಎಂದಾಗಿದೆ. ನೇಪಾಳ ರಾಜರ ಕುಲದೈವತ ಶ್ರೀಪಶುಪತಿನಾಥನ ದೇವಸ್ಥಾನವು, ಅಖಿಲ ಭಾರತೀಯರ ಯಾತ್ರಾಸ್ಥಾನ. ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡಿಗರು ಅಲ್ಲಿಯ ಮುಖ್ಯ ಅರ್ಚಕರಾಗಿರುವರು. ಸಾಲಗ್ರಾಮಗಳ ಉಪಾಸಕರಾದ ಭಾವಿಕ ಭಾರತೀಯರಿಗೆಲ್ಲ ನೇಪಾಳದಲ್ಲಿಯ ಗಂಡಕೀನದಿಯು ಪವಿತ್ರ ಯಾತ್ರಾಸ್ಥಾನವಾಗಿದೆ.

* * * *

ಇಷ್ಟೆಲ್ಲವಿದ್ದರೂ ನೇಪಾಳವಿಂದು ಭಾರತಕ್ಕೆ ವಿದೇಶವೆನಿಸಿದೆ. ಅಲ್ಲಿ ಹೋಗಬೇಕಾದ ಭಾರತೀಯನು ನೇಪಾಳ ಸರಕಾರದಿಂದ ಒಪ್ಪಿಗೆಚೀಟಿ ಪಡೆದುಕೊಂಡು ಹೋಗಬೇಕಾಗುವುದು. ವರ್ತಮಾನ ಭಾರತವಿನ್ನು ಇದೇ ಪರಿಸ್ಥಿತಿಯಲ್ಲಿ ನೇಪಾಳವನ್ನು ಉಳಿಯಗೊಟ್ಟರೆ, ನೇಪಾಳ ಭಾರತದ ಕೈಬಿಟ್ಟು ಹೋಗುವ ಭೀತಿಯಿದೆಯಲ್ಲದೆ, ಭಾರತದ ಶಾಂತಿಗೂ ಭಂಗಬರುವ ಸಂಭವವಿದೆ.

ರಾಜಕೀಯದೃಷ್ಟಿಯಿಂದ ನೋಡಿದರೆ ನೇಪಾಳವು ಸಂಪೂರ್ಣವಾಗಿ ನಿರಂಕುಶ ಸರ್ವಾಧಿಕಾರಿಯ ಆಡಳಿತದಲ್ಲಿದೆ. ದೊರೆಯೆನಿಸಿಕೊಳ್ಳುವವನಿಗೆ ಅಲ್ಲಿ ದೇವರ ಮಾನವಿದೆಯಾದರೂ ಆಡಳಿತದಲ್ಲಿ ಸ್ಥಾನವಿಲ್ಲವೆಂಬುದು ಎಲ್ಲರಿಗೂ ತಿಳಿದವಾತಾಗಿದೆ. ಬಹುಸಂಖ್ಯಾಕ ಜನರಿಗೆ ಶಿಕ್ಷಣವೇ ದೊರೆಯದುದರಿಂದ ಹೊಸ ಕಾಲದ ಪ್ರಗತಿ ಜೀವನದ ಕಲ್ಪನೆಯೆ ಇಲ್ಲ. ಆದುದರಿಂದ ಪ್ರಜಾತಂತ್ರ, ಅಧಿಕತ್ವದ ಬೇಡಿಕೆಯನ್ನವರು ಬೇಡಬೇಕೆಂಬ ವಿಚಾರವನ್ನೇ ಅರಿತಿಲ್ಲ. ಭಾರತಕ್ಕೆ ಬಂದು ಹೋಗಿ ಸಂಬಂಧ ಬೆಳೆಸಿದ ಕೆಲವೊಂದು ಸುಶಿಕ್ಷಿತ ಜನರಲ್ಲಿ ಮಾತ್ರ ಪ್ರಜಾರಾಜ್ಯದ ಕಲ್ಪನೆ ಮೂಡಿ, ಅದಕ್ಕಾಗಿ ಹೋರಾಟ ಹೂಡಿದ್ದಾರೆ. ಅವರ ಹೋರಾಟಕ್ಕೆ ಇದೀಗ ಕಳೆಯು ಬಂದುದು ರಾಜ-ಪ್ರಧಾನರಲ್ಲಿಯ ತೀಕ್ಷ್ಣವಾದ ಮನಸ್ತಾಪದ ಕಾರಣದಿಂದಲ್ಲದೆ, ಬರೀ ಈ ಬೆರಳೆಣಿಕೆಯ ಕಾರ್ಯಕರ್ತರಿಂದ ಏನೂ ಆಗುವಂತಿಲ್ಲ. ರಾಜ-ಮಂತ್ರಿಗಳ ಈಗಿನ ಮನಸ್ತಾಪ ಹೋಗಿ ಇಬ್ಬರೂ ಒಂದುಗೂಡಿದರೆ, ನೇಪಾಳದ ಪರಿಸ್ಥಿತಿ ಮತ್ತೆ ಮೊದಲಿನಂತೆಯೆ ಆಗಬಹುದು. ಆಗ ಅದು ಮತ್ತೆ ಭಾರತದಿಂದ ಪ್ರತ್ಯೇಕವಾಗಿ ಉಳಿಯಲಿಕ್ಕೆ ಆಶಿಸಬಹುದು. ಆದರೆ, ಹಾಗೆ ನೇಪಾಳ ಭಾರತದಿಂದ ಪ್ರತ್ಯೇಕವಾಗಿ ಉಳಿವುದು ನೇಪಾಳಕ್ಕೂ ಒಳ್ಳೆಯದಲ್ಲ; ಭಾರತಕ್ಕೂ ಒಳ್ಳೆಯದಲ್ಲ.

* * *

ಅಧಿಕಾರಲೋಭ ಎಂತಹ ವ್ಯಕ್ತಿಗಳನ್ನೂ ಮಂಕುಗೊಳಿಸಿ ಬಿಡಬಲ್ಲುದು. ಇಂತಹ ಅಧಿಕಾರಲೋಭಕ್ಕಾಗಿಯೆ ಸ್ವಾರ್ಥಿಯಾದ ಕಾಶ್ಮೀರದರಸು, ಭಾರತದ ವಿರೋಧಿಗಳನ್ನು ಒಳಗೆ ಬರಮಾಡಿಕೊಂಡು, ಬೆಟ್ಟದಂತಹ ಸಮಸ್ಯೆಯನ್ನು ಭಾರತ ರಾಜಕಾರ್ಯದ ಮಾರ್ಗದಲ್ಲಿ ನಿರ್ಮಿಸಿ ಇಟ್ಟ. ಈಗ ಮತ್ತೆ ನೇಪಾಳದ ಅಧಿಕಾರವೂ ಕೇವಲ ನಿರಂಕುಶ ಸರ್ವಾಧಿಕಾರಿಗಳ ಕೈಯಲ್ಲಿ ಸಿಕ್ಕಿಬಿಟ್ಟರೆ, ವಿರೋಧಿಗಳ ನಿರೋಧವನ್ನು ತಡೆಯುವಷ್ಟು ಶಕ್ತಿಯಿಲ್ಲದ ಅವರು, ಭಾರತದೆದುರು ಇನ್ನೊಂದು ಹಿಮಾಲಯದಂತಹ ಸಮಸ್ಯೆಯನ್ನು ತಂದು ನಿಲ್ಲಿಸಬಹುದು. ಆದುದರಿಂದ ಭಾರತದ ರಾಜಕಾರಣಿಗಳು ನೇಪಾಳದೊಂದಿಗಿನ ತಮ್ಮ ಸಂಬಂಧವನ್ನು ಹೆಚ್ಚು ನಿಗಡಿತವಾದುದನ್ನು ಮಾಡಿಕೊಂಡು, ನೇಪಾಳದ ಜನರಿಗೆ ಸಂಪೂರ್ಣ ಸ್ವಾತಂತ್ರ್ಯವು ಸಿಕ್ಕುವಂತೆಯೂ ನೇಪಾಳವು ಭಾರತದ ಒಂದು ಅವಿಭಾಜ್ಯವಾದ ಭಾಗವಾಗಿರುವಂತೆಯೂ ಮಾಡಬೇಕಾದುದು ಅತ್ಯಗತ್ಯದ ಮಾತಾಗಿದೆ. ನೇಪಾಳದ ಪ್ರಜಾ-ಪ್ರಮುಖರಲ್ಲಿಯ ಹಲವರಿಗೆ ಭಾರತೀಯತ್ವದ ಆಶೆ ಮೂಡಿರುವುದು ಶುಭಲಕ್ಷಣವೇ ಸರಿ.

ಜಯಂತಿಯ ಹೇಮಂತ ಸಂಚಿಕೆ

ಮುಂದಿನ ಸಂಚಿಕೆಯೆ ಹೇಮಂತದ ವಿಶೇಷ ಸಂಚಿಕೆಯಾಗಿ ಜನೆವರಿ ೧ನೆಯ ತಾರೀಖಿಗೆ ಪ್ರಕಟವಾಗಲಿದೆ. ಕನ್ನಡ-ನಾಡಿನ ಸುಪ್ರಸಿದ್ಧ ಲೇಖಕರ ಮನೋಹರವಾದ ಲೇಖನಗಳು ಅದರಲ್ಲಿ ಬರುವುವಲ್ಲದೆ, ಹೆಚ್ಚು ಪುಟಗಳಿಂದಲೂ ಕೂಡಿರುವುದು. ಮೂರು ಬಣ್ಣದ ಸುಂದರ ಮುಖಚಿತ್ರವು ಹೊದಿಕೆಯ ಮೇಲೆ. ಹೆಚ್ಚಿಗೆ ಪ್ರತಿಗಳು ಬೇಕಾದ ಏಜಂಟರು ಕೂಡಲೆ ಪತ್ರ ಬರೆದು ತಿಳಿಸಬೇಕು.

—ಸಂಪಾದಕರು



(೧)

"ಏ ಮಾಣಿ, ಮಗನ, ಇದೇ ನು ಕಾಫೀನೊ ಚಹನೊ? ಡೀ. ಡೀ. ಟಿ. ಹಾಂಗ ವಾಸನಿ ಬರ‍್ತದ!"

"ಡೀ. ಡೀ. ಟಿ. ಹಾಂಗ ವಾಸನಿ ಬರ‍್ತಿದ್ದರ ಅದು ಖಾತ್ರಿಯಿಂದ ಕಾಫೀರಿ! ಯಾಕಂದರ ನಮ್ಮ ಚಹಕ್ಕ ಯಾವಾಗಲೂ ಟರ್ಪೆಂಟಾಯಿನಿನ ವಾಸನಿ ಬರ‍್ತದರಿ!

* * *

(೨)

"ಮಾಣಿ, ಈ ಹೋಟಲಿನಲ್ಲಿ ಇತ್ತೀಚಿಗೆ ತಿನ್ನೋ ಜಿನಸೆಲ್ಲಾ ತುಸುತುಸಾನ ಕೊಡ್ತಾರೇನು?"

"ಹಾಂಗೇನಿಲ್ರಿ. ಈಗ ಹೋಟಲ್ನ ದೊಡ್ಡದು ಕಟ್ಟಿಸ್ಯಾರ‍್ರಿ. ಆದರಿಂದ ಕೊಡೋ ಜಿನಸು ತುಸು ಕಾಣಸ್ತಾವರಿ!"

* * *

(೩)

ವಿದ್ಯಾರ್ಥಿನಿ— ನನ್ನ ಧನಿ ಯಾವ ಪಟ್ಟಿಗೆ ಹತ್ತುತದ, ಮಾಸ್ತರ‍್ರ?

ಸಂಗೀತ ಶಿಕ್ಷಕ— ಬಿಳಿ ಪಟ್ಟಿಗೂ ಹತ್ತೂದಿಲ್ಲ, ಕರೀದಕ್ಕೂ ಹತ್ತೂದಿಲ್ಲ. ಅಂದಮ್ಯಾಲ ನಡುವಿನ ಬಿರಕಿಗೆ ಹತ್ತ-ತಿರಬೇಕು."

* * *

(೪)

"ಬಾಳೂ, ಬೆಕ್ಕಿನ ಬಾಲಾ ಹಿಡಿದು ಜಗ್ಗಬ್ಯಾಡ ಅಂತ ಹೇಳಲಿಲ್ಲ?"

"ಅಪ್ಪಾ, ನಾ ಬರೇ ಹಿಡದೀನಿ. ಅದs ಜಗ್ಗಲಿಕ್ಕೆ ಹತ್ತೈದ."

* *

(೫)

"ನೀವು ವಿಜಾಪುರ ಕಡೆಗೆ ಹೋಗಿದ್ದಿರಿಲ್ಲಾ— ಅಲ್ಲಿ ಬಿಸಿಲು ಹ್ಯಾಂಗರೆಪಾ?"

"ಕೇಳ್ಬೇಡ್ರ್ಯಾ, ನೆರಳಿಗೆ ಕೂತೇನಂದರ ಒಂದು ಗಿಡ ಸಹ ಇಲ್ಲ."

"ಹಂಗಾರ ಹ್ಯಾಂಗ ಮಾಡಿದಿರಿ?"

"ಹ್ಯಾಂಗೇನು? ಒಬ್ಬರ ಮ್ಯಾಲೊಬ್ಬರು ಕೂತು ನೆರಳು ಮಾಡಿಕೊಂಡಿವಿ ಆತು!"

* * *

(೬)

"ಏನ್ರಿ, ನಿಮ್ಮ ಮಗ ನನ್ನ ಬಗ್ಗೆ ಅಸತ್ಯಮಾತುಗಳೆಲ್ಲಾ ಜನರೆದುರಿಗೆ ಹೇಳ್ತಾನಂತ."

"ಅದಕ್ಯಾಕೆ ತಕರಾರು ಮಾಡ್ತೀ ನಿಮ್ಮ ಬಗ್ಗೆ ಸತ್ಯ ಹೇಳ್ಳಿಕ್ಕೆ ಹತ್ತಿ ಅಂಜಬೇಕು."

* * *

(೭)

"ನೀವು ಸ್ಥೂಲಕಾಯದವರು ಸುಸ್ವಭಾವಿಗಳಿರ‍್ತೀರಂತ, ಹೌದೇನು"

"ನಿಶ್ಚಯವಾಗಿ! ಯಾಕಂದರ, ನ ಕ್ಯವಾಡಲಿಕ್ಕೂ ಆಗೋದಿಲ್ಲ, ಓಡಿಸಲಿಕ್ಕೂ ಆಗೋದಿಲ್ಲ."

* * *

(೮)

ಯಜಮಾನ— ಅಲ್ಲೊ, ಹೇಳಿಕೊಟ್ಟಂತೆ ನೀ ಅವರಿಗ್ಯಾಕ ಲಿಲ್ಲ?

ಚಾರಕ— ನಾ ತಿಳಿಸೋ ತಿಳಿಸಿದಿನ್ರಿ. ಅವರs ತಪ್ಪು ಕೊಂಡಾರ‍್ರಿ.

ಯಜ— ನೀ ಇಂಥಾ ಶತಮ ಇದ್ದೀದಿ ಅಂತ ನನಗ ಮೊದಲs ಗ ಗಿದ್ದರ ನಿನ್ನ ಬದಲಾಗಿ ಹೋಗ್ತಿದ್ದೆ.

* * *

(೯)

"ನಾ ಶೀರ್ಷಾಸನ ಹಾಕಿ ತಲೆಯಕಡೆ ರಕ್ತ ಹರೀತದ; ಯಾಕ ಹರಿಯೂದಿಲ್ಲ?"

"ನಿಮ್ಮ ಕಾಲೇನು ಪೊಳ್ಳಿಲ್ಲ!

* * *

(೧೦)

"ಅಲ್ಲಿ ಕೂತ ಆ ಕೆಟ್ಟಮುಸಡಿ ಯಾರ‍್ರೀ ಅವರು?"

"ಅವರs? ಅವರು ನಮ್ಮ

"ಅರರೆ! ಕ್ಷಮಿಸ್ರಿ! ನಿಮ್ಹಾಂಗs ಹೋಲಿಕೆ ಅದs ಅ ನನ್ನ ಲಕ್ಷ್ಯದಾಗs ಬರಲಿಲ್ಲ."

* * *

ಬಲಿಚಕ್ರವರ್ತಿ

(ಆಕಾಶನಾಟಕ)

ಡಾ. ಬೆಟಗೇರಿ ಕೃಷ್ಣಶರ್ಮಾ, ಧಾರವಾಡ

—: ಪಾತ್ರವಿವರಣ :—

ಮುಖ್ಯ ವ್ಯಕ್ತಿಗಳು :	ಗೌಣವ್ಯಕ್ತಿಗಳು :
ನಿವೇದಕ (ನಾಟಕ ಸೂತ್ರಧಾರ)	ಸ್ತುತಿಪಾಠಕ
ಬಲಿರಾಜ (ದೈತ್ಯಕುಲರಾಜ)	ದೈತ್ಯಮಂತ್ರಿ
ಪ್ರಲ್ಹಾದ (ಬಲಿಯ ಪಿತಾಮಹ)	ಗಂಧರ್ವ
ಶುಕ್ರಾಚಾರ್ಯ (ದೈತ್ಯಕುಲಗುರು)	ಅಪ್ಸರೆಯರು
ಕಶ್ಯಪಋಷಿ (ದೇವ-ದೈತ್ಯರ ತಂದೆ)	ಗಜಾಧಿಕಾರಿ
ಅದಿತಿ (ಕಶ್ಯಪ ಋಷಿಯ ಹೆಂಡತಿ)	ತುರಗಾಧಿಕಾರಿ
ಉಪೇಂದ್ರ (ಕಶ್ಯಪರ ಕಿರಿಯಮಗ)	ಉಗ್ರಾಣಾಧಿಕಾರಿ
ತ್ರಿವಿಕ್ರಮ (ಉಪೇಂದ್ರನ ವಿರಾಟ್‌ಮೂರ್ತಿ)	ನಗರದ ತಳಾರ
	ರಾಜಪುರೋಹಿತರು.

ಧ್ವನಿಸೂಚನೆಗಳು

ಅಭಯವಾಣಿ, ೨ ಸಭೆಯ ಉಲ್ಲಾಸಧ್ವನಿ, ೩ ನರ್ತನಧ್ವನಿ, ೪ ದುರ್ನಿಮಿತ್ತ ಗರ್ಜನೆಗಳು, ೫ ಸುರಗಣದ ಪ್ರಾರ್ಥನೆ, ೬ ಯಜ್ಞಾಹುತಿಯ ಮಂತ್ರಧ್ವನಿ, ೭ ತ್ರಿವಿಕ್ರಮಾವತಾರದ ಆಕಾಶಧ್ವನಿ.

★

" ಬಲಿರ್ವಿಭೀಷಣೋ ಭೀಷ್ಮಃ
ಪ್ರಲ್ಹಾದೋ ನಾರದೋ ಧ್ರುವಃ
ಏತೇಷಾಂ ಸ್ಮರಣಾನ್ನಿತ್ಯಂ
ಮಹಾಪಾತಕ ನಾಶನಂ "

ನಿವೇದಕ

ಹೌದು, ಬಲಿಚಕ್ರವರ್ತಿ ನಿತ್ಯಸ್ಮರಣೀಯ ಮಹಾವಿಭೂತಿ. ಹನುಮಂತದಂತೆ ಏಳುಜನ ಚಿರಜೀವಿಗಳಲ್ಲಿ ಎಣಿಕೆಗೊಂಡವ. ...ತೀಯರ ಮಹಾಪರ್ವವಾದ ದೀಪಾವಳಿ ದಿನಗಳಲ್ಲಿ, ಕಾರ್ತಿಕ ... ಪ್ರತಿಪದೆಯನ್ನು ತನ್ನ ಶುಭಸ್ಮರಣೆಗಾಗಿ ಕಾಯ್ದಿರಿಸಿದವ. ...ಕುಲದಲ್ಲಿ ಜನಿಸಿದವನಾದರೂ, ದೇವದೇವನಿಂದ ಭವಿಷ್ಯ-...ಪದವಿಯ ವರ ಪಡೆದು, ಅದಕ್ಕಾಗಿ ಆ ದೇವದೇವನನ್ನೇ ...ಸುರನನ್ನಾಗಿಮಾಡಿಕೊಂಡು, ಸುತಲಲೋಕದಲ್ಲಿ ಜೀವಿಸು-...ವವ! ಧನ್ಯ ಧನ್ಯ ದೈತ್ಯಚಕ್ರವರ್ತಿ ಇಂದ್ರಸೇನಬಲಿರಾಜ!

(ಹೆಣ್ಣಿನ ಕಂಠದಲ್ಲಿ—ಆರ್ತಧ್ವನಿಯೊಂದಿಗೆ)

'ಅಕಟಾ! ಎಲ್ಲಿ ಕೇಳಿದರೂ 'ಧನ್ಯ ಧನ್ಯ ದೈತ್ಯಚಕ್ರವರ್ತಿ ...ರಾಜ!' ಸತ್ಯ-ನ್ಯಾಯಗಳನ್ನು ಕೇಳುವವರೇ ಇಲ್ಲ! ಎಲ್ಲರೂ ...ತ್ತಿನ ಬಾಲವನ್ನು ಹಿಡಿವವರೆ! ನನ್ನ ದೇವಸಂತಾನ, ಹಿರಿಯ ಮಗನಾದ ದೇವೇಂದ್ರ—ತನಗೆ ನೈಸರ್ಗಿಕ ಅಧಿಕಾರವಾಗಿ ಬಂದಿದ್ದ ಸ್ವರ್ಗಸಾಮ್ರಾಜ್ಯವನ್ನು, ಬಲಿಯ ಅಸುರೀಸಾಮರ್ಥ್ಯಕ್ಕೆ ಸೋತು, ಅಜ್ಞಾತರಾಗಿ ಅಲೆಯುತ್ತಿದ್ದಾರೆ. ಅವರನ್ನು ಕೇಳುವವರು ಯಾರೂ ಯಾರೂ ಇಲ್ಲವೆ? ಲೋಕಸ್ಥಿತಿಕಾರಣಾ, ಶ್ರೀಮನ್ನಾರಾಯಣಾ! ನಿನ್ನ ನಿಯತಿಯ ಆಳಿಗರಲ್ಲವೇ ನನ್ನ ಇಂದ್ರಾದಿ ಸುರಸಂತಾನ! ನಿನ್ನವೇ ಅಲ್ಲವೇ ಜನರ ಮಾನಾಪಮಾನ!

(ಸಾವೇರಿ ರಾಗದಲ್ಲಿ)

ಯಾರು ಕೇಳುವರಿನ್ನು ಯಾರ ಬಳಿ ಮೊರೆಯಿಡುವೆ?
ಹಾರಿಹೋಯ್ತೇ ಸುರರು ಕುಡಿದ ಅಮೃತದ ಬಲವು?
ಮಾರುಹೋಗಿದೆ ದೇವಸಾಮ್ರಾಜ್ಯ ದೈತ್ಯರಿಗೆ
ಕಾರಿಸ್ಯೆ ದಾನವಾರೇssss!
ಕಾರಿಸ್ಯೆ ದಾನವಾರೇss—ಶರಣಜನ-
ಸಂಕುಲದ ಭಯನಿವಾರೇ!

ನಿವೇದಕ

ಓ! ಯಾರದಿದು ಆಕ್ರಂದನ? ಕೇಳಿದವರ ಕರುಳನ್ನೇ ಕೊರೆ-ಯುವಂತಹ ಕರುಣಸ್ವನ!

(ಮತ್ತೆ ಹೆಣ್ಣಿನ ಕಂಠದಲ್ಲಿ ಶೋಕದ ಕೂಗು)

"ಶಿವಶಿವಾ ! ಜೀವಕುಲಕ್ಕೆ ಮೂಲಕಾರಣನಾದ ಕಶ್ಯಪಮಹಾಮುನಿಯ ಹಿರಿಯ ಹೆಂಡತಿ ನಾನು. ಇಂದ್ರ, ಅಗ್ನಿ, ವರುಣ, ಯಮ, ಸವಿತೃ ಮೊದಲಾದ ಆದಿತೇಯ ಮಹಾವಿಭೂತಿಗಳ ಜನ್ಮದಾತ್ರಿ ನಾನು ! ಸ್ವರ್ಗದ ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ, ಐರಾವತ ಇವುಗಳೆಲ್ಲದರ ಒಡತಿ ನಾನು ! ಅಯ್ಯೋ!! ಇಂದು ಅದೆಲ್ಲವೂ ಕನಸಾಗಿ ಹೋಗಿದೆ ! ಅಸತ್ಯ ಸತ್ಯವನ್ನು ಸೋಲಿಸಿಬಿಟ್ಟಿದೆ ! ಅನ್ಯಾಯ ನ್ಯಾಯವನ್ನು ತುಳಿಯುತ್ತಿದೆ. ದೇವಾಧಿದೇವಾ, ನನ್ನ ಮೊರೆ....ಮೊರೆ....ಮೊರೆ !

ನಿವೇದಕ

ಓ ! ಈಕೆ ಸುರಸಂತತಿಯ ಜನನಿಯಾದ ಅದಿತಿದೇವಿ ! ಮಕ್ಕಳೆಲ್ಲರ ಅಪಜಯ-ಅಜ್ಞಾತವಾಸಗಳಿಗಾಗಿ ದುಃಖಭಾರದಿಂದ ಕುಗ್ಗಿ ಹೋಗಿದ್ದಾಳೆ ! ಅಯ್ಯೋ, ಸ್ವರ್ಗಸಾಮ್ರಾಜ್ಯಾಧಿಪತಿ ಸುರೇಂದ್ರನ ತಾಯಿಯೂ ಹೀಗೆ ಅಳುತ್ತ ಬಾಯಿಬಿಡುತ್ತ ಅಲೆದಾಡಬೇಕಾಯಿತೆ ?

(ಮತ್ತೆ ಹೆಣ್ಣಿನ ಕಂಠದಲ್ಲಿ ಕರುಣಾಧ್ವನಿ)

ದೇವಾ, ಲೋಕವಿಧಾಯಕಾ ! ನಿನ್ನ ನಿಯತಿಯನ್ನು ಮೀರಿ ನಡೆಯುವುದೆಂದರೆ ನಿನಗೆ ದ್ರೋಹ ಬಗೆದಂತಲ್ಲವೆ ? ಇಂದ್ರನ ಸಿಂಹಾಸನವನ್ನು ಕಿತ್ತುಕೊಂಡವನು, ವಾಯುವಿನ ಪ್ರಾಣಶಕ್ತಿಯನ್ನು ಕಿತ್ತುಕೊಳ್ಳದೆ ಇರುವನೆ ? ಅಗ್ನಿಯ ದೀಪಕಶಕ್ತಿಯನ್ನು ಸೆಳೆದುಕೊಳ್ಳದೆ ಇರುವನೆ ? ಸವಿತೃವಿನ ಪ್ರಭೆಯನ್ನು ಕಸಿದುಕೊಳ್ಳದೆ ಬಿಡುವನೇ ? ತಂದೇ ! ದೈವೀಶಕ್ತಿಯ ಸಂರಕ್ಷಣೆಗಾಗಿ ಇದ್ದ ಅಮೃತ,—ದೈತ್ಯಶಕ್ತಿಯನ್ನು ಸಂರಕ್ಷಿಸತೊಡಗಿದರೆ, ವಿಶ್ವದ ಸ್ಥಿತಿಗೆ ಅವಕಾಶವಿದೆಯೆ ? ಜಗನ್ನೇತ್ರಾ ! ಇಂದು ಮೂರು ಲೋಕದ ಪ್ರಜಾಗಣವೆಲ್ಲವೂ ದೈತ್ಯರಾಜನ ಪೌರುಷಕ್ಕೆ ಮೋಹಗೊಂಡು, ಭವಿಷ್ಯದ ವಿಚಾರದಲ್ಲಿ ಅಂಧವಾಗಿ ಹೋಗಿದೆ. ನೀನೆ ಮನ್ನಿಸಿಕೊಟ್ಟ ಶಕ್ತಿ ಅದಿತೇಯರದು ! ಅದನ್ನು ಸಂರಕ್ಷಿಸುವ ಶಕ್ತಿ ನಿನ್ನದು ಪ್ರಭೋ !

(ದೂರದಿಂದ ಧ್ವನಿ)

ಪರಿತ್ರಾಣಾಯ ಸಾಧೂನಾಂ ವಿನಾಶಾಯಚ
ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ
ಯುಗೇ ಯುಗೇ !

(ಮತ್ತೆ ಹೆಣ್ಣಿನ ಕಂಠದಲ್ಲಿ ಸಂಪ್ರೀತುದ ಮಾತು)

"ಓ ! ಧನ್ಯ ಧನ್ಯ ! ದೈವದ ಅಭಯವಾಣಿ ! ನಿಶ್ಚಯವಾಗಿಯೂ ದೈವೀಶಕ್ತಿಗೆ ಗೆಲವು. ದೈತ್ಯಶಕ್ತಿಗೆ ಅಳಿವು ! ತ್ರಿಭುವನಕ್ಕೂ ಶಾಂತಿ ಸಮಾಧಾನ ! ಪರಮಾತ್ಮಪ್ರಭೆಯ ಇನ್ನೊಂದು ಅವತಾರ ! ಆನಂದ, ಆನಂದ !

ನಿವೇದಕ

ದೈತ್ಯರಾಜನ ರಾಜಧಾನಿಯಲ್ಲಿ ಒಡ್ಡೋಲಗ ಸೇರಿದೆ. ಓಲಗದಲ್ಲಿ ದೈತ್ಯಪಿತಾಮಹ ಪ್ರಹ್ಲಾದ ಮೊದಲಾದ ಕುಲವೃ ದೈತ್ಯಗುರುವಾದ ಶುಕ್ರಾಚಾರ್ಯರೂ, ಬಾಣ, ದೈ ಶಾಪನ, ಗುರ್ವಕ್ಷ, ಕುಕ್ಷಿ, ಭೀಮ ಮೊದಲಾದ ರಾಜಕುಮಾ ಮಂತ್ರಿಗಳೂ ಪೌರರೂ ಆಸನಗೊಂಡು ಕುಳಿತಿರುವರು.

ಸ್ತುತಿಪಾಠಕ :—

ಶ್ರೀಮದ್ರಾಜಾಧಿರಾಜ ದೈತ್ಯಸಾಮ್ರಾಜ್ಯ ಚಕ್ರವರ್ತಿ
ಅಮರೇಂದ್ರ ಸ್ವರ್ಗಸಿಂಹಾಸನಾಕ್ರಮಣಕೀರ್ತಿ
ಶ್ರೀಮದ್ ಬಲೀಂದ್ರ ಪ್ರಭು ಭೋ ಪರಾಕು !

ಬಲಿಚಕ್ರವರ್ತಿ :— ದೈತ್ಯ ಸಾಮ್ರಾಜ್ಯದ ಅಭಿಮಾನಿ ಕುಲವೃದ್ಧ ಪುರವೃದ್ಧರೆ, ಮಂತ್ರಿ-ಮಹಾಜನರೆ ! ಅಮರಾ ಆಕ್ರಮಣದಿಂದ ನಮಗಿನ್ನು ಎದುರಾಳಿಗಳಾರೂ ಉಳಿ ಮೂರು ಲೋಕದಲ್ಲೂ ಇನ್ನು ಈ ದೈತ್ಯಚಕ್ರವರ್ತಿಯ ಸಾವ ನನ್ನ ಪ್ರಜಾಕಲ್ಯಾಣಕಾರಕವಾದ ಆಡಳಿತದ ರೀತಿಯಿಂ ದೇವರಾಜ ಇಂದ್ರನ ಹೆಮ್ಮೆ ಆದೇಶರ ಬೆಲೆಯದೆಂದು ಎಲ್ಲ ಕಾಣಿಸಿಕೊಡಬೇಕೆಂದಿದ್ದೇನೆ.

ಪ್ರಹ್ಲಾದ :— ಭಲೆ, ಬಲಿರಾಜಾ ! ದೈತ್ಯರೆಲ್ಲ ದೇವತೆ ನಡೆದುಕೊಂಡರೆ, ಇನ್ನು ಬೇಕೇನು ? ಪರಮಾತ್ಮನ ಕ ಸುಯಂತ್ರಿತವಾಗಿ ನಡೆದಂತೆಯೆ ಆಗುವುದು. ಅಂದು ಜಗ ಅಪೂರ್ಣತೆಯೆಂಬುದು ಉಳಿಯುವುದೇ ಇಲ್ಲ !

ಬಲಿ :— ಅಹುದು, ಪೂಜ್ಯ ಪಿತಾಮಹ ! ನಿನ್ನ ಮೊ ರಾಜ್ಯದಲ್ಲಿ ಅಪೂರ್ಣತೆಗೆ ಆಸ್ಪದವೇ ಉಳಿಯಬಾರದೆಂದ ಅಪೇಕ್ಷೆಯಾಗಿದೆ.

ಪ್ರಹ್ಲಾದ :— ಆನಂದ, ವತ್ಸಾ ! ನಿನ್ನ ಅಪೇಕ್ಷೆ ಕೈಗೂ

ಬಲಿ :— ಮಂತ್ರಿಗಳೆ, ಇಂದಿನ ಓಲಗದಲ್ಲಿಯ ನರ್ತ ಆ ಘೃತಾಚಿ, ಮೇನಕೆಯರು ಬಂದಿದ್ದಾರಲ್ಲವೆ ? ಅ ಬರಮಾಡಿರಿ !

ಮಂತ್ರಿ :— ಸನ್ನಿಧಿಯ ಆಜ್ಞೆಗಾಗಿ ದಾರಿಯನ್ನೇ ಕಾ ಲಿದ್ದಾರೆ ಮಹಾಪ್ರಭು !

ಬಲಿ :— ಹಾಗಾದರೆ ಈಗಲೆ ಬಂದು ಬಿಡಲಿ ! ಆ ಸ್ ಸುರರಿಗೇ ಮೀಸಲಾಗಿದ್ದ ಗಾಯನ-ನರ್ತನದ ಸೌಂದರ್ಯ ಲೋಕದ ಜನರಿಗೂ ಸವಿಯಲು ಸಿಕ್ಕಲಿ !

(ಘೃತಾಚಿ-ಮೇನಕೆಯರು ಬಂದ ಗೆಜ್ಜೆಕಾಲಿನ ಸದ್ದು)

ಇಬ್ಬರೂ :— ದೈತ್ಯರಾಜನಿಗೆ ಗೆಲುವಾಗಲಿ !

ಮಂತ್ರಿ :— ಅಪ್ಸರಃಮಣಿಯರೆ, ನಮ್ಮ ಉದಾರ ಚಕ್ರ ಗಳು, ಈ ಭೂಲೋಕದ ಜನರಿಗೆ ನಿಮ್ಮ ಸಂಗೀತ-ನ ಸೌಖ್ಯವನ್ನು ಒದಗಿಸುವ ಸುಯೋಗವನ್ನು ತಂದು ಕೊಟ್ಟ ನಿಮ್ಮ ಜೊತೆಗೆ ಬಂದಿರುವ ಈ ಪುಷ್ಪಸೇನ ಗಂಧರ್ವ,

ವರ್ತಿಯ ಗುಣಾಂಕಮಾಲೆಯ ಗೀತವನ್ನು ಹಾಡಲಿ;
ಂದಿಗೆ ನಿಮ್ಮ ನರ್ತನ ನಡೆಯಲಿ!

ಂಧರ್ವ-ಅಪ್ಸರೆಯರು:— ಸನ್ನಿಧಿಯ ಚಿತ್ತ!

(ಗಂಧರ್ವನು ಹಾಡಲು ತೊಡಗುತ್ತಾನೆ.)

ಅದರೊಂದಿಗೆ ಅಪ್ಸರೆಯರ ನರ್ತನದ ಧ್ವನಿ ಕೇಳುತ್ತದೆ.)

ಹಾಡು

ಬಲಿ-ರಾಜ ದೈತ್ಯಕುಲತೇಜ ಪ್ರಜಾಸುರ-
ಭೂಜ ತ್ರಿಲೋಕ ವಿರಾಜಾ ||
ಬಲ-ದೋಜ ರೂಪಸುಮನೋಜ ಕಲೋನ್ನತ
ರಾಜ ವಿಕಸಿತಾಂಭೋಜಾ! || ಪಲ್ಲ ||

ಜಯ-ಜಯ ಜಯ ಸಂಗರಭೀಮಾ!
ಜಯ-ಜಯ ಜಯವಧು ವಿಶ್ರಾಮಾ!
ಜಯ-ಜಯ ದಿತಿವಂಶಲಲಾಮಾ!
ಜಯ-ಜಯ ನವನೀರದ ಶ್ಯಾಮಾ! ||
ಬಲಿ - ರಾಜ ದೈತ್ಯಕುಲ ತೇಜ ಪ್ರಜಾ ಸುರ-
ಭೂಜ ತ್ರಿಲೋಕ ವಿರಾಜಾ! || ೧ ||

ನರ್ತನದ ಕೊನೆಯೊಂದಿಗೆ ಓಲಗದಲ್ಲಿ ಆನಂದೋಲ್ಲಾಸದ
ಚಪ್ಪಾಳೆಯ ಸಪ್ಪಳ)

ಕ್ರಾಚಾರ್ಯ:— ಭಲೆ ಭಲೆ! ಅಪೂರ್ವವಾದ ಸಂಗೀತ! ಯವಾದ ನರ್ತನ! ದೈತ್ಯರಾಜಾ! ಇಂದಿನ ಓಲಗದಲ್ಲಿ ಮಾಡಬೇಕಾದ ರಾಜಕಾರ್ಯ ಬಹಳವಿದೆ. ನಡೆದಿರುವ ನ-ಸಂಗೀತಗಳು ಇಷ್ಟಕ್ಕೆ ನಿಲ್ಲಲಿ! ಇನ್ನು ಇವರಿಗೆ ಸಲ್ಲ-ದ ಮನ್ನಣೆಯ ವೀಳೆಯ ಸಲ್ಲಲಿ!

ಲಿರಾಜ:— ಅಪ್ಸರೆಯರಿಗೂ ಗಂಧರ್ವರಿಗೂ ಇನ್ನು ಗಲು ಅಪ್ಪಣೆ!

(ಅವರು ಹೊರಟುಹೋಗುವ ಸದ್ದು)

ಲಿರಾಜ:— ಗುರುಗಳು ಇನ್ನು ಮುಂದಿನ ರಾಜಕಾರ್ಯ- ವಿಸ್ತರಿಸಬೇಕು.

ಕ್ರಾಚಾರ್ಯ:— ದೈತ್ಯರಾಜಾ! ದೇವಪ್ರಮುಖರನ್ನು ಸ್ವರ್ಗದಿಂದ ಓಡಿಸಿದ್ದೀಯಾದರೂ, ದೇವೇಂದ್ರನ ಸಿಂಹಾ-ಸನ್ನೇರಿ ಕುಳಿತುಕೊಳ್ಳುವ ಸಾಮರ್ಥ್ಯವನ್ನು ನೀನು ಇದು-ನ ಪಡೆದಿಲ್ಲ. ಅದನ್ನು ಪಡೆಯುವ ಅಗತ್ಯವಿದೆಯೆಂಬುದನ್ನು ಇಂದು ಸೂಚಿಸಬೇಕಾಗಿದೆ.

ಲ್ಹಾದ:— ಗುರುಗಳು ನನ್ನ ಅಧಿಕಪ್ರಸಂಗವನ್ನು ಕ್ಷಮಿಸ- ಬಲಿರಾಜನ ಶಕ್ತಿ-ಪೌರುಷಗಳು ನನಗೆ ಮೆಚ್ಚುಗೆಯ ಗಳು! ಆದರೆ ಆ ಶಕ್ತಿ-ಪೌರುಷಗಳು ಕಾರ್ಯಾಕಾರ್ಯ ನೆಯನ್ನು ಇರಿಸಿಕೊಂಡಿದ್ದರೆ, ನಮ್ಮ ದೈತ್ಯಕುಲಕ್ಕೂ ಕ್ಕೂ ಮಂಗಳವೆಂದು ನನ್ನ ಅಭಿಪ್ರಾಯ!

ಶುಕ್ರಾಚಾರ್ಯ:— ನಿಮ್ಮ ಕಾಲ ಮುಗಿದಿದೆ ದೈತ್ಯ ಪಿತಾ-ಮಹ! ಈಗ ಬಲಿಚಕ್ರವರ್ತಿಯ ಮಹಾಪೌರುಷ ಮೆರೆಯುವ ಕಾಲ. ದೇವೇಂದ್ರನನ್ನು ಸೋಲಿಸಿದ ಈ ಮಹಾಪೌರುಷ, ಅವನ ದೇವಸಿಂಹಾಸನವನ್ನೇರಿ ಕುಳಿತು ವಿಜಯಗೀತ ಹಾಡಿಸಿ-ಕೊಳ್ಳಬೇಕೆಂಬ ಈ ದೈತ್ಯಗುರುವಿನ ಅಪೇಕ್ಷೆಯಿದೆ.

ಪ್ರಲ್ಹಾದ:— ಈ ನಿಮ್ಮ ಅಪೇಕ್ಷೆ ವಿವೇಕದ್ದಲ್ಲ. ಬಲಿರಾಜನಲ್ಲಿ ದೇವೇಂದ್ರನಾಗಬಲ್ಲ ಯೋಗ್ಯತೆಯೂ ಇರಬಹುದು; ಆದರೆ ಲೋಕನಿಯಾಮಕ, ಎಲ್ಲ ದೇವಗಣದ ಆಡಳಿತಕ್ಕೂ ಕಾಲ-ನಿಯಮವನ್ನು ಹಾಕಿಕೊಟ್ಟಿದ್ದಾನೆ. ಈಗಿರುವ ಇಂದ್ರನ ಅಧಿ-ಕಾರದ ಅವಧಿಯಿನ್ನೂ ಮುಗಿದಿಲ್ಲ.

ಶುಕ್ರಾಚಾರ್ಯ:— ಮೃತ ಸಂಜೀವನ ವಿದ್ಯೆಯನ್ನು ಬಲ್ಲ ಈ ದೈತ್ಯಗುರುವು ಮೃತರನ್ನು ಬದುಕಿಸುವುದನ್ನು ಅರಿತಿರುವಂತೆ, ಬಲಿರಾಯನ ಪೌರುಷದಿಂದ, ಅಧಿಕಾರಿಗಳ ಅಧಿಕಾರಾವಧಿಯನ್ನು ಅಳಿಸುವ ಸಾಮರ್ಥ್ಯವನ್ನೂ ಪಡೆದಿದ್ದಾನೆ!

ಪ್ರಲ್ಹಾದ:— ಆಚಾರ್ಯರೆ, ಎಚ್ಚರು! ನೀವು ಲೋಕ ವಿಧಾಯಕವಾದ ಸೃಷ್ಟಿ-ಸ್ಥಿತಿಗಳ ಕಾರ್ಯದಲ್ಲಿ ಕೈ ಹಾಕುವ



ಕಾರ್ಯ ನಡೆಸುತ್ತಿರುವಿರಿ! ಆ ವಿಧಾಯಕ ಶಕ್ತಿ, ತನ್ನ ನಿಯಮಗಳ ವಿರೋಧಿಗಳನ್ನು ಎಂದಿಗೂ ಕ್ಷಮಿಸಳು! ಜೋಕೆ!

ಶುಕ್ರಾಚಾರ್ಯ :— ಅಜ್ಜಯ್ಯನಿಗೆ ಸರಿಯಾದ ಮಾತುಗಳನ್ನು ಆಡುತ್ತಿದ್ದೀರಿ! (ನಕ್ಕು) ಹೋಗಲಿ! ಬಲಿರಾಯಾ! ದೇವೇಂದ್ರನ ಆಸನವನ್ನು ಏರಬೇಕಾಗಿವೆಯಲ್ಲವೇ ನಿನಗೆ?

ಬಲಿರಾಜ :— ಇದನ್ನು ಬೇರೆಯಾಗಿ ಬಾಯಿಬಿಚ್ಚಿ ಹೇಳಬೇಕಾಗಿದೆಯೆ ಗುರುಗಳೇ! ಅದು ನನ್ನ ಜೀವಿತದ ಕೊನೆಯ ಗುರಿ! ಅದಿತಿಯ ಸಂತಾನದವರಿಗೆ ಅದು ಸಿಕ್ಕಬೇಕೇಕೆ? ದಿತಿಯ ಸಂತಾನದವರಿಗೆ ಅದು ಸಿಕ್ಕಬಾರದೇಕೆ?

ಪ್ರಲ್ಹಾದ :— ಅದು ದೈವಸಂಕೇತ ಬಲಿರಾಯಾ!

ಬಲಿರಾಯ :— ನಾನು ನನ್ನ ಪೌರುಷದಿಂದ ದೈವಸಂಕೇತವನ್ನು ಬದಲಿಸಬೇಕೆಂದು ಮಾಡಿದ್ದೇನೆ.

(ಒಮ್ಮೆಲೆ ಆಕಾಶದಲ್ಲಿ ಕಾರ್ಮೋಡ ಮುಸುಕುವುದು. ಗುಡುಗುಗಳ ಆರ್ಭಟ, ಸಿಡಿಲುಗಳ ಸಪ್ಪಳ, ಬಿರುಮಳೆಯ ಆರ್ಭಟ—ಜೊತೆಗೆ ಜನರ ವಿವಿಧ ರೀತಿಯ ಆರ್ತಸ್ವರದ ಕೂಗು)

ಬಲಿರಾಯ :— ಒಮ್ಮಿಂದೊಮ್ಮೆಲೆ ಎಂಥಹ ಬಿರುಮಳೆಯಿದು. ಎಷ್ಟೊಂದು ಗುಡುಗು! ಎಷ್ಟೊಂದು ಸಿಡಿಲು!

ಪ್ರಲ್ಹಾದ :— ಬಲಿ! ಇಲ್ಲಿ ನಡೆದ ದೈವದ್ರೋಹದ ಮಾತುಗಳಿಂದುಂಟಾದ ದುರ್ನಿಮಿತ್ತಗಳಿವು! ಬರೀ ಸಹಜವಾದ ಬಿರುಮಳೆ-ಸಿಡಿಲುಗಳಲ್ಲ....ಇನ್ನೂ ಏನೇನನ್ನು ನೋಡಬೇಕಾಗುವುದೋ ನಾವು!

ಶುಕ್ರಾಚಾರ್ಯ :— ಇಂತಹ ದುರ್ನಿಮಿತ್ತಗಳಿಗೆ ಹೆದರುವವನ ಪೌರುಷವು ಪೌರುಷವೇ ಅಲ್ಲ!

ಬಲಿರಾಜ :— ಗುರುಗಳ ಮಾತಿಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ.

ಗಜಾಧಿಕಾರಿ :— (ಆತುರದಿಂದ ಓಡುತ್ತ ಬಂದು) ಮಹಾಪ್ರಭು, ಆನೆಗಳಿಗೇನು ರೋಗ ಬಂದಿದೆಯೊ! ನಿಂತಲ್ಲಿಯೆ ಬಿದ್ದುಕೊಂಡು ಹೊರಳಾಡುತ್ತಲಿವೆ!

ತುರಗಾಧಿಕಾರಿ :— ಮಹಾಪ್ರಭು, ಕುದುರೆಗಳೆಲ್ಲಾ ಅರೆಜೀವಿಗಳಾಗಿ ನಿಂತು ಕಣ್ಣೀರು ಕರೆಯುತ್ತಲಿವೆ. ಅದೇಕೆಂಬುದು ತಿಳಿಯದಾಗಿದೆ.

ಉಗ್ರಾಣಾಧಿಕಾರಿ :—ಸನ್ನಿಧಿಗೆ ಅವಧಾರು! ಶಿವನ ಉರಿಗಣ್ಣು ಹೋಲುವ ಸಿಡಿಲುಗಳು ಬಡಿದು, ಉಗ್ರಾಣಗಳೆಲ್ಲ ಉರಿಯುತ್ತಲಿವೆ.

ನಗರದ ತಳಾರ :— ಭಯಂಕರವಾದ ವರ್ತಮಾನ ಮಹಾದೇವ! ಕಾಡಿನ ಹಿಂಸ್ರಪಶುಗಳೆಲ್ಲ ರಾಜಧಾನಿಯಲ್ಲಿ ನುಗ್ಗಿ, ಪ್ರಜೆಗಳಿಗೆಲ್ಲ ತೊಂದರೆ ಕೊಡುತ್ತಲಿವೆ.

ಪ್ರಲ್ಹಾದ:— ನೋಡಿದೆಯೇನು ಮಗು........ ದೈವೀಶಕ್ತಿಯ ಪ್ರಕೋಪವನ್ನು!

ಬಲಿರಾಯ:— ನಿಮ್ಮ ದೈವೀಶಕ್ತಿಗಿಂತಲೂ ಹೆಚ್ಚ ಮಾಯೆಯಾಟಗಳನ್ನು ನಮ್ಮ ಅಸುರೀಶಕ್ತಿ ಮಾಡಬ್ಬ ಲ್ಲಿತಾತಯ್ಯ

ಪ್ರಲ್ಹಾದ:— ದೈವೀಶಕ್ತಿ ಮಾಯೆಯಾಟವಲ್ಲ ಮ ಅದರೆದುರು ನಿಮ್ಮ ಅಸುರೀಶಕ್ತಿಯ ಮಾಯೆಯಾಟ ಮ ತಿನ್ನಬೇಕಾಗುವುದು.

ಶುಕ್ರಾಚಾರ್ಯ:— ಅದರ ಚಿಂತೆಯನ್ನು ನಮಗೆ ಬ ಬಿಡಿರಿ ಅಜ್ಜಯ್ಯಾ!

(ದೂರದಲ್ಲಿ ಧ್ವನಿಯು ಕೇಳುವುದು)

'ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ

ಪ್ರಲ್ಹಾದ:— ಕೇಳಿದೆಯಾ ಮಗು, ದೈವನಾಣೆಯನ್ನು!

ಬಲಿರಾಜ:— ಕೇಳಿದೆ ಕೇಳಿದೆ; ನನ್ನ ಪೌರುಷವೂ ದೈವದ ಕೆಲಸವನ್ನೇ ಮಾಡಬೇಕೆನ್ನುವುದು. ಅದೂ ಸಾ ಗಳನ್ನು ಸಲಹಬೇಕೆನ್ನುವುದು. ದುಷ್ಕೃತರನ್ನು ವಿನಾಶಗೊ ಬೇಕೆನ್ನುವುದು. ಧರ್ಮವನ್ನು ಸಂಸ್ಥಾಪಿಸಬೇಕೆನ್ನುವ ದೈವದ ಬಲವಿಲ್ಲದೆಯೂ ಇದನ್ನು ಮಾಡಲಿಕ್ಕೆ ಬರುವುದೆಂಬುದ ಲೋಕದೆದುರು ಸಿದ್ಧಮಾಡಿ ತೋರಿಸಬೇಕಾಗಿದೆ!

ಶುಕ್ರಾಚಾರ್ಯ:— ಭಲೆ! ಭಾಪು! ಬಲಿರಾಯನ ಮ ಒಂದೊಂದೂ ರಕ್ತದ ಬೆಲೆಯವು!

ಪ್ರಲ್ಹಾದ:—ಆಗಲಿ ಗುರುಗಳೆ, ನಿಮ್ಮ ರತ್ನಗಳು ನಿಮ್ಮ ಇರಲಿ! ನನಗೆ ಇನ್ನು ಈ ಸಭೆಯಲ್ಲಿ ಸ್ಥಾನವಿಲ್ಲ. ಹೋ ಹೋಗುವ ಮೊದಲು ಒಂದು ಮಾತನ್ನು ಹೇಳುತ್ತೇನೆ ಕೇ ನನ್ನ ಕಾತರಿಗಾಗಿ ಅಂದು ಆ ದೈವ, ನೃಸಿಂಹನಾಗಿ ಭೂ ಇಳಿಯಬೇಕಾಯಿತು. ಇಂದು ಈ ಮೊಮ್ಮಗನಿಗಾಗಿ ಮತ್ತೆ ಶಕ್ತಿ ಯಾವ ರೂಪದಿಂದ ಬರಲಿದೆಯೋ ಏನೋ! ಬಲಿರಾಯ ಎಚ್ಚರದಿಂದಿರು! ಈ ಮುಪ್ಪಿನ ಎದೆಯನ್ನು ಕುದಿಸುವ ಕಾರ್ಯಕ್ಕೆ ಕಾಲಿಡಬೇಡ. (ರಭಸದಿಂದ ಹೊರಟು ಹೋಗುತ್ತಾ

ಶುಕ್ರಾಚಾರ್ಯ:— ನಾನು ಯಾವಾಗಲೂ ನೋಡುತ್ತೇ ಬಿಸಿನೆತ್ತರಿನ ತರುಣರ ಸಾಹಸಜೀವನಕ್ಕೆ, ಈ ತಂಪುಗ ನೆತ್ತರಿನ ಮುದುಕರು ತಣ್ಣೀರೆರೆಯಲಿಕ್ಕೆ ಬರುತ್ತಾ ಬಲಿರಾಯಾ! ನಿನ್ನ ಅಜ್ಜನ ಎಚ್ಚರಿಕೆಯ ಮಾತು, ಅಭಿಪ್ರಾಯವನ್ನು ಬದಲಿಸಿಲ್ಲವಷ್ಟೆ?

ಬಲಿರಾಜ :— ಲವಮಾತ್ರವೂ ಬದಲಿಸಿಲ್ಲ. ದೈವೀ ಮಾಡಬೇಕಾದ ಕಾರ್ಯವನ್ನೇ ನಾನು ಮಾಡಿ, ಲೋ ಸುಖ-ಸಮಾಧಾನಗಳನ್ನುಂಟುಮಾಡಬೇಕೆಂದು ಟೊಂಕಕಟ್ಟಿ ವಾಗ, ದೈವವು ನನಗೇಕೆ ವಿರೋಧಿಯಾಗಬೇಕು? ಆಚಾರ್ಯರು ಅಪ್ಪಣೆ ಕೊಡಿಸಬೇಕು: ಅಮರೇಂದ್ರನ ಸಿಂ ಹಾಸನವನ್ನು ಏರುವ ಸಾಮರ್ಥ್ಯವು ನನಗೆ ಬರಬೇಕಾದರೆ ನಾನೇ ನು ಮಾಡಬೇಕು?

ಶುಕ್ರಾಚಾರ್ಯ:— ನೂರು ಅಶ್ವಮೇಧಯಜ್ಞಗಳನ್ನು ವಿಧಿ-ಪೂರ್ವಕವಾಗಿ **ಮಾಡಿ** ಶತಕ್ರತುವಾಗಬೇಕು. ಇನ್ನೇನೂ ಇಲ್ಲ. ಶತಕ್ರತುವಲ್ಲದವನು ಇಂದ್ರಪದವಿಗೆ ಅರ್ಹನೆನಿಸನು!

ಬಲಿರಾಜ:— ಇಷ್ಟೇ ಅಲ್ಲವೆ? ಅದಕ್ಕೇನು, ಶ್ರಮವಹಿಸ-ಬೇಕಾದೀತು? **ಲೋಕದಲ್ಲಿ** ನಮ್ಮನ್ನೆದುರಿಸುವ ವೈರಿಗಳಾರೂ ಉಳಿದಿಲ್ಲ**ವಾದುದರಿಂದ, ನಮ್ಮ** ಯಾಗದ ಕುದುರೆಯನ್ನು ಕಟ್ಟಿ ಹಾಕಿಗ**ಹೂಡುವವರೇ ಇಲ್ಲ.** ದೈತ್ಯರಾಜ್ಯದ ಭಾಂಡಾರದಲ್ಲಿ ಯಜ್ಞಕ್ಕೆ **ಬೇಕಾಗುವ** ಧನಸಂಪತ್ತಿಗೂ **ಕೊರತೆ**ಯಿಲ್ಲ. ಶುಭಸ್ಯ ಶೀಘ್ರಂ! **ಉಚಿತಕಾಲವನ್ನು** ಕಂಡುಹಿಡಿದು ಯಜ್ಞಗಳನ್ನು ಒಂದರಹಿಂದೊಂದರಂತೆ ಪ್ರಾರಂಭಿಸಿಬಿಡಿರಿ! ಈ ದೈತ್ಯರಾಜ ಶತಕ್ರತುವೂ **ಆಗಿಬಿಡಲಿ!**

ಶುಕ್ರಾಚಾರ್ಯ:— ತಥಾಸ್ತು! (ಓಲಗ ಕೊನೆಗೊಳ್ಳುವ ಸಂಮಭಿಧ್ವಾನ)

* ● *

ನಿವೇದಕ

ಬಲಿರಾಯನ ಅಶ್ವಮೇಧಯಾಗಗಳು ನಿರ್ವಿಘ್ನವಾಗಿ ಒಂದರ ಹಿಂದೊಂದರಂತೆ ಪೂರಯಿಸಲು ತೊಡಗಿದುವು. (ಯಜ್ಞಾ-ಹುತಿಯ **ಮಂತ್ರದ ಹಿನ್ನೆಲೆಯೊಂದಿಗೆ**) ಒಂದಾಯಿತು; ಎರಡು ತೀರಿದುವು. **ಮೂರನೆಯದು** ಮುಗಿಯಿತು. ನಾಲ್ಕಾಯಿತು. ಹತ್ತಾದುವು. **ಇಪ್ಪತ್ತು,** ಮೂವತ್ತು, ಐವತ್ತು, ಎಂಬತ್ತು, **ತೊಂಬತ್ತು** ಮಹಾಯಾಗಗಳು ಮುಗಿದುವು. **ದೇವೇಂದ್ರನಿಗೂ** ದೇವೇಂದ್ರನ ಪರಿವಾರದವರಿಗೂ ಮರಣಸಂಕಟ **ತಲೆದೋರಲು** ತೊಡಗಿತು. ಯಜ್ಞಗಳಿಗೆ ವಿಘ್ನವನ್ನುಂಟುಮಾಡುವ ಸಾಮರ್ಥ್ಯವೂ ಅವರಲ್ಲಿ ಉಳಿದಿರಲಿಲ್ಲ. ತಾರಕಶಕ್ತಿಯನಾದ ಶ್ರೀಮನ್ನಾರಾಯಣನಿಗೆ ಮೊರೆಯಿಡುವುದೊಂದೇ ಈಗ ಅವರಿಗೆ ಉಳಿದಿರುವ ದಾರಿ! ಅಗೋ, ಅವರ ದೈನ್ಯಪ್ರಾರ್ಥನೆಯನ್ನು ಕೇಳಿರಿ!

(ಅನೇಕರ ಧ್ವನಿಯಲ್ಲಿ ಕರುಣಾಪ್ರಾರ್ಥನೆ)

ಮತ್ಸ್ಯಾಕೃತಿಧರ ಜಯದೇವೇಶ | ವೇದೋದ್ಧಾರಕ
ಕೂರ್ಮಸ್ವರೂಪ ||
ಮಂದರ ಗಿರಿಧರ ಸೂಕರರೂಪ | ಭೂಮಿವಿದಾರಕ
ಜಯದೇವೇಶ! ||
ಕಾಂಚನಲೋಚನ ನರಹರಿರೂಪ ದುಷ್ಟ ಹಿರಣ್ಯಕ
ಭಂಜನ ಜಯಭೋ!

(ಒಂದೆ ಒಂದು ದೂರದ ಧ್ವನಿಯಲ್ಲಿ ಅಭಯ ವಾಣಿ)

ಪರಿತ್ರಾಣಾಯ ಸಾಧೂನಾಂ | ವಿನಾಶಾಯಚ ದುಷ್ಕೃತಾಂ |
ಧರ್ಮಸಂಸ್ಥಾಪನಾರ್ಥಾಯ | ಸಂಭವಾಮಿ ಯುಗೇ
ಯುಗೇ!

(ಅನೇಕರ ಧ್ವನಿಯಲ್ಲಿ)

"ಓ! ಅಭಯವಾಣಿ! ಧರ್ಮಸಂಸ್ಥಾಪನೆಗಾಗಿ ಇನ್ನೊಂದು ಅವತಾರದ ಅಭಿವಚನ! ದೇವಸಾಮ್ರಾಜ್ಯಕ್ಕೆ ಗೆಲವು! ಗೆಲವು!'

* * * *

ನಿವೇದಕ

ಕಶ್ಯಪಮುನಿಯ ಆಶ್ರಮದ ಎಲೆಮನೆಯೊಂದರಲ್ಲಿ ಕಶ್ಯಪ ಅವನ ಹಿರಿಯ ಹೆಂಡತಿ ಅದಿತಿದೇವಿ ಮಾತನಾಡುತ್ತಲಿದ್ದಾರೆ:

ಕಶ್ಯಪ :— ದೇವಸಾಮ್ರಾಜ್ಯಕ್ಕೆ ಗೆಲವು ಉಂಟಾಗಲೇ ಬೇಕು! ದೇವೇಂದ್ರ ಮರಳಿ ಸ್ವರ್ಗಸಾಮ್ರಾಜ್ಯವನ್ನು ಏರಲೇ ಬೇಕು!

ಅದಿತಿ :— (ಅಳುದನಿಯಲ್ಲಿ) ಇದು ನಿಮ್ಮ ಹಾರಯಿಕೆಯಷ್ಟೆ! ಕಾಲದ ಒಡಲಲ್ಲಿ ಹುದುಗಿರುವ—ಇನ್ನೆಂತಹ ಕಷ್ಟದ ಕೂಳನ್ನು ಉಣ್ಣಬೇಕಾಗಿದೆಯೋ ನಾವು!

ಕಶ್ಯಪ:— ಅಧೀರೆಯಾಗದಿರು ದೇವೀ! ದೇವಕುಲಕ್ಕೆಲ್ಲ ಬಸಿರನ್ನಿತ್ತ ಮಹಾಮಾತೃ ನೀನು? ನಿನಗೂ ತಾಳ್ಮೆಯೆಂಬುದು ಇರಬೇಡವೆ?

ಅದಿತಿ:— ಇದು ತಾಯ ಕರುಳಿಗೆ ಕೇಳುವ ಪ್ರಶ್ನೆಯೇ?

ಕಶ್ಯಪ:—ತಾಯ ಕರುಳಿನೊಂದಿಗೆ ಮುನ್ನೋಟ ನೋಡಬಲ್ಲ ಒಳಗಣ್ಣೂ ನಿನಗಿವೆ ದೇವೀ! ಹಿಡಿದ ಗ್ರಹಣ ಬಿಡಲೇಬೇಕು.... ಇಲ್ಲವಾದರೆ, ಅಂದೆಯೇ ವಿಶ್ವಕ್ಕೆ ಅಳಿಗಾಲ ಕಟ್ಟಿಟ್ಟ ಮಾತು! ನಿನ್ನ ಈ ಕಿರಿಯ ಮಗ ಉಪೇಂದ್ರ ಸಾಮಾನ್ಯ ವ್ಯಕ್ತಿಯಲ್ಲ! ಅಸಾಮಾನ್ಯ ದೈವೀಶಕ್ತಿಯೆಂಬುದನ್ನು ಮರೆಯದಿರು ಅಂದು ನಿನಗೆ ದೈವದ ಅಭಯವಾಣಿ ದೊರೆತುದನ್ನು ನೀನೇ ಹೇಳಲಿಲ್ಲವೆ?

ಅದಿತಿ :— ಅದೇನೋ ಹೇಳಿದೆ ಸರಿ! ಈ ಮೂರು ಗೇಣಿನ ಮಾಣವಕ, ಆ ತ್ರೈಲೋಕ್ಯವಿಜಯಿಯಾದ ಮಹಾವೀರ ಬಲಿಯನ್ನು ಹೇಗೆ ದಮನ ಮಾಡೀತು—ಎಂದು ಸಂದೇಹ ನನಗೆ!

ಕಶ್ಯಪ:— ಮತ್ತೆ ಮತ್ತೆ ಸಾಮಾನ್ಯಸ್ತ್ರೀಯಂತೆ ಮಾತನಾಡುತ್ತಲಿದ್ದೀ ನೀನು! ದೈವದ ಅಭಯವಾಣಿಯಲ್ಲಿಯೂ ನಿನಗೆ ಸಂದೇಹವೆ? ನಮ್ಮ ಉಪೇಂದ್ರನ ಜಾತಕಸಾಮುದ್ರಿಕದ ಶುಭ-ಲಕ್ಷಣಗಳನ್ನು ನೋಡಿದ್ದೀಯೋ ಇಲ್ಲವೋ!

ಅದಿತಿ:— ಮುನಿರಾಯಾ, ಸುರೇಂದ್ರನಿಗೆ ಯಾವ ಶುಭ-ಲಕ್ಷಣಗಳ ಕೊರತೆಯಿದ್ದುವು? ಆ ಲಕ್ಷಣಗಳು ಇಂದು ಏನು ಮಾಡುತ್ತಲಿವೆ?

ಕಶ್ಯಪ:— ಪಾಪ! ದುಃಖದಗ್ಧ ಹೃದಯಿನಿಯಾದ ತಾಯಿ! ಕರುಳ ಕೊರಗಿನ ಮುಂದೆ ಇನ್ನೇನೂ ಇವಳಿಗೆ ಕಾಣುವುದಿಲ್ಲ. (ಹೊರಗೆ ಆಡುತ್ತಿರುವ ಉಪೇಂದ್ರನನ್ನು ಕೂಗಿ ಕರೆಯುವನು.) ಮಗು, ಉಪೇಂದ್ರಾ!

ಉಪೇಂದ್ರ:— ಏನು ತಾತ! ಏತಕ್ಕೆ ಕರೆದದ್ದು?

ಕಶ್ಯಪ:— ನಿನ್ನ ದುಃಖಿನಿಯಾದ ತಾಯಿಯ ದುಃಖವನ್ನು ಶಮನಮಾಡುವುದಿಲ್ಲವೇ ನೀನು?

ಉಪೇಂದ್ರ :— ನಾನು ಭೂಮಿಗಿಳಿದು ಬಂದುದೇ ಅದಕ್ಕಾಗಿ ತಾತ! ಆದರೆ ಬಲಿರಾಯನು ಮಿಕ್ಕ ದೈತ್ಯರಂತಿಲ್ಲ. ಅವನ ರಾಜ್ಯದಲ್ಲಿ ದಯೆಯಿದೆ, ದಾನವಿದೆ, ಧರ್ಮವಿದೆ! ಮೂರುಲೋಕಗಳಲ್ಲಿಯೂ ಸ್ವರ್ಗಸಮರಾಜ್ಯವನ್ನು ಕಟ್ಟುವೆನೆಂಬ ಅವನ ಬಯಕೆ ಕೈಗೂಡುವುದರಲ್ಲಿದೆ. ಇಂತಹ ದೇವಸಮನಾದ ದೈತ್ಯನನ್ನು ದಮನಮಾಡಬೇಕಾದರೆ, ನ್ಯಾಯ್ಯವಾದ ದಾರಿಯಿಂದಲೆ ಮಾಡಲು ಬೇಕಾಗಿದೆ.

ಕಶ್ಯಪ :— ಕೇಳಿದೆಯೋ ಉಪೇಂದ್ರನ ಮಾತುಗಳನ್ನು?

ಅದಿತಿ :— ಕೇಳಿದೆ. ಕಿವಿಗೊಟ್ಟು ಮನಗೊಟ್ಟು ಕೇಳಿದೆ. ಆದರೆ ಆ ನ್ಯಾಯ್ಯವಾದ ದಾರಿ ಇನ್ನೂ ದೊರೆತಿಲ್ಲವೇ ಮಗು?

ಉಪೇಂದ್ರ :— ದೊರೆತಿದೆ ತಾಯಿ! ನನಗೆ ಉಪನಯನ ಸಂಸ್ಕಾರವನ್ನು ಬೇಗನೆ ಮುಗಿಸಿ, ಷಟ್‌ಕರ್ಮಗಳಿಗೂ ನನ್ನನ್ನು ಅಧಿಕಾರಿಯನ್ನಾಗಿ ಮಾಡಿರಿ! ಧರ್ಮವನ್ನು ಧರ್ಮದಿಂದಲೇ ಜಯಿಸಬೇಕಾಗುವುದು.

ಅದಿತಿ :— ಏನು? ಬಲಿಯ ದಮನಕ್ಕಾಗಿ ನೀನು ಬ್ರಹ್ಮಚಾರಿ-ಯಾಗಬೇಕೆ?

ಉಪೇಂದ್ರ :— ಅಹುದು ದೇವಮಾತೆ! ಬ್ರಹ್ಮಚಾರಿಯಾಗದೆ ದಾನ ಬೇಡುವ ಅಧಿಕಾರ ನನಗೆಲ್ಲಿ ಬರುವುದು? ಇದು ಭೂಲೋಕ! ಇಲ್ಲಿಯ ಮಾನವಧರ್ಮವನ್ನು ಮೀರಿ ನಡೆಯುವುದು ಅವತಾರಿ ವಿಭೂತಿಗಳಿಗೂ ಅಧರ್ಮವಾಗಿರುವುದು!

ಅದಿತಿ :— ನಿನ್ನ ತಂದೆ ಒಪ್ಪಿದರೆ, ನೀನು ಬೇಗನೆ ಬ್ರಹ್ಮೋಪ-ದೇಶ ಪಡೆಯಬಹುದು!

ಕಶ್ಯಪ :— ಅದಕ್ಕಿನ್ನು ವಿಲಂಬವೇಕೆ ದೇವಿ! ಕೂಡಲೇ ಈತನ ಉಪನಯನ ಮಹೋತ್ಸವವನ್ನು ನೆರವೇರಿಸಿಬಿಡೋಣ.

ಅದಿತಿ :— ಧನ್ಯಳಾದೆ! ಮಗು, ಉಪೇಂದ್ರಾ! ನೀನೇ ನನ್ನ ಜೀವಿತದ ಆಶೆಗೆ ಆಧಾರ! ನಿನ್ನಿಂದಲೇ ನನ್ನ ದೇವಸಂತಾನದ ಉದ್ಧಾರವಾಗಬೇಕು.

ವಾಮನ :— (ಹಿರಿಯನ ಗಂಭೀರವಾಣಿಯಲ್ಲಿ) ತಥಾಸ್ತು!

(ಸುರರ ಜಯಜಯಕಾರದ ಧ್ವನಿ. ಸುರದುಂದುಭಿಗಳ ಮಂಗಲವಾದ್ಯವಾದನ)

* * * *

ನಿವೇದಕ

ನರ್ಮದಾತೀರದ ನಿರ್ಮಲವಾದ ಪ್ರದೇಶದಲ್ಲಿ, ಬಲಿಚಕ್ರ-ವರ್ತಿಯ ಯಾಗಶಾಲೆ. ಇದೀಗ ನೂರನೆಯ ಅಶ್ವಮೇಧಯಾಗ ನಡೆದಿದೆ. (ಆಹುತಿಯ ಮಂತ್ರಗಳು ಹಿನ್ನೆಲೆಯಲ್ಲಿ ಕೇಳುತ್ತಿರ-ಬೇಕು) ರಾಷ್ಟ್ರದಲ್ಲಿಯ ವೇದ-ವೇದಾಂಗ ವಿದರಾದ ಋತ್ವಿಜರೂ, ಅಧ್ವರ್ಯುಗಳೂ, ಹೋತಾರರೂ, ಕ್ರಮಪಾಠಿ-ಜಟಾಪಾಠಿ-ಘನ-ಪಾಠಿಗಳೂ, ಸೂತಪುರಾಣಿಕರೂ ಯಾಗಶಾಲೆಯಲ್ಲಿ ತಮ್ಮ ತಮ್ಮ ಸ್ಥಾನಗಳನ್ನು ಹಿಡಿದು ಕುಳಿತುಕೊಂಡಿದ್ದಾರೆ. ಯಜ್ಞದ ದೈನಂದಿನ

ಪ್ರಹುತಿಯ **ಕಾರ್ಯವು** ನಡೆದಿದೆ (ಆಹುತಿಯ ಮಂತ್ರಗಳು ಹತ್ತಿರದಿಂದಲೇ ಕೇಳಬೇಕು, ಜೊತೆಗೆ ಸದಸ್ಯರಲ್ಲಿಯ ಗುಣುಗುಣು ಮಾತುಗಳು ಕೇಳುತ್ತಿರಬೇಕು.) ಓ! ಇವನಾವ? ಯಾಗಶಾಲೆಯ ಬಾಗಿಲಲ್ಲಿ ಅಭಿನೂತನ ಬ್ರಹ್ಮಚಾರಿ? ಕಟಿಯಲ್ಲಿ ಮೌಂಜಿಯ ಬಂಧನ! ಕೊರಳಲ್ಲಿ ಹೊಸ ಯಜ್ಞೋಪವೀತ! ಬಲದ ಕೈಯಲ್ಲಿ ಕಮಂಡಲು; ಎಡದ ಕೈಯಲ್ಲಿ ಪಾಲಾಶದಂಡ. ಬೆನ್ನಿಗೆ ಗಂಟಿಯ ಸತ್ತಿಗೆ. ಕಂಕುಳಲ್ಲಿ ಕುಶಾಸನ. ಬಂದ; ಯಾಗಶಾಲೆಯ ಬಾಗಿಲಲ್ಲಿ ನಿಂದ!

ಬ್ರಹ್ಮಚಾರಿ :— ಭಿಕ್ಷಾನ್ ದೇಹಿ ಭವಾನ್!

(ಸದಸ್ಯರಲ್ಲಿ ಆಶ್ಚರ್ಯೋದ್ಗಾರಗಳು)

ಒಬ್ಬ :— ಇವನೆಲ್ಲಿಯ ಕುಳ್ಳ ಬಟುವಯ್ಯಾ!

ಇನ್ನೊಬ್ಬ :— ಅಬ್ಬಾ! ಎಂತಹ ತೇಜಸ್ವಿಯಾದ ಮುಖ?

ಮತ್ತೊಬ್ಬ :— ಅಮ್ಮಾ, ಎಷ್ಟೊಂದು ಸುಕುಮಾರವಾದ ಮುಖಮುದ್ರೆ?

ಒಬ್ಬ :— ವೇಷ ಬದಲಿಸಿದ ಸನತ್ಕುಮಾರನೇನೋ!

ಇನ್ನೊಬ್ಬ :— ಅಗ್ನಿಯೇ ಈ ವಟುವೇಷದಿಂದ ಬಂದಿರುವನೇನೋ!

ಮತ್ತೊಬ್ಬ :— ಹೈಮವತಿಯನ್ನು ವಂಚಿಸಲು ವಟುವೇಷ ತಳೆದ ಸಾಕ್ಷಾತ್ ಶಂಕರನಂತೆ ಕಾಣುತ್ತಲಿದ್ದಾನೆ!

ಬ್ರಹ್ಮಚಾರಿ :— ಭಿಕ್ಷಾನ್ ದೇಹಿ ಭವಾನ್

(ವಟುವಿನ ಕೂಗು ಬಲಿರಾಜನಿಗೆ ಕೇಳುವುದು)

ಬಲಿರಾಯ :— ಆಚಾರ್ಯರೆ, ಯಾರೋ ಅತಿಥಿಗಳು ಆಗಮಿಸಿದಂತೆ ಕಾಣುವುದು. ಮನ್ನಿಸಿ ಕರೆದು ತರಬೇಕು.

ಬ್ರಹ್ಮಚಾರಿ :— (ಮುಂದುವರಿಯುತ್ತ) ಇದೋ, ನಾನೇ ಬರುತ್ತಲಿದ್ದೇನೆ. ಮನ್ನಣೆಗಾಗಿ ನಿನ್ನ ಬಳಿ ಬಂದಿಲ್ಲ ದೈತ್ಯರಾಜಾ! ದಾನಕ್ಕಾಗಿ ಬಂದ ಬ್ರಹ್ಮಚಾರಿ ನಾನು!

ಬಲಿರಾಯ :— ದಾನದ ಮಾತು ಆ ಮೇಲೆ ನೋಡುವ ವಟುವರ! ಯಾಗಶಾಲೆಗೆ ಬಂದ ಅತಿಥಿಗಳು ನೀವು! ಯಜಮಾನನಾದ ನಾನು ಮೊದಲು ತಮಗೆ ಅರ್ಘ್ಯ-ಪಾದ್ಯಗಳನ್ನು ಸಲ್ಲಿಸಿ, ಅತಿಥಿಪೂಜೆಯನ್ನು ಮಾಡಬೇಕಾಗಿದೆ. ಹುಂ, ಅರ್ಘ್ಯೋದಕ ಪಾದೋದಕಗಳು ಬರಲಿ! ಪುರೋಹಿತರೆ, ನನ್ನಿಂದ ಅತಿಥಿಯ ಪೂಜೆ ಮಾಡಿಸಿರಿ!

(ವಿಧ್ಯುಕ್ತವಾಗಿ ಅತಿಥಿಪೂಜೆ ನಡೆಯುವುದು. ಬಳಿಕ)

ಬಲಿರಾಯ :— ತೇಜಸ್ವಿಯಾದ ಅತಿಥಿಯ ಆಗಮನದಿಂದ ಧನ್ಯನಾದೆ!

ಬ್ರಹ್ಮಚಾರಿ :— ದೈತ್ಯರಾಜನಿಗೆ ಶ್ರೇಯಸ್ಸು ಉಂಟಾಗಲಿ!

ಬಲಿರಾಯ :— ಅನುಗೃಹೀತನಾದೆನು. ಮಾಣವಕಮೂರ್ತಿ, ತಾವು ಅಪೇಕ್ಷಿಸುವ ದಾನವು ಯಾವುದು? ಈ ದೈತ್ಯರಾಜನ ರಾಜ್ಯದಲ್ಲಿ ಬೇಡಿದವರಿಗೆ ಇಲ್ಲವೆನ್ನುವ ಕಾರ್ಪಣ್ಯಕ್ಕೆ ಅವಕಾಶವೇ ಇಲ್ಲ.

ಬ್ರಹ್ಮಚಾರಿ :— ಮೂರು ಲೋಕದಲ್ಲಿಯೂ ನಿನ್ನ ರಾಜ್ಯದಲ್ಲಿಯ ದಾನಗುಣದ ಕೀರ್ತಿ ಹೊಗಳಿ ಹಾಡಿಸಿಕೊಳ್ಳುತ್ತಲಿದೆ, ದೊರೆಯೆ! ನಿನ್ನ ಔದಾರ್ಯದ ಬಿರುದನ್ನು ಕೇಳಿಯೆ ನಿನ್ನಲ್ಲಿಗೆ ನಾನು ಧಾವಿಸಿಬಂದಿದ್ದೇನೆ.

ಶುಕ್ರಾಚಾರ್ಯ :— ಬಲಿಚಕ್ರವರ್ತಿ! ಈತ ಸಾಮಾನ್ಯವಟುವಾಗಿ ಕಾಣುವುದಿಲ್ಲ. ಈ ವಾಮನಮೂರ್ತಿಗಾಗಿ ಮುನ್ನೆಚ್ಚರಿಕೆಯಿಂದ ನಡೆದುಕೊಳ್ಳಬೇಕು ನೀನು!

ಬಲಿರಾಜ :— ಗುರುಗಳೇ, ದಾನಬೇಡಲು ಬಂದವನನ್ನು ಅಸಾಮಾನ್ಯ-ಸಾಮಾನ್ಯ ಎಂದು ವಿಂಗಡಿಸುವುದುಂಟೆ? ದಾನಗುಣವೇ ಸಮಾಜಶಾಂತಿಯ ಮೊದಲ ಮೆಟ್ಟಿಲೆಂದು ನನ್ನ ರಾಜ್ಯದ ಶಾಸನವಿರುವಾಗ, ಆ ಶಾಸನವನ್ನು ವಿಚಾರಿ ರಾಜನಾದ ನಾನೇ ಮೀರುವುದು ಸಾಧ್ಯವುಂಟೇ? ಉಚಿತವೆನಿಸೀತೆ?

ಬ್ರಹ್ಮಚಾರಿ :— ಭಲೆ! ಬಲಿಚಕ್ರವರ್ತಿಗೆ ಯೋಗ್ಯವಾದ ಮಾತು ಇದು!

ಶುಕ್ರಾಚಾರ್ಯ :— ರಾಜಾ, ದಾನವನ್ನು ಪಾತ್ರಾಪಾತ್ರವರಿತು ಕೊಡಬೇಕೆಂದೂ ಧರ್ಮನಿಯಮವಿದೆ. ಇದರ ವಿಚಾರ ನಿನ್ನ ಮನದಲ್ಲಿರಲಿ!

ಬಲಿರಾಯ :— ಆಗಲಿ! ಹೂಂ, ಬ್ರಹ್ಮಚಾರೀ, ನಿನಗೆ ಬೇಕಾದುದೇನು? ದಾಕ್ಷಿಣ್ಯವಿಲ್ಲದೆ ಕೇಳಿಕೊಂಡು ಬಿಡು!

ಬ್ರಹ್ಮಚಾರಿ :— ದೈತ್ಯರಾಜಾ! ನನಗೆ ಆಶ್ರಯಕ್ಕೆ ಸ್ಥಳವಿಲ್ಲ. ನನ್ನ ಈ ಕಿರಿಯಡಿಗಳಿಂದ ಮೂರಡಿ ನೆಲವನ್ನು ನನಗೆ ದಾನವಾಗಿ ಕೊಟ್ಟುಬಿಡು! ಇನ್ನೇನೂ ನನಗೆ ಬೇಕಿಲ್ಲ!

ಬಲಿರಾಯ :— (ಗಟ್ಟಿಯಾಗಿ ನಕ್ಕು) ಸುಕುಮಾರ ಭಾವಕ್ಕೆ ತಕ್ಕ ಸುಕುಮಾರ ಯಾಚನೆ! ಇದನ್ನು ಬಿಡು ವಟುರಾಜಾ! ಇನ್ನೇನಾದರೂ ಘನವಾದುದನ್ನು ಕೇಳಿಕೊಳ್ಳಬಾರದೆ?

ಬ್ರಹ್ಮಚಾರಿ :— ನನಗೆ ಇನ್ನಾವುದರಲ್ಲಿಯೂ ಆಶೆಯಿಲ್ಲ ರಾಜಾ! ಮೂರಡಿ ಭೂಮಿಯನ್ನು ಕೊಟ್ಟು ಬಿಡು ಸಾಕು!

ಶುಕ್ರಾಚಾರ್ಯ :— ಬಲಿರಾಜಾ! ಏನೋ ಮೋಸಗಾರಿಕೆ ನಡೆಯಲಿದೆ. ಈ ಕವಡುವಟುವಿಗೆ ಯಾವ ದಾನದ ಆಶ್ವಾಸನವನ್ನೂ ಕೊಡಬೇಡ! ಕೊಡಬೇಡ!

ಬಲಿರಾಯ :— ಗುರುಗಳೇ, ನಿಮ್ಮ ಸಂದೇಹ ಸ್ವಭಾವಕ್ಕಾಗಿ ನಗೆ ಬರುತ್ತಿದೆ ನನಗೆ! ಈ ನಿರ್ಮಲಭಾವದ ಮಾಣವಕ ನನಗೆ ಯಾವ ಮೋಸವನ್ನು ಮಾಡಬಲ್ಲ? ನಿಮ್ಮ ಈ ಯುಕ್ತಿಯುಕ್ತವಲ್ಲದ ಎಚ್ಚರಿಕೆ, ಈತ ಬೇಡುವುದನ್ನು ಕೊಡಲೇಬೇಕೆಂಬ ನನ್ನ ತವಕವನ್ನು ಪರಿಪುಷ್ಟಿಗೊಳಿಸುತ್ತಲಿದೆ.

ಶುಕ್ರಾಚಾರ್ಯ :— ಕಾಲಕ್ಕೆ ತಕ್ಕಂತೆ ಮತಿಯು ತಲೆದೋರುವುದು! ದೈತ್ಯರಾಜಾ, ನಾನು ದೈತ್ಯ ಕುಲ ಪುರೋಹಿತ. ನನ್ನ ಮುನ್ನೆಚ್ಚರಿಕೆಯ ಮಾತನ್ನು ಕೇಳಲೇ ಬೇಕು!

ಬಲಿರಾಜ :— ಗುರುಗಳೇ, ನನ್ನ ಮಹಾಪೌರುಷವನ್ನು ಈ ವಾಮನಮೂರ್ತಿ ಮಾಡುವ ಮೋಸ ವಿನಾಶಗೊಳಿಸುತ್ತಿದ್ದರೆ, ಅಂತಹ ಪೌರುಷವನ್ನು ತೆಗೆದುಕೊಂಡು ಮಾಡುವುದಾದರೂ ಏನು? ಮಾಣವಕ! ನೀನು ಬೇಡುವ ದಾನಕ್ಕೆ ನನ್ನ ಒಪ್ಪಿಗೆಯಿದೆ!

ಶುಕ್ರಾಚಾರ್ಯ :— ರಾಜಾ, ಒಪ್ಪಿಕೊಳ್ಳಬೇಡ, ಮತ್ತೆ ಮತ್ತೆ ಹೇಳುತ್ತೇನೆ....ಒಪ್ಪಿಕೊಳ್ಳಬೇಡ, ಬೇಡ, ಬೇಡ!

ಬಲಿರಾಜ :— ಉಹುಂ, ಮಾತು ಕೊಟ್ಟಾಯಿತು; ಇನ್ನು ತಿರುಗಿಸಲು ಶಕ್ಯವೇ ಇಲ್ಲ!

ಶುಕ್ರಾಚಾರ್ಯ :—(ರೋಷಾವೇಶದಿಂದ) ಶಕ್ಯವೇ ಇಲ್ಲವೇ? ದೈತ್ಯರಾಜಾ, ಇದರ ಪರಿಣಾಮವೇನು? ....ಪ್ರಳಯ! ವಿನಾಶ! ಅನರ್ಥ!

ಬಲಿರಾಜ :— ಬಂದದ್ದು ಬರಲಿ! ಅದನ್ನೆದುರಿಸಲು ತಮ್ಮ ಶಿಷ್ಯ ಸಿದ್ಧನಿದ್ದಾನೆ.

ಬ್ರಹ್ಮಚಾರಿ :— ದೊರೆಯೆ, ನಾನು ಕೇಳಿದ ದಾನಕ್ಕೆ ನಿನ್ನ ಒಪ್ಪಿಗೆಯಿದ್ದರೆ, ವಿಧಿಪೂರ್ವಕ ಸಂಕಲ್ಪದೊಂದಿಗೆ ಕೊಟ್ಟುಬಿಡು! ನಾನು ಹೊರಡುತ್ತೇನೆ.

ಶುಕ್ರಾಚಾರ್ಯ :— ಅಯ್ಯೋ! ದೈತ್ಯರಾಜನಿಗೆ ಒದಗುವ ಅನರ್ಥವನ್ನು ಹೇಗೆ ತಪ್ಪಿಸಲಿ?

ಬಲಿರಾಜ :— ಪುರೋಹಿತರೇ, ಹುಂ, ದಾನಸಂಕಲ್ಪ ಮಾಡಿಸಿರಿ ನನ್ನಿಂದ! (ಪುರೋಹಿತರು ಸಂಕಲ್ಪ ಮಾಡಿಸುವರು. ಸಂಕಲ್ಪದೊಂದಿಗೆ ಅತಿಥಿಯ ಹಸ್ತದಲ್ಲಿ ನೀರುಬಿಡಲೆಂದು ಕಲಶವನ್ನು ಬೊಗ್ಗಿಸಿದರೆ ನೀರೇ ಬೀಳಲಿಲ್ಲ.)

ಪುರೋಹಿತರು :—ಇದೇನಿದು? ಕಲಶದಿಂದ ನೀರೇ ಹೊರಕ್ಕೆ ಬರಲೊಲ್ಲದು!

ಬ್ರಹ್ಮಚಾರಿ :— ಚಿಕ್ಕ ಬಾಯಿ; ಏನಾದರೂ ಸಿಕ್ಕಿಕೊಂಡಿದೆಯೇನೋ! ಪವಿತ್ರನ್ನು ಒಳಗೆ ಇಕ್ಕಿ ಒತ್ತಿ ನೋಡಿರಿ!

ಪುರೋಹಿತರು :— ಹಾಗೆಯೆ ಮಾಡುವೆನು. (ಕೆಲಹೊತ್ತು ತಡೆದು) ಅಯ್ಯೋ! ಇದೇನಿದು? ಕಲಶದಿಂದ ರಕ್ತಧಾರೆ!

ಬಲಿರಾಜ :— ಆಗಲಿ! ಈ ರಕ್ತಧಾರೆಯನ್ನೇ ನನ್ನ ಸಂಕಲ್ಪ ಜಲದ ಧಾರೆಯನ್ನಾಗಿ ಮಾಡಿಕೊಳ್ಳುವೆನು. ತೆಗೆದುಕೊಳ್ಳು ಅತಿಥಿರಾಜ, ಮೂರಡಿಭೂಮಿಯ ದಾನವನ್ನು! (ಒಮ್ಮೆಲೆ ಬಿರುಗಾಳಿಯ ಸಪ್ಪಳ ಗುಡುಗಿನ ಸಪ್ಪಳ.)

ಬ್ರಹ್ಮಚಾರಿ:—ಧನ್ಯ ಧನ್ಯ ಬಲಿರಾಜಾ! ನಿನ್ನ ಔದಾರ್ಯಕ್ಕೆ ಮೆಚ್ಚಿದೆ.... ಮೆಚ್ಚಿದೆ! ಕೊಡು ಹಾಗಾದರೆ ನನ್ನ ಅಡಿಗಳಿಂದ ಮೂರಡಿ ದಾನವನ್ನು!

ನಿವೇದಕ

ಪುಟ್ಟ ವಾಮನಮೂರ್ತಿ ಒಮ್ಮಿದೊಮ್ಮೆಲೆ ಬೆಳೆಯಲು ತೊಡಗಿತು. ಗಿಡದುದ್ದ, ಮರದುದ್ದ, ತಾಳೆಯುದ್ದ, ಯೋಜನದೆತ್ತರ, ನೂರುಯೋಜನದೆತ್ತರ, ಬಾನೆತ್ತರ! ವಾಮನನ ವಿರಾಟ್‌ರೂ[ಪ] ಕಿರೀಟರತ್ನದ ಕಾಂತಿ, ಮುಗಿಲಲ್ಲಿ ಪ್ರತಿಸೂರ್ಯನಂತೆ ಮಿಂಚ[ಲು] ತೊಡಗಿದೆ. ಭೂಲೋಕದವರಿಗೆ ಈ ವಿರಾಟ್‌ರೂಪದ ಕೈಯೆಲ್ಲೋ ಹೊಟ್ಟೆಯೆಲ್ಲೋ, ಮುಖವೆಲ್ಲೋ, ಒಂದೂ ತೋರಲೊಲ್ಲ[ದು] ಎಲ್ಲೆಲ್ಲಿಯೂ ಭೀತಿ-ವಿಸ್ಮಯಗಳ ಗಾಳಿಯೆ ಸುಳಿಯುತ್ತಲಿ[ದೆ] ಬಲಿರಾಯನ ಅಚ್ಚರಿಯ ಮುಖ ಮುಗಿಲತ್ತ ನಿಟ್ಟಿಸುತ್ತಲಿ[ದೆ] ಭವಿಷ್ಯದ ಪರಿಣಾಮಕ್ಕಾಗಿ, ಯಾಗಶಾಲೆಯಲ್ಲಿ ಸೇರಿದ ಸಮೂ[ಹ] ವೆಲ್ಲ ಕಾತರಗೊಂಡು ನಿಂತುಬಿಟ್ಟಿದೆ. ಗಟ್ಟಿಯಾಗಿ ಉಸಿರಾಟವಿ[ಲ್ಲ] ಕೈ-ಕೈಗಳ ಅಲುಗಾಟವಿಲ್ಲ. ದೈತ್ಯಗುರು ಶುಕ್ರಾಚಾರ್ಯ[ರು] ಕಣ್ಣಿಂದ ನೆತ್ತರಧಾರೆ ಸುರಿಸುತ್ತ ವಿಸ್ಮಯಮೌನದಿ[ಂದ] ನಿಂತಿದ್ದಾನೆ. ಆಕಾಶದತ್ತಣಿಂದ ವಾಣಿ ಹೊರಡಲು ತೊಡಗ[ಿತು]

ಆಕಾಶ :— ಧನ್ಯ ಧನ್ಯ ಬಲಿರಾಜಾ! ನಿನ್ನ ದಿವ್ಯವ್ಯಕ್ತಿ[ತ್ವ] ದೈವೀಶಕ್ತಿಯನ್ನೂ ತೊಡಕಿನಲ್ಲಿ ಕೆಡುಹಿತು. ನಾನಾರೆಂಬು[ದರ] ಅರಿವು ನಿನಗಾಗಿರಬಹುದು!

ಬಲಿರಾಜ:— ಅದಂತಾಗಿದೆ ದೇವಾ! ಇದು ವಂಚನೆಯಲ್ಲ[ವೆ] ದೇವಾ ನಿನ್ನದು?

ಆಕಾಶ:— ಅದಕ್ಕೇ ಹೇಳಿದೆ ದೈತ್ಯರಾಜಾ, 'ತೊಡಕಿ[ನಲ್ಲಿ] ಕೆಡುಹಿತು' ಎಂದು. ಇದುವರೆಗಿನ ನನ್ನ ಅವತಾರಕಾರ್ಯಗ[ಳು] ದುಷ್ಟವ್ಯಕ್ತಿಗಳ ಸಂಹಾರಕ್ಕಾಗಿ ಮಾತ್ರ ಆದುವು; ಆದರೆ ನನ್ನ ಅವತಾರ, ಒಂದೇ ಒಂದು ವ್ಯಕ್ತಿಯಲ್ಲಿಯ ದೌರ್ಜನ್ಯಲೇ[ಶ] ವನ್ನು ಖಂಡಿಸಿ, ಸೌಜನ್ಯಕ್ಕೆ ತಕ್ಕ ಸ್ಥಾನವನ್ನು ಕಲ್ಪಿಸಿಕೊಡು[ವುದ] ದಾಗಿದೆ.

ಬಲಿರಾಜ :— ನನ್ನಲ್ಲಿರುವ ದೌರ್ಜನ್ಯಲೇಶವಾವುದು ಕೇಳಬಹುದೇ ನಾನು?

ಆಕಾಶ :— ಅಹಂಕಾರವೇ ಆ ದೌರ್ಜನ್ಯಲೇಶ ಬಲಿರಾಯ ಪೌರುಷವು ಒಳ್ಳೆಯ ಆದರ್ಶವನ್ನಿರಿಸಿಕೊಂಡು ಲೋಕಕಲ್ಯಾ[ಣ] ಕ್ಕಾಗಿ ಶ್ರಮಿಸಿದರೂ, ಅದು ವ್ಯಕ್ತಿಯ ಅಹಂಕಾರವನ್ನು ನಷ್[ಟ] ಗೊಳಿಸಲಾರದು. ಪೌರುಷವಾದದ ಪ್ರಚಾರ, ವ್ಯಕ್ತಿವ್ಯಕ್ತಿ ಗಳಲ್ಲಿಯೂ ಅಹಂಕಾರವನ್ನು ಹೆಚ್ಚಿಸುವುದರಿಂದ, ಈ ಅಹಂಕಾ[ರ] ವೈವಿಧ್ಯಗಳು ಲೋಕದಲ್ಲಿ ವಿಷಮತೆಯನ್ನು ಹೆಚ್ಚಿಸುವುವು. ನಿ[ನ್ನ] ಪೌರುಷದ ಕರ್ಮ ಸತ್ಕರ್ಮವಾಗಿರಬಹುದಾದರೂ, ಪೌರುಷ ವಾದದ ನಿನ್ನ ಪ್ರಚಾರ, ಇಂದಲ್ಲದಿದ್ದರೂ ಮುಂದೆ ಲೋಕ[ಕ್ಕೆ] ಅಕಲ್ಯಾಣವನ್ನೇ ಉಂಟುಮಾಡುವಂತಹದಾಗಿದ್ದಿತು. ಆದುದ[ರಿ] ರಿಂದಲೇ ನಿನ್ನ ಸತ್ಕರ್ಮಗಳಿಗಾಗಿ ನಿನ್ನನ್ನು ಪುರಸ್ಕರಿಸಬೇಕ[ು] ನಿನ್ನ ದುಷ್ಕರ್ಮಕ್ಕಾಗಿ ನಿನಗೆ ದಂಡನೆಯಾಗಬೇಕು! ಈ ಎ[ರ] ಡನ್ನೂ ಮಾಡಬೇಕಾಗಿರುವುದರಿಂದ, ನನ್ನ ಇಂದಿನ ಈ ಅವತಾರ ಲೀಲೆ ನಿನಗೆ ವಂಚನೆಯಾಗಿ ಕಂಡಿದ್ದರೆ ಅದು ಆಶ್ಚರ್ಯವಲ್ಲ!

ಬಲಿರಾಜ :— ನನ್ನ ಸತ್ಕರ್ಮಗಳಿಗಾಗಿ ನನಗೆ ಸಿಕ್ಕು[ವ] ಫಲವು ಯಾವುದು?

ಆಕಾಶ:— ನೀನಿಂದು ಬಯಸುತ್ತಿರುವ ಅಮರೇಂದ್ರ ...ಂಹಾಸನ!

ಬಲಿರಾಜ:— ಅಮರೇಂದ್ರ ಸಿಂಹಾಸನ? ನನಗೆ ಸಿಕ್ಕುವುದೇ ...ದು?

ಆಕಾಶ:— ಹಾಂ! ಸಿಕ್ಕುವುದು. ಆದರೆ ಈ ಕಲ್ಪದಲ್ಲಲ್ಲ; ...ಮುಂದಿನ ಕಲ್ಪದಲ್ಲಿ! ಮುಂದಿನ ಕಲ್ಪದಲ್ಲಿ ದೇವೇಂದ್ರಪದವು ...ನಗಾಗಿಯೆ ಕಾದಿಟ್ಟದ್ದು!

ಬಲಿರಾಜ:— ಅದುವರೆಗೆ ನಾನು ಅದೆಷ್ಟು ಜನ್ಮಗಳನ್ನು ...ಳೆಯುವೆನೇನೋ!

ಆಕಾಶ:— ನಿನಗೆ ಜನ್ಮಾಂತರಗಳಿಲ್ಲ ಬಲಿರಾಜಾ! ನೀನು ...ರಜೀವಿ!

ಬಲಿರಾಜ:— ಅಂ! ನಾನು ಚಿರಜೀವಿಯೆ? ಹಾಗಾದರೆ 'ಜಾತಸ್ಯ ಮರಣಂ ಧ್ರುವಂ' ಎಂಬ ಧರ್ಮವನ್ನೊಪ್ಪಿದ ಈ ಭೂಲೋಕದಲ್ಲಿ, ಚಿರಜೀವಿತ್ವಕ್ಕೆ ಸ್ಥಾನವಿಲ್ಲವಲ್ಲವೆ?

ಆಕಾಶ:— ಆದುದರಿಂದಲೆ ನಾನು ನಿನ್ನನ್ನು ಸುತಲಲೋಕದ ನಿವಾಸಿಯನ್ನಾಗಿ ಮಾಡಬೇಕೆಂದಿದ್ದೇನೆ. ಹೇಗೂ ನಾನು ಒಂದು ...ಡಿಯಿಂದ ಭೂಮಿಯನ್ನು ಅಳೆದಿದ್ದೇನೆ; ಇನ್ನೊಂದು ಅಡಿ...ನ್ನೆತ್ತಿ ಆಕಾಶವನ್ನು ಅಳೆದಿದ್ದೇನೆ. ಈಗ ಮೂರನೆಯ ಅಡಿಗಾಗಿ ...ಲೋಕವನ್ನು ಅಳೆಯಬೇಕಾಗಿದೆ. ನಿನಗೆ ಇಷ್ಟವಿದ್ದರೆ, ನನ್ನ ...ಯೊಂದಿಗೆ ಸುತಲಲೋಕಕ್ಕೆ ನಡೆ, ದೈತ್ಯರಾಜಾ!

ಬಲಿರಾಜ:— ಜಯ ವಿಶ್ವವ್ಯಾಪಕ ದೇವಶಕ್ತಿ! ನನ್ನ ...ರುಷಕ್ಕಿಂದು ಅಂತರಂಗದ ದೃಷ್ಟಿಗಳಿತ್ತೆ! ನನಗಿನ್ನು ...ಲ್ಲಿದ್ದು ಮಾಡುವುದೇನು? ನಾನು ನಿನ್ನ ಕೈಯ ಗೊಂಬೆಯೆಂಬ ...ವು ನನಗೆ ಉಂಟಾಗಿದೆ. ನೀನು ಇರಿಸಿದಲ್ಲಿ ಇರುವುದೇ ನನಗೆ ...ರಮಧರ್ಮ!

ಶುಕ್ರಾಚಾರ್ಯ:— ಇದೇನು ಮಾತು ಬಲಿರಾಜ? ನನಗೆ ...ಯಾರಿನ್ನು? ನನ್ನ ನಾಸ್ತಿಕ ವೇದಾಂತವನ್ನು, ನಿನ್ನ ನಾಸ್ತಿಕ ...ತ್ರಬಲದ ನೆರವಿನಿಂದ ಪಸರಿಸಿ, ಲೋಕಕ್ಕೆ ಹೊಸಪಾಠ ಕಲಿಸ ...ಕೆಂದು ಹಂಬಲಿಸಿದ್ದೆ. ನೀನು ಹೋದೆ! ನನಗಿನ್ನೇನು ಗತಿ?

ಬಲಿರಾಜ:— ಎಲ್ಲರಿಗೂ ಗತಿಯಾದ ಆ ವಿಶ್ವಶಕ್ತಿಯನ್ನೇ ...ರಿ!

ಆಕಾಶ:— ಬಲಿರಾಜಾ! ಹಾಗಾದರೆ ಸಿದ್ಧನಾಗು! ಇದೋ, ...ವಿರಾಟ್‌ಸ್ವರೂಪದ ಅಡಿಯನ್ನು ನಿನ್ನ ಮುಡಿಯ ಮೇಲಿಡು...ನೆ; ತಡೆದುಕೊಳ್ಳು!

ಬಲಿರಾಜ:— (ದೂರ ದೂರಕ್ಕೆ ಕರಗಿಳಿಯುವ ಧ್ವನಿಯಲ್ಲಿ) ...ತಹ ಸುಖವಾದ ಸ್ಪರ್ಶವಿದು! ಹಂಸತೂಲಿಕೆ.... ಅರಳುಮಲ್ಲಿಗೆ.... ...ಣಿಯರ ಮೈಸೋಂಕು.... ಬೆಳದಿಂಗಳ ತಂಪು! ಓ! ಎಲ್ಲವನ್ನೂ ...ರಿನಿಂತ ಮಧುರಸ್ಪರ್ಶ! ಬಲೀ, ಧನ್ಯ ಧನ್ಯ! ನೀನಿಂದು ಧನ್ಯ! ಇಂದಿನ ಕಾರ್ತಿಕ ಶುಕ್ಲ ಪ್ರತಿಪದೆಯ ಶುಭತಿಥಿಯಲ್ಲಿ ನಿನಗೆ ನಿಜವಾದ ತಿಳಿವಿನ ಉದಯವಾಯಿತು! ಎಂತಲೆ ಇಂದು ಇದು ನಿನ್ನ ಜನ್ಮದಿನ! ಜಯಂತಿ!

(ವಿವಿಧವಾದ್ಯಗಳು ಮೊಳಗುವುವು)

(ಅನೇಕ ಧ್ವನಿಗಳಲ್ಲಿ ಜಯಜಯಕಾರ)

"ಜಯ ಬಲಿಚಕ್ರವರ್ತಿ! ಧನ್ಯ ಪಾವನ ಮೂರ್ತಿ"

ಬಲಿರ್ವಿಭೀಷಣೋ ಭೀಷ್ಮಃ
ಪ್ರಲ್ಹಾದೋ ನಾರದೋ ಧ್ರುವಃ
ಏತೇಷಾಂ ಸ್ಮರಣಾನ್ನಿತ್ಯಂ
ಮಹಾಪಾತಕನಾಶನಂ! *

ಶಾಂತಿಃ ಶಾಂತಿಃ ಶಾಂತಿಃ!

---

* ತಾ. ೧೩-೧೧-೧೯೩೯ರಂದು (ಬಲಿಪ್ರತಿಪದೆಯು) ಬೆಳಗಿನ ೭-೪೫ರಿಂದ ೮-೪೫ರ ವರೆಗೆ ಧಾರವಾಡದ ಬಾನುಲಿಕಟ್ಟೆಯಿಂದ ಬಿತ್ತರಗೊಂಡ ನಾಟಕವಿದು. **ಸಂ. ಜ.**

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜದ ವೈದ್ಯ ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮುಶ್ರಿ, ಪಂಜಾಬ ಗಿಶ್ರಿ, ವಚೆಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧ ಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೆಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯ ವೆಚ್ಚ ೩-೧೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಚಾಲಕ: **ವ್ಹಿ. ಎಸ್. ಕಾಪಸೇ** ಮು. ಪೋ. ಮಿರಜ

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಡಾ. ಮಿರ್ಜಿ ಅಣ್ಣಾರಾಯರು, ಉಗಾರ

★

(೬) ರಾಜಗೃಹ (ಪೂರ್ವಾರ್ಧ)

ಪ್ರಾಚೀನ ಭಾರತದಲ್ಲಿ ರಾಜಗೃಹವು ಪಡೆದ ಹಿರಿಮೆ, ಇಂದಿನ ನಮಗೆಲ್ಲ ಹೆಮ್ಮೆಯನ್ನು ಹುಟ್ಟಿಸುವಂತಹ ವಿಷಯ. ವೈದಿಕ, ಬೌದ್ಧ, ಜೈನ ಈ ಮೂರು ಮಹಾಧರ್ಮ ಸಂಸ್ಕೃತಿಗಳ ಬೆಳೆಗೂ ರಾಜಗೃಹವು ನೀರುಣ್ಣಿಸಿದೆ.

★

ಪಾವಾಪುರಿಯ ಪವಿತ್ರ ಪ್ರಭಾವ ಇನ್ನೂ ಮನಸ್ಸನ್ನು ಆವರಿಸಿದ್ದಿತು. ನಸುಗೆಂಪು ಶಿಲೆಯ ಭಗವಾನ್ ಮಹಾವೀರ ಸ್ವಾಮಿಯ ಕಾಯೋತ್ಸರ್ಗ ಮೂರ್ತಿಯು ಇದೇ ಕಣ್ಣೆದುರಿಗೆ ನಿಂತಿದ್ದಿತು. ಅಷ್ಟರಲ್ಲಿ 'ಬಿಹಾರ ಶರೀಫ್' ನಿಲ್ದಾಣದ ಬದಿಯಲ್ಲಿ ಬಸ್ಸಿನವರು ನಮ್ಮನ್ನು ತಂದು ಬಿಟ್ಟರು! ಬಸ್‌ಪ್ರಯಾಣ, ಬಿಸಿಲಿನ ತಾಪ, ಬಸ್ಸಿನೊಳಗಿನ ಜನರ ನೂಕು-ನುಗ್ಗಾಟಗಳಿಂದ ಒಂದು ಕ್ಷಣ ದಿಗ್ಭ್ರಮೆಯಾದಂತಾಯಿತು ನಮಗೆ. ಅದರಲ್ಲೂ ಎದುರಿನಿಂದ ಉಗಿಬಂಡಿಯೊಂದು ಬರುತ್ತಿದೆ. ಅದು 'ಪಕ್ತಿಯಾರ್‌ಪುರ-ಬಿಹಾರ ಲಾಯಿಟ್ ರೇಲ್ವೆ'ಯ ಚಿಕ್ಕ ಬಂಡಿಯು. ಮೂರು ಡಬ್ಬಿ, ಒಂದು ಎಂಜಿನುಗಳಿಂದ ಕೂಡಿದುದು. ಉತ್ತರ ಭಾರತದಲ್ಲೆಲ್ಲ ಉಗಿಬಂಡಿಗಳು ದೊಡ್ಡವೆಂದು ಕಲ್ಪಿಸಿಕೊಂಡ ನಮಗೆ ಅವನ್ನು ಕಂಡು ಒಮ್ಮೆಲೇ ದಿಗಿಲುಂಟಾಯಿತು. ಮೆಲ್ಲಗೆ ಬರುತ್ತಿರುವ ಉಗಿಬಂಡಿಯು ಯಾವ ಕಡೆಗೆ ಹೋಗುವುದೆಂಬುದರ ತಿಳಿವಳಿಕೆಯಿಲ್ಲದ ನಾವು, ಅವಸರದಲ್ಲಿ ಕೂಲಿಯವನಿಗೆ ಬೇಡಿದಷ್ಟು ಕೂಲಿಯನ್ನು ಕೊಟ್ಟು ನಿಲ್ದಾಣವನ್ನು ಸೇರಿದೆವು; 'ರಾಜಗಿರಿ ಕುಂಡ'ದ ಟಿಕೇಟನ್ನು ಕೇಳಿದೆವು.

'ರಾಜಗೃಹದ ಕಡೆಗೆ ಹೋಗುವ ಗಾಡಿಗೆ ಇನ್ನೂ ಮೂರು ತಾಸು ಅವಕಾಶವಿದೆ' ಎಂದು ತಿಳಿದಾಗ, ಸ್ವಲ್ಪ ಸರಿಯಾಗಿ ಉಸಿರಾಡಿಸುವಂತಾಯಿತು. ಆದರೊಡನೆಯೆ, ದಾರಿಯಲ್ಲಿ ಬಸ್ಸಿನವರು ಹೇಗೆ ಅವಸರಪಡಿಸಿ ನಮ್ಮಿಂದ ಹೆಚ್ಚಿಗೆ ಹಣವನ್ನು ಸುಲಿದರೆಂಬ ಅರಿವೂ ಉಂಟಾಯಿತು. 'ಉಪಾಯವಿಲ್ಲ, ಅಪರಿಚಿತ ಪ್ರದೇಶ' ಎಂಬ ಸಮಾಧಾನವನ್ನು ಮನಸ್ಸಿಗೆ ಹೇಳಿ, ನಿಲ್ದಾಣದ ಮೇಲೆ ಒಂದು ಬದಿಗೆ ನೆರಳನ್ನು ಆಶ್ರಯಿಸಿ, ತುಸು ಹಾಯಾಗಿ ಕುಳಿತು ಬಿಟ್ಟೆವು. ಆದರೂ ಮನಸ್ಸಿಗೆ ಸಮಾಧಾನವಿಲ್ಲ. ಇಲ್ಲಿಂದ ರಾಜಗೃಹಕ್ಕೆ ಹೋಗಿ, ಇಳಿದುಕೊಳ್ಳುವ ಸ್ಥಳವನ್ನು ಗೊತ್ತುಹಚ್ಚಿ, ಅಡಿಗೆಮಾಡಿ ಊಟ ಮಾಡಬೇಕಾದರೆ ಸೂರ್ಯಾಸ್ತದ ಸಮಯವೇ ಆಗುವುದು. ಮುಂಜಾನೆ ಏನನ್ನೂ ತಿನ್ನದೆ ಪಾವಾಪುರಿಯಿಂದ ಹೊರಟಿದ್ದೆವು—ಬೇರೆ. ಈಗಾಗಲೇ ಬಿಹಾರದ ಬಿಸಿಲು ಗಂಟಲ ಆರಿಸಿದ್ದಿತು. ಏನು ಮಾಡುವುದು? ಹಣ್ಣುಗಳನ್ನಾದರೂ ಕ ಕೊಂಡು ತಿನ್ನ ಬೇಕೆಂದರೆ, ಸುತ್ತಲಿನ ವಾತಾವರಣವೇ ಹ ಬರುವಂತಹದು. ಬಿಹಾರ ಶರೀಫದ ಜನರಲ್ಲಿ ಮುಸಲ್ಮಾ ಹೆಚ್ಚು. ಅವರೆಲ್ಲರೂ ಮಾಂಸಾಹಾರಿಗಳು. ತಮ್ಮ ಆಹಾ ಸಂಗಡ ಕಟ್ಟಿಕೊಂಡು ತಂದು ಅಲ್ಲಿಯೇ ಕುಳಿತು ತಿನ್ನುವ ಅನೇಕರು. ಎಲೆ ತಿಂದು ಉಗುಳಿ ಹೊಲಸು ಮಾಡುವ ಹೆಂಗ ಹಲವರು. ಹೀಗಾಗಿ ಅಲ್ಲಿ ಕೂಡಲಿಕ್ಕೇ ಮನಸ್ಸು ಸ್ಥಿರಗೊಳ್ಳ ಯಿತು. ಅಷ್ಟರಲ್ಲಿ 'ರಾಜಗಿರಿಗೆ ಬಸ್ಸು ಹೊರಟಿದೆ ನಡೆಯಿ ಎಂದು ಹೇಳಿ, ನಮ್ಮ ಸಾಮಾನುಗಳಿಗೇನೇ ಕೈಯಿಕ್ಕಿದ ಕೂಲಿ ಬಂದು. ಹಿಂದೆ ನಮ್ಮಿಂದ ಹೆಚ್ಚು ದುಡ್ಡು ಸುಲಿದ ಅವನಿಗೆ ಸಂತೋಷದ ಸಂಗತಿಯಾಗಿದ್ದಿತು. ಕೂಡಲೆ ಪ್ರಯಾಣ ಮು ಮರಿದದ್ದಕ್ಕಾಗಿ ನಮ್ಮ ಮುಖವೂ ಅರಳಿತು.

ಇನ್ನೇನು, ಹದಿಮೂರು ಮೈಲಿನ ಪ್ರವಾಸ! ಈಗ ಹ ಬಿಡುವೆವು!—ಎಂದು ಹಿಗ್ಗಿದ ಹೃದಯ, ಕುಗ್ಗಲಿಕ್ಕೆ ಬಹಳ ಹ ಹಿಡಿಯಲಿಲ್ಲ. ಮೋಟಾರು ಲೋಕಲ್‌ಬೋರ್ಡಿನವರ ಬ ಬೀದಿಗುಂಟ ನಡೆದಾಗಲೇ ಬೇಸರು ಉಂಟಾಗಿದ್ದಿತು. ಆದ ಎದುರಿಗೊಂದು ಎತ್ತಿನ ಬಂಡಿಯು ದಾರಿಯ ಮೇಲೆಯೇ ಕ ನಲ್ಲಿ ಸಿಕ್ಕು ನಿಂತಿದೆ. ಮುಗ್ಗಲಿಗೆ ಹಾಯಲಿಕ್ಕೆ ಬಸ್ಸಿಗೆ ಸ್ಥ ಹೀಗಾಗಿ ನಮ್ಮ ಪ್ರಯಾಣ ನಡುದಾರಿಯಲ್ಲಿಯೇ ನಿಂತಿತು. ಪ್ರಯಾಣಿಕರೆಲ್ಲ ಕೆಳಗಿಳಿದು ಬಂಡಿಯನ್ನು ಎತ್ತಿ ತೆಗೆಯಲು ನಾಗಬೇಕಾಯಿತು. ಆ ಯತ್ನದಲ್ಲಿ ದೊರೆತ ಸಂಸ್ಕೃತಿಯ ಮಾತ್ರ ಲಾಭದಾಯಕವಾಯಿತು. ಬಂಡಿಯನ್ನು ಎತ್ತು ಎಲ್ಲರೂ ಕೂಡಿ 'ಜಯ್ ಮಹಾವೀರ!' ಎಂದು ಕೂಗು ಜೈನೇತರ ಸಮಾಜದಲ್ಲಿಯೂ ಪಾರ್ಶ್ವ, ಮಹಾವೀರರೆಂದು ದ್ದುದೂ ತಿಳಿದು ಆಶ್ಚರ್ಯವಾಯಿತು. ಬಿಹಾರದ ಜನತೆ ಜೈನ ಸಂಸ್ಕೃತಿಯು ಹೇಗೆ ಮನೆಮಾಡಿಕೊಂಡಿದೆ—ಎಂಬ

ಕೊಂದು ದೃಷ್ಟಾಂತವಾಯಿತು.

ಎತ್ತಿನ ಬಂಡಿಯು ಬಸ್ಸಿಗೆ ದಾರಿಯನ್ನು ಮಾಡಿಕೊಟ್ಟರೂ ವು ಒಂದೆರಡು ಫರ್ಲಾಂಗುಗಳ ವರೆಗೆ ನಡೆಯುತ್ತಲೇ ಸಾಗ-ಬೇಕಾಯಿತು; ಮುಂದೆ ಸ್ವಲ್ಪ ಒಳ್ಳೆಯ ದಾರಿಯು ಸಿಕ್ಕೊಡನೆಯೇ ಬಸ್ಸಿನಲ್ಲಿ ಹತ್ತಿದೆವು. ಧೂಳನ್ನೆಬ್ಬಿಸುತ್ತ ಬಸ್ಸು ಬಿಸಿಲಲ್ಲಿ ಓಡ-ತ್ತಿತು. ಬಸ್ಸಿನೊಳಗಿದ್ದಷ್ಟೇ ಜನರು ಹೊರಗೂ ಜೋತು ಬಿದ್ದಿ-ದ್ದರು. ಅದರೊಳಗಿಂದಲೇ ನಾನು ಹೊರಗೆ ಕಣ್ಣಿಟ್ಟು ನೋಡುತ್ತ ಕುಳಿತಿದ್ದೆ. ಒಂದೆರಡು ಹಳ್ಳಿಗಳ ಓಣಿ ಓಣಿಗಳಲ್ಲೆಲ್ಲ ಸುತ್ತಿ ಹೊರ-ಟದ್ದು ಬಸ್ಸು ಮುಂದುವರಿಯುತ್ತಿದ್ದಿತು. ಆಗ ನನ್ನ ದೃಷ್ಟಿಗೆ ಬಿದ್ದ ಅಂಗಡಿಗಳಿಗೆ ತೂಗುಹಾಕಿದ ಹಲಗೆಗಳ ಮೇಲೆಲ್ಲ ಮದ್ಯ, ಅಫು, ಗಾಂಜಾಗಳ ಹೆಸರುಗಳೇ ಕಂಡುವು. ಮದ್ಯಪಾನವನ್ನು ನಿರೋಧಿ-ಸಿದ ಮುಂಬಯಿ ರಾಜ್ಯದ ಪ್ರಜೆಗಳು ನಾವೆಂದು ಒಂದು ಕ್ಷಣ ಹೆಮ್ಮೆಪಟ್ಟುಕೊಳ್ಳುವಂತಾಯಿತು ಈ ಬಿಹಾರದ ಬಿಸಿಲುಗಾಲದ ಹಾರಕ್ಕೆ ಬೇಸತ್ತು ಕಣ್ಣುಗಳು ಮುಚ್ಚಿದುವೋ ಏನೋ ಎನ್ನು-ವಂತೆ, ಸ್ವಲ್ಪ ಹೊತ್ತು ತೂಕಡಿಗೆ ಬಂದಿತು. ತೂಗುವ ನೋಟಾಂನ ದೊಡ್ಡ ಝುರುಕಿಯೊಂದರಿಂದ ಕಣ್ತೆರೆದು ನೋಡಿದಾಗ, ಎದುರಿಗೆ ಕಂಡುದೇನು ಗೊತ್ತೇ ?

'ನಾಲಂದ; ಸಮೀಪದಲ್ಲಿ ಪ್ರಾಚೀನ ಋಷಿಗಳ ತಪೋ-ಭೂಮಿಯೂ ಇದೆ.'

ನಾಲಂದ ನಿಲ್ದಾಣದ ಮಗ್ಗುಲಲ್ಲಿ ನಿಂತ ಈ ಕರಿಯ ಹಲಗೆಯ ಲೇಖವನ್ನು ಕಂಡು, ಅಂತಹ ಸ್ಥಿತಿಯಲ್ಲಿಯೂ ನನಗೆ ಬಹಳ ಆನಂದವಾಯಿತು. ಮುಂದೆ ರಾಜಗೃಹಕ್ಕೆ ಹೋಗದೆ ಇಲ್ಲಿಯೇ ಇಳಿದು ಬಿಡಬೇಕೆಂದು ಎನಿಸಿತು. ಪೂರ್ವಕಾಲದ ವಿಶ್ವವಿದ್ಯಾ-ಲಯದ ಅವಶೇಷಗಳನ್ನೆಲ್ಲ ಕಾಣಲು ಮನಸ್ಸು ತವಕಗೊಳ್ಳ-ತ್ತಿತು. ಆದರೆ ಆಗಲೆ ಅಲ್ಲಿ ಇಳಿಯಲು ಹಿರಿಯರು ಒಪ್ಪ-ಲಾರರು—ಎಂದು ನೆನೆದ ಮನವು, ಹತ್ತಿರ ಕುಳಿತವರಿಗೆ ಹೀಗೆ ಕೇಳಲು ಪ್ರಚೋದಿಸಿತು :

"ರಾಜಗೃಹ ಇನ್ನೂ ಎಷ್ಟು ದೂರ ? "

"ಬಹಳಲ್ಲ; ಇನ್ನೇನು ಐದಾರು ಮೈಲು ! "

"ಹೀಗೋ ! ಸಾಯಂಕಾಲ ಅಡ್ಡಾಡುತ್ತ ಬಂದರೂ, ಬರ-ಬಹುದು ! " ಎಂದು ಮನಸ್ಸಿಗೆ ಸಮಾಧಾನ ತಂದುಕೊಂಡೆ. ಬಸ್ಸು ರಾಜಗೃಹದ ದಾರಿಯನ್ನು ಹಿಡಿದು ಈಗಾಗಲೇ ಮುಂದೆ ಸಾಗಿದ್ದಿತು.

ರಾಜಗೃಹದಲ್ಲಿ ಹೋಗಿ ಇಳಿದರೂ ನನ್ನ ಮನಸ್ಸೆಲ್ಲ ನಾಲಂದ-ದಲ್ಲಿಯೇ ನೆಲಸಿದ್ದಿತು. ಅಂದೇ ಸಂಜೆಗೆ ನಾಲಂದವನ್ನು ನೋಡಲು ಹೋಗಬೇಕೆಂದ ನನಗೆ, ಮೂರು ದಿನಗಳು ಉರುಳಿದರೂ ಬರಲಿಕ್ಕೆ ಆಗಲಿಲ್ಲ. ರಾಜಗಿರಿಯೊಳಗಿನ ಐತಿಹಾಸಿಕ-ಅವಶೇಷಗಳೇ ಅಷ್ಟು ವಿಪುಲವಾಗಿದ್ದುವು, ಬಗೆಯನ್ನು ಕೆಣಕುವಂತಿದ್ದುವು.

ಜೈನ ಪುರಾಣಗಳ ಆರಂಭದಲ್ಲೆಲ್ಲ ಶ್ರೇಣಿಕನ ಹೆಸರು ಬರು-ವುದು. ಈ ಶ್ರೇಣಿಕ, ಭವಿಷ್ಯತ್‌ಕಾಲದ ತೀರ್ಥಂಕರರಲ್ಲೊಬ್ಬ-ನೆಂದೂ ಜೈನ ಪರಂಪರೆಯು ನಂಬುವುದು. ಇದಕ್ಕೆ ಅವನು ಭ. ಮಹಾವೀರನ ಪರಮ ಉಪಾಸಕನಾಗಿದ್ದುದೇ ಕಾರಣ. ಇಂಥ ಉಪಾಸಕನು ದೊರೆತುದರಿಂದಲೇ ಅಂತಿಮ ತೀರ್ಥಂಕರ-ನಾದ ಮಹಾವೀರನು, ರಾಜಗೃಹದಲ್ಲಿ ಹದಿನಾಲ್ಕು ಚಾತುರ್ಮಾಸ-ಗಳನ್ನು ಕಳೆದನು. ಈ ಶ್ರೇಣಿಕ — ಇತಿಹಾಸದಲ್ಲಿ ಇವನಿಗೆ ಬಿಂಬಿಸಾರನೆಂದು ಹೆಸರು—ಕ್ರಿ. ಪೂ. ೫೪೩ ರಿಂದ ೪೯೧ ರವರೆಗೆ ರಾಜಗೃಹವನ್ನು ಆಳಿದನು. ಆ ಕಾಲದ ಉತ್ತರ ಹಿಂದುಸ್ಥಾನ-ದೊಳಗಿನ ನಾಲ್ವರು ಪ್ರಸಿದ್ಧ ಅರಸರುಗಳಲ್ಲಿ ಇವನೊಬ್ಬನು. ಅವಂತಿ ದೇಶದ ಪ್ರದ್ಯೋತ, ಕೋಸಲ ನಾಡಿನ ಪ್ರಸೇನಜಿತ, ವತ್ಸದೇಶದ ಉದಯನ ಎಂಬವರು ಉಳಿದ ಮೂವರು. ಮಗಧ ಸೀಮೆಯಲ್ಲಿ ಶ್ರೇಣಿಕ ರಾಜ್ಯವಾಳುತ್ತಿದ್ದ. ಅವನ ರಾಜಧಾನಿ ರಾಜಗೃಹ. ಇದು ಹಿಂದೆ ಇಪ್ಪತ್ತನೆಯ ತೀರ್ಥಂಕರರಾದ ಮುನಿಸುವ್ರತರ ಜನ್ಮಭೂಮಿಯೂ ಆಗಿದೆ. ಈ ಎಲ್ಲ ಕಾರಣಗಳಿಂದ ಜೈನರಿಗಿದೊಂದು ಪವಿತ್ರ ತೀರ್ಥಸ್ಥಾನ-ವಾಗಿದೆ—ಎಂದಿಷ್ಟೆ ನಾನು ನಂಬಿದ್ದೆ, ತಿಳಿದಿದ್ದೆ. ಆದರೆ ಅಲ್ಲಿ

'ಬಗನ' ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತ-ವನ್ನು ಉಪ-ಯೋಗಿಸಿರಿ.

ದುರ್ಬಲ ಮಕ್ಕಳ ಯಕೃತು ಮತ್ತು ಹೊಟ್ಟೆ ... ಎಂದರೆ ...ವರೆಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೋನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City

ಹೋಗಿ ನೋಡಲು ಇನ್ನೂ ಎಷ್ಟೋ ಹೊಸ ಹೊಸ ಸಂಗತಿಗಳು ತಿಳಿದಾವು:

ಪಾಟಣಾ ಜಿಲ್ಲೆಯ ಆಗ್ನೇಯ ಮೂಲೆಯಲ್ಲಿರುವ ಈ ರಾಜಗೃಹವು ಜೈನರಿಗಷ್ಟೇ ಪವಿತ್ರ ಕ್ಷೇತ್ರವಲ್ಲ; ಹಿಂದು, ಮುಸಲ್ಮಾನ್, ಬೌದ್ಧ ಧರ್ಮದವರಿಗೆಲ್ಲರಿಗೂ ಪವಿತ್ರ ಸ್ಥಾನವಾಗಿದೆ. ಮೂರು ವರ್ಷಗಳಿಗೊಮ್ಮೆ ಅಧಿಕಮಾಸದಲ್ಲಿ ಇಲ್ಲಿ ಹಿಂದುಗಳ ದೊಡ್ಡ ಜಾತ್ರೆಯು ಕೂಡುವುದು. ಅದು ಒಂದು ತಿಂಗಳವರೆಗೂ ಇರುವುದು. ಆಗ ಭಾರತದ ಹಲವು ಭಾಗಗಳಿಂದ ಹಿಂದೂ ಯಾತ್ರಿಕರು ಇಲ್ಲಿಗೆ ಬರುವರು ಮುಸಲ್ಮಾನರ ದೊಡ್ಡ ತಪಸ್ವಿಯೂ ತತ್ತ್ವಜ್ಞಾನಿಯೂ ಆದ ಮಕ್ದೂಮ್ ಶರ್ಫುದ್ದೀನ್ ಎಂಬವನು, ಹನ್ನೆರಡು ವರ್ಷಗಳ ವರೆಗೆ ರಾಜಗಿರಿಗಳಲ್ಲಿಯೂ ಅದರ ನೆರೆಯ ವನಗಳಲ್ಲಿಯೂ ತಪಸ್ಸು ಮಾಡಿದನು. ಆ ಪುಣ್ಯಭೂಮಿಯ ದರ್ಶನಕ್ಕೆ ತ...ಲೂ ಬಿಹಾರದ ಮುಸಲ್ಮಾನರೆಲ್ಲರೂ ಇಲ್ಲಿಗೆ ಬರುವರು. ಇನ್ನು ಬುದ್ಧನಿಗೂ ಬೌದ್ಧಧರ್ಮಕ್ಕೂ ಇದು ಕೇಂದ್ರಸ್ಥಳವಾಗಿದ್ದಿತು. ಭಗವಾನ್ ಬುದ್ಧನಂತೂ ರಾಜಗೃಹದಲ್ಲಿ ಅನೇಕ ವರ್ಷಗಳನ್ನು ಕಳೆದ. ಈ ನಗರದ ವಿವಿಧ ತರಗತಿಯ ಜನರಲ್ಲಿ ಅವನು ಇರುತ್ತಿದ್ದ, ಉಪದೇಶಿಸುತ್ತಿದ್ದ. ಕೆಳಗಿನ ಅವನ ಪಾಲೀ ವಚನದ ಭಾವವನ್ನು ಕಂಡರೆ, ಅವನ ಜೀವನದ ಮೇಲೆ ರಾಜಗೃಹದೊಳಗಿನ ಸ್ಥಳಗಳು ಎಂತಹ ಸುಪರಿಣಾಮವನ್ನ ಮಾಡಿರಬೇಕೆಂಬುದರ ಕಲ್ಪನೆಯು ಬರುವುದು.

'ಆನಂದವಿತ್ತಿತು ರಾಜಗೃಹ; ಆನಂದವಿತ್ತಿತು ಗಿರಿ ಕೂಟ; ಆನಂದವಿತ್ತಿತು ಗೌತಮನ್ಯ ಗ್ರೋಧ; ಆನಂದವಿತ್ತಿತು ಚೌರಪ್ರಪಾತ; ಆನಂದವಿತ್ತಿತು ವೈಭಾರಿ ಪರ್ವತದ ಬದಿಯಲ್ಲಿನ ಸಪ್ತಪರ್ಣಿ ಗುಹೆಯು; ಆನಂದವಿತ್ತಿತು ಋಷಿಗಿರಿ ಕಾಲಶಿಲೆಯು; ಆನಂದವಿತ್ತಿತು ಸೀತಾ ವನದ ಸಪ್ಪ ಶೌಂಡಿಕಾ-ಪ್ರಗ್ಭಾರ್ಯನ; ಆನಂದವಿತ್ತಿತು ತಪೋದಾರಾವ ಆನಂದವಿತ್ತಿತು ವೇಣುವನದೊಳಗಿನ ಕಾಲಂದಕ ಸರೋವ ಆನಂದವಿತ್ತಿತು ಜೀವಕ ವನದ ಮಾವಿನ ಬೆಳೆಯು; ಆನಂದವಿತ್ತಿತು ಪ್ರಿಯಮರ್ಕಟ್ಟಿ ಹೂದೋಟ!'

ಹೀಗೆ ಬುದ್ಧನ ಸಾಧನೆಯ ರಂಗಸ್ಥಳಗಳಾದ ರಾಜಗಿರಿಯ ಸ್ಥಳಗಳೆಲ್ಲ ಪವಿತ್ರ ಕ್ಷೇತ್ರಗಳಲ್ಲದೆ ಇನ್ನೇನು?

ಬುದ್ಧ-ಮಹಾವೀರರ ಕಾಲಕ್ಕಿಂತಲೂ ಮೊದಲಿನಿಂದಲೇ ರಾಜಗೃಹವು ಅನೇಕ ಹೆಸರುಗಳಿಂದ ಪ್ರಸಿದ್ಧವಾಗಿದೆ. ಪುರಾಣದಲ್ಲಿ ಇದಕ್ಕೆ ವಸುಮತಿಪುರ, ಬೃಹದ್ರಥಪುರ, ಗಿರಿವ್ರಜ, ಕುಶಾಗ್ರಪುರ—ಮೊದಲಾದ ಹೆಸರುಗಳು ಇದ್ದುವು ವಸುಮತಿಪುರವೆಂಬ ಹೆಸರಿನಿಂದ ರಾಮಾಯಣದಲ್ಲಿ ಇದರ ಉಲ್ಲೇಖವಿದೆ. ಬ್ರಹ್ಮ ಮಗನಾದ ವಸುವು ಈ ನಗರವನ್ನು ಸ್ಥಾಪಿಸಿದುದರಿಂದ ವಸುಮತಿಪುರವೆಂದು ಹೆಸರಾಯಿತೆಂದು ಅಲ್ಲಿ ಹೇಳಲಾಗಿದೆ. ಮಹಾಭಾರತದ ಕಾಲದಲ್ಲಿ ಇದು ಬೃಹದ್ರಥಪುರವೆಂಬ ಹೆಸರಿನಿಂದ ಪ್ರಸಿದ್ಧವಾಯಿತು. ಬೃಹದ್‌ರಥನು ಇಲ್ಲಿ ರಾಜನಾಗಿದ್ದು ಅವಕ್ಕೆ ಕಾರಣವಾಗಿದೆ ಇನ್ನು ಪರ್ವತಗಳಿಂದ ಸುತ್ತುವರಿದ ನಗರವಾದುದರಿಂದ 'ಗಿರಿವ್ರಜ' ಎಂಬ ಹೆಸರು ಬಂತು. ಈ ಹೆಸರು ಅನೇಕ ಸಂಸ್ಕೃತ ಗ್ರಂಥಗಳಲ್ಲಿ ಸಿಕ್ಕುತ್ತದೆ. ಕೊನೆಯದಾದ 'ಕುಶಾಗ್ರಪುರ' ಎಂಬ ಹೆಸರು ಚೀನೀ ಪ್ರವಾಸಿಯಾದ ಹುವೇನತ್ಸಾಂಗನ ಪ್ರವಾಸವೃತ್ತದಲ್ಲಿಯೂ ಕೆಲವು ಜೈನ ಬೌದ್ಧ ಗ್ರಂಥಗಳಲ್ಲಿಯೂ ದೊರೆಯುತ್ತದೆ. ಹುವೇನತ್ಸಾಂಗನು ಊರ ಸುತ್ತಲೂ ಚೆನ್ನಾಗಿ ಹುಲ್ಲು ಬೆಳೆಯುವುದರಿಂದ ಇದಕ್ಕೆ ಈ ಹೆಸರು ಬಂದಿದೆ—ಎಂದು ಹೇಳುತ್ತಾನೆ. ಮತ್ತೆ ಕೆಲವು ಕಡೆ ಕುಶಾಗ್ರ ಎಂಬ ಹೆಸರಿನ ರಾಜನಾಳಿದುದರಿಂದ ಅವನ ಹೆಸರು ನಗರಕ್ಕೆ ಬಂದಿತೆಂದೂ ಹೇಳಲಾಗಿದೆ. ರಾಜಧಾನಿಯ ಸ್ಥಳವಾದುದರಿಂದ 'ರಾಜಗೃಹ' ಎಂಬ ನಾಮವು ರೂಢಿಯಲ್ಲಿ ಬಂದಿರಬೇಕು. ಮುಂದಿನ ಕಾಲದಲ್ಲಿ ಜೈನ ಗ್ರಂಥಗಳಲ್ಲಿ ಈ ಹೆಸರಿನ ಉಲ್ಲೇಖವೂ ಇದೆ.

ಮಹಾಭಾರತದ ಕಾಲಕ್ಕೆ ಈ 'ಗಿರಿವ್ರಜ' ನಗರದಲ್ಲಿ ಜರಾಸಂಧನು ರಾಜ್ಯವಾಳುತ್ತಿದ್ದನು. ಅವನನ್ನು ಕೊಲ್ಲಿಸುವುದಕ್ಕಾಗಿ ಶ್ರೀಕೃಷ್ಣ ಪರಮಾತ್ಮನು ಭೀಮ-ಅರ್ಜುನರನ್ನು ಕರೆದುಕೊಂಡು ಇಲ್ಲಿಗೆ ಬಂದಿದ್ದನು. ಭೀಮನಿಗೂ ಜರಾಸಂಧನಿಗೂ

ಪ್ಪತ್ತೆಂಟು ದಿನಗಳ ವರೆಗೆ ಯುದ್ಧವಾಗಿ ಅದರಲ್ಲಿ ಜರಾಸಂಧನು ಡಿದನು. ಆ ರಣಭೂಮಿಯನ್ನು ಈಗಲೂ ಇಲ್ಲಿ ನಾವು ಣಬಹುದು.

ಯಾವ ಗಿರಿಗಳಿಂದ ಸುತ್ತಲ್ಪಟ್ಟು ರಾಜಗೃಹವು ಗಿರಿವ್ರಜನೆಂಬ ಸರನ್ನು ಪಡೆಯಿತೋ, ಆ ಗಿರಿಗಳ ಹೆಸರುಗಳು ಕೂಡ ಪ್ರಾಚೀನ ಹಿತ್ಯದಲ್ಲಿ ಸಿಕ್ಕುತ್ತವೆ. ಮಹಾಭಾರತದಲ್ಲಿ ಒಂದೆಡೆಗೆ ವುಗಳನ್ನು **ವೈಭಾರ, ವರಾಹ, ವೃಷಭ, ಋಷಿಗಿರಿ, ಚೈತ್ಯಕ** ಬ ಹೆಸರುಗಳಿಂದ ಉಲ್ಲೇಖಿಸಿದರೆ, ಇನ್ನೊಂದು ಸ್ಥಳದಲ್ಲಿ ಾಂಡ್ರ, **ವಿಪುಲ, ವಾರಾಹಕ, ಚೈತ್ಯಕ,** ಮತ್ತು **ಮತಂಗ** ದು ಹೇಳಲಾಗಿದೆ. ಇವೇ ಗಿರಿಗಳು ಪಾಲಿ ಗ್ರಂಥಗಳಲ್ಲಿ ಭಾರ, **ಪಾಂಡವ, ವೈಪುಲ್ಯ, ಗಿರಿಧರಕೂಟ,** ಋಷಿಗಿರಿ ದು ಕರೆಯಲ್ಪಟ್ಟಿವೆ. ಈಗ ಸದ್ಯಕ್ಕೆ ಇವುಗಳನ್ನು **ವೈಭಾರ,** ಪುಲ, **ರತ್ನ, ಚೈತ್ಯ, ಉದಯ,** ಮತ್ತು **ಸೋನ** ಎಂದು ಕರೆಯಲಾಗುತ್ತಿದೆ. ಇವು ಜೈನರಿಂದ ಬಂದ ಹೆಸರುಗಳು. ಆದರೆ ವಿನ ಹೆಸರುಗಳು ಹಿಂದಿನ ಯಾವ ಹೆಸರುಗಳನ್ನು ಪ್ರತಿನಿಧಿ- ತ್ತವೆಯೆಂಬುದನ್ನು ಹೇಳುವುದು ಬಹು ಕಷ್ಟಕರವಾಗಿದೆ. ಈಗ ಭಾರ' ಎಂಬ ಹೆಸರಿನಿಂದ ಪ್ರಸಿದ್ಧವಿರುವ ಪರ್ವತಕ್ಕೆ ಪಾಲೀ ಥಗಳಲ್ಲಿ 'ವೈಭಾರ' ಎಂಬ ಹೆಸರೇ ಇತ್ತೆಂದು ಹೇಳಲಿಕ್ಕೆ ವುದಿಲ್ಲ. ಇಷ್ಟೇ ಅಲ್ಲ, ಪಾಲೀಗ್ರಂಥದಲ್ಲಿ ಉಲ್ಲೇಖಿಸಿದ ರಗಿರಿಗೆ ಹುವೇನ್ ತ್ಸಾಂಗನು 'ಪಿಪಿಲೊ' ಅಂದರೆ ಪುಲ' ಎಂದು ಕರೆಯುತ್ತಾನೆ.

ನಿದ್ದರೂ ಚೀನೀ ಯಾತ್ರಿಕರ ಪ್ರವಾಸವೃತ್ತಗಳಿಂದ ಈ ರದ ಸ್ಥಿತಿಗತಿಗಳನ್ನು ಅರಿತುಕೊಳ್ಳಲಿಕ್ಕೆ ತುಂಬ ನೆರವು ಸಿಗು- ು. **ಫಾಹಿಯಾನ್** ಎಂಬವನು ಕ್ರಿ. ಶ. ಐದನೆಯ ಶತಮಾನ ಈ ಪ್ರದೇಶವನ್ನು ಸಂದರ್ಶಿಸಿದನು. ಆಗ ಅವನು ಇಲ್ಲಿ ಕಂದರವನ್ನೂ ಗುಡ್ಡಗಳ ಹೊರಮಗ್ಗುಲಿಗೆ ಗುಂಪುಗುಂಪಾಗಿ ವ ಸಂನ್ಯಾಸಿಗಳ ತಂಡಗಳನ್ನೂ ಕಂಡನು. ಆದೇ, ಹುವೇನ್ ಂಗನು ಏಳನೆಯ ಶತಮಾನದಲ್ಲಿ ರಾಜಗೃಹವನ್ನು ಕಂಡಾಗ ು ನಿರ್ಜನ ಪ್ರದೇಶವಾಗಿತ್ತು. ಅವನು ಅಲ್ಲಿ ಸ್ತೂಪ ಹಾಗೂ ಟೆಯ ಗೋಡೆಗಳ ಅವಶೇಷಗಳನ್ನು ಮಾತ್ರ ಕಂಡನು. ಈ ್ಬರು ಪ್ರವಾಸಿಗಳ ಇನ್ನೂರು ವರ್ಷಗಳ ಅಂತರದಲ್ಲಿ, ರಾಜ- ಹವು ಹೇಗೆ ದಿನದಿನಕ್ಕೆ ಹಾಳುಬೀಳುತ್ತ ಹೋಯಿತೆಂಬುದನ್ನು ವು ಊಹಿಸಬಹುದು.

ಬುದ್ಧಘೋಷನು ಪಾಲೀ ಗ್ರಂಥಗಳಲ್ಲಿ ಉಲ್ಲೇಖಿಸಿದ ರಾಜ- ಹದ ವಿಷಯವನ್ನು ನೋಡಿದರೆ ಬಿಂಬಿಸಾರ, ಅಜಾತಶತ್ರುಗಳ ಲದಲ್ಲಿ ಈ ನಗರ ಎಷ್ಟೊಂದು ವಿಸ್ತಾರವನ್ನೂ ಘನತೆಯನ್ನೂ ಡಿತ್ತೆಂಬುದು ಗೊತ್ತಾಗುವುದು. ಅವನು ರಾಜಗೃಹ ನಗರಿಗೆ ಡು ಕೋಟೆಯ ಗೋಡೆಗಳದ್ದುವೆಂದು ಹೇಳುತ್ತಾನೆ. ಒಳ- ಟೆಯ ಒಳಗಿನ ಊರಿಗೆ ಅಂತರ್‌ನಗರವೆಂದೂ ಎರಡೂ ಕೋಟೆಗಳ ನಡುವಿನ ಒಳಕೋಟೆಯ ಹೊರಗಿನ ನಗರದ ವಿಭಾ- ಗಕ್ಕೆ ಬಹಿರ್‌ನಗರವೆಂದೂ ಕರೆಯಲಾಗಿದೆ. ಎರಡೂ ನಗರಗಳಲ್ಲಿ ಸೇರಿ ಹದಿನೆಂಟು ಕೋಟಿ (?) ಜನಸಂಖ್ಯೆ ಇತ್ತಂತೆ. ಅಲ್ಲದೆ ಈ ಪಟ್ಟಣಕ್ಕೆ ಮೂವತ್ತೆರಡು ದೊಡ್ಡ ಬಾಗಿಲುಗಳೂ ಅರುವತ್ತು- ನಾಲ್ಕು ಚಿಕ್ಕ ಬಾಗಿಲುಗಳೂ ಇದ್ದುವೆಂದು ತಿಳಿಯುತ್ತದೆ.

ಇನ್ನು ಬುದ್ಧಘೋಷ ಹಾಗೂ ಫಾಹಿಯಾನ್‌ರ ನಡುವಿನ ಕಾಲ- ದಲ್ಲಿ—ಸುಮಾರು ಸಾವಿರ ವರ್ಷಗಳಲ್ಲಿ—ರಾಜಗೃಹವು ರಾಜ- ಕೀಯ ಧಾರ್ಮಿಕ ಹಾಗೂ ಸಾಮಾಜಿಕ ಮಹತ್ತ್ವವನ್ನು ಹೇಗೆ ಕಳೆದುಕೊಳ್ಳುತ್ತ ಹೋಯಿತೆಂಬುದನ್ನು ನೋಡಬೇಕು. ಶ್ರೇಣಿಕನ (ಬಿಂಬಿಸಾರ) ಇಳಿವಯಸ್ಸಿನಲ್ಲಿಯೇ ರಾಜಗೃಹದಲ್ಲಿ ಧಾರ್ಮಿಕ ಏರಾಟಗಳಿಗೆ ಆರಂಭವಾಯಿತು. ಅವನ ಮಗನಾದ ಅಜಾತ- ಶತ್ರುವು ತಂದೆಯನ್ನು ಸೆರೆಮನೆಯಲ್ಲಿಟ್ಟು, ಸಾಯುವಂತೆ ಮಾಡಿದ. ತಾನು ಬುದ್ಧನ ಶಿಷ್ಯತ್ವವನ್ನೂ ಕೆಲವು ದಿನ ತ್ಯಜಿಸಿದ. ಇವನು ಪರ್ವತಗಳ ಹೊರಮಗ್ಗುಲಿಗೆ ಹೊಸ ರಾಜಗೃಹ ನಗರವನ್ನು ಸ್ಥಾಪಿಸಿದನೆಂದು ಫಾಹಿಯಾನ್‌ನು ಹೇಳುವನು. ಆದರೆ ಈ ನವೀನ ನಗರವನ್ನು ಕೂಡ ಬಿಂಬಿಸಾರನೇ ಕಟ್ಟಿಸಿದನೆಂದು ಹುವೇನ್ ತ್ಸಾಂಗನು ಬರೆಯುವನು. ಈ ವಿಷಯದಲ್ಲಿ ಪಾಲೀಗ್ರಂಥಗಳು ಮೌನವನ್ನು ತಾಳಿವೆ. ಅಜಾತಶತ್ರುವು ಮರಳಿ ಬೌದ್ಧಧರ್ಮವನ್ನು

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಸಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಸ್ವೀಕರಿಸಿದ ಮೇಲೆ ಮಾತ್ರ, ಹಳೆಯ ರಾಜಗೃಹದಲ್ಲಿ ಸಪ್ತಪರ್ಣಿ ಗುಹೆಯ ಎದುರಿಗೆ ಬುದ್ಧಭಿಕ್ಷುಗಳ ಪ್ರವಚನಕ್ಕೂ ಬೌದ್ಧಗ್ರಂಥಗಳನ್ನು ಸಂಗ್ರಹಿಸಿಡಲಿಕ್ಕೂ ಉಪಯೋಗಿಸಲೆಂದು ದೊಡ್ಡ ಕಟ್ಟಡವೊಂದನ್ನು ಕಟ್ಟಿಸಿದನು. ಆದರೆ ಇವನ ಉತ್ತರಾಧಿಕಾರಿಯಾದ ಉದಯನನು (ಕ್ರಿ. ಶ. ಪೂ. ೪೯೫–೪೪೩) ರಾಜಧಾನಿಯನ್ನು ರಾಜಗೃಹದಿಂದ ಪಾಟಲೀಪುತ್ರಕ್ಕೆ ಒಯ್ದನು. ಅಂದಿನಿಂದ ಈ ನಗರವು ರಾಜಕೀಯ ಮಹತ್ತ್ವವನ್ನು ಕಳೆದುಕೊಂಡಿತು. ಕೆಲವು ಪುರಾಣಗಳು ಮುಂದೆ ಶಿಶುನಾಗನ ಕಾಲದಲ್ಲಿ (ಕ್ರಿ. ಶ. ಪೂ. ೪೧೧–೩೯೩) ತಿರುಗಿ ರಾಜಗೃಹವು ರಾಜಧಾನಿಯಾಗಿ ಉನ್ನತಿಯನ್ನು ಪಡೆಯಿತೆಂದು ಹೇಳುತ್ತವೆ; ಆದರೆ ಅಶೋಕನು ರಾಜಗೃಹವನ್ನು ಆಕ್ರಮಿಸಿದ ಕಾಲದಲ್ಲಿ ಮಾತ್ರ ಸ್ತೂಪಗಳು ಸುಸ್ಥಿತಿಯಲ್ಲಿರಲಿಲ್ಲವೆಂದು ತಿಳಿಯುತ್ತದೆ

ಈಗಿರುವ 'ರಾಜಗಿರಿ' ಎಂಬ ಹಳ್ಳಿಯು ಹೊಸ ರಾಜಗೃಹ ನಗರಿಯ ಒಂದು ಭಾಗದಲ್ಲಿ ನೆಲಸಿದೆ. ಈ ರಾಜಗೃಹದ ಸುತ್ತಳತೆಯು ಸುಮಾರು ಮೂರು ಮೈಲಿನಷ್ಟಿದೆ. ಇದಕ್ಕೆ ೧೫ ರಿಂದ ೧೮ ಫೂಟು ದಪ್ಪವೂ ಸುಮಾರು ೧೧ ಫೂಟು ಎತ್ತರವೂ ಆದ ಮಣ್ಣಿನ ಗೋಡೆಯು ಸುತ್ತಲೂ ಇದೆ. ಈ ಆವಾರದಲ್ಲಿ ಪುರಾಣವಸ್ತು ಸಂಶೋಧನ ಖಾತೆಯವರು ಹಲವು ಕಡೆಗೆ ನೆಲವನ್ನು ಅಗೆದು ಶೋಧಿಸಿದ್ದಾರೆ. ಅನೇಕ ಕಡೆಗೆ ಮಣ್ಣಿನ ಇಟ್ಟಿಗೆಗಳಿಂದ ಕಟ್ಟಿದ ಬಾವಿಗಳೂ ಹಗೆಗಳೂ ದೊರೆತಿವೆ. ಎರಕ ಹೊಯ್ದ ತಾಮ್ರದ ನಾಣ್ಯಗಳೂ— ಒಂದು ಮಗ್ಗಲಿಗೆ ನಿಂತ ಆನೆ, ಇನ್ನೊಂದು ಮಗ್ಗಲಿಗೆ ವೃಕ್ಷ ಇರುವ— ಸಿಕ್ಕಿವೆ ಅಂಬೆಗಾಲಿಕ್ಕುವ ಹಿತ್ತಾಳೆಯ ಕೃಷ್ಣನ ಮೂರ್ತಿ, ಬೆಳ್ಳಿಯ ಬಳೆ, ಬ್ರಾಹ್ಮೀಲಿಪಿಯಲ್ಲಿ ಬರೆದ ಪ್ಲೇಟು, ಬುದ್ಧ-ಜಿನರ ಮೂರ್ತಿಗಳೂ ಲಭಿಸಿವೆ. ಇವೆಲ್ಲವುಗಳನ್ನೂ ನಾಲಂದದಲ್ಲಿರುವ ಪ್ರದರ್ಶನಾಲಯದಲ್ಲಿ ನೋಡಬಹುದು.

ಹೊಸ ರಾಜಗೃಹದ ಸುತ್ತಲಿನ ಗೋಡೆಯಲ್ಲಿ ಅಲ್ಲಲ್ಲಿ ದಾರಿಗಳನ್ನು ಮಾಡಿ, ಜನರು ಈಗ ಹೊರಗೆ ಹೋಗಲಿಕ್ಕೆ ಅವಕಾಶ ಕಲ್ಪಿಸಿಕೊಂಡಿದ್ದಾರೆ: ಇಂತಹ ದಾರಿಗಳಿಗೆಲ್ಲ ಊರ ಅಗಸೆಗಳೆಂದು ಹೇಳಲಾಗದು. ಆದರೂ ಹೊಸ ರಾಜಗೃಹದಿಂದ ಹಳೆಯ ರಾಜಗೃಹದ ಕಡೆಗೆ ಹೋಗುವ ದಾರಿಗೆ ಮಾತ್ರ ಕಲ್ಲಿನಿಂದ ಕಟ್ಟಿದ ಭವ್ಯವಾದ ಅಗಸೆಯಿದೆ. ಇಲ್ಲಿ ಹನ್ನೊಂದು ಫೂಟು ಅಗಲವಾದ ಕಲ್ಲಿನ ಗೋಡೆಗಳಿವೆ. ಅಲ್ಲದೆ ಅಗಸೆಯ ಪಶ್ಚಿಮ ಭಾಗಕ್ಕೆ ಸ್ವಲ್ಪ ದೂರದಲ್ಲಿ ಗೋಡೆಗೆ ಹೊಂದಿ ದೊಡ್ಡ ಕಟ್ಟೆಯೊಂದನ್ನು ಕಾಣುತ್ತೇವೆ. ಇದು ಗೋಡೆಗಳ ಸಂರಕ್ಷಣೆಗಾಗಿ ಹಾಕಿದ ಕಟ್ಟೆಯಂತೆ. ಈ ಪದ್ಧತಿಯು ಮೌರ್ಯಕಾಲದಲ್ಲಿ ಬಳಕೆಯಲ್ಲಿತ್ತು.

ನವೀನ ರಾಜಗೃಹದ ಪಶ್ಚಿಮಕ್ಕೆ ಸರಸ್ವತೀನದಿಯ ತೀರದಲ್ಲಿ ಸ್ತೂಪದ ಒಂದು ಭಾಗವಿದೆ. ಅದರ ಪೂರ್ವತುದಿಯು ೩೧ ಫೂಟು ಎತ್ತರವಾಗಿದೆ. ಇದು ಅಜಾತಶತ್ರುವಿನದೆಂದು ಫಾಹಿಯಾನ್ ... ಅಶೋಕನದೆಂದು ಹುವೇನ್‌ತ್ಸಾಂಗನೂ ಭಾವಿಸುತ್ತಾರೆ. ಸ್ತೂಪದ ... ರೆಯಲ್ಲಿಯೇ ಹುವೇನ್‌ತ್ಸಾಂಗನು ೫೦ ಫೂ... ಎತ್ತರವೂ ಆನೆಗಳಿಂದ ಸುತ್ತಲ್ಪಟ್ಟಿದೂ ಆದ ಒಂದು ಕಂ... ವಿತ್ತೆಂದು ಹೇಳುತ್ತಾನೆ. ಆದರೆ ಆ ಕಂಬದ ಅವಶೇಷ ... ಈಗ ಇಲ್ಲಿ ಇಲ್ಲ. ಸ್ತೂಪದ ಪಶ್ಚಿಮಬದಿಯನ್ನು ಪುರಾಣವ... ಸಂಶೋಧನಖಾತೆಯು ಕ್ರಿ. ಶ. ೧೯೦೫–೬ ರಲ್ಲಿ ಪರೀಕ್ಷಿಸಿ, ... ಮೌರ್ಯಪದ್ಧತಿಯದೆಂದು ನಿರ್ಣಯಿಸಿದೆ. ಇದೇ ಭಾಗ... ಅಗೆದಾಗ 'ಈ ಧರ್ಮ' ಎಂದು ಬರೆದ ಪ್ಲೇಟುಗಳೂ ಸಿ... ಸ್ತೂಪದ ಸಮೀಪದಲ್ಲಿ ಗಚ್ಚಿನ ಕುಣಿಗಳೂ ನೆಲದಲ್ಲಿ ದೊರೆ...

ಈ ಸ್ತೂಪವಿರುವ ಸ್ಥಳದ ದಕ್ಷಿಣಕ್ಕೆ ಸುಮಾರು ನ... ಯಾರ್ಡಿನ ಮೇಲೆ— ನದಿಗೆ ಸ್ನಾನಘಟ್ಟವಿದೆ. ಅದರ ಪೂರ್ವಕ್ಕೆ ಸ್ಮಶಾನವಿದೆ. ಇಲ್ಲಿ ಈಗಲೂ ಕೂಡ ಅನೇಕ ಹಿಂದುಗಳು ... ಗಳನ್ನು ಸುಡುವರು. ಈ ಸ್ಮಶಾನವು ಸೀತಾವನದ ಪಶ್ಚಿಮ... ಎಂದು ಚೀನೀಯಾತ್ರಿಕರು ಉಲ್ಲೇಖಿಸಿದ್ದಾರೆ. ಅದಕ್ಕೆ ಆ... 'ಸ್ಮಶಾನ ಘಟ್ಟ' ಎಂದೂ ಕರೆದಿದ್ದಾರೆ. ಇನ್ನು ಹುವೇ... ತ್ಸಾಂಗನು, ಸೀತಾವನದ ಒಂದು ಭಾಗದಲ್ಲಿಯೇ ಹೊಸ ರಾಜಗೃ... ವನ್ನು ಕಟ್ಟಲಾಗಿದೆ ಎಂದು ಹೇಳಿದ್ದಾನೆ. ಆದರೆ ಪಾಲೀಗ್ರಂ... ಗಳು ಸೀತಾವನದ ಸ್ಥಳವನ್ನು ಪರ್ವತದ ಇಳಿಜಾರಿನ ... ಎಂದು ನಿದರ್ಶಿಸುತ್ತವೆ.

ನಾವು ಮರಳಿ ಗಿರಿವ್ರಜದ ಕಡೆಗೆ ಸಾಗುವ ದಾರಿಗೆ ಬರಬೇ... ಆ ದಾರಿಯಿಂದ ದಕ್ಷಿಣಕ್ಕೆ ಸಾಗಿದರೆ, ನಮಗೆ ಮೊದಲು ಸಿಗುವ... ಕಾರಂದ ಕೆರೆಯು. ಇದನ್ನು ಸಂಸ್ಕೃತ ಪ್ರಾಕೃತ ಗ್ರಂಥಗ... 'ಕಾಲಂದನಿವಾಸ ಅಥವಾ ಕಾರಂದಕನಿವಾಸ' ಎಂದು ಕರೆ... ಲಾಗಿದೆ. ಈ ಕೆರೆಯನ್ನು ಚೀನೀಪ್ರವಾಸಿಗಳೂ ಉಲ್ಲೇಖಿಸಿದ್ದಾ... ಇದು ಯಾವಾಗಲೂ ನೀರಿನಿಂದ ತುಂಬಿತುಳುಕುತ್ತಿದೆ, ಮನ... ಹರವಾಗಿದೆ. ಇದರ ದಕ್ಷಿಣಭಾಗಕ್ಕೇನೇ ವೇಣುವನ ಹಬ್ಬಿ... ಇದರಲ್ಲಿ ಅನೇಕ ಸ್ತೂಪಗಳ ಗುರುತುಗಳೂ ವಿಹಾರ... ಭಗ್ನಾವಶೇಷಗಳೂ ಇವೆ. ಇವುಗಳ ಹತ್ತಿರವೇ ಸರಸ್ವತೀ ಪ್ರವ... ಹರಿಯುತ್ತಿದೆ. ಇದಕ್ಕೆ ಪ್ರಾಚೀನಕಾಲದಲ್ಲಿ 'ತಪೋದಾ' ಎಂ... ಹೆಸರಿತ್ತು. ಈ ಪ್ರವಾಹದ ಆಚೆಗಿರುವ ವೇಣುವನದ ಭಾಗಕ್ಕೆ 'ತಪೋಧರ್ಮ' ಎಂದು ಪಾಲೀಗ್ರಂಥಗಳಲ್ಲಿ ಹೇಳಲಾ... ತಪೋದಾ ಪ್ರವಾಹವು ವಿಪುಲ ಮತ್ತು ವೈಭಾರಗಿರಿಗಳ ಪದದ... ರುವ ಅನೇಕ ಉಷ್ಣಸೆಲೆಗಳಿಂದ ಉಂಟಾಗಿದೆ. ಅವುಗ... ಎಲ್ಲಕ್ಕೂ ದೊಡ್ಡದು ಶತಧಾರಾ ಬುಗ್ಗೆಯು. ಆದರೂ ಮಕ್ತು... ಕುಂಡ, ಸೂರಜಕುಂಡಗಳ ಹೆಸರನ್ನೂ ಇಲ್ಲಿ ಉಲ್ಲೇಖಿಸಬೇ... ಇವುಗಳ ನೀರು ಆರೋಗ್ಯಕರವೂ ರುಚಿಕರವೂ ಆಗಿವೆ. ಇ... ಜಲಕುಂಡಗಳಿಂದಲೇ ಈ ಸ್ಥಳಕ್ಕೆ 'ರಾಜಗಿರಿಕುಂಡ' ಎ... ಹೆಸರುಬಂದುದು.

ಪ್ರೇಮ

(ದುಮದುಮ)

ಶ್ರೀ. ಹಾನೋಳಕರ ಶ್ರೀಧರರಾಯರು, ಪುಣೆ

ಕರ್ನಾಟ ದೇಶದ ಮಲೆನಾಡ ಒಡಲಲಿ
ಸೊಗಸಾದ ವನವೊಂದು ಸೊಗಯಿಸುವುದು—ಶಾಂತಿ
ದೇವಿಯ ಲೀಲೆಯ ನೆಲೆಯಹುದು—ಎಲ್ಲಾ
ಬೆಡಗಿನ ಸಡಗರ ಕಡಲಿಹುದು !
ಮುಗಿಲನ್ನು ಮುದ್ದಿಟ್ಟು ಲಾಲಿಯ ಹೊಡೆಯುತ
ನಲಿ-ನಲಿದಾಡುತ ಬೆಳೆದಂಥ ತೋಟ ! ॥ ೧ ॥

ಸಾಲಾಗಿ ಕಡಿದಾಗಿ ಕಂಡಲ್ಲಿ ಬೆಳೆದಂಥ
ಮಾಕಂದ ವೃಕ್ಷಗಳೋಳಿಗಳು—ಜಾಲಿ
ಹೆಬ್ಬಾಳೆ ಕೂಡಿತ್ತು ಮಮತೆಯೊಳು—ಬಳ್ಳಿ
ಮುಚ್ಚಿರ್ದ ವೃಕ್ಷದ ರೆಂಬೆಗಳು
ಬಾಳೆಯ ಗೊನೆಗಳ ಭಾರದಿ ವನವೆಲ್ಲ
ತುಂಬಿತ್ತು ಗಮಗಮ ಮಲ್ಲಿಗೆಯೊನಪು. ॥ ೨ ॥

ತೆಂಗಿನ ಗರಿಗಳ ಛತ್ರದ ಅಡಿಯೊಳು
ಅಡಿಕೆಯ ಗೊಂಚಲ ಸಾಲುಗಳು—ನೆಲ
ಬಿಡದೆಯ ಬೆಳೆದಂಥ ಏಲಗಳು—ತಮ್ಮ
ಪರಿಮಳ ಸುರಿವಂಥ ಸುರಿಗೆಗಳು !
ಚೌರಿಯ ಬೀಸುವ ಸಿರಸಾಲ, ಕಣ್ಣಿಗೆ
ಸೊಗಸಾದ ಸವಿಯಾದ ನೇರಳೆತೋಪು ॥ ೩ ॥

ನಡುವೆಯು ಮೆಲ್ಲನಿಯಿಂದಲೆ ನುಡಿಯುತ್ತ
ಹರಿಯುವ ತಿಳಿದೊರೆ ಮುದುವಾಗುತ—ಝುಲ್ಲು
ಝುಲ್ಲೆಂದು ಕಂಡಲ್ಲಿ ಹೊನಲಿಡುತ— ಮತ್ತೆ
ಹೆಬ್ಬಾವಿನೊಲು ಒಮ್ಮೆ ಸಮನಾಗುತ....
ಹೊಳೆಯೊಂದು ಹರಿದಿತ್ತು ಸೌಂದರ್ಯರಸದಂತೆ
ನಲಿಯುತ್ತ ವನದೇವಿಯಂತೆ ಶೋಭಿಸುತ ! ॥೪॥

ರಾತ್ರಿಯ ಸಮಯದಿ ಕಿರ್ರೆಂಬ ಸಪ್ಪಳು,
ಕೆಲವೆಡೆಯೊಳು ಸಿಂಹಗರ್ಜನೆಯು— ಅಲ್ಲಿ
ಮೊಳಗುತಲಿದ್ದಿತು ಪಡಿದನಿಯು—ಆನೆ
ನೀರನ್ನು ಮೊಗೆಯುವ ಮೆಲುಸರವು....
ಕೋಗಿಲೆ-ಗಿಳಿಗಳ ಬಗ್ಗಣೆ, ತುಂಬಿಯ
ಝೇಂಕಾರ ತುಂಬಿತ್ತು ಎಡೆಯನು ಬಿಡದೆ. ॥೫॥

ಪಾರಿಜಾತಕವೊಂದು ನಿಂತಿತ್ತು ಚೆಲುವಿಂದ
ಒಂದೆಡೆಯೊಳು ಒಂದು ಕಾಲದಲಿ—ಹತ್ತು
ಸಾವಿರ ಹಕ್ಕಿಗಳುದರದಲಿ—ಗೂಡು
ಕಟ್ಟಿರ್ದುವಲ್ಲಲ್ಲಿ ಪ್ರೀತಿಯಲಿ....
ಪಾರಿಜಾತಕ ಪುಷ್ಪಗಿಡದಡಿಯಲಿ ಬಿದ್ದು
ಹಾಸಿಗೆ ಹಾಸಿತ್ತು ಎಂತದರ ಸೊಬಗು ? ॥ ೬ ॥

ಮಧುಮಾಸ ಮೆರೆದಾಡಿ ಮಾಯವಾದೊಡನೆಯೆ
ಬಂದಿತು ಮಳೆಗಾಲ, ಮುಗಿಲಿನಲಿ—ಮೋಡ
ಮುಚ್ಚಿತು ಹೊಸ ಕಾರ ಬೆಡಗಿನಲಿ—ಕಾಳ-
ಗತ್ತಲೆ ಕವಿಯಿತು ಕಾಡಿನಲಿ....
ಪದುಳದಿ ಪಾರಿಜಾತಕ ತನ್ನ ನಗೆಗೊಂಡೂ
ಭೀತಿಯಿಲ್ಲದೆ ನಿಂತು ನಲಿಯುತಲಿತ್ತು ॥ ೭ ॥

ವಿಷಮಳೆಯೆಂಬುದ ವಿಧಿದೇವ ಬರೆದಿಹ
ಪಾರಿಜಾತಕ ವೃಕ್ಷ ಹಣೆಯೊಳಗೆ—ಮೇಲೆ
ಕೋಲ್ಮಿಂಚು ಹೊಳೆಯಿತು ನಭದೊಳಗೆ—ನಾರಿ
ಸುಳಿವಂತೆ ಪ್ರೇಮದ ಭರದೊಳಗೆ....
ಕಮನೀಯ ಕಾಂತಿಯ ಕುವರಿಯ ನೋಡಿದ
ವೃಕ್ಷರಾಜನು ಲಕ್ಷ್ಮಯನವ ಹಚ್ಚಿ ! ॥ ೮ ॥

ಪ್ರೇಮದ ಹೂಬಾಣ ನೆಟ್ಟಿತು ಎದೆಯೊಳು
ವೃಕ್ಷದ ಕಡಿದಾದ ಹೃದಯದೊಳು—ಕಿಡಿ
ಬಿದ್ದಂತೆ ಆಯಿತು ಅರಳೆಯೊಳು—ಹೊತ್ತಿ
ಹೋಯಿತು ಮನವೆಲ್ಲ ನಿಮಿಷದೊಳು....
ಪ್ರೀತಿಯ ಮರುಳಿಗೆ ಕೊನೆಯಿಲ್ಲ ನೆಲೆಯಿಲ್ಲ;
ಸಮಯದ ಅರಿವಿಲ್ಲ, ಸಮಬುದ್ಧಿಯಿಲ್ಲ ! ॥ ೯ ॥

ಗಗನದಿ ಹೊಳೆದಿರ್ದ ಚಂಚಲ ತರುಣಿಯ
ನೆನೆಯುತ್ತ ಹಗಲೆಲ್ಲಾ ಮನದೊಳಗೆ—ವೃಕ್ಷ
ವನಗಳು ದಿನದಿನ ಒಳಗೊಳಗೆ—ಬಾಡಿ
ಬೂರಲವಾಯಿತು ಬನದೊಳಗೆ....
ಎಲೆಯಿಲ್ಲ, ಹೂವಿಲ್ಲ, ನಲವಿನ ನಗೆಯಿಲ್ಲ,
ಎಂತಹ ರೋಗವೋ ಪ್ರೀತಿಯ ಹಸಿವು ! ॥ ೧೦ ॥

ಗಗನದ ಮಿಂಚನ್ನೆ ಬಯಸುವ ವೃಕ್ಷದ
ಹಟವೆಂದು ಹರಿವುದೊ—ಇದೆ ಅರಿದು !—ಯಾರ
ಸ್ಪರ್ಶವು ಮರಣವೆ ಆಗಿಹುದು—ಯಾವ
ಬಯಕೆಗೆ ಮರಣವೆ ಕೊನೆಯಹುದು ...
ಮಿಂಚಿನಪ್ಪುಗೆಗೂಡಿ ಕೆಲೆದಾಟವಾಡಲು
ನಿಮಿಷದಿ ವೃಕ್ಷದ ಬಾಳ್ವೆಯೆ ಬೂದಿ! ॥ ೧೧ ॥

ಮಳೆ-ಮೋಡ ಸುರಿದಿತ್ತು, ಕಾಡೆಲ್ಲ ನಲಿದಿತ್ತು,
ಪಾರಿಜಾತಕವೊಂದೇ ದುಗುಡದಲಿ—ನಿಂದು
ಕಣ್ಣೀರು ಸುರಿದಿತ್ತು ಚಿಂತೆಯಲಿ—ಬಾಲೆ
ಬರುವಳೋ ಎನ್ನುವ ಮನಸಿನಲಿ....
ಹೊಳೆ-ಹಳ್ಳ ಹರಿದರು. ಗಿಡಬಳ್ಳಿ ನನೆದರು,
ವನವೆಲ್ಲವಾದರು ಸೀರಿನ ಕೋಡಿ.... ॥ ೧೨ ॥

ರಪರಪ ಮಳೆಯಲ್ಲಿ ತಪತಪ ತೊಯ್ಯುತ್ತ
ಪಾರಿಜಾತಕ ಜಪ ಮಾಡುತಲಿ—ನಿಂತು
ಮಿಂಚಿನ ಬಾಲೆಯ ಕನಸಿನಲಿ—ಕಂಡು
ಬೇಡುತಿದ್ದಿತು ನಕ್ಕು ಬಿದಗುತಲಿ....
ಪಕ್ಕವ ಕೊಡು ದೇವ ಗಗನಕ್ಕೆ ಹಾರಿ ನಾ
ಹಿಡಿಯುವೆ ಪ್ರೀತಿಯ ಸೀರೆಯನೆಂದು. ॥ ೧೩ ॥

ಮಳೆಗಾಲದೊಳು ಮಿಂಚು ಸಿಡಿಯುತಲಿರುವಾಗ
ವೃಕ್ಷವು ಒಲೆದಾಡಿ ನಗುತಿದ್ದಿತು—ಒಂದು
ಎಲೆಯನ್ನು ಬಿಡುತಿತ್ತು ಮಲೆಮಲೆತು—ಒಂದು
ಹೂವನ್ನು ಮುಡಿಸೆಂದು ಕೊಡುತಿದ್ದಿತು....
ಹತ್ತುಸಾವಿರ ವರ್ಷ ತಪದಿಂದ ಕಾಯ್ದಿತ್ತು
ಬಡವರ ಕಡೆಗಾರೂ ನೋಡುವರಿಲ್ಲ. ॥ ೧೪ ॥

ಸರಸತಿಯೊಡಗೊಂಡು ಹೊರಟಿದ್ದ ಬೊಮ್ಮನು
ಬಾನೊಳು ಹಂಸದ ಯಾನದಲಿ—ತನ್ನ
ಸೃಷ್ಟಿಯ ಸೊಬಗನ್ನು ನೋಡುತಲಿ—ಬಂದ
ಕರ್ನಾಟ ದೇಶವ ತೋರುತ್ತಲಿ ...
" ಮರ್ತ್ಯದೊಳಗೆ ನಾನು ನೆಲಸಿರ್ದ ನಂದನ-
ವಿಲ್ಲದೆ ನೋಡೆಲೆಯರಳಿದೆ ರಮಣೀ! ॥ ೧೫ ॥

ಸರಸತಿಯೆಂದಳು ಮೂಗಮುರಿಯುತಾಗ
' ನೋಡಿದೆ ನಿಮ್ಮಯ ನಂದನವ—ಚೆಲ್ವ
ಸಂಪಿಗೆ ಬಕುಲ ಮಲ್ಲಿಗೆ ಕುಲವ – ಒಂದು
ಸಂತಾನವಿಲ್ಲಲ್ಲ ಸುಖಗೊಡುವ....
ನಿಂತಿದೆ ನೋಡಿರಿ ಪಾರಿಜಾತಕ ವೃಕ್ಷ
ನಮ್ಮಯ ಸಂಸಾರದೊಳು ಬರಡು ಮೋಟು! ॥ ೧೬ ॥

ಕಮಲಾಸನ ಅಷ್ಟನಯನದ ಸಾಲನ್ನು
ತಿರೆಯುತ್ತ ಕುರಿಯುತ್ತ ಕಮಲದೊಳು—ರಾಣಿ
ಪಾರಿಜಾತಕ ವೃಕ್ಷ ಪ್ರೇಮದೊಳು—ನೊಂದು
ನಿಂತಿಹುದಹ ಘೋರತಪಸಿಯೊಲು....
ಮಿಂಚಿನ ಮಾನಿನಿ ಮನದನ್ನೆಯಾಗುವ
ಭರದ ಹುಚ್ಚಿನ ಹಟ ಹಿಡಿದಿದೆಯದಕೆ! ॥ ೧೭

ತಾನೆಲ್ಲಿ ಅವಳೆಲ್ಲಿ ಸಾಧ್ಯವಾಗುವುದೆಂತು ?
ಗಗನದ ಸುಂದರಿ ಸೌದಾಮಿನಿ—ಇವ
ಮರ್ತ್ಯದಿ ಹೊರಳುವ ಕೀಳು ಕ್ರಿಮಿ—ಇವ
ಗಾಂಪತನದ ಹುಟ್ಟುಕುರುಡ ಕವಿ!....
ಮರ್ತ್ಯ ಮಾನವ ತಾನು ದೇವನಾಗುವನೆಂತು ?
ತಿಳಿಯೆನು ಮನುಜರ ಮತಿಗೇಡಿತನವ! ॥ ೧೮

ಸರಸತಿಯೆಂದಳು : 'ಪ್ರೀತಿಯ ನೋಂಪಿಯ
ಗೈಯುತ್ತ ಎಷ್ಟೊಂದು ಬಳಲಿದನೋ—ನಾನು
ನೋಡಲೊಲ್ಲೆನು ದೇವ ದುಗುಡವನು—ದಯ-
ಪಾಲಿಸು ತಪಸಿಗೆ ಸುಫಲವನು....
ಬೂದಿಯಾದರು ತಾಮ ಬಿಡಲೊಲ್ಲ ಬಿಂಕವ
ಇದುನೋಡು ಮಾರನ ಹಿರಿಮಂಗನಾಟ !' ॥ ೧೯

ಇಂತೆಂದು ನುಡಿಯುವ ಸುದತಿಯ ಸಂತಯ್ಸಿ
ಯಾನವ ಪರಮೇಷ್ಠಿ ಕೆಳಗಿಳಿಸಿ—ಸಾಗಿ
ಬಂದನು ವೃಕ್ಷಕೆ ಕರವಳಿಸಿ—ಒಂದೇ
ನುಡಿಯಿಂದ ಕೇಳಿದ ಕಡೆಗಣಿಸಿ....
" ವೃಕ್ಷವೆ ಏಳಿನ್ನು ಕೇಳಿನ್ನ ವಚನವ
ಬೇಗನೀಯುವೆ ನೀನು ಬೇಡಿದ್ದನೆಂದಾ ॥ ೨೦

ವೃಕ್ಷವೆಂದಿತು "ಸ್ವಾಮಿ, ಹತ್ತುಸಾವಿರ ವರ್ಷ
ನಿಂತಿಹೆ ಪ್ರೇಮಕ್ಕೆ ಎರವಾಗಿಯೆ—ನಿಮ್ಮ
ದಯೆಯಿಂದ ಪ್ರಾಣವ ಹಿಡಿದಿರುವೆ—ಎನ್ನ
ಮನದನ್ನೆಯನು ಕೊಡು ಕೊಂಡಾಡುವೆ....
ಕಾರೊಳು ಮುಗಿಲಲ್ಲಿ ಮಿಂಚುತ್ತ ಮೆರೆಯುವ
ಎನ್ನ ಭಾಗ್ಯದ ದಿವ್ಯರಮಣಿಯ ಬೇಡುವೆ" ॥ ೨೧

"ಮತಿಹೀನ ತನದಿಂದ ಮಾತಾಡದಿರು ವೃಕ್ಷ-
ರಾಜನೆ ಬಿಡು ಮೋಹವೆಂತಹದು—ನಿನ್ನ
ಹರಣಕ್ಕೆ ಮರಣವೆ ವರವಿಹುದು—ನಿನ್ನ
ಮುಟ್ಟಿದ ಚಣ ಬೂದಿಗೈಯುವುದು....
ಮಿಂಚಿನ ನಿಗಿನಿಗಿ ಸೋಂಕಿಗೆ ನೀನಪ್ಪೆ
ಚಣದೊಳು ಉರಿಯುವ ಕೆಂಡದ ರಾಶಿ !" ॥ ೨೨

"ಮರಣವೆಂತಹದೆಂದು ನನಗಿನ್ನು ಅರಿವಿಲ್ಲ,
ನಿತ್ಯವೂ ಮರಣವನನುಭವಿಪೆ—ಪ್ರೇಮ
ವಿಲ್ಲದ ಜೀವನ ಸಾವೆನುವೆ—ಪ್ರೇಮ
ವಿದ್ದರೆ ಸಾವದೆ ಸೊಗಸೆನುವೆ....
ರಮಣಿಯು ಸಿಗದಂತೆ ನೀ ಮಾಡಿದರೆ ದೇವ
ದೇಹವ ಸವಿಸುತ್ತ ಹುಡಿಯಾಗಿ ಹೋಗುವೆ!" ||೨೩||

ಸರಸತಿಯೆಂದಳು "ವೃಕ್ಷರಾಜನೆ ಮಿಂಚು
ದೂರಿಂದೇ ಚೆಲುವಾಗಿ ತೋರುವಳು— ಚಪ-
ಲಾಕ್ಷಿಯು ದೂರಿಂದೆ ಚೆಲುವಿಹಳು— ಬಳಿ
ಬಂದರೆ ಕೆಂಡವ ಕಾರುವಳು....
ಮುಟ್ಟಿ ನೋಡುವ ಹಠ ಹಿಡಿದಲ್ಲ ವೃಕ್ಷವೆ,
ಮುಟ್ಟಿದೊಡನೆ ನೀನು ಬೂದಿ-ಭಂಡಾರ!" ||೨೪||

ನಾನೆಂತು ಆಗುವೆ ಬೂದಿ? ಮುಟ್ಟಿದ ಚಣ
ದಿವ್ಯ ರೂಪವ-ನಾನು ಪಡೆಯುವೆನು— ದೇವ
ಅಮರನಾಗುವೆನೆಂದು ಸಾರುವೆನು—ನನ್ನ
ದೇಹವ ಚಿನ್ನವ ಮಾಡುವೆನು....
ಪ್ರೇಮವೆಂದರೆ ದೇಹವಿರುವಾಶೆಯಲ್ಲಲ್ಲ!
ಪ್ರೇಮವೆಂದರೆ ಪುಣ್ಯ ಪರಮಾತ್ಮರೂಪ!" ||೨೫||

ಹೌದೆಂದು ಪರಮೇಷ್ಠಿ ಹಿಂದಕ್ಕೆ ಸರಿಯುತ್ತ
"ಚಣದೊಳು ವರಸೃಷ್ಟಿಯಾಗುವುದು"—ಎಂದು
ನಯನವ ಮುಚ್ಚಿದ ಬಗೆಬಗೆದು— ತನ್ನ
ವದನದಿಂದೋಂಕಾರವನೆ ನುಡಿದು....
ಕೈಮಾಡಿ ಕರೆದನು; ಪಾರಿಜಾತಕ ಪ್ರೇಮ-
ರಮಣಿಯೆ ನೀನಾಗಿ ಬಂದು ಕೂಡೆಂದ! ||೨೬||

ತುಂಬಿದ ಮೇಘದ ಗಿರಿಯಿಂದ ಸೆಳೆದಳು
ತನ್ನ ದೇಹವನರೆನಿಮಿಷದೊಳು— ಕಳ-
ಕಳಿಸುತ್ತ ಕಾಂಚನರೇಖೆಯೊಲು— ಕಾಂತಿ
ಕಾಮಿನಿ ಇಳಿದಳು ಭುವನದೊಳು....
ಮುನಿಗಳ ವ್ರತಗಳ ಪುಣ್ಯವೆ ಇಳಿಯಿತೊ
ಹೊಳೆಯಾಗಿ ಹರಿಯಿತೊ ಬೆಳಕಾಗ ಇಳೆಯೊಳು ||೨೭||

ಮಿಂಚು ಕೂಡಿದ ಕ್ಷಣ ಜ್ವಾಲೆಯಾಯಿತು ವೃಕ್ಷ-
ರಾಜನ ತನು ಸುಟ್ಟು ನಿಮಿಷದೊಳು— ರತ್ನ
ದೀಪದ ಬಹು ಪುಣ್ಯಕಾಂತಿಯೊಲು— ಎಲೆ
ಪಟಪಟ ಬಡಿದುವು ತನುವಿನೊಳು....
ಪಾರಿಜಾತದ ಹೂವ ರಾಶಿಯು ಧರಣಿಗೆ
ಸುರಿಯಿತು— ನಸುನಕ್ಕ ವೃಕ್ಷದ ನಗೆಯೋ! ||೨೮||

ಬ್ರಹ್ಮನು ತಂಪಾದ ಕಮಲವ ಬೀಸಿದ
ಕೈಲಾಸದಿಂ ಶಂಭು ಹಿಮದ ಗಿರಿ— ಎತ್ತಿ
ಒಗೆದನು; ಹಾಲನು ಸುರಿದ ಹರಿ— ತನ್ನ
ಶಂಖದಿ ತುಂಬಿದ ಅಮೃತಸರಿ....
ಸೌದಾಮಿನಿಯು ಸ್ಪರ್ಶದಿಂದಾದ ಬೂದಿಯು
ಪಾರಿಜಾತಕವೃಕ್ಷವಾಗಿತ್ತು ಮರಳಿ! ||೨೯||

ಹಿಮದಂತೆ ತಂಪಾದ ಹೊಳೆಯೊಂದು ಹರಿಯಿತು
ಕಮಲದ ಪರಿಮಳ ಜಲದೊಳಗೆ— ತುಂಬಿ
ಕೂಡಿತು ಅಮೃತವು ತೊರೆಯೊಳಗೆ— ಬ್ರಹ್ಮ
ಶಂಕರ-ಹರಿಮೂರ್ತಿ ತೆರೆಯೊಳಗೆ....
ಸುಮನದ ಸೇಸೆಯು ಗಿರಿಯನ್ನೇ ನಂದನ-
ವನದಿಂದ ಸುರಿಸಿತು ಕಲ್ಪವೃಕ್ಷವು ನಿಂದು. ||೩೦||

"ಗೆರೆಸಪ್ಪೆ ಗೆರೆಸಪ್ಪೆ" ಎಂಬರು ದಡದಡ
ಹರಿವಂಥ ನೀರಿನ ತಡಸಲವು— ಬಲು
ಚೋದ್ಯವ ನೋಡಿತು ಈ ಧರೆಯು—ಪ್ರೇಮ
ಪರಮಾತ್ಮದೇವರ ಹಿರಿಕುರುಹು....
ಶ್ರೀಧರ ಮನದಲ್ಲಿ ಕರ್ನಾಟ ಸೌಭಾಗ್ಯ
ತುಂಬಿದ ತೆರವಾಗಿ ಹರಿವಂಥ ಸೊಬಗು! ||೩೧||

——o——

ಭಾರವಿಯ ಅರ್ಥಗೌರವ

(ಕವಿಕಾವ್ಯಪರಿಚಯ)

★

ಡಾ. ವೆಂಕಟಕೃಷ್ಣರಾವ್ ಎಂ. ಎ. ಕ್ರಿಶ್ಚಿಯನ್ ಕಾಲೇಜ್, ಮದರಾಸು.

ಸಂಸ್ಕೃತ ಕವಿಕುಲದಲ್ಲಿಯು ಭಾರವಿಯನ್ನೇ ಮೆಚ್ಚುವ ರಸಿಕರು ಹಲವು ಜನರು. ಇದಕ್ಕೆ ಕಾರಣವೆಂದರೆ ಅವನ ಪಾಂಡಿತ್ಯಪ್ರಪೂರ್ಣವಾದ ಗಂಭೀರ ಶೈಲಿ; ಸಜೀವ ಪಾತ್ರರಚನೆ. ಉಪಮೆಯಲ್ಲಿ ಕಾಲಿದಾಸನ ಹೆಸರಿರುವಂತೆ ಅರ್ಥಗೌರವದಲ್ಲಿ ಭಾರವಿಯ ಹೆಸರಿದೆ.

★

ಗೀರ್ವಾಣ ಸಾಹಿತ್ಯದಲ್ಲಿ **ಭಾರವಿಯೆಂಬ** ಮಹಾಕವಿಯು, ಪಂಚಮಹಾಕಾವ್ಯಗಳಲ್ಲಿ ಒಂದೆಂದು ಪ್ರಸಿದ್ಧವಾದ '**ಕಿರಾತಾರ್ಜುನೀಯ**' ಎಂಬ ಹದಿನೆಂಟು ಸರ್ಗಗಳನ್ನೊಳಕೊಂಡ—ಮಹಾಭಾರತ ಪ್ರಸಿದ್ಧವಾದ ರುದ್ರಾರ್ಜುನರ ಯುದ್ಧವನ್ನು ವರ್ಣಿಸಿ ಬರೆದಿರುವನು. ಇದು ಗಟ್ಟಿಯಾದ ತೆಂಗಿನಕಾಯಿಯನ್ನು ಒಡೆದನಂತರವೇ ಸಿಕ್ಕುವ ಸಿಹಿಯಾದ ನೀರು-ತಿರುಳುಗಳಂತೆ, ನಾರಿಕೇಳ ಪಾಕವೆಂದು ಪಂಡಿತರಿಗೆ ಮಾತ್ರ ರುಚಿಸುವುದಾಗಿದ್ದರೂ, ಬಹಳ ಕ್ಲಿಷ್ಟವಾದ್ದರಿಂದ ಸಾಧಾರಣ ಜನರಿಗೆ ಅರ್ಥವಾಗುವಂತಿಲ್ಲ. ಇವರ ವೈಶಿಷ್ಟ್ಯವೇನೆಂಬುದನ್ನು ಇವರ ಉತ್ತಮ ಭಾಗಗಳಾದ ೧, ೧೧, ೧೮ನೆಯ ಸರ್ಗಗಳ ಆಧಾರದಿಂದ ಸ್ವಲ್ಪಮಟ್ಟಿಗೆ ವಿಮರ್ಶಿಸಲಾಗಿದೆ.

'ಭೃಶರಯಸಾ ಇವ **ಸಹ್ಯ** ಮಹೀಭೃತಃ ಪೃಥುನಿರೋಧಸಿ, ಸಿಂಧುಮಹೀಭೃತಃ' ಎಂದು ಹದಿನೆಂಟನೆಯ ಸರ್ಗದಲ್ಲಿ ಕಿರಾತನ ಎದೆಯನ್ನು ಈ ಕವಿಯು ವರ್ಣಿಸಿರುವುದರಿಂದ, ಇವನು ಸಹ್ಯಾದ್ರಿಯೆಂದು ಪ್ರಸಿದ್ಧವಾದ ಪಶ್ಚಿಮಘಟ್ಟಗಳ ಹತ್ತಿರ, ಎಲ್ಲಿ ಅರಬೀ ಸಮುದ್ರದ ಅಲೆಗಳು ಆ ಘಟ್ಟಗಳನ್ನು ರೋಧಿಸುವುವೋ ಅಲ್ಲಿ, ಎಂದರೆ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳೆಂದು ಈಗ ಪ್ರಸಿದ್ಧಗಳಾಗಿರುವ ದೇಶದಲ್ಲಿಯೇ ವಾಸಿಸಿರಬಹುದೋ ಎಂಬ ಊಹೆಗೆ ಅವಕಾಶವಿದೆ. ದಂಡಿಯು **ಅವಂತಿಸುಂದರೀ ಕಥಾಸಾರವೆಂಬ** ಗ್ರಂಥವನ್ನು Journal of Oriental Research ನಲ್ಲಿ ಈಗ ತಾನೇ ಕ್ರಮಶಃ ಮುದ್ರಿಸುತ್ತಿರುವರು. ಆದನ್ನು ಪರಿಶೀಲಿಸುವಾಗಲೂ ಈತನು ದಾಕ್ಷಿಣಾತ್ಯನಾಗಿದ್ದನೆಂಬ ಶಂಕೆಗೆ ಬೆಂಬಲ ದೊರಕುವುದು. ಈ ದಂಡಿಯು ಭಾರವಿಯ ಮರಿಮಗ; ಎಂದರೆ ಮೊಮ್ಮಗನ ಮಗನೆಂದು ತೋರುವುದು. ಇವನ ಪೂರ್ವಜರು ಕೌಶಿಕಗೋತ್ರದವರಾಗಿದ್ದು, ಗುಜರಾಥ (ಆಗಿನ ಆನಂದಪುರ) ದಿಂದ ನಾಸಿಕ್ಯದಲ್ಲಿ **ಅಚಲಪುರ** (**Ellichipura in central Provinces**) ಕ್ಕೆ ಹೋಗಲು, ಅಲ್ಲಿ ಭಾರವಿಯು ಹುಟ್ಟಿದ್ದನಂತೆ. ಈ ಭಾರವಿಯ ವಿಷ್ಣುವರ್ಧನನೆಂಬ ರಾಜಪುತ್ರನೊಡನೆ ಸ್ನೇಹವನ್ನು ಬೆಳ ಆತನೊಡನೆ ಬೇಟೆಯಾಡಲಿಕ್ಕೆ ಹೋದಾಗ ಮಾಂಸಭಕ್ಷ ಮಾಡಿಯೇ ಬದುಕಬೇಕಾಯಿತೆಂದು ಈ ಐತಿಹ್ಯವು ಹೇಳುತ್ತ ಪಶ್ಚಿಮಗಂಗವಂಶಕ್ಕೆ ಸೇರಿದ **ದುರ್ವಿನೀತನೆಂಬ** ರಾಜನು, ಇವ ಮಿತ್ರನಾಗಿ ಇವನ ಕಾವ್ಯಕ್ಕೆ ಟೀಕೆಯೊಂದನ್ನು ಬರೆದನಂ ಕಾಂಚಿಯ ಸಿಂಹವಿಷ್ಣುವೆಂಬ ಪ್ರಸಿದ್ಧ ಪಲ್ಲವ ವಿಜೇತೃರಾಜ ಮಿತ್ರನಾಗಿದ್ದು ಅವನ ಮಗ ಮಹೇಂದ್ರವಿಕ್ರಮನ (ಮತ್ತವಿಲಾ ಪ್ರಹಸನದ ಕರ್ತೃ) ಗುರುವಾಗಿದ್ದಿರಬಹುದೆಂದೂ ಐತಿಹಾಸಿಕ ಊಹಿಸುತ್ತಾರೆ. ರವಿವರ್ಮನ Aihole (ಐಹೊಳೆ 634 A. D. ಶಾಸನದಲ್ಲಿ ಕಾಲಿದಾಸ-ಭಾರವಿಯರಿಬ್ಬರನ್ನೂ ಸೇರಿಸಿ ಉಲ್ಲೇಖಿಸಿರುವುದರಿಂದ (ಕವಿತಾಶ್ರಿತ ಕಾಲಿದಾಸಭಾರವಿಕೀರ್ತಿಃ) ಕಾಲಿದಾಸನಿಗೆ ಸರಿಸಾಟಿಯಾಗಿರುವ ಕವಿಯೆಂದು ಆಗಲೇ ಪ್ರಖ್ಯಾ ನಾಗಿ—ಪ್ರಾಯಶಃ ಅದರಿಂದ ಒಂದೆರಡು ಶತಮಾನ ಮುಂಚೆ ಜೀವಂತನಾಗಿದ್ದಿರಬಹುದೆಂದು ಊಹಿಸಬಹುದಾಗಿದೆ.

ಹೀಗೆ ದಾಕ್ಷಿಣಾತ್ಯ ಐತಿಹ್ಯದ ಪ್ರಕಾರ ಇವನು ಸದಾ ರಾಜಾಶ್ರಯದಲ್ಲಿಯೇ ಇದ್ದು ಆಗರ್ಭ ಶ್ರೀಮಂತನಾಗಿದ್ದಿರಬಹುದೆಂ ದ್ದರೂ, ಔತ್ತರೇಯ ಕಥೆಯೊಂದನ್ನು ಪರಾಂಬರಿಸುವಾಗ, ಇವ ಸದಾ ದರಿದ್ರನಾಗಿಯೇ ಇದ್ದನೆಂದು ಹೇಳಬೇಕಾಗುತ್ತ ಪ್ರತಿಭಾಶಾಲಿಗಳಲ್ಲಿ ಎರಡು ಕ್ರಮ : ಕೆಲವರು ಲಕ್ಷ್ಮೀಪುತ್ರರಾ ಹೆಚ್ಚಿನ ಜನರು ಅವಳ ಅನುಗ್ರಹವನ್ನೇ ಕಾಣದೆ, ಸರಿಯಾದ ಊ ವನ್ನೂ ಕಾಣದೆ—ನೊಣ್ಣೆ ನೊಣ್ಣೆ ತಾನೆ ಸತ್ತ ತಮಿಳಿನ ಭಾರ ಕವಿಯಂತೆ— ಅಲ್ಪಾಯುಷ್ಯದಲ್ಲಿಯೇ ಮೃತ್ಯುವಿಗೆ ಆಹು ಯಾಗಿ ಬಿಡುವರು. ಕವಿಯೂ ವಿಮರ್ಶಕನೂ ಈ ಸಾ ಸೇರಿದವರು.

ನಮ್ಮ ಸಂಸ್ಕೃತ ಅಥವಾ ಕನ್ನಡ ಕವಿಗಳ ವಿಷಯ ಮಾ

ಡುವಾಗ, **ಎರಡು ವೈಶಿಷ್ಟ್ಯಗಳು ಒಡೆದು ಕಾಣುವುವು—ಇವರ**
ವಾದ **ವ್ಯವಹಾರನಾಮ ಯಾವುದೋ ನಾವು** ಅಗಲೇ ಮರೆ-
ತೀವೆ. ಕಾಲಿದಾಸ, **ಭಾರವಿ, ಲಕ್ಷ್ಮೀಶ ಇತ್ಯಾದಿಗಳು, ಖಂಡಿತ**
ಗಿಯೂ ಕಲ್ಪಿತ **ನಾಮಧೇಯಗಳೇ ಹೊರತು** ಅವರ ವ್ಯವಹಾರ
ಮಗಳೇ ಆಗಿರಲಾರವು. **ಯಾವುದೂ** ಪ್ರತಿಫಲಾಪೇಕ್ಷೆಯಿಲ್ಲದೆ
ಮ್ಮ ಹುಟ್ಟೂರು, ಹೆಸರು, **ಇತ್ಯಾದಿ ತಮ್ಮ ವೈಯಕ್ತಿಕ** ವಿಷಯ-
ನ್ನೆಲ್ಲಾ **ನಿರಹಂಕಾರಿಗಳಾಗಿ ಬದಿಗೊತ್ತಿ,** ಜನತಾ ಸೇವೆಯೇ
ಮ್ಮ ಗುರಿಯೆಂದು ಭಾವಿಸುವ ಮಹಾತ್ಮರು **ಬೇರೆ** ಯಾವ ದೇಶ
ಲ್ಲಿಯೂ **ತೋರಿ** ಬರಲಾರರು. ಇದನ್ನು ನಮ್ಮ ಕವಿಯು
ರ್ಜುನನಿಂದ **ಮಾಡಿಸಿದ** ಶಿವಸ್ತುತಿಯಲ್ಲಿ ಅಸ್ವಾಪದೇಶರೀತ್ಯಾ
ಳಿಸಿದ್ದಾನೆಂದು **ಹೇಳಿದರೂ** ತಪ್ಪಾಗದು. **ಈಶ್ವರನೇ** ಸರ್ವ-
ಪತ್ತಿಗಳಿಗೂ **ಅಧಿಷ್ಠಾನ** ದೇವತೆಯಾಗಿ, ಬಯಸಿದ್ದನ್ನು
ಪೂರ್ಣವಾಗಿ **ಕರುಣಿಸುವ** ಮರುಳುದೇವನೆಂದು **ಕೊಂಡಾಡಿ-**
ಟ್ಟವನಾದರೂ, **ತಾನೇ ರುಂಡಮಾಲಾ** ಧಾರಿ, **ಹೆಣಗಳ ಭಸ್ಮ**
ನ್ನು ಧರಿಸುವವ, ಹಸಿಯಾದ ಆನೆಯ **ಚರ್ಮವನ್ನು ಹೊದ್ದವ,**
ರ್ಪಗಳನ್ನು ಮಣಿಗಳಂತೆ ಧರಿಸಿದದವ—ಅವನು ಭಕ್ತರ
ಭೀಷ್ಟಗಳನ್ನು ಕರುಣಿಸಿದರೆ **ಕರುಣಾಮೂರ್ತಿ,** ಸ್ವಕಾರ್ಯ-
ನ್ನೆಂದಿಗೂ **ನೋಡಿದವನಲ್ಲವೆಂದು** ಸೊಗಸಾಗಿ ವರ್ಣಿಸಿದ್ದಾನೆ:
ಪನ್ನಿಸ್ಸಂಗಃ ತ್ವಂ ಫಲಸಿ, ಅನತೇಭ್ಯಃ **ತತ್ಕಾರುಣ್ಯಂ**
ವಲಂ ನ **ಸ್ವಕಾರ್ಯಂ !** ಇನ್ನೊಂದು **ವೈಶಿಷ್ಟ್ಯವೇನೆಂದರೆ**
ಷ್ಟಲ್ಲಿ ಕವಿ, ವಿಮರ್ಶಕ ಇತ್ಯಾದಿ ಪರಸ್ಪರ ಭೇದವೇ ಇಲ್ಲ.
ಯೇ ವಿಮರ್ಶಕ, ವಿಮರ್ಶಕನೇ ಕವಿ—ಈ ಮಾತು ಪ್ರತಿ-
ಒಬ್ಬ ಕವಿಗೂ **ವಿಮರ್ಶಕನಿಗೂ** ಸಲ್ಲುವುದು. ವಾಲ್ಮೀಕಿಯು
ಕವಿಯೆಂದು **ಪ್ರಸಿದ್ಧನಾಗಿದ್ದರೆ,** ಅವನೇ ನಮ್ಮ ಆದಿ
ಮರ್ಶಕನೆಂದರೂ ತಪ್ಪಾಗದು. **ಶ್ಲೋಕವನ್ನು** ಬರೆದ ಕೂಡಲೆ
ಶೋಕಃ **ಶ್ಲೋಕತ್ವಮಾಗತಃ**" ಎಂದು ವಿಮರ್ಶಕನಾಗಿ,
ಶ್ಲೋಕದ ಉತ್ಪತ್ತಿ ಕುರಿತು 'ರಸದಿಂದ ಉಕ್ಕಿ ಬರುವ ರಸಾ-
ತವೇ ಕಾವ್ಯರೂಪವಾಗಿ ಬಿಡುವುದು' ಎಂದು ಬರೆದನು.
ಗೆಯೇ ನಮ್ಮ **ಭಾರವಿಯಾದರೋ ಉತ್ತಮಕಾವ್ಯದ ಲಕ್ಷಣ-**
ನ್ನು ಅಲ್ಲಲ್ಲಿ **ಹೇಳಿ,** ಅವೆಲ್ಲವೂ **ತನ್ನ ಕಾವ್ಯದಲ್ಲಿವೆಯೆಂದು**
ಪು ಸೊಗಸಾಗಿ ವರ್ಣಿಸಿರುವನು. ಉದಾಹರಣೆಗಾಗಿ
ಡನೆಯ **ಸರ್ಗದಲ್ಲಿ :**

ಸ್ಫುಟತಾನಪದೈಃ ಅಪಾಕೃತಾ ನ ಚ ನಸ್ವೀಕೃತಂ ಅರ್ಥಗೌರವಂ,
ತಾ ಪೃಥಗರ್ಥತಾ ಗಿರಾಂ ನ ಚ ಸಾಮರ್ಥ್ಯಂ ಅಪೋಹಿತಂ, ಕ್ವಚಿತ್"

ದು ಹೇಳಿ, **ಕಾವ್ಯದ** ಶಬ್ದಗಳು **ಸ್ಫುಟವಾಗಿ,** ಅರ್ಥದಲ್ಲಿ
ಭೀರಗಳಾಗಿ, **ಪ್ರತಿಯೊಂದು** ಶಬ್ದಕ್ಕೂ **ಅರ್ಥವನ್ನು ಬೇರೆ**
ಾಗಿ ಕಲ್ಪಿಸಿ, **ಒಟ್ಟಿನ ಅರ್ಥವನ್ನು** ಸರಿಯಾಗಿ ಜೋಡಿಸಿರ
ಕೆಂದು ಹೇಳುವನು. ಹೀಗೆಯೇ ೧೧ ನೆಯ ಸರ್ಗದಲ್ಲಿ

ಪ್ರಸಾದರಮ್ಯಂ ಓಜಸ್ವಿ ಗರೀಯಃ ಲಾಘವಾನ್ವಿತಂ
ಸಾಕಾಂಕ್ಷಂ ಅನುಪಸ್ಕಾರಂ ವಿಷ್ವಗ್ಗತಿ ನಿರಾಕುಲಂ ॥

ನ್ಯಾಯ ನಿರ್ಣೀತ ಸಾರತ್ವಾತ್ ನಿರಪೇಕ್ಷಂ ಇವಾಗಮೇ ।
ಅಪ್ರಕಂಪ್ಯತಯಾ ಅನ್ಯೇಷಾಂ ಆಮ್ನಾಯವಚನೋಪಮಂ ॥
ಔದಾರ್ಯಾತ್ ಅರ್ಥಸಂಪತ್ತೇಃ ಶಾಂತಂ ಚಿತ್ತಮೃಷೇರಿವ ॥

ಎಂದರೆ ಕಿವಿಗೆ ಇಂಪಾಗಿ, ಭಾವಗರ್ಭಿತಗಳಾದ ಶಬ್ದಗಳಿಂ
ಭಾರವುಳ್ಳದ್ದಾಗಿ, ಅಪ್ರಸ್ತುತಾನುಸಂಧಾನಗಳಿಲ್ಲದೆ ಪೂರ್ವಾಪ
ಗಳನ್ನು ಸರಿಯಾಗಿ ಜೋಡಿಸಿ, ಪರಸ್ಪರ ವಿರುದ್ಧಾರ್ಥಗಳಿರ
ವೇದವಚನದಂತಿದ್ದು, ಋಷಿಯ ಮನಸ್ಸಿನಂತೆ ಚಾಂಚ
ಲೇಶವೂ ಇಲ್ಲದೆ ಅರ್ಥಸಂಪತ್ತಿಯಿಂದ ಕೂಡಿದ್ದಾಗಿಯೂ ಇ
ಬೇಕೆಂದು ಹೇಳುವನು. ಹೀಗೆ ಕವಿ-ವಿಮರ್ಶಕರ ಸಂಕಲನ
ಎಂದರೆ ಒಬ್ಬನಲ್ಲಿಯೇ ಎರಡೂ ಭಾವಗಳಿರುವುದು, ಅಂಗ್ಲೇಯ
ರಲ್ಲಿ ಮ್ಯಾಥ್ಯೂ ಅರ್ನಾಲ್ಡ್ ಎಂಬವನಲ್ಲಿ ಮಾತ್ರ ತೋರಿ ಬರ
ತ್ತದೆ. ಮತ್ತೆಲ್ಲಿಯೂ ನಾವು ಕಾಣುವುದಿಲ್ಲ. ನಮ್ಮ ವಿಮರ್ಶ
ರಾದರೋ ಅಲಂಕಾರ ಶಾಸ್ತ್ರಗ್ರಂಥಗಳನ್ನು ಬರೆಯುವಾಗ, ತಮ
ಶಾಸ್ತ್ರನಿಯಮಗಳನ್ನು ಉದಾಹರಿಸುವಾಗ, ತಮ್ಮದೇ ಆಗಿರು
ಶ್ಲೋಕಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿರುವರು. ಭಾಮಹ
ದಂಡಿ, ಆನಂದವರ್ಧನಾದಿ ನಮ್ಮ ಪ್ರತಿಯೊಬ್ಬ ವಿಮರ್ಶಕರಿಗೂ
ಈ ಮಾತು ಅನ್ವಯಿಸುತ್ತದೆ. ಕಾಳಿದಾಸ, ಭಾರವಿ, ಭವಭೂತಿ
ಗಳೇ ಮೊದಲಾದ ಕವಿಗಳೂ ಅಲಂಕಾರಿಕ ಗ್ರಂಥಗಳನ್ನು ಸ್ವತಃ
ರಚಿಸದಿದ್ದರೂ ಅವರ ಕಾವ್ಯಗಳನ್ನೋದಿದವರಿಗೆ ಅವರ ವಿಮರ್ಶ-
ನಾಕ್ರಮವು ಇಂಥಾದ್ದೇ ಆಗಿದ್ದಿರಬಹುದೆಂದು ಊಹಿಸಲು ಬರು

ದೀಪಾವಳಿಯ ಹಬ್ಬದೊಂದಿಗೆ ಜ್ಞಾನದ ಹಬ್ಬವೂ
ಕನ್ನಡಿಗರ ಮನೆ ಮನೆಗೆ ಬೆಳಗಲಿ !
೧ ವರುಷಕ್ಕೆ ೪೦೦ ಪುಟಗಳ ಮಿಕ್ಕ ಸಾಹಿತ್ಯ. ಆದರೂ
ವಾರ್ಷಿಕ ಚಂದಾ ಅಂಚೆ ವೆಚ್ಚಸೇರಿ ಕೇವಲ ೪ರೂ.
ಈಗ ತಾನೆ ಅರಳಿದೆ :
ಕೆರೆಗೆ ಹಾರ
(ಹಳ್ಳಿಯ ಬಾಳನ್ನು ಹೃದಯದ್ರಾವಕವಾಗಿ ಚಿತ್ರಿಸಿದ ಕಾದಂಬರಿ)
ಶ್ರೀ. ಕುಲಕರ್ಣಿ ಬಿಂದುಮಾಧವರಿಂದ.
(ಕವಿಭೂಷಣ ಶ್ರೀಕೃಷ್ಣಶರ್ಮ ಬೆಟಗೇರಿ ಅವರ ವಿಸ್ತೃತ
ಮುನ್ನುಡಿಯೊಂದಿಗೆ)
ನಮ್ಮ ಮೊದಲಿನ ಕುಸುಮಗಳು
೧. **ಪೂಜಾ** (ಗದ್ಯಗೀತಗಳು) ೨. **ಕೋಚನೀಯ ನಿಧನ**
(ಕಥಾಸಂಗ್ರಹ) ೩. **ಅರೆಯಾಳು** (ಎರಡು ನೀಳ್ಗತೆಗಳು)
ವಿವರಗಳಿಗೆ :
ಶಾಂತಿ ಸಾಹಿತ್ಯಮಾಲೆ,
ಬಾದಾಮಿ
(ವಿಜಾಪೂರ ಜಿಲ್ಲೆ)

ಪ್ರಾಪ್ತಿ. ಆ ಗ್ರಂಥಗಳು ನಮಗೆ ದೊರಕದಿದ್ದುದು ವಿಷಾದಾಸ್ಪದ. ಎಷ್ಟೋ ನಮ್ಮ ಗ್ರಂಥಗಳು 'ನಾಮಾಪಿ ನಶ್ರೂಯತೇ' ಎಂದಾಗಲಿಲ್ಲವೇ !

ಈಗ ಆ ಐತಿಹ್ಯದ ಕಥೆಯನ್ನು ಪ್ರಾರಂಭಿಸುವಾ: ಗರ್ವಿಷ್ಠನಾದ ಭಾರವಿಯು ತನಗಿಂತ ದೊಡ್ಡ ಪಂಡಿತನಿಲ್ಲವೆಂದು ಹೆಮ್ಮೆಯಿದ್ದವನಂತೆ. ಇದು ಇವನ ತಂದೆಗೇ ಅಸಹ್ಯವಾಯಿತಂತೆ, ಮಗನ ನುಡಿ ತಪ್ಪು, ನಡೆ ತಪ್ಪು, ಎಂದು ಟೀಕಿಸಿದನಂತೆ, ಮಗನು ಸಿಟ್ಟಿನಿಂದ ಊಟವನ್ನು ಬಿಟ್ಟು, ತಂದೆಯನ್ನು ಆ ರಾತ್ರಿಯೇ ತೀರಿಸಿಯೇಬಿಡಬೇಕೆಂದು ಮಲಗುವ ಕೋಣೆಯ ಅಟ್ಟದಲ್ಲಿ ಅವಿತುಕೊಂಡನಂತೆ. ಆದರೆ ಅವರ ಮಾತು ಕೇಳುವ ಕುತೂಹಲದಿಂದ ಸ್ವಲ್ಪ ಹೊತ್ತು ಆಲಿಸಿದ. ಆಗ ತಾಯಿಯು 'ನಮ್ಮ ಮಗ ಈ ಹೊತ್ತು ಉಣ್ಣಲೇ ಇಲ್ಲ' ಎಂದಳಂತೆ. ತಂದೆಯು ಕಾರಣವೇನೆಂದು ವಿಚಾರಿಸಿದಾಗ 'ನೀವೇ ಇದಕ್ಕೆ ಕಾರಣರಾಗಿ ಏನೂ ಗೊತ್ತಿಲ್ಲದವರಂತೆ ನಟಿಸುವಿರಲ್ಲಾ !' ಎಂದು ಹೇಳಿದಳಂತೆ. ಆಗ ತಾನೇ ತಂದೆಯು 'ನೋಡು ! ನಮ್ಮ ಮಗನು ಅದ್ವಿತೀಯ ಪಂಡಿತನೇನೋ ಹೌದು. ಆದರೆ ತನಗಿಂತಲೂ ದೊಡ್ಡ ಪಂಡಿತನಿಲ್ಲವೆಂದು ಹೆಮ್ಮೆ ಹೊತ್ತಿರುವನು. ಈ ಹೆಮ್ಮೆಯೆಂಬುದೇ ಅವನನ್ನು ಹಾಳುಮಾಡೀತೆಂದು ಹೆದರಿ ನಾನು ಟೀಕಿಸಿದ್ದೇ ಹೊರತು ಬೇರೆಯಲ್ಲ. ತನ್ನ ಮಗನು ತನಗಿಂತಲೂ ದೊಡ್ಡವನಾಗಬೇಕೆಂದು ಯಾವ ತಂದೆಗೆ ತಾನೇ ಎನಿಸುವುದಿಲ್ಲ ?' ಎಂದು ಹೇಳಿದ್ದನ್ನು ಕೇಳಿ, ತನ್ನನ್ನು ತಾನೇ ಹೀಯಾಳಿಸಿಕೊಳ್ಳುತ್ತ, ಅಟ್ಟದಿಂದ ಇಳಿದನಂತೆ. ಮಾರನೆಯ ದಿನ ತಂದೆಗೆ ಸಾಷ್ಟಾಂಗವೆರಗಿ 'ಪಿತೃಹತ್ಯಾದೋಷಕ್ಕೆ ಪ್ರಾಯಶ್ಚಿತ್ತವೇನಪ್ಪಾ ?' ಎಂದು ಕೇಳಿದನಂತೆ. ಆಗ ತಂದೆಯು ಸಹಜವಾಗಿ 'ಆರು ತಿಂಗಳು ಮಾವನ ಮನೆಯಲ್ಲಿ ವಾಸಿಸುವುದು—ಎಂದು ಹೇಳಿದನಂತೆ. ಕೂಡಲೆ ಹೊರಡಲು ಅಪ್ಪಣೆಯನ್ನು ಮಗನು ಕೇಳಿದಾಗ ತಾನೇ ನಿಜವನ್ನರಿತ ತಂದೆಯು 'ನಿನ್ನಂಥ ಪಂಡಿತನಿಗೆ ಪ್ರಾಯಶ್ಚಿತ್ತವೇ ಪಶ್ಚಾತ್ತಾಪ, ನೀನು ಹೋಗುವುದು ಬೇಡ, ಸುಮ್ಮನಿದ್ದೀನ' ಎಂದು ಎಷ್ಟು ಹೇಳಿದರೂ ಕೇಳದೆ ಹೋದನಂತೆ. ಹದಿನೇಳನೆಯ ಸರ್ಗದಲ್ಲಿ 'ಸುಪ್ರಿಯಸ್ಯ ಏಕಸೂನೋಃ ಅವಿನಯಮಿವಸೇಹೇ' ಎಂದು ಅಂತ್ಯದ ಶ್ಲೋಕದಲ್ಲಿ ಹೇಳುವಾಗ, ಭಾರವಿಯೇ ಈ 'ಏಕಸೂನು' ಅಥವಾ ಒಬ್ಬನೇ ಮಗನಾದ್ದರಿಂದ ತಂದೆಗೆ ಸುಪ್ರಿಯನಾಗಿದ್ದ ಅವನ ಅವಿನಯವನ್ನೇ ತಂದೆಯು ಕ್ಷಮಿಸಿದ ಹಾಗೆ, ಅರ್ಜುನನ ಅವಿನಯವನ್ನು ಸ್ಮರಾರಿಯು ಸಹಿಸಿದ— ಎಂದು ಹೇಳುವಾಗ, ಇದನ್ನು ಜ್ಞಾಪಿಸಿಕೊಂಡೇ ಬರೆದಿರಬಹುದೆಂದು ಹೇಳಬಹುದು. ಅದಿರಲಿ, ಮಾವನ ಮನೆಯಲ್ಲಿ ಮೂರು ದಿವಸ ಸರಿಯಾಗಿ ಮನ್ನಣೆಯನ್ನು ಪಡೆದರೂ, ಅದರ ನಂತರ ಏತಕ್ಕೂ ಬೇಡದವನೆಂದು ತಿರಸ್ಕಾರವಾಗಿ, ಅವನು ದನಕಾಯುವ ಕೆಲಸಕ್ಕೆ ನಿಯಮಿಸಲ್ಪಟ್ಟನಂತೆ ! ಅಲ್ಲಿ ಆರು ತಿಂಗಳೊಳಗಾಗಿ ಈ ಕಾವ್ಯವನ್ನು ರಚಿಸಿದನೆಂದು ಹೇಳಿ, ಅವರೊಡನೆ ಈ

ಕಥೆಯನ್ನೂ ವರ್ಣಿಸುವರು: ಒಂದು ದಿನ ಎರಡನೆಯ ಸ
೩೦ನೆಯ ಶ್ಲೋಕವಾದ 'ಸಹಸಾ ನ ವಿದಧೀತಕ್ರಿಯಾಂ'(ಯ
ದಾದರೊಂದು ಕೆಲಸವನ್ನು ಅತ್ಯವಸರದಿಂದ ಮಾಡಲೇ
ದೆಂದು) ಬರೆಯುತ್ತಿರುವಾಗ, ಅವನ ಹೆಂಡತಿಯು ಜ
ಬೇಕೆಂದು ಅವನನ್ನು ಕಾಡಿದಳಂತೆ. ದುಡ್ಡಿಲ್ಲದೆ, ಆ ಶ್ಲೋಕ
ಬರೆದ ಓಲೆಯನ್ನೇ ಕೊಟ್ಟು 'ಇದನ್ನು ಬೇಕಾದರೆ ಮಾರಿ
ಕೆಲಸ ಪೂರೈಸಿಕೋ' ಎಂದು ಒಪ್ಪಿಗೆ ಕೊಟ್ಟನಂತೆ. ಅ
ಆಕಸ್ಮಾತ್ತಾಗಿ ಒಬ್ಬ ದೇಶಾಂತರ ಸಂಚಾರಿಯಾದ ವರ್ತ
ಹೆಂಡತಿಯೊಡನೆ ಕೂಡಿದಾಗ, ಅವಳಿಗೆ ಅದನ್ನು ಬಹು ಸ
ಹಣಕ್ಕೆ ಮಾರಿದಳಂತೆ. ಈ ವರ್ತಕನ ಹೆಂಡತಿಯಾದ
ಅದನ್ನು ತನ್ನ ಮಲಗುವ ಕೋಣೆಯಲ್ಲಿ ತೂಗಾಡಿಸಿಟ್ಟಳ
ಅವಳ ಗಂಡನು ವ್ಯಾಪಾರಕ್ಕಾಗಿ ಕೆಲವು ವರ್ಷಗಳ ಕ
ಹೋದಾಗ, ಅವಳು ಗರ್ಭಿಣಿಯಾಗಿದ್ದು ಅವಳಿಗೆ ಮಗನು ಹು
ಸಮಾಚಾರವೇ ಗಂಡನಿಗೆ ಗೊತ್ತಿದ್ದಿಲ್ಲವಂತೆ. ಏಕಾಏಕಿಯ
ಒಂದು ದಿನ ರಾತ್ರಿ ಹಿಂದೆ ಬಂದು, ಮಲಗುವ ಕೋಣೆ
ಕಾಲಿಟ್ಟಾಗ, ತನ್ನ ಹೆಂಡತಿಯು ಇನ್ನೊಬ್ಬನೊಡನೆ ಒ
ಹಾಸಿಗೆಯಲ್ಲಿ ಮಲಗಿದ್ದು ಗೋಚರವಾಗಿ, ಸಿಟ್ಟಿಗೇರಿ ಕತ್ತಿಯ
ತೆಗೆದುದು—ಆಕಸ್ಮಾತ್ತಾಗಿ—ಭಾರವಿಯ ಶ್ಲೋಕದ ಓಲೆಗೆ ತ
ಅದು ಬಿದ್ದಿತಂತೆ. ಅದನ್ನೆತ್ತಿ ನೋಡಿ, ವಿಚಾರಮಾಡಿ ಕೆಲಸವ
ಮಾಡುವುದು ಲೇಸೆಂದೆಂದುಕೊಂಡು ಹೆಂಡತಿಯನ್ನೆಬ್ಬಿಸಿದಾ
ಅವಳು ಮಗನನ್ನೆಬ್ಬಿಸಿ 'ತಂದೆಗೆ ಸಾಷ್ಟಾಂಗ ಮಾಡು' ಎಂ
ಹೇಳಿದಳಂತೆ.

ಇನ್ನು ಈ ಕಾವ್ಯದ ಸಾರಾಂಶ : ೧ನೆಯ ಸರ್ಗದಲ್ಲಿ ಯುಧಿ
ರಾದಿಗಳು ಕಾಡಿನಲ್ಲಿ ಕಾಲಕಳೆಯುತ್ತಿರುವಾಗ ದ್ರೌಪದಿಯ
ತಮ್ಮನ್ನೆಲ್ಲಾ ಈ ದುಃಖದಲ್ಲಿ ತಂದೊಡ್ಡಿದ ಯುಧಿಷ್ಠಿರನನ
ದ್ದೇಶಿಸಿ ಜರೆಯುವಳು— "ಹೆಂಗುಸರು ಗಂಡುಸರಿಗೆ ಉಪದೆ
ಶಿಸುವುದೇನೋ ಅಧಿಕಪ್ರಸಂಗವಾದರೂ ನನ್ನ ಅಸಾಧಾರಣವಾ
ಪರಾಭವದಿಂದ ಉಂಟಾದ ಹೃದಯದ ದುಗುಡವು ನನ್ನ
ಮಾತಾಡಿಸುವುದು. ಹೇ ಯುಧಿಷ್ಠಿರಾ ! ಅಮರ್ಷಶೂನ್ಯನಾ
ನೀನು ನಮ್ಮನ್ನೆಲ್ಲಾ ಆಪತ್ತಿನಲ್ಲಿ ತಂದಿಟ್ಟಿಯಪ್ಪ ! ಇನ
ಅಮರ್ಷಶೂನ್ಯನಾಗಿರುವುದು ಕ್ಷತ್ರಿಯರಿಗೆ ಹೇಳಿಸಿದ್ದಲ್ಲ. ನೀನೊ
ಬ್ಬನೇ ಬೇಕಾದರೆ ಕ್ಷತ್ರಿಯೋಚಿತವಾದ ಅಮರ್ಷಕ್ಕೆ ತಿಲಾಂಜಲಿ
ಯನ್ನು ಬಿಟ್ಟು, ಬ್ರಾಹ್ಮಣನ ಸರ್ವಸಹಿಷ್ಣುತೆಯನ್ನು ಏಕಚಿತ್ತ
ದಿಂದ ನಿಯಮೇನ ಸಾಧಿಸಿ, ಜಡೆಯನ್ನು ಬೆಳಸಿ ಇಲ್ಲಿಯೆ
ಅಗ್ನ್ಯುಪಸ್ಥಾನವನ್ನು ಮಾಡುವವನಾಗು. ಆದರೆ ಮಾತ್ರ ಇದ
ನಮ್ಮ ಕ್ಷಾತ್ರಧರ್ಮವಲ್ಲ. ನಿನ್ನ ಕ್ಷಾತ್ರತೇಜಸ್ಸೇ ಬೆಳ
ನಮ್ಮನ್ನು (ನಿನ್ನ ತಮ್ಮಂದಿರನ್ನೂ ನನ್ನನ್ನೂ) ಆಪತ್ತಿನಿಂ
ಉದ್ಧರಿಸಬೇಕಲ್ಲವೇ ?" ಎಂದು ಸ್ಫೂರ್ತಿಯಿಂದ ವಾದಿಸುವಾಗ
ಪ್ರತಿಯೊಬ್ಬ ಹೆಂಗುಸಿನ ಹೃದಯವು (ನಮ್ಮ ಹೃದಯವೂ ಸಹ
ಆನಂದ ತುಂದಿಲವಾಗುವುದು. ಹೀಗೆಯೇ ಕಥೆಯು ಮುಂದು

ದು, ಅರ್ಜುನನು ತಪಸ್ಸನ್ನಾಚರಿಸುವ ಸಮಯದಲ್ಲಿ ಇಂದ್ರನು ಸ್ರಾಂತರದಲ್ಲಿ ಬಂದು, ಅವನನ್ನು ತಪಸ್ಸಿನಿಂದ ತಪ್ಪಿಸಲು ಯತ್ನಿಸುವನು : "ಇದು ಏನು ವೇಷವಪ್ಪಾ ನಿನ್ನದು! ಪಸ್ವಿಯಾಗಿರುವ ನಿನಗೆ ಬಿಲ್ಲು, ಬಾಣ, ಬತ್ತಳಿಕೆ, ಖಡ್ಗ ಇವೆಲ್ಲ ಕೆ? ಹೊಟ್ಟೆಯೊಳಗೆ ಕೋಪ, ಬಾಯಿಯೊಳಗೆ ಕ್ಷಮೆ; ಥಾಚಾರ್ಯನೇನೋ ನೀನು! ಒಂದೋ ಮೋಕ್ಷವನ್ನೇ ಕುಸುವವನಾಗು, ಇಲ್ಲವಾದರೆ ತಪಸ್ಸನ್ನು ಬಿಟ್ಟು ಧನುರ್ವಿದ್ಯಾ-ಸನಿರತನಾಗು. ಎರಡು ದೋಣಿಯಲ್ಲಿ ಕಾಲಿಟ್ಟು ಹಾಳಾಗ-ಡ. ರಣೋತ್ಸಾಹವನ್ನು ಮನಸ್ಸಿನೊಳಗಿಟ್ಟುಕೊಂಡು ಾಗಬೇಡ. ಕ್ರೋಧದಾಸನಾಗಿದ್ದೀಯಲ್ಲವೋ! ಕಾಮ-ಕ್ರೋಧಾದಿಗಳನ್ನು ಜಯಿಸಿ ಮುಕ್ತಿಯಲ್ಲಿಯೇ ನಿನ್ನ ಮನಸ್ಸನ್ನು ಸುವವನಾಗು. ಹೊರಗಿನ ಶತ್ರುಗಳನ್ನು ಗೆಲ್ಲಬಹುದು. ನ ಮನಸ್ಸಿನೊಳಗಿರುವ ಶತ್ರು (ಇಂದ್ರಿಯ)ಗಳು ಸರ್ವಥಾ ರ್ಜಯಗಳು. ಕಾಮಕ್ರೋಧಾದಿಗಳು ಸ್ವಪ್ನೋಪಮಗಳು, ದಲು ನಮ್ಮನ್ನು ಮೋಹಿಸಿ, ಏಕಾಕಿಯಾಗಿ ನಡುನೀರಿನಲ್ಲಿ ಕೈಯನ್ನು ಬಿಟ್ಟು ಬಿಡುವುವು. ಆದ್ದರಿಂದ ಆಯುಧಗಳನ್ನು ಟ್ಟು ಮೋಕ್ಷಾರ್ಥಿಯಾಗುವುದು ವಾಸಿಯಲ್ಲವೇ?" ಎಂದು ಧಿಸುವಾಗ, ಮನುಸ್ಮೃತಿಯ ನೆನಪಾಗುವುದು. ಆದರೆ ರ್ಜುನನೇನೋ ಕೃತಕಾರ್ಯನಾಗದೆ ಹಿಂದಿರುಗುವವನಲ್ಲ. ಯಿಲ್ಲದೆ ನಿಸ್ಸಾರನಾಗಿ ಮಾನಹೀನನಾದ ಮನುಷ್ಯನು ಪ್ರಾಯನಲ್ಲವೇ? ಎಂದು ಮಾನವನ್ನು ನೀಗುವನೋ, ದೇ ಮಾನವತ್ವವನ್ನೂ ನೀಗಿಯೇ ಬಿಡುವನು. ಮನುಷ್ಯರ ಣೆಯನ್ನಾರಂಭಿಸಿದಾಗ, ಯಾರ ಹೆಸರನ್ನು ನಾವು ಮೊದಲ-ಬೆರಳಿನಿಂದ ಆರಂಭಿಸುವೆವೋ ಅವನೇ ನಿಜವಾದ ಪುರು-ಷನು. "ನಾನು ಸುಖವನ್ನು ಬಯಸುವವನಲ್ಲ, ಚಂಚಲವಾದ ಸಂಪತ್ತಿಗೆ ಹಾತೊರೆಯುವುದಿಲ್ಲ, ಸಂಸಾರವು ಅನಿತ್ಯವೆಂದು ಬೆದರಿ ಮೋಕ್ಷಾರ್ಥಿಯಾಗಿ ಬಂದವನೂ ಅಲ್ಲ. ಹೆಚ್ಚೇಕೆ, ಮೋಕ್ಷವೇ ನನಗೆ ಲಭಿಸಿದರೂ ಜಯಶ್ರೀಯಲ್ಲಿಯೇ ನೆಟ್ಟ ಮನಸ್ಸುಳ್ಳ ನಾನು ಅದನ್ನು ವಿಷವೆಂದೇ ಭಾವಿಸಿ ತಳ್ಳಿಬಿಡುವೆನು. ಅಸ್ಥಾನದಲ್ಲಿ ಆಸಕ್ತಿಯಲ್ಲ ನನ್ನದು. ನನ್ನ ವೈರಿಗಳೂ ನನ್ನನ್ನು ಕೊಂಡಾಡ-ಬೇಕು ಇಷ್ಟೇ ನನ್ನ ಮಹತ್ವಾಕಾಂಕ್ಷೆ! ನನ್ನ ಅಣ್ಣನಾದ ಯುಧಿಷ್ಠಿರನಾದರೋ ಅರಿಗಳನ್ನು ಗೆಲ್ಲುವರೆ ಸಾಮರ್ಥ್ಯವು ನನ್ನ-ಲ್ಲಿಯೇ ಇರುವುದೆಂದು ದೃಢವಾಗಿ ನಂಬಿರುವನು. ನನ್ನ ಸ್ವಧರ್ಮವು ವೈರಿಗಳಿಗೆ ಬೆನ್ನನ್ನು ತೋರದಿರುವುದು (ಈಗ ಅವನಿಗೆ ಗೀತೋಪ-ದೇಶವೂ ಕೂಡ ಬೇಕಿಲ್ಲ). ಬೆಟ್ಟದ ತುದಿಯಲ್ಲಿರುವ ಮೋಡದಂತೆ ಛಿನ್ನಭಿನ್ನವಾಗಿಬಿಟ್ಟೇನು, ಇಲ್ಲವೇ ಇಂದ್ರನನ್ನೇ ಆರಾಧಿಸಿ ಅಕೀರ್ತಿಯ ಶಲ್ಯವನ್ನು ಮನಸ್ಸಿನಿಂದ ಕಿತ್ತು ಹಾಕಿಯೇ ಬಿಡುವೆನು. ಇದೇ ನನ್ನ ದೃಢಸಂಕಲ್ಪ" ಎಂದು ಹೇಳುವಾಗ, ಯಾವ ತಂದೆಗೆ ತಾನೇ ತನ್ನ ಮಗನ ದೃಢಸಂಕಲ್ಪವನ್ನು ನೋಡಿ ಆನಂದವು ಉಕ್ಕಿ ಬರಲಾರದು! ಪಾರ್ವತಿಯ ತಪಸ್ಸನ್ನು ಪರೀಕ್ಷಿಸಿ ಪಾರ್ವತೀದಾಸ-ನಾದನಂತೆ ಈಶ್ವರ....ಕುಮಾರಸಂಭವದ ಪ್ರಕಾರ; ಮಗನ ಮನೋ-ದಾರ್ಢ್ಯವನ್ನು ಭೇದಿಸಲಾಗದೆ ಅವನನ್ನು ತಬ್ಬಿಕೊಂಡನಂತೆ ಇಂದ್ರ – ಸಾಹಿತ್ಯದಲ್ಲಿ ಇನ್ನೆಲ್ಲಿ ದೊರಕುವುವು ಈ ಮಾತುಗಳ ಗಾಂಭೀರ್ಯ! ಇವನ ವರ್ಣನಾವೈಚಿತ್ರ್ಯವನ್ನು ಜಲಕ್ರೀಡೆಯ ಒಂದೇ ಶ್ಲೋಕವನ್ನುದಾಹರಿಸಿ ವಿಶದೀಕರಿಸುವೆನು – ಪ್ರಿಯೇಣ ಸಂಗ್ರಥ್ಯ ವಿಪಕ್ಷ ಸಂನಿಧೌ ಉಪಾಹಿತಾಂ ವಕ್ಷಸಿ ಪೀವರಸ್ತನೇ ಸ್ರಜಂ ನಕಾಚಿತ್ ವಿಜಹೌ ಜಲಾವಿಲಾಂ ವಸಂತಿ ಹಿ ಪ್ರೇಮ್ಣಿ ಗುಣಾ ನ ವಸ್ತುಷು. ನೀರಾಟವಾಡುವ ಸಂನಿವೇಶ, ಅನೇಕ

ಬಾಯೋಟೋನಾ
ಇದರ ಸೇವನೆಯಿಂದ

ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸ ಬಹುದು. ಹಿಮ್ಮಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ '**ಬಾಯೋ-ಟೋನಾ**' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨. ಟ. ಖರ್ಚು ಬೇರೆ. ಸೂಚಿಪತ್ರ ಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ ನೆಯ ಆವೃತ್ತಿ

ಅಚ್ಚಾಗಿ ಸಿದ್ಧವಾಗಿದೆ.

ಬೇಕಾಗಿರುವವರು

ಬೇಗನೆ ಬೇಡಿಕೆ ಕಳುಹಿರಿ!

ಬರೆದವರು :

ಶ್ರೀ. ಬಿ. ಎಸ್. ಹುದ್ದಾರ

ಪ್ರೇಯಸಿಗಳು ಸುತ್ತುಮುತ್ತಿರಲು, ಅವರೆಲ್ಲರೂ ನೋಡುತ್ತಿದ್ದಂತೆಯೇ, ಹೂಗಳನ್ನು ಶೇಖರಿಸಿ, ಮಾಲೆಯೊಂದನ್ನು ಹೆಣೆದು, ಬೇಕೆಂತಲೇ ಯಾವಳೋ ಒಬ್ಬ ಪ್ರಿಯತಮೆಯ ಕುತ್ತಿಗೆಯಲ್ಲಿ ಎತ್ತಿ ಹಾಕಿದರೆ, ಅವಳು ಹೆಮ್ಮೆಯಿಂದ ಉಬ್ಬುವುದು ಇಲ್ಲಿ ಸುಂದರವಾಗಿ ವರ್ಣಿತವಾಗಿದೆ.

ಈ ಕಾವ್ಯದ ಉತ್ತಮ ಭಾಗವು ಅರ್ಜುನನ ತಪಸ್ಸಿಗೆ ಈಶ್ವರನು ಮೆಚ್ಚಿ ಅವನೊಡನೆ ಮೊದಲು ಯುದ್ಧಮಾಡಿದುದು. ಕಡೆಗೆ ಅರ್ಜುನನಿಗೆ ನಿಜ ತಿಳಿದು ಈಶ್ವರನ ಸ್ತೋತ್ರಮಾಡಿದುದು. ಶಿವನು ಅಸ್ತ್ರಾದಿಗಳನ್ನು ಕರುಣಿಸಿದುದು. ೧೭ನೆಯ ಸರ್ಗದಲ್ಲಿ ಕಡೆಯ ಶ್ಲೋಕವಿದು :—

"ಅಭಿಲಷತಃ ಉಪಾಯಂ ವಿಕ್ರಮಂ ಕೀರ್ತಿಲಕ್ಷ್ಮ್ಯೋಃ
ಅಸುಗಮಂ ಅರಿಸೈನ್ಯೈಃ ಅಂಕಂ ಅಭ್ಯಾಗತಸ್ಯ
ಜನಕ ಇವ ಶಿಶುತ್ವೇ ಸುಪ್ರಿಯಸ್ಯೈಕಸೂನೋಃ
ಅವಿನಯಮಪಿ ಸೇಹೇ ಪಾಂಡವಸ್ಯ ಸ್ಮರಾರಿಃ

ತಂದೆಗೊಬ್ಬನೇ ಮಗನಿದ್ದರೆ ಅವನೆಷ್ಟು ತಪ್ಪುಮಾಡಿದರೂ ಒಪ್ಪೆಂದು ಭಾವಿಸಿ ಆನಂದಿಸುವ ತಂದೆಯಂತೆ, ಅರ್ಜನನ ಅವಿನಯವನ್ನು ಸ್ಮರಾರಿಯಾದ ಈಶ್ವರನೇ ಕೊಂಡಾಡಿ, ಅವನನ್ನು ಅನುಗ್ರಹಿಸುವ ಅನನ್ಯಾದೃಶವಾದ ದೃಶ್ಯವಿದು. ಈ ಅರ್ಜುನ ಕಿರಾತರ (ಅಥವಾ ಕಿರಾತಾರ್ಜುನರ—ಹೇಗೆ ಹೇಳುವುದೋ ತಿಳಿಯದು) ಯುದ್ಧವನ್ನು ನೋಡಿ, ಹತ್ತಿರದಲ್ಲಿಯೇ ಇದ್ದ ಈಶ್ವರ ಗಣಗಳೂ ಭ್ರಾಂತವಾದುವಂತೆ! ಯಾರು ಗೆದ್ದರೆಂಬುದು ಅವರಿಗೂ ತಿಳಿಯಲಿಲ್ಲವಂತೆ! ಸಮಸ್ತ ಚರಾಚರ ಪ್ರಾಣಿಗಳೂ ಬೆರಗಾಗಿ ಮುಖದ ಮೇಲೆ ಕೈಬೆರಳಿಟ್ಟುಕೊಂಡು, ಎವೆಯಿಕ್ಕದೆ ಅತಿರಾಮರಾವಣವಾದ ಈ ಯುದ್ಧವನ್ನು ನೋಡಿದರಂತೆ! ಈಶ್ವರನೇ ಸಂತೋಷದಿಂದ ಅರ್ಜುನನನ್ನು ತಬ್ಬಿಕೊಂಡಾಗ, ಅರ್ಜುನನು ಮಾಡಿದ ಈಶ್ವರಸ್ತುತಿಯನ್ನು ಲಾಲಿಸಿ ಉಪಸಂಹರಿಸುವೆನು—

ಶರಣಂ ಭವಂತಂ ಅತಿಕಾರುಣಿಕಂ ಭವ ಭಕ್ತಿಗಮ್ಯಂ ಅಭಿಗಮ್ಯ ಜನಾಃ ।
ಜಿತಮೃತ್ಯವಃ ಅಜಿತಭವಂತಿ ಭಯೇ ಸಸುರಾಸುರಸ್ಯ ಜಗತಃ ಶರಣಂ ॥
ವಿಪತ್ ಏತಿ ತಾವತ್ ಅವಸಾದಕರೀ ನ ಚ ಕಾಮಸಂಪತ್
ಅಭಿಕಾಮಯತೇ ।
ನ ನಮಂತಿ ಚ ಏಕಪುರುಷಂ ಪುರುಷಾಃ ತವ ಯಾವತ್ ಈಶ ನ ನತಿಃ
ಕ್ರಿಯತೇ ॥

ನಿನ್ನನ್ನು ನಂಬುವ ವರೆಗೆ ನಮ್ಮ ಪುರುಷಾರ್ಥಗಳೂ ಸಿದ್ಧಿಸುವುದಿಲ್ಲ! ನಿನ್ನನ್ನು ನಂಬಿದರೆ ಸಂಸಾರಸಾಗರದ ಭಯವಿಲ್ಲ. ಹೇ ಅಚಿಂತ್ಯಧಾಮಾ! ನಿನ್ನಿಂದ ದೊಡ್ಡ ತೀರ್ಥವಿಲ್ಲ! ನಿನ್ನನ್ನು ಹುಡುಕಲು ದೂರ ಹೋಗುವುದೇ ಬೇಡ. ನಮ್ಮೆಲ್ಲರ ಹೃದಯದಲ್ಲಿ ವಾಸಿಸುವೆಯಲ್ಲವೇ? ನಿನ್ನಿಂದಲೇ ನಮ್ಮ ಜನ್ಮಸಾಫಲ್ಯ, ನೀನೇ ತಾರಕ, ತತ್ತ್ವಜ್ಞಾನವಿಲ್ಲದೆಯೂ ನಿನ್ನನ್ನು ಭಕ್ತಿಪೂರ್ವಕವಾಗಿ ಸೇವಿಸಿದರೆ ನಮಗೆ ಮುಕ್ತಿ. ಸಮ್ಯಗ್ದೃಷ್ಟಿಯಿಂದ ಸರ್ವೋತ್ತಮನಾದ ನಿನ್ನನ್ನು ನೋಡುವುದೇ ನಮ್ಮ ಅಹಾರ್ಯವಾದ ದುರ್ಗತಿಭಯವನ್ನು ನೀಗಿಸುವರೆ ಸಾಧಕವಾಗುವುದು. ಹೇ ಕರುಣಾಮಯ! ಸ್ವ... ಅತಿಮಾಯನಾಗಿ ಅದ್ಭುತಾಕಾರನಾ... ನೀನು ಈ ಮಾಯಾಸಂಸಾರವೆಂಬ ಲೀಲೆಯನ್ನು ಹೂ... ನಮ್ಮನ್ನೆಲ್ಲರನ್ನೂ ಗೊಂಬೆಗಳನ್ನಾಗಿ ಮಾಡಿ ಆಡಿಸುವೆಯಲ್ಲವೇ! ಆದರೆ ಇದರಲ್ಲಿ ನಿನ್ನ ಸ್ವಕಾರ್ಯವೇನೂ ತೋರುವುದಿಲ್ಲ.

ಸಂಸೇವಂತೇ ದಾನಶೀಲಾಃ – ವಿಮುಕ್ತ್ಯೈ ಸಂಪಶ್ಯಂತೋ
ಜನ್ಮದುಃಖಂ ಪುಮಾಂಸಃ ।
ಯತ್ ನಿಸ್ಸಂಗಃ - ತ್ವಂ, ಫಲಸಿ ಆನತೇಭ್ಯಃ ತತ್, ಕಾರುಣ್ಯಂ
ಕೇವಲಂ ನ ಸ್ವಕಾರ್ಯಂ ॥

ಯಾವುದೊಂದು ಫಲವನ್ನೂ ಆಶಿಸದೆ ಭಕ್ತರ ಅಭೀಷ್ಟಗಳನ್ನೆಲ್ಲ ಸಲ್ಲಿಸುತ್ತಿರುವೆ. ನಿನಗಾದರೋ ಉತ್ತರೀಯ ಒದ್ದೆಯಾ... ಆನೆಯ ಚರ್ಮ, ಸರ್ಪಾಭರಣ, ರುಂಡಗಳೇ ಹೂಮಾಲೆ, ಹೆಣ ಬೂದಿ ಚಂದನ, ಇವುಗಳೊಡನೆ ತಲೆಯಲ್ಲಿ ಥಳಥಳಿಸುವ ಚಂದ್ರ...

ತವ ಉತ್ತರೀಯಂ ಕರಿಚರ್ಮ ಸಾಂಗಜಂ ಜ್ವಲನ್ಮಣಿಃ ಸಾರಸನಂ
ಮಹಾನಹಿಃ ।
ಸ್ರಜ್ ಆಸ್ಯಪಂಕ್ತಿಃ ಶವಭಸ್ಮ ಚಂದನಂ ಕಲಾ ಹಿಮಾಂಶೋಶ್ಚ
ಸಮಂ ಚಕಾಸತಿ ॥
ಅವಿಗ್ರಹಸ್ಯ ಅಪಿ ಅತುಲೇನ ಹೇತುನಾ ಸಮೇತ ಭಿನ್ನದ್ವಯ
ಮೂರ್ತಿ ತಿಷ್ಠತಃ ।
ತವ ಏವ ನಾನ್ಯಸ್ಯ ಜಗತ್ಸುದೃಶ್ಯತೇ ವಿರುದ್ಧ ವೇಶಾಭರಣಸ್ಯ
ಕಾಂತತಾ ॥

ಇದು ಗೊಡ್ಡು ವೇದಾಂತವಲ್ಲ, ಇದು ಸಾಹಿತ್ಯ-ವೇದಾಂತಗ... ಗಂಗಾಯಮುನಾ ಸಂಗಮ—ಭಾರವಿಯು ವರ್ಣಿಸಿರುವುದು ... ಸಂಗಮದ ಕಾಶೀವಿಶ್ವನಾಥನನ್ನು. ಅರ್ಜುನನೂ ಕೃತಾರ್ಥನಾ... ಈಶ್ವರನೂ ಸಂತುಷ್ಟನಾದ, ಕವಿಯೂ ತನ್ನ ಭಾವಗಂಭೀರವಾ... ಮಾತುಗಳಿಂದ ನಮ್ಮೆಲ್ಲರ ಮೆಚ್ಚಿಕೆಗೆ ಪಾತ್ರನಾದ. ಅರ್ಜುನನಿ... ಈಶ್ವರನು ಮಾತ್ರ ದಯೆದೋರಿದ್ದಲ್ಲ, ಎಲ್ಲಾ ಲೋಕಪಾಲರು ಕೂಡ ತಮ್ಮ ತಮ್ಮ ಉತ್ತಮಾಸ್ತ್ರಗಳನ್ನವನಿಗಿತ್ತರಂತೆ! ಕ್ಲೇಶ... ಫಲೇನ-ಹಿ-ಪುನರ್ನವತಾಂ ವಿಧತ್ತೇ. ಹೀಗೆ ನಮ್ಮ ಈಪ್ಸಿತಗಳನ್ನು ಸಂಸಾಧಿಸಿದರೆ, ಕ್ಲೇಶವೂ ಮರೆತುಹೋಗುವುದಲ್ಲ... ಉತ್ಸಾಹವು ಉಕ್ಕಿಬರುವುದಲ್ಲವೇ?

ನಮ್ಮ ಸಾಹಿತ್ಯವು ನಿರಾಶಾವಾದವನ್ನೇ ಬೋಧಿಸುವುದಾಗಿದ್ದು ಪರಲೋಕದಲ್ಲಿಯೇ ದೃಢವಾದ ಆಸಕ್ತಿಯನ್ನು ಹೆಚ್ಚಿಸುವುದೆಂದು ಪಾಶ್ಚಾತ್ಯರು ನಮ್ಮನ್ನು ಅಲ್ಲಗಳೆಯುವರು. ನಮ್ಮ ದೃಷ್ಟಿಯು ಈ ಲೋಕವನ್ನು ಅಲ್ಲಗಳೆಯುವುದಿಲ್ಲವೆಂಬುದಕ್ಕೆ ಅರ್ಜುನ ಅಶೋಕರಂಥ ನಮ್ಮ ಸೇನಾನಾಯಕರೇ ಸಾಕು. ಅವರು ಲೋಕವನ್ನು ಗೆದ್ದರೆ ಲೋಕದಲ್ಲಿ ಎಲ್ಲೆಲ್ಲಿಯೂ ಧರ್ಮಚಕ್ರದ ಪ್ರವರ್ತನೆಗಾಗಿ, ಸಮಸ್ತ ಚರಾಚರ ಪ್ರಾಣಿಗಳ ಸುಖಸಂಪತ್ತಿಗಾಗಿ. ಇಹಪರಗಳೆರಡೂ ಸಮತೂಕದಲ್ಲಿ ಇಲ್ಲಿ ಅರ್ಜುನನ ಪಾಲಿಗೆ ಬಂದುವು.

" ಮರೆವು "

(ವಿಚಾರಲಹರಿ)

ಶ್ರೀ. ಅನಂತ ಬುರ್ಲಿ, ಬಸವೇಶ್ವರ ಕಾಲೇಜು,
ಬಾಗಿಲಕೋಟೆ

★

ಮರೆವು ಹೋಗಿ ಮಾನವನಲ್ಲಿ ಅರಿವು ಮೂಡಬೇಕೆಂಬುದು ಎಲ್ಲ ಹಿರಿಯರೂ ಹೇಳುವ ಮಾತು. ಆದರೆ ಮರೆವಿನ ನೆರವಿನಿಂದಲೆ ಅರಿವು ಮೂಡುವುದರಿಂದ, ಮಾನವನಿಗೆ ಮರೆವೆಂಬುದು ಯಾವಾಗಲೂ ಇರಲೇಬೇಕು!

★

ಅರಿವು ಮರೆವುಗಳು ಮಾನವನ ಸ್ವಭಾವಗಳಾಗಿ ಬೆಳೆದು ಬಂದರೂ, ಮೊದಲಲ್ಲಿ ಕೈಹಿಡಿದು ಮುನ್ನಡೆಯಿಸುವುದು ಅರಿವು; ...ಹಿಸುವುದು ಮರೆವು. ಕೆಲವು ಸಲ ಅರಿವಿಗಿಂತ ಹಿರಿದಾಗಿ ಮರೆವು ಮಾನವನಿಗೆ ಸುಖ ಸಂತೋಷಗಳನ್ನು ತರುವುದಾದರೂ ನಿತ್ಯ ಪ್ರಪಂಚದಲ್ಲಿ ಅದು ಸಾಮಾನ್ಯರಿಗೆ ತರುವುದು ದುಃಖವನ್ನು ಮಾತ್ರವೆಂದು, ಮರೆವು ದುಃಖದ ಮೂಲವೆಂದು ಭಾವಿಸಬೇಕಿಲ್ಲ' ಮರೆವಿನಲ್ಲಿ ಸಂತಸದ ಸೊದೆಯುಣಿಸಿ ತಣಿಸುವ ಅಮೃತ-ಶಕ್ತಿಯೂ ಇದೆ ಅದನ್ನರಿಯದವರು ಒಳಗಣ್ಣು ತೆರೆದು ಕಾಣಬೇಕು ಮರೆವನ್ನು. ಆಗ ಮರೆವಿನಲ್ಲಿ ಅರಿವಿನ ಅಂದವಾದ ರೂಪವನ್ನು ಕಂಡು ಬೆರಗಾಗಬಹುದು. ಅರಿವು ಮರೆವುಗಳು ಒಂದರಿಂದೊಂದು ದೂರವಿಲ್ಲವೆಂಬುದನ್ನು ಮನಗಾಣಬಹುದು. ಮರೆವು ಮುಂದೂಡಿಕೊಂಡು ಬಂದಾಗ, ಮಾನವನ ಮನೋಮಂದಿರದಲ್ಲಿ ಅರಿವಿನ ಉದಯವಾಗುತ್ತದೆ. ಅರಿವು ಆತ್ಮವಾದರೆ, ಮರೆವು ಅದಕ್ಕೆ ಮಂದಿರ. ಮರೆವಿನ ದೇಹಪಂಜರದಲ್ಲಿ ಅರಿವಿನ ಆತ್ಮ ಪ್ರತಿಷ್ಠೆಯಾದಾಗಲೇ ಮಾನವನ ಬದುಕು ರೂಪುಗೊಳ್ಳುತ್ತದೆ. ಜೀವನ ನವ್ಯ ದಿವ್ಯವಾಗುತ್ತದೆ.

ಪ್ರಾಚೀನ ಋಷಿಗಳು ವಿಶ್ವಶಕ್ತಿಯನ್ನು ವಿವಿಧ ರೂಪಗಳಲ್ಲಿ ಕಂಡು ಆನಂದಿಸಿದುದು ಮರೆವಿಗೆ ಅನನ್ಯಭಾವದಿಂದ ಶರಣು ಹೋದಾಗಲೆ. ಸತ್, ಚಿತ್, ಆನಂದ ಸ್ವರೂಪನಾದ ಪರಮಾತ್ಮನ ಸಾಕ್ಷಾತ್ಕಾರ ದರ್ಶನವಾದುದು ಮರೆವಿನ ಮುಖಾಂತರವೇ. ವಾಜಶ್ರವಸನು ಮರೆವಿಗೆ ಒಳಗಾಗದಿದ್ದಲ್ಲಿ, ನಚಿಕೇತನು ಯಮಧರ್ಮನೆಡೆಗೆ ತೆರಳಿ ಆತ್ಮವಿದ್ಯೆಯನ್ನರಿತು ಲೋಕ ಕಲ್ಯಾಣ ಸಾಧಿಸುವುದೇ ಅಸಾಧ್ಯವಾಗುತ್ತಿತ್ತು. ರಸಋಷಿಗಳು ನಿತ್ಯ ಜೀವನದ ಜಂಜಾಟ ಮರೆಯದೆ ಸಾವುನೋವುಗಳಲ್ಲಿಯೇ ನರಳುತ್ತ ಬಿದ್ದಿದ್ದರೆ ಉಪನಿಷತ್ತು ಕಾವ್ಯಗಳು ಉದಯವಾಗದೆ ಹೋಗಿ, ಅವುಗಳ ಹೊಂಬೆಳಗು ಮುಂಬರುವ ಜನಾಂಗಗಳ ಹೃದಯ ಮಂದಿರಗಳನ್ನು ಬೆಳಗದೆ ಹೋಗಬಹುದಿತ್ತು. ನಾಡು ನುಡಿ ಸಂಸ್ಕೃತಿಗಳು ಸಾವಿರಾರು ವರುಷಗಳಿಂದ ಸಂಗಮವಾಗಿ ಸಾಗಿ ಬಂದು ಜನತೆಯ ಪಾವನಗೈಯುವ ಮಹಾಕಾರ್ಯವು ನಡೆದು ಬಂದುದು ಅರಿವು-ಮರೆವುಗಳ ಫಲವಾಗಿಯೆ. ಆದರೆ ಮಾನವನು ಮರೆವಿನ ಮಹತಿ ಮರೆತು ಮುನ್ನಡೆದರೂ, ಅಂದಿನಿಂದ ಇಂದಿನ ವರೆಗೆ ಮರೆವು ಮಾತ್ರ ಮಾನವನನ್ನು ಮರೆಯದೆ ಹಿಂಬಾಲಿಸಿ ಅರಿವಿನ ಮಾರ್ಗ ತೋರುತ್ತಲೆ ಬಂದಿದೆ. ಅಂತೆಯೆ ನಾವೆಲ್ಲ ಇಂದು ಬದುಕಿ ಬಾಳಬಯಸುತ್ತಿದ್ದೇವೆ. ಜೀವನ ಬೆಳಗಿಕೊಳ್ಳಲಿಚ್ಛಿಸುತ್ತಿದ್ದೇವೆ.

ಮಾನವನ ಜೀವನ ಹೇಗೆ ವಿಶ್ವತೋಮುಖವಾಗಿದೆಯೋ ಅಂತೆಯೆ ಮರೆವಿನ ರೂಪಗಳು ಅನಂತವಾಗಿವೆ. ಮರೆವು ಮಾನವನಲ್ಲಿ ಕ್ಷಣ ಕ್ಷಣಕ್ಕೆ ವಿವಿಧ ರೂಪಗಳಲ್ಲಿ ಕಾಣಿಸಿಕೊಂಡರೂ ಅರಿವುಗೇಡಿ ಮಾನವನು ಕಾಣದೆ ಹೋಗಿ ಮುಗ್ಗರಿಸುತ್ತಾನೆ ಜೀವನದಲ್ಲಿ. ಅರಿವುಳ್ಳವನು ಕಂಡು ಬಾಳ ಬೆಳಗಿಕೊಳ್ಳುತ್ತಾನೆ. ಮುಂದಾರಿ ಕಂಡುಕೊಳ್ಳುತ್ತಾನೆ. ಮಾನವಜೀವನ ಸುಖ-ದುಃಖ, ಹಿಗ್ಗು-ಕುಗ್ಗು, ಸಿಹಿ-ಕಹಿ, ಏರು-ಇಳಿವುಗಳ ದ್ವಂದ್ವದಲ್ಲಿ ಸಿಲುಕಿವೆ. **'ಬಾಳಿದು ಕನಸಲ್ಲ, ಗೋಳಿನ ತಿನಿಸಲ್ಲ'** ಎಂಬ ಅರಿವು ಕವಿಯ ನೋವಿನ ಮರೆವಿನಲ್ಲಿ ಮೂಡಿ ಬಂದಿದೆ. ಅಂತೆಯೆ ಜೀವನ **'ನನ್ನಿ ಹಿಗ್ಗಿನ ಹೂ ತೋಟ'**ವಾಗಿ ಕಾಣುತ್ತಿದೆ ಕವಿಯ ಕಣ್ಣಿಗೆ—ಎಂಬುದನ್ನು ಅರಿಯದೆ ನಾವು ಮರೆವಿಗೆ ಆಹ್ವಾನವಿತ್ತರೆ, ನಮ್ಮ ಬಾಳು ಗೋಳಿನ ತಿನಿಸಾಗುತ್ತದೆ. ಏರಿದಾಗ ಹಿಗ್ಗದೆ, ಇಳಿದಾಗ ಕುಗ್ಗದೆ ಧೀರರಾಗಿ ಸಾವಧಾನದಿಂದ ಬಾಳ ದಾರಿ ಕ್ರಮಿಸದಿದ್ದರೆ, ಜೀವನ ದುಃಖಮಯವೆಂಬುದನ್ನು ಮರೆವಿಗೆ ಅಂಟಿಸಿ ಬಿಡಲು ಯತ್ನಿಸುವ ಮಾನವನನ್ನು ಮರೆವು ಕಾಡಿ ಸದೆ ಬಿಡದು. ತನ್ನ ಲೋಪ-ದೋಷಗಳನೆಲ್ಲ ಮರೆವಿನ ಉಡಿಯಲ್ಲಿ ಚೆಲ್ಲಿ ಮುನ್ನೋಡಲು ಯತ್ನಿಸುವವನನ್ನು ಬೆನ್ನಟ್ಟಿ ಗಾಸಿಗೊಳಿಸದೆ ಬಿಡದು. **'ಬೇವಿನ ಕಹಿಬಾಳಿನಲ್ಲಿ ಹೂವಿನ ಸವಿ ಗಂಪ ಸೂಸಿ ಜೀವ ಕಳೆಯ ತರುತಿದೆ'** ಎಂಬುದನ್ನು ಅರಿಯುವಲ್ಲಿ, ಕಹಿಯನ್ನೂ ಸಿಹಿಯನ್ನಾಗಿಸಿ ಕೊಳ್ಳುವಲ್ಲಿ ಮರೆವಿನ ಮೂಲಧನ ಬೆಂಗಾವಲಿಗೆ ಇಲ್ಲದೆ ಗತಿಯಿಲ್ಲ ಮಾನವನಿಗೆ. **'ನಡೆವರೆಡಹದೆ ಕುಳಿತರೆಡಹುವರೆ?'** ಎಂಬ ರಾಘವಾಂಕನ ನಿಚ್ಚಳ ದೃಷ್ಟಿ ಮರೆವಿನಲ್ಲಿ ಮಾಯವಾದರೆ ಅದು ನಮ್ಮ ದೋಷ. ಎಡವಿ ಮುಗ್ಗರಿಸಿದಾಗ ಆದ ನೋವನ್ನು ಮರೆಯದೆ ಮನದಲ್ಲಿ ಮೆಲಕು ಹಾಕುತ್ತ ಮುನ್ನಡೆಯಲು ಹಿಂಜರಿದರೆ, ಅದು ಮಾನವನ ಮೂರ್ಖತನ. ಮರೆವಿಗೆ ಯೋಗ್ಯವಾದ ಸ್ಥಾನವನ್ನು ನಮ್ಮ ಜೀವನದಲ್ಲಿ ಕಲ್ಪಿಸಿಕೊಡದಿದ್ದಲ್ಲಿ ನಮ್ಮ ಬಾಳು ಹಾಳು. ಅಂತೆಯೆ ದುಃಖದ ಮಡುವಿನಲ್ಲಿ ಮುಳುಗೇಳುವ ಮಾನವನನ್ನು ಕೈ

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂಪಾದಕರು: ಶ್ರೀ. ಪಿ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.)
ಒಂದು ವರುಷದಲ್ಲಿ ಸುಂದರ ನಾಲ್ಕು ಪುಸ್ತಕಗಳು :
ಚಂದಾ ರೂ. ೫-೪-೦ (ಅಂಚೆವೆಚ್ಚ ಸಹಿತ)

ಈಗಾಗಲೇ ಮಾರಾಟಕ್ಕೆ ಸಿದ್ಧವಾದ ಪುಸ್ತಕಗಳು :—

"ಅರ್ಪಣ" ಮೋಪಾಸಾನ ಕತೆಗಳು (ಪಿ. ವೆಂಕೋಬಾಚಾರ್ಯ)
ರೂ. ೧—೮—೦
"ಪೂ ಅರಳಿತು" ತೆಲುಗು ಕತೆಗಳು ,, ,, ೨—೪—೦

ಈ ವರುಷ ಬರಲಿರುವ ಮುಂದಿನ ಎರಡು ಪುಸ್ತಕಗಳು

"ಮನೋರಾಜ್ಯ" ಪ್ರೊ. ರಂ. ಶ್ರೀ. ಮುಗಳಿ ಇವರ ನಾಟಕ
"ಪರಿಣಾಮ" ಶ್ರೀಮತಿ ಜಯಲಕ್ಷ್ಮೀ ಶ್ರೀನಿವಾಸನ್ ಇವರ
ಎರಡು ಚಿಕ್ಕ ಕಾದಂಬರಿಗಳು :
ಏಜಂಟರಿಗೆ, ಮಾರಾಟಗಾರರಿಗೆ ಹೆಚ್ಚಿನ ಸವಲತ್ತುಗಳು : ಬೇಗ
ಚಂದಾದಾರರಾಗಿರಿ : ವಿವರಗಳಿಗೆ ಬರೆಯಿರಿ.

ಆನಂದ ಗ್ರಂಥಮಾಲಾ
ಗವಳಿಗಲ್ಲಿ ಹುಬ್ಬಳ್ಳಿ,

ವ್ಯವಸ್ಥಾಪಕರು.
ಪಿ. ವಿ. ಆಚಾರ್ಯ ಕಂ.

ಹಿಡಿದು ಮೇಲಕೆತ್ತಿ ಸ್ವರ್ಗದ ದಾರಿ ತೋರುವ ಸುರಧೇನು ಈ ಮರೆವು; ನಿರಾಶೆಯ ಬಿರುಗಾಳಿಗೆ ಸಿಲುಕಿ ವಿಭ್ರಾಂತನಾಗಿ ಎತ್ತಲೋ ಸಾಗಿದ ಮಾನವನನ್ನು ಸ್ತಿಮಿತಕ್ಕೆ ತಂದು ನಿಶ್ಚಿತವಾದ ಸ್ಥಳಕ್ಕೆ ತಲುಪಿಸುವ ಚಾಳಕ್ಯನಾರಿ ಈ ಮರೆವು—ಎಂಬುದನ್ನು ಮಾನವನು ಮರೆಯಕೂಡದು.

ಮರೆವು ಕ್ಷಣಕಾಲ ಮಾಯವಾದರೂ ಮಾನವನ ಗೋಳು ಹೇಳತೀರದು. ದುಃಖ, ದಾರಿದ್ರ್ಯ, ಅಡೆತಡೆಗಳು ತಂಡ ತಂಡವಾಗಿ ಬಂದು ಮಾನವನನ್ನು ಮುತ್ತಿ ಕಾಡಿಸುತ್ತವೆ; ಮುಂಗಾಣದವನನ್ನಾಗಿಸುತ್ತವೆ. ಸಾವು ತಾಂಡವವಾಡುತ್ತದೆ ಇದಿರು. ವಿವೇಕ ವಿಚಾರಗಳು ಇಲ್ಲವಾಗಿ ಜೀವನವೇ ಶೂನ್ಯವಾಗಿ ಕಾಣುತ್ತದೆ. ಆಗ ಮಾನವನು ಚುಕ್ಕಾಣಿಯಿಲ್ಲದ ಹಡಗವಾಗಿ ಮುಳುಗುವುದೇ ಮುಕ್ತಿಯೆಂದು ಬಗೆಯಬೇಕಾಗುತ್ತದೆ. ಕರ್ತವ್ಯಕರ್ಮಗಳು, ಸಂಸಾರ ಬಂಧನಗಳು ಸದಾ ಮುಳ್ಳಿನಂತೆ ಚುಚ್ಚಿ ಮಾನವನನ್ನು ವಿಧವಿಧವಾಗಿ ಹಿಂಸಿಸುತ್ತವೆ. ಆ ಹಿಂಸೆ ತಾಳದೆ ಹೇಸಿಕೊಂಡು ಜೀವನ್ಮುಕ್ತನಾಗಬಯಸುತ್ತಾನೆ. ಆಗಲೂ ಐಹಿಕವಾದ ವಿಷಯೋಪಭೋಗಗಳ, ಧನಕನಕ ಪುತ್ರಕಳತ್ರಾದಿಗಳೆಲ್ಲವನು ಮರೆಯದೆ ಸಾವು ಸುಖವಾಗಿ ಬರದು ರವೀಂದ್ರರು ಹೇಳುವಂತೆ 'ಸಾವಿನ ಭೀಕರ ಸ್ವರೂಪ ಮರೆದು, ಸ್ವಾಗತಿಸ ಬಯಸುವವನನ್ನು ಸಾವು ತಟ್ಟದು ಕೂಡ' ಎಂಬುದು ಸತ್ಯವಾದ ಮಾತಾಗಿದೆ.ಅಂತೆಯೇ ಎಂತಿದ್ದರೂ ಮರೆವಿಗೆ ಶರಣು ಹೋದಾಗಲೆ ಅವನಿಗೆ ಮುಕ್ತಿ. ಪಾಪಪುಣ್ಯಗಳ ಈ ಲೌಕಿಕ ಜೀವನ ಸಂಪೂರ್ಣವಾಗಿ ಮರೆದು ದೇವರಲ್ಲಿ ಅನನ್ಯಭಕ್ತಿಯಿಂದ ತನ್ನನ್ನು ತಾನೇ ಮರೆತು ನಿಂತಾಗಲೇ ಮು[ಕ್ತಿ] ತಾನಾಗಿಯೇ ತೆರೆಯುತ್ತದೆ. ಅವನಿಗಾಗಿ ಸಂಸಾರ ಬಂ[ಧನ] ಕಿತ್ತೊಗೆದು ಬಾಹ್ಯಜಗವನ್ನು ಮರೆತು ಅಂತರ್ಮು[ಖ] ಧ್ಯಾನದಲ್ಲಿ ಮಗ್ನನಾಗಿ ಅಂತರ್ಯಾಮಿಯನ್ನು ಕಾ[ಣು]ವಾಗ ಆ ದಿವ್ಯ ಅರಿವು ಮೂಡಿಬಂದು ಬ್ರಹ್ಮಾನಂದ [ಸಂ]ವೇದ್ಯವಾಗುತ್ತದೆ. ಪರಿಭಕ್ತರಾದ ದಾಸರುಗಳೆಲ್ಲ **ನಿನ್ನದೊ, ಮನ ನಿನ್ನದು', 'ಇಟ್ಟಾಗ** ಇರ[ಲಿ] **ಹರಿಯೆ', 'ತಂದೆ ತಾಯಿಯು ನೀನೆ ಬಂಧುಬಳಗವು** ಎಂದು ಅನನ್ಯಭಾವದಿಂದ ಎಲ್ಲ ಮರೆದು ಹರಿಯಲ್ಲಿ ಹೋದವರೆಂದೇ ಮುಕ್ತಿಪಡೆದರು; ಆದರ್ಶ ಭಗವದ್ಭ[ಕ್ತರಾ]ದರು. ಶಿವಶರಣರು ಕೂಡ '**ಅಯ್ಯಾ, ಅಯ್ಯಾ ಒರಲುತ್ತಲಿದ್ದೇನೆ, ಅಯ್ಯಾ ಅಯ್ಯಾ ಎಂದು** ಕೊರ[ಗುತ್ತ]**ಲಿದ್ದೇನೆ'** ಎಂದು ದೀನವಾಗಿ ಪ್ರಾರ್ಥಿಸಿ '**ಅತ್ತಲಿತ್ತ** ಚಲಿ[ಸದಂತೆ] **ಹೆಳವನ ಮಾಡಯ್ಯ ತಂದೆ! ಅತ್ತಲಿತ್ತ** ನೋ[ಡದಂತೆ] **ಅಂಧಕನ ಮಾಡಯ್ಯ ತಂದೆ'** ಎಂದು ಅರಿಷಡ್ವರ್ಗ[ಗಳ] ಮರೆವ ನೀಡಲು ಯಾಚಿಸಿ ಕೂಡಲಸಂಗನ ದಿವ್ಯದರ್ಶ[ನ] ತಮ್ಮ ಸರ್ವಸ್ವವನ್ನು ಧಾರೆಯಾಗಿತ್ತಾಗಲೇ ಆ ಜ್ಯೋತಿ[ರ್]ಲಿಂಗಾಂಗಧಾರಿಯಾದ ಪರಮೇಶ್ವರನ ದರ್ಶನಪಡೆದು ಐ[ಕ್ಯ]ದರು ಅವನಲ್ಲಿ.

ಭಾವಜೀವಿಗಳಾದ ಕವಿಗಳು ಸೌಂದರ್ಯೋಪಾಸ[ನೆಯಲ್ಲಿ] ತಲ್ಲೀನರಾಗಿ ಎಲ್ಲ ಮರೆದು ಕಾವ್ಯಸಮಾಧಿ ಹೊಂದಿದಾ[ಗ] ಕಾವ್ಯ ಕವಿಹೃದಯಗಳಿಂದ ಹೊರ ಹೊಮ್ಮಿದುವು. ಅಂ[ತೆ] ಕವಿ ಮರೆವಿಗೆ ಮೊರೆ ಹೋಗದೆ ಕಾವ್ಯ ಉದಯಿಸದು. ತನ್ನತನವನ್ನು, ತೀಕ್ಷ್ಣ ವಿಮರ್ಶಕ ಬುದ್ಧಿಯನ್ನು ಕ್ಷಣ[ಕಾಲ] ಬದಿಗಿರಿಸಿ ಮರೆಯದ ಹೊರತು ಕಾವ್ಯದಲ್ಲಿ ಕವಿಯದರ್ಶನವಾ[ಗದು.] ಕವಿಯ ಮಧುರಭಾವಗಳ ರಸದೂಟ ದೊರೆಯದು. ಸಾ[ಹಿತ್ಯ] ಶಾರದೆಯ ಆರಾಧಕನು ತನ್ನ ದುಃಖ-ದುಗುಡಗಳನ್ನು ಪ[ಕ್ಕ]ದಲ್ಲಿರಿಸಿ ಹೊರಗಣ್ಣುಗಳ ಮುಚ್ಚಿ ಕಲ್ಪನೆಯ ಒಳ[ಗಣ್ಣು] ತೆರೆದು ದಿವ್ಯ ಭವ್ಯವಾದ ಜೀವನದ ವಿರಾಟ್‌ರೂಪವನ್ನು ಕಾ[ಣದ] ವಿನಾ ಅವನ ಸಾಹಿತ್ಯ ಜೀವನದ ಪ್ರತಿಬಿಂಬವಾಗದು. ಸಜೀ[ವ]ವಾಗಿ ಚಿರಕಾಲ ಬಾಳದು. ಸತ್ಯದ ಗರ್ಭದಲ್ಲಿ ಅಡಗಿದ ಸೌಂದ[ರ್ಯ]ವನ್ನು ಗುರುತಿಸಿ ಕಲೆಯ ರೂಪದಲ್ಲಿ ಎರಕಹೊಯ್ಯುವ ಕಲ[ಗಾರ]ದನು, ಜೀವನದ ಕುರೂಪತೆಯನ್ನು ಮರೆಯದೆ ಕಲಾಸೃಷ್ಟಿ[ಯಾ]ಗದು. ಗಮಕಿಯು ಸ್ವರಶ್ರುತಿಯ ಏಕನಾದದಲ್ಲಿ ಲೀನನಾ[ಗದೆ] ಕರ್ಣಾಮೃತ ಸಂಗೀತ ಕೇಳಬರದು. ಶ್ರೋತೃಗಳು ಎಲ್ಲವ[ನ್ನು] ಮರೆದು ತದೇಕಚಿತ್ತರಾಗಿ ಆಲಿಸದೆ ಸಂಗೀತದ ಸೊಬಗು ದೊರೆಯದು. ಇಂತು ಜೀವನದಲ್ಲಿ ಮರೆವು ಮಿಂಚಿ ಮೂಡಿದಾ[ಗ] ಕವಿಹೃದಯ ಕುಣಿಯುವುದು. ರಸಿಕರ ಹೃದಯ ತಣಿಯುವು[ದು.] ಕಲಾವಿದನ ಕುಂಚ ಜೀವನಸೌಂದರ್ಯವನ್ನು ಅರಳಿಸಿ ಸೌಂದರ್ಯಾರಾಧಕರ ಮನ ತಣಿಸಬಲ್ಲದು. ಗಮಕಿಯ

…ಣೆ ನುಡಿದು, ಭಾವದಲೆಗಳು ರಾಗತರಂಗಗಳಾಗಿ ಹರಿದು …ಂದು, ಗಾನಗಂಗೆಯಾಗಿ ಅವತರಿಸಿ, ಶ್ರೋತೃಗಳ ತಣಿಸಿ …ಪಾವನಗೆಯ್ಯಬಲ್ಲುದು.

ದೇವರು ನಿರ್ಗುಣ, ನಿರಾಕಾರನೆಂತೋ ಅಂತೆಯೇ ಸಗುಣ …ಕಾರನೂ ಆಹುದು. ಜ್ಞಾನಿಗಳಿಗೆ ನಿರ್ವಯಲಾಗಿ ತೋರಿದರೆ, …ಕರಿಗೆ ಜ್ಯೋತಿರ್ಲಿಂಗನಾಗಿ ಕಾಣುವನು. ಅಂತೆಯೆ ಮರೆವು …ನವನು ಕಾಣುವ ಬಗೆಯಲ್ಲಿ ರೂಪತಳೆದು ನಿಲ್ಲುತ್ತದೆ. …ವು ಅರ್ಧನಾರೀನಟೇಶ್ವರನಂತಿದೆ. ಶಿವನರ್ಧ ಭಾಗವನ್ನೇ …ಪಿಸಿ ಜಗನ್ಮಂಗಳಕಾರಿಣಿಯಾಗಿ ನಿಂತ ಪಾರ್ವತಿಯ ಕೃಪಾ…ಷ್ಟಿಯೂ ಅಲ್ಲಿದೆ. ಇನ್ನರ್ಧಭಾಗವನ್ನು ಆಕ್ರಮಿಸಿನಿಂತ …ಯುತಾಂಡವಮೂರ್ತಿ ಶಿವನ ಸಂಹಾರಕತೆಯೂ ಅದರಲ್ಲಿ …ಡುಗಿದೆ. ತಾಯ ವಾತ್ಸಲ್ಯವೂ ಇದೆ; ತಂದೆಯ ಕೋಪ…ಠಿಣ್ಯಗಳೂ ಇವೆ. ಅಂತೆಯೆ ಮರೆವಿನ ಬಗೆಯರಿತು ನಾವು …ನ್ನು ಪೂಜಿಸಬೇಕು. ಇಲ್ಲವಾದಲ್ಲಿ ಡಾಂಭಿಕನ ಪೂಜೆಯಂತೆ …ಫಲವಾಗಬಹುದು. ಮಾನವರಾದ ನಾವು ನಮ್ಮ ಅಳವರಿತು, …ಮಿತಿಗಳ ತಿಳಿದು ನಮ್ಮ ಕರ್ತವ್ಯಕರ್ಮಗಳನ್ನು ಸರಿಯಾಗಿ …ವೇರಿಸುವಲ್ಲಿ ಮರೆದರೆ ನಾಶ ನಿಶ್ಚಿತ. ಇದ್ದಲೋಪದೋಷ…ನ್ನು ಅಡಗಿಸಿಟ್ಟುಕೊಂಡು ಬಯಲು ಡಂಭಾಚಾರಗಳಾಗಿ ಮರೆ… ಸೋಗು ಹಾಕಿದರೆ ಪ್ರಗತಿಯಿಲ್ಲ. ಮಾನವ-ಮಾನವರಲ್ಲಿ …ಬಿಗೆ, ವಿಶ್ವಾಸ, ಸ್ನೇಹಾದರಗಳು ಮರೆವಿನಿಂದ ಮಾಯವಾದರೆ …ನವಕುಲಕ್ಕೆ ಶಾಂತಿಯಿಲ್ಲ. ದ್ವೇಷಾಸೂಯೆಗಳನ್ನು ಮರೆವಿನಡಿ…ಲ್ಲಿ ತುಳಿಯದೆ ಮಾನವನಿಗೆ ನೆಮ್ಮದಿಯಿಲ್ಲ. ಸ್ವಾರ್ಥವನ್ನು …ರೆತು ಪರಾರ್ಥದಲ್ಲಿ ದೇಹವಿಡುವ ಅರಿವು ಮೂಡದ ವಿನಾ …ಕಲ್ಯಾಣವಿಲ್ಲ. ಒಬ್ಬರನ್ನೊಬ್ಬರು ತುಳಿದು ಬಾಳುವ ದಾನವ …ತ್ತಿಯನ್ನು ಇಂದು ಮಾನವನು ಮರೆತು, ನಮ್ಮನ್ನೆಲ್ಲ ತುಳಿದು …ತಳಕ್ಕಟ್ಟಬಲ್ಲ ಮಹಾಶಕ್ತಿಯೊಂದಿವೆಯೆಂಬುದನ್ನು ಅರಿತರೆ …ಶಾಂತಿ ತಲೆದೋರಬಲ್ಲದು. ಇಂತು ದಾನವತೆ ಮರೆದು …ಂದಾದಾಗ ಮಾನವತೆ ಮೂಡುತ್ತದೆ. ಮಾನವತೆ ಮರೆದು …ಧೋಗತಿಗೆ ಇಳಿದಾಗ ದಾನವತೆ ಬಂದು ನಿಲ್ಲುತ್ತದೆ. ಒಮ್ಮೆ ಮರೆವು …ವನದಲ್ಲಿ ಕೈದೀವಿಗೆಯಾಗಿ ಬಂದು ಮನ್ನಡೆಸಿಕೊಂಡೊಯ್ದರೆ …ಮ್ಮೆ ನುಸುಳಿ ಬಂದು ಸಂಕಟಗಳ ಪರಂಪರೆಯಲ್ಲಿ ಮುನ್ನೂಕಿ…ತ್ತದೆ. ಒಮ್ಮೆ ಮರೆವು ಅರಿವಿನ ಅರುಣನಾಗಿ ಬಂದು ಬೆಳಗಿ… ಇನ್ನೊಮ್ಮೆ ಮರೆವು ಮಾರಕವಾಗಿ ಬಂದು ಸರ್ವನಾಶ…ತ್ತದೆ. ಅಂತೆಯೆ ಮರೆವಿನ ಮಾಯೆಯಲ್ಲಿ ಸಿಲುಕಿ …ಗನಸುಗಳ ಕಾಣುವಲ್ಲಿಯೇ ಮೈಮರೆದರೆ, ಮಾನವನ ಪ್ರಗತಿ …ಧ್ಯವೆ ಸರಿ. ಅದುವೇ ದೈನ್ಯದೌರ್ಬಲ್ಯಗಳ ಮರೆವು ಮುಂದಿನ …ಯ ಹೆದ್ದಾರಿಯೆಂಬುದೂ ಸರಿ. ಪ್ರಣಯಿಗಳ ಮರೆವು ವಿರಹದುಃಖಕ್ಕೀಡು ಮಾಡಿದರೂ, ಆ ವಿರಹದುಃಖದ ಮರೆವು ಒಲವನ್ನು ಪವಿತ್ರವಾಗಿಸಿ ಹೃದಯಸಮ್ಮಿಲನವಾಗಿಸಬಲ್ಲದು. ಇಂತು ಅವನತಿ ಸೋಲುಗಳ ಮರೆವು, ಅಭ್ಯುದಯ ಗೆಲವುಗಳ ಅರಿವಿನೊಡನೆ ಹೊಂದಿ ನಡೆದಾಗ, ಮಾನವಜೀವನ ಪೂರ್ಣ ವಿಕಸಿತವಾಗಿ ಸೌರಭ ಸೂಸಬಲ್ಲದು.

ಮಾನವನಲ್ಲಿ ಮರೆವು ಕಾಣುತ್ತೇವೆ ನಿಜ. ಆದರೆ ಮಾನವನಾಗಿ ನಿಂತುದೇ ಮರೆವಿನಿಂದೆಂಬುದೂ ಅಷ್ಟೇ ನಿಜ. ಮರೆವು ಎಲ್ಲ ಪ್ರಾಣಿಗಳಿಗಿಂತ ಮಾನವನಲ್ಲಿ ಹೆಚ್ಚು ರೂಢಿಸಿಬಂದಿದೆ, ನೆಚ್ಚಿಬಂದಿದೆ. ಒಂದು ವೇಳೆ ಮರೆವು ಮಾನವನ ಜೀವನದಲ್ಲಿ ಇಷ್ಟು ಬೃಹದಾಕಾರ ತಾಳಿ ಕಾಣಿಸಿಕೊಳ್ಳದಿದ್ದರೆ, ಮಾನವನು ಪುನಃ ಮಂಗನಾಗಬಹುದಿತ್ತೇನೊ! ಇಂದು ಮಾನವನು ತನ್ನ ಸ್ವಾರ್ಥ, ಆಶೆ, ಆಕಾಂಕ್ಷೆಗಳಿಗಾಗಿ ಪಶುತ್ವವನ್ನವಲಂಬಿಸಿದ್ದರೂ, ತನ್ನಲ್ಲಿ ಪಶುತ್ವ ಸಾಕಷ್ಟಿದೆಯೆಂಬುದನ್ನು ಅರಿತಿದ್ದರೂ, ಅದೆಲ್ಲವನ್ನೂ ಮರೆತು ಏನನ್ನೂ ಅರಿಯದವನಂತೆ ನಟಿಸುವನೆಂದೇ ಮಾನವನಾಗಿ ಕಾಣಿಸಿಕೊಳ್ಳುತ್ತಿದ್ದಾನೆ. ಮರೆವು ಇಲ್ಲದಾಗ, ಮಾನವರೆಲ್ಲ ಆತ್ಮನಿರೀಕ್ಷಣೆ ಮಾಡಿಕೊಳ್ಳುವಲ್ಲಿ ತೊಡಗಿದ್ದರೆ, ಎಷ್ಟು ಜನ ಮಾನವರಾಗಿ ಉಳಿಯುತ್ತಿದ್ದರೋ ಸಂದೇಹ. ಆದರೆ ಮರೆವಿನ ವಜ್ರಾಯುಧವನ್ನು ವರವಾಗಿ ಪಡೆದ ಮನುಷ್ಯನು, ಎಲ್ಲವನ್ನೂ ತುಳಿದು ಮಾನವನಾಗಿ ಮೆರೆಯುತ್ತಿದ್ದಾನೆ. ಎಂದು ಮಾನವನು, ಅನ್ಯರ ಹುಳುಕು ಕೊಳಕುಗಳನ್ನೂ ಲೋಪದೋಷಗಳನ್ನೂ ಹೊರಗೆಳೆದು ಕೀಳಾಗಿ ಕಾಣುವುದಿಲ್ಲವೋ, ಎಂದು ತನ್ನ ಕೊಳೆ ಹೊರಚೆಲ್ಲಿ ಎಲ್ಲ ಮರೆತು ಮುಂದೆ ಸಾಗುವನೋ, ಅಂದು ಅವನ ಬಾಳಿನಲ್ಲಿ ಬೆಳಗು; ಅರಿವಿನ ಅರುಣೋದಯ. ಅಂತೆಯೇ ಕವಿಪಂಪನ ಮಹಾಭಾರತದಲ್ಲಿ, ಕವಿವ್ಯಾಸರ ದುರ್ಯೋಧನನು ರಣರಂಗದ ರುದ್ರಸ್ಮಶಾನದಲ್ಲಿ ಒರಗಿದ ವೀರ ಅಭಿಮನ್ಯುವಿನ ಮೃತದೇಹ ಕಂಡು ಕಂಬನಿ ಮಿಡಿದಾಗ, ಎಲ್ಲ ದ್ವೇಷಾಸೂಯೆ ವೈರತ್ವಗಳ ಮರೆವು ತುಂಬುಹೃದಯದಿಂದ ಗುಣಗಾನ ಗೈದಾಗ ಸುಯೋಧನನಾಗಿ, ಆದರ್ಶಮಾನವನಾಗಿ ಕಂಗೊಳಿಸುತ್ತಾನೆ. ಇಂತು ಮರೆವು ಮಾನವನಲ್ಲಿಯ ಕಸಕೊಳೆಯನ್ನೆಲ್ಲ ಕ್ಷಣಕಾಲವಾದರೂ ಮಾಯವಾಗಿಸಿ ದೇವತ್ವದ ಪಾವಿತ್ರ್ಯವನ್ನು ತಂದು ಪ್ರತಿಷ್ಠಾಪಿಸುತ್ತದೆ ಅವನ ಹೃನ್ಮಂದಿರದಲ್ಲಿ. ಆದುದರಿಂದಲೇ ಮಾನವನಿಗೆ ಮರೆವು ಬೇಕು. ಮರೆಯಬೇಕಾದುದನ್ನು ಮರೆತು ಉಳಿಸಿಕೊಳ್ಳಬೇಕಾದುದನ್ನು ಅರಿತರೆ, ಮಾನವನು ಬಾಳಬೆಳಗಿಕೊಳ್ಳಬಲ್ಲ. ಯುದ್ಧ-ಅಶಾಂತಿಗಳ ಚಕ್ರದಲ್ಲಿ ಸಿಲುಕಿ ಜರ್ಜರಿತನಾಗುತ್ತಿರುವ ಇಂದಿನ ಮಾನವನು ಹಿಂದಿನದೆಲ್ಲವನ್ನು ಮರೆತು ಮುಂದಿನ ದಾರಿಯನ್ನು ಕಾಣುವಲ್ಲಿಯೇ ವಿಶ್ವದ ಶಾಂತಿ-ಸುಖಗಳನ್ನು ಪಡೆಯಬಲ್ಲ.

ಪಿತೃಹೃದಯ

(ಸಣ್ಣ ಕತೆ) *

ಶ್ರೀ. ಮೋಹನ್ ರಾವ್, ಧಾರವಾಡ

★

ಮಾನವನು ತನ್ನ ದೃಷ್ಟಿಯನ್ನು ತ್ಯಜಿಸಿ ಇತರರ ದೃಷ್ಟಿಯಿಂದಲೂ ನೋಡಲು ಸಮರ್ಥನಾಗಿದ್ದರೆ, ಜಗತ್ತಿನಲ್ಲಿ ಒದಗುವ ಕುತ್ತಗಳಲ್ಲಿ ಬಹುಭಾಗದ ನಿವಾರಣೆಯಾಗುತ್ತಿತ್ತು.

卐

"ಟಾಂಗಾವಾಲಾ ಅಲಿಬಾಬಾ"…. …. ಅಂಚೆಯವನು ಒಂದೊಂದೇ ಹೆಸರನ್ನು ಓದುತ್ತಿದ್ದನು.

ಮುದುಕನು ಥಟ್ಟನೆ ಎದ್ದನು; ಆಗಸದೆಡೆಗೆ ಶ್ರದ್ಧೆಯದೃಷ್ಟಿಯನ್ನು ಬೀರುತ್ತ ಕಿಟಕಿಯ ಮೇಲೆ ಕೈಯಿಟ್ಟನು.

"ಗೋಕುಲ್!"

"ಯಾರು?"

"ಪತ್ರ ನನಗಿಲ್ಲವೇ?……. ನಾನು ಬಂದಿರುವೆ"

ಗೋಕುಲನ ಉತ್ತರದಲ್ಲಿ ನಿಷ್ಠುರ ವ್ಯಂಗ್ಯಪೂರ್ಣ ಹಾಸ್ಯವು ಕಂಡುಬರುತ್ತಿತ್ತು.

"ಸ್ವಾಮಿ, ಅವನೊಬ್ಬ ಹುಚ್ಚು ಮುದುಕ; ಪ್ರತಿದಿನವೂ ಪತ್ರಗಳ ಪ್ರತೀಕ್ಷೆಯಲ್ಲಿರುತ್ತಾನೆ"— ಅಂಚೆಯವ ಪೋಸ್ಟ್‌ಮಾಸ್ತರರೊಡನೆಂದ. ಇಷ್ಟರಲ್ಲಿ ಮುದುಕ, ಪುನಃ ತನ್ನ ಸ್ಥಳದಲ್ಲಿ ಹೋಗಿ ಕುಳಿತಿದ್ದನು. ಐದು ವರುಷಗಳಿಂದ ಈ ಸ್ಥಳದಲ್ಲಿ ಕೂಡುವುದು ಅವನ ವಾಡಿಕೆಯಾಗಿತ್ತು.

ಹಿಂದೆ ಅಲಿ ಬೇಟೆಗಾರರಲ್ಲಿ ಅಗ್ರಗಣ್ಯನೆನಿಸಿದ್ದ. ದಿನಕ್ಕೊಮ್ಮೆಯಾದರೂ ಬೇಟೆಯಾಡದಿದ್ದರೆ ನಿದ್ದೆ ಹತ್ತುತ್ತಿರಲಿಲ್ಲ ಅವನಿಗೆ. ಎಲ್ಲಾದರೂ ಗೌಜಲಹಕ್ಕಿಯು ಆತನ ಕಣ್ಣಿಗೆ ಬಿದ್ದಿತೆಂದರೆ ಸರಿ, ಮರುಕ್ಷಣವೇ ಅದು ಆತನ ಕೈಸೇರುತ್ತಿತ್ತು. ಆತನ ತೀಕ್ಷ್ಣದೃಷ್ಟಿಯು ಮೊಲಗಳ ಬಿಲಗಳಿಗೆ ಅತಿ ಸುಲಭವಾಗಿ ನುಸುಳುತ್ತಿತ್ತು. ಮೊಲದ ಬೇಟೆ ಸುಲಭವಲ್ಲ; ಅದು ಕಿವಿದೆರೆದು ಹೊದರುಗಳಲ್ಲಿ ಅಡಗಿತೆಂದರೆ, ಬೇಟೆನಾಯಿಗಳೂ ಅದನ್ನು ಹಿಡಿಯಲಾರವು. ಆದರೆ ಇರುಳಲ್ಲಿ ಸಂಚರಿಸುವ ಬೆಕ್ಕಿನ ಕಣ್ಣುಗಳಂತಿರುವ ಅಲಿಯ ತೀಕ್ಷ್ಣದೃಷ್ಟಿ, ನೇರಾಗಿ ಮೊಲದ ಕಿವಿಗಳ ಮೇಲೆ ಬೀಳುತ್ತಿತ್ತು. ಇನ್ನೊಂದು ಗಳಿಗೆಯಲ್ಲಿ ಮೊಲ ಅವನ ಕೈಯಲ್ಲಿ!

ಆದರೆ ವಯಸ್ಸು ಹೆಚ್ಚಿದಂತೆ ಅವನ ಬೇಟೆಗಾರಿಕೆ ಕ್ಷೀಣಿಸ ಸಾಗಿತು. ಅವನ ಸರ್ವಸ್ವವಾದ ಒಬ್ಬಳೇ ಮಗಳು— ಖತೀ[illegible] ಮದುವೆಯಾಗಿ ಗಂಡನ ಮನೆ ಸೇರಿದಳು. ಅವಳ ಗಂಡನಿಗೆ ಸೈ[illegible] ದಲ್ಲಿ ಕೆಲಸವಾಗಿದ್ದುದರಿಂದ, ಆಕೆ ಆತನೊಂದಿಗೆ ಪಂಜಾಬಿ[illegible] ಹೋಗಿದ್ದಳು. ಪುನಃ ಅವಳನ್ನು ನೋಡುವ ಒಂದೇ ಒ[illegible] ಆಶೆಯು ಅಲಿಯನ್ನು ಇನ್ನೂ ಉಳಿಸಿದ್ದಿತು. ಆದರೆ, [illegible] ವರುಷಗಳು ಕಳೆದರೂ ಆಕೆಯ ಪತ್ರವೇ ಇಲ್ಲ! ಸ್ನೇಹ-ವಿ[illegible] ಗಳೆಂದರೇನೆಂದು ಈಗ ತಿಳಿಯಿತು ಅಲಿಗೆ. ಹಿಂದೆ ಅವನು ಗೌ[illegible] ಹಕ್ಕಿಯ ಮರಿಗಳು ವ್ಯಾಕುಲತೆಯಿಂದ ಅತ್ತಿತ್ತ ಹಾರುವುದ[illegible] ನೋಡಿ ನಗುತ್ತಿದ್ದನು; ಇದು ಅವನ ಬೇಟೆಯ ಒ[illegible] ಆನಂದವಾಗಿತ್ತು. ಈ ಆನಂದ ನುಡಿಗಳ ರೂಪದಲ್ಲಿ ಹೊ[illegible] ಹೊಮ್ಮುತ್ತಿತ್ತು.

ಆದರೆ ಎಂದು ಖತೀಜಾ ಹೋದಳೋ, ಎಂದು ಅಲಿ[illegible] ಬಾಳು ಬರಿದಾಯಿತೋ, ಅಂದಿನಿಂದ ಅವನು ಬೇಟೆಯ[illegible] ಮರೆತು, ನೆಟ್ಟ ನೋಟದಿಂದ ಛತ್ತದ ತೆನೆಗಳು ಮೊಳೆತ ಗ[illegible] ಗಳನ್ನು ನೋಡುತ್ತ ಕೂಡುತ್ತಿದ್ದನು. ಅವನಿಗೆ ಆಗ ಮೊ[illegible] ಬಾರಿ ಮನವರಿಕೆಯಾಯಿತು:— ಪ್ರಕೃತಿಯಲ್ಲಿ ಸ್ನೇಹದೃಷ್ಟಿಯ[illegible] ವಿರಹಬಾಷ್ಪಗಳೂ ಇವೆಯೆಂದು! ಇದರ ಬಳಿಕ ಒಂ[illegible] ಮುಂಜಾನೆ ಅಲಿ ಮಾವಿನ ಮರವೊಂದರ ಬುಡದಲ್ಲಿ ಕು[illegible] ಎದೆಬಿಚ್ಚಿ ಅತ್ತನು. ಅಂದಿನಿಂದ ಅವನು ಪ್ರತಿದಿನವೂ ಬೆ[illegible] ನಾಲ್ಕು ಗಂಟೆಗೆದ್ದು ಅಂಚೆಮನೆಗೆ ಹೋಗುತ್ತಿದ್ದನು. ಅ[illegible] ಹೆಸರಿನ ಪತ್ರವಾದರೋ ಒಮ್ಮೆಯಾದರೂ ಬರುತ್ತಿರಲಿಲ್ಲ. ಆದ[illegible] ತನ್ನ ಮುದ್ದು ಖತೀಜಳ ಪತ್ರವು ಒಂದಲ್ಲೊಂದು ದಿನ ಬಾ[illegible] ದಿರದೆಂಬ ಶ್ರದ್ಧೆಯಿಂದಲೂ, ಆಶಾಪೂರ್ಣ ಉಲ್ಲಾಸದಿಂದ[illegible] ಅವನು ಪ್ರತಿದಿನ ಎಲ್ಲರಿಗಿಂತ ಮುಂಚಿತವಾಗಿ ಅಂಚೆಮ[illegible] ಹೋಗಿ ಕೂಡುತ್ತಿದ್ದನು.

ಅಂಚೆಮನೆ— ಪ್ರಾಯಶಃ ಜೀವನದಲ್ಲಿ ಅದಕ್ಕಿಂತ ನೀರ[illegible] ವಾದ ಸ್ಥಳವು ಬೇರೊಂದಿರಲಿಕ್ಕಿಲ್ಲ!— ಆತನ ಧರ್ಮಕ್ಷೇ[illegible] ತೀರ್ಥಸ್ಥಾನವಾಗಿತ್ತದು. ಒಂದೇ ಮೂಲೆಯಲ್ಲಿ, ಒಂದೇ ಸ್ಥಳದ[illegible] ಅವನು ಪ್ರತಿದಿನವೂ ಕೂಡುತ್ತಿದ್ದನು. ಹಲವರು ಆತನ[illegible] ಗೇಲಿಮಾಡುತ್ತಿದ್ದರು; ಒಮ್ಮೊಮ್ಮೆ ಪರಿಹಾಸ್ಯಕ್ಕಾಗಿ ಅವ[illegible] ಪತ್ರಬಂದಿದೆಯೆಂದು ಹೇಳಿ, ಅಂಚೆಯ ಕಿಟಕಿಯ ವರೆಗೆ ಓಡಿಸ[illegible] ತ್ತಿದ್ದರು ಬಡಪಾಯಿಯನ್ನು. ಆದರೂ, ಅಖಂಡ ಶ್ರ[illegible] ಯಿಂದಲೂ, ಅನಂತ ತಾಳ್ಮೆಯಿಂದಲೂ ಅವನು ಪ್ರತಿದಿನ ಬಂ[illegible] ಬರಿಗೈಯಲ್ಲಿ ಮರಳುತ್ತಿದ್ದನು.

* * * *

ಅಲಿ ಕುಳಿತಿದ್ದನು. ಒಬ್ಬನ ಬಳಿಕ ಒಬ್ಬ ಆಳು ತಂತ[illegible] ಅಧೀಕರನ ಪತ್ರಗಳನ್ನು ಪಡೆಯಲು ಬರತೊಡಗಿದನು. ಒಬ್ಬ[illegible] ತಲೆಗೆ ಮುಂಡಾಸು, ಇನ್ನೊಬ್ಬನ ಕಾಲಿಗೆ ಬಣ್ಣಬಣ್ಣ[illegible] ಜೋಡು, ಮತ್ತೊಬ್ಬನ ಎದೆಯ ಮೇಲೆ ದೊಡ್ಡದೊಂದು ಬಿಲ್ಲೆ—

---

* ಗುಜರಾತಿ ಕತೆಯೊಂದರ ಅನುವಾದ. —ಸಂ. ಜ.

ಈ ರೀತಿ ಪ್ರತಿಯೊಬ್ಬನೂ ತಂತನ್ನ ವೈಶಿಷ್ಟ್ಯವನ್ನು ಪ್ರದರ್ಶಿಸು-ವಂತಿತ್ತು. ಅಷ್ಟರಲ್ಲಿ ಬಾಗಿಲು ತೆರೆಯಿತು. ಒಳಗಡೆ ಇರುವ ಕುರ್ಚಿಯಲ್ಲಿ, ಕಹಿಸೋರೆಯಂಥ, ದುಃಖ-ಉದಾಸೀನತೆಗಳಿಂದ ತುಂಬಿದಂತಿರುವ ಮೋರೆಯೊಡನೆ ಕುಳಿತಿದ್ದರು ಪೋಸ್ಟ್-ಮಾಸ್ಟರ್; ಹಣೆಯಲ್ಲಿ, ಮುಖದಲ್ಲಿ, ಕಣ್ಣುಗಳಲ್ಲಿ ಕೇಜೋಹೀನ-ಯು ಅಚ್ಚೊತ್ತಿದಂತಿರುವ ಆ ಪ್ರಾಣಿ ಪೋಸ್ಟ್‌ಮಾಸ್ಟರ್!

ಆಲಿ ತನ್ನ ಸ್ಥಳದಿಂದ ಕದಲಲಿಲ್ಲ.

"ಪೋಲೀಸ್‌ಕಮಿಶನರ್"— ಅಂಚೆಯವ ಗಟ್ಟಿಯಾಗಿ ಕೂಗಿದ. ಅಭಿಮಾನಿ ಯುವಕನೊಬ್ಬನು ಎದೆಯುಬ್ಬಿಸಿಕೊಂಡು ಪೋಲೀಸ್‌ಕಮಿಶನರರ ಪತ್ರಗಳನ್ನು ತೆಗೆದುಕೊಳ್ಳಲು ಕೈಚಾಚಿದ.

"ಸೂಪರಿಂಟೆಂಡೆಂಟ್."

ಇನ್ನೊಬ್ಬ ಆಳು— ಇದೇ ರೀತಿ ಅಂಚೆಯವನು, ಪ್ರತಿನಿತ್ಯವೂ ವಿಷ್ಣುಭಕ್ತನಂತೆ ಸಹಸ್ರನಾಮಾವಲಿಯನ್ನು ಪಠಿಸುತ್ತಿದ್ದನು.

ಕೊನೆಗೆ ಎಲ್ಲರೂ ಹೋದರು. ಆಲಿಯೂ ಎದ್ದು ಅಂಚೆಮನೆಗೆ ನಮಸ್ಕರಿಸಿ ಹೊರಟು ಹೋದನು.

ಒಂದು ಶತಮಾನದ ಹಿಂದಿನ ಕುರುಬ!

"ಅವನು ಹುಚ್ಚನೇ?" ಪೋಸ್ಟ್‌ಮಾಸ್ಟರ್ ಕೇಳಿದರು.

"ಆಲಿಯೇ?— ಹೌದು ಸ್ವಾಮಿ, ಐದು ವರುಷಗಳಿಂದ ಎಡೆ-ಬಿಡದೆ ಪತ್ರಕ್ಕಾಗಿ ಬರುತ್ತಿದ್ದಾನೆ. ಸೂಟಿಯ ದಿನವನ್ನೂ ಬಿಡುವು-ದಿಲ್ಲ. ಅವನಿಗೆ ಪತ್ರ ಬರುವುದು ಎಂದೋ ಏನೋ!" ಅಂಚೆಯವ ನುತ್ತರವಿತ್ತ.

"ಬೇರೆ ಧಂದೆಯೇನೂ ಇಲ್ಲವೆಂದು ತೋರುತ್ತದೆ. ಯಾವಾ-ಗಲೂ ಯಾರು ಪತ್ರ ಬರೆಯುತ್ತಾರೆ?"

"ಸ್ವಾಮಿ, ಅವನ ತಲೆಯೇ ಹಾಳಾಗಿ ಹೋಗಿದೆ. ಹಿಂದೆ ಅವನು ಮಹಾ ಪಾಪಿಯಾಗಿದ್ದ. ಒಮ್ಮೆ ಯಾವುದೋ ಒಂದು ದೇವಸ್ಥಾನದಲ್ಲಿ ಏನೋ ಅನಾಚಾರ ಮಾಡಿದನಂತೆ; ಅದರ ಫಲ ಅನುಭೋಗಿಸುತ್ತಾನೆ" ಅಂಚೆಯವನ ಉತ್ತರ.

"ಹುಚ್ಚರ ಜೀವನ ಬಹಳ ವಿಚಿತ್ರ!"

"ಹೌದು ರಾಯರೆ, ನಮ್ಮ ಹಳ್ಳಿಯಲ್ಲೂ ಒಬ್ಬ ಹುಚ್ಚನಿದ್ದ; ಇಡೀ ದಿನ ಮಣ್ಣಿನ ಗುಡ್ಡೆಹಾಕುತ್ತಿದ್ದ, ಆಯಿತು ಬೇರೇನೂ ಕೆಲಸವಿಲ್ಲ."

"ನಮ್ಮೂರಿನಲ್ಲಿದ್ದ ಒಬ್ಬ ಹುಚ್ಚನಿಗೆ ಪ್ರತಿದಿನವೂ ನದೀ-ತೀರಕ್ಕೆ ಹೋಗಿ ಒಂದು ಕಲ್ಲಿನ ಮೇಲೆ ನೀರು ಸುರಿಸುವುದೇ ಕೆಲಸವಿತ್ತು ರಾಯರೇ!" ಇನ್ನೊಬ್ಬನು ಬಾಯಿ ಹಾಕಿದ.

"ಮತ್ತೊಬ್ಬನ ಹುಚ್ಚುತನ— ಏನೆಂದು ಹೇಳುವುದು? ಅವನು ತಾನೇ ತನ್ನ ಕೆನ್ನೆಯ ಮೇಲೆ ಹೊಡೆದುಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿದ್ದ."

ಇಂಥ ಅಂಚೆಮನೆಯಲ್ಲಿ ಹುಚ್ಚರ ಪುರಾಣದ ಪಾರಾಯಣ ಪ್ರತಿನಿತ್ಯವೂ ತಮ್ಮ ಕೆಲಸವನ್ನೆಲ್ಲ ಬಿಟ್ಟು, ಏನೇನೋ ಮಾತ ನಾಡುತ್ತ ಹೃದಯಗಳನ್ನು ಹಗುರುಗೊಳಿಸಿಕೊಳ್ಳುವುದು ಅಲ್ಲಿಯ ಎಲ್ಲ ನೌಕರರ ವಾಡಿಕೆಯಾಗಿತ್ತು!

ಕೊನೆಗೆ, ಎದ್ದು ಹೊರಡಲನುವಾದ ಪೋಸ್ಟ್‌ಮಾಸ್ತರರಿಂದ ಸಮಾರೋಪ — "ಈ ಹುಚ್ಚರದೇ ಒಂದು ಲೋಕವಿದೆಯೋ ಏನೋ! ಅವರು ನಮ್ಮನ್ನೆಲ್ಲ ಹುಚ್ಚರೆಂದು ತಿಳಿಯುತ್ತಿರಬಹುದು ಅವರ ಸೃಷ್ಟಿ ಕವಿಯ ಸೃಷ್ಟಿಯಂತಿರಬಹುದು!"

ಕೊನೆಯ ಮಾತುಗಳನ್ನು ಹೇಳುತ್ತಾ ಅವರು ಹೊರಟು ಹೋದರು. ಅಲ್ಲಿಯ ಒಬ್ಬ ಕಾರಕೂನ ಕವಿಹೃದಯಿ; ಬಿಡುವು ಸಿಕ್ಕಿದಾಗೆಲ್ಲ ಕವಿತೆಗಳನ್ನು ಗೀಚುತ್ತಿದ್ದ. ಸಹೋದ್ಯೋಗಿಗಳು ಆಗಾಗ ಗೇಲಿಮಾಡಿ ಅವನನ್ನು ಸಿಟ್ಟಿಗೆಬ್ಬಿಸುತ್ತಿದ್ದರು. ಪೋಸ್ಟ್ ಮಾಸ್ತರರೂ ಇದಕ್ಕಾಗಿಯೇ ನಗುತ್ತ ನಗುತ್ತ ಆತನ ಕಡೆಗೆ

ಕುಟುಂಬದಲ್ಲಿ ಎಷ್ಟೋಸಾರೆ ಡಾಕ್ಟರರು ಕೈ ಹತ್ತರ ಇರಬೇಕು ಎಂದೆನಿಸುವದು.

[illegible] ಜವೇರಿಯನ ಜೀವನ ಮಿಕ್ಸ್ಚರ [illegible] ಎಮ್. ಎಚ್. ಜವೇರಿಯನ್ ಮತ್ತು ಕಂ. ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ ನಂ. ೨

ದೃಷ್ಟಿಸುತ್ತಿ, ತನ್ನ ಕೊನೆಯ ಶ್ವಾಸಗಳನ್ನೆಳೆದರು. ಅಂಚೆ-ಮನೆ ನಗೆಯಲ್ಲಿ ತೇಲಿತು. ಮತ್ತೆ ಪುನಃ ಮೊದಲಿನಂತೆಯೇ ಶಾಂತವಾಯಿತು.

* * * *

ಒಮ್ಮೆ ಮುದುಕ ಅಲಿ ಮೂರು ನಾಲ್ಕು ದಿನಗಳವರೆಗೆ ಕಾಣಿಸಲೇ ಇಲ್ಲ. ಅಲಿಯ ಒಡಲಬೇಗೆಯನ್ನು ಅರಿಯಬಲ್ಲ ಸಹಾನುಭೂತಿಪೂರ್ಣವಾದ ವಿಶಾಲಹೃದಯ ಅಂಚೆಮನೆಯ ಯಾವನೊಬ್ಬನಿಗೂ ಇರಲಿಲ್ಲ. ಆದರೆ ಅವನೇಕೆ ಬರಲಿಲ್ಲವೆಂಬ ಕುರಿತು ಪ್ರತಿಯೊಬ್ಬನಿಗೂ ಕುತೂಹಲವುಂಟಾಗದಿರಲಿಲ್ಲ.

ಕೆಲವು ದಿನಗಳ ಬಳಿಕ ಅಲಿ ಪುನಃ ಬಂದನು—ತೇಕುತ್ತಾ ಬಂದನು; ಅವನ ಮುಖದ ಮೇಲೆ ಜೀವಾಂತ್ಯದ ಚಿಹ್ನೆಗಳು ಕಂಡುಬರುತ್ತಿದ್ದುವು.

ಅಂಜಿಕೆಯಿಂದ ನಡುಗುವ ಸ್ವರದಲ್ಲಿ ಅಲಿ ಪೋಸ್ಟ್‌ಮಾಸ್ತರರೊಡನೆ ಕೇಳಿದ— "ಸ್ವಾಮಿ, ನನ್ನ ಖತೀಜಳ ಪತ್ರ ಬಂದಿದೆಯೇ?"

ಪೋಸ್ಟ್‌ಮಾಸ್ತರರು ಅಂದು ಊರಿಗೆ ಹೋಗುವ ಗಡಿಬಿಡಿಯಲ್ಲಿದ್ದರು. ಅಲಿಯ ಈ ವಿಲಕ್ಷಣ ಪ್ರಶ್ನೆಯನ್ನು ಸಹಿಸುವಷ್ಟು ತಾಳ್ಮೆ ಅವರಲ್ಲಿರಲಿಲ್ಲ.

"ಎಂತಹ ಪ್ರಾಣಿಯಪ್ಪಾ ನೀನು!"

"ನನ್ನ ಹೆಸರು ಅಲಿ"— ಅಲಿಯ ಅಸಂಬದ್ಧ ಉತ್ತರ

"ಸರಿ— ಆದರೆ ಇಲ್ಲಿ ನಿನ್ನ ಖತೀಜಳ ಹೆಸರನ್ನು ಬರೆದಿಟ್ಟವರು ಯಾರಿಲೇ?"

"ಬರೆದುಕೊಳ್ಳಿರಿ ಬುದ್ಧಿ. ಎಲ್ಲಾದರೂ ನಾನಿಲ್ಲದಾಗ ಆಕೆಯ ಪತ್ರ ಬಂದರೆ, ನಿಮಗೇಕೆ ತೊಂದರೆಯಾಗಬೇಕು?"

ಖತೀಜಳ ಹೆಸರು ಆಕೆಯ ತಂದೆಗಲ್ಲದೆ ಇತರರಿಗೆ ಕಾಸಿನ ಬೆಲೆ ಬಾಳದೆಂಬುದನ್ನು ಆ ಬಡಪಾಯಿಯೆಂತು ಬಲ್ಲ!

ಪೋಸ್ಟ್‌ಮಾಸ್ಟರ್ ಸಿಟ್ಟಿನಿಂದ ಕೆಂಡವಾದರು. "ನಿನಗೆ ಹುಚ್ಚುಗಿಚ್ಚು ಹಿಡಿದಿಲ್ಲವಷ್ಟೇ? ನಡಿ ಇಲ್ಲಿಂದ. ನಿನಗೆ ಪತ್ರ ಬಂದರೆ ಯಾರೇನು ತಿನ್ನುವರೇ!"

ಅವರು ಬೇಗಬೇಗನೆ ಹೊರಟು ಹೋದರು. ಅಲಿ ಕುಂಟುತ್ತಾ ಕುಂಟುತ್ತಾ ಹೊರಗೆ ನಡೆದನು. ಹೊರಗೆ ಹೋದಂತೆ, ಒಮ್ಮೆ ಹಿಂತಿರುಗಿ ಅಂಚೆಮನೆಯ ಕಡೆಗೆ ದಿಟ್ಟಿಸಿದನು. ಇಂದು ಆತನ ಕಣ್ಣುಗಳಲ್ಲಿ ಅನಾಥಸಂಥ ಕಂಬನಿಗಳು ಹೊಳೆಯುತ್ತಿದ್ದುವು. ಶ್ರದ್ಧೆ ಇತ್ತು; ಆದರೆ ಧೈರ್ಯ ಕುಗ್ಗಿತ್ತು. ಹಾಯ್! ಇನ್ನು ಖತೀಜಳಿಗೆ ಆತನು ಪತ್ರ ಬರೆಯುವುದಾದರೂ ಎಂತು?

ಒಬ್ಬ ಕಾರಕೂನ ಅವನ ಹಿಂದೆ ಬರುವಂತೆ ಭಾಸವಾಯಿತು. ಅಲಿ ಆತನ ಕಡೆಗೆ ತಿರುಗಿದ.

"ಅಣ್ಣಾ!"

ಕಾರಕೂನ ಬೆಚ್ಚಿಬಿದ್ದ; ಆದರೆ ಅವನು ಸಜ್ಜನ.

"ಏನು?"

"ನೋಡಿ, ಇದು ನನ್ನಲ್ಲಿದೆ!" ಇಷ್ಟು ಹೇಳಿ ಅಲಿ ತನ್ನೊಡ ನಿದ್ದ ಹಳೆಯ ಡಬ್ಬಿಯೊಂದರಿಂದ ಐದು ರೂಪಾಯಿಗಳನ್ನು ತೆ ದನು. ಕಾರಕೂನ ಚಕಿತನಾದ.

"ವಿಶೇಷವೇನೂ ಇಲ್ಲ; ಇವುಗಳಿಂದ ನಿಮಗೆ ಬಹಳ ಪ್ರಯೋ ಜನವಿದೆ. ಇವು ನನಗೇಕೆ? ಆದರೆ ಒಂದು ಕೆಲಸ ಮಾಡುವಿರಾ?"

"ಏನದು?"

"ಅದೇನು ಮೇಲೆ ಕಾಣುತ್ತಿರುವುದು?"— ಅಲಿ ಶೂನ್ಯ ಆಕಾಶದ ಕಡೆಗೆ ಬೆರಳು ತೋರಿಸಿದ.

"ಆಕಾಶ!"

"ಮೇಲೆ ಅಲ್ಲಾ ಇದ್ದಾನೆ; ಅವನ ಸಾಕ್ಷಿಯಾಗಿ ನಾನ ರೂಪಾಯಿಗಳನ್ನು ನಿಮಗೆ ಕೊಡುತ್ತೇನೆ. ನನ್ನ ಖತೀಜಳ ಪ ಬಂದರೆ, ನೀವದನ್ನು ಮುಟ್ಟಿಸಬೇಕು—ನನ್ನ ಸಮಾಧಿಗೆ!"

"ಏನು?"

"ನಿಜವನ್ನೇ ಹೇಳುತ್ತಿದ್ದೇನೆ ಸ್ವಾಮಿ, ಇಂದು ನ ಕೊನೆಯ ದಿನ, ಕೊನೆಯದು! ಖತೀಜಾ ಸಿಗಲಿಲ್ಲ— ಪ ಸಿಗಲಿಲ್ಲ!"

ಇದರ ಬಳಿಕ ಅಲಿ ಯಾರಿಗೂ ಕಾಣಸಿಗಲಿಲ್ಲ. ಆವನನ್ ಹುಡುಕುವ ಚಿಂತೆಯಾದರೂ ಯಾರಿಗೂ ಇರಲಿಲ್ಲ.

* * * *

ಪೋಸ್ಟ್‌ಮಾಸ್ತರರು ಸ್ವಲ್ಪ ಖಿನ್ನರಾಗಿದ್ದರು. ಅವರ ಮಗಳ ಊರಲ್ಲಿ ಕಾಯಿಲೆ ಬಿದ್ದಿದ್ದಳು. ಅವಳ ಸಮಾಚಾರವನ್ನು ನಿರೀ ಕ್ಷಿಸುತ್ತಾ, ಶೋಕಾಕುಲರಾಗಿ ಕುಳಿತಿದ್ದರು.

ಟಪ್ಪಾಲು ಬಂತು, ಪತ್ರಗಳ ರಾಶಿ ಹಾಕಿದರು. ತನ್ನದೆಂದು ಭ್ರಮಿಸಿ ಒಂದು ಲಕೋಟೆಯನ್ನು ತೆಗೆದರು. ಆದರೆ ಅದರ ಮೇಲೆ ಬರೆದಿತ್ತು.—"ಟಾಂಗಾವಾಲಾ ಅಲಿಬಾಬಾ!"

ಅವರಿಗೆ ಸಿಡಿಲು ಬಡಿದಂತಾಯಿತು. ಪತ್ರವನ್ನು ನೆಲಕ್ಕೆಸೆದರು. ಶೋಕಾಗ್ನಿಯಲ್ಲಿ ಬೆಂದು ಬವಣೆಪಡುತ್ತಿದ್ದಾಗ ಒಂದು ಗಳಿಗೆ ಅವರ ಕಠೋರ ಸ್ವಭಾವವು ನಾಯವಾಗಿ, ಮಾನವತೆಯು ತಲೆದೋರಿತು. ಆ ಪತ್ರವು ಅದೇ ಮುದುಕನಿಗೆ, ಆತನ ಮಗ ಬರೆದದ್ದಿರಬೇಕೆಂದು ಅವರಿಗೆ ತಿಳಿಯದಿರಲಿಲ್ಲ.

"ಲಕ್ಷ್ಮೀದಾಸ್"— ಕೂಗಿದರು ಪೋಸ್ಟ್‌ಮಾಸ್ಟರ್. ಅಲಿ ಯಿಂದ ಐದು ರೂಪಾಯಿ ತೆಗೆದುಕೊಂಡ, ಕಾರಕೂನನ ಹೆಸ ರಾಗಿತ್ತದು. "ಸ್ವಾಮಿ?"

"ಇದು ನಿಮ್ಮ ಟಾಂಗಾವಾಲಾ ಅಲಿ ಬಾಬಾನಿಗೆ!— ಈ ಎಲ್ಲಿದ್ದಾನೆ ಆತನು?"

"ಹುಡುಕಿ ನೋಡುವೆ, ರಾಯರೇ!"

ಆ ದಿನ ಪೋಸ್ಟ್ ಮಾಸ್ತರರ ಮಗಳ ಸಮಾಚಾರವೇ ಬರ ಲಿಲ್ಲ. ಅವರು ಇಡೀ ರಾತ್ರಿಯನ್ನು ತಳಮಳದಲ್ಲೇ ಕಳೆದರು. ಮರುದಿನ ಬೆಳಗ್ಗೆ ಮೂರು ಗಂಟೆ ಹೊಡೆಯುವಷ್ಟರಲ್ಲಿ ಅಂಚೆ ಮನೆಗೆ ಹೋಗಿ ಕುಳಿತರು. ನಾಲ್ಕು ಗಂಟೆಗೆ ಸರಿಯಾಗಿ

ಬರುವನು, ತಾನು ತನ್ನ ಕೈಯಿಂದಲೇ ಅವನಿಗೆ ಆ ಪತ್ರ ವನ್ನು ಕೊಡುವೆನು— ಇದೇ ಅವರ ಇಚ್ಛೆ.

ಈಗ ಅವರು ಅಲಿಯು ಸ್ಥಿತಿಯನ್ನು ಅರಿತಿದ್ದರು. ಇಂದು ರಾತ್ರಿಯನ್ನೆಲ್ಲ, ತುಸುವಾದರೂ ನಿದ್ರೆಯಿಲ್ಲದೆ, ಮರುದಿನ ಬೆಳಗ್ಗೆ ಬರಬಹುದಾದ ಪತ್ರದ ವಿಚಾರಮಾಡುತ್ತ ಕಳೆದಿದ್ದರು. ಎಂತಹ ಯಾತನೆಯದು! ಐದು ವರುಷಗಳ ತನಕ ಇಂತಹ ದೀರ್ಘ ರಾತ್ರಿಗಳನ್ನು ಕಳೆಯುತ್ತಿದ್ದ ಅಲಿಯ ಮೇಲೆ ಇಂದು ಅವರಿಗೆ ಮೊದಲ ಬಾರಿ ಸಹಾನುಭೂತಿ ಹುಟ್ಟಿತು.

ಐದು ಗಂಟೆ ಹೊಡೆಯಿತು. ಯಾರೋ ಕದಗಳನ್ನು ತಟ್ಟಿದಂತಾಯಿತು. ಪೋಸ್ಟ್‌ಮನ್‌ಗಳಾರೂ ಬರುವ ಸಮಯವಾಗಿರಲಿಲ್ಲ. ಅಲಿಯೇ ಆಗಿರಬೇಕೆಂದು ಗ್ರಹಿಸಿ ಪೋಸ್ಟ್‌ಮಾಸ್ಟರ್ ಎದ್ದರು. ಪಿತೃಹೃದಯದ ಬೇಗುದಿಯನ್ನು ಅನುಭವಿಸುತ್ತ ಕದಗಳನ್ನು ತೆರೆದರು.

"ಅಣ್ಣಾ ಅಲೀ, ಇತ್ತ ಬಾ; ಇದೋ ನಿನ್ನ ಪತ್ರ!"— ಪತ್ರ ಹಿಡಿದ ಕೈಯನ್ನು ಮುಂದಕ್ಕೆ ಚಾಚಿದರು. ಬಾಗಿಲು ಬಳಿಗೆ ಒಬ್ಬ ದೀನನಾಥ ಮುದುಕನು ಕೋಲನ್ನೂರಿಕೊಂಡು ನಿಂತಿದ್ದನು. ಕೊನೆಯ ಕಣ್ಣೀರನ ಹನಿಗಳು ಈಗಲೂ ಅವನ ಕಣ್ಣುಗಳ ಅಂಚಿನಲ್ಲಿದ್ದುವು. ಸುಕ್ಕುಗಟ್ಟಿದ್ದ ಮೋರೆಯಲ್ಲಿ ದೈನ್ಯ ಕಠೋರತೆಗಳೆರಡೂ ಬೆರೆತಿದ್ದುವು.

ಅವನು ಪೋಸ್ಟ್‌ಮಾಸ್ತರರ ಕಡೆಗೆ ನೋಡಿದ. ಅವರು ಬೆಚ್ಚಿದರು. ಮುದುಕನ ಕಣ್ಣುಗಳಲ್ಲಿ ಮಾನವಸಹಜವಾದ ಜೀವಸ್ಫುರಣವಿರಲಿಲ್ಲ!

"ಏನು ಸ್ವಾಮಿ, ಅಲಿ ಬಂದನೇ?...." ಲಕ್ಷ್ಮೀದಾಸನು ಹಿಂದಿನ ಬದಿಯಿಂದ ಬಂದು ಬಾಗಿಲ ಬಳಿ ನಿಂತನು.

ಪೋಸ್ಟ್‌ಮಾಸ್ಟರರು ಅತ್ತ ಲಕ್ಷ್ಯಕೊಡದೆ ಬಾಗಿಲ ಕಡೆಗೇ ನೋಡುತ್ತಿದ್ದರು; ಆದರೆ ಅಲ್ಲಿ ಯಾರೂ ಕಾಣಲಿಲ್ಲ. ಆಶ್ಚರ್ಯ ಭೀತಿಗಳಿಂದ ಕಣ್ಣುಜ್ಜಿಕೊಂಡರು. ಬಾಗಿಲ ಬಳಿ ಯಾರೂ ಇಲ್ಲ. ಇದೇನು! ಅವರು ಲಕ್ಷ್ಮೀದಾಸನ ಕಡೆಗೆ ತಿರುಗಿದರು.

"ಹೌದು, ಅಲಿಬಾಬಾ...."

"ಅಲ್ಲ ರಾಯರೇ, ಅಲಿ ಸತ್ತು ಹೋಗಿ ಬಹಳ ಸಮಯವಾಯಿತು. ಆದರೆ— ಅವನ ಪತ್ರವನ್ನಿತ್ತ ಕೊಡಿರಿ."

"ಏನು! ಸತ್ತು ಹೋಗಿರುವನೇ! ನಿಜವನ್ನೇ ಹೇಳುತ್ತೀರಾ ಲಕ್ಷ್ಮೀದಾಸ್?"

ಪೋಸ್ಟ್‌ಮಾಸ್ಟರರು ದಿಙ್ಮೂಢರಾದರು. ಖತೀಜಳ ಪತ್ರವನ್ನು ಬಾಗಿಲಬಳಿಯಲ್ಲಿಯೇ ಬಿದ್ದಿದ್ದಿತು. ಬಾಗಿಲು ತಟ್ಟಿದ ಶಬ್ದವು ಇನ್ನೂ ಮರುಧ್ವನಿಸುತ್ತಿತ್ತು. ಅಲಿಯ ಮೂರ್ತಿ ಇನ್ನೂ ಅವರ ಮನಸ್ಸಿನಿಂದ ಮಾಸಿಹೋಗಿರಲಿಲ್ಲ. ಅವರು ನೆಚ್ಚಿದರು— ನಾನು ನಿಜವಾಗಿಯೂ ಅಲಿಯನ್ನು ಕಂಡಿರುವೆನೇ? ಅಥವಾ ಅದು ಕೇವಲ ಭ್ರಮೆಯೇ? ಅಥವಾ ಲಕ್ಷ್ಮೀದಾಸನನ್ನೇ ಅಲಿಯೆಂದು ಗ್ರಹಿಸಿದೆನೇ?... ....

ನಿತ್ಯದ ಪರಿಪಾಠವು ಆರಂಭವಾಯಿತು— "ಪೋಲೀಸ್ ಕಮಿಷನರ್! ಸೂಪರಿಂಟೆಂಡೆಂಟ್! ಲೈಬ್ರೇರಿಯನ್!......" ಅಂಚೆಯವನು ಬೇಗ ಬೇಗನೆ ಪತ್ರಗಳನ್ನು ಬಿಸುಡುತ್ತಿದ್ದನು.

ಆದರೆ ಇಂದು ಪೋಸ್ಟ್‌ಮಾಸ್ಟರರು ಪ್ರತಿಯೊಂದು ಪತ್ರವನ್ನೂ, ತನ್ನ ಕಂಪಿಸುವ ಹೃದಯವೇ ಅವರಲ್ಲಿರುವುದೋ ಎಂಬಂತೆ, ಮೇಲೆ ಮೇಲೆ ನೋಡುತ್ತಿದ್ದರು. ಹೊತ್ತು ಕಳೆದಂತೆ ಗಂಭೀರವಾಗುತ್ತ ಸಾಗಿತ್ತು ಅವರ ಮುಖಭಾವ.

ಮಾನವನು ತನ್ನ ದೃಷ್ಟಿಯನ್ನು ತ್ಯಜಿಸಿ, ಇತರರ ದೃಷ್ಟಿಯಿಂದ ನೋಡಲು ಕಲಿತಿದ್ದರೆ, ಜಗತ್ತಿನ ಅರ್ಧಕ್ಕರ್ಧ ಕುತ್ತಗಳ ನಿವಾರಣೆಯಾಗುತ್ತಿತ್ತು!

ಅಂದು ಸಂಜೆಯ ಹೊತ್ತಿಗೆ ಪೋಸ್ಟ್‌ಮಾಸ್ಟರರು ಲಕ್ಷ್ಮೀದಾಸರನ್ನು ಕೂಡಿಕೊಂಡು ಅಲಿಯ ಸಮಾಧಿಯತ್ತ ಹೋದರು. ಖತೀಜಳ ಪತ್ರ ಅವರ ಕೈಯಲ್ಲೇ ಇತ್ತು. ಅದನ್ನು ಸಮಾಧಿಯ ಮೇಲಿಟ್ಟು ಇಬ್ಬರೂ ಮರಳಿದರು.

"ಲಕ್ಷ್ಮೀದಾಸ್, ಇಂದು ಬೆಳಗ್ಗೆ ನೀವು ಎಲ್ಲರಿಗಿಂತ ಮೊದಲು ಬಂದಿದ್ದಿರಾ?"

"ಹೌದು ಸ್ವಾಮಿ"

"ನೀವೇ ಕೇಳಿದುದಲ್ಲವೇ— ಅಲಿಯೇನು ಎಂದು?"

"ಹೌದು!"

"ಆದರೆ— ಆಗ.... ಆಗ.... ತಿಳಿಯಲಿಲ್ಲ...."

"ಏನು ತಿಳಿಯಲಿಲ್ಲ?"

"ಹೌದು, ಸರಿ.... ಏನಿಲ್ಲ...." ಪೋಸ್ಟ್‌ಮಾಸ್ಟರರು ಥಟ್ಟನೆ ಮಾತು ಬದಲಿಸಿದರು. ಅಂಚೆಮನೆಯ ಸನಿಯಕ್ಕೆ ಬರುತ್ತಲೇ ಅವರೊಬ್ಬರೇ ವಿಚಾರಪರವಶರಾಗಿ ಒಳಹೊಕ್ಕರು. ಅಂದು ಅವರ ಪಿತೃಹೃದಯ ಅಲಿಯನ್ನು ತಿಳಿಯುದಾಗಿತ್ತು. ಇದಕ್ಕಾಗಿ ಅದು ಅಸಹನೀಯ ವೇದನೆಯಿಂದ ತೊಳಲುತ್ತಿತ್ತು........ ಇಂದಿಗೂ, ಇಷ್ಟರವರೆಗೆ, ಮಗಳ ಸಮಾಚಾರವೇ ಇಲ್ಲ. ಪುನಃ ಆ ಚಿಂತೆಯಲ್ಲೇ ಇಡೀ ರಾತ್ರಿಯನ್ನು ಕಳೆಯಬೇಕಾಗಿತ್ತು. ಆಶ್ಚರ್ಯ, ಶಂಕೆ, ಪಶ್ಚಾತ್ತಾಪ— ಈ ತ್ರಿವಿಧತಾಪಗಳು ಅವರ ಹೃದಯವನ್ನು ಸುಡುತ್ತಿದ್ದುವು. ಬಳಿಯಲ್ಲಿ ಉರಿಯುತ್ತಿದ್ದ ಅಗ್ಗಿಷ್ಟಿಕೆಯ ಬೆಂಕಿಯ ಬೇಗೆ ಅವರ ದೇಹದ ಕಾವನ್ನೇರಿಸುತಿತ್ತು!

೫೫ ವರ್ಷಗಳಿಂದ ಅನುಭವಪಟ್ಟ
ಕರ್ಕೆ ಮತ್ತು ಕಂಪನಿಯು
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ :—
ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಅರವಿಂದ ದರ್ಶನ

ಶ್ರೀ. ವೆಂ. ನಾ. ಮುಗುಳಿ, ಹುಬ್ಬಳ್ಳಿ

★

ವಿಜ್ಞಾನ-ಆತ್ಮಜ್ಞಾನಗಳ ಸಾಮರಸ್ಯದ ತತ್ತ್ವವೇ ಮಾನವನನ್ನು ಅವನ ಜೀವನದ ಗುರಿಗೆ ತಲ್ಪಿಸಬಲ್ಲದು. 'ದೀನನಾನುತನ'ದಿಂದ ಕಂಗೆಟ್ಟ ಮಾನವನನ್ನು ದೇವಭಾವದಲ್ಲಿ ನಿಲ್ಲಿಸುವಂತಹದು. ಈ ತತ್ತ್ವದ ಕಡೆಗೆ ಕಣ್ಣುಮುಚ್ಚಿದರೆ, ಮಾನವ ಬೆಳಕನ್ನು ಕಾಣಲಾರ.

★

ವಿಜ್ಞಾನದ ಪ್ರಚಂಡವಾದ ಪ್ರಕಾಶದಲ್ಲಿ ಪ್ರಪಂಚವು ಇಂದು ಮುಂದಡಿಯಿಡುತ್ತಿದೆ. ತಾನು ಅದ್ಭುತವಾದ ಪ್ರಗತಿಯ ಪರಿಪೂರ್ಣತೆಯ ತುಂಗಶೃಂಗವನ್ನೇ ತಲುಪಿದೆಯೆಂದು ಇಂದಿನ ಜಗತ್ತು ಹೆಮ್ಮೆಯಿಂದ ಹೇಳುತ್ತಿದೆ. ಆಧುನಿಕ ವಿಜ್ಞಾನದ ವಿವಿಧ ಶೋಧಗಳಿಂದ, ನೆಮ್ಮದಿಯು ನೆಲೆಯೂರಬಲ್ಲದು, ಭೌತಿಕ ಸುಖವು ಸ್ಥಿರವಾಗಬಲ್ಲದು—ಎಂದು ಎದೆ ತಟ್ಟಿ ಹೇಳಲಾಗುತ್ತಿದೆ ದೇವರು, ಧರ್ಮ, ಜ್ಞಾನ, ಧ್ಯಾನ, ಸಾಧನೆಗಳ ತೊಂದರೆಯಿಲ್ಲದೆ, ತಾನು ಜೀವನದಲ್ಲಿ ಪರಿಪೂರ್ಣತೆಯನ್ನು ಪಡೆಯಬಹುದೆಂದು ಮಾನವನು ಬಗೆದಂತೆ ತೋರುತ್ತಿದೆ. ಜಲದಲ್ಲಿ ಜವದಲೋಡುವ ಹಡಗನ್ನು, ಗಗನದಲ್ಲಿ ಶೀಘ್ರಗತಿಯಿಂದ ಹಾರುವ ವಿಮಾನವನ್ನು, ಪ್ರಪಂಚವನ್ನೇ ಕ್ಷಣಾರ್ಧದಲ್ಲಿ ನಾಶಗೈವ ಅಣುಶಸ್ತ್ರಗಳನ್ನು, ಅಲ್ಲದೆ ಇತರ ಯಂತ್ರತಂತ್ರಗಳನ್ನು ತನ್ನ ಅಪ್ರತಿಮ ಕೌಶಲ್ಯದಿಂದ ಪರಿಶೋಧಿಸಿರುವೆನೆಂದು ಮಾನವನು ಬೆನ್ನುಚಪ್ಪರಿಸಿಕೊಳ್ಳುತ್ತಿದ್ದಾನೆ. ಅಮರೇಂದ್ರನ ಓಲಗದಲ್ಲಿ ಕೂಡ ಇರಲಾರದ ಸುಖೋಪಭೋಗಗಳ ಸಾಧನೆಗಳು, ಈ ವಿಜ್ಞಾನದ ಯಾಂತ್ರಿಕ ಒಡ್ಡೋಲಗದಲ್ಲಿ ಲಭಿಸಬಲ್ಲವೆಂದು, ಮನುಷ್ಯನಿಂದು ಹೆಮ್ಮೆಯಿಂದ ಸಾರಿಸಾರಿ ಹೇಳುವಂತೆ ಕಾಣುತ್ತಿದೆ. ಅಹುದು! ಮಾನವನ ಬುದ್ಧಿಯ ಬೆಳವಣಿಗೆಯನ್ನು ಸೂಚಿಸುವಂತೆ ವಿಜ್ಞಾನದ ಪ್ರಗತಿಯಾಗಿರುವುದು ನಿಜ. ಕಾರ್ಯಕುಶಲತೆಯನ್ನು ಹೆಚ್ಚಿಸುವುದರಲ್ಲಿ ಕಾರ್ಯಭಾರವನ್ನು ಕಡಿಮೆ ಮಾಡುವುದರಲ್ಲಿ ವಿಜ್ಞಾನವು ತನ್ನ ವೈಚಿತ್ರ್ಯವನ್ನು ವ್ಯಕ್ತಪಡಿಸಿರುವುದೂ ನಿಜ. ಆದರೂ ಪ್ರಪಂಚದತ್ತ ಕಣ್ಣುರಳಿಸಿ ನೋಡಿದಾಗ, ನಾವು ಕಾಣುವುದೇನು? ಅನಿಲಾಂದೋಳಿತವಾದ ಈ ರುಂದ್ರ ಪ್ರಪಂಚಾಂಬುಧಿಯಲ್ಲಿ ಅತ್ತಿತ್ತ ಜೋಲುತ್ತ ಜೀವನೌಕೆ ತೇಲಿ ತೇಲಿ ತೇಕುತ್ತಿರುವುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ನಮ್ಮ ಆಶೆಗಳ ವಿಮಾನವು ಆದರ್ಶದ ಗಗನದೆತ್ತರ ಹಾರಾಡಿ ಮಧ್ಯಂತರದಲ್ಲಿ ಮುರಿದು ಬೀಳುವ ಸ್ಥಿತಿಯಲ್ಲಿದೆ. ಒಟ್ಟಿನಲ್ಲಿ ದುಃಖ-ದುಮ್ಮಾನಗಳ ಮಹಾಸ
ಲಂಘಿಸಲು ತಕ್ಕುದಾದ ಮತ್ತು ಸುಲಭವಾದ ನ
ವಿಜ್ಞಾನವು ನಿರ್ಮಿಸಿಲ್ಲ. ಪರಿಪೂರ್ಣತೆಯ ನಿತ್ಯಜೀವನ
ವಂತೆ ಆವ ವಿಮಾನವನ್ನೂ ವಿಜ್ಞಾನವು ಸಿದ್ಧಗೊ
ಬರಿಯ ಭೌತಿಕ ಸುಖಸಾಧನೆಗೆ ಅಣಿಯಾದರೇನು ಪ್ರ
ಏಕೆ! ಮಾನವನು ಬರಿಯ ಯಂತ್ರವೇ? ಜೀವನದ
ಅವನಿಗೆ ಗತಿಯೇ? ಈ ಜಗತ್ತಿನ ಜಡತ್ವವೇ ಅವನ
ಹೇಗೆ? ಈ ಸಂಕುಚಿತ ಸೆರೆಮನೆಯಿಂದ ಮಾನವನು ಮ
ಬೇಕು. ಜೀವನದ ಕ್ರಮವನ್ನು ವಿಚಾರಿಸಿದಂತೆ, ಜಿ
ಉದ್ದೇಶ, ಅರ್ಥ ಹಾಗೂ ಸಾರ್ಥಕ್ಯಗಳನ್ನು ಕುರಿತು
ವುದು ತರವಲ್ಲವೇ? ನಮ್ಮ ಇರವು ಆಕಸ್ಮಿಕವಲ್ಲ. ಅದು
ಉದ್ದೇಶಪೂರಿತವಾಗಿರುವುದು. ಬರಿಯ ಐಹಿಕ ಕಾಮ
ತೃಪ್ತಿಪಡಿಸುವುದಕ್ಕೋಸುಗ ನಮ್ಮ ಬದುಕು ಮೀಸಲ
ಈ ಸೃಷ್ಟಿಯು ಪರಮಾತ್ಮನ ದಿವ್ಯಲೀಲೆ, ಒಂದು ಅನ
ನಾಟಕ. ನಾವು ಪರಿಪೂರ್ಣವಾದ ಪರಿಣತ ಶೈಲಿಯ
ಪಾತ್ರವನ್ನು ನಿರ್ವಹಿಸಬೇಕು. ಆಗ ಮಾತ್ರ ನಮ್ಮ
ಮುಕ್ತಿಯು ಮನದಟ್ಟಾಗುವುದು.

ಬಾಹ್ಯರಂಗದಲ್ಲಿ ಅತ್ಯದ್ಭುತವಾದ ಪ್ರಗತಿಯನ್ನು
ಲಾಗಿದ್ದರೂ, ಸಾಕಷ್ಟು ಸಂತೃಪ್ತಿಯು ಏಕೆ ನೆಲೆಯೂರ
ಆಧ್ಯಾತ್ಮದ ಅಲಕ್ಷ್ಯವೇ ಇದಕ್ಕೆ ಕಾರಣ ಸೃಷ್ಟಿಯ ಒ
ಲನ್ನು ಅಷ್ಟೇ ಪರಿಶ್ರಮದಿಂದ, ಅದಕ್ಕೂ ಹೆಚ್ಚು ಶ
ತಿಳಿಯಲು ಯತ್ನಿಸಿದ ಹೊರತು, ಹಾಗೂ ಸೃಷ್ಟಿಯ
(Evolution of Nature) ನಾವು ಸಹಾಯ ನೀಡಿ
ಶಾಶ್ವತಶಾಂತಿಯೂ ಬರಿಯ ಕನಸಾಗುವುದು. ಆ
ವಿಜ್ಞಾನಶಾಸ್ತ್ರದಲ್ಲಿ ಆಗುತ್ತಿರುವ ಇತ್ತೀಚಿನ ಬೆಳ
ರೂಪರೇಷೆಗಳನ್ನು ಪರಿಶೀಲಿಸಿದರೆ ವಿದಿತವಾಗುವುದೆ
ಅಧಿಭೌತಿಕವಾದವು (Theory of materialism) ಕ್ರ
ಮಾಯವಾಗುತ್ತ ನಡೆದಿದ್ದು, ಆಧ್ಯಾತ್ಮಿಕ ಹಾಗೂ ಅ
ವಿಜ್ಞಾನಗಳ ರೀತಿಯನ್ನು ಹೋಲುವ ತತ್ತ್ವಗಳೇ ಬೇ
ರೀತಿಯಲ್ಲಿ ಪ್ರಯೋಗಗಳ ಮೂಲಕ ಪ್ರತಿಪಾದಿತವಾ
ಯೆಂದು. ೧೯ನೆಯ ಶತಮಾನದ ವಿಜ್ಞಾನಿಗಳ ವಾ
೨೦ನೆಯ ಶತಮಾನದ ವಿಜ್ಞಾನದ ಮುನ್ನಡೆಯನ್ನೂ
ಮಾಡಿ ನೋಡಿದಾಗ, ಈ ಮೇಲಣ ಮಾತಿನ ಸತ್ಯಾಸ
ಅರಿವಾಗುವುದು. ಅಂದಿನವರು ಜಗತ್ತು ಜಡದಲ್ಲಿಯೇ
ಪಂಚೇಂದ್ರಿಯಗಳಿಗೆ ಗ್ರಾಹ್ಯವಾದುದೇ ವಾಸ್ತವವೆಂದೂ,
ಅನಂತ, ದಿವ್ಯಕಲ್ಪನೆಗಳೆಲ್ಲ ಮಿಥ್ಯವಾದುವುಗಳೆಂದೂ ವಾ
ಇಂದಿನ ವಿಜ್ಞಾನಿಗಳು ಸೃಷ್ಟಿಯು ಚೈತನ್ಯದ ಆಟವೆಂದು
ಹಿಂಜರಿಯುತ್ತಿಲ್ಲ. ಜಡವೆಂಬುದು ನಿಜವಲ್ಲ. ನಿಜವ
ಚೈತನ್ಯವೇ (Energy)— ಎಂಬುದಾಗಿ ಇಂದಿನ

ಜ್ಞಾನಿಯೇ ಗಣಿತದ ಮೂಲಕ ತಿಳಿಯಪಡಿಸಿದ್ದಾನೆ. ಚೈತನ್ಯವೇ ವಸ್ತುಗಳ ನಿರ್ಮಾಣಕ್ಕಾಗಿ ರಂಗಗಳನ್ನು ನಿರ್ಮಿಸುತ್ತದೆಯೆಂದೂ ತ್ತು ಜಡವೂ ಕೂಡ ಮೂಲದಲ್ಲಿ ಚೈತನ್ಯವೆಂದೂ, ಜಡ- ಬುದು ಮಾಯೆ— ಎಂಬುದಾಗಿ ಇಂದಿನ ವಿಜ್ಞಾನಿಗಳಲ್ಲಿ ಶ್ರಮರಾದ ಐನಸ್ಟೀನರ ಸಿದ್ಧಾಂತವೇ ಹೇಳುತ್ತದೆ heory of Relativity ಸಾಪೇಕ್ಷವಾದ). ಆದರೆ ನಮ್ಮನ್ನು ಯಂತ್ರಿಸುವ, ಲೀಲೆಯನ್ನಾಡುವ ಅನಂತ ದಿವ್ಯಶಕ್ತಿಯ ನಿನ ಬಗ್ಗೆ ಇರುವ ಸಂದೇಹಭೂತ ಮಾತ್ರ ಇನ್ನೂ ಬಿಟ್ಟಿಲ್ಲವಲ್ಲ- ಬುದೇ ವಿಷಾದದ ಮಾತು. ಶ್ರೀಅರವಿಂದರಂಥ ಯೋಗಿ- ರ ಜೀವನವೂ, ಮತ್ತು ಸಾಧನೆಯೂ ಈ ದಿಶೆಯಲ್ಲಿ ಆಶಾ- ಕಗಳು. ಭಾರತದ ಪ್ರಾಚೀನ ಋಷಿಪುಂಗವರ ತತ್ತ್ವರತ್ನಗಳ ದಲ್ಲಿ ಮೀರಿಯಲು ವಿಜ್ಞಾನವು ಸಿದ್ಧವಾಗುವ ದಿನ ಬರದಿರ- ವು ಅರವಿಂದರೇ ಅಪಾರ ವಿಶ್ವಾಸದಿಂದ ಹೇಳುತ್ತಾರೆ.

ಗತಕಾಲದ ಮಾನವೀಯ ಜ್ಞಾನದ ಉದಯಕಾಲಗಳೇ ನ ನಿರಂತರ ಉತ್ಸಾಹಕ್ಕೆ (Constant aspiration) ಗೆ ಸಾಕ್ಷಿಯಾಗಿವೆ. ಇಂದು ಸೃಷ್ಟಿಯ ಬಾಹ್ಯಬದಿಯ ternalities of Nature) ಯಶಸ್ವೀ ವಿಂಗಡಣೆಯಿಂದ ನ ಸಾಕಾದರೂ ಸಂತೃಪ್ತವಾಗದ ಜನಾಂಗವು, ತನ್ನ ಆದಿ ದ್ಧ ಬಯಕೆಗಳಿಗೆ (Primeval longings) ಹಿಂದಿರುಗಲು ದ್ಧವಾಗುತ್ತಿರುವುದನ್ನು ಕಣ್ಣಾರೆ ಕಾಣುತ್ತಿದ್ದೇವೆ. ಪ್ರಾರಂಭ ದ ಜ್ಞಾನಸೂತ್ರಗಳೇ ಅಂತಿಮಸೂತ್ರಗಳಾಗುವ ಭರವಸೆ ಅವುಗಳೇ ಪರಮಾತ್ಮ (God), ಜ್ಯೋತಿ (Light) ಚೇತನ, ಅಮರತ್ವ (Immortality)." ಇಂದು ನವನು ತನ್ನೆದುರು, ತಾನು ಅಟ್ಟಹಾಸದಿಂದ ಕಟ್ಟಿದ ಸುಖ- ಮಂದಿರದ ತಳಹದಿಯೇ ಸಡಿಲಾಗಿ ಕಳಚುತ್ತಿರುವುದನ್ನು ಯುಗಾಣದೇ ನೋಡುತ್ತಿದ್ದಾನೆ. ಆದುದರಿಂದಲೆ ಪ್ರಾಚೀನ- ತತ್ತ್ವಗಳನ್ನೇ ಆಶ್ರಯಿಸಲು ಹಂಬಲಿಸುತ್ತಿದ್ದಾನೆ. ಕೆಂದರೆ ತನ್ನ ಜ್ಞಾನ ಭೂಮಿಕೆಯ ಮೇಲೆಯೇ ಅಲ್ಲೋಲ್ಯಾಡು- ವ ಸಂಶೋಧನೆಗಳ ಅಸಹ್ಯ ನರ್ತನವನ್ನು ತಡೆಯಲು ದಷ್ಟು ಕೂಡ ಅವನು ಅಸಮರ್ಥನಾಗಿದ್ದಾನೆ. ಆತ್ಮ- ಮನ, ಆತ್ಮಜ್ಞಾನ ಇವುಗಳನ್ನು ಬಿಡಿ! ಸ್ವನಿರ್ಮಿತ ಶಕ್ತಿಗಳ ಪಯೋಗವನ್ನು ಪ್ರತಿಬಂಧಿಸಲು ಬಾರದಷ್ಟು ನಿಸ್ಸಹಾಯ- ದ್ದಾನೆ. ತನ್ನಲ್ಲಿರುವ ಆತ್ಮಶಕ್ತಿಯನ್ನು ಅಲಕ್ಷಿಸಿ, ಮೊದಲು ತಿಯ ಗೂಢತತ್ತ್ವವನ್ನು ತಿಳಿದುಕೊಂಬ ಹಂಬಲಿಗನಾದವನು, ತಿಯ ದಾಸನೇ ಆಗಿಬಿಟ್ಟಿರುವನು. ಮತ್ತು ಆಶಾಂತಿ- ಯೂ, ಉದ್ವೇಗದಲ್ಲಿಯೂ ಬಳಲಿ, ಒಳಲಿ ಬೆಂಡಾಗುತ್ತಿರು. ಮನುಷ್ಯಶಕ್ತಿಗಳನ್ನು ನಿಯಂತ್ರಿಸುವುದಕ್ಕಾಗಿ ಆತನಿಂದಲೇ ವಾದ ಸರಪಳಿಯು ಕೊಂಡಿಯು, ಆತನನ್ನೇ ಬಲವಾಗಿ ಸಿಬಿಟ್ಟಿದೆ. ಹೀಗಾಗಿ ಬೆಡಗಿನ ಮಾನವನು ನಾನಾಬಗೆಯ ಕುಗಳಲ್ಲಿ ಸಿಲುಕಿದ್ದಾನೆ. ಬುದ್ಧಿ (Intellect) ತರ್ಕ (Reason) ಗಳನ್ನು ಹಿಂದಿಕ್ಕಿ, ಅವುಗಳಾಚೆ ಇರುವ ಸತ್ಯ (Truth) ಜಾಗೃತಿ (Awareness), ಚೈತನ್ಯ (Consciousness) ಜ್ಞಾನಗಳ ಗೊಡವೆಗೇ ಆತನು ಹೋದಂತಿಲ್ಲ. ಬುದ್ಧಿವಂತ- ನಾಗಿದ್ದರೂ, ಸತ್ಯವಂತನಾಗಿಲ್ಲ. ಲೌಕಿಕನಾಗಿದ್ದರೂ ಜ್ಞಾನಿ- ಯಾಗಿಲ್ಲ. ಕೌಶಲ್ಯವಂತನಾದರೂ ಆತನು ಪರಿಪೂರ್ಣನಾಗಿಲ್ಲ. ಮೊದಲು ಪ್ರಕೃತಿಯ ಜೀವನದ ಬಾಹ್ಯಲಕ್ಷಣಗಳನ್ನು ಪರೀಕ್ಷಿಸಲು ಆರಂಭಿಸಿದ್ದೇ ಅವನ ಆಕ್ಷನ್ಯನ್ಯೂನ. ಅಂತರಂಗವನ್ನು ಅರಿತು, ತದನಂತರ ಬಹಿರಂಗವನ್ನು ಶೋಧಿಸಿದ್ದರೆ ಅಂತರಂಗ, ಬಹಿರಂಗ- ಗಳ ಸಮನ್ವಯತೆ ಸಾಮರಸ್ಯವನ್ನು ಆತನು ಕಂಡುಕೊಳ್ಳ- ಬಹುದಿತ್ತು. ಸೃಷ್ಟಿಯ ಅಂತರ್ಯವನ್ನು ಆಳವಾಗಿ ಅಳೆದು, ಅಭ್ಯಸಿಸಿ, ತಮ್ಮ ತಪೋಜ್ಞಾನದ ಬಲದಿಂದ "ಎಲ್ಲವೂ ಬ್ರಹ್ಮ" "ಜಡವೂ ಬ್ರಹ್ಮ" "ನಾನೂ, ನೀನೂ ಎಲ್ಲರೂ ಬ್ರಹ್ಮ" ಎಂಬ ಮಹಾಸಿದ್ಧಾಂತಗಳನ್ನು ಮಹರ್ಷಿಗಳು ಸಾರಿದರು. ಮಹಾ ಜ್ಞಾನಿಯಾದರೂ, ಕಾಮಕ್ರೋಧಾದಿಗಳನ್ನು ಗೆದ್ದವನಾದರೂ, ವಾತ್ಸ್ಯಾಯನನು ಕಾಮಸೂತ್ರಗಳನ್ನು ಹೊಸೆಯಲು ಸರ್ವಥಾ ಸಮರ್ಥನಾದನು. ಆತ್ಮಜ್ಞಾನಿಯೂ, ಸ್ಥಿತಪ್ರಜ್ಞನೂ, ಯೋಗಿಯೂ ಆದವನೇ ಈ ಜೀವನದ ಜಂಜಡದಲ್ಲಿಯೂ, ಚೈತನ್ಯಯುತನಾಗಿ ಜೀವಿಸಬಲ್ಲನು. ಆತನ ಜೀವನವೇ ತುಂಬುಜೀವನ ವೆಂದೆನಿಸುವುದು. ಆ ಸಿದ್ಧಪುರುಷನೇ ಪ್ರಪಂಚದಲ್ಲಿದ್ದೂ ಪರಿಪೂರ್ಣತೆಯನ್ನು ಪಡೆದುಕೊಳ್ಳಲು ಸಮರ್ಥನಾಗುವನು. ಆತನು ಆಂತರಿಕ ಸ್ಥಿತಿಯ ಆಗು-ಹೋಗುಗಳನ್ನು ತನ್ನ ಸಾಧನೆಯ

ಕುಟಜಾರಿಷ್ಟ :— ಆಮಾಂಶ, ಅಜೀರ್ಣ, ಹೊಟ್ಟೆ ಮುರಿಯುವದು ಮೊದಲಾದ ವಿಕಾರಗಳಿಗೆ ಶ್ರೇಷ್ಠವಾದ ಔಷಧ.

ಕಾಸಶ್ವಾಸಾರಿ :— ದಮ್ಮು, ಕೆಮ್ಮುಗಳಿಗೆ ಅನುಭವಸಿದ್ಧ ಔಷಧ

ನೂತನ ಆಯುರ್ವೇದ
ಕಾರ್ಯಾಲಯ ಲಿ.
ವಿಜಾಪುರ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ● ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ● ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಮೂಲಕ ಸರ್ವತೋಮುಖವಾಗಿ ಅರಿತಿರುವುದರಿಂದ, ಬಾಹ್ಯ ಜಗತ್ತಿನ ಕ್ರಮ, ಮತ್ತು ಬಾಹ್ಯ ಜೀವನದ ವಿವೇಚನೆ ಮುಂತಾದುವುಗಳು ಸಮಗ್ರವೂ, ಅವಿಚಲವೂ, ನಿತ್ಯವೂ ಆಗಬಹುದು. ಆದುದರಿಂದ ಮಾನವನು ಆಧ್ಯಾತ್ಮಿಕ ಪ್ರವೃತ್ತಿಯುಳ್ಳವನಾಗುವ ಕಾಲವು ಬಳಿಸಾರಿದೆ. ತನ್ನನ್ನು ತಾನೇ ಬಂಧಿಸಿಕೊಂಡು ಬಳಲುತ್ತಿರುವ, ಬಿಡುಗಡೆಗಾಗಿ ಹಾತೊರೆಯುತ್ತಿರುವ ಅವನಿಗೆ ಆಧ್ಯಾತ್ಮಿಕತೆಯೇ ಹಿರಿದಾದ ಉಪಾಯ. ಯೋಗಸಾಧನೆಯೇ ಪರಮಸಾಧನ. ಇಚ್ಛೆ, ಚಿಂತೆ, ಕಾಮನೆಗಳನ್ನು ತ್ಯಜಿಸಿ, ಬುದ್ಧಿ, ಮನ, ಪ್ರಾಣಗಳ ಸಂಕುಚಿತತೆಯನ್ನು ಸರಿಸಿ, ಆಧ್ಯಾತ್ಮಿಕ ಆನಂದದಿಂದ ಕೂಡಿದ, ಶ್ರದ್ಧಾಯುಕ್ತವೂ ಆಶಾವಿಮುಕ್ತವೂ, ನಿಷ್ಕಾಮವೂ ಆದ ಜೀವನದಿಂದ ಸ್ಫೂರ್ತಿಯನ್ನರಸುವ ಕಾಲವು ಸನ್ನಿಹಿತವಾಗುತ್ತಿದೆ. ವಿಶ್ವವು ವಿನಾಶದಿಂದ ಪಾರಾಗಲಿಚ್ಛಿಸುತ್ತಿದ್ದರೆ, ಪರಮಾತ್ಮನ ಅನುಗ್ರಹವನ್ನು ಅರಸಿ, ಪ್ರಕೃತಿಯ ನಿರಂತರ ವಿಕಾಸಕ್ರಮಕ್ಕೆ ಸಹಾಯವೀಯಲು, ವಿಶ್ವಸ್ಥರೆಲ್ಲರೂ ಸಿದ್ಧರಾಗಬೇಕು. ನಾವು ಹೊಂದಬೇಕಾದ ಪರಿವರ್ತನೆ ಮತ್ತು ಯೋಗಸಿದ್ಧಿಯ ಅವಶ್ಯಕತೆ ಮತ್ತು ಅತಿಮಾನವ ಅಥವಾ ದೇವಮಾನವತೆಯ ಲಕ್ಷಣಗಳ ಬಗ್ಗೆ, ಅರವಿಂದರ ಸುಂದರ ನುಡಿಗಳನ್ನು ಆಲಿಸೋಣ. ಆಧ್ಯಾತ್ಮಿಕ ಜೀವನವು ತನ್ನ ಪೋಷಣಶಕ್ತಿಯನ್ನು ಕಾಮನೆಯಿಂದ ಪೂರೈಸಿಕೊಳ್ಳದೆ, ವಾಸ್ತವ ಜೀವನದ ನಿರ್ಮಲವೂ, ಸ್ವಾರ್ಥರಹಿತವೂ ಆದ ಆತ್ಮಿಕ ಆನಂದದಿಂದ ಪಡೆಯುವುದು. ಇಚ್ಛಾಮುದ್ರಾಂಕಿತವಾದ ನಮ್ಮಲ್ಲಿರುವ ಪ್ರಾಣವಸ್ತುವಲ್ಲದೆ (Vital Nature), ನಮ್ಮ ಮಾನಸಿಕ ಪುರುಷನೂ ಕೂಡ ನವಜನ್ಮವನ್ನೂ ಮತ್ತು ರೂಪಾಂತರಿತವಾದ ಸ್ಥಿತ್ಯಂತರವನ್ನೂ ಹೊಂದಬೇಕಾಗುವುದು. ವಿಚ್ಛಿನ್ನವೂ, ಅಹಂಭಾವಿಯೂ, ಸಂಕುಚಿತವೂ ಮತ್ತು ಮೂಢವೂ ಎನಿಸಿರುವ ನಮ್ಮ ವಿಚಾರ ಮತ್ತು ಬುದ್ಧಿಗಳು ಹಿಂಗಿಹೋಗಿ, ಅರ್ಧಸತ್ಯಕ್ಕಾಗಿ ಸವರಾಡುವುದರಿಂದಲೂ ಹಾಗೂ ಮುಗ್ಗರಿಸುವ ನ್ಯೂನತೆಗಳಿಂದಲೂ, ಮುಕ್ತವಾದ—ಸ್ವಾಭಾವಿಕವೂ ಸ್ವಯಂಭೂತವೂ ಆದ—

ಸತ್ಯ-ಚೈತನ್ಯವಾಗಿ (Truth-Consciousness) ಅಂತಿಮ
ಉಜ್ವಲಗೊಳ್ಳುವ ಮಾಯಾರಹಿತವಾದ ದಿವ್ಯ ಪ್ರಕಾ
ನಿರ್ದೋಷವೂ ಮತ್ತು ಸರ್ವಗ್ರಾಹಿಯೂ ಆದ ಲೀಲಾ ಪ್ರ
ಹವೇ ಸಾಗಿ ಬರಬೇಕು. ಕಂಗೆಟ್ಟ ಮತ್ತು ತತ್ತರಿಸುವ, ಹಾ
ಸ್ವಾರ್ಥಕೇಂದ್ರವೆನಿಸಿದ ಕ್ಷುದ್ರಾಭಿಲಾಷೆಯ ನಮ್ಮ ಚಿತ್ತ
ಮತ್ತು ಕರ್ಮವೂ ಶಾಂತವಾಗಿ, ಶೀಘ್ರಶಕ್ತಿಯುಳ್ಳದ್ದೂ, ಸ್ವ
ವಾಗಿ ಸ್ವಯಂಪ್ರೇರಿತವಾದದ್ದೂ, ದಿವ್ಯ ಚಲನಕಾರಿ
ಮತ್ತು ದಿವ್ಯಮಾರ್ಗದರ್ಶಿತವೂ (Divinely Guide
ಆದ ಶಕ್ತಿಯ ಸಮಗ್ರ ಕಾರ್ಯಸಾಧನೆಗಾಗಿ
ಗೊಡಬೇಕು. ದಿವ್ಯ ಸಂಕಲ್ಪದೊಂದಿಗೆ ನಿರ್
ವಾಗಿಯೂ, ಸಹಜವಾಗಿಯೂ ಐಕ್ಯಹೊಂದಿದ, ವ್ಯಕ್ತಿಭೇ
ರಹಿತವೂ, ಅನುಮಾನಾತೀತವೂ, ಮತ್ತು ನಿರಾತಂಕವೂ
ಪರಮ ಸಂಕಲ್ಪ ಶಕ್ತಿಯೊಂದನ್ನು ನಮ್ಮ ಕಾರ್ಯಗಳಲ್ಲೆಲ್ಲ
ಪಡಿಸಿಕೊಂಡು, ಅದನು ಚೈತನ್ಯಗೊಳಿಸಬೇಕು. ಸತ್ವಹೀನವ
ನಮ್ಮ ಅಹಂಕಾರದ ವಿಕಾರಗಳ ಅಸಂತೃಪ್ತತೆಯ ಬಾಹ್ಯ ಆ
ವನ್ನು ಪಡೆದು, ಅವುಗಳ ಹಿನ್ನೆಲೆಯಲ್ಲಿ ತನ್ನ ಸರತಿಗಾಗಿ ಕಾ
ಕುಳಿತಿರುವ ಗೂಢವೂ ಗಂಭೀರವೂ ಮತ್ತು ಅಪಾರವೂ
ಆತ್ಮಿಕ ಹೃದಯವು (ಚೈತ್ಯಪುರುಷ, Psychicheart) ಆದ
ಪ್ರತಿಯಾಗಿ, ಪ್ರಕಟಗೊಳ್ಳಬೇಕು. ದಿವ್ಯತ್ವವು ನೆಲೆಸಿದ ಈ ಅಂ
ರಿಕ ಹೃದಯದಿಂದ ಹೊರದೂಡಲ್ಪಟ್ಟ ನಮ್ಮ ವಿಕಾರಗಳು, ದೈ
ಪ್ರೇಮ ಹಾಗೂ ಬಹುವಿಧ "ಆನಂದ"ದ ಅನುರಾಗದ ಶಾ
ಹಾಗೂ ಸೂಕ್ಷ್ಮ ಸೂತ್ರಗಳಾಗಿ ಅನುವರ್ತಿಸಲ್ಪಡುವುವು. ಇ
ದೇವಮಾನವತೆಯ ಅಥವಾ ಅತಿಮಾನವ ಜನಾಂಗ
ವ್ಯಾಪ್ತಿ"

ನಮ್ಮ ಭಾವನೆಗಳು ವಿಕಾಸವಾಗಿ ಅತ್ಯಂತ ಮೇಲ್ಪಟ್ಟವನ್ನು
ಮುಟ್ಟಿ ದಿವ್ಯಮಯವಾದಾಗಲೇ ದೇವಮಾನವತೆಯ ಉದಯ
ವಾಗುವುದು. ಬುದ್ಧಿ, ವಿಚಾರಗಳೆಲ್ಲ ವೃದ್ಧಿಹೊಂದುತ್ತ ಅನಂ
ಸತ್ಯವನ್ನೂ, ಚಿತ್ತ-ಚೈತನ್ಯವನ್ನೂ, ಆತ್ಮಜಾಗೃತಿಯನ್ನೂ ಅರಸು
ವುದರತ್ತ ಕೇಂದ್ರೀಕೃತನಾಗಬೇಕೆಂದು ಅರವಿಂದರ ಅಭಿಲಾಷೆ
ಪ್ರಕೃತಿಯು ಸತತವಾಗಿ ವಿಕಾಸಹೊಂದುತ್ತಲೇ ಇದ್ದಾ
ಉತ್ಕ್ರಾಂತಿಯು ಬಾಳಿನ ಪ್ರತಿರಂಗಗಳಲ್ಲಿ ನಡೆದೇ ಇರುವುದ
ದೇವಮಾನವರ ಪೀಳಿಗೆಯ ಜನನವೇ ಪ್ರಕೃತಿಯ ಮುಂದಣಗು
ಆ ದಿಶೆಯಲ್ಲಿ ವಿಕಸಿಸುತ್ತಿರುವ ಸೃಷ್ಟಿಮಾತೆಗೆ ನಾವು, ಯೋಗದಿಂ
ಸಾಧನೆಯಿಂದ ನೆರವೀಯಬೇಕು. ಈ ಸಚ್ಚಿದಾನಂದ ಸೃಷ್ಟಿಯ
ಪ್ರತಿಯೆಡೆಯಲ್ಲಿ ಒಂದು ಶಕ್ತಿಯ ಅಂಶ ಅಡಗಿದೆ. ಜಡತ್ವದ
ಜೀವನವು, ಜೀವನದಲ್ಲಿ ಚಿತ್‌ಶಕ್ತಿಯು, ಜೀವನ-ಮನಸ್ಸುಗಳಲ್ಲಿ
ಘನಚೈತನ್ಯವು ಹುದುಗಿದೆ. ಪರಮಾತ್ಮನು ತನ್ನ ದಿವ್ಯಶಕ್ತಿಯ
ಸಂಚಕಾರವನ್ನಿತ್ತು ಸರ್ವಸೃಷ್ಟಿಯನ್ನು ದಿವ್ಯಮಯನಾಗಿ
ಮಾರ್ಪಡಿಸುತ್ತಾನೆ. ಆ ಮಾರ್ಪಾಡಿನ ಮಹಾಕ್ರಮದಲ್ಲಿ ನಮ್ಮ
ನೆರವು ಅಗತ್ಯ. ಬುದ್ಧಿ, ಚಿತ್ತ, ಪ್ರಾಣ, ದೇಹಗಳ ತಮೋಭಾವ

ನ್ನು ದೂರೀಕರಿಸಿ, ನಮ್ಮಲ್ಲಿಯೇ ಅಡಗಿದ ಚೈತನ್ಯವನ್ನು
ಗೃತಗೊಳಿಸಿ, ಚಿತ್ತ, ಮನ, ಪ್ರಾಣ, ಪಿಂಡಗಳಲ್ಲೆಲ್ಲ ಆ ಚೈತನ್ಯ-
ತುಂಬಿ, ಅತಿಮಾನಸ ಶಕ್ತಿಗಭಿಮುಖವಾಗಿ ವಿವಿಧ ಹಂತ-
ನ್ನೇರುತ್ತ ನಾವು ಮುಂದೆ ಸಾಗಿದಾಗ, ಪ್ರಕೃತಿಯ ಓಘವೂ
ಡ ಅಮೋಘವಾಗುವುದು. ವ್ಯಕ್ತಿಯಲ್ಲಿ, ಎಂದರೆ ವ್ಯಕ್ತಿಯ
ರಾಳದಲ್ಲಿ ಹೊಳೆದ ಈ ಅಂತರ್‌ಜಾಗೃತಿಯ ಕಿರಣವು, ಜಡ-
ನವನ್ನು ಬೆಳಗಿದಾಗ, ಜಡತೆಯಲ್ಲಿ ನಿಮಜ್ಜನಹೊಂದಿದ
ಗಳ ದಿವ್ಯಪ್ರಕಾಶವನ್ನು ಪಸರಿಸಿರುವಾಗ, ಬ್ರಹ್ಮಾಂಡದಲ್ಲಿ
ಮಾನವರ ಕುಲವೇ ಪ್ರಕಾಶಗೊಳ್ಳುವುದು. ಇದು ಆಯಾ
ಯ ಅಂತಸ್ಥ ಜಿಜ್ಞಾಸೆ, ಜ್ಞಾನಗಳ ಮೇಲೆ ಅವಲಂಬಿಸಿದೆ.
ಲ್ಲಿ ಕೆರಳುತ್ತಿರುವ ದಿವ್ಯಜಿಜ್ಞಾಸೆಗೆ ತಕ್ಕ ಪಾರುಪತ್ಯ ಆತ್ಮ-
ಾಗಿ ಬಂದಾಗಲೇ ಮಾತ್ರ. ಆತನಿಗೆ ಅಪೂರ್ವವಾದ ದರ್ಶನವು.
ಲಬಹುದು. ಜ್ಞಾನ, ಕಾಮ, ಕರ್ಮಗಳ ಆಟವೇ ನಮ್ಮ
ನ (Play of Knowledge force, desire force,
on force). ಇವೆಲ್ಲ ಆದ್ಯಶಕ್ತಿಯ ಮೌಲಿಕಶಾಖೆಗಳು.
, ಕರ್ಮಗಳ ಸುವ್ಯವಸ್ಥಿತ ಸಮನ್ವಯದಿಂದ ಪ್ರೇಮ
ಾ ಭಕ್ತಿಯು ಮೊಳೆತು, ಜ್ಞಾನ, ಕರ್ಮ, ಪ್ರೇಮಗಳ
ಕ ಮೊದಲೇ ಉದ್ದೀಪಿತವಾದ ಅಂತಃಶಕ್ತಿಯನ್ನು
ಸುವುದರಿಂದ, ನಮ್ಮ ಬುದ್ಧಿ, ಪ್ರಾಣ, ಮನ, ಚಿತ್ತ,
ಳು ಸತ್ಯದ ಜಾಗೃತಿಯನ್ನು ತಲುಪಲು ಉಜ್ಜುಗಿಸುವುವು.
ಯು ಹಿಂಗಿಹೋಗಿ, ಸರ್ವತರದ ವಾಸನೆಗಳು ನಾಶ-
, ದಿವ್ಯಶಕ್ತಿಯ ಆಟವು ವ್ಯಕ್ತಿಯ ಅಂತರಂಗದಲ್ಲಿಯೂ,
ಕ ಬ್ರಹ್ಮಾಂಡದಲ್ಲಿಯೂ, ನಿರಾತಂಕವಾಗಿ ಜರುಗುವುದು.
ಂದ ಆಂತರಿಕ ಆತ್ಮಶಕ್ತಿಯನ್ನು ಸುತ್ತುಗಟ್ಟಿದ ಜಾಡ್ಯ-
ಸಡೆಹೆಣೆದು, ಆದ್ಯಶಕ್ತಿಯ ಉದ್ದಿಶ್ಯಸಾಧನೆಗಾಗಿ ಅದನ್ನು
ಾಳಿಸಬೇಕು ಅಹಂ ಆತ್ಮದ ಆತಿ-ಆಮಿಷಗಳನ್ನು
ಸಿದರೆ, ಆತ್ಮದರಿವು, ಆತ್ಮಜ್ಞಾನ ಕ್ರಮವಾಗಿ
ವಿಸುವುವು. ಜಾಗೃತಿಯು ಜನಿಸಿ ಜ್ಞಾನವು ಸ್ಫುಟ-
, ಪ್ರೇಮವು ಪ್ರಕಟವಾಯಿತೆಂದರೆ, ಕರ್ಮದಲ್ಲಿ
ತೆಯು ಕೊನರಿತೆಂದರೆ, ಅವಿನಾಶಿಯಾದ ಆತ್ಮವು
ದು. ಸಂಕಲ್ಪಶಕ್ತಿಯಿಂದ ಅರಳಿದ ಆತ್ಮವು ಕರ್ಮ-
, ಪ್ರೇಮದಲ್ಲಿಯೂ, ಜ್ಞಾನದಲ್ಲಿಯೂ ಹೆಚ್ಚಾಗಿ
ೊಂದುತ್ತ ಹೋದಾಗ, ದಿವ್ಯಾತ್ಮನ ಅನುಗ್ರಹದ
ಅಂತಿಮ ಅಂತಸ್ತನ್ನು ಆರೋಹಿಸಲು ಶಕ್ತವಾಗಿ,
ಂಥ ಸತ್ಯವು ವಿಶ್ವದಲ್ಲಿಯ ಅನ್ಯರ ಆತ್ಮಜಾಗೃತಿಗೆ
ೂತವಾಗುವುದಲ್ಲದೇ, ಸಮಸ್ತ ಭೂಮಂಡಲದ ವಿಶಾಲ
ಕನೆ ಒಂದುಗೂಡಿ, ಅಮರತ್ವದ ರಾಜ್ಯದಲ್ಲಿಯೇ
ವೂ ವಿಹರಿಸುವುದು. ಅಂಥ ಆತ್ಮಜ್ಞಾನಿಗೆ ಕರ್ಮ-
ಕ್ಕೆ. ಆದರೆ ಆತನು ಜಗತ್ತಿನಲ್ಲಿ ಕರ್ಮವನ್ನು ಗೈವನು.
ಆನಂದವನ್ನು ಅನುಭವಿಸುವನು. ಆದರೆ ಈ ಲೌಕಿಕಜೀವನಕ್ಕೆ ಅವನು ಅಂಟಿಕೊಳ್ಳಲಾರ. ಯಾಕೆಂದರೆ ಪರಮಹಂಸರು ಹೇಳುವಂತೆ, ಜೀವನದ ಹಲಸಿನ ಹಣ್ಣನ್ನು ಹೆಚ್ಚುವ ಮುನ್ನ ಆತನು ತನ್ನ ಮನಸ್ಸಿಗೆ ದಿವ್ಯಜ್ಞಾನದ ಎಣ್ಣೆಯನ್ನು ಹಚ್ಚಿಕೊಂಡಿರುತ್ತಾನೆ. ಕನ್ನಡದ ಆಧುನಿಕ ಕವಿಯೊರ್ವನು ಹಾಡಿದಂತೆ ಆತನು ಸರ್ವರಿಗೆ ಹೀಗೆ ಹೇಳುತ್ತಾನೆ:

"ಇಂದು ನಾವೆಮ್ಮೊಳಾ ಮೃಣ್ಮಯದ ಸಂಸಾರದಿಂ
ಮಥಿಸುವಂ ಚಿಜ್ಜ್ಯೋತಿಯಮೃತದಾ ಸಾರವಂ
ದಿವ್ಯಸಾಕ್ಷಾತ್‌ಕರಣ, ವಿಜ್ಞಾನದವತಾರವಂ"

ವಿಜ್ಞಾನಕ್ಕೆ ಇಲ್ಲಿ ಅರ್ಥವೆಂದರೆ, ಅಂತರಂಗವರ್ಧಮಾನವಾದ ವಿಜ್ಞಾನದ ಸಂವರ್ಧನೆ. ಮನಸ್ಸಿನ ಮೇಲ್ಮಟ್ಟವನ್ನು ಅರಿಯಲು ತವಕಿಸುತ್ತ ಪ್ರಖರವಾಗಿ ಪ್ರಯತ್ನಿಸುವ ಅವನ ಸಾಧನೆಯ ಸ್ಥಿತಿಗೆ Higher Mind ಎನ್ನುತ್ತಾರೆ. ಅನಂತರ ಆತನ ಮನಸ್ಸು, ಜಾಗೃತಿಯಲ್ಲಿಯೂ, ಜ್ಞಾನದಲ್ಲಿಯೂ ಪ್ರಕಾಶಗೊಳ್ಳುವುದರಿಂದ ಅದಕ್ಕೆ Illumined Mind ಎನ್ನುವರು. ಆತನಲ್ಲಿ ಅಂತರ್‌ಜ್ಞಾನವು, ಅಂತರ್‌ದೇಹದ ಅಂತಃಪ್ರಾಣಗಳ ವಿಕಾಸವು ಸಾಧ್ಯವಾದಾಗ, ಅವನಲ್ಲಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ್

ಮನೋಹರ {ನೀಲಿ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಪರೀಕ್ಷೆಯಲ್ಲಿ ಹೊಲಿಗೆ ತೆಗೆದುಕೊಂಡವರಿಗಾಗಿ ಹೊಲಿಗೆಯ ಮಾದರಿಗಳು

ವಿವಿಧ ಉಡುಪುಗಳನ್ನು ಸರಿಯಾದ ಅಳತೆಗಳಲ್ಲಿ ಕತ್ತರಿಸಲು ಬರುವಂತೆ ಶಾಸ್ತ್ರೋಕ್ತವಾಗಿ ಕತ್ತರಿಸಿದ ಕಾಗದ ಮಾದರಿಗಳು ದೊರೆಯುತ್ತವೆ. ನಿಮಗೆ ಬೇಕಾದ ಅಳತೆಗಳನ್ನು ಕಳಿಸಿಯೂ ಅವುಗಳ ಮಾದರಿಗಳನ್ನು ಪಡೆಯಬಹುದು. ಒಂದಕ್ಕೆ ೮ ಆಣೆಯಂತೆ ಹಣ ಕಳಿಸಿ ಇಂದೇ ತರಿಸಿಕೊಳ್ಳಿರಿ. ಉತ್ತರಕ್ಕೆ ಅಂಚೆಯ ಚೀಟಿ ಇಟ್ಟು ಬರೆಯಿರಿ

ವಿವರಕ್ಕೆ :

ಕರ್ನಾಟಕ ಹೊಲಿಗೆಯ ವಿದ್ಯಾಲಯ

ಗಾಂಧೀಚೌಕು, ಧಾರವಾಡ.

ಅಂತಃಪ್ರೇರಣೆಯೂ ಪ್ರಾರಂಭವಾದಾಗಿನ ಒಮ್ಮನಸ್ಸಿನ ಸ್ಥಿತಿಗೆ Intutive mind ಎನ್ನಲಾಗುತ್ತದೆ ಅತಿಜಾಗೃತಾವಸ್ಥೆಯನ್ನು ತಲುಪಿ, ಅನಂತಸತ್ಯವನ್ನು ಕಂಡ ಮನಸ್ಸು, ಆ ಸತ್ಯವನ್ನು ವಿಶ್ವದಲ್ಲಿ ವಿಸ್ತರಿಸಲು ಸಮರ್ಥವಾದಾಗ, ಅದಕ್ಕೆ Over mind ಹಾಗೂ ಮುಂದಿನ ಅಂತಿಮ ಅಂತಸ್ತಿಗೆ Supermind ಅಥವಾ Truth-consiousness ಎನ್ನುವರು ಇದಕ್ಕೇ ಅಧ್ಯಾತ್ಮಿಕ ವಿಕಾಸವೆನ್ನುವರು (Spiritual evolution) ಈ ವಿಕಾಸದ ಉದ್ದಿಶ್ಯ ಅತ್ಮವಿಜ್ಞಾನಂತರ ಕುಲವನ್ನು ಪ್ರಕಾಶಗೊಳಿಸುವುದು. (Gnostic beings) ಭಗವದ್ಗೀತೆಯ ದ್ವಿತೀಯಾಧ್ಯಾಯದಲ್ಲಿ ಕೃಷ್ಣನು ಹೇಳುವ ಸ್ಥಿತಪ್ರಜ್ಞನ ಲಕ್ಷಣಗಳೇ ಅರವಿಂದರ " Gnostic Being " ಕ್ಕೆ ಅನ್ವಯಿಸಬಲ್ಲವೆಂದು ಹೇಳಬಹುದು. ಜಡತೆಯಲ್ಲಿ ಮುಳುಗಿದ ವಿಕಾರಗಳಲ್ಲಿ ಬೆಳಗಿದ ಜ್ಞಾನಶೂನ್ಯವಾದ ಮಾನವೀಯ ಮನಸ್ಸಿಗೆ ಇದೆಲ್ಲಾ ಸಾಧ್ಯವೇ ? ಅರವಿಂದರ ತರ್ಕಬದ್ಧ ಸಮಾಧಾನವನ್ನು ಕೇಳಿ :

" ಪ್ರಾಣಿಪ್ರಪಂಚವು ಮಾನವನನ್ನು ನಿರ್ಮಿಸಿದ ಪ್ರಕೃತಿಯ ಸಜೀವ ಪ್ರಯೋಗಶಾಲೆಯೆಂದು ಹೇಳಲ್ಪಡುವುದು (ಹಾಗೆಯೇ) ಮಾನವನ ಚೈತನ್ಯಯುಕ್ತ ಸಹಕಾರದಿಂದ ದೇವಮಾನವನನ್ನು ಸೃಜಿಸಲು ಸಂಕಲ್ಪಿಸುವ ಅವಳ (ಪ್ರಕೃತಿಯ) ವಿಚಾರಶಕ್ತಿಯುಕ್ತವೂ ಸಜೀವವೂ ಆದ ಪ್ರಯೋಗಶಾಲೆಯಾಗಬಲ್ಲನು ಮಾನವನು " ಪ್ರಕೃತಿಯು ಪ್ರಾಣಿಪ್ರಪಂಚದ ಜೀವಯುಕ್ತ ಅಂಶದಿಂದ ಬುದ್ಧಿಯುಕ್ತ ಮಾನವನನ್ನು ನಿರ್ಮಿಸಿದಳು. (ಡಾರ್ವಿನನ ಕ್ರಮವಿಕಾಸತತ್ತ್ವವನ್ನು ಇಲ್ಲಿ ನೆನೆಯಬಹುದು.) ಮನುಷ್ಯನು ಬುದ್ಧಿಜೀವಿ. ಅತನ ಬುದ್ಧಿಯ ವಿಕಾಸದಿಂದ, ಸೃಷ್ಟಿಯು ಮನುಷ್ಯನನ್ನು ದೇವಮಾನವನನ್ನಾಗಿ ಪರಿವರ್ತಿಸಬಲ್ಲಳು. ಮಾನವನಲ್ಲಿ ಮಹಿಮೆ ಇದೆ. ಸತ್ತ್ವವಿದೆ. ಬಗ ಬೆಳಗಬಲ್ಲ ಜ್ಞಾನತೇಜವಿದೆ. ಆತ್ಮಬಲವೂ ಇದೆ. ಅರಿತುಕೊಳ್ಳಲುಪಯುಕ್ತವೆನಿಸುವ ತತ್ತ್ವಗಳನ್ನೂ ಆಗಾಗ ಬೋಧಿಸಲಾಗಿದೆ. ಆದರೂ ಆತನು ತನ್ನ ತರ್ಕಬ ಬಣ ಜಂಜಾಟದಲ್ಲಿಯೇ ಜೀವಿಸಲಿಚ್ಛಿಸುತ್ತಿದ್ದಾನೆ. ಪರಂ ದೋಷಗಳನ್ನು ಕೊಡೆದುಹಾಕಲು ಹೋಗಿ, ಗುಣಗ ಕಿತ್ತೆಸೆದಿದ್ದಾನೆ. ಹೀಗಾಗಿ ಆವನು 'ಗತಿಗೆಟ್ಟಿರುವ ಆ ವಿಚಾರಪ್ರಣಾಲಿಯ ದೋಷಗಳನ್ನೂ ಕೂಡ ಗುಣಗಳ ವಾ ವಿಚಾರವಿಹೀನನಾಗಿ ಸ್ವೀಕರಿಸಿದ್ದರಿಂದ, ಆತ್ಮಿಕ ಆ ಮಾತೇಕೆ.... ಲೌಕಿಕ ಆನಂದವನ್ನು ಕೂಡ ಅನುಭವಿಸಲಾ ನಾಗಿದ್ದಾನೆ. ಹೀಗಾಗಿ ಆತನು ಬರಿಯ ಯಂತ್ರವಾಗಿದ್ದಾ

ವಿವೇಕಾನಂದರ ನೊಂದ ನುಡಿಯಿದು :

" ಶತಮಾನಗಳ ಕಾಲ ಅಧಃಪಾತಕ್ಕೆ ಕಾರಣವಾ ತತ್ತ್ವಗಳನ್ನೇ ಜನತೆಗೆ ಉಪದೇಶಿಸಲಾಗಿದೆ. ಅಖಿಲ ಜ ಜನಗಳಿಗೆಲ್ಲ ತಾವು ಮಾನವರಲ್ಲವೆಂದೇ ಹೇಳಲಾಗಿದೆ." ಅ ಅರವಿಂದರು ಹೇಳುತ್ತಾರೆ:

" ಪರಿಪೂರ್ಣ ಜೀವನದ ಐಕ್ಯತೆಯಲ್ಲಿ ಸರ್ವರನ್ನೂ ಬಂಧ ಮುಕ್ತರವಾದ ಪೂರ್ಣಸತ್ಯದ, ಪೂರ್ಣಜ್ಞಾನದ ಪ ಪೂರ್ಣಶಕ್ತಿಯ ಅಗತ್ಯವಿದೆ. "

ಶಾರದಾ ಪ್ರಕಟನಾಲಯದ ಹೊಸ ಪ್ರಕಟನೆ

ಕಾದಂಬರಿ ಕ್ಷೇತ್ರದಲ್ಲಿ ಹೊಸ ಹೆಜ್ಜೆ

ಹೊಸರೀತಿಯ ಆಕರ್ಷಕ ರಕ್ಷಾಪತ್ರ

೪೬೦ ಪುಟದ ಕಾದಂಬರಿ

ಸರ್ವಮಂಗಳ

ಲೇಖಕರು : ಶ್ರೀ. 'ಚದುರಂಗ'

ಬೆಲೆ: ೪ರೂ. ೮ ಆ.

ಅಂಚೆಯ ಮೂಲಕ : ೫ ರೂ

ವಿ. ಪಿ. ಮೂಲಕ ತರಿಸಲಿಚ್ಛಿಸುವವರು ೧ ರೂ. ಯನ್ನು ಮುಂಗಡವಾಗಿ ಕಳುಹಿಸಬೇಕು.

ಶಾರದಾ ಪ್ರಕಟನಾಲಯ

ಅರಳೇಪೇಟೆ ಬೆಂಗಳೂರು ೨

ಕಸೂತಿ ಕಲಿಯಬೇಕೆ ?

ಕು. ಸರೋಜಿನಿ ತುಹಸಿ, ಧಾರವಾಡ

★

ಎಳೆಯೆಳೆಯಾದ ದಾರಗಳಿಂದ ನಳನಳಿಸುವ ಹಸುರೆಲೆಗಳನ್ನೂ ಆಗತಾನೆ ಅರಳಿದ ಚೆಂಗುಲಾಬಿಯನ್ನೂ ನಿರ್ಮಿಸಿ ನೋಡುವುದು ಎಂತಹ ಸಂತಸದ ಸಂದರ್ಭ ?

ಚಿತ್ರತುಂಬುವ ರೀತಿಗಳ ಬಗ್ಗೆ ಕಳೆದ ಸಂಚಿಕೆಯಲ್ಲಿ ಕೆಲವು ...ಗಳ ಹೇಳಿದ್ದೆನಲ್ಲವೆ ? ಈಗ ಅದೇ ವಿಷಯ ಮುಂದುವರಿಸಿ ...ರುತ್ತೇನೆ. ಎಲೆಯಲ್ಲಿ ಎರಡು ಸಮಭಾಗ ಮಾಡಿಕೊಂಡ ಬಳಿಕ ...ನಡುವಿನ ಶಿರದ ಮೇಲೆಯೂ, ಎಲೆಯ ಒಂದು ಭಾಗದ ಗೆರೆಯ ...ಲೆಯೂ, ಸಮಾನಾಂತರದಲ್ಲಿ ಚುಕ್ಕೆಗಳನ್ನಿಡು. ಮೊದಮೊದಲು ...ಭ್ಯಾಸಮಾಡುತ್ತಿರುವಾಗ, ಈ ಚುಕ್ಕೆಗಳು ಸ್ವಲ್ಪ ದೂರವಾಗಿ...ರೂ ಅಡ್ಡಿಯಿಲ್ಲ; ಬಟ್ಟೆಯನ್ನು ಕಟ್ಟಿನಲ್ಲಿ ಗಟ್ಟಿಯಾಗಿ ಕೂಡಿಸಿ, ...ಚಿತ್ರದ ಸೂಜಿ ಈ ಸಮಾನಾಂತರದ ಎರಡೂ ಬದಿಯ ಚುಕ್ಕೆ...ಲ್ಲಿ ಸರಿಯಾಗಿ ಬೀಳುವಂತೆ, ಹೆಣೆಯಲು ಪ್ರಯತ್ನ ಮಾಡು. ...ದ-ಮೊದಲು ಸೂಜಿ ಹಿಂದುಮುಂದಾಗಿ, ಎಲೆ ಹೆಣೆದುದು ...ಷ್ಟು ಅಂದವಾಗಿ ಕಾಣಲಿಕ್ಕಿಲ್ಲ ; ಆದರೆ ರೂಢಿಯಾದಂತೆ, ಸೂಜಿ ...ಂದ ತಾನೇ ಹಿಡಿತದಲ್ಲಿ ಬರುವುದು; ಅಲ್ಲದೆ ಮೇಲೆ ಸಮಾ...ತರದಲ್ಲಿ ಕೊಟ್ಟ ಚುಕ್ಕೆಗಳನ್ನು ಇನ್ನಷ್ಟು ಸಮೀಪದಲ್ಲಿ, ...ಸಮಾನಾಂತರವಾಗಿ ಎರಡೂ ಬದಿಗೆ ಹಾಕಿ, ಸೂಜಿಯನ್ನು ಅಳವಿ...ಟ್ಟುಕೊಂಡು ಹೆಣೆದರೆ, ಎಲೆ ಬಹಳೇ ಅಂದವಾಗಿ ಕಾಣುವುದು. ...ಹೆಣಿಕೆಯ ಟಬ್ಬಿಗಳು ವಕ್ರವಾಗಿ ಎಲೆಯ ಉಪಶಿರಗಳ ದಿಕ್ಕಿ...ನಲ್ಲೀ ಬೀಳುವುದರಿಂದ, ಎಲೆ ತೀರ ನೈಸರ್ಗಿಕವಾಗಿ ಮೂಡಿ...ವುದು ; ಅಲ್ಲದೆ ಪೂರ್ಣ ತುಂಬಿಕೊಂಡು ಅಂದವಾಗಿ ಕಾಣು... ; ಛಾಯಾಪ್ರಧಾನ (Shaded silk) ರೇಶಿಮೆಯ ಮಹತ್ತ್ವ ...ನ ಟಬ್ಬಿಯಲ್ಲಿಗಿಂತ ಇಲ್ಲಿ ಹೆಚ್ಚು ; ವಿವಿಧ ಬಣ್ಣದ ಹಸುರಿನ ...ಗಿನಿಂದ ಎಲೆಯೂ, ಗುಲಾಬಿಯ ಐಶ್ವರ್ಯದಿಂದ ಅದೇ ...ದ ಹೂವೂ ಯಾರಿಗೆ ತಾನೇ ಸಂತಸವೀಯದು ?

...ಟಬ್ಬಿಯನ್ನು ಹೆಣಿಕೆಗಾಗಿ ಉಪಯೋಗಿಸುವಾಗ ಇನ್ನೊಂದು ... ನೆನಪಿನಲ್ಲಿಡುವುದು ಅವಶ್ಯ. ಈ ಟಬ್ಬಿಗಳು ಹತ್ತಿರಹತ್ತಿರ ...ಕೇನೋ ಸರಿ, ಆದರೆ ಒಂದರ ಮೇಲೊಂದು ಮಾತ್ರ ...ಡದು. ಒಂದರ ಮೇಲೊಂದು ಬಿದ್ದರೆ,– ಹೆಣಿಕೆಯ ನಯ... ಸರಿಯೇ ಸರಿ—ಎಲೆಯ ಅಂದವೂ ಮಾಯವಾಗಿ ಬಿಡು... ಅಲ್ಲದೆ ಇದರಲ್ಲಿಯ ಟಬ್ಬಿಗಳು ತೀರ ಉದ್ದುದ್ದವಾಗಿದ್ದ... ಹೆಣಿಕೆ ಅಂದವಾಗಿ ಕಾಣದು ; ಅದಕ್ಕಾಗಿ ...ಟಬ್ಬಿ ಯಾವಾಗಲೂ ಕಾಲು ಇಂಚಿಗಿಂತ ದೊಡ್ಡ...ದಿರುವುದೇ ಒಳ್ಳೆಯದು ; ಇದರಿಂದ ಹೆಣೆಯಲು ಸುಲಭ ; ...ಹೂ ಅಂದ. ಈಗ ಎಲೆಯಲ್ಲಿ ಎರಡು ಭಾಗಗಳಾಗಿ ಮಾಡಿ...ದೆ, ಉದ್ದಕ್ಕೂ ಒಂದೇ ಟಬ್ಬಿಯಿಂದ ಎಲೆಯನ್ನು ತುಂಬಿ...ದರೆ, ಅದಕ್ಕೆ ಅಂದವೇನು ಬಂತು ! ಎಲೆಯನ್ನು ಎರಡು ಭಾಗ-ವಾಗಿ ಮಾಡಿ ಛಾಯಾಪ್ರಧಾನವಾದ ರೇಶಿಮೆಯಿಂದ ದಟ್ಟವಾಗಿ ತುಂಬಿದರೆ, ಎಲೆಗೆ ನಿಜವಾಗಿಯೂ ಒಂದು ಅಪೂರ್ವ ಶೋಭೆ-ಯುಂಟಾಗುವುದು. ಛಾಯಾಪ್ರಧಾನವಾದ ರೇಶಿಮೆಯಿಲ್ಲದಿದ್ದಾಗ, ಎಲೆಯ ಬಣ್ಣಕ್ಕೆ ಹೊಂದಿಕೊಳ್ಳುವ ಬೇರೆಬೇರೆ ಹಸಿರು ಬಣ್ಣ-ಗಳನ್ನು ಒಂದರಲ್ಲಿ ಇನ್ನೊಂದು ಕೂಡಿಕೊಳ್ಳುವಂತೆ ಹೆಣೆದು ಕೂಡ ಈ ಅಂದವನ್ನು ತರಬಹುದು.

ಕಾರ್ಡಿಂಗ್ (Cording = ದಾರ ತುಂಬುವುದು.)

ಮೇಲೆ ಹೇಳಿದ ಉದ್ದು ಟಬ್ಬಿಯಿಂದ ಈ ಹೆಸರು ಬೇರೆಯಾಗಿ ಕಂಡರೂ, ಇವೆರಡೂ ಹೆಣಿಕೆಗಳ ತಳದಲ್ಲಿರುವ ತತ್ತ್ವ ಒಂದೇ. ಉದ್ದು ಟಬ್ಬಿಯಲ್ಲಿ ಟಬ್ಬಿಗಳು ಉದ್ದವಾಗಿ ವಕ್ರವಾಗಿ ಬಂದರೆ, ಈ "ದಾರದ ಟಬ್ಬಿ" ಯಲ್ಲಿ ಟಬ್ಬಿಗಳು ಅಡ್ಡವಾಗಿ ನಡುವಿನ ರೇಷೆಗೆ (ಬಹುತರವಾಗಿ) ಕಾಟಕೋನವಾಗಿಯೇ ಬರುವವು.

ಇನ್ನು ದಾರವನ್ನು ಒಳಗೆ ತುಂಬಿ, ಮೇಲೆ ಅದು ಕಾಣದಂತೆ ಅಡ್ಡಡ್ಡ ಟಬ್ಬಿಗಳನ್ನು ಹಾಕುವುದು ಈ ಟಬ್ಬಿಯಲ್ಲಿ ಮುಖ್ಯವಾದುದು. ಈ ಒಳಗಿನ ದಾರವು ಕೊಂಚ ದಪ್ಪವಾಗಿದ್ದರೆ, ಒಂದೇ ಎಳೆಯನ್ನೂ ತೆಗೆದುಕೊಳ್ಳಬಹುದು; ಆದರೆ ಎಳೆ ತೆಳುವಾಗಿ ನಯವಾಗಿದ್ದಾಗ ಮಾತ್ರ, ಮೂರುನಾಲ್ಕು ಎಳೆಗಳನ್ನು ಜೋಡಿಸಿ ತೆಗೆದುಕೊಳ್ಳಬೇಕಾಗುವುದು. ಉದಾಹರಣೆಗೆ ನಾವೀಗ ಯಂತ್ರಕ್ಕೆ ಉಪಯೋಗಿಸುವ ದಾರವನ್ನೇ ಈ "ದಾರದ ಟಬ್ಬಿ"ಗೆ ಉಪ-ಯೋಗಿಸಿದರೆ, ಅದರ ಮೂರುನಾಲ್ಕು ಎಳೆಗಳನ್ನು ತೆಗೆದುಕೊಳ್ಳ-ಬೇಕಾಗುತ್ತದೆ. ಈ 'ಟಬ್ಬಿ'ಯಲ್ಲಿ ದಾರದ ಮೇಲೆ ಟಬ್ಬಿಗಳು ಬರುವುದರಿಂದ, ಹೆಣಿಕೆ ಸ್ವಲ್ಪ ಎತ್ತರವಾಗಿ ಎದ್ದು ಕಾಣಿಸುವುದು. ಈ ಹೆಣಿಕೆಯಿಂದ, ದಪ್ಪಾದ ಅಂಚನ್ನು ಆಕೃತಿಯ ಸುತ್ತಲೂ ಮಾಡಿದಂತೆ ಅಂದವಾಗಿ ಕಾಣುವುದು. ಎಲೆ, ಹೂ, ಕಾಯಿಗಳ ದೇಟನ್ನೂ, ಹೂವು ಎಲೆ ಇತ್ಯಾದಿಗಳ ಬಾಹ್ಯರೇಷೆಯನ್ನೂ ಈ ದಾರದ ಟಬ್ಬಿಯಿಂದ ತುಂಬಿದಾಗ, ಎತ್ತರವಾಗಿ ತುಂಬಿಬಂದು, ಹೊಸ ಬಗೆಯ ಶೋಭೆಯೇ ಕಂಡುಬರುವುದು; ದೇಟುಗಳಂತೂ ನಯವಾಗಿ ಎದ್ದು ಕಾಣಿಸುವವು; ಎಲೆ ಹೂಗಳ ಬಾಹ್ಯರೇಷೆಗಳಿಗೂ, ಒಳಗಿನ ಹೆಣಿಕೆಗೂ ಪಾತಳಿಯಲ್ಲಿ ಭೇದವಾಗಿ, ಅವು ಎದ್ದು ಕಾಣುವವು. ಯಾವ ಬಟ್ಟೆಯ ಮೇಲೆ ಬೇಕಾದರೂ ಈ ಹೆಣಿಕೆಯನ್ನು ಉಪಯೋಗಿಸಬಹುದು ; ಆದರೆ ಒಳಗೆ ತುಂಬುವ ದಾರ ಮಾತ್ರ ಬಟ್ಟೆಯ ಪೋತಕ್ಕೆ ಸರಿಯಾಗುವಂತಹದಿರಬೇಕು

ಪ್ರೋಸ್ಲಿನ್ ಬಟ್ಟೆಯ ಮೇಲೆ, ಒಳಗೆ ತುಂಬುವ ದಾರ ಕೊಂಚ ದಪ್ಪವಾದರೂ ನಡೆಯಬಹುದು; ಆದರೆ ಆರ್ಗಂಡಿಗಳಂತಹ ತೆಳುವಾದ ಬಟ್ಟೆಯ ಮೇಲೆ, ಅಂತಹ ದಾರವನ್ನು ಉಪಯೋಗಿಸಿದರೆ ಪ್ರಮಾಣಬದ್ಧತೆ ತಪ್ಪಿಹೋಗಿ, ಬಟ್ಟೆ ಹೆಣಿಕೆಯ ಭಾರವನ್ನು ತಾಳಲಾರದೆ ಹೋಗುತ್ತದೆ. ಆದ್ದರಿಂದ ಅಂತಹ ಬಟ್ಟೆಯ ಮೇಲೆ ಒಳಗೆ ತುಂಬಲೂ ಕೂಡ ತೆಳುವಾದ ದಾರವನ್ನೇ ಉಪಯೋಗಿಸಬೇಕಾಗುತ್ತದೆ. ಈ ದಾರ ತುಂಬುವ ಹೆಣಿಕೆಯನ್ನು, ಪ್ಯಾಚ್-ವರ್ಕ್ (ಜೋಡಣೆಯ ಕೆಲಸ), ಓಪನ್ ವರ್ಕ್ ಇತ್ಯಾದಿಗಳಲ್ಲಿಯೂ ಉಪಯೋಗಿಸಬಹುದು. ಜಾಳಿಗೆಯ ಬಟ್ಟೆಯ ಮೇಲೆ ನಯವಾದ ದಾರವನ್ನು ತುಂಬಿ, ಈ ಹೆಣಿಕೆಯನ್ನು ಹೆಣೆದರಂತೂ ಅದು ಬಹಳ ಅಂದವಾಗಿ ಕಾಣುವುದು. ತೂತಿನ ಬಟ್ಟೆಯಲ್ಲಿ ಹೆಣಿಕೆಗೆ ಹಿನ್ನೆಲೆ ತೀರ ಸೂಕ್ಷ್ಮವಾಗಿರುವುದರಿಂದ, ಈ ತರದ ಹೆಣಿಕೆ ಸಹಜವಾಗಿಯೇ ಎದ್ದು ಕಾಣುವುದು.



Cording ಆಕೃತಿ, ಪದ್ಧತಿ ಇವುಗಳನ್ನು ತೋರಿಸುವ ರೇಖಾಚಿತ್ರ

ಉದ್ದು ಟೆಬ್ಬಿಯನ್ನು, ವೇಗವಾಗಿ ಹಾಕಲು ಕೈಕೂಡಿದ್ದರೆ, ಈ ಹೆಣಿಕೆ ಸುಲಭವಾಗಿಯೇ ಬರುವುದು; ಅಷ್ಟೇನೂ ತೊಂದರೆ ಬೇಕಾಗಿಲ್ಲ. ದಾರ ತುಂಬಿ, ಒಂದರ ಬಳಿಯಲ್ಲೊಂದರಂತೆ ಈ ಹೆಣಿಕೆ ಬಂದರೆ, ಅದು ಅಷ್ಟೊಂದು ಅಂದವಾಗದು; ಎಲ್ಲೆಲ್ಲಿ ಒಂದೇ ಎಳೆ ಬರಲು ಸಾಧ್ಯವಿದೆಯೋ, ಅಲ್ಲಲ್ಲ ಈ ಹೆಣಿಕೆಯನ್ನು ಉಪಯೋಗಿಸಬಹುದು.

ವಕ್ರವಾದಂಥ ಎಲೆ ಹೂಗಳ ದೇಟನ್ನೂ, ಬಾಹ್ಯ ರೇಷೆಯನ್ನೂ, ಒಳಗೆ ದಾರ ತುಂಬಿ ಹೆಣೆಯಲು ಒಮ್ಮೆಲೆ ಬರಲಿಕ್ಕಿಲ್ಲ. ಅಲ್ಲದೆ ಒಳಗೆ ದಾರವನ್ನಿಟ್ಟು ಮೇಲೆ ಹೊಲಿಗೆಯನ್ನು ಹಾಕಿ, ಅದನ್ನು ಬಟ್ಟೆಯ ಮೇಲೆ ಗಟ್ಟಿಯಾಗಿ ಕೂಡಿಸಿಬಿಟ್ಟರೂ ಕೆಲಸ ಮುಗಿದಂತಾಗಲಿಲ್ಲ; ಒಳಗೆ ದಾರವನ್ನು ಆಕೃತಿಗುಂಟ ಇಟ್ಟು, ಆ ದಾರ ಎಷ್ಟು ಕಾಣದಂತೆ ಬಟ್ಟೆಯ ಮೇಲೆ ತೀರ ಹತ್ತಿರ ಹತ್ತಿರದಲ್ಲಿ, ಚಿಕ್ಕ ತುಂಬಿಕೊಂಡು ಬರುವಂತೆ, ಸಮವಾಗಿ, ಯಂತ್ರದ ಸೂಜಿಯನ್ನು ಆಳವಿನಲ್ಲಿಟ್ಟುಕೊಂಡು ಹಾಕಬೇಕಾಗುತ್ತದೆ. ಒಳಗಿನ ಬಿಳೀದಾರ (ಅಥವಾ ಬಣ್ಣದ ದಾರವಾದರೂ) ಹೊರಗೆ ಕಾಣುತ್ತಿದ್ದರೆ, ಕಸೂತಿಯ ನಯವೆಲ್ಲ ಹೋಗಿಬಿಡುವುದು. ಮೇಲಿನ ಹೆಣಿಕೆ ದಟ್ಟವಾಗಿ ಬರುವುದರಿಂದಲೇ ಒಳಗೆ ಹುರಿಯಾದ ದಾರವನ್ನು ಉಪಯೋಗಿಸಿದರೂ ಸರಿ, ಹೊರಗೆ ಕಾಣುವದಿಲ್ಲ. ಇಷ್ಟೊಂದು ನಯವಾಗಿ ಈ ಬೀಳಬೇಕಾದರೆ ರೂಢಿಯು ಅವಶ್ಯ.

ಮೊದಲು ರಿಂಗಿನಲ್ಲಿ ಬಟ್ಟೆಯನ್ನು (ಪೋಪ್ಲಿನ್) ಹಿಂದಿನಂತೆ ಗಟ್ಟಿಯಾಗಿ, ಬಿಗಿಯಾಗಿ ಕೂಡಿಸಬೇಕು. ಬಳಿಕ ಅದರ ಒಂದು ಸರಳವಾದ ಗೆರೆಯನ್ನೂ ಇನ್ನೊಂದು ಸ್ವಲ್ಪ ಡೊಂಕು ಗೆರೆಯನ್ನೂ ಮೂಡಿಸಿಕೊಳ್ಳಬೇಕು. ಇವುಗಳನ್ನು ಪೆನ್ಸಿಲ್ ಅಥವಾ ಓಡುವ ಟೆಬ್ಬಿಯಿಂದ ಮೂಡಿಸಿಕೊಂಡರೂ ಸರಿ. ಹುರಿಯಾದ ದಾರವನ್ನು (ದಪ್ಪವಾಗಿದ್ದರೆ ಒಂದೇ ಎಳೆ, ...ವಾಗಿದ್ದರೆ ಮೂರು ನಾಲ್ಕು ಎಳೆಗಳು) ತೆಗೆದುಕೊಂಡು, ತುದಿಯನ್ನು ಮೇಲೆ ಮೂಡಿಸಿದ ಗೆರೆಯೊಂದಿಗೆ ಇಟ್ಟು, ...ವನ್ನು ಗಟ್ಟಿಯಾಗಿ ಕೂಡಿಸಿಕೊಳ್ಳಬೇಕು. ಬಳಿಕ ಆ ದಾರ ಜಗ್ಗಿ ನಮ್ಮ ಕಡೆಗೆ ಹಿಡಿದುಕೊಂಡು, ಆಕೃತಿಯ ಗೆರೆ ಅದನ್ನಿಟ್ಟು ಹೆಣೆಯುತ್ತ ಹೋಗಬೇಕು. ಯಂತ್ರದ ಸೂ... ದಾರದ ಎರಡೂ ಬದಿಗೆ ಸಮನಾಂತರವಾಗಿ ಬೀಳುತ್ತಿರ... ರೂಢಿಯಿಲ್ಲದಾಗ, ಸೂಜಿ ಹಿಂದು ಮುಂದೆ ಬಿದ್ದು, ... ಹೊಂದಿಕೊಂಡು ದಟ್ಟವಾಗಿ ಬೀಳದೆ, ಕ... ಹೆಣಿಕೆ ಅಂದವಾಗಿ ಕಾಣಲಿಕ್ಕಿಲ್ಲ. ಒಳಗಿನ ದಾರ ಹೊರಗೆ ಬಹುದು. ಮೊದಲು ಮೇಲೆ ಹೇಳಿದ ಸರಳರೇಷೆಯ ಮೇ... ಪ್ರಯೋಗವನ್ನು ಮಾಡಿ, ಬಳಿಕ ವಕ್ರವಾದ ರೇಷೆಯ ಮೇಲೆ... ಬೇಕು; ಮೊದಲನೆಯದಕ್ಕಿಂತ ಎರಡನೆಯ ರೇಷೆ ಅಂದವಾಗಿ... ವುದು. ಟೆಬ್ಬಿಗಳೂ ಸರಿಯಾಗಿ ಬೀಳುತ್ತ ಹೋಗುವುವು. ರೇಷೆಗಳ ದಾರತುಂಬುವ ಅಭ್ಯಾಸವಾದಬಳಿಕ, ಆಕೃತಿ (ಎಲೆ ಇತ್ಯಾದಿ) ಗಳ ಬಾಹ್ಯರೇಷೆಗಳನ್ನೂ, ದೇಟನ್ನೂ ತುಂಬಬ... ಇಲ್ಲಿ ನೆನಪಿನಲ್ಲಿಡತಕ್ಕ ಇನ್ನೊಂದು ವಿಷಯವೆಂದರೆ, ... ದಾರವನ್ನು ನಮ್ಮೆಡೆಗೆ ಜಗ್ಗಿಹಿಡಿದುಕೊಂಡಿರುವಾಗ, ... ಕಸುವಿನಿಂದ ಬಿಗಿಯಾಗಿ ಹಿಡಿದಿರಕೂಡದು; ಹಾಗೆ ಹಿ... ಕಸೂತಿ ಮುಗಿದ ಬಳಿಕ ಆ ದಾರ ಆಟ್ಟಿಸಿ, ಕಸೂತಿ... ಹೆಣೆದಲ್ಲಿ ನಿರಿಗೆಗಳು ಬೀಳುವ ಸಂಭವವೂ ಇದೆ.

ಯಂತ್ರದ ಕಸೂತಿಯಲ್ಲಿ ಉದ್ದುಟೆಬ್ಬಿ, ದಾರದಟೆಬ್ಬಿ, ... ಟೆಬ್ಬಿ (weaving) ಇವೆಲ್ಲ ಒಂದೇ ಬಳಗಕ್ಕೆ ಸೇರಿ... ಕೊಂಚ ಹೆಚ್ಚುಕಡಿಮೆ ಎಲ್ಲವುಗಳ ತತ್ತ್ವವೂ ಒಂದೇ. ಅ... ಇರುವ ಸ್ವಲ್ಪ ಭೇದದಿಂದಲೇ ಮೂರನ್ನೂ ತೀರ ಸ್ಪಷ್ಟ... ಗುರುತಿಸಬಹುದು; ಅಲ್ಲದೆ ಮೂರೂ ಹೆಣಿಕೆಗಳೂ ತಮ್ಮ ... ರೀತಿಯಲ್ಲಿ ಅಂದವಾಗಿಯೇ ಕಾಣುವುವು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಕೇಳಿಕೊಂಡಂತೆ 'ಕಸ್ತೂರಬಾ ಮಂದಿರ' ಎಂಬ ಕತೆಯನ್ನು ಕುರಿತು, ಬೇರೆ ಬೇರೆ ಹನ್ನೆರಡು ಜನರು ವಿಮರ್ಶೆಗಳನ್ನು ಬರೆದು ಕಳುಹಿರುವರು. ಅವರ ಪಾವಿಡಿಯಿದು :

೧ ಶ್ರೀ. ಕ. ಮ. ಶಿ. ಚಂದ್ರಶೇಖರಯ್ಯ ಬಿ. ಎಸ್‌ಸಿ. ವಿದ್ಯಾರ್ಥಿ, ಸೆಂಟ್ರಲ್ ಕಾಲೇಜ್ ಬೆಂಗಳೂರು. ೨ ಶ್ರೀ. ಕೆ. ಶ್ರೀನಿವಾಸ ಶರ್ಮಾ 'ವಿದ್ವಾನ್.' ಕಾಸರಗೋಡು. ೩ ಶ್ರೀ. ಕೆ. ವೆಂಕಟರಾಯಾಚಾರ್ಯ ಮಾಸ್ತರ್, ಸುರತ್ಕಲ್ಲು. ೪ ಶ್ರೀ. ರುದ್ರಗೌಡ ಪಾಟೀಲ, ರಾಮದುರ್ಗ. ೫ "ಸೀತಾ" ಚಿತ್ರದುರ್ಗ. ೬ ಶ್ರೀ. ಎಸ್. ಎಸ್. ಪುರುಷನ್, ಬಂಕಿಕೊಡ್ಲು. ೭ ಶ್ರೀ. ಸೀತಾರಾಮು, ಚಿತ್ರದುರ್ಗ. ೮ ಶ್ರೀ. ಸದಾಶಿವ ವಿ. ಬಡಿಗಣ್ಣವರ, ಗದಗ. ೯ "ವಾರುಣಿ" ಬೆಂಗಳೂರು ೧೦ ಶ್ರೀ. ಶ್ರೀಹರಿ ರಾಮಪುರ, ವಿಜಯ ಕಾಲೇಜು, ವಿಜಯಪುರ. ೧೧ ಶ್ರೀ. ಪಿ ಅನಂತರಾಜನ್, ಲಕ್ಷ್ಮೇಶ್ವರ. ೧೨ ಶ್ರೀ. ಆರ್. ಎ. ಕುಸುಗಲ್ಲ, ವಿಜಯಕಾಲೇಜು, ವಿಜಾಪುರ.

ಇಲ್ಲಿಯ ಕರ್ನಾಟಕ ಹೈಸ್ಕೂಲಿನಲ್ಲಿ ಕನ್ನಡ ಸಾಹಿತ್ಯಾಧ್ಯಾಪಕರಾಗಿರುವ ಶ್ರೀಮಾನ್ ಬಿ. ಆರ್. ವಾಡಪ್ಪಿ ಎಂ ಎ., ಬಿ ಟಿ. ಅವರು ವಿಮರ್ಶೆಗಳ ಪರೀಕ್ಷಕರಾಗಿದ್ದರು. ಅವರ ನಿರ್ಣಯದಲ್ಲಿ ಶ್ರೀ. ಸೀತಾರಾಮು, ಚಿತ್ರದುರ್ಗ ಅವರದು ಅತ್ಯುತ್ತಮ. ಶ್ರೀ. ಕೆ. ಶ್ರೀನಿವಾಸ ಶರ್ಮರ ವಿಮರ್ಶೆಯಾದರೂ ಅತ್ಯುತ್ತಮ ವರ್ಗದಲ್ಲಿಯೆ ಬರುವಂತಹದು. "ವಾರುಣಿ" ಬೆಂಗಳೂರು, ಶ್ರೀ. ಕ. ಮ. ಶಿ. ಚಂದ್ರಶೇಖರಯ್ಯ, ಶ್ರೀ. ಪಿ. ಅನಂತರಾಜನ್ ಇವರ ವಿಮರ್ಶೆಗಳು ಉತ್ತಮ. ಶ್ರೀ. ಆರ್. ಎ. ಕುಸುಗಲ್ಲ, ಶ್ರೀ. ಕೆ. ವೆಂಕಟರಾಯಾಚಾರ್ಯ, ಶ್ರೀ. ಎಸ್. ಆರ್. ಪುರುಷನ್ ಇವರವು ಚೆನ್ನಾದುವು. ಮಿಕ್ಕುವೆಲ್ಲ ಸಾಮಾನ್ಯ.

ಮೇಲಾಟದಲ್ಲಿ ಭಾಗವಹಿಸಿದ ತರುಣ ವಿಮರ್ಶಕರಿಗೂ ನಿರ್ಣಾಯಕರಿಗೂ ತುಂಬ ಧನ್ಯವಾದಗಳು. ಒಟ್ಟಿನಲ್ಲಿ ನಿರ್ಣಾಯಕರು ತಮ್ಮ ಅಭಿಪ್ರಾಯ ಕೊಟ್ಟಿದು ಹೀಗೆ :

"ಸಂಪಾದಕರು ಈ ಸಲ ಪರೀಕ್ಷಕನಾಗಬೇಕೆಂದು ನನ್ನನ್ನು ಕೇಳಿದಾಗ, ಈ ಕೆಲಸ ಬೇಸರ ತರುವಂತಹದೆಂದು ಬಗೆದಿದ್ದೆ. ಆದರೆ ತರುಣ ಬರೆಹಗಾರರ ವಿಮರ್ಶೆಗಳನ್ನು ಓದುತ್ತ ಹೋದಂತೆ ತುಂಬ ಸಂತೋಷವೆನಿಸಿತು. ಜಯಂತಿ ಒಂದೆರಡು ವರ್ಷಗಳಿಂದ 'ವಿಮರ್ಶಾ ಶಿಕ್ಷಣರಂಗ'ವನ್ನು ನಡೆಯಿಸಿಕೊಂಡು ಬಂದುದರ ಫಲವಾಗಿ, ಅನೇಕರು ಈ ಕ್ಷೇತ್ರದಲ್ಲಿ ಉತ್ಸಾಹದಿಂದ ಮುಂದೆ ಬಂದಿರುವ ಸಂಗತಿ ಇದೀಗ ಸ್ಪಷ್ಟವಾಗುತ್ತಲಿದೆ. ಈ ರೀತಿಯ ವಿಮರ್ಶಕ ಬುದ್ಧಿ ತರುಣ ಗೆಳೆಯರಲ್ಲಿ ಬೆಳೆದು ಬರುತ್ತಲಿರುವುದು ಆನಂದದ ಮಾತು. ವಿಮರ್ಶೆಯಿಲ್ಲದ ಸಾಹಿತ್ಯ ಕಸಬೆಳೆಸಂತೆ ಬೆಳೆದೀತು......ಈ ಸಲ ಬಂದ ವಿಮರ್ಶೆಗಳಲ್ಲಿ ಕೆಲವು ಲೇಖಕರು ಸುದೀರ್ಘವಾದ ಕಥಾಸಾರಾಂಶವನ್ನು ಕೊಟ್ಟುಬಿಟ್ಟುದರಿಂದ, ಮುಂದೆ ವಿಮರ್ಶೆಗೆ ಅವಕಾಶವೇ ಉಳಿಯದಂತಾಗಿದೆ. ಇನ್ನು ಕೆಲವರು ವಿಷಯ ಜೋಡಣೆಯ ಕೆಲಸದಲ್ಲಿ ಸೋತಿದ್ದಾರೆ. ಉಚಿತ ಶಬ್ದಗಳ ಆಯ್ಕೆಯು ಒಂದು ಮಹತ್ತ್ವದ ಸಂಗತಿಯಾಗಿದೆ— ಎಂಬುದನ್ನು ಮರೆಯಕೂಡದು."

ಮುಂದಿನ ತಿಂಗಳ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ 'ಬಲಿಚಕ್ರವರ್ತಿ' ಎಂಬ ನಾಟಕವನ್ನು ತೆಗೆದುಕೊಳ್ಳಬೇಕು. ಹೆಚ್ಚಾಗಿ ಈ ನಾಟಕದಲ್ಲಿಯ ಭಾವ ಪರಿಪುಷ್ಟಿ, ಮತ್ತು ಪಾತ್ರಪರಿಪೋಷಣೆ— ಈ ವಿಷಯವನ್ನು ಕುರಿತು ವಿಮರ್ಶಿಸಬೇಕು.

—ಸಂಪಾದಕರು

ಕಸ್ತೂರಬಾ ಮಂದಿರ

(ಕಥಾವಿಮರ್ಶೆ)

ಶ್ರೀ. ಸೀತಾರಾಮು, ಚಿತ್ರದುರ್ಗ

ಕಾದಂಬರಿಯಷ್ಟೇ ವಿಶಾಲಕ್ಷೇತ್ರವನ್ನು ಸಣ್ಣ ಕಥೆಯೂ ಹಿಡಿದುಕೊಂಡಿದೆ. ಸಣ್ಣಕಥೆಯೂ, ಕಾದಂಬರಿಯು ಮಾಡುವ ವಿಧ ಕಾರ್ಯವನ್ನು ಮಾಡಬಲ್ಲದು. ಸಣ್ಣಕಥೆಯು ಹೊತ್ತುಮುವ ಹೊಲಬಲ್ಲ ಅದು, ಸಮಾಜದಲ್ಲಿ ಇಂದು ಅಧಿಕಾರ ನಡೆಸುತ್ತಿರುವ, ದೈವಿಕ ಶಕ್ತಿಯನ್ನೇ ಮೆಟ್ಟಿ ನಿಂತಿರುವಂತೆ ತೋರುತ್ತಿರುವ, ಪೈಶಾಚಿಕ ಶಕ್ತಿಯನ್ನು ಚಿತ್ರಿಸಬಲ್ಲದು; ಓದುಗನ ಮನಸ್ಸಿನ ಮೇಲೆ ಸತ್ಪರಿಣಾಮವನ್ನುಂಟು ಮಾಡಬಹುದು. ಇದಕ್ಕೆ ನಿದರ್ಶನವಾಗುವಂತೆ, ಹೊಂದಿಕೊಳ್ಳುವಂತೆ, "ಕಸ್ತೂರಬಾ ಮಂದಿರ" ಚಿತ್ರಿತವಾಗಿದೆ.

ಈ ಚಿಕ್ಕ ಕಥೆಯ ಉದ್ದೇಶ : ತುತ್ತಿನ ಚೀಲತುಂಬುವುದೇ ಬಾಳ್ವೆಯಾಗಿರುವಾಗ, ಇತರರ ಕಷ್ಟವನ್ನು ಕಣ್ತೆರೆದು ನೋಡದ,

ಶಾಂತಿಸೇನಾ ಸದನದ ಸುಂದರ ಪ್ರಕಟನೆ

ವಿಜಯಶ್ರೀ

ಮಿರ್ಜಿ ಅಣ್ಣಾರಾಯರ

ಉತ್ಕೃಷ್ಟ ಸಣ್ಣ ಕತೆಗಳ ಸಂಗ್ರಹ.
ಬೆಲೆ: ಒಂದು ರೂಪಾಯಿ.
ಇದೀಗ ಪ್ರಕಟವಾಗಿದೆ.
ದೊರೆಯುವ ಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,
ಪೋ. ಉಗಾರ ಬುದ್ರುಕ
ಜಿ. ಬೆಳಗಾಂವಿ

ಪರೋಪಕಾರ ಬುದ್ಧಿವಿಹೀನರಾದ, ಲಕ್ಷ್ಮಿಯಾರಾಧಕರಾದ, ಸ್ವಾರ್ಥಿ ಶ್ರೀಮಂತರ ಕೀಳುಮನಸವನ್ನು ಓದುಗರಿಗೆ ಒದಗಿಸುವುದು. ಹಾಗೂ ವೇಷಾಡಂಬರಕ್ಕೆ ಸಭ್ಯರಂತೆ, ಗಣ್ಯರಂತೆ ವರ್ತಿಸಿ, ಕಟ್ಟಕಡೆಗೆ ಲೋಭಿಗಳು—ಸ್ವಾರ್ಥಿಗಳಾಗಿ, ಅಜ್ಞಾನಾಂಧರಾಗಿ, ಕೃತಘ್ನರಾಗುವ ಇಂದಿನ ಪುಡಿನಾಯಕರ ಚಿತ್ರಣವೆನ್ನಬಹುದು.

ಈ ಚಿಕ್ಕಕಥೆಯಲ್ಲಿ ಮೇಲೆ ಹೇಳಿದ ಉದ್ದೇಶವನ್ನು ಬೃಹದಾಕಾರದಲ್ಲಿ ಬೆಳಸದೆ, ಮನಸ್ಸಿಗೆ ನಾಟುವಂತೆ, ಸ್ವಲ್ಪದರಲ್ಲಿ ಹೇಳಿ, ಲೇಖಕರು ಮುನ್ನಡೆಯುತ್ತಾರೆ ಈ ಕಥೆಯಲ್ಲಿ; ಒಳಗೆ ದವಸ ಧಾನ್ಯವನ್ನು ತುಂಬಿಟ್ಟುಕೊಂಡು, ರೂಪಾಯಿಗೆ ಅರ್ಧಸೇರು ಮಾರುವ ಕಾಳಸಂತೆಕೋರರ ಕೀಳ್ಮನಸ್ಸನ್ನು ಕಸ್ತೂರಿಬಾ ಮಂದಿರ ನಾಲ್ಕುಮಾತಿನಲ್ಲಿ ಚಿತ್ರಿಸಿ ಮುಗಿಸಿದ್ದರೂ, ಅದು ನಮ್ಮಲ್ಲಿ ಸಂಪೂರ್ಣವಾಗಿ ನಿಲ್ಲುವಂತಿದೆ. ಈ ವಾಸ್ತವತೆಯ ಚಿತ್ರ ಕಥೆಗೆ ಅಂದದ ಅಂಚನ್ನು ಕಟ್ಟಿದೆ. ನಾವು ಇಂದು ನಡೆಸುತ್ತಿರುವ ಅನ್ಯಾಯಕ್ಕೆ ಕಸ್ತೂರಿಬಾ ಕಣ್ಣೀರಿಡುತ್ತಾರೆ; ಬಾಪು ನಮ್ಮ ಮೌಢ್ಯ ಅಳಿಯಲಿಲ್ಲವೆಂದು ನಗುತ್ತಾರೆ (?)–ಕಸ್ತೂರಿಬಾ ಮಂದಿರ ಹೇಳುವಂತೆ.

ದೇಶದಲ್ಲಿ ಅನ್ಯಾಯ ತಲೆಯೆತ್ತಿ ನಿಂತಿದೆ. ಅನ್ಯಾಯ ಬೆಳೆದು ಹೆಮ್ಮರವಾಗಿ ನಿಂತಿದೆ, ಅದರಡಿಯಲ್ಲಿ ನ್ಯಾಯದ ಸಸಿ ಬಾಡಿ ನಿಂತಿದೆ. ಕಥೆಗಾರರು ಈ ಅಭಿಪ್ರಾಯವನ್ನು ಮಾಸ್ತರರ ಪ್ರಸಂಗದಲ್ಲಿ ಮೂಡಿಸಿದ್ದಾರೆ. ಪರೋಪಕಾರಬುದ್ಧಿಯುಳ್ಳ ಮನುಷ್ಯ ಇಂದು ಅಧೋಗತಿಗಿಳಿದಿದ್ದಾನೆ. ಅನ್ಯಾಯದ ಪ್ರತೀಕವಾದ ಶ್ರೀಮಂತ, ಸುಖಲೋಲುಪ್ತಿಯಲ್ಲಿದ್ದಾನೆ. ಇದು ಕೊನೆಗಾಣಬೇಕು— ಎಂಬ ಕ್ರಾಂತಿಕಾರಕ ಮನೋಭಾವನೆ ಕಥೆಯಲ್ಲಿ— ಬಿಚ್ಚಿಹೇಳದಿದ್ದರೂ—ಮೂಡಿದೆ.

ಕಥೆಯ ಉದ್ದೇಶ ಹೀಗೆ ಎರಡು ಮೂರು ಕವಲಾಗಿ ನಿಂತಿದೆ. ಸಾಮಾನ್ಯ ಓದುಗರಿಗೆ, ಕಥೆಯಲ್ಲಿ ಈ ಕಥೆಗಳು ಸಾಫಲ್ಯಹೊಂದಿ-

ದಂತೆ ಕಂಡುಬರುತ್ತವೆ. ಅದನ್ನು ಎಲ್ಲರೂ ಒಪ್ಪಿಕೊ
ಬೇಕಾದುದು.

ಸಣ್ಣ ಕಥೆಯ ಉದ್ದೇಶ ಅದ್ಯಂತವಾಗಿ ಒಂದೇ ಆಗಿರಬ
ಇಲ್ಲಿ ಏಕೈಕ ಉದ್ದೇಶ ಮುಖ್ಯವಾದುದು (Singleness of a
ಈ ಕಥೆಯಲ್ಲಿ, ಶೀರ್ಷಿಕೆಯಿಂದ ವ್ಯಕ್ತಪಡುವಂತೆ ಪೂಜ್ಯ ಬಾ
ಹೆಸರಿನಲ್ಲಿ ನಾವು ನಡೆಸುತ್ತಿರುವ ಅನ್ಯಾಯ, (ಅಷ್ಟು ಪರಿಪೂ
ವಾಗಿ ಮೂಡಿಲ್ಲ, ಲೇಖಕರು ತೇಲಿಸಿಕೊಂಡು ಹೋಗಿದ
ಇಂದಿನ ಪಡಿತರ ಪದ್ಧತಿ, 'ಸುಲಿಗೆಯ ಯಾಗ,' ಅನ್ಯಾ
ಬೃಹದ್ರೂಪ, ಇವುಗಳೆಲ್ಲ ಸೇರಿಕೊಂಡು, ಮುಖ್ಯ ಗು
ಹಾದಿಯೇ ತಿಳಿಯುವಂತಿಲ್ಲ. ಈ ಕಥೆಯಲ್ಲಿ ಲೇಖಕರು
ಉದ್ದೇಶದ ಕಡೆಗೆ ದೃಷ್ಟಿಯಿಟ್ಟಿರುವಂತೆ ತೋರುವುದಿಲ್ಲ.

ಕಥೆಯ ಬೆಳವಣಿಗೆಯೂ ಅಷ್ಟೆ! ಕಥೆಗೆ ಉಚಿತವಾದ
ವಣಿಗೆಯಿಲ್ಲ. ಅಲ್ಲಿ ಇಲ್ಲಿ ಓದುಗರನ್ನು ಸುತ್ತಿಸಿ, ಮುಖ್ಯೋ
ದ್ದೇಶದ ಕಡೆಗೆ ಓದುಗರನ್ನು ತರುತ್ತಾರೆ. ಕಥೆಯ ಪೂರ್ವಾ
ಲಘುಪ್ರಬಂಧದಂತೆ ಕಾಣುತ್ತದೆ. ಸಣ್ಣ ಕಥೆಯಲ್ಲಿ ಬ
ಹಾದಿ ಉತ್ತಮವಲ್ಲ.

ಪ್ರಾರಂಭ, ಬೆಳವಣಿಗೆಯಲ್ಲಿ ಹರಟೆ ಅಥವಾ ಲಘುಪ್ರಬಂ
ಧಾಟಿಯನ್ನು ಕಾಣುತ್ತೇವೆ. "ಛತ್ರಿಯನ್ನು ವುದು "ಒಬ್ಬರಿಗಾ
Shelter, ಇಬ್ಬರಿಗಾದರೆ Shower-dathe ಉ" ಅಂತಯಾ
ಹರಿತ ನಾಲಗೆಯುವರು ಹೇಳದಹಾಗೆ" "Grow more fo
miss a meal, ಸೊಪ್ಪು ಸದೆ ತಿಂದವಗೆ ಸಗ್ಗ, ಮನೆಮು
ಮರ'— ಎಂಬೆಲ್ಲ ಹಸಿಬಿಸಿ ಸ್ಲೋಗನ್ನು.... ಈ ಶೈಲಿಯ
ನಾವು ಲಘುಪ್ರಬಂಧದಲ್ಲಿ ಹೆಚ್ಚು ಕಾಣುತ್ತೇವೆ.

ಮುಕ್ತಾಯವನ್ನು ಲೇಖಕರು ಸ್ವಲ್ಪ ಅಂದಗೆಡಿಸಿದ್ದಾರೆ. ಅ
ಭವಗಳನ್ನು ಸ್ವಪ್ನದಲ್ಲಿ ಕಾಣುವುದು ಸಾಧಾರಣ. ಆ
ಕಸ್ತೂರಿಬಾ ಮಂದಿರ ಕಥೆ ಹೇಳಿ ಮುಗಿಸಿದಲ್ಲಿಗೆ, ಕಥೆಯ
ಮುಕ್ತಾಯಗೊಳಿಸಿದ್ದರೆ, ತಂತ್ರದೃಷ್ಟಿಯಿಂದ ಅದನ್ನು ಮೆ
ಬಹುದಾಗಿತ್ತು. ಇತ್ತೀಚೆಗೆ ಕನ್ನಡದಲ್ಲಿ ಅಂತಹ ಪ್ರಯೋಗಗ
ನಡೆಯುತ್ತಿವೆ. ಈ ಕಥೆಯಲ್ಲಿ ಪೂರ್ವಾರ್ಧ ಸಂಪೂರ್ಣ ಲಘ
ಪ್ರಬಂಧವಾಗಿದ್ದು, ಉತ್ತರಾರ್ಧ ಕತೆಯ ಮುಸುಕನ್ನು ಹಾ
ಕೊಂಡಿದೆ. ಪಾಟೀಲ ಪುಟ್ಟಪ್ಪನವರು, ಭಾವಗೀತೆಗೂ ಸಣ್ಣ
ಕಥೆಗೂ ಸಾಮೀಪ್ಯವುಂಟೆಂದಿದ್ದಾರೆ. ಜಿ. ಪಿ. ರಾ. ರವ
ಭಾವಗೀತೆಗೂ ಲಘುಪ್ರಬಂಧಕ್ಕೂ ಸಾಮೀಪ್ಯವುಂಟೆಂದಿದ್ದಾ
ಇಲ್ಲಿ ನಾವು ಕಾಣುವುದು ಸಣ್ಣಕಥೆಗೂ ಪ್ರಬಂಧಕ್ಕೂ ಇರು
ಸಾಮೀಪ್ಯವನ್ನು.

ಕನ್ನಡಕಥೆಗಳಲ್ಲಿ ವೈವಿಧ್ಯದ ಅಭಾವವಿರುವಾಗ, ಉತ್ತಮ
ಕಥಾವಸ್ತುವನ್ನು ಆರಿಸಿಕೊಂಡು, ಕುಶಲವನ್ನು ಕೆರಳಿಸುತ್ತ
ಅದನ್ನು ಬೆಳಸಿಕೊಂಡುಹೋಗಿರುವ ಲೇಖಕರಿಂದ ಉತ್ತಮ ಕಥೆ
ಗಳನ್ನು ನಿರೀಕ್ಷಿಸಬಹುದಾಗಿದೆ.

ನಗೀನವಿಲು

ಬರೆದವರು: ಶ್ರೀ. ಎನ್. ಎಸ್. ಗದಗಕರ ಬಿ. ಎ.

ಪ್ರಕಾಶಕರು: ಮನೋಹರ ಗ್ರಂಥಭಾಂಡಾರ, ಧಾರವಾಡ.

ಇದೊಂದು ನಿಬಂಧಗಳ ಸಂಕಲನವಿದ್ದು, ನವಿಲಿನ ಬಣ್ಣದ ...ಗಳಂತೆ ಬೇರೆ ಬೇರೆ ವಿಷಯಗಳ ಮೇಲೆ, ಲೇಖಕರು ಹಾಸ್ಯಯುಕ್ತ ಶೈಲಿಯಲ್ಲಿ ಬರೆದಿದ್ದಾರೆ. ಮಳೆಗಾಲ, ವನಭೋಜನ, ರಾಜಮಾರ್ಗವಿಭೂಷಣರು, ಗಿಳಿ, ಇವು ವರ್ಣನಾತ್ಮಕ; ಮೌನ, ...ದ್ರೆ, ಏಕಾಂತ, ಅಭಿಮಾನ ಇವು ಭಾವವಾಚಕ— ಹೀಗೆ ಭಾಗ ಮಾಡಬಹುದಾಗಿದೆ. ವಿಷಯವೇನೇ ಇದ್ದರೂ, ಅದನ್ನು ನಿರೀಕ್ಷಣಾಬುದ್ಧಿಯಿಂದ ಹುಟ್ಟಿಸಿ, ಸ್ವಾನುಭವದ ಉದಾಹರಣೆಗಳ ...ಡುಗೆಯನ್ನು ತೊಡಿಸಿ, ವ್ಯಕ್ತಿತ್ವದಿಂದ ಜೀವಕಳೆ ತುಂಬುವುದ... ಬರೆಹಗಾರನ ಕೈಚಳಕವಿದ್ದಂತೆ, ಕೆಲವಾದರೂ ತಿಳಿನಗೆಯಲ್ಲಿ ...ಸ್ತುತ ಲೇಖಕರು, ಬಣ್ಣದ ಕಳೆಗಳನ್ನು ಓದುಗರಿಗೆ ನೀಡಿದ್ದಾರೆ ...ಯಗಳು ಬಳಕೆಯವು ಇದ್ದುದರಿಂದಲೂ, ನಿಬಂಧಗಳ ...ತ್ರವೂ ಕಿರಿದಾದುದರಿಂದಲೂ, ಶೈಲಿ ಅಷ್ಟೊಂದು ಗಡುಚಾಗ...ವುದರಿಂದಲೂ, ವಿವೇಚನೆಯು ಅಪೂರ್ಣವೆನಿಸಿದರೂ ಸಾಕಷ್ಟು ...ಯ ಪರಿಚಯ ಮಾಡಿಕೊಡುವುದರಿಂದಲೂ; ಈ 'ನಗೀನವಿಲು' ...ದ್ಯಾರ್ಥಿಗಳಿಗೆ 'ಸುಲಿದ ಬಾಳೆಯ ಹಣ್ಣಿನಂದದಿ' ಹೆಚ್ಚು ಉಪ...ಯೋಗವಾಗಬಹುದೆಂದೆನಬಹುದು. ಪರೀಕ್ಷೆಯ ಮಂದಿರದಲ್ಲಿ, ...ನ್ನು ಓದಿಕೊಂಡು, ಇದರಂತೆ ಇನ್ನಿತರ ವಿಷಯಗಳ ವಿಚಾರ... ನಿಬಂಧ ಬರೆಯಲು ಕಲಿತುಕೊಂಡ ವಿದ್ಯಾರ್ಥಿಯು, ...ಹಾಗೆಯ ಕಂಠದ' ಗವಯಿಯಂತೆ ಬೆಮರೊಡೆಯಬೇಕಾಗಿಲ್ಲ. ...ದಕ್ಕೇನೇ ಮುನ್ನುಡಿಕಾರರು ಇದು ಪಠ್ಯಪುಸ್ತಕವಾಗಬಹುದೆಂದು ...ಸುರಿದ್ದಾರೆ. ಮೇಲಾಗಿ ಹೂರಣದಲ್ಲಿಯ ರುಚಿಗಾಗಿ ಬರುವ ...ಸಕ್ಕರೆಯ ಹಳುಕಿನಂತೆ, ಅಂಗ್ಲ ಸಂಸ್ಕೃತ ಸಾಹಿತ್ಯದಲ್ಲಿಯ ...ವಚನಿಕೆಗಳನ್ನು ಇಲ್ಲಿ ಉದ್ಧರಿಸಲಾಗಿದೆ.

...ವಿಷಯಗಳ ವಿವೇಚನೆಯಲ್ಲಿ, ಬರೆಹಗಾರರು ಸ್ವಲ್ಪ ದೂರ ...ತು ನೋಡಿ ನಿರೀಕ್ಷಿಸಿದ ರೀತಿ ಇಲ್ಲಿ ಕಂಡುಬರುತ್ತಿದೆ. ಕಣ್ಣಿಗೆ ಬಂದ ಅನುಭವವು ರಸವತ್ತಾಗಿ ವಿಡಂಬನಾತ್ಮಕವಾದರೂ ನಸುಗುನ್ನಿಯ ಸೋಂಕಿಲ್ಲದ ರೀತಿಯಲ್ಲಿ ಬಿತ್ತರಿಸಿದ್ದರೂ, ವ್ಯಕ್ತಿತ್ವವನ್ನು ಮುಚ್ಚಿಟ್ಟಂತಾಗಿದೆ. ಮಳೆಗಾಲದಲ್ಲಿ ತಾವು ಅನುಭವಿಸಿದ ಸುಖವಾಗಲಿ ದುಃಖವಾಗಲಿ ಕಂಡುಬರುವಂತಿಲ್ಲ. ರಾಜಮಾರ್ಗವಿಭೂಷಣರಲ್ಲಿ, ಬರೆಹಗಾರರು ತಾವು ಸ್ವತಃ ಫೇಡೆ ಪ್ರಕೃತಿಯವರೊ ಅಥವಾ ಚಹದ ಪ್ರಕೃತಿಯವರೊ ಇದು ತಿಳಿಯುವಂತಿಲ್ಲ. ಬರೆಹಗಾರರ ಸದಭಿಮಾನವು 'ನನ್ನ ನುಡಿಯಲ್ಲಿ' ಸ್ಫುಟವಾಗಿದ್ದರೂ, 'ಅಭಿಮಾನ' ಎಂಬ ನಿಬಂಧದಲ್ಲಿ ಸಿಗುವುದಿಲ್ಲ. ಮುದ್ರಣಾಲಯಕ್ಕೆ ಸ್ವತಃ ಗಿರಾಕಿಯಾಗಿ ಹೋಗಿದ್ದರೆ ಒಳಿತಾಗುತ್ತಿತ್ತು. ಗಿಳಿಯನ್ನು ಬರೆಹಗಾರರು ಉಚ್ಚಸ್ಥಾನದಲ್ಲಿ ತಾವೇ ಇಡುವುದಕ್ಕಿಂತ, ಗಿಳಿಯನ್ನೆ ಮಾತಾಡಲಿಕ್ಕೆ ಹಚ್ಚಿ ಅದೇ ತನ್ನ ಹೆಗ್ಗಳಿಕೆಯನ್ನು ಹೇಳಿಕೊಂಡಿದ್ದರೆ ಹೆಚ್ಚು ಕಲಾತ್ಮಕವಾಗುತ್ತಿತ್ತು. ವಾಸಿಂಗ್ ಕಂಪನಿಯಲ್ಲಿ, ಇಸ್ತ್ರಿ ಕಪಾಟುಗಳು ತಮ್ಮ ಸುಖದುಃಖಗಳನ್ನೂ, ತಮ್ಮ ಮತ್ತು ಮಾಲಕನ ನಡುವೆ ಇರುವ ಪರಸ್ಪರ ಸಂಬಂಧವನ್ನೂ ಮೂಡಿಸಿದ್ದರೆ, ಈಗಿದ್ದ ವಾಸಿಂಗ್ ಕಂಪನಿಯು ಹೆಚ್ಚು ವಿಶಾಲದೃಷ್ಟಿಯನ್ನು ಪಡೆಯುತ್ತಿತ್ತು. 'ಸಿಗದಿದ್ದ ಪೆನ್ನಿಗಾಗಿ' ಈ ನಿಬಂಧದಲ್ಲಿ ಮಾತ್ರ ಲೇಖಕರು ತಮ್ಮನ್ನೇ ಮೂಡಿಸಿಕೊಂಡಂತಿದೆ. ಮುದ್ರಣಾಲಯದಲ್ಲಿಯ ಮಾಲಕನೂ, ವಾಸಿಂಗ್ ಕಂಪನಿಯಲ್ಲಿಯ ಮಾಲಕನೂ, ರಾಜಮಾರ್ಗ ವಿಭೂಷಣನೂ, ವನಭೋಜನದಲ್ಲಿ ಗೆಳೆಯರ ಗುಂಪೂ ಇವರು ವಾಸ್ತವ-ಪ್ರಪಂಚದಲ್ಲಿ ಜೀವಂತ ಪಾತ್ರಗಳಾಗಿದ್ದಾರೆ.

ಶೈಲಿಯಲ್ಲಿಯ ಹಾಸ್ಯವೆ ಇಲ್ಲಿಯ ನಿಬಂಧಗಳ ಜೀವಾಳವೆಂದು ಇಟ್ಟುಕೊಂಡಲ್ಲಿ, ಹಲಕೆಲವು ಚಿತ್ರಗಳು ಒಳ್ಳೆ ಮಾರ್ಮಿಕವಾಗಿ ಪರಿಣಮಿಸಿಕೊಂಡಿವೆ. "ಅಭಿಮಾನ"ದಲ್ಲಿಯೂ ಹೆಂಗಳೆಯರಲ್ಲಿರುವ ಅಭಿಮಾನವು ಕಲಾತ್ಮಕ ನಿರೀಕ್ಷಣೆಯಿಂದಲೂ, ನೈಜವಾಗಿ ನಿರರ್ಗಳವಾಗಿ ಹರಿಯುವ ಶೈಲಿಯಿಂದಲೂ, ಯೋಗ್ಯ ಮತ್ತು ಔಚಿತ್ಯಪೂರ್ಣ ಪದಪ್ರಯೋಗದಿಂದಲೂ ರಮ್ಯವಾಗಿದೆ.

ಬರೆಹಗಾರರು ಈ ನಿಬಂಧಗಳನ್ನು ನೀಡಿ, ತಮ್ಮ ಉದ್ದೇಶವನ್ನು ಸಾಧಿಸಿದ್ದಾರೆಂದೆನ್ನಬಹುದು. ಇದು ಪಠ್ಯಪುಸ್ತಕವಾಗಿ ಪರಿಣಮಿಸುವುದಾದಲ್ಲಿ, ಇಲ್ಲವೆ ಎರಡನೆಯ ಆವೃತ್ತಿಯನ್ನು ಕಂಡುಕೊಂಡಲ್ಲಿ, ಮುದ್ರಣಕ್ಕೆ ಕೊಡುವ ಮುಂಚೆಯೂ, ಮುದ್ರಣ ನಡೆದಾಗಲೂ ಹೆಚ್ಚು ಜಾಗರೂಕತೆಯನ್ನು ತಳೆಯಬೇಕೆಂದು ಬೇಡಿಕೆಯಿಂದೊಡಗೂಡಿದ ಎಚ್ಚರಿಕೆಯನ್ನು ಲೇಖಕರಿಗೆ ಇದೀಗ ಕೊಡಬಯಸುತ್ತೇನೆ.

—ಬೊರಟ ರಘುನಾಥರಾಯರು

ಸಾದರ ಸ್ವೀಕಾರ

卐

೧೧೯. **ಬಾಲಬಂಧು** (ಮಕ್ಕಳ ಮಾಸಪತ್ರಿಕೆ) ಸಂಪಾದಕರು ಶ್ರೀ. ಎನ್. ಡಿ. ರಾಮಮೂರ್ತಿಯವರು. ಪ್ರಕಾಶಕರು ಶ್ರೀ. ಜಿ. ಟಿ. ಶ್ರೀಕಂಠಯ್ಯ, ಆರ್. ಎನ್. ನ್ಯೂಜ್ ಏಜನ್ಸಿ, ೬೩೫ ಚಿಕ್ಕಪೇಟೆ, ಬೆಂಗಳೂರು. ೨ ಕ್ರೌ. ೧೬ದ ೩೨ ಪುಟಗಳು. ಬಿಡಿಸಂಚಿಕೆಯ ಬೆಲೆ ೦-೧-೦.

ಮೊದಲನೆಯ ಸಂಚಿಕೆಯೇ ನಮ್ಮ ಕಡೆಗೆ ಬಂದಿದೆ. ಇದನ್ನು ನೋಡಿದರೆ, ಮಕ್ಕಳಿಗಾಗಿ ಹೊರಡುವ ಪತ್ರಿಕೆಯಿದು. ವಿಷಯ—ಬಹಿರಂಗಗಳನ್ನು ಇನ್ನಿಷ್ಟು ಆಕರ್ಷಕವನ್ನಾಗಿ ಮಾಡಿಕೊಳ್ಳಬೇಕೆಂದು ಎನಿಸದೆ ಇರದು.

೧೨೦. **ಇಂಡೋಚೀನಾ** (ಪರಿಚಯಾತ್ಮಕ ಕಿರುಹೊತ್ತಗೆ). ಬರೆದವರು ಶ್ರೀ. ಕುಮಾರ ವೆಂಕಣ್ಣ. ಪ್ರಕಾಶಕರು ಎಚ್. ಎನ್. ರಾವ್ ಬ್ರದರ್ಸ, ಬೆಂಗಳೂರು ೨. ಕ್ರೌ. ೧೬ದ ೨೮ ಪುಟಗಳು. ಬೆಲೆ ೦-೨-೦.

ನಮ್ಮ ಜನಸಾಮಾನ್ಯರಿಗೆ ಈ ಬಗೆಯ ಪ್ರದೇಶ ಪರಿಚಯ ಮಾಡಿಕೊಡಬಲ್ಲ ಪುಸ್ತಕಗಳ ಅಗತ್ಯ ತುಂಬ ಇದೆ.

೧೨೧. **ಧರ್ಮಚಕ್ರ** (ವಿಚಾರ ಚರ್ಚಾತ್ಮಕ ಗ್ರಂಥ). ಲೇಖಕರು ಶ್ರೀ. ಕುಮಾರ ವೆಂಕಣ್ಣ. ಪ್ರಕಾಶಕರು ಎಚ್. ಎನ್. ರಾವ್ ಬ್ರದರ್ಸ, ಬೆಂಗಳೂರು ೨. ಕ್ರೌ. ೮. ೮೮ ಪುಟಗಳು. ಬೆಲೆ ೧-೦-೦.

ಹೊಸಕಾಲದ ವಿಚಾರಗಳ ಬಗೆಗೆ ಜನರಲ್ಲಿ ಕುರುಡುನಂಬುಗೆ ಹುಟ್ಟಿಸುವಂತಹ ಪ್ರಚಾರ ಪುಸ್ತಕವಿದು. ಹಿಂದಿನ ಯಾವ ಸಾಮಾಜಿಕ ಧಾರ್ಮಿಕ ಸಿದ್ಧಾಂತಗಳೂ ಕೇವಲ ಕಾಲಿಕವೆಂದೂ ಶಾಶ್ವತವಲ್ಲವೆಂದೂ ಪ್ರತಿಪಾದಿಸುತ್ತ, ತಮ್ಮ ಸಿದ್ಧಾಂತ ಮಾತ್ರ ಶಾಶ್ವತವೆಂದು ಸಾರಿಹೇಳುವುದು ವದತೋ ವ್ಯಾಘಾತ. ಈ ಕಾಲಕ್ಕೆ ತಮ್ಮ ಈ ಸಿದ್ಧಾಂತ ಸಮಂಜಸವೆಂದು ಪ್ರತಿಪಾದಿಸಿದ್ದರೆ, ಲೇಖಕರ ತಾರ್ಕಿಕಬುದ್ಧಿ ಅನೇಕರಿಗೆ ಸಮಂಜಸವೆನಿಸಬಹುದಾಗಿತ್ತು.

೧೨೨. **ಸೂರಿಯೌತಣ** (ಕಥಾ ಸಂಕಲನ) ಲೇಖಕರು 'ಇಂದಿರಾತನಯ' ಪ್ರಕಾಶಕರು ಎಚ್. ಎನ್. ರಾವ್ ಬ್ರದರ್ಸ ಬೆಂಗಳೂರು ೨. ಕ್ರೌ. ೮ ೯೦ ಪುಟಗಳು. ಬೆಲೆ ೧-೦-೦.

೧೨೩. **ದಾಸಕೂಟ** (ಸಾಮಾಜಿಕ ಕಾದಂಬರಿ) ಬರೆದವರು 'ಬಳ್ಳಾರಿ ಬೀಚಿ' ಮೈಸೂರಿನ ಉಷಾ ಸಾಹಿತ್ಯಮಾಲೆಯ ೨೫ನೆಯ ಪುಷ್ಪ. ಕ್ರೌ. ೮. ೧೪ ಪುಟಗಳು. ಬೆಲೆ ೧-೧೨-೦.

೧೨೪ **ರಕ್ತಧ್ವನಿ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ಶ್ರೀರಾಮ ಪಾಟೀಲ. ಬೆಳಗಾಂವಿಯ ಸುವರ್ಣ ಭಾರತೀ ಗ್ರಂಥಮಾಲೆಯ ಪ್ರಕಟನೆ ಕ್ರೌ. ೮. ೩೪೪ ಪುಟಗಳು. ಬೆಲೆ ೪-೦-೦

೧೨೫. **ಪ್ರೀತಿ** (ಮನಶ್ಶಾಸ್ತ್ರವಿಷಯಕ ಗ್ರಂಥ). ಬರೆದವರು ಶ್ರೀ. ಗೌರೀ ಕಾಖಂಡಕಿ, ಗೋಕರ್ಣ, ಧಾರವಾಡ ಪರ್ಣಕುಟಿ ಗ್ರಂಥಮಾಲೆಯ ಪ್ರಕಟನೆ ಕ್ರೌ. ೮. ೯೬ ಪುಟಗಳು ಬೆಲೆ ೧-೪-

೧೨೬. **ಐರಾವತ** (ಪ್ರಾಚೀನ ಕನ್ನಡ ಪದ್ಯಗ್ರಂಥ) ಕನ್ನಡ ಕವಿ 'ಕುಮಾರವ್ಯಾಸ ವಿರಚಿತ'. ಸಂಪಾದಕರು 'ವಿದ್ಯಾರತ್ನ' ಆರ್. ಎಸ್. ಪಂಚಮುಖಿ ಎಂ. ಎ. ಡೈರೆಕ್ಟರ್ ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ. ಡೆ. ೫. ೧೬+೧೦೦ ೮ ಪುಟಗಳು. ಬೆಲೆ ೧-೮-೦.

೧೨೭. **ಶ್ರೀರಾಘವೇಂದ್ರ** ಗುರುಗಳ **ಉಬ್ಬುಚಿತ್ರ**. (ಪ್ಲಾಸ್ಟರಿನಲ್ಲಿ ನಿರ್ಮಿಸಿದುದು). ಪುಣೆಯಲ್ಲಿದ್ದುಕೊಂಡು ಚಿತ್ರಶಿಲ್ಪ ಮೂರ್ತಿಶಿಲ್ಪಗಳ ವ್ಯವಸಾಯ ಮಾಡುತ್ತಾ ಹೆಸರನ್ನು ಪಡೆದ, ಅಚ್ಚ ಕನ್ನಡಿಗರಾದ ಶ್ರೀಮಾನ್ ದೇಶಪಾಂಡೆ ಕೇಶವರಾಯರು ಪ್ರಯೋಗ ಕ್ಕಾ

ರ್ಶಿಸಿದು ದಿದು. ಸಾಮಾನ್ಯವಾಗಿ ರಾಘವೇಂದ್ರಸ್ವಾಮಿಗಳದೊಂದು ಪೇಟಿ- ಲ್ಲಿ ಮಾರಾಟವಾಗುವ ಬಣ್ಣದ ಚಿತ್ರ- ಮಾದರಿಯಾಗಿಟ್ಟುಕೊಂಡು ನ್ನು ನಿರ್ಮಿಸಿದ್ದಾರೆ. ಶ್ರೀರಾಘ- ಪ್ರಸ್ವಾಮಿಗಳ ಭಕ್ತರಿಗಿದು ತುಂಬ ಕೆಯಾಗುವಂತಿದೆ. ವ್ಯವಹಾರ ದೃಷ್ಟಿ ದ ಇವುಗಳನ್ನು ಹೆಚ್ಚು ಸಂಖ್ಯೆಯಲ್ಲಿ ರ್ಸಿದರೆ, ಸಾಕಷ್ಟು ಆರ್ಥಿಕ ಪ್ರತಿ- ಫಲ ದೊರೆವಂತಿದೆ.

.೮. **ಚೀನದ ಬಾಳು-ಬದುಕು** (ಅನುವಾದಿತ ಕಥಾಸಂಕಲನ). ಮೂಲ ಬೇರೆ **ಚೀನಿ ಕತೆಗಾರರ ಕಥೆಗಳನ್ನು** ...ತರುಗಳಾದ ದ. ರಾ. ಬೇಂದ್ರೆ, ಮಂಗಲಗಿ, ಕೀರ್ತಿನಾಥ ಕುರ್ತ- , ವರಗಿರಿ ಇವರು ಕನ್ನಡಕ್ಕೆ ...ದ್ದಾರೆ. ಧಾರವಾಡದ ಮನೋಹರ ...ಮಾಲೆಯ ೯೯-೧೦೦ನೆಯ ... ಕ್ರಾ.ಅ.೪೦೬. ಪು. ಬೆಲೆ೫-೮-೦

. **ಮೇದಿನಾಪುರದ ಮಲ್ಲ** (...ಬರಿ) **ಬರೆದವರು ಶ್ರೀ ಗು. ಭೀ.** ...ಎಂ ಎ, ಬಿ. ಟಿ. ಗದಗ. ಧಾರ- ಮನೋಹರ ಗ್ರಂಥಮಾಲೆಯ ...ಪುಷ್ಪ. ಕ್ರಾ. ಅ. ೧೬೦ ಪುಟ. ...೦-೦.

ವಸಾದನ ಮಗಳು (ಸಾಮಾ- ...ಂಬರಿ) ಲೇಖಕರು ಶ್ರೀ. ಎಂ. ...ರಾಮಯ್ಯ ಎಂ. ಎ. ಅವರು. ...ರ ಗ್ರಂಥಮಾಲೆಯ ೧೦೨ನೆಯ ಕ್ರಾ. ಅ. ೪೦೦ ಪುಟಗಳು. ...-೦

ಗ್ರಾಮಾಭ್ಯುದಯ (ವಿಶೇ- ...ಷ ಸಂಚಿಕೆ) ಸಂಪಾದಕರು ...ಗೆ ಕೆ. ಬಸಪ್ಪ ಬಿ. ಎ. ಅವರು



ಮೈಸೂರು ಸಂಸ್ಥಾನದ ಗ್ರಾಮಾಭ್ಯುದಯ ಶಾಖೆಯ ಮುಖಪತ್ರಿಕೆ

೧೩೨. **ತಿಮ್ಮನ ತಲೆ** (ವಿನೋದ ಸಂಕಲನ) ಬರೆದವರು 'ಬಳ್ಳಾರಿ ಬೀಚಿ' ಬಳ್ಳಾರಿಯ ತಿಮ್ಮ ಸಾಹಿತ್ಯಮಾಲೆಯ ಮೊದಲನೆಯ ಮುತ್ತು. ಕ್ರಾ. ಅ. ೧೧೮ ಪುಟ. ಬೆಲೆ ೨-೮-೦.

೧೩೩. **ಹಾರಿಹೋದ ಹಕ್ಕಿ** (ಕಥಾ ಸಂಕಲನ) ಬರೆದವರು ಶ್ರೀಮತಿ ಲೀಲಾ- ಬಾಯಿ ಕಾಮತರು. ಪ್ರಕಾಶಕರು ಸ್ಕೂಲ್ ಬುಕ್ ಕಂಪನಿ, ಮಂಗಳೂರು. ಕ್ರಾ.ಅ. ೧೦೦ ಪುಟಗಳು. ಬೆಲೆ ೧-೦-೦.

೧೩೪. **ಇಂದಿನ ಶಿಕ್ಷಣ** (ವಿಚಾರ ಸಂಕಲನ) ಬೇರೆ ಬೇರೆ ಲೇಖಕರು. ಪ್ರಕಾಶಕರು ಪಿ. ಡಿ. ಜೆ. ಹೈಸ್ಕೂಲ್, ವಿಜಯಪುರ. ಕ್ರಾ. ಅ. ೧೪೦ ಪುಟಗಳು. ಬೆಲೆ ೧-೮-೦.

೧೩೫. **ಡಾ. ಸರ್ ಮಹಮ್ಮದ್ ಇಕ್ಬಾಲರ ಜೀವನ ಚರಿತ್ರೆ.** ಬರೆದವರ ಶ್ರೀ. ಎನ್. ಸೂರಪ್ಪ. ಪ್ರಕಾಶಕರು: ಜಿ. ಎಸ್. ನಿಶ್ವ ಅಂಡ್ ಕಂಪನಿ, ಬೆಂಗ- ಳೂರು ಸಿಟಿ. ಕ್ರಾ. ಅ. ೮೪ ಪುಟಗಳು. ಬೆಲೆ ೦-೧೪-೦.

೧೩೬. **ಮುಂಬಯಿಯ ಮುನ್ನಡೆ** (೨ ನಾಗರಿಕ ಪೂರಯಿಕೆ) ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಪ್ರಕಟನೆ. ಡೆ. ಅ. ೧೮ ಪುಟಗಳಲ್ಲದೆ ೧೪ ಚಿತ್ರ- ಪುಟಗಳು.

ಇದನ್ನು ಓದುತ್ತಿರುವಾಗ 'ಅಬ್ಬಾ ನಮ್ಮ ಮುಂಬಯಿ ಸರಕಾರದವರು ನಾಗರಿಕರಿಗಾಗಿ ಎಷ್ಟೊಂದು ಸೌಕರ್ಯ ಒದಗಿಸಿ ಕೊಟ್ಟಿದ್ದಾರಲ್ಲ!' ಎನಿಸುವುದು. ಆದರೆ ನಾಡಿನ ಜನರ ವಾಸ್ತವ ಪರಿಸ್ಥಿತಿ- ಯನ್ನು ನೋಡಿದರೆ, ಒದಗಿಸಿರುವ ಸೌಕರ್ಯ ಎಲ್ಲಿ ಅಡಗಿಕೊಂಡಿದೆಯೊ ಎಂಬುದು ತಿಳಿಯದಂತಾಗಿದೆ ಆಶ್ಚರ್ಯ

೧೩೭ **ಕಿರ್ಲೋಸ್ಕರ,** ೧೩೮ **ಸ್ತ್ರೀ,** ೧೩೯ **ಮನೋಹರ** ಸುಪ್ರಸಿದ್ಧ ಮರಾಠೀ ಮಾಸಪತ್ರಿಕೆಗಳ ದೀಪಾವಳಿಯ ಸಂಚಿಕೆ- ಗಳು. ಎಂದಿನಂತೆ ಅಂತರಂಗ-ಬಹಿರಂಗ ಸೌಂದರ್ಯವನ್ನು ತುಂಬಿಕೊಂಡು ಜನ- ಮನವನ್ನು ಸೆಳೆದುಕೊಳ್ಳುವಂತೆ ಹೊರ- ಟಿವೆ. ೨೦೦ ನೆಯ ಸಂಚಿಕೆಯಾದ 'ಮನೋಹರ'ದ ಸಂಚಿಕೆಯು ಇಬ್ಬಗೆಯ ವೈಶಿಷ್ಟ್ಯಗಳಿಂದ ಕೂಡಿದ್ದು, ಲಲಿತ ಸಾಹಿತ್ಯದ ವಿವಿಧಮುಖಗಳ ಸುಂದರ ಪ್ರದರ್ಶನಾಲಯದಂತೆ ಶೋಭಿಸುತ್ತದೆ. ಈ ಮೂರೂ ಪತ್ರಿಕೆಗಳು ಮಹಾರಾಷ್ಟ್ರ ಸಾಹಿತ್ಯಕ್ಕೂ ಜನತೆಗೂ ಸಲ್ಲಿಸುತ್ತಿರುವ ಸೇವೆ ಅಭಿನಂದನೀಯವಾದುದು.

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ ಸಮಸ್ಯೆ ಪರಿಹಾರವಾಗಬೇಕಾಗಿದ್ದರೆ ಕಿರ್ಲೋಸ್ಕರ್

'ಸೆಂಟ್ರಿ ಫ್ಯೂಗಲ್ ಪಂಪ'ನ್ನೇ

ಉಪಯೋಗಿಸಿರಿ.



ಸೆಂಟ್ರಿ ಫ್ಯೂಗಲ್ ಪಂಪುಗಳು

ಯು. ಪಿ. ಟೈಪ್ ಪಂಪ್

ಒಕ್ಕಲತನ ಮತ್ತು ಕಾರಖಾನೆಯ ಉದ್ಯೋಗಗಳಿಗೆ ಅತ್ಯಂತ ಉಪಯುಕ್ತವಾದುದು. ತಾಳಿಕೆ, ಭದ್ರವಾದ ರಚನೆ ಮತ್ತು ಆಕೃತಿ ಇವುಗಳ ಮೂಲಕ ದಿನದಿನಕ್ಕೂ ಬೆಳೆಯುತ್ತಿರುವ ಲೋಕಪ್ರಿಯತೆಯನ್ನು ಪಡೆಯುತ್ತಲಿದೆ ಈ ಪಂಪು.

ಬಿ. ಎಸ್. ಎ. ಪಂಪು

ಅತ್ಯಂತ ಆಧುನಿಕ ಹಾಗು ಯಾಂತ್ರಿಕ ರಚನೆಯ ಮೇರೆಗೆ ತಯಾರಿಸಲ್ಪಟ್ಟಿರುವುದು. ಗಿರಾಕಿಗೆ ಕಳಿಸುವ ಮುನ್ನ ಪ್ರತಿಯೊಂದು ಪಂಪನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದೆ. ಈ ಪಂಪುಗಳು ಔದ್ಯೋಗಿಕ ಹಾಗು ಒಕ್ಕಲತನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತವೆ.



ಕಿರ್ಲೋಸ್ಕರ ಬಂಧುಗಳು ಲಿ. ಕಿರ್ಲೋಸ್ಕರವಾಡಿ

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar—2783-50.

ಜಯಂತಿ

ಬೆಲೆ ೧೨ ಆಣೆ

☆

ಜನವರಿ ೧೯೫೧

☆

JAYANTI

JANUARY 1951

CONTD IN
NEXT ROLL

CONTD IN
NEXT ROLL

CONTD IN
NEXT ROLL

END

END

END